೮

ಸಮಗ್ರ
ವಚನ
ಸಂಪುಟ

ಜನಪ್ರಿಯ ಆವೃತ್ತಿ

# ಸಂಕೀರ್ಣ ವಚನಸಂಪುಟ

## ೩

ಸಂಪಾದಕ
ಡಾ. ಬಿ. ಆರ್. ಹಿರೇಮಠ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

# ಸಂಕೀರ್ಣ ವಚನಸಂಪುಟ : ಮೂರು

೧. ಬಸವಣ್ಣನವರ ವಚನಸಂಪುಟ - ಸಂ : ಡಾ. ಎಂ. ಎಂ. ಕಲಬುರ್ಗಿ
೨. ಅಲ್ಲಮಪ್ರಭುದೇವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೩. ಚೆನ್ನಬಸವಣ್ಣನವರ ವಚನಸಂಪುಟ - ಸಂ : ಡಾ. ಬಿ. ವ್ಹಿ. ಮಲ್ಲಾಪುರ
೪. ಸಿದ್ಧರಾಮೇಶ್ವರ ವಚನಸಂಪುಟ - ಸಂ : ಡಾ. ಎಸ್. ವಿದ್ಯಾಶಂಕರ
೫. ಶಿವಶರಣೆಯರ ವಚನಸಂಪುಟ - ಸಂ : ಡಾ. ವೀರಣ್ಣ ರಾಜೂರ
೬. ಸಂಕೀರ್ಣ ವಚನಸಂಪುಟ : ಒಂದು - ಸಂ : ಡಾ. ಎಂ. ಎಂ. ಕಲಬುರ್ಗಿ
೭. ಸಂಕೀರ್ಣ ವಚನಸಂಪುಟ : ಎರಡು - ಸಂ : ಡಾ. ಎಸ್. ವಿದ್ಯಾಶಂಕರ
೮. ಸಂಕೀರ್ಣ ವಚನಸಂಪುಟ : ಮೂರು - ಸಂ : ಡಾ. ಬಿ. ಆರ್. ಹಿರೇಮಠ
೯. ಸಂಕೀರ್ಣ ವಚನಸಂಪುಟ : ನಾಲ್ಕು - ಸಂ : ಡಾ. ಬಿ. ಆರ್. ಹಿರೇಮಠ
೧೦. ಸಂಕೀರ್ಣ ವಚನಸಂಪುಟ : ಐದು - ಸಂ : ಡಾ. ವೀರಣ್ಣ ರಾಜೂರ
೧೧. ಸಂಕೀರ್ಣ ವಚನಸಂಪುಟ : ಆರು - ಸಂ : ಎಸ್. ಶಿವಣ್ಣ
೧೨. ಸಂಕೀರ್ಣ ವಚನಸಂಪುಟ : ಏಳು - ಸಂ : ಡಾ. ವೀರಣ್ಣ ರಾಜೂರ
೧೩. ಸಂಕೀರ್ಣ ವಚನಸಂಪುಟ : ಎಂಟು - ಸಂ : ಡಾ. ವೀರಣ್ಣ ರಾಜೂರ
೧೪. ಸಂಕೀರ್ಣ ವಚನಸಂಪುಟ : ಒಂಬತ್ತು - ಸಂ : ಡಾ. ವೀರಣ್ಣ ರಾಜೂರ
೧೫. ವಚನ ಪರಿಭಾಷಾಕೋಶ - ಸಂ : ಡಾ. ಎಸ್. ಜಿ. ಮಹಾದೇವಪ್ಪ

# ಸಂಕೀರ್ಣ ವಚನಸಂಪುಟ : ಮೂರು


ಸಂಪಾದಕ

**ಡಾ. ಬಿ. ಆರ್. ಹಿರೇಮಠ**

ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ



ಕರ್ನಾಟಕ ಸರ್ಕಾರ

**ಕನ್ನಡ ಪುಸ್ತಕ ಪ್ರಾಧಿಕಾರ**

ಬೆಂಗಳೂರು

**SANKEERNA VACHANASAMPUTA : MOORU** : Complete
Vachanas of 34 Vachanakaras of Basaveshvara Period, Ed. by
Dr. B. R. Hiremath, Professor, Institute of Kannada Studies
Karnataka University, Dharwad - 580 003 and Published by
The Administrative Officer, Kannada Pusthaka Pradhikara
(Kannada Book Authority), Pampa Mahakavi Road, Chamarajpe
Bangalore - 560 018

ISBN : 81-7713-098-6

Pp. xLii + 750

ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಪರಿಷ್ಕೃತ ಮುದ್ರಣ : ೨೦೦೧

ಪ್ರತಿ : ಐದು ಸಾವಿರ

ಬೆಲೆ : **ರೂ. ೮೫೦/-**
(೧೫ ಸಂಪುಟಗಳ ಸೆಟ್)

ಅಕ್ಷರ ಜೋಡಣೆ :
ತ್ವರಿತ ಮುದ್ರಣಾಲಯ
ಆಫ್‌ಸೆಟ್ ಪ್ರಿಂಟರ್ಸ್, ಗದಗ

ಮುದ್ರಣ :
**ಗುರುದತ್ ಪ್ರಿಂಟರ್ಸ್**
೯೧, ೪ನೇ ಕ್ರಾಸ್. ೧ನೇ ಮುಖ್ಯರಸ್ತೆ
ನ್ಯೂ ಟಿಂಬರ್ ಯಾರ್ಡ್ ಲೇಔಟ್
ಮೈಸೂರು ರಸ್ತೆ, ಬೆಂಗಳೂರು-೨೬
✆ : ೬೭೪೫೨೩೦, ೬೭೪೭೦೮೧

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ

※


## ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

**ಡಾ. ಎಂ. ಎಂ. ಕಲಬುರ್ಗಿ**

ವಿಶ್ರಾಂತ ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ

※

ಸದಸ್ಯರು

**ಡಾ. ಎಂ. ಚಿದಾನಂದಮೂರ್ತಿ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಡಾ. ಸಿ. ಪಿ. ಕೃಷ್ಣಕುಮಾರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಡಾ. ಎಸ್. ವಿದ್ಯಾಶಂಕರ**

ವಿಶ್ರಾಂತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಎಸ್. ಶಿವಣ್ಣ**

ವಿಶ್ರಾಂತ ಸಂಪಾದಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

✳

# ಮುನ್ನುಡಿ

## ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು

ಕನ್ನಡನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸಾಂಸ್ಕೃತಿಕ ಆಸ್ತಿಯೆನಿಸಿದೆ. ಅನೇಕ ಜನ ವಿದ್ವಾಂಸರು, ಅನೇಕ ಸಂಸ್ಥೆಗಳು ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ದುಡಿಯುತ್ತ ಬಂದುದು, ಇದರ ವ್ಯಾಪಕತೆಯ ದ್ಯೋತಕವಾಗಿದೆ. ಹೀಗೆ ಪ್ರಕಟವಾಗಿದ್ದ ಮತ್ತು ಅಪ್ರಕಟಿತ ಸ್ಥಿತಿಯಲ್ಲಿದ್ದ ಈ ಸಾಹಿತ್ಯದ ದ್ವಿತೀಯ ಆವೃತ್ತಿಯನ್ನು ವಚನ ಪರಿಭಾಷಾಕೋಶವೂ ಒಳಗೊಂಡಂತೆ ೧೫ ಸಂಪುಟಗಳ ಮೂಲಕ ಕರ್ನಾಟಕ ಸರ್ಕಾರ ಹೊರತರುತ್ತಿರುವುದು, ನಮ್ಮ ಸಾಹಿತ್ಯ ಪ್ರಕಟಣೆಯ ಇತಿಹಾಸದಲ್ಲಿ ಒಂದು ಗಣ್ಯ ಸಾಧನೆಯೆಂದೇ ಹೇಳಬೇಕು. ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ತನ್ನ ಕರ್ತವ್ಯವೆಂದು ಭಾವಿಸಿ, ಕರ್ನಾಟಕದ ಪ್ರಜಾಸರ್ಕಾರ ಈ ಕೆಲಸವನ್ನು ಪೂರೈಸಿದೆ.

ವಚನಸಾಹಿತ್ಯಕ್ಕೆ ನಮ್ಮ ನಾಡಿನಲ್ಲಿ ಸುಮಾರು ೮೦೦ ವರ್ಷಗಳ ಇತಿಹಾಸವಿದೆ. ಈವರೆಗೆ ಬಸವಯುಗದ ಬರವಣಿಗೆಯನ್ನು ಹೊರತರಲು ವಿದ್ವಾಂಸರು ಹೆಚ್ಚು ಗಮನ ಕೊಟ್ಟಿದ್ದರು. ಈ ಯೋಜನೆ ಅದನ್ನೂ ಒಳಗೊಂಡು, ಬಸವೋತ್ತರ ಯುಗದ ಮೇಲೆಯೂ ಒತ್ತುಕೊಟ್ಟುದು ವಿಶೇಷವೆನಿಸಿದೆ. ಇದರಿಂದಾಗಿ ಈ ಯೋಜನೆಗೆ "ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆ" ಎಂಬ ಕೀರ್ತಿ ಸಲ್ಲುತ್ತದೆ.

ವಚನವೆಂಬುದು ಚಳುವಳಿ ಸಾಹಿತ್ಯಪ್ರಕಾರವಾಗಿದೆ. ಆತ್ಮಕಲ್ಯಾಣದೊಂದಿಗೆ ಸಮಾಜಕಲ್ಯಾಣವನ್ನೂ ಕಾರ್ಯಗತಗೊಳಿಸಲು ಹೋರಾಡಿ ದುಡಿದ ಮಹಾತ್ಮರ ಸಾಹಿತ್ಯವಿದು. ರಾಜಸತ್ತೆ, ಪುರೋಹಿತಸತ್ತೆ, ಪುರುಷಸತ್ತೆಗಳೆಂಬ ಪ್ರತಿಗಾಮಿ ಸತ್ತೆಗಳ ವಿರುದ್ಧ, ಕರ್ನಾಟಕದ ಎಲ್ಲ ಸಮಾಜದ ಜನರು ನಡೆಸಿದ ಹೋರಾಟದ ಉಪನಿಷ್ಪತ್ತಿಯಾದ ಈ ಸಾಹಿತ್ಯದಲ್ಲಿ ಜೀವಪರಧ್ವನಿಗಳು ದಟ್ಟವಾಗಿ ಕೇಳಿಸುತ್ತವೆ. ಪ್ರಾಚೀನ ಕರ್ನಾಟಕದ ಬೌದ್ಧಿಕ ಶ್ರಮದ ವಿದ್ವತ್ ಜನತಾಸಾಹಿತ್ಯಕ್ಕಿಂತ ದೈಹಿಕ ಶ್ರಮದ ಜನತಾಸಾಹಿತ್ಯ ಹೇಗೆ ಭಿನ್ನವಾಗಿದೆಯೆಂಬುದನ್ನು ಕಾಣಬೇಕಾದರೆ ನಾವು ಈ ಸಾಹಿತ್ಯಕ್ಕೇ ಮೊರೆಹೊಗಬೇಕು.

"ವಿಪ್ರ ಮೊದಲು ಅಂತ್ಯಜ ಕಡೆಯಾಗಿ" ಸಮಾಜದ ಎಲ್ಲ ವರ್ಗದ ಸ್ತ್ರೀ-ಪುರುಷರ ಸಂಕೀರ್ಣ ಧ್ವನಿಗಳು ಇವರಲ್ಲಿ ತುಂಬ ಕಲಾತ್ಮಕವಾಗಿ

ಏರಕಗೊಂಡಿವೆ. ಹೀಗಾಗಿ ಸಮಗ್ರ ಕರ್ನಾಟಕದ ಪ್ರಾತಿನಿಧಿಕ ಧ್ವನಿಯೆನಿಸಿದ ಈ ಸಾಹಿತ್ಯದ ಪ್ರಕಟನೆಯು ತನ್ನ ಕರ್ತವ್ಯದ ಭಾಗವೆಂದು ಭಾವಿಸಿರುವ ಕರ್ನಾಟಕ ಸರ್ಕಾರ, ಅದನ್ನು ಸುಲಭ ಬೆಲೆಯಲ್ಲಿ ಜನತೆಗೆ ನೀಡುತ್ತಿದೆ.

ಈ ಯೋಜನೆಯ ನೇತೃತ್ವ ವಹಿಸಿ ದುಡಿದ ಡಾ. ಎಂ. ಎಂ. ಕಲಬುರ್ಗಿ ಅವರ ಶ್ರದ್ಧೆಯನ್ನು, ಸಂಪಾದಕ ಮಂಡಳಿಯ ಮಾರ್ಗದರ್ಶನವನ್ನು, ಸಂಪಾದಕರ ಶ್ರಮವನ್ನು ಸ್ಮರಿಸುತ್ತ, ಈ ಐತಿಹಾಸಿಕ ಪ್ರಕಟನೆಯ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

❊

# ಬಿನ್ನಹ

**ರಾಣಿ ಸತೀಶ್**
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಸಾಹಿತ್ಯಕ್ಕೆ ಸಾಹಿತ್ಯ, ಶಾಸ್ತ್ರಕ್ಕೆ ಶಾಸ್ತ್ರವಾಗಿರುವ ವಚನವಾಙ್ಮಯ ನಮ್ಮ ಪರಂಪರೆಯ ಅಪೂರ್ವ ಸೃಷ್ಟಿಯಾಗಿದೆ; ಅತ್ಯಪೂರ್ವ ಆಸ್ತಿಯೆನಿಸಿದೆ. ಪಂಡಿತರ ಮಾರ್ಗಸಾಹಿತ್ಯಕ್ಕೆ ಪ್ರತಿಯಾಗಿ ಸಾಮಾನ್ಯರ ಈ ದೇಶೀಸಾಹಿತ್ಯ ಹೊರಹೊಮ್ಮಿದ್ದು ೧೨ನೆಯ ಶತಮಾನದಲ್ಲಿ; ಕಲಚುರಿಗಳ ರಾಜಧಾನಿಯಾಗಿದ್ದ ಕಲ್ಯಾಣದಲ್ಲಿ; ಬಸವಾದಿ ಶರಣರ ಚಳುವಳಿಯಲ್ಲಿ.

ಮೂಲತಃ ಭಾರತೀಯರದು ಆತ್ಮ ಪರಮಾತ್ಮನಾಗಬೇಕೆಂಬ ವ್ಯಕ್ತಿಕೇಂದ್ರಿತ ಸಿದ್ಧಾಂತ. ಶರಣರು ಇದನ್ನು ಸಮಾಜಕೇಂದ್ರಿತ ಸಿದ್ಧಾಂತಕ್ಕೆ ವಿಸ್ತರಿಸಿದರು. ಹೀಗಾಗಿ ವ್ಯಕ್ತಿ ಕಲ್ಯಾಣದ ಜೊತೆ ಸಮಾಜಕಲ್ಯಾಣವೂ ಈ ಚಳುವಳಿಯ ಮುಖ್ಯ ಲಕ್ಷಣವೆನಿಸಿತು. ಸಾಹಿತ್ಯ ಸಾಹಿತ್ಯಕ್ಕಾಗಿ ಅಲ್ಲ, ವ್ಯಕ್ತಿ ಪರಿವರ್ತನೆಗಾಗಿ, ಸಮಾಜ ಪರಿವರ್ತನೆಗಾಗಿಯೆಂಬ ಸಿದ್ಧಾಂತ ಇಲ್ಲಿ ಅರ್ಥ ಪಡೆಯಿತು.

೧೨ನೆಯ ಶತಮಾನದ ಹೊತ್ತಿಗೆ, ಶೂದ್ರಜೀವ ದೇವನಾಗಲಾರನೆಂಬ ಸಿದ್ಧಾಂತ ಸ್ಥಾಪಿತವಾಗಿದ್ದಿತು. ಸಮಾಜದಲ್ಲಿ ಪುರುಷ-ಸ್ತ್ರೀ, ಪ್ರಭು-ಪ್ರಜೆ, ಬ್ರಾಹ್ಮಣ-ಶೂದ್ರರಲ್ಲಿ ಸಮಾನತೆ ಸಾಧ್ಯವಿಲ್ಲವೆಂಬ ಭೇದಸಂಸ್ಕೃತಿಯೂ ನಿರ್ಮಾಣವಾಗಿದ್ದಿತು. ಈಗ, ಶೂದ್ರನಿಗೂ ದೇವರಾಗುವ ಅರ್ಹತೆಯಿದೆ; ಸ್ತ್ರೀಗೆ ಪುರುಷನಷ್ಟು - ಪ್ರಜೆಗೆ ಪ್ರಭುವಿನಷ್ಟು - ಶೂದ್ರನಿಗೆ ಬ್ರಾಹ್ಮಣನಷ್ಟು ಅಧಿಕಾರವಿದೆಯೆಂದು ಶರಣರು ವಾದಿಸಿದರು. ಇವರ ಫಲವಾಗಿ, ಹೊಸ ಸಮಾಜವೊಂದು ಸೃಷ್ಟಿಯಾಯಿತು. ಇದರಿಂದಾಗಿ ಎಲ್ಲರೂ ಸ್ವತಂತ್ರರು, ಎಲ್ಲರೂ ಸಮಾನರು, ಎಲ್ಲರೂ ಸಹೋದರರೆಂಬ ತತ್ವ ಅನುಷ್ಠಾನಕ್ಕೆ ಬಂದಿತು. ಇವರ ಮುಂದುವರಿಕೆಯೆಂಬಂತೆ ಎಲ್ಲರೂ ದುಡಿಯಬೇಕು ಎಂಬ ಕಾಯಕತತ್ವ, ಎಲ್ಲರೂ ಹಂಚಿಕೊಂಡು ಉಣ್ಣಬೇಕು ಎಂಬ ದಾಸೋಹತತ್ವಗಳು ಆಕಾರ ಪಡೆದವು.

ಹೊಸ ಸಮಾಜದ ಈ ಎಲ್ಲ ನೆಲೆಗಳನ್ನು ಗುರಿಯಿಟ್ಟು ಆಡಿದ ಶರಣರ ಮಾತು ವಚನವೆಂಬ ಸಾಹಿತ್ಯಪ್ರಕಾರವಾಗಿ ಮೂಡಿತು. ವರ್ಗಭೇದ, ವರ್ಣಭೇದ, ಲಿಂಗಭೇದವೆನ್ನದೆ ಎಲ್ಲ ಜನವರ್ಗದವರ ಸಾವಿರ ಸಾವಿರ ವಚನಗಳು ಈ ಕಾಲದಲ್ಲಿ ಸೃಷ್ಟಿಯಾದವು. ಆದರೆ ಒಮ್ಮೆಲೇ ತಲೆದೋರಿದ ಕಲ್ಯಾಣ ಕ್ರಾಂತಿಯಿಂದಾಗಿ ಈ ಸಾಹಿತ್ಯ ನಾಡಿನ ತುಂಬ ಹರಿದು ಹಂಚಿಹೋಯಿತು.

ಹೀಗೆ ಹಂಚಿಹೋಗಿದ್ದ ಈ ಸಾಹಿತ್ಯವನ್ನು ೧೫-೧೬ನೆಯ ಶತಮಾನಗಳಲ್ಲಿ

ಶೋಧಿಸುವ, ಸಂಪಾದಿಸುವ ಪ್ರಯತ್ನ ನಡೆದು, ನೂರಾರು ಸಂಪಾದನ ಕೃತಿಗಳು ಹುಟ್ಟಿ ಬಂದು, ವಚನಸಾಹಿತ್ಯ ವೀರಶೈವ ಮಠಗಳಲ್ಲಿ ತಕ್ಕ ಮಟ್ಟಿಗೆ ರಕ್ಷಿಸಲ್ಪಟ್ಟಿತು. ದುರ್ದೈವದ ಸಂಗತಿಯೆಂದರೆ ಮಠಗಳಲ್ಲಿ ಪ್ರವೇಶ ಪಡೆದ ಸಂಸ್ಕೃತ ಭಾಷೆಯಿಂದಾಗಿ ಕನ್ನಡ ಭಾಷೆಯ ಈ ವಚನಗಳು ಅಲ್ಲಿ ಮೂಲೆ ಸೇರಿದವು.

ಹೀಗೆ ಮೂಲೆಗುಂಪಾಗಿದ್ದ ವಚನಸಾಹಿತ್ಯವು ೨೦ನೆಯ ಶತಮಾನದಲ್ಲಿ ಅನೇಕ ಜನ ವಿದ್ವಾಂಸರ, ಹತ್ತಾರು ಸಂಸ್ಥೆಗಳ ಪ್ರಯತ್ನದ ಫಲವಾಗಿ ಪ್ರಕಟಣೆಗೊಳ್ಳುತ್ತ ಬಂದಿತು. ಈಗ ೧೨ನೆಯ ಶತಮಾನದ ಶರಣಸಾಹಿತ್ಯ ಪ್ರಕಟನೆಗೆ ಒತ್ತುಬಿದ್ದರೂ ಅದು ಬಿಡಿಬಿಡಿಯಾಗಿ ಪ್ರಕಟಣೆಗೊಂಡಿತು. ಆ ತರುವಾಯದ ಶರಣ ಸಾಹಿತ್ಯವಂತೂ ಉಪೇಕ್ಷೆಗೆ ಗುರಿಯಾಯಿತು. ಈ ಎರಡೂ ಕೊರತೆಗಳನ್ನು ನೀಗಿಸುವ ಉದ್ದೇಶದಿಂದ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಪುಟ ಶ್ರೇಣಿಯಲ್ಲಿ ಪ್ರಕಟಿಸಲು ಕರ್ನಾಟಕ ಸರಕಾರ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕೈಗೆತ್ತಿಕೊಂಡಿತು.

ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ ವ್ಯಾಪಕ ಕಾರ್ಯ ನಡೆದು, ೨೦ ಸಾವಿರ ವಚನ, ೧೦ ಸಾವಿರ ಪುಟಗಳನ್ನೊಳಗೊಂಡ ೧೫ ಸಂಪುಟಗಳು ೧೯೯೩ರಲ್ಲಿ ಬೆಳಕು ಕಂಡವು. ಆಶ್ಚರ್ಯದ ಸಂಗತಿಯೆಂದರೆ ಇದರ ೫ ಸಾವಿರ ಪ್ರತಿಗಳು ಒಂದೇ ವರ್ಷದಲ್ಲಿ ಮಾರಾಟವಾಗಿ, ಜನರಿಂದ ಬೇಡಿಕೆ ಹೆಚ್ಚುತ್ತ ನಡೆಯಿತು. ಇದನ್ನು ಪೂರೈಸುವ ದಿಕ್ಕಿನಲ್ಲಿ ಪರಿಷ್ಕೃತ ದ್ವಿತೀಯ ಆವೃತ್ತಿ ಈಗ ಹೊರಬರುತ್ತಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆಯಾಗಿ ಕನ್ನಡದ ಈ ಅಪೂರ್ವ ಆಸ್ತಿಯನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ನಿರ್ದೇಶಕರ ಮಾತು

**ಕೆ. ಸಿ. ರಾಮಮೂರ್ತಿ**

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ವಚನಸಾಹಿತ್ಯ, ಕರ್ನಾಟಕದ ಬಹುದೊಡ್ಡ ಸಾಂಸ್ಕೃತಿಕ ಸಂಪತ್ತು. ಪ್ರಾಚೀನ ಕರ್ನಾಟಕದ ಜನಸಾಮಾನ್ಯರ ಧ್ವನಿಯಾಗಿರುವ ಇದನ್ನು ಪ್ರಕಟಿಸುವುದು, ಪ್ರಸಾರ ಮಾಡುವುದು ಜನತಂತ್ರ ಸರಕಾರದ ಮುಖ್ಯ ಕರ್ತವ್ಯವಾಗಿದೆ.

ಭಾರತದಲ್ಲಿ ಆತ್ಮೋದ್ಧಾರದ ಬಗ್ಗೆ ಉದಾತ್ತ ತತ್ವಗಳನ್ನು ಪ್ರತಿಪಾದಿಸುತ್ತ ಬಂದಿದ್ದರೂ ಸಮಾಜೋದ್ಧಾರದ ಬಗ್ಗೆ ಉಪೇಕ್ಷೆ ಬೆಳೆದು, ಅಲ್ಲಿ ಶೋಷಣೆ ವರ್ಧಿಸುತ್ತ ಬಂದುದು ನಮ್ಮ ಇತಿಹಾಸದ ಒಂದು ವಿಪರ್ಯಾಸವೇ ಸರಿ. ೧೨ನೆಯ ಶತಮಾನದಲ್ಲಿ ಉಲ್ಬಣಗೊಂಡಿದ್ದ ಈ ವಿಷಮ ಪರಿಸ್ಥಿತಿಯನ್ನು ನಾಶಗೊಳಿಸಿ, ಸಮಸ್ಥಿತಿಯನ್ನು ಸಮಾಜದಲ್ಲಿ ತರಲು ಹೋರಾಡಿದವರು, ಕಲ್ಯಾಣದ ಶರಣರು. ಈ ಕಾರ್ಯಕ್ಕಾಗಿ ಅವರು ಕೈಕೊಂಡ ಜನಪರ ಆಂದೋಲನ ನಮ್ಮ ದೇಶದ ಇತಿಹಾಸದಲ್ಲಿಯೇ ಒಂದು ವಿಶಿಷ್ಟ ಘಟನೆಯಾಗಿದೆ.

ಭಾರತದಲ್ಲಿ ರಾಜಸತ್ತೆಯ ಸ್ಥಾಪನೆಗಾಗಿ ರಾಜರು, ಮತಸತ್ತೆಯ ಸ್ಥಾಪನೆಗಾಗಿ ಧರ್ಮಗಳು ಪರಸ್ಪರ ಸಂಘರ್ಷಕ್ಕಿಳಿದುದು ಸರ್ವಶ್ರುತ. ಆದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ ಈ ರಾಜಸತ್ತೆ, ಮತಸತ್ತೆಗಳ ವಿರುದ್ಧ ಸಮಾಜದ ವಿವಿಧ ಸ್ತರಗಳ ಜನತೆ, ಅದರಲ್ಲಿಯೂ ದೀನರು-ದಲಿತರು-ಮಹಿಳೆಯರು ಬೀದಿಗಿಳಿದು ನಡೆಸಿದ ಈ ಆಂದೋಲನ, ಇಪ್ಪತ್ತನೆಯ ಶತಮಾನವೂ ಆಶ್ಚರ್ಯಪಡುವ ಸಂಗತಿಯಾಗಿದೆ.

ಅಂದಿನ ಸನ್ನಿವೇಶಕ್ಕೆ ಅನುಗುಣವಾಗಿ ಧಾರ್ಮಿಕ ಕ್ಷೇತ್ರದಲ್ಲಿ ಅಂಕುರಿಸಿದ ಈ ಆಂದೋಲನ, ಸಾಮಾಜಿಕ ಕ್ಷೇತ್ರವನ್ನೂ ಆವರಿಸಿದ ಕಾರಣ, ಇದನ್ನು 'ಸಮಾಜೋ ಧಾರ್ಮಿಕ' ಆಂದೋಲನವೆಂದು ಗುರುತಿಸಲಾಗುತ್ತದೆ. ಸಮಾಜವೆನ್ನುವುದು ಸಂಕೀರ್ಣ ವ್ಯವಸ್ಥೆ. ಅದರ ಎಲ್ಲ ಸ್ತರಗಳನ್ನೂ ಎಲ್ಲ ಮಗ್ಗಲುಗಳನ್ನೂ ಬದಲಿಸಲು ಮಾಡಿದ ಪ್ರಯತ್ನವಾಗಿರುವುದರಿಂದ ಇದು ಒಂದು "ಸಮಗ್ರ ಆಂದೋಲನ"ವಾಗಿದೆ. ಈ ಆಂದೋಲನದ ನೇರ ಧ್ವನಿ, ವಚನಸಾಹಿತ್ಯ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನಿಂದಾಗಿ ವ್ಯಕ್ತಿ ಸ್ವಾತಂತ್ರ್ಯ ಪಡೆದ ಜನವರ್ಗವು ವ್ಯಕ್ತಪಡಿಸಿದ ಅಭಿಪ್ರಾಯ ಸ್ವಾತಂತ್ರ್ಯದ ಫಲ, ಈ ಸಾಹಿತ್ಯ. ಹೀಗಾಗಿ ಇಲ್ಲಿ ಆತ್ಮವಿಮರ್ಶೆಯಷ್ಟೇ ವಿಪುಲವಾಗಿ ಸಮಾಜವಿಮರ್ಶೆಯನ್ನೂ ಕಾಣಬಹುದಾಗಿದೆ. ಅದರಲ್ಲಿಯೂ ವರ್ಣಭೇದ ನಿರಾಕರಣೆ, ವರ್ಗಭೇದ

ನಿರಾಕರಣೆ, ಲಿಂಗಭೇದ ನಿರಾಕರಣೆಗಳಂಥ ವಿಚಾರಗಳು ಸ್ಫೋಟಗೊಂಡುದು ಲಕ್ಷಿಸತಕ್ಕ ಸಂಗತಿಯಾಗಿದೆ. ಇಲ್ಲಿ ಪುರುಷರಷ್ಟೇ ಪ್ರಧಾನವಾಗಿ ಮಹಿಳೆಯರೂ, ಕುಲಜರಷ್ಟೇ ಪ್ರಧಾನವಾಗಿ ಅಂತ್ಯಜರೂ, ಪ್ರಭುಗಳಷ್ಟೇ ಪ್ರಧಾನವಾಗಿ ಪ್ರಜೆಗಳೂ ಬಾಳಿದುದು, ಬರೆದುದು ಬಹುಶಃ ಜಗತ್ತಿನ ಇತಿಹಾಸದಲ್ಲಿಯೇ ಏಕೈಕ ಉದಾಹರಣೆಯಾಗಿದೆ. ಇಂಥ ವಿಚಾರಶೀಲರ ಅಂದರೆ ಇವರ ತತ್ವ-ಸಾಹಿತ್ಯಗಳ ಉತ್ತರಾಧಿಕಾರಿಗಳಾದುದು ನಮ್ಮ ಭಾಗ್ಯ; ಇವರ ಸಾಹಿತ್ಯಸಂಪತ್ತನ್ನು ರಕ್ಷಿಸುವುದು, ಪ್ರಸಾರಮಾಡುವುದು ನಮ್ಮ ಕರ್ತವ್ಯ. ಈ ಕರ್ತವ್ಯದ ಭಾಗವಾಗಿ "ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ"ಯನ್ನು ಕರ್ನಾಟಕ ಸರಕಾರ ಕೈಗೆತ್ತಿಕೊಂಡಿತು.

ಈವರೆಗೆ ವಚನಸಾಹಿತ್ಯ ಬಿಡಿಬಿಡಿಯಾಗಿ ಭಾಗಶಃ ಪ್ರಕಟವಾಗಿದ್ದಿತು, ಕೆಲವು ಭಾಗ ಅಪ್ರಕಟಿತ ಸ್ಥಿತಿಯಲ್ಲಿ ಉಳಿದಿದ್ದಿತು. ಇದೆಲ್ಲವನ್ನು ಕ್ರೋಢೀಕರಿಸಿ, ಪರಿಷ್ಕರಿಸಿ ಪ್ರಕಟಿಸುವುದು ಶ್ರಮದ ಕೆಲಸ. ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದಲ್ಲಿ, ಅನೇಕ ಜನ ವಿದ್ವಾಂಸರ ಮತ್ತು ಸಂಪಾದಕ ಮಂಡಳಿ ಸದಸ್ಯರ ಸಂಯುಕ್ತ ಪರಿಶ್ರಮದಿಂದ ಈ ಬೃಹತ್ ಯೋಜನೆ ಪೂರ್ತಿಗೊಂಡುದು ಸಂತೋಷದ ಸಂಗತಿ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದು, ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಂಡ ಈ ಐತಿಹಾಸಿಕ ಯೋಜನೆಗಾಗಿ ಸಂಬಂಧಪಟ್ಟ ಎಲ್ಲ ವಿದ್ವಾಂಸರನ್ನು ಅಭಿನಂದಿಸುತ್ತೇನೆ. ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟವಾಗುತ್ತಲಿರುವ ಈ ಪರಿಷ್ಕೃತ ದ್ವಿತೀಯ ಆವೃತ್ತಿ ಸಂಪುಟಗಳನ್ನು ಕನ್ನಡ ಜನತೆಗೆ ಅರ್ಪಿಸುತ್ತೇನೆ.

■■

*

# ಪ್ರಕಾಶಕರ ಮಾತು

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು, ಕನ್ನಡ ಪುಸ್ತಕ ಪ್ರಾಧಿಕಾರ

ಸಮಗ್ರ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಪ್ರಕಟಣೆ ಕರ್ನಾಟಕ ಸಾಂಸ್ಕೃತಿಕ ಇತಿಹಾಸದಲ್ಲಿ ನಡೆದಿರುವ ಒಂದು ದಿವ್ಯಘಟನೆ. ವಚನಸಾಹಿತ್ಯದ ಪ್ರಕಟಣೆಗೆ ಸುಮಾರು ಎಂಬತ್ತು ವರ್ಷಗಳ ಇತಿಹಾಸವಿದೆ. ವಚನಪಿತಾಮಹ ಶ್ರೀ ಫ. ಗು. ಹಳಕಟ್ಟಿ ಅವರಿಂದ ಪ್ರಕಟಣೆಯ ದಿವ್ಯಘಟನೆ ಆರಂಭಗೊಂಡಿತು. ಇದೀಗ ಡಾ. ಎಂ. ಎಂ. ಕಲಬುರ್ಗಿಯವರ ಪ್ರಧಾನ ಸಂಪಾದಕತ್ವದ ಮೂಲಕ ಸಹಸ್ರಮಾನದ ಸೂರ್ಯೋದಯದ ವೇಳೆಗೆ ಇದು ಒಂದು ಪೂರ್ಣ ಘಟ್ಟಕ್ಕೆ ಬಂದಿದೆ. ಶರಣ ಸಾಹಿತ್ಯದ ಪ್ರಕಟಣೆಯ ಇತಿಹಾಸದಲ್ಲಿ ಇದು ಚಾರಿತ್ರಿಕ ಘಟನೆಯೇ ಸರಿ. ಈ ನಡುವೆ ವಚನಸಾಹಿತ್ಯದ ಸಹಸ್ರಾರು ಬಿಡಿ ಪ್ರಕಟಣೆಗಳು ಹೊರಬಂದಿವೆ. ವಿಶ್ವವಿದ್ಯಾಲಯಗಳು, ಖಾಸಗಿ ಸಂಸ್ಥೆಗಳು, ಮಠಗಳು, ಶಿಕ್ಷಣ ಕೇಂದ್ರಗಳು, ಖಾಸಗಿ ಪ್ರಕಾಶಕರು, ಆಸಕ್ತ ಲೇಖಕರು ಬಿಡಿಬಿಡಿಯಾಗಿ ವಚನಸಾಹಿತ್ಯದ ಪ್ರಕಟಣೆಗಳನ್ನು ಹೊರತಂದಿದ್ದಾರೆ. ನಾವು ಪ್ರೀತಿಯಿಂದ ಇವರನ್ನೆಲ್ಲ ಈ ಹೊತ್ತಿನಲ್ಲಿ ನೆನೆಯುವುದು, ಆ ಪಾತ್ರಃಸ್ಮರಣೀಯರ ಹಾದಿಯಲ್ಲಿ ಮುನ್ನಡೆಯುವುದು ನಮ್ಮ ಸಾಂಸ್ಕೃತಿಕ ಕರ್ತವ್ಯ.

ಸಮಗ್ರ ವಚನ ಸಂಪುಟಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ೧೯೯೩ರಲ್ಲಿ ಪ್ರಕಟಗೊಂಡಿದ್ದವು. ಆ ಸಂಪುಟಗಳು ಪ್ರಕಟವಾದ ವರ್ಷವೇ ಕನ್ನಡಿಗರ ಮನೆಯನ್ನು ಸೇರಿಕೊಂಡವು. ಆದರೆ, ಸಂಪುಟಗಳ ಬೇಡಿಕೆ ಮಹಾಜನರಿಂದ ಇದ್ದೇ ಇತ್ತು. ಅನಂತರ ಕರ್ನಾಟಕ ಸರ್ಕಾರ ಪರಿಷ್ಕೃತ ಆವೃತ್ತಿಗೆ ತಾತ್ವಿಕ ಒಪ್ಪಿಗೆ ನೀಡಿತು. ಹೀಗೆ ಒಪ್ಪಿಗೆ ನೀಡಿದ ಸಂಸ್ಕೃತಿ ಸಂಪನ್ನರೂ ಮುಖ್ಯಮಂತ್ರಿಗಳೂ ಆದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರನ್ನು ತುಂಬು ಹೃದಯದಿಂದ ಈ ಪ್ರಕಟಣೆಯ ದಿವ್ಯಘಟನೆಯ ಹೊತ್ತಿನಲ್ಲಿ ಸ್ಮರಿಸಿಕೊಳ್ಳುತ್ತೇನೆ. ಅನಂತರ ನಾಡಿನ ಶ್ರೇಷ್ಠ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ವಚನ ಸಂಪುಟಗಳ ಪರಿಷ್ಕೃತ ಆವೃತ್ತಿ ಸಿದ್ಧಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಪ್ರಕಟಿಸಬೇಕಿತ್ತು. ಆದರೆ, ಆ ಕಾರ್ಯವನ್ನು ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಒಪ್ಪಿಸಿದ್ದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಔದಾರ್ಯ; ಅದನ್ನು ಪಡೆದು ಪ್ರಕಟಿಸುತ್ತಿರುವುದು ಪುಸ್ತಕ ಪ್ರಾಧಿಕಾರದ ಭಾಗ್ಯ. ಈ ಭಾಗ್ಯಕ್ಕೆ ಕಾರಣರಾದವರು ಕನ್ನಡ ಮತ್ತು ಸಂಸ್ಕೃತಿ

ಇಲಾಖೆಯ ಸಚಿವೆಯರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಮತ್ತು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ. ಇವರಿಬ್ಬರ ಆಸಕ್ತಿಯ ಫಲ ಈ ಕಾರ್ಯವನ್ನು ಆಗುಗೊಳಿಸಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವೆಯರ ಆಪ್ತ ಕಾರ್ಯದರ್ಶಿ ಡಾ. ಎ. ಆರ್. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಸಿ. ಎಸ್. ಕೇದಾರ್, ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀ ಕಾ. ತ. ಚಿಕ್ಕಣ್ಣ ಪ್ರಕಟಣೆಯ ವಿವಿಧ ಹಂತಗಳಲ್ಲಿ ನನಗೆ ನೆರವಾಗಿದ್ದಾರೆ. ಈ ಮೇಲಿನ ಎಲ್ಲ ಮಹನೀಯರಿಗೂ ಕನ್ನಡ ಪುಸ್ತಕ ಪ್ರಾಧಿಕಾರವು ಅನನ್ಯವಾದ ಕೃತಜ್ಞತೆಯನ್ನು ಅರ್ಪಿಸುತ್ತದೆ.

ಸಮಗ್ರವಚನ ಸಂಪುಟಗಳ ಪರಿಷ್ಕೃತ ಆವೃತ್ತಿಯ ಸಂಪಾದಕ ಮಂಡಳಿಯ ವಿದ್ವಾಂಸರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ್, ಡಾ. ಎಸ್. ವಿದ್ಯಾಶಂಕರ್, ಎಸ್. ಶಿವಣ್ಣ ಇವರನ್ನು, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರತರಲು ಒಪ್ಪಿಗೆ ನೀಡಿದ ಪುಸ್ತಕ ಪ್ರಾಧಿಕಾರದ ಸ್ಥಾಯಿಸಮಿತಿ ಸದಸ್ಯರಾದ ಪ್ರೊ. ರಾಮೇಗೌಡ, ಶ್ರೀ ಆರ್. ಜಿ. ಹಳ್ಳಿ ನಾಗರಾಜ್, ಪ್ರೊ. ಸಿದ್ಧಪ್ಪ ಉತ್ನಾಳ್, ಶ್ರೀ ಛಾಯಾಪತಿ ಮತ್ತು ಶ್ರೀಮತಿ ಇಂದಿರಾ ಶಿವಣ್ಣ ಇವರನ್ನು ತುಂಬು ಮನಸ್ಸಿನಿಂದ ನೆನೆಯುತ್ತೇನೆ. ಹದಿನೈದು ಸಂಪುಟಗಳ ಅಕ್ಷರ ಜೋಡಣೆ ಮಾಡಿಕೊಟ್ಟವರನ್ನು, ಬಹು ಅಂದವಾಗಿ ಮುದ್ರಿಸಿದವರನ್ನು, ಸುಂದರವಾಗಿ ಮತ್ತು ಆಕರ್ಷಕವಾಗಿ ಸಂಪುಟಗಳನ್ನು ಬೈಂಡ್ ಮಾಡಿಕೊಟ್ಟವರನ್ನು, ಮುಖಪುಟ ವಿನ್ಯಾಸ ಮಾಡಿಕೊಟ್ಟವರನ್ನು, ತುಂಬು ಪ್ರೀತಿಯಿಂದ ನೆನೆಯುವುದು ನನ್ನ ಕರ್ತವ್ಯ. ಇವರ ಮುದ್ರಣ ಪರಿಣತಿಯ ಫಲ ಈ ಸಂಪುಟಗಳಿಗೆ ದೊರಕಿ ಅಂದವಾಗಲು ಕಾರಣವಾಗಿದೆ. ಪುಸ್ತಕ ಪ್ರಾಧಿಕಾರದ ಆಡಳಿತಗಾರರಾದ ಶ್ರೀ ಬಲವಂತರಾವ್ ಪಾಟೀಲ ನನ್ನೊಡನೆ ಉದ್ದಕ್ಕೂ ಸಹಕರಿಸಿದ್ದಾರೆ. ಈ ಮೇಲೆ ಹೆಸರಿಸಿದ ಎಲ್ಲ ಮಹನೀಯರನ್ನು ಕೃತಜ್ಞತಾಪೂರ್ವಕವಾಗಿ ನೆನೆಯುತ್ತೇನೆ.

ಕನ್ನಡ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿರುವ ಸಮಗ್ರ ವಚನ ಸಂಪುಟಗಳನ್ನು ಕನ್ನಡದ ಮಹಾಜನತೆ ಪ್ರೀತಿಯಿಂದ ಸ್ವೀಕರಿಸಬೇಕೆಂದು ಬೇಡುತ್ತೇನೆ.

*

# ಸಂಪಾದಕೀಯ

---


## ಡಾ. ಎಂ. ಎಂ. ಕಲಬುರ್ಗಿ

ಪ್ರಧಾನ ಸಂಪಾದಕರು


ಕರ್ನಾಟಕದ ಇತಿಹಾಸದಲ್ಲಿ ಶಿವಶರಣರ ಚಳುವಳಿ ಒಂದು ಅಪೂರ್ವ ಘಟನೆ, ವಚನಗಳ ಸೃಷ್ಟಿ ಒಂದು ಅನನ್ಯ ಪ್ರಯೋಗ. ಸಮಾಜದ ಎಲ್ಲ ವರ್ಗ, ಎಲ್ಲ ವರ್ಣಗಳ ಜನಸಮುದಾಯ ಬಸವಣ್ಣನವರ ನೇತೃತ್ವದಲ್ಲಿ ಕೈಕೊಂಡಿದ್ದ ವ್ಯಕ್ತಿಕಲ್ಯಾಣ ಮತ್ತು ಸಮಾಜಕಲ್ಯಾಣ ಚಳುವಳಿಯ ಸೃಷ್ಟಿಯೆನಿಸಿದ ಈ ವಚನಗಳು, ಜಾಗತಿಕ ಸಾಹಿತ್ಯದ ಮಹತ್ವಪೂರ್ಣ ಭಾಗವೆನಿಸಿವೆ.

'ವಚನ' ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ. ನಡೆ ಹೇಗೇ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ, ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'ವೆನಿಸುತ್ತದೆ.

ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು, ಅವುಗಳಿಗೆ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ತಮ್ಮ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿಮಾತುಗಳ ಮೂಲಕ ಹೇಳುತ್ತಾರೆ. ಬಿಡಿಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ, ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ.

ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿದ ಸಾಹಿತ್ಯವಾಗಿದೆ. ಹೀಗಾಗಿ ಹನ್ನೆರಡರಿಂದ ಹದಿನೈದನೆಯ ಶತಮಾನಕ್ಕೆ ಬರುವಷ್ಟರಲ್ಲಿ ಅದಕ್ಕೆ ವಿಪುಲ ಭಿನ್ನಪಾಠಗಳು ಹುಟ್ಟಿಕೊಂಡವು. ಆಮೇಲೆ ಸಂಕಲನ-ಸಂಪಾದನ ಕಾರ್ಯದಿಂದಾಗಿ ಕೆಲವೊಮ್ಮೆ ಪ್ರಕ್ಷಿಪ್ತ ವಚನಗಳೂ ತಲೆಯೆತ್ತಿದವು. ಈ ಗೊಂದಲ ಕಾರಣವಾಗಿ ಕವಿಸಾಹಿತ್ಯಕ್ಕಿಂತ ವಚನಸಾಹಿತ್ಯದ ಸಂಪಾದನಕಾರ್ಯ ತುಂಬ ಜಟಿಲಸ್ವರೂಪದ್ದಾಗಿದೆ.

ಪ್ರಾಚೀನ ಕನ್ನಡ ಸಾಹಿತ್ಯದ ಪ್ರಕಟನಕಾರ್ಯವನ್ನು ಮೊದಲು ಕೈಗೆತ್ತಿಕೊಂಡವರು, ಕ್ರೈಸ್ತ ಪಾದ್ರಿಗಳು. ಜೈನ ಪುರಾಣ-ಕಾವ್ಯಗಳನ್ನು, ವೈದಿಕ ಪುರಾಣ-ಕೀರ್ತನೆಗಳನ್ನು, ವೀರಶೈವ ಶಾಸ್ತ್ರ-ಪುರಾಣಗಳನ್ನು ಪ್ರಕಟಿಸಿದ ಇವರು, ವಚನಸಾಹಿತ್ಯವನ್ನು ಮಾತ್ರ ತಪ್ಪಿಯೂ ಪ್ರಕಟಿಸಲಿಲ್ಲ. ದೇಶೀ ವಿದ್ವಾಂಸರೇ ಈ ಕೆಲಸವನ್ನು ಪ್ರಾರಂಭ ಮಾಡಬೇಕಾಯಿತು. ಈ

ದಿಸೆಯಲ್ಲಿ ಮೊದಲು ಪ್ರಕಟವಾದ ವಚನಕೃತಿ (೧೮೮೩) 'ಅಪ್ರಮಾಣ ಕೂಡಲ ಸಂಗಮದೇವಾ' ಮುದ್ರಿಕೆಯ ವಚನಗಳನ್ನೊಳಗೊಂಡ "ಶಿಖಾರತ್ನಪ್ರಕಾಶ"[1]. ಆಮೇಲೆ ಒಂದು ಮೈಲಿಗಲ್ಲಿನಂತೆ ಪ್ರಕಟವಾದ ವಚನಕೃತಿ, ಬಸವಣ್ಣನವರ ಷಟ್‌ಸ್ಥಲವಚನ ಸಂಪುಟ. ಅದು ಮೊದಲು ಬೆಳಕು ಕಂಡುದು ೧೮೮೯ರಲ್ಲಿ[2]. ಅಲ್ಲಿಂದ ಸರಿಯಾಗಿ ಒಂದು ಶತಮಾನ ಕಳೆಯುವಷ್ಟರಲ್ಲಿ ಅಂದರೆ ೧೯೮೮ರಲ್ಲಿ ಈ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ' ಅಸ್ತಿತ್ವಕ್ಕೆ ಬಂದುದು ಒಂದು ಯೋಗಾಯೋಗವಾಗಿದೆ; ವಚನಸಾಹಿತ್ಯದ ಪ್ರಕಟನಚರಿತ್ರೆಯ ಶತಮಾನಸ್ಮರಣೆಯಾಗಿದೆ.

ಈ ನೂರು ವರ್ಷಗಳ ಕಾಲವ್ಯಾಪ್ತಿಯಲ್ಲಿ ವಚನಸಾಹಿತ್ಯ ಪ್ರಕಟಣೆಗಾಗಿ ಅನೇಕರು ದುಡಿದಿರುವರಾದರೂ ಯೋಜನಾಬದ್ಧ ವ್ಯಾಪಕ ಪ್ರಯತ್ನಗಳು, ವಿಜಾಪುರ, ಧಾರವಾಡ, ಗದಗಗಳಲ್ಲಿ ಹೀಗೆ ಜರುಗಿವೆ :

೧. ಶಿವಾನುಭವ ಗ್ರಂಥಮಾಲೆ, ವಿಜಾಪುರ - ಡಾ. ಫ. ಗು. ಹಳಕಟ್ಟಿ

೨. ಕನ್ನಡ ಅಧ್ಯಯನ ಪೀಠ, ಕ. ವಿ. ಧಾರವಾಡ - ಡಾ. ಆರ್. ಸಿ. ಹಿರೇಮಠ

೩. ತೋಂಟದಾರ್ಯಮಠ, ಗದಗ - ಡಾ. ಎಂ. ಎಂ. ಕಲಬುರ್ಗಿ

ವಚನಸಾಹಿತ್ಯದ ಪ್ರಕಟನ ಕಾರ್ಯ ಹೀಗೆ ವಿಜಾಪುರದಲ್ಲಿ ಪ್ರಾರಂಭವಾಗಿ, ಧಾರವಾಡದಲ್ಲಿ ಬೆಳೆದು, ಗದುಗಿನಲ್ಲಿ ಒಂದು ನಿಲುಗಡೆಗೆ ಬರುತ್ತಿದ್ದಂತೆಯೇ, ಈಗ ನಾಲ್ಕನೆಯ ಘಟ್ಟದಲ್ಲಿ 'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ, ೧೫ ಸಂಪುಟಗಳು ಕರ್ನಾಟಕ ಸರಕಾರದ ಮೂಲಕ ಪ್ರಕಟವಾಗುತ್ತಲಿವೆ. ಸುಮಾರು ೧೧೦ ಜನ ಪ್ರಕ್ಷಿಪ್ತ ವಚನಕಾರರನ್ನೂ ಪ್ರಕ್ಷಿಪ್ತವಾಗಿರಬಹುದಾದ ಅನೇಕ ವಚನಗಳನ್ನೂ ಕೈಬಿಟ್ಟು ಸಂಯೋಜಿಸಲಾದ ಈ ಹದಿನೈದು ಸಂಪುಟಗಳ ಒಟ್ಟು ಪುಟ ಸುಮಾರು ಹತ್ತು ಸಾವಿರ; ಒಟ್ಟು ವಚನ ಸಂಖ್ಯೆ ಸುಮಾರು ಇಪ್ಪತ್ತು ಸಾವಿರ. ವಚನಸಾಹಿತ್ಯವನ್ನು ಒಮ್ಮೆ ಸಮಗ್ರವಾಗಿ ಹೊರತಂದ ಪ್ರಥಮ ಮಹತ್ವಾಕಾಂಕ್ಷೆಯ ಯೋಜನೆಯಿದು. ಈ ಸಾಹಿತ್ಯದ ಗಡಿಗೆರೆಗಳನ್ನು, ಸಂಖ್ಯಾಬಾಹುಳ್ಯವನ್ನು ವ್ಯವಸ್ಥೆಗೊಳಿಸಿ ಕೊಟ್ಟು, ವಿದ್ವಾಂಸರ ಅಧ್ಯಯನದ ಮುಂದುವರಿಕೆಗೆ ಒಂದು ನಿರ್ದಿಷ್ಟ ಚೌಕಟ್ಟನ್ನು ಒದಗಿಸಿದ ಹಿರಿಮೆ ಈ ಯೋಜನೆಗೆ ಸಲ್ಲುತ್ತದೆ.

ಈ ಯೋಜನೆಯ ಅಂಗವಾಗಿ ಬಸವಣ್ಣನವರ ವಚನ, ಪ್ರಭುದೇವರ ವಚನ, ಚೆನ್ನಬಸವಣ್ಣನವರ ವಚನ, ಸಿದ್ಧರಾಮೇಶ್ವರ ವಚನ, ಶಿವಶರಣೆಯರ ವಚನ - ಹೀಗೆ ಐದು ಸಂಪುಟಗಳು, ಬಸವ ಸಮಕಾಲೀನ ಮಿಕ್ಕ ಶರಣರ ವಚನಗಳ ನಾಲ್ಕು ಸಂಪುಟಗಳು,

---

೧. ಮೊದಲು ಪ್ರಕಟವಾದ ವಚನಕೃತಿ ಅಖಂಡೇಶ್ವರ ವಚನ (೧೮೮೨)ವೆಂದು ಡಾ. ಬಿ. ನಂಜುಂಡ ಸ್ವಾಮಿ ಅವರ ಅಭಿಪ್ರಾಯ. (ಬಸವಪಥ ೧೬.೬)

೨. ಬಸವಣ್ಣನವರ ಷಟ್ಸ್ಥಲದ ವಚನಗಳು ಪ್ರಥಮ ಸಲ ಬೆಳಕುಕಂಡುದು ೧೮೮೬ರಲ್ಲಿಯೆಂದು ಡಾ. ಬಿ. ನಂಜುಂಡಸ್ವಾಮಿ ಹೇಳುತ್ತಾರೆ. (ಬಸವಪಥ ೧೫-೫ ಪು. ೪೫)

ಬಸವೋತ್ತರ ಕಾಲೀನ ಶರಣರ ವಚನಗಳ ಐದು ಸಂಪುಟಗಳು ಮತ್ತು ಒಂದು ವಚನ ಪರಿಭಾಷಾಕೋಶ - ಹೀಗೆ ಹದಿನೈದು ಸಂಪುಟಗಳು ಬೆಳಕುಕಾಣುತ್ತಲಿವೆ. ಇವುಗಳಲ್ಲಿ ಮೊದಲಿನ ಐದು ಸಂಪುಟಗಳು (ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮ, ಶಿವಶರಣೆಯರು) ಈಗಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಪ್ರಕಟವಾಗಿದ್ದವು. ಆ ಬಳಿಕ ಲಭ್ಯವಾದ ನೂರಾರು ಹೊಸ ವಚನಗಳನ್ನು ಸೇರಿಸಿ, ಈ ಐದೂ ಸಂಪುಟಗಳಿಗೆ ಸಮಗ್ರರೂಪ ಕೊಟ್ಟಿದ್ದೇವೆ ಮತ್ತು ಪರಿಷ್ಕರಿಸಿದ್ದೇವೆ.

ಬಸವ ಸಮಕಾಲೀನ ಮಿಕ್ಕ ಶರಣರ ನಾಲ್ಕು ಸಂಪುಟಗಳ ಕೆಲಸ ಈವರೆಗೆ ಸಮರ್ಪಕವಾಗಿ ನಡೆದಿರಲಿಲ್ಲ. ಈ ಶರಣರ ಸಂಖ್ಯೆ, ಇವರ ವಚನಸಂಖ್ಯೆ ಅಸ್ಪಷ್ಟವಾಗಿಯೇ ಉಳಿದಿದ್ದಿತು. ವಚನಗಳೂ ಅಲ್ಲಿಷ್ಟು, ಇಲ್ಲಿಷ್ಟು ಪ್ರಕಟವಾಗಿದ್ದವು. ಒಂದಿಷ್ಟು ಅಪ್ರಕಟಿತ ಸ್ಥಿತಿಯಲ್ಲಿಯೇ ಉಳಿದುಬಿಟ್ಟಿದ್ದವು. ಇವೆಲ್ಲವುಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಈ ನಾಲ್ಕೂ ಸಂಪುಟಗಳಿಗೆ ಸಮಗ್ರ ರೂಪ ಕೊಟ್ಟಿದ್ದೇವೆ. ಒಟ್ಟಿನಲ್ಲಿ ಬಸವಯುಗದ ಈ ಎಲ್ಲ ಒಂಬತ್ತು ಸಂಪುಟಗಳಿಗೆ ಸುಮಾರು ಸಾವಿರದಷ್ಟು ಹೊಸ ವಚನಗಳನ್ನು ಸೇರಿಸಿದ್ದೇವೆ.

ಬಸವೋತ್ತರ ಕಾಲೀನ ಶರಣರ ಸಂಪುಟಗಳ ಕೆಲಸ ಇನ್ನೂ ಅಲಕ್ಷಿತವಾಗಿದ್ದಿತು. ಈವರೆಗೆ ತಿಳಿದುಬಂದಿದ್ದ ವಚನಕಾರರ ಹೊಸ ವಚನಗಳನ್ನು ಶೋಧಿಸುವುದರೊಂದಿಗೆ, ಅನೇಕ ಹೊಸ ವಚನಕಾರರನ್ನೂ ಬೆಳಕಿಗೆ ತಂದಿದ್ದೇವೆ. ಇದರಿಂದಾಗಿ ಬಸವೋತ್ತರಯುಗದ ಶರಣರನ್ನೂ ಅವರ ವಚನಗಳ ವ್ಯಾಪ್ತಿಯನ್ನೂ ಜನತೆಯ ಮುಂದಿಟ್ಟ ಪ್ರಥಮ ಕೀರ್ತಿ ಈ ಐದು ಸಂಪುಟಗಳಿಗೆ ಸಲ್ಲುತ್ತದೆ. ಹೀಗೆ ಬಸವಯುಗ, ಬಸವೋತ್ತರಯುಗಗಳ ವಚನಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಕೊರತೆಗಳನ್ನು ತುಂಬಿಕೊಡುವ ಒಂದು ಪರಿಪೂರ್ಣ ಯೋಜನೆ ಇದಾಗಿದೆ. ಮೊದಲ ಬಾರಿಗೆ ೧೯ನೆಯ ಶತಮಾನದವರೆಗಿನ ಎಲ್ಲ ಶರಣರ ಎಲ್ಲ ವಚನಗಳನ್ನು ಒಂದೆಡೆ ಸಂಗ್ರಹಿಸಿ, ಒಂದು ಕ್ರಮಕ್ಕೆ ಅಳವಡಿಸಿ, ಸಂಪುಟ ಶ್ರೇಣಿಯಲ್ಲಿ ಹೊರತಂದ ದೊಡ್ಡಪ್ರಯತ್ನ ಇಲ್ಲಿದೆ.

ವಚನಸಾಹಿತ್ಯದ ಪರಿಷ್ಕರಣಕಾರ್ಯ ತುಂಬ ಜಟಿಲವಾದುದು. ೧. ಎಲ್ಲ ಶರಣರ ಎಲ್ಲ ವಚನಗಳನ್ನು ಎಲ್ಲ ಪ್ರಾಚೀನ ಆಕರಗಳಿಂದ ಸಂಗ್ರಹಿಸುವುದು, ೨. ಪ್ರಕ್ಷಿಪ್ತವಾಗಿರಬಹುದಾದ ವಚನಕಾರರನ್ನು, ವಚನಗಳನ್ನು ಕೈಬಿಡುವುದು, ೩. ನಿಜವಚನಗಳ ಪಾಠವನ್ನು ಪರಿಷ್ಕರಿಸುವುದು - ಇದು ಈ ಯೋಜನೆಯ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಎಲ್ಲ ಪ್ರಾಚೀನ ಆಕರಗಳಿಂದ ಅಂದರೆ ಸುಮಾರು ೧೦೮ ಆಕರಗಳಿಂದ ಎಲ್ಲ ವಚನಗಳನ್ನು ಸಂಗ್ರಹಿಸಿ, ಪ್ರತಿಯೊಂದು ವಚನದ ಕೆಳಗೆ ಅದರ ಎಲ್ಲ ಆಕರಗಳನ್ನು ನಮೂದಿಸಿದ 'ವಚನ ಬ್ಯಾಂಕ'ನ್ನು ಅಸ್ತಿತ್ವಕ್ಕೆ ತರಲಾಯಿತು. ಒಂದು ವಚನಕ್ಕೆ ಇರುವ ವಿವಿಧ ಪಾಠಾಂತರ, ರೂಪಾಂತರಗಳ ಸ್ವರೂಪವನ್ನು ಅರ್ಥಮಾಡಿಕೊಳ್ಳಲು, ಮುದ್ರಿಕೆಯ ವ್ಯತ್ಯಾಸವನ್ನು ಗಮನಿಸಲು, ಒಬ್ಬ ವಚನಕಾರನ ಒಟ್ಟು ವಚನಗಳ ಸಂಖ್ಯೆಯನ್ನು ನಿರ್ಧರಿಸಲು, ಕೊನೆಯದಾಗಿ ವಚನದ ನಿಜಪಾಠವನ್ನು ನಿರ್ಣಯಿಸಲು ಈ ಬ್ಯಾಂಕ್ ತುಂಬ ನೆರವಾಯಿತು.

ಇವು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿ, ಅನ್ಯಪಾಠಗಳನ್ನು ಅಡಿಯಲ್ಲಿ ನಮೂದಿಸದೆ ಕೈಬಿಟ್ಟಿದ್ದೇವೆ. ಜನಸಾಮಾನ್ಯರ ಅನುಕೂಲತೆಗಾಗಿ ಶಕಟರೇಫೆಗೆ ಬದಲು ರೇಫೆ ಇಟ್ಟುಕೊಂಡಿದ್ದೇವೆ. ಅಭ್ಯಾಸಿಗಳ ಉಪಯೋಗ ದೃಷ್ಟಿಯಿಂದ ಕಠಿಣ ಪದಕೋಶ, ಅಕಾರಾದಿ, ಆಕರಸೂಚಿಗಳನ್ನು ಅನುಬಂಧದಲ್ಲಿ ಕೊಟ್ಟಿದ್ದೇವೆ. ಹೆಚ್ಚಿನದಾಗಿ ಪಾರಿಭಾಷಿಕ ಪದಗಳ ಒಂದು ಸ್ವತಂತ್ರ ಕೋಶವನ್ನೇ ಪ್ರಕಟಿಸಿದ್ದೇವೆ. ಒಟ್ಟಿನಲ್ಲಿ, ಇವು ಜನಪ್ರಿಯ ಆವೃತ್ತಿಗಳಾದರೂ ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ಆದರ್ಶದಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

## ಕೃತಜ್ಞತೆ

ವಿಶ್ವವಿದ್ಯಾಲಯದಂಥ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂಥ ಸಾರ್ವಜನಿಕ ಸಂಸ್ಥೆಗಳು, ವೀರಶೈವ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ. ಗು. ಹಳಕಟ್ಟಿಯವರಂಥ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರೂ ವಚನಸಾಹಿತ್ಯ ಪೂರ್ಣಪ್ರಮಾಣದಲ್ಲಿ ಪ್ರಕಟವಾಗಲು ಒಂದುನೂರು ವರ್ಷ ಹಿಡಿದುದು ಅದರ ಗಾತ್ರಬಾಹುಳ್ಯಕ್ಕೆ ಸಾಕ್ಷಿಯಾಗಿದೆ. ನೂರುವರ್ಷ ದುಡಿದು, ಸಾಮಗ್ರಿಯನ್ನು ಪ್ರಕಟಿಸಿದ ಈ ಎಲ್ಲ ವ್ಯಕ್ತಿ-ಸಂಸ್ಥೆಗಳಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆಯ ಕಾರ್ಯಾಲಯ ಅಸ್ತಿತ್ವಕ್ಕೆ ಬಂದು ಕೆಲಸ ಪ್ರಾರಂಭವಾದದ್ದು ಅಕ್ಟೋಬರ್ ೧೫, ೧೯೮೮ರಂದು. ಹಸ್ತಪ್ರತಿಗಳು ಅಚ್ಚಿಗೆ ಹೋದದ್ದು ೧೬ ಮಾರ್ಚ್ ೧೯೯೦ರಂದು. ಹೀಗೆ ಮೊದಲೇ ಯೋಜಿಸಿದಂತೆ ಎರಡು ವರ್ಷಗಳ ನಿರ್ದಿಷ್ಟ ಅವಧಿಯಲ್ಲಿ ಈ ಕೆಲಸವನ್ನು ಪೂರ್ಣಗೊಳಿಸಿದ್ದೇವೆ. ಪ್ರತಿಯೊಂದು ಹಂತದಲ್ಲಿಯೂ ಈ ಯೋಜನೆ ಸಕ್ರಮವಾಗಿ ಮುನ್ನಡೆಯುವುದಕ್ಕಾಗಿ 'ಸಂಪಾದಕ ಮಂಡಳಿ'ಯ ಸದಸ್ಯರಾದ ಡಾ. ಎಂ. ಚಿದಾನಂದಮೂರ್ತಿ, ಡಾ. ಸಿ. ಪಿ. ಕೃಷ್ಣಕುಮಾರ, ಡಾ. ಎಸ್. ವಿದ್ಯಾಶಂಕರ, ಶ್ರೀ ಎಸ್. ಶಿವಣ್ಣ ಅವರು ಉದ್ದಕ್ಕೂ ಬೆಲೆಯುಳ್ಳ ಸಲಹೆ-ಮಾರ್ಗದರ್ಶನ ನೀಡಿದ್ದಾರೆ. ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ಆರಂಭದ ಕೆಲವು ತಿಂಗಳು ಸಂಪಾದಕ ಮಂಡಳಿಯ ಸದಸ್ಯರಾಗಿ, ವಿಶ್ವಾಸದಿಂದ ನೆರವಾಗಿದ್ದಾರೆ. ಸಂಪಾದಕ ಮಿತ್ರರಾದ ಡಾ. ಬಿ. ವ್ಹಿ. ಮಲ್ಲಾಪುರ, ಡಾ. ಎಸ್. ವಿದ್ಯಾಶಂಕರ, ಡಾ. ವ್ಹಿ. ಬಿ. ರಾಜೂರ, ಡಾ. ಬಿ. ಆರ್. ಹಿರೇಮಠ, ಶ್ರೀ ಎಸ್. ಶಿವಣ್ಣ ತುಂಬ ಶ್ರಮ-ಶ್ರದ್ಧೆಗಳಿಂದ ಸಂಪಾದನ ಕೆಲಸ ಪೂರೈಸಿದ್ದಾರೆ. ಸಹಾಯಕ ಸಂಶೋಧಕರಾದ ಶ್ರೀಮತಿ ವಿಜಯಶ್ರೀ ಹಿರೇಮಠ, ಶ್ರೀ ವಾಯ್. ಎಂ. ಯಾಕೊಳ್ಳಿ, ಶ್ರೀ ಬಿ. ವ್ಹಿ. ಕೋರಿ ಅವರು ದಣಿವನ್ನು ಲೆಕ್ಕಿಸದೆ ದುಡಿದಿದ್ದಾರೆ. ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಈ ಯೋಜನೆಯನ್ನು ಅನುದಾನ ಮಾಡಿದ ಕರ್ನಾಟಕ ಸರಕಾರದ ಔದಾರ್ಯಕ್ಕೆ ನಮ್ಮ ಅಭಿನಂದನೆಗಳು ಸಲ್ಲುತ್ತವೆ. ಈ ಅವಧಿಯಲ್ಲಿ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆ, ಶ್ರೀ ಎಸ್. ಆರ್. ಬೊಮ್ಮಾಯಿ, ಶ್ರೀ ವೀರೇಂದ್ರ ಪಾಟೀಲ, ಶ್ರೀ ಎಸ್. ಬಂಗಾರಪ್ಪ ಅವರಿಗೂ, ಸಾಹಿತಿಗಳೂ ಸಾಹಿತ್ಯ-ಸಂಸ್ಕೃತಿಗಳ ಗಾಢ ಆಸಕ್ತರೂ

ಆಗಿರುವ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಂ. ವೀರಪ್ಪ ಮೊಯಿಲಿ ಅವರಿಗೂ ಋಣಿಯಾಗಿದ್ದೇವೆ.

ಈ ಯೋಜನೆ ಅಸ್ತಿತ್ವಕ್ಕೆ ಬರುವಲ್ಲಿ ವಿಶೇಷ ಆಸಕ್ತಿ ವಹಿಸಿದವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂದಿನ ಸಚಿವರಾಗಿದ್ದ ಶ್ರೀ ಎಂ. ಪಿ. ಪ್ರಕಾಶ ಅವರು. ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅನನ್ಯ ಪ್ರೀತಿ-ಗೌರವ ಬೆಳೆಸಿಕೊಂಡಿರುವ ಶ್ರೀಯುತರಿಗೆ ನಾವು ಕೃತಜ್ಞರಾಗಿದ್ದೇವೆ. ಆಮೇಲೆ ಈ ಇಲಾಖೆಗೆ ಸಚಿವರಾಗಿ ಬಂದ ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಕೆ. ಎಚ್. ರಂಗನಾಥ, ಶ್ರೀ ಎಸ್. ರಮೇಶ್, ಇಂದಿನ ಸಚಿವರಾದ ಮಾನ್ಯ ಶ್ರೀ ಎಚ್. ವಿಶ್ವನಾಥ್ ಅವರಿಗೆ ನಮ್ಮ ಗೌರವಗಳು ಸಲ್ಲುತ್ತವೆ.

ಈ ಪ್ರಸಂಗದಲ್ಲಿ ಆತ್ಮೀಯ ಆಡಳಿತ ನಿರ್ದೇಶನ ಮಾಡಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಅಂದಿನ ನಿರ್ದೇಶಕರಾಗಿದ್ದ ಶ್ರೀ ಐ. ಎಂ. ವಿಠ್ಠಲಮೂರ್ತಿ, ಶ್ರೀ ಬಿ. ಪಾರ್ಥಸಾರಥಿ, ಕಮಿಷನರ್ ಡಾ. ಪಿ. ಎಸ್. ರಾಮಾನುಜಂ, ಇಂದಿನ ಕಮಿಷನರ್‌ರಾದ ಶ್ರೀ ಪಿ. ಎಸ್. ವಿ. ರಾವ್ ಅವರನ್ನೂ ಅಧಿಕ ನಿರ್ದೇಶಕರಾದ ಶ್ರೀ ಕೆ. ದೇವರಸಯ್ಯ, ಉಪನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರನ್ನೂ ನೆನೆಯುವುದು ಪ್ರೀತಿಯ ವಿಷಯವಾಗಿದೆ.

ಇಂಥ ಒಂದು ಬೃಹತ್ ಯೋಜನೆಗೆ ಕಾರ್ಯಾಲಯವೊಂದು ಅತ್ಯವಶ್ಯ. ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದಲ್ಲಿ ಈ ಅವಕಾಶ ಕಲ್ಪಿಸಿಕೊಟ್ಟ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ. ಜಿ. ಕೆ. ನಾರಾಯಣರೆಡ್ಡಿ, ಇಂದಿನ ಕುಲಪತಿ ಡಾ. ಎಸ್. ರಾಮೇಗೌಡ ಅವರ ಔದಾರ್ಯವನ್ನು, ಪೀಠದ ಮುಖ್ಯಸ್ಥರ ಸಹಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳೂ ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ದಾಳಿಗೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಮುದ್ರಿಕೆ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ವಚನಗಳನ್ನು ಶುದ್ಧೀಕರಿಸುವುದು - ಎಂಥವರನ್ನೂ ಧೃತ್ಯಗೆಡಿಸುವ ಕೆಲಸ. ಹೀಗಿದ್ದೂ ವಚನಸಾಹಿತ್ಯದ ಮೇಲಿನ ಗೌರವ, ಕೆಲಸದ ಮೇಲಿನ ಪ್ರೀತಿಗಳು ನಮ್ಮಿಂದ ಈ ಕಾರ್ಯ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತ, ಎರಡು ವರ್ಷ ರಾತ್ರಿಯನ್ನೂ ಹಗಲುಮಾಡಿ ದುಡಿದು ರೂಪಿಸಿದ ಈ ಹದಿನೈದು ಸಂಪುಟಗಳನ್ನು ಸಹೃದಯಲೋಕಕ್ಕೆ ಅರ್ಪಿಸುತ್ತೇವೆ. 'ಶಿವಶರಣರ ಸಮಗ್ರ ವಚನಸಾಹಿತ್ಯ' ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ-ಮನಗಳನ್ನು ಬೆಳಗಲೆಂದು ಹಾರೈಸುತ್ತೇವೆ.

## ದ್ವಿತೀಯ ಆವೃತ್ತಿ

ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಸಂಪುಟಗಳು ೧೯೯೩ರಲ್ಲಿ ಪ್ರಕಟವಾಗಿ, ಒಂದು ವರ್ಷ ಕಳೆಯುವಷ್ಟರಲ್ಲಿ ಮಾರಾಟವಾದವು. ಕರ್ನಾಟಕ ಸರಕಾರದ ಗ್ರಂಥಪ್ರಕಟನೆಯ ಇತಿಹಾಸದಲ್ಲಿಯೇ ಈ ಬಗೆಯ ಮಾರಾಟ ಒಂದು ದಾಖಲೆ. ಜನತೆಯ ಅಪಾರ ಬೇಡಿಕೆಯನ್ನು ಗಮನಿಸಿ, ಈಗ ಪರಿಷ್ಕೃತ ದ್ವಿತೀಯ ಆವೃತ್ತಿಯನ್ನು ಪ್ರಕಟಿಸುತ್ತಿದ್ದೇವೆ. ಇತ್ತೀಚೆಗೆ ಲಭ್ಯವಾದ ಸುಮಾರು ಒಂದು ಸಾವಿರ ಹೊಸವಚನಗಳನ್ನು ಸೇರಿಸುವ, ಮೊದಲ ಆವೃತ್ತಿಯ ವಚನಪಾಠವನ್ನು ಮತ್ತೆ ಪರಿಷ್ಕರಿಸುವ ಮೂಲಕ ಮೊದಲಿನ ೧೪ ಸಂಪುಟಗಳನ್ನು ಸಮಗ್ರವಾಗಿ ಮತ್ತೆ ರೂಪಿಸಿದ್ದೇವೆ. ೧೫ನೆಯ ಸಂಪುಟ (ಪರಿಭಾಷಾಕೋಶ) ವನ್ನು ಹೊಸದಾಗಿ ಸಿದ್ಧಪಡಿಸಿದ್ದೇವೆ. ಹೊಸ ವಿಚಾರ, ಶೋಧಗಳ ಬೆಳಕಿನಲ್ಲಿ ಸಂಪಾದಕೀಯ, ಪ್ರಸ್ತಾಪವನೆಗಳನ್ನು ಸೂಕ್ತ ರೀತಿಯಲ್ಲಿ ಪರಿಷ್ಕರಿಸಿದ್ದೇವೆ.

ಈ ಆವೃತ್ತಿ ಬೆಳಕು ಕಾಣಲು ವಿಶೇಷ ಆಸಕ್ತಿ ವಹಿಸಿದ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಮಾನ್ಯ ಶ್ರೀಮತಿ ರಾಣಿ ಸತೀಶ್ ಅವರಿಗೂ ನಾವು ಋಣಿಯಾಗಿದ್ದೇವೆ. ಈ ಕೆಲಸ ನಿರ್ದಿಷ್ಟ ಕಾಲಾವಧಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಂಡ ಕನ್ನಡ ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ ಅವರಿಗೂ ಅವರ ಸಿಬ್ಬಂದಿ ವರ್ಗಕ್ಕೂ, ಮಾರ್ಗದರ್ಶನ ಮಾಡಿ ಸಂಪುಟಗಳ ಉತ್ತಮಿಕೆ ಕಾರಣರಾದ ಸಂಪಾದಕ ಮಂಡಲದ ಸದಸ್ಯರಿಗೂ, ಸಂಸ್ಕೃತ ಶ್ಲೋಕಗಳನ್ನು ಪರಿಷ್ಕರಿಸಿಕೊಟ್ಟ ಮೈಸೂರಿನ ಪೂಜ್ಯ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳು ಕುಂದೂರುಮಠ ಅವರಿಗೂ, ೧೫ನೆಯ ಪರಿಭಾಷಾ ಸಂಪುಟವನ್ನು ಹೊಸದಾಗಿ ರೂಪಿಸಿಕೊಟ್ಟ ಡಾ. ಎಸ್. ಜಿ. ಮಹಾದೇವಪ್ಪ ಅವರಿಗೂ ನಮ್ಮ ವಂದನೆಗಳು ಸಲ್ಲುತ್ತವೆ. ಹತ್ತು ಸಾವಿರ ಪುಟಗಳ, ಹದಿನೈದು ಸಂಪುಟಗಳ ಪ್ರಕಟನೆ ಸುಲಭದ ಕೆಲಸವೇನಲ್ಲ. ಸಾಹಿತ್ಯದ ಮೇಲಿನ, ಅದರಲ್ಲಿಯೂ ವಚನಸಾಹಿತ್ಯದ ಮೇಲಿನ ಪ್ರೀತಿ ಕಾರಣವಾಗಿ ಪುಸ್ತಕ ಪ್ರಾಧಿಕಾರದ ಮೂಲಕ ಪ್ರಕಟಿಸಿದ ಅಧ್ಯಕ್ಷರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ ಅವರಿಗೆ ನಾವು ಋಣಿಯಾಗಿದ್ದೇವೆ.

ಮೊದಲ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಕೊರತೆ, ದೋಷಗಳನ್ನು ಕಷ್ಟಪಟ್ಟು ಹುಡುಕಿ, ನಮಗೆ ಪೂರೈಸಿದ ತುಮಕೂರಿನ ಶ್ರೀ ಎಂ. ಚಂದ್ರಪ್ಪ ಅವರಿಗೂ, ಬೆಂಗಳೂರಿನ ಶ್ರೀ ಎಸ್. ಶಿವಣ್ಣ ಅವರಿಗೂ ನಾವು ಕೃತಜ್ಞರಾಗಿದ್ದೇವೆ.

■■

*

# ಪ್ರಸ್ತಾವನೆ

ವಚನಸಾಹಿತ್ಯ, ಕನ್ನಡಭಾಷೆಯಲ್ಲಿ ಕಣ್ಣು ತೆರೆದ ಒಂದು ಅಪೂರ್ವ ಸೃಷ್ಟಿ. ಹನ್ನೆರಡನೆಯ ಶತಮಾನದ ವೀರಶೈವ ಶರಣರ ಪ್ರಯೋಗಶೀಲ ಮನಸ್ಸಿನ ಅಮೃತಫಲವೆನಿಸಿದ ಈ ಸಾಹಿತ್ಯಕ್ಕೆ ಜನಪರತ್ವ ಕಾರಣವಾಗಿ, ಜಾಗತಿಕ ಮಹತ್ವ ಸಲ್ಲುತ್ತದೆ. ವಚನಕಾರರು ಈ ಜನಪರ ಧೋರಣೆಗೆ ಅನುಗುಣವಾದ ಭಾಷೆ, ಶಿಲ್ಪಗಳನ್ನು ರೂಪಿಸಿಕೊಳ್ಳಬೇಕಾಯಿತು. ಇದರಿಂದ ಕನ್ನಡ ಸಾಹಿತ್ಯ, ಹಳಗನ್ನಡ ಭಾಷೆಯನ್ನು ಕೈಬಿಟ್ಟು ನಡುಗನ್ನಡ ಭಾಷೆಯನ್ನೂ, ಚಂಪೂರೂಪವನ್ನು ತ್ಯಜಿಸಿ ವಚನರೂಪವನ್ನೂ ಮೈಗೂಡಿಸಿಕೊಂಡಿತು. ಸತ್ವದೃಷ್ಟಿಯಿಂದಲೂ ಮೊತ್ತದೃಷ್ಟಿಯಿಂದಲೂ ಹಿರಿದಾದ ಈ ಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಮಾಲೆಯಲ್ಲಿ ಎಂಟನೆಯ ಸಂಪುಟವಾಗಿದೆ, ಈ ಕೃತಿ. ಇದರಲ್ಲಿ 'ಪ' ವರ್ಗದ ಅಕ್ಷರಗಳಿಂದ ಆರಂಭವಾಗುವ ಹೆಸರಿನ ಹನ್ನೆರಡನೆಯ ಶತಮಾನದ ಎಲ್ಲ ವಚನಕಾರರನ್ನೂ ಅವರ ಎಲ್ಲ ವಚನಗಳನ್ನೂ ಸಮಾವೇಶಗೊಳಿಸಲಾಗಿದೆ. ಇಲ್ಲಿಯ ವಚನಕಾರರ ಮತ್ತು ಅವರ ಒಟ್ಟು ವಚನಗಳ ಸಂಖ್ಯಾ ವಿವರ ಹೀಗಿದೆ :

| | | |
|---|---|---|
| ೧. | ಪಂಡಿತಾರಾಧ್ಯರು | ೧ |
| ೨. | ಪುರದ ನಾಗಣ್ಣ | ೧೦ |
| ೩. | ಪ್ರಸಾದಿ ಭೋಗಣ್ಣ | ೧೦೩ |
| ೪. | ಪ್ರಸಾದಿ ಲೆಂಕಬಂಕಣ್ಣ | ೧೧ |
| ೫. | ಬಹುರೂಪಿ ಚೌಡಯ್ಯ | ೬೬ |
| ೬. | ಬಳ್ಳೇಶ ಮಲ್ಲಯ್ಯ | ೯ |
| ೭. | ಬಾಚಿಕಾಯಕದ ಬಸವಣ್ಣ | ೩೦ |
| ೮. | ಬಾಲಬೊಮ್ಮಣ್ಣ | ೧೧ |
| ೯. | ಬಾಲಸಂಗಣ್ಣ | ೮ |
| ೧೦. | ಬಾಹೂರ ಬೊಮ್ಮಣ್ಣ | ೪೧ |
| ೧೧. | ಬಿಬ್ಬಿ ಬಾಚಯ್ಯ | ೧೦೨ |
| ೧೨. | ಬೊಕ್ಕಸದ ಚಿಕ್ಕಣ್ಣ | ೧೦ |
| ೧೩. | ಭರಿತಾರ್ಪಣದ ಚೆನ್ನಬಸವಣ್ಣ | ೧೧ |
| ೧೪. | ಭಿಕಾರಿ ಭೀಮಯ್ಯ | ೨ |
| ೧೫. | ಭೋಗಣ್ಣ | ೨೨ |
| ೧೬. | ಮಡಿವಾಳ ಮಾಚಿದೇವ | ೧೪೬ |

| | | |
|---|---|---|
| ೧೭. | ಮಡಿವಾಳ ಮಾಚಿದೇವರ ಸಮಯಾಚಾರದ ಮಲ್ಲಿಕಾರ್ಜುನ | ೫ |
| ೧೮. | ಮಧುವಯ್ಯ | ೧೦೨ |
| ೧೯. | ಮನಸಂದ ಮಾರಿತಂದೆ | ೧೦೧ |
| ೨೦. | ಮನುಮುನಿ ಗುಮ್ಮಟದೇವ | ೯೯ |
| ೨೧. | ಮರುಳಶಂಕರದೇವ | ೩೬ |
| ೨೨. | ಮರುಳಸಿದ್ಧೇಶ್ವರ | ೧ |
| ೨೩. | ಮಲಹರಕಾಯಕದ ಚಿಕ್ಕದೇವಯ್ಯ | ೧೦ |
| ೨೪. | ಮಲ್ಲಿಕಾರ್ಜುನ ಪಂಡಿತಾರಾಧ್ಯ | ೧೩ |
| ೨೫. | ಮಹಾದೇವೀರಯ್ಯ | ೧ |
| ೨೬. | ಮಳುಬಾವಿಯ ಸೋಮಣ್ಣ | ೧ |
| ೨೭. | ಮಾದಾರ ಚೆನ್ನಯ್ಯ | ೧೦ |
| ೨೮. | ಮಾದಾರ ಧೂಳಯ್ಯ | ೧೦೬ |
| ೨೯. | ಮಾರುಡಿಗೆಯ ನಾಚಯ್ಯ | ೧ |
| ೩೦. | ಮಾರೇಶ್ವರೊಡೆಯರು | ೧೩ |
| ೩೧. | ಮೆರೆಮಿಂಡಯ್ಯ | ೧೧೦ |
| ೩೨. | ಮೇದರ ಕೇತಯ್ಯ | ೧೪ |
| ೩೩. | ಮೈದುನ ರಾಮಯ್ಯ | ೬ |
| ೩೪. | ಮೋಳಿಗೆ ಮಾರಯ್ಯ | ೮೨೦ |

ಹೀಗೆ ೩೪ ಜನ ವಚನಕಾರರ ಒಟ್ಟು ೨೦೩೨ ವಚನಗಳನ್ನು ಇಲ್ಲಿ ಸೇರಿಸಲಾಗಿದೆ. ಈ ಎಲ್ಲ ವಚನಕಾರರ ಚರಿತ್ರೆ, ವಚನಗಳಲ್ಲಿ ಕಂಡುಬರುವ ವಿಷಯ ಹಾಗೂ ಸಾಹಿತ್ಯಿಕ ಅಂಶಗಳನ್ನು ಈಗ ಪರಿಶೀಲಿಸಬಹುದು.

ವಚನಕಾರರಾದ ಪಂಡಿತಾರಾಧ್ಯರು ಪಂಚಾಚಾರ್ಯರಲ್ಲೊಬ್ಬರಾದ ಪಂಡಿತಾರಾಧ್ಯ ಹಾಗೂ ಪಂಡಿತತ್ರಯರಲ್ಲೊಬ್ಬರಾದ ಮಲ್ಲಿಕಾರ್ಜುನ ಪಂಡಿತರಿಗಿಂತ ಭಿನ್ನರೆನಿಸುತ್ತದೆ. ಈತನು 'ಗುರುಸಿದ್ಧಮಲ್ಲ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಶಿವತತ್ವ ಚಿಂತಾಮಣಿಯಲ್ಲಿ ಉಲ್ಲೇಖಗೊಂಡ ಪಂಡಿತಾರಾಧ್ಯನು ಶ್ರೀಪತಿಪಂಡಿತನೆಂದು ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದಿಂದ ವ್ಯಕ್ತವಾಗುತ್ತದೆ.

ಪುರದ ನಾಗಣ್ಣನು 'ಅಮರಗುಂಡದ ಮಲ್ಲಿಕಾರ್ಜುನ' ಅಂಕಿತದಲ್ಲಿ ವಚನ ರಚನೆ ಮಾಡಿದ್ದಾನೆ. ಗಣಸಹಸ್ರನಾಮಾವಳಿಯಲ್ಲಿಯ ಉಲ್ಲೇಖವೊಂದನ್ನು ಬಿಟ್ಟರೆ, ಈತನ ಚರಿತ್ರೆಯ ಬಗೆಗೆ ಯಾವ ವಿವರಗಳೂ ಗೊತ್ತಾಗುವುದಿಲ್ಲ. ಕಾಲಚಕ್ರ, ಕರ್ಮಚಕ್ರಗಳ ದಂದುಗವನ್ನು ಬಿಟ್ಟರೆ ನಿಜಾನಂದಭಕ್ತಿ ದೊರೆಯುತ್ತದೆ. ಗುರುಪಾದೋದಕದಿಂದ ಪರಮಪದಸಾಧ್ಯ. ಶಿವಭಕ್ತನಾದವನು ಪಾಪ–ಪುಣ್ಯ, ಲಿಂಗ–ಜಂಗಮಗಳ ಬಗೆಗೆ

ಅರಿವು ಮಾಡಿಕೊಳ್ಳುವುದು ಅವಶ್ಯ. ಭಕ್ತನು ಭವಿಯೊಂದಿಗೆ ಕೊಳುಕೊಡೆ ಮಾಡಲಾಗದು. ಆಶೆ–ಆಮಿಷ ಹರಿಯಬೇಕು. ಅಷ್ಟವುದ ಹರಿದಲ್ಲಿ ಮಾತ್ರ ಶಿವೈಕ್ಯ. ಸರ್ವಾಂಗಲಿಂಗಿಯಾದ ಶರಣನ ಲಿಂಗ ಭಿನ್ನವಾದರೆ, ಆತನು ಲಿಂಗದೊಡನೆ ಪ್ರಾಣ ಬಿಡಬೇಕು ಮೊದಲಾದ ವಿಷಯಗಳು ಈತನ ವಚನಗಳಲ್ಲಿರುತ್ತವೆ. ಬಸವಣ್ಣ, ಚೆನ್ನಬಸವಣ್ಣ ಘಟ್ಟಿವಾಳ ಮುದ್ದಯ್ಯ, ಸಿದ್ಧರಾಮಯ್ಯ, ಮರುಳಶಂಕರದೇವ, ಅನಿಮಿಷ, ಅಜಗಣ್ಣ ಬಾಚಿರಾಜಯ್ಯ, ಮೋಳಿಗೆಯ ಮಾರಯ್ಯ, ಡೋಹರ ಕಕ್ಕಯ್ಯ, ಕಿನ್ನರಿ ಬ್ರಹ್ಮಯ್ಯ, ಸೊಡ್ಡಳ ಬಾಚರಸ, ಹಡಪದ ಅಪ್ಪಣ್ಣ ಮಡಿವಾಳ ಮಾಚಯ್ಯರ ಸ್ತುತಿ ವಚನಗಳಲ್ಲಿದೆ. ಸಾಮಾನ್ಯ ವಚನಗಳೊಂದಿಗೆ ಬೆಡಗಿನ ವಚನಗಳೂ ಕಂಡು ಬರುತ್ತವೆ. ಈತನ ವಚನಗಳಲ್ಲಿ ಕಾವ್ಯಾಂಶ ಕಡಿಮೆ. ಬಸವಣ್ಣನವರ ವಚನಗಳ ಪ್ರಭಾವವನ್ನು ಇಲ್ಲಿಯ ವಚನಗಳಲ್ಲಿ ಕಾಣುತ್ತೇವೆ.

ಪ್ರಸಾದಿ ಭೋಗಣ್ಣನ ಚರಿತ್ರೆಯ ವಿವರಗಳು ಗೊತ್ತಾಗುವುದಿಲ್ಲ. ಈತನ ವಚನಗಳು 'ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ' ಅಂಕಿತದಲ್ಲಿರುತ್ತವೆ. ಶ್ರೇಷ್ಠ ಶಿವಾನುಭಾವಿಯಾಗಿದ್ದ ಈತನು ಭಕ್ತನ ಪರಿಪೂರ್ಣತೆಯನ್ನೂ ಷಟ್‌ಸ್ಥಲಗಳನ್ನೂ ವಿವರಿಸಿದ್ದಾನೆ. ಇದಲ್ಲದೆ ಲಿಂಗಾಂಗಸಂಯೋಗ ಸಂಬಂಧ, ಕರ್ತೃಭೃತ್ಯತ್ವ, ಗುರುಸ್ಥಲ, ಜಂಗಮಸ್ಥಲ, ಅಂಗಸ್ಥಲ, ಅಷ್ಟಾವರಣ, ಐಕ್ಯಸ್ಥಲ, ಶರಣನ ಲಕ್ಷಣ ಮೊದಲಾದ ಸಂಗತಿಗಳನ್ನೂ ವಚನಗಳಲ್ಲಿ ಹೇಳಲಾಗಿದೆ. ಇಲ್ಲಿಯ ಬಹಳಷ್ಟು ವಚನಗಳಲ್ಲಿ 'ಬಚ್ಚಬಯಲಿನ' ವರ್ಣನೆ ಚೆನ್ನಾಗಿ ನಿರೂಪಿತವಾಗಿದ್ದು, ಐಕ್ಯಸ್ಥಿತಿಗೆ ಸಂಬಂಧಿಸಿದ ವಚನಗಳೇ ಅಧಿಕವಾಗಿರುತ್ತವೆ. ಬಸವಣ್ಣ ಚೆನ್ನಬಸವಣ್ಣ ಸಿದ್ಧರಾಮಯ್ಯ, ಮಡಿವಾಳಮಾಚಯ್ಯ, ಪ್ರಭುದೇವರನ್ನು ಭಕ್ತಿಯಿಂದ ಸ್ತುತಿಸಿದ್ದಾನೆ. ಕೆಲವು ವಚನಗಳು ದೀರ್ಘವಾಗಿದ್ದರೆ, ಇನ್ನು ಕೆಲವು ಚಿಕ್ಕವಾಗಿರುತ್ತವೆ. ವೀರಶೈವ ತತ್ತ್ವಬೋಧನೆ ಪ್ರಧಾನವಾಗಿರುವುದರಿಂದ ವಚನಗಳಲ್ಲಿ ಕಾವ್ಯಗುಣ ಕಡಿಮೆಯಾಗಿರುತ್ತದೆ.

ಬಂಕಣ್ಣ ಹೆಸರಿನ ಶರಣರು ಅನೇಕರಿರುವುದರಿಂದ ಪ್ರಸಾದಿ ಲೆಂಕಬಂಕಣ್ಣನ ಚರಿತ್ರೆಯನ್ನು ಗುರುತಿಸುವುದು ಅತ್ಯಂತ ತೊಡಕಿನದಾಗಿ ಪರಿಣಮಿಸುತ್ತದೆ. ಶಿವತತ್ತ್ವಚಿಂತಾಮಣಿ ಹಾಗೂ ಸಿಂಗಿರಾಜಪುರಾಣಗಳ ವೀರಬಂಕಯ್ಯ, ನಿಜಲಿಂಗ ವೀರಪ್ರಸಾದಿ ವೀರಬಂಕಣ್ಣ, ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರದ ಪ್ರಸಾದಿ ಬಂಕಯ್ಯ, ಗುರುರಾಜ ಚಾರಿತ್ರದ ಪ್ರಸಾದಿ ಬಂಕಯ್ಯ, ಪಂಡಿತಾರಾಧ್ಯ ಚರಿತದ ಪ್ರಸಾದಿ ಬಂಕಯ್ಯ, ಹರಿಹರನ ಲಿಂಗಾರ್ಚನೆ ರಗಳೆಯ ಬಂಕಯ್ಯರಲ್ಲಿ ವಚನಕಾರ ಪ್ರಸಾದಿ ಲೆಂಕಬಂಕಣ್ಣ ಯಾರೆಂದು ಹೇಳುವುದು ಕಷ್ಟದ ಕೆಲಸ. ಹೀಗಾಗಿ ಇವನ ಬಗೆಗ ಖಚಿತವಾದ ವಿವರಗಳನ್ನು ಸಂಗ್ರಹಿಸುವುದು ಸಾಧ್ಯವಾಗುವುದಿಲ್ಲ. ಈತನು 'ದಹನ ಚಂಡಿಕೇಶ್ವರಲಿಂಗ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಪ್ರಸಾದಿಗಳಾದವರ ಸೇವೆಮಾಡುವುದೇ ಇವನ ಕಾಯಕವೆಂದು ಕಾಣುತ್ತದೆ. ಅಷ್ಟಾವರಣಗಳಲ್ಲಿ ಒಂದಾದ ಪ್ರಸಾದದ ಮಹತ್ವವನ್ನು ತನ್ನ ವಚನಗಳಲ್ಲಿ ಬಂಕಣ್ಣ ಪ್ರತಿಪಾದಿಸಿದ್ದಾನೆ. ಗುರುಸೇವೆ, ಲಿಂಗಪೂಜೆ, ಜಂಗಮ ದಾಸೋಹಗಳಿಂದ ದೊರೆಯುವುದೇ ಪ್ರಸಾದಸಿದ್ಧಿ. ಪ್ರಸಾದಸಿದ್ಧಿ ಪಡೆದಾತನೇ ಪ್ರಸಾದಕಾಯನು.

ಪ್ರಸಾದದ ಪ್ರಕಾರ, ಪ್ರಸಾದಿಯ ಮಹತ್ವಗಳ ವಿವರಣೆಯೂ ಇಲ್ಲಿದೆ. ಸುಂದರವಾದ ಹೋಲಿಕೆಗಳ ಮೂಲಕ ಮಾಡುವ ಈ ಬೋಧನೆ, ತೀವ್ರ ಗಮನ ಸೆಳೆಯುತ್ತದೆ. ತತ್ವಪ್ರತಿಪಾದನೆಯಿಂದ ಕೂಡಿದ ಈತನ ಕೆಲವು ವಚನಗಳು ಮಾತ್ರ ಸುದೀರ್ಘವಾಗಿದ್ದು, ನೀರಸವೆನಿಸುತ್ತವೆ.

'ಬಹುರೂಪಿ' ಕಾಯಕದ ಜನಪದ ಕಲಾವಿದ ಶರಣ ಬಹುರೂಪಿ ಚೌಡಯ್ಯನು 'ರೇಕಣ್ಣಪ್ರಿಯ ನಾಗಿನಾಥ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಗಣಸಹಸ್ರನಾಮ, ಗುರುರಾಜ ಚಾರಿತ್ರ, ವೀರಶೈವಾಮೃತ ಮಹಾಪುರಾಣ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ ಕೃತಿಗಳಲ್ಲಿ, ಹಂತಿಯ ಹಾಡುಗಳಲ್ಲಿ ಈತನ ಜೀವನಕ್ಕೆ ಸಂಬಂಧಿಸಿದ ವಿವರಗಳಿರುತ್ತವೆ. ರೇಕಳಿಕೆ ಗ್ರಾಮದಲ್ಲಿ ಹುಟ್ಟಿ ಬೆಳೆದ ಈತನ ಕಾರ್ಯಕ್ಷೇತ್ರ ಕಲ್ಯಾಣವಾಗಿದ್ದಿತು. ತನ್ನ ಪೂರ್ವಾಶ್ರಮದ 'ಬಹುರೂಪಿ'ಕಾಯಕವನ್ನು ಪೂರಕವಾಗಿ ಬಳಸಿಕೊಂಡ ಇವನ ವಚನಗಳು ಮನೋಜ್ಞವಾಗಿವೆ. 'ರೇಕಣ್ಣಪ್ರಿಯ ನಾಗಿನಾಥ'ವೆಂಬ ವಚನಾಂಕಿತವು ದೀಕ್ಷಾಗುರು ರೇಕನಾಥ, ಜ್ಞಾನಗುರು ನಾಗಿನಾಥರ ಸಂಯುಕ್ತ ಹೆಸರುಗಳಿಂದ ಕೂಡಿದುದಾಗಿದೆ. ತನ್ನ ಹೆಚ್ಚಿನ ವಚನಗಳಲ್ಲಿ ಬಸವಣ್ಣನವರನ್ನೇ ಸ್ತುತಿಸಿರುವ ಈತನು ಚೆನ್ನಬಸವಣ್ಣ, ಪ್ರಭುದೇವ, ಅಜಗಣ್ಣ ಮಡಿವಾಳ ಮಾಚಿದೇವ, ಮುಖವಾಡದಯ್ಯಗಳನ್ನೂ ಪ್ರಾಸಂಗಿಕವಾಗಿ ಭಕ್ತಿಯಿಂದ ಸ್ಮರಿಸುತ್ತಾನೆ. ಬಹುರೂಪಿ ಚೌಡಯ್ಯನ ವಚನಗಳಲ್ಲಿ ಲಿಂಗಾಂಗ ಸಾಮರಸ್ಯ, ವೀರಶೈವ ನಿಷ್ಠೆ, ಶರಣ ವಿಧೇಯತೆ, ಜಂಗಮನಿಷ್ಠೆ, ನೇರ ಹಾಗೂ ನಿಷ್ಠುರ ಸ್ವಭಾವಗಳು ಕಂಡುಬರುತ್ತವೆ. ಕಾಯಕವನ್ನೇ ಮಾಧ್ಯಮವಾಗಿಸಿಕೊಂಡ ಬೆಡಗಿನ ವಚನಗಳಲ್ಲಿ ವೀರಶೈವ ತತ್ವಪ್ರತಿಪಾದನೆ ಸಹಜವಾಗಿ ಮೂಡಿಬಂದಿದೆ. ಇಂಥ ಬೆಡಗಿನ ವಚನಗಳೇ ಇಲ್ಲಿ ಹೆಚ್ಚಾಗಿರುತ್ತವೆ. ಆದರೆ ಸರಳ ಹಾಗೂ ಸೊಗಸಾದ ಕೆಲವು ವಚನಗಳಿಗೂ ಇಲ್ಲಿ ಕೊರತೆಯಿಲ್ಲ.

ಸರಕು ಸಾಗಿಸುವ ಕಾಯಕ ಮಾಡುತ್ತಿದ್ದ ಬಳ್ಳೇಶ ಮಲ್ಲಯ್ಯನು 'ಬಳ್ಳೇಶ್ವರಲಿಂಗ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಮೂಲತಃ ಜೈನನಾದ ಈತನು ಆಮೇಲೆ ವೀರಶೈವ ಧರ್ಮದ ಅನುಯಾಯಿ ಆದ. ಮಲ್ಲಯ್ಯನು ಮುಗ್ಧಭಕ್ತಿಯಿಂದ ಧಾನ್ಯಗಳನ್ನು ಅಳೆಯುವ 'ಬಳ್ಳ'ವನ್ನೇ ಪೂಜಿಸಿದ. ಇದರಿಂದ ಆ ಬಳ್ಳವೆ ಲಿಂಗವಾಯಿತು. ಅಂದಿನಿಂದ ಈತ ಬಳ್ಳೇಶ ಮಲ್ಲಯ್ಯನಾದ. ಬಳ್ಳಾರಿಯ ಹತ್ತಿರವಿರುವ ಗುಡ್ಡದಲ್ಲಿಯ ದೇವಾಲಯದ ಆವರಣದಲ್ಲಿ ಈತನು ಬಳ್ಳವನ್ನು ಪೂಜಿಸುತ್ತಿರುವ ಮತ್ತು ಬಳ್ಳ ಲಿಂಗವಾದುದರ ಚಿತ್ರವಿದೆಯೆಂಬುದು ತಿಳಿದುಬರುತ್ತದೆ. ಬಳ್ಳೇಶ ಮಲ್ಲಯ್ಯನ ಬೆಡಗಿನ ವಚನಗಳಲ್ಲಿಯ ಬೆಡಗು ಸೊಗಸಾಗಿದ್ದು, ಶಿವಾನುಭವ ತತ್ವಗಳನ್ನು ವಿವರಿಸಿ ಹೇಳುತ್ತವೆ. ಈತನ ವಚನಗಳಲ್ಲಿ ಕಾವ್ಯಾಂಶ ಕಡಿಮೆಯೆನಿಸಿದರೂ ರಚನೆಯಲ್ಲಿ ವಿಶಿಷ್ಟತೆ ತೋರಿಬರುತ್ತದೆ. ವಚನಗಳ ಅಂತ್ಯದಲ್ಲಿ ಬರುವ 'ಬಳ್ಳೇಶ್ವರ ಲಿಂಗದ ಡಂಗುರ', 'ಬಳ್ಳೇಶ್ವರನ ಕನ್ನಡ ಹೇಳುವಡೆ ಯುಗ ಸಂಖ್ಯೆ', 'ಬಳ್ಳೇಶ್ವರನ ಕನ್ನಡ ವಿಪರೀತ', 'ಬಳ್ಳೇಶ್ವರ ಡಂಗುರ' 'ಬಳ್ಳೇಶ ವೀರಭದ್ರಾವತಾರ' ಎಂಬ ಉಕ್ತಿಗಳನ್ನು ಗಮನಿಸಬೇಕು.

ಬಾಚಿ ಕಾಯಕದ ಬಸವಣ್ಣನನ್ನು ಕುರಿತು ಸಿಗುವ ಸಂಗತಿಗಳು ತೀರ ಅತ್ಯಲ್ಪ. ಈತನು ರಚಿಸಿದ ವಚನಗಳು 'ಬಸವಪ್ರಿಯ ವಿಶ್ವಕಮ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರ ಲಿಂಗ' ಅಂಕಿತದಲ್ಲಿರುತ್ತವೆ. ಈತನು ಮೂಲತಃ ವಿಶ್ವಕರ್ಮನಾಗಿದ್ದು, ಬಡಗಿ ಕಾಯಕ ಮಾಡುತ್ತಿದ್ದ. ಗಾತ್ರದಲ್ಲಿ ದೀರ್ಘವಾಗಿರುವುದು ಈತನ ವಚನಗಳ ಒಂದು ವೈಶಿಷ್ಟ್ಯ. ಶರಣನಾದ ಈತನು ತನ್ನ ಕಾಯಕಕ್ಕೆ ಸಂಬಂಧಿಸಿದ ಹೋಲಿಕೆಗಳನ್ನು ವಚನಗಳ ಒಡಲಲ್ಲಿ ಎರಕಹೊಯ್ದಿದ್ದಾನೆ.

ವಚನಕಾರ ಬಾಲಬೊಮ್ಮಣ್ಣನ ಹೆಸರು ಗಮಸಹಸ್ರನಾಮದಲ್ಲಿದೆ. ಈತನ ವಚನಗಳು 'ವೀರಶೂರ ರಾಮೇಶ್ವರಲಿಂಗ' ಅಂಕಿತದಲ್ಲಿರುತ್ತವೆ. ಭೈರವೇಶ್ವರಕಾವ್ಯ ಹಾಗೂ ಭೈರವೇಶ್ವರಕಾವ್ಯದ ಕಥಾಮಣಿಸೂತ್ರ ರತ್ನಾಕರಗಳಲ್ಲಿರುವ ಬಾಲಬೊಮ್ಮಣ್ಣನ ಕಥೆ ಹೀಗಿದೆ : ಸಿದ್ಧರಾಮಯ್ಯನು ಸೊನ್ನಲಾಪುರದಲ್ಲಿ ಗುಡಿಗಳನ್ನು ಕಟ್ಟಿಸಿ, ಲಿಂಗಪೂಜೆಯನ್ನು ನೆರವೇರಿಸುತ್ತಿದ್ದ. ಆ ಸಮಯದಲ್ಲಿ ಲಿಂಗಪ್ರತಿಷ್ಠಿಸಿ ಪೂಜಿಸುವುದಕ್ಕೆ ತನಗೆ ಎಳ್ಳಷ್ಟೂ ಹಣವಿಲ್ಲವೆಂದು ಬಾಲಬೊಮ್ಮಣ್ಣ ಚಿಂತಿಸುತ್ತಿದ್ದ. ಈತನ ಮನಃಸ್ಥಿತಿಯನ್ನು ತಿಳಿದ ಸಿದ್ಧರಾಮಯ್ಯನು ಬೊಮ್ಮಣ್ಣನನ್ನು ತನ್ನ ಹತ್ತಿರ ಕರೆದು, ಕೈಗೆ ಹಾರೆ, ಗುದ್ದಲಿ ಕೊಟ್ಟು, ಅಂಗಳದಲ್ಲಿ ಅಗೆಯಲು ಹೇಳಿದ. ಹೀಗೆ ಬೊಮ್ಮಣ್ಣನು ನೆಲವನ್ನು ಅಗೆಯುತ್ತಿದ್ದಾಗ ಕೊಪ್ಪರಿಗೆ ಬಂಗಾರ ಲಭಿಸಿತು. ಈ ಸಂಪತ್ತಿನಿಂದ ಲಿಂಗದ ಗುಡಿಗಳನ್ನು ಕಟ್ಟಿಸಿದ ಬಾಲಬೊಮ್ಮಣ್ಣ ಲಿಂಗಪೂಜೆಮಾಡುತ್ತ ಸುಖದಲ್ಲಿದ್ದನು. ಈತನ ವಚನಗಳು ಉಪದೇಶಪರವಾಗಿದ್ದರೂ ಅಲ್ಲಲ್ಲಿ ಭಾವಗೀತಾತ್ಮಕ ಅಂಶಗಳು ಮಿಂಚುತ್ತವೆ. ರೇವಣಸಿದ್ಧ, ಅನಿಮಿಷದೇವ, ಪ್ರಭುದೇವ, ಬಿಬ್ಬಿಬಾಚಯ್ಯ, ನೀಲಲೋಚನೆ ಹಾಗೂ ಓಹಿಲದೇವರನ್ನು ಭಕ್ತಿಭಾವದಿಂದ ವಚನಗಳಲ್ಲಿ ಸ್ತುತಿಸಿದ್ದಾನೆ.

'ಕಮಠೇಶ್ವರಲಿಂಗ' ಅಂಕಿತದಲ್ಲಿ ವಚನ ಬರೆದ ಬಾಲಸಂಗಣ್ಣ, ಬಸವಣ್ಣನವರ ಸಮಕಾಲೀನದವನಾದರೆ, 'ಅಪ್ರಮಾಣ ಕೂಡಲಸಂಗಮದೇವ' ಅಂಕಿತದ ವಚನಕಾರ ಬಾಲಸಂಗಯ್ಯ ಬಸವೋತ್ತರಯುಗದವನಾಗಿರುತ್ತಾನೆ. ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರವು ಈ ಬಾಲಸಂಗಯ್ಯ ಬಸವಣ್ಣನವರ ಮಗನೆಂದು ಹೇಳುತ್ತ, ಇವನ ಮುದ್ರಿಕೆ 'ಕಮಠೇಶ್ವರಲಿಂಗ'ವೆಂದೇ ಸ್ಪಷ್ಟಪಡಿಸಿದ್ದಾನೆ. ಈ ಅಂಶ ಸಂಶೋಧನೀಯವೆನಿಸಿದೆ. ನೀಲಾಂಬಿಕೆಯ ವಚನದಲ್ಲಿ ಮಗನ ಅಕಾಲಮರಣದ ಸೂಚನೆ, ಬಸವಣ್ಣನವರ ವಚನದಲ್ಲಿಯ 'ಪುಷ್ಪವಿದ್ದಂತೆ ಮೊಗ್ಗೆಯನರ್ಪಿಸಿ ಕೊಂಡ ಶಿವನು, ಪಕ್ವವಾದ ಫಳವಿದ್ದಂತೆ ಕಸುಗಾಯ ಕೊಯ್ದ ಶಿವನು' ಎಂಬ ಪ್ರಲಾಪಗಳು ಬಾಲಸಂಗಣ್ಣ ಬಹಳಕಾಲ ಜೀವಿಸಿರಲಿಲ್ಲವೆಂಬುದನ್ನು ಸೂಚಿಸುತ್ತವೆ. ಬಾಲಸಂಗಣ್ಣನ ವಚನಗಳಲ್ಲಿ ಉಪಮೆ, ದೃಷ್ಟಾಂತಗಳ ಮೂಲಕ ಲಿಂಗಾಂಗ ಸಾಮರಸ್ಯದಂಥ ಜಟಿಲವಾದ ವಿಷಯಗಳನ್ನು ಸುಂದರವಾಗಿ ನಿರೂಪಿಸಲಾಗಿದೆ. ತತ್ವ ಪ್ರತಿಪಾದನೆಯೇ ಈತನ ವಚನಗಳ ಪ್ರಮುಖ ಉದ್ದೇಶವಾಗಿದೆ.

ಅನುಭಾವಿಯಾದ ಬಾಹೂರ ಬೊಮ್ಮಣ್ಣ, ಕಲ್ಯಾಣ ಸಮೀಪದ ಬಾಹೂರ ಗ್ರಾಮದವ. ಈತನದು ತೋಟಗಾರಿಕೆ ವೃತ್ತಿ. ಹರಿಹರನು ಬಾಹೂರ ಬೊಮ್ಮಯ್ಯ

ನನ್ನು ಕುರಿತು ರಗಳೆ ಬರೆದಿದ್ದಾನೆ. ವಚನಕಾರನಾದ ಈತನ ವಚನಾಂಕಿತ 'ಬ್ರಹ್ಮೇಶ್ವರಲಿಂಗ'. ಜೋಳದ ರಾಶಿಯ ಮಧ್ಯದಿಂದ ಶಿವ ಓಗೊಡುವಂತೆ ಮಾಡಿದ, ಕಲ್ಲುನಂದಿಗೆ ಕಬ್ಬನ್ನು ಮೇಯಿಸಿದ, ಪೆರ್ಮಾಡಿರಾಯನ ಸೊಕ್ಕಿದಾನೆಯ ಮದವನ್ನಿಳಿಸಿದ ಪ್ರತೀತಿಗಳು ಬೊಮ್ಮಣ್ಣನ ಹೆಸರಿನಲ್ಲಿವೆ. ಈತನು ತನ್ನ ವಚನವೊಂದರಲ್ಲಿ ಅಜಗಣ್ಣ, ನಿಜಗುಣ ಹಾಗೂ ಪ್ರಭುದೇವರನ್ನು ಸ್ತುತಿಸಿದ್ದಾನೆ. ಈತನ ವಚನಗಳಲ್ಲಿ ಷಟ್‌ಸ್ಥಲ ಸಿದ್ಧಾಂತದ ಸಮಗ್ರ ವಿವರಣೆ ಕಂಡುಬರುತ್ತದೆ. ಶ್ರದ್ಧೆ, ವಿಶ್ವಾಸಗಳಿಗೆ ಪ್ರಧಾನ ಸ್ಥಾನ ನೀಡಿದ ಬೊಮ್ಮಣ್ಣನ ವಚನಗಳಿಗೆ ವಚನಸಾಹಿತ್ಯದಲ್ಲಿ ವಿಶಿಷ್ಟ ಮನ್ನಣೆಯಿದೆ. ಈತನ ಕೆಲವು ವಚನಗಳು ವಿಷಯ ನಿರೂಪಣೆಯಲ್ಲಿ ಸಹಜತೆ, ಸ್ಪಷ್ಟತೆಗಳನ್ನು ಪಡೆದಿರುತ್ತವೆ. ಕೆಲವು ವಚನಗಳು ಉಪಮೆ, ದೃಷ್ಟಾಂತಗಳಿಂದ ಕೂಡಿರುತ್ತವೆ. ಭಕ್ತಿ, ವಿಶ್ವಾಸಗಳಿಂದ ಕೂಡಿದ ಭಕ್ತನ ಅಂತರಂಗದ ಶುದ್ಧಿ ಅವಶ್ಯವೆಂದು ಬೊಮ್ಮಯ್ಯ ತನ್ನ ವಚನಗಳಲ್ಲಿ ನೇರವಾಗಿ ಹೇಳುತ್ತಾನೆ.

ಹಿರಿಯ ಶರಣ ಬಿಬ್ಬಿ ಬಾಚಯ್ಯ ಪ್ರಸಾದಿಯೆನಿಸಿದ್ದನು. ಪ್ರಸಾದಿಸ್ಥಲದಲ್ಲಿ ಅಗ್ರಸ್ಥಾನವುಳ್ಳವನಾಗಿದ್ದನೆಂಬ ಸಂಗತಿ ಚೆನ್ನಬಸವಣ್ಣನವರ 'ಗುರುಪ್ರಸಾದಿ ಗುರುಭಕ್ತಯ್ಯನಾದರೆ, ಲಿಂಗಪ್ರಸಾದಿ ಪ್ರಭುದೇವನಾದರೆ, ಜಂಗಮಪ್ರಸಾದಿ ಬಸವಣ್ಣನಾದರೆ, ಪ್ರಸಾದಪ್ರಸಾದಿ ಬಿಬ್ಬಿ ಬಾಚಯ್ಯ'ನೆಂಬ ವಚನದ ಸಾಲುಗಳ ಮೂಲಕ ವ್ಯಕ್ತವಾಗುತ್ತದೆ. ತೆಲುಗು ಬಸವಪುರಾಣ, ಶಿವತತ್ವ ಚಿಂತಾಮಣಿ, ಭೈರವೇಶ್ವರಕಾವ್ಯ, ಬಸವೇಶ್ವರ ಪುರಾಣದ ಕಥಾಸಾಗರ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ ಹಾಗೂ ಪಂಚಯ್ಯನ ಭಕ್ತಿರಸಸೋನೆ ಕೃತಿಗಳಲ್ಲಿ ಈತನ ಉಲ್ಲೇಖ ಮತ್ತು ಕತೆಗಳಿರುತ್ತವೆ. ಗುಲಬುರ್ಗಾ ಜಿಲ್ಲೆಯ ಗೊಬ್ಬೂರಿನ ಈ ಬಾಚಯ್ಯನ 'ಏಣಾಂಕಧರ ಸೋಮೇಶ್ವರ ಲಿಂಗ'ಅಂಕಿತದಲ್ಲಿರುವ ವಚನಗಳಲ್ಲಿ ೨೩ ಬೆಡಗಿನ ವಚನಗಳಿವೆ. ಈತನ ಎಲ್ಲ ವಚನಗಳನ್ನು ಕ್ರೀಜ್ಞಾನ ಸಮರ್ಪಣ ಸ್ಥಲ, ಐಕ್ಯಾನುಭಾವಲಿಂಗಸ್ಥಲ, ಅಂಗಲಿಂಗಸ್ಥಲ ಸಮರ್ಪಣ, ಸರ್ವಭಾವಸ್ಥಲ ಸಮರ್ಪಣ, ಐಕ್ಯಾನುಭಾವಸ್ಥಲ, ಅಂಗಭಾವಜ್ಞಾನ ಲೇಪಸ್ಥಲ–ಹೀಗೆ ಆರು ಸ್ಥಲಗಳಲ್ಲಿ ಸಮಾವೇಶಗೊಳಿಸಿರುವುದು ಕಂಡುಬರುತ್ತದೆ. ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಅಭಿವ್ಯಕ್ತಿಯಲ್ಲಿ ಸರಳತೆ ಹಾಗೂ ಪರಿಣಾಮ ತೀವ್ರತೆಗಳನ್ನು ಪಡೆದಿರುತ್ತವೆ.

ಬೊಕ್ಕಸದ ಚಿಕ್ಕಣ್ಣ ಬಿಜ್ಜಳನ ಬೊಕ್ಕಸದ ಅಧಿಕಾರಿಯಾಗಿದ್ದ. ಈತನು 'ಬಸವಣ್ಣಪ್ರಿಯ ನಾಗರೇಶ್ವರಲಿಂಗ' ಅಂಕಿತದಲ್ಲಿ ವಚನ ರಚನೆಮಾಡಿದ್ದಾನೆ. ಈತನು ವಚನಗಳಲ್ಲಿ ತತ್ವಪ್ರತಿಪಾದನೆಗಾಗಿ ಬೊಕ್ಕಸವನ್ನೇ ರೂಪಕ, ಪ್ರತಿಮೆಯಾಗಿ ಬಳಸಿರುವುದು ಅರ್ಥಪೂರ್ಣವೆನಿಸುತ್ತದೆ. ಅಂತರಂಗ ಬಹಿರಂಗಗಳನ್ನು ಅರಿತವನಿಗೆ ಇಷ್ಟಲಿಂಗ ಪ್ರಾಣಲಿಂಗಗಳು ಬೇರೆಬೇರೆಯಲ್ಲ. ಕಾಯಕದಿಂದ ಶಿವನನ್ನು, ಶಿವಜ್ಞಾನವನ್ನು ತಿಳಿಯಲು ಸಾಧ್ಯ. ಕಾಯಕ ಹಲವಾದರೂ ಲಿಂಗವನ್ನು ಕೂಡುವ ಕೂಟ ಮಾತ್ರ ಒಂದೇ ಆಗಿರುತ್ತದೆ. ಈ ವಿವೇಚನೆ ಈತನ ವಚನಗಳಲ್ಲಿದೆ.

'ಭರಿತಾರ್ಪಣ ಕಾಯಕ' ಕೈಕೊಂಡಿದ್ದ ಭರಿತಾರ್ಪಣದ ಚೆನ್ನಬಸವಣ್ಣನ ವಚನಗಳು 'ಚೆನ್ನಕೂಡಲ ರಾಮೇಶ್ವರಲಿಂಗ' ಅಂಕಿತದಲ್ಲಿರುತ್ತವೆ. ಈತನ ವಿಷಯವಾಗಿ ಇದಕ್ಕಿಂತ ಹೆಚ್ಚಿನ ಯಾವ ವಿವರಗಳೂ ಸಿಗುವುದಿಲ್ಲ. ಭರಿತಾರ್ಪಣದ ಸ್ವರೂಪ, ಭರಿತಾರ್ಪಣದ ಆಚರಣೆಯ ವಿಧಾನಗಳನ್ನು ಪ್ರಧಾನವಾಗಿ ಹೇಳುವ ಇವನ ವಚನಗಳು ಪ್ರಸಾದಿಸ್ಥಲದ ಮುಂದಿನ ಸ್ಥಿತಿಯನ್ನು ಸೂಚಿಸುತ್ತವೆ. ಗದ್ಯಕ್ಕೆ ತೀರ ಹತ್ತಿರವಾದ ಈತನ ವಚನಗಳಲ್ಲಿ ಕಾವ್ಯಗುಣ ಕಡಿಮೆಯೆಂದೇ ಹೇಳಬೇಕು.

ಭಿಕಾರಿ ಭೀಮಯ್ಯನ ಚರಿತ್ರೆಗೆ ಸಂಬಂಧಿಸಿದ ಯಾವ ವಿವರಗಳೂ ಸಧ್ಯ ದೊರೆಯುವುದಿಲ್ಲ. ವಚನಕಾರ ಭಿಕಾರಿ ಭೀಮಯ್ಯನ ವಚನಾಂಕಿತ 'ಭಿಕಾರಿ ಭೀಮೇಶ್ವರಲಿಂಗ'. ಈತನ ವಚನಗಳು ಸರಳವಾಗಿದ್ದು, ವಿಷಯವನ್ನು ನೇರವಾಗಿ ನಿರೂಪಿಸುತ್ತವೆ. ವ್ಯಕ್ತಿವ್ರತಗೇಡಿಯಾಗಬಾರದೆಂಬುದನ್ನು ಹೇಳುತ್ತ, 'ಮರಣವಳಿದುಳಿದಾತ'ನೇ ಭಿಕಾರಿಯೆಂದು 'ಭಿಕಾರಿ' ಪದಕ್ಕೆ ಹೊಸವ್ಯಾಖ್ಯಾನ ನೀಡಿದ್ದಾನೆ.

ವಚನಕಾರ ಭೋಗಣ್ಣನು ಕೆಂಬಾವಿಯ ಭೋಗಣ್ಣನಿಂದ ಬೇರೆಯಾಗಿದ್ದು, 'ನಿಜಗುರು ಭೋಗೇಶ್ವರ' ಅಂಕಿತದಲ್ಲಿ ವಚನ ಬರೆದಿದ್ದಾನೆ. ಈತನ ಹೆಚ್ಚಿನ ವಚನಗಳು ದೀರ್ಘವಾಗಿರುವುದೊಂದು ವಿಶೇಷವೆನಿಸುತ್ತದೆ. ಭೋಗಣ್ಣನ ವಚನಗಳಲ್ಲಿ ಶರಣನ ಲಕ್ಷಣ ಹಾಗೂ ಶರಣಸತಿ ಲಿಂಗಪತಿ ಭಾವವೇ ಅಧಿಕವಾಗಿರುತ್ತದೆ. ಇದಲ್ಲದೆ ಭಕ್ತ–ಭವಿ, ಸಾಕಾರ–ನಿರಾಕಾರ, ಅಂಗ–ಲಿಂಗ, ವೇಷಡಂಭಕ–ಶಬ್ದಬೋಧಕ, ಭವಭಾರಿಗಳ ಬಗೆಗೂ ವಿವರಿಸಲಾಗಿದೆ. ಪ್ರಭುದೇವರ ಸ್ತುತಿಯಿರುವ ಈತನ ವಚನಗಳಲ್ಲಿ ಕೆಲವು ಬೆಡಗಿನ ವಚನಗಳಾಗಿರುತ್ತವೆ. ಉಪಮೆಗಳ ಮೂಲಕ ವಚನಗಳಿಗೆ ಕಾವ್ಯದ ಸ್ಪರ್ಶ ನೀಡಿದ್ದರೂ ಕೆಲವು ವಚನಗಳು ಗದ್ಯಕ್ಕೆ ತೀರ ಹತ್ತಿರವಾಗಿರುತ್ತವೆ.

ಬಸವಣ್ಣನವರ ಮಹಾಮನೆಯ ಹಿರಿಯ ಚೇತನವಾದ ಶರಣ ಮಡಿವಾಳ ಮಾಚಿದೇವನು 'ಕಲಿದೇವರ ದೇವ' ಅಂಕಿತದಲ್ಲಿ ವಚನಗಳನ್ನು ರಚಿಸಿದ್ದಾನೆ. ಪ್ರಭುದೇವ. ಬಸವಣ್ಣ, ಚೆನ್ನಬಸವಣ್ಣ,ಸಿದ್ಧರಾಮಯ್ಯ, ಮರುಳಶಂಕರದೇವ ಹಾಗೂ ಮಹಾದೇವಿಯಕ್ಕಗಳಿಂದ ಸ್ತುತಿಸಲ್ಪಟ್ಟ ಮಡಿವಾಳ ಮಾಚಯ್ಯನದು ವೀರವ್ಯಕ್ತಿತ್ವ. ವೀರಶೈವರ ಅನೇಕ ಕೃತಿಗಳಲ್ಲಿ ಮಾಚಿದೇವನ ಕಥೆ ನಿರೂಪಿತವಾಗಿದೆ. ಶಿವಶರಣರ ಬಟ್ಟೆಗಳನ್ನು ಒಗೆಯುವ (ಮಡಿಮಾಡುವ) ಕಾಯಕ ಈತನದು. ತನ್ನ ಮೇಲೆ ಪರಿಬಂದ ಬಿಜ್ಜಳನ ಆನೆಯನ್ನು ಮಾಚಯ್ಯ ಕೊಲ್ಲುವನು. ಈತನ ಜನ್ಮಕ್ಷೇತ್ರ ವಿಜಾಪುರ ಜಿಲ್ಲೆಯ ಹಿಪ್ಪರಗಿ, ಕಾರ್ಯಕ್ಷೇತ್ರ ಕಲ್ಯಾಣ. ಮಡಿವಾಳಯ್ಯನ ದೀಕ್ಷಾಗುರು ಮಲ್ಲಿಕಾರ್ಜುನ, ಆರಾಧ್ಯದೈವ ಕಲ್ಲಿನಾಥ. ಅನುಭವಮಂಟಪದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ ಈತನು ಕಲ್ಯಾಣ ಕ್ರಾಂತಿಯ ತರುವಾಯ ಉಳುವೆಯ ಕಡೆಗೆ ಹೊರಟ ಚೆನ್ನಬಸವಣ್ಣನವರ ನೇತೃತ್ವದ ಶರಣಪಡೆಯ ದಂಡನಾಯಕನಾಗಿ, ಬಿಜ್ಜಳನ ಸೈನ್ಯದೊಡನೆ ಹೋರಾಡಿ ಶರಣರನ್ನು, ಶರಣ ಸಾಹಿತ್ಯವನ್ನು ರಕ್ಷಿಸಿದ. ವೀರಮಾಹೇಶ್ವರ ನಿಷ್ಠೆಯ ಮಾಚಿದೇವನನ್ನು ವೀರಭದ್ರನ ಅವತಾರವೆಂದು ಜನ ಭಾವಿಸಿದ್ದರು. ಈತನನ್ನು ವೀರಗಂಟೆಯ ಮಾಚಿದೇವನೆಂದೂ ಕರೆಯುತ್ತಿದ್ದರು. ಮಡಿವಾಳ ಮಾಚಿದೇವರ

ಜೀವನದಲ್ಲಿ ಜರುಗಿದ ಘಟನೆಗಳು ಅನೇಕ. ಅವುಗಳಲ್ಲಿ ಬಸವಣ್ಣನವರ 'ಅಹಂ' ನಿರಸನ ಮಾಡಿದುದು, ನುಲಿಯ ಚಂದಯ್ಯನಿಗೆ ಇಷ್ಟಲಿಂಗದ ಅವಶ್ಯಕತೆಯನ್ನು ತಿಳಿಸಿ ಹೇಳಿದುದು–ಇವು ಮುಖ್ಯವಾದವುಗಳಾಗಿವೆ. ತಾವು ಮಡಿವಾಳ ಮಾಚಿದೇವನ ಸಂತಾನದವರೆಂದು ಅಗಸರು ಹೇಳಿಕೊಳ್ಳುವುದನ್ನು ಕಾನಕಾನಹಳ್ಳಿ ತಾಮ್ರಶಾಸನ (ಕ್ರಿ.ಶ. ೧೨೦೦) ತಿಳಿಸುತ್ತದೆ. ಮಡಿವಾಳರು ಕ್ರಿ.ಶ. ೧೨೮೪, ಮೇ ೧ ರಲ್ಲಿ ಅಮ್ಮಿನಬಾವಿಯಲ್ಲಿ ಮಡಿವಾಳ ಮಾಚಿದೇವರ ವಿಗ್ರಹ ಪ್ರತಿಷ್ಠಾಪಿಸಿದ ವಿಷಯ ಅಲ್ಲಿಯ ಮಾಚಿದೇವನ ವಿಗ್ರಹದ ಪಾದಪೀಠ ಶಾಸನದಲ್ಲಿದೆ. ಈ ಶಾಸನ, ಮಡಿವಾಳ ಮಾಚಿದೇವ ಬಿಜ್ಜಳನ ಆನೆಯನ್ನು ಮರ್ದಿಸುತ್ತಿರುವ ಶಿಲ್ಪವನ್ನೊಳಗೊಂಡಿದೆ. ಮಡಿವಾಳ ಮಾಚಿದೇವನ ಇಂಥ ಶಿಲ್ಪಗಳು ಧಾರವಾಡ, ಮುಳಗುಂದ, ಗದಗ ಗಳಲ್ಲಿಯೂ ಇರುತ್ತವೆ. ಮಾಚಿದೇವನ ಶಿಲ್ಪಗಳು ಕೇವಲ ಧಾರವಾಡ ಜಿಲ್ಲೆಯ ಸುತ್ತಮುತ್ತ ಸಿಗುತ್ತಿರುವದು ಐತಿಹಾಸಿಕ ವಿಶೇಷವೆಂದೇ ಹೇಳಬೇಕು. ತನ್ನ ವಚನಗಳಲ್ಲಿ ಬಸವಣ್ಣನವರನ್ನು ಭಕ್ತಿ, ವಿಶ್ವಾಸಗಳಿಂದ ಅಧಿಕವಾಗಿ ಸ್ತುತಿಸಿರುವ ಮಾಚಯ್ಯನು ಉಪಮೆ, ದೃಷ್ಟಾಂತ, ರೂಪಕಗಳ ಮೂಲಕ ಅಚ್ಚಶರಣನ ಗುಣಲಕ್ಷಣ, ಶಿವಭಕ್ತಿಯ ಶ್ರೇಷ್ಠತೆಗಳನ್ನು ವಿವರಿಸಿದ್ದಾನೆ. ಡಾಂಭಿಕ ಭಕ್ತಿ, ಕರ್ಮನಿಷ್ಠ ವ್ಯಕ್ತಿ, ಕ್ಷುದ್ರದೈವ, ಸ್ಥಾವರ ಲಿಂಗ ಪೂಜೆ ಹಾಗೂ ಸ್ಥಾವರ ವ್ಯವಸ್ಥೆಗಳನ್ನು ನಿಷ್ಠುರವಾಗಿ ವಿರೋಧಿಸುವ ಈತನು ವೀರಶೈವ ತತ್ವ, ಆಚರಣೆಗಳನ್ನು ಸಮರ್ಥವಾಗಿ ಪ್ರತಿಪಾದಿಸಿದ್ದಾನೆ. ಮಾಚಿದೇವನ ವಚನಗಳು ಸರಳಶೈಲಿ ಮತ್ತು ಪ್ರೌಢಶೈಲಿಗಳೆರಡರಲ್ಲಿಯೂ ಇದ್ದು, ಸಾಮಾಜಿಕ ಸಮಸ್ಯೆ, ವೈಚಾರಿಕ ನಿಲುವುಗಳನ್ನು ಎತ್ತಿತೋರಿಸುತ್ತವೆ. ಲೋಕಾನುಭವಿಯೂ ಶಿವಾನು ಭವಿಯೂ ಆಗಿದ್ದ ಈತನ ವಚನಗಳಲ್ಲಿ 'ಕಣ್ಣು ನೋಡಿ ರೂಪ ಹೇಳದಂತಿರಬೇಕು', 'ಗರಿಯ ಕಟ್ಟಿದ ಕೋಲು ಗುರಿಯ ತಾಗಬಲ್ಲದೆ', 'ಕಸಗೊಂಡ ಭೂಮಿಯಲ್ಲಿ ಸಸಿ ಪಲ್ಲ ವಿಸುವುದೇನಯ್ಯ', 'ಕಚ್ಚುವ ತಿಗಣೆಗಾಗಿ ಮನೆಯ ಸುಟ್ಟವರುಂಟೆ', 'ಮುಗ್ಗಿದ ತುರ ಗದ ಕಾಲ ಕತ್ತರಿಸಿದವರುಂಟೆ' ಎಂಬ ನಾಣ್ನುಡಿರೂಪದ ವಾಕ್ಯಗಳು ಹೆಣೆದುಕೊಂಡಿವೆ.

ಮಡಿವಾಳ ಮಾಚಿದೇವರ ನಿಕಟವರ್ತಿಯಾಗಿದ್ದ ಸಮಯಾಚಾರದ ಮಲ್ಲಿಕಾರ್ಜು ನನು 'ಪರಮ ಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನ' ಅಂಕಿತದಲ್ಲಿ ವಚನ ಬರೆದಿ ದ್ದಾನೆ. ಈತನ ಜೀವನ ವೃತ್ತಾಂತ ಗೊತ್ತಾಗುವುದಿಲ್ಲ. ವಚನಗಳಲ್ಲಿ ಶರಣ, ಲಿಂಗೈಕ್ಯರ ಕುರಿತು ವಿವರಿಸಲಾಗಿದೆ. ಜೊತೆಗೆ ಸ್ಥಾವರಲಿಂಗಪೂಜೆಯನ್ನು ವಿರೋಧಿಸುವ ವಿಚಾ ರವೂ ಇಲ್ಲಿದೆ. ವಿಷಯ ಸ್ಪಷ್ಟತೆಗಾಗಿ ವಚನಗಳಲ್ಲಿ ದೈನಂದಿನ ಜೀವನದ ಹೋಲಿಕೆ ಗಳನ್ನು ಬಳಸಲಾಗಿದೆ.

ಬ್ರಾಹ್ಮಣನಾದ ಮಧುವಯ್ಯನು ತನ್ನ ಮಗಳನ್ನು ಅಂತ್ಯಜ ಹರಳಯ್ಯನ ಮಗನಿಗೆ ಮದುವೆ ಮಾಡಿಕೊಡುವುದರ ಮೂಲಕ ಸಮಾಜದಲ್ಲಿ ಆಳವಾಗಿ ಬೇರುಬಿಟ್ಟಿದ್ದ ವರ್ಗಸೂತಕವನ್ನು ಹರಿದುಹಾಕಿದ. ಇದಕ್ಕಾಗಿ ಬಿಜ್ಜಳನಿಂದ ಮರಣದಂಡನೆಯನ್ನೂ ಅನುಭವಿಸಿದ. ಮಧುವಯ್ಯನು 'ಅರ್ಕೇಶ್ವರಲಿಂಗ' ಅಂಕಿತದಲ್ಲಿ ರಚಿಸಿದ ವಚನಗಳಲ್ಲಿ ಬಹಳಷ್ಟು ಬೆಡಗಿನ ವಚನಗಳಾಗಿರುತ್ತವೆ. ಗಾತ್ರದಲ್ಲಿ ಚಿಕ್ಕವಾಗಿದ್ದು, ಹಿರಿಯ ತತ್ವಗಳನ್ನು

ಚಿತ್ರಿಸುತ್ತದೆ. ಗುರುಕೃಪೆ, ಮಾಯೆಯ ಸ್ವರೂಪ, ಲಿಂಗಾನುಸಂಧಾನ, ಶಿವಾನುಭವ ಸಾಧನೆ, ಸಾಧಕನ ಮಾರ್ಗ ಮುಂತಾದ ತಾತ್ವಿಕ ವಿಷಯಗಳನ್ನು ವಿವರಿಸುವ ಈ ವಚನಗಳಲ್ಲಿ ಸೂತ್ರರೂಪದ ವಾಕ್ಯಗಳು ಸೇರಿಕೊಂಡು ಕಾವ್ಯಗುಣವನ್ನು ಹೆಚ್ಚಿಸಿವೆ.

ಮನಸಂದ ಮಾರಿತಂದೆಯ ಚರಿತ್ರೆಯ ವಿವರಗಳು ದೊರೆಯುವದಿಲ್ಲ. ಈತನ ವಚನಗಳು ಗಾತ್ರದಲ್ಲಿ ಚಿಕ್ಕವಾಗಿದ್ದು, ಉನ್ನತ ವಿಚಾರಗಳನ್ನು ನಿರೂಪಿಸುತ್ತವೆ. ಈ ವಚನಕಾರನ ವಚನಾಂಕಿತ, 'ಮನಸಂದಿತ್ತು ಮಾರೇಶ್ವರ.' ಲಿಂಗಾಂಗ ಸಾಮರಸ್ಯ, ಗುರುಲಿಂಗ ಜಂಗಮ ಲಕ್ಷಣ, ನಿಜಲಿಂಗಾಂಗಿ ಹಾಗೂ ಜ್ಞಾನಿಯ ಇರವು, ಶಿವಭಕ್ತರ ವ್ರತನೇಮ, ಆತ್ಮನ ಸ್ವರೂಪ, ಕಾಯಸೂತಕ ಮೊದಲಾದ ವಿಷಯಗಳ ವಿವೇಚನೆ ಈತನ ವಚನಗಳಲ್ಲಿದೆ. ಸರಳವೂ ಸುಂದರವೂ ಎನಿಸಿದ ಈತನ ವಚನಗಳಲ್ಲಿ ಕಾವ್ಯಾಂಶ ಅಧಿಕವಾಗಿರುತ್ತದೆ.

ವಚನಕಾರನಾದ ಮನುಮುನಿ ಗುಮ್ಮಟದೇವನ ವಚನಾಂಕಿತ, 'ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ', 'ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರ ಲಿಂಗ'. ಮೂಲತಃ ಜೈನನಾಗಿರಬಹುದಾದ ಈತನ ಜೀವನವೃತ್ತಾಂತ ಸಿಗುವದಿಲ್ಲ. ಈತನ ವಚನಗಳನ್ನು 'ಆತ್ಮನರಿವು ಭಾವಸ್ಥಲ', 'ಆತ್ಮ ಐಕ್ಯನಸ್ಥಲ', 'ಪಿಂಡಜ್ಞಾನ ಸಂಬಂಧ' ಶೀರ್ಷಿಕೆಗಳ ಅಡಿಯಲ್ಲಿ ಸಂಕಲಿಸಲಾಗಿದ್ದು, ಆರಂಭದಲ್ಲಿ ಗದ್ಯಭಾಗವನ್ನು ಜೋಡಿಸಲಾಗಿದೆ. ಈತನ ವಚನಗಳಲ್ಲಿ ಭಕ್ತಿಸ್ಥಲ, ಐಕ್ಯಸ್ಥಲಗಳಿಗೆ ಸಂಬಂಧಿಸಿದ ವಿವೇಚನೆಯೇ ಹೆಚ್ಚಾಗಿ ಕಂಡುಬರುತ್ತದೆ. ಜೊತೆಗೆ ದಯವೇ ಧರ್ಮದ ಮೂಲ, ಏಕದೇವೋಪಾಸನೆ, ಪರಮತ ದೂಷಣೆಯಂಥ ಸಂಗತಿಗಳನ್ನೂ ಇಲ್ಲಿ ವಿವರಿಸಲಾಗಿದೆ. ತಾನು ಹೇಳಬೇಕಾದ ವಿಷಯವನ್ನು ಹಲವಾರು ನಿದರ್ಶನಗಳ ಮೂಲಕ ವಿಶದೀಕರಿಸುತ್ತಾನೆ. ಸುಂದರವಾದ, ಧ್ವನಿಪೂರ್ಣವಾದ ಬೆಡಗಿನ ವಚನಗಳೂ ಇಲ್ಲಿವೆ.

ಕಲ್ಯಾಣದ ಅನುಭವ ಮಂಟಪದ ಸಂದೇಶ ಕೇಳಿದ ಅನೇಕ ಜನ ಶಿವಶರಣರು ಕಲ್ಯಾಣದತ್ತ ಧಾವಿಸಿ ಬಂದರು. ಇಂಥವರಲ್ಲಿ ಮರುಳಶಂಕರದೇವರೂ ಒಬ್ಬರಾಗಿದ್ದಾರೆ. ಇವರ ಜೀವನ ಚರಿತ್ರೆಯ ಕೆಲವು ವಿವರಗಳು ಪ್ರಭುಲಿಂಗಲೀಲೆ, ಶೂನ್ಯಸಂಪಾದನೆ, ಭೈರವೇಶ್ವರಕಾವ್ಯದ ಕಥಾಮಣಿ ಸೂತ್ರರತ್ನಾಕರ ಮುಂತಾದ ಕೃತಿಗಳಲ್ಲಿರುತ್ತವೆ. ಗುಪ್ತಭಕ್ತಿಯ ಮರುಳಶಂಕರದೇವರು ಶರಣರ ಒಕ್ಕುಮಿಕ್ಕ ಪ್ರಸಾದ ಸೇವಿಸಿ, ಪ್ರಸಾದಕಾಯರೆನಿಸಿದ್ದರು. 'ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನದೇವ' ಅಂಕಿತದಲ್ಲಿರುವ ಈತನ ವಚನಗಳು ದೀರ್ಘವಾಗಿರುತ್ತವೆ. ವಚನಗಳ ಅಂತ್ಯದಲ್ಲಿ 'ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ' ಎಂಬ ವಾಕ್ಯ ತಪ್ಪದೆ ಬರುತ್ತದೆ. ಮಹಾಲಿಂಗೈಕ್ಯ, ಸದ್ಭಕ್ತ, ಶರಣ, ಲಿಂಗವಂತರ ನಿಲುವಿನ ವಿವರಣೆ; ಶೀಲ, ಆಚಾರಗಳ ಪ್ರತಿಪಾದನೆ ಈತನ ವಚನಗಳಲ್ಲಿದೆ. ಬಸವಣ್ಣ, ಪ್ರಭುದೇವ, ಸಿದ್ಧರಾಮ, ಚೆನ್ನಬಸವಣ್ಣ, ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವ, ಸೊಡ್ಡಳ ಬಾಚರಸ, ಕಿನ್ನರಿ ಬೊಮ್ಮಯ್ಯ, ಪಡಿಹಾರಿ ಉತ್ತಣ್ಣ, ನಾಗಲಾಂಬಿಕೆ, ಕೋಲ ಶಾಂತಯ್ಯ, ಡೋಹರ ಕಕ್ಕಯ್ಯ, ಮೊಗವಾಡದ ಕೇಶಿರಾಜ, ಸುರಗಿಯ ಚೌಡಯ್ಯ,

ಖಂಡೆಯ ಬೊಮ್ಮಣ್ಣರನ್ನು ತನ್ನ ವಚನಗಳಲ್ಲಿ ಶ್ರದ್ಧಾಭಕ್ತಿಯಿಂದ ಸ್ತುತಿಸಿದ್ದಾನೆ. ಮರುಳಶಂಕರದೇವರ ರೂಪಕ ನಿರ್ಮಾಣಶಕ್ತಿ ಅಗಾಧವಾದುದಾಗಿದೆ.

ಆದಯ್ಯ, ಸಿದ್ಧರಾಮಯ್ಯರು ಸ್ತುತಿಸಿದ ಮರುಳಸಿದ್ಧೇಶ್ವರದೇವ ಹಿರಿಯ ವಚನಕಾರ. 'ರೇವಣ್ಣ ಪ್ರಭುವೆ' ಅಂಕಿತದಲ್ಲಿ ಇವನು ವಚನ ರಚಿಸಿದ್ದಾನೆ. ಸಿದ್ಧರಾಮಯ್ಯನು 'ಮರುಳಸಿದ್ಧನ ವಚನ ಅರವತ್ತೆಂಟು ಸಾಸಿರ'ವೆಂದು ಈತನ ವಚನಸಂಖ್ಯೆಯ ಪ್ರಮಾಣವನ್ನು ಸೂಚಿಸುತ್ತಾನೆ. ರೇವಣ್ಣಸಿದ್ಧೇಶ್ವರರಿಂದ ದೀಕ್ಷೆ ಪಡೆದ ಈತನು, ಗುರುವಿನ ಹೆಸರನ್ನೇ ತನ್ನ ವಚನದ 'ಅಂಕಿತ'ವನ್ನಾಗಿ ಇಟ್ಟುಕೊಂಡಿದ್ದಾನೆ. ಭಕ್ತಿಪ್ರಾಧಾನ್ಯತೆಯನ್ನು ಮನ್ನಿಸಿದ ಮರುಳಸಿದ್ಧೇಶ್ವರನು ಕುಟಿಲಸಿದ್ಧಿ, ಜಾತೀಯತೆ, ಯಜ್ಞಯಾಗ ಮೊದಲಾದ ಸಾಮಾಜಿಕ, ಧಾರ್ಮಿಕ ಕರ್ಮಗಳ ವಿರುದ್ಧ ಹೋರಾಡಿದನು. ಕಾಲ, ಕರ್ಮ, ಭವಗಳನ್ನು ಗೆಲ್ಲುವುದು ಶರಣನ ಸಹಜ ಉದ್ದೇಶವಾಗಿರಬೇಕೆಂದು ತನ್ನ ವಚನದಲ್ಲಿ ವಿವರಿಸಿದ್ದಾನೆ.

ಮಲಹರ ಕಾಯಕದ ಚಿಕ್ಕದೇವಯ್ಯನ ಜೀವನ ಚರಿತ್ರೆಯ ವಿವರಗಳು ದೊರೆಯುವುದಿಲ್ಲ. 'ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು ಕಪಿಲೇಶ್ವರಲಿಂಗ' ಅಂಕಿತದಲ್ಲಿ ಈತನು ವಚನ ರಚಿಸಿದ್ದಾನೆ. ಕಂಚು, ಹಿತ್ತಾಳೆ, ತಾಮ್ರ, ತವರು ಮೊದಲಾದ ಲೋಹಗಳ ಕೆಲಸಕ್ಕೆ ಸಂಬಂಧಿಸಿದ ಉಲ್ಲೇಖಗಳೇ ವಚನಗಳಲ್ಲಿ ಹೆಚ್ಚಾಗಿ ಉಕ್ತವಾಗಿರುವುದರಿಂದ ಈತನು ಲೋಹಕಾರ್ಯ ಮಾಡುವ ವೃತ್ತಿಯವನೆಂದು ಹೇಳಬಹುದಾಗಿದೆ. ಜ್ಞಾನಮಾರ್ಗವನ್ನು ಪ್ರತಿಪಾದಿಸುವ ಚಿಕ್ಕದೇವಯ್ಯನ ವಚನಗಳಲ್ಲಿ ಅರಿವಿನ ಮಹತ್ವ, ಪರಮವಿರಕ್ತ, ಸದ್ಭಕ್ತ, ಸತ್ಪಥ, ಸದ್ಭಕ್ತಿಗಳನ್ನು ಕುರಿತ ಆಲೋಚನೆಗಳಿರುತ್ತವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯರು, ಪಂಡಿತಾರಾಧ್ಯ ಹಾಗೂ ಅಮರಗುಂಡದ ಮಲ್ಲಿಕಾರ್ಜುನರಿಗಿಂತ ಬೇರೆಯಾದ ವಚನಕಾರರಾಗಿದ್ದಾರೆ. ಇವರ ವಚನಾಂಕಿತ 'ಶ್ರೀ ಮಲ್ಲಿಕಾರ್ಜುನ'. ಈ ಅಂಕಿತದ ವಚನಗಳು ಸಿದ್ಧರಾಮೇಶ್ವರ ಹೆಸರಿನಲ್ಲಿಯೂ ಸಿಗುತ್ತಿವೆ. ಶ್ರೀಶೈಲ ಕ್ಷೇತ್ರದ ಈ ಶರಣನನ್ನು ಕುರಿತು ಊರ್ಧ್ವಲೋಚನ ಪಡೆದ, ಬಸವಣ್ಣನವರು ಕಳಿಸಿದ ಭಸಿತಧಾರಣದಿಂದ ಕನ್ನಡ ಭಾಷೆ ಕಲಿತ, ಇಷ್ಟಲಿಂಗದಲ್ಲಿ ಬಸವಣ್ಣನವರ ಲಿಂಗೈಕ್ಯ ಕಂಡ ಕತೆಗಳು ಪ್ರಚಲಿತದಲ್ಲಿವೆ. ಸಂಸಾರ, ಯೌವನ, ಸಂಪತ್ತು, ಪ್ರಾಣ ಅಸ್ಥಿರವಾದವುಗಳು. ಕಾರಣ ಮೃತ್ಯು ಮುಟ್ಟದ ಮುನ್ನ, ದೇಹ ಕೆಡದ ಮುನ್ನ ಶಿವನನ್ನು ಪೂಜಿಸಬೇಕು. ಮನುಷ್ಯನಿಗೆ ಪಾಪ–ಪುಣ್ಯದ ಅರಿವು ಇರಬೇಕೆಂದು ಈತನು ವಚನಗಳಲ್ಲಿ ಆಗ್ರಹಿಸಿದ್ದಾನೆ. ನಾದಮಾಧುರ್ಯ, ವಿನೀತಭಾವಗಳಿಂದ ಕೂಡಿದ ಮಲ್ಲಿಕಾರ್ಜುನ ಪಂಡಿತಾರಾಧ್ಯರ ವಚನಗಳು ಸರಳವಾಗಿವೆ, ನೇರವಾಗಿವೆ.

ಮಳುಬಾವಿಯ ಸೋಮಣ್ಣನ ಜೀವನದ ಯಾವ ವಿವರಗಳೂ ಗೊತ್ತಾಗುವುದಿಲ್ಲ. ಈತನು ತನ್ನ ವಚನದಲ್ಲಿ ಆಗಿಲ್ಲದ ಸಿರಿ, ಆಯುಷ್ಯವಿಲ್ಲದ ಬದುಕು, ಎಳತಟೆಗೊಂಬ ಕಾಯದ ಸಂಗ, ಬಳಲಿಸುವ ಜೀವಭಾವಗಳ ಕಳವಳ ಕರಗಿ ಹೋದಾಗ ಮಾತ್ರ ಶಿವನ ದರ್ಶನ ಸಾಧ್ಯವೆಂಬುದನ್ನು ಸುಂದರವಾಗಿ, ಸರಳವಾಗಿ ನಿರೂಪಿಸಿದ್ದಾನೆ, 'ಮಳುಬಾವಿಯ ಸೋಮ' ಈತನ ವಚನಗಳ ಅಂಕಿತ.

ಶಿವಾನುಭಾವಿಯಾಗಿದ್ದ ಮಾದಾರ ಚೆನ್ನಯ್ಯ ಮೂಲತಃ ಚೋಳದೇಶದವ. 'ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮಾರಾಮ ರಾಮನ' ಅಂಕಿತದಲ್ಲಿ ವಚನಗಳನ್ನು ರಚಿಸಿದ ಈತನನ್ನು ಕುರಿತು ಹರಿಹರನು ರಗಳೆ ಬರೆದಿದ್ದಾನೆ. ಗುಪ್ತಭಕ್ತಿಯ ಮಾಹೇಶ್ವರನಾಗಿದ್ದ ಚೆನ್ನಯ್ಯನು ಕರಿಕಾಲ ಚೋಳನಲ್ಲಿ ಕುದುರೆಗಳಿಗೆ ಹುಲ್ಲು ಹಾಕುವ ಕಾಯಕ ಮಾಡಿದರೆ, ಕಲ್ಯಾಣದಲ್ಲಿ ಪಾದರಕ್ಷೆ ಹೊಲಿಯುವ ತನ್ನ ಕುಲವೃತ್ತಿಯನ್ನು ಕಾಯಕವನ್ನಾಗಿಸಿದ. ಚೆನ್ನಯ್ಯ ಶಿವಭಕ್ತಿಸಂಪನ್ನನೆನ್ನುವುದು ಶಿವನಿಗೆ ಮಾತ್ರ ಗೊತ್ತು. ಒಂದು ದಿನ ಶಿವನು ಕರಿಕಾಲ ಚೋಳನ ಮನೆಯ ಊಟ ಬಿಟ್ಟು ಚೆನ್ನಯ್ಯನೊಡನೆ ಅಂಬಲಿ ಸೇವಿಸುತ್ತಾನೆ. ಕರಿಕಾಲ ಚೋಳನು ಶಿವನೊಡನೆ ಅಂಬಲಿಯನ್ನುಂಡ ಮಾದಾರ ಚೆನ್ನಯ್ಯನ ಮನೆಗೆ ಹೋಗಿ, ಅವನ ದರ್ಶನದಿಂದ ಪುನೀತನಾಗುವನು. ಅಬ್ಬಲೂರು (ಕ್ರಿ. ಶ. ೧೨೦೦) ಹಾಗೂ ಕಲ್ಲೇದೇವರಪುರ (ಕ್ರಿ. ಶ. ೧೨೬೯) ಶಾಸನಗಳಲ್ಲಿ ಉಲ್ಲಿಖಿತನಾದ ಚೆನ್ನ, ಈ ಮಾದಾರ ಚೆನ್ನಯ್ಯನಾಗಿರಬೇಕೆನಿಸುತ್ತದೆ. ಶಿವನೊಲುಮೆ ಪಡೆಯಲು ವೃತ್ತಿ–ಜಾತಿ–ಅಂತಸ್ತು ಮುಖ್ಯವಲ್ಲ, ಶಿವಭಕ್ತಿ ಮುಖ್ಯವೆಂಬ ಮಹತ್ವದ ವಿಚಾರಗಳು ಚೆನ್ನಯ್ಯನ ಚರಿತ್ರೆಯಿಂದ ತಿಳಿದುಬರುತ್ತವೆ. ಈತನು ತನ್ನ ಕುಲದ ಕಾಯಕದ ಉಪಕರಣಗಳನ್ನೇ ವಚನಗಳ ಅಂಕಿತವನ್ನಾಗಿರಿಸಿಕೊಂಡಿರುವುದು ಒಂದು ವೈಶಿಷ್ಟ್ಯವೆಂದೇ ಹೇಳಬೇಕು. ಚೆನ್ನಯ್ಯನ ವಚನಗಳಲ್ಲಿ ಕಾವ್ಯಸೌಂದರ್ಯ ಕಡಿಮೆಯಿದ್ದರೂ ಸಾಮಾಜಿಕ ಕಳಕಳಿ ಮಾತ್ರ ಅಧಿಕವಾಗಿರುವುದು ಕಂಡುಬರುತ್ತದೆ. ಸಮಾಜಕ್ಕೆ ಶಾಪವಾಗಿ ಪರಿಣಮಿಸಿದ ಕುಲ–ಜಾತಿ–ಹೊಲೆ ಸಮಸ್ಯೆಗಳನ್ನು ಕುರಿತು ಈತನು ತೀವ್ರ ಚಿಂತನೆ ನಡೆಸಿ, ಅವುಗಳಿಗೆ ಹೊಸವ್ಯಾಖ್ಯಾನ ನೀಡಿದ್ದಾನೆ. ಚೆನ್ನಯ್ಯನ ವಚನಗಳ ಸಂಖ್ಯೆ ಕಡಿಮೆಯಿದ್ದರೂ ವಚನಸಾಹಿತ್ಯದಲ್ಲಿ ಇವುಗಳಿಗೆ ವಿಶೇಷ ಮನ್ನಣೆಯಿದೆ.

ಚರ್ಮವನ್ನು ಹದಮಾಡಿ ಪಾದರಕ್ಷೆ ಹೊಲಿಯುವ ಕಾಯಕ ಮಾಡುತ್ತಿದ್ದ ಮಾದಾರ ಧೂಳಯ್ಯನು 'ಕಾಮಧೂಮ ಧೂಳೇಶ್ವರ' ಅಂಕಿತದಲ್ಲಿ ವಚನ ರಚಿಸಿದ್ದಾನೆ. ಬ್ರಾಹ್ಮಣನೊಬ್ಬನ ಕುಷ್ಠರೋಗವನ್ನು ನಿವಾರಿಸಿದ ಪ್ರಸಂಗ ಇವನ ಚರಿತ್ರೆಯಲ್ಲಿದೆ. ಕಾಯಕದಲ್ಲಿಯೇ ಶಿವನನ್ನು ಸಾಕ್ಷಾತ್ಕರಿಸಿಕೊಂಡ ಈತನು ಜ್ಞಾನ–ಮೋಕ್ಷಗಳ ಸ್ವರೂಪ, ಕಾಯಕದ ಮಹತ್ವ ಹಾಗೂ ಭಕ್ತಿಯ ಸ್ವರೂಪಗಳನ್ನು ತನ್ನ ವಚನಗಳಲ್ಲಿ ವಿವರಿಸಿದ್ದಾನೆ. ಈತನ ವಚನಗಳಲ್ಲಿ ಕಂಡುಬರುವ ವೃತ್ತಿಪರಿಭಾಷೆ, ಓದುಗರ ಗಮನವನ್ನು ಸೆಳೆಯುತ್ತದೆ. ಬಸವಣ್ಣ, ಪ್ರಭುದೇವ, ಮಡಿವಾಳ ಮಾಚಿದೇವ, ಸಿದ್ಧರಾಮರ ಸ್ತುತಿಯೂ ಇಲ್ಲಿದೆ. ಆಲಂಕಾರಿಕ ಶೈಲಿಯ ಈತನ ಕೆಲವು ವಚನಗಳು ಬೆಡಗಿನ ವಚನಗಳಾಗಿರುತ್ತವೆ.

'ನಾಚಯ್ಯಪ್ರಿಯ ಮಲ್ಲಿನಾಥ' ಅಂಕಿತದ ವಚನಗಳು ದಶಗಣಸಿಂಗಿದೇವ ಹಾಗೂ ನಾಚಯ್ಯರಿಬ್ಬರ ಹೆಸರಿನಲ್ಲಿಯೂ ದೊರೆಯುತ್ತವೆ. ಇದಲ್ಲದೆ 'ನಾಚೇಶ್ವರ' ಅಂಕಿತದ ವಚನವೂ ಬೇರೆಯಾಗಿ ಲಭಿಸುತ್ತಿದೆ. ಹೀಗಾಗಿ 'ನಾಚಯ್ಯಪ್ರಿಯ ಮಲ್ಲಿನಾಥ' ಅಂಕಿತದ ವಚನಗಳು ದಶಗಣಸಿಂಗಿದೇವನವೆಂದು ಭಾವಿಸಿ, 'ನಾಚೇಶ್ವರ' ಅಂಕಿತದ ವಚನವನ್ನು ಮಾರುಡಿಗೆಯ ನಾಚಯ್ಯನದೆಂದು ಇಟ್ಟುಕೊಳ್ಳಲಾಗಿದೆ. ನಾಚಯ್ಯನು

ವೀರಮಾಹೇಶ್ವರ ನಿಷ್ಠೆಯಿಂದ ಮಾರುಡಿಗೆಯಲ್ಲಿ ಅನ್ಯದೈವವನ್ನು ಭಗ್ನಗೊಳಿಸಿ, ಆ ಸ್ಥಳದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದನು. ನಾಚಯ್ಯನ ಈ ಪರಾಕ್ರಮದ ವರ್ಣನೆ ಹಾಗೂ ಮಾರುಡಿಗೆಯ ಉಲ್ಲೇಖಗಳು ತಾಳಿಕೋಟೆ (ಕ್ರಿ.ಶ. ೧೧೮೪) ಶಾಸನದಲ್ಲಿವೆ. ಉಗ್ರಭಕ್ತಿಯ ಮೂಲಕ ವೀರಶೈವವನ್ನು ರಕ್ಷಿಸಿದ, ಪ್ರಸಾರಗೊಳಿಸಿದ ಶ್ರೇಯಸ್ಸು ಈತನದಾಗಿದೆ. ನಾಚಯ್ಯನ ವಚನ ಸರಳವಾಗಿದ್ದು, ತಾತ್ವಿಕ ವಿಚಾರವನ್ನೊಳಗೊಂಡಿದೆ.

'ಮಾರೇಶ್ವರಾ' ಅಂಕಿತದಲ್ಲಿರುವ ಮಾರೇಶ್ವರೊಡೆಯರ ಬಹಳಷ್ಟು ವಚನಗಳು ಗಾತ್ರದಲ್ಲಿ ಚಿಕ್ಕವಾಗಿರುತ್ತವೆ. ಬೆಡಗಿನ ರೀತಿಯಲ್ಲಿರುವ ಈ ವಚನಗಳಲ್ಲಿ ತಾತ್ವಿಕ ವಿವೇಚನೆಯಿದೆ. ಇನ್ನು ಕೆಲವು ವಚನಗಳಲ್ಲಿ ಭಾವಜ್ಞ, ಅರಿವು, ಸದ್ಗುಣ, ಲಿಂಗಾಂಗಿ ಮೊದಲಾದ ವಿಷಯಗಳ ಪ್ರಸ್ತಾಪವಿದೆ. ಈ ವಚನಕಾರನ ಜೀವನ ವೃತ್ತಾಂತದ ವಿವರ ಗೊತ್ತಾಗುವುದಿಲ್ಲ.

ತೆಲುಗು, ಕನ್ನಡ, ಬಸವಪುರಾಣ, ಹರಿಹರನ ರಗಳೆ, ವೃಷಭೇಂದ್ರ ವಿಜಯ ಹಾಗೂ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ ಗ್ರಂಥಗಳಲ್ಲಿ ಪ್ರಸ್ತಾಪಿತನಾದ ಮೆರೆಮಿಂಡಯ್ಯನು ೬೩ ಪುರಾತನರಲ್ಲೊಬ್ಬನಾದ ಮೆರೆಮಿಂಡಯ್ಯನಿಗಿಂತ ಬೇರೆಯಾಗಿದ್ದಾನೆ. ಈತನ ವಚನಾಂಕಿತ, 'ಐಘಟದೂರ ರಾಮೇಶ್ವರಲಿಂಗ'. ಇವನು ಅಷ್ಟಾವರಣ, ಲಿಂಗಾಂಗ ಸಾಮರಸ್ಯ, ಮೊದಲಾದ ವೀರಶೈವತತ್ವಗಳನ್ನು ಸರಳ ರೀತಿಯಲ್ಲಿ ಹೇಳಿದ್ದಾನೆ. ಏಕೋರಾಮಿತಂದೆ, ಪಂಡಿತಾರಾಧ್ಯ, ರೇವಣ ಸಿದ್ಧೇಶ್ವರದೇವ, ಸಿದ್ಧರಾಮೇಶ್ವರ, ಮರುಳಸಿದ್ಧೇಶ್ವರ, ಸಕಳೇಶ ಮಾದರಸ, ತೆಲುಗು ಜೊಮ್ಮಯ್ಯ, ಕೇಶಿರಾಜಯ್ಯರನ್ನು ಭಕ್ತಿಯಿಂದ ತನ್ನ ವಚನಗಳಲ್ಲಿ ಸ್ಮರಿಸಿದ್ದಾನೆ. ವಚನಗಳಲ್ಲಿ ಬಳಕೆಯಾದ ಉಪಮೆ-ದೃಷ್ಟಾಂತಗಳು ಸಹಜವಾಗಿದ್ದು, ಸ್ವಾರಸ್ಯಪೂರ್ಣ ವೆನಿಸುತ್ತವೆ. ಈತನ ವಚನಗಳ ಅಭಿವ್ಯಕ್ತಿ ನೇರವಾಗಿದ್ದು, ಅರ್ಥೈಸಲು ತೀರ ಸುಲಭ ವಾಗಿರುತ್ತವೆ. ಭಾವಗೀತೆಯ ಗುಣವನ್ನು ಹೊಂದಿದ ಕೆಲವು ವಚನಗಳೂ ಇಲ್ಲಿವೆ.

ಮೇದರ ಕೇತಯ್ಯನ ವಚನಗಳು 'ಗವರೇಶ್ವರ' ಅಂಕಿತದಲ್ಲಿವೆ. ಗವರೆಗಯೆಂದರೆ ಬಿದಿರು ಕಾಯಕದವ. ಈತನು ಕಾಡಿಗೆ ಹೋಗಿ ತಂದ ಬಿದಿರಿನಿಂದ ಮೊರ, ಬುಟ್ಟಿ, ತೊಟ್ಟಿಲುಗಳನ್ನು ಹೆಣೆಯುವ ಕಾಯಕ ಮಾಡುತ್ತಿದ್ದ. ತನ್ನ ಅನೇಕ ವಚನಗಳಲ್ಲಿ ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ, ಘಟ್ಟಿವಾಳ ಮುದ್ದಯ್ಯ, ಸಿದ್ಧರಾಮಯ್ಯ, ಮರುಳ ಶಂಕರದೇವ, ಮಡಿವಾಳ ಮಾಚಿದೇವ ಮೊದಲಾದ ಶರಣರನ್ನೂ ಸ್ತುತಿಸುತ್ತಾನೆ. ತಾನು ಮಾಡುವ ಕಾಯಕದ ರೀತಿ, ಅದರ ಮಹತ್ವ ಹಾಗೂ ಕಾಯಕದ ಮೂಲಕ ಪಡೆದ ಲಿಂಗಾಂಗ ಸಾಮರಸ್ಯಗಳನ್ನು ಕೇತಯ್ಯ ವಚನಗಳಲ್ಲಿ ವಿವರಿಸಿದ್ದಾನೆ. ಶಿವಭಕ್ತನಾದವನು 'ಸುಖವೂ ಸರಿ ದುಃಖವೂ ಸರಿ, ಉರಿ ಸಿರಿ ಉಭಯವೂ ಸರಿ'ಯೆಂದು ಭಾವಿಸಬೇಕು. ಇಷ್ಟಲಿಂಗ ಕೆಳಗೆ ಬಿದ್ದರೆ ನಿಂದಿಸಿ ನುಡಿಯಬಾರದು. ಗುರು-ಲಿಂಗ-ಜಂಗಮಗಳಲ್ಲಿ ಭೇದವಿಲ್ಲ. ಶಿವಭಕ್ತನ ಅಂಗಕ್ರಿಯೆ ಲಿಂಗಕ್ರಿಯೆಗಳಾದ ಅರಿವಿನ ಆಚರಣೆ ಲಿಂಗಕ್ಕೆ ಅರ್ಪಿತವಾಗುತ್ತದೆ-ಹೀಗೆ ಕೇತಯ್ಯನ ವಚನಗಳಲ್ಲಿ ಲೋಕಾನುಭವ, ಶಿವಾನುಭವಗಳು ವ್ಯಕ್ತವಾಗಿರುತ್ತವೆ.

ಮೈದುನ ರಾಮಯ್ಯನು ಆಂಧ್ರದಿಂದ ಕಲ್ಯಾಣಪಟ್ಟಣಕ್ಕೆ ಬಂದ ಶಿವಶರಣ ನಾಗಿದ್ದಾನೆ. ಈತನ ವಚನಗಳು 'ಮಹಾಲಿಂಗ ಚೆನ್ನರಾಮೇಶ್ವರ' ಅಂಕಿತದಲ್ಲಿವೆ. ಮೈದುನ ರಾಮಯ್ಯನ ರಗಳೆ, ಮೈದುನ ರಾಮಯ್ಯನ ಸುವ್ವಿ ಹಾಗೂ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಗ್ರಂಥಗಳಲ್ಲಿ ಇವನ ಚರಿತ್ರೆಯ ವಿವರ ಗಳಿರುತ್ತವೆ. ಶಿವ-ಪಾರ್ವತಿಯರೇ ತನ್ನ ಭಾವ-ಅಕ್ಕಯೆಂದು ಭಾವಿಸಿ, ಅವರನ್ನು ಹಬ್ಬಕ್ಕೆ ಕರೆತಂದು, ಶಿವದರ್ಶನ ಪಡೆದು, ರಾಮಯ್ಯ ಮೈದುನನೆನಿಸಿದನು. ಹೀಗಾಗಿ ಈತನನ್ನು ಮೈದುನ ರಾಮಯ್ಯನೆಂದು ಕರೆಯುತ್ತಾರೆ. ಎರಡಳಿದು ಅಡಗಿದ ನಿಜಲಿಂಗೈಕ್ಯ, ಸದ್ಗುರುವಿನ ಕರುಣೆ, ಮಲಿನ ಮನ, ಅರೆಮನದ ಭಕ್ತಿ, ಹುಸಿಯ ಸ್ವರೂಪ, ಹೆಣ್ಣು-ಹೊನ್ನು-ಮಣ್ಣು ಮೊದಲಾದ ವಿಷಯಗಳನ್ನು ವಚನಗಳಲ್ಲಿ ಸರಳವಾಗಿ, ಸಹಜವಾಗಿ ಹಲವಾರು ನಿದರ್ಶನಗಳ ಮೂಲಕ ವಿವರಿಸಲಾಗಿದೆ. ಈತನು ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ನಂಬಿಯಣ್ಣ, ಜಗದೇವರನ್ನು ಭಕ್ತಿಯಿಂದ ಸ್ತುತಿಸಿದ್ದಾನೆ.

ಮೋಳಿಗೆ ಮಾರಯ್ಯನು ಬಸವಣ್ಣನವರ ಜಂಗಮಾರಾಧನೆಗೆ ಆಕರ್ಷಿತನಾಗಿ ಅರಸುತನವನ್ನು ತ್ಯಜಿಸಿ, ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದವನು. ಈತನ ಸತಿ ಮಹಾದೇವಿ. ಈತನು ಕಲ್ಯಾಣದಲ್ಲಿ ಕಟ್ಟಿಗೆ ಹೊತ್ತು ಮಾರುವ ಕಾಯಕ ಕೈಕೊಂಡ. ಕಾಯಕದಲ್ಲಿಯೇ ಶಿವನನ್ನು ಸಾಕ್ಷಾತ್ಕರಿಸಿಕೊಂಡ ಮಾರಯ್ಯನವರ ಕಾಯಕನಿಷ್ಠೆ ಹಾಗೂ ಆತ್ಮಾಭಿಮಾನಗಳನ್ನು ಹೇಳುವ ಕಟ್ಟಿಗೆ ಚಿನ್ನವಾದ ಕತೆಯೊಂದು ಪ್ರಸಿದ್ಧವಿದೆ. ಉರಿಲಿಂಗಪೆದ್ದಿ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮಯ್ಯ ಮೊದಲಾದ ಶಿವಶರಣರಿಂದ ಸ್ತುತಿಸಲ್ಪಟ್ಟ ಈತನು ಕಲ್ಯಾಣದ ಶರಣರಲ್ಲಿ ಉನ್ನತ ವ್ಯಕ್ತಿತ್ವವುಳ್ಳವ ನಾಗಿದ್ದ. ಮೋಳಿಗೆ ಮಾರಯ್ಯ ದಂಪತಿಗಳ ಸಾಮರಸ್ಯ ದಾಂಪತ್ಯ ಸಮಾಜಕ್ಕೆ ಆದರ್ಶಪ್ರಾಯ. 'ನಿಃಕಳಂಕ ಮಲ್ಲಿಕಾರ್ಜುನ' ಅಂಕಿತದಲ್ಲಿರುವ ಮೋಳಿಗೆ ಮಾರಯ್ಯನ ವಚನಗಳಲ್ಲಿ ಬೆಡಗಿನ ಶೈಲಿ ಬಳಕೆಯಾಗಿದೆ. ತನ್ನ ವಚನಗಳಲ್ಲಿ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ ಮೊದಲಾದ ತಾತ್ವಿಕ ವಿಷಯಗಳನ್ನು ಹಲವಾರು ನಿದರ್ಶನಗಳೊಂದಿಗೆ ಮನಮುಟ್ಟುವಂತೆ ನಿರೂಪಿಸಿದ್ದಾನೆ. ಸೂತ್ರರೂಪದ ವಾಕ್ಯಗಳು, ಕಾವ್ಯಾಂಶ ಸೂಸುವ ಸಾಲುಗಳು ಈತನ ವಚನಗಳ ಕಾವ್ಯಮೌಲ್ಯವನ್ನು ಪ್ರಕಟಪಡಿಸುತ್ತವೆ.

## ಪರಿಷ್ಕರಣ

ಪ್ರಸ್ತುತ ಸಂಪುಟದಲ್ಲಿ ಸಮಾವೇಶಗೊಳ್ಳುವ ಎಲ್ಲ ವಚನಕಾರರ ಸಂಖ್ಯೆಯನ್ನು ನಿರ್ದಿಷ್ಟಗೊಳಿಸಿಕೊಳ್ಳುವುದು, ಪ್ರತಿಯೊಬ್ಬ ವಚನಕಾರನ ರಚನೆಗಳನ್ನೊಳಗೊಂಡ ಆಕರಗಳನ್ನು ಸಾಧ್ಯವಾದಷ್ಟು ಒಂದೂ ಬಿಡದೆ ಪಟ್ಟಿಮಾಡುವುದು, ಹೀಗೆ ಪಟ್ಟಿ ಮಾಡಿದ ಪ್ರಕಟಿತ ಹಾಗೂ ಅಪ್ರಕಟಿತ ಆಕರಗಳಿಂದ ವಚನಗಳನ್ನು ಪ್ರತಿಮಾಡಿ ಸಂಗ್ರಹಿಸುವುದು ನಾವು ಮಾಡಿದ ಪ್ರಥಮಹಂತದ ಕೆಲಸ. ಈ ಸಂದರ್ಭದಲ್ಲಿ ಬಹುಪಾಲು ವಚನಗಳನ್ನು ಸಕಲ ಪುರಾತನರ ವಚನಗಳ ಕಟ್ಟಿನಿಂದಲೂ, ಉಳಿದವುಗಳನ್ನು ಅನ್ಯಪ್ರಾಚೀನ ಆಕರಗಳಿಂದಲೂ, ವಿವಿಧ ಪತ್ರಿಕೆಗಳಿಂದಲೂ,

ಪ್ರಕಟಿತ ಗ್ರಂಥಗಳಿಂದಲೂ ಪ್ರತಿಮಾಡಿಕೊಳ್ಳಲಾಗಿದೆ. ಇದರಿಂದ ಪ್ರತಿಯೊಂದು ವಚನಗಳಿಗಿರುವ ಸರ್ವ ಆಕರಗಳನ್ನು, ಪಾಠಾಂತರಗಳನ್ನು ಗುರುತಿಸುವುದು ಸಾಧ್ಯ ವಾಯಿತು. ಪರಿಷ್ಕರಣದ ದೃಷ್ಟಿಯಿಂದ ಇದು ಪ್ರಾಥಮಿಕ ಹಂತವೆನಿಸಿದರೂ ಅತ್ಯಂತ ಮೂಲ ಭೂತ ಹಾಗೂ ಮಹತ್ವಪೂರ್ಣ ಕಾರ್ಯವೆಂದು ಬೇರೆ ಹೇಳಬೇಕಾಗಿಲ್ಲ. ಹೀಗೆ ಸಂಗ್ರಹಿಸಿದ ವಚನಗಳನ್ನು, ಈ ಯೋಜನೆಯ ಕೇಂದ್ರಕಾರ್ಯಾಲಯದಲ್ಲಿ ಸಂಯೋಜಿಸಿರುವ 'ವಚನಬ್ಯಾಂಕಿ'ನಲ್ಲಿರುವ ವಚನಗಳೊಂದಿಗೆ ಪರಿಶೀಲಿಸಿ, ಕೈಬಿಟ್ಟುಹೋಗಿರಬಹುದಾದ ಆಕರ ಮತ್ತು ವಚನಗಳನ್ನು ಪ್ರತಿಮಾಡಿಕೊಂಡು ಸೇರಿಸಿಕೊಳ್ಳಲಾಯಿತು. ಈ 'ಪರಿಶೀಲನವಿಧಾನ'ದಿಂದ ವಚನಗಳಿಗಿರುವ ಎಲ್ಲ ಆಕರಗಳನ್ನು ಗುರುತಿಸುವ, ವಚನಗಳ ಸಂಖ್ಯೆಯನ್ನು ನಿರ್ದಿಷ್ಟಪಡಿಸುವ ಕಾರ್ಯ ಇನ್ನೂ ಅಧಿಕೃತವಾಯಿತು, ಪರಿಪೂರ್ಣವಾಯಿತು.

ಹೀಗೆ ವಚನಗಳಿಗಿರುವ ಎಲ್ಲ ಆಕರಗಳನ್ನೂ ಕಣ್ಣು ಮುಂದೆ ಹರಡಿಕೊಂಡು, ವಚನರೂಪ ಹಾಗೂ ಭಿನ್ನಪಾಠಗಳನ್ನು ಗುರುತಿಸಿ, 'ನಿಜಪಾಠ' ಅಥವಾ 'ಯೋಗ್ಯ ಪಾಠ' ಇಲ್ಲವೆ 'ಅರ್ಥವತ್ತಾದ ಪಾಠ'ವನ್ನು ನಿರ್ಣಯಿಸಬೇಕಾಗುತ್ತದೆ. ಇಂಥ ಪ್ರಸಂಗದಲ್ಲಿ ಪ್ರಾಚೀನ ಹಸ್ತಪ್ರತಿ, ತಾಳೆಗರಿಪ್ರತಿ, ಪ್ರಾಚೀನತಮ ಕೃತಿಗಳಲ್ಲಿರುವ ಪಾಠಗಳಿಗೆ ಆದ್ಯತೆ ನೀಡಬೇಕಾಗುತ್ತದೆ. ಒಂದು ವಚನ ಅನೇಕ ಆಕರಗಳಲ್ಲಿ ವಿವಿಧ ರೂಪದಲ್ಲಿ ಲಭಿಸುತ್ತಿದ್ದರೆ, ಪ್ರಾಚೀನವೆನಿಸಿದ ಸರಿಯಾದ ಮತ್ತು ಅಧಿಕೃತ ಆಕರದ ವಚನವನ್ನು ಮೂಲವೆಂದು ಇಟ್ಟುಕೊಂಡು, ಅವಶ್ಯವೆನಿಸಿದಲ್ಲಿ ಭಿನ್ನಪಾಠಗಳಿಂದ ಪರಿಷ್ಕರಿಸಲಾಗಿದೆ. ಈ ಸಂಪುಟದಲ್ಲಿ 'ಸಕಲ ಪುರಾತನರ ವಚನ'ಗಳ ಕಟ್ಟಿನಲ್ಲಿರುವ ಪಾಠಗಳಿಗೆ ಪ್ರಥಮ ಪ್ರಾಶಸ್ತ್ಯವನ್ನು ನೀಡಲಾಗಿದ್ದು, ಪ್ರಾಚೀನ ಸಂಕಲನ–ಸಂಪಾದನ ಕೃತಿಗಳಲ್ಲಿಯ ಪಾಠಗಳಿಗೆ ನಂತರದ ಸ್ಥಾನ ಕೊಡಲಾಗಿದೆ. ಒಂದು ವಚನ ಕೇವಲ ಸಂಕಲನ, ಸಂಪಾದನಗಳಲ್ಲಿ ಮಾತ್ರ ದೊರೆಯುತ್ತಿದ್ದರೆ, ಆ ಹಿನ್ನೆಲೆಯಲ್ಲಿಯೇ ಪಾಠವನ್ನು ಪರಿಷ್ಕರಿಸಲಾಗಿದೆ ಮತ್ತು ಪ್ರಕ್ಷಿಪ್ತವಾಗಿರಬಹುದಾದ ವಚನಗಳನ್ನು ಕೈಬಿಡಲಾಗಿದೆ.

ಬಿಬ್ಬಿಬಾಚಯ್ಯ ಮತ್ತು ಮನುಮುನಿ ಗುಮ್ಮಟದೇವರ ವಚನಗಳು ಮೂಲದಲ್ಲಿ 'ಸ್ಥಲ'ಗಳಿಗನುಗುಣವಾಗಿ ಇರುವುದರಿಂದ, ಅವುಗಳನ್ನು ಆ ಕ್ರಮದಲ್ಲಿಯೇ ಉಳಿಸಿಕೊಂಡು, ಉಳಿದ ೩೨ ಜನ ವಚನಕಾರರ ವಚನಗಳನ್ನು ಪಠ್ಯದಲ್ಲಿ ಅಕಾರಾದಿ ಯಾಗಿ ಜೋಡಿಸಲಾಗಿದೆ. ಉಪಯುಕ್ತತೆಯ ದೃಷ್ಟಿಯಿಂದ, ಅನುಬಂಧದಲ್ಲಿ 'ಸ್ಥಲ'ಗಳಿ ಗನುಗುಣವಾಗಿರುವ ಬಿಬ್ಬಿ ಬಾಚಯ್ಯ ಮತ್ತು ಮನುಮುನಿ ಗುಮ್ಮಟದೇವರ ವಚನಗಳ ಅಕಾರಾದಿಯನ್ನೂ ಎಲ್ಲ ವಚನಗಳ ಕಠಿಣಪದಕೋಶ, ಆಕರಸೂಚಿಗಳನ್ನೂ ಜೋಡಿಸಲಾಗಿದೆ.

ಈ ಸಂಪುಟದ ವಚನಗಳ 'ಪರಿಷ್ಕರಣ ಕಾರ್ಯ'ದಲ್ಲಿ ಎದುರಾದ ಸಮಸ್ಯೆಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ನೋಡಬಹುದು :

ಒಂದು ವಚನದ ಆರಂಭ ಬೇರೆ ಬೇರೆ ಆಕರಗಳಲ್ಲಿ ಬೇರೆ ಬೇರೆ ರೂಪಗಳಿಂದ ಲಭಿಸುತ್ತಿದ್ದು, ಅಕಾರಾದಿ ಜೋಡಿಸುವಾಗ ಇವು ಪ್ರತ್ಯೇಕ ವಚನಗಳೆಂಬ ಭಾವನೆಯನ್ನು

ಹುಟ್ಟಿಸುತ್ತವೆ. 'ಶಿವಶರಣರ ಬರವ ಕಂಡು' ಎಂಬ ಮೈದುನ ರಾಮಯ್ಯನ ವಚನ 'ಗಣಂಗಳ ಬರವ ಕಂಡು' ಎಂದೂ 'ವೇಷಮಾತಿನ ಬಿನ್ನಾಣಿಗಳಿಗೆ', 'ತನುವಳಿಯಿತ್ತು ಬಯಕೆ ಸವೆಯಿತ್ತು', 'ತಥ್ಯವುಳ್ಳವಂಗೆ ತತ್ಪದ ಮಾತ ನುಡಿದು ಹೊರಲೇಕೆ', 'ಅರಿವನರಿವನ್ನಕ್ಕ ಅರ್ಚನೆ ಬೇಕು', 'ಜ್ಞಾತೃಚಕ್ಷುವಿನಿಂದ ಜಗದ ರೂಪ ಕಾಬಲ್ಲಿ', 'ಕಂಬಳಿಯಲ್ಲಿ ಕೂಳ ಕಟ್ಟಿ ಕೂದಲ ಶೋಧಿಸಬಹುದೆ ಅಯ್ಯಾ', 'ತಾವು ಸತ್ಯರೆಂದು ನುಡಿವುದೆ ವ್ರತ', 'ಹುಳ್ಳಿಯ ಹಗುರದಿಂದ ಹಳ್ಳವ ಹಾಯಬೇಕು', 'ಹಳುವಿನೊಳಗಣ ದಳ್ಳುರಿ', ಎಂಬ ಮೋಳಿಗೆ ಮಾರಯ್ಯನ ವಚನಗಳು ಕ್ರಮವಾಗಿ 'ದೇಶ ಮಾತಿನ........', 'ಭಾವವಳಿಯಿತ್ತು ಬಯಕೆ.......', 'ಮಿಥ್ಯವುಳ್ಳವಂಗೆ ತತ್ಪದ......', 'ಅನುವನರಿವನ್ನಕ್ಕ ಅರ್ಚನೆ......', 'ಕರ್ಮಚಕ್ಷುವಿನಿಂದ..........', 'ಕುರುಳಲ್ಲಿ ಕೂಳ.......', 'ನಾವು ಸತ್ಯರೆಂದು.....', 'ಹೊಳೆಯ ಹಗುರದಿಂದ........', 'ಹುಳ್ಳಿಯೊಳಗಣ ದಳ್ಳುರಿ......' ಎಂದೂ ಆರಂಭವಾಗುತ್ತವೆ. ಇದರಿಂದ ಇವುಗಳನ್ನು ಪ್ರತ್ಯೇಕ ವಚನಗಳೆಂದು ಪರಿಗಣಿಸುವ ಸಂಭವವಿರುತ್ತದೆ.

ಒಂದು ವಚನ ಕೆಲವು ಆಕರಗಳಲ್ಲಿ ಸಂಬೋಧನರೂಪದಿಂದ ಆರಂಭವಾದರೆ, ಇನ್ನು ಹಲವು ಆಕರಗಳಲ್ಲಿ ಸಂಬೋಧನರೂಪವಿಲ್ಲದೆ ಪ್ರಾರಂಭವಾಗುತ್ತದೆ. ಇದರಿಂದ ಅಕಾರಾದಿಯಲ್ಲಿ ಇವೆರಡೂ ಭಿನ್ನವಚನಗಳಾಗಿ ಸೇರಿಕೊಳ್ಳುತ್ತವೆ. 'ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯಾ......', 'ನಿರಾಳ ನಿರ್ಮಾಯ ಶಿವನೆ......', 'ಸದಾಚಾರವೆಂದಡೆ ಗುರುಲಿಂಗಜಂಗಮದಾಚರಣೆ' ಎಂಬ ಮಡಿವಾಳ ಮಾಚಯ್ಯನ ವಚನಗಳು 'ಅಯ್ಯಾ ಎನ್ನ ಅಷ್ಟವಿಧಾರ್ಚನೆ.....', 'ಎಲೆ ನಿರಾಳ ನಿರ್ಮಾಯ.......', 'ಅಯ್ಯಾ ಸದಾಚಾರವೆಂದಡೆ.......' ಎಂದು ಆರಂಭವಾಗಿರುತ್ತವೆ. ಇದರಿಂದಾಗಿ ಇವು ಸ್ವತಂತ್ರ ವಚನಗಳೆಂಬ ಭ್ರಾಂತಿಯನ್ನು ಹುಟ್ಟಿಸುತ್ತವೆ.

ಕೆಲವು ವಚನಗಳ ಮೊದಲೆರಡು ಸಾಲುಗಳು ಮಾತ್ರ ಭಿನ್ನವಾಗಿದ್ದು, ಉಳಿದ ಸಾಲುಗಳು ಏಕರೂಪದಲ್ಲಿ ದೊರೆಯುತ್ತವೆ. ಇದರಿಂದ ಇವು ಪ್ರತ್ಯೇಕ ವಚನಗಳೆಂಬ ಭಾವನೆ ಉಂಟಾಗುತ್ತದೆ. ಉದಾ :

ಉಕ್ಕುವ ಬೆಣ್ಣೆಯ ಒಲೆಯ ಮೇಲಿರಿಸಿ,
ಅಳಲುತ್ತ ಬಳಲುತ್ತಲಿರ್ದಾರಯ್ಯಾ.

ಎಂಬ ಮಾರೇಶ್ವರೊಡೆಯರ ವಚನದ ಆರಂಭದ ಸಾಲುಗಳು ಬೇರೆ ಪ್ರತಿಗಳಲ್ಲಿ

ಸತ್ಯದ ಹಿರಿಯರ ಕತ್ತಲೆ ಕಚ್ಚಿ,
ಹುತ್ತವನೇರುತ್ತದೈದಾರೆಯಲ್ಲಾ,

ಎಂದೂ ಭಿನ್ನವಾಗಿದ್ದು, ತರುವಾಯದ ಸಾಲುಗಳು ಅಭಿನ್ನವಾಗಿರುವುದನ್ನು ಗಮನಿಸಬೇಕು. ಇಂಥ ಸನ್ನಿವೇಶದಲ್ಲಿ ವಚನಗಳನ್ನು ಅಕಾರಾದಿಯಾಗಿ ಹೊಂದಿಸುವಾಗ ಪುನರುಕ್ತಿ ತೀರ ಸಹಜವಾಗಿ ಆಗುತ್ತದೆ. ಹೀಗಾಗದಂತೆ ಎಚ್ಚರವಹಿಸುವುದು ತುಂಬ ಅಗತ್ಯ.

ವಚನಾರಂಭದಲ್ಲಿ ಕಂಡುಬರುವ 'ಅಕ್ಷರಪಲ್ಲಟಕ್ರಿಯೆ'ಯಿಂದಲೂ ಅಕಾರಾದಿ ಜೋಡಿಸುವಾಗ ವಚನಗಳು ಬೇರೆ ಬೇರೆಯಾಗಿ ನಿಲ್ಲುತ್ತವೆ. 'ಸರದೊಳಗೆ ಸರಗಟ್ಟಿ,ಸರ ಹರಿದವ ನಾನಯ್ಯಾ' ಎಂಬ ಬಹುರೂಪಿ ಚೌಡಯ್ಯನ ಈ ವಚನ ಅಕ್ಷರಪಲ್ಲಟದಿಂದ 'ರಸದೊಳಗೆ ರಸಘಟ್ಟಿ, ರಸ ಹರಿದವ ನಾನಯ್ಯಾ' ಎಂಬ ರೂಪದಲ್ಲಿ ಸಿಗುವುದನ್ನು ಇಲ್ಲಿ ಗಮನಿಸಬಹುದಾಗಿದೆ.

'ಅಕ್ಷರಪಲ್ಲಟ'ದಂತೆ 'ಪದಪಲ್ಲಟ'ವೂ ವಚನಗಳ ಆರಂಭದಲ್ಲಿ ಕಾಣಸಿಗುತ್ತಿದ್ದು, ವಚನಗಳ ಪುನರುಕ್ತಿಗೆ ಆಸ್ಪದ ಕಲ್ಪಿಸಿಕೊಡುತ್ತದೆ. 'ವೃಕ್ಷ ಬೀಜವ ನುಂಗಿತ್ತೊ, ಬೀಜ ವೃಕ್ಷವ ನುಂಗಿತ್ತೊ ಎಂದರಿದಾಗಲೆ ಭಕ್ತಿಸ್ಥಲ' ಎಂಬ ಮೋಳಿಗೆ ಮಾರಯ್ಯನ ವಚನ, ಪದಪಲ್ಲಟದ ಮೂಲಕ 'ಬೀಜ ವೃಕ್ಷವ ನುಂಗಿತ್ತೊ, ವೃಕ್ಷ ಬೀಜವ ನುಂಗಿತ್ತೊ' ಎಂದಾಗಿರುವುದನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

ವಚನಾರಂಭದ ಮೊದಲನೆಯ ಸಾಲು ಎರಡನೆಯ ಸಾಲಾಗಿಯೂ, ಎರಡನೆಯ ಸಾಲು ಮೊದಲನೆಯ ಸಾಲಾಗಿಯೂ ಪಲ್ಲಟಗೊಂಡಿರುತ್ತವೆ. ಈ 'ಪಾದರೂಪದ ಪಲ್ಲಟ' ಕ್ರಿಯೆಯಿಂದ ವಚನಗಳು ಅಕಾರಾದಿಯಲ್ಲಿ ಭಿನ್ನವಾಗಿ ನಿಲ್ಲುತ್ತವೆ.

ಮಧುರದ ಗುಣವ ಇರುವೆ ಬಲ್ಲುದು,
ವಾಯುವಿನ ಗುಣವ ಸರ್ಪ ಬಲ್ಲುದು.

ಎಂಬ ಮಡಿವಾಳ ಮಾಚಿದೇವನ ಈ ವಚನ, 'ಪಾದಪಲ್ಲಟ'ದಿಂದ

ವಾಯುವಿನ ಗುಣವ ಸರ್ಪ ಬಲ್ಲುದು,
ಮಧುರದ ಗುಮವ ಇರುವೆ ಬಲ್ಲುದು.

ಎಂಬ ರೂಪದಲ್ಲಿಯೂ ಲಭಿಸುತ್ತದೆ. ಹೀಗೆ ವಚನಾರಂಭದ ಪಲ್ಲಟಕ್ರಿಯೆ, ಅಕ್ಷರದಿಂದ ಪಾದದ ವರೆಗೂ ಹಬ್ಬಿರುತ್ತದೆ.

'ಪ್ರಾಣಲಿಂಗಿಯ ಯೋಗಸಂಬಂಧವೆಂತುಂಟೆಂದಡೆ' ಎಂಬ ಮೋಳಿಗೆ ಮಾರಯ್ಯನ ವಚನದ ಆರಂಭದ ಈ ಸಾಲು, ಕೆಲವು ಆಕರಗಳಲ್ಲಿ ಲೋಪ ಹೊಂದಿ, ವಚನ 'ಫಲರಸ ವರುಣನ ಕಿರಣ ಕೊಂಡಂತಿರಬೇಕು' ಎಂಬ ಎರಡನೆಯ ಸಾಲಿನಿಂದ ಪ್ರಾರಂಭಗೊಳ್ಳುತ್ತದೆ. ಇದರಂತೆ ಮಡಿವಾಳ ಮಾಚಿದೇವನ 'ಅಷ್ಟಾವರಣ ಪಂಚಾ ಚಾರವುಳ್ಳ ಸದ್ಭಕ್ತರ ಉದರದಲ್ಲಿ ಜನಿಸಿ', 'ಶರಣಂಗೆ ಕಟ್ಟಿದಿರ ಕರ್ಪೂರ ಜ್ಯೋತಿಯಂತೆ', 'ತನ್ನ ತಾನರಿದ ಮಹಾಜ್ಞಾನಿ ಶರಣನು ಚರಿಸುವ ಕ್ರಮವೆಂತೆಂದಡೆ' ಎಂಬ ವಚನಗಳ ಆರಂಭದ ಈ ಸಾಲುಗಳು ಲೋಪಗೊಂಡು, ಕ್ರಮವಾಗಿ 'ಶಿವಭಕ್ತನಾಗಿದ್ದು ಭವಿಯ ಸಂಗವ ಮಾಡಿದ ದೇಹ ಪಾಪ', 'ಸದಾಚಾರ ಸಂಭ್ರಮ ಸೂತಕ ಪಾತಕ ಘೋಷಣೆಗಳು ಹುಟ್ಟದಂದು', 'ಸ್ಥೂಲವೆಂಬ ಕಂಥೆಯ ತೊಟ್ಟು, ಸೂಕ್ಷ್ಮವೆಂಬ ಟೊಪ್ಪರವನಿಕ್ಕಿ' ಎಂದು ಎರಡನೆಯ ಸಾಲಿನಿಂದ ಆರಂಭವಾಗಿರುತ್ತವೆ. ಈ 'ಲೋಪಕ್ರಿಯೆ' ಒಂದು ಸಾಲಿಗೆ ಮಾತ್ರ ಸೀಮಿತಗೊಳ್ಳದೆ, ಕೆಲವು ಸಲ ಎರಡು ಸಾಲಿನ ವರೆಗೂ ಕಾಲು ಚಾಚಿರುವುದು ಕಂಡುಬರುತ್ತದೆ. ಇದರಿಂದ ಅಕಾರಾದಿಯಲ್ಲಿ

ಇವೆಲ್ಲ ಬೇರೆ ಬೇರೆ ವಚನಗಳೆಂಬ ಕಲ್ಪನೆ ಮೂಡಿ, ವಚನಗಳು ಪುನರುಕ್ತಿಯಾಗುವ ಸಂಭವ ಅಧಿಕವಾಗಿರುತ್ತದೆ.

ಒಂದು ವಚನದ ಉತ್ತರಾರ್ಧ ಮಾತ್ರ ಪ್ರತ್ಯೇಕವಾಗಿ ನಿಂತು, ಅದು ಸ್ವತಂತ್ರ ವಚನದ ರೂಪ ಪಡೆದಿರುವುದನ್ನು ಗುರುತಿಸುವುದು ಇನ್ನೊಂದು ಬಗೆಯ ಕಠಿಣ ಕೆಲಸ. ಮಡಿವಾಳ ಮಾಚಿದೇವನ 'ಗೋಳಕ ಮೂಲಕ ಮುಕ್ತಕ ದಾರುಕ', 'ಉಂಬ ಕೂಳಿಗೆ ಉಪದೇಶವ ಮಾಡುವ ಚುಂಬಕರು ಹೆಚ್ಚಿ', 'ಅಯ್ಯಾ ಭಕ್ತ ಜಂಗಮದ ವಿವರವೆಂತೆಂದಡೆ', 'ಜೀವರು ಜೀವಿಸಿ ಜೀವನ್ಮುಕ್ತವೆಂತೆಂದರಿಯರು', 'ಇಂದ್ರಲೋಕದವರೆಲ್ಲರೂ ಸೂತಕಲಾ ಸಂಹಾರಿ ಬಸವಾ ಎಂದೆಂಬರು', 'ವಿಭೂತಿಯನಿಟ್ಟು ರುದ್ರಾಕ್ಷಿಯಂ ಧರಿಸಿ' ಎಂಬ ಅಖಂಡ ವಚನಗಳು ಒಡೆದು, ಅನುಕ್ರಮವಾಗಿ 'ಪೂರ್ವದ್ವಾರ ಪಶ್ಚಿಮದ್ವಾರ ಉತ್ತರದ್ವಾರ ದಕ್ಷಿಣದ್ವಾರ', 'ಕಂಬದ ಬೊಂಬೆಯ ಮಾಡಿ', 'ಮಹಾಘನ ಭಕ್ತ ಜಂಗಮದ ಸತ್ಯ ನಡೆ ನುಡಿಯ ವಿಚಾರವೆಂತೆಂದಡೆ', 'ಬಸವಣ್ಣನ ಮನ ಪರುಷ, ಬಸವಣ್ಣನ ನೋಟ ಪರುಷ', 'ಲಂಬೋದರ ಕುಂಭೋದರ ದಾರುಕ ರೇಣುಕ ಗೌರೀಸುತ ತಾಂಡವರೆಲ್ಲರೂ', 'ಕಸಗೊಂಡ ಭೂಮಿಯಲ್ಲಿ ಸಸಿ ಪಲ್ಲವಿಸುವುದೆ' ಎಂದು ಉತ್ತರಾರ್ಧದಿಂದ ಆರಂಭಗೊಂಡು, ಸ್ವತಂತ್ರವಚನಗಳಾಗಿ ಪರಿಣಮಿಸಿರುತ್ತವೆ. ಇದರಂತೆ ಮನುಮುನಿ ಗುಮ್ಮಟದೇವನ 'ಎನ್ನ ಮನದ ಮರವೆ ಭಿನ್ನವಾಗದು' ಎಂಬ ವಚನದ ಉತ್ತರಾರ್ಧವಾಗಿರುವ 'ವಿಷ ವಿಷಮ ವೇಧಿಸುವಲ್ಲಿ' ಎಂಬುದೂ ಸ್ವತಂತ್ರ ವಚನವಾಗಿ ಸಿಗುತ್ತದೆ. ಈ ರೀತಿ ಇಡಿಯಾದ ಒಂದು ವಚನ ಒಡೆದು, ಎರಡು ಸ್ವತಂತ್ರ ವಚನಗಳಾಗಿರುವುದಕ್ಕೆ ನೂರಾರು ಉದಾಹರಣೆಗಳು ಇಲ್ಲಿ ಸಿಗುತ್ತವೆ.

ವಿವಿಧ ಆಕರಗಳಲ್ಲಿ ದೊರೆಯುವ ಪ್ರತಿಯೊಬ್ಬ ವಚನಕಾರನ ಇಂಥ ವಚನಗಳನ್ನು ಜಾಗರೂಕತೆಯಿಂದ ಹಲವಾರು ಸಲ ಪರಿಶೀಲಿಸುವುದರಿಂದಲೂ ವಚನಗಳ ವಿವರವಾದ ಅಧ್ಯಯನದಿಂದಲೂ ಸ್ಮರಣಶಕ್ತಿಯ ಬಲದಿಂದಲೂ ಈ ಪುನರುಕ್ತಿದೋಷದ ಪ್ರಮಾಣವನ್ನು ಕಡಿಮೆಗೊಳಿಸಬಹುದಾಗಿದೆ. ಎಷ್ಟೇ ಎಚ್ಚರ ವಹಿಸಿದರೂ ಮೇಲಿನ ಕಾರಣಗಳಿಂದಾಗಿ ಈ ಸಂಪುಟದಲ್ಲಿಯ ಪ್ರಸಾದಿ ಭೋಗಣ್ಣ (ವ. ಸಂ. ೧೨–೨೧), ಪ್ರಸಾದಿ ಲೆಂಕಬಂಕಣ್ಣ (ವ. ಸಂ. ೧೧೫–೧೨೦), ಮಡಿವಾಳ ಮಾಚಿದೇವ (ವ. ಸಂ. ೫೭೧–೬೫೩, ೬೭೬–೬೯೯) ರ ಪುನರುಕ್ತ ವಚನಗಳಲ್ಲಿ ಒಂದನ್ನು ಕೈಬಿಡಲಾಗಿದೆ.

''ಜಾತಿಶೈವರು, ಅಜಾತಶೈವರೆಂದೆರಡು.....'' ಎಂದು ಪ್ರಾರಂಭವಾಗುವ 'ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯಾ' ಮುದ್ರಿಕೆಯ ವಚನವನ್ನು ಈವರೆಗೆ ಎಲ್ಲ ವಿದ್ವಾಂಸರು ಮಹಾದೇವಿಯಕ್ಕಗಳ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಆದರೆ ಸೂಕ್ಷ್ಮ ಪರಿಶೀಲನೆಯಿಂದಾಗಿ ಇದು 'ಮಹಾದೇವೀರಯ್ಯ'ನ ವಚನವೆಂದು ತಿಳಿದುಬರುತ್ತದೆ. 'ಮಹಾದೇವೀರಯ್ಯ' ಎಂಬ ಶೀರ್ಷಿಕೆಯನ್ನೇ 'ಮಹಾದೇವಿಯರ' ಎಂದು ಪ್ರಾಚೀನ ಲಿಪಿಕಾರರು ಭ್ರಮಿಸಿ, ಆಧುನಿಕ ವಿದ್ವಾಂಸರ ದಾರಿ ತಪ್ಪಿಸಿದ್ದಾರೆ. ಈ ಅಂಶ ನಮಗ

ತುಂಬ ತಡವಾಗಿ ಗೊತ್ತಾದ ಕಾರಣ ಈತನ ಲಭ್ಯವಿರುವ ಒಂದೇ ಒಂದು ವಚನವನ್ನು ಈ ಸಂಪುಟದಲ್ಲಿ ಸೇರಿಸಿಕೊಳ್ಳಲಾಗಿದೆ. ಇದರಿಂದಾಗಿ ಒಬ್ಬ ಹೊಸವಚನಕಾರ ಕನ್ನಡ ಸಾಹಿತ್ಯಕ್ಕೆ ಪ್ರವೇಶಿಸಿದಂತಾಗಿದೆ.

## ಕೃತಜ್ಞತೆ

'ಸಮಗ್ರ ವಚನಸಾಹಿತ್ಯದ ಜನಪ್ರಿಯ ಆವೃತ್ತಿ ಪ್ರಕಟನ ಯೋಜನೆ'ಯ ಅಂಗವಾಗಿ ಈ ವಚನಸಂಪುಟವನ್ನು ಸಿದ್ಧಗೊಳಿಸಿಕೊಡುವ ಅವಕಾಶವನ್ನು ನನಗೆ ಒದಗಿಸಿದ, ಉದ್ದಕ್ಕೂ ಉತ್ತೇಜನ ನೀಡಿದ ಸಂಪಾದಕ ಸಮಿತಿಯ ಸದಸ್ಯರಿಗೂ ಈ ಯೋಜನೆಯ ಸರ್ವಸಂಪುಟಗಳ ಪ್ರಧಾನಸಂಪಾದಕರಾಗಿ ಸೂಕ್ತಸಲಹೆ, ಉಪಯುಕ್ತ ಮಾಗದರ್ಶನ ನೀಡುವುದರ ಮೂಲಕ ಸಂಪುಟದ ಪರಿಷ್ಕರಣ ಕಾರ್ಯದಲ್ಲಿ ವ್ಯವಸ್ಥಿತವಾಗಿ ಮುನ್ನಡೆಸಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ಅನಂತ ಕೃತಜ್ಞತೆಗಳು. ಹಸ್ತಪ್ರತಿ ಭಾಂಡಾರದಲ್ಲಿರುವ ಹಸ್ತಪ್ರತಿಗಳನ್ನು ಪರಿಶೀಲಿಸುವಲ್ಲಿ ಸಹಕರಿಸಿದ ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಿಗೂ ಪರಿಷ್ಕರಣ ಕಾರ್ಯದಲ್ಲಿ ನೆರವು ನೀಡಿದ ಎಸ್. ಶಿವಣ್ಣ, ಎಸ್. ಉಮಾಪತಿ ಅವರಿಗೂ ವಿವಿಧ ಹಂತಗಳಲ್ಲಿ ಸಹಾಯಕರಾಗಿ ನಿಂತು ಕಾರ್ಯ ಮಾಡಿದ ವಾಯ್. ಎಂ. ಯಾಕೊಳ್ಳಿ, ವಿಜಯಶ್ರೀ ಹಿರೇಮಠ, ಬಸವರಾಜ ಬಿರಾದಾರ, ಜಿನದತ್ತ ಹಡಗಲಿ, ಎಫ್. ಟಿ. ಹಳ್ಳಿಕೇರಿ, ಬಿ. ವಿ. ಕೋರಿ ಮೊದಲಾದ ವಿದ್ಯಾರ್ಥಿಮಿತ್ರರಿಗೆ ವಂದನೆಗಳು.

-ಬಿ. ಆರ್. ಹಿರೇಮಠ

## ದ್ವಿತೀಯ ಆವೃತ್ತಿ

ಪ್ರಸ್ತುತ ವಚನ ಸಂಪುಟದ ಪ್ರಥಮ ಆವೃತ್ತಿಯಲ್ಲಿ ಉಳಿದುಕೊಂಡಿದ್ದ ಮುದ್ರಣ ದೋಷಗಳನ್ನು ತಿದ್ದಿ, ಸರಿಪಡಿಸಲಾಗಿದೆ. ಇದರೊಂದಿಗೆ ಇಲ್ಲಿಯ ಎಲ್ಲ ವಚನಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಅಪಪಾಠಗಳನ್ನು, ಅರ್ಥದೋಷಗಳನ್ನು ಪರಿಷ್ಕರಿಸಿ, ಶುದ್ಧಪಾಠಗಳನ್ನು ಇಟ್ಟುಕೊಳ್ಳಲಾಗಿದೆ. ಅನುಬಂಧದಲ್ಲಿಯ ವಚನಗಳನ್ನು ಆಯಾ ವಚನಕಾರರ ವಚನಗಳಲ್ಲಿ ಸೇರಿಸಲಾಗಿದೆ. ಹಲವಾರು ವಚನಗಳ ಚರಣ ವಿನ್ಯಾಸವನ್ನು ಮತ್ತೆ ಸರಿಪಡಿಸಲಾಗಿದೆ.

ತುಮಕೂರಿನ ಎಂ. ಚಂದ್ರಪ್ಪ ಅವರು ಸೂಚಿಸಿದ ಪುನರುಕ್ತಿ, ವಚನಗಳ ಸಾಮ್ಯ, ಅನ್ಯವಚನಕಾರರ ವಚನಗಳ ಸೇರ್ಪಡೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ, ಸಮರ್ಪಕ ಹಾಗೂ ನಿಜವೆನಿಸಿದವುಗಳನ್ನು ಮಾತ್ರ ಈ ಸಂಪುಟದಲ್ಲಿ ಅಳವಡಿಸಿಕೊಳ್ಳಲಾಗಿದೆ. ಬೆಂಗಳೂರಿನ ಎಸ್. ಶಿವಣ್ಣ ಅವರು ಸೂಚಿಸಿದ ಹೆಚ್ಚಿನ ವಚನಗಳನ್ನು ಪರಿಶೀಲಿಸಿ, ಸರಿಯಾದ ಮತ್ತು ಅಧಿಕೃತವಾದವುಗಳನ್ನು ಮಾತ್ರ ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಉಪಯುಕ್ತ ಹಾಗೂ ಮೌಲಿಕವಾದ ಮಾಹಿತಿಯನ್ನು, ಸೂಕ್ತ ಸಲಹೆಯನ್ನು ಒದಗಿಸಿದ ಎಂ. ಚಂದ್ರಪ್ಪ ಹಾಗೂ ಎಸ್. ಶಿವಣ್ಣ ಅವರಿಗೆ, ಸಂಸ್ಕೃತ ಶ್ಲೋಕಗಳನ್ನು

ಪರಿಷ್ಕರಿಸಿ ಉಪಕರಿಸಿದ ವಿದ್ವಾನ್ ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳಿಗೆ ಅನಂತ ಕೃತಜ್ಞತೆಗಳು. ಈ ಪರಿಷ್ಕೃತ ಸಂಪುಟವನ್ನು ಸಿದ್ಧಗೊಳಿಸಲು ಅವಕಾಶ ಕಲ್ಪಿಸಿಕೊಟ್ಟ ಸಂಪಾದಕ ಸಮಿತಿಯ ಸರ್ವಸದಸ್ಯರಿಗೂ ಈ ಯೋಜನೆಯ ಸಮಗ್ರ ಸಂಪುಟಗಳ ಪ್ರಧಾನ ಸಂಪಾದಕರಾಗಿ ಮಾರ್ಗದರ್ಶನ ನೀಡಿದ ಡಾ. ಎಂ. ಎಂ. ಕಲಬುರ್ಗಿ ಅವರಿಗೂ ತುಂಬು ಹೃದಯದ ಕೃತಜ್ಞತೆಗಳು.

■■

-ಬಿ. ಆರ್. ಹಿರೇಮಠ

✻

# ಪರಿವಿಡಿ


ಮುನ್ನುಡಿ

ಬಿನ್ನಹ

ನಿರ್ದೇಶಕರ ಮಾತು

ಪ್ರಕಾಶಕರ ಮಾತು

ಸಂಪಾದಕೀಯ

ಪ್ರಸ್ತಾವನೆ

೧. ಪಂಡಿತಾರಾಧ್ಯರ ವಚನ ೧

೨. ಪುರದ ನಾಗಣ್ಣನ ವಚನ ೨

೩. ಪ್ರಸಾದಿ ಭೋಗಣ್ಣನ ವಚನ ೮

೪. ಪ್ರಸಾದಿ ಲೆಂಕಬಂಕಣ್ಣನ ವಚನ ೪೯

೫. ಬಹುರೂಪಿ ಚೌಡಯ್ಯನ ವಚನ ೫೬

೬. ಬಳ್ಳೇಶ ಮಲ್ಲಯ್ಯನ ವಚನ ೭೬

೭. ಬಾಚಿಕಾಯಕದ ಬಸವಣ್ಣನ ವಚನ ೮೦

೮. ಬಾಲಬೊಮ್ಮಣ್ಣನ ವಚನ ೯೫

೯. ಬಾಲ ಸಂಗಣ್ಣನ ವಚನ ೯೯

೧೦. ಬಾಹೂರ ಬೊಮ್ಮಣ್ಣನ ವಚನ ೧೦೩

೧೧. ಬಿಬ್ಬಿ ಬಾಚಯ್ಯನ ವಚನ ೧೧೮

೧೨. ಬೊಕ್ಕಸದ ಚಿಕ್ಕಣ್ಣನ ವಚನ ೧೪೦

೧೩. ಭರಿತಾರ್ಪಣದ ಚೆನ್ನಬಸವಣ್ಣನ ವಚನ ೧೪೪

೧೪. ಭಿಕಾರಿ ಭೀಮಯ್ಯನ ವಚನ ೧೫೧

೧೫. ಭೋಗಣ್ಣನ ವಚನ ೧೫೨

೧೬. ಮಡಿವಾಳ ಮಾಚಿದೇವರ ವಚನ ೧೬೫

೧೭. ಮಡಿವಾಳ ಮಾಚಿದೇವರ
ಸಮಯಾಚಾರದ ಮಲ್ಲಿಕಾರ್ಜುನನ ವಚನ ೨೮೮
೧೮. ಮಧುವಯ್ಯನ ವಚನ ೨೯೧
೧೯. ಮನಸಂದ ಮಾರಿತಂದೆಯ ವಚನ ೩೧೩
೨೦. ಮನುಮುನಿ ಗುಮ್ಮಟದೇವನ ವಚನ ೩೩೭
೨೧. ಮರುಳಶಂಕರದೇವರ ವಚನ ೩೬೯
೨೨. ಮರುಳಸಿದ್ಧೇಶ್ವರ ವಚನ ೩೯೦
೨೩. ಮಲಹರಕಾಯಕದ ಚಿಕ್ಕದೇವಯ್ಯನ ವಚನ ೩೯೧
೨೪. ಮಲ್ಲಿಕಾರ್ಜುನ ಪಂಡಿತಾರಾಧ್ಯರ ವಚನ ೩೯೭
೨೫. ಮಹಾದೇವೀರಯ್ಯನ ವಚನ ೪೦೨
೨೫. ಮಳುಬಾವಿಯ ಸೋಮಣ್ಣನ ವಚನ ೪೦೩
೨೬. ಮಾದಾರ ಚೆನ್ನಯ್ಯನ ವಚನ ೪೦೪
೨೭. ಮಾದಾರ ಧೂಳಯ್ಯನ ವಚನ ೪೦೯
೨೮. ಮಾರುಡಿಗೆಯ ನಾಚಯ್ಯನ ವಚನ ೪೪೩
೨೯. ಮಾರೇಶ್ವರೊಡೆಯರ ವಚನ ೪೪೪
೩೦. ಮೆರೆಮಿಂಡಯ್ಯನ ವಚನ ೪೪೮
೩೧. ಮೇದರ ಕೇತಯ್ಯನ ವಚನ ೪೭೫
೩೨. ಮೈದುನ ರಾಮಯ್ಯನ ವಚನ ೪೮೦
೩೩. ಮೋಳಿಗೆ ಮಾರಯ್ಯನ ವಚನ ೪೮೨

**ಅನುಬಂಧ**

ಕಠಿಣ ಪದಕೋಶ ೭೨೧
ವಚನಗಳ ಅಕಾರಾದಿ ೭೩೮
ಆಕರ ಗ್ರಂಥಗಳು ೭೪೨

## ಪಂಡಿತಾರಾಧ್ಯರ ವಚನ

೧

ಇಲ್ಲದ ಕುತ್ತವ ಕೊಂಡು ಬಲ್ಲವರ ಬಾಯ ಹೊಗಹೋದಡೆ
ಆ ಬಲ್ಲ ಬಲ್ಲವರೆಲ್ಲ ಆ ಬಲ್ಲೆಯಲ್ಲಿ ಅಲ್ಲತ್ತಗೊಳುತ್ತಿದ್ದರು.
ಇದೆಲ್ಲಿಯ ಕುತ್ತವೆಂದು ತಿಳಿದು ವಿಚಾರಿಸಲು
ಅದಲ್ಲೇ ಬಯಲಾಯಿತ್ತು, ಗುರುಸಿದ್ಧಮಲ್ಲಾ. ||೧||

■ ■

## ಪುರದ ನಾಗಣ್ಣನ ವಚನ

೧

ಅನಿರ್ವಾಚ್ಯವೆ ವಾಚ್ಯವಾಗಿ ಭಾವಿಸಲಿಲ್ಲದ ಬಯಲು.
ಅಗಮ್ಯವೆ ಮನವಾಗಿ ಆನಂದದೊಳಿಪ್ಪ ನೋಡಾ
ಮಹಾಮಹಿಮ ಅಮರಗುಂಡದ ಮಲ್ಲಿಕಾರ್ಜುನ
ನಿರಾಳ ನಿಃಶೂನ್ಯವೆ ತನುವಾಗಿ. ||೧||

೨

ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಬಂದು
ಗಂಧಪದಾರ್ಥವ ಕೈಕೊಂಡನಯ್ಯಾ ಬಸವಣ್ಣ.
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಬಂದು
ರುಚಿಪದಾರ್ಥವ ಕೈಕೊಂಡನಯ್ಯಾ ಚನ್ನಬಸವಣ್ಣ.
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಬಂದು
ರೂಪಪದಾರ್ಥವ ಕೈಕೊಂಡನಯ್ಯಾ ಘಟ್ಟಿವಾಳ ಮುದ್ದಯ್ಯ.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಬಂದು
ಸ್ಪರುಶನಪದಾರ್ಥ ಕೈಕೊಂಡನಯ್ಯಾ ಸಿದ್ಧರಾಮಯ್ಯ.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಬಂದು
ಶಬ್ದಪದಾರ್ಥವ ಕೈಕೊಂಡನಯ್ಯಾ ಮರುಳಶಂಕರದೇವ.

ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಬಂದು
ಸಕಲಪದಾರ್ಥವ ಕೈಕೊಂಡನಯ್ಯಾ ಪ್ರಭುದೇವ.
ನೋಟದಲ್ಲಿ ಅನುಮಿಷ, ಕೂಟದಲ್ಲಿ ಅಜಗಣ್ಣ
ಭಾವದಲ್ಲಿ ಬಾಚಿರಾಜಯ್ಯ, ಮನ ದೃಢವೆ ಮೋಳಿಗೆ ಮಾರಯ್ಯ.
ಡೋಹರ ಕಕ್ಕಯ್ಯ ಕಿನ್ನರಿ ಬ್ರಹ್ಮಯ್ಯ ಸೊಡ್ಡಳ ಬಾಚರಸ ಹಡಪದಪ್ಪಣ್ಣ
ಮಡಿವಾಳ ಮಾಚಯ್ಯ ಮುಖ್ಯವಾದ ಅಸಂಖ್ಯಾತ ಮಹಾಪ್ರಮಥಗಣಂಗಳ
ಶ್ರೀಪಾದವನರ್ಚಿಸಿ ಪೂಜಿಸಿ ಸುಖಿಯಾದೆನಯ್ಯಾ
ಅಮರಗುಂಡದ ಮಲ್ಲಿಕಾರ್ಜುನ. ॥ ೨ ॥

೩

ಕಾಯದ ಕಣ್ದೆರೆಯಿಂದುದಯವಾದ ಧಾವತಿ ಎರಡು ನೋಡಯ್ಯಾ:
ಅಯ್ಯಾ ಭ್ರಾಂತಿಯತ್ತಲೊಂದೆಳವುತ್ತಲದೆ
ದೇವಾ ನಿಮ್ಮತ್ತಲೊಂದೆಳವುತ್ತಲದೆ.
ಒಂದರ ಸಹಜವನೊಂದು ಗೆಲಲರಿಯದು.
ಮುಂದೆ ಸತ್ಪಥಕ್ಕೆಂತಡಿಯಿಡುವೆನಯ್ಯಾ ನಾನು?
ಕಾಲಚಕ್ರದಲ್ಲಿ ಹುಟ್ಟಿ, ಕರ್ಮಚಕ್ರದಲ್ಲಿ ಬೆಳೆದು
ಕಲ್ಪಿತದಿಂದವೆ ದಿನಂಗಳು ಸವೆವುತ್ತವೆಯಯ್ಯಾ.
ತಲೆಯೆರಡರ ಪಕ್ಷಿ ವಿಷ ನಿರ್ವಿಷವ ಮೆಲಿದಂತಾಯಿತ್ತೆನಗಯ್ಯಾ.
ಅಂದಂದಿನರಿವು ಅಂದಂದಿನ ಮರವೆಗೆ ಸರಿಯಯ್ಯಾ.
ತಂದೆ ಈ ದಂದುಗವ ಮಾಣಿಸಿ
ನಿಮ್ಮ ನಿಜಾನಂದಭಕ್ತಿಯೆನಗೆ ಕರುಣಿಸಯ್ಯಾ
ಅಮರಗುಂಡದ ಮಲ್ಲಿಕಾರ್ಜುನಾ. ॥ ೩ ॥

೪

ಕಾಯವೆಂಬ ಪಟ್ಟಣಕ್ಕೆ ಸತ್ಯವೆಂಬ ಕೋಟೆಯನಿಕ್ಕಿ
ಧರ್ಮಾರ್ಥಕಾಮಮೋಕ್ಷಂಗಳೆಂಬುಕ್ಕಡದವರೆಚ್ಚತ್ತಿರಿ
ಭಯ ಘನ ಭಯ ಘನ.
ಅಜ್ಞಾನವೆಂಬ ತೀವ್ರ ಕತ್ತಲೆ ಕರ ಘನಕರ ಘನ.
ಒಂಬತ್ತು ಬಾಗಿಲ ಜತನವ ಮಾಡಿ
ಜ್ಞಾನಜ್ಯೋತಿಯ ಪ್ರಬಲವ ಮಾಡಿ ಪ್ರಬಲವ ಮಾಡಿ
ಐವರು ಕಳ್ಳರು ಕನ್ನವ ಕೊರೆವುತ್ತೈದಾರೆ.
ಸುಯಿಧಾನವಾಗಿರಿ ಜೀವಧನವ ಜತನವ ಮಾಡಿ ಜತನವ ಮಾಡಿ

ಬಳಿಕಿಲ್ಲ ಬಳಿಕಿಲ್ಲ.
ಆ ಪಟ್ಟಣದ ಮೂಲಸ್ಥಾನದ ಶಿಖರದ ಮೇಲಣ
ಬಾಗಿಲ ತೆರದು ನಡೆವುದೆ ಸುಪಥ, ಸ್ವಯಂಭುನಾಥನಲ್ಲಿರೆ.
ಇದನರಿತು ಮಹಾಮಹಿಮ ಅಮರಗುಂಡದ ಮಲ್ಲಿಕಾರ್ಜುನದೇವರಲ್ಲಿ
ಎಚ್ಚರಿಕೆಗುಂದದಿರಿ, ಎಚ್ಚರಿಕೆಗುಂದನಿರಿ. ॥ ೪ ॥

೬

ಗುರುಪಾದೋದಕ ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು.
ಧರಿಸಿದಾತಂಗೆ ಅಷ್ಟಾಷಷ್ಟಿತೀರ್ಥಂಗಳು
ತನ್ನೊಳಡಗಿಹವಯ್ಯಾ.
ಅದೆಂತೆಂದಡೆ:
'ಅಂಗುಷ್ಠಾಗ್ರೇ ಅಷ್ಟಾಷಷ್ಟಿತೀರ್ಥಂ ನಿತ್ಯಂ ವಸಂತಿ ವೈ'
ಎಂದುದಾಗಿ, ಶ್ರೀಗುರುವಿನ ಅಂಗುಷ್ಠಾಗ್ರದಲ್ಲಿ
ಸಕಲತೀರ್ಥಂಗಳಿರ್ಪವು.
ಶ್ರೀಗುರುವಿನ ಪಾದೋದಕ ಪರಮಪಾವನವೆಂದರಿದು
ಗುರುಪಾದೋದಕವನೆ ಧರಿಸುವುದು.
ಇದು ಕಾರಣ ಗುರುಪಾದೋದಕದಿಂದವೆ
ಪರಮಪದವಪ್ಪುದು, ಅಮರಗುಂಡದ ಮಲ್ಲಿಕಾರ್ಜುನಾ. ॥ ೫ ॥

೭

ನಾನಾ ಯೋನಿಯಲ್ಲಿ ಬಂದು ಫಲವೇನಯ್ಯಾ
ಪುಣ್ಯಪಾಪವೆಂದರಿಯದನ್ನಕ್ಕ.
ಪುಣ್ಯಪಾಪವೆಂದರಿದಲ್ಲಿ ಫಲವೇನಯ್ಯಾ
ಶಿವಭಕ್ತನಾಗದನ್ನಕ್ಕ.
ಶಿವಭಕ್ತನಾದಲ್ಲಿ ಫಲವೇನಯ್ಯಾ
ಲಿಂಗಜಂಗಮವೆಂದರಿಯದನ್ನಕ್ಕ.
ಲಿಂಗಜಂಗಮವೆಂದರಿದಲ್ಲಿ ಫಲವೇನಯ್ಯಾ
ಭವಿಯ ಕೊಳುಕೊಡೆ ಹಿಂಗದನ್ನಕ್ಕ.
ಭವಿಯ ಕೊಳುಕೊಡೆ ಹಿಂಗಿದಲ್ಲಿ ಫಲವೇನಯ್ಯಾ
ಆಶೆಯಾಮಿಷವಳಿಯದನ್ನಕ್ಕ.
ಆಶೆಯಾಮಿಷಂಗಳಳಿದಲ್ಲಿ ಫಲವೇನಯ್ಯಾ

ಸಮತೆ ನೆಲೆಗೊಳ್ಳದನ್ನಕ್ಕ.
ಸಮತೆ ನೆಲೆಗೊಂಡಲ್ಲಿ ಫಲವೇನಯ್ಯಾ
ಮೂರುಬಟ್ಟೆಯನರಿಯದನ್ನಕ್ಕ.
ಮೂರುಬಟ್ಟೆಯನರಿದಲ್ಲಿ ಫಲವೇನಯ್ಯಾ
ಅಷ್ಟಮದಂಗಳು ಬೆಂದು ನಷ್ಟವಾಗದನ್ನಕ್ಕ.
ಅಷ್ಟಮದಂಗಳು ಬೆಂದು ನಷ್ಟವಾದಲ್ಲಿ ಫಲವೇನಯ್ಯಾ
ಅಮರಗುಂಡದ ಮಲ್ಲಿಕಾರ್ಜುನದೇವರಲ್ಲಿ
ಶಿಖಿಕರ್ಪುರದಂತೆ ಅಡಗದನ್ನಕ್ಕ. ||೬||

೮

ನೆನೆವ ಮನಕ್ಕೆ ಮಣ್ಣನೆ ತೋರಿದೆ.
ನೋಡುವ ಕಣ್ಣಿಗೆ ಹೆಣ್ಣನೆ ತೋರಿದೆ.
ಪೂಜಿಸುವ ಕೈಗೆ ಹೊನ್ನನೆ ತೋರಿದೆ.
ಇಂತೀ ತ್ರಿವಿಧವನೆ ತೋರಿ ಕೊಟ್ಟು
ಮರಹನಿಕ್ಕಿದೆಯಯ್ಯಾ.
ಅಮರಗುಂಡದ ಮಲ್ಲಿಕಾರ್ಜುನಯ್ಯಾ
ನೀ ಮಾಡಿದ ಬಿನ್ನಾಣಕ್ಕೆ ನಾನು ಬೆರಗಾದೆನು. ||೭||

೯

ಭಕ್ತನೆಂಬ ಭೂಮಿಯಲ್ಲಿ
ಗುರೂಪದೇಶವೆಂಬ ನೇಗಲಿಯಂ ಪಿಡಿದು,
ಅಂತಃಕರಣ ಚತುಷ್ಟಯವೆಂಬ ಸೆಳೆಗೋಲಂ ಪಿಡಿದು,
ಉತ್ತರ ಕ್ರಿಯೆಯೆಂಬ ಹಂಸನೇರಿ,
ದುಷ್ಕರ್ಮದ ಕಾಟದ ಕುಲವಂ ಕಡಿದು,
ಅರಿವೆಂಬ ರವಿಕಿರಣದಲ್ಲಿ ಒಣಗಿಸಿ,
ಜ್ಞಾನವೆಂಬ ಬೆಂಕಿಯಲ್ಲಿ ಸುಟ್ಟುರುಹಿ,
ಆ ಹೊಲನ ಹಸನವ ಮಾಡಿ,
ಅದಕ್ಕೆ ಬಿತ್ತುವ ಭೇದವೆಂತೆಂದಡೆ:
ಈಡಾ ಪಿಂಗಳ ಸುಷುಮ್ನವೆಂಬ ನಾಳವಂ ಜೋಡಿಸಿ,
ತ್ರಿಕೂಟಸ್ಥಾನವೆಂಬ ಬಟ್ಟಲಂ ಬಲಿದು,
ಕುಂಡಲಿಯೆಂಬ ಹಗ್ಗವಂ ಬಿಗಿದು,
ಹಂಸನೆಂಬ ಎರಡೆತ್ತನ್ನೇ ಹೂಡಿ,

ಶಾಂತಿ ನಿರ್ಮಲವೆಂಬ ಮಳೆಗಾಲದ ಮೇಘಮಂ ಸುರಿದು,
ಆ ಬೀಜ ಪಸಗಿಸಿ, ಪ್ರಜ್ವಲಿಸಿ ಫಲಕ್ಕೆ ಬಂದು ನಿಂತಿರಲು,
ಅದಕ್ಕೆ ಒತ್ತುವ ಕಸ ಆವಾವೆಂದಡೆ:
ಅಷ್ಟಮದದ ಹಲವಂ ಕಿತ್ತು, ಸಪ್ತವ್ಯಸನದ ಸೆದೆಯಂ ಕಳೆದು,
ಮನೋರಥವೆಂಬ ಮಂಚಿಗೆಯನ್ನೇರಿ,
ಬಾಲಚಂದ್ರನೆಂಬ ಕವಣೆಯಂ ಪಿಡಿದು,
ಪ್ರಪಂಚವೆಂಬ ಹಕ್ಕಿಯಂ ಹೊಡೆದು,
ಆ ಭತ್ತ ಬಲಿದು ನಿಂದಿರಲು,
ಅದನ್ನು ಕೊಯ್ಯುವ ಭೇದವೆಂತೆಂದಡೆ:
ಇಷ್ಟವೆಂಬ ಕುಡುಗೋಲಿಗೆ, ಪ್ರಾಣವೆಂಬ ಹಿಡಿಯ ಜೋಡಿಸಿ,
ಭವಭವವೆಂಬ ಹಸ್ತದಿಂದ ಪಿಡಿದು,
ಜನನದ ನಿಲವಂ ಕೊಯ್ದು,
ಮರಣದ ಸಿವಡಂ ಕಟ್ಟಿ,
ಸುಜ್ಞಾನಪಥವೆಂಬ ಬಂಡಿಯ ಹೇರಿ,
ಮುಕ್ತಿ ಕೋಟಾರಕ್ಕೆ ತಂದು,
ಉನ್ನತವೆಂಬ ತೆನೆಯಂ ತರಿದು,
ಷಡುವರ್ಗವೆಂಬ ಬೇಗಾರರಂ ಕಳೆದು,
ಅಂಗಜನೆಂಬ ಕಾಮನಂ ಕಣ್ಕಟ್ಟಿ,
ಮಂಗಲನೆಂಬ ಕಣದಲ್ಲಿ
ಯಮರಾಜನಿಗೆ ಕೋರ ಹಾಕದೆ,
ಚಿತ್ರಗುಪ್ತರ ಸಂಪುಟಕ್ಕೆ ಬರಿಸದೆ,
ಈ ಶಂಕರನೆಂಬ ಸವಿಧಾನ್ಯವನುಂಡು,
ಸುಖಿಯಾಗಿರುತಿರ್ಪ ಒಕ್ಕಲಮಗನ
ಎನಗೊಮ್ಮೆ ತೋರು ತೋರಯ್ಯಾ,
ಅಮರಗುಂಡದ ಮಲ್ಲಿಕಾರ್ಜುನ ಪ್ರಭುವೆ. ||೮||

೧೦

ಶರಣ ಲಿಂಗಸಮರಸವಾಗಿ ಆಚರಿಸುವ.
ಶರಣನ ಲಿಂಗ ಭಿನ್ನವಾಗಿ ಓಸರಿಸಿಹೋದರೆ
ನೋಡಿ, ಅರಸಿ ಸಿಕ್ಕಿದ ಸಮಯದಲ್ಲಿ
ಆ ಲಿಂಗವ ಪರೀಕ್ಷಿಸಿ ನೋಡುವುದು.
ಆರು ಸ್ಥಾನಂಗಳಲ್ಲಿ ಭಿನ್ನವಿಲ್ಲದಿರ್ದಡೆ ಧರಿಸಿಕೊಂಬುದು.

ಸರ್ವಮಾಹೇಶ್ವರರು ನೋಡಿ ಶಂಕೆಯುಳ್ಳಡೆ ಬಿಡುವುದು.
ಅದೆಂತೆಂದಡೆ:
ಶರಣನ ಸಂಕಲ್ಪ ಸನ್ಮತ ತನ್ನದೆಂಬುದೆ ದಿಟವೆಂದು ತಾ ನಿಶ್ಚೈಸಿ
ತೆತ್ತಿಗರಾದ ಸರ್ವಮಾಹೇಶ್ವರರು
ಮಂತ್ರಬೋಧನೆಯ ಕರ್ಣದಲ್ಲಿ ಬೋಧಿಸಬೇಕಲ್ಲದೆ
ಆ ಲಿಂಗಧ್ಯಾನಾರೂಢನಪ್ಪಾತಂಗೆ ಧೂಪ ದೀಪ ಅಂಬರಗಳೆಂಬ
ಬಂಧನವ್ಯೆಕ್ಯವಂ ಮಾಡಲಾಗದು.
ಮಾಡಿದಡೆ ಜ್ಞಾನಿಗಳೊಪ್ಪರು.
ಅದು ಕಾರಣವಾಗಿ ಶಿವಧ್ಯಾನ ನಿಶ್ಚಿಂತವ ಮಾಡಿದ ಕಾರಣ
ಅವರ ತೆತ್ತಿಗರಲ್ಲವೆಂಬೆ, ದಿಟ ಕಾಣಾ ನೀ ಸಾಕ್ಷಿ
ನಿಮ್ಮಾಣೆ ನಿಮ್ಮ ಅರ್ಧಾಂಗಿಯಾಣೆ ಅಮರಗುಂಡದ ಮಲ್ಲಿಕಾರ್ಜುನಾ. ॥೯॥

೧೧

ಸರ್ವಾಂಗಲಿಂಗಿಯಾದ ಶರಣನ ಲಿಂಗ ಭಿನ್ನವಾಗಿ ಹೋಗಲು
ಆ ಲಿಂಗದೊಡನೆ ತನ್ನ ಪ್ರಾಣವ ಬಿಡುವದು.
ಇದಲ್ಲದೆ ಜೀವಕಾಸೆ ಮಾಡಿ ಪುನಃ ಲಿಂಗವ ಧರಿಸಿದನಾದಡೆ
ಶುನಿಯ ಬಸುರಲ್ಲಿ ಬಂದು
ಅನೇಕಕಾಲ ನಾಯಕನರಕದಲ್ಲಿರ್ಪನಯ್ಯಾ
ನೀ ಸಾಕ್ಷಿಯಾಗಿ ಅಮರಗುಂಡದ ಮಲ್ಲಿಕಾರ್ಜುನಾ. ॥೧೦॥

■ ■

## ಪ್ರಸಾದಿ ಭೋಗಣ್ಣನ ವಚನ

೧೨

ಅಂಗ ಮನ ಪ್ರಾಣಂಗಳೆಂಬಲ್ಲಿ ಘನಲಿಂಗವಿಪ್ಪೆಡೆ ಯಾವುದು?
ಪಂಕಕ್ಕೆ ಜಲ ಒಳಗೋ, ಹೊರಗೋ?
ಅಂಗಕ್ಕೂ ಮನಸ್ಸಿಂಗೂ ಆತ್ಮಂಗೂ ಲಿಂಗವ ಹಿಂಗಿ
ಅರಿವ ಠಾವಿನ್ನಾವುದು?
ಬೀಜದೊಳಗಾದ ವೃಕ್ಷ, ವೃಕ್ಷದೊಳಗಾದ ಬೀಜ
ಈ ಉಭಯವ ಮೀರಿ ಬೆಳೆವ ಠಾವಿನ್ನಾವುದೊ?
ಮೊನೆಗೂಡಿಯೆ ಗ್ರಹಿಸುವ ಅಲಗಿನ ತೆರದಂತೆ
ಅದು ಲಿಂಗಾಂಗಸಂಯೋಗಸಂಬಂಧ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೧||

೧೩

ಅನಾದಿಯಿಂದತ್ತಲಾದ ಅಂತರಾದಿಮಧ್ಯದಲ್ಲಿ
ನಿಜಸ್ವರೂಪ ನಿಃಕಲವಸ್ತು ಜಗಲೀಲಾಭಾವಿಯಾಗಿ
ತ್ರಿಗುಣ್ಮಾತಕವಾದ ಭೇದಪೂರ್ವಕ ಮುಂತಾದ
ಷಡ್ದರ್ಶನದ ವಿವರಂಗಳಿಗೆ
ಶೈವ ವೈಷ್ಣವ ಉಭಯಂಗಳಲ್ಲಿ ಶೈವವಾರು ವೈಷ್ಣವವಾರು.

ಇಂತೀ ಉಭಯದಲ್ಲಿ ಅಡಗುವ ಗುಣ ವಿವರ:
ಶೈವಕ್ಕೆ ಮೂರು, ವೈಷ್ಣವಕ್ಕೆ ಮೂರು.
ಉಭಯನಾಮ ಕುಲಲಯವಹಲ್ಲಿ ಶೈವಕ್ಕೆ ದಹನ, ವೈಷ್ಣವಕ್ಕೆ ಸಮಾಧಿ.
ಇದು ಅಕ್ಷಯ ಲಕ್ಷ ನಿರೀಕ್ಷಣೆಯಿಂದತ್ತಣ ಮಾತು.
ಅಂದಿನಿಂದ ಇತ್ತಣ ವಿವರ:
ನಾಲ್ಕು ಲಕ್ಷವು ಮೂವತ್ತೆರಡನೆಯ ಸಹಸ್ರವತ್ಸರಂಗಳಿಂದ
ಈಚೆಯಾದ ಸರ್ವಪ್ರಮಾಣೆಗೆ ಏಕಾದಶಗುಣ.
ಅವತಾರಕ್ಕೆ ಸಮಾಧಿ, ದಶ ಅವತಾರಕ್ಕೆ ದಹನ.
ಇಂತೀ ಭೇದಂಗಳು ಆವರ್ತಿಸಿ ನಡೆದು
ಕಲಿಯುಗದ ಕಡೆಯಲ್ಲಿ ಅನಾದಿಪರಮೇಶ್ವರನ
ಅಪರಾವತಾರ ಭೇದರೂಪು ಬಸವಣ್ಣನಾಗಿ
ಅಭೇದ್ಯರೂಪು ಚೆನ್ನಬಸವಣ್ಣನಾಗಿ ವೀರಶೈವಸಿದ್ಧಾಂತವೆಂಬುದು ಲಕ್ಷಿಸಿ
ಷಡ್ದರ್ಶನಕ್ಕೆ ಸ್ಥಾಪನಾಚಾರ್ಯನಾಗಿ
ವಿಶ್ವಕ್ಕೆ ಚಕ್ಷುವಾಗಿ, ಆಚಾರಕ್ಕೆ ಅಂಗವಾಗಿ
ಶಿಕ್ಷೆ ದೀಕ್ಷೆ ಮೋಕ್ಷಕ್ಕೆ ಮುಮುಕ್ಷುವಾಗಿ
ಚತುರ್ಗುಣ ಆಚಾರಕ್ಕೆ ಅರಸಾಗಿ ಸರ್ವಗುಣಸಂಬಂಧಿ ನೀನಾದೆಯಲ್ಲಾ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ, ನಿನ್ನ ಲೀಲಾಭಾವ. || ೨ ||

೧೪

ಅಪ್ಪು ತುಂಬಿದ ಕುಂಭದಲ್ಲಿ ಕಿಚ್ಚು ಹಾಕಿ
ಕಟ್ಟಿಗೆಯನಿಕ್ಕಿ ಉರುಹಲಿಕ್ಕೆ ಆ ಅಪ್ಪುವ ಸುಟ್ಟುದುಂಟೆ ಕಿಚ್ಚು ?
ಆ ಕುಂಭದ ತಪ್ಪಲಿನಲ್ಲಿ ಕಟ್ಟಿಗೆಯನಿಕ್ಕಿ ಉರುಹಲಿಕ್ಕೆ
ಕುಂಭದ ಲೆಪ್ಪದ ಮರೆಯಲ್ಲಿ ಅಪ್ಪುವ ಸುಡಬಲ್ಲುದೆ?
ಇದು ಕಾರಣ ಕ್ರೀಯ ಮರೆಯಲ್ಲಿರ್ದ ನಿಃಕ್ರೀ
ಶಿಲೆಯ ಮರೆಯಲ್ಲಿರ್ದ ನೆಲೆ ವಸ್ತುವ
ಚಿತ್ತದ ಒಲವರದಿಂದ ಅರಿಯಬೇಕು
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವಲ್ಲಿ. || ೩ ||

೧೫

ಅಯಃಕಾಂತದ ಶಿಲೆ ಲೋಹಕ್ಕೆ ಬಾಯ ಕಂಡಲ್ಲಿ ವೇದ ಸಿದ್ಧಾಂತಿ.
ಲೋಹ ಸುವರ್ಣವ ಏಗೆಯ್ದುಯೆತ್ತುವಲ್ಲಿ
ಆ ಭೇದವ ಬಲ್ಲಡೆ ಶಾಸ್ತ್ರಸಂಪದನು.

ಮರಾಳ ಕ್ಷೀರವನೀಂಟಿ ಜಲವನುಳುಹಿದ ಭೇದವ ಬಲ್ಲಡೆ ಪುರಾಣಸಂಬಂಧಿ.
ಗೋವು ಅಜ ಮುಂತಾದವು ತೃಣ ಪರ್ಣ ಗ್ರಾಸವ ಕೊಂಡು
ಪುನರಪಿಯಾಗಿ ಸವಿದಿಳಿವ ಭೇದವ ಬಲ್ಲಡೆ ಆಗಮಯುಕ್ತ.
ಇಂತೀ ಭೇದಂಗಳಲ್ಲಿ ಭೇದಿಸಿ, ಅಭೇದ್ಯವಪ್ಪ ಲಿಂಗವ ಸಾಧಿಸಿ
ಕ್ರೀಗೆ ಮಾರ್ಗ, ಅರಿವಿಂಗೆ ಆಚರಣೆ
ಉತ್ತರ ಪೂರ್ವವ ನಿಶ್ಚೈಸಿ, ನಿಜನಿಶ್ಚಯದಲ್ಲಿ ನಿಂದ ಶರಣಂಗೆ
ಮುಕ್ತ ನಿರ್ಮುಕ್ತನೆಂಬುದಿಲ್ಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ ತಾನಾಗಿ. ||೪||

೧೭

ಅರ್ತಿಗೆ ತಿರಿಗಿ ಮೊತ್ತದ ಮಾತನಾಡಿ
ಕತ್ತೆ ಹೊರೆಯ ಹೊತ್ತು ಹೆಂಗತ್ತೆಯ ಕಂಡು
ಬಾಯಬಿಟ್ಟು ಒರಲುವಂತೆ ಒರಲುತ್ತಿರ್ಪವರ ಕಂಡು
ತ್ರಿವಿಧದ ಗೊತ್ತಿನ ಮಾರಿಯ ತುತ್ತೆಂದೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೫||

೧೭

ಅವಿದ್ಯನಾಗಿ, ಅವಗುಣನಿರತನಾಗಿ
ಅವಿವೇಕ ಅನಾಮಯನಾಗಿ
ಅಬದ್ಧ ಅಪ್ರಮಾಣಂಗೆ ಗುರು ಲಿಂಗ ಜಂಗಮವೆಂಬ
ಇದಿರೆಡೆಯಿಲ್ಲ, ಅದು ಪರಿಪೂರ್ಣಭಾವ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ನಿಜವೆ ತಾನಾದ ನಿತ್ಯ. ||೬||

೧೮

ಅಷ್ಟವಿಧಾರ್ಚನೆ ಷೋಡಶ ಉಪಚರಿಯ ಷಟ್ಕರ್ಮ
ತ್ರಿವಿಧವರ್ಮ ಚತುರ್ವಿಧಫಲಭೋಗ ಭೋಜ್ಯ
ಪೂಜಾ ವ್ಯವಧಾನ ಕರ್ಮಂಗಳಲ್ಲಿ ಸೋದಿಸಿ
ವರ್ಮವನರಿಯಬೇಕು.
ವರ್ಮವನರಿತಲ್ಲಿ ಸರ್ವಜೀವಕ್ಕೆ ಶಾಂತಿ, ಆಚಾರ್ಯನಂಗಕ್ಕೆ ನಿಹಿತ.
ಸರ್ವಚೇತನಾದಿಗಳಲ್ಲಿ ಘಾತಕತನವಿಲ್ಲದೆ
ಮನ ವಚನ ಕಾಯ ತ್ರಿಕರಣಶುದ್ಧವಾಗಿ
ಈಶ್ವರಪೂಜೆಯ ಮಾಡುವಾತನ ಆಶ್ರಯದ ಶೇಷಪ್ರಸಾದವ ಕೊಂಬ

ವೃಶ್ಚಿಕ ಮೂಷಕ ವಿಹಂಗ ಮಾರ್ಜಾಲ ಇಂತಿವರಂತೆ
ಸದ್ಭಕ್ತನ ಬಾಗಿಲಲ್ಲಿ ಸಂತತ ಕಾಯುವಂತೆ ಮಾಡು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಾ. ||೭||

೧೯

ಆಚಾರದಿಂದ ವಿಚಾರಿಸಿ ದೀಕ್ಷೆಯ ಮಾಡುವುದು ಗುರುಸ್ಥಲ.
ವಿಚಾರ ಸರ್ವಗಣಾಚಾರದಿಂದ ದೀಕ್ಷೆಯ ಮಾಡುವುದು ಜಂಗಮಸ್ಥಲ.
ಈ ಉಭಯದ ಗೊತ್ತ ಮುಟ್ಟಿ, ನಿಶ್ಚಯ ನಿಜವ ಮುಟ್ಟಿ
ಪಂಚವಿಂಶತಿತತ್ವಂಗಳಲ್ಲಿ ಷಟ್ಕರ್ಮ ತ್ರಿವಿಧಾತ್ಮ ಭೇದಂಗಳಲ್ಲಿ
ಏಕೋತ್ತರಶತಸ್ಥಲವೆಂಬ ಭಿನ್ನಭಾವಂಗಳನರಿದು
ಐವತ್ತೊಂದಕ್ಷರದ ಬೀಜನೇಮವನೊಂದಕ್ಷರದಲೈಕ್ಯವನರಿತು
ಇಂತೀ ಐವತ್ತೆರಡು ಗುರುಲಘು ಗುಣನೇಮ ಬಿಂದು ವಿಸರ್ಗ ಶಾಖೆ
ಮುಂತಾದವನೊಂದುಗೂಡಿ ನಿರುತದಿಂದ ನಿಂದುದು ಜ್ಞಾನದೀಕ್ಷೆ.
ಇಂತೀ ಗುರುಸ್ಥಲದ ವಿವರ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೮||

೨೦

ಆಚಾರ ಸದಾಚಾರ ವಿಚಾರ ಅವಿಚಾರ ಚತುರ್ವಿಧಕ್ಕೆ ಕರ್ತೃವಹಲ್ಲಿ
ಭೇದಮಾರ್ಗಂಗಳ ತಿಳಿದು ಪಂಚಸೂತ್ರ ಲಕ್ಷಣಂಗಳನರಿತು
ರವಿಶಶಿ ಉಭಯ ಸಮಾನಂಗಳ ಕಂಡು
ವರ್ತುಳಯೋನಿಪೀಠದಲ್ಲಿ ಗೋಳಕಾಕಾರವ ಸಂಬಂಧಿಸುವಲ್ಲಿ
ಅಷ್ಟಗಣ ನೇಮಂಗಳ ದೃಷ್ಟವ ಕಂಡು
ರವಿ ಶಶಿ ಪವನ ಪಾವಕ ಆತ್ಮ ಮುಂತಾದ
ಪವಿತ್ರಂಗಳಲ್ಲಿ ಮಾಂಸಪಿಂಡತ್ರಯವ ಕಳೆದು
ಮಂತ್ರಜ್ಞಾನದಲ್ಲಿ ಸರ್ವೇಂದ್ರಿಯವ ಕಳೆದು ವೇದನೆ ವೇಧಿಸಿ
ಸರ್ವಾಂಗವ ಭೇದಿಸಿ, ಸ್ವಸ್ಥಾನದಲ್ಲಿ ಘಟಕ್ಕೆ ಪ್ರತಿಷ್ಠೆ
ಆತ್ಮಂಗೆ ಸ್ವಯಂಭುವೆಂಬುದು
ಶ್ರುತದಲ್ಲಿ ಹೇಳಿ, ದೃಷ್ಟದಲ್ಲಿ ತೋರಿ
ಅನುಮಾನದಲ್ಲಿ ಅರುಪಿ ಸುಖಸುಮ್ಮಾನಿಯಾಗಿ
ಕ್ರೀಯಲ್ಲಿ ಆಚರಣೆ, ಜ್ಞಾನದಲ್ಲಿ ಪರಿಪೂರ್ಣತ್ವ.
ಇಂತೀ ಗುಣಂಗಳ ತಿಳಿವುದು ಆಚಾರ್ಯನ ಅಂಗಸ್ಥಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಆಚಾರ್ಯನಾದ ಲೀಲಾಭಾವ. ||೯||

೨೧

ಆತ್ಮವಸ್ತುವೆಂದಲ್ಲಿ ಅರಿವು ಮರವೆ ಉಂಟೆ?
ಹೇಮ ತನ್ಮಯವಾದಲ್ಲಿ ಪರುಷರಸವುಂಟೆ?
ನಾನು ನೀನಾದಲ್ಲಿ ಕರ್ತೃ ಭೃತ್ಯತ್ವವೆಂಬುದು ಎತ್ತಣ ಸುದ್ದಿ ಹೇಳಾ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನ? ||೧೦||

೨೨

ಇಂತೀ ವಾಚಾಶ್ರುತಿಗಳಲ್ಲಿ
ಸರ್ವವೇದ ಶಾಸ್ತ್ರ ಪುರಾಣ ಆಗಮಂಗಳಲ್ಲಿ
ಪಂಚಾಶತ್ಕೋಟಿ ವಿಸ್ತೀರ್ಣದೊಳಗಾದ
ಕವಿ ಗಮಕಿ ವಾದಿ ವಾಗ್ಮಿಗಳು ಮುಂತಾದ
ಪೂರ್ವತತ್ವ ನೂತನಪ್ರಸಂಗ ಮುಂತಾದ ಸರ್ವಯುಕ್ತಿ ಸ್ವಯಂಸಂಪನ್ನರು
ಷಟ್ಸ್ಥಲಬ್ರಹ್ಮ ಪಂಚವಿಂಶತಿತತ್ವ ಶತ ಏಕಸ್ಥಲ ಮುಂತಾದ
ಸರ್ವಸಾರಸಂಪನ್ನರಿಗೆಲ್ಲಕ್ಕೂ ಹಾಕಿದ ಮುಂಡಿಗೆ.
ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವಮೂರ್ತಿಗಳೆಲ್ಲವೂ
ಅನಾದಿವಸ್ತುವಿನ ಬೀಜರೇಣು.
ಅದಕ್ಕೆ ಪ್ರಥಮಾಚಾರ್ಯರು ಬಸವಣ್ಣ
ಚೆನ್ನಬಸವಣ್ಣ ಪ್ರಭು ತ್ರೈಮೂರ್ತಿಗಳು.
ತ್ರಿಗುಣ ಏಕಾತ್ಮಕವಾಗಿ ಗುರುಲಿಂಗಜಂಗಮ ಮೂರೊಂದಾದಂತೆ
ಭಕ್ತಿ, ಜ್ಞಾನ, ವೈರಾಗ್ಯ ತ್ರಿವಿಧ ಬೆಚ್ಚಂತೆ
ಸ್ಥೂಲ, ಸೂಕ್ಷ್ಮ, ಕಾರಣ ತ್ರಿವಿಧ ಏಕವಾದಂತೆ
ರೂಪು, ರುಚಿ, ಗಂಧ ಸೌಖ್ಯಸಂಬಂಧವಾದಂತೆ
ಮರ್ತ್ಯಕ್ಕೆ ಬಂದು, ಭಕ್ತಿವಿರಕ್ತಿಗೆ ಸಲೆ ಸಂದು
ನಿಶ್ಚಯವಾದ ಶರಣಸಂಕುಳಕ್ಕೆ ಕರ್ತ ನೀನೊಬ್ಬನಾದೆಯಲ್ಲಾ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಾ. ||೧೧||

೨೩

ಇಂತೀ ಸ್ಥಲ ಕುಳಂಗಳಲ್ಲಿ ವೇಧಿಸಿ ಭೇದಿಸಿಹೆನೆಂದಡೆ
ನಾಲ್ಕು ವೇದ ಹದಿನಾರು ಶಾಸ್ತ್ರ
ಇಪ್ಪತ್ತೆಂಟು ದಿವ್ಯಪುರಾಣಂಗಳೊಳಗಾದ
ಶಬ್ದಶಾಸ್ತ್ರ, ಸಂಸ್ಕೃತ, ಅಕ್ಷರಜ್ಞತ್ವ, ಭರತಶಿಲ್ಪ ಮುಂತಾದ
ಕ್ರಿಯಾಕಾರಕಂಗಳ ತಿಳಿದು ನೋಡಿದರೂ

ಪಂಚಾಕ್ಷರದ ಮೂಲ ಪಂಚಾಕ್ಷರಿಯ ಪ್ರಣಮವನರಿಯಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ. ||೧೨||

೨೪

ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳೆಂಬಲ್ಲಿ
ಇಚ್ಛಾಶಕ್ತಿಗೆ ಪುರುಷನಾರು? ಕ್ರಿಯಾಶಕ್ತಿಗೆ ಪುರುಷನಾರು?
ಜ್ಞಾನಶಕ್ತಿಗೆ ಪುರುಷನಾರು?
ಜ್ಞಾತೃ, ಜ್ಞಾನ, ಜ್ಞೇಯವೆಂಬಲ್ಲಿ ಶಕ್ತಿಪುರುಷತ್ವಕ್ಕೆ
ಸ್ಥೂಲ, ಸೂಕ್ಷ್ಮ, ಕಾರಣ ಇಂತೀ ತನುತ್ರಯದಲ್ಲಿ
ಕಾಬುದೊಂದು ಕಾಣಿಸಿಕೊಂಬುದೊಂದು.
ಉಭಯದ ಮನದಲ್ಲಿ ನಾನಾರೆಂಬುದ ಅರಿವುದದೇನು?
ಮುಕುರವ ಹಿಡಿದು ನೋಡುವನಂತೆ
ಹಿಡಿವವನಾರು, ಮುಕುರವೇನು? ಅಲ್ಲಿ ತೋರುವ ಬಿಂಬವೇನು?
ಮುಕುರವೊಂದು, ನೋಡುವೆಡೆಯಲ್ಲಿ ಮೂರಾದ ಭೇದವನರಿತು
ಆ ಮುಕುರವೇ ಶಕ್ತಿಯೊ, ಬಿಂಬವೇ ಪುರುಷನೊ?
ಈ ಉಭಯವ ಸಂದೇಹಕ್ಕಿಕ್ಕಿ ನೋಡುವಾಗ
ತ್ರಿವಿಧಶಕ್ತಿಯಲ್ಲಿ ಅಡಗಿತ್ತೆಂಬುದನರಿವುದಕ್ಕೆ ದೃಷ್ಟ:
ತಿರುಳಿಲ್ಲದ ಬೀಜ ಬೆಳೆದುದುಂಟೆ?
ಮೃತಘಟದ ಚಕ್ಷು ಲಕ್ಷಿಸಿ ಕಂಡುದುಂಟೆ?
ಅಪ್ಪು ಬಟ್ಟೆಯಲ್ಲಿ ಹೋಪ ತೆಪ್ಪದ ಮೇ[ಗ]ಣವನಂತೆ
ಒತ್ತುವುದು ನಿಂದಲ್ಲಿ ಅಪ್ಪು ತನ್ನ ಇಚ್ಛೆಗೆ
ಆ ತೆಪ್ಪವ ಕೊಂಡು ಹೋಹ ತೆರದಂತೆ
ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳೆಂಬವು
ಜ್ಞಾತೃ, ಜ್ಞಾನ, ಜ್ಞೇಯಗಳೆಂಬವು
ಸ್ಥೂಲ, ಸೂಕ್ಷ್ಮ, ಕಾರಣ ತನುತ್ರಯಂಗಳೆಂಬವು
ಇಂತಿವೆಲ್ಲವು ಶಕ್ತಿಸಂಪುಟವಾಗಿ ದ್ವೈತಾದ್ವೈತಂಗಳಲ್ಲಿ
ಹೊರಳಿ ಮರಳುವವಾಗಿ, ವೀಣೆಯ ನಿಚ್ಚಣಿಗೆಯಂತೆ
ಸ್ಥಾನ ಸ್ವಸ್ಥಾನಂಗಳಲ್ಲಿ ನಿಂದು ಸಪ್ತಸ್ವರವ ಲಕ್ಷಿಸಿದಂತೆ
ಇಂತೀ ಲಕ್ಷ ಜೀವಾಳದಲ್ಲಿ ಅಡಗಿ ಆ ಜೀವಾಳ ನಾದಕ್ಕೆ ಅರಸಾಗಿ
ಆ ಭೇದದಂತೆ ಆತ್ಮತತ್ವ ನಿಶ್ಚಯಪದವಾಗಲಾಗಿ
ಅದು ಐಕ್ಯಸ್ಥಲ ನಾಮನಷ್ಟಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೧೩||

೨೫

ಇಷ್ಟಲಿಂಗವೆಂಬುದ ಕೊಟ್ಟು ತಾ ಸಂಸಾರದ
ಬುಟ್ಟಿಯೊಳಗನ್ನಕ್ಕ ಕರ್ಮಕಾಂಡ.
ಆತ್ಮಬೋಧೆಯ ವೇಧಿಸಬೇಕೆಂದು ವಾದಿಸಿ
ಸರ್ವಚೇತನದಲ್ಲಿ ಭ್ರಾಂತನಾಗಿ ತಿರುಗುತ್ತ ಇಪ್ಪವನ ನಿಹಿತದ ಮಾತು
ಭವಪಾಶದ ಗ್ರಾಸ.
ಇಂತೀ ನಿಹಿತವನರಿತು
ಅಷ್ಟವಿಧಾರ್ಚನೆಗೆ, ಮುಕ್ತಿ ನಿಜತತ್ವಕ್ಕೆ
ನಿರವಯ ದೃಷ್ಟಕ್ಕೆ ದೃಷ್ಟವಸ್ತುವನಿತ್ತು
ತಾ ನಿಶ್ಚಯದಲ್ಲಿ ನಿಜವಾಸಿಯಾಗಬಲ್ಲಡೆ
ಕರ್ತೃಭೃತ್ಯತ್ವವೆಂಬುದು ನಿಶ್ಚಯ ನೋಡಾ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದು. ||೧೪||

೨೬

ಉಚಿತವ ಕಂಡು, ತತ್ಕಾಲವನರಿತು
ರಿತುಕಾಲಂಗಳಲ್ಲಿ ಭೇದಿಸಿ ವೇಧಿಸುವದು
ಮರ್ಕಟ ವಿಹಂಗ ಪಿಪೀಲಕ ಭೇದ.
ಕರ ಕಾಲು ಬಾಯಿಂದ ಕೊಲುವ ಜೀವದ ಹೊಲಬಿನಂತೆ
ಶ್ರುತದಲ್ಲಿ ಕೇಳಿ ದೃಷ್ಟದಲ್ಲಿ ಕಂಡು
ಅನುಮಾನದಲ್ಲಿ ಅರಿತು ನಡೆವುದು ಲಕ್ಷಣಜ್ಞನ ಯುಕ್ತಿ.
ಆ ಯುಕ್ತಿಯಿಂದ ಭಕ್ತಿ ನೆಲೆಗೊಂಡು, ಆ ಭಕ್ತಿಯಿಂದ ಸತ್ಯ ನೆಲೆಗೊಂಡು
ಸತ್ಯದೊಡಲು ಲಿಂಗದಂಗವಾಗಿ ಇಪ್ಪಾತನೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನಾಗಿ. ||೧೫||

೨೭

ಉರಗನ ಸ್ವಪ್ನದಂತೆ, ಮಯೂರನ ಚಿತ್ತದಂತೆ
ಬರುಹಿಯ ಸಂಪದದಂತೆ, ಎರಡಳಿದ ನಿಜನಿಶ್ಚಯದ ಭೇದ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದ ಕೂಟ. ||೧೬||

೨೮

ಎನ್ನ ಹೃದಯಕಮಲವೆ ಬಸವಣ್ಣನಯ್ಯಾ.
ಎನ್ನ ಕಂಠವೆ ಚನ್ನಬಸವಣ್ಣನಯ್ಯಾ.

ಎನ್ನ ನಯನದ ದೃಕ್ಕೆ ಸಿದ್ಧರಾಮನಯ್ಯಾ.
ಎನ್ನ ಲಲಾಟವೆ ಮಡಿವಾಳಯ್ಯನಯ್ಯಾ.
ಎನ್ನ ಶಿರವೆ ಪ್ರಭುದೇವರಯ್ಯಾ.
ಇಂತೀ ಐವರ ಶ್ರೀಪಾದವನು
ತ್ರಿಕಾಲದಲ್ಲಿ ಅರ್ಚಿಸಿ ಪೂಜಿಸಿ ನಿಶ್ಚಿಂತನಾದೆನಯ್ಯಾ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. ||೧೭||

೨೮

ಏಕಮುಖದಲ್ಲಿ ನಿರವಯ ಜಪ.
ದ್ವಿಮುಖದಲ್ಲಿ ಶಕ್ತಿಸಂಪರ್ಕಯೋಗ.
ತ್ರಿಮುಖದಲ್ಲಿ ತ್ರಿವಿಧಾತ್ಮಭೇದ.
ಚತುರ್ಮುಖದಲ್ಲಿ ಚತುಷ್ಟಯ ಇಷ್ಟಾರ್ಥಮತ.
ಪಂಚಮಮುಖದಲ್ಲಿ ಪಂಚಭೂತಿಕ ಪಂಚಬ್ರಹ್ಮ ಮೂರ್ತಿಗಳಪ್ಪ
ಸಂಚಿತದ ಭೇದ.
ಇಂತೀ ಅಕ್ಷಮಾಲೆಯ ಲಕ್ಷಣಭೇದ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೧೮||

೩೦

ಏಕವಸ್ತು ಉಭಯಭೇದವಾಗಿ
ತ್ರಿವಿಧಮಾರ್ಗವನಾಚರಿಸಿ
ಚತುರ್ಭಾಗವಾಗಿ ಪಂಚವಕ್ತ್ರವ ಅವಧರಿಸಿದಲ್ಲಿ
ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಸ್ವರೂಪವ ತಾಳಿದಲ್ಲಿ
ಚರ್ಚೆಗೆ ಬಂದ ಎಕ್ಕ ಸೋಲವ ಬಿಟ್ಟು
ಮಿಕ್ಕಾದ ಷಡ್ದರ್ಶನವುಂಟೆಂದು ಹೆಕ್ಕಳ ಗೆಲೆಯದೆ
ಶಕ್ತಿಯ ಧರಿಸಿದ ಉಭಯರೂಪು, ಶಕ್ತಿನಿಶ್ಚಯವಾದಲ್ಲಿ
ನಿಜಸ್ವರೂಪು.
ಅದು ಬಚ್ಚಬಯಲು.
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಸ್ವಯಂಭುವಾದ ತೆರ. ||೧೯||

೩೧

ಐಕ್ಯಸ್ಥಲದ ಲೇಪಜ್ಞಾನ ವಿವರ:
ಅಪ್ಪು ಆವಾವ ಪಾಕಕ್ಕೂ ತಪ್ಪದೆ ಸಾರವ ಕೊಡುವಂತೆ

ತಥ್ಯಮಿಥ್ಯವಾದ ದ್ರವ್ಯಕ್ಕೆ ಹೆಚ್ಚುಕುಂದನರಿಯದಿಪ್ಪಂತೆ
ವಾಯು ಸುಗುಣ ದುರ್ಗುಣವೆನ್ನದೆ
ತನ್ನಯ ಸಹಜದಿಂದ ಸಂಚರಿಸುವಂತೆ
ಅಗ್ನಿಗೆ ಕಾಷ್ಠ ಸರಿಸ ಡೊಂಕೆನ್ನದೆ ಮಲಿನ ಅಮಲಿನವೆನ್ನದೆ
ಆವ ದ್ರವ್ಯ ದೃಷ್ಟದಲ್ಲಿ ಸಿಕ್ಕಿದಡೂ
ಭೇದಿಸಿ ವೇಧಿಸಿ ಸುಡುವುದಾಗಿ.
ಇಂತಿವು ತ್ರಿವಿಧಸ್ಥಲದಂತೆ ಇಪ್ಪುದು ಐಕ್ಯನ ಅರ್ಪಿತ ಸ್ಥಲಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೨೦||

೩೨

ಐಕ್ಯಸ್ಥಲಲೇಪ ಭಾವಿಯ ಭಾವವೆಂತುಂಟೆಂದಡೆ
ಚಿನ್ನವರಗಿದಲ್ಲಿ ಬಣ್ಣವೊಡಗೂಡಿ ಹೆರೆಹಿಂಗದಂತೆ
ಕಡಿದೊರೆದಡೆ ಚಿನ್ನದಂಗಕ್ಕೆ ಹೊರೆಯಿಲ್ಲದೆ ರಂಜಿಸುವಂತೆ
ಐಕ್ಯನ ಮಹದಾಕಾಶದಲ್ಲಿ ಅವಕಾಶವಾಗಿ ಅವಗವಿಸಿದೆಯಲ್ಲಾ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೨೧||

೩೩

ಒಂದೆಂದಡೆ ಬೆಸ, ಎರಡೆಂದಡೆ ಸರಿ ಎಂಬ ಭೇದದಂತೆ
ದ್ವೈತ ಅದ್ವೈತಗಳ ವಿವರ:
ಎಪ್ಪು ಲೆಖ್ಖದಲ್ಲಿ ಸಮಗಂಡು ಬಪ್ಪಲ್ಲಿ ದ್ವೈತ.
ಹೆಚ್ಚುಗೆಯಲ್ಲಿ ಬಪ್ಪಲ್ಲಿ ಅದ್ವೈತ.
ಇಂತೀ ಉಭಯದ ಸಂದನಳಿದಲ್ಲಿ ಸ್ವಯ ಸ್ವಯಂಭು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೨೨||

೩೪

ಒಂದೊಂದವರೆಯಿಲ್ಲದ ಯುಗ ಚಂದ್ರಾದಿಗಳು ಜನಿಸದಲ್ಲಿ
ಬಿಂದು, ಲಘು, ಗುರು, ಉಭಯಂಗಳಿಲ್ಲದ ಮತ್ತೆ
ಜಗವ ಸಂಧಿಸಿ ಶರಣೆನಿಸಿಕೊಂಬ ದೇವರಾರಯ್ಯ?
ಪ್ರಥಮದಲ್ಲಿ ಘನಕಲ್ಪಾಂತರಕ್ಕೆ ಎಯ್ದಿದ
ದ್ವಿತೀಯದಲ್ಲಿ ಶಂಭು ಕೂಡಿದ
ತೃತೀಯದಲ್ಲಿ ಪ್ರಮಾಣು ಅವಧಿಗೊಳಗಾದ
ಪಂಚವಿಂಶತಿತತ್ವದಿಂದತ್ತ ಅಭೇದ್ಯವಸ್ತು
ವೈದಿಕ ಮಾಯಾಭೇದವೆಂಬ ಸ್ವರೂಪವ ಕಂಡು

ಪೂರ್ವಭಾಗದಲ್ಲಿ ಶಕ್ತಿಯ ಧರಿಸಿ, ಉತ್ತರಭಾಗದಲ್ಲಿ ವಸ್ತು ತಾನಾಗಿ
ವಾಮಾಂಗನಾದ ವಿಷ್ಣುವಿಗೆ ಓಲೆಯನಿಟ್ಟು, ಬ್ರಹ್ಮಂಗೆ ನಾಲಗೆಯ ಕೊಟ್ಟು.
ಏಕಾದಶರುದ್ರರಿಗೆ ಮುಖ್ಯನಾದ ಪರಮೇಶ್ವರಂಗೆ ಪರಮಪದವ ಕೊಟ್ಟು
ನೀ ಭಕ್ತರ ಹೃತ್ಕಮಲಮಧ್ಯದಲ್ಲಿ ನಿಜವಾಸಿಯಾದೆಯಲ್ಲಾ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. || ೨೩ ||

೩೫

ಓಂ ಎಂಬ ಓಂಕಾರ ಪೃಥ್ವೀತತ್ವದ ನಾಮಬೀಜ.
ನ ಎಂಬ ನಕಾರ ಅಪ್ಪುತತ್ವದ ನಾಮಬೀಜ.
ಮ ಎಂಬ ಮಕಾರ ತೇಜತತ್ವದ ನಾಮಬೀಜ.
ಶಿ ಎಂಬ ಶಿಕಾರ ವಾಯುತತ್ವದ ನಾಮಬೀಜ.
ವಾ ಎಂಬ ವಾಕಾರ ಆಕಾಶತತ್ವದ ನಾಮಬೀಜ.
ಯ ಎಂಬ ಯಕಾರ ಆತ್ಮತತ್ವದ ನಾಮಬೀಜ.
ಇಂತೀ ಷಡಕ್ಷರದ ನಾಮಭೇದ.
ರೋಹ ಅವರೋಹವಾಗಿ, ಅವರೋಹ ರೋಹವಾಗಿ
ಪೂರ್ವ ಉತ್ತರಕ್ಕೆ ಪುಂಜಕ್ಕೆ ವಿರಳವಾದಂತೆ
ಉಭಯಚಕ್ಷು ಅಭಿಮುಖವಾಗಿ ಏಕಾಕ್ಷರದಲ್ಲಿ
ಗುಣಿತನಾಮದಿಂದ ಹಲವಕ್ಷರ ಹೊಲಬುದೋರುವಂತೆ
ಓಂಕಾರ ಬೀಜನಾಮದಲ್ಲಿ ದಶಾಕ್ಷರವಡಗಿ
ದಶಾಕ್ಷರದ ಅಕಾರಾಂತದಲ್ಲಿ ಷೋಡಶಾಕ್ಷರ ಭೇದ.
ಆ ಭೇದದಿಂದ ಐವತ್ತೆರಡು ಅಕ್ಷರನಾಮ ಬೀಜವಾಗಿ
ಷಡಕ್ಷರ ಘಟವಾಗಿ ಪಂಚಾಕ್ಷರಿ ಪ್ರಾಣವಾಗಿ
ಆ ಗುಣದಲ್ಲಿ ತೊಳಗಿ ಬೆಳಗುವ ಕಳೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಾಗಿ. || ೨೪ ||

೩೬

ಓಂ ಎಂಬುದು ಬ್ರಹ್ಮಾಕ್ಷರ.
ನ ಎಂಬುದು ನಾರಾಯಣಬೀಜ.
ಮ ಎಂಬುದು ಮಹಾದೇವನ ಬೀಜಾಕ್ಷರ.
ಇಂತೀ ತ್ರಿವಿಧ ಭೇದ ಕೂಡಿದಲ್ಲಿ ಈಶ್ವರತತ್ವ.
ಇಂತೀ ಭೇದ:
ಪಂಚವಿಂಶತ್ತತ್ವವಾಗಲಾಗಿ ಆಚಾರ್ಯನ ಅಂಗಭೇದ.
ಇಂತೀ ಕ್ರೀಮಾರ್ಗದ ನಿಜ

ಅರಿವಿನ ಆಚರಣೆ, ಉಭಯವು ಏಕವಾದಲ್ಲಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ಸಯರೂಪಾದಂಗ. || ೨೫ ||

೩೭

ಕರ್ಪುರವ ಕರಂಡದಲ್ಲಿ ಹಾಕಿ ತೆಗೆದಡೆ ಗಂಧವಿಪ್ಪುದಲ್ಲದೆ
ಮತ್ತಾ ಕರ್ಪುರವ ಕಿಚ್ಚಿನಲ್ಲಿ ಹಾಕಿ
ಗಂಧದ ಲಕ್ಷಣವ ನೋಡಿಹೆನೆಂದಡೆ
ಅದು ಅಪ್ರಮಾಣು ನೋಡಾ.
ಇಂತೀ ಸ್ಥಲವನಾಚರಿಸುವಲ್ಲಿ ಕರಂಡ ಗಂಧಸ್ಥಲ ನಿಶ್ಚಯವಾದಲ್ಲಿ
ಉರಿ ಗಂಧ ಸಂಗ.
ಇಂತೀ ಜ್ಞಾತೃ ಜ್ಞೇಯ ಭೇದಕ್ರೀ ನಿರ್ವಾಹಕ್ಕೆ ಸ್ಥಲ.
ಆರೋಪ ಲಕ್ಷಣ ಐಕ್ಯಲೇಪ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. || ೨೬ ||

೩೮

ಕಲ್ಲ ತೆಪ್ಪದಂತೆ ಆಗದೆ, ಮೃತ್ಪಿಂಡದಂತೆ ಜಲದಲ್ಲಿ ಇಳಿಯದೆ
ಅಜಡ ಜಡವ ತಡಿಗೆ ಸಾಗಿಸುವಂತೆ ಕುಂಭದಲ್ಲಿ ಇರಿಸದೆ
ಬೈಕೆಯ ಅಂಬುವಿಗೆ ಇಂಬುಗೊಡದೆ
ಕೊಂಡು ಹೋದಂತೆ.
ಇಂತೀ ಉಭಯಸ್ಥಲ ನಿರ್ವಾಹ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. || ೨೭ ||

೩೯

ಕಲ್ಲಿನಲ್ಲಿ ಹುಟ್ಟಿದ ಕಿಡಿ ಕಲ್ಲ ಸುಡಬಲ್ಲುದೆ?
ಬೆಲ್ಲದಲ್ಲಿ ಹುಟ್ಟಿದ ಸಾರವ ನಿಸ್ಸಾರ ಮೆಲ್ಲಬಲ್ಲುದೆ?
ಇಂತೀ ಬಲ್ಲತನವುಳ್ಳವರಲ್ಲಿಯ ವಾಚಕತ್ವ
ಆಶೆಯ ಪಾಶವ ಕೊಲ್ಲಬಲ್ಲುದೆ?
ಮರೆಯ ಗ್ರಾಸವ ಕೊಂಬ ಮರ್ತ್ಯನಂತೆ
ಈಷಣತ್ರಯಕ್ಕೆ ಮಚ್ಚಿ, ಮಾತಿನ ಮಾಲೆಯ ನೀತಿಯ ಹೇಳುವ
ಈ ಯಾಚಕರುಗಳಿಗೆ ಏತರ ಬೋಧೆ?
ಇದು ನಿಹಿತದ ಉಭಯಸ್ಥಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. || ೨೮ ||

೪೦

ಕೈವಲ್ಯ ವೈಕುಂಠ ಮೋಕ್ಷಗಾಮಿನಿಗಳಪ್ಪ ತೆರನ ತಿಳಿವುದಕ್ಕೆ
ಶೈವ ವೈಷ್ಣವ ಅಧ್ಯಾತ್ಮ ತ್ರಿವಿಧಕರ್ಮಂಗಳಲ್ಲಿ
ಷಡ್ದರ್ಶನ ಸಂಪದವಾಯಿತ್ತು.
ಈ ಭೇದ ವಿಭೇದವಾದಲ್ಲಿ ಶಕ್ತಿರೂಪು ವೈಷ್ಣವ
ಅಸ್ತಿಭೇದ ಶಿವಾಧಿಕ್ಯ, ಉಭಯಚೇತನ ವಸ್ತುವಾಗಿ
ಘಟ ಬುಡಂಗಳಲ್ಲಿ ಚರಸ್ಥಾವರಂಗಳಲ್ಲಿ ಖಲ್ವಿದಂ ಬ್ರಹ್ಮ ವಸ್ತುಮೂರ್ತಿ
ಅಳಿವು ಉಳುಮೆಗೆ ತೆರಪಿಲ್ಲದ ಸಂಗ ವೀರಶೈವ.
ವಿ ಎಂಬ ಯುಕ್ತಿ, ರ ಎಂಬ ರಜಸ್ಸು, ವ ಎಂಬ ಬಿಂದುವಿನ ಶಾಖೆ ನಿಂದಲ್ಲಿ
ಲೀಯಲ್ಪಟ್ಟುದು ಕೂಟಸ್ಥ ಗೋಳಕಾಕಾರ.
ಅದು ಪಂಚಾಕ್ಷರೀ ಪ್ರಣಮ, ಷಡಕ್ಷರದ ಸದನ.
ಏಕಾಕ್ಷರದ ಲೇಖನವಳಿದ ಅಲೇಖ.
ಅಯಿವತ್ತೆರಡನೆಯ ಸರಹರಿದ ಸಂಬಂಧ.
ಇದು ಸ್ವಯ ಚರ ಪರದ ಸುಮುದ್ರೆ.
ಶ್ರುತಿಸ್ಮೃತಿತತ್ವದ ಶೋಧನೆ.
ಆ ಗುಣ ಪ್ರಸನ್ನವಪ್ಪ ಚನ್ನಬಸವಣ್ಣಪ್ರಿಯ
ಭೋಗಮಲ್ಲಿಕಾರ್ಜುನಲಿಂಗದ ಲೀಲಾಭಾವ. || ೨೯ ||

೪೧

ಖಂಡವ ಮೆದ್ದು ಅರಗಿಸಿ ಹೆಂಡವ ಕುಡಿದು
ಉನ್ಮತ್ತವಿಲ್ಲದೆ ಮಿಕ್ಕಾದ ಕಿರುಹಕ್ಕಿಯ ಕೊಂದು ಕುಕ್ಕೆಯೊಳಗಿಟ್ಟು
ಹೆಬ್ಬದ್ದ ಹಿಡಿದು ಕಬ್ಬದ್ದ ಬಾಣಸವ ಮಾಡಿ
ಹುಲಿಯ ಹಲ್ಲ ಕಿತ್ತು, ಎರಳೆಯ ಕಾಲ ಮುರಿದು
ಲಂಘಿಸುವ ಸಿಂಹದ ಅಂಗವ ಸೀಳಿ
ಉನ್ಮತ್ತದಿಂದ ಬಂದಪ್ಪ ಗಜವ ಕಂಗಳು ನುಂಗಿ
ಮೊಲ ನಾಯ ಕಚ್ಚಿ, ನರಿ ಬಲೆಯ ನುಂಗಿ
ಸರ್ಪನ ಗಾಳಿ ತಾಗಿ ಗರುಡ ಸತ್ತು
ಇಂತಿವು ಹಗೆ ಕೆಳೆಯಾಗಿರಬಲ್ಲಡೆ ಭಕ್ತ.
ಇಂತಹ ಭಕ್ತ ಕೆಳೆಯಾಗಿರಬಲ್ಲಡೆ ಮಾಹೇಶ್ವರ.
ಇಂತಹ ಮಾಹೇಶ್ವರ ಕೆಳೆಯಾಗಿರಬಲ್ಲಡೆ ಪ್ರಸಾದಿ.
ಇಂತಹ ಪ್ರಸಾದಿ ಕೆಳೆಯಾಗಿರಬಲ್ಲಡೆ ಪ್ರಾಣಲಿಂಗಿ.

ಇಂತಹ ಪ್ರಾಣಲಿಂಗಿ ಕೆಳೆಯಾಗಿರಬಲ್ಲಡೆ ಶರಣ.
ಇಂತಹ ಶರಣ ಕೆಳೆಯಾಗಿರಬಲ್ಲಡೆ ಐಕ್ಯ.
ಇಂತಹ ಐಕ್ಯಾನುಭಾವ ಕೆಳೆಯಾಗಿರ್ದಲ್ಲಿ ಮಹದೊಳಗಾಯಿತ್ತು.
ಆ ಮಹದೊಳಗು ಸಯವಾದಲ್ಲಿ
ಸರ್ವಮಯವೆಂಬುದು ಇಹಪರ ನಾಸ್ತಿ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಕ್ಕೆ ಇದಿರೆಡೆಯಿಲ್ಲ. ||೩೦||

೪೨

ಖದ್ಯೋತ ಕೀಟಕವ ಮುಚ್ಚಿರಿಸಿದಲ್ಲಿ
ಮತ್ತೆ ಉಂಟೆ ಆ ಕಳೆ ದಿನಪನ ಬೆಳಗಿನಲ್ಲಿ ?
ಮತ್ತರಪ್ಪ ದುರ್ವಾಚಕರ ಮಾತಿನಮಾಲೆ
ಸ್ವಯ ಸ್ವಾನುಭಾವಿಕರಲ್ಲಿ ಉಂಟೆ?
ಆತ್ಮವಾದಿಯ ಮಾತು, ವೈದಿಕ ಕರ್ಮದ ಕ್ರೀ
ಸಾಧಕನ ಶರೀರಧರ್ಮ
ಈ ಗುಣ ಸದ್ಭಾವಿಯ ಸ್ವಯವ ಮುಟ್ಟದಾಗಿ.
ಇಂತೀ ಅಭೇದ್ಯವಸ್ತುವನರಿಯಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೩೧||

೪೩

ಗುರುವಿಂಗೆ ಗುರುವುಂಟು, ಉಭಯನಾಮವಾಗಿ.
ಲಿಂಗಕ್ಕೆ ಲಿಂಗವುಂಟು, ಕುರುಹೆಂಬ ಭೇದವುಂಟಾಗಿ.
ಆತ್ಮಂಗೆ ಅರಿವುಂಟು, ಮುಂದೆ ಒಂದು ಮರಣವುಂಟಾಗಿ.
ಇಂತೀ ಭೇದಂಗಳು ಬೇಕಾದ ಉಮಾಪತಿಯಾದಲ್ಲಿ ಉಭಯವಾಯಿತ್ತು.
ಶಕ್ತಿಸಮೇತವೆಂಬುದು ಕರ್ತೃಭೃತ್ಯ ಸಂಬಂಧ.
ಇಂತೀ ಆಚಾರ್ಯನಂಗ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ. ||೩೨||

೪೪

ಗುರುವೆಂದು ಇದಿರಿಟ್ಟಲ್ಲಿ ಗುರುದ್ರೋಹ.
ಲಿಂಗವೆಂದು ಸಂದೇಹಿಸಿದಲ್ಲಿ ಲಿಂಗದ್ರೋಹ.
ಜಂಗಮವೆಂದು ಉಭಯದಲ್ಲಿ ಕಂಡಡೆ ಜಂಗಮದ್ರೋಹ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆಂದು
ಇದಿರೆಡೆಯಾಡಿದಡೆ ಮಹಾದ್ರೋಹ. ||೩೩||

೪೫

ಗೃಹಸ್ಥಧರ್ಮದ ಗುರುವಿನ ದೀಕ್ಷಾಚಾರ್ಯನ ಭೇದ
ಪಿಂಡೋತ್ಪತ್ತ್ಯ ಜಾತಿ ಗೋತ್ರ ಛಾಂದಸ ಭೇದ
ಸಲಕ್ಷಣ ನೀತಿ ಭಕ್ತಿ ಸಂಪೂರ್ಣ ಕಳೆಯನರಿತು
ಕುಚಿತ್ತ ಕುಹಕ ಕ್ಷುದ್ರ ಪಿಸುಣತ್ವ ಅಸಿಘಾತಕ ಪಾರದ್ವಾರ
ಇಂತಿವು ಮುಂತಾದವೆಲ್ಲವ ಸಂತೈಸಿ ಸೋದಿಸಿ
ಹದಿನೆಂಟನೆಯ ದೋಷಂಗಳ ವಿಭಾಗಿಸಿ ತೋರಿ
ಪಾಪದ ಹೆಚ್ಚುಗೆಯ ಪುಣ್ಯದ ಸನ್ನದ್ಧವಂ ತೋರಿ
ಹದಿನೆಂಟು ಸೂತ್ರವಂ ಪ್ರಕರಣಮಂ ಮಾಡಿ
ಜಾನು ಜಂಘೆ ಕಟಿ ನಾಭಿ ಹೃದಯಮಧ್ಯ
ಕಂಠ ಕರ್ಣ ಜಿಹ್ವೆ ನಾಸಿಕ ನಯನ
ಕಪಾಲ ಕರ ಮುಂತಾಗಿ ಪೂರ್ವಾಶ್ರಯಂಗಳಂ ಬಿಡಿಸಿ
ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡುವಲ್ಲಿ
ಸ್ಥೂಲದ ವ್ಯವಹರಣೆ ಸೂಕ್ಷ್ಮದ ಪ್ರಕೃತಿ
ಕಾರಣದ ಪ್ರಮೇಯವಂ ಕಾಣಿಸಿಕೊಂಡು
ರಸ ಗಂಧ ರೂಪು ಶಬ್ದ ಸ್ಪರ್ಶ ಪಂಚೇಂದ್ರಿಯಂಗಳಲ್ಲಿ ಸಂಶಯಮಂ ಪರಿಹರಿಸಿ
ಮನ ವಚನ ಕಾಯ ತ್ರಿಕರಣವಂ ಶುದ್ಧಾತ್ಮವಂ ಮಾಡಿ
ಈಶ್ವರಧ್ಯಾನದಿಂದ ಕರಕಮಲವಂ
ಕಪಾಲದ ಮೇಲೆ ಮೂರ್ತಿಗೊಳಿಸಿ
ಧ್ಯಾನಪ್ರಯೋಗಮಂ ಕಲ್ಪಿಸಿ ಜ್ಞಾನಪ್ರಯೋಗಮಂ ವೇಧಿಸಿ
ಮೇಲೆ ಪ್ರಾಣಲಿಂಗಪ್ರತಿಷ್ಠೆಯ ಮಾಡುವಲ್ಲಿ
ಅಂಗಕ್ಕೆ ಆಚಾರ ಆತ್ಮಂಗೆ ಅರಿವು ಈ ಗುಣ ಸಂಭವಿಸಿದ ಮೇಲೆ
ಹಸ್ತಮಸ್ತಕದ ಸಂಯೋಗವ
ಇಷ್ಟತನುವಿಂಗೆ ಇಷ್ಟಲಿಂಗವ ಸಂಬಂಧಿಸಬೇಕು.
ಇದು ಚತುರ್ವಿಧಮತದ ಆಚಾರ್ಯನಂಗ, ಗುರುಸ್ಥಲದ ಭಿತ್ತಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ
ಗುರುದೀಕ್ಷಾಸೂತ್ರ. ||೩೪||

೪೬

ಘಟಾಕಾಶ ಮಠಾಕಾಶದಲ್ಲಿ ತೋರುವ ಬೆಳಗು
ಘಟಮಠವೆಂಬ ಉಭಯ ಇರುತಿರಲಿಕ್ಕೆ ರೂಪುಗೊಂಡಿತ್ತು.
ಬಯಲು ಘಟಮಠವೆಂಬ ಭೇದಂಗಳಳಿಯಲಾಗಿ

ಆಕಾಶತತ್ವದಲ್ಲಿ ನಿಶ್ಚಿಂತವನೆಯ್ದಿ ಮಹದಾಕಾಶದಲ್ಲಿ ಲೀಯವಾದುದು
ವ್ಯತಿರಿಕ್ತವೆಂಬುದು ನಾಮಶೂನ್ಯ, ಐಕ್ಯನ ಅರ್ಪಿತಸ್ಥಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೩೫||

೪೭

ಜಿಹ್ವೇಂದ್ರಿಯ ಗುಹ್ಯೇಂದ್ರಿಯದಲ್ಲಿ
ಜಿಹ್ವೇಂದ್ರಿಯ ಆತ್ಮಮನೋಹರಲಿಂಗಕ್ಕೆ
ಗುಹ್ಯೇಂದ್ರಿಯ ಚಲನೆ
ಉಚಿತದಲ್ಲಿ ಅರ್ಪಿತವ ಮುಟ್ಟುವ ಭೇದವಾವುದು ?
ಇಂತೀ ಜಿಹ್ವೆ, ಗುಹ್ಯದಲ್ಲಿ ನಿರತನಾದವಂಗೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಕ್ಕೆ ನಿರತನು. ||೩೬||

೪೮

ಜೀವಾತ್ಮನಳಿದು ಪರಮಾತ್ಮನಾಗಬೇಕೆಂಬಲ್ಲಿ
ಆ ಪರಮಾತ್ಮನ ಪರವಶದಲ್ಲಿ ಬೆರೆಸಬೇಕೆಂಬುದು ಅದಾವಾತ್ಮ ?
ಸ್ಥೂಲ ಸೂಕ್ಷ್ಮ ಕಾರಣ ಇಂತೀ ತನುತ್ರಯಂಗಳಲ್ಲಿ
ಕೀಳ ಬಿಟ್ಟು ಮೇಲ ಬೆರಸಬೇಕೆಂಬುದು ಅದಾವಾತ್ಮ ?
ಹಿಂದೆ ಮಾಡಿದ ಕರ್ಮವ ಇಂದರಿದು
ಮುಂದಣ ಮುಕ್ತಿ ಎಂಬುದು ಅದಾವಾತ್ಮ ?
ತಿತ್ತಿಯಲ್ಲಿ ಹೊಕ್ಕ ವಾಯು ಒತ್ತಿದಡೆ ಹೋಗಿ
ಎತ್ತಿದಡೆ ತುಂಬಿ ಮತ್ತೆ ಇರಿಸಿದಡೆ ಸತ್ತಹಾಗೆಯಿಪ್ಪುದು ಅದಾವಾತ್ಮ ?
ಮೃತ ಘಟ, ಚೇತನ ಘಟಂಗಳಲ್ಲಿ ಹೊರಳಿ ಮರಳುವುದು ಅದಾವಾತ್ಮ ?
ಇಂತೀ ಗುಣದ ವಾಯುಧಾರಣದಿಂದ ಅಷ್ಟಾಂಗಯೋಗ ಕರ್ಮಂಗಳ
ಮಾಡುವ ಯೋಗಿಗಳೆಲ್ಲರೂ ಮುಕ್ತರಪ್ಪರೆ ?
ಭೂನಾಗ ಭೂಮಿಯೊಳಗಿದ್ದು ಉಸುರಿಂಗೆ ಉಬ್ಬಸವಿಲ್ಲದಂತೆ
ಜಲಚರ ಜಲದಲ್ಲಿದ್ದು ಆ ಜಲವ ನಾಸಿಕ ಬಾಯಿಗೆ ಹೊಗಲೀಸದಂತೆ
ನೇತ್ರ ಶ್ರೋತ್ರಂಗಳಲ್ಲಿ ಜಲವೆ ಮನೆಯಾಗಿ ಇಪ್ಪ ತೆರ.
ಆವಾವ ಜಾತಿಗೂ ಆ ವಿಷಯಗೋತ್ರ ಲಕ್ಷಣಭೇದ.
ಸಾಧಕ ಸಾಧನೆಗಳಿಂದ ಅಸಾಧ್ಯವ ಸಾಧಿಸಬಾರದು.
ಅಸಾಧ್ಯ ವೇದ್ಯವಾದವ, ಕರ್ಮಕಾಂಡಿಯಲ್ಲ
ತ್ರಿವಿಧಮಲಕ್ಕೆ ಸಲ್ಲ, ತಥ್ಯಮಿಥ್ಯವಿಲ್ಲ.
ಹೆಚ್ಚು ಕುಂದೆಂಬ ಶರೀರಕ್ಕೆ ಚಿತ್ತದ ಭಾರದವನಲ್ಲ.

ಸದ್ಭಕ್ತರ ಸದಮಲಯುಕ್ತರ ಸರ್ವವಿರಕ್ತರ
ಷಟ್‌ಸ್ಥಲಸಂಪನ್ನರ ಸರ್ವಾಂಗಲಿಂಗಿಗಳ
ಅಂಗದಲ್ಲಿ ನಿಜ ಹಿಂಗದಿಪ್ಪ ಆತ ನಿರಂಗ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು. ||೩೭||

೪೯

ತತ್ವಂಗಳಿಂದ ಗೊತ್ತ ನೋಡಿಹೆನೆಂದಡೆ
ಮರ್ಕಟ ದರ್ಪಣದಂತೆ, ತಾನಾಡಿದಂತಲ್ಲದೆ
ಬೇರೊಂದು ಗುಣವಿಲ್ಲ.
ಗಿರಿಯ ಗಹ್ವರದಲ್ಲಿ ಕರೆದಡೆ ಕರೆದಂತೆ
ವಿಶ್ವಾಸವೆಂತ ಅಂತೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ ಹಾಂಗಿಪ್ಪನು. ||೩೮||

೫೦

ತತ್ವಸೂತ್ರ ಶಕ್ತಿಸಂಬಂಧವಾಗಿಹುದು.
ಜ್ಞಾನಸೂತ್ರ ಬಿಂದುಸಂಬಂಧವಾಗಿಹುದು.
ಕಳಾಸೂತ್ರ ದಿವ್ಯತೇಜಃಪ್ರಕಾಶ ಸಂಬಂಧವಾಗಿಹುದು.
ವರ್ತುಳ ಗೋಮುಖ ಗೋಳಕಾಕಾರದಲ್ಲಿ ಲೀಯಲ್ಪಟ್ಟುದು ಲಿಂಗಭೇದ.
ಆಹ್ವಾನದಿಂದ ಆರೋಪಿಸಿ ಸ್ವಯವಾದುದು
ಆ ಪರಮಾನಂದದಲ್ಲಿ ಪರವಶನಾಗದೆ ನಿಂದ ಅರಿವು ತಾನೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು. ||೩೯||

೫೧

ತನ್ನ ತಾನರಿತೆನೆಂಬಲ್ಲಿ ತಾನಾರು? ಅರಿತುದೇನಯ್ಯಾ?
ತನ್ನ ಮರೆದು ಇದಿರಿಂಗೆ ಅರಿವ ಹೇಳುವಲ್ಲಿ
ಆ ಮರೆದ ಅರಿವಿಂಗೆ ಕುರುಹುಂಟೆ?
ಇಂತೀ ಉಭಯದಲ್ಲಿ ತಿಳಿದು ಮತ್ತೆ
ವಚನ ನಿರ್ವಚನವೆಂಬುದು ಎಲ್ಲಿ ಅಡಗಿತ್ತು ಹೇಳಾ?
ತನ್ನಲ್ಲಿ ತೋರಿದ ಸ್ವಪ್ನ ತನಗೆ ಭೀತಿ ನಿರ್ಭೀತಿಯಾದಂತೆ
ಇದಿರ ಘಟ್ಟಕ್ಕೆ ಪಡಿಪುಚ್ಚವುಂಟೆ?
ಇಂತೀ ಭಾವವ ತಿಳಿದಲ್ಲಿ ಆ ವಸ್ತು ತನಗೆ ಅನ್ಯಭಿನ್ನವಿಲ್ಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು. ||೪೦||

೫೨

ತರುವಿನ ಕಿಚ್ಚಿನಂತೆ, ಅರಗಿನ ಉರಿಯ ಯೋಗದಂತೆ
ಮಾಣಿಕ್ಯದ ಮೈಸಿರಿಯಂತೆ
ಅಪ್ಪು ಹೆಪ್ಪಳಿಯದೆ ಮೌಕ್ತಿಕವಾದಂತೆ
ಕರ್ಪುರದ ಘಟ್ಟದಲ್ಲಿ ಕಿಚ್ಚು ಹುಟ್ಟುತಲೆ ದರ್ಪ ಗೆಡುವಂತೆ
ಅರಿವು ತಲೆದೋರಿದಲ್ಲಿ ಇಂದ್ರಿಯ ನಷ್ಟವಪ್ಪುದು
ಸ್ವಾನುಭಾವಾತ್ಮಕನ ಸನ್ನದ್ಧ.
ಇಂತೀ ಉಭಯಸ್ಥಲದ ಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೪೧||

೫೩

ತ್ರಿವಿಧಲಿಂಗಕ್ಕೆ ಸೂತ್ರಭೇದ.
ಸ್ಥಾವರಲಿಂಗ ಬಾಣಲಿಂಗ ಇಷ್ಟಲಿಂಗಕ್ಕೆ,
ಪಂಚಸೂತ್ರದ ತ್ರಿವಿಧಲಿಂಗಕ್ಕೆ ಲಕ್ಷಣಭೇದ.
ಚಕ್ರದಂಡಕ್ಕೆ ಖಂಡಿಕಾದಂಡಕ್ಕೆ ಶಕ್ತಿಪೀಠ ಗೋಮುಖಕ್ಕೆ
ಪಂಚಾಂಗುಲದಲ್ಲಿ ಪ್ರಥಮಾಂಗುಲದ ರೇಖೆ ಮಧ್ಯದಲ್ಲಿ ಹೇಮ
ಪ್ರಥಮ ಅಂಗುಲ ಗತಿ ನಾಲ್ಕರಲ್ಲಿ ಏಕಾದಶ ಪ್ರಕಾರ ಪ್ರಯೋಗದಲ್ಲಿ
ಗುಣಿತದ ಸೂತ್ರ ಲೆಕ್ಕ ಪ್ರಯೋಗಿಸಿರೆ ಚಕ್ರದಂಡಭೇದ.
ಆ ಅರೆಪ್ರಯೋಗ ಸೂತ್ರ ಖಂಡಿಕಾದಂಡ.
ಆ ಉಭಯಭೇದ ಸೂತ್ರಸಂಬಂಧ ಗೋಮುಖ
ಸೂತ್ರಾವಟ್ಟ ಪರಿವರ್ತನ ಪ್ರಯೋಗಸಂಬಂಧ.
ವಿಸ್ತೀರ್ಣಕ್ಕೆ ದಿಗ್ವಳಯಕ್ಕೆ ಸರ[ಳ]ರೇಖೆ
ಶುದ್ಧಪೀಠಿಕಾವಳಯಕ್ಕೆ ಮೇಲೆ ಲಿಂಗಪ್ರಯೋಗ ಚಕ್ರ.
ಖಂಡಿಕಾಶಕ್ತಿಪೀಠಕ್ಕೆ ಲಿಂಗಪ್ರಮಾಣ ಲಕ್ಷಣಭೇದ.
ಕುಬ್ಜ ದೀರ್ಘ ಹರಿವರಿಯಿಲ್ಲದೆ ಪ್ರಮಾಣ ಪಂಚಸೂತ್ರವಾಗಿ
ರವಿ ಶಶಿ ಪವನ ಪಾವಕ ಪವಿತ್ರಯೋಗಿ ರೇಖೆ
ಮುಂತಾದ ಲಕ್ಷಣಯುಕ್ತಿಯಲ್ಲಿ ಪ್ರತಿಷ್ಠೆ ಶೈವಲಿಂಗಭೇದ.
ಆ ಪ್ರಮಾಣುವಿನಲ್ಲಿ ಸ್ಥೂಲಕ್ಕೆ ಸ್ಥೂಲ ಸೂಕ್ಷ್ಮಕ್ಕೆ ಸೂಕ್ಷ್ಮ.
ಈ ಸೂತ್ರದಲ್ಲಿ ಬಾಣಲಿಂಗ ಇಷ್ಟಲಿಂಗದ ಲಕ್ಷಣಯುಕ್ತಿ.
ಇಂತೀ ಭೇದ ಉತ್ತಮ ಕನಿಷ್ಠ ಮಧ್ಯಮವೆಂದು
ಸಂಕಲ್ಪಕ್ಕೊಳಗಹ ವೇದಾಂತ ಪ್ರಥಮಪ್ರತಿಷ್ಠೆ
ಆಚಾರ್ಯನ ಕರ್ಮಕ್ರೀ.

ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ
ಆಚಾರ್ಯನಂಗ. ||೪೨||

೫೪

ತ್ರಿವಿಧವ ಮಲವೆಂದರಿತು
ತನ್ನ ಸುಖಕ್ಕೋಸ್ಕರವಾಗಿ ವಸ್ತುವಿನಿಂದ
ನಿರ್ಮಲವಾಯಿತ್ತೆಂದು ಮುಟ್ಟಬಹುದೆ?
ಲಿಂಗಭೋಗೋಪಭೋಗಂಗಳೆಂದು ಬಿಟ್ಟ,
ನಿರ್ಮಾಲ್ಯವನರ್ಪಿಸಬಹುದೆ?
ಇಂತಿವನರಿದು ಅರ್ಪಿಸುವಲ್ಲಿ ಸಲ್ಲದೆಂಬುದ ತಾನರಿತು
ಮತ್ತೆ ಸಲುವುದೆಂಬಲ್ಲಿ ಅನರ್ಪಿತ ಅರ್ಪಿತವುಂಟೆ?
ಇಂತಿವ ದೃಷ್ಟದಿಂದ ಲಕ್ಷಿತನಾಗಿ ಮುಟ್ಟುವ ತೆರನ
ನೀವೆ ಬಲ್ಲಿರಿ ನಾವರಿಯೆವು.
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ ಬಲ್ಲ. ||೪೩||

೫೫

ದೃಕ್ಕು ಗುರುವಿನ ಭಾವ, ದೃಶ್ಯ ಶಿಷ್ಯನ ಯುಕ್ತಿ.
ಆತ್ಮ ಘಟದಂತೆ, ಕರ್ತೃಭೃತ್ಯಭಾವ.
ಇಂತೀ ಉಭಯ ಏಕವಾದಲ್ಲಿ ನಿರ್ವಿಜ ನಿರಿಯಾಣ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಉಭಯವಾದ ಭೇದ. ||೪೪||

೫೬

ದೊರಕುವನ್ನಕ್ಕರ ನಿಸ್ಪೃಹ.
ದೊರಕಿದ ಮತ್ತೆ ಸಂಸಾರಿಯೆ?
ಇಂತೀ ಉಭಯವನರಿಯದೆ ಪೂಜಿಸಿಕೊಂಬ
ಹಿರಿಯರ ನಾನರಿದೆ, ತ್ರಿವಿಧವೆಂಬ ಮಾರಿಯ ಮುಂದೆ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ಅರಿದಹನೆಂದು. ||೪೫||

೫೭

ಧರೆ ಜಲ ಅನಲ ಅನಿಲ ಇವು ಮುಂತಾದುವಕ್ಕೆ
ಅಳಿವುದಕ್ಕೆ ಉಳಿವುದಕ್ಕೆ ಆತ್ಮಭೇದವಾವುದು?
ಶ್ರುತಿ ಮುಂತಾದ ತರ್ಕಂಗಳಿಂದ ಹೊತ್ತು ಹೋರಿಹೆನೆಂದಡೆ

ರಥದ ಕೀಲಿನಂತೆ ಮಾತಿಗೆ ಮಾತುಂಟು.
ಪೃಥ್ವಿಯ ಮೇಲಣ ನದಿ ತಟಾಕ ಅಪ್ಪುಮಯವೆಲ್ಲವು
ಸಿಂಧುವಿನ ತಪ್ಪಲಿಗೆ ಎಯ್ದುವಂತೆ ಇದು ವಸ್ತುಮಯದ ಹಾಹೆ.
ಈ ಗುಣ ಏಕವಸ್ತುವಿನ ನಿಜ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾ
ಎಂಬ ಮುಂಡಿಗೆ. ||೪೬||

೫೮

ಧ್ಯಾನದಿಂದ ಮನದ ಕೊನೆಯಲ್ಲಿ ವಸ್ತುವ ಕಟ್ಟಿತಂದು
ಇಷ್ಟಲಿಂಗದ ಗೊತ್ತಿನಲ್ಲಿ ಬೈಚಿಟ್ಟಿರಬೇಕೆಂಬುದು ಇದಾರ ದೃಷ್ಟವಯ್ಯಾ?
ಆ ದೃಷ್ಟಕ್ಕೆ ಆ ಮೂರ್ತಿ ಒಂದೆಂಬುದನರಿಯದೆ
ನೆನೆವುದು ನೆನೆಹಿಸಿಕೊಂಬುದು ಉಭಯವಾದಲ್ಲಿ ಸಂದೇಹದ ಸಂದು.
ಆ ಸಂದನಳಿದಲ್ಲಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನು ತಾನೆ. ||೪೭||

೫೯

ನಂದಿಯೆಂಬ ಗಣಿತದ ಲೆಖ್ಖದಲ್ಲಿ ಸರ್ವವೆಲ್ಲವೂ ಹೊಂದಿ
ಜಾಗರದಿಂದ ಸಂದು ಕವಲಾದಂತೆ
ಈ ಗುಣ ಲಿಂಗೋದ್ಭವದ ಭೇದ.
ಈ ಗುಣ ಜಗದ ಸಂದೇಹಿಗಳಿಗೆ ಹಾಕಿದ ಕಲ್ಲಿ
ಚನ್ನಬಸಮ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾ ಎಂಬ ಭಾಷೆ ||೪೮||

೬೦

ನ ಎಂಬಕ್ಷರದ ಭೇದ ಜನನ ನಾಸ್ತಿಯಾದ ವಿವರ.
ಮ ಎಂಬಕ್ಷರದ ಭೇದ ಮರಣ ನಾಸ್ತಿಯಾದ ವಿವರ.
ಶಿ ಎಂಬಕ್ಷರದ ಭೇದ ಸ್ವೀಕರಣೆ ನಾಸ್ತಿಯಾದ ವಿವರ.
ವ ಎಂಬಕ್ಷರದ ಭೇದ ವಕಾರ ನಾಸ್ತಿಯಾಗಿ ಸಾಕಾರವಳಿದ ಭೇದ.
ಯ ಎಂಬಕ್ಷರದ ಭೇದ ತತ್ವಮಸಿಯೆಂಬ ಭಿತ್ತಿಯ ಮೆಟ್ಟದೆ
ಉತ್ಪತ್ಯ ಸ್ಥಿತಿ ಲಯವೆಂಬ ತ್ರಿವಿಧವ ಮುಟ್ಟದೆ
ಅದು ನಿಶ್ಚಯವಾದಲ್ಲಿ ಪಂಚಾಕ್ಷರಿಯ ಭೇದ.
ಇಂತೀ ಭೇದಂಗಳಲ್ಲಿ ಜಪಧ್ಯಾನವ ಧ್ಯಾನಿಸಿ
ಇಷ್ಟ ಕಾಮ್ಯ ಮೋಕ್ಷಂಗಳೆಂಬ ಮೂರಂಗುಲವನರಿವುದು.
ಸದೃಷ್ಟ ತನ್ನಷ್ಟವೆಂಬ ಉಭಯದ ಅಂಗುಲವ ಕಂಡು

ಚತುರ್ವಿಧಫಲಪದಂಗಳಲ್ಲಿ ಭಾವಿಸಿ ಕಲ್ಪಿಸದಿಪ್ಪುದು ಜಪಧ್ಯಾನ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೪೯||

೬೧

ನಾನಾ ವರ್ಣಕ್ಕೆ ಶ್ವೇತಾಂಗ ಅಂಗವಾಗಿ
ಮಿಕ್ಕಾದ ವರ್ಣಂಗಳಿಗೆ ಇಂಬುಗೊಟ್ಟಂತೆ.
ಐಕ್ಯಸ್ಥಲ ಆದಿಯಾಗಿ, ಶರಣಸ್ಥಲ ಸಂಬಂಧಿಯಾಗಿ
ಪ್ರಾಣಲಿಂಗಿಸ್ಥಲ ಏಕವಾಗಿ, ಪ್ರಸಾದಿಸ್ಥಲ ಪರಿಪೂರ್ಣವಾಗಿ
ಮಾಹೇಶ್ವರಸ್ಥಲ ಮಾಯಾಮಲಂ ನಾಸ್ತಿಯಾಗಿ
ಭಕ್ತಿಸ್ಥಲ ಸರ್ವಗುಣಸಂಪನ್ನವಾಗಿ
ಅಳಿವು ಉಳಿವು ಗರ್ಭಾಂತರವನರಿತು
ನೋಡನೋಡ ಮಹದೊಡಲಿಕ್ಕೆ
ರಂಜನೆ ಬಿಸಿಲೊಳಗಡಗಿ, ಬಿಸಿಲು ರಂಜನೆಯ ನುಂಗಿ
ಉತ್ತರ ಪೂರ್ವವ ಹೊತ್ತಾಡಿ, ಪೂರ್ವ ಉತ್ತರದಲ್ಲಿ ನಿಶ್ಚಯವಾಗಿ
ಬೆಸುಗೆ ಕಲೆದೋರದೆ ಉಭಯಚಕ್ಷು ಏಕರೂಪವಾಗಿ
ಲಕ್ಷಿಸಿ ನಿರ್ಧರವೆಂದಲ್ಲಿ ಗುರಿಯನೆಚ್ಚ ಕರ ಅಹುದಲ್ಲಾ
ಎಂಬುದನರಿದಂತೆ ಕ್ರೀಯಲ್ಲಿ ಮಾರ್ಗ, ಜ್ಞಾನದಲ್ಲಿ ನಿಶ್ಚಯ
ಇಂತಿವನರಿದು ಅರುಹಿಸಿಕೊಂಬ ಭೇದ.
ಕರ್ತೃಭೃತ್ಯಸಂಬಂಧ ವಸ್ತು ಶಕ್ತಿಸಮೇತವಾದ ಭೇದ.
ಇಂತೀ ಸ್ಥಳಂಗಳು, ಭಕ್ತಿಗೆ ನಾಮರೂಪಾದ ಭೇದವನರಿತು
ಸ್ಥಲಂಗಳ ಹಂಚಿಹಾಕಿ, ಕುರುಡ ದಡಿವಿಡಿದು ನಡೆವಂತೆ ಷಟ್‌ಸ್ಥಲಭೇದ.
ಆ ಭೇದಲೋಲುಪ್ತನಾಗಿ ಸರ್ವಾಂಗಲಿಂಗಭರಿತನಾಗಿ
ಆಹ್ವಾನ ವಿಸರ್ಜನವಿಲ್ಲದೆ ನಾಮರೂಪೆಂಬ ಉಭಯವಳಿದು
ಕಲೆ ತಲೆದೋರದೆ ನಿಂದ ಉಳುಮೆ ಐಕ್ಯಸ್ಥಲಕೂಟ ನಿರ್ವಾಹ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೫೦||

೬೨

ನಾನಾ ವೇದ ಶಾಸ್ತ್ರ ಪುರಾಣ ಆಗಮ ಪಾಠಕನಾದಲ್ಲಿ
ಪರಿಭಾಷೆ ಪರತತ್ವದ ಮಾತನಾಡಿದಡೇನು?
ಜಿಹ್ವೇಂದ್ರಿಯಕ್ಕೆ ಹರಿಯದೆ, ಗುಹ್ಯೇಂದ್ರಿಯಕ್ಕೆ ಸಿಕ್ಕದೆ
ಬಂದ ತೆರನನರಿದು ವಿಚಾರಿಸಿ ಮುಟ್ಟುವ ಕಟ್ಟನರಿತು
ಅರ್ಪಿತದ ಭೇದವನರಿದು

ವಸ್ತುವಿಪ್ಪೆಡೆಯಲ್ಲಿ ಅರ್ಪಿಸಬಲ್ಲಡೆ ವಿರಕ್ತನು, ಅಲ್ಲದಿರ್ದಡೆ ಪಂಡಿತನಪ್ಪನು.
ಇಂತೀ ಉಭಯದ ಸೊಲ್ಲನರಿಯಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೫೧||

೬೩

ನಾನಾ ಶಬ್ದ ಸಂಸ್ಕೃತ ದೇಶೀಯ ವ್ಯಾಕರಣಸೂತ್ರ
ಮುಂತಾದ ಬಿಂದು ಮಾತೃಕ ತ್ರಿಲಿಂಗಭೇದ
ಉಪನಿಷತ್ತು ಸಂಹಿತೆ ಜಯಂತಿ ಚತು[ರ್ಥಿ]ಕ ನಿಮಿಷಕ
ಈ ಉಭಯ ಪ್ರತಿಷ್ಠೆ ವಾಚಕ ಮತಿ ವಾಯುಬಿಂದು ಕೂಡಿದ ಆಮ್ನೆ
ಇಂತಿವ ಲಕ್ಷಿಸಿ ನಿಂದಡೂ ತ್ರಿಗುಣಮಲತ್ರಯಕ್ಕೆ ಹೊರಗಾಗಬೇಕು.
ಹೊರಗಾದಡೂ ದುರ್ವಾಸನೆ ಆತ್ಮಭೇದಂಗಳಲ್ಲಿ
ನಿಜವಸ್ತುವ ಕುರಿತು ಸ್ವಸ್ಥನಾಗಿರಬೇಕು.
ಇಂತೀ ಗುಣಸ್ವಸ್ಥನಾಗಿ ನಿಂದಲ್ಲಿ
ಅಂಗಕ್ಕೆ ಆಚಾರ, ಮನಕ್ಕೆ ಅರಿವು.
ಅರಿವೆಂಬುದೊಂದು ಕುರುಹು ನಿಷ್ಪತ್ತಿಯಹನ್ನಕ್ಕ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಾ ಎನುತ್ತಿರಬೇಕು. ||೫೨||

೬೪

ನಾನಾ ಶಬ್ದಸೂತ್ರ ಲಕ್ಷಣಂಗಳಲ್ಲಿ ನ್ಯೂನಾಧಿಕವಿಲ್ಲದಂತೆ
ವಚನಂಗಳ ರಚನೆಗಳಲ್ಲಿ ನಿರ್ವಚನ ಕಾರಣನಾಗಿ
ಸರ್ವಗುಣಸಂಪನ್ನನಾರ್ಗಿದಲ್ಲಿ
ಭೂತಹಿತವನರಿತು ಆತ್ಮಚಿತ್ತವ ಮರೆದು
ಶರಣ ಸಂಭಾಷಣೆಯಲ್ಲಿ ಶಿವಮೂರ್ತಿಧ್ಯಾನಂಗಳಲ್ಲಿ
ಶಿವಕಥನ [ಯಥಾ ಕಥನ] ಪ್ರಸಂಗಳಲ್ಲಿ
ಶಿವಪೂಜಾ ಮೂರ್ತಿಧ್ಯಾನಂಗಳಲ್ಲಿ
ಉಭಯವಳಿದು ಏಕವಾಗಿ ಸ್ವೀಕರಿಸಿದಲ್ಲಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವ ಅವಧರಿಸಿದ ಅಂಗ. || ೫೩ ||

೬೫

ನಾನಾ ಶ್ರುತಿತತ್ವಂಗಳಲ್ಲಿ
ಸಾಮ ಅಥರ್ವಣ ಯಜುಸ್ಸು ಋಗ್ವೇದ ಮೊದಲಾದ
ಶಂಕರಸಂಹಿತೆ ಉಪೇಕ್ಷೆ ಅಭಿಸಂಧಿ ಚಿಂತನೆ ಸೂತ್ರಾವರಣಭೇದ
ತಂತ್ರ ಖಂಡಿತ ಖಂಡನ ಉತ್ತರ ನಿರುತ್ತರ

ಮುಂತಾದ ಯುಕ್ತಿಯಲ್ಲಿ ನುಡಿದಡೂ
ಶಬ್ದಶಾಸ್ತ್ರಕ್ಕೆ ಹೆಚ್ಚುಗೆವಂತನಲ್ಲದೆ ವಿರಕ್ತಿಗೆ ಸಲ್ಲ.
ತತ್ವಂಗಳನೆಲ್ಲವನರಿವುದಕ್ಕೆ
ರುಜೆಗೆ ಚಿಕಿತ್ಸೆಯಂತೆ ಫಲ ಫಲಿಸುವಂತೆ
ವೇದನೆ ವೇಧಿಸಿ ವಿಭೇದವಿಲ್ಲದೆ ನಿಂದಂತೆ
ವಾಚಕಾವೃತ್ತಿಯ ಕ್ರೀ ಸರ್ವದುರ್ಗುಣವ ನೇತಿಗಳೆವ
ವಸ್ತುಕೂಟಯೇಕವಾದಲ್ಲಿ ನುಡಿ ನಡೆ ಸಿದ್ಧಾಂತ.
ಇದು ಸತ್ಪಥಮಾರ್ಗದ ಭಿತ್ತಿಯ ಹಾದಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ. ||೫೪||

೬೬

ಪರುಷರಸ ಸೋಂಕಿದಲ್ಲಿ ಲೋಹಕ್ಕಿದಿರೆಡೆ ಉಂಟೆ?
ಸಿಂಧುವೊಳಕೊಂಡ ದ್ರವ್ಯಕ್ಕೆ ಋತುಕಾಲ ವೈಶಾಖಮಾಸಂಗಳಲ್ಲಿ
ಜಲವಿಂಗಲು ಮತ್ತೆ ಕಂಡೆಹೆವೆನಲುಂಟೆ?
ಸರ್ವಸಂಗಪರಿತ್ಯಾಗವ ಮಾಡಿದ ಯೋಗಿ
ತಂದೆ ತಾಯಿ ಸಹೋದರ ಬಂಧುಗಳೆಂದು
ಪಕ್ಷವ ಅಂಗೀಕರಿಸಿದಡೆ
ತ್ರಿಭಂಗಿಯ ಭುಂಜಿಸಿದವ
ಮರವೆಯ ಸುರಾಪಾನವ ಅಂಗೀಕರಿಸಿದವ, ಆತ ಲಿಂಗಾಂಗಿಯಲ್ಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಕ್ಕೆ ಸಲ್ಲ. ||೫೫||

೬೭

ಪವಳ ಪದ್ಮಾಕ್ಷಿ ಪುತ್ರಜೀವಿ ಮೌಕ್ತಿಕ ರುದ್ರಾಕ್ಷಿ
ಇವು ಮುಂತಾದ ಪವಣಿಗೆಯಲ್ಲಿ
ಸದ್ಯೋಜಾತಮುಖಕ್ಕೆ ಪವಳಮಾಲೆ
ವಾಮದೇವಮುಖಕ್ಕೆ ಪದ್ಮಮಾಲೆ
ಅಘೋರಮುಖಕ್ಕೆ ಪುತ್ರಿಕಮಾಲೆ
ತತ್ಪುರುಷಮುಖಕ್ಕೆ ಮೌಕ್ತಿಕಮಾಲೆ
ಈಶಾನಮುಖಕ್ಕೆ ರುದ್ರಾಕ್ಷಿ
ನೂರೆಂಟರಲ್ಲಿ ಪುನರಪಿಯಾಗಿ
ದ್ವಾದಶದಲ್ಲಿ ಶತಸಂಖ್ಯೆಯಲ್ಲಿ ಜಪಧ್ಯಾನದಲ್ಲಿ ಅಹ್ವಾನಿಸಲಿಕ್ಕೆ
ನವಬ್ರಹ್ಮತ್ವ ದಶಾವತಾರಕ್ಕೆ ಮುಖ್ಯತ್ವ

ಏಕಾದಶ ಶತರುದ್ರರಿಗೆ ಗಣಂಗಳ ಪದಕ್ಕೆ ಸಾಲೋಕ್ಯವಪ್ಪುದು
ಈ ಪಂಚಾಕ್ಷರಿಯ ಪ್ರಣಮು.
ಇದು ಮೂಲದಿವ್ಯಮಂತ್ರ.
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ
ಪಂಚಾಕ್ಷರಿಯ ಭೇದ. ||೫೬||

೬೮

ಪಶು ಪಾಷಂಡಿ ಚಾರ್ವಾಕ ಮಾತುಗಂಟಿ
ಎಷ್ಟನಾಡಿದಡೂ ಶಿವಯೋಗಸಂಬಂಧ ಸಂಪನ್ನನೊಪ್ಪುವನೆ?
ರಾಜ್ಯಭ್ರಷ್ಟಂಗೆ ತ್ಯಾಗಭೋಗವುಂಟೆ?
ನಪುಂಸಕಂಗೆ ಜಿತೇಂದ್ರಿಯತ್ವವುಂಟೆ?
ದರಿದ್ರಂಗೆ ನಿಸ್ಪೃಹತ್ವವುಂಟೆ?
ನಿಶ್ಚೈಸಿ ನಿಜವಸ್ತುವನರಿಯದವನು
ಕರ್ತೃಭೃತ್ಯಸಂಬಂಧವನೆತ್ತ ಬಲ್ಲನೊ?
ಮೃತಘಟದ ವೈಭವದಂತೆ, ವಿಧವೆಯ ಗರ್ಭದಂತೆ
ನಿನ್ನಲ್ಲಿಯೆ ನೀನರಿ ದ್ವೈತಾದ್ವೈತಂಗಳೆಂಬವ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೫೭||

೬೯

ಪೂರ್ವಾಂಗ ಪಕ್ಷ ದಹನ ಸಮಾಧಿಗಳೆಂಬಲ್ಲಿ
ಭಸ್ಮ ಮೃತ್ತಿಕೆಗಳಿಂದ ಉಭಯನಾಮಭೇದವಾದ ತೆರನ ತಿಳಿಯಬೇಕು.
ಶೈವ ವೈಷ್ಣವವೆಂಬಲ್ಲಿ ಪಂಚಭೂತಿಕಾತ್ಮಕ್ಕೆ
ಪೃಥ್ವಿ ಅಪ್ಪು ತೇಜ ವಾಯು ಆಕಾಶಂಗಳೆಂಬಲ್ಲಿ
ಶೈವ ಸಾಂಖ್ಯಮತಕ್ಕೆ ಬೇರೆ ಧರೆ ಜಲ ಅನಲ ಅನಿಲ
ಈ ಚತುರ್ಗುಣ ಮುಂತಾದವಕ್ಕೆ
ಭೇದನಾಮವ ಕಂಡಲ್ಲಿ ವಿಭೇದವುಂಟು
ಉಂಟೆಂದಡೆ ತರ್ಕ. ಈ ಕುತರ್ಕಂಗಳಲ್ಲಿ ಲಕ್ಷಿತವಲ್ಲದೆ
ಲೋಹವ ಲೋಹದ ಬಲಿಕೆಯಿಂದ ಖಂಡಿಸುವಂತೆ
ನಿಃಸತ್ವವ ಸತ್ವದಿಂದ ಪರಿಹರಿಸುವಂತೆ
ತೆಪ್ಪವ ನೀರದಪ್ಪದಿಂದ ಒತ್ತುವಂತೆ
ಶಕ್ತಿಯ ಸಂಭವ ವಿರಕ್ತಿಯ ನಿಶ್ಚಯ
ಉಭಯಚಕ್ಷುಗೂಡಿ ಇಷ್ಟವ ಏಕದೃಷ್ಟಿಯಿಂದ ಕಾಂಬಂತೆ

ಇಲ್ಲ ಉಂಟೆಂಬುದು ನಿಜದಲ್ಲಿಯೆ ಅದೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿಯೆ. ||೫೮||

೬೦

ಪ್ರಜ್ವಲಿಸಿ ಪ್ರಕಾಶಿಸಿ ಆ ಬೆಳಗು ಹರಿವರಿಯಾಗಿ
ಅವಗವಿಸುವ ಭೇದ, ಅದು ಉದಯಿಸಿದ ಘಟವುಳ್ಳನ್ನಕ್ಕ
ಆ ಶಿಲೆಯನೊಡೆದು ಚೂರ್ಣಿಸಲಿಕ್ಕೆ ಆ ಚೂರ್ಣವ ಪಿಂಡವ ಮಾಡಿ
ಆ ಗಂಭೀರದ ಬೆಳಗು ಶಿಥಿಲವಾಯಿತ್ತು.
ಚೂರ್ಣದಲ್ಲಿ ಆ ಕಳೆಯ ಭೇದದಂತೆ ಐಕ್ಯನ ನಾಮನಷ್ಟ ಕೂಟಲೇಪ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೫೯||

೬೧

ಪ್ರಥಮಾಂಗುಲದಲ್ಲಿ ಉಪದೃಷ್ಟ.
ಉಭಯಾಂಗುಲದಲ್ಲಿ ಕರ್ಮಕ್ರೀ.
[ತ್ರಿವಿ]ಧಾಂಗುಲದಲ್ಲಿ ಸಂ[ಶ]ಯಸಿದ್ಧಿ.
ಚತುರ್ವಿಧ ಅಂಗುಲದಲ್ಲಿ ಚತುರ್ವಿಧ ಫಲಪದ.
ಪಂಚಮಪಕ್ಷದಲ್ಲಿ ಸಂಚಿತ ಪ್ರಾರಬ್ಧ ಆಗಾಮಿಗಳೆಂಬ
ಭವದ ಗೊಂಚಲ ಸಂಚಂಗಳಿಲ್ಲ.
ಇದು ಪಂಚಾಕ್ಷರಿಯ ಪ್ರಣಮಮಂತ್ರದ ಕ್ರೀ
ಆಚಾರ್ಯನಂಗ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೬೦||

೬೨

ಬೀಜವ ಕಳೆದು ತರು ಬೆಳೆದಂತೆ
ತರುವ ಕಳೆದು ಬೀಜ ಆ ತರುವಿಂಗೆ ಕುರುಹಾದಂತೆ
ಪರಮ ಜೀವನ ಕಳೆದು
ಆ ಜೀವಕ್ಕೆ ತಾ ಪರಮನೆಂಬ ಪರಿಭ್ರಮಣವ ಕಳೆದು ಪರಶಕ್ತಿಸಮೇತವಾದಲ್ಲಿ
ಮರದಲ್ಲಿ ಹುಟ್ಟಿದ ಕಿಚ್ಚು, ಮರ ನಷ್ಟವಾಗಿ ತಾ ನಷ್ಟವಾದಂತೆ
ಅರಿದ ಅರಿವು ಕುರುಹಿನಲ್ಲಿ ಪರಿಹರಿಸಿದ ಮತ್ತೆ
ತೆರೆ ದರುಶನ ಉಭಯವಡಗಿತ್ತು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿದಲ್ಲಿ. ||೬೧||

೭೩

ಭಕ್ತಂಗೆ ಸ್ಪರ್ಶನ ವಿಷಯವಳಿದು
ಮಾಹೇಶ್ವರಂಗೆ ಅಪ್ಪು ವಿಷಯವಳಿದು
ಪ್ರಸಾದಿಗೆ ರುಚಿ ವಿಷಯವಳಿದು
ಪ್ರಾಣಲಿಂಗಿಗೆ ಉಭಯದ ಭೇದ ವಿಷಯವಳಿದು
ಶರಣಂಗೆ ಸುಖದುಃಖ ವಂದನೆ ನಿಂದೆ
ಅಹಂಕಾರ ಭ್ರಮೆ ವಿಷಯವಳಿದು.
ಐಕ್ಯಂಗೆ ಇಂತೀ ಐದರ ಭೇದದಲ್ಲಿ
ಹಿಂದಣ ಮುಟ್ಟು ಮುಂದಕ್ಕೆ ತಲೆದೋರದೆ
ಮುಂದಣ ಹಿಂದಣ ಸಂದೇಹದ ವಿಷಯ ನಿಂದು
ಕರ್ಪುರವುಳ್ಳನ್ನಕ್ಕ ಉರಿಯ ಭೇದ
ಉರಿವುಳ್ಳನ್ನಕ್ಕ ಕರ್ಪುರದಂಗ.
ಉಭಯ ನಿರಿಯಾಣವಾದಲ್ಲಿ ಐಕ್ಯಸ್ಥಲ ನಾಮನಿರ್ಲೇಪ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೬೨||

೭೪

ಭಕ್ತ ಬ್ರಹ್ಮತತ್ವ, ಮಾಹೇಶ್ವರ ವಿಷ್ಣುತತ್ವ
ಪ್ರಸಾದಿ ರುದ್ರತತ್ವ, ಪ್ರಾಣಲಿಂಗಿ ಈಶ್ವರತತ್ವ
ಶರಣ ಸದಾಶಿವತತ್ವ, ಐಕ್ಯ ಮಹಾಭೇದತತ್ವ.
ಇಂತೀ ಷಡ್ಭಾವದ ಆದ್ಯಂತದಿಂದ ಭೇದವ ಹಂಚಿಹಾಕಿ
ನೀನು ಅಸಾಧ್ಯನಾದೆಯಲ್ಲಾ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. ||೬೩||

೭೫

ಭಕ್ತಿಯೆಂಬುದು ಬೇರು, ವಿರಕ್ತಿಯೆಂಬುದೆ ಮರ, ಫಲವೆಂಬುದೆ ಜ್ಞಾನ.
ಪಕ್ವಕ್ಕೆ ಬಂದಿತ್ತೆಂಬಾಗಲೆ ಅವಧಿಜ್ಞಾನ.
ತೊಟ್ಟು ಬಿಟ್ಟಲ್ಲಿಯೆ ಪರಮಜ್ಞಾನ.
ಸವಿದಲ್ಲಿಯೆ ಅಂತರೀಯಜ್ಞಾನ.
ಸುಖ ತನ್ಮಯವಾದಲ್ಲಿಯೆ ದಿವ್ಯಜ್ಞಾನ.
ದಿವ್ಯ ತೇಜಸ್ಸು ಹಿಂಗದಲ್ಲಿಯೆ ಪರಿಪೂರ್ಣಜ್ಞಾನ.
ಅದು ಮಹದೊಡಲೆಂಬುದಕ್ಕೆ ಎಡೆಯಿಲ್ಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಅಪ್ರಮಾಣಾದ ಕಾರಣ. ||೬೪||

೭೬

ಭಕ್ತಿಸ್ಥಲ ವರ್ತುಳರೂಪಾಗಿಹುದು.
ಮಾಹೇಶ್ವರಸ್ಥಲ ಖಂಡಿಕಾವರಣವಾಗಿಹುದು.
ಪ್ರಸಾದಿಸ್ಥಲ ತ್ರಿರೇಖೆಯಾಗಿಹುದು.
ಪ್ರಾಣಲಿಂಗಿಸ್ಥಲ ಶಕ್ತಿನಾಭಿಸ್ವರೂಪವಾಗಿಹುದು.
ಶರಣಸ್ಥಲ ಪಂಚಸೂತ್ರಪ್ರಕಾರವ ಕೂಡಿಕೊಂಡು
ಪೀಠಿಕಾಸಂಬಂಧವಾಗಿ, ಗೋಳಕಾಕಾರಮೂರ್ತಿಯಾಗಿಹುದು.
ಐಕ್ಯಸ್ಥಲ ದಿಗ್ವಳಯಂಗಳಿಲ್ಲದೆ ಭೇದನಾಮಶೂನ್ಯವಾಗಿ
ತಿಳಿವೆಡೆಯಲ್ಲಿ ಉಂಟಾಗಿ, ತಿಳಿದ ಮತ್ತೆ ಇದಿರೆಡೆಯಿಲ್ಲವಾಗಿ
ಇಂತೀ ಪಂಚಬ್ರಹ್ಮಮೂರ್ತಿ ನೀವಾಗಿ
ಲೀಲೆಗೆ ಉಮಾಪತಿಯಾಗಿ, ಲೀಲೆ ನಿಂದಲ್ಲಿ ಸ್ವಯಂಭುವಾಗಿ
ಇಂತೀ ಐವರಲ್ಲಿ ಭೇದಿಸಿ ಆರರಲ್ಲಿ ವೇಧಿಸಿನಿಂದ
ನಿಜಸಂಬಂಧಸೂತ್ರ
ಆ ಭೇದನಿಂದಲ್ಲಿ ನಿರತಿಶಯ ಸ್ವಾನುಭಾವ.
ಉಭಯದ ಭಾವ ನೀನಾದೆಯಲ್ಲಾ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. ||೭೫||

೭೭

ಭೇದ ಉತ್ತರಕಾವ್ಯ ಪೂರ್ವಾಂತರ ಜೈಮಿನಿ ಭುವನಕೋಶ
ಕಾಲಚಕ್ರ ಭೂಚಕ್ರ ಷಡಾಧಾರ ಸಸ್ಮಿತಚಕ್ರ
ಆತ್ಮವಾಯು ಸಂಪರ್ಕ ಸಂಭವ ಚಕ್ರಂಗಳಲ್ಲಿ
ಪೂಣೆಹೊಕ್ಕು ನೋಡಿದಡೂ ಕರ್ಮವಾರ ತಿಳಿದು
ವರ್ಮ ಮೂರನರಿದು ಮಿಕ್ಕಾದ ದುಃಕರ್ಮದಲ್ಲಿ ಹೋಗದೆ
ನಿಶ್ಚಿಂತನಾದ ನಿರತ ಸ್ವಯಾನುಭಾವಿಗೆ
ಉಂಡಡೆ ಉಪವಾಸಿಯಾಗಿಪ್ಪ, ಬಳಸಿದಡೆ ಬ್ರಹ್ಮಚಾರಿಯಾಗಿಪ್ಪ.
ಭಾಗೀರಥಿಯಂತೆ ಆವ ಜೀವದಿಂದ ನಿಂದಡೂ
ಸಮಪ್ರಮಾಣ ಗರಳವ ಮೀರಿದಾಗ
ವಾದಿಗೆ ವಾದವ ನುಡಿಯ, ಶಾಸ್ತ್ರದ ಸಂದಣಿಯ ಹೊಗ
ಪುರಾಣದ ಪೂರ್ವವ ವಿಸ್ತರಿಸ.
ವೇದವ ವಿಭೇದವೆಂದು, ಆಹ್ವಾನ ವಿಸರ್ಜನವಿಲ್ಲ.
ಸರ್ವಗುಣದಲ್ಲಿ ಸಂಪೂರ್ಣನಾದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನಾದ ಶರಣನು. || ೭೬ ||

೭೮

ಭೇರಿಯ ಹೊಯ್ಪಡೆ ಒಡಗೂಡಿ ನಾದ ಎಯ್ದುವಂತೆ
ತ್ರಿವಿಧಭಕ್ತಿಯಲ್ಲಿ ಮುಟ್ಟುವ ಚಿತ್ತ ನಿಶ್ಚಯವಾಗಿ ನಿಂದುದು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ
ವಿಶ್ವಾಸ ಕ್ರೀ ಜ್ಞಾನಭರಿತ ಸರ್ವಾಂಗಲಿಂಗಿಯ ಸ್ಥಲ. ||೬೭||

೭೯

ಮನವಿಕಾರದಲ್ಲಿ ತೋರುವ ಸುಳುಹು
ತನುವಿಕಾರದಲ್ಲಿ ಕಾಣಿಸಿಕೊಂಡ ಮತ್ತೆ
ಅರಿವಿನ ಭೇದ ಎಲ್ಲಿ ಅಡಗಿತ್ತು?
ಅರಿದು ತೋರದ ಮತ್ತೆ
ನೆರೆ ಮುಟ್ಟಬಲ್ಲುದೆ ತ್ರಿವಿಧದ ಗೊತ್ತ?
ಇಂತೀ ಭಗಧ್ಯಾನರನೊಪ್ಪ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು. ||೬೮||

೮೦

ಮಹಾಶೂನ್ಯ ಅಂಧಕಾರ ಸುರಾಳ ನಿರಾಳ
ನಿರಾಲಂಬದಿಂದತ್ತ ತನ್ಮಯ ಸ್ವಯಂಭು ಸನ್ನದ್ಧವಾಗಿ
ಅನಾದಿವಸ್ತು ಆದಿಸ್ವರೂಪವ ತಾಳ್ದು ಬಂದ ವಿವರ:
ನಾದ ಬಿಂದು ಕಳೆ ಈ ತ್ರಿವಿಧಭೇದ ಏಕವಾಗಿನಿಂದ ದೆಸೆಯಿಂದ
ಆ ವಸ್ತುವಿನ ತಿಲಾಂಶು ಸದಾಶಿವಮೂರ್ತಿಯ ಅಂಶೀಭೂತವಾಗಿ
ಏಕಾಂತ ಪ್ರಮಥ ರುದ್ರನ ದೆಸೆಯಿಂದ
ದಶರುದ್ರರ ಸಂಬಂಧ ವೈಷ್ಣವಭೇದ.
ಆ ವೈಷ್ಣವ ದಶ ಅವತಾರಭೇದ.
ದಕ್ಷ ಮುಂತಾದ ನವಬ್ರಹ್ಮತ್ವದಿಂದ ಮನುಮುನಿಗಳು ಮುಂತಾದ
ಯಕ್ಷ ರಾಕ್ಷಸ ಶಕ್ತಿದೇವತೆ ಕುಲ ಮುಂತಾದ ಷಡ್ದರ್ಶನ
ಪಕ್ಷಪಾತ ಭೇದಂಗಳಾಗಿ ಇಪ್ಪ ತೆರನ
ವೇದದ ಹಾದಿಯಿಂದ ಶಾಸ್ತ್ರದ ಸಂದೇಹದಿಂದ
ಪುರಾಣದ ಪೂರ್ವ ಮುಂತಾದ ಯುಕ್ತಿಯಿಂದ ತಿಳಿದು
ಉತ್ತಮ ಮಧ್ಯಮ ಕನಿಷ್ಠವೆಂಬ ದೇವತ್ವಕುಲವನರಿ.
ಇಂದುವಿನ ಕಳೆಯಿಂದ ಆ ಇಂದುವಿನ ಕಳೆಯನರಿವಂತೆ
ಜ್ಯೋತಿಯ ಕಳೆಯಿಂದ ಆ ಜ್ಯೋತಿಯ ಲೇಸು ಕಷ್ಟವ ಕಾಂಬಂತೆ

ನಿಮ್ಮ ಶಾಸ್ತ್ರಸಂಪದಗಳಲ್ಲಿ ಏಕಮೇವನದ್ವಿತೀಯನೆಂಬ
ಶ್ರುತಿಯ ವಿಚಾರಿಸಿಕೊಂಡು ಇದ್ದ ಮತ್ತೆ ಆರಡಿಯೇತಕ್ಕೆ?
ಇಂತೀ ಭೇದಕ್ಕೆ ವಿಶ್ವಮಯನಾಗಿ ವಿಶ್ವಚಕ್ಷುವಾಗಿ
ತತ್ವಂಗಳಿಗೆ ಮುಖ್ಯವಾಗಿ ಉತ್ಪತ್ಯ ಸ್ಥಿತಿ ಲಯಕ್ಕೆ ಕರ್ತೃವಾಗಿ
ಆಚಾರ್ಯಮತಕ್ಕೆ ಅಂಗವಾಗಿ ಲೀಲಾಗುಣದಿಂದ ಶಕ್ತಿಸಮೇತವಾಗಿ ಮತ್ತೆ
ನಿನ್ನ ಇಚ್ಛೆ ಹಿಂಗಿ ನಿಶ್ಚಯವಾಗಿ ಸ್ವಯಂಭುವಾದೆಯಲ್ಲಾ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. ||೭೯||

**೮೧**

ಮಾತಿನ ರಚನೆಯಿಂದ ಗೆಲಿದೆಹೆನೆಂದಡೆ
ಬಿಂಗದ ಹೊರೆಯಂತೆ ಅದರಂಗವುಳ್ಳನ್ನಕ್ಕ
ಸಂದು ಸಂಶಯದಲ್ಲಿ ಸಂದು ನೋಡಿಹೆನೆಂದಡೆ
ಸಂಗಿಗೆ ನೀರು ಉಪ್ಪರಕ್ಕೆ ಬಂದುದುಂಟೆ?
ಇಂತೀ ಶ್ರುತಿಸಂದೇಹಿಗಳಿಗೆ ಹಾಕಿದ ಮುಂಡಿಗೆ.
ಏಕಚಿತ್ತದಲ್ಲಿ ನಿಂದ ನಿರುತಂಗೆ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾ ಎಂಬ ಭಾಷೆ||೮೦||

**೮೨**

ರತ್ನದ ಪುಂಜವ ಬೆಗಡವನಿಕ್ಕುವಲ್ಲಿ
ಮೊನೆ ಮುಂದೆ ಸವೆದ ಮತ್ತೆ ಪೂರ್ವಕ್ಕೆ ಉತ್ತರವಿಲ್ಲ.
ನಿಶ್ಚೈಸಿ ಉತ್ತರ ಕಡೆಗಾಣಿಸಿದಲ್ಲಿ ಮುಟ್ಟಿ ಮುಂಚುವ
ಅರ್ಪಿತ ಅಲ್ಲಿಂಯೆ ಉಪದೃಷ್ಟ ನಷ್ಟ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೮೧||

**೮೩**

ರಸ ಗಂಧ ರೂಪು ಶಬ್ದ ಸ್ಪರ್ಶ
ಪಂಚೇಂದ್ರಿಯಂಗಳಲ್ಲಿ ಅರ್ಪಿಸುವನ್ನಕ್ಕ ಭಕ್ತ.
ರೂಪು ರುಚಿಯ ಕಂಡರ್ಪಿಸುವನ್ನಕ್ಕ ಮಾಹೇಶ್ವರ.
ಇಚ್ಛೆಯನರಿತು ಸಾಕು ಬೇಕೆಂಬನ್ನಕ್ಕ ಪ್ರಸಾದಿ.
ಕಂಡಲ್ಲಿ ಮುಟ್ಟದೆ ಕಾಣಿಸಿಕೊಂಡು ಮುಟ್ಟಿಹೆನೆಂಬಲ್ಲಿ ಪ್ರಾಣಲಿಂಗಿ.
ಮಾದನೆ ನಿಂದೆಗೆ ಒಳಗಹನ್ನಕ್ಕ ಶರಣ.
ಮುಟ್ಟುವ ತಟ್ಟುವ ತಾಗುವ ಸೋಂಕುವ ಸುಖವನರಿದು
ಕೂಡಬೇಕೆಂಬನ್ನಕ್ಕ ಐಕ್ಯ.

ಆ ಗುಣ ಪರುಷವ ಸೋಂಕಿದ ಲೋಹದಂತಾದುದು ಷಟ್‌ಸ್ಥಲ.
ಇಂತೀ ಆರನವಗವಿಸಿ ಬೇರೊಂದು ತೋರದಿಪ್ಪುದು
ಐಕ್ಯಸ್ಥಲಲೇಪಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೭೨||

**೭೩**

ರಿತು ರುತು ಪ್ರಾತಃಕಾಲ
ಅರ್ಘ್ಯಂಗಳ ನ್ಯಾಸ ಅಂಗುಲವಾಸ ಪಚ್ಚಳ ಮಡಿ ಕಟಿಸೂತ್ರ
ಗುಹ್ಯ ನಾಭಿ ಪಂಚಾಗ್ನಿ ಮಧ್ಯ ಬಾಹುಗಳ ಜಿಹ್ವೆ
ನಾಸಿಕ ನಯನ ಕರ್ಣ ಲಲಾಟ ಮಸ್ತಕ ಕರ ಸಂಜ್ಞೆಗಳಲ್ಲಿ
ನ್ಯಾಸಸೂತಕನಾಗಿ, ಜಪಗ್ರಹಿತನಾದಡೂ
ಶಿವಧ್ಯಾನಮೂರ್ತಿಯಿಂದ ಪರಿಹರಿಸಬೇಕು,
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ ಕರ್ಮಕ್ರೀ. ||೭೩||

**೭೪**

ಲಿಂಗವೇ ಪ್ರಾಣವಾದ ಮತ್ತೆ
ಬೇರೆ ನೆನೆಯಿಸಿಕೊಂಬುದು ಇನ್ನಾವುದಯ್ಯಾ?
ಇದಿರಿಟ್ಟು ಬಂದುದ ಮುನ್ನವೆ ಮುಟ್ಟಿ
ಅರ್ಪಿತ ಅವಧಾನಂಗಳಲ್ಲಿ ಸೋಂಕಿದ ಮತ್ತೆ
ಪುನರಪಿಯಾಗಿ ಸೋಂಕಿದಡೆ ನಿರ್ಮಾಲ್ಯ ಕಂಡಯ್ಯಾ.
ಮೊನೆಗೂಡಿ ಹಾಯ್ವ ಕಣೆಯಂತೆ ಅರ್ಪಿತಾಂಗ ಸಂಗಭೇದ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿದಲ್ಲಿ. ||೭೪||

**೭೬**

ಲಿಂಗೋದ್ಭವ ಐವತ್ತೆರಡು ಅಕ್ಷರಂಗಳಲ್ಲಿ
ವರ್ತುಳ ಗೋಮುಖ ಗೋಳಕಾಕಾರಕ್ಕೆ ಸಂಬಂಧಿಸುವಲ್ಲಿ
ಅಕಾರ ವರ್ತುಳಾಕಾರಕ್ಕೆ, ಉಕಾರ ಗೋಮುಖಕ್ಕೆ
ಮಕಾರ ಗೋಳಕಾಕಾರಕ್ಕೆ.
ಇಂತೀ ಆದಿ ಆಧಾರ ಆತ್ಮ ಬೀಜ ಓಂಕಾರದಿಂದ
ಉದ್ಭವವಾದ ಅಕ್ಷರಾತ್ಮಕ ವಸ್ತುವನರಿತು
ಬ್ರಹ್ಮ ವರ್ತುಲದಲ್ಲಿ ಅಡಗಿ, ವಿಷ್ಣು ಗೋಮುಖದಲ್ಲಿ ನಿಂದು
ರುದ್ರ ಗೋಳಕಾಕಾರಕ್ಕೆ ಸಂಬಂಧಿತನಾಗಿ
ಉತ್ಪತ್ಯ ಸ್ಥಿತಿ ಲಯಂಗಳ ಲಕ್ಷಿಸುತ್ತ ಜಗಹಿತಾರ್ಥವಾಗಿ

ಸ್ವಯಂಭು ಉಮಾಪತಿಯಾದೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಾದೆಹೆನೆಂದು. ||೨೫||

### ೮೭

ಲೋಹದ ಪಿಂಡವೆಂದಡೆ
ಅಲಗಾಗದ ಮುನ್ನವೆ ಇರಿಯಬಲ್ಲುದೆ?
ಕುಸುಮದ ಗಿಡುವೆಂದಡೆ ಕುಸುಮವಾಸನೆಯ ಕೊಂಡು
ಎಸಗುವುದಕ್ಕೆ ಮುನ್ನವೆ, ಆ ಗಿಡುವಿನ ಪರ್ಣನ ಸುವಾಸನೆವುಂಟೆ?
ಇಂತೀ ದ್ವೈತ ಅದ್ವೈತದ ಭೇದ ಉಭಯಸ್ಥಲ ವಿವರ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೨೬||

### ೮೮

ವಾದದ ಹೇಮ ಸ್ವಯ ಹೇಮವ ಕೂಡಿ
ವೇಧಿಸಲಿಕ್ಕೆ ವಿಭೇದವಾದುದಿಲ್ಲ.
ಶಾಸ್ತ್ರಂಗಳ ಶಬ್ದದ ಯುಕ್ತಿ, ತನ್ನ ಸ್ವಯದ ಸ್ವಾನುಭವದ ಕೂಟ.
ಇಂತೀ ಉಭಯವೇಕವಾದಲ್ಲಿ ನಡೆನುಡಿ ಸಿದ್ಧಾಂತ
ಆತ ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನಾಗಿ. ||೨೭||

### ೮೯

ವಾಯುವಡಗಿದ ಮಹಾರ್ಣವದಂತೆ
ನಾದವನೊಳಕೊಂಡ ತನ್ಮಯದಂತೆ
ಶೂನ್ಯ ಸೋಂಕಿಲ್ಲದ ನಿಶ್ಚಯದಂತೆ
ವಸ್ತುವಿನಲ್ಲಿ ಲೇಪವಾದ ಸುಚಿತ್ತನಂಗ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವ ಕೂಡಿದ ಕೂಟ. ||೨೮||

### ೯೦

ವಾರಿ ವಾಯುವಿನ ಸಂಗದಿಂದ ಕಲ್ಲಾದ ಮತ್ತೆ
ನೋಡ ನೋಡ ಕರಗಲೇತಕ್ಕೆ?
ವಸ್ತುವಿನ ಚಿತ್ತ ವೇಧಿಸಿದ ಮತ್ತೆ
ಅರಿದು ಮರೆದೆನೆಂಬುದು ಅದೇತಕ್ಕೆ?
ಚಿಪ್ಪಿನಲ್ಲಿ ಅಪ್ಪು ನಿಂದು ಹೆಪ್ಪಳಿಯದೆ ದೃಷ್ಟವ ಕಂಡ ಮತ್ತೆ
ಚಿತ್ತ ವಸ್ತುವಿನಲ್ಲಿ ಎಯ್ದಿದ ಮತ್ತೆ
ದೃಷ್ಟ ಉಭಯದಂತಿರಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೨೯||

೯೧

ವಿಶ್ವಾಸವನರಿತಲ್ಲಿ ಗುರುಭಕ್ತಿ.
ಶ್ರದ್ಧೆ ಸನ್ಮಾರ್ಗಂಗಳಲ್ಲಿ ಪೂಜಿಸಿ ವೇಧಿಸುವುದು ಶಿವಲಿಂಗಭಕ್ತಿ.
ಲಾಂಛನಕ್ಕೆ ನಮಸ್ಕಾರ, ಆಪ್ಯಾಯನಕ್ಕೆ ಅನ್ನ
ಅರಿವಿನ ತೆರನನರಿತು ನೆರೆ ವಿಶ್ವಾಸ ಜಂಗಮಭಕ್ತಿ.
ಇಂತೀ ಕ್ರೀಯಯಲ್ಲಿ ಮಾರ್ಗ, ಭಾವದಲ್ಲಿ ನೆಮ್ಮುಗೆ.
ಇಂತೀ ಗುಣ ಕಾಯ ಜೀವದ ಭೇದ.
ಕರ್ತೃಭೃತ್ಯಸಂಬಂಧ ಏಕವಾದುದು.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನಾದುದು. ||೮೦||

೯೨

ವಿಹಂಗನ ತತ್ತಿಗೆ ಸ್ಪರ್ಶನದಿಂದ
ಕೂರ್ಮನ ಶಿಶುವಿಂಗೆ ಕೂರ್ಮೆಯಿಂದ
ಚತುಃಪಾದಿ ನರಕುಲಕ್ಕೆ ಕುಚಗಳಿಂದ
ಮಿಕ್ಕಾದ ಜೀವಜಾತಿ ಲಕ್ಷಣಕ್ಕೆ ತಮ್ಮ ಸ್ಥಾನದಲ್ಲಿಯೆ ತೃಪ್ತಿ.
ಆವ ಸ್ಥಲವ ನೆಮ್ಮಿದಲ್ಲಿಯೂ ಭಾವಶುದ್ಧವಾದಲ್ಲಿಯೆ ಮುಕ್ತಿ.
ಉಭಯಕ್ಕೆ ಉಪಮಾತೀತನಾದಾಗಲೇ ನಿರ್ವೀಜ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೮೧||

೯೩

ವೃಕ್ಷ ಎಲೆಗಳೆವುದಲ್ಲದೆ
ತರುವಿನ ಸಲೆ ನೆಲೆ ಸಾರಗಳದು ಫಲಿಸುವುದುಂಟೆ?
ಅಂಗದಲ್ಲಿ ಸೋಂಕಿದ ಮರವೆಯ ಕಳೆಯಬಹುದಲ್ಲದೆ
ಮನ ವಚನ ಕಾಯ ತ್ರಿಕರಣದಲ್ಲಿ ವೇಧಿಸಿದ
ಮರವೆಯ ಹರಿವ ಪರಿಯಿನ್ನೆಂತೊ?
ಉರಿ ವೇಧಿಸಿದ ತರುವಿನಂತೆ ಅದಕ್ಕೆ ಪರಿಹರವಿಲ್ಲ.
ಅರಿದು ಮಾಡುವ ದೋಷಕ್ಕೆ ಪಡಿಪುಚ್ಚವಿಲ್ಲ.
ಆ ಭೇದವನರಿದು ಹರಿಯಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೮೨||

೯೪

ವೇದಕ್ಕೆ ಯಜ್ಞ, ಶಾಸ್ತ್ರಕ್ಕೆ ವಿಸ್ತರ
ಪುರಾಣಕ್ಕೆ ಬೋಧೆ, ಆಗಮಕ್ಕೆ ಉಭಯ ನಿರುತ್ತರ.

ಇಂತಿವು ಆಚರಣೆಯ ಕರ್ಮ.
ಇಂತಿವು ಉತ್ತರಗತಿಯನರಿವುದಕ್ಕೆ ಪೂರ್ವಗತಿ ಪಥವಾಗಿ
ಕುಂದಣಕ್ಕೆ ಗಂಧ ಕೂಡಿದಂತೆ ನುಡಿನಡೆ ಉಭಯವೊಂದಾದಲ್ಲಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನೆ. ||೮೩||

**೯೫**

ವೇದದ ಉತ್ತರವ ವಿಚಾರಿಸಿ, ಶಾಸ್ತ್ರದ ಸಂದೇಹವ ನಿಬದ್ಧಿಸಿ
ಪುರಾಣದ ಅಭಿಸಂಧಿಯ ತಿಳಿದು
ಇಂತಿವು ಮೊದಲಾದ ಆಗಮಂಗಳಲ್ಲಿ ಚಿಂತಿಸಿಯೆ ನೋಡಿ
ಸಕಲಯುಕ್ತಿ ಶಬ್ದಸೂತ್ರಂಗಳಲ್ಲಿ ಪ್ರಮಾಣಿಸಿಯೆ ಕಂಡು
ಮಾತುಗಂಟಿತನದಲ್ಲಿ ತರ್ಕಶಾಸ್ತ್ರಂಗಳಿಗೆ ಹೋಗದೆ
ಪಂಚವಿಂಶತಿತತ್ವದೊಳಗಾದ ಅಧ್ಯಾತ್ಮ ಅದಿಭೌತಿಕವ ತಿಳಿದು
ಪಂಚಭೂತಿಕದ ಸಂಚಿತ ಪ್ರಾರಬ್ಧ ಆಗಾಮಿಗಳ ಸಂಚಿನ ಸಂಕಲ್ಪವ ತಿಳಿದು
ಪೃಥ್ವಿತತ್ವದ ಮಲ, ಅಪ್ಪುತತ್ವದ ಸಂಗ, ತೇಜತತ್ವದ ದಗ್ಧ,
ವಾಯುತತ್ವದ ಸಂಚಲ, ಆಕಾಶತತ್ವದ ಬಹುವರ್ಣಕೃತಿ.
ಇಂತೀ ಪಂಚಭೂತಿಕಂಗಳಲ್ಲಿ ತಿಳುವಳವಂ ಕಂಡು
ಕರಂಡವಲ್ಲಿ ನಿಂದ ಗಂಧದಂತೆ ತನ್ನಂಗವಿಲ್ಲದೆ
ಗಂಧ ತಲೆದೋರುವಂತೆ ವಸ್ತುಘಟಭೇದವಾದ ಸಂಬಂಧ.
ಇಂತೀ ತೆರನ ತಿಳಿದು ವಾಗ್ವಾದಂಗಳಲ್ಲಿ ಹೋರಿಹೆನೆಂದಡೆ
ಮಹಾನದಿಯ ವಾಳುಕದ ಮರೆಯ ನೀರಿನಂತೆ ಚೆಲ್ಲಿ ಕಂಡೆಹೆನೆಂದಡೆ
ಆ ನದಿವುಳ್ಳನ್ನಕ್ಕ ಕಡೆಗಾಣಿಸಬಾರದು.
ನಿಂದಲ್ಲಿ ಪ್ರಮಾಣುವಿಂದಲ್ಲದೆ ಮೀರಿ ತುಂಬದಾಗಿ
ಇಂತೀ ಶ್ರುತ್ಯರ್ಥವಿಚಾರದಿಂದ ಹಾಕಿದ ಮುಂಡಿಗೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾಯೆಂದು. ||೮೪||

**೯೬**

ವೇದ ವರ್ಣಕ, ಶಾಸ್ತ್ರ ಸಂದು, ಪುರಾಣ ಪುಚ್ಛವಿಲ್ಲದ ವೃಶ್ಚಿಕ
ಆಗಮ ಆಗುಭೇಗೆಯನರಿಯದ ಹೋರಾಟ.
ಇಂತಿವೆಲ್ಲವೂ ಐವತ್ತೆರಡಕ್ಷರದ ನಾಮಬೀಜ.
ತಪರಾಜಂಗೆ ಫಲ ಬಲಿಯಿತೆನಬಹುದೆ?
ದಿನನಾಯಕಂಗೆ ತಮ ರಮಿಸಿತೆನಬಹುದೆ? ಸುರಭಿಗೆ ಗರ್ಭ ಉದಿಸಿತೆನಬಹುದೆ ?
ಇಂತು ಸರ್ವಾಂಗ ಸಕಲಯುಕ್ತಿ ಸಂಪೂರ್ಣಂಗೆ

ನುಡಿಯೆ ವೇದ, ನಡೆಯೆ ಆಗಮ.
ಅಂಗಮಾರ್ಗಂಗಳಲ್ಲಿ ಸಂಬಂಧಿಸುವುದೆ ಶಾಸ್ತ್ರಸಂಪದ.
ಇಂತೀ ಅಕ್ಷರಾತ್ಮಕ ತಾನಾಗಿ, ಭಕ್ತಿಕಾರಣದಿಂದ ಲಕ್ಷಿತನಾದ ಕಾರಣ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಆಚಾರ್ಯನಾದ ಭೇದ. ||೬೬||

೬೭

ವೇದವೆಂಬುದು ವಾದ, ವೈದಿಕತ್ವ ಮಾಯಾಭೇದ.
ದೇವತಾ ದೇವತೆ ಕುಲ ಋಷಿ ಪ್ರಯೋಗಯಾಗಕ್ರಮ
ದಿಗ್ವಳಯ ಬಂಧನ, ಗ್ರಹಸಂಬಂಧಯೋಗ.
ಇಂತಿವು ಮೊದಲಾದ ಕರ್ಮಂಗಳಲ್ಲಿ ವ[ರ್ತಿ]ಸಿ ನಿಂದ ಸ್ವಯವಾವುದು ?
ಧರ್ಮಶಾಸ್ತ್ರವ ತಿಳಿದು, ಶಿಲ್ಪ ವೈದಿಕ ಜೋಯಿಸ
ಇವು ಮುಂತಾದ ನಾನಾ ಭೇದಂಗಳ ಹೇಳಿ
ತನ್ನ ಅಳಿವು ಉಳಿವು ಕಂಡುದಿಲ್ಲ.
ಪುರಾಣವನೋದಿ ಕೆಲರ್ಗೆ ಹೇಳಿ
ಪೂರ್ವಯಥಾಕಥನ ಮುಂತಾದ ರಾಮರಾವಣಾದಿಗಳು
ಚಕ್ರವರ್ತಿಗಳು ಮುಂತಾದ ಧರ್ಮಕರ್ಮಂಗಳನೋದಿ
ಬೋಧಿಸಿದಲ್ಲಿಯೂ ಸಫಲವಾದುದಿಲ್ಲ.
ಇಂತಿವನ್ನೆಲ್ಲವನರಿತು, ಉಭಯಸಂಧಿಯ ಉಪೇಕ್ಷಿಸಿದಲ್ಲಿ
ಬಿಡುಮುಡಿ ಉಭಯದ ಭೇದವ ತಾನರಿತು
ಮಲತ್ರಯಕ್ಕೆ ದೂರಸ್ಥನಾಗಿ
ತ್ರಿವಿಧಾತ್ಮಕ್ಕೆ ಅಳಿವು ಉಳಿವನರಿತು
ಆರಾರ ಮನ ಧರ್ಮಂಗಳಲ್ಲಿ ಭೇದವಿಲ್ಲದೆ ನುಡಿದು
ಅಭೇದ್ಯಮೂರ್ತಿಯ ತೋರಿ, ವಿಭೇದವ ಬಿಡಿಸಿ
ತರಣಿಯ ಕಿರಣದಂತೆ, ವಾರಿಯ ಸಾರದಂತೆ
'ಖಲ್ವಿದಂ ಬ್ರಹ್ಮವಸ್ತು'ವೆಂದಲ್ಲಿ, ಏಕಮೇವನದ್ವಿತೀಯನೆಂದಲ್ಲಿ
'ಓಂ ಭರ್ಗೋ ದೇವಸ್ಯ ಧೀಮಹಿ' ಯೆಂದಲ್ಲಿ
ಆದಿ ಪರಮೇಶ್ವರನೆಂದಲ್ಲಿ, ಆದಿ ಪುರುಷೋತ್ತಮನೆಂದಲ್ಲಿ
ಆರಾರ ಭೇದಕ್ಕೆ ಭೇದ.
ತ್ರಿಮೂರ್ತಿಗಳ ಜಗಹಿತಾರ್ಥವಾಗಿ
ಸಂಶಯಸಿದ್ಧಿಯಿಂದ ತಿಳಿವುದು.
ಸರ್ವಶಾಸ್ತ್ರದಿಂದ ಈ ಗುಣವಾಚಕರಿಗೆ

ದೂಷಣದಿಂದ ನುಡಿವರಿಗೆ ಹಾಕಿದ ಮುಂಡಿಗೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾ ಎಂಬೆನು. || ೮೬ ||

೯೮

ವೇದ ಶಾಸ್ತ್ರ ಪುರಾಣ ಆಗಮಂಗಳಿಂದ
ಸುಪಥದ ಹಾದಿಯನರಿತೆಹೆನೆಂದಡೆ ಸಂದೇಹದ ಸಂದು.
ಇವ ಹಿಂಗಿ ಕಂಡೆಹೆನೆಂದಡೆ ನಡಹಿಲ್ಲದ ಬಟ್ಟೆ.
ಒಂದ ಕಳೆದು ಒಂದರಲ್ಲಿ ನೋಡಿ ಅರಿತೆಹೆನೆಂದಡೆ ನೀರಿಲ್ಲದ ಏರಿ.
ಏರಿಯಿಲ್ಲದ ನೀರು ನಿಲಲರಿಯದಾಗಿ
ಇಂತೀ ವೇದದ ವಿಷಯ, ಶಾಸ್ತ್ರದ ಬಟ್ಟೆ
ಪುರಾಣದ ಪುಣ್ಯ, ಆಗಮದ ಯುಕ್ತಿ.
ಇಂತಿವ ತಿಳಿದು, ಖಂಡಿತರಿಗೆ ಉಭಯವಳಿದು
ಸಂದೇಹಿಗಳಿಗೆ ಮಾಯಾವಾದ, ವೈದಿಕಕ್ಕೆ ತ್ರಿಗುಣಭೇದ.
ಇಂತೀ ಏಕದಂಡ ದ್ವಿದಂಡ ತ್ರಿದಂಡ ಆಧ್ಯಾತ್ಮಭೇದ, ಶೈವಸಂಬಂಧ
ಇಂತೀ ಆಚಾರ್ಯಮತ ಸಂಬಂಧಗಳಲ್ಲಿ ಭೇದವನಿಂಬುಗೊಟ್ಟು
ವಿಭೇದಕ್ಕೆ ಒಳಗು ಹೊರಗಲ್ಲದೆ ನಿನ್ನನರಿವ ನಿಜಜ್ಞರುಗಳಲ್ಲಿ
ನಿಂದ ನಿಜಸ್ವರೂಪ ನೀನೆ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ. || ೮೭ ||

೯೯

ವೇದಶ್ರುತಿಯಿಂದ ವಸ್ತುವನರಿತೆಹೆನೆಂದಡೆ
ಆ ವೇದವೆ ಹಾದಿಯೆ ವಸ್ತುವ ಕಾಬುದಕ್ಕೆ ?
ಆ ವೇದ ಸರ್ವವು ಬ್ರಹ್ಮವೆಂದಲ್ಲಿ ವಸ್ತು ಎಲ್ಲಿ ಉಳಿಯಿತ್ತು ?
ಆ ತೆರನ ತಿಳಿದು ವೇದವಾರನರಸಿತ್ತು ?
ಶ್ರುತಿ ಯಾರ ಭೇದಿಸಿತ್ತು ?
ಆ ಗುಣ ನಾದಬಿಂದುಕಳೆಯೊಳಗಾದಲ್ಲಿ ವಸ್ತುತತ್ವರೂಪಾಯಿತ್ತು.
ಆ ಸ್ವರೂಪದ ಭೇದದಿಂದ ಪಂಚಭೌತಿಕದ ಗುಣದಿಂದ
ಪಂಚವಿಂಶತಿತತ್ವಂಗಳೆಲ್ಲವೂ ಗೊತ್ತಾದವು.
ನಾಲ್ಕು ವೇದ, ಹದಿನಾರು ಶಾಸ್ತ್ರ, ಇಪ್ಪತ್ತೆಂಟು ದಿವ್ಯಪುರಾಣಂಗಳಲ್ಲಿ
ವೇಧಿಸಿ ಭೇದಿಸಿ ಕಂಡೆನೆಂಬಲ್ಲಿ
ನಿಂದಿತ್ತು ನಿಜ ಸಂದೇಹಕ್ಕೆ ಒಳಗಾದುದಾಗಿ.
ತರ್ಕಂಗಳಿಂದ ತರ್ಕಿಸಿ ನೋಡಿ

ಮಿಕ್ಕಾದ ತತ್ವಂಗಳಲ್ಲಿ ಲಕ್ಷಿಸಿ ಪ್ರಮಾಣಿಸಿದಲ್ಲಿ
ವಸ್ತು ಹಲವು ಕುಲವೆಂದು ಕಲ್ಪಿಸಿ ನುಡಿವಲ್ಲಿ
ವಿಭೇದ ಪಕ್ಷವಲ್ಲದೆ ವಸ್ತು ಏಕರೂಪು.
ಜಲ ಬಹುನೆಲಂಗಳಲ್ಲಿ ನಿಂದು ಒಲವರವಿಲ್ಲದೆ
ಸಸಿ ವೃಕ್ಷಂಗಳ ಸಲಹುವಂತೆ
ಸರ್ವಗುಣಸಂಪನ್ನನಾದೆಯಲ್ಲಾ
ಪರಮಪ್ರಕಾಶ ಪರಂಜ್ಯೋತಿ ಪಂಚಬ್ರಹ್ಮಸ್ವರೂಪನಾದೆಯಲ್ಲಾ
ಎನಗೆ ನೀನಾದೆಹೆನೆಂದು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗಾ. ||೮೮||

೧೦೦

ವೇದೋತ್ತರ ಸಂಧಿ ಉಪಸನ್ನೆ ಸಂಜ್ಞೆ ಉತ್ತರ
ಚಿಂತನೆ ಖಂಡನೆಗಳಲ್ಲಿ ಭೃಗು, ದಧೀಚಿ, ಕಾಶ್ಯಪ, ಸಾಂಖ್ಯ, ಅಗಸ್ತ್ಯ
ಮೊದಲಾದ ಋಷಿವರ್ಗಂಗಳೆಲ್ಲರು
ವೇದದ ಕಡೆ ಮೊದಲೆಂದು ಪರಿಸಿ ವೇಧಿಸಿ
ಆ ವೇದ ಚಿಂತನೆಗೆ ಸಂದುದಿಲ್ಲ.
ಇಂತೀ ವೇದ ಮೊದಲು ಶಾಸ್ತ್ರ ಆಗಮ ಪುರಾಣಂಗಳಲ್ಲಿ
ಸನ್ನಿಧಿ ಸಮನ ಗಮನ ಪರಿಪೂರ್ಣವಾದುದಿಲ್ಲ.
ಒಂದು ವೇದ ನಾಮದ ಶಾಖೆವೊಂದಕ್ಕೆ
ಉಪನಯನ ಭೇದ ಸಂಖ್ಯೆ ಶತಸಹಸ್ರ
ಪುನರಪಿಯಾಗಿ ಬಪ್ಪಲ್ಲಿ ಒಂದು ಅಧ್ಯಾಯ ಸಂಬಂಧದಿಂದ.
ಆ ಸಂಬಂಧ ಶಾಖೆ ಉಚಿತವಹಾಗ
ವಿಷ್ಣುವಿಂಗೆ ಪರಮಾಯು, ಬ್ರಹ್ಮಂಗೆ ಉಪನಯನವಿಲ್ಲ
ಋಷಿವರ್ಗಕ್ಕೆ ವೇದೋಪದೇಶವಿಲ್ಲ.
ಇಂತೀ ಶಂಕೆಯ ಸಂಕಲ್ಪದಲ್ಲಿ ನೋಡಿ ಕಂಡೆಹೆನೆಂದಡೆ
ಚಕ್ರದ ಅಂಗುಲದ ಬಳಸಿನ ಲೆಕ್ಕದಂತೆ
ಇಂತೀ ವೇದದ ಹಾದಿಯಲ್ಲ, ಶಾಸ್ತ್ರದ ಸಂದೇಹವಲ್ಲ.
ಆಗಮಂಗಳಲ್ಲಿ ಭೇದ ವಿಭೇದವ ಕಂಡು
ತರ್ಕಂಗಳಲ್ಲಿ ಹೋರುವ ಕುತರ್ಕಿಯಲ್ಲ.
ಇಂತಿವ ನೇತಿಗಳೆದ ಸರ್ವಾಂಗಲಿಂಗಸಂಬಂಧವಾದ ಶರಣನು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೇ
ಅಂಗವಾದ ನಿರಂಗನು. ||೮೯||

೧೦೧

ವ್ಯತಿರಿಕ್ತವಾದ ಪರಿಪೂರ್ಣತ್ವ ಆದೆನೆಂದಲ್ಲಿ
ಅಚಲಿತವಪ್ಪ ನಿಜಚಲಿತನಾಗಿ ಚಲಿಸದೆ ನಿಂದ ಪರಿಯಿನ್ನೆಂತೊ?
ರತ್ನದ ಘಟಗೂಡಿ ಮುಚ್ಚಿದಡೆ ದೀಪ್ತಿ ಅಲ್ಲಿಯೆ ಅಡಗುವುದಲ್ಲದೆ
ಘಟ ಬೇರಿದ್ದು ಬೆಳಗ ಮುಚ್ಚಿಹೆನೆಂದಡೆ ಅಡಗಿದುದುಂಟೆ ಆ ಬೆಳಗು?
ಅದು ಕಾರಣದಲ್ಲಿ ಪರಿಪೂರ್ಣತ್ವವಾದಲ್ಲಿಯೆ ಇದಿರೆಡೆಯಿಲ್ಲ.
ಅರ್ಪಿತಕ್ಕೆ ಅಗ್ನಿ ಕೊಂಡ ಘೃತ ತಿಲ ಸಾರ ಮುಂತಾದವು ರೂಪಗೊಂಡವು.
ಅಲ್ಲಿಯೆ ಅಡಗಿದಂತೆ ಐಕ್ಯನ ಅರ್ಪಿತಸ್ಥಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೯೦||

೧೦೨

ಶಿವಾಧಿಕ್ಯಸಂಪನ್ನ ಶಿವಯೋಗಿಯಾದಲ್ಲಿ
ಶಿವತತಿ ಶಿವಾಚಾರ ಶಿವಾಧಿಕ್ಯ ಪಂಚಮುದ್ರೆ
ಪಂಚಾಚಾರ ಪ್ರಮಾಣು ಎಲ್ಲವು ಸರಿಯಲ್ಲದೆ
ಬೇರೆ ಅಲ್ಲಿ ಅನ್ಯರು ಎಮ್ಮವರೆಂದುಂಟೆ ?
ಅರಿವು ಕರಿಗೊಂಡವ ತನ್ನವ.
ಆಚಾರಕ್ಕೆ ಅನುಸರಣೆಯಿಲ್ಲದವ ತನ್ನವ.
ಈ ಉಭಯಕ್ಕೆ ಹೊರಗಾದವ ಅನ್ಯನೆಂದು
ಕಾಬುದು ವಿಚಾರಮತ, ಆಚಾರ್ಯಸ್ಥಲ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೯೧||

೧೦೩

ಶೈವವಾರು, ವೀರಶೈವ ಮೂರು, ಗುರುಸ್ಥಲವೈದು,
ಆಚಾರ್ಯನಂಗ ನಾಲ್ಕು, ಆಚಾರಕ್ಕೆ ಅಂಗವಾರು.
ಆತ್ಮಂಗೆ ಅರಿವು ಮೂರು.
ಮತ್ತಿವರೊಳಗಾದ ಷಡ್ದರುಶನಭೇದ.
ಆಚರಣೆ ಆಶ್ರಯಂಗಳು ವಿಶ್ವತೋಮುಖವಾಗಿಹವು.
ಚೀರದ ಬಾಯಿದಾರದಂತೆ ಕಟ್ಟುವುದು ಒಂದೆ ಭೇದ,
ಬಿಡುವುದು ಒಂದೆ ಭೇದ.
ಇಂತೀ ಸ್ಥಳಕುಳಂಗಳಲ್ಲಿ ಭೇದಂಗಳನರಿವುದು ಆಚಾರ್ಯನಿರವು.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗ ವಿಭೇದವಾದಭೇದ. ||೯೨||

೧೦೪

ಶ್ರೀಪತಿ ಶಿವಲೆಂಕ ಪಂಡಿತಾರಾಧ್ಯ ಏಕಾಂತದರಾಮ
ಇಂತೀ ಪ್ರಥಮದ ಆಚಾರ್ಯರು ಇಟ್ಟ ಮತಂಗಳಿಂದ
ಗುರುಸ್ಥಲ ಲಿಂಗಸ್ಥಲ ಉಭಯಮಾರ್ಗ
ಆಚಾರ್ಯಸ್ಥಲ ಷಡುಸ್ಥಲ ಒಳಗಾದ
ನಾನಾಸ್ಥಲಜ್ಞರುಗಳಲ್ಲಿ ವರಪ್ರಸಾದಿ ಚನ್ನಬಸವಣ್ಣ
ಅವರ ಕಾರುಣ್ಯಪ್ರಸಾದ ಎನಗಾಯಿತ್ತು.
ಸಂಚಿತ ಪ್ರಾರಬ್ಧ ಆಗಾಮಿಗಳಲ್ಲಿ ಉಪಚಕ್ಷು ನೀನಾಗಿ ಸಲಹಿದೆಯಲ್ಲಾ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೯೩||

೧೦೫

ಷಡ್ದರ್ಶನಕ್ಕೆ ದೈವವೊಂದೆಂದಡೆ ವಾದಕ್ಕೆ ಮೂಲ
ಹಲವೆಡೆಯೆಂದಡೆ ಸಮಯಕ್ಕೆ ದೂರ.
ತಮ್ಮ ಒಲವರದಿಂದ ಕುಲದೈವ ಫಲಿಸುವಂತೆ
ಏಕಛತ್ರವ ಕೊಟ್ಟು ರಾಣುವೆಗೆ ಹೊಲಬಿಗರ ಮಾಡಿದಂತೆ
ದೇವನೊಬ್ಬ ತ್ರೈಮೂರ್ತಿಗಳಿಗೆ ಭೇದವ ಕೊಟ್ಟುಯಿಪ್ಪುದ
ನಿಮ್ಮ ವೇದದ ಕಡೆಯಲ್ಲಿ ನೋಡಿಕೊಳ್ಳಿ.
ಶಾಸ್ತ್ರದ ಸಂದನಿಯಲ್ಲಿ ಕಂಡುಕೊಳ್ಳಿ.
ಪುರಾಣದ ಮೊದಲಪ್ರಸಂಗದಲ್ಲಿ ಸಂದೇಹವಿಡಿಸಿಕೊಳ್ಳಿ.
ಆಗಮಂಗಳಲ್ಲಿ ತಿಳಿದು ನಾದಬಿಂದುಕಳೆಗೆ ಆತನಾರೆಂಬುದ ಕಂಡುಕೊಳ್ಳಿ.
ಹದಿನೆಂಟುದೋಷಂಗಳಲ್ಲಿ ತ್ರಿವಿಧಮಲಂಗಳಲ್ಲಿ
ತ್ರಿಜಾತಿ ವಂಶಭೇದದಲ್ಲಿ ತ್ರಿಗುಣಾತ್ಮಕನಾರೆಂಬುದ ತಿಳಿದು
ಆದಿಯಿಂದಿತ್ತ ಅನಾದಿಯಿಂದತ್ತ
ಲೀಲೆಯಿಂದಿತ್ತ ಸ್ವಯಂಭುವಿಂದತ್ತ
ಈ ವಿಭೇದಕ್ಕೆ ಭೇದಕನಾರೆಂಬುದನರಿತು
ಅಭೇದ್ಯವಸ್ತು ಭಕ್ತಿ ಕಾರಣದಿಂದ ವೇದ್ಯನಾಗಿ ಬಂದು
ಜಗಹಿತಾರ್ಥವಾಗಿ ಬ್ರಹ್ಮಂಗೆ ಪ್ರಜಾಪತಿ
ವಿಷ್ಣುವಿಂಗೆ ಯೋನಿ ಸಂಭವ, ರುದ್ರಂಗೆ ಬಿಂದು ಕಳೆಯಂ ಕೊಟ್ಟು
ಮರೀಚಿಕ ಪ್ರಳಯರುದ್ರಂಗೆ ಸಂಹಾರವನಿತ್ತು
ಇಂತಪ್ಪ ಭೇದದಲ್ಲಿ ವೇದ್ಯವಪ್ಪ ವಸ್ತುವ ನೋಡಿಕೊಳ್ಳಿ.
ಇದರಿಂದ ವೆಗ್ಗಳವುಂಟೆಂದಡೆ ಸೋಧಿಸಿಕೊಂಬ
ಶತಸಹಸ್ರ ಅವತಾರಂಗಳಿಂದೀಚೆ ಆದ

ದಶ ಅವತಾರಕ್ಕೆ ಒಳಗಾದವನ ತಪ್ಪಿಂದ ಶಿರಸ್ಸನ್ನು ಒಪ್ಪಗೆಡಿಸಿದವನ
ಬೌದ್ಧನಾಗಿ ಭ್ರಮೆಯಿಂದ ನಾಣುಗೆಟ್ಟು ನಾಚಿಕೆಯಿಲ್ಲದವನ
ತೊಡೆ, ಜಠರದಲ್ಲಿ ಮಡದಿಯರವೊಡಗೂಡಿಯಿಪ್ಪವನ
ಇಂತೀ ಇವರನು ಅಡಿಗೆರಗಿಸಿಕೊಂಬ
ಒಡೆಯ ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವಲ್ಲದಿಲ್ಲಾ. || ೯೪ ||

೧೦೬

ಸಕಲವೆಂದಲ್ಲಿ ನಿಃಕಲ, ನಿಃಕಲವೆಂದಲ್ಲಿ ಸಕಲ
ದ್ವೈತ ಅದ್ವೈತವೆಂತೆಂದಂತೆಯೆಂಬುದು ಜಗದ ವಾಗ್ವಿಲಾಸ.
ವಾಚಾರಚನೆಗಳಿಂದ ತ್ರಿಗುಣ ತ್ರಿವಿಧಮೂರ್ತಿಯ ಕಲ್ಪಿಸಿ
ದಿವಾರಾತ್ರಿಯಂತೆ ಪುನರಪಿಯಾಗಿ
ಅಳಿವುತ್ತಯಿಪ್ಪುದು ಉಮಾಪತಿಯ ಭೇದ.
ಅದು ರುದ್ರನ ಲೀಲಾಭಾವ.
ಆ ಗುಣವ ಭೇದಿಸಿ ನಿಂದಲ್ಲಿ ಹದಿನೆಂಟುದೋಷಂಗಳಿಗೆ ಹೊರಗಾಗಿ
ತ್ರಿವಿಧ ಅವತಾರಮೂರ್ತಿಗಳಿಗೆ ಒಳಗಲ್ಲದೆ
ಎಂಬತ್ತನಾಲ್ಕುಲಕ್ಷ ಜೀವಂಗಳಲ್ಲಿ ಆತ್ಮನ ಬಂಧಿಸದೆ
ಇಂತೀ ದೋಷಂಗಳಲ್ಲಿ ಸಂದಿಸದೆ
ನಿಜಾತ್ಮನ ನೆಲೆಯ ಉಚಿತವನರಿದು
ತ್ರಿವಿಧ ಬಂಧದಲ್ಲಿಯೆ ಅಲ್ಲಿ ಅಲ್ಲಿ ಇಂಬಿಟ್ಟು
ಸ್ವಯವೇ ತಾನಾಗಿರ್ದುದು ಸ್ವಯಂಭು.
ಇಂತೀ ಉಭಯಸ್ಥಲಭಾವ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. || ೯೫ ||

೧೦೭

ಸದಾಶಿವ ವಸ್ತುವ ಭೇದವಂಶವಲ್ಲಿ ಆದ ಮಹಾ ಅಂಧಕಾರದಲ್ಲಿ
ಬಲಭದ್ರ ವೀರರುದ್ರನ ಸಂಬಂಧದಿಂದ ಆದ
ಉಭಯ ಯುಗಳದಿಂದ ಆದ ಜಾತಿ ಉದ್ಭವ ಲಕ್ಷಣ.
ಜಿಹ್ವೆಯಲ್ಲಿ ವೇದ, ಭುಜದಲ್ಲಿ ಶಸ್ತ್ರ, ಉದರದಲ್ಲಿ ವ್ಯವಹಾರ,
ಜಂಘೆಯಲ್ಲಿ ಕೃಷಿ.
ಇಂತೀ ಶೂದ್ರ ವೈಶ್ಯ ಕ್ಷತ್ರಿಯ ದ್ವಿಜ
ಇಂತೀ ಮತಭೇದಂಗಳಲ್ಲಿ ಗೋತ್ರ ಹಲವಾಗಿ ವಾಸಿವಟ್ಟಕ್ಕೆ ಒಳಗಾದವು.
ಇಂತಿವರ ಒಳಗು ಹೊರಗಲ್ಲ ಸಂತತ ಶರಣ ಶಿವಯೋಗಿ.
ಕರಂಡದ ಗಂಧವಂತೆ, ಮೃತ್ತಿಕೆಯ ಹೇಮದಂತೆ

ಶುಕ್ತಿಯ ಅಪ್ಪುವಿನಂತೆ, ಶಿಲೆಕುಲದ ರತಿಯಂತೆ
ಮರ್ತ್ಯದ ಮತ್ತರ ಹೊದ್ದದ ಸ್ವಯಿಚ್ಛಾಪರ ಭಕ್ತ ಶಿವಯೋಗಿಗೆ
ಮರ್ತ್ಯ ಕೈಲಾಸವೆಂಬ ಗೊತ್ತಿಲ್ಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನು ತಾನೆ. ||೯೬||

೧೦೮

ಸದ್ಯೋಜಾತಮುಖ ಚನ್ನಮಲ್ಲಿಕಾರ್ಜುನಲಿಂಗವಾಯಿತ್ತು.
ವಾಮದೇವಮುಖ ಭೋಗಮಲ್ಲಿಕಾರ್ಜುನಲಿಂಗವಾಯಿತ್ತು.
ಅಘೋರಮುಖ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗವಾಯಿತ್ತು.
ತತ್ಪುರುಷಮುಖ ಶಾಂತಮಲ್ಲಿಕಾರ್ಜುನಲಿಂಗವಾಯಿತ್ತು.
ಈಶಾನಮುಖ ಇಂತೀ ಚತುರ್ವಿಧ ಆಚಾರ್ಯಂಗೆ
ಗುರುಮೂರ್ತಿಯಾದಲ್ಲಿ,
ಇಷ್ಟಲಿಂಗನ ಕೊಡಬೇಕೆಂದು ತನ್ನ ದೃಷ್ಟಕ್ಕೆ ದೃಷ್ಟನಾದೆಹೆನೆಂದು
ಬಂದುದನರಿತು ನಿಂದ ಮಾರ್ಗವೆ ಗುರುಸ್ಥಲ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವನರಿವುದಕ್ಕೆ
ಉಭಯಮಾರ್ಗ ಗುರುಸ್ಥಲ. ||೯೭||

೧೦೯

ಸಾಕ್ಷಿಯನಿಟ್ಟು ನಿಕ್ಷೇಪವ ನಿಕ್ಷೇಪಿಸುವಂತೆ
ದ್ವೈತವೆಂಬುದನರಿದು ಅದ್ವೈತವ ಕಾಣಬೇಕು.
ಕಂಡೆಹೆನೆಂಬನ್ನಕ್ಕ ಅದ್ವೈತವಿಲ್ಲ.
ವಿಕಾರದ ರೋಗಕ್ಕೆ ಸ್ವಪ್ನದ ಪಥ್ಯದಂತೆ
ಪೃಥ್ವಿಯ ಪಟದಲ್ಲಿ ಪಂಕವ ಕಡೆಗಾಣಿಸಿಹೆನೆಂಬಂತೆ
ಪಟ ಅಂಗಳವುಳ್ಳನ್ನಕ್ಕ ನೀರ ಸಂಗದಿಂದ ತೊಳೆದಹೆನೆಂದಡೆ
ಪಂಕದ ಬೀಜ ಸಂದೇಹವುಳ್ಳನ್ನಕ್ಕ ನಿಜಲಿಂಗದ ಹೊಲಬು ಕಾಣಬೇಕು.
ಇದರಲ್ಲಿಯೆ ಸ್ವಯವಚನ ವಿರುದ್ಧವ ತಿಳಿದು
ನಿಜವ ಬಲ್ಲವನಾಗಬೇಕು
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೯೮||

೧೧೦

ಸೂತಕಂಗಳಿಂದ ಜನನ, ಪ್ರಸೂತಕಂಗಳಿಂದ ಮರಣ.
ಕ್ರೀಯಿಂದ ನಿಃಕ್ರೀಯ ಜನನ, ನಿಃಕ್ರೀಯಿಂದ ಕ್ರೀಗೆ ಜನನ.
ಉಭಯದ ಪ್ರೇತಸೂತಕವಳಿದು ಆತ್ಮಂಗೆ ಅರಿವಾದಲ್ಲಿ
ಮುಂದಣ ಕುರುಹು ನಿಃಪತಿಯಾಯಿತ್ತು.

ಅದು ಆದಿಯ ವೃಕ್ಷ, ಅನಾದಿಯ ಬೀಜ.
ವಿಭೇದವಿಲ್ಲದ ಭೂಮಿಯಲ್ಲಿ ನಷ್ಟವಾಯಿತ್ತು.
ಇದ ಸಾಧಿಸಿದನಭೇದ್ಯ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವೆ ತಾನಾದ ಕಾರಣ. || ೯೯ ||

೧೧೧

ಸೂತ್ರ ಪ್ರಕರಣಗಳಿಂದ
ಏಕಸಂಜ್ಞೆ ದ್ವಯಸಂಪರ್ಕ, ತ್ರಿವಿಧಭೇದ
ಚತುರ್ಭಾಗ ಪಂಚವಿಂಶತಿ ಶಾಂಕರೀಯ
ರಘುಪ್ರಕಾರ, ಮೀಮಾಂಸಕಾ ಸೂತ್ರ
ವಿಷಮಸಂಧಿಭೇದಕಾ ಪ್ರಯೋಗ
ಪ್ರಾತಃಕಾಲ ರಿತು ಉಚಿತತಮ ತತ್ಕಾಲ ನಾರಣೀಯ
ಜೈಮಿನಿ ಭೇದ, ಪಾರಸೀಯ ಸಾಂಖ್ಯ ಕಾಪಾಲಿಕ ಬೌದ್ಧ ಶೈವ.
ಇಂತೀ ಆಗಮ ಸೂತ್ರ ನಾನಾವಿಲಕ್ಷಣ ಲಕ್ಷಣಂಗಳಲ್ಲಿ ತಿಳಿದಡೂ
ಕರ್ಮವಾರು ವರ್ಮ ಮೂರು
ಸದ್ಧರ್ಮವೊಂದರಲ್ಲಿ ನಿರತನಾಗಿ
ಸರ್ವಗುಣಸಂಪನ್ನನಾಗಿ ಲಿಂಗಪ್ರಾಣಿಯಾಗಿ
ಪ್ರಾಣಲಿಂಗಿಯಾಗಿ ನಿಂದಾತಂಗೆ ಅಂಗ ಆತ್ಮನೆಂಬ ಉಭಯದ ಸಂದಿಲ್ಲ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನಾಗಿ. || ೧೦೦ ||

೧೧೨

ಸೃಷ್ಟಿಯೊಳಗಾದ ತೀರ್ಥಂಗಳ ಮೆಟ್ಟಿ ಬಂದಡೂ
ದೃಷ್ಟಿಮತಿ, ನಿಮುಷಮತಿ, ಭೇದಮತಿ[ವೇ]ದ್ಯಮತಿ
ಅಭೇದ್ಯಭೇದಕಮತಿ ಉಚಿತಮತಿ
ಸಾಮಮತಿ ದಾನಮತಿ ದಂಡಮತಿ
ಆತ್ಮಚಿಂತನಮತಿಗಳಲ್ಲಿ ನುಡಿದಡೂ ಪಂಡಿತನಪ್ಪನಲ್ಲದೆ
ವಸ್ತುವ ಮುಟ್ಟ.
ಇದಕ್ಕೆ ದೃಷ್ಟ ಮತ್ತರಿಗೆ ಹಾಕಿದ ಮುಂಡಿಗೆ.
ವಸ್ತುವನರಿದುದಕ್ಕೆ ಲಕ್ಷಣವೇನೆಂದಡೆ:
ತಥ್ಯಮಿಥ್ಯವಳಿದು ರಾಗದ್ವೇಷ ನಿಂದು
ಆವಾವ ಗುಣದಲ್ಲಿಯೂ ನಿರ್ಭಾವಿತನಾಗಿ
ಸರ್ವಗುಣಸಂಪನ್ನನಾಗಿ ತತ್ಪ್ರಾಣ ಸಾವಧಾನವನರಿತು
ಬಂದ ಬಂದ ಮುಖದಲ್ಲಿ ಲಿಂಗಾರ್ಪಿತವ ಮಾಡಿ ನಿಂದುದೆ ನಿಜಲಿಂಗಾಂಗ
ಚೆನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು ತಾನೆ. || ೧೦೧ ||

೧೧೩

ಸ್ಥಲಂಗಳ ಭೇದ ವಿವರ:
ವೇಣು ವೀಣೆ ಮೌರಿ ವಾದ್ಯಂಗಳಲ್ಲಿ
ವಾಯು ಅಂಗುಲಿಯ ಭೇದದಿಂದ ರಚನೆಗಳ ತೋರುವಂತೆ
ಘಟದ ಸ್ಥೂಲ ಸೂಕ್ಷ್ಮಂಗಳಲ್ಲಿ ತ್ರಾಣ ತತ್ರಾಣವಾದಂತೆ
ಅದು ಭಾವಜ್ಞಾನ ಷಟ್‌ಸ್ಥಲ ಕ್ರಿಯಾಭೇದದ ವಾಸ.
ಇಂತೀ ಉಭಯದೃಷ್ಟ ನಾಶವಹನ್ನಕ್ಕ ಐಕ್ಯಲೇಪನಲ್ಲಿ
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗದಲ್ಲಿ. ||೧೦೨||

೧೧೪

ಹಲವು ಗುಳಿಯ ಬೆಟ್ಟದ ಗುಂಟಿಗೆಯಂತೆ
ಸುಮುದ್ರೆ ಏಕವಾಗಿ ಹಲವು ಗುಣದಲ್ಲಿ ಸಲುವಂತೆ
ಆ ಗುಣ ನೆಲೆ ಆಚಾರ್ಯನಂಗ.
ಚನ್ನಬಸವಣ್ಣಪ್ರಿಯ ಭೋಗಮಲ್ಲಿಕಾರ್ಜುನಲಿಂಗವು
ಉಮಾಪತಿಯಾದ ಸಂಗ. ||೧೦೩||

■ ■

## ಪ್ರಸಾದಿ ಲೆಂಕಬಂಕಣ್ಣನ ವಚನ

೧೧೫

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ ಮುಂತಾಗಿರ್ದ
ದೃಷ್ಟ ಅರ್ಪಿತಂಗಳ ಅರ್ಪಿಸುವಲ್ಲಿ
ಗಂಧದಿಂದ ಸುಳಿವ ನಾನಾ ಸುಗಂಧವ
ರಸದಿಂದ ಬಂದ ನಾನಾ ರಸಂಗಳ
ರೂಪಿನಲ್ಲಿ ಕಾಣಿಸಿಕೊಂಬ ನಾನಾ ಚಿತ್ರ ವಿಚಿತ್ರ
ಖಂಡಿತ ಅಖಂಡಿತಮಪ್ಪ ದೃಷ್ಟಾಂತಂಗಳಲ್ಲಿ
ಸ್ಪರ್ಶನದಲ್ಲಿ ಮೃದುಕಠಿಣದೊಳಗಾದ
ಮುಟ್ಟುತಟ್ಟಿನ ಭೇದವ ಲಕ್ಷಿಸುವಲ್ಲಿ
ಶಬ್ದದಿಂದ ಸಪ್ತಸ್ವರದೊಳಗಾದ ನಾನಾ ಘೋಷ ವಾಸನಂಗಳ
ಅಳಿದುಳಿದು ತೋರುವ ಸುನಾದ ಸಂಚುಗಳಲ್ಲಿ
-ಇಂತೀ ಪಂಚೇಂದ್ರಿಯಂಗಳಲ್ಲಿ
ಪ್ರಸಾದ ಮುಂತಾಗಿ ಅರ್ಪಿಸಿಕೊಂಡೆಹೆವೆಂಬಲ್ಲಿ
ಗುರುಪ್ರಸಾದಿಗೆ ಲಿಂಗಪ್ರಸಾದವಿಲ್ಲ.
ಲಿಂಗಪ್ರಸಾದಿಗೆ ಜಂಗಮಪ್ರಸಾದವಿಲ್ಲ.

ಜಂಗಮಪ್ರಸಾದಿಗೆ ಮಹಾಪ್ರಸಾದವಿಲ್ಲ.
ಮಹಾಪ್ರಸಾದಿಗೆ ಪರಿಪೂರ್ಣ ಪ್ರಸಾದವಿಲ್ಲ.
ಪರಿಪೂರ್ಣಪ್ರಸಾದಿಗೆ ಪಂಚೇಂದ್ರಿಯದೊಳಗಾದ
ಮುಟ್ಟಿನ ಪ್ರಸಾದ, ಕಟ್ಟಿನ ಸೂತಕವಿಲ್ಲ.
ಅದೆಂತೆಂದಡೆ:
ಕರ್ಪೂರದ ಚಿತ್ರಸಾಲೆಯ ಕಿಚ್ಚು ಮುಟ್ಟಿದ ಮತ್ತೆ
ಚಿತ್ರವಲ್ಲಿಯೆ ನಿರ್ಲಕ್ಷ್ಯವಾದಂತೆ
ಪತ್ರಂಗಳಲ್ಲಿ ನಾನಾ ಅಕ್ಷರಂಗಳ ಲಕ್ಷಿಸಿ ಬರೆದು
ಅವು ಕಿಚ್ಚು ಮುಟ್ಟಿ ಸುಟ್ಟಲ್ಲಿ
ಎತ್ತಿ ಪ್ರತಿಯ ಲಕ್ಷಿಸಬಹುದೆ ?
ಇಂತೀ ಅರಿದರುಹಿನಲ್ಲಿ ಎಡೆದೆರಪಿಲ್ಲದ
ಪ್ರಸಾದಿಗೆ ಆ ಗುಣ ಪ್ರಸನ್ನಪ್ರಸಾದಿಯ ಇರವು
ದಹನ ಚಂಡಿಕೇಶ್ವರಲಿಂಗದಿರವು. ||೧||

೧೧೬

ಇಷ್ಟಪ್ರಸಾದವ ದೃಷ್ಟಕ್ಕೆ ಅರ್ಪಿಸಿಕೊಂಡೆಹೆನೆಂಬನ್ನಕ್ಕ
ದೃಷ್ಟವೂ ಇಲ್ಲ, ಇಷ್ಟವೂ ಇಲ್ಲ.
ಉಭಯವಿಲ್ಲಾಗಿ ತೃಪ್ತಿಗೆ ಮುಟ್ಟದ ಅರ್ಪಿತವ
ಇದನಾರು ಬಲ್ಲರು.
ಮುಟ್ಟದಲ್ಲಿಯೆ ಸವಿಸಾರಂಗಳ ಭೇದವ ದೃಷ್ಟ ಮುಂತಾಗಿ
ಅರ್ಪಿತದಲ್ಲಿಯೆ ಸವಿಸಾರಂಗಳನರಿದು ಅರ್ಪಿಸಬಲ್ಲಡೆ
ಅರ್ಪಿತಸೂತಕ ಅಲ್ಲಿಯೆ ನಷ್ಟ.
ಈ ಗುಣ ದೃಷ್ಟಪ್ರಸಾದಿಯ ಕಟ್ಟಿನ ಭೇದ.
ದಹನ ಚಂಡಿಕೇಶ್ವರಲಿಂಗವು ತಾನಾದವನ ಸಂಗದ ಕೂಟ. ||೨||

೧೧೭

ಕಣ್ಣು ನೋಡಿ ಅರ್ಪಿಸಿದ ಪ್ರಸಾದ ಅದಾವ ಲಿಂಗಕ್ಕೆ ?
ಕಿವಿ ಕೇಳಿ ಅರ್ಪಿಸಿದ ಪ್ರಸಾದ ಅದಾವ ಲಿಂಗಕ್ಕೆ ?
ಘ್ರಾಣ ವಾಸಿಸಿ ಅರ್ಪಿಸಿದುದು ಅದಾವ ಲಿಂಗಕ್ಕೆ ?
ಜಿಹ್ವೆಯ ಕೊನೆಯಲ್ಲಿ ಸವಿದು ಅರ್ಪಿಸಿದುದು ಅದಾವ ಲಿಂಗಕ್ಕೆ ?
ಕರ ಮುಟ್ಟಿದ ಸೋಂಕಿನ ಸುಖ ಅದಾವ ಲಿಂಗಕ್ಕೆ ?
ಇಂತೀ ಪಂಚೇಂದ್ರಿಯಂಗಳಲ್ಲಿ ಅರ್ಪಿಸಿಕೊಂಬ

ಆತ್ಮನ ತೃಪ್ತಿ ಐದೋ ಮೂರೋ ಬೇರೆರಡೋ ಏಕವೋ ?
ಎಂಬುದ ನಿಧಾನಿಸಿ ಬಹುವೆಜ್ಜದ ಕುಂಭದಲ್ಲಿ ಅಗ್ನಿಯನಿರಿಸಿ
ಉರುಹಲಿಕೆ ವೆಜ್ಜ ವೆಜ್ಜಕ್ಕೆ ತಪ್ಪದೆ ಕಿಚ್ಚು ಹೊದ್ದಿ ತೋರುವದು
ವೆಜ್ಜದ ಗುಣವೋ ? ಒಂದಗ್ನಿಯ ಗುಣವೋ ?
ಇಂತೀ ಗುಣವ ನಿಧಾನಿಸಿಕೊಂಡು
ನಿಜಪ್ರಸಾದವ ಕೊಂಬ ಸ್ವಯಪ್ರಸಾದಿಗೆ
ತ್ರಿವಿಧಪ್ರಸಾದ ಸಾಧ್ಯವಪ್ಪುದಲ್ಲದೆ ವರ್ತಕಪ್ರಸಾದಿಗಳಿತ್ತಲೆ ಉಳಿದರು.
ದಹನ ಚಂಡಿಕೇಶ್ವರಲಿಂಗಕ್ಕೆ ಅರ್ಪಿತ ಮುಟ್ಟದೆ ಹೋಯಿತ್ತು. || ೩ ||

೧೧೪

ಕಾಯದಲ್ಲಿ ಸೋಂಕ ಅಳಿದು, ಕೊಂಬುದು ಶುದ್ಧಪ್ರಸಾದಿಯ ಅಂಗ.
ಕರಣಂಗಳಿಚ್ಛೆಯಿಲ್ಲದೆ ಕೊಂಬುದು ಸಿದ್ಧಪ್ರಸಾದಿಯ ಅಂಗ.
ಭಾವ ತಲೆದೋರದೆ ಜನನ ಮರಣಾದಿಗಳಲ್ಲಿ
ನಾಮ ರೂಪು ಕ್ರೀಗೆ ಬಾರದೆ ನಿಶ್ಚಯ ನಿಜಾಂಗಲೇಪವಾಗಿ
ಕೊಂಬುದು ಪ್ರಸಿದ್ಧಪ್ರಸಾದಿಯ ಅಂಗ.
ಇಂತೀ ತ್ರಿವಿಧಪ್ರಸಾದಿಗಳಲ್ಲಿ ಹೊರಗೆ ವಿಚಾರಿಸಿ, ಒಳಗ ಕಂಡು
ಒಳಗಿನ ಗುಣದಲ್ಲಿ ಕಳೆ ನಿಂದು ನಿಃಪತಿಯಾಗಿ
ದೃಷ್ಟ ತನ್ನಿಷ್ಟವಾದುದು ಸ್ವಯಂಪ್ರಸಾದಿಯ ಅಂಗ.
ಇಂತಿವರಲ್ಲಿ ತಿಳಿದುಳಿದವಂಗಲ್ಲದೆ
ಜಂಗಮಪ್ರಸಾದವ ಲಿಂಗಕ್ಕೆ ಕೊಟ್ಟೆಹೆನೆಂಬುದು ದೃಷ್ಟಾಂತವಲ್ಲ.
ಕೊಟ್ಟು ಕೊಂಡೆಹೆನೆಂದಡೆ
ಆ ಗುರುವಿಗೂ ಲಿಂಗವೆಂಬುದೊಂದು ಕುರುಹು.
ಜಂಗಮಕ್ಕೂ ಲಿಂಗವೆಂಬುದೊಂದು ಕುರುಹು.
ಕೊಟ್ಟು ಕೊಂಡೆಹೆನೆಂಬ ಭಕ್ತಂಗೂ ಲಿಂಗವೆಂಬುದೊಂದು ಕುರುಹು.
ಇಂತೀ ಬೀಜ, ಆ ಬೀಜದಿಂದಂಕುರ.
ಆ ಅಂಕುರದಿಂದ ಪತ್ರ ಕುಸುಮ ಫಲಭೋಗ.
ಆ ಫಲಭೋಗದಿಂದ ಮತ್ತೆ ಬೀಜವಪ್ಪುದರಿಂದ ಕಂಡು
ಇಂತೀ ತ್ರಿವಿಧಗುಣ ಲಿಂಗ ಸೋಂಕೆಂಬುದ ಕಂಡು
ಒಂದರಿಂದೊಂದು ಗುಣವನರಿದೆಹೆನೆಂದಡೆ
ಸಂದನಳಿದ ಸದಮಲಾನಂದವೊಂದು
ಸೂತಕವೆಂದಳಿದು ಕೊಡಲಿಲ್ಲ.
ಎರಡು ಸೂತಕವೆಂದು ಮುಟ್ಟಿ ಅರ್ಪಿಸಲಿಲ್ಲ.

ಮೂರನೊಡಗೂಡಿ ಪ್ರಸಾದವಿದೆಯೆಂದು
ಬೇರೆ ಅರ್ಪಿಸಿಕೊಂಬವರಿನ್ನಾರೊ ?
ಇಂತೀ ಪ್ರಸಾದಿಯ ಪ್ರಸನ್ನವ ತಿಳಿದಲ್ಲಿ
ದಹನ ಚಂಡಿಕೇಶ್ವರಲಿಂಗವು ಪ್ರಸನ್ನಪ್ರಸಾದಿಕಾಯನು. || ೪ ||

೧೧೯

ಗುರುಪ್ರಸಾದವ ಲಿಂಗಕ್ಕೆ ಕೊಡಲಿಲ್ಲ.
ಅದೆಂತೆಂದಡೆ:
ಗುರು ಭೇದ್ಯವು, ಲಿಂಗ ಅಭೇದ್ಯವು.
ಜಂಗಮಪ್ರಸಾದವ ಲಿಂಗಕ್ಕೆ ಕೊಡಲಿಲ್ಲ.
ಅದೆಂತೆಂದಡೆ:
ಜಂಗಮವು ಚತುರ್ವಿಧಫಲಪದಂಗಳಲ್ಲಿ ರಹಿತವು.
ಲಿಂಗವು ಚತುರ್ವಿಧಫಲಪದಂಗಳಿಗೆ ವಿರಹಿತವು.
ಇಂತೀ ಉಭಯಪ್ರಸಾದವ ಲಿಂಗಕ್ಕೆ ಅರ್ಪಿಸಿ
ತಾ ಕೊಂಡೆಹೆನೆಂಬಲ್ಲಿ ತ್ರಿವಿಧಪ್ರಸಾದವಾಯಿತ್ತು.
ಇಂತೀ ತ್ರಿವಿಧಪ್ರಸಾದವ ತಾನರಿದು ಕೊಂಬಲ್ಲಿ
ಗುರುವಿಂಗೆ ತನುವನಿತ್ತು, ಲಿಂಗಕ್ಕೆ ಮನವೆರಡಿಲ್ಲದೆ
ಜಂಗಮಕ್ಕೆ, ತ್ರಿವಿಧಮಲಕ್ಕೆ ಕಟ್ಟುಮೆಟ್ಟಿಲ್ಲದೆ
ಅಂಗವರತು ಇಂದ್ರಿಯಂಗಳಿಚ್ಛೆಯಿಲ್ಲದೆ
ಸಂದುಸಂಶಯ ನಿವೃತ್ತಿಯಾದವಂಗಲ್ಲದೆ
ತ್ರಿವಿಧಪ್ರಸಾದ ಏಕೀಕರ ಸಾಧ್ಯವಲ್ಲ.
ದಹನ ಚಂಡಿಕೇಶ್ವರಲಿಂಗಕ್ಕೆ ಕೊಟ್ಟು ಕೊಳ್ಳಬಾರದು. || ೫ ||

೧೨೦

ಗುರುವಿಂಗೆ ಜೀವಪ್ರಸಾದ, ಚರಕ್ಕೆ ಭಾವಪ್ರಸಾದ.
ಜೀವಭಾವದಲ್ಲಿ ಕೂಡಲಿಕ್ಕಾಗಿ ಪರಮಪ್ರಸಾದ.
ಆ ಪರಮಪ್ರಸಾದ ವ್ಯತಿರಿಕ್ತವಾಗಿ ಕಾಣಿಸಿಕೊಂಡಲ್ಲಿ
ಪ್ರಸಾದವಾಯಿತ್ತು.
ಆ ಲಿಂಗಪ್ರಸಾದ ತನಗಾಗಲಾಗಿ ಸ್ವಯಪ್ರಸಾದವಾಯಿತ್ತು.
ಇಂತೀ ಪ್ರಸಾದಿಸ್ಥಲ ವಿವರಂಗಳ ತಿಳಿದು
ಲಿಂಗಕ್ಕೆ ಕೊಟ್ಟು ಕೊಳಬೇಕು.
ದಹನ ಚಂಡಿಕೇಶ್ವರಲಿಂಗಕ್ಕೆ ಅರಿದು ಅರ್ಪಿಸಬೇಕು. || ೬ ||

೧೨೧

ಧೀರಪ್ರಸಾದ ವೀರಪ್ರಸಾದ ಆವೇಶಪ್ರಸಾದ.
ಇಂತೀ ತ್ರಿವಿಧಪ್ರಸಾದವ ಕೊಂಬಲ್ಲಿ
ಅಂಗವರತು ಇದಿರಿಂಗೆ ಭಯಭಂಗವಿಲ್ಲದೆ
ಬೆಗಡು ಜಿಗುಪ್ಸೆ ಚಿಕಿತ್ಸೆ ತಲೆದೋರದೆ
ಮಹಾಕುಂಭಘೃತಂಗಳ ಕೊಂಡಂತೆ.
ಮಹಾಮೇರುವೆಯ ಅಲ್ಪಮೊರಡಿ ಧಿಕ್ಕರಿಸಿ ಅಲ್ಲಿಗೆ ಹೋದಡೆ
ಅದರ ತಪ್ಪಲಲ್ಲಿಯೆ ತಾನಡಗಿದಂತೆ.
ಈ ಗುಣ ದೃಷ್ಟಪ್ರಸಾದಿಯ ಕಟ್ಟಿನ ಭೇದ.
ದಹನ ಚಂಡಿಕೇಶ್ವರಲಿಂಗವು ತಾನಾದ ಅಂಗದ ತೆರ. ॥ ೭ ॥

೧೨೨

ನಿಷ್ಠೆಯಿಂದ ಕೊಂಬುದು ದ್ರವ್ಯಪ್ರಸಾದ.
ತೃಪ್ತಿಯಿಂದ ಭೋಗಿಸುವದು ಕರುಣಪ್ರಸಾದ.
ಅರಿವಿನ ಮುಖದಿಂದ ಕುರುಹಳಿದು ಕೊಂಬುದು
ಎರಡಳಿದ ಪ್ರಸಾದ.
ಆ ಪ್ರಸಾದ ಮಹಾಪ್ರಸಾದವಾಗಲಾಗಿ
ವರುಷ ವರುಷಕ್ಕೆ ಇದಿರೆಡೆಗೆಟ್ಟಂತೆ
ಉರಿ ಉರಿಯೆಡೆ ಸುಡಲಿಲ್ಲದ ತೆರನಂತೆ
ಮುಕುರ ಮುಕುರಕ್ಕೆ ಕಳೆಬೆಳಗೊಡಗೂಡಿದಂತೆ.
ಇಂತೀ ಪ್ರಸಾದ ಅಂಗವಾದ ನಿರಂಗಿಯ ತೆರ.
ದಹನ ಚಂಡಿಕೇಶ್ವರಲಿಂಗವೆ ಅಂಗವಾದವನ ಸಂಗ. ॥ ೮ ॥

೧೨೩

ಪ್ರಸಾದವೆ ಅಂಗವಾದವನ ಇರವು ಎಂತುಟೆಂದಡೆ:
ಒಳಗಿಲ್ಲದ ಕುಂಭ ಒಡೆದು ಹೋಳಾದಂತೆ
ಮರೀಚಿಕಾಜಲವ ತುಂಬಿ ಸುರಿದ ಅಂಗದಂತಿರಬೇಕು.
ಉರಿಯ ಮಧ್ಯದಲ್ಲಿ ನಷ್ಟವಾದ ಕರ್ಪುರದ ಗಿರಿಯಂತಿರಬೇಕು.
ಮಹಾಪ್ರಸಾದವ ಕೊಂಡಲ್ಲಿ ಇದಿರು ಮುಯ್ಯಿಲ್ಲದಿರಬೇಕು.
ಹರಪರಿ ನಷ್ಟವಾಗಿ ದಹನ ಚಂಡಿಕೇಶ್ವರಲಿಂಗದಲ್ಲಿ
ಒಳಗೂಡಿರಬೇಕು. ॥ ೯ ॥

೧೨೪

ರೂಪನರಿದು ರುಚಿಯನುಂಡು
ಅವರ ನಿಹಿತಂಗಳ ಕಂಡು ಮತ್ತೆ ಲಿಂಗಕ್ಕೆ ಅರ್ಪಿಸಿ
ಪ್ರಸಾದ ಮುಂತಾಗಿ ಕೊಂಡೆಹೆನೆಂಬ ವರ್ತಕಭಂಡರ ನೋಡಾ.
ಕಟ್ಟಿ ಹುಟ್ಟದ ರತ್ನ, ಸುಗುಣ ಅಪ್ಪು ತುಂಬದ ಮುತ್ತು
ಕಳೆ ತುಂಬದ ಬೆಳಗು, ಹೊಳಹುದೋರದ ಸೂತ್ರ
ಲವಲವಿಕೆಯಿಲ್ಲದ ಚಿತ್ತ, ಇದಿರಗುಣವನರಿಯದ ಆತ್ಮ.
ಇಂತಿವು ಫಲಿಸಬಲ್ಲವೆ ? ಕ್ರೀಯನರಿದು ಅರ್ಪಿಸಬೇಕು.
ಅರ್ಪಿಸುವಲ್ಲಿ ದೃಷ್ಟಾಂತದ ಸಿದ್ಧಿ ಪ್ರಸಿದ್ಧವಾಗಬೇಕು.
ಕಾಣದವಗೆ ತಾ ಕಂಡು ಕುರುಹಿನ ದಿಕ್ಕ ಅರುಹಿ
ತೋರುವನ ತೆರನಂತೆ
ತಾ ಲಕ್ಷಿಸಿದಲ್ಲಿ, ತಾ ದೃಷ್ಟಿಸಿದಲ್ಲಿ, ತಾ ಮುಟ್ಟಿದಲ್ಲಿ
ಅರ್ಪಿತವಾದ ಪ್ರಸಾದಿಯ ಕಟ್ಟು.
ದಹನ ಚಂಡಿಕೇಶ್ವರಲಿಂಗವು ತಾನಾದ ಚಿತ್ತದವನ ಮುಟ್ಟು. ||೧೦||

೧೨೫

ವೇದ ಶಾಸ್ತ್ರ ಪುರಾಣ ಆಗಮಂಗಳಿಗೆ ಅಭೇದ್ಯಲಿಂಗಕ್ಕೆ
ಸಕಲಸಂಸಾರವೇದಿಗಳ ಶೇಷವ ಸಮರ್ಪಿಸಬಹುದೆ?
ಅಲ್ಲಾಯೆಂದಡೆ ಸಮಯವಿರೋಧ.
ಅಹುದೆಂದಡೆ ಆದಿಯನಾದಿಯಿಂದತ್ತ
ಭೇದಿಸಿ ಕಾಣದ ಅಭೇದ್ಯಲಿಂಗಕ್ಕೆ
ಸರ್ವಸಾಧನೆಯಲ್ಲಿ ಸಾವವರ ಶೇಷವ
ನಾದ ಬಿಂದು ಕಳೆಗೆ ಅತೀತವಪ್ಪ ವಸ್ತುವಿಂಗೆ ನೈವೇದಿಸಬಹುದೆ?
ಲಿಂಗದ ಆದ್ಯಂತವನರಿಯರು.
ಗುರುಲಿಂಗಜಂಗಮದ ಭೇದಕ್ರೀಯನರಿದು ಕಂಡು
ತನ್ನಿರವ ತಾ ಶೋಧಿಸಿಕೊಂಡು ತ್ರಿವಿಧವ ಅರಿತವಂಗಲ್ಲದೆ
ಉಭಯಪ್ರಸಾದವ ಲಿಂಗಕ್ಕೆ ಅರ್ಪಿಸಿ
ತ್ರಿವಿಧಪ್ರಸಾದವ ಒಡಗೂಡಿಕೊಂಬುದು ನಿರಂಗಿ.
ನಿರಂಗಿಯ ಮಹಾಪ್ರಸಾದಿಯ ಅಂಗ ಹೀಂಗಲ್ಲದೆ
ಕಂಡವರ ಕೈಕೊಂಡು ಬಂಧ ಮೋಕ್ಷ ಕರ್ಮಂಗಳೊಂದೂ ಹರಿಯದೆ ನಿಂದ
ಕೀರ್ತಿ ಆಡಂಬರಕ್ಕಾಗಿ ಮಾಡಿಕೊಂಡ ನೇಮಕ್ಕೆ ಕೆಟ್ಟಡೆ

ತ್ರಿವಿಧವೇದಿಗಳು ಬಾಧಿಸಿಹರೆಂದು ಕಟ್ಟುಗುತ್ತಿಗೆಯ ವರ್ತಕರಿಗೆ
ತ್ರಿವಿಧಪ್ರಸಾದದ ನಿಜನಿಶ್ಚಯ ಉಂಟೆ?
ಇಂತೀ ಭೇದವಿಚಾರಗಳ ತಿಳಿದು
ಲಿಂಗದ ಅಂದಿನ ಸೋಂಕಿನಿಂದ ಬಂದ
ಗುರು ಲಿಂಗ ಜಂಗಮದ ಅಂಗವನರಿದು
ಲಿಂಗಮೂರ್ತಿ ತ್ರಿವಿಧರೂಪಾಗಿ
ಬಂದುದ ತಿಳಿದು, ತನ್ನ ಮೂರ್ತಿಗೆ ತಾ ಗುರುವಾಗಿ
ದೀಕ್ಷಿತನಾಗಿ ಬಂದುದ ಕಂಡು
ತನ್ನ ಮೂರ್ತಿಗೆ ತಾನು ಸುಳಿದು, ಚರವಾಗಿ ನಿಂದುದ ಕಂಡು
ತನ್ನ ಮೂರ್ತಿಗೆ ನಿಜಕ್ಕೆ ತಾ ಮೂರ್ತಿಯಾಗಿ
ಆ ಲಿಂಗವು ಉಭಯದ ಗುಣದಲ್ಲಿ ಕುರುಹಗೊಂಡಿತ್ತು.
ಇಂತೀ ನಡೆನುಡಿ ಸಿದ್ಧಾಂತವಾದವಂಗಲ್ಲದೆ
ಗುರುಚರಪ್ರಸಾದ ಲಿಂಗಕ್ಕೆ ನೈವೇದ್ಯವಲ್ಲ,
ದಹನ ಚಂಡಿಕೇಶ್ವರಲಿಂಗವನರಿದ ಪ್ರಸಾದಿಯ ನಿರಂಗ. || ೧೧ ||

## ಬಹುರೂಪಿ ಚೌಡಯ್ಯನ ವಚನ

೧೨೬

ಅಂಡಜ ಪೃಥ್ವಿ ಉದಯಿಸದಂದು
ಭೂಮಂಡಲವಾಗದಂದು
ಪಿಂಡಜ ಬೀಜವ ನವಬ್ರಹ್ಮರು ತಾರದಂದು
ನವಖಂಡವ ರಚಿಸದಂದು
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚಭೂತಾದಿ [ಸ್ಥ]ಳವಿಡದಂದು
ಅನುಕರಿಸದಂದು, ರೂಹಿಸದಂದು
ಅತಿಮಥನ ಒಡ್ಡದಂದು
ಇಪ್ಪತ್ತೈದರ ಸ್ಥಳವ ಹೆಸರುಗೊಂಡು ಕರೆಯದಂದು
ಎನಗೆ ತನಗೆಂಬಿಚ್ಛೆ ತನ್ನ ತಲೆದೋರದಂದು
ಋಷಿಗಳಾಶ್ರಯ ಲೋಕದಲ್ಲಿ ಹರಿಯದಂದು
ಅಂದು ಬಸವನಿದ್ದ ಕಾಣಾ, ರೇಕಣ್ಣಪ್ರಿಯ ನಾಗಿನಾಥಾ. ||೧||

೧೨೭

ಅನುದಿನಂಗಳೆಂಬವು ಪ್ರಣತೆಯಾಗಿ,
ವರುಷವೆಂಬವು ಬತ್ತಿಯಾಗಿ,

ಜೀವಜಾತಿಯು ಬೆಳಗ ಬೆಳಗಿನಲರಿಯಬೇಕು.
ಬೆಳಗುಳ್ಳಲ್ಲಿ ಆತ ನಡೆಸಿದಂತೆ ನಡೆಯಬೇಕು.
ಬೆಳಗುಳ್ಳಲ್ಲಿ ಆತ ನುಡಿಸಿದಂತೆ ನುಡಿಯಬೇಕು.
ಎಣ್ಣೆಯೆಂಬ ಜವ್ವನ ಸವೆಯದ ಮುನ್ನ,
ಬೆಳಗು ಕತ್ತಲೆಯಾಗದ ಮುನ್ನ
ರೇಕಣ್ಣಪ್ರಿಯ ನಾಗಿನಾಥಾ, ಬೆಳಗ ಬೆಳಗಿನಲರಿಯಬೇಕು. ||೨||

೧೨೮

ಅಪ್ಪಾ ಬೊಪ್ಪಾ ಚಿಕ್ಕ ಚೋಹಮಂ ತೊಟ್ಟು,
ಮುಖಕ್ಕೆ ಹೊತ್ತಿಗೊಂದು ಪರಿಯ ಬಚ್ಚಣೆಯನಿಕ್ಕಿ
ಮತ್ತದನು ತಲೆಯಲ್ಲಿ ಹೊತ್ತು, ತಪ್ಪಿ ಹೆಜ್ಜೆಯನಿಕ್ಕಿ ಆಡುತ್ತಿದ್ದ
ರೇಕಣ್ಣಪ್ರಿಯ ನಾಗಿನಾಥನಲ್ಲಿ ಹೊತ್ತುಹೋಗದ ಬಹುರೂಪವ. ||೩||

೧೨೯

ಅರೆಯ ಆಲಯದಲ್ಲಿ ಕರಿಗೊಳಿಸುವ ಶ್ರವಣವೆ ಮೇಲಹ ಆಕಾಶವನಪ್ಪಲು
ಉಲುಹು ನಿರ್ಯಾತವಾಗಿ ಚಿತ್ತ ಸಮಾಧಾನವನೈದಲು
ಕಾಲ ಕರ್ಮ ಭವಾರಣ್ಯವ ಗೆಲುವುದು
ಎನಗರಿದೇನಯ್ಯ, ರೇಕಣ್ಣಪ್ರಿಯ ನಾಗಿನಾಥಾ. ||೪||

೧೩೦

ಅಲ್ಲಿಯ ಬಹುರೂಪ ಇಲ್ಲಿಗೆ ಬಂದಿತ್ತು.
ಇಲ್ಲಿಯ ಬಹುರೂಪ ಎಲ್ಲಿ ಅಡಗಿತ್ತೋ?
ಎನ್ನ ಬಹುರೂಪ ಬಲ್ಲವರಾರೋ ?
ನಾದ ಹರಿದು ಸ್ವರವು ಸೂಸಿದ ಬಳಿಕ
ಈ ಬಹುರೂಪ ಬಲ್ಲವರಾರೋ ?
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಬಸವಣ್ಣನಿಂದ ಬದುಕಿತೀ ಲೋಕವೆಲ್ಲ. ||೫||

೧೩೧

ಆಡಿದೆನೈವರನೊಡಗೂಡಿ.
ಮಾಡಿದೆ ಶರ್ವನ ಸಂಗವ.
ನೋಡಿದೆ ನಾ ನೀನೆಂಬ ಭೇದವಳಿದು.
ಕೂಡಿದೆ ಕೇಡಿಲ್ಲದ ಕೂಟವ.

ಆಟ ಮಾಯಿತ್ತು, ನೋಟ ತೀರಿತ್ತು
ರೇಕಣ್ಣಪ್ರಿಯ ನಾಗಿನಾಥಾ. ||೬||

೧೩೨

ಆಡುವಡೆ ಸದಾಚಾರಿಗಳ ಕೂಡೆ ಆಡುವದು.
ನುಡಿವಡೆ ಜಂಗಮಪ್ರೇಮಿಯ ಕೂಡೆ ನುಡಿವುದು.
ಮಾತಾಡುವಡೆ ಪ್ರಸಾದಿಯ ಕೂಡೆ ಮಾತನಾಡುವದು.
ಭಕ್ತಿಹೀನನ ಕಂಡಡೆ ಮನ ಮುನಿಸ ಮಾಡಿಸಾ
ರೇಕಣ್ಣಪ್ರಿಯ ನಾಗಿನಾಥಾ. ||೭||

೧೩೩

ಆದಿಶುದ್ಧ ಆಚಾರಲಿಂಗವೆನ್ನುತ್ತಿರ್ಪರೆಲ್ಲರು
ಅನಾದಿಯ ಲಿಂಗದ ಭೇದವನರಿಯರಾಗಿ,
ನಾಸಿಕಪುಟದ ಆಶ್ರಯದಲ್ಲಿ ಲಿಂಗವನರಿಯರಾಗಿ.
ಕೆಲಬರಿಗೆ ಲಿಂಗವು ಹಲಬರಿಗೆ ದೂಷಣೆಯ ಮಾಡಿ
ಹೋದ ಲಿಂಗವನರಿಯರಾಗಿ ದೂಷಣೆ ಪಥ್ಯವಾಗಿ,
ಮನದಾಶ್ರಯಕ್ಕೆ ತಂದಾತ, ರೇಕಣ್ಣಪ್ರಿಯ ನಾಗಿನಾಥ.
ಬಸವಣ್ಣನಿಂದ ಬದುಕಿಬೆ. ||೮||

೧೩೪

ಇಂದು ಬಂದ ಬಹುರೂಪವ ನೋಡಿರಯ್ಯಾ.
ಗತಿಯ ಹೊದ್ದದೆ, ಮತಿಯ ಹೊದ್ದದೆ, ಸ್ಥಿತಿಯ ಹೊದ್ದದೆ
ಸ್ಥಾನವ ಹೊದ್ದದೆ, ಐವರು ಕಟ್ಟಿದ ಕಟ್ಟಳೆಯ ಮೀರಿ
ನಾನಾಡುವೆ ಬಹುರೂಪವ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆ. ||೯||

೧೩೫

ಇನ್ನಾಡುವೆ ಜಂಗಮ ಬಹುರೂಪ,
ಅಲ್ಲಮನಂತೆ ಆಡುವೆ ಬಹುರೂಪ.
ಅಜಗಣ್ಣನಂತೆ ಆಡುವೆ ಬಹುರೂಪ.
ಮುಖವಾಡದಯ್ಯಗಳಂತೆ ಆಡುವೆ ಬಹುರೂಪ.
ಪುರುಷಾಂಗಣವ ಮೆಟ್ಟಿ ಆಡುವೆ ಬಹುರೂಪ.
ರೇಕಣ್ಣಪ್ರಿಯ ನಾಗಿನಾಥಾ, ಬಸವನಿಂದ ಬದುಕಿತೀ ಲೋಕವೆಲ್ಲಾ. ||೧೦||

೧೩೬

ಇನ್ನಾಡುವೆ ಜಂಗಮ ಬಹುರೂಪ,
ಕಲ್ಯಾಣವೆಲ್ಲಾ ಅರಿಯಬೇಕೆಂದು.
ಎನ್ನ ಬಹುರೂಪ ಕಾಮ ಹೊಯ್ದುಕೊಂಡಿಯೆಂದಡೆ
ಪ್ರಸಾದವ ಮಾಡಿಕೊಟ್ಟಡೆ
ಇದು ಬಸವನ ಪ್ರಸಾದವೆಂದು ಕೈಕೊಂಡೆ ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ, ಬಸವನಿಂದ ಬದುಕಿತೀ ಲೋಕವೆಲ್ಲಾ. ||೧೧||

೧೩೭

ಎಂಟು ತಟ್ಟೆಯ ನೆಟ್ಟು, ಒಂಬತ್ತು ನೇಣು ಕಟ್ಟಿ
ಎಂಟ ಬಿಟ್ಟು ಒಂದೇ ನೇಣಿನಲ್ಲಿ ಹತ್ತಿ ಆಡುತ್ತಿರಲಾಗಿ
ತಟ್ಟೆ ಮುರಿದು, ಮೆಟ್ಟಿನಿಂದ ದಾರ ಕಿತ್ತು,
ನೋಡುವರ ದೃಷ್ಟಿ ಬಟ್ಟಬಯಲು
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಆಟವನಾಡಿದ ಅರಿದಾಗಿ. ||೧೨||

೧೩೮

ಎಂಬತ್ತುನಾಲ್ಕುಲಕ್ಷ ಬಹುರೂಪ
ಚಂದ ಚಂದದಲ್ಲಿ ಆಡಿ
ಬಂಧುಗಳ ಮೆಚ್ಚಿಸಬಂದೆ.
ಅವರು ಬಹುರೂಪದಂದವನರಿಯರು.
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಬಹುರೂಪದಿಂದ ವಿಚ್ಛಂದವಾಯಿತ್ತು. ||೧೩||

೧೩೯

ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ
ಬಸವಣ್ಣ.
ನಾದವನರ್ಪಿಸಿದಲ್ಲಿ ಅರ್ಪಿತಗೊಂಡಾತ
ಬಸವಣ್ಣ.
ನಾ ಹೆಂಡಿರನರ್ಪಿಸುವಲ್ಲಿ ಅರ್ಪಿತಗೊಂಡಾತ
ಬಸವದೇವ.
ಎನ್ನ ಧನ ಕೆಟ್ಟಿತ್ತು ಬಸವನಿಂದ, ಮನ ಕೆಟ್ಟಿತ್ತು
ಬಸವನಿಂದ.

ಎನ್ನ ಗೋತ್ರ ನಿವಾರಣವಾಯಿತ್ತು
ಬಸವನಿಂದ.
[ವೇಳವಾಳಿ] ನಾ ಹೆಣ್ಣನರ್ಪಿತ ಮಾಡಿದಲ್ಲಿ
ಒಪ್ಪುಗೊಂಡಾತ ಬಸವಣ್ಣ.
ಕಡುಗಲಿ ತಮ್ಮನನಿರಿಯಲು
ಮುರಿಯಿತ್ತು ಅಲಗು ಬಸವನಿಂದ.
ಎನ್ನೊಡಲಲಿರ್ದ ಏಳು ಮಾನಿಸಸ್ತ್ರೀಯರು
ಏಳಲಾರದೆ ಹೋದರು ಬಸವನಿಂದ.
ನಾ ಕೆಟ್ಟೆ, ಕಾಣಾ, ರೇಕಣ್ಣಪ್ರಿಯನಾಗಿನಾಥಾ.
ಬಸವನಿಂದ ಬದುಕಿತೀ ಲೋಕವೆಲ್ಲಾ. || ೧೪ ||

೧೪೦

ಎಲ್ಲರಾಟದಂತಲ್ಲ ಎನ್ನಾಟ,
ಕರದಾಧಾರದಲಪ್ಪಿ, ಪಂಚಾಮೃತ ಮಂತ್ರವನುಂಡಾಡಿದೆ.
ಆ ದೇಶ ಈ ದೇಶವೆಂತೆನ್ನದೆ
ಪರದೇಶದಲಾಡಿ ಪರದೇಶಿಯಾದೆನು.
ಕಾಲನ ಮೇಲೆ ನಿಂದು,
ಕಪಾಲದ ಭಿಕ್ಷವ ಹಿಡಿದು
ಹರಿಯ ಶೂಲದಲೆತ್ತಿಯಾಡಿದೆ.
ಹರಶರಣರಾಧಾರದ ಬಸವನ ಶಿಶು ನಾನು ಕಾಣಾ
ರೇಕಣ್ಣಪ್ರಿಯ ನಾಗಿನಾಥಾ. || ೧೫ ||

೧೪೧

ಎಲ್ಲಾ ಜಗಂಗಳೊಳಗಿರ್ದಡೇನು
ಶಿವನು ಜಗದಂತಹನಲ್ಲ.
ಜಗವ ತನ್ನೊಳಗಿಕ್ಕಿ ತಾ ಹೊರಗಿರ್ದಹೆನೆಂದಡೆ
ಬ್ರಹ್ಮಾಂಡದಂತಹನೇ ? ಅಲ್ಲ.
ಆಕಾಶದೋಪಾದಿಯಲ್ಲಿ ಸರ್ವಲೋಕದ
ಒಳ ಹೊರಗೆ ಮೂಲ ಚೈತನ್ಯ ತಾನಾಗಿ, ಆಧಾರವಾದ
ನಮ್ಮ ರೇಕಣ್ಣಪ್ರಿಯ ನಾಗಿನಾಥ. || ೧೬ ||

೧೪೨

ಒಂದರಲ್ಲಿ ಬಂದು, ನಾಲ್ಕರಲ್ಲಿ ಆಡಿ
ಒಂದರಲ್ಲಿ ಅಡಗಿ, ಮೂರರಲ್ಲಿ ಕೂಡಿ

ಎಂಟರಲ್ಲಿ ಕಂಟಕವಾಯಿತ್ತು.
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಪುರೆಹರೆ ಎನುತಿರ್ದೆನು. ||೧೭||

೧೪೩

ಒಂಬತ್ತು ಇಟ್ಟಿಯ ನಡುವೆ ಒಂದು ಕತ್ತಿಯ ನಟ್ಟು
ತುಟ್ಟತುದಿಯ ಮೆಟ್ಟಿ ಆಡಲಾಗಿ,
ಆ ಕತ್ತಿ ಇಟ್ಟಿಯ ತಾಗಿ, ಆ ಇಟ್ಟಿ ನಿಷ್ಠೆವಂತರ ತಾಗಿ
ಸತ್ತರೆಲ್ಲರು ಆಟಕ್ಕೆ ಮೊದಲೆ
ರೇಕಣ್ಣಪ್ರಿಯ ನಾಗಿನಾಥನಲ್ಲಿ. ||೧೮||

೧೪೪

ಒಡೆಯರ ಸಹಪಜ್ತೆಯಲ್ಲಿ ಪರಿಯಾಣ
ಅಡ್ಡಣಿಗೆಯನಿರಿಸಿಕೊಂಡು ಉಂಬ ಸಮಗ್ರಾಹಕನಲ್ಲ.
ನಿಮ್ಮ ಶರಣರ ಪಾದೋದಕಕ್ಕಲ್ಲದೆ ಕೈಯಾನೆ.
ನಿಮ್ಮ ಶರಣರ ಪ್ರಸಾದಕ್ಕಲ್ಲದೆ ಬಾಯ್ದೆರೆಯೆ.
ನಿಮ್ಮ ಲಾಂಛನಧಾರಿಯ ಮನೆಯ ಪ್ರತಿಭೃತ್ಯನಾಗಿರಿಸಯ್ಯಾ ನೀನೆನ್ನ
ರೇಕಣ್ಣಪ್ರಿಯ ನಾಗಿನಾಥಾ. ||೧೯||

೧೪೫

ಕಲ್ಲ ಒಳಗಣ ಕಿಚ್ಚಿಂಗೂ ಬೂದಿಯಿಲ್ಲದಂತಿರಿಸಿದೆ
ಅಯ್ಯಾ ಎನ್ನ, ಲಿಂಗದೊಳಗೆ.
ಗಾಳಿಗಂಧ ಕೂಡಿದಂತಿರಿಸಯ್ಯಾ ಎನ್ನ,
ಲಿಂಗದೊಳಗಂಗವನು.
ರೇಕಣ್ಣಪ್ರಿಯ ನಾಗಿನಾಥಾ, ನಿಮ್ಮ ಒಲವಿನೊಳಗಣ ನಿಲವು
ಸೊಡರ ಬೆಳಗಿನಲಡಗಿದ ಎಣ್ಣೆಯಂತೆ ಇರಿಸಯ್ಯಾ,
ಎನ್ನ ಲಿಂಗದೊಳಗಂಗವನು. ||೨೦||

೧೪೬

ಕಳ್ಳನ ಕೈಯಲ್ಲಿ ಒಂದು ಒಳ್ಳಿಹ ರತ್ನವ ಕಂಡಡೆ
ಎಲ್ಲರೂ ಬಂದು ತಲೆವಿಡಿವರಯ್ಯಾ.
ಆ ರತ್ನವ ರತ್ನವ್ಯವಹಾರಿ ಕೊಟ್ಟು ಕೊಂಡಡೆ
ಆರೂ ಬಾಯಲೆತ್ತಲಮ್ಮರು.

ಶೈವ ಗುರುವಿನ ಕೈಯಲ್ಲಿ ಸಾಹಿತ್ಯವಾದ ಲಿಂಗವನು
ವೀರಶೈವ ಗುರುವಿನ ಕೈಯಲ್ಲಿ ಕೊಟ್ಟು ಮರಳಿ ಕೊಂಡಡೆ
ಆತ ಇಹಲೋಕ ಪೂಜ್ಯನು, ಪರಲೋಕ ಪೂಜ್ಯನು.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ತಪ್ಪದು ರೇಕಣ್ಣಪ್ರಿಯ ನಾಗಿನಾಥಾ. || ೨೧ ||

೧೪೭

ಕಾಮನ ಮಂದಿರದಡವಿಯೊಳಗೆ
ಶುಕ್ಲಶೋಣಿತವೆಂಬ ಮಡಕೆಯ ಮಾಡಿ
ಮೂತ್ರ ಶ್ಲೇಷ್ಮ ಅಮೇಧ್ಯವೆಂಬ ಪಾಕದ್ರವ್ಯಂಗಳ
ಮಡಕೆಯಲ್ಲಿ ನಿಶ್ಚಯಿಸಿ
ಆ ಮಡಕೆಯನೊಡೆದಾ[ಗಲೆ ಭಕ್ತ] ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನಿಂದ ಬದುಕಿದೆನು. || ೨೨ ||

೧೪೮

ಕುಲವ ಕೂಡದೆ ಕೋಪವಡಗಿ
ಅನ್ಯಹೇಸಿಕೆ ಮತ್ತೆ ಐಕ್ಯವಾದ ನಿರುತ ಭರಿತದ ಪರಮಸುಖ
ಎನಗೆಂದಪ್ಪುದೊ?
ಕಾಯದಂದುಗ ಬಿಟ್ಟು ನಿರಾಸೆಯಲ್ಲಿ ನೆರೆ ಸಲು[ಹಿ]ಂದ
ಎನ್ನ ನಚ್ಚಿನ ಲಿಂಗ ಮೆಚ್ಚಿನ ಘನಕ್ಕೆ ಘನಲಿಂಗವಾಗಿ
ರೇಕಣ್ಣಪ್ರಿಯ ನಾಗಿನಾಥನಯಸವಿನೊಲವೆನಗಪ್ಪುದೆಂದೋ? || ೨೩ ||

೧೪೯

ಕೈಯ ಮರದು ಕಾದುವ ಅಂಕವದೇನೊ?
ಭಾವ ಮರದು ನೋಡುವ ನೋಟವದೇನೊ?
ಭಯವ ಮರದು ಮಾಡುವ ಭಕ್ತಿಯದೇನೊ?
ರೇಕಣ್ಣಪ್ರಿಯ ನಾಗಿನಾಥನಲ್ಲಿ ಗುರುವ ಮರದು
ಲಿಂಗವನೊಲಿಸಿದೆನೆಂದಡೆ ಆ ಉಭಯ ಗುರುಲಿಂಗವೆರಡೂ ಇಲ್ಲ. || ೨೪ ||

೧೫೦

ಗಾರುಡಿಗನ ವಿಷವಡರಬಲ್ಲುದೆ?
ಸೂರ್ಯನ ಮಂಜು ಮುಸುಕಬಲ್ಲುದೆ?

ಗಾಳಿಯ ಮೊಟ್ಟೆಯ ಕಟ್ಟಬಹುದೆ ?
ಅಗ್ನಿಯ ಕೈಯಿಂದ ಆಕಾಶ ಬೇಯಬಲ್ಲುದೆ ?
ನಿಮ್ಮನರಿದ ನಿಜಯೋಗಿಗೆ ಕರ್ಮಪಾಶವೆಲ್ಲಿಯದೊ
ರೇಕಣ್ಣಪ್ರಿಯ ನಾಗಿನಾಥಾ ? || ೨೫ ||

೧೫೧

ಗುರು ಎನ್ನ ಮುಟ್ಟಿ ಗುರು ಶುದ್ಧವಾದನಯ್ಯ.
ಲಿಂಗ ಎನ್ನ ಮುಟ್ಟಿ ಲಿಂಗ ಶುದ್ಧವಾಯಿತ್ತಯ್ಯ.
ಜಂಗಮ ಎನ್ನ ಮುಟ್ಟಿ ಜಂಗಮ ಶುದ್ಧವಾದನಯ್ಯ.
ಪ್ರಸಾದ ಎನ್ನ ಮುಟ್ಟಿ ಪ್ರಸಾದ ಶುದ್ಧವಾಯಿತ್ತಯ್ಯ.
ಈ ಚತುರ್ವಿಧ ಎನ್ನ ಮುಟ್ಟಿ ಶುದ್ಧವಾಯಿತ್ತು ಕಾಣಾ
ರೇಕಣ್ಣಪ್ರಿಯ ನಾಗಿನಾಥಾ. || ೨೬ ||

೧೫೨

ಘನವ ನೆನವ ಮನಕ್ಕೆ ತಕ್ಕ ಕಿವಿಯಾದವಾಗಿ
ಗುರುವಚನ ರತಿಸುಖಸಾರಾಯಸಂಬಂಧದನುಭಾವಿಯಾಗಿ
ಶರಣಸತಿ ಗರ್ಭವಾದಳು.
ಇರುಳಿಲ್ಲ ಹಗಲಿಲ್ಲ, ನವಮಾಸಂಗಳನರಿಯಳು.
ರೇಕಣ್ಣಪ್ರಿಯ ನಾಗಿನಾಥ ಅಯೋನಿ ಸಂಭವನಾಗಿ
ಪ್ರಸೂತಕಾಯನಲ್ಲ. || ೨೭ ||

೧೫೩

ಚಿತ್ತಾವಧಾನವೆಂದಾಡಬಂದೆ, ಸತ್ಯಶರಣರ ಮುಂದೆ.
ಶುಕ್ಲ ಶೋಣಿತವೆಂಬ ಬಾಯಿ ಕಟ್ಟೆಯ ಮೆಟ್ಟಿ
ತುಟ್ಟತುದಿಯನೇರಿ ಕೈಯ ಬಿಟ್ಟಾಡುತ್ತಿದ್ದೇನೆ.
ಮೆಟ್ಟಿದ ಹೆಜ್ಜೆಯ ಮೆಟ್ಟದೆ,
ನೋಡುವ ನಿಷ್ಕೆಮಂತರ ದೃಷ್ಟಿ ಪಲ್ಲಟವಾಗದೆ
ನೋಡದಿರ್ದಡೆ ಲಾಗು ಎತ್ತ ಹೋಯಿತ್ತೊ
ರೇಕಣ್ಣಪ್ರಿಯ ನಾಗಿನಾಥಾ ? || ೨೮ ||

೧೫೪

ಜಂಗಮದನುವನರಿಯದಿರ್ದಡೆ
ಲಿಂಗ ತಮತಮಗೆಲ್ಲಿಯದೊ ?

ಲಿಂಗವಿಪ್ಪ ಸಜ್ಜೆಯೆಲ್ಲಾ ಜಂಗಮದ ಪ್ರಾಣವಲ್ಲವೆ ?
ಲಿಂಗವು ರೇಕಣ್ಣಪ್ರಿಯ ನಾಗಿನಾಥ
ಜಂಗಮದ ಕಾಯವ ತೊಟ್ಟುಕೊಂಡು ಸುಳಿವನಾಗಿ. || ೨೯ ||

೧೫೫

ಜಂಗಮದ ಪಾದತೀರ್ಥ ಪ್ರಸಾದವ ಕೊಳ್ಳದಂತಹ
ಗುರುವಿನ ಕೈಯಲ್ಲಿ
ಲಿಂಗಧಾರಣವ ಮಾಡಿಸಿಕೊಳಲಾಗದು.
ಆತನ ಪಾದತೀರ್ಥ ಪ್ರಸಾದವ ಕೊಳಲಾಗದು.
ಅಥವಾ ಪ್ರಮಾದವಶದಿಂದ ಲಿಂಗಧಾರಣವ
ಮಾಡಿಸಿಕೊಂಡಡೆಯೂ ಮಾಡಿಸಿಕೊಳ್ಳಲಿ.
ಆ ಗುರುವನೆ, ಜಂಗಮದ ಪಾದತೀರ್ಥ ಪ್ರಸಾದವ
ಕೊಂಬ ಹಾಂಗೆ ಸದಾಚಾರಿಯ ಮಾಡುವದು.
ಶಿಷ್ಯನು, ಆ ಗುರು ಜಂಗಮದ
ಪಾದತೀರ್ಥ ಪ್ರಸಾದವ ಕೊಳ್ಳದಿರ್ದಡೆ
ಮತ್ತೆ ಲಿಂಗವನು ಮರಳಿ ಜಂಗಮದ ಪಾದತೀರ್ಥ ಪ್ರಸಾದವ
ಕೊಂಬಂತಹ ಜಂಗಮದ ಕೈಯಲ್ಲಿ ಕೊಟ್ಟು ಕೊಳಬೇಕು.
ಜಂಗಮಲಿಂಗಪ್ರಸಾದವ ಕೊಳದಂತಹ
ಜಂಗಮದ ಕೈಯಲ್ಲಿ ಪ್ರಸಾದವ ಕೊಳಲಾಗದು.
ಆ ಜಂಗಮ ಭಕ್ತನ ಮಠಕ್ಕೆ ಬಂದು
ಪಾದತೀರ್ಥ ಪ್ರಸಾದವ ಕೊಳದಂತಹ ಜಂಗಮವಾದಡೂ
ಅವರಲ್ಲಿ ಪಾದತೀರ್ಥ ಪ್ರಸಾದವ ಕೊಳಲಾಗದು.
ಅದೇನು ಕಾರಣವೆಂದಡೆ :
ಜಂಗಮದ ಪಾದತೀರ್ಥ ಪ್ರಸಾದವ ಕೊಳದಂತಹ
ಗುರುವಿಂಗೆಯೂ ಲಿಂಗಕ್ಕೆಯೂ ಜಂಗಮಕ್ಕೆಯೂ
ಮುಕ್ತಿಯಿಲ್ಲ ಕಾಣಾ, ರೇಕಣ್ಣಪ್ರಿಯ ನಾಗಿನಾಥಾ. || ೩೦ ||

೧೫೬

ಜಂಗಮಪ್ರಸಾದವರಿಯದ ಗುರುವಿನ ಕೈಯಲ್ಲಿ
ಲಿಂಗಸಾಹಿತ್ಯವಾಗಲಾಗದಯ್ಯಾ.
ಆದಡೆ ಆಗಲಿ, ಗುರುವನೆ ಸದಾಚಾರಿಯ ಮಾಡೂದು.
ಶಿಕ್ಷಾಗುರು ಜಂಗಮದಲ್ಲಿ ಪ್ರಸಾದವ ಕೊಂಡೆಹೆನೆಂದಡೆ

ಆ ಜಂಗಮ ಜಂಗಮಪ್ರಸಾದಿಯಲ್ಲದಿರ್ದಡೆ
ಆ ಪ್ರಸಾದವ ಮುಟ್ಟಲಾಗದು.
ರೇಕಣ್ಣಪ್ರಿಯ ನಾಗಿನಾಥಲಿಂಗವು
ಆಗುಹೋಗನರಿಯನಾಗಿ
ಬಸವಣ್ಣನ ಕೂಡಿ ಆಡಿ ಪ್ರಸಾದಿಯಾದನಾಗಿ
ಇತ್ತ ಬಾ ಎಂದು ಕೈವಿಡಿದು ತೆಗೆದುಕೊಂಬುದು. || ೩೧ ||

೧೫೭

ಜಂಗಮದ ಪ್ರಸಾದವ ಲಿಂಗಕ್ಕೆ ಕೊಡಬಾರದೆಂಬ
ಕರ್ಮಿಯ ಮಾತ ಕೇಳಲಾಗದು. ಅದೆಂತೆಂದಡೆ:
ಅದು ಪವಿತ್ರವಾದ ಕಾರಣ ಪವಿತ್ರವೆನಿಸುವ ಮೂರ್ತಿ
ಮಹಾಜಂಗಮದ ಪಾದತೀರ್ಥ ಪ್ರಸಾದವ
ಲಿಂಗಕ್ಕೆ ಸಮರ್ಪಿಸಿ
ಪ್ರಸಾದಭೋಗೋಪಭೋಗಿಯಾಗಿರ್ಪ ಭಕ್ತನೆ ಬಸವಣ್ಣ.
ಅದಲ್ಲದೆ ಅಪವಿತ್ರವ ಲಿಂಗಕ್ಕೆ ಸಮರ್ಪಿಸಲಾಗದು.
ಅದೆಂತೆಂದಡೆ-ಸಾಕ್ಷಿ:
ಜಂಗಮಂ ಚ ಪ್ರಸಾದಂತು ನಿವೇದ್ಯಂ ಚ ಸಮರ್ಪಣಂ |
ಪ್ರಸಾದಿ ಸತ್ಯ ಶುದ್ಧಾತ್ಮ ಪ್ರಸಾದಿಸ್ಥಲಮುತ್ತಮಂ ||
ಇಂತಲ್ಲದೆ ಅಪವಿತ್ರದ್ರವ್ಯವ,
ಉಚ್ಛಿಷ್ಟ ಚಾಂಡಾಲ ಕಾಯವ ಮುಟ್ಟಿ
ಪವಿತ್ರಲಿಂಗಕ್ಕೆ ಅರ್ಪಿಸಿ ಭುಂಜಿಸುವ
ಚಾಂಡಾಲನ ಮುಖವ ನೋಡಲಾಗದು,
ರೇಕಣ್ಣಪ್ರಿಯ ನಾಗಿನಾಥಾ. || ೩೨ ||

೧೫೮

ತೊಗಲ ಸೀರೆಯ ತೆರೆಯ ಹಿಡಿದು
ಬಲು ಎಲುವಿನ ಗಳುವಿನಲ್ಲಿ
ನರವಿನ ಭೀಮಗಟ್ಟಂ ಕಟ್ಟಿ
ತೆರೆ ನಿಂದಿತ್ತು ಜವನಿಕೆಯ ಮರೆಯಲ್ಲಿ.
ಬಂದು ನಿಂದು ಜಜ್ಝರೆ ಪುರೆ[ಹರೆ]ಯಾಯಿತ್ತು.
ಹೋಯಿತ್ತು ಎಂಬ ಬಹುರೂಪಮಂ ತೊಟ್ಟು
ರೇಕಣ್ಣಪ್ರಿಯ ನಾಗಿನಾಥಾ,
ಭಲರೆ ಥರುರೆ ಎನುತಿರ್ದೆನು. || ೩೩ ||

೧೫೯

ನನಗೆ ನಾನೆ ಗುರುವಾದೆನಯ್ಯಾ.
ನನಗೆ ನಾನೆ ಲಿಂಗವಾದೆನಯ್ಯಾ.
ನನಗೆ ನಾನೆ ಜಂಗಮವಾದೆನಯನ್ಯಾ.
ನನಗೆ ನಾನೆ ಪ್ರಸಾದವಾದೆನಯ್ಯಾ.
ನನಗೆ ನಾನೆ ಭಕ್ತನಾದೆನಯ್ಯಾ.
ರೇಕಣ್ಣಪ್ರಿಯ ನಾಗಿನಾಥನಲ್ಲಿ
ಆಗುಹೋಗನರಿಯೆನಯ್ಯಾ. ||೩೪||

೧೬೦

ನಿಃಕಲಶಿವ ತಾನೆ ಗುರುರೂಪವಾಗಿ
ಕೊಂಡಾಡಿದನಯ್ಯ ಬಸವಣ್ಣನು.
ಆ ಬಸವಣ್ಣನಿಂದ ಬಹುರೂಪ ಧರಿಸಿ
ಹಲವಾಕಾರವನಾಡಿ
ಸಾಕಾರದಲ್ಲಿ ಸನುಮತನಾದೆನು.
ನಿರಾಕಾರದಲ್ಲಿ ನಿರತವಾದ ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಲಿರ್ದೆನು. ||೩೫||

೧೬೧

ನಿಃಪತಿ ಬಂದು ಒಳಕೊಂಡಲ್ಲಿ
ನಿರಾಶ್ರಯ ಬಂದು ಹೊದಕೆಯಾದಲ್ಲಿ
ನಿರಾಲಂಬವಾಯಿತ್ತಲ್ಲಾ ಎನ್ನ ಬಹುರೂಪು.
ಎನ್ನ ಬಹುರೂಪಕ್ಕೆ ಪ್ರಾಣಲಿಂಗ ಬಸವ ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆ ||೩೬||

೧೬೨

ಪದ್ಮಾಸನದಲ್ಲಿ ಕುಳ್ಳಿರ್ದು ಆಧಾರಮಂ ಬಲಿದು
ವಾಯುವ ಊರ್ಧ್ವಕ್ಕೆ ತಿದ್ದಿ
ಮನ ಪವನ ಬಿಂದುವ ತ[ರ]ಹರವಂ ಮಾಡಿ
ಷಡಾಧಾರ ಕಮಲವನೂರ್ಧ್ವಮುಖವಂ ಮಾಡಿ
ಮೇಲಣ ಸಹಸ್ರಕಮಲಮಧ್ಯದೊಳಿಪ್ಪ ಜ್ಯೋತಿರ್ಲಿಂಗದಲ್ಲಿ
ಮನವ ನಿಲಿಸಿ, ನೆನೆನೆನೆದು
ಕೀಟಭೃಂಗನ್ಯಾಯದಂತಪ್ಪುದೆ ಯೋಗ
ರೇಕಣ್ಣಪ್ರಿಯ ನಾಗಿನಾಥಾ. ||೩೭||

೧೬೩

ಪ್ರಣವಮಂತ್ರರೂಪ ಪರಶಿವನ ಚೈತನ್ಯ
ಎಲ್ಲಾ ಮಂತ್ರಂಗಳಿಗೆ ಚೈತನ್ಯವು.
ಎಲ್ಲಾ ತಂತ್ರಂಗಳಿಗೆ ಚೈತನ್ಯವು.
ಓಂಕಾರಂ ವ್ಯಾಪ್ತಿ ಸರ್ವತ್ರಂ ಓಂಕಾರಂ ಗೋಪ್ಯ ಮಾನವಂ |
ಓಂಕಾರಂ ನಾದರೂಪಂ ಚ ಓಂಕಾರಂ ಮಂತ್ರರೂಪಕಂ ||
ಎಂದು, ಎಲ್ಲಾ ವೇದಂಗಳಿಗೆ ತಾನೆ ಚೈತನ್ಯವು.
ಇಂತಲ್ಲದಡೆ, ಎಲ್ಲಿಹದು ಜ್ಞಾನಸಾಮರ್ಥ್ಯವು.
ಅದು ಕಾರಣ, ಮಂತ್ರವೆ ಅವಯವವು
ರೇಕಣ್ಣಪ್ರಿಯ ನಾಗಿನಾಥಂಗೆ. || ೩೮ ||

೧೬೪

ಬಂದ ಬಹುರೂಪದಲ್ಲಿ ಸಂದಿಲ್ಲದೆ ಆಟವನಾಡುತ್ತ
ಬಂದ ಬಂದವರ ಮೆಚ್ಚಿಸುತ್ತ
ಅವರವರಂದಕ್ಕೆ ಕೊಂಡಾಡಿ, ಬಂದುದ ಕೈಕೊಂಡೆ
ರೇಕಣ್ಣಪ್ರಿಯ ನಾಗಿನಾಥನಲ್ಲಿ. || ೩೯ ||

೧೬೫

ಬಯಲಿಂದ ಹುಟ್ಟಿದ ಪರವೆಂಬ ತಾಯಿಗೆ
ಐವರು ಮಕ್ಕಳು ಜನಿಸಿದರೆಂತೆಂಬೆ :
ಒಬ್ಬ ಭಾವದ ರೂಪು, ಒಬ್ಬ ಪ್ರಾಣದ ರೂಪು.
ಒಬ್ಬ ಕಾಯದ ರೂಪು, ಒಬ್ಬನೈಮುಖನಾಗಿ
ವಿಷಯಕ್ಕೆ ಕಾಯರೂಪನಾದ. ಒಬ್ಬನೆಲ್ಲರ ಕೂಡಿಕೊಂಡು ನಿರವಯವಾಗಿರ್ಪ.
ಇಂತಿವರ ಕೂಡಿಕೊಂಡು ಈ ಲೋಕಕ್ಕೆ ಬಂದೆನು.
ಆನು ಹೋಗೆನಯ್ಯಾ, ಇನ್ನು ಹೋದೆನಾದಡೆ ಎನಗಿರ ಠಾವಿಲ್ಲ.
ಮುನ್ನ ಹೋದವರೆಲ್ಲಾ ತಗಹಿನಲ್ಲಿ ಕುಳ್ಳಿರ್ದರು.
ಆನು ಆ ತಗಹನರಿತೆನಾಗಿ ಬಲ್ಲಡೆ ಬಂದೆನಿಲ್ಲಿಗೆ.
ಇಲ್ಲೆನ್ನೊ ಮದ್ದಳಿಗ, ಒಲ್ಲೆನ್ನೊ ಕಹಳೆಕಾರ.
ಬಿಂದುವ ಹರಿದು ತಿಂದು ಹಾಕಿರೊ, ತಂತಿಯ ಹರಿಯಿರೊ.
ತಾಳ ವಿತಾಳವಾಯಿತ್ತಲ್ಲಾ ಕೇಳಿರೆ ಕೇಳಿರೆ.
ನಿಃಶೂನ್ಯವಾಯಿತ್ತಲ್ಲಾ ಕೇಳಯ್ಯ ಕೇಳಯ್ಯ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿತೀ ಲೋಕವೆಲ್ಲಾ. || ೪೦ ||

೧೬೭

ಬಸವಣ್ಣನಿಂದ ಶುದ್ಧಪ್ರಸಾದಿಯಾದೆ.
ಚನ್ನಬಸವಣ್ಣನಿಂದ ಸಿದ್ಧಪ್ರಸಾದಿಯಾದೆ.
ಪ್ರಭುದೇವರಿಂದ ಪ್ರಸಿದ್ಧಪ್ರಸಾದಿಯಾದೆ.
ಇವರೆಲ್ಲರ ಪ್ರಸಾದಿಯಾಗಿ
ರೇಕಣ್ಣಪ್ರಿಯ ನಾಗಿನಾಥನಲ್ಲಿ ಸೊಬಗ ಮೆರೆದೆ. || ೪೧ ||

೧೬೭

ಬಾಯೊಳಗಿದ್ದ ರುಚಿಯನುಗುಳಿ ನುಂಗಲೇಕೇ ?
ಕಣ್ಣಿನೊಳಗಿದ್ದ ರೂಪನಗಲಿ ನೋಡಲುಂಟೆ ?
ಕೈಯೊಳಗಿದ್ದ ವಸ್ತುವ ಬಿಟ್ಟು ಹಿಡಿಯಲುಂಟೆ ?
ತನ್ನೊಳಗಿದ್ದ ಘನವ ಭಿನ್ನವಿಟ್ಟರಸುವಡೆ.
ರೇಕಣ್ಣಪ್ರಿಯ ನಾಗಿನಾಥಾ
ಬಸವಣ್ಣನಿಂದ ಬುದುಕಿತೀ ಲೋಕವೆಲ್ಲ. || ೪೨ ||

೧೬೮

ಬಿತ್ತೆತ್ತ ಮುಂತಾಗಿ ಬಿತ್ತಿದಡೇನೋ ?
ಬೀಜ ನಿರಾಳದ ಬೆಳಸು.
ಶರಣಚಾರಿತ್ರವೆಂತಿರ್ದಡೇನೋ ?
ರೇಕಣ್ಣಪ್ರಿಯ ನಾಗಿನಾಥನ ಶರಣರ
ಅವರಿವರೆಂದಡೆ ನಾಯಕನರಕ. || ೪೩ ||

೧೬೯

ಭಕ್ತದೇಹಿಕದೇವನೆಂದು ಅಂಜದ ಮತವದೇನಪ್ಪುದೊ ?
ಭಯವಿಲ್ಲದ ಭಕ್ತಿ, ದಯವಿಲ್ಲದ ಶೀಲ
ಗುಣವಿಲ್ಲದ ನಂಟು ಮುಂದೇನಪ್ಪುದೊ ?
ಭಯವ ಮರೆದು, ಲಿಂಗದೊಡನೆ ಸಹಭೋಜನ ಮಾಡಿದಡೆ
ಪಂಚಮಹಾಪಾತಕ ತಪ್ಪದು. ಅದೆಂತೆಂದಡೆ :
ಗುರುವ ಬಿಟ್ಟು ಲಿಂಗವನೊಲಿಸಿಹೆನೆಂದಡೆ
ಗುರು ಲಿಂಗ ಎರಡೂ ಇಲ್ಲದೆ ಹೋಹವು.
ಗುರುವೆಂಬುದೆ ಭಯಭಕ್ತಿ, ಲಿಂಗವೆಂಬುದೆ ಶಿವನು.
ಈ ಭಯಭಕ್ತಿಯಿಲ್ಲದೆ ಶಿವನನೊಲಿಸಬಾರದು
ರೇಕಣ್ಣಪ್ರಿಯ ನಾಗಿನಾಥಾ. || ೪೪ ||

೧೭೦

ಭಕ್ತರ ಬರವಿಂಗೆ ಮಂಚವನಿಳಿಯದ ಕಾರಣ
ಧಮ್ಮು ಧಿಮ್ಮನೆ ಬೆನ್ನಬಡಿದು ಅವರಟ್ಟುಗೆಲಸಕ್ಕೆ ಹೋಗೆನಾಗಿ
ಎನ್ನ ತೊಡೆಯ ಕೊಯ್ದುಕೊಂ[ಬೆ]. ರೇಕಣ್ಣಪ್ರಿಯ ನಾಗಿನಾಥನ
ಮಹಾಮನೆಯಲ್ಲಿ ಕಾಯದಂಡ ಕಲಕೇತ [ನಾನು]. ||೪೫||

೧೭೧

ಭವಭಾರಿ ಬಂಡಿ ಎತ್ತಿನ ಕಣ್ಣೆ ಹರಿದ ಕಾರಣ
ನಿನ್ನ ಅರಿವಿನ ಬೆಳಗು ಗುರಿ ತಾಗಿ ಬಿದ್ದಡೂ
ಎತ್ತು ಅತ್ತ ಹೋಗಿಯೆ ಮರಳಿತು.
ಆ ಹೆಜ್ಜೆಯನು ಏಕೆ ಇಕ್ಕರೊ ?
ಎತ್ತ ಎತ್ತನೆ ಹೊತ್ತು ಮೀರಿ ಓಡಿತ್ತಾಗಿ
ಹಿಂದೆ ಅರಸುವರಿಲ್ಲ.
ರೇಕಣ್ಣಪ್ರಿಯ ನಾಗಿನಾಥನ ಗೊಗ್ಗನೆತ್ತಿಗೆ ಹಗ್ಗವಿಲ್ಲ. ||೪೬||

೧೭೨

ಮಹಾಕಾಲ ಕಲ್ಪದಲ್ಲಿ, ಮಹಾಪ್ರಮಥರ ಕಾಲಾಗ್ನಿಯಲ್ಲಿ
ನರರು ಬೆಂದು ಸುರರುಗಳ ನೆಮ್ಮುವರು.
ಸುರರುಗಳು ಬೆಂದು ಋಷಿಗಳ ನೆಮ್ಮುವರು.
ಋಷಿಗಳು ಬೆಂದು ಬ್ರಹ್ಮರುಗಳ ನೆಮ್ಮುವರು.
ಬ್ರಹ್ಮರುಗಳು ಬೆಂದು ವಿಷ್ಣುಗಳ ನೆಮ್ಮುವರು.
ವಿಷ್ಣುಗಳು ಬೆಂದು ರುದ್ರರುಗಳ ನೆಮ್ಮುವರು.
ರುದ್ರರುಗಳು ಬೆಂದು ಈಶ್ವರರುಗಳ ನೆಮ್ಮುವರು.
ಈಶ್ವರರುಗಳು ಬೆಂದು ಸದಾಶಿವರುಗಳ ನೆಮ್ಮುವರು.
ಸದಾಶಿವರುಗಳು ಬೆಂದು ಪರಮೇಶ್ವ[ರ]ರುಗಳ ನೆಮ್ಮುವರು.
ಪರಮೇಶ್ವರರುಗಳು ಬೆಂದು ಪಂಚಭೂತಂಗಳು ಸಹಿತ
ಭಿಕ್ಷಭೈರವನಂತಾಗಿ ಬೆಂದು ಮಾಯೆಯ ನೆಮ್ಮುವರು.
ಮಾಯೆ ಮನವ ನೆಮ್ಮಿದೊಡಾ ಮನ ನೆಮ್ಮುವದಕ್ಕೆ
ಎರವಿಲ್ಲದೆ ಬೆಂದು, ಬಾಯಾರಿತು ಕಾಣಾ
ರೇಕಣ್ಣಪ್ರಿಯ ನಾಗಿನಾಥಾ. ||೪೭||

೧೭೩

ಮಾನವಲೋಕದವರೆಲ್ಲರೂ ಮರವಲಿಂಗವ ಪೂಜಿಸುವರಯ್ಯಾ.
ಮರನ ಸಿಂಹಾಸನದ ಮೇಲೆ ಗಂಗೆವಾಳುಕಸಮಾರುದ್ರರೆಲ್ಲರೂ

ಹಿಂದಣ ಋಷಿಗಳು ದೇವತ್ವಗುಣವನರಿಯರಾಗಿ ಅಂಗವಿಲ್ಲವರಿಗೆ.
ವರಮುಖ ಶಾಪಮುಖರಾಗಿ ಲಿಂಗವಿಲ್ಲವರಿಗೆ.
ಧ್ಯಾನದಿಂದ ಲಿಂಗವ ಕಂಡೆನೆಂದೆಂಬರು.
ಮೌನದಿಂದ ಲಿಂಗವ ಕಂಡೆನೆಂದೆಂಬರು.
ಅನುಷ್ಠಾನದಿಂದ ಲಿಂಗವ ಕಂಡೆನೆಂದೆಂಬರು.
ಜಪ ತಪ ಸಮಾಧಿ ಸಂಧ್ಯಾ ನಿತ್ಯನೇಮ ಹೋಮ ಇವೆಲ್ಲವ ಮಾಡಿದವರೆಲ್ಲರೂ
ಕೆಯ್ಯ ಬೆಳೆದ ಒಕ್ಕಲಿಗನಂತೆ ಫಲದಾಯಕರಾದರಯ್ಯ.
ಇವೆಲ್ಲವನೂ ಅಲ್ಲವೆಂಬೆ, ಸೋಹಂ ಎಂಬೆ.
[ಮೆಲ್ಲ] ಮೆಲ್ಲನೆ ಆಡುವೆ ಬಹುರೂಪ.
ಇವೆಲ್ಲ ಸಾಕ್ಷಿಯಾದವು, ಎನ್ನ ಬಹುರೂಪಮುಖದಲ್ಲಿ.
ರೇಕಣ್ಣಪ್ರಿಯ ನಾಗಿನಾಥಾ, ಬಸವನಿಂದ ಬದುಕಿತೀ ಲೋಕವೆಲ್ಲ. || ೪೮ ||

೧೭೪

ಮಿತಭೋಜನ ಮಿತವಾಕು ಮಿತನಿದ್ರೆಯ ಮಾಡಿರಣ್ಣಾ.
ಯೋಗಸಿದ್ಧಿ ಬೇಕಪ್ಪಡೆ ಅತ್ಯಾಹಾರ ಇಂದ್ರಿಯ ವ್ಯವಹಾರ
ರೇಕಣ್ಣಪ್ರಿಯ ನಾಗಿನಾಥನಲ್ಲಿ ಅಳಿಯದಂತೆ
ಉಳಿಹಿಕೊಳ್ಳಿರಣ್ಣ, ಯೋಗ ಸಾಧ್ಯವಪ್ಪನ್ನಕ್ಕ. || ೪೯ ||

೧೭೫

ಯುಗವನೊಗೆದಾತ, ಯುಗವನೆಲ್ಲವ ಮಾಡಿದಾತ
ರುದ್ರನ ಜಡೆಯ ಸುತ್ತಿದ ಫಣೆಯ ಬಿಳಿದು ಮಾಡಿದಾತ
ಇವನೆಲ್ಲವ ಬಿಳಿದು ಮಾಡಿ ಬಸವಣ್ಣಂಗೆ ಸೂತ್ರಧಾರಿಯಾದ
ಮಡಿವಳ ಮಾಚಯ್ಯನ ನೆನೆದಾಡುತ್ತಿರ್ದೆ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿತೀ ಲೋಕವೆಲ್ಲ. || ೫೦ ||

೧೭೬

ಲಿಂಗನಿಷ್ಠೆಯಿಲ್ಲದವರಂಗಳವ ಮೆಟ್ಟಲಾಗದು.
ಜಂಗಮಪ್ರೇಮವಿಲ್ಲದವರೊಡನೆ ಮಾತನಾಡಲಾಗದು.
ಪ್ರಸಾದವ ಪಡೆಯದವರ ಸಮಪಙ್ತೆಯಲ್ಲಿ ಕುಳಿತು
ಪ್ರಸಾದ ಭೋಗವ ಮಾಡಲಾಗದು.
ಇಂತೀ ಲಿಂಗ ಜಂಗಮ ಪ್ರಸಾದ ವಿಶ್ವಾಸವಿಲ್ಲದವರಿಗೆ
ನರಕ ತಪ್ಪದು.

ಅಂಥವರ ಸಂಗವ ಸತ್ಯಸಜ್ಜನರು ಮಾಡಲಾಗದು.
ಅದೇನು ಕಾರಣವೆಂದಡೆ :
ಪ್ರಾಣಲಿಂಗ ಶಿಲಾಭೇದಂ ಚರಲಿಂಗಂತು ಯೋ ನರಃ |
ಪ್ರಸಾದಂ ದ್ರವ್ಯ ಭಾವೇನ ರೌರವ ನರಕಂ ವ್ರಜೇತ್ ||
ಎಂದುದಾಗಿ,
ಇಂತೀ ಲಿಂಗ ಜಂಗಮ ಪ್ರಸಾದ ಸದ್ಭಾವ
ನಂಬುಗೆಯ ಭಕ್ತಿ ಬೆಸುಗೆಯಿಲ್ಲದವರ ಎನಗೆ ತೋರದಿರಯ್ಯ
ರೇಕಣ್ಣಪ್ರಿಯ ನಾಗಿನಾಥಾ. || ೫೧ ||

೧೭೭

ಲಿಂಗ ಲಿಂಗೈಕ್ಯನೆಂಬ, ಶಬುದಲಿಂಗೈಕ್ಯಂಗೆ ಭಕ್ತಿಯೆಂತೊ ?
ಕಿರಿದಿರಲಿ ಅರಿವು ಕರಘಟಿಸಿ
ಘನತೆಗೆ ತೆರಹು ಮರಹು ಕುರುಹು ಕೂಡದ ಬೆರಗು ತೋರದೆ ?
ಕೈಮಾಟ ಮಾಟದ ಕೂಟ ನಿಂದಲ್ಲಿ
ತಂದಿಂಕೆಡೆಯಾಗಲೊಲ್ಲದೆ ಕುಳ್ಳಿದ್ದಾತ ಭೂತಲಿಂಗೈಕ್ಯ[ನು],
ಕಾಯದಲ್ಲಿ ಲಿಂಗೈಕ್ಯನು, ಜೀವದಲ್ಲಿ ಲಿಂಗೈಕ್ಯನು.
ಕಾಯ ಜೀವದ ಸಂದಳಿದ ಲಿಂಗಪ್ರಾಣಿಯು
ಒಂಬತ್ತನೆಯ ಉತ್ತಮಾಂಗವಲ್ಲದೆ
ಹತ್ತನೆಯ ಉತ್ತಮಾಂಗದಲ್ಲಿ ಬೆಳಗಾದ
ಬಾಗಿಲನರಿದಾತನೆ ಜೀವಲಿಂಗೈಕ್ಯ.
ಕಾರಮೇಘವು ನೀರಲ್ಲಿ ಬೆರಸಿ ಹರಿದುಹೋದ ಪರಿಯಂತೆ
ಸಾರಿದ ಶರಣ ಲಿಂಗಸಂಗಿಯಾಗಿರ್ದ.
ವಾಯುಮೇಘವು ನೀರು ಬೆರಸಿ ನಿರಾಳವಾಯಿತ್ತ ಕಂಡೆ.
ರೇಕಣ್ಣಪ್ರಿಯ ನಾಗಿನಾಥಾ ಶರಣನುಪಮೆಯಿಲ್ಲ. || ೫೨ ||

೧೭೮

ವೇಧಿಸಿದ ವೇದಂಗಳೆಲ್ಲ ಉರಿದುಲಿದು ನಿಂದವು.
ಸಾಧಿಸಿದ ಶಾಸ್ತ್ರಂಗಳೆಲ್ಲ ಸೋಹೋ ಎಂದಡಗಿದವು.
ವಿದ್ಯಾಮುಖ ಪ್ರಣಮವು ಸಿದ್ಧ ಸಿದ್ಧ ಎಂದು
ಕದ್ದ ಕಳ್ಳರಂತೆ ತಡವಡಿಸುತ್ತಿರ್ದವು ನೋಡಾ.
ಅರ್ಧನಾರೀಶ್ವರನ ರೂಪು ಇಂತೆಂದು
ಶುದ್ಧವಾಯಿತ್ತೀ ಲೋಕಮೊಳಗೆ.

ಜಡೆಯಿಲ್ಲ ಎಮ್ಮ ದೇವಂಗೆ, ಮುಡಿಯಿಲ್ಲ ಎಮ್ಮ ದೇವಂಗೆ.
ಮಡದಿಯರಿಬ್ಬರಿಲ್ಲ ಎಮ್ಮ ದೇವಂಗೆ.
ಬೆಡಗ ನುಡಿವವರಿಲ್ಲ, ನುಡಿಯಲಮ್ಮದ ಕಾರಣ ಅರಸುತ್ತಿದ್ದಾರು.
ಎಡೆಯ ಮಧ್ಯದಲ್ಲಿ ನುಡಿಯ ನುಂಗಿದ ಬೆಡಗ ಹಿಡಿತಂದು
ಅರ್ಪಿತವ ಮಾಡಿ ; ನಡೆಸಿ ತೋರಿದ ಭಕ್ತರ ತನುವಿನೊಳಗೆ
ಕಡೆಯಿಲ್ಲದ ಲಿಂಗವ ಖಂಡಿತವ ಮಾಡಿ ತೋರಿದ
ರೇಕಣ್ಣಪ್ರಿಯ ನಾಗಿನಾಥ, ಇಬ್ಬರಿಂದ ಬದುಕಿತೀ ಲೋಕವೆಲ್ಲಾ. || ೫೩ ||

೧೭೯

ಶುದ್ಧವೆ ಜವನಿಕೆಯಾಗಿ, ಸಿದ್ಧವೆ ಸಿಂಹಾಸನವಾಗಿ
ಪ್ರಸಿದ್ಧದ ಹೊದಿಕೆಯ ಹೊದ್ದು, ನಾನಾಡುತ್ತಿರ್ದೆ ಬಹುರೂಪ.
ಶುದ್ಧ ಒಡಿದಲ್ಲಿ, ಇದ್ದ ನಿಜ ನಾಸ್ತಿಯಾಯಿತ್ತೆನ್ನ ಬಹುರೂಪು.
ಸಿದ್ಧವೆಂಬ ಸಿಂಹಾಸನ ಅಳಿದಲ್ಲಿ
ಬುದ್ಧಿಗೆಟ್ಟಾಡುತ್ತಿದ್ದುದಯ್ಯಾ, ಎನ್ನ ಬಹುರೂಪು.
ಪ್ರಸಿದ್ಧ ಹೊದಿಕೆ ಹರಿದಲ್ಲಿ
ನಾ ಬಸವನ ಕೂಡೆ ಆಡುತ್ತಿರ್ದೆ ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ, ಬಸವನಿಂದ ಬದುಕಿತೀ ಲೋಕವೆಲ್ಲಾ. || ೫೪ ||

೧೮೦

ಶೂನ್ಯ ಸನ್ನಹಿತವಾದಲ್ಲಿ
ಶೂನ್ಯ ಪದಾರ್ಥವಾದಲ್ಲಿ, ಶೂನ್ಯ ಪ್ರಸಾದವಾದಲ್ಲಿ
ಅದು ಬಸವಣ್ಣನ ಪ್ರಸಾದವೆಂದು
ಆನು ಬಸವಣ್ಣನ ಕೂಡೆ ಆಡುತಿರ್ದೆನು.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆನು. || ೫೫ ||

೧೮೧

ಷಡುಚಕ್ರವಳಯದೊಳಗೆ ನಾನಾಡುವೆ ಬಹುರೂಪ.
ಭ್ರೂಮಧ್ಯಮಂಡಲ ಹೃದಯಕಮಲ ಮಧ್ಯದ
ಅಬ್ಜಸ್ವರದ ಮಣಿಪೂರಕದ ಮೇಲೆ ನಾನಾಡುವೆ ಬಹುರೂಪ.
ಉರಿಯುಂಡ ಕರ್ಪುರದಂತೆ ನಾನಾಡುವೆ ಬಹುರೂಪ.
ಬಯಲ ಬೆರಸಿದ ಮರೀಚಿಯಂತೆ ನಾನಾಡುವೆ ಬಹುರೂಪ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆನು. || ೫೬ ||

೧೮೨

ಷಡುಸ್ಥಲ ಷಡುಸ್ಥಲವೆಂದು ನುಡಿವುತ್ತಿರ್ಪಿರಿ, ಕೇಳಿರಣ್ಣಾ :
ಒಬ್ಬ ರಾಯನ ಕೆಳಗೆ ಆರು ಬಲ ಉಂಟಾಗಿಪ್ಪಂತೆ
ಆ ಪರಶಿವತತ್ವಕ್ಕೆ ಪ್ರಾಣಪದವಪ್ಪರು ಭಕ್ತರುಂಟು.
ಆ ಭಕ್ತರಿಗೆ ಗುರುಲಿಂಗಜಂಗಮದ ದಾಸೋಹ.
ಪಾದೋದಕ ಪ್ರಸಾದ, ಪಂಚ ಸದಾಚಾರ.
ಇಂತಿವೆಲ್ಲವೂ ಪ್ರಾಣಪದವಾಗಿಪ್ಪವು.
ಇವರೆಲ್ಲರಿಗೆಯೂ ಶರಣಸತಿ ಲಿಂಗಪತಿಗಳೆಂಬವೆ
ಪ್ರಾಣಪದವಾಗಿ, ರೇಕಣ್ಣಪ್ರಿಯ ನಾಗಿನಾಥನಲ್ಲಿ ನಿಂದರು. || ೫೭ ||

೧೮೩

ಸಂಗನಬಸವಣ್ಣ ಎನ್ನ ಕರಸ್ಥಲಕ್ಕೆ ಬಂದ ಕಾರಣ
ಎನಗೆ ಗುರುರೂಪಾದನಯ್ಯಾ.
ಚನ್ನಬಸವಣ್ಣನೆನ್ನ ಕರಸ್ಥಲಕ್ಕೆ ಬಂದ ಕಾರಣ
ಎನಗೆ ಲಿಂಗರೂಪಾದನಯ್ಯಾ.
ಪ್ರಭುದೇವರೆನ್ನ ಕರಸ್ಥಲಕ್ಕೆ ಬಂದ ಕಾರಣ
ಎನಗೆ ಪ್ರಾಣಲಿಂಗವಾದನಯ್ಯಾ.
ಇವರು ಮೂವರಿಗೆ
ನಾ ಭಕ್ತನಾಗಿ ಹುಟ್ಟಿದೆನಾಗಿ
ರೇಕಣ್ಣಪ್ರಿಯ ನಾಗಿನಾಥನೆನಗೆ ಒಚ್ಚತವಾದನಯ್ಯಾ. || ೫೮ ||

೧೮೪

ಸಂಗ ಸಮನಿಸದಂದು, ಲಿಂಗ ಉತ್ಪತ್ತಿಯಾಗದಂದು
ಸಂಗಾ ಬಸವಾಯೆಂಬ ಶಬುದವೆಲ್ಲಿಯದೋ ?
ಸಂಗಾ ಬಸವಾಯೆಂಬ ಶಬುದವ ಲಿಂಗಿಗಳೆತ್ತ ಬಲ್ಲರು ?
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿದೆ. || ೫೯ ||

೧೮೫

ಸರದೊಳಗೆ ಸರಗಟ್ಟಿ, ಸರ ಹರಿದವ ನಾನಯ್ಯಾ.
ಮಹದೊಳಗೆ ಮನೆಗಟ್ಟಿ, ಮನೆ ಬೆಂದವ ನಾನಯ್ಯಾ.
ಕಿಚ್ಚಿನೊಳಗೆ ಕಿಚ್ಚನೊಟ್ಟಿ, ಕಾದವ ನಾನಯ್ಯಾ.
ಆ ಕಿಚ್ಚಿನೊಳಗೆ ಬಿದ್ದು ಉರಿದವ ನಾನಯ್ಯ.

ಬಸವಣ್ಣನು ಎನ್ನ ಬಹುರೂಪಕ್ಕೆ ಸೂತ್ರಧಾರಿಯಾದ.
ಸೂತ್ರವಾಗಿ ಹೋದೆ ನಾ. ಬಸವಣ್ಣನಿಂದ ಕೆಟ್ಟೆ ಕಾಣಾ.
ರೇಕಣ್ಣಪ್ರಿಯ ನಾಗಿನಾಥಾ, ಬಸವಣ್ಣನಿಂದ ಬದುಕಿತೀ ಲೋಕವೆಲ್ಲ. ||೬೦||

೧೮೬

ಹತ್ತಿ ಕದಿರು ರಾಟೆ ಮೊದಲಿಲ್ಲ, ನೂಲುಂಟು.
ಸೆಲದಿಯ ಹೃದಯದಲ್ಲಿ ಲಿಂಗವುಂಟು.
ಭಕ್ತರ ಭಾವದಲ್ಲಿ ಲಿಂಗವುಂಟು.
ರೇಕಣ್ಣಪ್ರಿಯ ನಾಗಿನಾಥನ ಶರಣರ
ಮನದ ಕೊನೆಯನೆತ್ತಿದಡೆ ಲಿಂಗದ ಗೊಂಚಲುಂಟು. ||೬೧||

೧೮೭

ಹಲವು ತೀರ್ಥಂಗಳಲ್ಲಿ ಮೀಯಲು ಬಹುದಲ್ಲದೆ
ಜಂಗಮದ ಪಾದೋದಕವ ಕೊಳಬಾರದು.
ಅಂಗದಿಚ್ಛೆಗೆ ಅಂಗನೆಯರ ಅಧರವ ಮುಟ್ಟಬಹುದಲ್ಲದೆ
ಜಂಗಮದ ಪ್ರಸಾದವ ಕೊಳಬಾರದು.
ಊರಗೋಲ ನೆರೆ ನಡುನೀರಲದ್ದಿದಂತಾಯಿತ್ತಯ್ಯಾ, ಎನ್ನ [ಮನದಿರ]ವು.
ಪಾಪಿಯ ಕೂಸಿಂಗೆ ಏನು ಬುದ್ಧಿಯ ಹೇಳಿದಡೆ ಕೇಳೂದೆ ?
ರೇಕಣ್ಣಪ್ರಿಯ ನಾಗಿನಾಥಾ, ನಿಮ್ಮನರಿದ ಶರಣನಲ್ಲದೆ. ||೬೨||

೧೮೮

ಹಿರಿಯರೆಂತಿರ್ಪರಯ್ಯಾ ?
ಅಯ್ಯಾ, ದಿಟದ ರಾಸಿಗೆ ಅವರ ಘಟ ಲಕ್ಷಣ.
ನಿಸ್ಸೀಮರೆಂತಿರ್ಪರಯ್ಯಾ ?
ಅಯ್ಯಾ, ಸೀಮೆಗೆಡೆಗುಡದ ಬಯಲನೊಳಕೊಂಡಿರ್ಪರು.
ಭಾವರೆಂತಿರ್ಪರಯ್ಯಾ ?
ಅಯ್ಯಾ, ಕಣ್ಣಾಲಿ ದೃಷ್ಟಿಯ ನುಂಗಿದಂತೆ.
ನೀರೆಂತು ನೆನೆವುದೆಂದು ಬೆಸಗೊಂಡಡೆ
ಹೇಳುವ ಶಬ್ದದಂತಿಹುದದರ ನಿಲುವು.
ಲಿಂಗ ಮಧ್ಯೇ ಜಗತ್ಸರ್ವಂ ಲಿಂಗದಂಗ
ರೇಕಣ್ಣಪ್ರಿಯ ನಾಗಿನಾಥನಂತಿರ್ಪರು. ||೬೩||

೧೮೯

ಹುಟ್ಟುಗೆಟ್ಟ ಹಾಳ ಮೇಲೆ ಬಟ್ಟಬಯಲಲೊಬ್ಬನ ಕಂಡೆ.
ಅಂಗವಿಲ್ಲದವಯವಕ್ಕೆ ಸಂಗವೆಲ್ಲಿಯದಯ್ಯ ?
ಹಿಂಗದ ಅವಯವಕ್ಕೆ ಹಿಂಗುವ ತೊಡಿಗೆಯ
ತೊಡಿಸಿಹೆವೆಂಬ ಭಂಗಿತರನೇನೆಂಬೆನಯ್ಯ
ರೇಕಣ್ಣಪ್ರಿಯ ನಾಗಿನಾಥಾ ! ||೭೪||

೧೯೦

ಹುಟ್ಟುವಾತ ಮದ್ದಳೆಯ ಕಟ್ಟಿದ.
ನಡೆವಾತ ತಾಳವನೊತ್ತಿದ.
ಬಿಡುವಾತ ಶ್ರುತಿಯನೆತ್ತಿದ.
ತತ್ಥಾತಿತ್ಥಿ ಎಂಬಾಟ ಇತ್ತಲೇ ಉಳಿಯಿತ್ತು
ರೇಕಣ್ಣಪ್ರಿಯ ನಾಗಿನಾಥಾ ! ||೭೫||

೧೯೧

ಹೆಸರಿಲ್ಲದ ಜವನಿಕೆಯ ಮರೆಯಲ್ಲಿ ಬಂದು
ಅಸುಪಿನ ಬಹುರೂಪಮಂ ತೊಟ್ಟು
ಪಶುಪತಿಯ ಅವತಾರವನಾಡುತ್ತಿರಲಾಗಿ
ಹಸುಬೆಯ ತೆರೆಯ ಹರಿದು
ಆ ಅಸು ದೆಸೆಯಲ್ಲಿ ಇಲ್ಲಾ ಎಂದೆ.
ರೇಕಣ್ಣಪ್ರಿಯ ನಾಗಿನಾಥನಲ್ಲಿ ಪುರೆಹರೆ ಎನುತಿರ್ದೆನು. ||೭೬||

# ಬಳ್ಳೇಶ ಮಲ್ಲಯ್ಯನ ವಚನ

೧೯೨

ಅಪಾರ ಮಹಿಮನೆಂಬುದು ನಿಮ್ಮ ಭೇರಿ.
ಬೇಡಿತ್ತನೀವನೆಂಬುದು ನಿಮ್ಮ ತಮ್ಮಟ.
ಜಗವಂದಿತ ಲೋಕದೊಡೆಯನೆಂಬುದು ನಿಮ್ಮ ಶಂಖ.
ಪರದೈವವಿಲ್ಲವೆಂಬುದು ನಿಮ್ಮ ಡಮರುಗ.
ಶಿವ ಕಾಡನೆಂಬವರ ಬಾಯ ತ್ರಿಶೂಲದಲ್ಲಿರಿವ
ಬಳ್ಳೇಶ್ವರಲಿಂಗದ ಡಂಗುರ ಮೂಜಗದೊಳಗಯ್ಯಾ. ||೧||

೧೯೩

ಆರು ಬಣ್ಣದ ಹಕ್ಕಿ, ತೋರಿದ ಗುರಿಯ ನುಂಗಿ
ಮೀರಿ ನಿಂದುದು ಗಗನ ಮಂಡಲದಲ್ಲಿ.
ಸಾರುತ್ತೈದೂದೆ ಹೋಗಿ ಮೀರಿ ಬರಬೇಡಾ ಎಂದು
ಬೇರೆ ಮತ್ತೊಂದು ದಿಕ್ಕ ತೋರುತ್ತದೆ.
ಮೂರುಕೋಣೆಯೊಳಗೆ ಈರೈದು ತಲೆಯುಂಟು.
ನೋಡಿ ಬಂದಾ ಶಿಶು ಬೆಸಗೊಂಬುದು.
ಪ್ರಾಣವಿಲ್ಲದ ಸೇನೆ ಪದ್ಮಸಂಖ್ಯೆಯು ಕೋಟೆದಾಳಿವರಿದುದು
ಎಂಟುಜಾವದೊಳಗೆ.

ಜಾಲಗಾರನ ಕೈಯ ಮಾಣಿಕ್ಯ ಸಿಕ್ಕದೆ ಆಳಿಗೊಂಡಿತ್ತು.
ಜಗವ ಬೆಳುಮಾಡಿ, ಜಾಣ ಕವಿಗಳಿಗೆ ಎದೆ ದಲ್ಲಣ.
ಬಳ್ಳೇಶ್ವರನ ಕನ್ನಡವು ಹೇಳುವಡೆ ಯುಗಸಂಖ್ಯೆ ಶಿವ ಶಿವಾ ||೨||

೧೯೪

ಆವ ಪ್ರಾಣಿಗೆಯೂ ನೋವ ಮಾಡಬೇಡ.
ಪರನಾರಿಯರ ಸಂಗ ಬೇಡ.
ಪರಧನಕ್ಕಳುಪಬೇಡ, ಪರದೈವಕ್ಕೆರಗಬೇಡ.
ಈ ಚತುರ್ವಿಧ ತವಕವ ಮಾಡುವಾಗ
ಪರರು ಕಂಡಾರು, ಕಾಣರು ಎಂದೆನಬೇಡ.
ಬಳ್ಳೇಶ್ವರಲಿಂಗಕ್ಕಾರು ಮರೆಮಾಡಬಾರದಾಗಿ
ಅಘೋರನರಕದಲ್ಲಿಕ್ಕುವ. ||೩||

೧೯೫

ದೇವರಾಜ್ಯದಲ್ಲಿ, ಧಾರೆಯ ಭೋಜನ
ಅರಮನೆಯ ಓಲಗದೊಳಗೆ ಹೊಂಪುಳಿವರಿವುತ್ತ
ನಾಲ್ಕೂದಿಕ್ಕಿನಲ್ಲಿ ನಾಲ್ವರ ಫಣಿಯ ಬೆಳಗು.
ಜಾಣಭಾಷೆಯಲ್ಲಿ ಮಧ್ಯದಲೊಬ್ಬಳು, ಆಣತಿಯ ಸರವು.
ಮಹಾದೇವಿ ಗಾಂಧಾರಿಯನು ತೋರಿ, ಒದವಿಸಿದ ಮಧುಮಾಧವಿಯನು
ಭೋಜ ಗದ್ಯವನೋದಲು, ಶಿವನು ಕೇಳುತ್ತಿರೆ
ಬಾಣಸಿಗ ಹಡಪದವನೆ ಬಲ್ಲನು ಕಾಣಾ.
ಕೊಂಕಿಲ್ಲದೆ ಶಬುದ ರಸಭೇದವನು ರಾಣಿ ಬಲ್ಲಳು.
ಕುಮುದ ಪಾತ್ರವಿಧಾಂತ ಮಾವಟಿಗ ಭೇದವನು
ಮೇಲೆ ಅಂಗರಿಕನು ದೀವಟಿಗೆ ಧಾರೆವಟ್ಟದ ಜಾಣನು
ಅಲ್ಲಿ ಚಂಬಕನ ಕಹಳೆ ಭೋರೆಂದು ಬಾರಿಸಿ
ಪ್ರತಾಪದ ಕದಳಿಗೆ ಎದೆ ದಲ್ಲಣ.
ಆರುಬಣ್ಣದ ವಸ್ತುವ ಮೂರು ಬಣ್ಣಕ್ಕೆ ತಂದು, ಕೇವಣಿಸಿದನು
ಕಮಠ ಸುರಥ ಕವಾಹಾರದಾರದ ಖೂಳರ ನಾಲ್ವರ
ಬಯಕೆಯನು, ದೇವ ಬಳ್ಳೇಶ್ವರನ ಕನ್ನಡ ವಿಪರೀತ. ||೪||

೧೯೬

ಧರೆಯೊಳಗೆ ಚೋದ್ಯವ ನೋಡಿರೆ :
ಒಂದು ಹರಿಣೆಯ ಮೃಗವು ಓದು ಬಲ್ಲುದಾ ?

ಚೆಲುವ ಗಿಳಿಯಲ್ಲಿ ವಿಪರೀತ ಕೊಂಬು ಕೊಂಬುಗಳುಂಟು.
ಇಂಬು ಕಾಲಲ್ಲಿ ಮುಖವು.
ಜಂಬುದ್ವೀಪದ ಬೆಳಗಿನುದಯದಾಹಾರವದಕೆ.
ಸಂಭ್ರಮವ ನುಡಿವ ಕವಿಗಳ ಮುಖವ ಝಳಪಿಸಿತ್ತು
ಶಂಭು ಬಳ್ಳೇಶ್ವರನ ಕೊರಳಹಾರವ ನೋಡಿ ನಗುತ. || ೫ ||

೧೯೭

ಮೇಘಮಂಡಲದರಸನು ಅನುರಸದರಸಿಯ ಮೈಯಲ್ಲಿ ತಾಗಿ
ಒದಗಿದನುಮಿಷ ರತ್ನಪ್ರಭೆಯ ನೋಡುವಡೆ
ಇಪ್ಪತ್ತೈದು ನೂರೆಂಟರ ಮಧ್ಯ [ತುಗಿ]ವ ಸಮಾಧಿ[ಕೆ]
ತಾರಾಮತ್ಸ್ಯದ ಆನೆಯ ಕುಂಬಸ್ಥಳದ [ಜ]ವನಿಕೆಯ ಮೇಲೆ
ಜಾಣ ನಿಟ್ಟಿಸಬಲ್ಲಡೆ ಹೇಳಾ.
ಕನ್ನದುಳಿಯ ಕೆಂಪನು ತನ್ನ ಕೈಯಲ್ಲಿ ಕೊಟ್ಟಡೆ
ಬಿನ್ನಣದ ಕಳವು ಹೇಳಾ.
ತನ್ನ ಮನೆಯಲ್ಲಿ ಕರ್ಣಚಕ್ರಪತ್ರವನಿರಿಸಿದಡೆ ನಿನ್ನಳವೆ ?
ಲೋಕದೊಳು ಬಲ್ಲ ಜಾಣರು.
ಆ [ಹ]ಣ್ಣಿನೊಳಗಣ ಪದ್ಮದೆಸಳೆಸಳು ಕಮ್ಮೇರಿ
ದೇವ ಬಳ್ಳೇಶ್ವರನ ಅನುಭಾವದ ಸರಿದೊಡಕು. || ೬ ||

೧೯೮

ಶಿವನೊಬ್ಬನೆ ಜಗವೆಲ್ಲಕ್ಕೊಡೆಯನೆಂದು
ಹೊಡೆವ ಭೇರಿ ನಿಸ್ಸಾಳವಯ್ಯಾ.
ಶಿವನಲ್ಲದೆ ಅತಃಪರವಿಲ್ಲೆಂದು ಒದರುವ
ವೇದ ಶಾಸ್ತ್ರ ಪುರಾಣಾಗಮಂಗಳಯ್ಯಾ.
ಶಿವನು ಅಲ್ಲವೆಂಬವನ ಬಾಯ ತ್ರಿಶೂಲದಲ್ಲಿರಿವುದು.
ಬಳ್ಳೇಶ್ವರನ ಡಂಗುರ ಜಗದೊಳಗಯ್ಯಾ. || ೭ ||

೧೯೯

ಶುದ್ಧಸಾಳಾಂಗಗತಿ ಗಮಕವಡೆದ ರಾಗದಲ್ಲಿ
ಪರಿತಾಯಕದಳ ಕಮ್ಮಟನು ಪೂಜಿತನು
ರಸವನಾಲಿಸುತ ಗಜಗಮನೆಯರು ಆಡಿ ಹಾಡಿ
ರುದ್ರವೀಣೆಯ ಬಾರಿಸುವಲ್ಲಿ
ಬಧಿರ ಮೂಕ ಅಂಧಕರ ಮುಂದೆ ನೃತ್ಯ ತೋರಬಹುದೆ ?

ಹಜ್ಜೆಯ ಹರಿಣ ಭುಜಂಗ ಜಂಬುಕ ಹುಲ್ಲೆಯ
ತೋಳ ಹುಲಿ ಕರಡಿ ಒಬ್ಬುಳಿಯಾಗಿ ನೆರೆದಡೆ
ದೇವಸಭೆಯಾಗಬಲ್ಲುದೆ?
ಶುದ್ಧಧವಳಿತ ಭಾನುಕೋಟಿತೇಜಪ್ರಭೆಮಂಡಲವ ರವಿ ಉದಯ ಒಬ್ಬನೆನಬಹುದೆ
ದೇವ ಬಳ್ಳೇಶ್ವರ ವೀರಭದ್ರವತಾರವಾ? || ೮ ||

೨೦೦

ಸಹಸ್ರಮುಖದ ಕೊರಳೊಂದು
ನಾಶಿಕದಲುಂಬ ಸುಖ
ಘಾಸಿ ಮಾಡಿದಡದರ ರೂಪು ನೋಡಾ.
[ಘಾ]ಸಿಯಾದ ಭಾಷೆಯೇಕೆ?
ವರ್ಣದ ಕೌತುಕದಿಂದ ಕಾಂತೆ ನೋಡಿದಳು ಕನ್ನ[ಡಿಯ] ಬೆ[ಳ]ಗ.
ಸೂಸಲೀಯದೆ ಉಣ್ಣಬಲ್ಲವನ ತೋರುತ್ತಿದೆ.
ಬಳ್ಳೇಶ್ವರನ ಕೊರಳ ಮತ್ಸ್ಯವ ನೋಡಿ ನಗುತ್ತಿದೆ. || ೯ ||

■ ■

## ಬಾಚಿಕಾಯಕದ ಬಸವಣ್ಣನ ವಚನ

೨೦೧

ಅನಾದಿಬಿಂದುವೆಂಬ ಆಧಾರ ಕುಂಡಲಿಯ ಸ್ಥಾನದಲ್ಲಿ
ಅಂಡವೆಂಟು ಉಂಟು.
ಆ ಎಂಟಂಡವನು ಎಂಟು ಪದ್ಮ ಹೊತ್ತುಕೊಂಡಿಪ್ಪವು.
ಆ ಪದ್ಮದ ಎಸಳು ಏಳುಸಾವಿರದ ಎಪ್ಪತ್ತು ಕೋಟಿಯು.
ಏಳುನೂರ ಮೂವತ್ತಾರು ಎಸಳಿನಲ್ಲಿ
ಅಖಂಡ ಪೂಜೆಯ ಮಾಡಲರಿಯದೆ
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯ
ಬ್ರಹ್ಮರಂಧ್ರ ರೇಚಕ ಪೂರಕ ಕುಂಭಕದಲ್ಲಿ
ಚೌಕ ಪದ್ಮಾಸನವ ಮಾಡಿ ಕಂಡೇನೆಂಬ ಯೋಗಿಗಳಿಗೆ
ಇದು ಅಪ್ರಮಾಣ, ಅಗೋಚರ.
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲರಾಜೇಶ್ವರಲಿಂಗವು
ಇದೆಂದರಿದುದೆ ನಿಜಾನಂದಯೋಗ. ||೧||

೨೦೨

ಅಪ್ಪು ಬಲಿದು ಪೃಥ್ವಿಯ ಮೇಲೆ
ಶತಕೋಟಿ ಸಹಸ್ರಕೋಟಿ ಬಯಲಿಂದತ್ತ ಭರಿತವಪ್ಪುದೊಂದು ರಥ.

ಆ ರಥಕ್ಕೆ ಬ್ರಹ್ಮ ವಿಷ್ಣು ಸೂರ್ಯ ಚಂದ್ರ (?)
ವೇದಶಾಸ್ತ್ರಪುರಾಣಸಕಲಾಗಮಪ್ರಮಾಣಗೂಡಿದ ಪಟ್ಕಲೆ
ಮೇರುಮಂದಿರವೆಂಬ ಅಚ್ಚುಗಂಬವ ನೆಟ್ಟಿದೆ.
ಆ ರಥದ ಸುತ್ತಲು ದೇವಾದಿದೇವರ್ಕಳೆಲ್ಲರ ತಂದು ಸಾರಥಿಯನಿಕ್ಕಿ
ಆ ರಥದ ನಡುಮಧ್ಯಸ್ಥಾನದಲ್ಲಿ ಅಷ್ಟದಳಕಮಲವಾಯಾಗಿ
ಅನಂತಸಹಸ್ರಕೋಟಿ ಕಮಲಪದ್ಮಾಸನವ ರಚಿಸಿದೆ.
ಆ ಪದ್ಮಾಸನದ ಮೇಲೆ ಶಂಭು ಸದಾಶಿವನೆಂಬ
ಮಹಾದೇವನ ತಂದು ನೆಲೆಗೊಳಿಸಿದೆ.
ಆ ರಥದ ಪೂರ್ವಬಾಗಿಲಲ್ಲಿ ಆದಿಶಕ್ತಿಯ ನಿಲಿಸಿದೆ.
ಉತ್ತರ ಬಾಗಿಲಲ್ಲಿ ಓಂ ಪ್ರಣಮಸ್ವರೂಪಿಣಿಯೆಂಬ ಶಕ್ತಿಯ ನಿಲಿಸಿದೆ.
ಆ ಪಶ್ಚಿಮಬಾಗಿಲಲ್ಲಿ ಕ್ರಿಯಾಶಕ್ತಿಯ ನಿಲಿಸಿದೆ.
ದಕ್ಷಿಣದ ಬಾಗಿಲಲ್ಲಿ ಚಿಚ್ಛಕ್ತಿಯ ನಿಲಿಸಿದೆ.
ಭೈರವ ವಿಘ್ನೇಶ್ವರ ಷಣ್ಮುಖ ವೀರಭದ್ರರೆಂಬ ನಾಲ್ಕು ಧ್ವಜಪಟಗಳನೆತ್ತಿ,
ಆ ರಥದ ಅಷ್ಟದಿಕ್ಕುಗಳಲ್ಲಿ
ನಾನಾ ಚಿತ್ರವಿಚಿತ್ರವೈಭವಂಗಳೆಂಬ ಕೆಲಸವ ತುಂಬಿ,
ಅದರ ಗಾಲಿಯ ಕೀಲುಗಳಲ್ಲಿ
ಈರೇಳುಭುವನವೆಂಬ ಹದಿನಾಲ್ಕುಲೋಕಂಗಳ ಧರಿಸಿ ಆಡುತ್ತಿರ್ಪವು.
ಅನಾದಿ ಶೂನ್ಯವೆಂಬ ಮಹಾರಥದೊಳಗಿಪ್ಪ
ನಮ್ಮ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವು ನಿರಾಳ ನಿಶ್ಚಿಂತ ನಿರ್ಲೇಪನು. ॥ ೨ ॥

೨೦೩

ಆರಾರಿಗೂ ಅಗೋಚರ ಅಸಾಧ್ಯವೆಂಬ
ಅಷ್ಟಪುರಿಯೆಂಬ ಬಟ್ಟಬಯಲ ಪಟ್ಟಣದೊಳಗೆ
ಪಚ್ಚೆರತ್ನ ಮುತ್ತು ಮಾಣಿಕ್ಯ ತೆತ್ತಿಸಿದ
ಶಿವಾಲಯವೆಂಬುದೊಂದು ಗುಡಿಯುಂಟು.
ಆ ಗುಡಿಯೊಳಗೊಂದು ಒಂಬತ್ತು ನೆಲೆಯ ಪಾಣಿವಟ್ಟ, ಒಂದೆ ಮುಖ.
ಅದರ ಮೇಲೊಂದು ಅನಂತ ಪ್ರಕಾಶವ
ಗರ್ಭೀಕರಿಸಿಕೊಂಡಿರ್ಪುದೊಂದು ಲಿಂಗವುಂಟು.
ಆ ಲಿಂಗಕ್ಕೆ ನೋಡಬಾರದ ಪೂಜೆಯ ಮಾಡಬೇಕು.
ನುಡಿಯಬಾರದ ಮಂತ್ರವ ತುಂಬಬೇಕು.
ಓಡಿಯಬಾರದ ಜಪವ ನುಡಿಗೆಡೆಯಿಲ್ಲದೆ ಮಾಡಬೇಕು.

ಕೊಡಬಾರದ ಅರ್ಪಿತವ ಕೊಡಬೇಕು.
ನೆನೆಯಬಾರದ ನೆನಹು ನೆಲೆಗೊಂಡಾತನೆ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ತಾನು ತಾನಾದ ಶರಣಂಗಲ್ಲದೆ ಉಳಿದವರಿಗಸಾಧ್ಯವಯ್ಯ. ॥ ೩ ॥

### ೨೦೪

ಆರು ದರ್ಶನವೆಲ್ಲ ಎನ್ನ ಬಾಚಿಯ ಕಲೆ.
ಮಿಕ್ಕಾದ ಮೀರಿದ ಅವಧೂತರುಗಳೆಲ್ಲ
ಎನ್ನ ಉಳಿಯೊಳಗಣ ಒಡಪು.
ಇಂತಿವ ಮೀರಿ ವೇಧಿಸಿ ಭೇದಿಸಿಹೆನೆಂಬವರೆಲ್ಲ
ಎನ್ನ ಕೊಡತಿಯಡಿಯಲ್ಲಿ ಬಡೆಯಿಸಿಕೊಂಬ ಬಡಿಹೋರಿಗಳು.
ಇಂತೀ ವಿಶ್ವಗೋಧರೆಲ್ಲರೂ
ಕರ್ತಾರನ ಕರ್ಮಟದ ನಕ್ಕುಬಚ್ಚನೆಯ ಚಿಕ್ಕಮಕ್ಕಳು.
ಇಂತಿವನರಿದು ಕಾಮದಲ್ಲಿ ಕರಗದೆ,
ಕ್ರೋಧದ ದಳ್ಳುರಿಯಲ್ಲಿ ಬೇಯದೆ,
ನಾನಾ ವ್ಯಾಮೋಹ ಋತುಕಾಲಂಗಳ ಕಾಹಿನ ಬಲೆಗೊಳಗಾಗುತ್ತ
ಮತ್ತೆ ಸಾವಧಾನವೆ, ಮತ್ತೆಯೂ ಜ್ಞಾನಾತೀತವೆ ?
ಮತ್ತೆ ಧ್ಯಾನಮೂರ್ತಿಯೆ, ಮತ್ತೆ ನಾನಾ ಕ್ರೀಯಲ್ಲಿ ಭಾವ ವ್ಯವಧಾನವೆ ?
ಮತ್ತೆ ಗುರು ಚರ ಪರವೆ, ಒಕ್ಕುಡಿತೆ ನೀರಿನಲ್ಲಿ ತಾ ಸತ್ತ ಮತ್ತೆ
ಸಮುದ್ರವೆಷ್ಟಾಳವಾದಡೇನು ?
ಕಿಂಚಿತ್ತು ಸುಖದಲ್ಲಿ ಲಿಂಗವ ಬಿಟ್ಟು,
ಅಂಗನೆಯರುರಸ್ಥಲದಲ್ಲಿ ಅಂಗೀಕರಿಸಿ
ಅವರಧರ ಪಾನಂಗಳ ಮಾಡಿ, ನಾ ಲಿಂಗಾಂಗಿಯೆಂದಡೆ
ಸರ್ವಸಂಗಪರಿತ್ಯಾಗವ ಮಾಡಿದ ಲಿಂಗಾಂಗಿಗಳೊಪ್ಪರು.
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ಸ್ವಪ್ನದಲ್ಲಿ ಕುರುಹುಗಾಣಿಸಿಕೊಳ್ಳಾ. ॥ ೪ ॥

### ೨೦೫

ಆಶೆಯರತ ಬಾಚಿಯಲ್ಲಿ ಭವಪಾಶವಿಲ್ಲದ ಜಂಗಮಕೆ ತೆತ್ತ.
ರೋಷವಿಲ್ಲದ ಉಳಿಯಲ್ಲಿ ನಿಜವಾಸವ ನೋಡಿ ಹುಗಿಲುದೆಗೆವುತ್ತ
ಭಾಷೆಗೆ ಊಣಯವಿಲ್ಲದ ಸದ್ಭಕ್ತರ ಆಶ್ರಯಕ್ಕೆ ನಿಜವಾಸವ ಮಾಡುವ ಕಾಯಕ.
ಈ ಗುಣ ಬಾಚಿಯ ಬಸವಣ್ಣನ ನೇಮ.

ಇದು ಸಂಗನಬಸವಣ್ಣ ಕೊಟ್ಟ ಕಾಯಕದಂಗ,
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವನರಿವುದಕ್ಕೆ. || ೫ ||

೨೦೬

ಆಸೆಯ ಬಿಟ್ಟಡೆ ಭಕ್ತರೆಂಬೆ.
ವೇಷವ ಬಿಟ್ಟಡೆ ಮಾಹೇಶ್ವರರೆಂಬೆ.
ಭವಪಾಶವ ಬಿಟ್ಟಡೆ ಪ್ರಸಾದಿಯೆಂಬೆ.
ಭಾವ ಘಟಿಸಿದಡೆ ಪ್ರಾಣಲಿಂಗಿಯೆಂಬೆ.
ಬಯಕೆ ನಿಂದಡೆ ಶರಣನೆಂಬೆ.
ಅರಿವು ಶೂನ್ಯವಾದಡೆ ಐಕ್ಯನೆಂಬೆ.
ಈ ಷಡುಸ್ಥಲದ ಮಹಾಸ್ಥಲದಲ್ಲಿ ಒಡಗೂಡಿ ನಿಂದುದ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗಕ್ಕಲ್ಲದೆ ಇಲ್ಲವೆಂಬೆ. || ೬ ||

೨೦೭

ಐಘಟವೆಂಬ ಅಂಗದಲ್ಲಿ ಐದು ಕುಂಭವ ಕಂಡೆ.
ಕುಂಭದನುವೇನೆಂಬುದು, ಮುಂದಣ ಕುಂಭದ ಚಂದನವನೇನೆಂಬೆ.
ಆ ಚಂದದ ಮುಂದಣ ಎರಡು ಕುಂಭದ ಮಧ್ಯದಲ್ಲಿ
ಒಂದು ಕಮಲವುಂಟು.
ಆ ಕುಂಭಕ್ಕೆ ಐದು ಕಮಲ ಉದ್ಭವವಾದವು.
ಆ ಕಮಲದೊಳಗಣ ದಿವ್ಯಗಂಧವನು ಕಾಬುದು,
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವಲ್ಲದಿಲ್ಲವೆಂಬೆ. || ೭ ||

೨೦೮

ಕನಕನವರತ ಶೋಭಿತವೆಂಬ ದಿನಕರನುದಯದ ಪಟ್ಟಣದೊಳಗೆ
ಏಕಬೆಳಗಿನ ಏಕಾಂತವಾಸದೊಳಿಪ್ಪ
ನಿಶ್ಶಬ್ದಂ ಬ್ರಹ್ಮಮುಚ್ಯತೇ ಎಂಬ ಮೂಲಾಂಕುರವು.
ಉನ್ಮನಿಯ ಪ್ರಾಕಾರದ ಸ್ಫಟಿಕದ ಮನೆಯಲ್ಲಿ
ಇಷ್ಟಲಿಂಗವನರಿದಾತಂಗೆ ಮೂರರ ಹಂಗೇಕೆ?
ಆರು ಮೂರೆಂಬಿವ ದೂರದಲೆ ಕಳೆದು ಮೀರಿದ ಸ್ಥಲದಲ್ಲಿ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವಲ್ಲದೆ ಇಲ್ಲವೆಂಬೆ. || ೮ ||

೨೦೯

ಕುಂಭಿನಿಯ ಚಕ್ರದ ಮೇಲೆ ಪಿಂಡಬ್ರಹ್ಮಾಂಡವೆಂಬುದೊಂದು ಅಂಗ.
ಆ ಅಂಗಾಲಯದೊಳಗೆ ಏಕಸಹಸ್ರವೆಂಬುದೊಂದು ದೇವಾಲಯ.
ಆ ದೇವಾಲಯಕ್ಕೆ ವೆಜ್ಜವಿಲ್ಲದ ಬಾಗಿಲು.
ಆ ಬಾಗಿಲ ಮೇಲುಪ್ಪರಿಗೆಯೊಳಗೊಂದು
ಮೂಲಾಧಾರ ಮುಕ್ತಿಯೆಂಬುದೊಂದು ಕೋಣೆ.
ಅದಾರಿಗೂ ಮುಟ್ಟಬಾರದು, ನೆನೆಯಬಾರದು.
ನೋಡಬಾರದ ಕೋಣೆಯೊಳಗೆ ಮಾಣಿಕ್ಯದ ಮಹಾಪ್ರಕಾಶಕ್ಕೆ
ಮಿಗಿಲೆನಿಪ ನುಡಿಗೆಡೆಯಿಲ್ಲದ ಲಿಂಗ.
ಮುಕ್ತಿಯೆಂಬ ಕೋಣೆಯ ಮೂಲಾಗ್ರದಲ್ಲಿ ಇಪ್ಪುದೊಂದು [ಪರಂಜ್ಯೋತಿ].
ಆ ಮೂಲಾಗ್ರದ ಮೇಲಣ ಪರಂಜ್ಯೋತಿ ಪ್ರಕಾಶಪರಿಪೂರ್ಣಲಿಂಗವ
ತಿಳಿಯಬಲ್ಲಡೆ ಮುಟ್ಟಲಾಗದು ಮೂರ, ಕಟ್ಟಲಾಗದು ಆರ.
ಈ ಕಷ್ಟವ ಕಳೆಯದನ್ನಕ್ಕ ಕಂಡೆಹೆನೆಂಬವರನೇನೆಂಬೆ.
ರುದ್ರ ತಪಸ್ಸಿನೊಳಗಾದ, ಬ್ರಹ್ಮ ನಿತ್ಯಕ್ಕೊಳಗಾದ.
ವಿಷ್ಣು ಕಾಮದ ಬಲೆಯಲ್ಲಿ ಸಿಲ್ಕಿದ.
ಇನ್ನು ದೇವದಾನವ ಮಾನವರೆಲ್ಲರೂ ಅನಂತಾನುಕೋಟಿ
ಭವಭವಪಾಶವೆಂಬ ರಾಟಾಳದ ಬಲೆಯಲ್ಲಿ ಉರುಳಾಡುತ್ತಿಪ್ಪರಯ್ಯ.
ಇಂತು ಮೂಲದ ಕೀಲ ಸಂಹರಿಸಿ ನಿಂದ ನಿಸ್ಸೀಮ ಶರಣರೇ ಬಲ್ಲರಲ್ಲದೆ
ಮತ್ತಾರೂ ಅರಿಯರಯ್ಯ.
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವ. ||೯||

೨೧೦

ಕುಲಗೋತ್ರಜಾತಿಸೂತಕದಿಂದ
ಕೆಟ್ಟವರೊಂದು ಕೋಟ್ಯಾನುಕೋಟಿ.
ಜನನಸೂತಕದಿಂದ ಕೆಟ್ಟವರು ಅನಂತಕೋಟಿ.
ಮಾತಿನಸೂತಕದಿಂದ ಮೋಸವಾದವರು
ಮನು ಮುನಿಸ್ತೋಮ ಅಗಣಿತಕೋಟಿ.
ಆತ್ಮಸೂತಕದಿಂದ ಅಹಂಕರಿಸಿ ಕೆಟ್ಟವರು
ಹರಿಹರ ಬ್ರಹ್ಮಾದಿಗಳೆಲ್ಲರು.
'ಯದ್ದೃಷ್ಟಂ ತನ್ನಷ್ಟಂ' ಎಂಬುದನರಿಯದೆ
ಹದಿನಾಲ್ಕುಲೋಕವೂ ಸಂಚಿತಾಗಾಮಿಯಾಗಿ
ಮರಳಿ ಮರಳಿ ಹುಟ್ಟುತ್ತಿಪ್ಪರಯ್ಯ.

ಇಂತೀ ಸೂತಕದ ಪ್ರಪಂಚ ಬಿಡಲಾರದ ಪಾಷಂಡಿ ಮರುಳುಗಳಿಗೆ
ಪರಬ್ರಹ್ಮ ದೊರಕುವದೆ ಅಯ್ಯಾ ?
ಇದು ಕಾರಣ, ನಾಮರೂಪುಕ್ರೀಗಳಿಗೆ ಸಿಲ್ಕುವನಲ್ಲವಯ್ಯ.
ಅಗಮ್ಯ ಅಪ್ರಮಾಣ ಅಗೋಚರವಯ್ಯ.
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವಲ್ಲದೆ ಉಳಿದವರಿಗಿಲ್ಲವೆಂಬೆನು. ||೧೦||

೨೧೧

ಘಟಸ್ಥಾವರದೊಳಗನೊಡೆದು ಕಿಚ್ಚಿನ ಹೊರೆಯ ಕಂಡೆ.
ಕಾಣಿಸಿ ಮಿಕ್ಕಾದ ಹೊರಗಣ ಹೊರೆಯ ತಿಗುಡಂ ಕೆತ್ತಿ
ಕಂಬವ ಶುದ್ಧೈಸಿ ನೆಲವಟ್ಟಕ್ಕೆ ಚದುರಸವನಿಂಬುಗೊಳಿಸಿ
ಮೇಲಣವಟ್ಟಕ್ಕೆ ಎಂಟುಧಾರೆಯ ಏಣಂ ಮುರಿದು
ಕಡಿಗೆವಟ್ಟ ವರ್ತುಳಾಕಾರದಿಂ ಶುದ್ಧವ ಮಾಡಿ
ಏಕೋತ್ತರಶತಸ್ಥಲವನೇಕೀಕರಿಸಿ
ಒಂದು ದ್ವಾರದ ಬೋದಿಗೆಯಲ್ಲಿ ಕಂಬವ ಶುದ್ಧೈಸಿ
ಕಂಬ ಎರವಿಲ್ಲದೆ ನಿಂದ ಮತ್ತೆ ಚದುರಸಭೇದ.
ಅಷ್ಟದಿಕ್ಕಿನ ಬಟ್ಟೆಕೆಟ್ಟು, ನವರಸ ಬಾಗಿಲು ಮುಚ್ಚಿ,
ತ್ರಿಕೋಣೆಯನುಲುಹುಗೆಟ್ಟು, ಮುಂದಣ ಬಾಗಿಲು ಮುಚ್ಚಿ
ಹಿಂದಣ ಬಾಗಿಲು ಕೆಟ್ಟು, ನಿಜವೊಂದೆ ಬಾಗಿಲಾಯಿತ್ತು.
ಈ ಕೆಲಸವ ಆ ಕಂಬದ ನಡುವೆ ನಿಂದು ನೋಡಲಾಗಿ
ಮಂಗಳಮಯವಾಗಿ, ಇದು ಯೋಗಸ್ಥಲವಲ್ಲ.
ಇದು ಘನಲಿಂಗ ಯೋಗಸ್ಥಲ, ಇಂತೀ ಭೇದವ ತಿಳಿದಡೆ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವಲ್ಲದಿಲ್ಲಾ ಎಂದೆ. ||೧೧||

೨೧೨

ಘೋರಾರಣ್ಯದ ಮಧ್ಯದಲ್ಲಿ
ಮೇಲುಗಿರಿ ಪರ್ವತವೆಂಬ ಅಗ್ರದ ಕೊನೆಯ ಮೇಲೆ
ಭಕ್ತಿಜ್ಞಾನವೈರಾಗ್ಯವೆಂಬ ಅಂಗಮಂಡಲದೊಳಗೆ
ಮೂವತ್ತಾರು ಮಾಣಿಕ್ಯದ ಕಂಬದ ಮಂಟಪದೊಳಗೆ
ಸಚ್ಚಿದಾನಂದ ದಿವ್ಯಪರಂಜ್ಯೋತಿಯನಿಕ್ಕಿ ನೋಡಲು
ಅದನೇನೆನ್ನಬಹುದು.

ಒಳಗೆ ನೆನೆಯದೆ, ಹೊರಗೆ ಮುಟ್ಟದೆ
ಬೆಳಗು ಬೆಳಗ ಕೂಡಿದಂತೆ
ಆಕಾಶ ಮಹದಾಕಾಶವ ಕೂಡಿದಂತೆ
ಆ ನುಡಿಗೆಡೆಯಿಲ್ಲದ ಬೆಡಗಿನ ಕೀಲ ಕಳಚಬಲ್ಲಡೆ
ಮತ್ತೆ ಅರಸಲಿಲ್ಲ,
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವ. ||೧೨||

೨೧೩

ಜಾಲಗಾರಂಗೆ ಸುವರ್ಣದ ವಳಿಯನರಿದು ತೊಳೆಯಬೇಕು.
ಬಲೆಗಾರಂಗೆ ಮತ್ಸ್ಯದ ಬೆಂಬಳಿಯನರಿದು
ಕಲ್ಲಿಯ ವಳಿಯನಿಡಬೇಕು.
ಶಬರಂಗೆ ಸಂಭ್ರಮವ ಬಿಟ್ಟು, ತರು ಲತೆ ಪರ್ಣಂಗಳಂತಿರಬೇಕು.
ಇಂತೀ ಹೊಲಬಿನ ತೆರನಂತೆ ಗುಣವಿವರವನರಿದು,
ಆರಾರ ಇರವಿನ ತೆರನ ಪರಿಹರಿಸಿ,
ತಾ ಸರಿಸವಾಗಿ ನಿರುತಿಗಳ ನಿಜವನರಿದು,
ಪೂಸರ ಆಶೆಯನರಿದು, ವೇಷಗಳ್ಳರ ನಿಹಿತವ ನೋಡಿ,
ವಾಚಕರ ಪರಿಹಾಸಕರ ನೀತಿಯ ತಿಳಿದು,
ಮತ್ತಾವ ರೀತಿನೀತಿಗಳಲ್ಲಿಯೂ ಮಾತ ತಾರದೆ,
ತನ್ನ ಸುನೀತವನೆ ಬೀರಿ, ತನ್ನ ಸದ್ಗುಣ ರೀತಿಯನೆ ತೋರಿ,
ತನ್ನ ಸುಗುಣವಾಸನೆಯನೆ ತೀವಿ,
ಸತ್ಕುಲಭಕ್ತಿಯ ಕುಲರೀತಿಗೆ ತನ್ನ ಸತ್ಯವನೆ ಸಾರಿಯಿಪ್ಪಾತ
ತ್ರಿವಿಧದವನಲ್ಲ, ಅರಿಷಡ್ವರ್ಗಂಗಳೊಳು ನಿಲ್ಲ.
ಪಂಚೇಂದ್ರಿಯಂಗಳ ಸಂಚಿತ ಸುಖದವನಲ್ಲ.
ಮಿಕ್ಕಾದ ಬಹುವಿಷಯದ ಗೊಂಚಲ ತೊಂಬೆಯವಗಿಲ್ಲ.
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವು ತಾನು ತಾನೆ. ||೧೩||

೨೧೪

ನಿಜಾ.......[ನಂದ ನಿರ್ಭಿ]ನ್ನವೆಂಬುವ ನಿತ್ಯನಾತನ ಪಿಂಡದೊಳಗೆ
ನಿಶ್ಚಿಂತಾಮೃತವೆಂಬ ದಿವ್ಯಾಮೃತ ಕುಂಭವುಂಟು.
ನಾಭಿಸ್ಥಾನದೊಳಗೆ ಇದ್ದಂಥಾ ಮಹಾಕುಂಭದೊಳಗೆ
ಮಹಾನುಭಾವವೆಂಬುದೊಂದು ಸುವರ್ಣಮಂಟಪವುಂಟು.

ಆ ಸುವರ್ಣ ಮಂಟಪದೊಳಗೆ ರತ್ನಸಿಂಹಾಸನವೆಂಬ ಮಹಾಪೀಠಿಕೆಯುಂಟು.
ಆ ಪೀಠಿಕೆಯ [ಮೇಲೆ] ಸಾಸಿರ ಅನಂತಕೋಟಿಪ್ರಭೆಯೊಳಗಣ
ಕಳಾಸ್ವರೂಪವಪ್ಪುದೊಂದು ಪ್ರಾಣಲಿಂಗ.
ಆ ರತ್ನಪೀಠಿಕೆಯ ಮೇಲೆ ಪ್ರಕಾಶಿಸುತ್ತಿರ್ಪ ಲಿಂಗ.
ಆ ಲಿಂಗವೆ ತನ್ನ ಸ್ವಯಾನಂದದಿಂದ
ಊರ್ಧ್ವವೆಂಬ ಚಕ್ರಸ್ಥಾನದೊಳಗೆ ನಿಂದು ನೋಡುತ್ತಿರಲು
ಒಂದು ಕಮಲ ವಿಕಸಿತವಾಯಿತ್ತು.
ಆ ಕಮಲದೊಳಗೊಂದು ದಿವ್ಯಜ್ಞಾನವೆಂಬುದೊಂದು [ಲಿಂಗ].
ತಲ್ಲಿಂಗ ತೊಳಗಿ ಬೆಳಗಿ ಪ್ರಕಾಶಿಸಿತ್ತು.
ನೋಡುತಿರಲು ತಾನೆ ಪರಂಜ್ಯೋತಿ ದಿವ್ಯವಸ್ತು ಎಂದೆ ಕಾ[ಣಾ],
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗದರಿಕೆಯಾಗಿ. ||೧೪||

೨೧೫

ನಿರ್ವಯಲು ಸಾಮೀಪ್ಯ ಸಾಯುಜ್ಯವೆಂಬ ಒಡ್ಡುಗಲ್ಲ ಮೇಲೆ
ಸಕಲಸಾಮ್ರಾಜ್ಯವೆಂಬ ಶಿವಪುರವುಂಟು.
ಆ ಪುರಕ್ಕೆ ವಜ್ರ ಮುತ್ತು ರತ್ನದಿಂದ ತೆತ್ತಿಸಿದ ಕೊತ್ತಳ.
ಕೋಳು ಹೋಗದ ಮುಗಿಲಟ್ಟಣೆಯ ಪುರವನಾಳೆನೆಂಬುವರು.
ಅಂದು ಆಗದು ಸರಸವಲ್ಲ.
ಶಾಸ್ತ್ರದ ಕೊನೆಯ ಮೇಲಣ ಅವಧಾನದಂತೆ
ತೋರಿಯಡಗುವ ವಿದ್ಯುಲ್ಲತೆಯಂತೆ
ಬಯಲಲ್ಲಿ ಮೂಡುವ ಸುರಧನುವಿನಂತೆ
ಮರೀಚಿಕದಂತೆ, ಕುಸುಮದ ನನೆಯಂತೆ
[ದುಗ್ಧಘೃತ] ಮಿಶ್ರದಂತೆ ಮನದಲ್ಲಿಯೇ ವಾಸವಪ್ಪ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು. ||೧೫||

೨೧೬

ನಿರಾಳದೊಳಗಣ ಲಿಂಗದ ನೆಲೆ ಹೇಂಗೆ ಇದ್ದಿತ್ತು ಎಂದಡೆ:
ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ ಅಂಡವುಂಟು.
ಆ ಅಂಡದೊಳಗೆ ಅಮೃತ ಸರೋವರವೆಂಬ ಅಷ್ಟದಳಕಮಲವುಂಟು.
ಆ ಕಮಲದಲ್ಲಿ ನಾಲ್ಕಾರು ಮಾಣಿಕ್ಯದ ಕಂಬವುಂಟು.
ಆ ನಟ್ಟನಡುವಣ ನಾಲ್ಕುಮಾಣಿಕ್ಯದ ಕಂಬಕ್ಕೆ

ನಾಲ್ಕು ನವರತ್ನದ ಬೋದಿಗೆಯುಂಟು.
ನಾದವೆಂಬ ನಾಲ್ಕು ಲೋವೆ ನಡುವೆ
ಸೋಮಸೂರ್ಯರೆಂಬೆರಡು ಹಲಗೆಯ ಹರಹಿ,
ಪೃಥ್ವಿ ಅಪ್ಪು ಅಗ್ನಿ ವಾಯು ಆಕಾಶವೆಂಬ
ಪಂಚರತ್ನದ ಹೃತ್ಕಮಲಕರ್ಣಿಕಾಕಮಲಮಧ್ಯದಲ್ಲಿ ರವೆಯ ಸುತ್ತು ಮುಚ್ಚಿ,
ಅಲ್ಲಿಪ್ಪ ಲಿಂಗಕ್ಕೆ ತನುತ್ರಯ ಜ್ಯೋತಿಯ ಮಾಡಿ
ನಿಮ್ಮ ಶರಣರ ಕಾಯವೇ ಕೈಲಾಸ.
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು ನಿರಾಳ. || ೧೬ ||

೨೧೭

ನಿಶ್ಚಿಂತ ನಿರ್ಲೇಪ ಸಚ್ಚಿದಾನಂದ ಸ್ವರೂಪವಪ್ಪ
ಶರಣನಲಿಂಗದಂಗವ ತೋರಯ್ಯ ಎಂದಡೆ ಶರಣ.
ಶರಣರಿಗೆ ಬಿನ್ನಹಂ ಮಾಡುತ್ತಿರ್ದ, ನಿಮ್ಮ ಶರಣ
ನಿಜಲಿಂಗದ ಕ್ರಮವ.
ಭುವನಾಶ್ರಯವೆಂಬುದೊಂದು ಪದ್ಮಸಿಂಹಾಸನದ ಮೇಲೆ
ಮಾಣಿಕ್ಯವರ್ಣದ ಲಿಂಗವುಂಟು.
ಆ ಲಿಂಗವು ತನ್ನ ನಿಜಾಶ್ರಯವ ನೋಡುತ್ತಿರಲು
ಅಲ್ಲಿ ಚಿದಂಗವೆಂಬ ಮಹಾಹೃತ್ಕಮಲದೊಳಗೆ
ಉನ್ಮನಿಯಸ್ಥಾನವೆಂಬುದೊಂದು [ಉಂಟು].
ಬ್ರಹ್ಮಾನಂದಮಯವೆನಿಪ ನಿಜಾಮೃತಪಾನೀಯವೆಂಬ
ಪಂಚರತ್ನದ ಕಳಸವುಂಟು.
ಆ ಪಂಚರತ್ನದ ಕಳಸದ ಮೇಲೆ
ಇಂಚರನೆಂಬ ಹಂಸನೆಂಬ ಪ್ರಾಣಲಿಂಗವು ಆತ್ಮಪ್ರಭಾಮಂಡಲದೊಳಗಿಹುದು.
ಮಹಾಪ್ರಭೆಯಂ ನುಂಗಿದ ಲಿಂಗವು
ಪದ್ಮಬ್ರಹ್ಮಾಂಡವೆಂಬುದೊಂದು ಆ ಲಯಸ್ಥಾನದಲ್ಲಿ ನೋಡುತ್ತಿರಲು
ಅಲ್ಲಿಂದತ್ತ ಬಟ್ಟಬಯಲಾದ ಅಗಮ್ಯವೆಂಬ ಬಯಲು,
ಆ ಲಿಂಗದೊಳಗಡಗಿ ನಿಂದ ಭಾವವು ತನ್ನೊಳು ತಾನೆ ಕಾಣಿಸಿತ್ತು.
ಅದ ಚೆನ್ನಾಗಿ ತಿಳಿಯಬಲ್ಲಡೆ ಇನ್ನೇಕಯ್ಯಾ ಶಂಕೆ ?
ನಿಃಕಳಂಕ ನಿಜಲಿಂಗವು ತಾನೆ ಎಂದಾತ, ನಮ್ಮ ಬಸವಣ್ಣಪ್ರಿಯ
ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ತಾನು ತಾನಾಗಿ ಇದ್ದಿತ್ತು. || ೧೭ ||

೨೧೮

ಪಂಚರತ್ನವೆಂಬ ಆಕಾರದ ಚಿತ್ಪಿಂಡದೊಳಗೆ
ಸವಿಯುವ ಸವಿಯ ಸವಿದು ನೋಡುತ್ತಿರಲು ಒಂದು ಸ್ಥಾನವುಂಟು.
ಆ ಸ್ಥಾನದೊಳಗೆ ದಿವ್ಯರತ್ನದ ಕುಂಭವುಂಟು.
ಆ ಕುಂಭದೊಳಗೊಂದು ಮಹಾರತ್ನದ ಕಮಲವುಂಟು.
ಆ ಕಮಲದೊಳಗಣ ಅನಾದಿ ಅಮೃತದೊಳಗೆ ನೇಹ.......ವ ಶುದ್ಧವ ಮಾಡಿ
ಆ ಕಮಲದ ನನೆಯ ಹತ್ತಿ, ಇನಿದಾಗಿ ಉಂಡುಂಡು
ಅನುವಾಗಿ ನಿಂದು ನೋಡುವ ಸುಳುಹು ಬೆಳಗು ತಾನೆ ಕಾ[ಣಾ],
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವು ನಿರಾಳ ನಿಶ್ಚಿಂತನು. ॥ ೧೮ ॥

೨೧೯

ಪರುಷವ ಸೋಂಕಿದ ಲೋಹಕ್ಕೆ ಮತ್ತೆ ಪರುಷದ ಹಂಗೇಕೆ?
ಸರ್ಪದಷ್ಟವಾದ ದೇಹಕ್ಕೆ ಕಟುತ್ವ ಮಧುರದ ರಸಂಗಳ
ಪ್ರಮಾಣಿಸಬಲ್ಲುದೆ?
ಇಂತೀ ದೃಷ್ಟದಂತೆ ಲಿಂಗವಿದ್ದ ತನುವಿಂಗೆ
ಅಷ್ಟೋತ್ತರಶತವ್ಯಾಧಿಗಳಲ್ಲಿ ಕಟ್ಟುವಡೆದು
ಬಂಧನಕ್ಕೊಳಗಾಗುತ್ತ, ತಾಪತ್ರಯದಲ್ಲಿ ಸತ್ತು ಹುಟ್ಟುತ್ತ,
ನಾನಾ ವಿಕಾರದಲ್ಲಿ ನಷ್ಟವಾಗುತ್ತ,
ಮತ್ತೆ ಮಾತಿನ ವಾಸಿಗೆ ಮಿಟ್ಟೆಯ ಭಂಡರಂತೆ ಕಟ್ಟಿ ಹೋರುತ್ತ,
ತಥ್ಯಮಿಥ್ಯದಲ್ಲಿ ಕುಕ್ಕುಳಗುದಿವುತ್ತ,
ಮತ್ತೆ ಭಕ್ತವಿರಕ್ತರೆಂದು ಆತ್ಮತೇಜಕ್ಕೆ ಬಿಕ್ಕನೆ ಬಿರಿವುತ್ತ,
ಇಂತೀ ಕೆಟ್ಟ ಕೇಡ ನೋಡೆ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವು ಅಂಜಿ ನಷ್ಟವಾಗಿ ಹೋದ. ॥ ೧೯ ॥

೨೨೦

ಪೃಥ್ವಿ ಆಕಾಶದ ಮೇಲೆ ಗೌಪ್ಯವೆಂಬ ಪ್ರಣವದ ನಾದದ ಅಗ್ರದಲ್ಲಿ ಆದಿ ಅನಾದಿಯ ಮುಟ್ಟದೆ, ಅಪರಿಮಿತವೆಂಬ ಕುಂಭವುಂಟು.
ಆ ಕುಂಭದ ಪೂರ್ವಬಾಗಿಲಿಗೆ ಎಂಟು ಎಸಳಿನ ಬೀಗ.
ಉತ್ತರ ಬಾಗಿಲಿಗೆ ಎಸಳು ಮೂರರ ಬೀಗ.
ಪಶ್ಚಿಮದ ಬಾಗಿಲಿಗೆ ಪಂಚ ಎಸಳಿನ ಬೀಗ.

ದಕ್ಷಿಣದ ಬಾಗಿಲಿಗೆ ಏಕ ಎಸಳಿನ ಬೀಗ.
ಆ ಬೀಗಂಗಳ ದಳದ ಎಸಳಿನಲ್ಲಿ ಕಳೆವಕ್ಷರಗಳೇಳು,
ಉಳಿವಕ್ಷರವಾರು, ಸಲುವಕ್ಷರ ಮೂರು, ನೆಲೆಯಕ್ಷರವೊಂದೇ.
ಇಂತೀ ಎರಡಕ್ಷರವ ಭಾವಿಸಿ ಪ್ರಮಾಣವಿಟ್ಟು ನೋಡಬಲ್ಲಡೆ
ಆ ಕುಂಭದೊಳಹೊರಗ ಕಾಣಬಹುದು.
ಇದು ಲಿಂಗಾಂಗಿಯ ನಿಜೈಕ್ಯಸ್ಥಲವೆಂಬೆ.
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ಯೋಗಕ್ಕೆ ಸಿಕ್ಕಲಿಲ್ಲವೆಂಬೆನು. || ೨೦ ||

೨೨೧

ಪೃಥ್ವಿಯ ಮರೆಯ ಸುವರ್ಣದಂತೆ
ಚಿಪ್ಪಿನ ಮರೆಯ ಮುತ್ತಿನಂತೆ
ಅಪ್ಪುವಿನ ಮರೆಯ ಅಗ್ನಿಯಂತೆ
ಒಪ್ಪದೊಳಗಣ ಮಹಾಪ್ರಕಾಶದಂತೆಯಿಪ್ಪ ಘನಲಿಂಗವನರಿಯೆ.
ರುದ್ರ ಬ್ರಹ್ಮ ವಿಷ್ಣ್ವಾದಿಗಳು ತಮ್ಮ ಆತ್ಮಜ್ಞಾನ
[ನಿಶ್ಚಿಂ]ತೆಯೆಂಬ ನಿಜವ ನೀಗಾಡಿಕೊಂಡರು.
ಇದನರಿಯದೆ ಆಚರಿಸುವರು, ಆರಿಗೂ ಅಳವಲ್ಲವಯ್ಯಾ.
ಇಷ್ಟಪ್ರಾಣಭಾವಸಂಬಂಧಿಗಳಪ್ಪ
ಸದ್ಭಾವಾಚಾರವೆಡೆಗೊಂಡ ಶರಣಂಗಲ್ಲದೆ
ಮಿಕ್ಕಿನ ದುರಾಚಾರಿಗಳಿಗೆ ಸಾಧ್ಯವಲ್ಲ,
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು. || ೨೧ ||

೨೨೨

ಬಾಯಿ ಮುಚ್ಚಿ ಉಂಡಡೆ ಸಾವಧಾನಿಯೆಂಬೆ.
ಕಣ್ಣುಮುಚ್ಚಿ ನೋಡಿದಡೆ ಧ್ಯಾನಜ್ಞಾನಿಯೆಂಬೆ.
ಅಂಗ ನಷ್ಟವಾಗಿ ಕೂಡಿದಡೆ ಲಿಂಗಾಂಗಿಯೆಂಬೆ.
ಇಂತೀ ಭಾವಂಗಳಲ್ಲಿ ಭ್ರಮೆಯಿಲ್ಲದೆ,
ಆವ ಜೀವಂಗಳಲ್ಲಿ ನೋವ ತಾರದೆ,
ಚಿಂತೆ ಸಂತೋಷವೆಂಬ ಅಂತುಕಕ್ಕೊಳಗಾಗದೆ,
ಭ್ರಾಂತರ ಕೂಡಿ ಭ್ರಮೆಗೊಳಗಾಗದೆ,
ಕಾಂತೆಯರ ಕಲೆಯ ಬಲೆಯ ಒಳಗಾಗಿ ವಿಶ್ರಾಂತಿಯ ನೀಗಾಡಿಕೊಳ್ಳದೆ,
ಸರ್ವರಲ್ಲಿ ಶಾಂತನಾಗಿ ನಿಗರ್ವಿಯಾಗಿ
ನಿಃಕಳನಾಗಿ ನಿಜತತ್ವನಿಳಯ ನಿವಾಸನಾಗಿ

ಪರಬ್ರಹ್ಮಲೋಕ ಆನಂದ ಅವಿರತನಾಗಿಪ್ಪಾತನೆ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವು ತಾನು ತಾನಾದ ಶರಣ. || ೨೨ ||

### ೨೨೩

ಮಾತೆಯ ಆತ್ಮದಲ್ಲಿ ರೇತ ರಕ್ತವು ಕೂಡಿ
ಕೆನ್ನೀರ ಮುತ್ತಿನಂತಾಯಿತ್ತಯ್ಯ.
ಆ ಕೆನ್ನೀರ ಮುತ್ತು ವಿದ್ರುಮದಾಕಾರವಾಯಿತ್ತಯ್ಯ,
ಆ ವಿದ್ರುಮವಾಕಾರ ಒಂದು ಹಿಡಿಯಾಯಿತ್ತಯ್ಯ.
ಆ ಹಿಡಿಯಾದುದಕ್ಕೆ ಆಕಾರ ಅಂದವಾಗಿ ಓಂಕಾರ ಸ್ವರೂಪವಾಯಿತ್ತಯ್ಯ.
ಆ ಓಂಕಾರಸ್ವರೂಪವಾದ ಪಿಂಡಕ್ಕೆ ನವಮಾಸ ತುಂಬಿ
ತೆರವಾದ ಬಾಗಿಲಲ್ಲಿ ಬಂದ ಆತ್ಮನ ಅಂಗವೆ ಅನುವಾಗಿ ಆಯತವಾಯಿತ್ತು.
ಆ ಆಯತವಾದ ಆತ್ಮನು ತನ್ನ ಅಂಗದೊಳ ಹೊರಗೆ ನೋಡುತ್ತಿರಲು
ಅಂಗವೆ ಪಾಣಿವಟ್ಟವಾಯಿತ್ತು, ಲಿಂಗವೆ ಶಿರಸ್ಸು ಆಯಿತ್ತು.
ಆ ಶಿರಸ್ಸಿನೊಳಗೆ ಎರಡು ಜ್ಯೋತಿಯುಂಟು.
ಆ ಎರಡು ಜ್ಯೋತಿಯ ನಡುಮಧ್ಯಸ್ಥಾನದಲ್ಲಿ
ಒಂದು ಅಮೃತದ ಕಮಲವುಂಟು.
ಆ ಕಮಲದೊಳಗಣ ಅಮೃತವನುಣಬಲ್ಲಡೆ
ಆತನೆ ಪಿಂಡಾಂಡಜ್ಞಾನಿಯೆಂದಾತ
ನಮ್ಮ ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ
ರಾಜೇಶ್ವರಲಿಂಗವೆಂಬೆ. || ೨೩ ||

### ೨೨೪

ಮೂರಂಗುಲದಲ್ಲಿ ಅಳೆದು, ಐದಂಗುಲದಲ್ಲಿ ಪ್ರಮಾಣಿಸಿ
ಆರಂಗುಲದಲ್ಲಿ ವಟ್ಟಕ್ಕೆ ಶುದ್ಧವಾಯಿತ್ತು.
ಎಂಟರಳತೆ ಹದಿನಾರರ ಚದುರಸ
ಮೂವತ್ತೆರಡರ ಮಧ್ಯದಲ್ಲಿ ಹಸ್ತಕಂಬಿಯನಿಕ್ಕಿ
ಮೂರರಲ್ಲಿ ಭಾಗಿಸಲಾಗಿ, ಎರಡು ಒಳಗು ನಿಂದಿತ್ತು.
ಒಂದು ಹೊರಗಾದ ಕೈಸಾಲೆಯಾಯಿತ್ತು.
ಈ ಕೆಲಸವ ಹೊರಗೆ ಬಾಚಿಯಲ್ಲಿ ಸವೆದೆ.
ಒಳಗೆ ಉಳಿಯಲ್ಲಿ ಸವೆದೆ. ಇಂತೀ ತೆರನ ತಿಳಿದಡೆ
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವಲ್ಲದಿಲ್ಲಾ ಎಂದೆ. || ೨೪ ||

೨೨೫

ರತ್ನಜ್ಯೋತಿಯ ಪ್ರಭೆಯೊಳಗಣ ಸ್ವಯರತ್ನ ಶರಣಂಗೆ
ತತ್ಪದವೆಂದಡೇನಯ್ಯ ? ತ್ವಂ ಪದವೆಂದಡೇನಯ್ಯ ?
ಅಸಿಪದವೆಂದಡೇನಯ್ಯ ?
ತತ್ಪದವೆಂದಡೆ ಲಿಂಗ, ತ್ವಂ ಪದವೆಂದಡೆ ಅಂಗ,
ಅಸಿಪದವೆಂದಡೆ ಲಿಂಗಾಂಗಸಂಯೋಗವಯ್ಯ.
ಇಂತೀ ತ್ರಿವಿಧವನು ಮೀರಿದಾತ ಸ್ವಾನುಭಾವ ಸಂಪನ್ನ, ಸ್ವಯಂಭು ತಾನೆ.
ಅಖಂಡದಾಕಾರ ಆದಿವಸ್ತು ತಾನೆಂದರಿಯದೆ
ತತ್ಪದವೆ ಲಿಂಗವೆಂದು ಬೆರತಿಪ್ಪರು ಆ ಲಿಂಗ ತಮಗೆಲ್ಲಿಯದು ?
ಅಸಿಪದವೆ ಲಿಂಗಾಂಗಸಂಯೋಗವೆಂಬರು.
ಆ ಲಿಂಗಾಂಗಸಂಯೋಗ ತಮಗೆಲ್ಲಿಯದು ?
ಲಿಂಗ ತಮ್ಮದೆಂಬರು, ಪೃಥ್ವಿಯ ಹಂಗು.
ಅಂಗ ತಮ್ಮದೆಂಬರು, ಅಪ್ಪುವಿನ ಹಂಗು.
ಜ್ಞಾನ ತಮ್ಮದೆಂಬರು, ತೇಜದ ಹಂಗು.
ಇಂತೀ ತ್ರಿವಿಧದ ಹಂಗ ಹರಿದು ಲಿಂಗವೆ ತಾನಾದ
ಬಸವಣ್ಣ ಸಾಕ್ಷಿಯಾಗಿ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವಾಯಿತ್ತು. || ೨೫ ||

೨೨೬

ರುಜೆ ರೋಗಂಗಳು ಲಿಂಗದೇಹಿಗಳೆಂಬವರ ಸೋಂಕಿದಲ್ಲಿ,
ರೋಗದ ಇಚ್ಛೆಯನರಿದು ನೆರಳಿದಲ್ಲಿ,
ಲಿಂಗದ ಚಿತ್ತವೆತ್ತಹೋಯಿತ್ತು ?
ಪಂಚಾಕ್ಷರಿ ಪ್ರಣವ ನಷ್ಟವಾಯಿತ್ತು.
ಅರ್ಚನೆಯ ಪೂಜೆ ಕೆಟ್ಟಿತ್ತು. ಕೃತ್ಯದ ನೇಮ ಭ್ರಷ್ಟವಾಯಿತ್ತು.
ಇಂತಿವರ ಲಿಂಗದೇಹಿಗಳೆಂದಡೆ ಲಿಂಗಸಂಗಿಗಳೊಪ್ಪುವರೆ ?
ಈ ಗುಣ ಸಂಗನಬಸವಣ್ಣಂಗೆ ದೂರ.
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗಕ್ಕೆ ದೂರ. || ೨೬ ||

೨೨೭

ವಜ್ರದ ಘಟ, ಸೂಜಿಯಲ್ಲಿ ಛಿದ್ರಿಸಿಕೊಂಬುದೆ ?
ಭದ್ರಗಜ, ಅಜಕುಲದಲ್ಲಿ ಗರ್ಜಿಸಿಕೊಂಬುದೆ ?
ನಿರ್ಧರದ ಭಟ, ಜೀವಗಳ್ಳನಲ್ಲಿ ಅದ್ದಲಿಸಿಕೊಂಬನೆ ?

ಇಂತೀ ನಿರ್ಧರವ ತಿಳಿದಲ್ಲಿ, ಸಕಲವಿಷಯ ರೋಗರುಜೆಗಳಲ್ಲಿ
ಮಿಕ್ಕಾದ ತಾಪತ್ರಯಂಗಳಲ್ಲಿ ಲಿಂಗಾಂಗಿ ಒಡಲಗೊಡುವನೆ ?
ಇಂತಿವ ಕಂಡು ಮುಂಗಯ್ಯಾಭರಣಕ್ಕೆ ಮುಕುರದ ಹಂಗೇಕೆ ?
ತಾ ಕಂಡು ನೋಡಿದ ಮತ್ತೆ ಇನ್ನಾರುವ ಕೇಳಲೇತಕ್ಕೆ ?
ಇಂತಿವನರಿದು, ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ
ಕಾಳಿಕಾವಿಮಲ ರಾಜೇಶ್ವರಲಿಂಗವು ಹುಟ್ಟುಗೆಟ್ಟ. || ೨೭ ||

೨೨೮

ವಿಕಾರಿ ವಿರಕ್ತನಲ್ಲ.
ಪ್ರಕೃತಿಜೀವಿ ಅರ್ತಿಕಾರ ಕ್ಷಣಿಕ ಪರಿಹಾಸಕ ಭಕ್ತನಲ್ಲ.
ಕುಚಿತ್ತ ಕುಹಕ ದುರ್ವಿದಗ್ಧ ಪಿಸುಣ
ಘಾತುಕ ಅಪ್ರಮಾಣ ಗುರುಮೂರ್ತಿಯಲ್ಲ.
ಈ ತ್ರಿವಿಧಧರ್ಮ ಇದಿರಾತ್ಮನನರಿಯದೆ
ಬೇಡಿ ಕಾಡಿಯುಂಬವ ಚರಮೂರ್ತಿಯಲ್ಲ.
ಸತ್ಯರುಗಳ ಇಚ್ಛೆಯನರಿದು
ಅಚ್ಚೊತ್ತಿದಂತಿರದಿರ್ದಡೆ ಕರ್ತೃಸ್ವರೂಪಕೆ ಸಲ್ಲ.
ಇಂತಿವರಲ್ಲಿ ಅವಗುಣವ ಕಂಡು ಭಕ್ತಂಗೆ ಬಿಡಬಾರದು.
ಬಾಯೊಳಗಣ ಬಗದಳದಂತೆ ವಿರಕ್ತಂಗೂ ಗುರುಚರಕ್ಕೂ
ಪರಶಿವಮೂರ್ತಿಗೂ ಸದ್ಭಕ್ತನೆ ಘನ.
ಅಷ್ಟಾಷಷ್ಟಿಕೋಟಿತೀರ್ಥಂಗಳು, ದಿವ್ಯದೇವಸ್ಥಾನಂಗಳು
ಸಕಲ ವೇದ ಶಾಸ್ತ್ರ ಪುರಾಣ ಆಗಮಂಗಳು
ಭಕ್ತನ ಬಾಗಿಲ ನೀರಿಂಗೆ ಸರಿಯಲ್ಲವೆಂದು
ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ಭಕ್ತರ ಕಟ್ಟುಗೊತ್ತಿನಲ್ಲಿರಬೇಕು. || ೨೮ ||

೨೨೯

ಸರ್ವಕಳಾ ಚಿತ್ರ ವಿಚಿತ್ರವೆಂಬ ಮೋಹನ ಚಿಚ್ಛಕ್ತಿಯು
ವೇದೋಪನಿಷತ್ತು ಶಾಸ್ತ್ರ ಆಗಮ ಪುರಾಣ ಶಬ್ದ ಜ್ಯೋತಿಷ ವ್ಯಾಕರಣ
ಯೋಗಾಭ್ಯಾಸ ವೀಣಾಭರಣ[ತ?] ಛಂದಸ್ಸು ನಾಟಕಾಲಂಕಾರ
ಇಂತೀ ಪರೀಕ್ಷೆಯು ನೋಡುವ ಅಯ್ಯಗಳ ಎಲ್ಲ ತನ್ನ
ಜವನಿಕೆಯೊಳಗೆ ಕೆಡಹಿಕೊಂಡಿತ್ತು.
ಧ್ಯಾನ ಮೌನದಿಂದ ಕಂಡೆಹೆನೆಂಬವರ ಅಜ್ಞಾನಕೆ ಒಡಲುಮಾಡಿತ್ತು.
ತತ್ವದವ ನೋಡೆಹೆನೆಂಬವರ ಮೆಚ್ಚಿಸಿ ಮರುಳುಮಾಡಿತ್ತು.

ಅಂಗವೆಲ್ಲವನರಿದೆನೆಂಬವರ ಹಿಂಗದೆ
ತನ್ನ ಅಂಗದ ಬಲೆಯೊಳಗೆ ಕೆಡಹಿತ್ತು.
ಲಿಂಗಮೋಹಿಗಳೆಂಬವರ ತನ್ನ ಸಂಗದ
ಅನಂಗನ ಅಂತರಂಗಕ್ಕೆ ಒಳಗುಮಾಡಿತ್ತು.
ವೇದವೇದ್ಯವೆಂಬರೆಲ್ಲರನು ಏಕಾಂತದೊಳಗೆ ತಳಹೊ[ವ?]ಳಗೊಳಿಸಿತ್ತು.
ಕಣ್ಣ ಮುಚ್ಚಿ ಜಪ ಧ್ಯಾನ ಶೀಲ ಮೌನ ನೇಮ
ನಿತ್ಯವ ಹಿಡಿವ ವ್ರತಿಗಳ ನಾನಾ ಭವದಲ್ಲಿ ಬರಿಸಿತ್ತು.
ವಾಗದ್ವೈತವ ನುಡಿವ ಅರುಹಿರಿಯರೆಂಬವರ
ಜಾಗ್ರದಲ್ಲಿ ಆಕ್ರಮಿಸಿಕೊಂಡಿತ್ತು. ಸ್ವಪ್ನದಲ್ಲಿ ಮೂರ್ಛಿತರ ಮಾಡಿತ್ತು.
ಸುಷುಪ್ತಿಯಲ್ಲಿ ಕಂಡೆನೆಂಬವರ
ವ್ಯಾಪ್ತಿಯೆಂಬ ಬೇಳುವೆಗೊಳಗುಮಾಡಿತ್ತು.
ಇಂತೀ ತ್ರಿವಿಧದೊಳ ಹೊರಗಿನ ಭೇದವನರಿಯದ
ಪ್ರಪಂಚುದೇಹಿಗಳಿಗೆ ವಿರಕ್ತಿ ಇನ್ನೆಲ್ಲಿಯದು ? ಘಟಿಸದು ಕಾ[ಣಾ].
ಬಸವಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ನಿರ್ಧರವಾದಲ್ಲಿ ನಿವಾಸವಾಗಿಪ್ಪನು. || ೨೯ ||

೩೦

.....[ನಿರಾಳ ನಿಶ್ಚಿಂ]ತ ನಿರಾಭಾರಿ ನಿಸ್ಸೀಮನಿಗೆ ಅಗೋಚರ ಶರಣಂಗೆ
ಪರಂಜ್ಯೋತಿರ್ಲಿಂಗ ಪ್ರತ್ಯಕ್ಷವಾಗಿ ತೋರಿದ ಕ್ರಮವೆಂತೆಂದಡೆ:
ಪಂಚರತ್ನವೆಂಬ ಸುಲಾ[?]ರತ್ನಮಂಟಪದೊಳಗೆ
ಬೆಳಗುವದೊಂದು ಮುತ್ತಿನ ಪಾಣಿವಟ್ಟವುಂಟು.
ಅದರ ಮಸ್ತಕದ ಮೇಲೊಂದು ಅಮೃತದ ಕಂಕಣವುಂಟು.
ಆ ಕಂಕಣದೊಳಗೊಂದು ನಿಶ್ಚಿಂತಾಮೃತವೆಂಬ ಕಮಲವುಂಟು.
ಆ ಕಮಲದೊಳಗೊಂದು ಮಹಾರತ್ನಪ್ರಕಾಶವೆಂಬುದೊಂದು
ಪ್ರಾಣಲಿಂಗ ಬೆಳಗುತ್ತಿಹದು.
ಆ ರತ್ನಮಂಟಪದೊಳಗೆ ಮಹಾಸ್ಫಟಿಕದ ಭಾಜನವುಂಟು.
ಆ ಭಾಜನದೊಳಗೆ ಜೀವ ನವಪರಬ್ರಹ್ಮನವಗವಿಸಿತ್ತು.
ಆ ಬ್ರಹ್ಮವೆ ತಾನೋ, ನಾನೋ ? ಎಂದು ವಿಚಾರಿಸಿ ನೋಡಿದಡೆ
ಗೋಳಕಾಕಾರ ಸ್ವಯಂಪ್ರಕಾಶ ವಸ್ತು ಎಂದಾತ
ನಮ್ಮ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲ ರಾಜೇಶ್ವರಲಿಂಗವು
ತಾನು ತಾನಾದ ಶರಣ. || ೩೦ ||

■ ■

## ಬಾಲಬೊಮ್ಮಣ್ಣನ ವಚನ

೨೩೧

ಅಜ್ಞಾನವ ಸುಜ್ಞಾನದಿಂದ ತಿಳಿಯಬೇಕೆಂಬರು
ಅಜ್ಞಾನಕೂ ಸುಜ್ಞಾನಕೂ ಪದರದ ಚೀಲವೆ ?
ಕ್ರೀಯಿಂದ ನಿಃಕ್ರೀಯನರಿಯಬೇಕೆಂಬರು
ಕ್ರೀಗೂ ನಿಃಕ್ರೀಗೂ ಅಡಿಕಿನ ಮಡಕೆಯೆ ?
ಸರ್ವಸಂಗವ ಪರಿತ್ಯಾಗವ ಮಾಡಿ, ಲಿಂಗವ ಒಡಗೂಡಬೇಕೆಂಬರು
ಆ ಲಿಂಗವೇನು ವಿಧಾಂತರ ಲಾಗಿನ ಮೆಚ್ಚೆ ?
ಮೂರ ಬಿಟ್ಟು, ಒಂದ ಮುಟ್ಟಿದಲ್ಲಿ ಅಜ್ಞಾನವಡಗಿತ್ತು.
ಆರ ಬಿಟ್ಟು, ಮೂರ ಹಿಡಿದಲ್ಲಿ
ಕ್ರೀ ನಷ್ಟವಾಗಿ ನಿಃಕ್ರೀ ನೆಲೆಗೊಂಡಿತ್ತು.
ಸರ್ವಾತ್ಮನ ಗುಣದ ವಿವರವ ತಿಳಿದು
ಆತ್ಮನ ಗುಣವ ತನ್ನದೆಂದರಿದಲ್ಲಿ
ಸರ್ವೇಂದ್ರಿಯ ನಷ್ಟ, ನಿಶ್ಚೈಸಿದಲ್ಲಿ ಸರ್ವವಿರಕ್ತನು.
ಇಂತೀ ಗುಣ ವಿವರವ ಮರೆದು
ಊರ ಗುದ್ದಲಿಯಲ್ಲಿ ನಾಡ ಕಾಲುವೆಯ ತೆಗೆಯುವವನಂತೆ
ಬಹುಬಳಕೆಯ ಬಳಸದೆ

ಅರಿವು ತಲೆದೋರಿದಲ್ಲಿ, ಉಳಿಯಿತ್ತು ಪಾಶ ಕೆಲದಲ್ಲಿ
ವೀರಶೂರ ರಾಮೇಶ್ವರಲಿಂಗವನರಿಯಲಾಗಿ. ॥ ೧ ॥

**೨೩೨**

ಊರಿಗೆ ಹೋಹಾತ ದಾರಿಯ ಭಯಂಗಳನರಿದು
ಆರೈಕೆಯಿಂದ ಹೋಗಬೇಕು.
ಕುರಿತ ಕುರುಹ ಹಿಡಿವನ್ನಕ್ಕ ಭೇದ ವಿವರವ ಸೋಧಿಸಬೇಕು.
ಸೋಧಿಸಿ ಸ್ವಸ್ಥವಾಗಿ ನಿಜನಿಂದಲ್ಲಿ
ಉಭಯದ ಕುರುಹು ಅನಾದಿಯಲ್ಲಿ ಅಡಗಿತ್ತು.
ಅಡಗಿದ ಮತ್ತೆ ವೀರಶೂರ ರಾಮೇಶ್ವರಲಿಂಗವ ಕುರುಹಿಡಲಿಲ್ಲ. ॥ ೨ ॥

**೨೩೩**

ಕಂಡುದೆಲ್ಲವೂ ಜಗದ ಸೊಮ್ಮು.
ಕಾಣುದದೆಲ್ಲವೂ ಮಾಯೆಯ ಸೊಮ್ಮು.
ಕಂಡುದ, ಕಾಣದುದ ತಾ ನಿಧಾನಿಸಿಕೊಂಡು
ತನಗಿಲ್ಲದುದ ತಾನರಿದು, ನಷ್ಟವಪ್ಪುದ ಜಗಕ್ಕೆ ಕೊಟ್ಟು
ಬಟ್ಟಬಯಲ ತುಟ್ಟತುದಿಯ ದೃಷ್ಟವ ಕಾಬುದಕ್ಕೆ ಮುನ್ನವೆ
ದೃಕ್ಕು ದೃಶ್ಯಕ್ಕೆ ಹೊರಗಾಗಬೇಕು,
ವೀರಶೂರ ರಾಮೇಶ್ವರಲಿಂಗವ ಕೂಡಬಲ್ಲಡೆ. ॥ ೩ ॥

**೨೩೪**

ಕನ್ನಗತ್ತಿ ಮಣ್ಣ ಕೆಡಹಿದ ಬಳಿಕ
ಮಣ್ಣ ತೆಗೆಯಬಲ್ಲುದೆ ?
ಇಂತೀ ಉಭಯಾನುಭಾವಬೇಕು.
ಕನ್ನವ ಸವೆದ ಕತ್ತಿ ಕಳಬಲ್ಲುದೆ ?
ಇಂತೀ ಬಿನ್ನಾಣದ ದೃಷ್ಟವ ತಿಳಿದು
ಅರಿವುದ ಅರುಹಿಸಿಕೊಂಬುದೆ ?
ಅರಿದ ಅರಿವ ಅರಿವನ್ನಕ್ಕ
ವೀರಶೂರ ರಾಮೇಶ್ವರಲಿಂಗವ
ಅರ್ಚಿಸುತ್ತ, ಪೂಜಿಸುತ್ತ ಚಿತ್ತಶುದ್ಧನಾಗಿರಬೇಕು. ॥ ೪ ॥

**೨೩೫**

ಕುರುವಿಟ್ಟರೆ ತಾ ದಿಟವಲ್ಲ.
ತನ್ನೊಳ್ಪುದಿದಿರೆ ಅದು ನಿಜವಲ್ಲ.

ಪುನರಪಿಯೊಳ್ಳಿಂತಿರೆ ಅದು ಸಹಜವಲ್ಲ.
ಇಂತೀ ತ್ರಿವಿಧವಲ್ಲದೆ ಅಳಿವ ಉಳಿಮೆ ತಿಳಿದು,
ವೀರಶೂರ ರಾಮೇಶ್ವರಲಿಂಗವ ಕೂಡಬೇಕು. || ೫ ||

೨೩೬

ಗುರುವಾಗಿ ಬಂದರಯ್ಯಾ ರೇವಣಸಿದ್ಧೇಶ್ವರದೇವರು.
ಲಿಂಗದಲ್ಲಿ ನಿಚ್ಚೈರಗಾದರಯ್ಯಾ ಅನುಮಿಷದೇವರು.
ಜಂಗಮವಾಗಿ ಸುಳಿದರಯ್ಯಾ ಪ್ರಭುದೇವರು.
ಪ್ರಸಾದವ ಕೊಂಡು ಪಥವ ತೋರಿದರಯ್ಯಾ ಬಿಬ್ಬಿಬಾಚಯ್ಯಗಳು.
ಲಿಂಗದಲ್ಲಿ ನಿರ್ವಯಲಾದರಯ್ಯಾ ನೀಲಲೋಚನೆಯಮ್ಮನವರು.
ಸೌರಾಷ್ಟ್ರಮಂಡಲದಲ್ಲಿ ಮೆರೆದರಯ್ಯಾ ಓಹಿಲದೇವರು.
ಇಂತಿವರ ಒಕ್ಕುಮಿಕ್ಕ ಬಯಲಪ್ರಸಾದ
ಕೊಂಡು ಬದುಕಿದೆನಯ್ಯಾ, ವೀರಶೂರ ರಾಮೇಶ್ವರಾ. || ೬ ||

೨೩೭

ದುರ್ವಿಕಾರದಲ್ಲಿ ನಡೆದು, ಗುರುಲಿಂಗವ ಪೂಜಿಸಬೇಕು.
ಮನವಿಕಾರದಲ್ಲಿ ನಡೆದು, ಶಿವಲಿಂಗವ ಪೂಜಿಸಬೇಕು.
ತ್ರಿವಿಧ ವಿಕಾರದಿಂದ ನಡೆದು, ಜಂಗಮಲಿಂಗವ ಪೂಜಿಸಬೇಕು.
ಒಳಗನರಿದು ಹೊರಗ ಮರೆದ ಮತ್ತೆ
ವೀರಶೂರ ರಾಮೇಶ್ವರಲಿಂಗವ ಕೂಡಬೇಕು. || ೭ ||

೨೩೮

ಪ್ರಾಣಕೂ ಲಿಂಗಕೂ ಅನುಸಂಧಾನವ ಮಾಡಬೇಕೆಂಬಲ್ಲಿ
ಮಣಿಯ [ನಿ]ರಾಳದಲ್ಲಿ ಏರುವ ನೂಲೆ ?
ರಾಗಾದಿ ವ್ಯಾಮೋಹ ತಥ್ಯಮಿಥ್ಯ ನಿಶ್ಚಯವಾದಲ್ಲಿಯೆ
ವಸ್ತುವಿನಲ್ಲಿ ಅನುಸಂಧಾನವಾದ ಚಿತ್ತವ
ಸನ್ನೆ ಸಂಜ್ಞೆಯ ಮಾಡಿ ಗೂಡಿಸಲಿಲ್ಲ.
ಆಯದಲ್ಲಿ ಗಾಯವಾದ ಆತ್ಮನ ಸ್ವಸ್ಥದಂತೆ
ಅರಿದಲ್ಲಿಯೆ ಮಾಯಾಮಲ ಕರ್ಮ ಬಿಟ್ಟುದು,
ವೀರಶೂರ ರಾಮೇಶ್ವರಲಿಂಗವನರಿದುದು. || ೮ ||

೨೩೯

ಸೂತ್ರದ ಸಂಚದಿಂದ ಉಭಯ ಬೊಂಬೆ ನಡೆದು
ಹೊಡೆದಾಡಿ ಕೆಡವ ಮತ್ತೆ ಸಂಚದ ನೂಲು ಅಲ್ಲಿಗೆ ಲಕ್ಷ.

ಇಷ್ಟ ಪ್ರಾಣ ಒಡಗೂಡಿದ ಮತ್ತೆ
ಕೊಟ್ಟಿಹೆ ಕೊಂಡಿಹೆನೆಂಬ ಅರಿವು ದೃಷ್ಟವ ಕಂಡದರಲ್ಲಿ ನಷ್ಟ.
ಇಂತೀ ಭೇದಂಗಳಲ್ಲಿ ವೇಧಿಸುವನ್ನಕ್ಕ
ವೀರಶೂರ ರಾಮೇಶ್ವರಲಿಂಗವ
ಉಜ್ಜುತ್ತ ಒರೆಸುತ್ತ ತೊಳೆವುತ್ತ ಹಿಳಿವುತ್ತ
ಪೂಜಿಸಿ ಆಳುತ್ತ ಇರಬೇಕು. || ೯ ||

೨೪೦

ಸ್ಥೂಲದಿಂದ ದೃಷ್ಟ.
ಸೂಕ್ಷ್ಮದಿಂದ ಅದರ ಸಸುಂಗ.
ಕಾರಣದಿಂದ ವಾಯುಭ್ರಮೆ.
ಇಂತೀ ತನುತ್ರಯಂಗಳ ಕಳೆದು
ನಿಜ ಉಳುಮೆಯಲ್ಲಿ ಒಡಗೂಡಬೇಕು,
ವೀರಶೂರ ರಾಮೇಶ್ವರಲಿಂಗಾ. || ೧೦ ||

೨೪೧

ಹಾವಿನ ಬಿಲದಲ್ಲಿ ಕೋಲನಿಕ್ಕಲಾಗಿ
ಕೋಲ ಬೆಂಬಳಿಯಲ್ಲಿ ಹಾಯ್ವ ಹಾವಿನ ತೆರನಂತೆ
ನಿಶ್ಚಯವಸ್ತು.
ಇದನರಿವುತ್ತವೆ ನಿಜವಸ್ತುವಿನ ಗುಣ
ಮೋಹದಲ್ಲಿ ಅಚ್ಚೊತ್ತಿದಂತೆ
ಎರಡಳಿಯಬೇಕು, ವೀರಶೂರ ರಾಮೇಶ್ವರನಲ್ಲಿ. || ೧೧ ||

■ ■

## ಬಾಲ ಸಂಗಣ್ಣನ ವಚನ

೨೪೨

ಊರೊಳಗಣ ಹೊಲೆಯ, ಊರ ಹೊರಗಣ ಕುಲಜ.
ಇವರಲ್ಲಿ ಆರು ಹಿರಿ[ಯರೆಂಬುದ] ಬಲ್ಲಡೆ ಲಿಂಗಪ್ರಾಣಸಂಬಂಧಿಯೆಂಬೆ.
ಅರಿಯದಿರ್ದಡೆ ಪ್ರಾಣಲಿಂಗಸಂಬಂಧಿಯೆಂಬೆ.
ಇಂತೀ ಉಭಯವನರಿದ ಶರಣ ಸರ್ವಾಂಗಲಿಂಗಸಂಬಂಧಿ.
ಆತಂಗೆ ತತ್ತುಗೊತ್ತಿಲ್ಲ, ಇಷ್ಟ ಪ್ರಾಣವೆಂಬ ಗುತ್ತಗೆಯವನಲ್ಲ.
ಕರ್ಪುರ ಉರಿ ಉಭಯರೂಪು ತನ್ಮಯವಾದಂತೆ
ಕಮಠೇಶ್ವರಲಿಂಗದಲ್ಲಿ ಸದಾಸನ್ನದ್ಧನಾದ ಶರಣನು. ॥ ೧ ॥

೨೪೩

ಐದರಿಂದ ಕಾಬುದು ಜೀವ, ಮೂವರಿಂದ ಕಾಬುದು ಆತ್ಮ.
ಇಪ್ಪತ್ತೈದರಿಂದ ಕಾಬುದು ಪರಮ, ಮೂವತ್ತಾರರಿಂದ ಕಾಬುದು ಚಿತ್ತ.
ಒಂದರಿಂದ ಕಾಣಿಸಿಕೊಂಬುದು ಚಿದಾನಂದ.
ಚಿದಾನಂದವೆಂಬ ಆನಂದ ನಿಂದು, ಸದಮಲಾನಂದ ತಾನಾದಲ್ಲಿ,
ಸದಾಸನ್ನದ್ಧವೆಂಬ ಆನಂದ ಹಿಂಗಿ
ನಿಂದ ಉಳುಮೆ, ಕಮಠೇಶ್ವರಲಿಂಗ ತಾನಾದ ಶರಣ. ॥ ೨ ॥

೨೪೪

ಕಂಗಳು ನುಂಗಿದ ಬಯಲವ, ಕರ್ಣ ಅವಗವಿಸಿದ ನಾದವ,
ನಾಸಿಕದಲ್ಲಿ ನಷ್ಟವಾದ ಸುಗಂಧವ,
ಜಿಹ್ವೆಯ ಕೊನೆಯಲ್ಲಿ ಅಳಿದ ರಸಾನ್ನವ,
ಮುಟ್ಟಿನ ದೆಸೆಯಲ್ಲಿ ನಿಶ್ಚಯವಾದ ಮೃದು ಕಠಿಣಾದಿ,
ಇಂತಿವೆಲ್ಲವೂ ನಿಜನೆಲೆಯಲ್ಲಿ ಅಚ್ಚೊತ್ತಿದಂತೆ ಐಕ್ಯವಾದ ಮತ್ತೆ
ಅರ್ಪಿತವೆಂಬುದು ಹಿಂಚೋ, ಮುಂಚೋ ಎಂಬುದ ತಿಳಿದು,
ಆ ಉಳುಮೆಯಲ್ಲಿ ಕಲೆದೋರದೆ ಅರ್ಪಿತ ನಷ್ಟವಾದುದು.
ಕಮಠೇಶ್ವರಲಿಂಗವ ಕೂಡಿ ಕೂಡಿದೆನೆಂದು
ಎರಡಳಿದ, ಪ್ರಾಣಲಿಂಗ ಲಿಂಗಪ್ರಾಣವೆಂಬ ಸಂದೇಹವಳಿದ ಶರಣ. ॥ ೩ ॥

೨೪೫

ಕಾಬುದು ಜೀವನಲ್ಲ, ಕಾಣಿಸಿಕೊಂಬುದು ಪರಮನಲ್ಲ.
ಅಟ್ಟಿ ಮುಟ್ಟಿ ಹರಿದಾಡುವವು ಕರಣಂಗಳಲ್ಲ.
ಸುಖವನನುಭವಿಸುವವು ಇಂದ್ರಿಯಂಗಳಲ್ಲ.
ಇಂತೀ ಭೇದಂಗಳಲ್ಲಿ ಆರೆಂಬುದ ತಿಳಿದು
ಸಸಿ ವೃಕ್ಷಕ್ಕೆ ನೀರನೆರೆದಡೆ ಆ ನೀರ ಕುಡಿವುದು
ಬೇರೋ, ಮರನೋ ? ಮೀರಿ ಬೆಳೆದ ಫಲವೋ ?
ಎಂಬುದನರಿದು ತಿಳಿದಲ್ಲಿ,
ಅರಿದರುಹಿಸಿಕೊಂಬ ನಿರಿಗೆಯ ಬಲ್ಲ,
ಆತ ಕಮಠೇಶ್ವರಲಿಂಗವನೊಡಗೂಡಿದ ಶರಣ. ॥ ೪ ॥

೨೪೬

ಬಂಗಾರಕ್ಕೆ ಒಳಹೊರಗುಂಟೆ ?
ಕರ್ಪುರ ಚಂದನ ಅಗರು ಇರವಂತಿ ಶಾವಂತಿ
ಮೊಲ್ಲೆ ಮಲ್ಲಿಗೆ ಅದ್ರಗಂಚಿ ಮರುಗ ದವನ
ಪಚ್ಚೆ ಮುಡಿವಾಳ ಕೇತಕಿ ಮುಂತಾದ
ಸಕಲ ಪುಷ್ಪಪತ್ರೆಗಳಿಗೆ ಒಳಹೊರಗುಂಟೆ ?
ಅವರಂದವುಳ್ಳನ್ನಕ್ಕ ಸರ್ವಾಂಗದಲ್ಲಿ
ಗಂಧಪರಿಪೂರ್ಣಮಾಗಿರ್ಪುದದರಂತೆ
ಕಮಠೇಶ್ವರಲಿಂಗದಲ್ಲಿ ಉಭಯ ಮುಟ್ಟಳಿದ ಶರಣನಿರವು. ॥ ೫ ॥

೨೪೭

ಭಕ್ತ ವಿರಕ್ತಂಗೆ ಜೂಜು ವೇಂಟೆ ಕುತರ್ಕ ಕರ್ಕಶ
ನೆತ್ತ ಚದುರಂಗ ಪಗಡೆ ಪಗುಡಿತನ ಪರಿಹಾಸ
ಕುಸರಸ ಕುಚಿತ್ತ ಕುಟಿಲ ಗಣಿಕಾಸಂಗ
ಇಂತೀ ಸಮೇಳ ಸ್ವಚ್ಛಂಗಳ ಮಾಡುತ್ತ
ವೇದವ ಮರೆದು, ಶಾಸ್ತ್ರವ ತೊರೆದು, ಪುರಾಣದ ಹಾದಿಯನರಿಯದೆ
ಆಗಮದ ಆಗುಚೇಗೆಯ ಕಾಣದೆ
ಶಿವಾಧಿಕ್ಯ ಸಂಬಂಧನಲ್ಲದೆ, ಶಿವಪೂಜೆಯನೊಲ್ಲದೆ
ಶಿವಧ್ಯಾನದಲ್ಲಿ ನಿಲ್ಲದೆ
ಶಿವ ಯಥಾ ಕಥನದಲ್ಲಿ ತ್ರಿಕರಣಶುದ್ಧಾತ್ಮನಲ್ಲದೆ
ಇಂತೀ ಬಹುದುರ್ವಿಕಾರನಾಗಿ ಆಡುತ್ತ
ಮತ್ತವು ತೀರಿದ ಬಳಿಕ ದೇವಂಗೆ ಎಡೆಮಾಡು,
ಜಪಕ್ಕೆ ಮಾಲೆಯ ತಾ ಧ್ಯಾನದಲ್ಲಿದ್ದೆಹೆನೆಂದು
ಮತ್ತೆ ಅನ್ಯರು ಹೊದ್ದಬೇಡಾಯೆಂದು
ಚಿತ್ತಶುದ್ಧನಾಗಿದ್ದೆಹೆನೆಂದು ನುಡಿಗುಟ್ಟುವ ಮಿಟ್ಟೆಯ ಭಂಡಂಗೆ
ಕೃತ್ಯ ನಿತ್ಯ ನೇಮ ಜಪ ತಪ
ವ್ಯೋಮ ಅನುಸಂಧಾನ ಸತ್ಕ್ರಿಯಾಮಾರ್ಗ ಮತ್ತುಂಟೆ ?
ಸಂಸಾರದ ಹರವರಿಯಲ್ಲಿದ್ದಡೂ
ಕೋಲದ ಮಣಿಮಾಡದ ಕೆಳೆಯಲ್ಲಿದ್ದ
ಅರಸಿನ ಎಚ್ಚರಿಕೆಯ ಇರುವಿನಂತೆ ಇರಬೇಕು.
ಇಂತೀ ಸತ್ಕ್ರಿಯಾಮಾರ್ಗಂಗಳಿರವಿನಿಂದ
ಕಾಲಕರ್ಮಟಂಗಳಿಂದ ಕಳೆದು, ಸುಗುಣ ದುರ್ಗುಣಂಗಳ ತಿಳಿದು
ಉಭಯವ ಕಳೆದು, ತನ್ನ ತಾನರಿದು
ಭಿನ್ನಭಾವಿಯಲ್ಲದೆ, ಇಂತೀ ಭಾವ ಸನ್ನೆಗಟ್ಟಿಗೆಯಂತೆ
ಕಮಠೇಶ್ವರಲಿಂಗವನರಿವುದಕ್ಕೆ ಕ್ರಿಯಾಪದ ಭಿತ್ತಿ. || ೬ ||

೨೪೮

ಮಾಂಸದೊಳಗಿದ್ದ ಕ್ಷೀರವ, ಕ್ಷೀರದೊಳಗಿದ್ದ ಬೆಸುಗೆಯ
ಬಿನ್ನಾಣದಿಂದ ತೆಗೆದ ಬೆಣ್ಣೆಯ, ಆರೈದು ನೋಡಿ, ಕರಗಿ
ಕಡೆಯಲ್ಲಿ ಮೀರಿ ಘೃತವಾದುದು ಪಶುವೋ, ಪಯವೋ, ದಧಿಯೋ ?
ನವನೀತವೋ ? ಘೃತಸ್ವಯವೋ ? ಅಲ್ಲ ಬೆಸುಗೆಯ ಎಸಕವೋ ?

ಇಂತೀ ಗುಣವೊಂದರಿಂದೊಂದೊಂದ ಕಂಡು ಕಾಣಿಸಿಕೊಂಬ
ಮನೋನಾಥನ ಅನುವ ವಿಚಾರಿಸಿ
ಮನ ಮನನೀಯ ಭಾವ ಭಾವನೆ
ಧ್ಯಾನ ಪ್ರಮಾಣು ಪೂಜೆ ವಿಶ್ವಾಸ ಇವನರಿದುದು ಅರಿಕೆ.
ಇಂತಿವನೆಲ್ಲವನೂ ತೆರದರಿಶನದಿಂದರಿದು
ಬಿಟ್ಟುದ ಮುಟ್ಟದೆ, ಮುಟ್ಟಿದುದ ಮುಟ್ಟಿ
ತನ್ನಷ್ಟ ಉಭಯಭ್ರಾಂತು ಹುಟ್ಟುಗೆಟ್ಟಲ್ಲಿ
ಕಮತೇಶ್ವರಲಿಂಗವು ತಾನಾದ ಶರಣ. || ೭ ||

೨೪೯

ಶುದ್ಧಾಧ್ವವಳವಟ್ಟ ಯೋಗಿಯೇ ಪರಮಗುರು.
ಶರಣರ ಮನವಿರ್ದಂತಿರ್ದಲ್ಲಿಯೆ ಇರಬಲ್ಲಡೆ ಪರಮನೇ ಲಿಂಗ.
ಶರಣೈಕ್ಯನುಭಾವವನು ಕೂಡಿದಾತನೇ ಪರಮ ವಿರತ.
ಶರಣ ಸುಮನ ಸುಮ್ಮಾನದೊಳಿರಬಲ್ಲಡಾತನೇ
ಕಮತೇಶ್ವರಲಿಂಗಕ್ಕೆ ಭಕ್ತನಯ್ಯಾ, ಚೆನ್ನಬಸವಣ್ಣ. || ೮ ||

■ ■

## ಬಾಹೂರ ಬೊಮ್ಮಣ್ಣನ ವಚನ

೨೫೦

ಅಗ್ನಿಯ ಅಡಕವ, ನೀರಿನಲ್ಲಿ[ಯ] ಸಾರವ
ನಿರವಯದ ಹೊರೆಯ ಭೇದಿಸಿ ಕಾಬಂತೆ
ಅಗ್ನಿಗೆ ಮಥನದಿಂದ, ನೀರಿನ ಸಾರಕ್ಕೆ ಮಧುರದಿಂದ
ನಿರವಯದ ಹೊರೆಯಕ್ಕೆ ತನ್ನರಿವಿನ ಭೇದದಿಂದ
ಕಾಣಿಸಿಕೊಂಬುದು ತ್ರಿವಿಧಲಿಂಗಭೇದ, ಪ್ರಾಣಲಿಂಗಿಯ ಸಂಗ.
ಈ ಗುಣ ಸಂಗನಬಸವಣ್ಣನ ಸುಸಂಗ.
ಬ್ರಹ್ಮೇಶ್ವರಲಿಂಗವ ಕೂಡುವ ಕುರುಹಿನ ನಿರಂಗ. ||೧||

೨೫೧

ಅಪರಾಧವ ಮಾಡಿದ ಭಟ ಅರಸಿಂಗೆ ಸಜ್ಜನನಪ್ಪನೆ ?
ವ್ರತಭ್ರಷ್ಟ, ನೇಮಕ್ಕೆ ಹಾನಿಯಾದವ.
ನಿತ್ಯಕೃತ್ಯವೆಂದು ಹಿಡಿದು ಬಿಟ್ಟವ.
ತ್ರಿವಿಧಮಲವನೊಲ್ಲೆನೆಂದು ತೊಟ್ಟವ.
ಇಂತೀ ಕಷ್ಟಗುಣದಲ್ಲಿ ನಡೆವ ದೃಷ್ಟಗಳ್ಳರ ನೋಡಾ.
ಇದು ಬಾಯೊಳಗಣ ಹುಣ್ಣು ಹೇವರಿಸಿದ ಮತ್ತೆ
ಇನ್ನಾವ ಠಾವಿನಲ್ಲಿ ನುಂಗುವ ?

ಈ ಹೇಹ[ಯ]ವ ಬಿಡಿಸಾ ಎನಗೆ ಸಂಗನಬಸವಣ್ಣಾ.
ಬ್ರಹ್ಮೇಶ್ವರಲಿಂಗವಿಪ್ಪ ಠಾವ ತೋರಾ. || ೨ ||

೨೫೨

ಅರಿದೆ ಮರೆದೆನೆಂಬನ್ನಕ್ಕ ಭಕ್ತಿವಿಶ್ವಾಸಭಾವಿಯಲ್ಲ.
ಇನ್ನರಿಯಲಿಲ್ಲ, ಮುಂದೆ ಒಂದು ಕುರುಹಿಲ್ಲ
ಎಂಬನ್ನಕ್ಕ ಪರವಸ್ತುಭಾವಿಯಲ್ಲ.
ನಾನೆಂಬನ್ನಕ್ಕ ತಾನಿದ್ದು ಮುಂದೆ ಏನೂ ಇಲ್ಲವೆಂಬುದು ನಿಜವೆ ?
ತಾನೆಂಬುದನಳಿದು ಮುಂದೆ ಏನೂ ಇಲ್ಲಾಯೆಂಬುದು ನಿಜವಾಗಿ
ಅದು ನಿರ್ಭಾವವಾದುದು ಸಂಗನಬಸವಣ್ಣನ ಐಕ್ಯ.
ಬ್ರಹ್ಮೇಶ್ವರಲಿಂಗದ ಕುರುಹು ನಾಮನಷ್ಟ. || ೩ ||

೨೫೩

ಅಹಂಕಾರಿಗೆ ಗುರುಭಕ್ತಿಯಿಲ್ಲ.
ಪರಸೇವೆಯುಳ್ಳವಂಗೆ ಲಿಂಗಪೂಜೆಯಿಲ್ಲ.
ಋಣಾನುಸಂಬಂಧಿಗೆ ಮಾಟದ ಮರ್ಮವಿಲ್ಲ.
ಇಂತೀ ತ್ರಿವಿಧಭೇದದ ಕೂಟವನರಿತು
ಸಂಗನಬಸವಣ್ಣನ ಆಟದಂತೆ
ಬ್ರಹ್ಮೇಶ್ವರಲಿಂಗದಲ್ಲಿ ಕೂಟಸ್ಥನಾಗಬೇಕು. || ೪ ||

೨೫೪

ಆತ್ಮ ಒಂದೆಂದಲ್ಲಿ, ಇಂದ್ರಿಯಂಗಳು ಹಲವು ತೆರನಾದವು ನೋಡಾ.
ವಾಯು ಒಂದೆಂದಡೆ, ಒಂಬತ್ತು ಸಂಧಿಸಿದವು ನೋಡಾ.
ಇಂದ್ರಿಯ ಒಂದೆಂದಡೆ, ನಾಲ್ಕು ಸಂದಣಿಸಿದವು ನೋಡಾ.
ಮದ ಒಂದೆಂದಡೆ, ಏಳು ಸಂಭ್ರಮಿಸುತಿವೆ ನೋಡಾ.
ಕಳೆ ಒಂದೆಂದಡೆ, ಹದಿನೈದು ಹಿಂಗದಿವೆ ನೋಡಾ.
ಇಂತೀ ಸ್ಥೂಲತನು ಒಂದೆಂದಡೆ, ಸೂಕ್ಷ್ಮಕಾರಣ ದ್ವಂದ್ವವಾಗಿವೆ ನೋಡಾ.
ಜೀವ ಒಂದೆಂದಡೆ, ಪರಮಾತ್ಮನೆಂದು ತ್ರಿವಿಧ ಸಂಗವಾಗಿದೆ ನೋಡಾ.
ಅರಿದೆನೆಂಬಲ್ಲಿ ಹಿಂದೊಂದು ಮರವೆ, ಮರೆದೆನೆಂಬಲ್ಲಿ ಮುಂದೊಂದರಿವು.
ಇಂತೀ ದಂಪತಿ ಸಂಗವುಳ್ಳನ್ನಕ್ಕ ಏನನಹುದೆಂಬೆ, ಏನನಲ್ಲಾ ಎಂಬೆ !
ನುಡಿದಡೆ ಸಮಯಕ್ಕೆ ದೂರ, ಸುಮ್ಮನಿದ್ದಡೆ ಸ್ವಾನುಭಾವಕ್ಕೆ ದೂರ.
ಆರೆಂದಡೂ ಎನಲಿ, ಆವ ಸ್ಥಲದಲ್ಲಿ ನಿಂದಡೂ ಭಕ್ತಸ್ಥಲವೆ.

ವಸ್ತುವ ನೆಮ್ಮುವುದಕ್ಕೆ ವಿಶ್ವಾಸ.
ಇದು ಸಂಗನಬಸವಣ್ಣನ ಕಟ್ಟು, ಬ್ರಹ್ಮೇಶ್ವರಲಿಂಗವ ಮುಟ್ಟುವ ಗೊತ್ತು. ||೫||

೨೫೫

ಆರುಸ್ಥಲದಲ್ಲಿ ನಿಂದು ನಿಜವಸ್ತುವ ಭೇದಿಸಿ ಕಂಡೆಹೆನೆಂದಡೆ
ಆ ಭಕ್ತನ ಭಕ್ತ, ಆ ಮಾಹೇಶ್ವರನ ಮಾಹೇಶ್ವರ, ಆ ಪ್ರಸಾದಿಯ ಪ್ರಸಾದಿ,
ಆ ಪ್ರಾಣಲಿಂಗಿಯ ಪ್ರಾಣಲಿಂಗಿ, ಆ ಶರಣನ ಶರಣ, ಆ ಐಕ್ಯನ ಐಕ್ಯ.
ಇಂತಿವರೊಳಗಿನಲ್ಲಿ ಮಿಶ್ರಭೇದಂಗಳಾಗಿ, ಸ್ಥಲನಾಮವಾಗಿ,
ವರ್ಣಭೇದವನಿಟ್ಟು, ಬೀಜದೊಳಗೆ ಬೇರು ಶಾಖೆ ಪರ್ಣ ಅಂಕುರ ಫಲ
ಮುಂತಾದ ಭೇದಂಗಳೆಲ್ಲವೂ ಬೀಜದಲ್ಲಿ ಅಡಗಿಪ್ಪಂತೆ
ಚಿತ್ತುವಿನಲ್ಲಿ ಸುಚಿತ್ತದಲ್ಲಿ ಅಡಗಿಪ್ಪ ಏಕವಸ್ತುವ
ಹಲವು ತೆರದಲ್ಲಿ ಹೊಲಬಿಗನಾಗಿ ಕಂಡೆಹೆನೆಂದಡೆ
ಒಂದೇ ಹೊಲಬಿನ ವಿಶ್ವಾಸದಿಂದಲ್ಲದೆ ಆಗದು.
ಅದು ಹಲವು ಕುಂಭದಲ್ಲಿ ತೋರುವ ವರುಣನ ಕಿರಣದಂತೆ.
ವಿಶ್ವಮುಖದಿಂದ ಕಂಡೆಹೆನೆಂದಡೆ ವಿಶ್ವಾಸದಿಂದಲ್ಲದೆ ಆಗದು.
ಆ ವಿಶ್ವಾಸ ಉಭಯವನಳಿದಲ್ಲಿ ಷಡುಸ್ಥಲಭರಿತ, ಸರ್ವಸ್ಥಲ ಸಂಪೂರ್ಣ.
ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗವನು
ಅರಿತವಂಗಲ್ಲದೆ ಸಾಧ್ಯವಲ್ಲ ನೋಡಾ. ||೬||

೨೫೬

ಆವ ಭಕ್ತಿ ಸನ್ಮಾರ್ಗದಲ್ಲಿ ನಡೆವಲ್ಲಿ ಭಕ್ತಂಗೆ ಗುರುಭಕ್ತಿ,
ಮಾಹೇಶ್ವರಂಗೆ ಲಿಂಗಭಕ್ತಿ, ಪ್ರಸಾದಿಗೆ ಜಂಗಮಭಕ್ತಿ,
ಪ್ರಾಣಲಿಂಗಿಗೆ ಸರ್ವ ಅವಧಾನ, ಶರಣಂಗೆ ಪರಿಪೂರ್ಣತ್ವ,
ಐಕ್ಯಂಗೆ ಇಂತೀ ಐದು ಗುಣಲೇಪ.
ಆರೆಂಬುದ ಮೀರಿ ತೋರಿದಲ್ಲಿ ಷಡುಸ್ಥಲ ಶುದ್ಧ
ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗದಾಟ. ||೭||

೨೫೭

ಆವ ಸ್ಥಲ ಸಾಧಿಸಿ ಬಂದು ನಿಂದಡೂ
ಭಾವಶುದ್ಧಾತ್ಮವಾಗಿ ವೇಧಿಸುವುದೊಂದೆ ವಸ್ತು.
ಅದು ಭಕ್ತಿಯ ಬೇರು, ಸದಾಶ್ರದ್ಧೆಯ ಶಾಖೆ,
ವಿಶ್ವಾಸದ ಫಲ, ನಿಜತತ್ವದ ರಸ, ಸ್ವಯದ ಸಾದು.
ಅದು ಸಂಗನಬಸವಣ್ಣನಿಂದ ಬಂದ ಬೆಳೆ,
ಬ್ರಹ್ಮೇಶ್ವರಲಿಂಗದಲ್ಲಿ ಐಕ್ಯವಾಯಿತ್ತು. ||೮||

೨೫೮

ಆವುದೊಂದು ಕರ್ಮಂಗಳ ವ್ಯಾಪಾರಿಸಿ ಮಾಡುವಲ್ಲಿ
ಸತ್ವಕ್ಕೆ ತಕ್ಕ ಸಾಮರ್ಥ್ಯವನರಿತು
ಆ ವ್ರತ ಕ್ರೀ ವರ್ತನಂಗಳ ಹಿಡಿದಲ್ಲಿ
ಹಿಂದಣ ನಗೆಗೆಡೆ, ಮುಂದಣ ಹಾಸ್ಯರಸಕ್ಕೆ ಒಳಗಲ್ಲದೆ
ನುಡಿದ ಮಾತಿಂಗೆ ನಡೆ ಶುದ್ಧವಾಗಿ,
ಆ ನಡೆವ ನಡೆಗೆ ಕ್ರೀ ಶುದ್ಧವಾಗಿ,
ಆ ಕ್ರೀಯಲ್ಲಿ ವ್ರತಭಂಗವಿಲ್ಲದೆ ಇಪ್ಪುದು, ಸದ್ಭಕ್ತನ ಸಂಬಂಧ.
ಈ ಗುಣ ಸಂಗನಬಸವಣ್ಣನ ಶ್ರದ್ಧೆ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ಕ್ರಿಯಾಮಾರ್ಗ. ||೯||

೨೫೯

ಉಪಾಧಿಕಂಗೆ ಆವ ವ್ರತ, ತ್ರಿವಿಧ ಭಕ್ತಿ ಏನೂ ಇಲ್ಲ.
ನಿರುಪಾಧಿಕಂಗೆ ಅವಾವ ವ್ರತ, ತ್ರಿವಿಧಭಕ್ತಿ ಉಂಟು.
ಸ್ವಯಾನುಭಾವಿಗೆ ಇದಿರ ದಯೆ ದಾಕ್ಷಿಣ್ಯ
ತನ್ನಯ ಅರಿವಿನ ವಿಲಾಸಿತದ ಲಕ್ಷ.
ಸರ್ವಗುಣದಲ್ಲಿ ಸನ್ನದ್ಧನಾಗಿಪ್ಪುದು ಸ್ವಯಾನುಭಾವದ ಸಂಬಂಧ.
ಇಂತೀ ಖಂಡಿತ ಅಖಂಡಿತ ಪರಿಪೂರ್ಣತ್ವ ವಿಭೇದವಿಲ್ಲದೆ
ಪೂರ್ಣತ್ವವಾಗಿ ಇಪ್ಪುದು ಸಂಗನಬಸವಣ್ಣನ ಸತ್ಕ್ರೀಮಾರ್ಗ,
ಬ್ರಹ್ಮೇಶ್ವರಲಿಂಗವನರಿದೆಹೆನೆಂದು
ಉಪಾಧಿಕೆ ನಿರುಪಾಧಿಕೆಯೆಂಬುದನರಿದು ಸ್ವಯವ ಕೂಡಿಹೆನೆಂದು. ||೧೦||

೨೬೦

ಎಲೆಗಳೆದ ವೃಕ್ಷಕ್ಕೆ ತಳಿರ ಕೊನರಲ್ಲದೆ
ಬೇರು ಸಾರಗೆಟ್ಟು ನಷ್ಟವಾದ ತರುವಿಂಗೆ ಮತ್ತೆ ಅಂಕುರವುಂಟೆ ?
ತ್ರಿವಿಧಮಲಕ್ಕೆ ದೂರಸ್ಥನಾಗಿ ಅಪೇಯವೆಂದು ಬಿಟ್ಟಲ್ಲಿ
ಮತ್ತರಿದು ಹಿಡಿದೆಹೆನೆಂದಡೆ ಪೇಯವಪ್ಪುದೆ ?
ತಳನನಗೆದು ಮೇಲನರಿಯದೆ ಬೀಳಿಸಿಕೊಂಬವನಂತೆ
ತನ್ನ ಊಣೆಯವ ತಾನರಿಯದೆ
ಮೂಕೊರತಿ ಮೂಕುತಿಯ ಮಣಿಯ
ತನಗೆಂದು ವಿಚಾರಿಸುವಂತೆ
ಇಂತೀ ನಿರ್ವಾಣ ಬರುದೊರೆವೋಯಿತ್ತಲ್ಲಾ ಸಂಗನಬಸವಣ್ಣಾ.

ಇವರುವನರಿಯದಂತೆ
ಬ್ರಹ್ಮೇಶ್ವರಲಿಂಗಕ್ಕೆ ಉರಿಯದೆ ಹೋದರಲ್ಲಾ. ||೧೧||

೨೬೧

ಕಲ್ಲರೂಪು ಕಬ್ಬ ಮೆಲುವಾಗ,
ಎತ್ತಿದ ವಿಮಾನದಲ್ಲಿಪ್ಪ ಸದ್ಗುರು ಬರುವಾಗ,
ಹೂಳಿದ ವೃಷಭ ಕಲೆವಾಗ,
ಇಂತಿವು ಭಾವದ ಬಲ್ಮೆ, ಸತ್ಯದ ಚಿತ್ತ, ಚಿತ್ತದ ಹೆಚ್ಚುಗೆ.
ಇಂತೀ ಗುಣ ಸಂಗನಬಸವಣ್ಣನ ಉತ್ಸಾಹ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ನಿಶ್ಚಯದ ವಿಶ್ವಾಸ. ||೧೨||

೨೬೨

ಕಾದ ಲೋಹದ ಮೇಲೆ ನೀರನೆರೆದಡೆ
ನೀರ ಕುಡಿದುದು ಕಾಹೊ, ಕಬ್ಬುನವೊ ?
ಎಂಬುದನರಿತಲ್ಲಿ ಅಂಗಲಿಂಗಸಂಬಂಧಿ.
ಕ್ಷೀರ ಉಕ್ಕುವಲ್ಲಿ ಆರೈದು ನೀರನೆರೆದಡೆ
ಆ ನೀರ ಕುಡಿದುದು ಹಾಲೊ, ಹಂಚೊ ?
ಎಂಬುದ ಕಡೆಗಾಣಿಸಿದಲ್ಲಿ ಕ್ರೀ ಜ್ಞಾನ ಆತ್ಮಲಿಂಗಸಂಬಂಧಿ.
ಇಂತೀ ಉಭಯದ ಒಳಗನರಿತಲ್ಲಿ
ಕ್ರೀಗೆ ವರ್ತನೆ, ಅರಿವಿಂಗೆ ಕೂಟ.
ಈ ಗುಣ ಸಂಗನಬಸವಣ್ಣನ ಆಟ.
ಬ್ರಹ್ಮೇಶ್ವರಲಿಂಗದ ಒಳಗನರಿದವರಾಟ. ||೧೩||

೨೬೩

ಕಾಯ ತೊಟ್ಟಿನಲ್ಲಿ ನೀರ ಬಿಟ್ಟಡೆ
ಕಾಯಿ ನಿಂದುದುಂಟೆ ಬೇರೊಣಗಿದ ಮತ್ತೆ ?
ಇಂತೀ ಮೂಲಭೇದದಿಂದ ಶಾಖೆ ಪರ್ಣ ಫಲವಲ್ಲದೆ
ಮೊದಲಿಗೆ ನಷ್ಟಲಾಭಕ್ಕೆ ದಿನವುಂಟೆ ?
ಜ್ಞಾನಹೀನನು ಆವ ಸ್ಥಲವ ನೆಮ್ಮಿ ಮಾತನಾಡಿದಡೂ
ಷಡುಸ್ಥಲದಲ್ಲಿ ಭಾವಶುದ್ಧವಾಗಿಪ್ಪನೆ ?
ಇದು ಕಾರಣದಲ್ಲಿ ಗುರುವಾಜ್ಞೆಯ ಮೀರದೆ
ಶಿವಲಿಂಗಪೂಜೆಯ ಮರೆಯದೆ
ಜಂಗಮಸೇವೆಯಲ್ಲಿ ಸನ್ನದ್ಧನಾಗಿ

ಆವುದಾನೊಂದು ವ್ರತವೆಂದು ಹಿಡಿದು
ಅದ್ವೈತವನರಿದೆನೆಂದು ಬಿಡದೆ
ನಿಂದನಿಂದ ಸ್ಥಲಕ್ಕೆ ನಿಬದ್ಧಿಯಾಗಿ ನಿಂದಲ್ಲಿಯೆ
ಲಿಂಗಸಂಗ ಸಂಗನಬಸವಣ್ಣನ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವನರಿದುದು. ॥ ೧೪ ॥

೨೬೪

ಕೃಷಿಯಿಂದ ಮುಂದಣ ಫಲವ ಕಾಬಂತೆ
ಅಸಿಕಲಿಯಿಂದ ಮುಂದಣ ಅರಿಬಲವ ಗೆಲುವಂತೆ
ಸತ್ಕ್ರೀಮಾರ್ಗ ಮರ್ಮ ಧರ್ಮಂಗಳನರಿದು
ಮುಂದಣ ಆಸುರ ಕರ್ಮಂಗಳ ತಮ ಬಂಧಂಗಳನೀಸಿ
ಗೆಲುವುದಕ್ಕೆ ಇಷ್ಟಲ್ಲದಿಲ್ಲ.
ಇದು ವಸ್ತುಪೂಜಕನ ವಿಶ್ವಾಸ, ಸಂಗನಬಸವಣ್ಣನ ಸಂಬಂಧ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ವಿಶ್ವಾಸಭಿತ್ತಿ. ॥ ೧೫ ॥

೨೬೫

ಕೊರಡು ಕೊನರ್ವೊಡೆದಲ್ಲಿ, ಬರಡು ಹಯನಾದಲ್ಲಿ
ಚಿತ್ರದ ಬೊಂಬೆ ನಿಜಕರ್ತೃರೂಪಾಗಿ ಬಂದಲ್ಲಿ
ಅವು ಹಾಹೆಯ ದೃಷ್ಟವೋ, ವಿಶ್ವಾಸಿಯ ಚಿತ್ತವೋ ?
ಇದು ಭಕ್ತಿಯ ಹೊಲಬಿಗೆ ಮುಖ್ಯ.
ಸಂಗನಬಸವಣ್ಣನ ಸತ್ಯ, ಬ್ರಹ್ಮೇಶ್ವರಲಿಂಗವ ಕೂಡುವ ಕೃತ್ಯ. ॥ ೧೬ ॥

೨೬೬

ಗುರು ಅಳಿದಲ್ಲಿ ಗುರುಪಟ್ಟವೆಂದು ಕಟ್ಟಿ
ಪರಮ ಗುರುವೆಂದು ಶರಣೆಂಬಲ್ಲಿ ಲಿಂಗಬಾಹ್ಯವಾಗಿ
ಅಂಗವ ಹರಿದುಹೋದಲ್ಲಿ ಮತ್ತೊಂದು ಲಿಂಗ ಉಂಟೆಂದು
ಕಟ್ಟಿಕೊಳ್ಳರೇತಕ್ಕೆ ?
ಗುರು ಪೂರ್ವ, ಲಿಂಗ ಉತ್ತರವೆ ?
ಗುರು ಆದಿ, ಲಿಂಗ ಅನಾದಿಯೇ ? ಇದು ಕಾರಣದಲ್ಲಿ
ಗುರುಭಕ್ತಿ ಅರಿಬಿರಿದು, ಲಿಂಗಭಕ್ತಿ ಎತ್ತಲಾನು
ಒಬ್ಬ ಜಂಗಮಭಕ್ತಿಗೆ ಸಂಗನಬಸವಣ್ಣನಲ್ಲದಿಲ್ಲ
ಬ್ರಹ್ಮೇಶ್ವರಲಿಂಗ ಸಾಕ್ಷಿಯಾಗಿ. ॥ ೧೭ ॥

೨೬೭

ಗುರುನಿಷ್ಠೆ ಲಿಂಗನಿಷ್ಠೆ ಜಂಗಮನಿಷ್ಠೆ.
ಈ ತ್ರಿವಿಧ ನಿಷ್ಠೆಯಲ್ಲಿ ಏಕಾಂಗಲಿಂಗನಿಷ್ಠೆ
ವೀರಧೀರಂಗಲ್ಲದಾಗದು.
ಇದು ಸಂಗನಬಸವಣ್ಣನಿಂದ ಬಂದ ಸಂತತಿಗಲ್ಲದಾಗದು.
ಬ್ರಹ್ಮೇಶ್ವರಲಿಂಗವನರಿವುದಕ್ಕೆ
ತ್ರಿಗುಣಸಂದೇಹಿಗಳಿಗೆ ವಸ್ತು ಸಂಧಿಸದು ನೋಡಾ. ||೧೮||

೨೬೮

ಗುರು ಭಕ್ತನಾದಲ್ಲಿ ಗುರುವಳಿದು ತಾನುಳಿದಡೆ ಗುರು ಭಕ್ತನಲ್ಲ.
ಲಿಂಗ ಭಕ್ತನಾದಡೆ ಜಾಗ್ರಜಾಹೆಗಳಲ್ಲಿ ತನ್ನಂಗವ ಬಿಟ್ಟು
ಲಿಂಗ ಹಿಂಗಿದಲ್ಲಿಯೆ, ಆತ್ಮ ಒಡಗೂಡಿದಲ್ಲಿಯೆ ಲಿಂಗ ಭಕ್ತನಲ್ಲ.
ಜಂಗಮ ಭಕ್ತನಾದಡೆ ಕಳವು ಹಾದರ ದುರ್ಗುಣದಿಂದ
ಕಡಿಯಿಸಿಕೊಂಬಲ್ಲಿ, ಬಿಡಿಸದೆ ತಾನಡಗಿ
ಅರಿಯದಂತಿದ್ದಾಗವೆ ಜಂಗಮ ಭಕ್ತನಲ್ಲ.
ಇಂತೀ ತ್ರಿವಿಧ ಭಾವಂಗಳಲ್ಲಿ
ಘಟದ ಸಂದನಳಿದವಂಗಲ್ಲದೆ ತ್ರಿವಿಧಭಕ್ತಿಯಿಲ್ಲ.
ಈ ಗುಣ ಸಂಗನಬಸವಣ್ಣಂಗಲ್ಲದೆ ಸಾಧ್ಯವಿಲ್ಲ.
ಬ್ರಹ್ಮೇಶ್ವರಲಿಂಗವನರಿದವರಿಗೂ ಅಸಾಧ್ಯ ನೋಡಾ. ||೧೯||

೨೬೯

ಗುರುಭಕ್ತಿ ಉಂಟು, ಲಿಂಗಭಕ್ತಿ ಉಂಟು.
ಜಂಗಮಭಕ್ತಿ ಎತ್ತಲಾನೆ ಉಂಟು.
ತನ್ನನರಿದು ಇದಿರ ಕಾಬ ಜ್ಞಾನಭಕ್ತಿ
ಚೆನ್ನಬಸವಣ್ಣಂಗೆ ಸಾಧ್ಯವಾಯಿತ್ತು ನೋಡಾ.
ಅದು ಅರಿದರುವಿಂಗೆ ಮುನ್ನವೆ ಕುರುಹಿಟ್ಟ ನಿಜ.
ಆ ಗುಣ ಸಂಗನಬಸವಣ್ಣ ಬಂದ ಹಾದಿ, ಬ್ರಹ್ಮೇಶ್ವರಲಿಂಗದಲ್ಲಿಗಾಗಿ. ||೨೦||

೨೭೦

ಗುರುವಿನಲ್ಲಿ ಅನುವನರಿತವಂಗೆ
ಮತ್ತೆ ಗುರು ನಿರೂಪವೆಂಬುದಿಲ್ಲ.
ಪ್ರಾಣವೆ ಲಿಂಗವಾದವಂಗೆ ನೆನಹಿಂಗೆ ಎಡೆದೆರಪಿಲ್ಲ.

ಸರ್ವದಯೆ ಸಂಪೂರ್ಣನಾದವಂಗೆ
ಇಕ್ಕಿಹೆ ಎರೆದಿಹೆನೆಂಬ ತೋಟಿಯ ತೊಡಕಿಲ್ಲ.
ಇಂತಿವನೊಳಗನರಿದು ವೇಧಿಸುವನ್ನಕ್ಕ
ಗುರುವಿನ ಆಜ್ಞೆ, ಲಿಂಗದ ಪೂಜೆ,
ಮಾಟಕೂಟದ ಬೇಟವ ಬಿಡಲಿಲ್ಲ.
ಇದು ಸಂಗನಬಸವಣ್ಣನಾಟ, ಬ್ರಹ್ಮೇಶ್ವರಲಿಂಗದ ಕೂಟ. ||೨೦||

೨೭೧

ಚಂದ್ರಕಾಂತದ ಶಿಲೆಯಲ್ಲಿ ಬಿಂದುವಿದ್ದಡೆ
ಹಿಂಡಿ ಹಿಳಿದಡೆ ಬಂದುದುಂಟೆ ಆ ಬಿಂದು ?
ವರುಣ ಶಿಲೆಯಲ್ಲಿ ಉರುಹಿ ನೋಡಲಿಕ್ಕೆ
ಉರಿದುದುಂಟೆ ಅನಲ ?
ಅವು ತಮ್ಮ ಒಲವರದ ಸಾಮ್ಯಕ್ಕಲ್ಲದೆ ಫಲಿಸುವುದಿಲ್ಲ.
ಇಂತೀ ತೆರದಂತೆ ಕ್ರೀ ಜ್ಞಾನ ಎಲ್ಲವ ಬಲ್ಲೆನೆಂದು
ಅಡ್ಡವಾಯ್ದು ಅಲ್ಲಲ್ಲಿ ನುಡಿದಡೆ
ನಿಜವಸ್ತು ಸಲ್ಲೀಲೆಯಲ್ಲಿಪ್ಪನೆ ?
ಶ್ರದ್ಧೆ ಸನ್ಮಾರ್ಗಿಗಳಲ್ಲಿಯಲ್ಲದೆ ಗೆಲ್ಲಗೂಳಿಗಳಲ್ಲಿಯಿಲ್ಲ.
ಸಂಗನಬಸವಣ್ಣ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವು ಅವರಲ್ಲಿ ಇಲ್ಲವಾಗಿ. ||೨೨||

೨೭೨

ತ್ಯಾಗಾಂಗನಾಗಿ ಕೊಡುತ್ತಿದ್ದಲ್ಲಿ
ಭೋಗಾಂಗನಾಗಿ ಸುಖಿಸುತ್ತಿದ್ದಲ್ಲಿ
ಯೋಗಾಂಗನಾಗಿ ವಾಯುದ್ವಾರ ಭೇದಂಗಳನರಿತು
ಧ್ಯಾನ ಧಾರಣ ಸಮಾಧಿಗಳಲ್ಲಿದ್ದಡೂ ಒಂದು ಕುರಿತು ಲಕ್ಷಿಸಿ
ವಸ್ತು ಇದೇನೆಂದು ವಿಶ್ವಾಸದಿಂದಲ್ಲದಾಗದು.
ಹಿಂದಕ್ಕಾದ ದೇವಪದವಂತರು
ಮುಂದಕ್ಕೆ ಅರಿದು ಕೂಡುವ ಅರುಹಿರಿಯ ಶರಣತತಿಗಳೆಲ್ಲರು
ವಿಶ್ವಾಸದಿಂದಲ್ಲದೆ ದೃಷ್ಟವ ಕಾಣರು.
ಇದು ಕಾರಣ, ಬಾಹ್ಯಕರ್ಮ ಅಂತರಂಗ ಶುದ್ಧ
ನಿರವಯವೆಂಬುದೊಂದು ಕುರುಹಿನ ನೆಮ್ಮುಗೆ
ಉಂಟಹನ್ನಕ್ಕ ವಿಶ್ವಾಸಬೇಕು.

ಇದು ಸಂಗನಬಸವಣ್ಣ ಕೊಂಡು ಬಂದ ಲಿಂಗದ ಬಟ್ಟೆ.
ಬ್ರಹ್ಮೇಶ್ವರಲಿಂಗವೆಂಬ ವಸ್ತುವ ಕೂಡುವ ದೃಷ್ಟ. ||೨೩||

೨೭೩

ನಾನಾ ಭೇದಂಗಳಲ್ಲಿ ಷಡ್ದರುಶನವ ಹೊಕ್ಕು ತಿಳಿದಡೂ
ಶ್ರುತಿ ವೇದ ಶಾಸ್ತ್ರ ಪುರಾಣ ಆಗಮಂಗಳ ಕಲಿತಡೂ
ಮೂರುಮಲದ ಭೇದವನರಿತು
ಬಿಡುಮುಡಿಯಲ್ಲಿ ಕಳೆದುಳಿಯಬೇಕು. ಇದು ಪ್ರಸಿದ್ಧವಪ್ಪ ತೆರ.
ಇದು ಸಂಗನಬಸವಣ್ಣನ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವ ಕೂಡಬೇಕು. ||೨೪||

೨೭೪

ನಿಂದ ನೆಲೆಯ ನೀರಿನಂತೆ
ಮರ ಶಿಲೆಯಲ್ಲಿ ಸಂಧಿಸಿ ನಿಂದ ಪಾವಕನಂತೆ
ಕರಂಡದಲ್ಲಿ ಬಂಧಿಸಿ ನಿಂದ ಸುವಾಸನೆಯಂತೆ
ಈ ಅಂಗದಲ್ಲಿ ನಿಂದ ನಿಜಲಿಂಗಾಂಗಸಂಗಸಂಬಂಧ.
ಈ ಗುಣ ಸಂಗನಬಸವಣ್ಣಂಗೆ ಸಂಬಂಧವಾಯಿತ್ತು.
ಬ್ರಹ್ಮೇಶ್ವರಲಿಂಗವು ಅವರಿಗೆ ಒಳಗಾದ. ||೨೫||

೨೭೫

ಬಯಲು ಬೆಳಗುಳ್ಳನ್ನಕ್ಕ
ಮುಂದೊಂದು ಕುರುಹಿನ ಕುಲ ಬಿಡದು.
ಕುರುಹುಳ್ಳನ್ನಕ್ಕ ಅರಿದೆಹೆನೆಂಬ ಭಾವ.
ಆ ಅರಿಕೆಯೆಂಬುದು ವಿಶ್ವಾಸದಿಂದಲ್ಲದೆ ಕಾಣಬಾರದು.
ಇದು ಸಂಗನಬಸವಣ್ಣ ಸಂಧಿಸಿದ ಸಂಬಂಧ.
ಬ್ರಹ್ಮೇಶ್ವರಲಿಂಗವ ವಿಶ್ವಾಸದಿಂದಲ್ಲದೆ ಸಂಬಂಧಿಸಬಾರದು. ||೨೬||

೨೭೬

ಬಾಗಿಲವಾಡವ ಬಿಗಿಸಿ ಬಂಧದಲ್ಲಿಕ್ಕಿದಡೂ
ಮರೆಯ ಭೇದವಲ್ಲದೆ ನಿಳಯಕ್ಕೆ ಹೋಹುದ ತಪ್ಪದು.
ತತ್ವಂಗಳ ವಿಚಾರಿಸಿ, ಸ್ಥಲಂಗಳ ವಿಸ್ತರಿಸಿ
ಪರಿಪೂರ್ಣ ಪೂರ್ಣಂಗಳೆಂಬಲ್ಲಿ ವಿಶ್ರಮಿಸಿ
ಅರಿವುದೊಂದು ಅರುಹಿಸಿಕೊಂಬುದೊಂದು.

ಉಭಯವನೇಕೀಕರಿಸಿ ನಿಂದಾತನೆ ಪರಮಸುಖಿ.
ಇದು ಸಂಗನಬಸವಣ್ಣನಿಕ್ಕಿದ ಭಿತ್ತಿ.
ಬ್ರಹ್ಮೇಶ್ವರಲಿಂಗದಲ್ಲಿ ಎಯ್ದುವ ಸುಪಥದ ಪಥ. || ೨೭ ||

೨೭೭

ಬಾಯಿ ಮುಚ್ಚಿ ನಾಸಿಕದಲ್ಲಿ ಉಣಬಹುದೆ ?
ನಾಸಿಕವ ಮುಚ್ಚಿ ಬಾಯಲ್ಲಿ ವಾಸಿಸಬಹುದೆ ?
ಕಣ್ಣ ಮುಚ್ಚಿ ಕಿವಿಯಲ್ಲಿ ನೋಡಬಹುದೆ ?
ಕಿವಿಯ ಮುಚ್ಚಿ ಕಣ್ಣಿನಲ್ಲಿ ಕೇಳಬಹುದೆ ?
ಇಂತೀ ಇವಕೆ ಆತ್ಮ ಒಂದೆಂದಡೆ
ತಮ್ಮ ತಮ್ಮ ಸ್ವಸ್ಥಾನಂಗಳಲ್ಲಿ ಅಲ್ಲದೆ ದೃಷ್ಟವ ಕಾಣಬಾರದು.
ಆವ ಸ್ಥಲ ನೆಮ್ಮಿದಡೂ ಆ ಸ್ಥಲಕ್ಕೆ ವಿಶ್ವಾಸಬೇಕು.
ಇದು ಸಂಗನಬಸವಣ್ಣನ ಭಕ್ತಿ
ಬ್ರಹ್ಮೇಶ್ವರ ಲಿಂಗವನರಿವುದಕ್ಕೆ ಇಕ್ಕಿದ ಭಿತ್ತಿ. || ೨೮ ||

೨೭೮

ಬೀಜ ಹುಟ್ಟುವ ತತ್ಕಾಲವೆಂತೆಂದಡೆ:
ಹೊಯ್ದಿದ್ದ ಹೊಯಿಗಿಲದಲ್ಲಿಯೆ ಬೇರು ಬಿಟ್ಟು, ಸಸಿ ಬೆಳೆದು
ಎಲೆ ನೀಡಿ ಫಲ ಬೆಳೆದುದುಂಟೆ ?
ಸಕಲ ಸ್ಥಲ ಕುಳವನರಿತ ಬ್ರಹ್ಮ ತಾನೆಂದಡೆ
ಅರ್ಚನೆ ಅರತು, ಪೂಜೆ ನಿಂದು, ಸತ್ಯ ಕೆಟ್ಟು
ಭಕ್ತಿ ಹಾರಿದಲ್ಲಿ, ಆತ ನಿಜತತ್ವಜ್ಞನಪ್ಪನೆ ?
ಇದು ವಿಶ್ವಾಸದ ಭಿತ್ತಿ, ವಿರಕ್ತಿಯ ನಿಳಯ.
ಸಂಗನಬಸವಣ್ಣ ಭಕ್ತಿ ವಿರಕ್ತಿಗಿಕ್ಕಿದ ಕಟ್ಟು.
ಬ್ರಹ್ಮೇಶ್ವರಲಿಂಗವ ಮುಟ್ಟುವ ಮುಟ್ಟು. || ೨೯ ||

೨೭೯

ಭಕ್ತಂಗೆ ತ್ರಿವಿಧಮಲ ನಾಸ್ತಿಯಾಗಿರಬೇಕು.
ಮಾಹೇಶ್ವರಂಗೆ ಬಂಧ ಜಪ ನೇಮ ಕರ್ಮಂಗಳು ಹಿಂಗಿರಬೇಕು.
ಪ್ರಸಾದಿಗೆ ಆಯತ ಸ್ವಾಯತ ಸನ್ನಹಿತವೆಂಬುದ
ಸಂದೇಹಕ್ಕಿಕ್ಕದೆ ಸ್ವಯಸನ್ನದ್ಧವಾಗಿರಬೇಕು.
ಪ್ರಾಣಲಿಂಗಿಯಾದಡೆ ಬಂದು ಸೋಂಕುವ ಸುಗುಣ
ನಿಂದು ಸೋಂಕುವ ದುರ್ಗುಣ

ಉಭಯ ಸೋಂಕುವುದಕ್ಕೆ ಮುನ್ನವೆ
ಹಿಡಿವುದ ಹಿಡಿದು, ಬಿಡುವುದ ಬಿಟ್ಟು ಅರ್ಪಿಸಬೇಕು.
ಶರಣನಾದಲ್ಲಿ ಆಗುಚೇಗೆಯೆಂಬುದನರಿಯದೆ
ಸ್ತುತಿನಿಂದ್ಯಾದಿಗಳಿಗೆ ಮೈಗೊಡದೆ
ರಾಗವಿರಾಗವೆಂಬುದಕ್ಕೆ ಮನವಿಕ್ಕದೆ
ಜಿಹ್ವೆ ಗುಹ್ಯೇಂದ್ರಿಯಕ್ಕೆ ನಿಲುಕದೆ
ಮದಗಜದಂತೆ ಇದಿರನರಿಯದಿಪ್ಪುದು.
ಐಕ್ಯನಾದಲ್ಲಿ ಸುಗಂಧದ ಸುಳುಹಿನಂತೆ
ಪಳುಕಿನ ರಾಜತೆಯಂತೆ, ಶುಕ್ತಿಯ ಅಪ್ಪುವಿನಂತೆ
ಅಣೋರಣಿಯಲ್ಲಿ ಆವರಿಸಿ ತಿರುಗುವ ನಿಶ್ಚಯತನದಂತೆ
ಬಿಂಬದೊಳಗಣ ತರಂಗದ ವಿಸ್ತರದಂಗದಂತೆ
ಇಂತೀ ಷಟ್‌ಸ್ಥಲಕ್ಕೆ ನಿರ್ವಾಹಕವಾಗಿ
ವಿಶ್ವಾಸದಿಂದ ಸಂಗನಬಸವಣ್ಣನ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವನರಿದವರಿಗಲ್ಲದೆ ಸಾಧ್ಯವಲ್ಲ. ||೩೦||

೨೮೦

ಭಕ್ತಂಗೆ ಮಾಹೇಶ್ವರಸ್ಥಲ, ಪ್ರಸಾದಿಗೆ ಭಕ್ತಸ್ಥಲ.
ಮಾಹೇಶ್ವರಂಗೆ ಪ್ರಾಣಲಿಂಗಿಸ್ಥಲ, ಶರಣಂಗೆ ಪ್ರಸಾದಿಸ್ಥಲ.
ಪ್ರಾಣಲಿಂಗಿಗೆ ಐಕ್ಯಸ್ಥಲ, ಐಕ್ಯಂಗೆ ಭಕ್ತನ ವಿಶ್ವಾಸವನರಿತು
ಮಾಹೇಶ್ವರನ ಪ್ರಸನ್ನತೆಯ ಕಂಡು
ಪ್ರಸಾದಿಯ ಪರಿಪೂರ್ಣತ್ವವನರಿದು
ಪ್ರಾಣಲಿಂಗಿಯ ಉಭಯವ ತಿಳಿದು ನಿಂದುದ ಕಂಡು,
ಇಂತೀ ಚತುಷ್ಟಯ ಭಾವ ಏಕವಾಗಿ
ಶರಣನ ಸನ್ಮತದಲ್ಲಿ ಅಡಗಿ, ಒಡಗೂಡಿದಲ್ಲಿ
ಐಕ್ಯಂಗೆ ಬೀಜನಾಮ ನಿರ್ಲೇಪ, ಇಂತೀ ಸ್ಥಲಭಾವ.
ಪಶುವಿನ ಪಿಸಿತದ ಕ್ಷೀರವ, ಶಿಶುವಿನ ಒಲವರದಿಂದ ತೆಗೆವಂತೆ
ಆ ಕ್ಷೀರದ ಘೃತವ, ನಾನಾ ಭೇದಂಗಳಿಂದ ವಿಭೇದಿಸಿ ಕಾಬಂತೆ
ಭಕ್ತಂಗೆ ವಿಶ್ವಾಸ, ಮಾಹೇಶ್ವರಂಗೆ ಫಲ, ಪ್ರಸಾದಿಗೆ ನಿಷ್ಠೆ,
ಪ್ರಾಣಲಿಂಗಿಗೆ ಮೂರ್ತಿಧ್ಯಾನ, ಶರಣಂಗೆ ನಿಚ್ಚೈರಗು,
ಐಕ್ಯಂಗೆ ಈ ಐದು ಲೇಪವಾದ ನಿರ್ನಾಮ.
ಇಂತೀ ಷಟ್‌ಸ್ಥಲವ ನೆಮ್ಮಿ ಕಾಬುದು ಒಂದೆ ವಿಶ್ವಾಸ.

ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗವನು
ಅರಿದವನಿಗಲ್ಲದೆ ಸಾಧ್ಯವಲ್ಲ ನೋಡಾ. ||೩೧||

### ೨೮೧

ಭಕ್ತಂಗೆ ವಂದಿಸಿ ನಿಂದಿಸಿದಲ್ಲಿಯೆ ವಿಶ್ವಾಸ ಜಾರಿತ್ತು.
ವಿರಕ್ತಂಗೆ ಸುಗುಣ ದುರ್ಗುಣವ ಸಂಪಾದಿಸಿದಲ್ಲಿಯೆ
ವಿವೇಕ ಹೋಯಿತ್ತಯ್ಯಾ.
ಕಣ್ಣಿನಲ್ಲಿ ಮುಳ್ಳುಮುರಿದಂತೆ
ಚುಚ್ಚಿ ತೆಗೆಯಬಾರದು, ವೇದನೆ ಬಿಡದು.
ವರ್ತನೆಗೆ ಭಂಗ, ಸತ್ಯಕ್ಕೆ ದೂರ, ಈ ಸಮಯದ ಸಂಗ.
ಎನ್ನ ಗುಣದ ಕಷ್ಟವನಳಿವುದಕ್ಕೆ
ಸಂಗನಬಸವಣ್ಣನಿಂದ ಬ್ರಹ್ಮೇಶ್ವರಲಿಂಗವನರಿದವರಿಗಲ್ಲದಾಗದು. ||೩೨||

### ೨೮೨

ಭಕ್ತಸ್ಥಲ ಗುರುರೂಪು, ಮಾಹೇಶ್ವರಸ್ಥಲ ಲಿಂಗರೂಪು,
ಪ್ರಸಾದಿಸ್ಥಲ ಜಂಗಮರೂಪು, ಪ್ರಾಣಲಿಂಗಿಸ್ಥಲ ಆತ್ಮರೂಪು,
ಶರಣಸ್ಥಲ ಅರಿವುರೂಪು, ಐಕ್ಯಸ್ಥಲ ಶಬ್ದಮುಗ್ಧ ನಿರ್ನಾಮಭಾವ.
ಇಂತೀ ಷಡುಸ್ಥಲಭಕ್ತಿಯ ನೆಮ್ಮಿ, ವಿಶ್ವಾಸವ ಕಂಡು, ಸತ್ಯದಲ್ಲಿಯೆ ನಿಂದು
ಬುದ್ಧಿಕೇವಲ, ವಿದ್ಯೆಕೇವಲ ಅವಿದ್ಯೆಕೇವಲ.
ಇಂತೀ ತ್ರಿವಿಧ ಕೇವಲಜ್ಞಾನದಲ್ಲಿ
ಸಂಚಿತ ಪ್ರಾರಬ್ಧ ಆಗಾಮಿಗಳ ಸ್ಥಿರೀಕರಿಸಿ
ಸುಚಿತ್ತದಲ್ಲಿ ದಿವ್ಯತೇಜಪ್ರಕಾಶ ಕೇವಲವಪ್ಪ
ಪರಂಜ್ಯೋತಿಯಲ್ಲಿ ವಿಶ್ವಾಸದಿಂದ ಪರವಶನಾಗಬೇಕು.
ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವ ಕೂಡಬೇಕು. ||೩೩||

### ೨೮೩

ವಿಶ್ವಾಸದಿಂದ ಭಕ್ತ, ವಿಶ್ವಾಸದಿಂದ ಮಾಹೇಶ್ವರ,
ವಿಶ್ವಾಸದಿಂದ ಪ್ರಸಾದಿ, ವಿಶ್ವಾಸದಿಂದ ಪ್ರಾಣಲಿಂಗಿ,
ವಿಶ್ವಾಸದಿಂದ ಶರಣ, ವಿಶ್ವಾಸದಿಂದ ಐಕ್ಯ.
ಇಂತೀ ವಿಶ್ವಾಸವಿಲ್ಲದವಂಗೆ ವಿರಕ್ತಿಯೆಂಬ ಗೊತ್ತಿನ ಠಾವ ತೋರಾ.
ಪ್ರಭುವಿನ ಕೈಯಲ್ಲಿ, ನಿಜಗುಣನ ನೆನಹಿನಲ್ಲಿ, ಅಜಗಣ್ಣನ ಐಕ್ಯದಲ್ಲಿ
ಕುರುಹಿಲ್ಲದೆ ವಸ್ತುವ ಬೆರೆದ ಠಾವಾವುದಯ್ಯಾ ?
ಎತ್ತ ಸುತ್ತಿ ಬಂದಡೂ ಅಸ್ತಮಕ್ಕೆ ಒಂದು ಗೊತ್ತಿನಲ್ಲಿ ನಿಲ್ಲಬೇಕು.

ಇಂತೀ ವಿಶ್ವಾಸದಿಂದಲ್ಲದೆ ವಸ್ತುವ ಕೂಡುವುದಕ್ಕೆ ನಿಶ್ಚಯವಿಲ್ಲ.
ಈ ಗುಣ ಸಂಗನಬಸವಣ್ಣ ತೊಟ್ಟತೊಡಿಗೆ,
ಬ್ರಹ್ಮೇಶ್ವರಲಿಂಗವ ಮುಟ್ಟುವ ಭೇದ. || ೩೪ ||

೨೮೪

ವಿಶ್ವಾಸವಿಲ್ಲದವಂಗೆ ಭಕ್ತಸ್ಥಲವಿಲ್ಲ, ಗುರು ಭಕ್ತನಲ್ಲ.
ವಿಶ್ವಾಸವಿಲ್ಲದವಂಗೆ ಮಾಹೇಶ್ವರಸ್ಥಲವಿಲ್ಲ, ಲಿಂಗ ಭಕ್ತನಲ್ಲ.
ವಿಶ್ವಾಸವಿಲ್ಲದವಂಗೆ ಪ್ರಸಾದಿಸ್ಥಲವಿಲ್ಲ, ಜಂಗಮ ಭಕ್ತನಲ್ಲ.
ವಿಶ್ವಾಸವಿಲ್ಲದವಂಗೆ ಪ್ರಾಣಲಿಂಗಿಸ್ಥಲವಿಲ್ಲ, ಸರ್ವ ವ್ಯವಧ್ಯಾನಿಯಲ್ಲ.
ವಿಶ್ವಾಸವಿಲ್ಲದವಂಗೆ ಶರಣಸ್ಥಲವಿಲ್ಲ, ಆರೂಢಭಾವಿಯಲ್ಲ.
ವಿಶ್ವಾಸವಿಲ್ಲದವಂಗೆ ಐಕ್ಯಸ್ಥಲವಿಲ್ಲ, ಸರ್ವಲೇಪನಲ್ಲ.
ಇಂತೀ ಷಟ್‌ಸ್ಥಲಸಂಬಂಧ.
ಗುರುವಿನಲ್ಲಿ ಶ್ರದ್ಧೆ, ಲಿಂಗದಲ್ಲಿ ಅಭಿನ್ನನಲ್ಲದೆ
ಜಂಗಮದಲ್ಲಿ ಮನೋಮೂರ್ತಿಯಾಗಿಪ್ಪುದೆ
ಸರ್ವಾಂಗಲಿಂಗಸಂಬಂಧದ ಇರವು
ಸಂಗನಬಸವಣ್ಣಪ್ರಿಯ ಬ್ರಹ್ಮೇಶ್ವರಲಿಂಗದಲ್ಲಿ. || ೩೫ ||

೨೮೫

ಶಿಲೆ ಮರ ಮಣ್ಣು ಚಿಂಕಿ ನೀರು ಮಳಲುಗಳಲ್ಲಿ
ಇಂದು ಚಂದ್ರ ಇಂತಿವರೊಳಗಾದವರ ಮರೆಯಲ್ಲಿ
ತಮ್ಮ ವಿಶ್ವಾಸ ಎಂತಿದ್ದಿತ್ತು ಅಂತೆ ವಸ್ತುವಿಪ್ಪುವನರಿತು
ಇದು ಸಂಗನಬಸವಣ್ಣ ಸರ್ವಾಧಾರವಾಗಿ ಬಂದ ಸಂಬಂಧ.
ಬ್ರಹ್ಮೇಶ್ವರಲಿಂಗವು ವಿಶ್ವಾಸದಲ್ಲಿ ತಪ್ಪದಿಪ್ಪನು. || ೩೬ ||

೨೮೬

ಸಂಚಿತವನರಿವುದು ಕರ್ಮಯೋಗ.
ಆಗಾಮಿಯನರಿವುದು ಆತ್ಮಯೋಗ.
ಪ್ರಾರಬ್ಧವನರಿವುದು ಪರಮಯೋಗ.
ಇಂತೀ ತ್ರಿವಿಧಯೋಗಂಗಳಲ್ಲಿ ತಿಳಿದು
ಯೋಗ ನಿಯೋಗವೆಂಬುದ ಕಂಡು
ತನ್ನಯ ಆತ್ಮನ ಸ್ಪರ್ಶಗಾಢಂಗಳ ಘಟದಲ್ಲಿ
ಸ್ವಸ್ಥಾನದಲ್ಲಿಪ್ಪುದ, ಇರದೆಂಬುದ ಲಕ್ಷಿಸಿಕೊಂಡು
ಸರ್ವವ್ಯವಧಾನಂಗಳಲ್ಲಿ ಸಾವಧಾನವನರಿವುದು
ಪ್ರಾಣಲಿಂಗಿಯ ಕೂಟ.

ಈ ಗುಣ ಸಂಗನಬಸವಣ್ಣನ ಸಂಯೋಗ.
ಬ್ರಹ್ಮೇಶ್ವರಲಿಂಗದ ಕೂಟ. || ३२ ||

**೨೮೭**

ಸದ್ಭಕ್ತಿಯಿಲ್ಲದ ವಿಶ್ವಾಸಹೀನನು ವಾಚಾರಚನೆಗಳಿಂದ
ಮಾತಿನ ಮಾಲೆಯ ಎಷ್ಟು ನುಡಿದಡೇನು ?
ಹೆಂಡದಂತೆ, ಮೃತ ಘಟದಂತೆ, ಶಿಥಿಲ ಫಳದಂತೆ
ಅದಾರಿಗೆ ಯೋಗ್ಯ ?
ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವು
ಅವರಲ್ಲಿ ನಿಲ್ಲನಾಗಿ. || ३८ ||

**೨೮೮**

ಹಾಲನಟ್ಟಿ ಹಾವ ಸಲಹಿದಲ್ಲಿ
ಅದು ತನ್ನಯ ಉಚಿತಕ್ಕೆ ಹಾಳಾಹಳವ ಬಿಟ್ಟಿತ್ತೆ ?
ಕುಕ್ಕುಟನ ಮಾಳಿಗೆಯಲ್ಲಿ ಕೂಡಿ, ಪ್ರತಿಗೂಡಿನಲ್ಲಿ ಕೂಡಲಿಕ್ಕೆ
ತನ್ನ ತತ್ಕಾಲಕ್ಕೆ ಕೂಗುವುದ ಬಿಟ್ಟಿತ್ತೆ ?
ಇಂತೀ ವರ್ತನದಂತೆ ಭಕ್ತಿಥಾಳಕರ ದರ್ಶನ.
ಚೋರಕರ, ವಾಚಾರಚನೆಗರ ಬರಿಮಾತಿನ ಪೂಸರ,
ಈಶ್ವರ ಭಕ್ತರ ಪರಮೇಶ್ವರ ರೂಪು ಎನಲಾರೆ.
ಮತ್ತೆ ನೀತಿಯ ವಿಶ್ವಾಸವ ಬಿಡಲಾರೆ.
ಈ ಭಕ್ತಿಯೆಂಬ ಪಾಶವ ಹರಿವುದಕ್ಕೆ
ನಿಹಿತವ ತೋರಯ್ಯಾ ಸಂಗನಬಸವಣ್ಣಾ.
ಬ್ರಹ್ಮೇಶ್ವರಲಿಂಗವನರಿವುದಕ್ಕೆ ಕುರುಹ ಹೇಳಣ್ಣಾ. || ३೯ ||

**೨೮೯**

ಹಿಂದಣ ಸುಖ, ಮುಂದಣ ದುಃಖಂಗಳು
ಮುಂದಣ ಸುಖ, ಹಿಂದಣ ದುಃಖಂಗಳು
ಇವ ತಾ ಸಂಧಿಸಿ ಅನುಭವಿಸಿದಲ್ಲಿ
ಸಂಚಿತ ಪ್ರಾರಬ್ಧ ಆಗಾಮಿಗಳೆಂದು
ಅಲ್ಲಿಯಲ್ಲಿ ಸಂಕಲ್ಪಿಸಿ ಕೇಳಲೇತಕ್ಕೆ?
ಹಿಂದೆ ಅಳಿದವರ ಕೇಳಿ, ಮುಂದೆ ಸಾವವರ ಕಂಡು
ಅಂದಂದಿಗೆ ನೂರು ತುಂಬಿತ್ತೆಂದು

ಸಂದೇಹ ನಿವೃತ್ತಿಯಾಗಿರಬೇಕು,
ಸಂಗನಬಸವಣ್ಣ ಸಾಕ್ಷಿಯಾಗಿ
ಬ್ರಹ್ಮೇಶ್ವರಲಿಂಗವನರಿವುದಕ್ಕೆ. ||೪೦||

೨೯೦

ಹುರಿಯ ಮೆಟ್ಟುವ ವಿಹಂಗ ಜಾತಿ ಜೀವಂಗಳೆಲ್ಲವೂ
ಮುಂಚಿ ಅವ ಬಲ್ಲಡೆ ಸಂಚವ ಮೆಟ್ಟಿ ತಾವು ಸಿಕ್ಕುವವೆ ?
ಆ ತೆರನ ಕಂಡು ತ್ರಿವಿಧದ ಹುರಿಯಲ್ಲಿ ಅಡಿಯನಿಕ್ಕಿ
ಅಡೆಗೊಡ್ಡಿದಂತೆ ಬಿದ್ದಿರುತ್ತ, ಮತ್ತರಿಕೆಯ ಮಾತ ನುಡಿದಡೆ
ಅದು ಬರುಕಟೆಯೆಂಬರು.
ನೆರೆ ಅರಿದು ಹರಿದ ಶರಣರು
ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗವ
ಹೊರೆಹೊರೆಯಲ್ಲಿ ವೇಧಿಸಬೇಕು. ||೪೧||

■ ■

## ಬಿಬ್ಬಿ ಬಾಚಯ್ಯನ ವಚನ

೨೯೧

ಓಂಕಾರ ಪ್ರಥಮದಲ್ಲಿ ದಿವ್ಯನಿರಾಲಂಬಮೂರ್ತಿ
ಜಗಹಿತಾರ್ಥವಾಗಿ ತತ್ವಾದಲ್ಲಿ
ಪಂಚಬ್ರಹ್ಮ ಸಾಕಾರಮೂರ್ತಿ ಲೀಲಾಸಂಭವವಾದಲ್ಲಿ
ಅಣುವಿಂಗಣು, ಮಹತ್ತಿಗೆ ಮಹತ್ವಾದಲ್ಲಿ
ಅಂಗಕರಂಡ ಆತ್ಮ ಸುಗಂಧ ನೀನಾದೆಯಲ್ಲಾ
ಏಣಾಂಕಧರ ಸೋಮೇಶ್ವರಲಿಂಗ. ||೧||

೨೯೨

ಪೃಥ್ವಿಯೆಂಬ ಅಂಗದ ಧರೆಯಲ್ಲಿ
ಅಪ್ಪುವೆಂಬ ಅಸು ಹರಿವುತ್ತಿರಲಾಗಿ
ಬಹುಚಿತ್ತವೆಂಬ ಜನರು ನೆರೆದು
ಅರುವೆಂಬ ಹರುಗೋಲು ಕೆಟ್ಟಿದೆ.
ಕುರುಹಿನ ಜಲ್ಲೆಯ ಹಿಡಿದು
ಒತ್ತುವರಿಲ್ಲದೆ ತಡಿಯಲ್ಲಿ ಕೂಗುತ್ತೈದಾರೆ
ಏಣಾಂಕಧರ ಸೋಮೇಶ್ವರಲಿಂಗವನರಿಯದೆ. ||೨||

೨೯೩

ಚಿತ್ತವಸ್ತುವಿನಲ್ಲಿ ನಿಂದು
ತನ್ನಯ ಗುಣದ ಭಿತ್ತಿಯನರಿಯಬೇಕೆಂಬರು.
ಅರಿವ ಮತ್ತೆ ಹೊರಗಾದವ ಬೇರೆ ಕುರುಹಿಡಲೇಕೆ ?
ಕಳೆದು ಬೀಳುವ ಫಲಕ್ಕೆ ಹಿಡಿಗಲ್ಲುಂಟೆ ?
ಅರಿದು ನಿಶ್ಚಯವಾದವಂಗೆ ಬೇರೊಂದೆಡೆಯುಂಟೆ ?
ಏಣಾಂಕಧರ ಸೋಮೇಶ್ವರಲಿಂಗಕ್ಕೆ ಪಡಿಪುಚ್ಚವಿಲ್ಲ. ॥ ೩ ॥

೨೯೪

ಅಂಗಕ್ಕೆ ಲಿಂಗ ಸಂಬಂಧ. ಆತ್ಮಂಗೆ ಅರಿವು ಸಂಬಂಧ.
ಅರಿವಿಂಗೆ ನಿಶ್ಚಯ ಸಂಬಂಧ. ನಿಶ್ಚಯ ನಿಜದಲ್ಲಿ ನಿಂದಲ್ಲಿ
ಇಷ್ಟಲಿಂಗದ ತೃಷೆ ಅಡಗಿತ್ತು,
ಏಣಾಂಕಧರ ಸೋಮೇಶ್ವರಲಿಂಗವನರಿಯಲಾಗಿ. ॥ ೪ ॥

೨೯೫

ಸತ್ತ ಶ್ರವಕ್ಕೆ ತಟ್ಟುಮುಟ್ಟು ಕೇಳಲೇಕೆ ?
ಅರಿದು ನಿಜಕ್ಕೆ ಬೇರೊಂದ ಬಿಡೆಂದು ನುಡಿಯಲೇತಕ್ಕೆ ?
ತನ್ನಿರವ ತಾನರಿದ ಮತ್ತೆ, ಇದಿರಿಂಗೆ ಅನ್ಯಭಿನ್ನವ ಹೇಳಲೇತಕ್ಕೆ ?
ಅದು ಸುಮನ ಮನ್ನಣೆಯಲ್ಲ, ಏಣಾಂಕಧರ ಸೋಮೇಶ್ವರಲಿಂಗಕ್ಕೆ. ॥ ೫ ॥

೨೯೬

ಕೈ ಬಾಯಾಡುವಲ್ಲಿ ಕುರುಹಿನ ಭೇದವನರಿದು
ಒಡಗೂಡಬೇಕು.
ಆ ಗುಣವಡಗೆ, ಬೇರೊಂದಿದಿರೆಡೆಯಿಲ್ಲದಿರೆ
ಏನೂ ಎನಲಿಲ್ಲ.
ಕುರುಹಿಂಗೆ ಕುರುಹ ತೋರಿ, ಅರಿವಿಂಗೆ ಅರಿವ ಕೊಟ್ಟು
ನಿಜವೆ ತಾನಾಗಿದ್ದಲ್ಲಿ ಉಭಯನಾಮವಡಗಿತ್ತು
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೬ ॥

೨೯೭

ಇಷ್ಟಲಿಂಗಕ್ಕೆ ದೃಷ್ಟಾರ್ಪಿತ, ಪ್ರಾಣಲಿಂಗಕ್ಕೆ ತೃಪ್ತಿ ಅರ್ಪಿತ,
ಮಹಾಜ್ಞಾನ ಘನಲಿಂಗಕ್ಕೆ ಪರಮ ಪರಿಣಾಮವೆ ಅರ್ಪಿತ.
ಇಂತೀ ತ್ರಿವಿಧ ಅರ್ಪಣದಲ್ಲಿ ಸುಚಿತ್ತನಾಗಿರಬೇಕು,
ಏಣಾಂಕಧರ ಸೋಮೇಶ್ವರಲಿಂಗವನರಿವುದಕ್ಕೆ. ॥ ೭ ॥

೨೯೮

ಕಾಯಕ್ಕೆ ಸೋಂಕು ಸುಖ, ಜಿಹ್ವೆಗೆ ಮಧುರ ಸುಖ.
ದೃಕ್ಕಿಗೆ ಚಿತ್ರಭೇದ ಸುಖ, ಶ್ರೋತ್ರಕ್ಕೆ ನಾದ ಶಬ್ದ ಸುಖ.
ಘ್ರಾಣಕ್ಕೆ ಸುಗಂಧ ಸುಖ.
ಇಂತಿವೆಲ್ಲವನರಿದು, ಕೊಡುವ ಭೇದದಲ್ಲಿ ಕೊಟ್ಟು
ಅರ್ಪಿತ ಅವಧಾನಿಯಾಗಿರಬೇಕೆಂಬರು.
ಬಹುಭೇದವಂ ತಿಳಿದು, ಏಕೇಂದ್ರಿಯ ಸುಚಿತ್ತನಾಗಿ ಇದ್ದವಂಗೆ
ಕ್ರೀ ಜ್ಞಾನ ಸಮರ್ಪಣ ಏಣಾಂಕಧರ ಸೋಮೇಶ್ವರಲಿಂಗಕ್ಕೆ. ||೮||

೨೯೯

ತನ್ನ ಮರೆದಲ್ಲಿ ಲಿಂಗವ ಮರೆಯಬೇಕು.
ತನ್ನನರಿತಲ್ಲಿ ಲಿಂಗವನರಿಯಬೇಕು. ಉಭಯಭಾವ ಅಳವಟ್ಟಲ್ಲಿ
ಮುಂದಕ್ಕೊಂದು ಕುರುಹು ಏನೂ ಎನಲಿಲ್ಲ.
ಏಣಾಂಕಧರ ಸೋಮೇಶ್ವರಲಿಂಗವನರಿವುದಕ್ಕೆ
ಕುರುಹಾಗುತ್ತಿದ್ದಿಹಿತ್ತು. ||೯||

೩೦೦

ಹೊಂದಿ ಕಾಬ ಸುಖವಿಲ್ಲ, ಮರೆದು ಕಾಬ ಅರಿವಿಲ್ಲ.
ಉಭಯ ತನ್ನಿಷ್ಟವಾದಲ್ಲಿ, ಕ್ರೀ ಭಾವ ಐಕ್ಯ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೧೦||

೩೦೧

ಗಮನ ನಿರ್ಗಮನವಾದಲ್ಲಿ, ನಾಮ ನಿರ್ನಾಮವಾದಲ್ಲಿ
ನಾ ನೀನೆಂಬುದ ಮರೆದು, ಮತ್ತೊಂದರಿವನ್ನಕ್ಕ
ಏಣಾಂಕಧರ ಸೋಮೇಶ್ವರಲಿಂಗವ ಪೂಜಿಸಬೇಕು. ||೧೧||

೩೦೨

ನಿರ್ಮಲಜಲ ಪಂಕವ ಬೆರಸಿದಲ್ಲಿ
ತನ್ನಯ ಸಾರದಿಂದ ಕೆಸರಹ ಹಾಂಗೆ
ಅದು ಅರಿಯೆ ಮುನ್ನಿನಂತೆ ಅರಿವು ನಿಂದು
ಕುರುಹಾಯಿತ್ತು. ಪಂಕವಾರಿಯಂತೆ
ಏಣಾಂಕಧರ ಸೋಮೇಶ್ವರಲಿಂಗವ ಭಾವಿಸಬೇಕು. ||೧೨||

೩೦೩

ವಾಯು ಬಯಲೆಂದಡೆ
ತರುಗಿರಿಗಳೊದರುವ ಪರಿಯಿನ್ನೆಂತೊ ?
ನಾದ ಬಯಲೆಂದಡೆ ಶಬ್ದ ಬಯಲು ಪರಿಯಿನ್ನೆಂತೊ ?
ತನ್ಮಯವೆಲ್ಲವೂ ರೂಪು
ಏಣಾಂಕಧರ ಸೋಮೇಶ್ವರಲಿಂಗ ಸ್ವರೂಪಾಗಿ
ಜಗದಲ್ಲಿ ಇಹನ್ನಬರ. ||೧೩||

೩೦೪

ಧರೆ ಆಕಾಶದ ಮಧ್ಯವನರಿವನ್ನಕ್ಕ
ಕುರುಹಾದ ತೆರನನರಿಯಬೇಕು.
ಅದು ತನ್ಮಯ ತದ್ರೂಪಾಗಿಯಿಹುದು,
ಏಣಾಂಕಧರ ಸೋಮೇಶ್ವರಲಿಂಗ ಭಾವಕ್ಕೆಯ್ದಿದ ಕಾರಣ. ||೧೪||

೩೦೫

ಕಾಯದ ಮರೆಯ ಜೀವ, ಹೇಗಿಹುದೆಂಬುದನರಿ.
ಜೀವದ ತ್ರಾಣದ ಕಾಯ, ಹೇಗಳಿವುದೆಂಬುದನರಿ.
ಇಂತೀ ಉಭಯಸ್ಥಲ. ಕ್ರೀ ನಿಃಕ್ರೀ ಎಂಬಲ್ಲಿ ಅದೊಂದು ಭೇದ,
ಏಣಾಂಕಧರ ಸೋಮೇಶ್ವರಲಿಂಗ ಸ್ವರೂಪನಾದ ಕಾರಣ. ||೧೫||

೩೦೬

ಚಿತ್ತು ಕುಚಿತ್ತವ ಹೊತ್ತು ತಿರುಗುವ ದೆಸೆಯಿಂದ
ವಸ್ತುವೆಂದು ಮುಟ್ಟಬೇಕು.
ಅವ, ಸ್ವರೂಪನಾಗಿ ಸಂಪದಕ್ಕೆ ಸಮಪದನಾದ ದೆಸೆಯಿಂದ
ಏಣಾಂಕಧರ ಸೋಮೇಶ್ವರಲಿಂಗವಾಯಿತ್ತು. ||೧೬||

೩೦೭

ಕ್ಷೀರ ಎಡೆಗೊಟ್ಟು ನಿಂದಲ್ಲಿ
ತನ್ನಯ ಗುಣ ಬಲಿದು ಕ್ಷಾರವಾಯಿತ್ತು.
ಅದು ತನಗೆ ಅನ್ಯಭಿನ್ನವಲ್ಲ.
ಪುರುಷ ಸತಿ ಕೂಡೆ ವಿಶೇಷ ರೂಪಾದಂತೆ
ಕ್ರೀ ಜ್ಞಾನ ಸಂಭಾಷಣದಿಂದ ಚಿದ್ಘನದೊದಗು
ಏಣಾಂಕಧರ ಸೋಮೇಶ್ವರಲಿಂಗ ತಾನೆ. ||೧೭||

೩೦೮

ಹುಳಿ ಬೆಳೆದು ಸಿಹಿಯಹ ತೆರನುಂಟು.
ಸಿಹಿ ಬಲಿದು ಹುಳಿಯಹ ತೆರನುಂಟು.
ಇಂತೀ ಉಭಯಸ್ಥಲಭೇದ ತದ್ಭಾವವಲ್ಲದೆ ಅನ್ಯವಲ್ಲ,
ಏಣಾಂಕಧರ ಸೋಮೇಶ್ವರಲಿಂಗಕ್ಕೆ. ||೧೮||

೩೦೯

ಲೋಹಂಗಳ ರೂಪು ಒಡೆಯೆ, ಕರಗಿ ಮುನ್ನಿನಂತಾಗೆ,
ಮತ್ತೆ ಪ್ರತಿರೂಪಿಂಗೆ ಒಡಲಾಗಿರೆ,
ತದ್ಭಾವ ನಿಜವಸ್ತು ಜಗಹಿತಾರ್ಥ ಕೂಟಸ್ಥನಾಗಿ
ಏಣಾಂಕಧರ ಸೋಮೇಶ್ವರಲಿಂಗನಾದ. ||೧೯||

೩೧೦

ಮುಕುರದ ಬಿಂಬದಲ್ಲಿ ತೋರುವ ಜಗದಂತೆ
ಸ್ಥೂಲಕ್ಕೆ ಸ್ಥೂಲ, ಸೂಕ್ಷ್ಮಕ್ಕೆ ಸೂಕ್ಷ್ಮ, ಭಾವಕ್ಕೆ ಭಾವ
ಜ್ಞಾನ ನಿರೂಪಾದ ಏಣಾಂಕಧರ ಸೋಮೇಶ್ವರಲಿಂಗ. ||೨೦||

೩೧೧

**ಕ್ರೀ ಜ್ಞಾನ ಸಮರ್ಪಣ ಸ್ಥಲ:**

ನಾದ ಭೇದ ಹೊರಹೊಮ್ಮಿ ಮತ್ತಲ್ಲಿಯೆ ಅಡಗುವಂತೆ
ಚಿದ್ರೂಪ ವಿಲಾಸಿತ ಸಕಲರೂಪಿನಲ್ಲಿ ಹೊಂದಿದ್ದು
ಮತ್ತಲ್ಲಿಯೆ ಎಯ್ದುವಂತೆ
ಇದಿರಿಟ್ಟು ಕಾಬುದು, ಕಾಣಿಸಿಕೊಂಬುದು
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಅಡಗಿತ್ತು. ||೨೧||

೩೧೨

ಸ್ವಪ್ನದಲ್ಲಿ ಸಕಲಭೋಗಂಗಳ ಕಂಡು
ಎಚ್ಚತ್ತು ನೋಡಿದಡೆ, ಮತ್ತಲ್ಲಿಯೆ ಬಚ್ಚಬಯಲಾಯಿತು.
ಅದು ತನುವಿನ ಇರವು, ಮನದ ಭ್ರಾಂತು,
ತೋರಿ ಅಡುಗುವ ಭೇದ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿಯೇ ಐಕ್ಯ. ||೨೨||

೩೧೩

ತಾರಕ ನುಂಗಿದ ಜಲವ, ಬೇರೆ ಶೋಧಿಸಲುಂಟೆ ಅಯ್ಯಾ ?
ಉರಿಯುಂಡ ಘೃತವ ಅಳೆವುದಕ್ಕೆ ಈಡುಂಟೆ ಅಯ್ಯಾ ?

ನಿಶ್ಚಯ ನಿಜವ ಗೊತ್ತಿಂಗೆ ತರಬಹುದೆ ಅಯ್ಯಾ ?
ಇಷ್ಟ ವಸ್ತುವಿನಲ್ಲಿ ಲೇಪವಾಗಿ
ಮತ್ತೊಂದು ಕುರುಹಿಲ್ಲ, ಏಣಾಂಕಧರ ಸೋಮೇಶ್ವರಲಿಂಗಕ್ಕೆ. ||೨೩||

೩೧೪

ಉರಿಯ ಮೊನೆಯ ಮೇಲೆ
ಅರಗಿನ ಬೊಂಬೆ ತಿರುಗಾಡುತ್ತದೆ.
ಉರಿ ಕರಗಿ ಬೊಂಬೆ ಉಳಿಯಿತ್ತು,
ಏಣಾಂಕಧರ ಸೋಮೇಶ್ವರಲಿಂಗವ ಇದಿರಿಟ್ಟುಕೊಂಡು. ||೨೪||

೩೧೫

ರವಿಯ ಶಶಿ ನುಂಗಿ
ಉಕ್ಕಿನ ಘಟ್ಟಿಯ ಮೃತ್ತಿಕೆಯ ಚೇಣ ಕಡಿಯಿತ್ತು.
ಕಪ್ಪೆಯ ವಿಷ ತಾಗಿ ಹಾವು ಸತ್ತಿತ್ತು,
ಏಣಾಂಕಧರ ಸೋಮೇಶ್ವರಲಿಂಗವನರಿತು. ||೨೫||

೩೧೬

ನೊಣ ಲೋಕವ ನುಂಗಿ,
ತ್ರಿಣಯನನ ಗುಂಗುರು ಕೊಂದು,
ಗುಂಗುರು ಗಾಳಿಯಲ್ಲಿ ನೊಂದಿತ್ತು.
ಗಾಳಿ ಘಟ ಹೇಳದೆ ಹೋಯಿತ್ತು,
ಏಣಾಂಕಧರ ಸೋಮೇಶ್ವರಲಿಂಗವನರಿವುದಕ್ಕೆ. ||೨೬||

೩೧೭

ಬೆಳಗಿನ ಘಟವ ತಮದ ಕುಡಿಕೆ ನುಂಗಿತ್ತು.
ಉಭಯದ ಘಟವ ಕೊಡಗೂಸಿನ ಕೂಸೊಡೆಯಿತ್ತು,
ಏಣಾಂಕಧರ ಸೋಮೇಶ್ವರಲಿಂಗವನರಿತು. ||೨೭||

೩೧೮

ಒಂದು ಎರಡ ನುಂಗಿ, ಮೂರು ಐದ ನುಂಗಿ,
ಐದರೆಯಾಗಿ ಒರೆವಲ್ಲದೆ
ಏಣಾಂಕಧರ ಸೋಮೇಶ್ವರಲಿಂಗವನರಿಯಬಾರದು. ||೨೮||

೩೧೯

ಹಲವು ಬಲೆಯೊಳಗಾದ ಎರಳೆ
ಕೊಲುವನ ಅಲಗ ನುಂಗಿತ್ತು.

ಅಲಗರಗಿ ಬಲೆಯಳಿಯಿತ್ತು.
ಹುಲ್ಲೆಯ ಹೊಲಬು ಲೇಸಾಯಿತ್ತು.
ಏಣಾಂಕಧರ ಸೋಮೇಶ್ವರಲಿಂಗವನರಿತು. ||೨೯||

೩೨೦

ಕಣ್ಣಿನೊಳಗಣ ಕವಲು
ಮೂವರು ಅಣ್ಣಂದಿರು ಮನೆಯಾಯಿತ್ತು.
ಮನೆಯ ಮರುಳು ನುಂಗಿ
ಕವಡಿಕೆಯ ಕವಲು ಹಿಸಿದು
ಕಣ್ಣು ಕಂಡಲ್ಲಿಯೇ ಅಡಗಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೩೦||

೩೨೧

ಮರನ ಹೂ ನುಂಗಿ, ಅಡಿಯೊಳಗಡಗಿ ಹಣ್ಣಾಯಿತ್ತು.
ಹಣ್ಣು ಎಳೆಗಾಯಿ ನುಂಗಿ, ಹೂ ಮರನ ಉಗುಳಿತ್ತು.
ಮರ ಮರಣಕ್ಕೆ ತೆರಹಿಲ್ಲ,
ಏಣಾಂಕಧರ ಸೋಮೇಶ್ವರಲಿಂಗವನರಿತೆಹೆನೆಂದು. ||೩೧||

೩೨೨

ಆರೂ ಇಲ್ಲದ ಅಡವಿಯಲ್ಲಿ, ಬೇರೊಂದು ಮನೆಯ ಮಾಡಿ
ಐವರು ಹಾರುವರು ಕೂಡಿ, ಮೂವರು ಗೆಯ್ವರು ಕೂಡಿ
ಆರಂಬಗೆಯ್ಯುತ್ತಿರಲಾಗಿ ಬೆಳೆ ಬೆಳೆಯಿತ್ತು.
ಮೃಗ ಫಲವಾಗಲೀಸವು.
ಬೇಡರ [ಅ]ಗಡ ಘನವೆಂದು ಬೀಡ ಬಿಟ್ಟಿತ್ತು,
ಏಣಾಂಕಧರ ಸೋಮೇಶ್ವರಲಿಂಗಕ್ಕೆ ಹೇಳಿಹೆನೆಂದು. ||೩೨||

೩೨೩

ಆಕಾಶದುರಿ, ನೆಲದ ಮಡಕೆಯಲ್ಲಿ
ಬಯಲ ನೀರ ತುಂಬಿ, ಇಲ್ಲದ ಅಕ್ಕಿಯ ಹಾಕಿ
ಮೂರು ನೆಲೆಯಲ್ಲಿ ಕುದಿವುತ್ತಿದ್ದಿತ್ತು.
ಪಾವಕನರಿದು ನೀರ ಹೊಯಿದು, ಗಂಜಿ ಅಲ್ಲಿ ಇಂಗಿತ್ತು,
ಏಣಾಂಕಧರ ಸೋಮೇಶ್ವರಲಿಂಗಕ್ಕೆ ಓಗರ ಬೇಕೆಂದು. ||೩೩||

### ೩.೨೪

ಬಾರದವನುಂಡು ಬಂದವ ಹಸಿದಿದ್ದ.
ಬೇಯದದು ಬೆಂದು, ಬೆಂದದು ಬೇಯದೆ
ಉಭಯವ ಹಿಂಗಿದಂದು ಸಂದು,
ಏಣಾಂಕಧರ ಸೋಮೇಶ್ವರಲಿಂಗಕ್ಕೆ ಓಗರವಾಯಿತ್ತು. || ೨೪ ||

### ೩.೨೫

ಎಲೆಯಿಲ್ಲದ ವೃಕ್ಷದಲ್ಲಿ ಹೂವಿಲ್ಲದ ಕಾಯಾಗಿತ್ತು.
ಕಾಯಿ ಉದುರಿ ಹಣ್ಣು ಬಲಿಯಿತ್ತು.
ಕಣ್ಣಿಗೆ ಹಣ್ಣಲ್ಲದೆ ಮೆಲುವುದಕ್ಕಲ್ಲ,
ಏಣಾಂಕಧರ ಸೋಮೇಶ್ವರಲಿಂಗಕ್ಕೆ ಅರ್ಪಿತವಾಯಿತ್ತು. || ೨೫ ||

### ೩.೨೬

ಏರಿಯಿಲ್ಲದ ಕೆರೆಯಲ್ಲಿ, ನೀರಿಲ್ಲದ ತಡಿಯಲ್ಲಿ ನಿಂದು
ಮಡಕೆಯಿಲ್ಲದೆ ಮೊಗೆವುತ್ತಿದ್ದರು.
ಮೊಗೆವರ ಸದ್ದ ಕೇಳಿ, ಒಂದು [ಹಾ]ರದ ಮೊಸಳೆ
ಅವರೆಲ್ಲರ ನುಂಗಿತ್ತು.
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಭಾವವೇನೆಂದು ಅರಿಯೆ. || ೨೬ ||

### ೩.೨೭

ಹುತ್ತದೊಳಗಣ ಹಾವ, ಕೆರೆಯೊಳಗಣ ಕಪ್ಪೆ ನುಂಗಿತ್ತು.
ಸರ್ಪನ ಕಪ್ಪೆಯು ಮಕ್ಷಿಕ ನುಂಗಿತ್ತು.
ಆ ಮಕ್ಷಿಕವ ಗೃಹಗಾಹಿ ನುಂಗಿತ್ತು.
ಅದೇನು ಚೋದ್ಯವೆಂದರಿಯೆ, ಏಣಾಂಕಧರ ಸೋಮೇಶ್ವರಲಿಂಗ. || ೨೭ ||

### ೩.೨೮

ಯೋನಿಯಿಲ್ಲದ ಆಕಳಿನಲ್ಲಿ, ಬಾಯಿಯಿಲ್ಲದ ಕರು ಹುಟ್ಟಿತ್ತು.
ಮೊಲೆಯಿಲ್ಲದ ಹಾಲ ಕುಡಿದು, ಒಡಲಿಲ್ಲದೆ ತಿರುಗಾಡುತ್ತದೆ.
ಏಣಾಂಕಧರ ಸೋಮೇಶ್ವರಲಿಂಗ, ಇದೇನು ಸೋಜಿಗವೆಂದರಿಯೆ. || ೨೮ ||

### ೩.೨೯

ಕಲ್ಲಿನ ಕಂಬದಲ್ಲಿ ಹುಲ್ಲಿನ ಬೇರು ಹುಟ್ಟಿ
ಬೇರು ಕಲ್ಲ ತಿಂದಿತ್ತು.

ಕಲ್ಲಿನ ದಳ್ಳುರಿ ಹತ್ತಿ, ಬೇರು ಅಲ್ಲಿಯೆ ಅಡಗಿತ್ತು.
ಏಣಾಂಕಧರ ಸೋಮೇಶ್ವರಲಿಂಗ, ಏನು ಚೋದ್ಯವೆಂದರಿಯೆ. ||೩೯||

೩೩೦

ಕಂಬವಿಲ್ಲದ ಮನೆಯಲ್ಲಿ, ಅಂಗವಿಲ್ಲದ ಗರತಿ
ಉರಿಯಿಲ್ಲದ ಹೊಗೆ ತಾಗಿ, ಕಣ್ಣಿಗೆ ಬಾಧೆಯಾಯಿತ್ತು.
ಓಗರ ಬೆಂದು ಅಕ್ಕಿಯಾಯಿತ್ತು.
ಇದೇನು ಚೋದ್ಯವೆಂದರಿಯೆ, ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೦||

೩೩೧

**ಐಕ್ಯಾನುಭಾವ ಲಿಂಗಸ್ಥಲ :**

ಅಂಗಲಿಂಗ ಸಂಬಂಧವಾದಡೆ
ವೇದನೆ ಅಂಗದ ನೋವಿನಂತಿರಬೇಕು.
ಹೇಮದಂಗ ಅಗ್ನಿಯ ಸಂಗದಲ್ಲಿದ್ದು
ರೂಪಳಿದು ನೀರಾದಂತೆ, ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೧||

೩೩೨

ಅಗ್ನಿ ಲೋಹದಂತೆ, ಫಲ ರಸದಂತೆ
ಕಾಯ ಜೀವದ ಪರಿಯಂತೆ, ಅಂಗ ನೆಳಲಿನಂತೆ
ಅಂಗಲಿಂಗಸಂಬಂಧವಾಗಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೨||

೩೩೩

ಮುಕುರ ಬಿಂಬದಂತೆ, ಉರಿ ದ್ರವ್ಯದಂತೆ
ಧರೆ ಸಲಿಲದಂತೆ, ಕುರುಹು ಸಂಬಂಧ ಯೋಗದ ತೆರದಂತೆ
ಅಂಗಲಿಂಗಸಂಬಂಧವಾಗಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೩||

೩೩೪

[ಗುಳ್ಳ]ಂಕ ಮೃತ್ತಿಕೆಯ ಕುಪ್ಪಿಗೆಯಲ್ಲಿ ತೋರುವ ಎಣ್ಣೆ ಜಲದಂತೆ
ಇಂದುವಿನಲ್ಲಿ ಸಂದಿಲ್ಲದೆವೊಂದಿ ತೋರುವ ರಂಜನೆಯಂತೆ
ಅಂಗಲಿಂಗಸಂಬಂಧಿಯಾಗಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೪||

೩೩೫

ಶಾಖೆಯ ಸುತ್ತಿದ ಲತೆಯಂತೆ,
ನೇಕೆಯಲ್ಲಿದ್ದ ಶಿಶುವಿನಂತೆ, ಲೆಪ್ಪದಲ್ಲಿದ್ದ ಬಣ್ಣದಂತೆ
ಅಂಗಲಿಂಗಸಂಬಂಧ ಹೀಗಾಗಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೫||

೩೩೬

ಗುಳಿ ನುಂಗಿದ ಸ್ಥಾಣುವಿನಂತೆ, ಬಲವ ನುಂಗಿದ ರತಿಯಂತೆ
ಗತಿಯ ನುಂಗಿದ ನಾದದಂತೆ
ರೂಪು ಭಾವಕ್ಕೆ ಎರವಿಲ್ಲದಂತಾಗಬೇಕು
ಅಂಗಲಿಂಗಸಂಬಂಧ, ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೬||

೩೩೭

ಘಟ ಬಯಲಂತೆ, ಪಟ ವಾಯುವಂತೆ
ಸ್ಫಟಿಕ ಸುಟಿಯಂತೆ
ಘಟಿತವಾಗಿರಬೇಕು, ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೭||

೩೩೮

ಕರ್ದಮ ಕಮಲದಂತೆ, ವೇಣು ದ್ವಾರದಂತೆ
ನೇಣು ಬಂಧದಂತೆ
ಬಿಡುವಿಲ್ಲದಿರಬೇಕು ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೮||

೩೩೯

ಫಲ ತರುವಿನಂತೆ, ತಿಲ ಸಾರವಂತೆ
ಮಧುರ ದಂಡವಂತೆ, ಶರಧಿಯಲ್ಲಿರುವ ಲಘುವಿನಂತೆ
ಭಿನ್ನಭಾವವಿಲ್ಲದಿರಬೇಕು ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೪೯||

೩೪೦

ಗಂಧ ಪುಷ್ಪದಂತೆ, ಚಂದನ ಲೀಲೆಯಂತೆ
ಕಂಜ ಕಿರಣದಂತೆ, ಬಿಂದು ಸಸಿಯಂತೆ

ಹಿಂಗದಿರಬೇಕು ಅಂಗಲಿಂಗಸಂಬಂಧ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೫೦ ||

೩೪೧

**ಅಂಗಲಿಂಗಸ್ಥಲ ಸಮರ್ಪಣ :**

ಜಾಗ್ರದಲ್ಲಿ ಕಂಡಿರವ ಸ್ವಪ್ನದಲ್ಲಿ
ಸುಖ ದುಃಖಾದಿಗಳು ತೋರಿದಾಗ
ಅಲ್ಲಿ ಆವ ಲಿಂಗಕ್ಕೆ ಅರ್ಪಿತ ಭೇದ ?
ಸ್ಥೂಲದಲ್ಲಿ ಕಂಡು, ಸೂಕ್ಷ್ಮದಲ್ಲಿ ಅರಿದು
ಕಾರಣದಲ್ಲಿ ಭಾವಿಸುವ ಲಿಂಗ ಆವುದೆಂದರಿಯಬೇಕು.
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ತಾನರಿದು ಲಿಂಗವನರಿಯಬೇಕು. || ೫೧ ||

೩೪೨

ಜ್ಞಾತೃವಿನಲ್ಲಿ ಇಷ್ಟಲಿಂಗಕಳೆ, ಜ್ಞೇಯದಲ್ಲಿ ಭಾವಲಿಂಗಕಳೆ,
ಭಾವದಲ್ಲಿ ಪ್ರಾಣಲಿಂಗಕಳೆ.
ತ್ರಿವಿಧದಲ್ಲಿ ಹೆರೆಹಿಂಗದರಿಯಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಪ್ರಾಣಲಿಂಗಸಂಬಂಧಿಯಾಗಬಲ್ಲಡೆ. || ೫೨ ||

೩೪೩

ತನುವಿನಲ್ಲಿ ಹಿಡಿದು, ಮನದಲ್ಲಿ ಅರಿದು
ಜ್ಞಾನದಲ್ಲಿ ಕಂಡು, ಮಹಾಪ್ರಕಾಶದಲ್ಲಿ ಕೂಡಿ
ಭೇದಭಾವವಿಲ್ಲದಿರಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಪ್ರಾಣಲಿಂಗಸಂಬಂಧಿಯಾಗಬಲ್ಲಡೆ. || ೫೩ ||

೩೪೪

ತನುವಿನ ಇಷ್ಟವ ಬಿಟ್ಟಾಗ ಅರಿದು, ಕಟ್ಟಿದಾಗ ಮರೆದು
ಮತ್ತೆ ಸೋಂಕಿದ ಸುಖವ ಅರ್ಪಿಸುವ ಪರಿಯಿನ್ನೆಂತೊ ?
ಒರೆಯ ಮರೆಯ ಕೈದಿನಲ್ಲಿ ಕಡಿದಡೆ ಹರಿದುದುಂಟೆ ?
ಕುರುಹಿನ ಮರೆಯಲ್ಲಿದ್ದಾತನ, ಎರಡಳಿದು ಅವಧಿಯಿಲ್ಲದಿರಬೇಕು
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯಾಗಬಲ್ಲಡೆ. || ೫೪ ||

೩೪೫

ಇಷ್ಟಲಿಂಗ ಪ್ರಾಣಲಿಂಗವೆಂದು
ಭಿನ್ನಭಾವದಿಂದ ಹಿಂಗಿಸುವ ಪರಿಯಿನ್ನೆಂತೊ ?
ಕಾಯದಲ್ಲಿ ನೋವಾದಡೆ ಜೀವಕ್ಕೆ ಭಿನ್ನವೆ ?
ಜೀವ ಹೋದಲ್ಲಿ ಕಾಯ ಉಳಿಯಬಲ್ಲುದೆ ?
ಈ ಉಭಯದ ಭೇದವನರಿ,
ಪಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯಾಗಬಲ್ಲಡೆ. ||೫೫||

೩೪೬

ಇಕ್ಷುದಂಡಕ್ಕೆ ಹಣ್ಣುಂಟೆ ? ಕಾಮಧೇನುವಿಂಗೆ ಕರುವುಂಟೆ ?
ಕಲ್ಪತರುವಿಂಗೆ ತತ್ಕಾಲವುಂಟೆ ?
ಸರ್ವಜ್ಞಂಗೆ ಇಷ್ಟಪ್ರಾಣಜ್ಞಾನಭಿನ್ನ ನಾಸ್ತಿ.
ಪಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯ ಸ್ಥಲ. ||೫೬||

೩೪೭

ತಿಲದ ಮರೆಯ ತೈಲವ ಅರೆದು ಕಾಬಂತೆ
ಚಂದನದ ಮರೆಯ ಗಂಧವ ಬಂಧಿಸಿ ಕಾಬಂತೆ
[ಶೃಂ]ಗಿಯ ನಾದವ ಖಂಡಿಸಿ ಅರಿವಂತೆ
ಇಷ್ಟಜ್ಞಾನವನರಿವುದಕ್ಕೆ ಇದೇ ದೃಷ್ಟ.
ಪಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯ ಸ್ಥಲ. ||೫೭||

೩೪೮

ಬೀಜವಿಲ್ಲದೆ ಬಿತ್ತು ಹುಟ್ಟುವ ತೆರನಾವುದು ?
ತೊಟ್ಟಿಲ್ಲದೆ ಹಣ್ಣು ಇಪ್ಪ ತೆರನಾವುದು ?
ಇಷ್ಟವಿಲ್ಲದೆ ಚಿತ್ತ ಅಪ್ಪುವ ಠಾವಾವುದು ?
ಇಂತೀ ಭೇದದಲ್ಲಿ ಭೇದಕನಾಗಿ
ಎರಡಳಿದು ವೇಧಿಸಿ ನಿಂದಲ್ಲಿಯೆ
ಪಣಾಂಕಧರ ಸೋಮೇಶ್ವರಲಿಂಗದಲ್ಲಿ ಪ್ರಾಣಲಿಂಗಿಯ ಸ್ಥಲ. ||೫೮||

೩೪೯

ಶುಕ್ತಿಯಲ್ಲಿ ವೇಧಿಸಿದ ಉದಕದಂತೆ
ಸಸಿಗೆ ಅಂಕುರವ ಕೊಟ್ಟು ಏಪತಂಪಿನಂತೆ
ಕಿಸಲಯದಲ್ಲಿ ಮುಟ್ಟಿದ ಘೃತಸಾರದಂತೆ

ಇಷ್ಟಚಿತ್ತಭಾವ.
ಅಲ್ಲ ಅಹುದೆಂದೆನಬಾರದು.
ಇದಿರೇರಿ ಇರಿದ ತೊಡಪಿನ ಅಸಿ ಎದೆಯಲ್ಲಿ ಸಿಕ್ಕಿದಂತೆ
ಆ ಉಭಯವ ಹಿಂಗಿರಬೇಕು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಪ್ರಾಣಲಿಂಗಿಯ ಲಿಂಗೈಕ್ಯನಾಗಬಲ್ಲಡೆ. ॥ ೫೯ ॥

೩೫೦

ಕಲೆದೋರದ ಗಾಯದಂತೆ
ಸುಳುಹುದೋರದ ಸಂಚಾರದಂತೆ
ನಳಿನ ನಿಳಯದ ನೆಳಲಿನಂತೆ ಇಷ್ಟಚಿತ್ತಜ್ಞಾನ.
ಸರ್ವಗುಣಸಂಪದ ಪ್ರಾಣಲಿಂಗಿಯ ಲಿಂಗಸ್ಥಲ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ನಿರ್ಲೇಪವಾಯಿತ್ತು. ॥ ೬೦ ॥

೩೫೧

ಕುರುಹಿನ ಕುರುಹಿನಲ್ಲಿ, ಅರಿವಿನ ಅರಿವಿನಲ್ಲಿ
ಜ್ಞಾನದ ಜ್ಞಾನದಲ್ಲಿ
ಇಂತೀ ಸಲೆಸಂದ ಭೇದಂಗಳಲ್ಲಿ ನಿಂದು ನೋಡು.
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಅರಿವಿನ ಅರಿವು, ಬೆಳಗಾಯಿತ್ತು. ॥ ೬೧ ॥

೩೫೨

ಭಕ್ತನ ಭಕ್ತಿಭಾವ, ಮಾಹೇಶ್ವರನ ಮಾಹೇಶ್ವರಭಾವ.
ಪ್ರಸಾದಿಯ ಪ್ರಸಾದಭಾವ, ಪ್ರಾಣಲಿಂಗಿಯ ಪ್ರಾಣಲಿಂಗಭಾವ.
ಶರಣನ ಸನ್ನದ್ಧಭಾವ, ಐಕ್ಯನ ಐಕ್ಯಭಾವ.
ಇಂತೀ ದ್ವಾದಶಸ್ಥಲಂಗಳಲ್ಲಿ
ಸಾಗಿಸಿ ನಿಂದ ಅನಾಗತಸಿದ್ಧ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಉಭಯಭಾವ ಭಿನ್ನವಿಲ್ಲದ ಶರಣಂಗೆ. ॥ ೬೨ ॥

೩೫೩

ಅರಿದು ಅರುಹಿಸಿಕೊಂಬುದಾದ ಕಾರಣ
ಉಭಯನಾಮವಾಯಿತ್ತು.

ಅದರ ಭೇದದಿಂದ ತಿಳಿಯೆ ಮೂರಾಯಿತ್ತು.
ಮೂರು ಮುಮ್ಮೊಖದಲ್ಲಿ ತಿಳಿಯೆ ಆರಾಯಿತ್ತು.
ಇವೆಲ್ಲವು ಒಡಗೂಡಿ ನೋಡೆ ನೂರೊಂದಾಯಿತ್ತು.
ಭಿನ್ನಭಾವಿಯ ಭೇದದಿಂದ
ಸೂತ್ರದ ದಾರ ನಾಳವೊಂದರಲ್ಲಿ ಅಡಗಿಪ್ಪಂತೆ
ಸ್ಥಲ ಕುಳಂಗಳು ವಸ್ತುವಿನಲ್ಲಿ ಅಡಗಿ ತೋರುವವು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಉಭಯನಾಮ ನಷ್ಟವಾದವಂಗೆ. || ೬೩ ||

೩೫೪

ಲತೆ ಹಲವು ಶಾಖೆಯಲ್ಲಿ ಹರಿದು ಸುತ್ತಿದಡೆ
ಮೂಲವ ಕಿತ್ತಲ್ಲಿಯೆ ಹಲವು ಬಳ್ಳಿ ಒಣಗುವಂತೆ
ಸ್ಥಲ ಕುಳಂಗಳು ಭಿನ್ನಭಾವವಾಗಿ ತೋರುವ ಇರವು
ಅರಿತಲ್ಲಿಯೇ ನಷ್ಟವಾಯಿತ್ತು.
ಏಣಾಂಕಧರ ಸೋಮೇಶ್ವರಲಿಂಗ ತಾನು ತಾನೆ. || ೬೪ ||

೩೫೫

ಉದಕ ಹಲವು ತೆರದಲ್ಲಿ ಏರಿಯ ಕೂಡಿ
ದ್ವಾರವೊಂದರಲ್ಲಿಯೈದುವಂತೆ,
ನಾನಾ ಭವಂಗಳಿಂದ ಇಷ್ಟದ ಗೊತ್ತಿನಲ್ಲಿ ನಿಂದು
ನಿಶ್ಚಯವನರಿದು, ಮತ್ತಾ ಗುಣ ಬಚ್ಚಬಯಲು
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೬೫ ||

೩೫೬

ಪಟುಭಟಂಗೆ ಪ್ರಳಯ ಒಂದೆಯೆಂದು ಪ್ರಮಾಣಿಸಿದಲ್ಲಿ
ಅಂಗದಾಸೆ ಮರೆಯಿತ್ತು.
ಸರ್ವಗುಣಸಂಪದ ಭೇದವ ಒಂದುಮಾಡಿ
ದ್ವಯಗುಣವ ಹಿಂಗಿದಲ್ಲಿ
ಸ್ಥಲ ಅಲ್ಲಿಯೇ ಲೇಪವಾಯಿತ್ತು
ಏಣಾಂಕಧರ ಸೋಮೇಶ್ವರಲಿಂಗವಲ್ಲಿ. || ೬೬ ||

೩೫೭

ಕಾಯಿ ಒಂದರಲ್ಲಿ ಶಾಖೆ ಹಲವಹ ತೆರದಂತೆ,
ಅರಿವು ಒಂದೆ, ರೂಪು ಭಿನ್ನಂಗಳಾಗಿ ತೋರುವ ತೆರದಂತೆ,

ಘಟದ ವಾರಿಯಲ್ಲಿ ತೋರುವ ಇಂದುವಿನಂತೆ,
ಅದೊಂದೆ ಭೇದ, ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೬೭||

**೩೫೮**

ಲೆಪ್ಪದ ಬೊಂಬೆ ಒಂದಾದಡೆ
ಅವಯವಂಗಳಲ್ಲಿ ಬಣ್ಣ ನಿಂದು ರೂಪುದೋರುವಂತೆ
ವಸ್ತು ಭಾವವೊಂದಾದಲ್ಲಿ
ಮುಟ್ಟುವ ಸ್ಥಲದಿಂದ ಹಲವಾಯಿತ್ತು.
ಕೇಳಿದಲ್ಲಿ ಭಾವನಾಸ್ತಿ, ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೬೮||

**೩೫೯**

ನಾನಾ ರಸಂಗಳಲ್ಲಿ ಅರಿದ ಕಿಸಲಯ
ಒಂದರಲ್ಲಿ ನಿಂದುದಿಲ್ಲ.
ಸಂದಿಲ್ಲದ ಸವಿಯನರಿವುದು. ಅದೊಂದೆ ಭೇದ ಸಂದಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಸ್ಥಲ ಏಕೀಕರವಾಯಿತ್ತು. ||೬೯||

**೩೬೦**

ಮೌನವಾದ ಮತ್ತೆ ಜಗಳವುಂಟೆ ?
ಧ್ಯಾನವಾದ ಮತ್ತೆ ಘರಾಕುಂಟೆ ?
ಸ್ಥಲ ಲೇಪವಾದ ಮತ್ತೆ ಭೇದದ ಭಿನ್ನವುಂಟೆ ?
ಕ್ರೀ ಜ್ಞಾನ ಸಮಗಂಡಲ್ಲಿ, ಭಾವ ಶುದ್ಧವಾಯಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೭೦||

**೩೬೧**

**ಸರ್ವಭಾವಸ್ಥಲ ಸಮರ್ಪಣ :**

ಹುತ್ತದೊಳಗಣ ಉಡುವಿನ ಕಣ್ಣು
ಬೆಟ್ಟದ ತುದಿಯಲ್ಲಿಹ ಕಾಗೆ ಕುಟುಕಿಹೆನೆಂದು
ಹುತ್ತದ ಬಾಯ ನೋಡುತ್ತದೆ.
ಉಡು ತಪ್ಪಿ ಹಾವು ಹೊರಟಿತ್ತು.
ಹಾವಿನ ಕಣ್ಣು ಕಾಗೆ ಹರಿದು,
ಹಾವು ಕಾಗೆಯ ಕಚ್ಚಿ ಎರಡೂ ಸತ್ತವು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೭೧||

### ೩೬೨

ಮಂಜಿನ ಮನೆಯಲ್ಲಿ ಸಂದೇಹದ ಸತಿ
ಬಂದ ಬಂದವರ ಕೊಂದು ತಿನ್ನುತ್ತೈದಾಳೆ.
ಅವಳಿಗೆ ಗಂಡನಾಗಲಮ್ಮರು,
ಏಣಾಂಕಧರ ಸೋಮೇಶ್ವರಲಿಂಗವಲ್ಲದೆ. || ೭೨ ||

### ೩೬೩

ಬಿಲದೊಳಗಣ ಇಲಿ, ಹುತ್ತದೊಳಗಣ ಹಾವು
ಇತ್ತಂಡ ಕೂಡಿ ಮನೆಯೊಳಗಣ ಬೆಕ್ಕ ಮುರಿ ತಿಂದವು.
ಮಿಕ್ಕಡಗ ನರಿ ತಿಂದು, ನಾಯಿಗೆ ಸಿಕ್ಕದೆ ಹೋಯಿತ್ತು.
ಎತ್ತಲೆಂದರಿಯೆ, ಏಣಾಂಕಧರ ಸೋಮೇಶ್ವರಲಿಂಗ ತಾನೆ ಬಲ್ಲ. || ೭೩ ||

### ೩೬೪

ಮರನಿಲ್ಲದ ಮನೆಯ ಮಾಡಿ, ನೆಲನಿಲ್ಲದ ಒಲೆಯಲ್ಲಿ,
ಉರಿಯಿಲ್ಲದ ಬೆಂಕಿಯಲ್ಲಿ
ಮೊಲೆ ಯೋನಿಯಿಲ್ಲದವಳು [ಅ]ಡುತ್ತೈದಾಳೆ.
ಓಗರವಾಗದು, ಮಡಕೆ ಕರಗಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. || ೭೪ ||

### ೩೬೫

ಹುತ್ತದೊಳಗಣ ಹಾವ, ಮಡುವಿನೊಳಗಣ ಮತ್ಸ್ಯವ,
ಮಹಾಕಾನನದ ವಾನರವ, ಹಿಡಿವ ಪರಿಯಿನ್ನೆಂತೊ ?
ಹುತ್ತವನಗೆದು, ಮಡುವ ಹೂಳಿ,
ಕಾನನವ ತರಿದು, ಇಂತಿವ ಹಿಡಿಯಬೇಕು.
ಸಕಲೇಂದ್ರಿಯದೊಳಗಿರ್ದು
ವಸ್ತುವನರಿದನೆಂಬ ಮಿಟ್ಟೆಯ ಭಂಡರನೊಪ್ಪ
ಏಣಾಂಕಧರ ಸೋಮೇಶ್ವರಲಿಂಗ. || ೭೫ ||

### ೩೬೬

ಮತ್ಸ್ಯದ ಕಣ್ಣು, ಸರ್ಪನ ವಿಷ, ಹುಲಿಯ ಕಾಲುಗುರು
ನಡೆವಲ್ಲಿ ಅಡಗುವಂತೆ, ಕೊಲುವಲ್ಲಿ ಬಿಡುವಂತೆ
ಇಂತೀ ವಿಗಡತ್ರಯವ ಅರಿ, ಅಸುವಿನ ಭೇದವ
ಏಣಾಂಕಧರ ಸೋಮೇಶ್ವರಲಿಂಗವ ಬಲ್ಲಡೆ. || ೭೬ ||

**೩೬೭**

ಬಲುಗಜಕ್ಕೆ ಬಾದಳದಲ್ಲಿ ಹಾದಿಯುಂಟೆ ?
ವಿಕ್ರಮಪಕ್ಷಿ ಕಲ್ಲಿಗೆ ಸಿಕ್ಕುವುದುಂಟೆ ?
ಬಲ್ಲವನೆಲ್ಲರಿಗೆ ಲಲ್ಲೆಯ ನುಡಿವನೆ ?
ಬಲ್ಲವನ ಇರವು ಭಲ್ಲಿಯ ರೂಹಿನಂತೆ.
ಇದ ಬಲ್ಲವರಾರೊ, ಏಣಾಂಕಧರ ಸೋಮೇಶ್ವರಲಿಂಗವ. || ೭೭ ||

**೩೬೮**

ಉರಿಯ ಮಡಕೆಯಲ್ಲಿ ಅರಗಿನ ನೀರ ತುಂಬಿ,
ಪರಸತಿಯೆಂಬವಳು ಒಲೆಯ ಉರುಹತ್ಯೆದಾಳೆ.
ಒಲೆ ಬಾಯ ನುಂಗಿ, ಅಂಡವ ನೆಲ ನುಂಗಿ ದಿಂಡು ಬಿದ್ದಿತ್ತು.
ಏಣಾಂಕಧರ ಸೋಮೇಶ್ವರಲಿಂಗ ತಾನೆ ಬಲ್ಲ. || ೭೮ ||

**೩೬೯**

ಹಿಂಡಿನೊಳಗಣ ಕುರುಬನ, ತೋಳ ತಿಂಬಾಗ
ಕುರಿ ಮಾಣಿಸಬಲ್ಲವೆ ? ಕಟ್ಟೊಡೆಯ ಕೊಲುವಾಗ
ಮತ್ತೊಬ್ಬರು ಬೇಡಾ ಎನಲುಂಟೆ ?
ಹುಟ್ಟಿಸಿದಾತ ಭವದ ಗೊತ್ತಿಂಗೆ ತಳ್ಳುವಡೆ
ನಮ್ಮ ಗೊತ್ತಿನ ಅರಿವೇನ ಮಾಡುವುದು ?
ಉಭಯವು ನಿನ್ನಾಟ, ಏಣಾಂಕಧರ ಸೋಮೇಶ್ವರಲಿಂಗವೆ. || ೭೯ ||

**೩೭೦**

ಕಾಯಕ್ಕೆ ಸಾಕ್ಷಿ, ಜೀವಕ್ಕೆ ನಿಶ್ಚಯ.
ಉಭಯವ ಕುರಿತಲ್ಲದೆ ಬೇರೊಂದು ಅರಿಯಲಿಲ್ಲ.
ಭೇರಿಯ ಘಟ ಕ್ರೀ ಹೊಯಿದಡೆ ನಾದ ನಿಃಕ್ರೀ.
ಆ ಉಭಯದ ಭೇದ ಏನೆಂದರಿದುದು,
ಜ್ಞಾನಾಜ್ಞಾನ ಲೇಪವಾದುದು,
ಭಾವವಿರಹಿತ ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಉಭಯಸ್ಥಲಭೇದ. || ೮೦ ||

**೩೭೧**

**ಐಕ್ಯಾನುಭಾವಸ್ಥಲ :**

ಆತ್ಮ ಘಟದಲ್ಲಿ ನಿಂದಿಹ ಭೇದ :
ನೀರು ಮಣ್ಣಿನಂತೆ, ಬೇರು ಸಾರದಂತೆ ಗಂಧ ತರುವಿನಂತೆ

ಒಂದ ಬಿಟ್ಟೊಂದ ಹಿಂಗಿರವಾಗಿ,
ಅಂಗ ಲಿಂಗ ಪ್ರಾಣಯೋಗ ಸಂಬಂಧ ಸಂದಿಲ್ಲ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೮೧ ॥

೩೭೨

ಘಟ ಪೃಥ್ವಿಯಲ್ಲಿ ಸಿಕ್ಕಿ, ಆತ್ಮ ಭವದುಃಖಕ್ಕೊಳಗಾಗಿ
ತಾನರಿವ ಲಿಂಗಕ್ಕೆ ಎಲ್ಲಿ ಆಶ್ರಯವಾಯಿತ್ತು?
ಉಭಯಗೂಡಿ ಪ್ರಾಣಲಿಂಗಯೋಗ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೮೨ ॥

೩೭೩

ಹಸಿವು ತೃಷೆ, ಚೇತನ ಅಚೇತನಾದಿಗಳಿಗೆಯೂ ಉಂಟು
ಸ್ಥಾವರ ಚರಾದಿಗಳಿಗೆಲ್ಲಕೂ ಉಂಟು.
ಆತ್ಮನರಿವಿನ ಸಂಬಂಧ ಎಳ್ಳಿಂತುಟೂ ಇಲ್ಲ.
ಅದುಪಕಾಯದಂತೆ ತೋರಿ ಅಡಗುವ ಭೇದ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೮೩ ॥

೩೭೪

ಭ್ರಾಂತಳಿದು ನಿಂದಲ್ಲಿ ಅರ್ಚನೆ,
ವಿಕಾರವಳಿದಲ್ಲಿ ಪೂಜೆ, ಸಮತೆ ನಿಂದಲ್ಲಿ ನೈವೇದ್ಯ.
ಸಕಲವನರಿದು ಮರೆದಲ್ಲಿ ಪರಿಪೂರ್ಣ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೮೪ ॥

೩೭೫

ನಾಲಗೆಯ ಹಿಡಿದು ನುಡಿಯಬಹುದೆ ಅಯ್ಯಾ?
ಕೈ ಸಿಕ್ಕಿದಲ್ಲಿ ಓಡಬಹುದೆ ಅಯ್ಯಾ?
ಕ್ರೀಯ ಮರೆದು ಅರಿವನರಿಯಬಹುದೆ ಅಯ್ಯಾ?
ಕುಸುಮವ ಬಿಟ್ಟು ಗಂಧವ ಮುಡಿಯಬಹುದೆ ಅಯ್ಯಾ?
ಇಂತೀ ಉಭಯವನರಿತಡೆ ಪ್ರಾಣಲಿಂಗಯೋಗ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ॥ ೮೫ ॥

೩೭೬

ಸ್ವಾದವಿಲ್ಲದ ಹಣ್ಣು, ಸೌರಭವಿಲ್ಲದ ಕುಸುಮ,
ಸಾರವಿಲ್ಲದ ದ್ರವ್ಯ, ಅದಾರಿಗೆ ಯೋಗ್ಯ?

ಅರಿವಿಲ್ಲದವನ ಇಷ್ಟದ ಬರಿಯ ಡಂಬಕದ ಪೂಜೆ
ಅಡಿಯಿಡಲಿಲ್ಲ, ಏಣಾಂಕಧರ ಸೋಮೇಶ್ವರಲಿಂಗಕ್ಕೆ. || ೮೬ ||

೩೭೭

ಕುರುಡ ಕನ್ನಡಿಯ ಪಿಡಿದಲ್ಲಿ ಅದೇನ ಒಡಗೂಡುವ ?
ಬಧಿರಂಗೆ ಗಾಂಧರ್ವವಿರಲಿ ಸ್ವರಸಂಚವುಂಟೆ ?
ಅರಿವುಹೀನಂಗೆ ಘಟಧರ್ಮದ ಪೂಜೆಯಲ್ಲದೆ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಅರಿವು ಸನ್ನದ್ಧವಾಗಬೇಕು. || ೮೭ ||

೩೭೮

ಕೈದುವ ಹಿಡಿದಾಡುವ ವಿಧಾಂತನ ಭಾವದಂತಿರಬೇಕು,
ಜನದ ನಡುವೆ ಆಡುವ ಅಹಿಯ ಮನದಂತಿರಬೇಕು,
ಕಣನ ಹೊಕ್ಕ ಭಟನ ಉಭಯಕರದಂತಿರಬೇಕು,
ಕ್ರೀ ಜ್ಞಾನಸಂಬಂಧ
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ಸ್ವಾನುಭಾವಿಯಾದ ಶರಣಂಗೆ. || ೮೮ ||

೩೭೯

ಹೊಳೆಯನೀಸುವನಂತೆ ಧರೆಯ ಒಲವರವುಂಟೆ ?
ಸಂಸಾರಸಂಬಂಧಿಯಾದಲ್ಲಿ ಅವಿರಳನ ಗುಣವ ವೇಧಿಸಬಲ್ಲನೆ ?
ನೆಲಹೊಲವನರಿಯದವ ಕಳವಿಗೆ ಹೋದಂತಾಯಿತ್ತು.
ಸ್ಥಲಕುಳವನರಿಯದವನಿಗೆ ಕ್ರೀಯ ನೆಲ ಶುದ್ಧಿಯೇಕೆ ?
ಏಣಾಂಕಧರ ಸೋಮೇಶ್ವರಲಿಂಗದಲ್ಲಿ ಉಭಯಭಾವವನರಿಯಬೇಕು. || ೮೯ ||

೩೮೦

ಉರಿ ಕುಡಿದ ಎಣ್ಣೆಯಂತೆ, ತಾರಕ ಕೊಂಡ ವಾರಿಯಂತೆ,
ಯಾತನೆ ಕೊಂಡ ವ್ಯಾಪ್ತಿಯಂತೆ, ಮಹಾರ್ಣವ ಕೊಂಡ ಮಣ್ಣಿನಂತೆ,
ಭಾವರೂಪು ಕ್ರೀಯಲ್ಲಿ ಅಡಗಿ, ಆ ಕ್ರೀ ಉರಿಕರ್ಪುರದಂತೆ ಉಭಯನಾಮವಡಗಿ,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ಸುಳುಹುದೋರದಿದ್ದಿತ್ತು. || ೯೦ ||

೩೮೧

**ಅಂಗಭಾವಜ್ಞಾನ ಲೇಪಸ್ಥಲ :**

ಲಿಂಗವೆಂದು ಹಿಂಗಿ ಭಾವಿಸುವಾಗ
ಅರಿವು ಲಿಂಗಕ್ಕೆ ಹೊರಗೆ.

ಆ ಲಿಂಗ ಚಿತ್ತದ ಕೈಯಲ್ಲಿ ಪ್ರಮಾಣಿಸಿಕೊಂಬಾಗ
ಅಣೋರಣೀಯಾನ್ ಮಹತೋ ಮಹೀಯಾನ್
ಎಂದು ಪ್ರಮಾಣಿಸಿಕೊಂಬುದು ಹುಸಿಯೆ ?
ತೊರೆಯುದಕ ಮಳಲ ಮರೆಯಲ್ಲಿ ಬಂದು
ಸಂದೇಹವ ಬಿಡಿಸುವಂತೆ,
ಎಲ್ಲಿಯೂ ನೀನೇ, ಏಣಾಂಕಧರ ಸೋಮೇಶ್ವರಲಿಂಗವೆ. ॥ ೯೧ ॥

೩೮೨

ನಾನಾ ವೇಷವ ತೊಟ್ಟು ಆಡುವನಂತೆ
ಬಹುರೂಪು ಬೇರಲ್ಲದೆ ಆಡುವ ತಾನೊಬ್ಬನೆ,
ಎಲ್ಲಿ ಅರ್ಪಿತ ಮುಖ, ಅಲ್ಲಿಯೂ ನೀನೇ
ಏಣಾಂಕಧರ ಸೋಮೇಶ್ವರಲಿಂಗವೆ. ॥ ೯೨ ॥

೩೮೩

ಮನಕ್ಕೆ ಸಾಹಿತ್ಯವಾದಲ್ಲದೆ, ಕಾಯಕ್ಕೆ ಸಾಹಿತ್ಯವಾಗಬಾರದು.
ಆತ್ಮ ಘಟದಲ್ಲಿ ನಿಂದಲ್ಲದೆ, ಚೇತನರೂಪಾಗಿ ನಡೆಯಬಾರದು.
ಇಂತೀ ದ್ವಯ ಘಟಿಸಿ ನಿಂದಲ್ಲಿ, ಏಣಾಂಕಧರ ಸೋಮೇಶ್ವರಲಿಂಗ ತಾನೆ. ॥ ೯೩ ॥

೩೮೪

ಅಂಗಕ್ಕೆ ಲಿಂಗ, ಮನಕ್ಕೆ ಅರಿವಾಗಬೇಕೆಂಬ ಸಂದೇಹವೆಂತುಟೊ ?
ಜೀವನವ ಹಿಂಗಿದ ಘಟ ಜೀವಿಸಬಲ್ಲುದೆ ?
ಭಾವಕ್ಕೆ ಇದಿರಿಟ್ಟು, ಕುರುಹು ಅಭಿಮುಖವಾಗಿ ಅರಿವುದಕ್ಕೆ ತೆರನಿಲ್ಲ,
ಏಣಾಂಕಧರ ಸೋಮೇಶ್ವರಲಿಂಗ ತಾನಾಗಿ. ॥ ೯೪ ॥

೩೮೫

ಇಷ್ಟ ಆತ್ಮನೆಂದು ಮುಟ್ಟಲುಂಟೆ ಭಿನ್ನವಾಗಿ ?
ಮುಟ್ಟಿ ಮುಟ್ಟಿಸಿಕೊಂಬುದು ಇಷ್ಟವೋ, ಮನವೋ?
ಉಭಯವ ಹಿಂಗಿಸಿದಲ್ಲಿ ಕಾಬುದು ಇನ್ನೇನು ?
ಏಣಾಂಕಧರ ಸೋಮೇಶ್ವರಲಿಂಗ ಅನ್ಯಭಿನ್ನವಿಲ್ಲ. ॥ ೯೫ ॥

೩೮೬

ಅರ್ಚನೆಯ ಮಾಡಿದಲ್ಲಿ ಭಕ್ತಿ ನಾಸ್ತಿ.
ಪೂಜೆಯ ಮಾಡಿದಲ್ಲಿ ಪುಣ್ಯ ನಾಸ್ತಿ.
ನಾನಾ ವಿಚಾರವನರಿದಲ್ಲಿ ಭವಂ ನಾಸ್ತಿ.

ಏಣಾಂಕಧರ ಸೋಮೇಶ್ವರಲಿಂಗದಲ್ಲಿ
ನಾನೆಂಬುದನರಿತಲ್ಲಿ, ತಾ ನಾಸ್ತಿಯಾಯಿತ್ತು. ||೯೬||

**೩೮೭**

ಹೊಲಬು ಹೊಲಬನೆ ಕಂಡು, ಶಿಲೆ ಕುಲದಲ್ಲಿ ಅಳಿದು,
ಅನ್ನ ಅರ್ಪಿತದಲ್ಲಿ ಹಿಂಗಿ, ಉದಕ ಮಜ್ಜನದಲ್ಲಿ ನಿಂದು,
ಪ್ರಸಾದ ಪ್ರಸನ್ನದಲ್ಲಿ ಐಕ್ಯವಾಗಿ,
ಬಿಬ್ಬಿನ ಮನದಲ್ಲಿ ಒಬ್ಬುಳಿಯಾಯಿತ್ತು,
ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೯೭||

**೩೮೮**

ಬೆಣ್ಣೆ ಕೆಚ್ಚಲ ನುಂಗಿ, ಕಣ್ಣು ತಲೆಯ ನುಂಗಿ,
ತುದಿ ಬೇರಿನಲ್ಲಿ ಅಡಗಿತ್ತು.
ಏಣಾಂಕಧರ ಸೋಮೇಶ್ವರಲಿಂಗವೆಂಬುದು
ಅಲ್ಲಿಯೇ ಅಡಗಿತ್ತು. ||೯೮||

**೩೮೯**

ಕಾಣಿ ಕಡವರವ ಕಂಡು, ಶ್ರೇಣಿ ಸೇನೆಯ ನುಂಗಿ,
ಕಳ್ಳ ಬೆಳ್ಳನ ಒಡಗೂಡಿದ.
ಏಣಾಂಕಧರ ಸೋಮೇಶ್ವರಲಿಂಗವೆಂಬುದು ಎಲ್ಲಿಯೂ ಇಲ್ಲ. ||೯೯||

**೩೯೦**

ತಾನರಿದಲ್ಲಿ ಸಕಲವೆಲ್ಲ ತನ್ನೊಳಗಡಗಿತ್ತು.
ತಾ ಮರೆದಲ್ಲಿ ಸಕಲವ್ಯಾಪಾರ ತನ್ನಿರವಾಯಿತ್ತು.
ನಿಂದ ವಾರಿಯಲ್ಲಿ ಹಾವಸೆ ತನ್ನಿಂದ ಒದಗಿದಂತೆ,
ಚರಿಸೆ ಹಾವಸೆ ಹರಿದು ನಿರ್ಮಲವಾದಂತೆ,
ಅರಿವು ಮರವೆ ಬೇರೊಂದೆಡೆಯಿಲ್ಲ.
ಎಲೆ ಗಿಡು ಮುಳ್ಳಿನಂತೆ, ಉರಿ ಮಥನ ಕಾಷ್ಠದಂತೆ,
ಶಿಲೆ ಕುರುಹು ರೂಪಿನಂತೆ, ಫಲ ಖಲದಂತೆ,
ನಿರುತ ನಿಳಯದಂತೆ, ಭರತ ಶಬ್ದದಂತೆ,
ಜೀವ ನಾದದಂತೆ ಉಭಯ ಭಿನ್ನವಿಲ್ಲ.
ಏಣಾಂಕಧರ ಸೋಮೇಶ್ವರಲಿಂಗವೆಂಬುದು
ಅಲ್ಲಿಯೇ ಭಾವವಿರಹಿತವಾಯಿತ್ತು. ||೧೦೦||

### ೩೯೧

ಉರಿದು ಬೇವದು ಉರಿಯೋ, ಮರನೋ ?
ಹರಿದು ಕೊರೆವದು ನೆಲನೋ, ನೀರೋ ?
ನೆಲ ನೀರಿನಂತಾದುದು ಅಂಗಲಿಂಗಸಂಬಂಧ.
ಉರಿ ಮರನಂತಾದುದು ಪ್ರಾಣಲಿಂಗಸಂಬಂಧ.
ಈ ನಾಲ್ಕರ ಗುಣ ಉಭಯಕೂಟವಾದುದು ಶರಣಸ್ಥಲ.
ಆ ಸ್ಥಲ ಸುರಧನುವಿನ ಕೆಲವಳಿಯಂತೆ,
ಮರೀಚಿಕಾಜಲವಳಿಯಂತೆ,
ಮಂಜಿನ ರಂಜನೆಯ ಜಂಝಾಮಾರುತನಂತೆ,
ಆ ಸಂಗ ನಿಸ್ಸಂಗ ಐಕ್ಯಸ್ಥಲ, ನಿಃಕಳಂಕ ಮಲ್ಲಿಕಾರ್ಜುನ
ರೂಪಳಿದು ನೀರಾದಂತೆ
ಅಂಗಲಿಂಗಸಂಬಂಧಿ ಏಣಾಂಕಧರ ಸೋಮೇಶ್ವರಲಿಂಗದಲ್ಲಿ. ||೧೦೧||

### ೩೯೨

ಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಭಕ್ತಿ ಸಾಧ್ಯವಾಯಿತ್ತು.
ಚೆನ್ನಬಸವಣ್ಣನ ಪ್ರಸಾದವ ಕೊಂಡ ಕಾರಣ
ಎನಗೆ ಜ್ಞಾನ ಸಾಧ್ಯವಾಯಿತ್ತು.
ಪ್ರಭುದೇವರ ಪ್ರಸಾದವ ಕೊಂಡ ಕಾರಣ
ಎನಗೆ ವೈರಾಗ್ಯ ಸಾಧ್ಯವಾಯಿತ್ತು.
ಇಂತೀ ಮೂವರು ಒಂದೊಂದು ಕೊಟ್ಟ ಕಾರಣ
ಎನಗೆ ಸರ್ವವೂ ಸಾಧ್ಯವಾಯಿತ್ತು.
ಏಣಾಂಕಧರ ಸೋಮೇಶ್ವರಾ,
ನಿಮ್ಮ ಶರಣರೆನ್ನ ಮಾತಾಪಿತರು. ||೧೦೨||

■ ■

## ಬೊಕ್ಕಸದ ಚಿಕ್ಕಣ್ಣನ ವಚನ

೩೯೩

ಅಂಗದ ಬೊಕ್ಕಸದ ಮಂದಿರಕ್ಕೆ
ಚಿದ್ಘನಲಿಂಗವೆಂಬುದೊಂದು ಬೀಗ.
ತ್ರಿಗುಣವೆಂಬ ಮೂರೆಸಳಿನ ಸಿಕ್ಕು.
ಒಂದು ಪೂರ್ವಗತಿ, ಒಂದು ಮಧ್ಯಗತಿ,
ಒಂದು ಉತ್ತರಗತಿಯಾಗಿ ಸಿಕ್ಕಿದವು ಮೂರೆಸಳು.
ಆ ಎಸಳಿಗೆ ಘಟ ಒಂದೆ ಒಡಲು.
ಎಸಳ ತೆಗವುದಕ್ಕೆ ಕೈಯ ಕಾಣೆ.
ಪ್ರತಿ ಕೈಗೆ ಎಸಳು ಅಸಾಧ್ಯ ನೋಡಾ.
ಇಂತೀ ಬೀಗದ ಗುಣವ
ಬಸವಣ್ಣಪ್ರಿಯ ನಾಗರೇಶ್ವರಲಿಂಗಾ ನೀವೇ ಬಲ್ಲಿರಿ. ||೧||

೩೯೪

ಅಂಗಲಿಂಗಸಂಬಂಧಿಗಳು ನಿಮ್ಮನರಿಯರು.
ಪ್ರಾಣಲಿಂಗಸಂಬಂಧಿಗಳು ನಿಮ್ಮನರಿಯರು.
ಎಂತೆನೆ, ಅಂಗಲಿಂಗವೆಂದು, ಪ್ರಾಣಲಿಂಗವೆಂದು
ಉಭಯದ ಸಂದುಂಟೆ ?

ಕರ್ಪೂರಕುಂಭದಲ್ಲಿ ಹಾಕಿದ ಕಿಚ್ಚು
ಒಳಗು ಬೆಂದು, ಹೊರಗು ನಿಂದುದುಂಟೆ ?
ಇಂತೀ ಇಷ್ಟಲಿಂಗ ಪ್ರಾಣಲಿಂಗವೆಂದು
ಉಭಯದ ಗುಟ್ಟಿನಲ್ಲಿ ಮತ್ತರಾದರಿಗೆ
ಇಷ್ಟ ದೃಷ್ಟದಲ್ಲಿ ಇಲ್ಲ, ಆತ್ಮನು ನಿಶ್ಚಯದಲ್ಲಿ ನಿಲ್ಲ.
ಬಸವಣ್ಣಪ್ರಿಯ ನಾಗರೇಶ್ವರಲಿಂಗವನೆತ್ತ ಬಲ್ಲರೊ ? || ೨ ||

೩೯೫

ಆ ಬೊಕ್ಕಸದ ಮನೆಯಿಪ್ಪ ಭೇದ :
ಹೊರಗಣ ಹೊದಕೆ ನಾನಾ ಚಿತ್ರವಿಚಿತ್ರ.
ಮಳೆಗೆ ನೆನವುದು, ಬೆಂಕಿಗೆ ಬೇವುದು,
ಗಾಳಿಗೆ ಮುರಿಯುವುದು.
ಆ ಮನೆಗೆ ವಿರೋಧವಾಹಲ್ಲಿ ಪಟ್ಟೆ ಕೆಡದು
ದೇವಾಂಗ ಬೇಯದು, ರತ್ನ ಗಾಳಿಯ ತಪ್ಪಲಿಗೆ ಒಳಗಾಗದು.
ಈ ಬೊಕ್ಕಸದ ಮನೆಯ ಹೊರಗಣ ಕೇಡು,
ಒಳಗಣ ಲಾಭವ ನಿರೀಕ್ಷಿಸಿ ನೋಡಬೇಕು.
ಬಸವಣ್ಣಪ್ರಿಯ ನಾಗರೇಶ್ವರಲಿಂಗವ ಕೇಳಬೇಕು. || ૩ ||

೩೯೬

ಎಲ್ಲರ ಪರಿಯಲ್ಲ ಎನ್ನ ಊಳಿಗ.
ಬಸವಣ್ಣ ಚೆನ್ನಬಸವಣ್ಣ ಕೊಟ್ಟ ಕಾಯಕ
ಸತ್ಕ್ರೀಯೆಂಬ ಅರಸಿಯ ಅಪಮಾನಕ್ಕೆ,
ಲೌಕಿಕಕ್ಕೆ, ಬೊಕ್ಕಸದ ಭಂಡಾರಕ್ಕೆ.
ಈ ವರ್ತಕ ಶುದ್ಧವಾದ ಮತ್ತೆ
ಒಳಗಣ ಮುತ್ತು, ಬೆಳಗುವ ರತ್ನ, ಥಳಥಳಿಸುವ ವಜ್ರ.
ಈ ಕಾಯಕದ ಹೊಲಬ ಕೊಟ್ಟ ಮತ್ತೆ
ಕಳವಿನಿಸಿಲ್ಲದಿರಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿಯಬಲ್ಲಡೆ. || ೪ ||

೩೯೭

ಕಾಯ ಧರ್ಮ ಕರ್ಮವನುಂಬನ್ನಕ್ಕ
ಜೀವ ಭವಕ್ಕೆ ಬಪ್ಪುದು ತಪ್ಪದು.
ಅದು ಕುಂಭದೊಳಗಣ ಜಲ ಹಿಂಗುವನ್ನಕ್ಕ

ಹುಗಿಲವಾಯಿತ್ತು.
ಕುಂಭ ಹೋಳಾಗಿ ಜಲ ನೆಲದಲ್ಲಿ ಹಿಂಗೆ,
ಉಭಯದ ಬಂಧ ಬಿಟ್ಟಿತ್ತು.
ಕಾಯ ಕರ್ಮವನರಿಯದೆ ಜೀವ ಭವವನುಣ್ಣದೆ,
ಸರ್ಪನ ದವಡೆಯಲ್ಲಿ ಸಿಕ್ಕಿದ ಕಪ್ಪೆಯಂತೆ
ಆ ವಿಷ ತಪ್ಪಿದ ಮತ್ತೆ ನೆಟ್ಟಹಲ್ಲೇನ ಮಾಡುವದು.
ಇಂತೀ ಗುಣವ ತಪ್ಪೂದು, ತಪ್ಪಿ ಒಪ್ಪವನೊಪ್ಪಿದಲ್ಲಿ
ಬಸವಣ್ಣಪ್ರಿಯ ನಾಗರೇಶ್ವರಲಿಂಗ ನಿಶ್ಚಿಂತನಾಗಿ. || ೫ ||

### ೩೯೮

ಗಾಂಧರ್ವಕ್ಕೆ ರಾಗವ ಹೆಸರಿಟ್ಟಂತೆ,
ಸ್ವರವೊಂದು, ಸಂಚಾರದ ಪರಿ ಬಣ್ಣ ಬೇರಾದಂತೆ,
ಗೋವರ್ಣ ಹಲವು, ಕ್ಷೀರ ಏಕವರ್ಣವಾದಂತೆ,
ಕಾಯಕ ಹಲವಾದಲ್ಲಿ ಮಾಡುವ ಮಾಟ, ಶರಣರೊಳಗಾಟ,
ಲಿಂಗವ ಕೂಟ ಕೂಡುವ ಏಕವಾಗಿರಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿವುದಕ್ಕೆ. || ೬ ||

### ೩೯೯

ಗುರುವಾದಡೆ ಭೃತ್ಯರ ಚಿತ್ತವನರಿಯಬೇಕು.
ಲಿಂಗವಾದಡೆ ಅರ್ಚಕನ ಚಿತ್ತದಲ್ಲಿ ಅಚ್ಚೊತ್ತಿದಂತಿರಬೇಕು.
ಜಂಗಮವಾದಡೆ ಉತ್ಪತ್ತಿ ಸ್ಥಿತಿ ಲಯದ
ಗೊತ್ತ ಮೆಟ್ಟದೆ ನಿಶ್ಚಿಂತನಾಗಿರಬೇಕು.
ಇಂತೀ ತ್ರಿವಿಧಲಿಂಗ ತ್ರಿವಿಧಾರ್ಪಣಕ್ಕೆ ಒಳಗಾಗಿ,
ತ್ರಿವಿಧಾಂಗ ತ್ರಿವಿಧಾರ್ಪಣಕ್ಕೆ ಒಳಗಾಗಿ,
ತ್ರಿವಿಧಾಂಗ ತ್ರಿವಿಧಮಲಕ್ಕೆ ಹೊರಗಾಗಿ,
ತ್ರಿವಿಧಾತ್ಮ ತ್ರಿವಿಧ ಅರಿವಿನಲ್ಲಿ ಕರಿಗೊಂಡು,
ವಿಶ್ವಾಸಕ್ಕೆ ಎಡದೆರಪಿಲ್ಲದೆ ತನ್ಮಯಮೂರ್ತಿ ತಾನಾದ ನಿಜೈಕ್ಯಂಗೆ
ರಾಗ ವಿರಾಗವಿಲ್ಲ, ಪುಣ್ಯ ಪಾಪವಿಲ್ಲ, ಕರ್ಮ ನಿಃಕರ್ಮವಿಲ್ಲ.
ಇಂತೀ ಭಿನ್ನಭಾವನಲ್ಲ,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿದ ಶರಣ. || ೭ ||

### ೪೦೦

ಗುರುವಿಂಗೆ ಗುರುವುಳ್ಳನ್ನಕ್ಕ, ಲಿಂಗಕ್ಕೆ ಲಿಂಗವುಳ್ಳನ್ನಕ್ಕ
ಜಂಗಮಕ್ಕೆ ಜಂಗಮವುಳ್ಳನ್ನಕ್ಕ, ಆತ್ಮಂಗೆ ಅರಿವುಳ್ಳನ್ನಕ್ಕ,

ಅರಿವು ಮರವೆಗೆ ಇದಿರೆಡೆಯುಂಟು.
ಗುರುವಿರ್ೕಗೆ ಉಭಯವಿಲ್ಲದೆ, ಲಿಂಗಕ್ಕೆ ಉಭಯವಿಲ್ಲದೆ,
ಜಂಗಮಕ್ಕೆ ಉಭಯವಿಲ್ಲದೆ,
ಆತ್ಮಂಗೆ ಎರಡಳಿದು, ನಿಜ ಏಕವಹನ್ನಬರ
ಒಂದನಹುದು ಒಂದನಲ್ಲಾ ಎಂದು
ಸಂದೇಹಕ್ಕೆ ಒಡಲಾಗಬಾರದು.
ತಾ ನಿಂದ ನಿಂದಲ್ಲಿಯೇ ಸಂದಳಿಯಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿಯಬಲ್ಲಡೆ. ॥ ೮ ॥

೪೦೧

ನಾನಾ ಬಹುವರ್ಣದ ಬೊಕ್ಕಸವ ಹೊತ್ತು ಮಾಡುವಲ್ಲಿ
ಭಾವದ ಬಹುಚಿತ್ತವನರಿಯಬೇಕು.
ನಾನಾ ವರ್ಣದ ಆಭರಣ, ಹದಿನೆಂಟು ಆಶ್ರಯಂಗಳ ತೊಡುವಲ್ಲಿ
ದ್ರವ್ಯವ ಕೊಡುವಲ್ಲಿ ಇಂದ್ರಿಯಾತ್ಮನ ಬೆಂಬಳಿಯನರಿಯಬೇಕು.
ಎಂಟುರತ್ನದ ಕಾಂತಿ, ಜೀವರತ್ನದ ಕಳೆ
ಭಾವಿಸಿ ಏಕವ ಮಾಡಿ ನಡೆವುದು.
ನೀವು ಕೊಟ್ಟ ಕಾಯಕ ತನುವಿಂಗೆ ಕ್ರೀ, ಆತ್ಮಂಗೆ ಅರಿವು.
ಆ ಅರಿವಿಂಗೆ ಮಹಾಬೆಳಕು ಒಡಗೂಡಿ ಕರಿಗೊಂಡಲ್ಲಿ
ಬೊಕ್ಕಸದ ಮಣಿಹವನೊಪ್ಪಿಸಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗಕ್ಕೆ. ॥ ೯ ॥

೪೦೨

ಶೀತವುಳ್ಳನ್ನಕ್ಕ ಉಷ್ಣವ ಪ್ರತಿಪಾದಿಸಬೇಕು.
ಉಷ್ಣವುಳ್ಳನ್ನಕ್ಕ ಶೀತವ ಪ್ರತಿಪಾದಿಸಬೇಕು.
ದಿವದಲ್ಲಿ ಎದ್ದು, ರಾತ್ರಿಯಲ್ಲಿ ಒರಗುವನ್ನಕ್ಕರ
ಅದ್ವೈತ ಅಸತ್ಯ ನೋಡಾ.
ಇದು ಕಾರಣ, ಕ್ರಿಯೆ ಮರೆಯಲಿಲ್ಲ,
ಅರಿವು ಶೂನ್ಯವೆಂದು ಬಿಡಲಿಲ್ಲ.
ಅದು ಶಿಲೆಯ ಮರೆಯ ಪಾವಕ, ತಿಲದೊಳಗಣ ತೈಲ.
ಅವರ ಒಲವರದಲ್ಲಿ ಕುಲವ ಕಾಣಬೇಕು,
ಬಸವಣ್ಣಪ್ರಿಯ ನಾಗರೇಶ್ವರಲಿಂಗವನರಿವುದಕ್ಕೆ. ॥ ೧೦ ॥

■ ■

## ಭರಿತಾರ್ಪಣದ ಚೆನ್ನಬಸವಣ್ಣನ ವಚನ

೪೦೩

ಅರಿವಿಂಗೂ ಮರವೆಯ ದೆಸೆಯಲ್ಲಿ ಓಲಾಡುವ
ಇಂದ್ರಿಯಂಗಳ ಸಮೂಹ.
ಈ ಉಭಯವೂ ಕೂಡಿ, ಮಹವೊಡಗೂಡಿದಲ್ಲಿ ಭರಿತಾರ್ಪಣ.
ಅರಿವುಳ್ಳವನೆಂದು, ನಿಬ್ಬೆರಗು ಕರಿಗೊಂಡವನೆಂದು,
ಸರ್ವಸಂಗಪರಿತ್ಯಾಗಿಯೆಂದು ತಾನರಿಯದೆ,
ಉಳಿದರ ಕೈಯಿಂದ, ಪರಾಧೀನರಿಗೊರೆಯದೆ,
ಅಮೃತ ಸುಧೆಯಂತೆ, ಪರಿಪೂರ್ಣ ಕಳೆದಂತೆ,
ಅರಿದರಿಯದಂತಿದ್ದುದು ಭರಿತಾರ್ಪಣ.
ಹೀಂಗಲ್ಲದೆ ಅಜಯಾಗವ ಮಾಡುವ ವಿಪ್ರನ ಕರ್ಮದಂತೆ
ನಾನಲ್ಲ ನೇಣು ಕೊಂದಿತ್ತೆಂದು ದಾಯಗಾರಿಕೆಯಲ್ಲಿ ಹೋಹ
ದರ್ಶನ ಥಾಳಕವಂತಂಗೆ, ತನ್ನ ಕಾಲ ವೇಳೆಗೆ
ತಕ್ಕಹಾಗೆ ಭಕ್ತಿಯ ಮರೆದು, ಸತ್ಯವ ತೊರೆದ
ದುರ್ಮತ್ತಂಗೆ ಭರಿತಾರ್ಪಣದ ಕಟ್ಟುಂಟೆ ?
ಇಂತೀ ಭೇದಂಗಳ ಯುಕ್ತಿಯಲ್ಲಿ
ಸತ್ತು ಚಿತ್ತು ಆನಂದವೆಂಬ ಗೊತ್ತ ಮುಟ್ಟದೆ,

ಮನ ಘನದಲ್ಲಿ ನಿಂದು ಉಭಯದೆಡೆಗೆಟ್ಟುದು ಭರಿತಾರ್ಪಣ.
ಈ ಗುಣ ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗ ಸಂಗ. ||೧||

೪೦೪

ಇಷ್ಟಲಿಂಗಕ್ಕೆ ದೃಷ್ಟಪದಾರ್ಥಂಗಳ ಅರ್ಪಿಸುವಲ್ಲಿ
ಕಟ್ಟಳೆವುಂಟು, ತನ್ನ ಘಟದ ಲಕ್ಷಣವುಂಟು.
ಇಂತೀ ಉಭಯವ ಪ್ರಮಾಣಿಸಿಕೊಂಡು
ಅರ್ಪಣದಿಂದ ಅರ್ಪಿಸುವಲ್ಲಿ ತೃಪ್ತಿಯ ಅಭಿಲಾಷೆಯಿಂದ
ಸತ್ಯ ಸದ್ಭಕ್ತರ ಸಹಪಙ್ತಿಯಲ್ಲಿ
ಕ್ಷುತ್ತಿನ ಅಪೇಕ್ಷಕ್ಕಾಗಿ ಮತ್ತೆ ಪುನರಪಿಯಾಗಿ
ಇಕ್ಕು ತಾಯೆಂದಡೆ, ಅದು ತನ್ನ ಕ್ಷುತ್ತಿನ ಭೇದವೊ ?
ಭರಿತಾರ್ಪಣದ ಯುಕ್ತಿಯ ಭಿತ್ತಿಯೊ?
ಭರಿತಾರ್ಪಣವೆಂಬಲ್ಲಿ ಲಿಂಗಕ್ಕೆ ಕೊಟ್ಟಲ್ಲದೆ ಮುಟ್ಟೆನೆಂಬ ಕಟ್ಟೊ ?
ಅಲ್ಲಾ, ಸಾಧಕಾಂಗಿಗಳ ಸಂಗದ ಗುಣದಿಂದ ಬಂದ ಮುಟ್ಟೊ ?
ಇಂತಿವ ತಿಳಿದು, ಮನವಚನಕಾಯ ಕರಣೇಂದ್ರಿಯಂಗಳು
ಮುಂತಾದ ಭೇದಂಗಳಲ್ಲಿ ಒಮ್ಮೆಗೊಮ್ಮೆ ತುತ್ತನಿಡುವಲ್ಲಿ,
ಸವಿಯಾದ ರಸಾನ್ನಗಳ ಚಪ್ಪರಿವಲ್ಲಿ,
ಅಲ್ಲಿಗಲ್ಲಿಗೆ ಉಭಯವಳಿದ ಭರಿತಾರ್ಪಣದ ತೆರನ ಕಂಡು,
ಈ ಗುಣ ಜಿಹ್ವೇಂದ್ರಿಯದ ಭರಿತಾರ್ಪಣ.
ಇಂತೀ ಭರಿತಾರ್ಪಣವನಂಗೀಕರಿಸಿದ
ಸರ್ವಾವ್ಯವಧಾನಿಯ ಎಚ್ಚರಿಕೆಯ ಮುಟ್ಟು,
ಮುಂದೆ ಗುಹ್ಯೇಂದ್ರಿಯಕ್ಕೆ ಸಿಕ್ಕು.
ಇಂತೀ ವಿಷಯ ವ್ಯಸನಾದಿಗಳಲ್ಲಿ
ಭರಿತಾರ್ಪಣದಿಂದ ಕೂಡುವ ಪರಿಯಿನ್ನೆಂತೊ ?
ಇಂದ್ರಿಯ ಬಿಡುವನ್ನಕ್ಕ ಪುನರಪಿಯಾಗಿ ಅಂಗೀಕರಿಸಿಯಲ್ಲದೆ
ಚಲನೆಯ ಗುಣ ಹೆರೆಹಿಂಗದು.
ಅಲ್ಲಿಯ ಭರಿತಾರ್ಪಣದ ಪರಿಯ ಬಲ್ಲವನಾದಡೆ
ಸರ್ವ ಎಲ್ಲಾ ಗುಣದಲ್ಲಿ ಭರಿತಾರ್ಪಣ,
ಲಿಂಗಾಂಗ ಪರಿಪೂರ್ಣನೆಂಬೆ.
ಇಂತೀ ಗುಣವನರಿಯದೆ ಕಂಡಕಂಡವರ ಕಂಡು ಕೈಕೊಂಡು
ಈ ವ್ರತವನಂಗೀಕರಿಸಿದನಾದಡೆ
ಗುರುವಿಂಗೆ ದೂರ, ಲಿಂಗ ಅವಂಗಿಲ್ಲ, ಚರಪ್ರಸಾದ ಸಲ್ಲ.

ಇಂತಿವನರಿಯದೆ, ಗೆಲ್ಲಸೋಲಕ್ಕೆ ಹೋರಿಹೆನೆಂದಡೆ
ಚೆನ್ನಬಸವಣ್ಣನ ಕೋರಡಿಯ ಕೊಡುವೆ.
ಸಂಗನಬಸವಣ್ಣನ ಮೆಚ್ಚಿಸುವೆ.
ಪ್ರಭು ನಿಜಗುಣದೇವರ ತಲೆದೂಗಿಸುವೆ.
ಇದಕ್ಕೆ ಹಾಕಿದೆ ಮುಂಡಿಗೆ, ವರ್ಮದ ತಲೆಸುತ್ತು,
ಎನ್ನೊಡೆಯ ಚೆನ್ನ ಚೆನ್ನಕೂಡಲ ರಾಮೇಶ್ವರಲಿಂಗ ಸಾಕ್ಷಿಯಾಗಿ. ||೨||

೪೦೫

ಉಂಬೆಡೆಯಲ್ಲಿ ಭರಿತಾರ್ಪಣವೆಂದು
ಮಿಕ್ಕಾದ ವಿಷಯೇಂದ್ರಿಯಂಗಳಲ್ಲಿ
ಭರಿತಾರ್ಪಣದ ಸಂದನಳಿದು ಅರ್ಪಿಸಬಲ್ಲಡೆ,
ಆ ಗುಣ ಉಭಯಭರಿತಾರ್ಪಣಭೇದ.
ಇದನರಿಯದೆ ಲಿಂಗಕ್ಕೆ ಸಂದಲ್ಲದೆ,
ತಾನೊಂದು ದ್ರವ್ಯವ ಮುಟ್ಟೆನೆಂಬ ಸಂದೇಹದ ಸಂಕಲ್ಪವಲ್ಲದೆ,
ಭರಿತಾರ್ಪಣಾಂಗಿಯ ಲಿಂಗಾಂಗಿಯ ಮುಟ್ಟಲ್ಲ.
ಭರಿತಾರ್ಪಣವಾವುದೆಂದಡೆ :
ತಾ ಕಂಡುದ ಮುಟ್ಟದೆ, ತಾ ಮುಟ್ಟಿದುದನರ್ಪಿಸದೆ,
ತಾ ಕಾಣದುದ ಮುನ್ನವೆ, ತಾ ಕಂಡುದ ಮುಟ್ಟದ ಮುನ್ನವೆ
ಅರ್ಪಿತವಾದುದ ದೃಷ್ಟಾಂತವನರ್ರಿದು,
ಭರಿತಾರ್ಪಣವೆಂಬ ಪರಿಪೂರ್ಣತ್ವವಂ ಕಂಡು,
ಅಂಗಸಹಿತವಾಗಿ ಮುಟ್ಟದೆ, ಮನಸಹಿತವಾಗಿ ನೆನೆಯದೆ,
ಇಂದ್ರಿಯಂಗಳು ಸಹಿತವಾಗಿ ಒಂದನೂ ಅನುಭವಿಸದೆ
ಲಿಂಗವೆ ಅಂಗವಾಗಿ, ಅಂಗವೆ ಲಿಂಗವಾಗಿ
ಅಂದಂದಿಗೆ ಕಾಯ ಹಿಂಗಬೇಕೆಂಬುದನರಿದಾಗವೆ
ಭರಿತಾರ್ಪಣ, ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗದ ಸಂಗ. ||೩||

೪೦೬

ಒಮ್ಮೆಗೆ ಸುರಿದು, ಮತ್ತೊಮ್ಮೆಗೆ ಬೇಡದಿಪ್ಪುದೆ ಭರಿತಾರ್ಪಣವೆ ?
ಮುಟ್ಟಿ ಮುಟ್ಟಿ ಅರ್ಪಿಸಲಾರದೆ
ಗುಪ್ಪೆಯಾಗಿ ಸುರಿಯಿಸಿ ಕೊಂಡು ಕೊಂಬುದು
ಇದು ಕೃತ್ಯದ ನೇಮ, ಭರಿತಾರ್ಪಣವೆ ? ಭರಿತಾರ್ಪಣವಾವುದೆಂದಡೆ :
ಪರಸ್ತ್ರೀ ಒಲಿದು ಬಂದಲ್ಲಿ, ನೇಮಕಲ್ಲದ ದ್ರವ್ಯನೆರೆದು,

ನಿಕ್ಷೇಪ ಕೈಲೆಡೆಯ ಕಡವರ ವಿಶ್ವಾಸಿಸಿದಲ್ಲಿ, ಘಾತಕತನವ ಬಿಟ್ಟು,
ಇಂತೀ ಅವಗುಣದಲ್ಲಿ ಮಲಿನನಲ್ಲದೆ ಸ್ವಾನುಭಾವಸಿದ್ಧಾನಾಗಿ
ಕಾಯಕರ್ಮಕ್ಕೊಳಗಲ್ಲದೆ,
ಜೀವ ನಾನಾ ಜೀವಂಗಳಲ್ಲಿ ಹುಟ್ಟಿ ಹೊಂದದೆ,
ಆತ್ಮನ ವಸ್ತುವಲ್ಲದೆ ಮತ್ತೇನನೂ ಅರಿಯದೆ,
ಪರಿಭ್ರಮವ ಹರಿದುದು ಭರಿತಾರ್ಪಣ.
ಈ ಗುಣ ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗ ಸಂಗ. ||೪||

### ೪೦೭

ಕಾಷ್ಠಪದಾರ್ಥವನರಿದು, ಕರ್ಮಪದಾರ್ಥವ ಶೋಧಿಸಿಕೊಂಡು,
ವರ್ಮಪದಾರ್ಥವ ನಿರ್ಧರಿಸಿ,
ಇಂತೀ ಪದಾರ್ಥಂಗಳ ಅರ್ಪಿಸುವಲ್ಲಿ
ಬಂದ ಬಟ್ಟೆ, ಮುಂದಣ ಪಯಣ.
ನಿಂದ ಮಧ್ಯದಲ್ಲಿ ಕಾಬ ಸುಖಂಗಳ ಸಂದನಳಿದುದು, ಭರಿತಾರ್ಪಣ
ಸಂದಿಗೊಂದಿಯ ಸಂಸಾರಿಗಳಲ್ಲಿ ಬೆಂಬಳಿಯಾಗಿಹುದೆ ?
ಅವರ ಮಂದಿರಂಗಳಲ್ಲಿ ಸ್ತುತಿನಿಂದ್ಯಾದಿಗಳ ತಂದುಕೊಳ್ಳದೆ,
ಅವರಿಗೆ ಬಂಧ ಮೋಕ್ಷ ಕರ್ಮಂಗಳ ಭಾವಕ್ಕೆ ಸಂದನಿಕ್ಕದೆ,
ತಾ ಬಂದನಲ್ಲದಿಪ್ಪುದೆ ಭರಿತಾರ್ಪಣ.
ಇಂತೀ ನಿಹಿತ ತಿಳಿದು, ಸಂಸಾರ ಘಾತಕವ ಬಿಟ್ಟು,
ಪರದೇಶಿಕತ್ವವಾದುದು ಭರಿತಾರ್ಪಣ.
ಈ ಗುಣ ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗ ಸಂಗ. ||೫||

### ೪೦೮

ಗುರು ಚರ ಕರ್ತರು ತಾವಾದ ಮೇಲೆ
ಭಕ್ತನಾಚಾರದಲ್ಲಿರಬೇಕು.
ಮೃಷ್ಟಾನ್ನಕಿಚ್ಛೈಸದೆ ದೂರಸ್ಥರಾಗಿ,
ಗಣಿಕ ಪಾರದ್ವಾರ ಹುಸಿ ಕೊಲೆ ಕಳವು ಹಿಂಸೆಗೊಡಂಬಡದೆ,
ಮತ್ತೆ ಕಿಸುಕುಳದ ಗಂಟ ಕೆಲಕೊತ್ತಿಸಿ,
ತಾ ಹರಚರವಾದ ಪರಮಲಿಂಗಾಂಗಿಗೆ
ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗೈಕ್ಯ. ||೬||

೪೦೯

ತಾನರಿದು ಮತ್ತೇನುವ ಮುಟ್ಟೆನೆಂಬುದು
ಭರಿತಾರ್ಪಣದ ಕಟ್ಟು.
ಇಂತೀ ಗುಣ, ಭರಿತಾರ್ಪಣವಲ್ಲವೆ?
ಅಶನದಾಸೆಯ ಬಿಡು, ಎಲೆ ದೆಸೆಗೆಟ್ಟ ಜೀವವೆ.
ನಿನ್ನ ನೀನರಿ, ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗ
ಸಂಗವಾಗಬಲ್ಲಡೆ. ||೭||

೪೧೦

ತಾನರಿಯದುದನರಿದಾಗವೆ ಭರಿತಾರ್ಪಣ.
ತಾ ಕೆಡಿಸಿದುದ ಕಂಡಲ್ಲಿಯೆ ಭರಿತಾರ್ಪಣ.
ತ್ರಿವಿಧಮಲದಿಂದ ಕಟ್ಟೊತ್ತರ ಬಂದಲ್ಲಿ
ತೊಟ್ಟು ಬಿಟ್ಟ ಹಣ್ಣಿನಂತಿದ್ದಾಗವೆ ಭರಿತಾರ್ಪಣ.
ತಾ ಹೇಳಿದ ವ್ರತ ನೇಮ ನಿತ್ಯ ಕೃತ್ಯಂಗಳಲ್ಲಿ
ಅನುಸರಣೆಯಿಂದ ತನು ಸೋಂಕಿದಾಗವೆ ಭರಿತಾರ್ಪಣ.
ಪಡಿಪುಚ್ಚವಿಲ್ಲದ ನುಡಿಗೆಡೆಯಾಗದೆ
ಲಿಂಗದಲ್ಲಿ ಒಡಗೂಡೂದೆ ಭರಿತಾರ್ಪಣ.
ಇದು ಕ್ಷುತ್ತಿನ ಆಗಲ್ಲ, ಸಂಸಾರಘಟವ ಮೆತ್ತುವ ಬುತ್ತಿಯಲ್ಲ.
ನಿತ್ಯಾನಿತ್ಯವ ತಿಳಿದು, ನಿಶ್ಚಯವನರಿದಲ್ಲಿ ಭರಿತಾರ್ಪಣ.
ಇದು ಸತ್ಯವಂತರ ಹೊಲ, ಮುಕ್ತಿವಂತರ ಬೆಳೆ.
ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗದ ಸಂಗ. ||೮||

೪೧೧

ದೃಷ್ಟಿಯಿಂದ ನೋಡಿದ ಮತ್ತೆ ಕಂಡಡೆ
ಭರಿತಾರ್ಪಣವೆತ್ತಣ ಮುಟ್ಟು? ಮುಟ್ಟಿದುದ ಮುಟ್ಟಿ ಅರ್ಪಿಸುವಲ್ಲಿ
ಲಿಂಗಾರ್ಪಿತವಿಲ್ಲದೆ ಸಲ್ಲದೆಂದು
ಗುರುಚರ ಮುಖದಿಂದ ಪ್ರಸಾದಿಸಿ ತಾಯೆಂದ
ಭರಿತಾರ್ಪಣ ಅದೆಲ್ಲಿಯ ತೊಟ್ಟು?
ಮತ್ತೆ ಗುರುಚರದಲ್ಲಿ ತ್ರಿವಿಧಮಲಕ್ಕೆ ಕಟ್ಟೆನಿಕ್ಕಿ,
ತಪ್ಪಿ ಮುಟ್ಟಿದಲ್ಲಿ ವಂದಿಸಿ ನಿಂದಿಸುವದು.
ಮತ್ತೆ ಪ್ರಸಾದವೆಂದು ಕೈಯೊಡ್ಡಿ ಕೊಂಬ ಭ್ರಷ್ಟನೆತ್ತಣ ಕೊಟ್ಟಿ.
ಲಿಂಗಕ್ಕಿಂದವೂ ಗುರುಚರ ಭಕ್ತಿಸಂಗಗುಣವಿಶೇಷವೆಂಬುದನರಿದು

ಗುರುಚರ ಪ್ರಸಾದವನಂಗೀಕರಿಸಿದ ಮತ್ತೆ
ಆ ಲಿಂಗದ ಅಂಗವೆ ಘಟ.
ಆ ಗುರುಚರಲಿಂಗಕ್ಕೆ ಪ್ರಾಣಸ್ವರೂಪವಾದ ಮತ್ತೆ
ಆ ಲಿಂಗ ತನ್ನ ಸರ್ವಾಂಗದಲ್ಲಿ, ತಾ ವ್ಯವಹರಿಸುವಲ್ಲಿ
ಹೆರೆಹಿಂಗದ ತೆರನ ತಿಳಿದು,
ಆ ಲಿಂಗದಾದಿ ಗುರುಚರವಿಲ್ಲಾ ಎಂದು ಕಂಡ ಮತ್ತೆ
ಗುರುವಿನ ಮುಖದಿಂದ ಲಿಂಗ ಸೋಂಕಿದ
ಜಂಗಮದ ತೃಪ್ತಿಯಿಂದ ತ್ರಿವಿಧದ ವರ್ಮವನರಿದು,
ಮುಂದಕ್ಕೆ ಕುಳವಿಲ್ಲದೆ, ಹಿಂದಕ್ಕೆ ನಷ್ಟವಾಗಿ,
ಅಂದಂದಿಗೆ ಬಂಧ ಮೋಕ್ಷ ಕರ್ಮ ಹಿಂಗಿ ನಿಂದ
ನಿಜಲಿಂಗಾಂಗಿಗೆ ಭರಿತಾರ್ಪಣ.
ಇಂತಿವನೊಂದುವ ಸಂಧಿಸಿ ಕಾಣಿಸಿಕೊಳ್ಳದೆ
ಭರಿತಾರ್ಪಣವೆಂದು ರಸಾಮೃತ ಮೃಷ್ಟಾನ್ನವ
ಸುರಿಯಿಸಿಕೊಂಡು, ಯಥೇಷ್ಟವಾಗಿಟ್ಟುಕೊಂಡು,
ಮಿಕ್ಕಾದುದ ಚೆಲ್ಲಿ ಸೂಸುವ ಕ್ರೀ ಭ್ರಷ್ಟಂಗೆ,
ತ್ರಿವಿಧನಷ್ಟಂಗೆ, ವಿರಕ್ತಂಗೆ,
ಕ್ಷಣಿಕ ಪಾರದ್ವಾರ ಹುಸಿ ಕೊಲೆ ಅತಿಕಾಂಕ್ಷೆ
ಇಂತಿವು ಮೊದಲಾದ ಕಿಸುಕುಳವ ಬಿಟ್ಟವರಿಗೆ,
ಭರಿತಾರ್ಪಣವ ಅರ್ಪಣದ ಅರ್ಪಿತವ ಬಲ್ಲವ
ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗಕ್ಕೆ ಕೊಟ್ಟು ಕೊಳಬಲ್ಲವ. || ೮ ||

೪೧೨

ಭರಿತವೆಂಬ ಶಬ್ದಕ್ಕೆ ಕಡೆಯಾಣಿ,
ಭರಿತವೆಂಬ ಸೊಲ್ಲು ಪರಿಪೂರ್ಣತ್ವ ಕುರುಹಳಿದುದು.
ಭರಿತಾರ್ಪಣವೆಂಬ ಭಕ್ಷ್ಯ ಮುಂದಕ್ಕೂ ಹಿಂದಕ್ಕೂ ಕಟ್ಟಿಲ್ಲದ ದೃಷ್ಟ,
ಭರಿತಾರ್ಪಣವೆಂದು ಕೃತ್ಯದ ಕಟ್ಟ ಹೊತ್ತ ಮತ್ತೆ
ಭರಿತಾರ್ಪಣ ಲಿಂಗ ಪ್ರಸಾದ ಕೊಂಡಲ್ಲಿ,
ಆ ಮನ ಅರೋಚಕ ತಲೆದೋರಬಾರದು ಭರಿತಾರ್ಪಣವೆಂದು.
ನೈವೇದ್ಯವೆಂದು ಸಂದಲ್ಲಿ ಉದಕ ಮುಂತಾದ
ಆವ ದ್ರವ್ಯವೂ ಬೀಸರಿಸಿ, ಆ ಪ್ರಸಾದದಲ್ಲಿ ಬೆರೆಯಬಾರದು.
ಬೆರೆದ ಮತ್ತೆ ಧರಿಸಬಾರದು, ಇರಿಸಬಾರದು.
ಆ ಪ್ರಸಾದವ ಚೆಲ್ಲಿ ಸೂಸಲಿಲ್ಲ. ಮತ್ತೆ ಅರ್ಪಿಸಿಕೊಂಡೆಹೆನೆಂದಡೆ

ಬೇರೆ ದೃಷ್ಟದಲ್ಲಿ ಬಂದುದಲ್ಲ.
ಬೆರೆದ ದ್ರವ್ಯವ ಮತ್ತರ್ಪಿಸಿಹೆನೆಂದಡೆ
ಆ ಪ್ರಸಾದದಲ್ಲಿ ಒಡಗೂಡಿದ ದ್ರವ್ಯ.
ಆ ದ್ರವ್ಯ ಒಡಗೂಡಿದಡೆ ಕುರುಹಿಟ್ಟು ನಿಂದಲ್ಲಿ
ಅರ್ಪಿಸಿ ಒಡಗೂಡಬಹುದು, ಮತ್ತೆ ವಿಚಾರಿಸಲಿಕಾಗಿ
ತನ್ನ ವ್ರತದ ಕಟ್ಟಿನ ನೆಮ್ಮುಗೆಯನರಿತುಕೊಳಬಾರದು.
ಬಿಡಬಾರದು ಎಂಬುದ ಒಳಗನರಿದು,
ಇಂತೀ ಭರಿತಾರ್ಪಣ ಆರಿಗೂ ಸಾಧ್ಯವಲ್ಲ. ಒಬ್ಬಂಗೆ ಸಾಧ್ಯವಾಯಿತ್ತು.
ಬಸವಣ್ಣ ಬೋನವಾಗಿ, ಚೆನ್ನಬಸವಣ್ಣ ಪದಾರ್ಥ ಸ್ವರೂಪವಾದಲ್ಲಿ,
ಪ್ರಭುದೇವರು ಸಾಕು ಭರಿತವೆಂದಲ್ಲಿ
ಅರ್ಪಿತವಾಯಿತ್ತು, ಭರಿತ ಸಲೆ ಸಂದಿತ್ತು.
ಎನಗೆ ಭರಿತ ನೇಮ ಓಸರಿಸುತ್ತಿದೆ.
ಪೂರ್ಣವ ಬಿಟ್ಟು, ಪರಿಪೂರ್ಣವ ಮಾಡು
ಚೆನ್ನ ಚೆನ್ನಕೂಡಲ ರಾಮೇಶ್ವರಲಿಂಗ ಸಂಗ. ||೧೦||

೪೧೩

ಭರಿತಾರ್ಪಣ ಸಹಭೋಜನ ನೈವೇದ್ಯ ಸಹ
ಇಂತೀ ತ್ರಿವಿಧಭೇದಂಗಳ ಅಂಗೀಕರಿಸಿದ ಮತ್ತೆ
ಕರುಳಿಲ್ಲದ ಕಲಿಯಂತೆ, ಒಡಲಿಲ್ಲದ ಅಂಗದಂತೆ,
ಸಂಗವಿಲ್ಲದ ನಿರಂಗದಂತೆ, ದಗ್ಧಪಟದಂತೆ,
ಒಂದನೂ ಹೊದ್ದದ ಬಹುವರ್ಣದಂತೆ,
ಅಂಗವಿದ್ದೂ ಅಳಿದು ತೋರುವ ನಿರಂಗಿಗಲ್ಲದೆ
ಈ ತ್ರಿವಿಧ ವ್ರತ ಪ್ರಸಾದವಿಲ್ಲ.
ನಾನು ಎನಗೆ ಬಂದ ಕುತ್ತಕ್ಕೆ ಹಾಡಿ ಹರಸಿ
ಮದ್ದನರೆವುತ್ತಿದ್ದೇನೆ, ಎನ್ನ ಕಾಡಬೇಡ.
ಕ್ರೀ ತಪ್ಪದೆ ಎನ್ನ ಕೂಡಿಕೊ,
ಚೆನ್ನ ಚೆನ್ನ ಕೂಡಲ ರಾಮೇಶ್ವರಲಿಂಗ ಸಂಗ. ||೧೧||

■ ■

## ಭಿಕಾರಿ ಭೀಮಯ್ಯನ ವಚನ

೪೧೪

ಕಾಳಗವೆಂಬ ಕಟ್ಟಿದಿರಾದಡೆ,
ಸೋಂಕಿದಡೆ ಬಿಡೆ, ಕರೆದರೆಂದು ಬಿಡೆ.
ವ್ರತ ಹೋದವರು ಸುಳಿಯದಿರಿ.
ಕಂಡಡೆ ಕೊಲುವ ಬಿರಿದು, ಭಿಕಾರಿ ಭೀಮೇಶ್ವರಲಿಂಗವೆ. ||೧||

೪೧೫

ಭಿಕಾರಿ ಭಿಕಾರಕ್ಕೆಳಸ.
ಉಣ್ಣಲು ಉಡಲು ಕಾಣದಾತ ಭಿಕಾರಿ.
ತನು ಮೀಸಲು, ಮನ ಮೀಸಲು,
ಬಾಯಿ ಬೋರು ಬೋರು.
ಮರಣವಳಿದುಳಿದಾತ ಭಿಕಾರಿ.
ಸಂಚಲದ ಪಂಚಕರಣಗಳ ತೆಗೆದುಂಡು,
ರುಂಡಮಾಲೆಯು ರಣಮಾಲೆಯು
ಹೆಣಮಾಲೆಯು ಚಾರುಚ್ಚಿದಲ್ಲದೆ
ಭಿಕಾರಿ ಭೀಮೇಶ್ವರಲಿಂಗಕ್ಕೆ ದೂರ ಕಾಣಾ,
ಕರುತಿರುವ ಗೊರವಾ ||೨||

■ ■

# ಭೋಗಣ್ಣನ ವಚನ

೪೧೭

ಅಂಗದ ಕೈಯಲ್ಲೊಂದಂಗವದೆ ನೋಡಾ.
ಲಿಂಗದ ಕೈಯಲ್ಲೊಂದು ಲಿಂಗವದೆ ನೋಡಾ.
ಈ ಉಭಯದ ಮಧ್ಯದಲ್ಲಿ ಅರಿದ ತಲೆಯ,
ಕೈಯಲ್ಲಿ ಹಿಡಿದುಕೊಂಡು, ಮುಂಡ ಉದಯವಾಯಿತ್ತ ಕಂಡೆ.
ಅದಕ್ಕೆ ತಲೆಯಲ್ಲಿ ಓಲೆ, ಮುಂಡದಲ್ಲಿ ಮೂಗುತಿ,
ಮೂಗಿನಲ್ಲಿ ಕಣ್ಣು, ಕಿವಿಯಲ್ಲಿ ತೋರಣ,
ಕಂಗಳ ಮುತ್ತುಸರವ ಪವಣಿಸುವ ಜಾಣೆಯ ಕಣ್ಣ
ಕೈಯ ಲಿಂಗಕ್ಕೆ ಮದುವೆಯ ಮಾಡಿದರೆಮ್ಮವರು.
ಆ ಲಿಂಗದಿಂದ ರೂಪಲ್ಲದ, ಸೋಂಕಿಲ್ಲದ
ಸೊಬಗಿನ ಅಭಿನವ ಶಿಶು ಹುಟ್ಟಿತ್ತು ನೋಡಾ.
ಆ ನಾಮವ ಹಿಡಿದು ಕರೆದಡೆ ಕೈಸನ್ನೆ ಮಾಡಿತ್ತು.
ನೋಡಿದಡೆ ಮುಂದೆಬಂದು ನಿಂದಿತ್ತು.
ಅಪ್ಪಿದಡೆ ಸೋಂಕಿಲ್ಲದೆ ಹೋಯಿತ್ತು.
ಅರಸಹೋದಡೆ ಅವಗವಿಸಿತ್ತು. ನಿಜಗುರು ಭೋಗೇಶ್ವರಾ,
ಇದರ ಕೌತುಕದ ಕಾರಣವೇನು ಹೇಳಯ್ಯಾ. ||೧||

೪೧೭

ಅಂಗೈಯಗಲದ ಪಟ್ಟಣದೊಳಗೆ
ಆಕಾಶದುದ್ದ ಎತ್ತು ತಪ್ಪಿತ್ತು.
ಅರಸಹೋಗಿ ಹಲಬರು ಹೊಲಬುದಪ್ಪಿ,
ತೊಳಲಿ ಬಳಲುತ್ತೈದಾರೆ.
ಆರಿಗೆ ಮೊರೆಯಿಡುವೆ, ಅಗುಸಿಯನಿಕ್ಕುವೆ.
ಜಲಗಾರನ ಕರೆಸಿ, ಜಲವ ತೊಳೆಯಿಸಿ
ಅಘಟಿತ ಘಟಿತ ನಿಜಗುರು ಭೋಗೇಶ್ವರಾ,
ಅರಸಿಕೊಂಡು ಬಾರಯ್ಯಾ. ||೧||

೪೧೮

ಅಯ್ಯಾ ನಿಮ್ಮ ಶರಣರ ಇರವು,
ಹರಿಯ ಕೈಯ ದೀವಿಗೆಯಂತೆ ಇದ್ದಿತ್ತಯ್ಯಾ.
ನಿಮ್ಮ ಶರಣರ ಸುಳುಹು,
ಪವನನ ಕೈಯ ಪರಿಮಳದಂತೆ ಇದ್ದಿತ್ತಯ್ಯಾ.
ಹುತಾಸನವೆಂಬ ಗದ್ದುಗೆಯ ಮೇಲೆ
ಕರ್ಪೂರದರಸುವಂ ಕುಳ್ಳಿರಿಸಲು,
ಅರಸು ಗದ್ದುಗೆಯ ನುಂಗಿದನೊ ?
ಗದ್ದುಗೆ ಅರಸನ ನುಂಗಿತ್ತೊ? ಎಂಬ ನ್ಯಾಯದಲ್ಲಿ
ಕಂಗಳ ಗದ್ದುಗೆಯ ಮೇಲೆ
ಸದ್ಗುರು ಲಿಂಗವೆಂಬ ಅರಸನಂ ಕುಳ್ಳಿರಿಸಲು,
ಆ ಲಿಂಗ ಕಂಗಳ ನುಂಗಿದನೊ ?
ಕಂಗಳು ಲಿಂಗವ ನುಂಗಿ[ದವೊ]?
ಈ ಉಭಯವ ನುಂಗಿದ ಬೆಡಗು ಬಿನ್ನಾಣವ,
ನಿಜಗುರು ಭೋಗೇಶ್ವರಾ, ನಿಮ್ಮ ಶರಣರಲ್ಲಿ ಕಾಣಬಹುದು. || ೨ ||

೪೧೯

ಆಗಮ ನಿಗಮ ಶಾಸ್ತ್ರ ಪುರಾಣವೆಂಬ
ಅಂಧಕನ ಕೈಗೆ ಕೋಲಕೊಟ್ಟು, ನಡೆಸಿಕೊಂಡು ಹೋಗುವಾಗ,
ತನ್ನ ಕಣ್ಣುಗೆಟ್ಟಡೆ ಮುಂದಕ್ಕೆ ಗಮನವಿಲ್ಲ.
ಹಿಂದಕ್ಕೆ ತಿರುಗಲರಿಯದೆ,
ಎರಡಕ್ಕೆ ಕೆಟ್ಟ, ಜಂಬುಕನಂತೆ ಆಯಿತ್ತು ನೋಡಾ.

ಸಜ್ಜನ ಗಂಡನ ಕದ್ದು, ಕಳ್ಳನ ಹಿಂದೆ ಹೋದ ಸತಿಯಂತೆ ಆದರಲ್ಲಾ.
ಸಂತೆಯಲ್ಲಿ ಗುಡಿಸಲನಿಕ್ಕಿ ಹಡೆದುಂಬ ಸೂಳೆಯಂತೆ,
ಮನವೆ ಸೂಳೆಯಾಗಿ, ಮಾತಿನ ಮಾಲೆಯ ಸರವನಿಕ್ಕಿಕೊಂಡು,
ವಾಚಾಳಿಗತನದಿಂದ ಒಡಲ ಹೊರೆವವರೆಲ್ಲರೂ
ಶರಣರಪ್ಪರೆ ? ಅಲ್ಲಲ್ಲ. ಅದೆಂತೆಂದಡೆ:
ತನು ಕರಗಿ, ಮನ ಪುಳಕವಾದ ಮಹಾಮಹಿಮರಿಗಲ್ಲದೆ
ಉಚ್ಚಿಯ ಬಚ್ಚಲಲ್ಲಿ ಓಲಾಡುವ
ತೂತಜ್ಞಾನಿಗಳಿಗೆಂತಪ್ಪದು ಹೇಳಾ ?
ಕಾಲಾಳು ಆಕಾಶವನಡರಿಹೆನೆಂಬ ಪರಿಯೆಂತೊ ?
ಬ್ರಹ್ಮಪುರ ವೈಕುಂಠ ರುದ್ರಪುರ ಅಷ್ಟಾದಿ ಕೈಲಾಸವೆಂಬ
ಈ ಪಂಚಗ್ರಾಮಂಗಳ ವರ್ಮ ಕರ್ಮವಳಿದ
ಮಹಾದೇವಂಗಲ್ಲದೆ ಮುಂದಕ್ಕೆ ಅಡಿಯಿಡಬಾರದು.
ಪಿಪೀಲಿಕ ಕಪಿಯ ಮತವೆಂಬ ಪಥ ಮೀರಿ,
ವಿಹಂಗವೆಂಬ ವಾಹನಮಂ ಏರಿ, ಬ್ರಹ್ಮಾಂಡಕ್ಕೆ ದಾಳಿ ಮಾಡಿ,
ಸುವರ್ಣಪುರಮಂ ಸುಟ್ಟು, ಸೂರೆಗೊಂಡ ಮಹಾನುಭಾವಿಗಳ
ತೋರಿ ಬದುಕಿಸಾ.
ನಿಜಗುರು ಭೋಗೇಶ್ವರಾ, ನಾ ನಿಮ್ಮ ಧರ್ಮವ ಬೇಡಿಕೊಂಬೆ. || ೪ ||

### ೪೨೦

ಆಚಾರವುಳ್ಳನ್ನಕ್ಕ ಭಕ್ತನಲ್ಲ.
ಅನಾಚಾರವುಳ್ಳನ್ನಕ್ಕ ಭವಿಯಲ್ಲ.
ಅಂಗ ನಷ್ಟವಾಗಿ, ಕಂಗಳಲ್ಲಿ ಅರ್ಪಿಸಿ,
ತಲೆಯಲಿ ಉಣ್ಣಬಲ್ಲಡೆ ಭಕ್ತ,
ಅರ್ಪಿಸಿಕೊಳ್ಳ[ದ], ಅನರ್ಪಿತವ ಮುಟ್ಟದೆ
ಅಚ್ಚಪ್ರಸಾದವ ಕೊಳಬಲ್ಲಡೆ ಭವಿ.
ಉಭಯ ಒಂದಾದಡೆ
ನಿಜಗುರು ಭೋಗೇಶ್ವರನಲ್ಲಿ ಲಿಂಗೈಕ್ಯನು. || ೫ ||

### ೪೨೧

ಆದಿ ಅನಾದಿಗಳಿಲ್ಲದಂದು ರೂಪು ನಿರೂಪುಗಳಿಲ್ಲದಂದು,
ತನುಮಯ ಚಿನುಮಯವೆಂಬ ನಾಮವು ತಲೆದೋರದಂದು,
ನೀನು ಇಲ್ಲದಿಪ್ಪಂದು,

ಆನು ನಿನ್ನೊಳಗೆ ಹೆಸರಿಲ್ಲದೆ ಇಪ್ಪುದನರಿಯಾ.
ಎನ್ನೊಳಗೆ ಉಭಯನಾಮವು ಪಸರಕ್ಕೆ ಬಾರದಂತೆ
ಚೇತನವಾಗಿ ನೀನಿದ್ದುದನರಿಯಾ.
ಏನು ಕಾರಣ ನೀನು ಶೂನ್ಯನಾದೆ, ನಿನ್ನ ಕಾರಣ ನಾನು ಸಾಕಾರನಾದೆ.
ನಮ್ಮಿಬ್ಬರ ಬಯಕೆಯಿಂದ ಮಹಾದೇವನುದಯಿಸಿದ.
ಆತನ ಮನೋಭಾವದಲ್ಲಿ ನೀನು ಹುಟ್ಟಿದೆ.
ಆತನ ಅಭಯದಲ್ಲಿ ಆನು ಪುಟ್ಟಿದೆ.
ಇಬ್ಬರಿಗೆ ಮದುವೆಯ ಮಾಡಿ ಕೈಗೂಡಿ,
ಕಂಕಣದಾರವಂ ಕಟ್ಟಿದರಯ್ಯಾ.
ಎನ್ನ ಸೋಂಕಿಂದ ನೀನು ಲಿಂಗವಾದೆ.
ನಿನ್ನ ಸೋಂಕಿಂದ ಆನು ಅಂಗರೂಪಾದೆ.
ಅದೆಂತೆಂದಡೆ :
ಆನು ತೃಣ, ಎನ್ನೊಳಗಿಪ್ಪ ಅಗ್ನಿ ನೀನು.
ಕರ್ಪುರ ಆನು, ಪರಿಮಳವಾಗಿ ವೇಧಿಸಿಕೊಂಡೆ ನೀ ಅಯ್ಯಾ.
ಎನ್ನ ಕಂಗಳ ಕೊನೆಯ ಮೊನೆಯ ಮೇಲೆ
ನೀನು ಮನೆಯ ಮಾಡಿಕೊಂಡಿಪ್ಪೆ,
ನಿನ್ನ ಅಂತರಂಗದೊಳಗೆ ಆನು ಕಂದನಾಗಿ.
ನಿಜಗುರು ಭೋಗೇಶ್ವರಾ,
ನೀ ಮುನ್ನವೋ, ನಾ ಮುನ್ನವೋ ? ಬಲ್ಲಡೆ ಹೇಳಯ್ಯಾ. || ೬ ||

### ೪೨೨

ಇದ್ದು ಜೀವನಲ್ಲ, ಸತ್ತು ಹೆಣನಲ್ಲ.
ಕತ್ತಲೆ ಮುಟ್ಟಿದ ಬೆಳಗಿನಲ್ಲಿ ಸುಳಿಯದು.
ಹಿಂದಾದಡೆ ಏರುವುದು, ಮುಂದಾದಡೆ ತೋರುವುದು.
ಹಿಡಿಯಲ್ಲ ಕರಿಯಲ್ಲ.
ಇಕ್ಕಿದ ಹೆಜ್ಜೆಯ ತೆಗೆಯದು.
ಮೊನೆಗೆ ನಿಲ್ಲದು, ತೆಕ್ಕೆಗೆ ಬಾರದು.
ಕಾದಬಂದ ಕಲಿಗಳನೆಲ್ಲರ ಅಗಿದಗಿದು ನುಂಗಿತ್ತು ನೋಡಾ.
ಅರಿವೆಹೆನೆಂದಡೆ ಅರಿಯಬಾರದು. ಇದ ಬಲ್ಲವರಾರಯ್ಯಾ ?
ಇಹಪರ ನಷ್ಟವಾದ ಮಹಾವೀರಧೀರರಿಗಲ್ಲದೆ
ಮುಕ್ತಿಗೆ ದೂರವಾದ ಲಿಂಗಾಂಗಿಗಳ
ನೆನಹೆಂಬ ಜೋಡಂ ತೊಟ್ಟು,

ಅವರ ಕರಣಪ್ರಸಾದವೆಂಬ ವಜ್ರ ಘಟಿಕೆಯ ಧರಿಸಿ,
ಗುರುಕರುಣವೆಂಬ ಅಲಗಂ ಪಿಡಿದು,
ಮುಂಡ ಬಿದ್ದಡೂ ತಲೆಯಲ್ಲಿರಿವೆ.
ನಿಜಗುರು ಭೋಗೇಶ್ವರಾ ನಾ ನಿಮ್ಮ ಬೇಡುವನಲ್ಲಾ. ||೭||

೪೨೩

ಕಂಗಳ ತಿರುಳನುರುಹಿ,
ಆದಿಯ ಬೀಜವ ವೇದವರಿಯಲ್ಲಿ ಸುಟ್ಟು,
ಆ ಭಸ್ಮವ ಹಣೆಯಲ್ಲಿ ಧರಿಸಿ,
ಅರಳಿಯ ಮರದೊಳಗಾಡುವ ಗಿಳಿಯ ಎಲೆ ನುಂಗಿತ್ತ ಕಂಡೆ.
ಅರಳಿ ಹೂವಾಯಿತ್ತು, ಫಲ ನಷ್ಟವಾಯಿತ್ತು ನೋಡಾ.
ಎಲೆ ಉದುರಿತ್ತು, ಆ ಮರದ ಮೊದಲಲ್ಲಿಗೆ ಕಿಚ್ಚನಿಕ್ಕಿ,
ಬ್ರಹ್ಮನ ತಲೆಯಲ್ಲಿ ಬೆಣ್ಣೆಯ ಬೆಟ್ಟ
ರುದ್ರಲೋಕಕ್ಕೆ ದಾಳಿ ಮಾಡಿ,
ಗ್ರಾಮದ ಮಧ್ಯದೊಳಗೊಂದು ಕೊಂಡವ ಸುಟ್ಟು,
ಯಜ್ಞಪುರುಷನ ಹಿಡಿದು, ಕೈ ಸಂಕಲೆಯನಿಕ್ಕಿ,
ಗಂಗೆವಾಳುಕರಿಗೆ ಕೈವಲ್ಯವನಿತ್ತು,
ಅಷ್ಟಮೂರ್ತಿಯೆಂಬ ನಾಮವ ನಷ್ಟವ ಮಾಡಿ,
ವಿಶ್ವಮೂರ್ತಿಯ ಪಾಶವಂ ಪರಿದು,
ಮುಕ್ತಿ ರಾಜ್ಯಕ್ಕೆ ಪಟ್ಟಮಂ ಕಟ್ಟಿ,
ರುದ್ರಲೋಕಕ್ಕೆ ದಾಳಿ ಮಾಡಿ,
ಆ ಮೂರ್ತಿಗಣೇಶ್ವರರಿಗೆ ಐಕ್ಯಪದವನಿತ್ತು,
ಬಟ್ಟಬಯಲ ಕಟ್ಟಕಡೆಯೆನಿಪ
ಸಿದ್ಧ ನಿಜಗುರು ಭೋಗಸಂಗನಲ್ಲಿ
ಸಯವಾದ ಅಲ್ಲಮ ಅಜಗಣ್ಣ ಚೆನ್ನಬಸವ ಬಸವರಾಜ
ಮುಖ್ಯವಾದ ಲಿಂಗಾಂಗಿಗಳ ಪಾದಕ್ಕೆ
ನಮೋ ನಮೋ ಎಂದು ಬದುಕಿದೆ. ||೮||

೪೨೪

ಕುದುರೆಯನೇರಿದ ರಾವುತ,
ಕುದುರೆ ಕೆಟ್ಟಿತೆಂದು ಅರಸಹೋಗಿ, ಇರುಬಿಲಿ ಬಿದ್ದಡೆ
ಬಳ್ಳು ತರುಬಿ, ಕುದುರೆ ರಾವುತನಿಬ್ಬರ ನುಂಗಿತ್ತು.
ಇವೇನು ಸೋಜಿಗ ಹೇಳಾ, ನಿಜಗುರು ಭೋಗೇಶ್ವರಾ. ||೯||

**೪೨೫**

ಕುರುಡನ ಮುಂಡಕ್ಕೆ ಹೆಳವನ ಶಿರಸ್ಸು ಸ್ಥಾಪ್ಯವ ಮಾಡಿವರಯ್ಯಾ.
ಅದಕ್ಕೆ ಮೋಟನು ಪರಿಚಾರಕ ನೋಡಾ.
ಮೂಗ ಹೇಳುವ ಮಾತನು ಬಧಿರ ಕೇಳಿ,
ಅತ್ತೆಯನಳಿಯ ಮದುವೆಯಾಗಿ,
ಅವರಿಬ್ಬರ ಸಂಗದಿಂದ ಹುಟ್ಟಿತೊಂದು ಮಗು.
ಮೊರೆಗೆಟ್ಟು ತಂದೆ ಮಗಳ ಮದುವೆಯಾಗಿ,
ತ್ರಿಪುರದ ಮಧ್ಯದೊಳಗೆ ಕ್ರೀಗಳ ದೇಗುಲ ನಿಂದಿತ್ತು.
ದೇವರ ನೋಡಹೋದಡೆ ದೇವರು ದೇಗುಲದ ನುಂಗಿದರು.
ಇದ ಕಂಡು ಆನು ಬೆರಗಾದೆನು, ನಿಜಗುರು ಭೋಗೇಶ್ವರನಲ್ಲಿ. ||೧೦||

**೪೨೬**

ಗಮ್ಯಾಗಮ್ಯಗಳಿಲ್ಲದಂದು, ಹಮ್ಮುಬಿಮ್ಮುಗಳಿಲ್ಲದಂದು,
ಬೀಜಕ್ಷೇತ್ರಗಳಿಲ್ಲದಂದು, ನಾದದ ಮೊದಲಂಕುರ ತಲೆದೋರದಂದು,
ಪಂಚಬ್ರಹ್ಮರ ಜನನವಿಲ್ಲದಂದು, ಪಂಚಾಕಾಶ ತಲೆದೋರದಂದು,
ಪಂಚಭೂತಿಕ ಸಪ್ತಸಾಗರ ಅಷ್ಟಕುಲಪರ್ವತ
ಚತುರ್ದಶಭುವನ ರಚನೆಗೆ ಬಾರದಂದು,
ಇವರೆಲ್ಲರ ತಾಯಿ ತಂದೆ ಹುಟ್ಟದ ಮುನ್ನವೆ ಹುಟ್ಟಿಪ್ಪಳೆಮ್ಮವ್ವೆ.
ಆಕೆಯ ಭಾವದ ಕೊನೆಯ ಮೊನೆಯ ಮೇಲೆ
ಇಲ್ಲದೆಯಿಪ್ಪ ಎಮ್ಮಯ್ಯನು.
ಇವರಿಬ್ಬರಿಗೆ ಸಂಗವಿಲ್ಲದಲ್ಲಿ ಹುಟ್ಟಿದೆ ನಾನು.
ಅವರಿಬ್ಬರಿಗೂ ಮದುವೆಯ ಮಾಡಿದನಯ್ಯಾ.
ಅವರಿಬ್ಬರ ಸಂಗದಿಂದ ಹುಟ್ಟು ಹೊಂದು,
ಕಣ್ಣು ಕಾಲಿಲ್ಲದ, ಕಿವಿ ಮೂಗಿಲ್ಲದ, ಕೈ ಬಾಯಿಲ್ಲದ
ಒಂದು ಶಿಶು ಹುಟ್ಟಿತ್ತು.
[ಆ] ಮಗನನೆನಗೆ ಮದುವೆಯ ಮಾಡಿದರಯ್ಯಾ.
ಅದ ನಾ ನೋಡುವಲ್ಲಿ ನೋಡಿಸಿದೆ,
ನಾ ಕೇಳುವಲ್ಲಿ ಕೇಳಿಸಿದೆ, ನಾ ನುಡಿವಲ್ಲಿ ನುಡಿಸಿದೆ,
ನಾನುಂಬಲ್ಲಿ ಉಣಿಸಿದೆ, ನಾ ವಾಸಿಸುವಲ್ಲಿ ವಾಸಿಸಿದೆ,
ನಾ ಸೋಂಕುವಲ್ಲಿ ಸೋಂಕಿಸಿದೆ, ನಾ ನೆನೆವಲ್ಲಿ ನೆನೆಸಿದೆ.
ಎನ್ನ ತೋಳು ತೊಡೆಯ ಮೇಲೆ ಬೆಳೆದು,
ಯೌವನ ಪ್ರಾಯವಾಗಿ, ಎನ್ನ ದಶಾವಸ್ಥೆಯ ಮೋಹದಿಂದ,

ಎನ್ನ ನೆರೆವ ಭರವಸದಿಂದ ಹೆಣ್ಣು ಗಂಡಾಗಿ,
ಎನ್ನನವಗವಿಸಿಕೊಂಡಿತ್ತಯ್ಯಾ.
ನಾ ನೋಡದ ಮುನ್ನವೇ ನೋಡಿತ್ತು.
ನಾ ಕೇಳದ ಮುನ್ನವೇ ಕೇಳಿತ್ತು.
ನಾ ನುಡಿಯದ ಮುನ್ನವೇ ನುಡಿಯಿತ್ತು.
ನಾನುಣ್ಣದ ಮುನ್ನವೇ ಉಂಡಿತ್ತು.
ನಾ ವಾಸಿಸದ ಮುನ್ನವೇ ವಾಸಿಸಿತ್ತು.
ನಾ ಸೋಂಕದ ಮುನ್ನವೇ ಸೋಂಕಿತ್ತು.
ನಾ ನೆನೆಯದ ಮುನ್ನವೇ ನೆನೆಯಿತ್ತು.
ಇಂತೀ ಎನ್ನ ಸರ್ವಾಂಗವ ಶಿಖಿ ಕರ್ಪುರವನೊಳಕೊಂಡಂತೆ,
ನಿಜಗುರು ಭೋಗೇಶ್ವರನು ಒಳಕೊಂಡನಾಗಿ
ನಾನು ಸುಖಿಯಾದೆನು. ||೧೧||

೪೨೭

ಜಗದಗಲದ ಗದ್ದುಗೆಗಳಿಗೆ
ಅಪ್ರಮಾಣದ ಲಿಂಗಪ್ರತಿಷ್ಠೆಯ ಮಾಡಿದರು ನೋಡಾ.
ಅದಕ್ಕೆ ತೊಂಬತ್ತಾರಂಗುಲ ಪ್ರಮಾಣಿನ ದೇಗುಲ ನೋಡಾ.
ನಾಲ್ಕೈದು ಬಾಗಿಲು ನೋಡಾ.
ಬೇರೊಂದು ಬಾಗಿಲು ಮುಚ್ಚಿ ಮುಸುಕಿಹುದು.
ದಶಮದ್ವಾರವ ನೆರೆಹೆವೆಂದು ಬಾಗಿಲ ಮುಚ್ಚಹೋದಡೆ ತೆಗೆವವು.
ತೆಗೆಯಹೋದಡೆ ಮುಚ್ಚುವವು ನೋಡಾ.
ಈ ವರ್ಮಸಕೀಲವನರಿಯದೆ
ಅತಿರಥರು ಮಹಾರಥರು ತೊಳಲಿ ಬಳಲುತೈದಾರೆ.
ವೀರಧೀರಸುಭಟರುಗಳೆಲ್ಲಾ
ಹೇಡಿಬಳೆಯಂ ತೊಟ್ಟು ಹೆಣ್ಣಾಗಿ ಹೋದರು.
ಅರುಹಿರಿಯರೆಲ್ಲಾ ಮರುಳಾಗಿ ಮತಿಗೆಟ್ಟು ಹೋದರು.
ಇದನಾರಯ್ಯಾ ಬಲ್ಲವರು ?
ನೀವಿಕ್ಕಿದ ಕದವ ತೆಗೆಯಬಲ್ಲವರಾರೊ ಅಯ್ಯಾ !
ತೆಗೆಯದ ಕದವನಿಕ್ಕಬಲ್ಲವರಾರೊ ಅಯ್ಯಾ !
ಪದಪಂಕದಲ್ಲಿನ ದ್ವಾರಮಂ ಕಾಯ್ದಿಪ್ಪ
ದಿಟ್ಟಿಯ ಕಡೆಗಣ್ಣಿನ ಬೆಳಗಿನೊಳಗಾಡುವ
ಅವ್ಯಯ ಹರಿಬ್ರಹ್ಮಾದಿಗಳು ಮೊದಲಾದ

ಸಚರಾಚರದವರನೆಲ್ಲ ನುಂಗಿತ್ತು ನೋಡಾ.
ಇದನಾರಿಗೂ ಅರಿಯಬಾರದು ನೋಡಾ.
ನೀವಿದ್ದಲ್ಲಿ ಇಲ್ಲದಿಪ್ಪ ಶರಣರಿಗಲ್ಲದೆ
ಇದರ ಭೇದವ ಬಲ್ಲವ ಅಲ್ಲಮನು.
ಕಾಮನ ಕಣ್ಣಿಗೆ ಮುಳ್ಳುಬೆಟ್ಟದೊಡನೆ ಮುಟ್ಟದ ಕದವು ತೆಗೆದವು.
ತೆಗೆದಿದ್ದ ಬಾಗಿಲು ತಮತಮಗೆ ಮುಚ್ಚಿದವು ನೋಡಾ.
ಹೂಗಲ್ಲಿಗೆ ಕಿಚ್ಚನಿಕ್ಕಿ ಆ ಬಾಗಿಲ ಕಾಯ್ದಿಪ್ಪವಳ
ಮೂಗ ಮೊಲೆಯ ಕೊಯ್ದು, ಸಾಗರದ ಕಟ್ಟೆಯ ಒಡೆದು,
ದಶಮ ದ್ವಾರದಲ್ಲಿ ನಿಂದು, ನಿಮ್ಮ ಹೊತ್ತಿರ್ಪವಳ
ನೆತ್ತಿಗಣ್ಣಿಂದ ತೆಗೆದು ನೋಡಿ,
ಏಕಾದಶದ್ವಾರದ ಸೂತ್ರ ಸೂಕ್ಷ್ಮವಿನ್ನು
ಮಹಾಬೆಳಗಿನೊಳಗೆ ಸಾಸಿವೆಯ ಛಿದ್ರವ ಮಾಡಿ
ಕುಂಬಳದ ಕಾಯ ಕೀಲಕೊಟ್ಟಂತೆಯಿಪ್ಪ
ನಿಜಗುರು ಭೋಗೇಶ್ವರ ನಿಮ್ಮ ಇರವು,
ಪ್ರಭುವಿನ ಕರುಣವುಳ್ಳ ಲಿಂಗಾಂಗಿಗಳಿಗಲ್ಲದೆ
ವಾಗದ್ವೈತದಿಂದ ಒಡಲ ಹೊರೆವ
ಬಹುಭಾಷಿಗಳಿಗೆಂತು ಸಾಧ್ಯವಪ್ಪುದೊ ? ||೧೨||

೪೨೮

ಜಾಳೇಂದ್ರದೇಶದ ಅರಸು ಆನೆಯನೇರಿ,
ನಾಯಕ ಪಾಯಕ ಮಾವತಿಗರ ತಳತಂತ್ರ
ಮಾರ್ಬಲ ಸಹಿತ ರಾಜಬೀದಿಯೊಳು ಬರುತಿರಲು,
ಹೆಜ್ಜೆಗಾಣದೆ ತಳಿತಕಾರೆಯಮೆಳೆಯೊಳಗಿಪ್ಪ
ಬಿಜ್ಜು ಅರಸು, ಆನೆ ಮೊದಲಾದ ತಳತಂತ್ರ
ಮಾರ್ಬಲನ ನುಂಗಿತ್ತ ಕಂಡೆ.
ಎರಡೂರ ಬಟ್ಟೆ, ಒಂದಾದ ತಲೆವೊಲವಲ್ಲಿ
ಒಬ್ಬ ತನ್ನ ತಲೆಯ ಕೊಯ್ದು ಮುಂದಿರಿಸಿಕೊಂಡು
ಮುಂಡದಲಿ ಹೇನ ಕಳವುದ ಕಂಡೆ.
ಅಂಗವ ಕೈಯಲ್ಲಿ ಹಿಡಿದುಕೊಂಡು ಅರಸಿ ಬಳಲುತ್ತಿರೆ ಹಲಬರು.
ನಿಜಗುರು ಭೋಗೇಶ್ವರನ ಶರಣ ಚೆನ್ನಬಸವಣ್ಣನ
ಕರುಣವುಳ್ಳವರಿಗಲ್ಲದೆ
ಮಿಕ್ಕಿನ ಜಡಮತಿಗಳಿಗೆಂತು ಸಾಧ್ಯವಪ್ಪುದು ಕೇಳಿರಣ್ಣಾ. ||೧೩||

೪೨೯

ನೆಲದ ಬೊಂಬೆಗೆ ಜಲದ ಹೊದಿಕೆಯ ಹೊದಿಸಿ,
ಅಗ್ನಿಯ ಆಭರಣವ ತೊಡಿಸಿ, ಆಕಾಶದ ಅರಳೆಲೆಯ ಕಟ್ಟಿ,
ವಾಯುವ ಸೂತ್ರಧಾರವಂ ಹೂಡಿ,
ಸೂರ್ಯ ಸೋಮ ವೀಥಿಗಳೊಳಗೆ ಎಡೆಯಾಡಿಸುವ ಸೂತ್ರಗನಿವನಾರೋ ?
ಅನಾದಿಯ ಶಿಷ್ಯಂಗೆ ಆದಿಯ ಗುರು
ಉಭಯನಷ್ಟವಾದ ಲಿಂಗವಂ ತಂದು,
ಅಂಗದ ಮೇಲೆ ಬಿಜಯಂಗೈಯಿಸಲೊಡನೆ
ಲಿಂಗನಾಮನಷ್ಟವಾಯಿತ್ತು, ಗುರುವಿನ ಕುಲವಳಿಯಿತ್ತು.
ಜಂಗಮದ ಕೈಕಾಲಂ ಮುರಿದು, ಸೂತ್ರಿಕನ ಹಿಡಿದು,
ಮೇಲುದುರ್ಗದಲ್ಲಿ ಶೂಲಕ್ಕೆ ತೆಗೆದು,
ಆ ಸೂತ್ರದ ಹಗ್ಗಮಂ ಹರಿದು ಬಿಸುಟುಹೋದಡೆ
ತಲೆಯ ಒಂದಾಗಿ ಗಂಟಿಕ್ಕಿ,
ಮೂವರ ಮುಂದುಗೆಡಿಸಿ ಒಂದು ಮಾಡಿ,
ಹಿಂದಣಸ್ಥಿತಿ ಮುಂದಣಗತಿಯನೊಂದಾಗಿ ಸುಟ್ಟು,
ಆ ಭಸ್ಮವ ಅಂಗದಲ್ಲಿ ಅನುಲೇಪನವ ಮಾಡಿಕೊಂಡು
ನೀವು ಹೊಕ್ಕಲ್ಲಿ ಹೊಕ್ಕು, ಮಿಕ್ಕು ಮೀರಿ,
ಮಿಗೆವರಿದ ಲಿಂಗಾಂಗಿಗಳ ಪಾದದೊಳು ಹಿಂಗದಂತೆ ಇರಿಸೆನ್ನ.
ನಿಜಗುರು ಭೋಗೇಶ್ವರಾ, ನಾ ನಿಮ್ಮ ಬೇಡಿಕೊಂಬೆ. || ೧೪ ||

೪೩೦

ಪಕ್ಕ ಮುರಿದ ಹಕ್ಕಿಯಂತೆ, ಸಾಸಿವೆಯನೊಕ್ಕಿದ ಎತ್ತಿನಂತೆ,
ಬೆಳಗ ಕಂಡು ಮೈಮರೆದ ಹುಲ್ಲೆಯಂತೆ,
ಅಳಿಕುಲಕ್ಕೆ ವಿಷವಾದ ಸಂಪಿಗೆಯ ಪುಷ್ಪದಂತೆ,
ಎನ್ನ ತನು ಮನ ಕುಲಕ್ಕೆ
ನಿಮ್ಮ ನೆನಹೆಂಬ ಜ್ವಾಲೆ ತಾಗಿ ಸತ್ತೆನಯ್ಯಾ ಸಾಯದಂತೆ.
ಹುಲ್ಲಸರವಿಯಲ್ಲಿ ಕಟ್ಟಿದ ಕಿಚ್ಚಿನಂತೆ, ಬೇಯದಂತೆ ಬೆಂದೆನಾಗಿ
ನಿಜಗುರು ಭೋಗೇಶ್ವರಾ, ನಿಮ್ಮ ಸಂಗಸುಖವದೇಕೊ ? || ೧೫ ||

೪೩೧

ಬೀಜವಿಲ್ಲದ ವೃಕ್ಷ, ಎಲೆಯಿಲ್ಲದ ಉಲುಹು,
ಹೂವಿಲ್ಲದ ಪರಿಮಳ, ಕಾಯಿಲ್ಲದ ಹಣ್ಣು,

ರಸವಿಲ್ಲದ ನವರುಚಿ ಮೆಲಬಲ್ಲವನಾರೊ ?
ಕಾಲು ಕೈಯಿಲ್ಲದ, ಕಿವಿ ಮೂಗಿಲ್ಲದ ಹುಟ್ಟುಗುರುಡನು
ಆ ಹಣ್ಣ ಮೂಗಿನಲ್ಲಿ ಮೆದ್ದನು.
ಕಂಗಳಲ್ಲಿ ತೃಪ್ತಿಯಾಗಿ, ಕಿವಿಯಲ್ಲಿ ತೇಗಿ, ತಲೆಯಲ್ಲಿ ಲಿಂಗಕ್ಕರ್ಪಿಸಿ,
ಆ ಪ್ರಸಾದವ ಬಾಯಿಂದ ಉಂಡು,
ನಿಜಗುರು ಭೋಗಸಂಗನೊಳು ಒಚ್ಚತವೋದ ಶರಣರ ಇರವು,
ಅರಳೆಲೆಯಸಿಂಗಾರದ ಸರಮಾಲೆಯ ಸರಕೆ
ನವಪಸರವನಿಕ್ಕಿ ಮಾರುವ ಬಹುಭಾಷೆಗಳಿಗೆಂತು
ಸಾಧ್ಯವಪ್ಪುದು ಹೇಳಯ್ಯಾ. ||೧೬||

೪೩೨

ಭಕ್ತನ ಮೆಲಬಾರದು, ಭವಿಯ ತಿನಬಾರದು.
ಭಕ್ತನ ಕೊಂದಡೆ ಪಂಚಮಹಾಪಾತಕ.
ಅಂತು ವಿಚಾರಿಪಡೆ ಶೀಲವಂತರಿಲ್ಲಾಗಿ ಉಪಚಾರವೆಂತೂ ಇಲ್ಲ.
ಅಂತು ಶೀಲವಂತರಲ್ಲಿ ಅಹಿಂಸಾ ಪರಮೋಧರ್ಮವೆಂದು
ಕೊಲ್ಲದೆ ಮೆಲ್ಲದೆ ತಿಂಬ ಜೈನರಿನ್ನಾರೊ ?
ಶಿವೋ ದಾತಾ ಶಿವೋ ಭೋಕ್ತಾ ಶಿವೋ ಜಗತ್ಸರ್ವಂ
ಎಂದುದಾಗಿ, ಈ ಅನುವನರಿದಾತ ಭಕ್ತ.
ಇಂತಪ್ಪ ಯುಕ್ತ, ಆತನೇ ಯುಕ್ತ.
ಇಂತಪ್ಪ ಸುಯಿಧಾನಿಗಳ ತೋರಿ ಬದುಕಿಸಯ್ಯಾ,
ನಿಜಗುರು ಭೋಗೇಶ್ವರಾ, ನಿಮ್ಮ ಧರ್ಮ, ಬೇಡಿಕೊಂಬೆನು. ||೧೭||

೪೩೩

ಮನವನ್ಯಾಯಪಾತಕದೊಳಗೆ ಸಿಲುಕಿಹುದು.
ಮಾತಿನಲ್ಲಿ ಭಕ್ತಿ ವಿನಯ ಉಪಚಾರವ ನುಡಿದರು.
ಅನುವಿಲ್ಲದರಿಯದೆ ಬರಿಯ ಬಾಯಭುಂಜಕರು.
ಜಾರೆ ಜಾರನ ಸ್ನೇಹದೊಳಿದ್ದು,
ನೀನಲ್ಲದೆ ಅಂತಃಪುರವನರಿಯೆನೆಂದು
ಕಣ್ಣನೀರ ತುಂಬುತ್ತ, ಜೋಸರಿಗತನದಿಂದ ಒಡಲ ಹೊರೆವಳಂತೆ,
ವಾಗದ್ವೈತದಿಂದ ಒಡಲ ಹೊರೆವ ಶಬ್ದಬೋಧಕರಿಗೆ
ನಿಜಗುರು ಭೋಗೇಶ್ವರ ಶರಣರ ಪದವೆಂತು ದೊರೆಕೊಂಬುದೋ ? ||೧೮||

೪೩೪

ಮೂಗಿನಲ್ಲಿ ಕಂಡು, ಮೂರ್ತಿಯ ಕಂಗಳಲ್ಲಿ ಮಾಡಿಸಿ,
ಕಿವಿಯಲ್ಲಿ ಶೋಭನ, ತಲೆಯಲ್ಲಿ ಕೈಗೂಡಿ,
ಕಣ್ಣ ಕಾಡಿನ ತಲೆ ಹೊಲದಲ್ಲಿ ಸತ್ತದೇವರ ಕಂಡು,
ಹುಟ್ಟಿದ ಗಿಡುವಿನ ಪತ್ರೆಯ ಕೈ ಮುಟ್ಟದೆ ಕೊಯ್ದು,
ಬತ್ತಿದ ಕೆರೆಯ ಜಲವ ತುಂಬಿಕೊಂಡು,
ಬಂದು ಮುಟ್ಟಿ ಪೂಜಿಸಹೋದಡೆ
ಸತ್ತ ದೇವರೆದ್ದು ಪೂಜಾರಿಯ ನುಂಗಿದರು ನೋಡಾ.
ತಲೆಯಲ್ಲಿ ನಡೆದು, ತಲೆಗೆಟ್ಟು ನಿರಾಳವಾದ
ನಿಜಗುರು ಭೋಗೇಶ್ವರಾ, ನಿಮ್ಮ ಶರಣರಿಗಲ್ಲದೆ
ಸತ್ತದೇವರನು ಸಾಯದವರು ಪೂಜಿಸಿ
ನಿತ್ಯವ ಹಡೆದೆಹೆನೆಂಬ ಮಾತೆಲ್ಲಿಯದೊ ? || ೧೯ ||

೪೩೫

ಮೂರುಲೋಹದ ಕೋಟೆಗೆ ಏಳುಸುತ್ತಿನ ಅಗಳು ನೋಡಾ.
ಆ ಕೋಟೆಯೊಳಗೆ ಒಂಬತ್ತು ದುರ್ಗವಿಹವು.
ನಾಲ್ಕೈದು ಹೆಬ್ಬಾಗಿಲಿಹವು. ಕಾಬರಿಗೆ ಕಾಣಬಾರದು.
ಕಂಡೆ ಕಾಣೆನೆಂಬ ಉಭಯದ ಸಂದಳಿದುಳಿದವರಿಗಲ್ಲದೆ ಕಾಣಬಾರದು.
ಆ ಪಟ್ಟಣದೊಳಗೆ ಅತಿರಥ ಮಹಾರಥರಿಹರು.
ಸಾವಂತ ಭಲ್ಲೂಕರಿಹರು.
ಷಡಾಯತೆ ಚಕ್ರವರ್ತಿಗಳು ಹರಿದು ರಾಜ್ಯವನಾಳುತ್ತಿಹರು.
ಇಪ್ಪತ್ತೆಂಟುಲಕ್ಷ ಭೂತತಂಡವಿಹರು.
ಹದಿನೆಂಟುಲಕ್ಷ ರಾಕ್ಷಸಸ್ತೋಮವಿಹರು.
ಆ ಪಟ್ಟಣವ ಕಾವಳ ಐವಾಯಲ್ಲಿ ತೆಗೆದು
ಅವಳ ಮೂಗು ಮೊಲೆಯ ಕೊಯ್ದು
ಮೊರೆಗೆಟ್ಟು ಒಡಹುಟ್ಟಿ ದೇವರ ಕೂಡೆ
ಹಾದರವನಾಡಿ, ನಿರಾಳದಲ್ಲಿ ನಿಶ್ಚಟನಾಗಿ
ನಿಃಶೂನ್ಯವೆಂಬ ಸಿಂಹಾಸನದ ಮೇಲೆ
ಸೋಂಕಿಲ್ಲದೆ ಸೊಬಗಿನಲ್ಲಿ ಮೂರ್ತಿಗೊಂಡಿಪ್ಪ
ಆ ಮಹಾಪ್ರಭುವಿನ ಪಾದಕ್ಕೆ
ನಾನು ನಮೋ ನಮೋ ಎಂದು ಬದುಕಿದೆನು ನೋಡಾ
ನಿಜಗುರು ಭೋಗೇಶ್ವರಾ. || ೨೦ ||

೪೩೬

ಶೂನ್ಯ ನಿಃಶೂನ್ಯಗಳಿಲ್ಲದಂದು,
ಸುರಾಳ ನಿರಾಳವಿಲ್ಲದಂದು,
ಬೆಳಗು ಕತ್ತಲೆಯಿಲ್ಲದಂದು,
ಮಹಾಬೆಳಗಿನ ನಿಜಪ್ರಕಾಶವೇ ಗಟ್ಟಿಗೊಂಡು
ಮೂರ್ತಿಗೊಂಡಿಪ್ಪಲ್ಲಿ,
ಅಜಾತನೆಂಬ ಶ್ರೀಗುರುವಿನ ಜಾತವು.
ಕಂಗಳು ಬೆಳಗಿಸಲಾಗಿ ಪುನೀತನಾಗಿ, ಶಿಷ್ಯನು ದೇವಕರ್ಮವ
ಭಕ್ತಿ ವೈರಾಗ್ಯಮಂ ಮಾಡಬೇಕೆನಲು,
ಆ ಶಿಷ್ಯನ ಮನೋಭಾವದಿ ಕಾರುಣ್ಯ ಪುಟ್ಟಿ,
ಕರಕ್ಕೆ ಲಿಂಗವಾದ ಆ ಶಿಷ್ಯನ ಕೈಯಲ್ಲಿ
ಅಷ್ಟವಿಧಾರ್ಚನೆ ಶೋಡಷೋಪಚಾರದಲ್ಲಿ
ಪೂಜಿಸಿಕೊಳಬೇಕಾಗಿ ಜಂಗಮವಾದ.
ಇಂತೀ ಗುರುಲಿಂಗಜಂಗಮವೆಂಬ
ತ್ರಿವಿಧವೂ ಶಿಷ್ಯನಿಂದಾಯಿತ್ತಲ್ಲದೆ
ಆ ಶಿಷ್ಯ ತನ್ನಿಂದ ತಾನಾದ ನಿರಾಲಂಬನು.
ಅದೆಂತೆಂದಡೆ:
ಹೆತ್ತ ತಂದೆಗಳು ಶಿಶುವಿಗೆ ನಾಮಕರಣವನಿಕ್ಕಿ
ಹಲವಂದದಲ್ಲಿ ಕರೆದು ತೋರುವಂತೆ,
ಗುರುಲಿಂಗ ಶಿವಲಿಂಗ ಜಂಗಮಲಿಂಗ
ಸದ್ಗುರುವೆ ಮದ್ಗುರುವೆ ಘನಗುರುವೆ ಎಂದು ಪೆಸರಿಟ್ಟು ಕರೆದು,
ತನ್ನ ಒಕ್ಕುಮಿಕ್ಕ ಪ್ರಸಾದವನಿಕ್ಕಿದ ಕಾರಣ,
ನಿನ್ನ ಪೂರ್ವಾಶ್ರಯವಳಿದು ಸಕಲದೇವರಿಗೆ ದೇವನಾದೆ.
ಅದಕ್ಕೆ ಮುನ್ನ ನಿಮ್ಮ ಪೆಸರೇನೆಂದು ಹೇಳಾ
ನಿಜಗುರು ಭೋಗೇಶ್ವರಾ. || ೨೦ ||

೪೩೭

ಹಾಲು ಅನಿಲ ಕಂದಮೂಲ ಪರ್ಣಾಂಬು ಫಲಾದಿಗಳನೆ
ಆಹಾರವ ಕೊಂಡು ಮುಕ್ತರಾದೆಹೆವೆಂಬ ಅಣ್ಣಗಳು ನೀವು ಕೇಳಿರೆ.
ಆಹಾರವ ಕೊಂಡು ಅಣುರೇಣು ನೀರಜ ಸರ್ವ ಸರ್ಪ ಪಕ್ಷಿಗಳು
ವಾಯುವನೇ ಉಂಡು ಬೆಳೆವವು ನೋಡಾ.
ಖಗ ಮೃಗ ವಾನರ ಕ್ರಿಮಿ ಕೀಟಕ ಇವೆಲ್ಲವೂ

ಕಂದಮೂಲ ಪರ್ಣಾಂಬುವನೆ ಉಂಡು ಬೆಳೆವವು ಕೇಳಿರಣ್ಣಾ.
ಕ್ಷೀರಾಬ್ಧಿಯೊಳಗೆ ಹುಟ್ಟಿದ ಪ್ರಾಣಿಗಳೆಲ್ಲ ಕ್ಷೀರವನೆ ಉಂಡು ಬೆಳೆವವು.
ನಿಮಗೆ ಮುಕ್ತಿಯುಂಟಾದಡೆ ಇವು ಮಾಡಿದ ಪಾಪವೇನು ಹೇಳಿರೇ ?
ವಿಚಾರಿಸುವಡೆ ನಿಮ್ಮಿಂದ ಅವೆ ಹಿರಿಯರು ನೋಡಾ.
ವಾಗದ್ವೈತವ ನುಡಿದು ಅನುವನರಿಯದೆ ಬರುಸೂರೆವೋದಿರಲ್ಲಾ.
ಆದಿ ಅನಾದಿಯ ಅಂಗವ ಮಾಡಿ,
ಆ ಮಹಾ ಅನಾದಿಯ ಪ್ರಕಾಶವನೆ
ಶ್ರೀಗುರು ಸಾಕಾರಮೂರ್ತಿಯಂ ಮಾಡಿ,
ಅಂಗ ಮನ ಪ್ರಾಣ ಸರ್ವಾಂಗದಲ್ಲಿ ನೆಲೆಗೊಳಿಸಿದ ಭೇದವನರಿತು,
ಶ್ರೋತ್ರ ನೇತ್ರ ಘ್ರಾಣ ತ್ವಕ್ಕು ಜಿಹ್ವೆ
ಮೊದಲಾದ ಸರ್ವೇಂದ್ರಿಯದಲ್ಲಿ ವೇಧಿಸಿಕೊಂಡು,
ಶುದ್ಧ ಸುಯಿದಾನ ಸುಜ್ಞಾನದಿಂದ ಲಿಂಗಾವಧಾನ ಹಿಡಿದು ಅರ್ಪಿಸಿ,
ಆ ಪರಮ ಪ್ರಸಾದವನುಂಡು,
ಮಾತಂಗ ನುಂಗಿದ ನಾರಿವಾಳದ ಫಲದಂತೆ
ಬಯಲುಂಡ ಪರಿಮಳದಂತೆ
ನಿಜಗುರು ಭೋಗಸಂಗನೊಳು ಸಯವಾದ ಶರಣರಿರವು,
ಮಿಕ್ಕಿನ ಭವಭಾರಿಗಳಿಗೆಂತು ಸಾಧ್ಯವಪ್ಪುದೊ, ಕೇಳಯ್ಯಾ. ||೨೨||

■ ■

## ಮಡಿವಾಳ ಮಾಚಿದೇವರ ವಚನ

೪೩೮

ಅಂಗದ ಕ್ರೀಯೆ ಲಿಂಗದ ನಿಜ, ಲಿಂಗದ ನಿಜವೆ ಜಂಗಮ.
ಆ ಜಂಗಮದ ಕ್ರೀಯೆಲ್ಲಾ ಲಿಂಗಮಯ.
ಜಂಗಮದ ಸೇವೆಯೆ ಲಿಂಗದ ಕಳೆ.
ಲಿಂಗದ ಕಳೆಯೆ ಜಂಗಮ, ಜಂಗಮದಿಂದೊದಗಿದುದೆ ಪ್ರಸಾದ.
ಪ್ರಸಾದದೊದವೆ ಲಿಂಗೈಕ್ಯವು.
ಈ ಗುರು, ನಾನು ನಿಜವ ಸಾಧಿಸಿದೆವು.
ನಮ್ಮ ಕಲಿದೇವರದೇವನ
ಬಸವಣ್ಣನಿಂದ ಕೇಳಯ್ಯಾ, ಚಂದಯ್ಯಾ. ||೧||

೪೩೯

ಅಂಗದ ಮೇಲೆ ಲಿಂಗವ ಧರಿಸಿ
ಲಿಂಗವಂತರೆನಿಸಿಕೊಂಬ ಮಹಾಲಿಂಗವಂತರು ನೀವು ಕೇಳಿರೊ.
ಮನೆಗೊಂದು ದೈವ, ನಿಮಗೊಂದು ದೈವ.
ನಿಮ್ಮಂಗನೆ ಅನ್ಯದೈವಕ್ಕೆಂದು ನಿಯಾಮಿಸಿ ಮಾಡಿದ ಪಾಕವ,
ನಿಮ್ಮ ಇಷ್ಟಲಿಂಗಕ್ಕೆ ಕೊಟ್ಟು ಭುಂಜಿಸುತ್ತಿರ್ದು,
ಮತ್ತೆ ಮರಳಿ ಲಿಂಗವಂತರೆನಿಸಿಕೊಂಬ ಲಿಂಗದ್ರೋಹಿಗಳಿಗೆ
ಕುಂಭೀಪಾತಕ, ನಾಯಕನರಕ ತಪ್ಪದೆಂದ ಕಲಿದೇವಯ್ಯ. ||೨||

೪೪೦

ಅಂಗಲಿಂಗಸಂಬಂಧವಾಗಬೇಕೆಂಬ
ಭಂಗಿತರ ಮಾತ ಕೇಳಲಾಗದು.
ಅಂಗಲಿಂಗಸಂಬಂಧ ಕಾರಣವೇನು
ಮನ ಲಿಂಗಸಂಬಂಧವಾಗದನ್ನಕ್ಕ ?
ಮನವು ಮಹದಲ್ಲಿ ನಿಂದ ಬಳಿಕ
ಲಿಂಗಸಂಬಂಧವೇನು ಹೇಳಾ, ಕಲಿದೇವರದೇವಾ. || ೩ ||

೪೪೧

ಅಂಗಲಿಂಗಸಂಬಂಧವೆಲ್ಲಿಯದಯ್ಯಾ ?
ಪ್ರಾಣ ಮುಟ್ಟದನ್ನಕ್ಕರ ಲಿಂಗಾರ್ಚನೆ ಯಾಕೆ ?
ಪ್ರಾಣ ಮುಟ್ಟಿ ಮಾಡಿತ್ತೆ ಲಿಂಗಾರ್ಚನೆ.
ಪ್ರಾಣ ಒಂದಾಗಿ ಕೊಂಬುದೆ ಪ್ರಸಾದ.
ಅಳಿವ ಘಟಕ್ಕೆ ಇದೆತ್ತಣ ಲಿಂಗಸಂಬಂಧವೋ ?
ಇದ ಮಾಡಿದವರಾರು ? ಇದು ಕುಟಿಲ.
ಪ್ರಾಣಲಿಂಗವೆ ಗುರುಸಂಬಂಧ.
ಪ್ರಾಣಪ್ರಸಾದವೆ ಗುರುಮಹತ್ವ.
ತನುಮನಧನವನು ಪ್ರಾಣ ಮುಂತಾಗಿ ನಿವೇದಿಸಬಲ್ಲಡೆ
ಆತನ ಘಟವು, [ಅ]ಕಾಯವು.
ಪ್ರಾಣ ಮುಟ್ಟಿತ್ತೆ ಲಿಂಗಾರ್ಚನೆ.
ಪ್ರಾಣ ಮುಟ್ಟದ ಭಕ್ತಿ ಸಲ್ಲದು, ಸಲ್ಲದು.
ಇಂತೀ ಪ್ರಾಣ ತದ್ಗತವಾದಾತನೆ
ನಿಃಸಂಸಾರಿ ಕಾಣಾ ಕಲಿದೇವಯ್ಯಾ. || ೪ ||

೪೪೨

ಅಂಗವಿಕಾರವಳಿದು, ಜಂಗಮಲಿಂಗಲಾಂಛನ
ವಿಭೂತಿ ರುದ್ರಾಕ್ಷಿಯ ದರ್ಶನವಿಲ್ಲದೆ
ಜಂಗಮವೆನಿಸಿಕೊಂಬ ಭಂಗಿತರು,
ಭಕ್ತ, ವಿರಕ್ತರಾಗಲಾಗದೆಂಬ ಕಲಿದೇವಯ್ಯ. || ೫ ||

೪೪೩

ಅಂಗವಿಲ್ಲದ ಗುರುವಿಂಗೆ ಲಿಂಗವಿಲ್ಲದ ಶಿಷ್ಯನಾಗಬೇಕು.
ಶೃಂಗಾರಕ್ಕೆ ಮೆರೆಯದ ಭಕ್ತಿಯಾಗಬೇಕು.

ಇಂತಪ್ಪ ಗುರುಪ್ರಸಾದವನರಿಯದೆ ಕಂಡಕಂಡವರಿಗೆ ಕೈಯನೊಡ್ಡಿ
ಪ್ರಸಾದವೆಂದು ಕೊಂಬ
ಮಿಟ್ಟೆಯ ಭಂಡರನೇನೆಂಬೆನಯ್ಯಾ ಕಲಿದೇವರದೇವ. || ೬ ||

೪೪೪

ಅಂಗವೆ ಲಿಂಗವಾಗಿ, ಲಿಂಗವೆ ಪ್ರಾಣವಾಗಿ,
ಜಂಗಮವೆ ಸಂಗವಾಗಿ, ಸಂಗವೆ ಸುಸಂಗವಾಗಿ,
ಪ್ರಾಣವೆ ಪ್ರಸಾದವಾಗಿ, ಪ್ರಸಾದವೆ ಪ್ರಾಣವಾಗಿ.
ಇಂತೀ ತ್ರಿವಿಧದಲ್ಲಿ ಸಂಪನ್ನನಾದ
ಸಮತಾಪ್ರಸಾದಿ, ಸನ್ನಹಿತಪ್ರಸಾದಿ, ಸಮಾಧಾನಪ್ರಸಾದಿ.
ಕಲಿದೇವಯ್ಯಾ, ಚೆನ್ನಬಸವಣ್ಣನ ಪ್ರಸಾದವ ಕೊಂಡು
ನಾನು ಬದುಕಿದೆನು ಕಾಣಾ ಪ್ರಭುವೆ. || ೭ ||

೪೪೫

ಅಂಗಾಲಕಣ್ಣವರಾಗಬಹುದಲ್ಲದೆ
ಮೈಯೆಲ್ಲ ಕಣ್ಣವರಾಗಬಾರದು.
ಮೈಯೆಲ್ಲ ಕಣ್ಣವರಾಗಬಹುದಲ್ಲದೆ
ನೊಸಲ ಕಣ್ಣು ಚತುರ್ಭುಜರಾಗಬಾರದು.
ನೊಸಲಕಣ್ಣು ಚತುರ್ಭುಜದವರಾಗಹುದಲ್ಲದೆ
ಪಂಚವಕ್ತ್ರ ದಶಭುಜದವರಾಗಬಾರದು.
ಪಂಚವಕ್ತ್ರ ದಶಭುಜದವರಾಗಬಹುದಲ್ಲದೆ
ಸರ್ವಾಂಗಲಿಂಗಿಗಳಾಗಬಾರದು.
ಸರ್ವಾಂಗಲಿಂಗಿಗಳಾಗಬಹುದಲ್ಲದೆ, ಕಲಿದೇವಯ್ಯಾ,
ನಿಮ್ಮ ಶರಣ ಬಸವಣ್ಣನಾಗಬಾರದೆಂದರಿದು,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. || ೮ ||

೪೪೬

ಅಂಗೈಯ ಲಿಂಗ ಕಂಗಳ ನೋಟದಲ್ಲಿ ಅರತ ಲಿಂಗೈಕ್ಯನ,
ಮನದ ಅರಿವು ನಿರ್ಭಾವದಲ್ಲಿ ಅರತ ಲಿಂಗೈಕ್ಯನ,
ಸರ್ವಾಂಗನಿಷ್ಠೆ ನಿರ್ಣಯವಾದ ಲಿಂಗೈಕ್ಯನ,
ನಿಜವನುಂಡು ತೃಪ್ತನಾದ ಲಿಂಗೈಕ್ಯನ,
ಮಹವನವಗ್ರಹಿಸಿ ಘನವೇದ್ಯನಾದ ಲಿಂಗೈಕ್ಯನ,
ಕಲಿದೇವರದೇವ ಪ್ರಭುವೆಂಬ ಲಿಂಗೈಕ್ಯನ
ಶ್ರೀಪಾದದಲ್ಲಿ ಮಗ್ನನಾಗಿರ್ದೆನು. || ೯ ||

೪೪೭

ಅಂಧಕಾರದ ದೆಸೆಯಿಂದ ಚಂದ್ರನ ಪ್ರಭೆಯಾಯಿತು.
ನಿಂದಕರ ನುಡಿಯ ಏಡಿಸಲ್ಕೆ ಶಿವಭಕ್ತಿಯ ಪ್ರಭೆಯಾಯಿತು.
ಅಹುದೆಂದಡೆ ಅಲ್ಲವೆಂದತಿಗಳೆವರು.
ಕುತರ್ಕ ಶಾಸ್ತ್ರದಿಂದ ಯಮಗತಿಗರ ಕೂಡೆ
ನಾನಾ ಜನ್ಮಕ್ಕೇರದೆ, ಶಿವಾಚಾರದ ಪಥವ ತೋರಿಸಯ್ಯಾ
ಕಲಿದೇವರದೇವ. ||೧೦||

೪೪೮

ಅಕ್ಕತಂಗಿಯರೈವರು ಒಬ್ಬನ ಅರಸಿಯರು.
ಕಿರಿಯಾಕೆಯ ಕೂಡುವಡೆ ಹಿರಿಯಾಕೆ ಕುಂಟಣಿ.
ಹಿರಿಯಾಕೆಯ ಕೂಡುವಡೆ ಕಿರಿಯಾಕೆ ಕುಂಟಣಿ.
ಇಬ್ಬರನೂ ಕೂಡುವಡೆ ಬೇರೆಮಾಡಿ
ಬೆರಸುಬಾರದೆಂದರಿದು, ಒಂದಾಗಿ ಕೂಡಲು
ಒಬ್ಬಾಕೆ ಕಣ್ಣ ಕೆಚ್ಚನೆ ಮಾಡುವಳು.
ಒಬ್ಬಾಕೆ ಬುದ್ಧಿಯ ಹೇಳುವಳು ಒಬ್ಬಾಕೆ ಹಾಸಿ ಕೊಡುವಳು.
ಈ ಐವರನೂ ಅಪ್ಪಿಕೊಂಡು ಒಂದೆಬಾರಿ ಬೆರಸಲು
ನೀರು ನೀರ ಬೆರಸಿದಂತಾಯಿತು ಕಲಿದೇವಯ್ಯಾ.
ನಿಮ್ಮ ಶರಣ ಸಿದ್ಧರಾಮಯ್ಯದೇವರು
ಎನಗೆ ಈ ಪಥವ ಕಲಿಸಿ, ನಿಜನಿವಾಸದಲ್ಲಿರಿಸಿದ ಕಾರಣ
ಆನು ನಮೋ ನಮೋ ಎನುತಿರ್ದೆನು. ||೧೧||

೪೪೯

ಅಕ್ಕರ ಗಣಿತ ಗಾಂಧರ್ವ ಜ್ಯೋತಿಷ ಆತ್ಮವಿದ್ಯೆ ತರ್ಕ ವ್ಯಾಕರಣ
ಅಮರಸಿಂಹ ಛಂದಸ್ಸು ನಿಘಂಟು ಶಾಲಿಹೋತ್ರ ಗ್ರಹವಾದ ಗಾರುಡ
ದ್ಯೂತ ವೈದಿಕಶಾಸ್ತ್ರ ಸಾಮುದ್ರಿಕಶಾಸ್ತ್ರ ಲಕ್ಷಣಶಾಸ್ತ್ರ ಅಶ್ವಶಿಕ್ಷೆ
ಗಜಶಿಕ್ಷೆ ಗೋಕರ್ಣ ದಾಡಾಬಂಧ ಮೂಲಿಕಾಸಿದ್ಧಿ ಭೂಚರತ್ವ
ಖೇಚರತ್ವ ಅತೀತ ಅನಾಗತ ವರ್ತಮಾನ ಸ್ಥೂಲ ಸೂಕ್ಷ್ಮ
ಇಂದ್ರಜಾಲ ಮಹೇಂದ್ರಜಾಲ ವಡ್ಯಾನಚೇಷ್ಟೆ ಪರಕಾಯಪ್ರವೇಶ
ದೂರದೃಷ್ಟಿ ದೂರಶ್ರವಣ ಋಗ್ಯಜುಃಸಾಮಾಥರ್ವಣ ಶ್ರುತಿಸ್ಮೃತಿ
ಆಯುರ್ದಾಯ ನಷ್ಟಿಕಾಮುಷ್ಟಿಚಿಂತನೆ ಚೋರವಿದ್ಯೆ ಅಮೃತೋದಯ
ಭಾಷಾಪರೀಕ್ಷೆ ವೀಣಾವಿದ್ಯೆ ಭೃಂಗಿವಿದ್ಯೆ ಮಲ್ಲವಿದ್ಯೆ ಶಸ್ತ್ರವಿದ್ಯೆ

ಧನುರ್ವಿದ್ಯೆ ಅಗ್ನಿಸ್ತಂಭ ಜಲಸ್ತಂಭ ವಾಯುಸ್ತಂಭ ವಾದವಶ್ಯ
ಅಂಜನಾಸಿದ್ಧಿ ಘುಟಿಕಾಸಿದ್ಧಿ ಮಂತ್ರತಂತ್ರಸಿದ್ಧಿ
ಇವೆಲ್ಲವ ಕಲಿತಡೇನು ಅರುವತ್ನಾಲ್ಕು ವಿದ್ಯಾಪ್ರವೀಣನೆನಿಸಿಕೊಂಬನಲ್ಲದೆ
ಲಿಂಗವಂತನೆನಿಸಿಕೊಂಬುದಿಲ್ಲ. ಲಿಂಗವುಳ್ಳ ಶಿವಭಕ್ತಂಗೆ
ಇವರೆಲ್ಲರೂ ಕೂಡಿ ಸರಿಬಾರರೆಂದ ನಮ್ಮ ಕಲಿದೇವರದೇವ. ॥ ೧೨ ॥

೪೫೦

ಅಚ್ಚಪ್ರಸಾದವೆಂದು ಮನದಿಚ್ಛೆಗೆ ಗಡಣಿಸಿಕೊಂಬ
ಮರಾಚಾರಿಯ ಮಾತ ಕೇಳಲಾಗದು.
ಭವಿ ಕೊಂಡುದು ಓಗರ, ಭಕ್ತ ಕೊಂಡುದು ಅನರ್ಪಿತ.
ಇಂತೀ ಉಭಯವನರಿದು ಪ್ರಸಾದವ ಕೊಂಡೆನ್ನ
ಭವಂ ನಾಸ್ತಿಯಾಯಿತ್ತು ಕಾಣಾ, ಕಲಿದೇವಯ್ಯಾ. ॥ ೧೩ ॥

೪೫೧

ಅಜಾತನೆಂದೆನಬೇಡ, ಜಾತನೆಂದೆನಬೇಡ.
ಹದಿನೆಂಟುಜಾತವಾದರಾವುದು ?
ಒಂದೇ ಗುರುವಿನ ವೇಷವಿದ್ದವರಿಗೆ
ದಾಸೋಹವ ಮಾಡುವುದೆ ಶಿವಾಚಾರ.
ಅದಲ್ಲದೆ ಗುರುಕೊಟ್ಟ ಮುರುಹು ಮುದ್ರೆ ಲಾಂಛನವ ಹೊತ್ತು
ಮರಳಿ ವೇಷವಳಿದು ಬಂದವರಿಗೆ
ದಾಸೋಹವ ಮಾಡುವದು, ಶಿವಾಚಾರಕ್ಕೆ ಹೇಸಿಕೆ ಕಾಣಾ
ಕಲಿದೇವರದೇವ. ॥ ೧೪ ॥

೪೫೨

ಅಟ್ಟ ಉಪ್ಪಿನ ಕಷ್ಟವಾವುದು ? ಅಡದ ಉಪ್ಪಿನ ಲೇಸಾವುದು ?
ಬಿಟ್ಟಿ ಸಪ್ಪೆಯ ಭಕ್ತಿ ಯಾವುದು ? ಮೂತ್ರನಾಳದ ಘಾತಿ ಬಿಡದು.
ಇವರು ಮಾಡುವ ನೇಮ, ತಾ ಕೊಂಡಂತೆ ಕಲಿದೇವರದೇವಾ. ॥ ೧೫ ॥

೪೫೩

ಅಣುರೇಣು ಮಹಾತ್ಮನೆಂದೆಂಬರು.
ಅಣುರೇಣು ತೃಣಕಾಷ್ಠದೊಳಗಿರ್ಪನೆಂಬರು.
ಅಮ್ಮನಯ್ಯಾ, ನಾನೆನಲಮ್ಮೆನಯ್ಯಾ.
ಶರಣಸನ್ನಹಿತನು. ಭಕ್ತಕಾಯ ಮಮಕಾಯನು.

ದಾಸೋಹ ಪರಿಪೂರ್ಣನು,
ಸದುಹೃದಯದಲ್ಲಿ ಸಿಂಹಾಸನವಾಗಿ ಅಗಲದಿರ್ಪನು
ಕಲಿದೇವಯ್ಯ. || ೧೬ ||

೪೫೪

ಅತಿಶಯವನತಿಗಳೆದು ನಿರತಿಶಯ ಸುಖದೊಳಗೆ
ಪರಮಸುಖಿಯಾಗಿಪ್ಪವರಾರು ಹೇಳಾ ?
ನಿಜದ ನಿರ್ಣಯವನರಿದು ಭಜನೆ ಭಾವನೆಯಳಿದು
ತ್ರಿಜಗಪತಿಯಾಗಿಪ್ಪವರಾರು ಹೇಳಾ ?
ಕೋಡಗದ ಮನದೊಳಗೆ ಮನವಿರಹಿತನಾಗಿ
ಗಮನಗೆಡದಿಪ್ಪರಿನ್ನಾರು ಹೇಳಾ ?
ಹಗೆಯಲ್ಲಿ ಹೊಕ್ಕು ಹಗೆಯಳಿದು ಸುಖಿಯಾಗಿ
ತನಗೆ ತಾ ಕೆಳೆಯಾಗಿಪ್ಪರಾರು ಹೇಳಾ ?
ಒಳಹೊರಗೆ ಸರ್ವಾಂಗ ಲಿಂಗವೆ ತಾನಾಗಿ ಇರಬಲ್ಲ
ಪರಮಾರ್ಥರಾರು ಹೇಳಾ ?
ಕಲಿದೇವಾ, ನಿಮ್ಮ ಶರಣ ಚೆನ್ನಬಸವಣ್ಣನ
ನಿಲವನರಿದು, ಶರಣೆಂದು ನಾನು ಸುಖಿಯಾದೆನು. ||೧೭||

೪೫೫

ಅನಾದಿ ಅಖಂಡಪರಿಪೂರ್ಣ ನಿಜಾಚರಣೆಯನಗಲದೆ
ಮಹಾವೈರಾಗ್ಯದಿಂದ ಪರಶಿವಲಿಂಗಕೂ ತನಗೂ ಚಿನ್ನ ಬಣ್ಣದ ಹಾಂಗೆ,
ಪುಷ್ಪ ಪರಿಮಳದ ಹಾಂಗೆ, ಶಿಖಿ ಕರ್ಪುರದ ಹಾಂಗೆ,
ಉಪ್ಪು ಉದಕದ ಹಾಂಗೆ, ಅಗ್ನಿ ವಾಯುವಿನ ಹಾಂಗೆ,
ಕ್ಷೀರ ಕ್ಷೀರ ಬೆರದ ಹಾಂಗೆ, ವಾರಿ ಶರಧಿಯ ಕೂಡಿದ ಹಾಂಗೆ,
ತಿಳಿದುಪ್ಪ ಹೆರೆದುಪ್ಪವಾದ ಹಾಂಗೆ, ಹೆಪ್ಪು ನವನೀತದ ಹಾಂಗೆ
ಸೂಜಿಕಲ್ಲಾದಂತೆ ಮರ್ತ್ಯದಲ್ಲಿರ್ದು, ಕನ್ನಡಿಯ ಪ್ರತಿಬಿಂಬ
ಸೂರ್ಯನ ಕಿರಣದಂತೆ ಕಾಲ ಕಾಮರ ಪಾಶಕ್ಕೆ ಹೊರಗಾಗಿ,
ಬಾವನ್ನದಿರವನೊಳಕೊಂಡು
ಸರ್ವಾಚಾರಸಂಪತ್ತಿನಲ್ಲಿ ಎಡೆದೆರಪಿಲ್ಲದೆ ಮಹಾಮೋಹಿಯಾಗಿ,
ಲೋಕಪಾವನಕ್ಕೋಸ್ಕರ ಸಂಚರಿಸುವಾತನೆ,
ನಿರಂಜನ ಭಕ್ತಜಂಗಮ ಕಾಣಾ, ಕಲಿದೇವರದೇವ. || ೧೮ ||

೪೫೬

ಅಮೃತಮಥನದಲ್ಲಿ ಅಜ ಹರಿ ಸುರಪ ವಾಲಿ ಸುಗ್ರೀವರಳಿದರು.
ಕಾಶಿಯಲ್ಲಿ ಬ್ರಹ್ಮ ವಿಷ್ಣುಗಳಳಿದರು.
ಕೇದಾರದಲ್ಲಿ ಪಾಂಡವರಳಿದರು, ಕಲ್ಯಾಣದಲ್ಲಿ ವ್ಯಾಳನಳಿದನು.
ಶ್ರೀಶೈಲದಲ್ಲಿ ಹಿರಣ್ಯ ಧನುಜ ನಾಗಾರ್ಜುನರಳಿದರು.
ಪಾತಾಳ ಲಂಕೆಯಲ್ಲಿ ಮಹಿರಾವಣನಳಿದನು.
ಲವಣ ಲಂಕೆಯಲ್ಲಿ ಲಕ್ಷ್ಮಿಗಳುಪಿದವನಳಿದನು.
ದಶರಥನ ತೋಟಿನಲ್ಲಿ ಮುಂಡುಬಲಚೌಡನಳಿದನು.
ಭೀಮನ ಕೈಯಲ್ಲಿ ಕೀಚಕನಳಿದನು.
ಮುನಿ ಕರ್ಣಿಕೆಯ ಶಿರವ ಹರಿದು, ಸುರಪನಜಹರಿಗಳು ಶಾಪಹತರಾದರು.
ಋಷಿಯ ಸತಿಗಳುಪಿ ಸುರಪ ಮೈಯನಳಿದ.
ಭೀಷ್ಮರು ಕುಂಭಕರ್ಣ ದ್ರೋಣ ಜಾಂಬರು ನಿದ್ರೆಯಲ್ಲಿ ಅಳಿದರು.
ವ್ಯಾಧರ ಬಾಣದಲ್ಲಿ ಬಿದ್ದರು ವಿಷ್ಣು ಪಾಂಡ್ಯರಾಯರು.
ವಿಷದ ಪಣ್ಣಿಂದಳಿದ ಪರೀಕ್ಷಿತರಾಯನು.
ಪರಶುರಾಮನ ಕೈಯಲಿ ಜಮದಗ್ನಿ ಮುನಿಯ ವಧೆಯಿಂದ ಕಾರ್ತಿಕರಳಿದರು.
ವೃಷಭನ ವಧೆಯಿಂದ ವೀತರಾಜನಳಿದ.
ಕುರುಕ್ಷೇತ್ರದಲ್ಲಿ ಕೌರವರಳಿದರು.
ಮಾಸನೂರಲ್ಲಿ ಸಿದ್ಧರಳಿದರು.
ಕೊಲ್ಲಾಪುರದಲ್ಲಿ ಹರಿ ಅಜ ಇಂದ್ರ ದಿಕ್ಪಾಲಕರು
ತೃಣಕೆ ಲಘುವಾದರು.
ಹೋಮ ಕಾಮ ತ್ರಿಣೇತ್ರ ಪಂಚಮುಖರೆಲ್ಲ
ಮಹಾಪ್ರಳಯದಲ್ಲಿ ಅಳಿದರು.
ಇನ್ನು ಬಿಜ್ಜಳರಾಯನ ಅಳಿವಿನುಳಿವಿನ
ಹವಣವೇನು ಕಲಿದೇವರದೇವಾ. || ೧೯ ||

೪೫೭

ಅಯ್ಯಾ ಅಯ್ಯಾ ಎಂದು ನೆನೆವುತ್ತಿಹರಯ್ಯಾ
ಗಂಗೆವಾಳುಕಸಮಾರುದ್ರರು.
ಅವರಿಗೆ ಪ್ರಸಾದಲಿಂಗವ ಸಾಹಿತ್ಯವ ಮಾಡಿದ ಕಾರಣ.
ಅಯ್ಯಾ ಅಯ್ಯಾ ಎಂದು ಹೊಗಳುತ್ತಿಹರಯ್ಯಾ ಏಕಾದಶರುದ್ರರು.
ಅವರಿಗೆ ಸಕಲ ನಿಃಕಲಾತ್ಮಕ ನೀನೆಯಾಗಿ
ಪ್ರಾಣಲಿಂಗವ ಸಾಹಿತ್ಯವ ಮಾಡಿದ ಕಾರಣ.

ಶಿವಶಿವಾ ಎನುತಿರ್ಪರಯ್ಯಾ
ವಿಷ್ಣು ಮೊದಲಾದ ತ್ರೈತಿಂಶತಿಕೋಟಿ ದೇವತೆಗಳು,
ಅವರಿಗೆ ಧರ್ಮಾರ್ಥಕಾಮಮೋಕ್ಷಂಗಳನಿತ್ತೆಯಾಗಿ.
ಹರಹರಾ ಎನುತಿರ್ಪರಯ್ಯಾ
ಬ್ರಹ್ಮ ಮೊದಲಾದ ಅಷ್ಟಾಶೀತೀಸಹಸ್ರ ಋಷಿಯರು,
ಅವರಿಗೆ ಸ್ವರ್ಗ ನರಕಾದಿಗಳ ಮಾಡಿದೆಯಾಗಿ.
ಮಹಾದೇವಾ ಮಹಾದೇವಾ ಎನುತಿರ್ಪರಯ್ಯಾ ದಾನವಾದಿಗಳು
ಅವರಿಗೆ ಸುಕೃತ ದುಃಕೃತಂಗಳನೀವೆಯಾಗಿ.
ಬಸವಾ ಬಸವಾ ಎನುತಿರ್ಪರಯ್ಯಾ ಮಹಾಭಕ್ತರು,
ಅವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದವ ತೋರಿದ ಕಾರಣ.
ಉಳಿದ ಎಂಬತ್ತುನಾಲ್ಕುಲಕ್ಷ ಜೀವರಾಶಿಗಳೆಲ್ಲ
ನಿಮ್ಮುವನನಿಮಿಷವಾಗಿ ನೋಡುತಿರ್ಪರಯ್ಯಾ,
ಸಕಲ ನಿಃಕಲಾತ್ಮಕ ಚೈತನ್ಯನಾದೆಯಾಗಿ.
ಸಕಲವೂ ನಿನ್ನಾಧಾರ, ನಿಃಕಲವೂ ನಿನ್ನಾಧಾರ.
ಸಕಲ ನಿಃಕಲದೊಡೆಯ ದೇವರದೇವ ಕಲಿದೇವಾ
ನಿಮ್ಮ ಕರಸ್ಥಲದ ಹಂಗಿನೊಳಗಿರ್ದ ಕಾರಣ ಸಂಗನಬಸವಣ್ಣ. || ೨೦ ||

**೪೫೮**

ಅಯ್ಯಾ, ಅರಿವು ಏಕಾಗಿ ಧರಿಸಿದರು ಹೇಳಾ ನಿಮ್ಮ ಶರಣರು ?
ಅರಿವು ಆಕಾರಕ್ಕೆ ಬಂದಲ್ಲಿ ಪ್ರಕೃತಿ ಆಯಿತ್ತು.
ಅರಿವು ಹಿಂದಾಗಿ ಪ್ರಕೃತಿ ಮುಂದಾಯಿತ್ತು.
ಪ್ರಕೃತಿ ಸ್ವಭಾವವನಳಿಯಬೇಕೆಂದು
ಕಲಿದೇವರದೇವ ಇಷ್ಟಲಿಂಗವಾಗಿ
ಅಂಗದಲ್ಲಿ ಬೆಳಗಿದನು ನೋಡಾ, ಅಲ್ಲಮಯ್ಯ. || ೨೧ ||

**೪೫೯**

ಅಯ್ಯಾ, ಇಹಪರಂಗಳಂ ಗೆಲಿದ ಭಕ್ತ ಜಂಗಮಕ್ಕೆ,
ಸದಾಚಾರವೆ ವಸ್ತು ನೋಡಾ.
ಸದಾಚಾರವನರಿಯದ ಪಾಪಿ, ಸೂಕರನಿಂದ ಕಷ್ಟ ನೋಡಾ.
ಭಕ್ತ ಜಂಗಮಕ್ಕೆ ಸದಾಚಾರವೇ ಬೇಕು.
ಸದಾಚಾರವಿಲ್ಲದವಂಗೆ ಭವವುಂಟು.
ಭವವುಂಟಾದವಂಗೆ ಆಚಾರವಿಲ್ಲ.

ಆಚಾರವಿಲ್ಲದವ ಭಕ್ತನಲ್ಲ, ಜಂಗಮವಲ್ಲ ಕಾಣಾ
ಕಲಿದೇವರದೇವ. ‖ ೨೨ ‖

೪೬೦

ಅಯ್ಯಾ, ಗುರುಲಿಂಗಜಂಗಮದ ಶುದ್ಧಸಿದ್ಧಪ್ರಸಿದ್ಧಪ್ರಸಾದಿಯಾದಡೆ
ತನ್ನ ಪವಿತ್ರಸ್ವರೂಪವಾದ ಗುರುಲಿಂಗಜಂಗಮಕ್ಕೆ
ನಿಂದ್ಯಕುಂದ್ಯಗಳ ಕಲ್ಪಿಸಿ, ಅರ್ಥಪ್ರಾಣಾಭಿಮಾನವ ಕೊಂಡ
ಗುರುಲಿಂಗಜಂಗಮದ್ರೋಹಿಗಳ ಸಮಪಙ್ತಿಯಲ್ಲಿ
ಅರ್ಚನಾರ್ಪಣಗಳ ಮಾಡ ನೋಡಾ.
ಆ ದ್ರೋಹಿಗಳಿಗೆ ಪಾದೋದಕ ಪ್ರಸಾದವ ಕೊಟ್ಟು ಕೊಳ್ಳ ನೋಡಾ.
ಆ ದ್ರೋಹಿಗಳ ಸರ್ವಾವಸ್ಥೆಯಲ್ಲಿ ಧ್ಯಾನಕ್ಕೆ ತಾರ ನೋಡಾ.
ಆ ದ್ರೋಹಿಗಳಿಗೆ ಶರಣೆಂದು ನುಡಿದು ವಂದಿಸ ನೋಡಾ.
ಈ ವಿಚಾರವನರಿದಡೆ ಮಹಾಚಿದ್ಘನಪ್ರಸಾದಿಯೆಂಬೆನಯ್ಯಾ.
ಈ ವಿಚಾರವನರಿಯದ ವೇಷಧಾರಕ ಉದರಪೋಷಕ ನುಡಿಜಾಣರ ನೋಡಿ,
ಮನ ಭಾವಂಗಳಲ್ಲಿ ಊರಿಂದ ಹೊರಗಣ ಹಿರಿಯಕುಲದವರ ಮನೆಯ
ಹೊರಬಳಿಕೆಯ ಚೋಕಿಯೆಂದು ಬಿಡುವೆ ನೋಡಾ, ಕಲಿದೇವರ ದೇವ.
ಇಂತು ಗುರುವಾಕ್ಯವ ಮೀರಿ ತನ್ನ ಅಂಗವಿಕಾರದಾಸೆಗೆ
ಚರಿಸುವಾತಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ.
ಪಾದೋದಕ ಪ್ರಸಾದ ಮುನ್ನವೆ ಇಲ್ಲ ನೋಡಾ, ಸಂಗನಬಸವಣ್ಣಾ. ‖ ೨೩ ‖

೪೬೧

ಅಯ್ಯಾ, ತನ್ನ ತಾನರಿಯದೆ,
ತನ್ನ ಇಷ್ಟಲಿಂಗವ ಹೊಲಬು ತಿಳಿಯದೆ,
ಕಾಮವ ತೊರೆಯದೆ, ಹೇಮವ ಜರೆಯದೆ,
ನಾವು ಹರ ಗುರು ಚರ ಷಟ್‌ಸ್ಥಲದ ವಿರಕ್ತರೆಂದು
ಚೆನ್ನಾಗಿ ನುಡಿದುಕೊಂಡು, ಕಾಪಿ ಕಾಷಾಯಾಂಬರವ ಹೊದ್ದು,
ಶಂಖ ಗಿಳಿಲು ದಂಡಾಗ್ರವ ಹೊತ್ತು,
ಕೂಳಿಗಾಗಿ ನಾನಾ ದೇಶವ ತಿರುಗಿ,
ಕಾಂಚನಕ್ಕೆ ಕೈಯೊಡ್ಡುವ ಪಂಚಮಹಾಪಾತಕರನು
ಕಾಗೆಯ ಗರ್ಭದಲ್ಲಿ ಹುಟ್ಟಿಸಿ ಕಾಕಾ ಎಂದು
ಕೂಗಿಸುತಿರ್ಪ[ನು] ಕಾಣಾ, ಕಲಿದೇವರದೇವ. ‖ ೨೪ ‖

೪೬೨

ಅಯ್ಯಾ, ತನ್ನ ತಾನರಿಯದೆ
ನಾವು ಏಕಾರತಿ ದ್ವಿಯಾರತಿ [ತ್ರಿಯಾರತಿ] ಚತುರಾರತಿ ಪಂಚಾರತಿ
ಷಡಾರತಿ ಸಪ್ತಾರತಿ ಅಷ್ಟಾರತಿ ನವಾರತಿ ದಶಾರತಿ
ಕಡ್ಡಿಬತ್ತಿ ಕರ್ಪುರಾರತಿ ಮೊದಲಾದ
ಅಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸುವ
ಇಷ್ಟಲಿಂಗಪೂಜಕರೆಂದು ನುಡಿದುಕೊಂಬ ಬದ್ಧಭವಿ ಶುದ್ಧಶೈವ
ಮರುಳುಮಾನವರೆನಗೊಮ್ಮೆ ತೋರದಿರಯ್ಯ.
ಅದೇನು ಕಾರಣವೆಂದಡೆ, ತನ್ನ ಅಂಗ ಮನ ಪ್ರಾಣೇಂದ್ರಿಯಂಗಳಲ್ಲಿ ಮುಸುಕಿದ
ಅಜ್ಞಾನಾಂಧಕಾರದ ಅರುವತ್ತಾರುಕೋಟಿ ಕರಣಂಗಳೆಂಬ ಕಂಚಿನಾರತಿಗಳ
ಹಂಚು ಹರಿಗಡಿದು, ಅಷ್ಟತನುಗಳ ಸುಟ್ಟುರುಹಿದ ಬೂದಿಯಿಂದ ಬೆಳಗಿ,
ಚಿಜ್ಜಲದಿಂದ ತೊಳೆದು ಕಳೆದುಳಿಯಲರಿಯದೆ,
ತನ್ನ ಹೃದಯಮಂದಿರದಲ್ಲಿ ನೆಲಸಿರುವ ಚಿದ್ಘನ ಚಿತ್ಪ್ರಕಾಶ ಚಿನ್ಮಯ
ಶ್ರೀಗುರುಲಿಂಗಜಂಗಮಕ್ಕೆ ಮನೋಪ್ರಕೃತಿಯಳಿದ ಉನ್ಮನವೆಂಬ ಏಕಾರತಿ,
ಲಿಂಗಾಂಗವೆಂಬುಭಯವಳಿದ ದ್ವಿಯಾರತಿ,
ಮಲತ್ರಯಂಗಳಳಿದ ತ್ರಿಯಾರತಿ, ಚತುಃಕರಣಂಗಳಳಿದ ಚತುರಾರತಿ,
ಪಂಚಭೂತ ಪಂಚವಾಯು ಪಂಚೇಂದ್ರಿಯ ಪಂಚಕ್ಲೇಶ ಪಂಚಮೂರ್ತಿಗಳ
ಫಲಪದಂಗಳ ಕಳೆದುಳಿದ ಪಂಚಾರತಿ, ಷಡ್ವರ್ಗ ಷಡೂರ್ಮೆ ಷಡ್ಭ್ರಮೆ
ಷಡ್ಭಾವವಿಕಾರಂಗಳಳಿದ ಷಡಾರತಿ, ಸಪ್ತಧಾತು ಸಪ್ತವ್ಯಸನಂಗಳಳಿದ ಸಪ್ತಾರತಿ,
ಅಂತರಂಗದಷ್ಟಮದ ಬಹಿರಂಗದಷ್ಟಮದಂಗಳಳಿದ ಅಷ್ಟಾರತಿ,
ನವಗ್ರಹಂಗಳಳಿದ ನವಾರತಿ,
ದಶೇಂದ್ರಿಯ ದಶವಾಯುಗಳಳಿದ ದಶಾರತಿ.
ಅಹಂಕಾರಗಳಳಿದ ಕಡ್ಡಿಬತ್ತಿ, ತನುತ್ರಯ ಗುಣತ್ರಯ ಅವಸ್ಥಾತ್ರಯ
ಮನತ್ರಯ ಆತ್ಮತ್ರಯ ಭಾವತ್ರಯಂಗಳ ಕಳೆದುಳಿದ ಕರ್ಪುರಾರತಿಯ ಬೆಳಗಿ
ನಿರ್ವಯಲಪದವನೈದಲರಿಯದೆ,
ಬಹಿರಂಗದ ಭಿನ್ನಕ್ರೀ ಭಿನ್ನಜ್ಞಾನ ಭಿನ್ನಭಕ್ತಿ ಮುಂದುಗೊಂಡು,
ಗಡ್ಡ ಜಡೆ ಮುಡಿಗಳ ಬಿಟ್ಟುಕೊಂಡು,
ಲಾಂಛನವ ಹೊದ್ದುಕೊಂಡು, ಕಾಂಚನಕ್ಕೆ ಕೈಯೊಡ್ಡುತ
ಕಂಚಗಾರನಂತೆ ನಾನಾ ಜಿನಸಿನ ಕಂಚ ನೆರಹಿ ಹರವಿಕೊಂಡು,
ಪರಮಶಿವಲಿಂಗ ಪೂಜಕರೆಂದು ಬಗಳುವ ಪಂಚಮಹಾಪಾತಕರಿಗೆ
ಕಿರಾತರು ಮೆಚ್ಚುವರಲ್ಲದೆ ಪುರಾತರು ಮೆಚ್ಚುವರೆ ?

ಬದ್ಧಭವಿಯಾದ ಶೈವರು ಮೆಚ್ಚುವರಲ್ಲದೆ
ಶುದ್ಧ ಸುಶೀಲ ನಿರಾಭಾರಿ ವೀರಶೈವರು ಮೆಚ್ಚುವರೆ ?
ಅಜ್ಞಾನಿಗಳು ಮೆಚ್ಚುವರಲ್ಲದೆ ನಿರ್ವಾಣಪಾರಿಗಳು ಮೆಚ್ಚರು.
ಭಿನ್ನಕ್ರೀಯಸ್ಥರು ಮೆಚ್ಚುವರಲ್ಲದೆ ಅಭಿನ್ನಕ್ರೀಯಸ್ಥರು ಮೆಚ್ಚರು.
ಇಂತಪ್ಪ ಲಿಂಗಾಂಗಸಮರಸದ ನಿರ್ಗುಣಪೂಜೆಯನೆಸಗಲರಿಯದ
ಭಿನ್ನಜ್ಞಾನ ಭಿನ್ನಪೂಜೆಯನೆಸಗುವ ಮರುಳುಗಳಿಗೆ
ಆರು ಮೆಚ್ಚುವರು ? ಹುಚ್ಚು ಮರುಳುಗಳಿರಾ
ನಮ್ಮ ನಿರಿಯೊಂದಾತ ನಿಮ್ಮ ಶರಣ ಕಲಿದೇವರದೇವ. ॥ ೨೫ ॥

೪೬೩

ಅಯ್ಯಾ, ತನ್ನಾದಿ ಮಧ್ಯಾವಸಾನವ ತಿಳಿದು,
ಭವಿ ಭಕ್ತ, ಆಚಾರ ಅನಾಚಾರ, ಯೋಗ್ಯ ಅಯೋಗ್ಯ,
ಅರ್ಪಿತ ಅನರ್ಪಿತ, ಸುಸಂಗ ದುಸ್ಸಂಗ,
ಸುಚಿತ್ತ ಕುಚಿತ್ತ, ಸುಬುದ್ಧಿ ಕುಬುದ್ಧಿ,
ಅಹಂಕಾರ ನಿರಹಂಕಾರ, ಸುಮನ ಕುಮನ,
ಸುಜ್ಞಾನ ಅಜ್ಞಾನ, ಸದ್ಭಾವ ದುರ್ಭಾವ, ಪಾಪ ಪುಣ್ಯ,
ಧರ್ಮ ಕರ್ಮ, ಸ್ವರ್ಗ ನರಕ, ಇಹಪರವೆಂಬ
ಭೇದಾಭೇದವ ತಿಳಿದು, ಶೈವಮಾರ್ಗದಷ್ಟಾಂಗಯೋಗವನುಳಿದು,
ವೀರಶೈವ ಶಿವಯೋಗಸಂಪನ್ನನಾಗಿ
ಭಕ್ತಿ ಜ್ಞಾನ ವೈರಾಗ್ಯದಲ್ಲಾಚರಿಸಿ, ಬಕಧ್ಯಾನವನುಳಿದು,
ರಾಜಹಂಸನ ಹಾಗೆ ಅಸತ್ಯವನುಳಿದು,
ಸುಸತ್ಯದಲ್ಲಾಚರಿಸುವ ಭಕ್ತ ಜಂಗಮವೇ ದ್ವಿತೀಯ ಶಂಭುವೆಂದು
ಅವರಂಗಣವ ಕಾಯ್ದು, ಅವರುಟ್ಟುದ ತೊಳೆದು,
ಅವರೊಕ್ಕುದ ಕೈಕೊಂಡು, ಅವರುಗಳ ಹಾರೈಸಿ,
ಅವರ ಕಡೆಬಾಗಿಲ ಕಾಯ್ದು, ಅವರ ತೊತ್ತಿನ ತೊತ್ತಾಗಿ
ಬದುಕಿದೆ ಕಾಣಾ, ಕಲಿದೇವರದೇವ. ॥ ೨೬ ॥

೪೬೪

ಅಯ್ಯಾ, ನಾನು ಹುಟ್ಟಿದಂದಿಂದ ಲಿಂಗವನಲ್ಲದೆ ಆರಾಧಿಸೆ.
ಜಂಗಮುಕ್ತಲ್ಲದೆ ನೀಡೆ, ಶರಣಸಂಗವಲ್ಲದೆ ಮಾಡೆ.
ಕಲ್ಯಾಣದ ಮಹಾಗಣಂಗಳೊಂದು ಹೋಳಿಯ ಮಾಡಿಕೊಟ್ಟರು.
ಆ ಹೋಳಿಯಲ್ಲಿ ಹೆಣ್ಣು ಗಂಡು ಸುಳಿಯಲೀಯೆನು.

ಚಿಕ್ಕವರು ಹಿರಿಯರ ಸುಳಿಯಲೀಯೆನು.
ಎಲ್ಲಾ ಮಹಾಗಣಂಗಳು ಎನ್ನ ಹೊಳೆಯಲೆ ಹಾಯುವರು.
ಲಿಂಗದ ವಸ್ತ್ರವನೊಗೆದು ಕಾಯಕದಲ್ಲಿ ಶುದ್ಧನಾದೆನು.
ಎನ್ನ ಕಾಯಕವನವಧರಿಸು ಕಲಿದೇವಯ್ಯಾ. || ೨೭ ||

೪೭೫

ಅಯ್ಯಾ, ನಾವು ಗುರು ಲಿಂಗ ಜಂಗಮದ
ಪಾದೋದಕ ಪ್ರಸಾದಸಂಬಂಧಿಗಳೆಂದು ನುಡಿದುಕೊಂಬ ಪಾತಕರ
ಮುಖವ ನೋಡಲಾಗದು.
ಅದೇಕೆಂದಡೆ, ಪಾದೋದಕವ ಕೊಂಡ ಬಳಿಕ,
ಜನನದ ಬೇರ ಕಿತ್ತೊರಸಬೇಕು.
ಪ್ರಸಾದವ ಕೊಂಡ ಬಳಿಕ, ಪ್ರಳಯವ ಗೆಲಿಯಬೇಕು.
ಇಂತಪ್ಪ ಚಿದ್ರಸ ಪಾದೋದಕ ಚಿತ್‌ಪ್ರಕಾಶ ಪ್ರಸಾದ.
ತನ್ನ ಚಿನ್ಮಯಸ್ವರೂಪವಾದ ಹೃದಯಮಂದಿರ ಮಧ್ಯದಲ್ಲಿ ನೆಲಸಿರುವ
ಸಕೀಲಸಂಬಂಧವ ಚಿದ್ಘನ ಗುರುವಿನ ಮುಖದಿಂದ
ಸಂಬಂಧಿಸಿಕೊಳಲರಿಯದೆ, ಅರ್ಥದಾಸೆಗಾಗಿ ಬಡ್ಡಿಯ ತೆಗೆದುಕೊಂಡು,
ಬಡವರ ಬಂಧನಕಿಕ್ಕಿ, ತುಡುಗುವ್ಯಾಪಾರವ ಮಾಡಿ,
ಸದಾಚಾರದಿಂದ ಆಚರಿಸಲರಿಯದೆ,
ತನುಮನಧನದಲ್ಲಿ ವಂಚನೆಯಿಲ್ಲದ ಭಕ್ತಿಯನರಿಯದೆ,
ತೀರ್ಥಪ್ರಸಾದದಲ್ಲಿ ನಂಬುಗೆ ವಿಶ್ವಾಸವಿಲ್ಲದೆ
ಕಂಡವರ ಕೈಯೊಡ್ಡಿ ಇಕ್ಕಿಸಿಕೊಂಡು ವಿಶ್ವಾಸವಿಲ್ಲದವಂಗೆ
ಅಷ್ಟಾವರಣವೆಂತು ಸಿದ್ಧಿಯಹುದೋ?
ಅದೇನು ಕಾರಣವೆಂದಡೆ :
ಸಕಲ ವೇದಾಗಮ ಪುರಾಣ ಸಪ್ತಕೋಟಿ ಮಹಾಮಂತ್ರ
ಉಪಮಂತ್ರ ಕೋಟ್ಯಾನುಕೋಟಿಗೆ
ಮಾತೃಸ್ಥಾನವಾದ ಪಂಚಾಕ್ಷರಿಯ ಮಂತ್ರ ಸಟೆಯಾಯಿತ್ತು.
ಅನಂತಕೋಟಿ ಬ್ರಹ್ಮಾಂಡಗಳನೊಳಗೊಂಡಂಥ
ಗುರುಕೊಟ್ಟ ಇಷ್ಟಲಿಂಗ ಸಟೆಯಾಯಿತ್ತು.
ದೇಗುಲದೊಳಗಣ ಕಲ್ಲು ಕಂಚು ಕಟ್ಟಿಗೆ ಬೆಳ್ಳಿ ತಾಮ್ರ
ಬಂಗಾರದ ದೇವರ ಪೂಜಿಸುವ ಪೂಜಾರಿಗಳ ಮಾತು ದಿಟವಾಗಿತ್ತು.
ಆದಿ ಅನಾದಿಯಿಂದತ್ತತ್ತಲಾಗಿ ಮೀರಿ ತೋರುವ ಮಾಯಾಕೋಳಾಹಳ
ನಿರಂಜನಜಂಗಮದ ಪಾದೋದಕ ಪ್ರಸಾದ ಸಟೆಯಾಯಿತ್ತು.

ಕ್ಷೇತ್ರಾದಿಗಳ ತೀರ್ಥಪ್ರಸಾದ ದಿಟವಾಯಿತ್ತು.
ಅಂತಪ್ಪ ಅಗಮ್ಯ ಅಗೋಚರವಾದ ಅಷ್ಟಾವರಣ
ಇಂಥವರಿಗೆಂತು ಸಾಧ್ಯವಹುದು?
ಆಗದೆಂದಾತ ನಮ್ಮ ಶರಣ ಕಲಿದೇವರದೇವ. || ೨೮ ||

೪೭೭

ಅಯ್ಯಾ. ನಾವು ಪರಮವಿರಕ್ತರು, ಪಟ್ಟದೊಡೆಯರು,
ಅತೀತ ಚರಮೂರ್ತಿಗಳೆಂದು ಶಂಖ ಗಿಳಿಲು ದಂಡಾಗ್ರವ ಪಿಡಿದು,
ಕಾವಿ ಕಾಷಾಯಾಂಬರವ ಹೊದ್ದು, ಮಹಾಘನಲಿಂಗ ಚರಮೂರ್ತಿಗಳೆಂದು
ಚೆನ್ನಾಗಿ ನುಡಿದುಕೊಂಬ ತೊನ್ನ ಹೊಲೆ ಮಾದಿಗರ ಪ್ರಸಂಗಕ್ಕೆ ಮನವೆಳಸದೆ,
ಮುಖವೆತ್ತಿ ನೋಡದೆ, ಶಬ್ದಮುಗ್ಧನಾಗಿ ಸುಮ್ಮನೆ ಕುಳಿತಿರ್ದನು ಕಾಣಾ
ನಿಮ್ಮ ಶರಣ. ಅದೇನು ಕಾರಣವೆಂದಡೆ :
ತನ್ನ ತಾನಾರೆಂದರಿಯದೆ, ತನ್ನ ಇಷ್ಟ ಮಹಾಘನಲಿಂಗದ ಗೊತ್ತ ಮುಟ್ಟದೆ,
ತನುಮನಧನವೆಂಬ ತ್ರಿವಿಧಪ್ರಸಾದವನರ್ಪಿಸಿ,
ತ್ರಿವಿಧ ಪ್ರಸಾದವ ಗರ್ಭೀಕರಿಸಿಕೊಂಡ ಪ್ರಸನ್ನ ಪ್ರಸಾದವ ಸ್ವೀಕರಿಸಿ,
ಪರತತ್ವ ಪ್ರಸಾದಮೂರ್ತಿ ತಾನಾಗಲರಿಯದೆ,
ಉಚ್ಚಂಗಿ ದುರ್ಗಿಗೆ ಬಿಟ್ಟ ಪೋತರಾಜನಂತೆ
ಮಾರು ಮಾರು ಜಡೆ ಮುಡಿ ಗಡ್ಡಗಳ ಬಿಟ್ಟುಕೊಂಡು,
ಡೊಂಬ ಜಾತಿಕಾರರಂತೆ ವೇಷವ ತೊಟ್ಟು,
ಸಂಸ್ಕೃತಾದಿ ಪ್ರಕೃತಾಂತ್ಯಮಾದ ನಾನಾ ಶಾಸ್ತ್ರವ ಹೇಳಿ,
ಸುಡುಗಾಡಸಿದ್ಧಯ್ಯಗಳಂತೆ ಕುಟಿಲ ಕುಹಕ ಯಂತ್ರ ತಂತ್ರಗಳ ಕಟ್ಟುತ,
ಪುರಜನರ ಮೆಚ್ಚಿಸಬೇಕೆಂದು
ಅಯ್ಯಾ, ನಾವು ಕೆರೆ ಬಾವಿ ಮಠಮಾನ್ಯ ಮದುವೆ ಮಾಂಗಲ್ಯ
ದೀಕ್ಷಾಪಟ್ಟ ಪ್ರಯೋಜನ ಔತಣ ಅನ್ಯಕ್ಷೇತ್ರ ಅರವಟ್ಟಿಗೆ
ದಾಸೋಹ ಪುರಾಣ ಪುಸ್ತಕ ಮಾಡಿಸಬೇಕೆಂದು
ಗುರುಲಿಂಗಜಂಗಮಕ್ಕಲ್ಲದೆ ನಿರಾಭಾರಿ ವೀರಶೈವಕ್ಕೆ ಹೊರಗಾಗಿ,
ನಾನಾ ದೇಶವ ತಿರುಗಿ, ಹುಸಿಯ ಬೊಗಳಿ,
ವ್ಯಾಪಾರದ ಮರೆಯಿಂದ ನಡುವೂರ ಬೀದಿ ನಡುವೆ ಕುಳಿತು,
ಪರರೊಡವೆಯ ಅಪಹರಿಸುವ ಸೆಟ್ಟಿ ಮುಂತಾದ
ಸಮಸ್ತ ಕಳ್ಳರ ಮಕ್ಕಳ ಕಾಡಿ ಬೇಡಿ,
ಅವರು ಕೊಟ್ಟರೆ ಹೊಗಳಿ. ಕೊಡದಿರ್ದಡೆ ಬೊಗಳಿ,
ಆ ಭ್ರಷ್ಟ ಹೊಲೆ ಮಾದಿಗರು ಕೊಟ್ಟ ದ್ರವ್ಯಂಗಳ ಕೊಂಡುಬಂದು

ಚೋರರೊಯ್ವರೆಂದು ಮಠದೊಳಗೆ ಮಡಗಿಕೊಂಡಂಥ
ದುರ್ಗುಣ ದುರಾಚಾರಿಗಳ ಶ್ರೀಗುರು ಲಿಂಗ ಜಂಗಮವೆಂದು
ಕರೆತಂದು, ತೀರ್ಥ ಪ್ರಸಾದವ ತೆಗೆದುಕೊಂಬವರಿಗೆ
ಇಪ್ಪತ್ತೆಂಟುಕೋಟಿಯುಗ ಪರಿಯಂತರದಲ್ಲಿ
ನರಕ ಕೊಂಡದಲ್ಲಿಕ್ಕುವ ಕಾಣಾ, ನಿಮ್ಮ ಶರಣ ಕಲಿದೇವರದೇವ. ||೨೯||

೪೬೭

ಅಯ್ಯಾ, ನಿತ್ಯನಿಃಕಳಂಕ ಸತ್ಯಸದಾಚಾರ ಭಕ್ತಜಂಗಮದ
ಆಚರಣೆಸಂಬಂಧವ ಒಳಗು ಹೊರಗು ಎನ್ನದೆ,
ಸಾಕಾರ ನಿರಾಕಾರವಾದ ಒಂದೆ ವಸ್ತುವೆಂದು ತಿಳಿದು,
ಚಿದಂಗಕ್ಕೆ ಇಷ್ಟಲಿಂಗ ಚಿದ್ವಿಭೂತಿ ಚಿದ್ರುದ್ರಾಕ್ಷಿ ಸದ್ಭಕ್ತಿಯ ಸಂಬಂಧಿಸಿ,
ಚಿತ್ಪ್ರಾಣಕ್ಕೆ ಪಾದೋದಕ ಪ್ರಸಾದ ಶಿವಮಂತ್ರ ಸಮ್ಯಜ್ಞಾನವ ಸಂಬಂಧಿಸಿ,
ಭಕ್ತ ಧವಳಾಂಬರಧಾರಕನಾಗಿ, ಜಂಗಮ ಶಿವಲಾಂಛನಧಾರಕನಾಗಿ,
ಪರದೈವ ಪರಪಾಕ ಪರಶಾಸ್ತ್ರ ಪರಬೋಧೆ ಪರದ್ರವ್ಯ ಪರಸ್ತ್ರೀ ಪರಜಪ
ಪರನಿಂದೆ ಅತಿಯಾಸೆ ಕಾಂಕ್ಷೆ ಮಲತ್ರಯದಲ್ಲಿ ಮೋಹಿಸದೆ,
ಮಥನದಲ್ಲಿ ಕೂಡದೆ ಭವಿಮಾರ್ಗ ಸಂಗವ ಬಳಸಿದ
ಶಿಷ್ಯ ಪುತ್ರ ಸ್ತ್ರೀ ಬಂಧು ಬಳಗ ಒಡಹುಟ್ಟಿದವರು
ಪಿತ ಮಾತೆ ಗುರುವೆಂದು ಒಡಗೂಡಿ ಬಳಸಿದಡೆ
ಭಕ್ತಜಂಗಮಸ್ಥಲಕ್ಕೆ ಸಲ್ಲ ಕಾಣಾ, ಕಲಿದೇವರದೇವ. ||೩೦||

೪೬೮

ಅಯ್ಯಾ, ನಿಮ್ಮ ಧ್ಯಾನದಲ್ಲಿರಿಸಲೊಲ್ಲದೆ
ಬಸವಣ್ಣನ ಧ್ಯಾನದಲ್ಲಿರಿಸಯ್ಯಾ ಎನ್ನನು.
ಲಿಂಗವೇದ್ಯ ಬಸವಣ್ಣ, ಜಂಗಮವೇದ್ಯ ಬಸವಣ್ಣ.
ಪ್ರಸಾದವೇದ್ಯ ಬಸವಣ್ಣ, ನಿಜಪದವೇದ್ಯ ಬಸವಣ್ಣ.
ಮಹಾವೇದ್ಯ ಬಸವಣ್ಣ.
ಇಂತು ಬಸವಣ್ಣನ ಸಂಗದಲ್ಲಿರಿಸು, ಕಲಿದೇವರದೇವ. ||೩೧||

೪೬೯

ಅಯ್ಯಾ, ನಿಮ್ಮ ಪ್ರಸಾದದ ಮಹಿಮೆಯನೇನೆಂಬೆನಯ್ಯಾ.
ವೇದಂಗಳರಿಯವು, ಶಾಸ್ತ್ರಂಗಳರಿಯವು.
ಒಲವ ಸಾಧಿಸಿ , ತನುವ ದಂಡನೆಯ ಮಾಡಿ,
ಸಕಲಭೋಗಂಗಳ ಬಿಟ್ಟು, ದುಃಖವನನುಭವಿಸಿ,

ತಪ್ಪಿಲ್ಲದೆ ನಡೆದಡೆ ಹಡೆವರಯ್ಯಾ
ಒಚ್ಚೊಚ್ಚಿ ಸ್ವರ್ಗದ ಭೋಗವನು.
ಒಂದುವನು ಬಿಡಲಿಲ್ಲ, ಸಂದೇಹ ಮಾತ್ರವಿಲ್ಲ.
ಆಗ ಬಿತ್ತಿ ಆಗ ಬೆಳೆಯುವಂತೆ,
ರೋಗಿ ಬಯಸಿದ ವೈದ್ಯವ ಕುಡುವಂತೆ,
ಪಾಪದಂತಪಾದುದು, ಪುಣ್ಯವನೆ ಮಾಡುವದು.
ಆತ ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯೆನಿಸುವ.
ಹಿಡಿತಡೆಯಿಲ್ಲ, ಪ್ರಸಾದದಿಂದತಃಪರವಿಲ್ಲ.
ಪ್ರಸಾದಿಯಿಂದೆ ಮುಕ್ತರಿಲ್ಲ.
ಇಂತಪ್ಪ ಪ್ರಸಾದವನು ನಿಮ್ಮ ಶರಣ ಬಸವಣ್ಣ ತೋರಿದನಾಗಿ,
ಎನ್ನ ಭವಂ ನಾಸ್ತಿಯಾಯಿತ್ತು ಕಾಣಾ, ಕಲಿದೇವರದೇವ. ||೩೨||

೪೭೦

ಅಯ್ಯಾ, ಭಕ್ತ ಜಂಗಮದ ವಿವರವೆಂತೆಂದಡೆ:
ಭಕ್ತನ ಅಂಗ ಮನ ಪ್ರಾಣಂಗಳೆಲ್ಲ ಭಸ್ಮಘುಟಿಕೆಗಳಂತೆ.
ಜಂಗಮದ ಅಂಗ ಮನ ಪ್ರಾಣಂಗಳೆಲ್ಲ ರುದ್ರಾಕ್ಷಿಮಣಿಯಂತೆ.
ಭಕ್ತನ ಅಂಗತ್ರಯಂಗಳು ಪಂಚಲೋಹಗಳಂತೆ.
ಜಂಗಮದ ಅಂಗತ್ರಯಂಗಳು ಮೃತ್ತಿಕೆ ಭಾಂಡದಂತೆ.
ಭಕ್ತನ ಅಂಗತ್ರಯಂಗಳು ಬಂಗಾರದಂತೆ.
ಭಕ್ತನ ಅಂಗತ್ರಯಂಗಳು ಮೌಕ್ತಿಕದಂತೆ.
ಭಕ್ತನ ಅಂಗತ್ರಯಂಗಳಲ್ಲಿ ನಡೆನುಡಿ ತಪ್ಪಿದಡೆ ಪ್ರಾಯಶ್ಚಿತ್ತವುಂಟು.
ಜಂಗಮದ ಅಂಗತ್ರಯಂಗಳಲ್ಲಿ ನಡೆನುಡಿ ತಪ್ಪಿದಡೆ.
ಪ್ರಾಣವೇ ಪ್ರಾಯಶ್ಚಿತ್ತವಲ್ಲದೆ ಪೂರ್ವಾಚಾರಕ್ಕೆ ಯೋಗ್ಯವಲ್ಲ ಕಾಣಾ.
ಮಹಾಘನ ಭಕ್ತಜಂಗಮದ ಸತ್ಯ ನಡೆನುಡಿಯ ವಿಚಾರವೆಂತೆಂದಡೆ:
ಗುರುಲಿಂಗಜಂಗಮವಲ್ಲದೆ ಅನ್ಯಾರ್ಚನೆ,
ಪಾದೋದಕ ಪ್ರಸಾದವಲ್ಲದೆ ಭಂಗಿ ಮದ್ದು ತಂಬಾಕು
ನಾನಾ ಗಿಡಮೂಲಿಕೆ ವೈದ್ಯ ಫಲಾಹಾರ ಕ್ಷೀರಾಹಾರ,
ಸ್ವಸ್ತ್ರೀಯಲ್ಲದೆ ಪರಸ್ತ್ರೀ ಗಮನ,
ಸತ್ಯಕಾಯಕ ಭಿಕ್ಷಾಹಾರವಲ್ಲದೆ ಚೋರತನ ಕುಟಿಲ ಮಂತ್ರಗಾರಿಕೆ
ವೈದ್ಯ ಗುಣಾಚಾರವಿಂತಿವನು ಹಿಡಿದಾಚರಿಸುವಾತನು
ಸತ್ಯಸಹಜಜಂಗಮವಲ್ಲ ಕಾಣಾ. ಕಲಿದೇವರದೇವ. ||೩೩||

೪೭೧

ಅಯ್ಯಾ, ಭಕ್ತಜಂಗಮವೆಂದು ಒಪ್ಪಕ್ಕೆ ನುಡಿಯಬಹುದಲ್ಲದೆ
ಭಕ್ತಜಂಗಮವಾಗಿ ನಿಂದ ನಿಲುಕಡೆಯ ಹೇಳಿರಣ್ಣ.
ಅದೆಂತೆಂದಡೆ: ಸದ್ಗುರುಮುಖದಿಂದ ವೇಧಾಮಂತ್ರಕ್ರಿಯಾದೀಕ್ಷೆಯ ತಿಳಿದು,
ಪಂಚಾಚಾರವೆ ಪ್ರಾಣವಾಗಿ, ಅಷ್ಟಾವರಣವೆ ಅಂಗವಾಗಿ,
ಸದ್ಭಕ್ತಿಯೆ ಮುಕ್ತಿಮಂದಿರವಾಗಿ, ಸತ್ಕ್ರಿಯಾ ಸಮ್ಯಕ್‌ಜ್ಞಾನವೆ ಸಂಜೀವನವಾಗಿ,
ಕೊಡುವಲ್ಲಿ ಕೊಂಬಲ್ಲಿ ನಡೆನುಡಿ ಬೀಸರವೋಗದೆ,
ಬಹಿರಂಗದಲ್ಲಿ ಆಚರಣೆ, ಅಂತರಂಗದಲ್ಲಿ ಸಂಬಂಧವ
ಸದ್ಗುರು ಲಿಂಗಜಂಗಮ ಕರುಣಕಟಾಕ್ಷೆಯಿಂ ತಿಳಿದು, ಸನ್ಮಾರ್ಗವಿಡಿದು
ಸತ್ಯನಡೆನುಡಿಯಿಂದಾಚರಿಸುವ ಶರಣಗಣಂಗಳೆ
ಅನಾದಿ ಭಕ್ತಜಂಗಮ ಕಾಣಾ,
ಕಲಿದೇವರದೇವ ಸಾಕ್ಷಿಯಾಗಿ ಸಂಗನಬಸವೇಶ್ವರಾ. ||೩೪||

೪೭೨

ಅಯ್ಯಾ, ಮಾತೆ ಪಿತರಾಗಲಿ, ಸಹೋದರ ಬಂಧುಗಳಾಗಲಿ,
ಅತ್ಯಂತ ಸ್ನೇಹದಲ್ಲಿ ಕೂಡಿದವರಾಗಲಿ,
ಗುರುಕಾರುಣ್ಯವ ಪಡೆದು ಶಿವಸೋದರರಾಗಲಿ,
ಶಿವಾಚಾರ ಶಿವಕಾರ್ಯಕ್ಕೆ ಸಹಕಾರಿಗಳಲ್ಲದೆ ವಕ್ರವಾದವನು
ಮಾತಿನಲ್ಲಿ ನಿರಾಕರಿಸಿ ನುಡಿಯದೆ,
ಮನದಲ್ಲಿ ಪತಿಕರಿಸಿ ಕೂಡಿಸಿಕೊಂಡು ನಡೆದೆನಾದಡೆ,
ಅಘೋರನರಕದಲ್ಲಿಕ್ಕು ಕಲಿದೇವಯ್ಯಾ. ||೩೫||

೪೭೩

ಅಯ್ಯಾ, ಸತ್ಯಸದಾಚಾರ ಸದ್ಭಕ್ತನಾದಡೆ ಷೋಡಶಭಕ್ತಿಯ ತಿಳಿಯಬೇಕು.
ವೀರಮಾಹೇಶ್ವರನಾದಡೆ ಷೋಡಶಜ್ಞಾನವ ತಿಳಿಯಬೇಕು.
ಪರಮವಿರಕ್ತನಾದಡೆ ಷೋಡಶಾವರಣವ ತಿಳಿಯಬೇಕು.
ಶರಣನಾದಡೆ ಅಷ್ಟಾವಧಾನವ ತಿಳಿಯಬೇಕು.
ಐಕ್ಯನಾದಡೆ ತನ್ನಾದಿಮದ್ಯಾವಸಾನವ ತಿಳಿಯಬೇಕು.
ಲಿಂಗಾನುಭಾವಿಯಾದಡೆ ಸರ್ವಾಚಾರಸಂಪತ್ತಿನಾಚರಣೆಯ ತಿಳಿಯಬೇಕು.
ಈ ವಿಚಾರವನರಿಯದೆ ಬರಿದೆ ಷಟ್ಸ್ಥಲವ ಬೊಗಳುವ
ಕುನ್ನಿಗಳನೇನೆಂಬೆನಯ್ಯಾ, ಕಲಿದೇವರದೇವ. ||೩೬||

೪೭೪

ಅಯ್ಯಾ, ಸದಾಚಾರವೆಂದಡೆ ಗುರುಲಿಂಗಜಂಗಮದಾರ್ಚನೆ.
ಪಾದೋದಕ ಪ್ರಸಾದ ಸೇವನೆ, ಪಂಚಾಕ್ಷರ ಷಡಕ್ಷರ ಸ್ತೋತ್ರ,
ಚಿದ್ಘನ ಮಹಾಲಿಂಗಧ್ಯಾನ, ಪರದ್ರವ್ಯ ನಿರಸನ.
ಇಂತಿದು ನಿತ್ಯವೆಂದು ಸದ್ಗುರು ಮುಖದಿಂ ತಿಳಿದು,
ಭಿನ್ನವಿಲ್ಲದೆ ಆಚರಿಸುವದೆ ಆಚಾರವಲ್ಲದೆ
ಶುದ್ಧಶೈವರ ಹಾಂಗೆ ನಂದಿ ವೀರಭದ್ರ ಹಾವುಗೆ
ಗದ್ದುಗೆ ಕಂಥೆ ಕಮಂಡಲು ಲಿಂಗಂಗಳೆಂದು
ಇದಿರಿಟ್ಟು ಪೂಜಿಸುವವನ ಮನೆಯ ಪಾಕ,
ಮದ್ಯ ಮಾಂಸ ಕಾಣಾ ಕಲಿದೇವರದೇವ. ||೩೭||

೪೭೫

ಅರಸಿನ ಭಕ್ತಿ, ಅಹಂಕಾರದಲ್ಲಿ ಹೋಯಿತ್ತು.
ವೇಶಿಯ ಭಕ್ತಿ, ಎಂಜಲ ತಿಂದಲ್ಲಿ ಹೋಯಿತ್ತು.
ಬ್ರಾಹ್ಮಣನ ಭಕ್ತಿ, ಮುಟ್ಟುತಟ್ಟಿನಲ್ಲಿ ಹೋಯಿತ್ತು.
ಶೀಲವಂತನ ಭಕ್ತಿ, ಪ್ರಪಂಚಿನಲ್ಲಿ ಹೋಯಿತ್ತು.
ಸೆಟ್ಟಿಯ ಭಕ್ತಿ, ಕುಟಿಲವ್ಯಾಪಾರದಲ್ಲಿ ಹೋಯಿತ್ತು.
ಇಂತಿವರ ಭಕ್ತಿಗೆ ಊರಿಂದ ಹೊರಗಣ ಡೊಂಬನೆ ಸಾಕ್ಷಿ
ಕಲಿದೇವರದೇವಾ. ||೩೮||

೪೭೬

ಅರಿದಲ್ಲದೆ ಗುರುವ ಕಾಣಬಾರದು.
ಅರಿದಲ್ಲದೆ ಲಿಂಗವ ಕಾಣಬಾರದು.
ಅರಿದಲ್ಲದೆ ಜಂಗಮವ ಕಾಣಬಾರದು.
ಇಂತೀ ತ್ರಿವಿಧವು, ಬಸವಣ್ಣನ ಕೃಪೆಯಿಂದ
ಎನಗೆ ಸ್ವಾಯತವಾಯಿತ್ತಾಗಿ,
ಭಿನ್ನವಿಲ್ಲ ಕಾಣಾ ಕಲಿದೇವರದೇವ. ||೩೯||

೪೭೭

ಅರಿವನರಿದೆನೆಂದು ಕ್ರೀಯ ಬಿಡಬಾರದು.
ಮಧುರಕ್ಕೆ ಮಧುರ ಒದಗಲಾಗಿ ಸವಿಗೆ ಕೊರತೆಯುಂಟೆ ?
ದ್ರವ್ಯಕ್ಕೆ ದ್ರವ್ಯ ಕೂಡಲಾಗಿ ಬಡತನಕಡಹುಂಟೆ ?
ನೀ ಮಾಡುವ ಮಾಟ, ಶಿವಪೂಜೆಯ ನೋಟ ಭಾವವಿರಬೇಕು.
ಅದು ಕಲಿದೇವರದೇವಯ್ಯನ ಕೂಟ, ಚಂದಯ್ಯ. ||೪೦||

### ೪೭೮

ಅರಿವನಾರಡಿಗೊಂಡಿತ್ತು ಮರಹು.
ಮರಹನಾರಡಿಗೊಂಡಿತ್ತು ಮಾಯೆ.
ಮಾಯೆಯನಾರಡಿಗೊಂಡಿತ್ತು ಕರ್ಮ.
ಕರ್ಮವನಾರಡಿಗೊಂಡಿತ್ತು ತನು.
ತನುವನಾರಡಿಗೊಂಡಿತ್ತು ಸಂಸಾರ.
ಮರಹು ಬಂದಹುದೆಂದರಿದು
ಅರಿವ ಬೆಲೆ ಮಾಡಿ, ಅರಿವ ಕೊಟ್ಟು,
ಗುರುವಿನ ಕೈಯಲ್ಲಿ ಲಿಂಗವ ಕೊಂಡೆ ನೋಡಯ್ಯ.
ಎನ್ನರಿವನಾಯತವಲ್ಲಿ ನಿಲಿಸಿ,
ನಿಜ ಸ್ವಾಯತವ ಮಾಡಿದನು
ಕಲಿದೇವರದೇವಾ, ನಿಮ್ಮ ಶರಣ ಬಸವಣ್ಣ. ||೪೧||

### ೪೭೯

ಅರಿವಿನಾಪ್ಯಾಯನವೆ ಅಪೂರ್ವ ಕಂಡಯ್ಯಾ.
ಪೂರ್ವಜ್ಞಾನವೆಂಬುದೆ ವೇದ, ಶಾಸ್ತ್ರ ಆಗಮಂಗಳೆಂಬುವು
ಪೂರ್ಣ ಪ್ರಮಾಣ ಇವಲ್ಲ ಕಂಡಯ್ಯಾ.
ಇಂತೀ ಪ್ರಮಾಣವನರಿಯದೆ ನಿಂದ
ನಿಮ್ಮ ಶರಣರ ತೋರಾ, ಕಲಿದೇವಯ್ಯಾ. ||೪೨||

### ೪೮೦

ಅರುಹಿನೊಳಗಣ ಕುರುಹು ಮರಹಿಂಗೆ ಬೀಜ.
ಕುರುಹಿನ ಮರಹನರಿವು ನುಂಗಿ,
ಘನಕ್ಕೆ ಘನವೇದ್ಯವಾದ ಬಳಿಕ, ನಿತ್ಯಪರಿಪೂರ್ಣ ತಾನೆ.
ಕಲಿದೇವರದೇವ ವಾಙ್ಮನಕ್ಕಗೋಚರನು. ||೪೩||

### ೪೮೧

ಅಲೀಯವಾಗಿ ಬಂದ ಪರಿಯ,
ಅಕಾರ ಉಕಾರ ಮಕಾರಂಗಳು ಸೋಂಕದಿರ್ದ ಪರಿಯ,
ನಿರ್ಲೇಪಸ್ಥಲವಾಧಾರವಾದ ಪರಿಯ,
ನಿಮ್ಮ ಶರಣ ಬಸವಣ್ಣ ಬಲ್ಲನು.
ಬೆಸಗೊಳ್ಳಾ, ಕಲಿದೇವರದೇವ. ||೪೪||

೪೮೨

ಅಷ್ಟತನುವಿನ ನಿಷ್ಠಾಪರವ ಬಿಟ್ಟು,
ಬಟ್ಟಬಯಲಲಿ ನಿಂದ ನಿಜವ ನೋಡಾ.
ಹತ್ತೆಂಬ ಪ್ರಾಣವ ಸುತ್ತಿ ಸುಳಿಯಲೀಸದೆ
ಒತ್ತಿ ಸುಟ್ಟು, ಸಯವಾದ ಘನಚೈತನ್ಯವ ನೋಡಾ.
ನಿಷ್ಠೆ ನಿಬ್ಬರ ತೊಟ್ಟುಬಿಟ್ಟು ಸಚ್ಚಿದಾನಂದವಾದ ಪರಿಯ ನೋಡಾ.
ಕಲಿದೇವರದೇವನ ನಿಲುವಿಂಗೆ ನಮೋ ನಮೋ ಎನುತಿರ್ದೆನು. ||೪೫||

೪೮೩

ಅಷ್ಟತನುವಿನಲ್ಲಿ ಹುಟ್ಟಿದ ನಿಷ್ಠಾಪರದಲ್ಲಿ, ಮುಟ್ಟುವ ಭರದಲ್ಲಿ,
ವಿದ್ಯೆಯೊಳಗಣ, ಧಾರಾಮಂಟಪದೊಳಗಣ ಸಹಜವನರಿದಂಗಲ್ಲದೆ
ಲಿಂಗವೆನಬಾರದು, ಜಂಗಮವೆನಬಾರದು, ಪ್ರಸಾದವೆನಬಾರದು.
ಧಾರಾಮಂಟಪದೊಳಗಣ ಸಹಜವನರಿಯದೆ
ಕರಣಂಗಳಿಗೆ ಗುರಿಯಾದರು, ಕರಣಲಿಂಗಾರ್ಚಕರಾದರು.
ಕರಣ ತಪ್ಪದೆಂತೊ ?
ಇದೆಲ್ಲವನತಿಗಳೆದು ನಿಜಲಿಂಗಾರ್ಚನೆಯ ತೋರಿ,
ನಿಜೈಕ್ಯದೊಳಗಿರಿಸಿ ಬದುಕಿದಾತ ಬಸವಣ್ಣ ಕಾಣಾ
ಕಲಿದೇವಯ್ಯ. ||೪೬||

೪೮೪

ಅಷ್ಟಮದ ಸಪ್ತವ್ಯಸನ ಷಡುವರ್ಗಂಗಳ ಒತ್ತಿ ನಿಲಿಸಿ,
ಎಲ್ಲಕ್ಕೆ ಶಿವನೊಬ್ಬನೆ, ಶಿವಜ್ಞಾನವೆಂದರಿಯದ ವಿಪ್ರರು,
ಆನೆ ಅಶ್ವ ಹೋತ ಕೋಣ ಬಿಂಜಣದಿಂದ ಕಡಿದು,
ಬೆಂಕಿಯ ಮೇಲೆ ಹಾಕಿ, ತಾನು ಪರಬ್ರಹ್ಮನಾದೆನೆಂದು
ನರಕಕ್ಕೆ ಹೋದರೊಂದುಕೋಟ್ಯಾನುಕೋಟಿ ಬ್ರಹ್ಮರು.
ವೇದದ ಅರ್ಥವನರಿಯದೆ ಜೀವನ ಬಾಧೆಯಂ ಮಾಡುವ
ವಧಾಸ್ಯಕರ್ಮಕ್ಕೆ ಒಳಗಾದರು, ದ್ವಿಜರಂದು.
ಆದಿಯ ಪ್ರಮಥರು ಕಂಡುದೆಂತೆಂದಡೆ :
ಆನೆಯೆಂಬುದು ಮದ, ಮತ್ಸರವೆಂಬುದು ಅಶ್ವ,
ಕೋಣನೆಂಬುದು ಕ್ರೋಧ, ಅಂಗವಿಕಾರವೆಂಬುದು ಹೋತ.
ಇಂತು ನಾಲ್ಕು ವರ್ಗಂಗಳು.
ಶಿವಜ್ಞಾನವೆಂಬ ಅಗ್ನಿಯಲ್ಲಿ ದಹನ ಮಾಡುವರು ನಮ್ಮವರು.

ಇಂತೀ ವಿವರವಿಲ್ಲದೆ ತಾವು ಪರಬ್ರಹ್ಮರೆನಿಸಿಕೊಂಬ,
ಜೀವಹಿಂಸೆಯ ಮಾಡುವ ವಿಪ್ರರ ಮುಖವ ನೋಡಲಾಗದೆಂದ
ಕಲಿದೇವರದೇವ. || ೪೭ ||

**೪೮**

ಅಷ್ಟಾವರಣ ಪಂಚಾಚಾರವುಳ್ಳ ಸದ್ಭಕ್ತರ ಉದರದಲ್ಲಿ ಜನಿಸಿ,
ಶಿವಭಕ್ತನಾಗಿದ್ದು, ಭವಿಯ ಸಂಗವ ಮಾಡಿದ ದೇಹ ಪಾಪ.
ಆ ಭವಿಯ ಸಂಗಕಿಂದಲೂ ಸುರಾಪಾನಿಯ ಸಂಗ ಪಾಪ.
ಆ ಸುರಾಪಾನಿಯ ಸಂಗಕಿಂದಲೂ ಮಾಂಸಾಹಾರಿಯ ಸಂಗ ಪಾಪ.
ಆ ಮಾಂಸಾಹಾರಿಯ ಸಂಗಕಿಂದಲೂ ಭಂಗಿಭಕ್ಷಕನ ಸಂಗ ಪಾಪ.
ಆ ಭಂಗಿಭಕ್ಷಕನ ಸಂಗಕಿಂದಲೂ ಶಿವಭಕ್ತನಾಗಿ
ಅನ್ಯದೈವವ ಭಜಿಸುವವನ ಸಂಗ ಅಂದೇ ದೂರ,
ಹಿರಿಯ ನರಕವೆಂದಾತ, ನಮ್ಮ ದಿಟ್ಟ ವೀರಾಧಿವೀರ ಕಲಿದೇವರದೇವ. || ೪೮ ||

**೪೯**

ಅಸಮ ಶಿವಲಿಂಗ ಕೈವಶವಾಗಿರಲು,
ವಸುಧೆಯ ಮೇಲಣ ಪ್ರತಿಷ್ಠೆಗೆ ಶರಣೆಂದಡೆ,
ಬಸವಣ್ಣಪ್ರಿಯ ಲಿಂಗದ ಚೇತನವದಂದೆ ತೊಲಗುವದೆಂದ,
ಕಲಿದೇವಯ್ಯ. || ೪೯ ||

**೫೦**

ಅಹುದಹುದು ಇಂತಿರಬೇಡವೆ ನಿರಹಂಕಾರ.
ಮಹಾಜ್ಞಾನಕ್ಕೆ ನಿರಹಂಕಾರವೆ ಶೃಂಗಾರ.
ನಿರಹಂಕಾರಕ್ಕೆ ಭಕ್ತಿಯೆ ಶೃಂಗಾರ.
ಭಕ್ತಿಗೆ ಬಸವಣ್ಣನೆ ಶೃಂಗಾರ.
ಬಸವಣ್ಣಂಗೆ ಚೆನ್ನಬಸವಣ್ಣನೆ ಶೃಂಗಾರ.
ಕಲಿದೇವರದೇವಾ,
ಎನಗೆಯೂ ನಿನಗೆಯೂ ಚೆನ್ನಬಸವಣ್ಣನೆ ಶೃಂಗಾರ. || ೫೦ ||

**೫೧**

ಆಕಾರ ನಿರಾಕಾರವಾಯಿತ್ತಲ್ಲಾ ಬಸವಣ್ಣಾ.
ಪ್ರಾಣ ನಿಃಪ್ರಾಣವಾಯಿತ್ತಲ್ಲಾ ಬಸವಣ್ಣಾ.
ಅಂಗಜಂಗಮದ ಮಾಟ ಸಮಾಪ್ತಿಯಾಯಿತ್ತಲ್ಲಾ ಬಸವಣ್ಣಾ.

ನಿಃಶಬ್ದವೇದ್ಯವಾದೆಯಲ್ಲಾ ಬಸವಣ್ಣ.
ಕಲಿದೇವರದೇವನ ಹೃದಯಕಮಲವ ಹೊಕ್ಕು,
ದೇವರಿಗೆ ದೇವನಾಗಿ ಹೋದೆಯಲ್ಲಾ ಸಂಗನಬಸವಣ್ಣ. ||೫೧||

೪೮೯

ಆಕಾರ ನಿರಾಕಾರವೆನುತ್ತಿಹರೆಲ್ಲರು.
ಆಕಾರವೆನ್ನ, ನಿರಾಕಾರವೆನ್ನ.
ಲಿಂಗಜಂಗಮಪ್ರಸಾದದಲ್ಲಿ ತದ್ಗತನಾದ
ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯಾ,
ಕಲಿದೇವರದೇವ. ||೫೨||

೪೯೦

ಆಕಾರ ನಿರಾಕಾರವೆಂಬುದೊಂದಾದ ಭಕ್ತನನು
ಆಕಾರವೆನಲುಬಾರದು, ನಿರಾಕಾರವೆನಲುಬಾರದು.
ಸೂಕ್ಷ್ಮ ನಿಜಪದ ಏಕವಾದ ಭಕ್ತನು,
ಘನಸಂಗಸಾರಾಯ ಜಂಗಮಸಂಗಸಾರಾಯ ಪ್ರಸಾದಸಂಗಸಾರಾಯ
ಜ್ಞಾನಸಂಗಸಾರಾಯ ಅನುಭವಸಂಘಸಾರಾಯ.
ಅಂತಪ್ಪ ಭಕ್ತ ತಾನಾದ ಕಲಿದೇವಯ್ಯ. ||೫೩||

೪೯೧

ಆಗಮದ ಹೊಲಬನರಿಯದ ಕುನ್ನಿಗಳು
ಶ್ರೀಗುರುಲಿಂಗಜಂಗಮದ ನೆಲೆಯನರಿಯದೆ ಹೋಗಿ,
ಬಾಗಿಲ ದಾಟುವ ಮರನ ದೇವರೆಂದು ಪೂಜಿಸಿ,
ಬರುತ್ತ ಹೋಗುತ್ತ ಮರನ ಒದ್ದು ಹರಿಸಿಕೊಂಬರು.
ಎಂಬತ್ತುನಾಲ್ಕುಲಕ್ಷ ಜೀವರಾಶಿಗೆ ಕಾಗೆ ಕನಿಷ್ಠ.
ಆ ಕಾಗೆಯ ಬಾಯಲು ಮಾತಾಪಿತರುಂಡರೆಂದು ಓಗರವನಿಕ್ಕಿ,
ಬಳಿಕ ಉಂಬವರ ಪಙ್ತಿಯಲ್ಲಿ
ಶ್ರೀಗುರು ಕಾರುಣ್ಯವ ಪಡೆದ ಭಕ್ತನು,
ಅಲ್ಲಿ ಹೋಗಿ ಲಿಂಗಾರ್ಪಣವ ಮಾಡಿದಡೆ
ಅವನು ಕಾಗೆಗಿಂದ ಕರಕಷ್ಟವೆಂದ, ಕಲಿದೇವರದೇವಯ್ಯ. ||೫೪||

೪೯೨

ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮಲಿಂಗ
ಪ್ರಸಾದಲಿಂಗ ಮಹಾಲಿಂಗ ಇಷ್ಟಪ್ರಾಣಭಾವವೆಂಬ ಲಿಂಗಗಳು ತಾವೆ.

ಆ ಬಸವಣ್ಣನಿಂದಾದ ಕಾರಣ, ಕಲಿದೇವರಲ್ಲಿ ಅಹೋರಾತ್ರಿಯೊಳೆದ್ದು,
ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ||೫೫||

೪೯೩

ಆ ಜಾತಿ ಈ ಜಾತಿಯವರೆನಬೇಡ.
ಹದಿನೆಂಟುಜಾತಿಯೊಳಗಾವ ಜಾತಿಯಾದಡೂ ಆಗಲಿ,
ಗುರು ಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗವ ಧರಿಸಿ,
ಪುನರ್ಜಾತರಾದ ಬಳಿಕ, ಭಕ್ತರಾಗಲಿ ಜಂಗಮವಾಗಲಿ,
ಗುರುವಿನ ವೇಷವಿದ್ದವರ ಗುರುವೆಂದು ನಂಬಿ,
ದಾಸೋಹವ ಮಾಡುವುದೆ ಸದಾಚಾರ.
ಗುರುವನತಿಗಳೆದು, ಗುರುವಾಜ್ಞೆಯ ಮೀರಿ,
ಗುರು ಕೊಟ್ಟ ಪಂಚಮುದ್ರೆಗಳ ಮೇಲೆ
ಅನ್ಯಸಮಯ ಮುದ್ರೆಯ ಲಾಂಛನಾಂಕಿತರಾಗಿ,
ಗುರುದ್ರೋಹಿಗಳಾಗಿ ಬಂದವರ
ಜಂಗಮವೆಂದು ಕಂಡು, ನಮಸ್ಕರಿಸಿ ಆರಾಧಿಸಿ,
ಪ್ರಸಾದವ ಕೊಂಡವಂಗೆ ನಾಯಕನರಕ ತಪ್ಪದೆಂದ
ಕಲಿದೇವಯ್ಯ. ||೫೬||

೪೯೪

ಆತ್ಮ ತನುವನು ಮುಟ್ಟಿದ ಮೂಲವ ನಿಷ್ಕಾಪರದಲ್ಲಿ ಮುಟ್ಟಿರೊ.
ಆ ಪರದಲ್ಲಿ ವಿದ್ಯೆಯೊಳಗಣ ಸಹಜವರಿದಂಗಲ್ಲದೆ
ಲಿಂಗವೆನಬಾರದು, ಜಂಗಮವೆನಬಾರದು.
[ಧಾರಾ]ಮಂಟಪದ ಸಹಜವನರಿಯದೆ ನರಕಕ್ಕೆ ಗುರಿಯಾದರು ಕಾಣಾ
ಲಿಂಗಾರ್ಚಕರಾದವರು.
ಜನನ ಮರಣ ತಪ್ಪದೆಂದಿವರನತಿಗಳೆದು,
ಲಿಂಗಾರ್ಚನೆಯ ಮಾಡಿ ತೋರಿ, ತನ್ನವರ
ನಿತ್ಯದೊಳಗಿರಿಸಿದಾತ ಬಸವಣ್ಣ ಕಾಣಾ, ಕಲಿದೇವಯ್ಯ. ||೫೭||

೪೯೫

ಆದಿ ಅನಾದಿಯಿಂದತ್ತಣ ನಿತ್ಯಸಿಂಹಾಸನವೆಂಬ
ಮಹಾಮೇರುಮಂದಿರದ ಮೇಲೆ ಇರ್ದಂತೆಯೆ
ಆಧಾರಮೂರ್ತಿಗಳನು ನಿರ್ಮಿಸಿದಿರಿ.
ನಮಗಾಶ್ರಯವಾವುದು ದೇವಾ ಎಂದು ಗಣಂಗಳು ಬಿನ್ನಹವಂ ಮಾಡಲು,

ವಿಶ್ವತೋ ಪ್ರತಿಪಾಲಕ ವಿಶ್ವಾಧಾರಕ ಶಿವನು,
ಸರ್ವಜೀವಜಾಲಂಗಳಿಗೆ ಶೈತ್ಯಕಾಲವಾಗಬೇಕೆಂದು
ಅನಂತಮೂರ್ತಿಗಳಿಗೆ ಕಾರುಣ್ಯವ ಮಾಡಿದ ಕಂದನು.
ತಮ್ಮ ತಮ್ಮ ಆಧಾರದಲ್ಲಿ ಒಮ್ಮಿಂದವು ಪಾದಘಾತದೊಳು
ಅನಂತಸುಖಿವುತ್ಪತ್ಯದೊಳು ಶಿವ, ಶಿವಚೈತನ್ಯವನಾಗವೆ
ನಿರ್ಮಿಸುವೆನೆಂದು ಪೃಥ್ವಿಗೆ ಕಾರುಣ್ಯವ ಮಾಡಿದ ಕಂದನು.
ತೇಜಜ್ಞಾನದೊಳು ಶುದ್ಧತಿಗೆ ನಿಮ್ಮ ಮುಖದಲ್ಲಿಯೆಯೆಂದು
ತೇಜಕ್ಕೆ ಕಾರುಣ್ಯವ ಮಾಡಿದ ಕಂದನು.
ವಾಯು ಮನ ಪ್ರಾಣ ಗಂಧ ಪರಿಮಳದಲ್ಲಿ ಶೈತ್ಯದೊಳು
ಸುಖಿವಿರು ಕಂಡಾ ಎಂದು ವಾಯುವಿಗೆ ಕಾರುಣ್ಯವ ಮಾಡಿದ ಕಂದನು.
ಗಗನದ ಸರ್ವಕ್ಕಾಶ್ರಯವಾಗಿರು ಕಂಡಾ ಎಂದು
ಆಕಾಶಕ್ಕೆ ಕಾರುಣ್ಯವ ಮಾಡಿದ ಕಂದನು.
ಚಂದ್ರಸೂರ್ಯರು ಆತ್ಮರು ನಿಮ್ಮ ನಿಮ್ಮ ಸ್ಥಲಗಳಲ್ಲಿಯೆ
ಒಪ್ಪೊಬ್ಬರು ಅಗಲದಿರಿಯೆಂದು, ಅಷ್ಟತನುಗಳಿಗೆ
ಕಾರುಣ್ಯವ ಮಾಡಿದ ಕಂದನು.
ಮಹಾಪ್ರತಿಪಾಲಕನು ಶರಣರ ಹೃದಯದ ಸಿಂಹಾಸನವನು ಎನ್ನ ಪ್ರಾಣವ ಪಾವನವ
ಮಾಡಿದ ಕಂದನು.
ವೇದ್ಯನೆ ಕಲಿದೇವ, ನಿಮ್ಮ ಶರಣ ಬಸವಣ್ಣಂಗೆ
ಜಯತು ಜಯತು. || ೫೮ ||

೪೯೬

ಆದಿಯನಾದಿಯಿಂದತ್ತತ್ತ, ನಾದಬಿಂದುಕಳಾತೀತವಾದ
ಘನಪರಂಜ್ಯೋತಿರ್ಮಯಲಿಂಗವು ತನ್ನ ಕರದೊಳಗಿರಲು,
ಮೇದಿನಿಯ ಪ್ರತಿಷ್ಠೆಗೆರಗುವ ಮಾದಿಗರನೇನೆಂಬೆನಯ್ಯಾ
ಕಲಿದೇವಯ್ಯ. || ೫೯ ||

೪೯೭

ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ಪರಾತ್ಪರವಸ್ತುವೆ
ತನ್ನ ಚಿದ್ವಿಲಾಸದಿಂದ ತಾನೆ ಜಗತ್ಪಾವನಮೂರ್ತಿಯಾಗಿ,
ತನ್ನಂತರಂಗ ಬಹಿರಂಗದಲ್ಲಿ ಭಕ್ತಿ ಜ್ಞಾನ ವೈರಾಗ್ಯ ಪಟ್ಟಿಲಮಾರ್ಗವಿಡಿದು
ಭಕ್ತಿಪ್ರಿಯರಾಗಿ, ತಮ್ಮಂತರಂಗದೊಳಗೆ
ಷಡ್ವಿಧಸಕೀಲ ಛತ್ತೀಸಸಕೀಲ ನಾಲ್ವತ್ತೆಂಟುಸಕೀಲ ಐವತ್ತಾರುಸಕೀಲ

ಅರುವತ್ತಾರುಸಕೀಲ ತೊಂಬತ್ತಾರುಸಕೀಲ ನೂರೆಂಟುಸಕೀಲ
ಇನ್ನೂರ ಹದಿನಾರುಸಕೀಲ ಮೊದಲಾದ ಸಮಸ್ತಸಕೀಲಂಗಳನೊಳಕೊಂಡು,
ಬೆಳಗುವ ಗುರು ಲಿಂಗ ಜಂಗಮವ ಕಂಗಳು ತುಂಬಿ,
ಮನ ತುಂಬಿ ಭಾವ ತುಂಬಿ ಕರಣಂಗಳು ತುಂಬಿ,
ತನು ತುಂಬಿ ಪ್ರಾಣ ತುಂಬಿ ಸರ್ವಾಂಗ ತುಂಬಿ,
ಅರ್ಚಿಸಲರಿಯದೆ, ಹಲವನರಸಿ, ತೊಳಲುವ ಮೂಳರ ಕಂಡು
ಬೆರಗಾದೆ ನೋಡಾ, ಕಲಿದೇವರದೇವ. ||೬೦||

೪೯೮

ಆದಿ ಅನಾದಿಯಿಲ್ಲದಂದು, ಸಾಧ್ಯ ಅಸಾಧ್ಯವಿಲ್ಲದಂದು,
ಸ್ಥೂಲ ಸೂಕ್ಷ್ಮವೆಂಬ ಮೂರ್ತಿಗಳಿಲ್ಲದಂದು,
ಸಾಕಾರ ನಿರಾಕಾರವೆಂಬ ವಾಕು ಹುಟ್ಟದಂದು,
ಶಂಕರ ಶಶಿಧರ ಈಶ್ವರನೆಂಬ ಗಣಾಧೀಶ್ವರರಿಲ್ಲದಂದು,
ಉಮೆಯ ಕಲ್ಯಾಣವಿಲ್ಲದಂದು,
ಶಿವರತಿ ಮಹಾರತಿ ಬಸವಣ್ಣನಿಂದಾಯಿತ್ತು.
ಸರ್ವವಿಸ್ತೀರ್ಣವ ನೀಕರಿಸಿ ಶಿವಲಿಂಗಾರ್ಚನೆಯ ತೋರಿದ.
ನಿತ್ಯಲಿಂಗಾರ್ಚನೆಯಲ್ಲಿ ಪ್ರಸಾದಧ್ಯಾನ,
ಜಂಗಮಾರ್ಚನೆಯಲ್ಲಿ ಪ್ರಸಾದಭೋಗ
ಎಂಬುದನು ಸಂಗನಬಸವಣ್ಣನಲ್ಲದೆ ಮತ್ತಾರೂ ಅರಿಯರು.
ಭಕ್ತಿಯ ಕುಳಸ್ಥಳವನೂ ಭಕ್ತಿಯ ಸಾರಾಯವನೂ
ಮುನ್ನವೆ ಅತಿರಥ ಸಮರಥರೆಲ್ಲರೂ ಅರಿಯರು.
ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯಾ, ಕಲಿದೇವರದೇವ. ||೬೧||

೪೯೯

ಆದಿಯಲ್ಲಿ ನಿಮ್ಮ, ಜಂಗಮವೆಂಬುದನಾರು
ಬಲ್ಲರಯ್ಯಾ, ಬಸವಣ್ಣನಲ್ಲದೆ?
ಎಲ್ಲಿ ಸ್ಥಾವರವಲ್ಲಿ ನೋಡಲಾಗದು.
ಮನದಲ್ಲಿ ನೆನೆಯಲಾಗದು.
ಲಿಂಗಕಾದಡೆಯೂ ಜಂಗಮವೆ ಬೇಕು.
ಜಂಗಮವಿಲ್ಲದೆ ಲಿಂಗವುಂಟೆ?
ಗುರುವಿಂಗಾದಡೆಯೂ ಜಂಗಮವೆ ಬೇಕು.
ಜಂಗಮವಿಲ್ಲದೆ ಗುರುವುಂಟೆ?

ಎಲ್ಲಿ ಜಂಗಮವಿರ್ದಡಲ್ಲಿಯೇ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ಅನುಭಾವ ಸನ್ನಿಹಿತವಾಗಿಹುದು.
ಇಂತೀ ಜಂಗಮವೇ ಲಿಂಗವೆಂಬುದ ಬಸವಣ್ಣ ಬಲ್ಲ.
ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿ
ಶರಣೆಂದು ಶುದ್ಧನಾದೆ ಕಾಣಾ, ಕಲಿದೇವರದೇವಯ್ಯ. ||೬೨||

೫೦೦

ಆದಿಯುಗದಲ್ಲೊಬ್ಬಳು ಮಾಯಾಂಗನೆ,
ಹಲವು ಬಣ್ಣದ ವಸ್ತ್ರವನುಟ್ಟುಕೊಂಡು,
ಹೆಡಿಗೆ ತುಂಬ ದೇವರ ಹೊತ್ತುಕೊಂಡು,
ಓ ದೇವರ ಕೊಳ್ಳಿರಯ್ಯಾ, ಓ ದೇವರ ಕೊಳ್ಳಿರಯ್ಯಾ ಎಂದಳು.
ಎಂದಡೆ ಆ ದೇವರನಾರೂ ಕೊಂಬವರಿಲ್ಲ.
ನಾನು ಒಂದರಿವೆಯ ಕೊಟ್ಟು, ಆ ದೇವರ ಕೊಂಡು,
ಎನ್ನ ಹೆತ್ತ ತಂದೆ ಬಸವಣ್ಣನ ಪ್ರಸಾದದಿಂದ
ಬದುಕಿದೆನು ಕಾಣಾ, ಕಲಿದೇವರದೇವಾ. ||೬೩||

೫೦೧

ಆದಿಲಿಂಗ ಅಸಂಭವ.
ವೇದನಾಲ್ಕು ಪೊಗಳಲ್ಕೆ ಹೊಗಳಿದವು, ಅತ್ಯಂತ ಭಕ್ತರಲ್ಲಿ.
ವೇದ ಪಶುವೇದ ಪಾತಕರು
ಭೇದ ಬೋಧೆಯ ಮಾಡಿಕೊಂಡು
ಯಮಬಾಧೆಗೆ ಹೋದವರ ದೈವವೆಂದರಸಬೇಡ.
ಈ ವೇದ ಬ್ರಹ್ಮ ನುಡಿಯ ಕೇಳಲಾಗದೆಂದ,
ಕಲಿದೇವರದೇವಯ್ಯ. ||೬೪||

೫೦೨

ಆಧಾರಕಾಲದಲ್ಲಿ ಅನಾದಿಯನಾಡುತಿಪ್ಪರು ದೇವಗಣಂಗಳು.
ಸಿಂಹಾಸನಕಾಲದಲ್ಲಿ ಅತೀತನಾಡುತಿಪ್ಪರು ಮಹಾಪುರುಷರು.
ಮಂದರಗಿರಿಯ ಕಾಲದಲ್ಲಿ ಶಂಕೆಯನಾಡುತಿಪ್ಪರು ಕಾಲಪುರುಷರು.
ಆವ ಕಾಲದಲ್ಲಿಯೂ ನಂದಿಕೇಶ್ವರನ ಶಬ್ದವನಾಡುತಿಪ್ಪರು ನಂದಿಗಣಂಗಳು.
ಕಲಿಕಾಲದಲ್ಲಿಯೂ ಉತ್ಪತ್ಯದ ಮಾತನಾಡುತಿರ್ಪರು ಪುರುಷಗಣಂಗಳು.
ಪ್ರಜ್ವಲಿತಕಾಲದಲ್ಲಿ ಭವಂ ನಾಸ್ತಿಯೆನುತಿರ್ಪರು ಗುರುಕಾರುಣ್ಯವುಳ್ಳವರು.

ದೇವಾಧಿದೇವನು ಕಾಲಾಧಿದೇವನು ಎಲ್ಲಾ ಕಾಲ ಸೂತ್ರವನಾಡಿಸುತ್ತಿಹನು.
ಸದೃಶ ಕಾಲಾಧಿದೇವನು, ಎಲ್ಲಾ ವಿಸ್ತಾರಕನು, ಗುರು ವಿಸ್ತಾರಕನು,
ಜಂಗಮಾಕಾರನು, ಪ್ರಸಾದಕಾಯನು ಜ್ಞಾನಸಿಂಹಾಸನದ ಮೇಲೆ
ಕಲಿದೇವಾ, ನಿಮ್ಮ ಶರಣ ಬಸವಣ್ಣನ ನಿಲವು. ||೬೫||

**೫೦೩**

ಆ ಮಹಾಲಿಂಗವಂತನೊಬ್ಬನುಂಡನೆನಬೇಡ.
ಆತನ ದಂತಂಗಳೆಲ್ಲ ಪಂತಿಕಾರರು.
ಆತನ ನಡುವಿಪ್ಪ ಕಾಂತಿರೂಪ ನೀನು ಕಾಣಾ, ಕಲಿದೇವಯ್ಯ. ||೬೬||

**೫೦೪**

ಆರುಜನ್ಮದವರೆಂಬರು ಬಸವಣ್ಣನ.
ಈ ಗಾರುಮಾತ ಕೇಳಲಾಗದು.
ಆರುಸ್ಥಲ ಆರುಪಥವ ತೋರಲು,
ಪರಶಿವ ತಾ ಮೂರುಮೂರ್ತಿಯಾದ.
ಆರಾರುತತ್ವಂಗಳ ಮೇಲಣಾತ
ಆ ಬಸವಣ್ಣನೆ ಕಾಣಾ, ಕಲಿದೇವರದೇವ. ||೬೭||

**೫೦೫**

ಆಶಾಪಾಶವ ಬಿಟ್ಟಡೇನಯ್ಯಾ
ರೋಷ ಪಾಶವ ಬಿಡದನ್ನಕ್ಕರ ?
ರೋಷ ಪಾಶವ ಬಿಟ್ಟಡೇನಯ್ಯಾ
ಮಾಯಾಪಾಶ ಬಿಡದನ್ನಕ್ಕರ ?
ಇಂತೀ ತ್ರಿವಿಧಪಾಶವ ಹರಿದು
ನಿಜನಿಂದ ಲಿಂಗೈಕ್ಯರ ತೋರಾ ಕಲಿದೇವರದೇವಾ. ||೬೮||

**೫೦೬**

ಆಳುದ್ದವ ತೋಡಿ, ನೀರ ಕೊಂಡು ಬಂದು,
ಭವಿಗಳಾರೂ ಕಾಣದಂತೆ ಸ್ವಯಂ ಪಾಕವ ಮಾಡಿ,
ಇವು ತಮ್ಮ ನೇಮವ್ರತವೆಂಬರು.
ತೆಪ್ಪದಲ್ಲಿ ಸಿಕ್ಕಿದ ಜಂಬುಕನಂತೆ, ಇದೆತ್ತಣ ನೇಮ, ಕಲಿದೇವರದೇವಾ. ||೬೯||

**೫೦೭**

ಇಂದ್ರಲೋಕದವರೆಲ್ಲರೂ
ಸಹೀಂದ್ರನಾಥ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.

ಬ್ರಹ್ಮಲೋಕದವರೆಲ್ಲರೂ
ಪರಬ್ರಹ್ಮ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ವಿಷ್ಣುಲೋಕದವರೆಲ್ಲರೂ
ಮಹಾದಂಡನಾಥ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ರುದ್ರಲೋಕದವರೆಲ್ಲರೂ
ಮಹಾರುದ್ರ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಶಿವಲೋಕದವರೆಲ್ಲರೂ
ಪರಶಿವ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಪ್ರಮಥಲೋಕದವರೆಲ್ಲರೂ
ಪ್ರಮಥನಾಥ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಪರಲೋಕದವರೆಲ್ಲರೂ
ಪರಾಪರ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಸತ್ಯಲೋಕದವರೆಲ್ಲರೂ
ನಿತ್ಯ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಮರ್ತ್ಯಲೋಕದವರೆಲ್ಲರೂ
ಕರ್ತ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ನಾಗಲೋಕದವರೆಲ್ಲರೂ
ನಾಗನಾಥ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಪಾತಾಳಲೋಕದವರೆಲ್ಲರೂ
ಅಪ್ರಮಾಣ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ರಸಾತಳಲೋಕದವರೆಲ್ಲರೂ
ಮಹಾಮಹಿಮ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಶೂನ್ಯಲೋಕದವರೆಲ್ಲರೂ
ಶೂನ್ಯಲಿಂಗ ಬಸವಣ್ಣಾ ಎಂದು ಹೊಗಳುತಿರ್ಪರಯ್ಯಾ.
ಸರ್ವಲೋಕದವರೆಲ್ಲರೂ
ಸರ್ವಾಧಾರ ಬಸವಣ್ಣ ಎಂದು ಹೊಗಳುತಿರ್ಪರಯ್ಯಾ.
ಇಂತು, ನಿತ್ಯರು ನಿಜೈಕ್ಯರು ಬಸವಣ್ಣನ ನೆನೆಯದವರಾರು ?
ಸತ್ಯರು ಸದ್ಯೋನ್ಮುಕ್ತರು ಬಸವಣ್ಣನ ಹೊಗಳದವರಾರು ?
ಸರ್ವಮಹಿಮನೆ, ಸರ್ವಘನಮನವೇದ್ಯನೆ, ಸರ್ವಪರಿಪೂರ್ಣನೆ
ಕಲಿದೇವಾ,ನಿಮ್ಮ ಶರಣ ಬಸವಣ್ಣನಿಂತಹ ಘನಮಹಿಮ ನೋಡಯ್ಯಾ. || ೭೦ ||

೫೦೮

ಇಂದ್ರಲೋಕದವರೆಲ್ಲರೂ ಸೂತಕಲಾಸಂಹಾರಿ ಬಸವ ಎಂದೆಂಬರು.
ಚಂದ್ರಲೋಕದವರೆಲ್ಲರೂ ಷೋಡಶಕಲಾ ಪರಿಪೂರ್ಣ ಬಸವಾ ಎಂದೆಂಬರು.
ಯುಗಕೋಟಿಬ್ರಹ್ಮರೆಲ್ಲರೂ ಪರಶಿವ ಬಸವಾ ಎಂದೆಂಬರು.
ಹರಿವಿರಿಂಚಿಗಳೆಲ್ಲರೂ ಗುರುಲಿಂಗ ಬಸವಾ ಎಂದೆಂಬರು.
ಅಷ್ಟದಿಕ್ಪಾಲಕರೆಲ್ಲರೂ ಪರಶಿವ ಬಸವಾ ಎಂದೆಂಬರು.
ಸುರಪಡೆಯಲ್ಲಾ ಅಮೃತಸಾಗರ ಬಸವಾ ಎಂದೆಂಬರು.
ನವನಾಥಸಿದ್ಧರೆಲ್ಲರೂ ಪರಮಘುಟಿಕೆ ಬಸವಾ ಎಂದೆಂಬರು.
ಲಂಬೋದರ ಕುಂಭೋದರ ದಾರುಕ ರೇಣುಕ ಗೌರೀಸುತ
ತಾಂಡವರೆಲ್ಲರೂ ಸಕಲಜೀವಚೈತನ್ಯ ಮಾತ್ರ ಬಸವಾ ಎಂದೆಂಬರು.
ಓತವರೆಲ್ಲರೂ ಮಾತಾಪಿತ ಬಸವಾ ಎಂದೆಂಬರು.
ಒಲಿದವರೆಲ್ಲರೂ ಪ್ರಾಣ ಪರಿಣಾಮಿ ಬಸವಾ ಎಂದೆಂಬರು.
ಆನೇನೆಂಬೆನು, ಉಪಮಿಸಬಾರದ ಮಹಾಘನ ಮಹಿಮನ. || ೭೧ ||

೫೦೯

ಇದು ಗುರು, ಇದು ಲಿಂಗ, ಇದು ಜಂಗಮ, ಇದು ಪ್ರಸಾದ.
ಇಂತೀ ಚತುರ್ವಿಧಸ್ಥಲವನೊಂದುಮಾಡಿ ತೋರಿ,
ಸಮತೆ ಸೈರಣೆಯೆಂಬ ಭಕ್ತಿಪ್ರಭೆಯೊಳಗಿರಿಸಿ,
ಗತಿಯತ್ತ ಹೊದ್ದಲೀಯದೆ, ಲಿಂಗದ ವ್ಯಾವರ್ಣನೆಯ ತೋರಿ,
ಜಂಗಮವ ನಿರಾಕಾರಲಿಂಗವೆಂದು ತೋರಿ,
ಆ ಜಂಗಮದ ಪ್ರಸಾದವ ತೋರಿದನು.
ನಿರವಯದ ಹಾದಿಯ, ಬಸವಣ್ಣನಿಂದ ಕಂಡೆ ಕಾಣಾ
ಕಲಿದೇವಯ್ಯ. || ೭೨ ||

೫೧೦

ಇರಿಯಲಾಗದು ಪ್ರಾಣಿಯ, ಜರೆಯಲಾಗದು ಹೆರರ.
ನೆರನೆತ್ತಿ ನುಡಿಯಲಾಗದಾರುವನು.
ಹೆರರ ವಧುವ ಕಂಡು ಮನ ಮರುಗದಿರ್ದಡೆ,
ಶಿವಲೋಕ [ಕರ]ತಳಾಮಳಕವೆಂದ ಕಲಿದೇವರದೇವ. || ೭೩ ||

೫೧೧

ಇರುಳು ಹಗಲೆಂದರಿಯದ ಅಂಧಕನ ಕೈಯಲ್ಲಿ
ಕೈದೀವಿಗೆ ಇರ್ದಡೇನು, ಪಥವ ನೋಡಿ ನಡೆಯಬಲ್ಲನೆ ?

ಗುರುಚರಪರವನರಿಯದ ದುರಾಚಾರಿಯ ಕೈಯಲ್ಲಿ
ಲಿಂಗವಿರ್ದಡೇನು, ಅವ ಸತ್ಯಸದಾಚಾರವನುಳ್ಳ
ಭಕ್ತಿವಂತರಿಗೆ ಸರಿಯಹನೆ ?
ಅವನು ಶಿವಭಕ್ತನಾಗಿ ಕೆಟ್ಟುಹೋದ ತೆರನೆಂತೆಂದಡೆ:
ಭಕ್ತರ ಗೃಹದಲ್ಲಿ ತುಡುಗ ತಿಂದ ನಾಯಿ,
ಮರಳಿ ಮತ್ತೆ ಹೊಲಸಿಂಗೆರಗಿದ ತೆರನಾಯಿತೆಂದ
ಕಲಿದೇವಯ್ಯ. || ೭೪ ||

೫೧೨

ಇಷ್ಟಲಿಂಗ ಪೃಥ್ವಿಯಲ್ಲಿ ಸ್ಥಾಪ್ಯವಾದಡೇನು ?
ಅಪ್ಪುವಿನಲ್ಲಿ ಅಳಿದಡೇನು ?
ಇಷ್ಟಲಿಂಗವು ಶಕ್ತಿಸಂಪುಟದಿಂದ ಉತ್ಕೃಷ್ಟವಾದಡೇನು ?
ಅಹುದಲ್ಲವೆಂಬ ಅಜ್ಞಾನಮತಿಗಳೆದು
ಮುನ್ನಿನಂತೆ ಪೂಜಿಸುವ ಭಕ್ತರ ತೋರಾ, ಕಲಿದೇವರದೇವಾ. || ೭೫ ||

೫೧೩

ಇಷ್ಟಲಿಂಗವ ಬಿಟ್ಟು ಸೃಷ್ಟಿಯ ಪ್ರತಿಷ್ಠೆಗೆ ಶರಣೆಂದಡೆ,
ಆ ಇಷ್ಟಲಿಂಗದ ಚೇತನ ತೊಲಗಿ,
ಭ್ರಷ್ಟನಾಗಿ ಕೆಟ್ಟು, ನರಕಕ್ಕಿಳಿದನೆಂದ, ಕಲಿದೇವಯ್ಯ. || ೭೬ ||

೫೧೪

ಈರೇಳುಭುವನಕ್ಕೆ ಕರ್ತನೊಬ್ಬನೆಂಬ ಆದಿಯನರಿಯದೆ,
ಲಿಂಗವಂತಂಗೆ ಸೂತಕವೆಂಬ ನುಡಿಯ ಕೇಳಲಾಗದು.
ಸತ್ತ ಕೋಣ ಕುರಿ ಕೋಳಿ ತಿಂಬ
ಭೂತಪ್ರೇತ ದೈವದೆಂಜಲು ಭುಂಜಿಸುವವಗೆ,
ಏಳೇಳುಜನ್ಮ ನರಕ ತಪ್ಪದೆಂದ ಕಲಿದೇವರದೇವಯ್ಯ. || ೭೭ ||

೫೧೫

ಈರೇಳುಸ್ಥಲ, ಈರೈದುಸ್ಥಲ, ಅಷ್ಟಸ್ಥಲ,
ನವಸ್ಥಲ, ತ್ರಿವಿಧಸ್ಥಲ, ಚತುರ್ಗ್ರಾಮಸ್ಥಲ.
ಪಂಚವರ್ಣ, ದಶವರ್ಣ, ಸಪ್ತವರ್ಣ, ಷಡುವರ್ಣ,
ಏಕವರ್ಣ, ದ್ವಿವರ್ಣಸ್ಥಲಂಗಳಲ್ಲಿ ಮುಖವಿಲ್ಲ ಮುಖಿವಿಲ್ಲ.
ಪವಿತ್ರಾಂಕಿತಕ್ಕೆ ನೋಡಿ ಮಾಡುವ

ಆರಂಭವನೇನೂ ಐದುದಿಲ್ಲ. ಬಸವನೆ ವಿಸ್ತಾರವೆನಗೆ.
ಬಸವನೆ ನುಡಿ ಎನಗೆ, ಬಸವನೆ ನಡೆ ಎನಗೆ.
ಬಸವನೆ ಗತಿ ಎನಗೆ, ಬಸವನೆ ಮತಿ ಎನಗೆ.
ಬಸವನೆ ಇಹವೆನಗೆ, ಬಸವನೆ ಪರವೆನಗೆ.
ಬಸವನಲ್ಲದೆ ಕಾಣೆ ಕಾಣಾ, ಕಲಿದೇವರದೇವ. || ೨೮ ||

**೫೧೬**

ಉಂಡಡೆ ಭೂತವೆಂಬರು, ಉಣ್ಣದಿರ್ದಡೆ ಚಕೋರಿಯೆಂಬರು.
ಊರೊಳಗಿರ್ದಡೆ ಸಂಸಾರಿಕನೆಂಬರು, ಅಡವಿಯೊಳಗಿರ್ದಡೆ ಮರ್ಕಟನೆಂಬರು.
ಮಾತನಾಡಿದಡೆ ಪಾಪಕರ್ಮಿಯೆಂಬರು,
ಮಾತನಾಡದಿರ್ದಡೆ ಮುಸುಕರ್ಮಿಯೆಂಬರು.
ಮಲಗದಿರ್ದಡೆ ಚೋರನೆಂಬರು, ಮಲಗಿರ್ದಡೆ ಜಡದೇಹಿಯೆಂಬರು.
ಇಂತೀ ವಸುಧೆಯೊಳಗೆ ಎಂಟುವಿಧ ಕಳೆಯಲು ವಶವಲ್ಲ ಕಾಣಾ
ಕಲಿದೇವರದೇವ. || ೨೯ ||

**೫೧೭**

ಉಂಬ ಕೂಳಿಗೆ ಉಪದೇಶವ ಮಾಡುವ ಚುಂಬಕರು ಹೆಚ್ಚಿ,
ಭಕ್ತಿಯಪಥವ ಕೆಡಿಸಿದರು.
ಡೊಂಬ ಡೋಹರ ಹೊಲೆಯರು ಮಾದಿಗರು.
ಉಪದೇಶವಿಲ್ಲದವರು
ಪಿಂಬೇರ ಅನಾಚಾರಿಯ ಆರಾಧಿಸಿ, ಶಂಭುವಿನ ಸರಿಯೆಂದು
ಅವರೊಳಗೆ ಹಲವರು ಕೊಂಬನೂದುವ, ಸೊಣಕನ ಕೊರಳಲ್ಲಿ
ಬಾರ ಕವಡೆಯ ಕಟ್ಟಿಕೊಂಡು ನಾಯಾಗಿ ಬೊಗಳುವರು.
ಕಂಬದ ಬೊಂಬೆಯ ಮಾಡಿ ಮೈಲಾರ ಭೈರವ ಆಯಿರ (?)
ಧೂಳಕೇತನೆಂಬ ಕಾಳುದೈವವ
ಊರೂರದಪ್ಪದೆ ತಿರಿದುತಿಂಬ ಡಂಭಕರ ಕೈಯಲ್ಲಿ
ಉಪದೇಶವ ಕೊಂಡವರು,
ಗುರುಲಿಂಗಜಂಗಮದ ಹೊಲಬನರಿಯದೆ ಭಂಗಿತರಾದರು.
ಅಂಗದ ಮೇಲಣ ಸೂತಕ ಹಿಂಗದು.
ಅನ್ಯದೈವದ ಜಾತ್ರೆಗೆ ಹೋಗಿ, ನಾಡನರಕದಲ್ಲಿ
ಬೆರಣೆಯ ಮಾಡುವ ನಾನಾ ಜಾತಿಗಳು
ಹರಕೆಯ ಹಿಂಗಿಸದೆ, ಗುರುಕಾರುಣ್ಯವ ಕೊಟ್ಟವಂಗೆ
ಕುಂಭಿನಿಪಾತಕ ತಪ್ಪದೆಂದ ಕಲಿದೇವರದೇವಯ್ಯ. || ೩೦ ||

೫೧೮

ಉಟ್ಟ ಸೀರೆಯು ಹರಿದು ಹೋದಾತ ನೀನಲಾ ಬಸವಣ್ಣ.
ಮೆಟ್ಟಿದ ಕೆರಹ ಕಳೆದುಹೋದಾತ ನೀನಲಾ ಬಸವಣ್ಣ.
ಕಟ್ಟಿದ ಮುಡಿಯು ಬಿಟ್ಟುಹೋದಾತ ನೀನಲಾ ಬಸವಣ್ಣ.
ಸೀಮೆಸಂಬಂಧವ ತಪ್ಪಿಸಿಹೋದಾತ ನೀನಲಾ ಬಸವಣ್ಣ.
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣ.
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು
ಹೋದೆಯಲ್ಲಾ ಬಸವಣ್ಣ.
ಬೆಳಗನುಟ್ಟು ಬಯಲಾಗಿ ಹೋದೆಯಲ್ಲಾ ಬಸವಣ್ಣ.
ಆ ಬಸವಣ್ಣಂಗೆ ಶರಣೆಂಬ ಪಥವನೆ ತೋರು ಕಂಡಾ
ಕಲಿದೇವರದೇವ. || ೮೧ ||

೫೧೯

ಉಡಿಯ ಲಿಂಗವ ಬಿಟ್ಟು,
ಗುಡಿಯ ಲಿಂಗಕ್ಕೆ ಶರಣೆಂಬ
ಮತಿಭ್ರಷ್ಟರನೇನೆಂಬೆನಯ್ಯಾ
ಕಲಿದೇವರದೇವ. || ೮೨ ||

೫೨೦

ಉಣ್ಣದೆ ತೃಪ್ತನಾದ ಗುರು.
ಆ ಗುರುವು ಪೆಸರ್ಗೊಳ್ಳದೆ ಮುನ್ನವಾದ ಶಿಷ್ಯ.
ಇದು ಅನ್ಯರಿಗೆ ಕಾಣಬಾರದು.
ತನ್ನೊಳಗಿರ್ದ ಲಿಂಗೈಕ್ಯದ ಭಕ್ತಿಯನು,
ಪಸಾರಕಿಕ್ಕುವ ಅಜ್ಞಾನಿಗಳೆತ್ತ ಬಲ್ಲರು
ಕಲಿದೇವರದೇವಾ. || ೮೩ ||

೫೨೧

ಉದಾಸೀನಂ ಮಾಡಿದರೆಂದು ಬೆಂಬೀಳುವರೆ ಅಯ್ಯಾ ಬಸವಣ್ಣಾ.
ಎನ್ನ ಕಾಯದೊಳಗೆ ನಿನ್ನ ಕಾಯವಿಪ್ಪುದು ಬಸವಣ್ಣಾ.
ಎನ್ನ ಜೀವದೊಳಗೆ ನಿನ್ನ ಜೀವವಿಪ್ಪುದು ಬಸವಣ್ಣಾ.
ಎನ್ನ ಭಾವದೊಳಗೆ ನಿನ್ನ ಭಾವವಿಪ್ಪುದು ಬಸವಣ್ಣಾ.
ಎನ್ನ ಕರಣ, ನಿನ್ನ ಕರಣ ಬಸವಣ್ಣಾ.
ಆನು ನೀನಾದ ಕಾರಣ ರೂಪಿಂಗೆ ಕೇಡುಂಟು.

ನಿರೂಪು ಕರ್ಪುರ ಅಗ್ನಿ ಬಸವಣ್ಣಾ.
ಚಿಂತಿಸುವರೆ ದೇವರದೇವ ಕಲಿದೇವಾ. || ೮೪ ||

೫೨೨

ಊರ ಕಲ್ಲಿಗೆ ಉರದ ಲಿಂಗವಡಿಯಾಗಿ ಬೀಳುವ
ಕ್ರೂರಕರ್ಮಿಗಳೆನೇನೆಂಬೆನಯ್ಯಾ ಕಲಿದೇವಯ್ಯ. || ೮೫ ||

೫೨೩

ಎಂಜಲ ತಿಂಬ ಜಡದೊಳಗೆ ಹದಿನೆಂಟುಜಾತಿಯ
ಎಂಜಲು ಭುಂಜಿಸಿ, ಉತ್ತಮರೆನಿಸಿಕೊಂಬ ಭವಜೀವಿಗಳು ಕೇಳಿರೊ.
ಕುಂಜರನಾಗಿ ನಡೆದು ಸುಜಾತರೆನಿಸಿಕೊಂಬಿರಿ.
ಅಜವಧೆ ಗೋವಧೆ ಮಾಡುವ ಅನಾಚಾರಿಗಳು ನೀವು ಕೇಳಿರೊ.
ಬ್ರಾಹ್ಮಣ ವಾಕ್ಯವ ಕಲಿತು ಬ್ರಾಹ್ಮಣರೆನಿಸಿಕೊಂಬಿರಿ.
ವರ್ಮವಿಡಿದು ನೋಡಹೋದಡೆ ನಿಮ್ಮಿಂದ ಕರ್ಮಿಗಳಲ್ಲ.
ನಿಮ್ಮ ಧರ್ಮದ ಬಟ್ಟೆಯ ನೀವರಿಯದೆ ಹೋದಿರಿ.
ಚಿತ್ತವಲ್ಲದೆ ಶಿವಭಕ್ತರ ಬುದ್ಧಿಯವಿಡಿದು
ನಡೆಯಲೊಲ್ಲದೆ ಕೆಟ್ಟುಹೋದಿರಿ.
ಸುಧೆಹೀನ ಶುದ್ಧವೆಂದು ಕೊಂಬಿರಿ.
ಸುರೆಯ ಸೇವಿಸುವ ಬೋವರೆಂಜಲು ಎಣ್ಣೆ ಶುದ್ಧವೆಂದು ಕೊಂಬಿರಿ.
ಬುದ್ದಲೆಯ ಎಂಜಲು ಹಾಲು ಮೊಸರು ಮಜ್ಜಿಗೆ ಶುದ್ಧವೆಂಬಿರಿ.
ಶೂದ್ರರೆಂಜಲು ಹಾಲು ಮೊಸರು ತುಪ್ಪ
ಆವ ಜಾತಿಯ ಮನೆಯಲ್ಲಿರ್ದಡೆ ಶುದ್ಧವೆಂದು ಕೊಂಬಿರಿ.
ಹೊಲೆಯ ಭಕ್ಷಿಸಿ ಮಿಕ್ಕ ತೊಗಲಲ್ಲಿ
ಬುದ್ದಲೆಯೊಳಗೆ ತುಪ್ಪವ ತುಂಬಿಹುದೊ
ಆ ಹೊಲೆಯರ ಎಂಜಲು ತೊಗಲ ಸಗ್ಗಳೆಯಲ್ಲಿ ಉದಕವ ಕೊಂಬಿರಿ.
ಹದಿನೆಂಟುಜಾತಿಗೆ ಅಧಿಕವೆನಿಸಿಕೊಂಬಿರಿ.
ದ್ವಿಜರೆಲ್ಲರಿಗೆ ಲೆಕ್ಕವಿಲ್ಲದ ನರಕವೆಂದ, ಕಲಿದೇವರದೇವಯ್ಯ. || ೮೬ ||

೫೨೪

ಎತ್ತಿನ ಮರೆಯ ಒತ್ತುಗಾರರಂತೆ,
ಉಪ್ಪು ದೋಷವೆಂದು ಸಪ್ಪೆಯನುಂಡಡೆ,
ಮತ್ತೆ ರೊಚ್ಚೆಯ ಬಚ್ಚಲ ಮುಟ್ಟುತ್ತಿಪ್ಪ
ಸತ್ತನಾಯಿಗೇಕೆ ವ್ರತ ?
ಇಂತಪ್ಪವರು ನಿಷ್ಠೆಹೀನರು ಕಲಿದೇವರದೇವಾ. || ೮೭ ||

೫೨೫

ಎತ್ತು ಬಿತ್ತಿತ್ತು, ಒಕ್ಕಲಿಗನಿಂದ ಉತ್ತಮರಿಲ್ಲೆಂದು ನುಡಿವರು.
ಹೊತ್ತಾರೆದ್ದು ಶಿವಲಿಂಗಾರ್ಚನೆಯ ಮಾಡಲರಿಯರು.
ಎತ್ತಾಗಿ ಬಿತ್ತಿದ ನಮ್ಮ ಬಸವಣ್ಣ.
ಹೊತ್ತು ಹೊರೆದನು ಜಗವನು.
ಮತ್ತೆ ಮರಳಿ ಅನ್ಯದೈವವ ನೆನೆಯಲೇಕೊ ?
ಎತ್ತು ಬಿತ್ತಿತ್ತು, ಹಾಲುಹಯನ ಬಸವನಿಂದಾಯಿತ್ತು.
ಇಂತೀ ಬೆಳೆದ ಬಸವನ ಪ್ರಸಾದವನೊಲಿದು,
ಮೃತ್ಯು ಮಾರಿಯ ಎಂಜಲ ಮಾಡಿಕೊಂಡು,
ಭುಂಜಿಸುವ ತೊತ್ತುಜಾತಿಗಳ ನುಡಿಯ ಕೇಳಲಾಗದೆಂದ
ಕಲಿದೇವರದೇವ. || ೮೮ ||

೫೨೬

ಎತ್ತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ.
ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು.
ಒತ್ತಿ ಹಿಂಡಿದಡೆ ಭಕ್ತಿಯೆಂಬ ರಸವಯ್ಯಾ.
ಆಯತ ಬಸವಣ್ಣನಿಂದ, ಸ್ವಾಯತ ಬಸವಣ್ಣನಿಂದ.
ಸನ್ನಹಿತವು ಬಸವಣ್ಣನಿಂದ,
ಗುರು ಬಸವಣ್ಣನಿಂದ, ಲಿಂಗ ಬಸವಣ್ಣನಿಂದ.
ಜಂಗಮ ಬಸವಣ್ಣನಿಂದ.
ಪಾದೋದಕ ಬಸವಣ್ಣನಿಂದ, ಪ್ರಸಾದ ಬಸವಣ್ಣನಿಂದ.
ಅತ್ತ ಬಲ್ಲಡೆ ನೀವು ಕೇಳಿರೆ, ಇತ್ತ ಬಲ್ಲಡೆ ನೀವು ಕೇಳಿರೆ.
ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ.
ಶೂನ್ಯ ಕಾಣಾ, ಕಲಿದೇವರದೇವಾ. || ೮೯ ||

೫೨೭

ಎನಗೆ ಶಿವ ತಾನೀತ ಬಸವಣ್ಣನು
ಮರ್ತ್ಯಲೋಕವನು ಪಾವನವ ಮಾಡುವಲ್ಲಿ.
ಎನಗೆ ಗುರು ತಾನೀತ ಬಸವಣ್ಣನು
ಎನ್ನ ಭವರೋಗವ ಛೇದಿಸಿ ಭಕ್ತನೆನಿಸುವಲ್ಲಿ.
ಎನಗೆ ಲಿಂಗ ತಾನೀತ ಬಸವಣ್ಣನು
ಘನವಿಸ್ತಾರವಪ್ಪ ನಿಜಮಹಿಮೆಯುಳ್ಳಲ್ಲಿ.

ಎನಗೆ ಜಂಗಮು ತಾನೀತ ಬಸವಣ್ಣನು
ಅನಾದಿಸಂಸಿದ್ಧ ಘನಪ್ರಸಾದರೂಪನಾದಲ್ಲಿ.
ಎನ್ನ ನಿಂದ ನಿಲುಕಡೆಯೀತ ಬಸವಣ್ಣನು
ಎನ್ನ ಸರ್ವಸ್ವಾಯತವ ಮಾಡಿ ಸಲಹುವಲ್ಲಿ.
ಇದು ಕಾರಣ, ಕಲಿದೇವರದೇವರು ಸಾಕ್ಷಿಯಾಗಿ
ಎನ್ನ ಪೂರ್ವಾಚಾರಿ ಸಂಗನಬಸವಣ್ಣನ
ಕರುಣದಿಂದಲಾನು ಬದುಕಿದೆನು. || ೯೦ ||

**೫೨೮**

ಎನ್ನ ಅಷ್ಟವಿಧಾರ್ಚನೆ ಶುದ್ಧವಾಯಿತ್ತಯ್ಯಾ
ನೀವು ಮೂರ್ತಿಲಿಂಗವಾದ ಕಾರಣ.
ಎನ್ನ ತನು ಮನ ಶುದ್ಧವಾಯಿತ್ತಯ್ಯಾ
ನೀವು ಜಂಗಮಲಿಂಗವಾದ ಕಾರಣ.
ಎನ್ನ ಆಪ್ಯಾಯನ ಶುದ್ಧವಾಯಿತ್ತಯ್ಯಾ
ನಿಮ್ಮ ಪ್ರಸಾದವ ಕೊಂಡೆನಾಗಿ.
ಎನ್ನ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳೆಲ್ಲಾ
ಶುದ್ಧವಾದವಯ್ಯಾ ನೀವು ಜ್ಞಾನಲಿಂಗವಾದ ಕಾರಣ.
ಇಂತೀ ಎನ್ನ ಸರ್ವದಲ್ಲಿ ಸನ್ನಹಿತವಾದೆಯಲ್ಲಾ ಕಲಿದೇವರದೇವ. || ೯೧ ||

**೫೨೯**

ಎನ್ನ ಆದಿಯನೆತ್ತುವೆನೆ ?
ಅದ ನೀನೆ ಬಲ್ಲೆ, ಘನಗಂಭೀರದಲ್ಲಿ ಹುಟ್ಟಿದನೆಂಬುದ.
ಎನ್ನ ಅನಾದಿಯನೆತ್ತಿ ಹೇಳಿ ತೋರುವೆನೆ ?
ಅದು ನೀನೆ ಬಲ್ಲೆ, ಎನಗೆ ಕಾಯವಿಲ್ಲೆಂಬುದ.
ಬಸವಣ್ಣನ ಕಾರಣ ಮರ್ತ್ಯಕ್ಕೆ ಬಂದಡೆ
ಒಡಲುಪಾಧಿಯೆಂಬುದಿಲ್ಲ ನೋಡಾ.
ಒಡಲೆ ಬಸವಣ್ಣ, ಪ್ರಾಣವೆ ಚೆನ್ನಬಸವಣ್ಣ,
ಎನ್ನ ಮಹಾಜ್ಞಾನವೇ ನೀವು ನೋಡಾ.
ಇಂತು ಎರಡಿಲ್ಲದಿಪ್ಪಲ್ಲಿ, ನುಡಿಯಡಗಿದ ಪರಿಯ,
ನಿಮ್ಮ ಶರಣ ಬಸವಣ್ಣ ಬಲ್ಲ ಕಾಣಾ, ಕಲಿದೇವರದೇವ. || ೯೨ ||

**೫೩೦**

ಎನ್ನ ಆಯತ ಅವಧಾನಗೆಟ್ಟಿತ್ತಯ್ಯಾ.
ಎನ್ನ ಸ್ವಾಯತ ಸಂದಳಿಯಿತ್ತಯ್ಯಾ.

ಎನ್ನ ಸಮಾಧಾನ ತರಹವಾಯಿತ್ತಯ್ಯಾ.
ಎನ್ನ ಅರಿವು ನಿಜದಲ್ಲಿ ನಿಃಪತಿಯಾಯಿತ್ತಯ್ಯಾ.
ಕಲಿದೇವರದೇವಾ, ನಿಮ್ಮಲ್ಲಿ ಶಬ್ದಮುಗ್ಧವಾದೆನು. || ೯೩ ||

೫೩೧

ಎನ್ನ ಕಾಯ ಬಸವಣ್ಣನ ಪೂಜಿಸಲಿಕಾಯಿತ್ತು.
ಎನ್ನ ಜೀವ ಬಸವಣ್ಣನ ನೆನೆಯಲಿಕಾಯಿತ್ತು.
ಎನ್ನ ಶ್ರೋತ್ರ ಬಸವಣ್ಣನ ಚಾರಿತ್ರವ ಕೇಳಲಿಕಾಯಿತ್ತು.
ಎನ್ನ ಪ್ರಾಣ ಬಸವಣ್ಣನ ಸ್ತುತಿಸಲಿಕಾಯಿತ್ತು.
ಎನ್ನ ನೇತ್ರ ಬಸವಣ್ಣನ ಸರ್ವಾಂಗವ ನೋಡಲಿಕಾಯಿತ್ತು.
ಇಂತೆನ್ನ ಪಂಚೇಂದ್ರಿಯಂಗಳು ಕಲಿಗಳಾಗಿ
ಬಸವಣ್ಣನ ಹಿಡಿಯಲಿಕಾಯಿತ್ತು.
ಬಸವಣ್ಣನ ಅರಿವಿನೊಳಗೆ ನಾನಿದ್ದೆನು.
ಬಸವಣ್ಣನ ಮರಹಿನೊಳಗೆ ನಾನಿದ್ದೆನು ಕಾಣಾ
ಕಲಿದೇವರದೇವಾ. || ೯೪ ||

೫೩೨

ಎನ್ನಂಗದ ಆಚಾರದಲ್ಲಿ ಸಂಗನಬಸವಣ್ಣನ ಕಂಡೆನು.
ಎನ್ನ ಮನದ ಅರಿವಿನಲ್ಲಿ ಚೆನ್ನಬಸವಣ್ಣನ ಕಂಡೆನು.
ಎನ್ನ ಭಾವದ ಕೊನೆಯ ಮೊನೆಯ ಮೇಲೆ
ಅಲ್ಲಮಪ್ರಭುದೇವರ ಕಂಡೆನು.
ಎಲೆ ಕಲಿದೇವರದೇವಯ್ಯ ನಿಮ್ಮ ಶರಣರ ಘನವನು
ಎನ್ನ ಸರ್ವಾಂಗದಲ್ಲಿ ಕಂಡು, ನಮೋನಮೋ ಎನುತಿರ್ದೆನು. || ೯೫ ||

೫೩೩

ಎನ್ನ ಚಿನ್ನಾದಮಯದ ಗುರುವೆಂದೆನಿಸಿದ ಬಸವಣ್ಣ.
ಎನ್ನ ಚಿದ್ಬಿಂದುವಿನ ಇರವ ಲಿಂಗವೆಂದೆನಿಸಿದ ಬಸವಣ್ಣ.
ಎನ್ನ ಚಿತ್ಕಳೆಯುಂಬರವ ಜಂಗಮವೆಂದೆನಿಸಿದ ಬಸವಣ್ಣ.
ಗುರುವಿನಲ್ಲಿ ಶುದ್ಧ, ಲಿಂಗದಲ್ಲಿ ಸಿದ್ಧ, ಜಂಗಮದಲ್ಲಿ ಪ್ರಸಿದ್ಧ.
ಇಂತೀ ಶುದ್ಧಸಿದ್ಧಪ್ರಸಿದ್ಧಪ್ರಸಾದದಲ್ಲಿ,
ಎನ್ನ ಉಣಕಲಿಸಿದ, ಕಲಿದೇವಾ. ನಿಮ್ಮ ಶರಣ ಸಂಗನಬಸವಣ್ಣ. || ೯೬ ||

೫೩೪

ಎನ್ನ ತನು ಶುದ್ಧವಾಯಿತ್ತು
ಬಸವಣ್ಣನ ಶುದ್ಧಪ್ರಸಾದವ ಕೊಂಡೆನಾಗಿ.

ಎನ್ನ ಮನ ಶುದ್ಧವಾಯಿತ್ತು.
ಬಸವಣ್ಣನ ಸಿದ್ಧಪ್ರಸಾದವ ಕೊಂಡೆನಾಗಿ.
ಎನ್ನ ಭಾವ ಶುದ್ಧವಾಯಿತ್ತು
ಬಸವಣ್ಣನ ಪ್ರಸಿದ್ಧಪ್ರಸಾದವ ಕೊಂಡೆನಾಗಿ.
ಇಂತೆನ್ನ ತನುಮನಭಾವಂಗಳು
ಶುದ್ಧಸಿದ್ಧಪ್ರಸಿದ್ಧಪ್ರಸಾದದಲ್ಲಿ ಶುದ್ಧವಾದವು
ಕಲಿದೇವಾ, ನಿಮ್ಮ ಶರಣ ಬಸವನಿಂತಹ
ಘನಮಹಿಮ ನೋಡಯ್ಯಾ. ||೯೭||

**೫೩೫**

ಎನ್ನ ಮನ ಬಸವಣ್ಣ, ಎನ್ನ ವಾಕು ಚೆನ್ನಬಸವಣ್ಣ.
ಎನ್ನ ಕಾಯ ಪ್ರಭುದೇವರು.
ಇಂತೀ ಮೂವರ ಪಾದವನು ತ್ರಿಕರಣಶುದ್ಧದಿಂದ ನಂಬಿ ನಂಬಿ
ನಮೋ ನಮೋ ಎನುತಿರ್ದೆನು ಕಾಣಾ, ಕಲಿದೇವರದೇವ. ||೯೮||

**೫೩೬**

ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ ಬಸವಣ್ಣ.
ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದಾತ ಬಸವಣ್ಣ.
ಎನ್ನ ಕಾರಣತನುವಿಂಗೆ ಭಾವಲಿಂಗವಾದಾತ ಬಸವಣ್ಣ.
ಎನ್ನ ದೃಕ್ಕಿಂಗೆ ಇಷ್ಟಲಿಂಗವಾದಾತ ಬಸವಣ್ಣ.
ಎನ್ನ ಮನಕ್ಕೆ ಪ್ರಾಣಲಿಂಗವಾದಾತ ಬಸವಣ್ಣ.
ಎನ್ನ ಭಾವಕ್ಕೆ ತೃಪ್ತಿಲಿಂಗವಾದಾತ ಬಸವಣ್ಣ.
ಎನ್ನ ನಾಸಿಕಕ್ಕೆ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಜಿಹ್ವೆಗೆ ಗುರುಲಿಂಗವಾದಾತ ಬಸವಣ್ಣ.
ಎನ್ನ ನೇತ್ರಕ್ಕೆ ಶಿವಲಿಂಗವಾದಾತ ಬಸವಣ್ಣ.
ಎನ್ನ ತ್ವಕ್ಕಿಂಗೆ ಜಂಗುರುಲಿಂಗವಾದಾತ ಬಸವಣ್ಣ.
ಎನ್ನ ಶ್ರೋತ್ರಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ಹೃದಯಕ್ಕೆ ಮಹಾಲಿಂಗವಾದಾತ ಬಸವಣ್ಣ.
ಎನ್ನ ಸುಚಿತ್ತವೆಂಬ ಹಸ್ತಕ್ಕೆ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಸುಬುದ್ಧಿಯೆಂಬ ಹಸ್ತಕ್ಕೆ ಗುರುಲಿಂಗವಾದಾತ ಬಸವಣ್ಣ.
ಎನ್ನ ನಿರಹಂಕಾರವೆಂಬ ಹಸ್ತಕ್ಕೆ ಶಿವಲಿಂಗವಾದಾತ ಬಸವಣ್ಣ.
ಎನ್ನ ಸುಮನವೆಂಬ ಹಸ್ತಕ್ಕೆ ಜಂಗಮಲಿಂಗವಾದಾತ ಬಸವಣ್ಣ.

ಎನ್ನ ಸುಜ್ಞಾನವೆಂಬ ಹಸ್ತಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ಸದ್ಭಾವವೆಂಬ ಹಸ್ತಕ್ಕೆ ಮಹಾಲಿಂಗವಾದಾತ ಬಸವಣ್ಣ.
ಎನ್ನ ಆಧಾರಚಕ್ರದಲ್ಲಿ ಆಚಾರಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಸ್ವಾದಿಷ್ಠಾನಚಕ್ರದಲ್ಲಿ ಗುರುಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಮಣಿಪೂರಕಚಕ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಅನಾಹತಚಕ್ರದಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ವಿಶುದ್ಧಿ ಚಕ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಆಜ್ಞಾಚಕ್ರದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಬ್ರಹ್ಮರಂಧ್ರದಲ್ಲಿ ನಿಃಕಲಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಶಿಖಾಚಕ್ರದಲ್ಲಿ ಶೂನ್ಯಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ಪಶ್ಚಿಮಚಕ್ರದಲ್ಲಿ ನಿರಂಜನಲಿಂಗವಾಗಿ ಮೂರ್ತಿಗೊಂಡಾತ ಬಸವಣ್ಣ.
ಎನ್ನ ವದನಕ್ಕೆ ಓಂಕಾರವಾದಾತ ಬಸವಣ್ಣ.
ಎನ್ನ ಬಲದ ಭುಜಕ್ಕೆ ನಕಾರವಾದಾತ ಬಸವಣ್ಣ.
ಎನ್ನ ಎಡದ ಭುಜಕ್ಕೆ ಮಕಾರವಾದಾತ ಬಸವಣ್ಣ.
ಎನ್ನ ಒಡಲಿಂಗೆ ಶಿಕಾರವಾದಾತ ಬಸವಣ್ಣ.
ಎನ್ನ ಬಲದ ಪಾದಕ್ಕೆ ವಕಾರವಾದಾತ ಬಸವಣ್ಣ.
ಎನ್ನ ಎಡದ ಪಾದಕ್ಕೆ ಯಕಾರವಾದಾತ ಬಸವಣ್ಣ.
ಎನ್ನಾ ಆಪಾದಮಸ್ತಕ ಪರಿಯಂತರ ಮಂತ್ರರೂಪಕಸಂಬಂಧವಾದಾತ ಬಸವಣ್ಣ.
ಎನ್ನ ನಾದಕ್ಕೆ ಅಕಾರವಾದಾತ ಬಸವಣ್ಣ.
ಎನ್ನ ಬಿಂದುವಿಂಗೆ ಉಕಾರವಾದಾತ ಬಸವಣ್ಣ.
ಎನ್ನ ಕಳೆಗೆ ಮಕಾರವಾದಾತ ಬಸವಣ್ಣ.
ಎನ್ನ ರುಧಿರಕ್ಕೆ ನಕಾರವಾದಾತ ಬಸವಣ್ಣ.
ಎನ್ನ ಮಾಂಸಕ್ಕೆ ಮಕಾರವಾದಾತ ಬಸವಣ್ಣ.
ಎನ್ನ ಮೇಧಸ್ಸಿಂಗೆ ಶಿಕಾರವಾದಾತ ಬಸವಣ್ಣ.
ಎನ್ನ ಅಸ್ಥಿಗೆ ವಕಾರವಾದಾತ ಬಸವಣ್ಣ.
ಎನ್ನ ಮಜ್ಜೆಗೆ ಯಕಾರವಾದಾತ ಬಸವಣ್ಣ.
ಎನ್ನ ಸರ್ವಾಂಗಕ್ಕೆ ಓಂಕಾರವಾದಾತ ಬಸವಣ್ಣ.
ಇಂತು ಬಸವಣ್ಣನೆ ಪರಿಪೂರ್ಣನಾಗಿ,
ಬಸವಣ್ಣನೆ ಪ್ರಾಣವಾಗಿ, ಬಸವಣ್ಣನೆ ಅಂಗವಾಗಿ,
ಬಸವಣ್ಣನೆ ಲಿಂಗವಾದ ಕಾರಣ, ನಾನು ಬಸವಣ್ಣಾ ಬಸವಣ್ಣಾ ಬಸವಣ್ಣಾ
ಎಂದು ಬಯಲಾದೆನು ಕಾಣಾ, ಕಲಿದೇವರದೇವ. || ೯೯ ||

೫೩೭

ಎರಡುಕೋಟಿ ವೀರಗಣಂಗಳಾಗಬಹುದಲ್ಲದೆ
ಹರಳಯ್ಯ ಮಧುವಯ್ಯಗಳಾಗಬಾರದಯ್ಯಾ.
ಗಂಗೆವಾಳುಕಸಮಾರುದ್ರರಾಗಬಹುದಲ್ಲದೆ
ಜಗದೇವ ಮೊಲ್ಲೆಬೊಮ್ಮಣ್ಣಗಳಾಗಬಾರದಯ್ಯಾ.
ಕಲಿದೇವರದೇವಾ, ನಾನು ನೀನಾಗಬಹುದಲ್ಲದೆ
ಭಕ್ತಿಗೆ ಬಸವಣ್ಣನಲ್ಲದಾಗಬಾರದೆಂದರಿದು,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. || ೧೦೦ ||

೫೩೮

ಎಲ್ಲಾ ಎಲ್ಲವ ಹಡೆಯಬಹುದು, ಭಕ್ತಿಯ ಹಡೆಯಬಾರದು.
ಅಷ್ಟಾದಶವಿದ್ಯೆ ಸಕಲಕಳೆಯನೆಲ್ಲವ ಹಡೆಯಬಹುದು,
ಭಕ್ತಿಯ ಹಡೆಯಬಾರದು.
ಪಂಚತತ್ವಪದವಿಯ ಹಡೆಯಬಹುದು, ಭಕ್ತಿಯ ಹಡೆಯಬಾರದು.
ಈ ಆರಿಗೆಯೂ ಅರಿದು ಹಡೆಯಬಾರದಂಥ ಭಕ್ತಿಯ ಹಡೆದನು.
ಆ ಬಸವಣ್ಣನ ನಾ ಹಡೆದೆನು.
ನಾನೆಲ್ಲರಿಗೆಯೂ ಬಲ್ಲಿದನು ಕಾಣಾ, ಕಲಿದೇವರದೇವ ನಿಮ್ಮಾಣೆ. ||೧೦೧||

೫೩೯

ಎಲ್ಲಾ ಭಕ್ತಿಯ ಭೇದವನು, ಎಲ್ಲಾ ಕೂಟದ ಭೇದವನು,
ಎಲ್ಲಾ ಶೀಲದ ಭೇದವನು, ನಾನು ನಿನಗೆ ಬಿನ್ನೈಸುವೆ ಕೇಳಯ್ಯಾ.
ನೀನು ಕರ್ತನಾಗಿ, ನಾನು ಭೃತ್ಯನಾಗಿ ಅವಧರಿಸಯ್ಯಾ.
ಎಲ್ಲಾ ಭೇದಂಗಳನು ಬಸವಣ್ಣ ಮಾಡಿದನು.
ನಿಜಸ್ವಾಯತವನು ಬಸವಣ್ಣ ಮಾಡಿದನು.
ಜಂಗಮಸ್ವಾಯತವನು ಬಸವಣ್ಣ ಮಾಡಿದನು.
ಎನ್ನ ಸರ್ವಾಂಗಸ್ವಾಯತವನು ಬಸವಣ್ಣ ಮಾಡಿದನು.
ಕಾರಣ, ಆ ಬಸವಣ್ಣನ ನೆನೆನೆನೆದು ಬದುಕಿದೆನು ಕಾಣಾ
ಕಲಿದೇವಯ್ಯಾ. || ೧೦೨ ||

೫೪೦

ಎಲ್ಲಾ ವ್ಯಾವರ್ಣಂಗಳು ಸ್ಥಾಪ್ಯದೊಳಗು.
ಎಲ್ಲಾ ವಚನಂಗಳು ತಾಪದೊಳಗು.
ಎಲ್ಲಾ ಸ್ತೋತ್ರಂಗಳು ಕ್ರೋಧದೊಳಗು.

ಎಲ್ಲಾ ಅರಿವು ಮಥನದೊಳಗು.
ಎಲ್ಲಾ ಮೂರ್ತಿಗಳು ಪ್ರಳಯದೊಳಗು.
ಎಲ್ಲಾ ಗೀತಂಗಳು ಸಂವಾದದೊಳಗು.
ಲಿಂಗಾನುಭಾವಿ ಇವನೊಂದನೂ ಮನದಲ್ಲಿ ನೆನೆಯ,
ಏನೆಂದು ಅರಿಯ.
ಸ್ವತಂತ್ರ ನಿತ್ಯನಾಗಿ, ಭಕ್ತಿದಾಸೋಹವ
ನಿಮ್ಮ ಬಸವಣ್ಣನಳವಡಿಸಿಕೊಂಡನು.
ನಿಮ್ಮ ಬಸವಣ್ಣನಿಂತಹ ಸ್ವತಂತ್ರನಯ್ಯಾ
ಕಲಿದೇವರದೇವಾ. || ೧೦೩ ||

೫೪೧

ಎಲೆ ಕಲಿದೇವಯ್ಯಾ,
ಆದಿಯ ಕುಳವೂ ಅನಾದಿಯ ಕುಳವೂ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಮೂಲಶುದ್ಧದ ಮುಕ್ತಾಯ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಉಭಯಕುಳದ ಕಿರಣಶಕ್ತಿ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಭಾವವೂ ನಿರ್ಭಾವವೂ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅರ್ಥ ಪ್ರಾಣ ಅಭಿಮಾನ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅಂಗಲಿಂಗಸಂಗ
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಅಷ್ಟದಳಕಮಲದ ಸಪ್ತಕರ್ಣಿಕೆಯು
ನಿಮ್ಮ ಜಂಗಮಮೂರ್ತಿಯಲ್ಲಿ ನಿಂದಿತ್ತು.
ಎನ್ನ ನಡೆಗೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ನುಡಿಗೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ
ಎನ್ನ ನೋಟ ಕೆಟ್ಟಿತ್ತು ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ಮಾಟ ಸಮಾಪ್ತಿಯಾಯಿತ್ತು
ನಿಮ್ಮ ಜಂಗಮಮೂರ್ತಿಯಿಂದ.
ನಿಮ್ಮ ಪ್ರಸಾದದಿಂದ ತನು ಶುದ್ಧವಾಯಿತ್ತು.

ಬಸವಣ್ಣ ತೋರಿದ ಕಾರಣ, ನಿಮ್ಮ ಜಂಗಮಮೂರ್ತಿಯ ಕಂಡು
ಬದುಕಿದೆನು ಕಾಣಾ ಕಲಿದೇವರದೇವಾ. || ೧೦೪ ||

೫೪೨

ಎಲೆ ಮನವೆ ಕೇಳಾ,
ಶಿವನು ನಿನಗೆ ಅನಂತಾನಂತಯುಗದಲ್ಲಿ ಶಿವಾನುಭಾವಸ್ಥಿತಿಯ ಕಳುಹಿತ್ತ,
ಲೋಕಕ್ಕೆರಡು ಸ್ಥಿತಿಯಲ್ಲಿ ಜನ್ಮಾದಿ ಕಟ್ಟಣೆಯ ಹರಿಯೆಂದು.
ಆ ಪ್ರಭಾಮೂರ್ತಿಯಾಗಿ ಗುರುವೆಂಬ ನಾಮವಂ ಧರಿಸಿ,
ಮಹಾಲಿಂಗೈಕ್ಯವನು, ಮಹಾಲಿಂಗ ಯೋಗಪ್ರಭಾವವನು,
ಅಷ್ಟಾಷಷ್ಟಿತೀರ್ಥಂಗಳನು,
ಶಿವನು ಅನಂತಪ್ರಾಣಿಗಳಿಗೆ ಸಾಧನವೆಂದು ಮಾಡಿದನು.
ಮಂದರಗಿರಿ ರಜತಗಿರಿ ಮೇರುಗಿರಿ ಹಿಮಗಿರಿ
ಮೊದಲಾದ ಅಷ್ಟಕುಲಪರ್ವತಂಗಳನು ಸ್ಥಲಂಗೊಳಿಸಿದನು.
ಅನಾದಿಸಂಸಿದ್ಧದಾದಿಲಿಂಗೇಶ್ವರದೇವರ ಸ್ಥಲಂಗೊಳಿಸಿದನು.
ಎಲ್ಲಾ ಯಂತ್ರಕ್ಕೆ ಅಮೃತಕಳೆಯನೀಯಲೆಂದು
ಕಪಿಲಸಿದ್ಧಮಲ್ಲಿಕಾರ್ಜುನದೇವರ ಸ್ಥಲಂಗೊಳಿಸಿದನು.
ಸಿದ್ಧಸಿಂಹಾಸನದ ಮೇಲೆ ನಾಮಕರಣ ರಾಮನಾಥನಾಗಿ
ಗುರು ಮರ್ತ್ಯಕ್ಕೆ ಬಂದ ಕಾಣಾ ಮನವೆ.
ಆಚಾರ ಗೋಚರವಾಗಬೇಕೆಂದು ಆ ನಿರ್ವಯಲೆಂಬ ಸ್ವಾಮಿ
ತಾನೆಯಾಗಿ, ಓಂಕಾರ ಊರ್ಧ್ವರೇತ ಶಿವನಾಗಿ,
ಬೆಳಗನುಟ್ಟು ಬಸವಣ್ಣ ಬಂದ ಕಾಣಾ ಮನವೆ.
ಎಲ್ಲಾ ಪ್ರಾಣಿಗಳಿಗೆ ಜಿಹ್ವೆಗಳನು ಪವಿತ್ರವ ಮಾಡಲೆಂದು
ಶುದ್ಧಸಿದ್ಧಪ್ರಸಿದ್ಧಪ್ರಸಾದವ ತೋರಿಹೆವೆನುತ
ಮಹಾಪ್ರಸಾದಿ ಚೆನ್ನಬಸವಣ್ಣ ಬಂದ ಕಾಣಾ ಮನವೆ.
ಜ್ಞಾನವಾಹನವಾಗಿ ತನುಮನಧನದ ಮೇಲೆ ನಡೆದು,
ಅನಂತಮೂರ್ತಿಗಳ ಪವಿತ್ರವ ಮಾಡಲೆಂದು
ಎಲ್ಲಾ ಸಂಬಂಧವನು ಕರಸ್ಥಲದಲ್ಲಿ ಹಿಡಿದುಕೊಂಡು,
ಜಂಗಮವಾಗಿ ಪ್ರಭುದೇವರು ಬಂದರು ಕಾಣಾ ಮನವೆ.
ಗುರುವೆ ಮಹಾಭಕ್ತನಾಗಿ ಅರ್ಪಿತವ ಮಾಡಿ,
ಪ್ರಸಾದಿಯ ಅನುಭಾವದ ಆಭರಣವೆ ಜಂಗಮವಾಗಿ,
ಇಂತೀ ಚತುರ್ವಿಧಸ್ಥಲಂಗಳು ಎನ್ನ ಪ್ರಾಣನ ಕೊರಳಲ್ಲಿಹವಾಗಿ,
ನಿಮ್ಮ ಅನಿಮಿಷವಾಗಿ ನಾ ನೋಡುತಿರ್ದೆ ಕಾಣಾ, ಕಲಿದೇವಯ್ಯಾ. || ೧೦೫ ||

೫೪೩

ಎಲ್ಲೆಲ್ಲಿಯ ಪ್ರಾಣಿಯ ಕೊಲ್ಲದಿಹುದೆ ಧರ್ಮ,
ಒಲ್ಲದಿಪ್ಪುದೇ ತಪ.
ಪರವಧುವಿನ ಆಸೆ, ತನ್ನ ಮನದಲ್ಲಿ ಇಲ್ಲದಿರ್ದಡೆ,
ದೇವ ತಾನಲ್ಲಿಯೇ ಎಂದ, ಕಲಿದೇವಯ್ಯ. || ೧೦೬ ||

೫೪೪

ಏಕನಾತಿಯ ಪೂಜಿಸುವವರು ಬತ್ತಲೆಯಯ್ಯ.
ವಿಷ್ಣುವಿನ ಪೂಜಿಸಿದವರು ಭುಜವ ಸುಡಿಸಿಕೊಂಬುದ
ನಾ ಕಂಡೆ, ನಾ ಕಂಡೆನಯ್ಯ.
ನಿಮ್ಮ ಪೂಜಿಸಿದವರು ಇಹಪರಕ್ಕೆ ಸಾಧನ ಮಾಡಿಕೊಂಡುದ
ನಾ ಕಂಡೆ, ನಾ ಕಂಡೆನಯ್ಯಾ ಕಲಿದೇವಯ್ಯ. || ೧೦೭ ||

೫೪೫

ಒಂದು ಕೈಯ ಬಯಲ ಎನಗೆ ಕೊಟ್ಟ.
ಒಂದು ಕೈಯ ಬಯಲ ಚೆನ್ನಬಸವಣ್ಣಂಗೆ ಕೊಟ್ಟ.
ನೀವು ಬಂದಹರೆಂದು ಎಂಟುಸಾವಿರವರುಷ
ಒಗೆದೊಗೆದು ಬಿಳಿದು ಮಾಡುತ್ತಿದ್ದೆನು.
ಒಂದು ಬಿಳಿದ, ಬಸವಣ್ಣ ಲಿಂಗಕ್ಕೆ ಕೊಡು ಎಂದಡೆ,
ಲಿಂಗಕ್ಕೆ ಕೊಡಲೊಲ್ಲದೆ ತಲೆಯ ಸುತ್ತಿಕೊಂಡ.
ಮಡಿಯ ಕೂಲಿಯ ಬೇಡಹೋದಡೆ,
ಬಿಳಿದ ಹರಿದು, ಮೇಲೆ ಬಿಸಾಟನು.
ನೀನುಟ್ಟ ಬೀಳುಡಿಗೆಯನು,
ಚೆನ್ನಬಸವಣ್ಣನ ಕೈಯ ನಿರಾಳವನು.
ಎನಗೆ ಕೊಡಿಸಾ ಕಲಿದೇವಯ್ಯ. || ೧೦೮ ||

೫೪೬

ಒಂದೆ ಭಾವದಿಂದ ಗುರುಲಿಂಗಾರ್ಚನೆ ಪೂಜೆಯಂ ಮಾಡಿ,
ಒಂದಣ ಭವಜನ್ಮ ದಂದುಗವನೆ ಗೆಲಿದು,
ಶಿವನ ಸಲುಸಂದ ಪ್ರಮಥರ ಸರಿಯೆನಿಸಿಕೊಂಬುದು ಸಾಮಾನ್ಯವಲ್ಲ.
ಕಂದನ ಶಿವಗರ್ಪಿತವ ಮಾಡಿ,
ಸಿರಿಯಾಳಸೆಟ್ಟಿ, ಕೈಲಾಸ ಕಾಬುದು ಸಂದೇಹವಾಗಿಹುದೆಂದ.
ಹೃದಯದ ಅಂಧಕಾರ ಹರಿಯಲೆಂದು,

ಗುರುದೇವನು ಬೆಳಗ ತೋರಿದ.
ಹಿಂದಣ ಸೂತಕ ತೊಳೆಯಲೆಂದು ನಿಂದರೂ
ಮಾಯಾಬಂಧನದಲ್ಲಿ ಸಿಲ್ಕಿ, ಗುರುವಿಂಗೆ ವಂದನೆಯ ಮಾಡದೆ,
ಶಿವಗತಿಗೆ ಸಂದೆನೆಂಬ ಸ್ವಾಮಿದ್ರೋಹಿಗಳಿಗೆ
ಎಂದೂ ಗತಿಯಿಲ್ಲವೆಂದ, ಕಲಿದೇವರದೇವಯ್ಯ. || ೧೦೯ ||

೫೪೭

ಒಟ್ಟಿರ್ದ ಮಣ್ಣಿಗೂ ನಟ್ಟಿರ್ದ ಕಲ್ಲಿಗೂ
ಕಟ್ಟಿರ್ದ ಲಿಂಗವಡಿಯಾಗಿ ಬೀಳುವ,
ಲೊಟ್ಟೆಗುಡಿಹಿಗಳನೇನೆಂಬೆನಯ್ಯಾ
ಕಲಿದೇವರದೇವಾ. || ೧೧೦ ||

೫೪೮

ಒಡಲ ಹೊರೆವ ಇಚ್ಛೆಯಿಂದ,
ಹಗಲೆನ್ನದೆ ಇರುಳೆನ್ನದೆ ಬೆಂದ ಬಸುರಿಂಗೆ ಕುದಿವುತ್ತಿದ್ದೇನೆ.
ನಿಮ್ಮ ನೆನೆಯಲೂ ವೇಳೆಯಿಲ್ಲ, ಪೂಜಿಸಲೂ ವೇಳೆಯಿಲ್ಲ.
ಒಂದುವೇಳೆಯಾದರೂ ಶಿವಮಂತ್ರವ ಸ್ಮರಿಸ ತೆರಹಿಲ್ಲ.
ಈ ಪ್ರಯಾಸವ ಬಿಡಿಸಿ, ನಿಮ್ಮ ನೆನೆವಂತೆ ಮಾಡಯ್ಯಾ,
ಕಲಿದೇವರದೇವಾ, ನಿಮ್ಮ ಧರ್ಮ, ನಿಮ್ಮ ಧರ್ಮ. || ೧೧೧ ||

೫೪೯

ಕಂಗಳ ನೋಟ ಕರಸ್ಥಲದ ಪ್ರಾಣ.
ಅಂಗದ ವಿಕಾರ ನಿರ್ವಿಕಾರವಾಗಿತ್ತು.
ಸಂಗಸುಖ ನಿಸ್ಸಂಗವಾಯಿತ್ತು.
ಹೆಂಗೂಸೆಂಬ ಭಾವ ಬಯಲ ಬೆರಸಿತ್ತು.
ಕಲಿದೇವರದೇವಾ, ನಿಮ್ಮನೊಲಿಸಿ ಒಚ್ಚತವೋದ
ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು. || ೧೧೨ ||

೫೫೦

ಕಡಲುಗಳ ಕಂಗಳೊಳಗೆ ಮೊಗೆದು ಬರಿಕೆಯ್ಯುತಿಹರು
ಕೆಲರು ಗಣೇಶ್ವರರು.
ಮೇರುಗಿರಿಗಳ ಮಿಡಿದು ಮೀಟುತ್ತಿಹರು
ಕೆಲರು ಗಣೇಶ್ವರರು.

ಸಕಲಬ್ರಹ್ಮಾಂಡಗಳ ಹಿಡಿದು ಹಿಸುಕಿ ಕೆಡಹುತ್ತಿಹರು
ಕೆಲರು ಗಣೇಶ್ವರರು.
ಅಗ್ನಿ ವಾಯುಗಳ ಹಿಡಿದು ಹೊಸೆದುಹಾಕುತ್ತಿಹರು
ಕೆಲರು ಗಣೇಶ್ವರರು.
ರವಿ ಶಶಿಗಳನು ಧ್ರುವಮಂಡಲಂಗಳನು ಪೂರಕದಲ್ಲಿ ತೆಗೆತಂದು,
ರೇಚಕದಲ್ಲಿ ಬಿಡುತ್ತಿಹರು
ಕೆಲರು ಗಣೇಶ್ವರರು.
ಬಯಲನಾಕಾರವ ಮಾಡಿ, ಆಕಾರವ ಬಯಲ ಮಾಡುತ್ತಿಹರು
ಕೆಲರು ಗಣೇಶ್ವರರು.
ಇಂತಿವರೆಲ್ಲರೂ ಕಲಿದೇವರದೇವಾ
ನಿಮ್ಮ ಬಸವಣ್ಣನ ನಿರಾಧಾರಪಥದಲ್ಲಿ ನಿಂದಿರ್ಪರು. || ೧೧೩ ||

೫೫೧

ಕಡಲೊಳಗಣ ಮೊಸಳೆಯ ನಡುವ ಹಿಡಿದು
ಕಡೆಗೆ ಸಾರಿ ಹೋಹೆನೆಂಬವರುಂಟೆ ?
ಜಗದೊಳಗೆ ಮಡದಿ ಮಕ್ಕಳು ಮಾತಾಪಿತರು ಬಾಂಧವರು,
ಮಾಯಾಮೋಹಕ್ಕೆ ದಂದುಗವಿಡಿದು ನಡೆವ ತುಡುಗುಣಿಯ
ಮನದಿಚ್ಛೆಗೆ ಹರಿದು, ಕಡೆಯುಗಾಣದೆ,
ಕರ್ಮದ ಕಡಲೊಳಗೆ ಮುಳುಗಿಹೋದರೆಂದ, ಕಲಿದೇವರದೇವ. || ೧೧೪ ||

೫೫೨

ಕಣ್ಣು ನೋಡಿ ರೂಪ ಹೇಳದಂತಿರಬೇಕು.
ಕಿವಿ ಕೇಳಿ ಶಬ್ದವ ನುಡಿಯಲರಿಯದಂತಿರಬೇಕು.
ಮನವುಂಡು ಪರ್ರುನೆ ತೇಗಿ ರುಚಿಯ ಪೇಳಲರಿಯದಂತಿರಬೇಕು.
ಮನವ ತೋರುವ ಗುರುವಿನ ಕಾರುಣ್ಯದನುವ ಕಾಬ ಶಿಷ್ಯಂಗೆ,
ಮನೋಮೂರ್ತಿ ಮುನ್ನವೆಯಾಯಿತ್ತೆಂದ ಕಲಿದೇವಯ್ಯ. || ೧೧೫ ||

೫೫೩

ಕರಸ್ಥಲ ಕಂಠಸ್ಥಲ ಕರ್ಣಸ್ಥಲ ಮಧ್ಯಸ್ಥಲ ಮಹಾಸ್ಥಲ.
ಇಂತೀ ಐದು ಸ್ಥಲಂಗಳನು ಮಹಾಸ್ಥಲಕ್ಕೆ ತಂದು,
ಬಸವಣ್ಣ ಸಂಪೂರ್ಣವಾದ ಕಾಣಾ, ಕಲಿದೇವರದೇವಾ. || ೧೧೬ ||

೫೫೪

ಕರಸ್ಥಲದ ದೇವನಿದ್ದಂತೆ
ಧರೆಯ ಮೇಲಣ ಪ್ರತಿಷ್ಠೆಗೆರಗುವ
ಈ ನರಕಿನಾಯಿಗಳನೇನೆಂಬೆನಯ್ಯಾ
ಕಲಿದೇವಯ್ಯ. || ೧೧೭ ||

೫೫೫

ಕಲ್ಯಾಣಪಟ್ಟಣದಲ್ಲಿ ಕಲಕೇತಯ್ಯಗಳು
ಕಿನ್ನರಯ್ಯಗಳ ಸ್ಥಾವರದೈವದ ಸೇವೆ, ಯಾಚಕತ್ವವ ಬಿಡಿಸಿ,
ಗುರು ಕೊಟ್ಟ ಇಷ್ಟಲಿಂಗದಲ್ಲಿ ನಿಷ್ಠೆಯ ಗಟ್ಟಿಗೊಳಿಸಿ,
ಘನವೀರಶೈವದ ಬಟ್ಟೆಯನರುಹಿದರೆಂಬುದ ಕೇಳಿ ನಂಬದೆ,
ಸೃಷ್ಟಿಯ ಪ್ರತಿಷ್ಠೆಗೆ ಶರಣೆಂದಡೆ, ಮೆಟ್ಟುವ ನರಕದಲ್ಲಿ ಕಲಿದೇವಯ್ಯ. ||೧೧೮||

೫೫೬

ಕಲ್ಯಾಣವೆಂಬ ಪಟ್ಟಣದೊಳಗೆ ಛತ್ತೀಸಪುರದ ಮಹಾಗಣಂಗಳು.
ಒಂದು ಪುರದವರು ಅಗ್ಘಣಿಯ ತಹರು.
ಎರಡು ಪುರುದವರು ಸಮ್ಮಾರ್ಜನೆ ರಂಗವಾಲಿಯ ಮಾಡುವರು.
ಮೂರು ಪುರದವರು ಲಿಂಗಾರ್ಚನೆಗೆ ನೀಡುವರು.
ನಾಲ್ಕು ಪುರದವರು ಲಿಂಗಕ್ಕೆ ಬೋನವ ಮಾಡುವರು.
ಐದು ಪುರದವರು ಅರ್ಪಿತಕ್ಕೆ ನೀಡುವರು.
ಆರು ಪುರದವರು ಪ್ರಸಾದದಲ್ಲಿ ತದ್ಗತರಾಗಿಹರು.
ಏಳು ಪುರದವರು ಧ್ಯಾನಾರೂಢರಾಗಿಹರು.
ಮುಂದಣ ಪುರದವರು ನಿಶ್ಚಿಂತನಿವಾಸಿಗಳಾಗಿಹರು.
ಈ ಪುರದ ಗಣಂಗಳು ಓಲೈಸುವ ಬಸವನ ಮಹಾಮನೆಯ
ಮಡಿವಾಳ ನಾನು ಕಾಣಾ, ಕಲಿದೇವರದೇವಾ. || ೧೧೯ ||

೫೫೭

ಕಳ್ಳಬುದ್ಧಿಯೆಡೆಗೊಂಡು ಕರ್ಮಗೇಡಿಯಾಗಿ ಹೋಗಬೇಡವೆಂದು
ಷೋಡಶೋಪಚಾರದಿಂದ ಶ್ರೀಗುರು ಭಕ್ತಿಯ ತೋರಿ,
ಸತ್ಯ ಸದಾಚಾರ ಧರ್ಮ ನೆಲೆಗೊಳ್ಳಬೇಕೆಂದು,
ಸಾಹಿತ್ಯ ಸಂಬಂಧವ ಕೊಟ್ಟು,
ಶ್ರೀಗುರು ಉಪದೇಶವ ಹೇಳಿದ ಮಾರ್ಗದಿ ನಡೆಯಲೊಲ್ಲದೆ,
ನಾಯಿಜಾತಿಗಳು ಕೀಳುಜಾತಿಗಳು ದೈವದ ಜಾತ್ರೆಗೆ ಹೋಗಿ,

ಬೆನ್ನಸಿಡಿಯನೇರಿಸಿಕೊಂಡು, ಅಂಗ ಲಿಂಗಕ್ಕೆರವಾಗಿ,
ತಾಳಿ ತಗಡಿ ಮಾಡಿ, ಮನೆದೈವವೆಂದು ಕೊರಳಿಗೆ ಕಟ್ಟಿಕೊಂಡು
ಮರಳಿ ಉಣಲಿಕ್ಕಿಲ್ಲದಿರ್ದಡೆ, ಮಾರಿಕೊಂಡು ತಿಂಬ ಕೀಳುಜಾತಿಗೆ
ಏಳೇಳುಜನ್ಮದಲ್ಲಿ ಕಾಗೆ ಬಾಯಲಿ ತಿಂಬ ನರಕ ತಪ್ಪದೆಂದ,
ಕಲಿದೇವರದೇವ. || ೧೨೦ ||

೫೫೮

ಕಾ[ಡಿ]ನೊ[ಳ]ಗೆ ಹೋಗಿ, ಅಭೇದ್ಯವಪ್ಪ ಲಿಂಗದ
ಭೇದವನರಿಯದೆ ಹೋದಿರಲ್ಲಾ.
ಮಿಣುಕಿನ ಪ್ರಭೆಯಂತೆ, ಧಣಧಣಿಸುವ ಘನದನುವನರಿಯದೆ ಹೋದಿರಲ್ಲಾ.
ಪಂಚತತ್ವವನೊಳಕೊಂಡ ಪರಬ್ರಹ್ಮವು ಪಂಚತತ್ವದಲ್ಲಿ ವಂಚಿಸಿದರೆ,
ಸಂಚಲಗೊಂಬ ಸಂದೇಹವ ನೋಡಾ.
ಇದು ಕಾರಣ, ಸರ್ವಸಂಚಲವನತಿಗಳೆದು,
ಸದಾಕಾಲದಲ್ಲಿ ಲಿಂಗವ ಪೂಜಿಸುವ ಪೂಜಾವಿಧಾನರ ತೋರಾ
ಕಲಿದೇವರದೇವ. || ೧೨೧ ||

೫೫೯

ಕಾಮಕ್ರೋಧದ ಕರಸ್ಥಲದಲ್ಲಿ ಗುರು ಸ್ವಾಯತವ ಮಾಡಿದೆನು.
ಲೋಭಮೋಹದ ಕರಸ್ಥಲದಲ್ಲಿ ಲಿಂಗ ಸ್ವಾಯತವ ಮಾಡಿದೆನು.
ಮದದ ಕರಸ್ಥಲದಲ್ಲಿ ಜಂಗಮ ಸ್ವಾಯತವ ಮಾಡಿದೆನು.
ಮತ್ಸರದ ಕರಸ್ಥಲದಲ್ಲಿ ಪ್ರಸಾದ [ಸ್ವಾಯತವ] ಮಾಡಿದೆನು.
ಇಂತೀ ಗುರುಲಿಂಗ ಜಂಗಮ ಪ್ರಸಾದದಲ್ಲಿ ಶುದ್ಧನಾದೆನು ಕಾಣಾ
ಕಲಿದೇವರದೇವಾ. || ೧೨೨ ||

೫೬೦

ಕಾಮಿಯಾಗಿ ನಿಃಕಾಮಿಯಾದಳು.
ಸೀಮೆಯಲ್ಲಿರ್ದು ನಿಸ್ಸೀಮೆಯಾದಳು.
ಭವಿಯ ಸಂಗವ ತೊರೆದು ಭವಬಾಧೆಯ ಹರಿದಳು.
ಬಸವಣ್ಣನೆ ಗತಿಯೆಂದು ಬರಲು,
ನಾನು ಮಡಿಯ ಹಾಸಿ ನಡೆಸಿದೆ.
ನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು.
ಆ ಮಡಿಯ ಬೆಳಗಿನೊಳಗೆ ನಿರ್ವಯಲಾದಳು.
ಕಲಿದೇವರದೇವಾ, ಮಹಾದೇವಿಯಕ್ಕಗಳ ನಿಲವ
ಬಸವಣ್ಣನಿಂದ ಕಂಡು ಬದುಕಿದೆನಯ್ಯಾ ಪ್ರಭುವೆ. || ೧೨೩ ||

೫೬೧

ಕಾಯದ ಕಳವಳದಿಂದ, ಕರಣದ ಕಳವಳದಿಂದ, ಇಂದ್ರಿಯ ಕಳವಳದಿಂದ,
ವಿಷಯದ ಕಳವಳದಿಂದ, ಮೋಹದ ಕಳವಳದಿಂದ
ಮಾಯಾಪಾಶ ಪಾಕುಳದಲ್ಲಿ ಜನ್ಮ ಜರೆ ಮರಣ ಭವಕ್ಕೊಳಗಾದ ಭವಿಗೆ
ಅನಂತದೈವವಲ್ಲದೆ,
ಜನ್ಮ ಜರೆ ಮರಣ ಭವವಿರಹಿತ ಸದ್ಭಕ್ತಂಗೆ ಅನಂತದೈವವುಂಟೆ ?
ಸೂಳೆಗೆ ಅನಂತಪುರುಷರ ಸಂಗವಲ್ಲದೆ, ಗರತಿಗೆ ಅನಂತಪುರುಷರ ಸಂಗವುಂಟೆ?
ಚೋರಂಗೆ ಪರದ್ರವ್ಯವಲ್ಲದೆ, ಸತ್ಯಸಾತ್ವಿಕಂಗೆ ಪರದ್ರವ್ಯವುಂಟೆ ?
ಹಾದರಗಿತ್ತಿಗೆ ಹಲವು ಮಾತಲ್ಲದೆ, ಪರಮಪತಿವ್ರತೆಗೆ ಹಲವು ಮಾತುಂಟೆ ?
ಪರಮಪಾತಕಂಗೆ ಹಲವು ತೀರ್ಥ, ಹಲವು ಕ್ಷೇತ್ರವಲ್ಲದೆ ?
ಪರಮಸದ್ಭಕ್ತಂಗೆ ಹಲವು ತೀರ್ಥ, ಹಲವು ಕ್ಷೇತ್ರಗಳುಂಟೆ ?
ಗುರುದ್ರೋಹಿ ಲಿಂಗದ್ರೋಹಿ ಚರದ್ರೋಹಿ,
ವಿಭೂತಿ ರುದ್ರಾಕ್ಷಿ ಮಂತ್ರ ಪಾದೋದಕ ಪ್ರಸಾದ ಭಕ್ತದ್ರೋಹಿ,
ಮಾತೃದ್ರೋಹಿ ಪಿತೃದ್ರೋಹಿಗೆ ಕಾಲಕಾಮಕರ್ಮದ ಭಯವಲ್ಲದೆ
ಸತ್ಯ ಸದಾಚಾರ ಸದ್ಭಕ್ತಿ ಸತ್ಕ್ರಿಯಾ ಸಮ್ಯಜ್ಞಾನ ಸತ್ಕಾಯಕ ಸದ್ಭಕ್ತಿಪ್ರಿಯ
ಸದ್ಧರ್ಮಿಗೆ, ಕಾಲಕಾಮಕರ್ಮದ ಭಯವುಂಟೆ, ಕಲಿದೇವರದೇವಾ ? || ೧೨೪ ||

೫೬೨

ಕಾಯದಲ್ಲಿ ನಿಂದ ಶರಣಂಗೆ ಸೇವೆಯವರ ತಪ್ಪ ಹಿಡಿದೆನೆಂದಡೆ
ಕಾಯಕವೆಂತು ನಡೆವುದಯ್ಯಾ ?
ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛನಕ್ಕೆ ಮುನಿಯಬೇಕೆ ?
ಮುಗ್ಗಿದ ತುರಗನ ಕಾಲ ಕತ್ತರಿಸಿದವರುಂಟೆ ?
ಕಚ್ಚುವ ತಿಗುಣೆಗಾಗಿ ಮನೆಯ ಸುಟ್ಟವರುಂಟೆ ?
ಕಲಿದೇವರದೇವನಲ್ಲಿ ತಪ್ಪ ಹಿಡಿಯಲಿಲ್ಲ, ಕೇಳಾ ಚಂದಯ್ಯ. || ೧೨೫ ||

೫೬೩

ಕಾಲಕರ್ಮಕಂಜಿ ಶಿವನ ಶೀಲ ಭಕ್ತಿಯ ಹಿಡಿದು
ಗುರುಲಿಂಗಜಂಗಮದ ಪಾದತೀರ್ಥ ಪ್ರಸಾದವ ಕೊಂಡು,
ಕರ್ಮ ದುರಿತವ ಗೆಲಿದು, ಶೀಲ ಶಿವಭಕ್ತಿಯಿಲ್ಲದ ದ್ರೋಹಿಗಳು,
ಹಾಲು ಹಯನ ಮೀಸಲವೆಂದು ಕೂಡಿಸಿಕೊಂಬರು.
ಅವರು ಶೂಲಕ್ಕೆ ಬಿದ್ದು, ಹೊಲೆಜನ್ಮಕ್ಕೆ ಮಾದಿಗರಾಗಿ,
ಉಪವಾಸವಿರ್ದು ಹಸಿದುಂಬ ಕ್ರೂರಕರ್ಮಿಗಳ
ಮುಖವ ನೋಡಲಾಗದೆಂದ ಕಲಿದೇವರದೇವ. || ೧೨೬ ||

೫೬೪

ಕಾಲಲ್ಲಿ ಕೂರಲಗ ಮೊನೆಯಲ್ಲಿರಿಸಿಕೊಂಡು,
ಸತ್ತುಹೋದವರ ಸಮರ್ಥಿಕೆಯ ಹೊಗಳಿ,
ಹೊಟ್ಟೆಯ ಹೊರೆವ ಕವಿಗಳು ಕೋಟ್ಯಾನುಕೋಟಿ.
ಅರ್ಥವುಳ್ಳವರ ಅಗ್ಗಳಿಕೆಯ ಹೊಗಳುವ ಕವಿಗಳು ಕೋಟ್ಯಾನುಕೋಟಿ.
ಲಿಂಗವ ಹೊಗಳಿ ಹೊಗಳಿ, ಅಂಗದ ಸೂತಕ ಹಿಂಗಿಸಿ,
ಜಂಗಮದ ದಾಸೋಹದಿಂದ ಸರ್ವಾಂಗಲಿಂಗಿಯಾದ
ಭಕ್ತನಂಗಳವೆನಗೆ ವಾರಣಾಸಿ, ಗಾಯತ್ರಿ,
ಮಲಪ್ರಹರಿಯಿಂದಧಿಕವಯ್ಯಾ, ಕಲಿದೇವರದೇವಯ್ಯ. || ೧೨೭ ||

೫೬೫

ಕಾವರುಂಟೆ ಸಾವಿಗೊಳಗಾಗಿ,
ಸತ್ತುಹೋದ ಸಮಸ್ತಕ್ಕೂ ದೇವನೊಬ್ಬನೆ.
ಕಾವಾತ ಕೊಲುವಾತ ಮಹದೇವರು.
ಮುನಿದರೆ ಮರಳಿ ಕಾವರುಂಟೆ ?
ಸಾವಿಗೊಳಗಾಗಿ ಸತ್ತುಹೋಹ ಭೂತಂಗಳನು
ದೇವರ ಸರಿಯೆಂದಾರಾಧಿಸಿ
ಅಚಲಿತ ಪದವಿಯ ಬೇಡುವ ಗುರುದ್ರೋಹಿಯ
ನುಡಿಯ ಕೇಳಲಾಗದೆಂದ ಕಲಿದೇವಯ್ಯ. || ೧೨೮ ||

೫೬೬

ಕಾಳಿಕಾದೇವಿ ಚಾಮುಂಡಿ ಗೌರಿ ಬನದ ಶಂಕರಿ.
ಇಂತೀ ನಾಲ್ಕು ಶಕ್ತಿಯರು ಮೊದಲಾದ ಹಲವು ಶಕ್ತಿದೈವಂಗಳನಾರಾಧಿಸಿ,
ಅವರೆಂಜಲ ಭುಂಜಿಸುವವರಿಗೆ ಗುರುವಿಲ್ಲ, ಗುರುಪ್ರಸಾದವಿಲ್ಲ.
ಲಿಂಗವಿಲ್ಲ, ಲಿಂಗಪ್ರಸಾದವಿಲ್ಲ. ಜಂಗಮವಿಲ್ಲ, ಜಂಗಮಪ್ರಸಾದವಿಲ್ಲ.
ಇಂತಪ್ಪ ಪಾತಕರಿಗೆ ಸೂರ್ಯಚಂದ್ರರುಳ್ಳನಕ್ಕ
ಇಪ್ಪತ್ತೆಂಟುಕೋಟಿ ನಾಯಕನರಕ ತಪ್ಪದು.
ಆ ನರಕ ತೀರಿದ ಬಳಿಕ,
ಶ್ವಾನ ಸೂಕರ ಯೋನಿಯಲ್ಲಿ ಬಪ್ಪುದು ತಪ್ಪದು.
ಆ ಜನ್ಮ ತೀರಿದ ಬಳಿಕ,
ರುದ್ರಪ್ರಳಯ ಪರಿಯಂತರ ನರಕ ತಪ್ಪದೆಂದ, ಕಲಿದೇವಯ್ಯ. || ೧೨೯ ||

**೫೬೭**

ಕಿಂಚಿತ್ತು ನೇಮವ ಮಾಡುವಲ್ಲಿ ಶೂನ್ಯವಿಲ್ಲದಿರಬೇಕು.
ಸತ್ಯಕ್ಕೆ ತಕ್ಕ ಸಾಮರ್ಥ್ಯ,
ಒಚ್ಚಿ ಹೊತ್ತಾದಡೂ ಶಿವಪೂಜೆಯ ನಿಶ್ಚಯದಲ್ಲಿ ಮಾಡಬೇಕು.
ಅದು ತನಗೆ ಸುಚಿತ್ತದ ಹಾದಿ, ಕಲಿದೇವರದೇವನೊಳಗು, ಚಂದಯ್ಯ. || ೧೩೦ ||

**೫೬೮**

ಕೀಳು ಮೇಲಾವುದೆಂದರಿಯದೆ,
ಹದಿನೆಂಟುಜಾತವೆಲ್ಲ ತರ್ಕಕಿಕ್ಕಿ,
ಕೂಳ ಸೊಕ್ಕಿನಲ್ಲಿ ಕಣ್ಣಿಗೆ ಕಾಳಗತ್ತಲೆ ಕವಿದು,
ಸತ್ಯ ಸದಾಚಾರದ ಹಕ್ಕೆಯನರಿಯದೆ,
ಸೂಳೆ ಸುರೆ ಅನ್ಯದೈವದ ಎಂಜಲ ಭುಂಜಿಸುವ
ಕೀಳು ಜಾತಿಗಳು, ಶಿವ ನಿಮ್ಮ ನೆನೆವ
ಭಕ್ತರುಗಳ ಅನುವನರಿಯದೆ,
ಏಳೇಳುಜನ್ಮ ನರಕಕ್ಕೊಳಗಾದರು ನೋಡಾ
ಕಲಿದೇವರದೇವ. ||೧೩೧||

**೫೬೯**

ಕೃತಯುಕ ತ್ರೇತಾಯುಗ ದ್ವಾಪರಯುಗ ಕಲಿಯುಗಂಗಳಲ್ಲಿ
ಬಸವನೆ ಭಕ್ತ, ಪ್ರಭುವೆ ಜಂಗಮವೆಂಬುದಕ್ಕೆ
ಭಾವಭೇದವಿಲ್ಲವೆಂಬುದು ತಪ್ಪದು ನೋಡಯ್ಯಾ.
ಕಲಿಯುಗದಲ್ಲಿ ಶಿವಭಕ್ತಿಯನು ಪ್ರಬಲವ ಮಾಡಬೇಕೆಂದು
ಮರ್ತ್ಯಲೋಕಕ್ಕೆ ಇಳಿದು,
ಶೈವಾಗಮಾಚಾರ್ಯ ಮಂಡಗೆಯ ಮಾದಿರಾಜನ ಸತಿ ಮಾದಾಂಬಿಕೆಯ
ಗರ್ಭದಿಂದವತರಿಸಿದ.
ಬಸವಣ್ಣನೆಂಬ ನಾಮಕರಣವಂ ಧರಿಸಿ,
ಕೂಡಲಸಂಗಮದೇವರ ದಿವ್ಯ ಶ್ರೀಪಾದಪದ್ಮಾರಾಧಕನಾಗಿ,
ಮರ್ತ್ಯಕ್ಕೆ ಪ್ರತಿಕೈಲಾಸವೆಂಬ ಕಲ್ಯಾಣಮಂ ಮಾಡಿ,
ತನ್ನ ಪರೀಕ್ಷೆಗೆ ಬಿಜ್ಜಳನೆಂಬ ಒರೆಗಲ್ಲ ಮಾಡಿ,
ಆ ಸದ್ಭಕ್ತಿ ಬಿನ್ನ[ಹ]ವನು ಒರೆದೊರೆದು ನೋಡುವ
ಕೊಂಡೆಯ ಮಂಚಣ್ಣಗಳ ಪುಟ್ಟಿಸಿದ ಬಸವಣ್ಣ.
ಕಪ್ಪಡಿಯ ಸಂಗಯ್ಯದೇವರ ಸ್ವಹಸ್ತದಿಂದಲುಪದೇಶಮಂ ಪಡೆದು

ಸರ್ವಾಚಾರಸಂಪನ್ನನಾಗಿ ಇರುತ್ತಿರೆ,
ಶಿವನಟ್ಟಿದ ನಿರೂಪಮಂ ಓದಿ, ಅರವತ್ತುಕೋಟಿ ವಸ್ತುವಂ ತೆಗೆಸಿ,
ಬಿಜ್ಜಳಂಗೆ ದೃಷ್ಟಮಂ ತೋರಿ,
ಶಿರಪ್ರಧಾನನಾಗಿ, ಶಿವಾಚಾರ ಶಿರೋಮಣಿಯಾಗಿ,
ಏಳುನೂರಯೆಪ್ಪತ್ತು ಅಮರಗಣಂಗಳಿಗೆ ಪ್ರಥಮದಂಡನಾಯಕನಾಗಿ,
ಗುರುಲಿಂಗಜಂಗಮಕ್ಕೆ ತನುಮನಧನವಂ ನಿವೇದಿಸಿ,
ಅನವರತ ಶಿವಗಣ ತಿಂಥಿಣಿಯೊಳು ಓಡಾಡುತ್ತಿಪ್ಪ ಆ ಬಸವಣ್ಣ,
ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮದ
ಪಾದೋದಕ ಪ್ರಸಾದದಲ್ಲಿ ನಿಯತನಾಗಿ,
ಅವರವರ ನೇಮದಿಚ್ಛೆಗಳು ಸಲಿಸಿ,
ಒಲಿದು ಮಾಡುವ ದಾಸೋಹದ ಪರಿಯೆಂತೆಂದಡೆ :
ಹಾಲನೇಮದವರು ಹನ್ನೆರಡುಸಾವಿರ.
ಘಟ್ಟಿವಾಲ ನೇಮದವರು ಹನ್ನೆರಡುಸಾವಿರ.
ಪಂಚಾಮೃತಗಳ ಒಲಿದು ಲಿಂಗಕ್ಕೆ ಸಲಿಸುವ ನೇಮದವರು
ಹನ್ನೆರಡುಸಾವಿರ.
ಕಟ್ಟುಮೊಸರ ನೇಮದವರು ಹನ್ನೆರಡುಸಾವಿರ.
ಘಟ್ಟಿದುಪ್ಪದ ನೇಮದವರು ಆರುಸಾವಿರ.
ತಿಳಿದುಪ್ಪದ ನೇಮದವರು ಆರುಸಾವಿರ.
ಚಿಲುಮೆಯಗ್ಘವಣಿಯ ನೇಮದವರು ಹನ್ನೆರಡುಸಾವಿರ.
ಪರಡಿ ಸಜ್ಜಿಗೆಯ ನೇಮದವರು ಹನ್ನೆರಡುಸಾವಿರ
ಕಟ್ಟುಮಂಡಗೆಯ ನೇಮದವರು ಹನ್ನೆರಡುಸಾವಿರ.
ಎಣ್ಣೆಹೂರಿಗೆಯ ನೇಮದವರು ಹನ್ನೆರಡುಸಾವಿರ.
ವಡೆ ಘಾರಿಗೆಯ ನೇಮದವರು ಹನ್ನೆರಡುಸಾವಿರ.
ಹಾಲುಂಡೆ ಲಡ್ಡುಗೆಯ ನೇಮದವರು ಹನ್ನೆರಡುಸಾವಿರ.
ತವರಾಜ ಸಕ್ಕರೆಯ ನೇಮದವರು ಹನ್ನೆರಡುಸಾವಿರ.
ಷಡುರಸಾಯನದ ನೇಮದವರು ಹನ್ನೆರಡುಸಾವಿರ.
ದ್ರಾಕ್ಷೆ, ಮಾವು, ಖರ್ಜೂರ, ಹಲಸು, ದಾಳಿಂಬ ಇಕ್ಷುದಂಡ ಕದಳಿ
ಮೊದಲಾದ ಫಲದ್ರವ್ಯಂಗಳ ನೇಮದವರು ಹನ್ನೆರಡುಸಾವಿರ.
ಸಪ್ಪೆಯ ನೇಮದವರು ಹನ್ನೆರಡುಸಾವಿರ.
ಸರ್ವದ್ರವ್ಯಂಗಳ ನೇಮದವರು ಹನ್ನೆರಡುಸಾವಿರ.
ಸಮಯಾಚಾರ ಸಹಿತ ಲಿಂಗಾರ್ಚನೆ ಮಾಡುವ ನಿತ್ಯನೇಮಿಗಳು
ಹದಿನಾರುಸಾವಿರ.

ಇಂತು ಎಡೆಬಿಡುವಿಲ್ಲದೆ ಲಿಂಗಾರ್ಚನೆಯ ಮಾಡುವ ಜಂಗಮ
ಲಕ್ಷದ ಮೇಲೆ ತೊಂಬತ್ತಾರು ಸಾವಿರ.
ಆ ಬಸವಣ್ಣನ ಸಮಯಾಚಾರದಲ್ಲಿ ಕುಳ್ಳಿರ್ದು,
ಲಿಂಗಾರ್ಚನೆಯ ಮಾಡುವ ಸಮಯಾಚಾರಿಗಳು ಮೂವತ್ತಾರು ಸಾವಿರ.
ಅಂತು ಎರಡುಲಕ್ಷ ಮೂವತ್ತೆರಡು ಸಾವಿರ ಶಿವಗಣತಿಂಥಿಣಿಗೆ
ಒಲಿದು ದಾಸೋಹಮಂ ಮಾಡುತ್ತ,
ಪ್ರಸಾದ ಪಾದೋದಕದೊಳೋಲಾಡುತ್ತ,
ಸುಖಸಂಕಥಾವಿನೋದದಿಂದ ಭಕ್ತಿಸಾಮ್ರಾಜ್ಯಂಗೆಯ್ಯುತ್ತಿರಲು,
ಶಿವಭಕ್ತಿಕುಲಕತಿಲಕ ಶಿವಭಕ್ತಿ ಶಿರೋಮಣಿಯೆಂಬ
ಚೆನ್ನಬಸವಣ್ಣನವತರಿಸಿ
ಶೈವಮಾರ್ಗಮಂ ಬಿಡಿಸಿ, ಪ್ರಾಣಲಿಂಗ ಸಂಬಂಧಮಂ ತೋರಿಸಿ,
ಸರ್ವಾಂಗ ಶಿವಲಿಂಗ ಪ್ರಾಣಪ್ರಸಾದ ಭೋಗೋಪಭೋಗದ
ಭೇದಮಂ ತೋರಿಸಿ,
ದಾಸೋಹದ ನಿರ್ಣಯಮಂ ಬಣ್ಣವಿಟ್ಟು, ಬೆಳಗಿ ತೋರಿ,
ಪಾದೋದಕ ಪ್ರಸಾದಮಂ ಕೊಳ ಕಲಿಸಿ,
ಗುರುಲಿಂಗಜಂಗಮದ ಘನಮಂ ತೋರಿಸಿ,
ಶರಣಸತಿ ಲಿಂಗಪತಿಯೆಂಬುದಂ ಸಂಬಂಧಿಸಿ ತೋರಿ,
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯನೆಂಬ
ಷಡುಸ್ಥಲಮಂ ಸರ್ವಾಂಗದೊಳು ಪ್ರತಿಷ್ಠಿಸಿ ತೋರಿ ಸಲಹಿದ
ಚೆನ್ನಬಸವಣ್ಣನ ತನ್ನಲ್ಲಿ ಇಂಬಿಟ್ಟುಕೊಂಡು,
ಅಚ್ಚಪ್ರಸಾದಿಯಾಗಿ ಸತ್ಯಪ್ರಸಾದಿಯಾಗಿ ಸಮಯಪ್ರಸಾದಿಯಾಗಿ,
ಸಂತೋಷಪ್ರಸಾದಿಯಾಗಿ ಸರ್ವಾಂಗಪ್ರಸಾದಿಯಾಗಿ,
ಸಮರಪ್ರಸಾದಿಯಾಗಿ, ನಿರ್ಣಯದಲ್ಲಿ ನಿಷ್ಪನ್ನನಾಗಿ,
ನಿಜದಲ್ಲಿ ನಿವಾಸಿಯಾಗಿ, ನಿರಾಳಕ್ಕೆ ನಿರಾಳನಾಗಿ,
ಘನದಲ್ಲಿ ಅಗಮ್ಯನಾಗಿ, ಅಖಂಡ ಪರಿಪೂರ್ಣನಾಗಿ,
ಉಪಮೆಗೆ ಅನುಪಮನಾಗಿ, ವಾಙ್ಮನಕ್ಕಗೋಚರನಾಗಿ,
ಭಾವ ನಿರ್ಭಾವವೆಂಬ ಬಗೆಯ ಬಣ್ಣಕ್ಕೆ ಅತ್ತತ್ತಲೆಂದೆನಿಸಿ
ನಿಃಶೂನ್ಯನೆಂದೆನಿಸಿಪ್ಪ ಸಂಗನಬಸವಣ್ಣನ
ತೊತ್ತಿನ ತೊತ್ತಿನ ಮರುದೊತ್ತಿನ ಮಗ ನಾನು ಕಾಣಾ ಪ್ರಭುವೆ,
ಕಲಿದೇವರದೇವ. ॥ ೧೩೨ ॥

೫೭೦

ಕೆಸರಲ್ಲಿ ಬಿದ್ದ ಪಶುವಿನ ದೇಹವ ತೊಳೆವರಲ್ಲದೆ,
ಲೋಕದೊಳಗೆ ಗಂಜಳದೊಳಗಣ ಹಂದಿಯ ದೇಹವನಾರೂ ತೊಳೆಯರು.
ಗುರುಕಾರುಣ್ಯವುಳ್ಳ ಭಕ್ತರ ನಡೆವ ಗುಣದಲ್ಲಿ
ಎಡಹಿದ ಶಬ್ದಕ್ಕೆ ಪ್ರಾಯಶ್ಚಿತವಂ ಕೊಟ್ಟು,
ವಿಭೂತಿಯನಿಟ್ಟು, ಒಡಗೂಡಿಕೊಂಡು ನಡೆಸುವದೆ ಸದಾಚಾರ.
ಗುರುಚರಲಿಂಗವನರಿಯದ ದುರಾಚಾರಿಗಳಿಗೆ ಪ್ರಾಯಶ್ಚಿತವಂ ಕೊಟ್ಟು,
ವಿಭೂತಿಯನಿಟ್ಟು, ಒಡಗೂಡಿಕೊಂಡ ತೆರನೆಂತೆಂದಡೆ,
ಶೂಕರನ ದೇಹವ ತೊಳೆವಡೆ,
ಕೂಡೆ ಪಾಕುಳದೊಳಗೆ ಹೊರಳಿದ ತೆರನಾಯಿತ್ತೆಂದ ಕಲಿದೇವಯ್ಯ. ||೧೩೩||

೫೭೧

ಕೊಂಬನೂದುವ ಹೊಲೆಯಂಗೆ
ಕುಂಕುಮ ಹಣೆಯಲ್ಲಲ್ಲದೆ ಶ್ರೀವಿಭೂತಿ ಒಪ್ಪುವುದೆ?
ಲಿಂಗಲಾಂಛನವ ತೊಟ್ಟು, ಗುರೂಪದೇಶವ ಹೇಳಿ,
ನೊಸಲಲ್ಲಿ ವಿಭೂತಿಪಟ್ಟವ ಕಟ್ಟಿದ ಬಳಿಕ,
ಮರಳಿ ಗುರುನಿಂದಕನಾಗಿ,
ಹಣೆಯಲ್ಲಿ ಕುಂಕುಮಾದಿ ತಿಲಕವ ಕೊಂಡಡವನಾ
ಕೊಂಬಿನ ಹೊಲೆಯಂಗಿಂದ ಕನಿಷ್ಠವೆಂದ, ಕಲಿದೇವಯ್ಯ. ||೧೩೪||

೫೭೨

ಖೇಚರರಾಗಲಿ, ಭೂಚರರಾಗಿಲಿ,
ಪುರಹರರಾಗಲಿ, ಮಧ್ಯಸ್ಥರಾಗಲಿ,
ಪವನನುಂಡುಂಡು ದಣಿಯದವರಾಗಲಿ,
ಅಗ್ನಿ ಪರಿಹರರಾಗಲಿ,
ಖೇಚರರೊಳು ಬಸವಾಜ್ಞೆ, ಭೂಚರರೊಳು ಬಸವಾಜ್ಞೆ.
ಪುರಹರರೊಳು ಬಸವನ ಮಹಾರತಿ.
ಮಧ್ಯಸ್ಥರೊಳು ಬಸವನೇಕಾಂತವಾಸಿ.
ಪವನದೊಳು ಬಸವ ಹೇಳಿತ್ತ ಕೇಳುವೆ.
ಅಗ್ನಿಯೊಳು ಬಸವಂಗೆ ದಾಸೋಹವ ಮಾಡುವೆ.
ಎನ್ನನೀ ಪರಿಯಲ್ಲಿ ಸಲಹಿದಾತ ಬಸವಣ್ಣ ಕಾಣಾ
ಕಲಿದೇವರದೇವಯ್ಯಾ. || ೧೩೫ ||

೫೭೩

ಗಂಜಲದೊಳಗಣ ಪಂಡಿತಾರೂಢನು
ಗಂಗೆಯ ಮಿಂದಡೆ ಹಿಂಗಿತೆ ಅದರ ಪೂರ್ವಾಶ್ರಯ?
ಜಂಗುಳದೈವ ಜಾ[ತಿ]ಸೂತಕವಳಿಯಬೇಕೆಂದು,
ಗುರು ತೋರಿದ ಅಷ್ಟವಿಧಾರ್ಚನೆ ಕ್ರಮಂಗಳ ಆದಿಯಲ್ಲಿ
ಮನವು ಸುಸಂಗಿಯಾಗದಿರ್ದಡೆ,
ಸೂಕರ ಗಂಗೆಯ ಮಿಂದಂತಾಯಿತ್ತೆಂದ
ಕಲಿದೇವರದೇವಯ್ಯ. || ೧೩೬ ||

೫೭೪

ಗಂಡನೆಂಜಲಿಗೆ ಹೇಸುವಳು ಮಿಂಡನ ತಂಬುಲ ತಿಂಬ ತೆರನಂತೆ,
ಗುರುವಿನಲ್ಲಿ ಉಪದೇಶ ಪಡೆದು ಪ್ರಸಾದಕ್ಕೆ ಸೂತಕವ ಮಾಡುವ
ಪಂಚಮಹಾಪಾತಕರು ನೀವು ಕೇಳಿ ಭೋ.
ಅಂಡದೊಳಗೆ ಹುಟ್ಟಿದ ಉತ್ಪತ್ತಿಯೆಲ್ಲವೂ ಗುರುವಿಂದಾಯಿತ್ತು.
ಮತ್ತೆ ಮಿಂಡ ಮೈಲಾರ ಬೀರ ಭೈರವ ಯಕ್ಕನಾತಿ
ಕುಕ್ಕನೂರ ಬಸದಿ ಕೇತಧೂಳನೆಂಬ ಕಾಳುದೈವಕ್ಕೆರಗಿ,
ಶಿವಭಕ್ತನೆನಿಸಿಕೊಂಬ ಚಂಡಿನಾಯಿಗಳ ಕಂಡು,
ಎನ್ನ ಮನ ಹೇಸಿತ್ತು ಕಾಣಾ, ಕಲಿದೇವರದೇವಾ. || ೧೩೭||

೫೭೫

ಗಣಂಗಳು, ನಿತ್ಯಲಿಂಗಾರ್ಚನೆ ಮಾಡುವ ಗಣಂಗಳು.
ನಿಜಲಿಂಗಾರ್ಚನೆ ಮಾಡುವ ಗಣಂಗಳು.
ಘನಲಿಂಗಾರ್ಚನೆ ಮಾಡುವ ಗಣಂಗಳು.
ಸ್ವಯಲಿಂಗಾರ್ಚನೆ ಮಾಡುವ ಗಣಂಗಳು.
ಇಂತಿವೆಲ್ಲ ಭಕ್ತಿಯನು
ನಿತ್ಯಸಿಂಹಾಸನದ ಮೇಲೆ ಕುಳಿತು ಮಾಡುವಾಗ,
ಅವರ ಪ್ರಸಾದದ ರುಚಿಯೊಳಗೋಲಾಡುತಿರ್ದೆನು ಕಾಣಾ
ಕಲಿದೇವಯ್ಯಾ. || ೧೩೮ ||

೫೭೬

ಗಮನಾದಿಗಳಿಗೆ ಸ್ಥಾವರವುಂಟು.
ಸ್ಥಾವರವುಳ್ಳಲ್ಲಿ ಭೋಗವುಂಟು.
ಭೋಗವುಳ್ಳಲ್ಲಿ ಜನನವುಂಟು.

ಜನನವುಳ್ಳಲ್ಲಿ ಮರಣವುಂಟು.
ಲಿಂಗ ಸುಸಂಗಿಗಳು ಇದ ಕೇಳಲಾಗದು.
ಸದ್ಗುರುಕಾರುಣ್ಯವುಳ್ಳಲ್ಲಿಯೆ ನಡೆವುದು.
ಸದ್ಗುರುಕಾರುಣ್ಯವುಳ್ಳಲ್ಲಿಯೆ ಅನುಭಾವವ ಮಾಡುವುದು.
ಅಂತಪ್ಪ ಮಹಾಭಕ್ತ ಬಸವಣ್ಣ ಕಾಣಾ ಕಲಿದೇವಯ್ಯ. || ೧೩೯ ||

೫೭೭

ಗರಿಯ ಕಟ್ಟಿದ ಕೋಲು ಗುರಿಯ ತಾಗಬಲ್ಲುದೆ ?
ಗುರುಲಿಂಗ ಜಂಗಮದ ಪಾದತೀರ್ಥ ಪ್ರಸಾದವನರಿಯದೆ,
ಪರಮನ ಕಂಡೆನೆಂಬ ದುರಾಚಾರಿಗಳ ಮುಖವ
ನೋಡಲಾಗದೆಂದಾತ, ನಮ್ಮ ಕಲಿದೇವರದೇವಯ್ಯ. || ೧೪೦ ||

೫೭೮

ಗೀತ ಪಾತ್ರ ಬೈರೂಪ ಸೂಳೆ ಡೊಂಬಿತಿ
ತಾಳವಂಡಿಗಿ ಸೂಕ (?)ವೈಶಿಕದ ಆಳಾಪಕ್ಕೆ
ಮರುಳಾಗಿ ತಲೆದೂಗುತಿರ್ಪರು,
ಸರ್ಪನು ಸ್ವರವನು ತಾ ಕೇಳಿದಂತೆ.
ಗೋಕ್ಷತ್ರಿಯಧಿಪ ಕಾಕ ಪುರಾಣ (?)
ಪರಧನ ಪರಸತಿ ಗೌತಮ ದುರ್ಯೋಧನ
ಕೀಚಕ ರಾವಳ ಮೊದಲಾಗಿ
ಸತ್ತುಹೋದವರ ಸಂಗತಿಯ ಕೇಳಿದಡೆ,
ಕೆಟ್ಟ ಮೈ ಸುವರ್ಣವಾಯಿತೆಂಬ
ಭ್ರಷ್ಟನಾಯಿನುಡಿಯ ಕೇಳಿ ಕೃತಾರ್ಥರಾದೆವೆಂಬ
ಮತಿಗೇಡಿ ನಾಯಿಗಳಿಗೆ
ಶಿವಗತಿ, ಧರ್ಮಮಾರ್ಗ ಹೇಳಿದವರಿಗೆ
ಸತ್ತ ಹೆಣದ ಮುಂದೆ ಪಂಚಮಹಾವಾದ್ಯವ
ಬಾರಿಸಿದ ತೆರನಂತಾಯಿತ್ತು,
ಕಲಿದೇವರದೇವಯ್ಯಾ. || ೧೪೧ ||

೫೭೯

ಗುಂಗುರಿಗೆ ಸುಂಡಿಲು ಹುಟ್ಟಿದಡೆ ಆನೆಯಾಗಬಲ್ಲುದೆ ?
ನೊಣಪಿಂಗೆ ಪಕ್ಕ ಹುಟ್ಟಿದಡೆ ಶರಭನಾಗಬಲ್ಲುದೆ ?
ಕಾಗೆ ಕೋಗಿಲೆಯು ಒಂದೆಯಾದಡೆ

ಕೋಗಿಲೆಯಂತೆ ಸ್ವರಗೆಯ್ಯಬಲ್ಲುದೆ ?
ಶ್ವಾನನ ನಡು ಸಣ್ಣನಾದಡೆ ಸಿಂಹನಾಗಬಲ್ಲುದೆ ?
ಅಂಗದ ಮೇಲೆ ವಿಭೂತಿ ರುದ್ರಾಕ್ಷಿ ಶಿವಲಿಂಗವಿದ್ದಡೇನು
ನಿಮ್ಮ ನಂಬಿದ ಸತ್ಯದಾಚಾರವುಳ್ಳ ಏಕಲಿಂಗನಿಷ್ಠಾವಂತರಿಗೆ
ಸರಿಯೆನ್ನಬಹುದೆ ಅಯ್ಯಾ ?
ಇಂಥ ಗುರುಲಿಂಗಜಂಗಮವ ನೆರೆ ನಂಬದೆ,
ಪಾದತೀರ್ಥ ಪ್ರಸಾದದಿರವನರಿಯದೆ,
ಬರಿದೆ ಭಕ್ತರೆಂದು ಬೊಗಳುವ ದುರಾಚಾರಿಯ ತೋರದಿರಯ್ಯಾ
ಕಲಿದೇವರದೇವಾ. ‖ ೧೪೨ ‖

**೫೮೦**

ಗುರುಕರಜಾತರಾಗಿ ಅಂಗದ ಮೇಲೆ ಲಿಂಗಸಾಹಿತ್ಯವಾದ ಸದ್ಭಕ್ತಂಗೆ,
ಆ ಲಿಂಗವೆ ಪತಿ, ತಾನೆ ಸತಿಯಾಗಿರಲು ತನಗೆ ಬೇರೆ ಸತಿಯುಂಟೆ ?
ಗುರುಕರದಲ್ಲಿ ಉದಯವಾಗಿ, ಅಂಗದ ಮೇಲೆ ಲಿಂಗವ ಧರಿಸಿದ ಲಿಂಗಾಂಗನೆಗೆ,
ಆ ಲಿಂಗವೆ ಪತಿ, ತಾನೆ ಸತಿಯಾಗಿರಲು ಆಕೆಗೆ ಬೇರೆ ಪತಿಯುಂಟೆ ?
ಇದು ಕಾರಣ, ಲಿಂಗವೆ ಪತಿ, ತಾವಿಬ್ಬರೂ ಭಕ್ತಿಸತಿಗಳಾಗಿ,
ಲಿಂಗಸೇವೆಯ ಮಾಡಿ, ಜಂಗಮದಾಸೋಹಿಗಳಾಗಿ,
ಲಿಂಗಜಂಗಮಪ್ರಸಾದಸುಖಿಗಳಾಗಿರಿಯೆಂದು
ಶ್ರೀಗುರು ವಿಭೂತಿಯ ಪಟ್ಟವಂ ಕಟ್ಟಿ, ಉಭಯಮಂ ಕೈಗೂಡಿಸಿ,
ಏಕಪ್ರಸಾದವನೂಡಿ, ಭಕ್ತಿ ವಿವಾಹವ ಮಾಡಿದ ನೋಡಾ.
ಇಂತಪ್ಪ ಭಕ್ತಿ ವಿವಾಹದ ಕ್ರಮವನ್ನರಿಯದೆ,
ಮತ್ತೆ ಬೇರೆ ಜಗದ್ವ್ಯವಹಾರವನುಳ್ಳ ಪಂಚಾಂಗಸೂತಕ
ಪಾತಕದ ಮೊತ್ತದ ಮದುವೆಗೆ ಹರೆಯ ಹೊಯಿಸಿ,
ಹಸೆಯಂ ಸೂಸಿ, ತೊಂಡಿಲು ಬಾಸಿಂಗವೆಂದು ಕಟ್ಟಿ,
ಧಾರೆಯನೆರೆದು ಭೂಮವೆಂದುಣಿಸಿ,
ಹೊಲೆಸೂತಕದ ಮದುವೆಯ ಮಾಡುವ ಪಾತಕರ
ಒಡಗೂಡಿಕೊಂಡು ನಡೆವವರು, ಗುರಚರಭಕ್ತರಲ್ಲ.
ಅವರಿಗೆ ಪ್ರಸಾದವಿಲ್ಲ, ಪ್ರಸಾದವಿಲ್ಲವಾಗಿ ಮುಕ್ತಿಯಿಲ್ಲ.
ಮುಕ್ತಿಯಿಲ್ಲದವಂಗೆ ನರಕ ತಪ್ಪದು ಕಾಣಾ, ಕಲಿದೇವಯ್ಯಾ. ‖ ೧೪೩ ‖

**೫೮೧**

ಗುರು ಕೊಟ್ಟ ಲಿಂಗ ತನ್ನ ಕರಸ್ಥಲದಲ್ಲಿರುತಿರಲು,
ಧರೆಯ ಮೇಲೆ ಪ್ರತಿಷ್ಠಿಸಿದ ಭವಿಶೈವದೈವ,

ತೀರ್ಥಕ್ಷೇತ್ರಂಗಳಿಗೆ ಹರಿದುಹೋಗುವ ಪರವಾದಿಗಳಿಗೆ
ಅಘೋರನರಕ ತಪ್ಪದೆಂದ, ಕಲಿದೇವಯ್ಯ. || ೧೪೪ ||

೫೮೨

ಗುರುಪ್ರಸಾದ, ಲಿಂಗಪ್ರಸಾದ, ಜಂಗಮಪ್ರಸಾದ
ಈ ತ್ರಿವಿಧ ಪ್ರಸಾದವ ಕೊಂಡು,
ನಂಬದ ಸ್ವಯವಚನ ವಿರೋಧಿಗಳ ಮಾತು ಕೇಳಲಾಗದು.
ಕೇಳುವರು ಮಹಾಪಾತಕರು.
ಲಿಂಗವ ಮಾರಿಕೊಂಡುಂಬುವರು
ನರಕವ ತಿಂಬುವದ ಮಾಣ್ಬರೆ, ಕಲಿದೇವಯ್ಯಾ. || ೧೪೫ ||

೫೮೩

ಗುರುಪ್ರಸಾದಿಗಳಪೂರ್ವ, ಲಿಂಗಪ್ರಸಾದಿಗಳಪೂರ್ವ,
ಜಂಗಮಪ್ರಸಾದಿಗಳಪೂರ್ವ.
ಗುರುಪ್ರಸಾದಿಯಾದಡೆ ಗುರುವಿಟ್ಟ ತಿಟ್ಟದಲ್ಲಿರಬಲ್ಲಡೆ
ಆತ ಗುರುಪ್ರಸಾದಿ.
ಲಿಂಗಪ್ರಸಾದಿಯಾದಡೆ ಲಿಂಗಾರ್ಪಿತವಿಲ್ಲದೆ ಕೊಳ್ಳನಾಗಿ
ಆತ ಲಿಂಗಪ್ರಸಾದಿ.
ಜಂಗಮಪ್ರಸಾದಿಯಾದಡೆ ಮಗುಳ್ದರ್ಪಿಸಬೇಕು.
ಇಂತೀ ತ್ರಿವಿಧಪ್ರಸಾದದ ಮೂಲವ ನಮ್ಮ ಬಸವಣ್ಣ ಕಲಿಸಿದನಾಗಿ,
ನನಗೂ ನಿನಗೂ ಪ್ರಸಾದವೆ ಪ್ರಾಣವೆಂದು,
ಪ್ರಸಾದವ ಹಾರುತ್ತಿರ್ದೆನಯ್ಯಾ, ಕಲಿದೇವಯ್ಯ. || ೧೪೬ ||

೫೮೪

ಗುರುಪೂಜೆಯನರಿದೆನೆಂದು ಲಿಂಗಪೂಜೆಯ ಬಿಡಲಾಗದು.
ಲಿಂಗಪೂಜೆಯನರಿದೆನೆಂದು ಜಂಗಮಪೂಜೆಯ ಮರೆಯಲಾಗದು.
ಜಂಗಮಪೂಜೆಯನರಿದೆನೆಂದು ಶರಣಸಂಗವ ಮರೆಯಲಾಗದು.
ಇದು ಕಾರಣ, ಶರಣಸಂಗದ ಸಮ್ಯಗ್ಜ್ಞಾನದಲಲ್ಲದೆ
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು,
ಹೋಹ ಬಾರಾ ಚಂದಯ್ಯಾ. || ೧೪೭ ||

೫೮೫

ಗುರುಭಕ್ತಿಯಲ್ಲಿಪ್ಪ, ಲಿಂಗಭಕ್ತಿಯಲ್ಲಿಪ್ಪ,
ಜಂಗಮಭಕ್ತಿಯಲ್ಲಿಪ್ಪ, ಪ್ರಸಾದದಲ್ಲಿಪ್ಪ,

ಜಂಗಮಕ್ಕೆ ಮಾಡುವಲ್ಲಿಪ್ಪ, ಮಾಡಿಸಿಕೊಂಬಲ್ಲಿಪ್ಪ,
ತನು ಮನ ಧನ ಒಂದಾಗಿ ನಿವೇದಿಸುವಲ್ಲಿಪ್ಪ
ಸಂಪೂರ್ಣಾತ್ಮನೆಂದು ನಿತ್ಯಂಗೆ ನೀವು ಕಾರುಣ್ಯವ ಮಾಡಿದಿರಿ.
ನಿಮ್ಮ ಕಾರುಣ್ಯಕಟಾಕ್ಷದಲ್ಲಿ ಬಸವಮ್ಮನಲ್ಲದೆ ಮಾಡುವರಿಲ್ಲ.
ಆ ಬಸವಣ್ಣ ಹೇಳಿತ್ತ ಮೀರೆ ಕಾಣಾ, ಕಲಿದೇವರದೇವ. || ೧೪೮ ||

**೫೮೬**

ಗುರುಮಾರ್ಗಾಚಾರ ಷಟ್ಸ್ಥಲಮಾರ್ಗವಿಡಿದ ಪ್ರಸಾದಿಗಳು
ಲಘುಶಂಕೆಯ ಮಾಡಿದಡೂ ಸರಿಯೆ,
ಭವಿಜನ್ಮಾತ್ಮರ ಕೂಡೆ ಮಾತನಾಡಿದಡೂ ಸರಿಯೆ,
ಗುರುಪಾದೋದಕ[ದಿಂದಾದಡೂ ಸರಿಯೆ],
ಲಿಂಗಪಾದೋದಕದಿಂದಾದಡೂ ಸರಿಯೆ,
ಆರು ವೇಳೆ ಆಚಮನ ಮಾಡುವದು.
ಇದ ಮೀರಿ, ಜಿಹ್ವೆಯಲ್ಲಿ ಬರುವ ಸತ್ಯೋದಕದ ಗುಟುಕ ಕೊಳಲಾಗದು.
ಬಹಿರ್ಭೂಮಿಗೆ ಹೋದ ಬಳಿಕ,
ಸ್ನಾನವಿಲ್ಲದೆ ಲಿಂಗಾರ್ಚನೆ, ಲಿಂಗಾರ್ಪಣಕ್ರಿಯೆಗಳನಾಚರಿಸಲಾಗದು.
ಮೀರಿ ಮಾಡಿದಡೆ, ಭೂತಪ್ರಾಣಿಯೆಂಬೆನಯ್ಯಾ, ಕಲಿದೇವರದೇವ. || ೧೪೯ ||

**೫೮೭**

ಗುರುಮಾರ್ಗಾಚಾರ ಸತ್ಕ್ರಿಯಾಭಕ್ತಿಜ್ಞಾನವೈರಾಗ್ಯ
ಷಟ್ಸ್ಥಲಮಾರ್ಗವಿಡಿದು
ಆಚರಿಸುವ ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿ
ಸ್ವಯಚರಪರಮೂರ್ತಿಗಳು
ಮೊದಲಾಗಿ ಲಿಂಗಾರ್ಚನೆಯ ವೇಳೆ ತ್ರಿಕಾಲಂಗಳಲ್ಲಿ
ದಂತಪಂಜ್ತಿಚೇತನ ಪರಿಯಂತರ
ಮಧುರ ಒಗರು ಖಾರ ಆಮ್ಲ ಕಹಿಯುಕ್ತವಾದ ಕಾಷ್ಠದೊಳಗೆ
ಅರ್ಪಿತಕ್ಕೆ ಅಯೋಗ್ಯವಾದುದನುಳಿದು, ಯೋಗ್ಯವಾದ ಕಾಷ್ಠವ
ದ್ವಾದಶಾಂಗುಲವಾದಡೂ ಸರಿಯೆ, ಅಷ್ಟಾಂಗುಲವಾದಡೂ ಸರಿಯೆ,
ಮೀರಿದಡೆ ಷಡಂಗುಲದಿಂದಾಗಲಿ ದಂತಧಾವನ ಕ್ರಿಯೆಗಳ ಮಾಡುವದು.
ದಂತಪಂಜ್ತಿಯ ಚೇತನ ತಪ್ಪಿದಲ್ಲಿ
ಪರ್ಣದಿಂದಾಗಲಿ, ಗುರುಪಾದೊದಕಮಿಶ್ರವಾದ ವಿಭೂತಿಯಿಂದಲಾ[ಗಲಿ]
ದಂತಪಂಜ್ತಿಯ ತೀಡಿ, ಮುಖಸ್ನಾನವ ಮಾಡಿ,

ಲಿಂಗಾರ್ಚನೆ ಲಿಂಗಾರ್ಪಣವ ಮಾಡಬೇಕಲ್ಲದೆ
ಇಂತು ಗುರುವಾಕ್ಯವ ಮೀರಿ, ಸಂಸಾರಲಂಪಟದಿಂದ ಹಾಂಗೆ ಭುಂಜಿಸುವಾತಂಗೆ
ಪ್ರಸಾದಿಸ್ಥಲ ಮೊದಲು, ಪರಸ್ಥಲ ಕಡೆಯಾಗಿ
ಪಿಂಡಾದಿ ಜ್ಞಾನಶೂನ್ಯಸ್ಥಲಕ್ಕೆ ಹೊರಗು ನೋಡ, ಕಲಿದೇವರದೇವಾ. || ೧೫೦ ||

೫೮೮

ಗುರು ಮೂರು, ಲಿಂಗ ಆರು,
ಜಂಗಮವಿಪ್ಪತ್ತೈದರ ಲಾವಣಿಗೆಗೆ ಸಂದು
ಹಿಂದೇನಾಯಿತ್ತು ?
ಮುಂದೆ ಹುಟ್ಟಿ, ಮೆಟ್ಟಿ ನಿಲ್ಲು.
ಕಲಿದೇವಯ್ಯ ಕರುಣಿಸುವನು. || ೧೫೧ ||

೫೮೯

ಗುರುಲಿಂಗಜಂಗಮದ ಪಾದತೀರ್ಥ ಪ್ರಸಾದದಲ್ಲಿ
ವಿಶ್ವಾಸ ಸಮನಿಸಿದ ಕಾರಣ,
ಶಾಶ್ವತಪದವಿಯ ಪಡೆದರು ಪೂರ್ವಪುರಾತನರು.
ಆ ಸದಾಚಾರದ ಹೊಲಬನರಿಯದೆ
ದೂಷಕ ನಿಂದಕ ಪರವಾದಿಗಳು ನಾನು ಘನ, ತಾನು ಘನವೆಂದು
ದಾಸಿ, ವೇಸಿ, ಹೊಲತಿ, ದೊಂಬತಿ, ಕಬ್ಬಿಲಿಗಿತಿ, ಅಗಸಗಿತಿ, ಬೇಡತಿಯರ
ಅಧರರಸವ ಸೇವಿಸುವ ದುರಾಚಾರಿಯರು,
ಗುರುಲಿಂಗಜಂಗಮಪ್ರಸಾದವನೆಂಜಲೆಂದು
ಹೊಲೆದೈವದೆಂಜಲ ಭುಂಜಿಸಿ, ಮತ್ತೆ ತಮ್ಮ ಕುಲವ ಮೆರೆವ
ಕುಜಾತಿಗಳ ನುಡಿಯ ಕೇಳಲಾಗದೆಂದ, ಕಲಿದೇವಯ್ಯ. || ೧೫೨ ||

೫೯೦

ಗುರುವಾಗಿ ಉಪದೇಶವ ತೋರಿದನೀತ.
ಲಿಂಗವಾಗಿ ಮನವನಿಂಬುಗೊಂಡಾತನೀತ.
ಜಂಗಮವಾಗಿ ಅರ್ಥಪ್ರಾಣ ಅಭಿಮಾನದ ದರ್ಪವ ಕೆಡಿಸಿದನೀತ.
ಪ್ರಸಾದವಾಗಿ ಎನ್ನ ಸರ್ವಾಂಗವನವಗ್ರಹಿಸಿದಾತನೀತ.
ಪಾದೋದಕವಾಗಿ ಎನ್ನ ಒಳಹೊರಗೆ ತೊಳದಾತನೀತ.
ಕಲಿದೇವರದೇವಾ. ಬಸವಣ್ಣ ತೋರಿದನಾಗಿ
ಪ್ರಭುವೆಂಬ ಮಹಿಮನ ಸಂಗದಿಂದ ಬದುಕಿದೆನು. || ೧೫೩ ||

೫೯೧

ಗುರುವಾದಡೂ ಬಸವಣ್ಣನಿಲ್ಲದೆ ಗುರುವಿಲ್ಲ.
ಲಿಂಗವಾದಡೂ ಬಸವಣ್ಣನಿಲ್ಲದೆ ಲಿಂಗವಿಲ್ಲ.
ಜಂಗಮವಾದಡೂ ಬಸವಣ್ಣನಿಲ್ಲದೆ ಜಂಗಮವಿಲ್ಲ.
ಪ್ರಸಾದವಾದಡೂ ಬಸವಣ್ಣನಿಲ್ಲದೆ ಪ್ರಸಾದವಿಲ್ಲ.
ಅನುಭಾವವಾದಡೂ ಬಸವಣ್ಣನಿಲ್ಲದೆ ನುಡಿಯಲಾಗದು.
ಇಂತು ಸಂಗಿಸುವಲ್ಲಿ, ನಿಜಸಂಗಿಸುವಲ್ಲಿ, ಸುಸಂಗಿಸುವಲ್ಲಿ,
ಮಹಾಸಂಗಿಸುವಲ್ಲಿ, ಪ್ರಸಾದ ಸಂಗಿಸುವಲ್ಲಿ,
ಕಲಿದೇವಾ ನಿಮ್ಮ ಶರಣ ಬಸವಣ್ಣನ ನಿಲುವು. || ೧೫೪ ||

೫೯೨

ಗುರುವಾದಡೂ ಲಿಂಗವ ಪೂಜಿಸಬೇಕು.
ಲಿಂಗವಾದಡೂ ದೇವತ್ವವಿರಬೇಕು.
ಜಂಗಮವಾದಡೂ ಲಿಂಗವಿಲ್ಲದೆ ಪ್ರಮಾಣವಲ್ಲ.
ಆದಿಗೆ ಆಧಾರವಿಲ್ಲದೆ ಜಗವೇನೂ ಇಲ್ಲ.
ಅರಿದೆನೆಂದಡೂ ಅಂಗವೇ ಲಿಂಗವಾಗಿರಬೇಕು.
ಕಲಿದೇವರದೇವಯ್ಯನ ಅರಿವುದಕ್ಕೆ ಇದೇ ಮಾರ್ಗ, ಚಂದಯ್ಯ. || ೧೫೫ ||

೫೯೩

ಗುರುವಿಡಿದು ಲಿಂಗವ ಕಂಡೆ.
ಲಿಂಗವಿಡಿದು ಜಂಗಮವ ಕಂಡೆ.
ಜಂಗಮವಿಡಿದು ಪಾದತೀರ್ಥ ಪ್ರಸಾದವ ಕಂಡೆ.
ಪಾದತೀರ್ಥಪ್ರಸಾದವಿಡಿದು ಪರವ ಕಂಡೆ.
ಇಂತಿವ ತೋರಿದ ಗುರುವಿನಾಜ್ಞೆಯ ಮೀರಿ ನಡೆವ
ದುರಾಚಾರಿಗಳ ಮುಖವ ನೋಡಲಾಗದೆಂದ, ಕಲಿದೇವಯ್ಯ. || ೧೫೬ ||

೫೯೪

ಗುರುಶಿಷ್ಯ ಸಂಬಂಧದಿರವ ಇನ್ನಾರು ಬಲ್ಲರು ?
ನೆರೆದ ನೆರವಿಗೆ ಹೇಳಲುಂಟೆ ಈ ಮಾತ ?
ಸ್ತ್ರೀಪುರುಷರ ಸ್ನೇಹಕೂಟವ ಮತ್ತೊಬ್ಬರಿಗೆ ಅರುಹಬಾರದು.
ಗುರುಶಿಷ್ಯ ಸಂಬಂಧವನಿನ್ನಾರು ಬಲ್ಲರು, ಕಲಿದೇವಯ್ಯ ? || ೧೫೭ ||

೫೯೫

ಗುರು ಸ್ವಾಯುತವಾಯಿತ್ತು, ಎಂಟುಭಾವ ಸ್ವಾಯುತವಾಯಿತ್ತು.
ಹದಿನಾರುತೆರನ ಭಕ್ತಿ ಸ್ವಾಯುತವಾಯಿತ್ತು.
ಅಷ್ಟವಿಧಾರ್ಚನೆ ಸ್ವಾಯುತವಾಯಿತ್ತು.
ತ್ರಿವಿಧದ ಅರಿವು ಸ್ವಾಯುತವಾಯಿತ್ತು.
ಮಹಾಲಿಂಗದ ನಿಲವು, ಮಹಾಜಂಗಮದ ನಿಜವು ಸ್ವಾಯುತವಾಯಿತ್ತು.
ಶುದ್ಧ ಪ್ರಸಾದ ತನು ಸ್ವಾಯುತವಾಯಿತ್ತು.
ಸಿದ್ಧಪ್ರಸಾದ ಚೈತನ್ಯ ಸ್ವಾಯುತವಾಯಿತ್ತು.
ಪ್ರಸಿದ್ಧಪ್ರಸಾದ ಮನ ಸ್ವಾಯುತವಾಯಿತ್ತು.
ವಾಮಭಾಗದಲ್ಲಿ ಮಹವು ಉದಯವಾಯಿತ್ತು.
ನಿಜಸ್ಥಾನದಲ್ಲಿ ನಿಂದಿತ್ತು, ಕ್ಷೀರಸ್ಥಾನದಲ್ಲಿ ಸಾರಾಯವಾಯಿತ್ತು.
ಅನುಭಾವದಲ್ಲಿ ಘನಾಗಮವೆನಿಸಿತ್ತು.
ಸ್ವಾನುಭಾವದಲ್ಲಿ ನಿಮ್ಮ ಬಸವಣ್ಣಂಗೆ ಶರಣೆಂದಿತ್ತು.
ನೆಮ್ಮುಗೆವಿಡಿದು ಬಸವಣ್ಣನ ಪ್ರಸಾದವ ಕೊಂಡಿತ್ತು.
ನಿಮ್ಮ ಬಸವಣ್ಣನ ಪ್ರಸಾದದಿಂದ ಇಂತಹ ಘನ ಸ್ವಾಯುತವಾಯಿತ್ತು.
ನೀವು ಬಸವಣ್ಣನಿಂದಾದಿರಾಗಿ,
ಬಸವಣ್ಣಂಗೆ ನಮೋ ನಮೋ ಎನುತಿರ್ದೆನು ಕಾಣಾ,
ಕಲಿದೇವರದೇವಾ. || ೧೫೮ ||

೫೯೬

ಗುರೂಪದೇಶವ ಕೇಳದವನೆ ನರಕಿ.
ಗುರುವ ಕಂಡು ಶಿರವೆರಗದವನೆ ನರಕಿ.
ಗುರು ಮುಟ್ಟು ಹೊಲೆಜನ್ಮವ ಕಳೆಯದವನೆ ನರಕಿ.
ಗುರುಪಾದದ ಪೂಜೆಯ ಮಾಡದವನೆ ನರಕಿ.
ಗುರುಪ್ರಸಾದದ ರುಚಿಯನರಿಯದವನೆ ನರಕಿ.
ಗುರುಲಿಂಗವ ಚರವೆನ್ನದವನೆ ನರಕಿ.
ಗುರುನಿಂದೆ ಹರನಿಂದೆ ಚರನಿಂದೆಯಾಡುವ
ದುರಾಚಾರಿಗಳ ಮನೆಯಲ್ಲಿ ಆಹಾರವ ಕೊಂಡಡೆ,
ಅಘೋರನರಕ ತಪ್ಪದೆಂದ, ಕಲಿದೇವಯ್ಯ. || ೧೫೯ ||

೫೯೭

ಗೋಳಕ ಮೂಲಕ ಮುಕ್ತಕ ದಾರುಕ ರುದ್ರಕ ಕರ್ಣಿಕ,
ಈ ಷಟ್‌ಶಕ್ತಿಗಳು ಈ ಪಟ್ಟಣದ ಭಕ್ತೆಯರು.

ಇವರ ಮನೆಯ ಜಂಗಮ ನಾನು.
ಇವರ ಗಂಡನಿಗಾನು ಒಕ್ಕುದನಿಕ್ಕುವೆನು.
ಇವರೆನಗೆ ತನು ಮನ ಧನವ ನಿವೇದಿಸುವರು.
ಇರ್ದುದ ವಂಚಿಸದೆ ನಿವೇದಿಸುವರು.
ನಾ ಸಹಿತ ಸರ್ವಲಿಂಗಾರ್ಚನೆಯ ಮಾಡುವರು.
ನಾ ಹಿಡಿದುದನೆ ಹಿಡಿವರು, ನಾ ಬಿಟ್ಟುದನೆ ಬಿಡುವರು.
ನಾ ಬಸವಣ್ಣನ ಮನೆಯ ಜಂಗಮವೆಂದು
ಏನ ಹೇಳಿತ್ತ ಕೇಳುವರು.
ನಾ ಮಹಾದ್ವಾರದಲ್ಲಿ ಬಂದೆನೆಂದಡೆ ಎನ್ನೊಡನೆ ಬಂದರು.
ಹಂಸದ್ವಾರದಲ್ಲಿ ಬಂದೆನೆಂದಡೆ ಎನ್ನೊಡನೆ ಬಂದರು.
ಪೂರ್ವದ್ವಾರ ಪಶ್ಚಿಮದ್ವಾರ ಉತ್ತರದ್ವಾರ ದಕ್ಷಿಣದ್ವಾರ
ಇಂತಿವರೊಳಗೆ ಎನ್ನೊಡನೊಡನೆ ಬಂದರು.
ಎನ್ನ ಪ್ರಸಾದವೆ ವಿಶ್ವಾಸವಾಗಿದ್ದರು.
ನಾನಿವರ ಮನೆಯ ಜಂಗಮವು ಕಾಣಾ, ಕಲಿದೇವಯ್ಯಾ. ॥ ೧೬೦ ॥

೫೯೮

ಘಟದೊಳಗೆ ತೋರುವ ಸೂರ್ಯನಂತೆ
ಎಲ್ಲರೊಳಗೆ, ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು.
ಇದ್ದರೇನು, ಸರ್ವರಿಗೆ ಸಾಧ್ಯವಲ್ಲ.
ಮುಟ್ಟಿ ಮುಟ್ಟದು ಅದು ಕೂಡುವಡೆ,
ಗುರುವಿಂದಲ್ಲದಾಗದು ಕಾಣಾ, ಕಲಿದೇವಾ. ॥ ೧೬೧ ॥

೫೯೯

ಚಂದ್ರ ತಾರಾ ಮಂಡಲಕ್ಕೆ ಒಂದೆರಡು ಯೋಜನಪ್ರಮಾಣು
ಹರಿವ ಕಂಗಳು, ಒಂದು ಸಾಸಿವೆರಜ ತನ್ನ ತಾಗದು.
ಛಂದಸ್ಸು ನಿಘಂಟು ವ್ಯಾಕರಣ ಅದ್ವೈತ ವೇದ ಶಾಸ್ತ್ರ
ಪುರಾಣವನೋದಿಕೊಂಡು ಮುಂದಣವರಿಗೆ ಹೇಳುವರಲ್ಲದೆ,
ತನ್ನೊಳಗಣ ಶುದ್ಧಿಯ ತಾನರಿಯದೆ ಅನ್ಯರಿಗೆ ಉಪದೇಶವ ಹೇಳುವ
ಬಿನುಗುಜಾತಿಗಳ ನುಡಿಯ, ಕೇಳಲಾಗದೆಂದ, ಕಲಿದೇವರದೇವಯ್ಯ ॥ ೧೬೨ ॥

೬೦೦

ಜಂಗಮದ ಇಂಗಿತ ಆಕಾರವಾದಾತನೆ ಗುರು.
ಜಂಗಮದ ಭಕ್ತಿಪ್ರಸಾದವುಳ್ಳಾತನೆ ಗುರು.

ಮಂಗಳತರ ಜ್ಞಾನ, ಮೋಕ್ಷವಹ ಉಪದೇಶವಸ್ತುವನೀವಾತನೆ ಗುರು.
ಇಂತಪ್ಪ ಶ್ರೀಗುರುವಿಂಗೆ ಜಗದಾರಾಧ್ಯರೆಂಬೆ ಕಾಣಾ
ಕಲಿದೇವಯ್ಯ. ‖ ೧೬೩ ‖

೬೦೧

ಜಂಗಮದ ಸೇವೆಗೆ ಲಿಂಗವಿರಹಿತವಾಗಿರಬೇಕೆ ?
ಲಿಂಗವೆಂಬುದು ಜಂಗಮದಂಗ.
ಆ ಲಿಂಗವಿಲ್ಲದೆ ಪ್ರಾಣವುಂಟೆ ?
ಹಣ್ಣಿಲ್ಲದ ರುಚಿಯ ಬಯಸುವಂತೆ,
ನಿನ್ನ ಕಾಯಕದ ಕ್ರೀಯೆಲ್ಲವೂ ಲಿಂಗವಾದ ಬಳಿಕ,
ಮತ್ತೇನು ಭಾವ ಭೇದವೆ ? ನೀನೆಂದಂತೆ ಇರಲಿ.
ಆರೆನೆಂದಡೆ ನಿನ್ನ ಮನವ ತಿಳುಹಿಕೊಳು.
ಇದಕ್ಕೆ ಕಲಿದೇವ ಹೊಣೆ.
ಕರಕೊಳ್ಳಾ ಎಮ್ಮೊಡೆಯನ, ಚಂದಯ್ಯಾ. ‖ ೧೬೪ ‖

೬೦೨

ಜಂಗಮವೆ ಪ್ರಾಣವೆಂಬುದು
ನಿನಗೆ ಹುಸಿಯಾಯಿತ್ತಲ್ಲಾ ಸಂಗನಬಸವಣ್ಣ.
ನಿನಗೆ ಪ್ರಸಾದದ ಪ್ರಸನ್ನತೆಯೆಂಬುದು
ಸಂದೇಹವಾಯಿತ್ತಲ್ಲಾ ಚೆನ್ನಬಸವಣ್ಣ.
ನಿನಗೆ ಕಾಯವೆ ಬಸವಣ್ಣ, ಜೀವವೆ ಚೆನ್ನಬಸವಣ್ಣ.
ಕೇತಯ್ಯಗಳ ಅಳಿವು, ಕಲಿದೇವನ ಉಳಿವಾಯಿತ್ತು. ‖ ೧೬೫ ‖

೬೦೩

ಜಂಗುಳಿದೈವವೆಂಬ ಜವನಿಕೆಯ ಶಿವನೊಡ್ಡಿದನು ನೋಡಾ.
ಲಿಂಗದ ನಿಷ್ಠೆಯನರಿಯದೆ, ಅರುಹಿರಿಯರೆಲ್ಲ
ಮರುಳಾಗಿ ನರಕಕ್ಕಿಳಿದರು
ಆಗಮದ ಶುದ್ಧಿಯನರಿಯದೆ ಅನ್ಯದೈವಕ್ಕೆರಗುವ
ಭಂಗಿತರೊಡನಾಡಿ ಕೆಡಬೇಡವೆಂದ, ಕಲಿದೇವಯ್ಯ. ‖ ೧೬೬ ‖

೬೦೪

ಜಕ್ಕಿ ಜಕ್ಕ ಎಕ್ಕನಾತಿ ಮಾಯಿರಾಣಿ
ಕುಕ್ಕನೂರ ಬಸದಿ ಚೌಡಿ ಮೈಲಾರ
ಜಿನ್ನನು ಕಾಟಭೈರವ ಮೊದಲಾದ

ಭೂತ ಪ್ರೇತ ಪಿಶಾಚಿ ದೇವರೆಲ್ಲರೂ
ಅಕ್ಕಸಾಲೆಯ ಕುಪ್ಪಟ್ಟಿಗೆ ಬಂದರಾಗಿ,
ಇದೇ ಸುಡುಗಾಡ ಕಾಣಾ, ಕಲಿದೇವರದೇವಯ್ಯ. || ೧೬೭ ||

೬೦೫

ಜನ್ಮ ಜರೆ ಮರಣ ಭವಭವಾಂತರದಲ್ಲಿ ತೊಳಲುವ,
ನೂರೊಂದುಕುಲ ಹದಿನೆಂಟುಜಾತಿಗಿಕ್ಕಿದ,
ಅನಂತದೈವದುಚ್ಛಿಷ್ಟೋದಕ ಅದರೆಂಜಲನ್ನಪಾನ್ಯವ ತಂದು,
ಶ್ರೀಗುರು ಕರುಣಿಸಿಕೊಟ್ಟ ಇಷ್ಟಲಿಂಗಕ್ಕೆ ನೈವೇದ್ಯವ ಮಾಡಿ
ಭುಂಜಿಸುವ ಮೂಳಹೊಲೆಯರ ಮನೆಯಲ್ಲಿ ಮಾಡಿದ ಪಾಕವನು,
ತ್ರಿವಿಧದೀಕ್ಷಾನ್ವಿತವಾದ ಇಷ್ಟಮಹಾಲಿಂಗಕ್ಕೆ ಅರ್ಪಿಸಿ ಭುಂಜಿಸುವ
ಅಧಮ ಹೊಲೆಯರು, ಶತಸಹಸ್ರವೇಳೆ ಶುನಿಸೂಕರಾದಿಗಳಲ್ಲಿ ಜನಿಸಿ,
ಅಂತ್ಯದಲ್ಲಿ ಕಾಲಕಾಮರ ಪ್ರಳಯಕ್ಕೊಳಗಾಗದೆ ಮಾಣ್ಬರೇನೊ,
ಕಳಿದೇವರದೇವಾ ? || ೧೬೮ ||

೬೦೬

ಜಲದೈವವೆಂದಡೆ ಶೌಚವ ಮಾಡಲಿಲ್ಲ.
ನೆಲದೈವವೆಂದಡೆ ಕಾಲೂರಿ ನಡೆಯಲಿಲ್ಲ.
ಅಗ್ನಿದೈವವೆಂದಡೆ ತರಿದು ಮೆಲಲಿಲ್ಲ.
ಅಗ್ನಿದೈವವೆಂದಡೆ ಮನೆಗಳು, ತೃಣಾದಿಗಳು ಬೆಂದು ಕೆಟ್ಟವೆನಲಿಲ್ಲ.
ವಾಯುದೈವವೆಂದಡೆ ಕೆಟ್ಟಗಾಳಿ
ಮನೆಗೆ ಬಂದಿತ್ತು, ಬಾಗಿಲಿಕ್ಕಿ ಎನಲಿಲ್ಲ.
ಆಕಾಶದೈವವೆಂದಡೆ ಆಕಾಶವ ಹೊರಗುಮಾಡಿ,
ಒಳಗೆ ಮನೆಯ ಕಟ್ಟಲಿಲ್ಲ.
ಚಂದ್ರದೈವವೆಂದಡೆ ಶೀತಗೊಂಡು ಕೆಟ್ಟೆವೆನಲಿಲ್ಲ.
ಸೂರ್ಯದೈವವೆಂದಡೆ ಉಷ್ಣಗೊಂಡು ಕೆಟ್ಟೆವೆನಲಿಲ್ಲ.
ಆತ್ಮದೈವವೆಂದಡೆ ಸಾವು ಕೇಡು ಇಲ್ಲದಿರಬೇಕು.
ಇದು ಕಾರಣ, ನೆಲದೈವವಲ್ಲ, ಜಲದೈವವಲ್ಲ,
ಅಗ್ನಿದೈವವಲ್ಲ, ವಾಯುದೈವವಲ್ಲ,
ಆಕಾಶದೈವವಲ್ಲ, ಚಂದ್ರಸೂರ್ಯ ಆತ್ಮರು ದೈವವಲ್ಲ.
ಕಲಿದೇವಾ, ನಿಮ್ಮ ಶರಣ ಬಸವಣ್ಣನೊಬ್ಬನೆ ದೈವವೆಂದ,
ಮಡಿವಾಳನು. || ೧೬೯ ||

೬೦೭

ಜಾತಿನಾಲ್ಕುವಿಡದು ಜಂಗಮವ ಮಾಡಬೇಕೆಂಬ
ಗುರುದ್ರೋಹಿಯ ಮಾತ ಕೇಳಲಾಗದು.
ಅದೆಂತೆಂದಡೆ: 'ಯತ್ಕುಲಂ ಗುರುಮುಖಂ ಯೋ ತತ್ಕುಲಂ' ಎಂದುದಾಗಿ.
ಇಂತೆಂಬ ಶ್ರುತಿಯನರಿದು ಸಮಸ್ತ ಕುಲಗೋತ್ರ ಆಶ್ರಮ ನಾಲ್ಕ ಹೇಳಿ,
ಕಳಸ ಪಂಚಕವನಿಕ್ಕಿ, ಹಲವು ಮಂತ್ರವಿಡಿದ್ದು ಮಾಡುವ ಭವಿಶೈವದೀಕ್ಷೆಯ
ಅಂಗಲಿಂಗಸಂಬಂಧವನುಳ್ಳ ನಿಜವೀರಶೈವಕ್ಕೆ ಮಾಡುವ
ಅಜ್ಞಾನಿಗಳಿಗೆ ರವಿಸೋಮರುಳ್ಳನ್ನಕ್ಕ ನರಕ ತಪ್ಪದೆಂದ, ಕಲಿದೇವಯ್ಯ. || ೧೭೦ ||

೬೦೮

ಜೀವರು ಜೀವಿಸಿ ಜೀವನ್ಮುಕ್ತವೆಂತೆಂದರಿಯರು.
ಜೀವಂಗೆ ಆತ್ಮಸ್ಥಲ ಸಲ್ಲದು.
ತಮ್ಮ ಜೀವಾತ್ಮನನು ಶಿವನೆಂದು, ತಮ್ಮ ಶರೀರವನು ಶಿವನೆಂದು
ಅನಂತ ಋಷಿಯ ಅರ್ಚಿಸಿಕೊಂಬರು.
ಆರಾರುವೆಂದಡೆ: ವಶಿಷ್ಠ ವಾಲ್ಮೀಕಿ ಭೃಗು ದಧೀಚಿ
ಕಾಶ್ಯಪ ಅಗಸ್ತ್ಯ ಮಾರ್ಕಂಡೇಯ ಮೊದಲಾದ ಮಹಾಋಷಿಯರು.
ಅವರ ಶಾಪಾನುಗ್ರಹ ಸಾಮರ್ಥಿಕೆಯ ಪೇಳುವಡೆ,
ಅನಂತ ಶ್ರುತಿಗಳೈದಾವೆ, ಅನಂತ ಶಾಸ್ತ್ರಂಗಳೈದಾವೆ.
ಶಿವನ ಕರದೋಯೆನಿಸಬಲ್ಲರು.
ಅಂತಹರು, ಅಕಟಕಟ ಭಕ್ತಿಯ ಕುಳವನರಿಯದೆ, ಭವಭಾರಕರಾದರು.
ಅಂತು ಜೀವನ ಬಲುಹಿಂದಲು ಸುರರು ಖೇಚರರು
ಗರುಡ ಗಂಧರ್ವರು ಸಿದ್ಧವಿದ್ಯಾಧರರು ಗುಹ್ಯಕರು
ಯಕ್ಷರಾಕ್ಷಸರು ಹರಿವಿರಂಚಿಗಳು ಮೊದಲಾದ
ದೈವಂಗಳೆಲ್ಲಾ ಪ್ರಳಯಚಕ್ರಕ್ಕೊಳಗಾದರು.
ಭಾವಾದ್ವೈತರು ವಾಗಾದ್ವೈತರು ಶ್ವಾನಜ್ಞಾನಿಗಳಾಗಿ ಕೆಟ್ಟರು.
ಭಕ್ತರು ಭಕ್ತಿಯ ಸ್ಥಿತಿ ಕುಳವನರಿಯದೆ,
ಧ್ಯಾನ ಮೌನ ಅನುಷ್ಠಾನ ಜಪತಪ ಸಮಾಧಿ
ಸಂಜೆ ಹೋಮ ನೇಮ ನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರ
ಇಂತೀ ವ್ರತ ಭಾವ ಭಕ್ತಿಯ ಮಾಡಿದರಲ್ಲದೆ.
ಭಕ್ತಿದಾಸೋಹವನರಿಯದೆ ಕೆಟ್ಟರು.
ಅಂದು ನಮ್ಮ ಬಸವಣ್ಣ ಸ್ವತಂತ್ರನಾದ ಕಾರಣ.

ಭಕ್ತಿದಾಸೋಹವಳವಟ್ಟಿತ್ತು.
ಲಿಂಗಸ್ಥಲ ಜಂಗಮಸ್ಥಲ ಪ್ರಸಾದಸ್ಥಲವಳವಟ್ಟಿತ್ತು.
ಜಂಗಮ ಲಿಂಗವೆಂಬುದು ಸಂಗನಬಸವಣ್ಣಂಗೆ ಅಳವಟ್ಟಿತ್ತು.
ದ್ವೈತನಲ್ಲ ಅದ್ವೈತನಲ್ಲ ಬಸವಣ್ಣ, ಭಾವಿಯಲ್ಲ ನಿರ್ಭಾವಿಯಲ್ಲ ಬಸವಣ್ಣ.
ದೇಹಿಯಲ್ಲ ನಿರ್ದೇಹಿಯಲ್ಲ ಬಸವಣ್ಣ, ಖಂಡಿತನಲ್ಲ ಅಖಂಡಿತನಲ್ಲ ಬಸವಣ್ಣ.
ಇಂತಪ್ಪ ಬಸವಣ್ಣಂಗೆ ಆವ ಗುಣಂಗಳೂ ಇಲ್ಲ.
ನಿರ್ಗುಣ ನಿರಂಜನ ನಿಸ್ಸೀಮ ಶಿವನು
ಬಸವಣ್ಣನೊಡನೆ ಆಡುತ್ತಿಪ್ಪನು ಹಾಡುತ್ತಿಪ್ಪನು. ಅದು ಕಾರಣ,
ಬಸವಣ್ಣನ ಮನ ಪರುಷ, ಬಸವಣ್ಣನ ನೋಟ ಪರುಷ.
ಭಾವ ಪರುಷ, ನಡೆ ಪುರುಷ, ನುಡಿ ಪರುಷ, ಹಸ್ತ ಪರುಷ.
ತನುಮನಧನವ ನಿವೇದಿಸಿದಾತ ಬಸವಣ್ಣ.
ಲಿಂಗ ಬಸವಣ್ಣ, ಜಂಗಮ ಬಸವಣ್ಣ, ಗುರು ಬಸವಣ್ಣ.
ಆದಿ ಅನಾದಿಯಿಲ್ಲದಂದಿನ ಬಸವಣ್ಣನ ನೆನೆವುದೆ ಪರತತ್ವ.
ಬಸವಣ್ಣನ ನೆನೆವುದೆ ಪರಮಜ್ಞಾನ, ಬಸವಣ್ಣನ ನೆನೆವುದೆ ಮಹಾನುಭಾವ.
ಎಲೆ ಕಲಿದೇವ, ನಿಮ್ಮ ಶರಣ ಬಸವಣ್ಣನ
ಸಮಸ್ತ ಗಣಂಗಳೆಲ್ಲಾ ನೆನೆದು ಶುದ್ಧರಾದರು. || ೧೭೧ ||

### ೬೦೯

ತದ್ದುತತುರಿ ಬಾವು ಬಗದಳ ಶೀತ ವಾತ ಬಹುಜ್ವರ
ಹೊಟ್ಟೆಬೇನೆ ಕೆಟ್ಟ ಹುಣ್ಣು ಮೈಕುಷ್ಠ ಮೊದಲಾದ
ಮುನ್ನೂರರುವತ್ತು ವ್ಯಾಧಿಗಳ, ಶಿವನು ಹರಿಯಬಿಟ್ಟು ನೋಡುವ.
ಇವೆಲ್ಲ ಶಿವನ ಕರುಣವಾದಲ್ಲದೆ ಹೋಗವು.
ಇದನರಿಯದೆ, ನಾರು ಬೇರ ನಚ್ಚಿದ ಅವಿದ್ಯ ಸಾಧಕರೆಲ್ಲ
ಹತವಾಗಿ ಹೋದರಂದೆ.
ಇಂತಿದ ವಿಚಾರಿಸಿ ತಿಳಿಯದೆ, ಲೋಕದ ಬುದ್ಧಿಗೇಡಿ ಮನುಜರು,
ಸಜ್ಜನಶುದ್ಧಶಿವಾಚಾರಸಂಪನ್ನರಾವ ಜಂಗಮಲಿಂಗದ ಮಾತ ಕೇಳದೆ,
ಅದ್ದನ ಜೋಳ, ಅರಪಾವು ಎಣ್ಣೆಯ ಕೊಂಡು,
ನೋಟಕಾರ್ತಿಯ ಮನೆಗೆ ಹೋಗಿ,
ಅವಳು ಹೇಳಿದ ತಾತುಭೂತದ ಕೋಟಲೆಯ ಕೈಕೊಂಡು ಬಂದು,
ಅವಕ್ಕೂಟವನಟ್ಟೆಕ್ಕಿ.. ಮಿಕ್ಕಿದ ಕೂಳ ತನ್ನಿಷ್ಟಲಿಂಗಕ್ಕೆ ತೋರಿ ತಿಂಬ.
ಲಿಂಗದ್ರೋಹಿಗಳಿಗೆ ಕುಂಭೀಪಾತಕ ನಾಯಕನರಕ, ತಪ್ಪದೆಂದ,
ಕಲಿದೇವಯ್ಯ. || ೧೭೨ ||

೬೧೦

ತನಗನ್ಯವಾದುದ ನೋಡಿದಡೆ ಭವಿಸಂಗ.
ಸತ್ಕರು ಒಪ್ಪಿದುದನೊಪ್ಪದಿರ್ದಡೆ ಭವಿಸಂಗ.
ಮಾಡಿಕೊಂಡ ವ್ರತವ ಮೀರಿದಡೆ ಭವಿಸಂಗ.
ತಾ ಮಾಡಿದ ಭಕ್ತಿಯನಾಡಿಕೊಂಡಲ್ಲಿ ಭವಿಸಂಗ.
ಇಂತಿವನರಿದಡೆ ಸದ್ಭಕ್ತಿ, ಕಲಿದೇವರದೇವಾ. || ೧೭೩ ||

೬೧೧

ತನ್ನ ತಾನರಿದ ಮಹಾಜ್ಞಾನಿ ಶರಣನು
ಚರಿಸುವ ಕ್ರಮವೆಂತೆಂದಡೆ:
ಸ್ಥೂಲವೆಂಬ ಕಂಥೆಯ ತೊಟ್ಟು, ಸೂಕ್ಷ್ಮವೆಂಬ ಟೊಪ್ಪರವನಿಕ್ಕಿ,
ತತ್ವವೆಂಬ ಖರ್ಪರವನಾಂತು, ಸತ್ಯವೆಂಬ ದಂಡವಂ ಪಿಡಿದು,
ಶಾಂತಿಯೆಂಬ ಭಸಿತವಂ ತೊಡೆದು,
ಸುಚಿತ್ತವೆಂಬ ಮಣಿಯ ಕಟ್ಟಿ, ವೈರಾಗ್ಯವೆಂಬ ಹಾವುಗೆಯಂ ಮೆಟ್ಟಿ,
ಮನದೃಢವೆಂಬ ಕೌಪವಂ ಕಟ್ಟಿ, ಆಚಾರವೆಂಬ ಕಂಕಣವನ್ನಿಕ್ಕಿ,
ಕ್ಷಮೆದಮೆಗಳೆಂಬ ಕುಂಡಲಮಂ ಧರಿಸಿ,
ಪರಮಾನಂದದಿಂದ ಸುಳಿದು, ಜಗವ ಪಾವನವ ಮಾಡಲೆಂದು
ಭಕ್ತಿ ಭಿಕ್ಷವಂ ಬೇಡುತ್ತ ಬಂದನಯ್ಯ,
ತನ್ನ ಒಲುಮೆಯ ಶರಣರ್ಗೆ ನಿಜಸುಖವನೀಯಲೆಂದು.
ಕಲಿದೇವರದೇವಾ, ನಿಮ್ಮ ಶರಣ ಪ್ರಭುವೆಂಬ ಜಂಗಮವಂ ಕಂಡು,
ಅರ್ಚಿಸಿ, ಪೂಜಿಸಿ, ಒಕ್ಕುದನುಂಡು, ನಿಶ್ಚಿಂತನಾದೆನಯ್ಯ. || ೧೭೪ ||

೬೧೨

ತನ್ನ ಪ್ರಾಣಲಿಂಗವನನ್ಯರಿಗೆ ಕೊಟ್ಟು, ಮನ್ನಿಸಲೇಕೆ ?
ಗುರುವೆಂದು ಬೆಬ್ಬನೆ ಬೆರೆವವರ ನೋಡಾ ಅಯ್ಯಾ.
ಬಿನ್ನಾಣದಿಂದ ಪಂಚಪರ್ವವ ಮಾಡಿ,
ನಂಬಿಸಿ ಹಣವ ಕೊಂಬ ಲಿಂಗದೆರೆಯರ ನೋಡಾ, ಕಲಿದೇವಯ್ಯ. || ೧೭೫ ||

೬೧೩

ತನ್ನ ಲಿಂಗವ ಬಿಟ್ಟು, ಅನ್ಯಲಿಂಗಕ್ಕೆ ಶರಣೆಂಬ
ಕುನ್ನಿಗಳನೇನೆಂಬೆನಯ್ಯಾ, ಕಲಿದೇವರದೇವ. || ೧೭೬ ||

೬೧೪

ತನುಗುಣವಳಿದು ಲಿಂಗಸಂಗಿಯಾದ.
ಮನಗುಣವಳಿದು ಜ್ಞಾನಸಂಬಂಧಿಯಾದ.
ಪ್ರಾಣಗುಣವಳಿದು ಪ್ರಸಾದಸಂಬಂಧಿಯಾದ.
ಭಾವಭ್ರಮೆಯಳಿದು ನಿಜಲಿಂಗಸಂಬಂಧಿಯಾದ.
ಇಂತೀ ಚತುರ್ವಿಧಸಂಬಂಧಿಯಾಗಿ,
ಶೂನ್ಯಸಿಂಹಾಸನವನಿಂಬುಗೊಂಡ,
ಕಲಿದೇವರ ದೇವ, ನಿಮ್ಮ ಶರಣ ಪ್ರಭುದೇವರ ಪಾದಕ್ಕೆ
ನಮೋ ನಮೋ ಎಂಬೆನು. || ೧೭೭ ||

೬೧೫

ತನುನಷ್ಟ, ಮನನಷ್ಟ, ನೆನಹುನಷ್ಟ, ಭಾವನಷ್ಟ, ಜ್ಞಾನನಷ್ಟ.
ಇಂತು ಪಂಚನಷ್ಟದೊಳಗೆ ನಾ ನಷ್ಟವಾದೆನು.
ಆ ನಷ್ಟದೊಳಗೆ ನೀನು ನಷ್ಟವಾದೆ.
ಕಲಿದೇವರದೇವನೆಂಬ ನುಡಿ, 'ನಿಶ್ಶಬ್ದಂ ಬ್ರಹ್ಮಮುಚ್ಯತೇ.' || ೧೭೮ ||

೬೧೬

ತನು ಮನ ಧನವೆಲ್ಲ ಶಿವನ ಒಡವೆಯೆಂದಾರಾಧಿಸುವ
ಅನ್ಯದೈವವಿದ್ದವರ ಮನೆಯಲ್ಲಿ ಅನ್ನವ ಕೊಳ್ಳದಾತನೆ ಶಿವವ್ರತಿ.
ಮಿಕ್ಕಿನ ಭೂತಪ್ರಾಣಿಗಳೆಲ್ಲ ಭಕ್ತರೆನಿಸಿಕೊಂಬುದು.
ಮಾತಿನ ಮಾಲೆಗೆ ತನುವ ಕೊಡುವರು, ಮನವ ಕೊಡುವರು,
ಧನವ ಕೊಡುವರು ಶಿವನ ಘನವ ನೆನೆವ ಪ್ರಕಾಶವನರಿಯರು,
ಅನ್ಯಜಾತಿಯ ಹೆಸರಿನ ಭೂತಿನ ಓಗರವ ಭುಂಜಿಸುವರು,
ಮರಳಿ ಶಿವಭಕ್ತರೆನಿಸಿಕೊಂಬ ಅನಾಚಾರಿಯರ
ನುಡಿಯ ಕೇಳಲಾಗದೆಂದ, ಕಲಿದೇವರದೇವಯ್ಯ. || ೧೭೯ ||

೬೧೭

ತನುಮುಖಕ್ಕೆ ನೀಡಿದ ಬೋನ ಅನುವಾಗಿ ಅಳವಡದ ಮುನ್ನ,
ಮನಮುಖಕ್ಕೆ ಸರಿಯಾಯಿತ್ತು.
ಮನಮುಖಕ್ಕೆ ನೀಡಿದ ಬೋನ ಅನುವಾಗಿ ಅಳವಡದ ಮುನ್ನ,
ನೋಡನೋಡಲೈಕ್ಯವಾಯಿತ್ತು.
ಆಕಾಶ ಬಾಯಿದೆಗೆದಂತೆ ಆರೋಗಣೆ ಮಾಡುತಿದ್ದನು.
ಮಾಡಿಸುವ ಗುರುವರಾರೊ ?

ಕಲಿದೇವರದೇವನ ಅನುವರಿದು ನೀಡುವಡೆ,
ಸಂಗನಬಸವಣ್ಣಂಗಲ್ಲದೆ ಮತ್ತಾರಿಗೂ ಅಳವಡದು. || ೧೮೦ ||

೬೧೮

ತನುವಳಿಯಿತ್ತು. ಮನವಳಿಯಿತ್ತು, ಭಾವವಳಿಯಿತ್ತು,
ಬಯಕೆಯಳಿಯಿತ್ತು, ನಿಜವಳಿಯಿತ್ತು.
ನಾಮ ಸೀಮೆ ಬಯಲ ಬೆರೆಸಿ,
ಕಲಿದೇವರದೇವನಲ್ಲಿ ಬೆರೆಸಿ ಬೇರಿಲ್ಲದಿರ್ದೆನು. || ೧೮೧ ||

೬೧೯

ತನುವಿನಲ್ಲಿ ಹೊರೆಯಿಲ್ಲ, ಮನದಲ್ಲಿ ವ್ಯಾಕುಳವಿಲ್ಲ.
ಭಾವದಲ್ಲಿ ಬಯಕೆಯಿಲ್ಲ, ಅರಿವಿನಲ್ಲಿ ವಿಚಾರವಿಲ್ಲ.
ನಿಜದಲ್ಲಿ ಅವಧಾನವಿಲ್ಲ. ನಿರ್ಲೇಪಸಂಗದಲ್ಲಿ ಬಿಚ್ಚಿ ಬೇರಾಗಲಿಲ್ಲ.
ಕಲಿದೇವರದೇವಾ, ನಿಮ್ಮಲ್ಲಿ ಬೆರೆಸಿ ಬೇರಿಲ್ಲದಿರ್ದೆನು. || ೧೮೨ ||

೬೨೦

ತಾ ಗುರುಲಿಂಗಜಂಗಮದ ಪಾದಕ್ಕೆರಗಿ
ಲೀಯವಾದ ಬಳಿಕ. ಇದು ಚಿಹ್ನೆ ನೋಡಯ್ಯಾ.
ಗುರುಲಿಂಗಜಂಗಮದ ಪಾದವೆ
ತನ್ನ ಸರ್ವಾಂಗದಲ್ಲಿ ಅಚ್ಚೊತ್ತಿದಂತಾಯಿತ್ತಾಗಿ,
ಅಲ್ಲಿಯೆ ಪಾದಾರ್ಚನೆ, ಅಲ್ಲಿಯೆ ಪಾದೋದಕ ಸೇವನೆ.
ಬೇರೆ ಪೃಥಕ್ ಎಂಬುದಿಲ್ಲಯ್ಯ. ಅದೆಂತೆಂದಡೆ:
ಪರಮಗುರುಲಿಂಗಜಂಗಮದ ಸಂಬಂಧ ಸಮರತಿಯ ಸೋಂಕಿನಲ್ಲಿ,
ಪರಮಾನಂದಜಲವೆ ಪ್ರವಾಹವಾಗಿ,
ಸರ್ವಾಂಗದಲ್ಲಿ ಪುಳಕವಾಗಿ ಹರಿವುತ್ತಿರಲು,
ಆ ಪರಮಸುಖಸೇವನೆಯ ಮಾಡುವಲ್ಲಿ,
ಪಾದೋದಕ ಸೇವನೆಯೆನಿಸಿತ್ತಯ್ಯ.
ಈ ಪರಮಾಮೃತದ ತೃಪ್ತಿ ಬಸವಣ್ಣಂಗಾಯಿತ್ತು.
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು
ಬದುಕಿದೆನಯ್ಯಾ, ಕಲಿದೇವಯ್ಯ. || ೧೮೩ ||

೬೨೧

ತಾರಾಧಾರ ಬಾಹ್ಯಪ ಸೋಹಂಭಾವ
ಭಾವಾಂತರ ವಾಮಶಕ್ತಿ ಮೋಹಶಕ್ತಿ

ಕನ್ಯಾಶಕ್ತಿ ಬಾಲಶಕ್ತಿ ಗಣಶಕ್ತಿ ಮಂದಿರಶಕ್ತಿ
ಶಿವದೇವ ಈಶ್ವರ ಮಹಾದೇವ ಪರಾಪರ ಶಿವ
ಇಂತಿವೆಲ್ಲವ ಬಸವಣ್ಣ ತಪ್ಪಿಸಿ,
ಈಸರಿಂದಾದ ಭಕ್ತಿಯ ಪ್ರಭಾವದೊಳಿರಿಸಿ,
ಗತಿಯತ್ತ ಹೊದ್ದಲೀಯದೆ, ಮೋಕ್ಷದತ್ತ ಹೊದ್ದಲೀಯದೆ,
ನಾಲ್ಕೂ ಪದದತ್ತ ಹೊದ್ದಲೀಯದೆ,
ಅಭಿನವ ಕೈಲಾಸದತ್ತ ಹೊದ್ದಲೀಯದೆ,
ಲಿಂಗಾರ್ಚನೆಯ ತೋರಿ, ಜಂಗಮಾರ್ಚನೆಯ ಹೇಳಿ,
ಜಂಗಮನಿರಾಕಾರವೆಂದು ತೋರಿ,
ಆ ಜಂಗಮ ಪ್ರಸಾದವ ಲಿಂಗಕ್ಕಿತ್ತು ಆರೋಗಿಸಿ,
ಬಸವಣ್ಣ ತೋರಿದ ಕಾರಣ,
ನಿರವಯದ ಹಾದಿಯ ಬಸವಣ್ಣನಿಂದ ಕಂಡೆನು ಕಾಣಾ,
ಕಲಿದೇವಯ್ಯ. || ೧೮೪ ||

೬೨೨

ತಾವು ಭಕ್ತರೆಂದು ಪುರಾತರ ವಚನವ ಕೇಳಿ,
ಆಹಾ ಇನ್ನು ಸರಿಯುಂಟೆಯೆಂದು ಕೈವಾರಿಸುವರು ನೋಡಾ.
ಆ ಪುರಾತರ ವಚನವನೊತ್ತಿ ಹೇಳಹೋದಡೆ,
ನಮಗೆ ಅಳವಡುವುದೆ ಗೃಹಸ್ಥರಿಗೆ ಎಂಬರು.
ಕೇಳಿ ಕೇಳಿ ಸತ್ಯವ ನಂಬದ ಮೂಳರನೇನೆಂಬೆನಯ್ಯಾ,
ಕಲಿದೇವಯ್ಯ? || ೧೮೫ ||

೬೨೩

ತೊತ್ತು ಶೃಂಗಾರವಾದಡೇನೋ
ಪುರುಷನುಳ್ಳ ಮುತ್ತೈದೆಯ ಸರಿಯಹಳೆ?
ಭಕ್ತರ ನುಡಿಗಡಣ ಸಂಗದಲ್ಲಿರಬೇಕೆಂದು
ಗುರುಸಾಹಿತ್ಯಸಂಬಂಧವ ಮಾಡಿದಡೆ,
ಅವರೆಲ್ಲರೂ ಭಕ್ತರಾಗಬಲ್ಲರೆ? ಆಗಲರಿಯರು.
ಅದೇನು ಕಾರಣವೆಂದಡೆ:
ಸತ್ಯಸದಾಚಾರ ಭಕ್ತಿನಿಷ್ಠೆಯ ನಂಬುಗೆ ಇಲ್ಲವಾದ ಕಾರಣ.
ಅಂಥ ಭಕ್ತಿನಿಷ್ಠೆ ನಂಬುಗೆಹೀನನ ಗೃಹದಲ್ಲಿರುವ
ಸತಿ ಸುತ ಪಿತ ಮಾತೆ ಸಹೋದರ ಬಂಧುಜನ ಭೃತ್ಯದಾಸಿಯರೊಳಗಾಗಿ

ಯಾವನಾನೊಬ್ಬಂಗೆ ಶಿವಾಜ್ಞೆಯಿಂದೆಡರಾಪತ್ತಿಟ್ಟಡೆ,
ಬಂಧನ ರುಜೆ ರೋಗ ಮುಂತಾದವರ ತೆರದಿಂದಾದಡೆಯೂ
ಶಿವಲಿಖಿತ ತುಂಬಿ ಲಿಂಗದೊಳಗಾದಡೆ,
ಪೂರ್ವದ ಶಿವಲಿಂಗವೆಂದು ತಿಳಿವ ನಂಬುಗೆಯಿಲ್ಲದೆ,
ಹಂಬಲಿಸಿ ಹಿಡಿಗೊಂಡು ಭ್ರಮಿಸುತ್ತ,
ತಾವು ಭಕ್ತರಾಗಿ ಕೆಟ್ಟೆವು, ಮನೆದೈವ ಮುನಿದವು,
ಧನಹಾನಿಯಾಯಿತ್ತು, ದರಿದ್ರವಡೆಗೊಂಡಿತ್ತು,
ಭಕ್ತರಾಗಿ ಕೆಟ್ಟೆವಿನ್ನು, ಹೇಗೆಂಬ ಭ್ರಷ್ಟರ
ಮೆಟ್ಟುವ ನರಕದಲ್ಲಿ, ಕಲಿದೇವಯ್ಯ. || ೧೮೬ ||

೬೨೪

ತ್ರಿವಿಧ ಮಧ್ಯದ ಶೇಷ, ತ್ರಿಕೂಟ [ಮಧ್ಯದ] ಬೆಳಸು,
ದೇವಮಧ್ಯದ ಪರಿಯಾಣ.
ನಿರ್ಭಾವ ಮಧ್ಯದ ಧಾನ್ಯವನೆ ತಂದು,
ರತ್ನಾಭರಣದ ಭಾಜನದಲ್ಲಿ ಇವನೆಲ್ಲವನು ಸಂಹರಿಸುವೆ.
ಹಿಂದೆ ನೋಡಿಯೂ ಆರುವ ಕಾಣೆ.
ಮುಂದೆ ನೋಡಿಯೂ ಆರುವ ಕಾಣೆ.
ಮಧ್ಯದಲ್ಲಿ ನೋಡುವೈಸಕ್ಕರ,
ನಾ ಮಾಡಿದ ಭಕ್ತಿಯ ಬೇಡಲೆಂದೊಬ್ಬ ಜಂಗಮ ಬಂದಡೆ,
ಕೊಟ್ಟು. ಆ ಭಕ್ತಿಯ ಶೇಷಪ್ರಸಾದದಿಂದ
ಶುದ್ಧನಾದೆ ಕಾಣಾ, ಕಲೀದೇವರದೇವಯ್ಯಾ. || ೧೮೭ ||

೬೨೫

ದಾಸಿಯ ಸಂಗ ದೇಶವರಿಯೆ ಪಡಗ.
ವೇಶಿಯ ಸಂಗ ಹದಿನೆಂಟುಜಾತಿ ನೂರೊಂದುಕುಲವೆಲ್ಲ
ದೃಷ್ಟಿಸುವ ಮರದ ಕುಳಿ.
ಪರಸ್ತ್ರೀಯ ಸಂಗ ಪಂಚಮಹಾಪಾತಕ, ಅಘೋರನರಕ.
ಇಂತೀ ತ್ರಿವಿಧಸಂಗ ಸಲ್ಲವೆಂಬುದನರಿದು,
ಬಿಡದೆ ಬಳಸುವವ ಗುರುವಾದಡಾಗಲಿ,
ಚರವಾದಡಾಗಲಿ, ಭಕ್ತನಾದಡಾಗಲಿ,
ಇಂತೀ ಗುರುಚರಪರದೊಳಗಾರಾದಡಾಗಲಿ,
ಅವರನು ಪತಿತ ಪಾತಕರೆಂದು ಬಿಟ್ಟುಕಳೆಯದೆ,
ಅವರನು ತನ್ನವರೆಂದು ಮನ್ನಿಸಿ ಬಳಕೊಂದನಾದವದೆ.

ಅವಂಗೆ ಕುಂಭೀಪಾತಕ, ನಾಯಕನರಕ ತಪ್ಪದೆಂದ,
ಕಲಿದೇವಯ್ಯ. || ೧೮೮ ||

### ೬೨೬

ದಾಸಿಯ ಸಂಗವ ಮಾಡುವ ಪಾಪಿಗೆ
ಈಶ್ವರನ ಪೂಜಿಸುವ ಆಶೆಯಬೇಕೆ ?
ವೇಶಿಯ ಸಂಗವ ಮಾಡುವ ದ್ರೋಹಿಗೆ
ಶಿವಪ್ರಸಾದವ ಕೊಂಬ ಆಶೆಯದೇಕೆ ?
ಪರಸ್ತ್ರೀ ಸಂಗವ ಮಾಡುವ ಪಂಚಮಹಾಪಾತಕರಿಗೆ
ಪರಬ್ರಹ್ಮದ ಮಾತಿನ ಮಾಲೆಯ ಅದ್ವೈತವದೇಕೆ ?
ಇಂತಿವರ ನಡೆನುಡಿ ಎಂತಾಯಿತ್ತೆಂದಡೆ,
ಗಿಳಿ ಓದಿ ಹೇಳಿ, ತನ್ನ ಮಲವ ತಾ ತಿಂದಂತಾಯಿತ್ತೆಂದ,
ಕಲಿದೇವಯ್ಯ. || ೧೮೯ ||

### ೬೨೭

ದಾಸೋಹವೂ ಭೃತ್ಯಾಚಾರವೂ ಅತಿಪ್ರೇಮವೂ ಕಿಂಕಿಲವೂ
ಸಂಗನಬಸವಣ್ಣಂಗಲ್ಲದೆ ಮತ್ತಾರಿಗೂ ಇಲ್ಲ.
ಇಂತಪ್ಪ ಭಕ್ತಿಯ ಕುಳಸ್ಥಳವನರಿಯದೆ
ಎಲ್ಲರೂ ಅಂದಂತೆ ಅಂದು, ಬಂದಲ್ಲಿಯೆ ಬಂದರು.
ಇದ ನೀಕರಿಸಿ ಜಂಗಮವೆ ಲಿಂಗವೆಂದು,
ಸಂಗಸಾಹಿತ್ಯವಾದ ಬಸವಣ್ಣ.
ನಿಮ್ಮ ಬಸವಣ್ಣನಿಂತಹ ನಿತ್ಯನಯ್ಯಾ, ಕಲಿದೇವರದೇವ. || ೧೯೦ ||

### ೬೨೮

ದಾಸೋಹವೆಂಬನ್ನಬರ ಈಶ್ವರ ಪೂಜೆ,
ಆಚಾರದಲ್ಲಿರಬೇಕು.
ಮಾಡೆನೆಂಬ ನೇಮ ಬೇಡ.
ಮಾಡಿಹೆನೆಂಬ ಕೃತ್ಯ ಬೇಡ.
ಈ ಭಾವ ಅಳವಟ್ಟಲ್ಲಿ,
ಕಲಿದೇವಂಗೆ ಭಾವಶುದ್ಧವಾಯಿತ್ತು, ಚಂದಯ್ಯ. || ೧೯೧ ||

### ೬೨೯

ದೂರದಲರ್ಪಿತವೆಂಬ ದುರಾಚಾರಿಯನೇನೆಂಬೆನಯ್ಯಾ.
ಅಂತರದಲರ್ಪಿತವೆಂಬ ಅನಾಚಾರಿಯನೇನೆಂಬೆನಯ್ಯಾ.

ಭಾವದಲರ್ಪಿತವೆಂಬ ಭ್ರಮಿತರನೇನೆಂಬೆನಯ್ಯಾ.
ಮನದಲ್ಲಿ ಅರ್ಪಿತವೆಂಬ ವ್ರತಗೇಡಿಗಳನೇನೆಂಬೆನಯ್ಯಾ.
ಇಂತೀ ತನ್ನ ಇಷ್ಟಲಿಂಗಕ್ಕೆ ಕೊಟ್ಟು, ಕೊಳ್ಳದಿರ್ದಡೆ
ಸತ್ತನಾಯ ಮಾಂಸವ ತಂದು, ಅಟ್ಟದ ಮೇಲಿರಿಸಿ,
ಸಿತ್ಯಂ ಸರ್ಪೋಪ್ಪಲವ ತೂಗಿ ತಿಂದಂತೆ ಕಾಣಾ, ಕಲಿದೇವರದೇವಾ. ॥ ೧೯೨ ॥

೬೩೦

ದೇವನೊಬ್ಬನೆ ಜಗವ ಕಾವಾತ, ಕೊಲುವಾತ.
ದೇವರು ಮುನಿದಡೆ ಮರಳಿ ಕಾವವರುಂಟೆ?
ಈ ಸಾವಿಗೊಳಗಾಗಿ ಹೋಹ ಸಮಸ್ತದೈವಂಗಳು,
ಮಹಾದೇವನ ಸರಿಯೆಂದು ಆರಾಧಿಸಿ,
ಅಚಲಿತಪದವಿಯ ಬೇಡುವ ಈರೇಳುಜಾತಿಗಳಿಗೆ,
ಆವಾವ ಕಾಲದಲ್ಲಿ ನರಕ ತಪ್ಪದೆಂದ, ಕಲಿದೇವಯ್ಯ. ॥ ೧೯೩ ॥

೬೩೧

ದೇವರು ಮುಂತಾಗಿ ನಡೆ, ದೇವರು ಮುಂತಾಗಿ ನುಡಿ.
ದೇವರು ಮುಂತಾಗಿ ಅನುಭಾವಿಸಬಲ್ಲಡೆ,
ದೇವ ಬ್ರಾಹ್ಮಣರೆನಿಸಿಕೊಂಡಡೆ ದೇವರು ಮೆಚ್ಚುವನು.
ದೇವ ದಾನವ ಮಾನವ ದೇವನ ಸುದ್ದಿಯನರಿಯದೆ,
ವಾದಿತನಕ್ಕೆ ಹೋರಿಹೋರಿ ನಾಯಸಾವ ಸತ್ತರು.
ಗುರುಲಿಂಗ ಮುಂತಾಗಿ ನಡೆ, ಗುರುಲಿಂಗ ಮುಂತಾಗಿ ನುಡಿ.
ಗುರುಲಿಂಗ ಮುಂತಾಗಿ ಅನುಭಾವಿಸಬಲ್ಲಡೆ
ಗುರುವೆನಿಸಿಕೊಳಬೇಕು.
ಗುರುಲಿಂಗವ ಹಿಂದು ಮಾಡಿ, ತಾ ಮುಂದಾಗಿ,
ಗುರುದೇವನೆನಿಸಿಕೊಂಡಡೆ ಗುರು ತಾ ಮೆಚ್ಚುವನೆ ?
ಗುರುಲಿಂಗಜಂಗಮದ ಪರಿಯುವನರಿಯದೆ,
ಸುರೆಯ ದೈವದ ಎಂಜಲ ಭುಂಜಿಸುವವರು,
ತಾವು ಗುರುತನಕ್ಕೆ ಹೋರಿಹೋರಿ ನರಕದಲ್ಲಿ ಬಿದ್ದರು.
ಭಕ್ತಿ ಮುಂತಾಗಿ ನಡೆ, ಭಕ್ತಿ ಮುಂತಾಗಿ ನುಡಿ.
ಭಕ್ತಿ ಮುಂತಾಗಿ ನುಡಿಯ ಅನುಭಾವಿಸಬಲ್ಲಡೆ
ಬಣಜಿಗನು ತಾ ಭಕ್ತನೆ?
ಭಕ್ತಿಯಿಲ್ಲದ ವ್ಯರ್ಥಜೀವಿಗಳು

ಭಕ್ತನ ಸರಿಯೆನಿಸಿಕೊಂಡಡೆ ಶಿವ ಮೆಚ್ಚುವನೆ?
ಸತ್ಯಸದಾಚಾರದ ಹವನನರಿಯದೆ,
ಮೃತ್ಯು ಮಾರಿಯ ಎಂಜಲ ತಿಂದು,
ಮರ್ತ್ಯದಲ್ಲಿ ಹೋರಿಹೋರಿ ವ್ಯರ್ಥವಾಗಿ ಕೆಟ್ಟರು.
ಶಿವಭಕ್ತನು ಗುರುದೇವ ನಮ್ಮ ಬ್ರಾಹ್ಮಣನು
ಬಸವರಾಜದೇವರ ಸಂತತಿಗಲ್ಲದೆ ಮತ್ತಾರಿಗುಂಟು,
ಕಲಿದೇವರದೇವಾ ? || ೧೯೪ ||

೬೩೨

ದೇಶವಿನೋದಿಗಳಲ್ಲ, ದೇಶಭಾಷಿತರಲ್ಲ.
ದೇಶಾಶ್ರಯವ ತಮ್ಮದೆಂದೆನ್ನರು.
ದಾಸಭಾವದಲ್ಲಿಪ್ಪ ಸದ್ಭಕ್ತರಲ್ಲಿ,
ದೇಶಾಂತರವ ಮಾಡುವರು ಭಕ್ತಿವತ್ಸಲರು, ಭಕ್ತಿನಿಶ್ಚಲರು,
ಕಲಿದೇವಾ ನಿಮ್ಮ ಶರಣರು. || ೧೯೫ ||

೬೩೩

ದೇಶಾಂತರಿ ದೇಶಾಂತರಿಯೆಂದು ನುಡಿವ ಹುಸಿಭ್ರಷ್ಟರನೇನೆಂಬೆನಯ್ಯಾ.
'ಏಕಮೂರ್ತಿಸ್ತ್ರಯೋ ಭಾಗಃ ಗುರುರ್ಲಿಂಗಂತ 'ಜಂಗಮಃ'
ಎಂಬುದನರಿಯದೆ, ದೇಶಾಂತರಿಯೆಂದರೆ ಆರು ಮೆಚ್ಚುವರಯ್ಯ?
ಸುಮ್ಮನಿರಿ ಭೋ, ಬರುಕಾಯರುಗಳಿರಾ.
ದೇಶಾಂತರಿಯಾದರೆ ಮೂರುಲೋಕದ ಕರ್ತನಂತೆ ಶಾಂತನಾಗಿರಬೇಕು.
ಜಲದಂತೆ ಶೈತ್ಯವ ತಾಳಿರಬೇಕು.
ಸೂರ್ಯನಂತೆ ಸರ್ವರಲ್ಲಿ ಪ್ರಭೆ ಸೂಸುತ್ತಿರಬೇಕು.
ಪೃಥ್ವಿಯಂತೆ ಸರ್ವರ ಭಾರವ ತಾಳಿರಬೇಕು.
ಹೀಂಗಾದಡೆ ಮಹಂತಿನ ಕೂಡಲದೇವರೆಂಬೆನಯ್ಯ.
ಹೀಂಗಲ್ಲದೆ ತ್ರಿವಿಧಮಲಗಳ ಭುಂಜಿಸುತ್ತ,
ಗುರುಲಿಂಗಜಂಗಮಕ್ಕೆ ತನುಮನಧನ ಸವೆಯದೆ,
ತಾವೇ ದೇವರೆಂದು, ತಮ್ಮ ಉದರವ ಹೊರೆವ ಶ್ವಾನ ಸೂಕರನಂತೆ,
ಪ್ರಪಂಚಿನ ಗರ್ವಿಗಳ, ದೇಶಾಂತರ, ಮಹಂತರೆನಬಹುದೇನಯ್ಯ?
ಎನಲಾಗದು ಕಾಣಾ, ಕಲಿದೇವರದೇವ. || ೧೯೬ ||

೬೩೪

ದ್ವೈತಾದ್ವೈತವೆಂಬ ಉಭಯಕರ್ಮವನತಿಗಳೆದ
ಅಂಗಲಿಂಗಸಂಬಂಧವನುಳ್ಳ ನಿಜವೀರಶೈವಸಂಪನ್ನರು.

ನಮ್ಮ ಸ್ವಯಾಂಗಲಿಂಗವನರ್ಚಿಸುವಲ್ಲಿ
ಭವಿಶೈವ ಭಿನ್ನಕರ್ಮಿಗಳಂತೆ ಬೇರಿಟ್ಟು,
ಅರ್ಘ್ಯಪಾದ್ಯ ಆಚಮನವಾದಿಯಾದ ಉಪಪಾತ್ರೆಗಳಲ್ಲಿ ನೀರನೆರೆದು,
ಪಂಚಮಶುದ್ಧಿ ಪಂಚಾಮೃತಾಭಿಷೇಕವ ಮಾಡಿ,
ತನ್ನ ಲಿಂಗವನರ್ಚಿಸಿ, ಪ್ರಸಾದವ ಕೊಂಡೆನೆಂಬ ಜಡಶೈವ
ಭಿನ್ನಕರ್ಮವನುಳ್ಳ ಕುನ್ನಿಗಳು
ಎನ್ನ ಲೋಕಕ್ಕೆ ಹೊರಗೆಂದ, ಕಲಿದೇವಯ್ಯ. || ೧೯೭ ||

೬೩೫

ಧರಿಸಿ ಭೋ, ಧರಿಸಿ ಭೋ ಮರ್ತ್ಯರೆಲ್ಲರು,
ಮರೆಯದೆ ಶ್ರೀಮಹಾಭಸಿತವ.
ಲೆಕ್ಕವಿಲ್ಲದ ತೀರ್ಥಂಗಳ ಮಿಂದ ಫಲಕಿಂದದು
ಕೋಟಿಮಡಿ ಮಿಗೆ ವೆಗ್ಗಳ.
ಲೆಕ್ಕವಿಲ್ಲದ ಯಜ್ಞಂಗಳ ಮಾಡಿದ ಫಲಕಿಂದದು
ಕೋಟಿಮಡಿ ಮಿಗೆ ವೆಗ್ಗಳ.
ಅದೆಂತೆಂದಡೆ: ಭೀಮಾಗಮದಲ್ಲಿ-
ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಂ |
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಂ ನ ಸಂಶಯಃ ||
ಇಂತೆಂದುದಾಗಿ,
ಧರಿಸಿ ಭೋ, ಧರಿಸಿ ಭೋ ಮರ್ತ್ಯರೆಲ್ಲರು,
ಮರೆಯದೆ ಶ್ರೀಮಹಾಭಸಿತವ.
ನಮ್ಮ ಕಲಿದೇವರ ನಿಜಚರಣವ ಕಾಣುದಕ್ಕೆ
ಶ್ರೀಮಹಾಭಸಿತವೆ ವಶ್ಯ ಕಾಣೆ ಭೋ. || ೧೯೮ ||

೬೩೬

ನಂದೀಶ್ವರದೇವರು, ಭೃಂಗೀಶ್ವರದೇವರು,
ವಾಗೀಶ್ವರದೇವರು, ಅಂಗೇಶ್ವರದೇವರು, ಸ್ಕೂರಿದತ್ತದೇವರು
ಇಂತೀ ಎಲ್ಲಾ ಗಣಂಗಳ ಮಧ್ಯಸ್ಥಾನಕ್ಕೆ ತಂದು,
ಬಸವಣ್ಣ ಸಂಪೂರ್ಣನಾದ ಪರಿಯ ನೋಡಾ, ಕಲಿದೇವರದೇವಾ. || ೧೯೯ ||

೬೩೭

ನಮಗೆ ಲಿಂಗವುಂಟು,
ನಾವು ಲಿಂಗವಂತರೆಂದು ನುಡಿವರು.

ಮತ್ತೆ ಮರಳಿ ಭವಿಶೈವದೈವಂಗಳಿಗೆರಗುವ
ಈ ಮಂಗಮಾನವರನೇನೆಂಬೆನಯ್ಯಾ,
ಕಲಿದೇವಯ್ಯ. || ೨೦೦ ||

೬೩೮

ನರರ ಹೊಗಳಿದಡೆ ಗತಿಯಿಲ್ಲ, ಸುರರ ಹೊಗಳಿದಡೆ ಗತಿಯಿಲ್ಲ.
ಹರಿ ಬ್ರಹ್ಮ ಇಂದ್ರ ಚಂದ್ರಾದಿಗಳ ಹೊಗಳಿದಡೆ ಗತಿಯಿಲ್ಲ.
ಪರಸತಿ ಪರಧನಂಗಳಿಗಳುಪಿ,
ದುರ್ಯೋಧನ ಕೀಚಕ ರಾವಣರೆಂಬವರು
ಮರಣವಾಗಿ ಹೋದವರ ಸಂಗತಿಯ ಹೇಳಿಕೇಳಿದಡೇನು ಗತಿಯಿಲ್ಲ.
ಶ್ರೀಗುರುವಿನ ಚರಣವನರಿಯದ
ಕಿರುಕುಳದೈವದ ಬೋಧೆಯ ಹೇಳಿ, ಆನು ಬದುಕಿದೆನೆಂಬ
ಕವಿ ಗಮಕಿ ನಾನಲ್ಲ.
ಹರ ನಿಮ್ಮ ನೆನೆವ ಶರಣರ ಚರಣದ ಗತಿಯಲ್ಲಿಪ್ಪೆನೆಂದ,
ಕಲಿದೇವರದೇವಯ್ಯ. || ೨೦೧ ||

೬೩೯

ನವಸಾರ ಅಷ್ಟಸಾರ ದಶಸಾರ
ಪಂಚಸಾರ ಚತುಸ್ಸಾರ ಏಕಸಾರ.
ಇಂತಿವನತಿಗಳೆದ ಮಹಾಮಹಿಮನ ನಿಲವು,
ಲಿಂಗದಲ್ಲಿ ಸಂಪೂರ್ಣ, ಜಂಗಮದಲ್ಲಿ ಅತಿಸಹಜ,
ಪ್ರಸಾದದಲ್ಲಿ ತದ್ಗತ.
ಇಂತು ಸರ್ವಾಂಗದಲ್ಲಿ ಸಂಪೂರ್ಣನಾದ ನಿಜೈಕ್ಯನ ನಿಲವು ಸುಜ್ಞಾನ.
ಸುಜ್ಞಾನಸಿಂಹಾಸನದ ಮೇಲೆಯಿದ್ದು
ನಿಶ್ಚಿಂತನಾಗಿ ಇಪ್ಪುದು, ಕಲಿದೇವಯ್ಯ. || ೨೦೨ ||

೬೪೦

ನಾವು ಪ್ರಾಣಲಿಂಗಿಗಳೆಂದು ಹೇಳುವ ಅಣ್ಣಗಳಿರಾ,
ನೀವು ಪ್ರಾಣಲಿಂಗಿಗಳು ಎಂತಾದಿರಿ ಹೇಳಿರಣ್ಣ?
ಅರಿಯದಿರ್ದಡೆ ಕೇಳಿರಣ್ಣ, ಪ್ರಾಣಲಿಂಗವಾದ ಭೇದಾಭೇದವ.
ಕಾಯದ ಕಳವಳದಲ್ಲಿ ಕೂಡದೆ, ಮನದ ಭ್ರಾಂತಿಗೊಳಗಾಗದೆ,
ಕರಣಂಗಳ ಮೋಹಕ್ಕೀಡಾಗದೆ, ಪ್ರಾಣನ ಪ್ರಪಂಚಿನಲ್ಲಿ ಬೆರೆಯದೆ.
ಜೀವನ ಬುದ್ಧಿಯಲ್ಲಿ ಮೋಹಿಸದೆ, ಹಂಸನ ಆಸೆಗೊಳಗಾಗದೆ

ನಿಷ್ಪ್ರಪಂಚಿಯಾಗಿ, ಗುರುಲಿಂಗಜಂಗಮದ
ಪಾದೋದಕಪ್ರಸಾದದಲ್ಲಿ ಅತಿಕಾಂಕ್ಷೆವುಳ್ಳಾತನಾಗಿ,
ತ್ರಿವಿಧಲಿಂಗದಲ್ಲಿ ಸೂಜಿಗಲ್ಲಿನಂತೆ,
ವಿರಕತ್ವವುಳ್ಳಾತನಾಗಿಪ್ಪಾತನೆ ಲಿಂಗಪ್ರಾಣಿ ನೋಡಾ,
ಕಲಿದೇವಯ್ಯ. || ೨೦೩ ||

೬೪೧

ನಾವು ಮೀರಿದ ಸ್ಥಲದ ವಿರಕ್ತರೆಂದು ಹೇಳುವ ಅಣ್ಣಗಳಿರಾ
ನೀವು ಮೀರಿದ ಸ್ಥಲದ ವಿರಕ್ತರಾದ ಬಗೆಯ ಹೇಳಿರಣ್ಣ.
ಅರಿಯದಿರ್ದಡೆ ಹೇಳಿಹೆ ಕೇಳಿರಣ್ಣ,
ಮೀರಿನಿಂದ ವಿರಕ್ತನ ವಿಚಾರದ ಭೇದವ.
ಅನಾದಿ ಚಿದ್ಬಿಂದುವ ಅಧೋದ್ವಾರದಲ್ಲಿ ಬೀಳಗೊಡದೆ,
ಸದ್ಗುರು ಕರುಣಕಟಾಕ್ಷೆಯಿಂದ ಮಹಾಮಂತ್ರವ ಪಡೆದು,
ಆ ಚಿನ್ಮಂತ್ರ ಬಲದಿಂದ ಊರ್ಧ್ವಕ್ಕೆ ಮುಖವ ಮಾಡಿ,
ಮೇಲುಗಿರಿ ಸಿಂಹಾಸನದಲ್ಲಿ ಮೂರ್ತಗೊಂಡಿರುವ
ಪರಶಿವಲಿಂಗದ ಮಹಾಬೆಳಗಿನೊಳಗೆ ಏಕಾರ್ಥವ ಮಾಡಬೇಕು.
ಜಿಹ್ವೆಯ ತುದಿಯ ಅಜ್ಞಾನದ ಹುಸಿ ಕುಶಬ್ದ ಕುರುಚಿಯ ನೀಗಬೇಕು.
ಸದ್ಗುರುಮುಖದಿಂದ ನಿಜನುಡಿ, ಘನಪಾದೋದಕ,
ಪ್ರಸಾದಮಂತ್ರವ ಪಡೆದು, ಸದ್ಧರ್ಮರೂಪದಿಂದಿರಬೇಕು.
ಸರ್ವಾಚಾರಸಂಯುಕ್ತವಾದ ಭಕ್ತನೆ ನಿಜಮುಕ್ತಿಮಂದಿರವೆಂದು,
ಭಾವ ಮನ ಕಾಯ ತುಂಬಿ, ಪರಿಪೂರ್ಣ ತೃಪ್ತನಾದಾತನೆ
ಮೀರಿದ ಸ್ಥಲದ ವಿರಕ್ತ ನೋಡಾ, ಕಲಿದೇವರದೇವ. || ೨೦೪ ||

೬೪೨

ನಾವು ಲಿಂಗೈಕ್ಯ, ಲಿಂಗಾನುಭಾವಿಗಳೆಂದು ಹೇಳುವ ಅಣ್ಣಗಳಿರಾ
ನೀವು ಲಿಂಗೈಕ್ಯ ಲಿಂಗಾನುಭಾವಿಗಳು ಎಂತಾದಿರಿ ಹೇಳಿರಣ್ಣ.
ಅರಿಯದಿರ್ದಡೆ ಗುರುಕೃಪೆಯಿಂದ ಹೇಳಿಹೆನು ಕೇಳಿರಣ್ಣ,
ಲಿಂಗೈಕ್ಯ, ಲಿಂಗಾನುಭಾವದ ಭೇದಾದಿಭೇದವ.
ಸರ್ವಸಂಗಪರಿತ್ಯಾಗವ ಮಾಡಬೇಕು.
ಲೋಕಾಚಾರವ ಮುಟ್ಟದಿರಬೇಕು.
ನುಡಿಯಂತೆ ನಡೆ ದಿಟವಾಗಬೇಕು.
ಸರ್ವಾಚಾರಸಂಪತ್ತಿನಾಚರಣೆಯ,
ಸದ್ಗುರು ಮುಖದಿಂದರಿತು ಆಚರಿಸಬೇಕು.

ನಾನಾರು, ನನ್ನ ಜೀವವೇನು, ನಾ ಬಂದ ಮುಕ್ತಿದ್ವಾರವಾವುದು?
ನಾ ಹೋಗುವ ನಿಜಕೈವಲ್ಯಪದವಾವುದು?
ನನ್ನಿರವೇನೆಂದು ಅರಿದಾಚರಿಸಬಲ್ಲಾತನೆ,
ನಿಜಲಿಂಗೈಕ್ಯ ಲಿಂಗಾನುಭಾವಿ ನೋಡಾ, ಕಲಿದೇವರದೇವ. || ೨೦೫ ||

೬೪೩

ನಾವು ಶರಣರೆಂದು ಒಪ್ಪವಿಟ್ಟು ನುಡಿವ ಅಣ್ಣಗಳಿರಾ
ನೀವು ಶರಣರಾದ ಭೇದವ ಹೇಳಿರಣ್ಣ.
ಅರಿಯದಿರ್ದಡೆ ಕೇಳಿರಣ್ಣ, ಶರಣತ್ವದ ಭೇದಾಭೇದವ.
ತನುವಿನ ಕಾಂಕ್ಷೆಯ ಸುಟ್ಟುರುಹಿ, ಮನದ ಲಜ್ಜೆಯ ಮರೆದು,
ಭಾವದ ಭ್ರಮೆಯ ಹೊಟ್ಟುಮಾಡಿ ತೂರಿ,
ಸದ್ಭಕ್ತಿ ನಿಜನೈಷ್ಠೆಯ ತಿಳಿದು,
ಸತಿಸುತರಿಗೆ ಸದಾಚಾರದ ಸನ್ಮಾರ್ಗವ ತೋರಿ,
ಗುರುಲಿಂಗಜಂಗಮವೆ ಮನೆದೈವ
ಮನದೈವ ಕುಲದೈವವೆಂದು ಭಾವಿಸಿ,
ನಿರ್ವಂಚಕತ್ವದಿಂದ ಅರಿದಾಚರಿಸಬಲ್ಲಾತನೆ,
ಅಚ್ಚಶರಣ ನೋಡಾ, ಕಲಿದೇವರದೇವ. || ೨೦೬ ||

೬೪೪

ನಾವು ಶಿವಪ್ರಸಾದಿಗಳೆಂದು ನುಡಿವ ಅಣ್ಣಗಳಿರಾ
ನೀವು ಶಿವಪ್ರಸಾದಿಗಳೆಂತಾದಿರಿ ಹೇಳಿರಣ್ಣ.
ಅರಿಯದಿರ್ದಡೆ ಶಿವಪ್ರಸಾದದ ಕಲೆನೆಲೆಯ ಕೇಳಿರಣ್ಣ.
ಗುರುಲಿಂಗಜಂಗಮದಿಂದ
ವೇಧಾಮಂತ್ರಕ್ರಿಯಾದೀಕ್ಷೆಯ ಬೆಸಗೊಂಡು,
ತನುಮನಪ್ರಾಣಂಗಳ
ಇಷ್ಟಪ್ರಾಣಭಾವಲಿಂಗಂಗಳಿಗೆ ಮೀಸಲ ಮಾಡಿ,
ನಿರ್ವಂಚಕತ್ವದಿಂದ ಸಮರ್ಪಿಸಿ,
ಭೇದಭಾವವನಳಿದು, ಕ್ಷೀರಕ್ಷೀರ ಬೆರೆದಂತೆ,
ಗುರುಮಾರ್ಗಾಚಾರದಲ್ಲಿ ಆಚರಿಸಬಲ್ಲಾತನೆ
ಶಿವಪ್ರಸಾದಿ ನೋಡಾ, ಕಲಿದೇವರದೇವ. || ೨೦೭ ||

೬೪೫

ನಾವು ಶಿವಭಕ್ತರೆಂದು ಹೇಳುವ ಅಣ್ಣಗಳಿರಾ
ನೀವು ಶಿವಭಕ್ತರೆಂತಾದಿರಣ್ಣ. ಅರಿಯದಿರ್ದಡೆ ಕೇಳಿರಣ್ಣ,

ಶಿವಭಕ್ತನಾದ ನೆಲೆಕಲೆಯ. ಆರುವೈರಿಗಳ ಮುರಿಗಟ್ಟಿ,
ಅಷ್ಟಮದವ ಜಳ್ಳು ಮಾಡಿ ತೂರಿ, ಸಪ್ತವ್ಯಸನಂಗಳ ಕಂಕಣವ ಮುರಿದು,
ಸದ್ಭಕ್ತಿ ನೆಲೆಕಲೆಯ ತಿಳಿದು,
ಅಷ್ಟಾವರಣದ ಗೊತ್ತು ಮುಟ್ಟಿನೋಡಿ,
ಪಂಚಾಚಾರ ಭೇದವ ತಿಳಿದು,
ಷಡ್ವಿಧಲಿಂಗಾಂಗದ ಮೂಲವನರಿದು,
ಷಡ್ವಿಧ ಅರ್ಪಿತಾವಧಾನವನಾಚರಿಸಿ,
ಷಟ್ಸ್ಥಲಮಾರ್ಗವಿಡಿದು ಆಚರಿಸುವ ಸದ್ಭಕ್ತರಿಗೆ
ಅತಿಭೃತ್ಯರಾಗಿ, ಹಮ್ಮುಬಿಮ್ಮುಗಳಿಲ್ಲದೆ,
ನಡೆನುಡಿಸಂಪನ್ನರಾದವರೆ ಶಿವಭಕ್ತರು ನೋಡಾ,
ಕಲಿದೇವರದೇವ. || ೨೦೮ ||

೬೪೬

ನಾವು ಸದ್ವೀರಮಾಹೇಶ್ವರರೆಂದು ಹೇಳುವ ಅಣ್ಣಗಳಿರಾ
ನಿಮ್ಮ ವೀರಮಾಹೇಶ್ವರತ್ವದ ಕುರುಹ ಹೇಳಿರಣ್ಣಾ.
ಅರಿಯದಿರ್ದಡೆ ಸದ್ವೀರಮಾಹೇಶ್ವರತ್ವದ ಕುರುಹ ಕೇಳಿರಣ್ಣಾ.
ಪಂಚಮಹಾಪಾತಕಂಗಳ ಬೆರಸದೆ,
ಪೂರ್ವವಳಿದು ಪುನರ್ಜಾತರಾದ ಸದ್ಭಕ್ತರಲ್ಲಿ
ಪಂಚಸೂತಕಂಗಳ ಕಲ್ಪಿಸದೆ,
ಪಂಚಾಚಾರಂಗಳ ಭೇದಿಸಿ, ಅನಾಚಾರಂಗಳ ಸಂಹರಿಸಿ,
ತನ್ನ ನಿಜಚಿತ್ಕಳೆಗಳ ತೋರಿಸಿ,
ಅವರ ಗೃಹವ ಪೊಕ್ಕು, ಪಾದೋದಕಪ್ರಸಾದವ
ಕೊಟ್ಟು ಕೊಳಬಲ್ಲಾತನೆ ಸದ್ವೀರಮಾಹೇಶ್ವರ ನೋಡಾ.
ಕಲಿದೇವರದೇವಾ. || ೨೦೯ ||

೬೪೭

ನಿಜಸ್ವಯಂಭು ಕಲಿದೇವಂಗೆ ಪಂಚಾಮೃತದ ಮಾಡುವೆ.
ಕ್ಷೀರಾಧಾರದ ಕೊಡನನು ಅಷ್ಟಾದ್ವಯವೆಂಬ ಸ್ತ್ರೀಯರ ಕೈಯ ಹಿಡಿಸುವೆ.
ಧಾರಾಪೂರ್ವದಲ್ಲಿದ್ದ ಮಧುವನು ಧೀರನ ಕೈಯ ಹಿಡಿಸುವೆ.
ಇವರು ಸಹಿತ ಪಂಚಾಮೃತವಾಯಿತ್ತು ಕಲಿದೇವಂಗೆ. || ೨೧೦ ||

೬೪೮

ನಿತ್ಯಲಿಂಗಾರ್ಚನೆಯ ಮಾಡದೆ ಒಡಲ ಹೊರೆವನೆ ಹೊಲೆಯ.
ಹತ್ತು ಸುವಿದದೇ[ನು] ಒಂದೂ ನಿಜವಿಲ್ಲದವನೆ ಹೊಲೆಯ.

ಅರ್ಥದಾಸೆಗೆ ಪ್ರಾಣವ ಹತವ ಮಾಡುವನೆ ಹೊಲೆಯ.
ಸತ್ಯ ಸದ್ಗುಣ ನಿತ್ಯಾಚಾರ ಧರ್ಮವಿಲ್ಲವೆಂಬವನೆ ಹೊಲೆಯ.
ಭಕ್ತಿ ಮುಕ್ತಿಯ ಪಥವ ಹುಸಿಯೆಂಬವನೆ ಹೊಲೆಯ.
ನಿತ್ಯ ಗುರುಲಿಗಜಂಗಮ ಪಾದತೀರ್ಥ ಪ್ರಸಾದವಿಲ್ಲವೆಂಬವನೆ ಹೊಲೆಯ.
ಮತ್ತೆ ಪಶುಘಾತಕವ ಮಾಡುವನೆ ಹೊಲೆಯ.
ಇಂತೀ ಏಳುಹೊಲೆಯ ಹಿಂಗಿಸದೆ, ತನ್ನ ಕುಲದ ಹೆಮ್ಮೆಯ ಮೆರೆವ ಕುನ್ನಿಗಳ
ನುಡಿಯ ಕೇಳಲಾಗದೆಂದ, ಕಲಿದೇವಯ್ಯ. || ೨೧೧ ||

೬೪೯

ನಿತ್ಯ ಸತ್ಯದೊಳಡಗಿ, ಸತ್ಯ ಸದಾಚಾರದೊಳಡಗಿ,
ಆಚಾರ ಅನುಭಾವದೊಳಡಗಿ, ಅನುಭಾವ ಜ್ಞಾನದೊಳಡಗಿ,
ಮಹಾಜ್ಞಾನ ಮನೋಲಯದೊಳಡಗಿ,
ಮನೋಲಯವೇ ಮಹಾಘನವಾಯಿತ್ತು,
ಕಲಿದೇವರದೇವಾ, ನಿಮ್ಮ ನಿಜೈಕ್ಯವು. || ೨೧೨ ||

೬೫೦

ನಿನ್ನ ಆಕಾರ ನಿರಾಕಾರವಾಯಿತಲ್ಲಾ ಬಸವಣ್ಣಾ.
ನಿನ್ನ ಪ್ರಾಣ ನಿಃಪ್ರಾಣವಾಯಿತಲ್ಲಾ ಬಸವಣ್ಣಾ.
ಲಿಂಗ ಜಂಗಮದ ಮಾಟ ಸಮರ್ಪಿತವಾಯಿತಲ್ಲಾ ಬಸವಣ್ಣಾ.
ನಿಶ್ಶಬ್ದವೇದ್ಯವಾದೆಯಲ್ಲಾ ಬಸವಣ್ಣಾ.
ಕಲಿದೇವರದೇವನ ಹೃದಯಕಮಲವ ಹೊಕ್ಕು,
ದೇವರಿಗೆ ದೇವನಾಗಿ ಹೋದೆಯಲ್ಲಾ, ಸಂಗನಬಸವಣ್ಣಾ. || ೨೧೩ ||

೬೫೧

ನಿಮ್ಮ ಜಂಗಮಮೂರ್ತಿಯಲ್ಲಿಯೆ ನಿಂದಿತ್ತು.
ಅರ್ಥ ಪ್ರಾಣ ಅಭಿಮಾನ ನಿಮ್ಮ ಜಂಗಮಮೂರ್ತಿಯಲ್ಲಿಯೆ ನಿಂದಿತ್ತು.
ಅಂಗಲಿಂಗಸಂಗ ನಿಮ್ಮ ಜಂಗಮಮೂರ್ತಿಯಲ್ಲಿಯೆ ನಿಂದವು.
ಎನ್ನ ನಡೆಗೆಟ್ಟಿತ್ತು, ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ನುಡಿಗೆಟ್ಟಿತ್ತು, ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ನೋಟಗೆಟ್ಟಿತ್ತು, ನಿಮ್ಮ ಜಂಗಮಮೂರ್ತಿಯಿಂದ.
ಎನ್ನ ಮಾಟ ಸಮಾಪ್ತವಾಯಿತ್ತು, ನಿಮ್ಮ ಜಂಗಮಮೂರ್ತಿಯಿಂದ.
ನಿಮ್ಮ ಪ್ರಸಾದದಿಂದ ಎನ್ನ ತನು ಶುದ್ಧವಾಯಿತ್ತು.
ಬಸವಣ್ಣನ ತೋರಿದ ಕಾರಣ, ನಿಮ್ಮ ಜಂಗಮಮೂರ್ತಿಯ ಕಂಡು,
ಬದುಕಿದೆನು ಕಾಣಾ, ಕಲಿದೇವರದೇವಯ್ಯಾ. || ೨೧೪ ||

೬೫೨

ನಿರ್ವಾಹವಾಯಿತ್ತಯ್ಯಾ ಬಸವಣ್ಣಂಗೆ ಕಪ್ಪಡಿಯ ಸಂಗಯ್ಯನಲ್ಲಿ.
ಅಕ್ಕನಾಗಾಯಿ ಮಿಂಡ ಮಲ್ಲಿನಾಥ ಹಡಪದ ಅಪ್ಪಣ್ಣ
ಮೊಗವಾಡದ ಕೇಶಿರಾಜ ಕೋಲಶಾಂತಯ್ಯ ಮೊದಲಾದ
ಶಿವಗಣಂಗಳೆಲ್ಲರೂ ಬಸವರಾಜನ ಬಯಲ ಬೆರಸಿದರು.
ಆ ಬಯಲ ಪ್ರಸಾದದಿಂದ,
ನಿರುಪಮ ಪ್ರಭುದೇವರು ಕದಳಿಯಲ್ಲಿ ಬಯಲಾದರು.
ಆ ಬಯಲ ಪ್ರಸಾದದಿಂದ,
ಮೋಳಿಗೆಯ ಮಾರಯ್ಯ ಕಕ್ಕಯ್ಯ ಪಡಿಹಾರಿ ಉತ್ತಣ್ಣ
ಕನ್ನದ ಮಾರಣ್ಣ ಕಲಕೇತ ಬೊಮ್ಮಣ್ಣ ನುಲಿಯ ಚಂದಯ್ಯ
ಹೆಂಡದ ಮಾರಯ್ಯ ಶಂಕರ ದಾಸಿಮಯ್ಯ ಏಕಾಂತ ರಾಮಯ್ಯ
ಮೇದರ ಕೇತಯ್ಯ ಮೊದಲಾದ
ಏಳುನೂರೆಪ್ಪತ್ತು ಅಮರಗಣಂಗಳ ದಂಡು,
ಕೈಲಾಸಕ್ಕೆ ನಡೆಯಿತ್ತು, ಬಂದ ಮಣಿಹ ಪೂರೈಸಿತ್ತು.
ಸಂದ ಪುರಾತನರೆಲ್ಲರು ಎನ್ನ ಮನದ ಮೈಲಿಗೆಯ ಕಳೆದ ಕಾರಣ,
ಕಲಿದೇವರದೇವಯ್ಯಾ,
ಇವರೆಲ್ಲರ ಒಕ್ಕಮಿಕ್ಕಪ್ರಸಾದದ ಬಯಲು ಎನಗಾಯಿತ್ತು. || ೨೧೫ ||

೬೫೩

ಸಿರಾಳ ನಿತ್ಯವೆಲ್ಲಾ ಸ್ಥಾನ ಚೆನ್ನಾಯಿತ್ತು.
ಎಲ್ಲಾ ಗಣಂಗಳು ಚೆನ್ನಾದರು.
ಸಿದ್ಧಗಣ ಮಂದಿರಗಣ ಚೆನ್ನಾಯಿತ್ತು.
ತಾಂಡವ ಅಂಡವ ಚೆನ್ನಾಯಿತ್ತು.
ತ್ರಿಕಾಂಡವ ಭೂಕಾಂಡವ ಚೆನ್ನಾಯಿತ್ತು.
ದೇವಲೋಕ ಮರ್ತ್ಯಲೋಕ ಚೆನ್ನಾಯಿತ್ತು.
ದೇವಗಣಂಗಳು ಶಿವಗಣಂಗಳು ಚೆನ್ನಾಯಿತ್ತು.
ಮಹಾಲೋಕದ ಮಹಾಗಣಂಗಳು ಚೆನ್ನಾಯಿತ್ತು.
ಅತೀತ ಆಚಾರ ಘನ ಚೆನ್ನಾಯಿತ್ತು.
ಪ್ರಸಾದ ನಿರವಯ ಜಂಗಮ ಚೆನ್ನಾಯಿತ್ತು.
ಗಂಗಾ ಬಸವ ಚೆನ್ನಾಯಿತ್ತು.
ಅನಾಗತಮೂರ್ತಿಯಾದ ಆಕಾರವನು
ಕರಸ್ಥಲದಲ್ಲಿ ಹಿಡಿದು, ಬೆಳಗಾಗಿರ್ದ ಜ್ಞಾನ ಚೆನ್ನಾಯಿತ್ತು.

ಮಾಡಿದ ಎನ್ನನು ಚೆನ್ನ ಮಾಡಿದ,
ಕಲಿದೇವಾ, ನಿಮ್ಮ ಶರಣ ಬಸವ ಚೆನ್ನಬಸವನು. || ೨೧೬ ||

೬೫೪

ನಿರಾಳ ನಿರ್ಮಾಯ ಘನವಸ್ತುವೆ,
ನಿಮ್ಮ ಬೆಳಗನುಗುಳಿದಡೆ ಪ್ರಸಾದವಾಯಿತ್ತಲ್ಲಾ.
ನಿಮ್ಮುಗುಳಿನ ಕಿಂಚಿತ್ ಸಿಲುಕಿನಿಂದ,
ಅಕ್ಷರಂಗಳು ಮೂರು ಹುಟ್ಟಿದವು.
ನಿಮ್ಮುಗುಳಿನ ಸಿಲುಕಿನಿಂದ ನಾದಬಿಂದುಕಳೆಗಳಾದವು.
ಅಯ್ಯಾ ನಿಮ್ಮುಗುಳಿನ ಸಿಲುಕಿನಿಂದ,
ಇಬ್ಬರು ಹೆಣ್ಣು ಗಂಡು ಮಕ್ಕಳಾದರು.
ಆ ಇಬ್ಬರು ಮಕ್ಕಳಿಂದೈವರು ಮಕ್ಕಳಾದರು.
ನಿಮ್ಮುಗುಳ ಎಂಜಲೆಂದವರ ಕಣ್ಣು ಕಪ್ಪಾದವು.
ಅಯ್ಯಾ ನಿಮ್ಮುಗುಳೆ ಘನಪ್ರಸಾದವೆಂದರಿದೆನು ಕಾಣಾ,
ಕಲಿದೇವಯ್ಯ. || ೨೧೭ ||

೬೫೫

ನೆನೆವೆನಯ್ಯಾ ಬಸವಣ್ಣ,
ನಿಮ್ಮ ಚರಣವೆನ್ನ ಮನದಲ್ಲಿ ಸಾಹಿತ್ಯವಹನ್ನಕ್ಕ.
ನೋಡುವೆನಯ್ಯಾ ಬಸವಣ್ಣ,
ನಿಮ್ಮ ಮೂರ್ತಿ ಎನ್ನನವಗವಿಸುವನ್ನಕ್ಕ.
ಪೂಜಿಸುವೆನಯ್ಯಾ ಬಸವಣ್ಣ,
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ.
ನಿಮ್ಮ ಆಹ್ವಾನಿಸುವೆನಯ್ಯಾ ಬಸವಣ್ಣ,
ಅನಿಮಿಷ ನಿಮಿಷ ನಿಮಿಷಗಳಿಲ್ಲವೆಂದೆನಿಸುವನ್ನಕ್ಕ.
ನಿಮ್ಮ ಧ್ಯಾನಿಸುವೆನಯ್ಯಾ ಬಸವಣ್ಣ,
ಜ್ಞಾನಜ್ಞಾನವಿಲ್ಲವೆನಿಸುವನ್ನಕ್ಕ.
ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ,
ಅಹಂ ಸೋಹಂ ಎಂಬ ಶಬ್ದವುಳ್ಳನ್ನಕ್ಕ.
ಬಸವಣ್ಣಾ ಎಂದು ಹಾಡುವೆನಯ್ಯ,
ಎನ್ನ ತನುವಿನ ಗಮನ ನಿರ್ಗಮನವಹನ್ನಕ್ಕ.
ಬಸವಣ್ಣಾ ಬಸವಣ್ಣಾ ಬಸವಣ್ಣಾ ಎನುತಿರ್ದೆನಯ್ಯಾ,
ಕಲಿದೇವರದೇವನೆಂಬ ಶಬ್ದವುಳ್ಳನ್ನಕ್ಕ. || ೨೧೮ ||

**೬೫೭**

ನೆನೆವೆನಯ್ಯಾ, ಲೋಹ ಪರುಷದ ಸಂಗದಂತಾಯಿತ್ತಾಗಿ.
ಬಸವಾ ಬಸವಾ ಬಸವಾ ಎಂಬ ಶಬ್ದದೊಳಗೆ
ಎನ್ನ ಗಮನ ನಿರ್ಗಮನವಾಯಿತ್ತು.
ಬಸವಾ ಎಂದೆನಯ್ಯಾ ಕಲಿದೇವರದೇವಾ,
ಕಿಡಿಗೊಂಡ ಅರಗಿನ ಸಂಗದಂತಾಯಿತ್ತಾಗಿ. || ೨೧೯ ||

**೬೫೮**

ಪಕ್ಕ ಮುರಿದ ಕೋಳಿಯಂತೆ ಬೆಕ್ಕಿನ ಬಾಧೆಗೆ ಸಿಕ್ಕಬೇಡವೆಂದು,
ಗುರುಲಿಂಗಜಂಗಮದ ಪಾದತೀರ್ಥಪ್ರಸಾದದ ದಿಕ್ಕ ತೋರೆ,
ದೀಕ್ಷೆಯ ಕೊಟ್ಟು, ಮಾರ್ಗವ ಮೀರಿ,
ಮರಳಿ ಮಕ್ಕಳು ಮಾತಾಪಿತರು ಬಂಧುಗಳು ಭವಿಗಳಾಗಿರಲು,
ಅವರ ಮುಖವ ಬಿಡಲಾರದೆ ಕೂಳಿನಾಸೆ ಮಾಡಿ ಹೋದೆನೆಂದಡೆ,
ಕೋಳಿ ತಾನು ಬೆಕ್ಕು ನಾಯಿ[ಯಿದ್ದ]ಗೃಹಕೆ
ಗುಟುಕಕೊಳಹೋದ ತೆರನಾಯಿತ್ತು, ಕಲಿದೇವರದೇವಯ್ಯ. || ೨೨೦ ||

**೬೫೯**

ಪದ್ಮದೊಳಗಣ ಪತ್ರದೊಳಗಣ ದ್ವಿದಳದೊಳಗಣ
ಸ್ವರದ ಬಯಕೆಯೊಳಗಣ ಕರ್ಣಿಕಾಕುಹರದೊಳಗಣ
ಅಜಸ್ಥಲದೊಳಗಣ ಅಹಿಮಧ್ಯದೊಳಗಣ
ಹಲವುಕೋಟಿ ಪತ್ರದೊಳಗಣ ಕುಹರ ಪದ್ಮಮಧ್ಯದೊಳಗಣ
ಪ್ರಾಣವಿಪ್ಪುದೆಂದು ಆತ್ಮನೆ ನಿಶ್ಚೈಸುವೆನೆನುತ,
ಅನಂತಯೋಗಿಗಳು ಸಂಸಾರದ ವರ್ಮವ ಕೆಡಿಸಿಹೆವೆಂದು,
ಅನಂತನಾಳದಲ್ಲಿ ನಿರ್ಬಂಧವ ಮಾಡಿ ಅಮೃತರಾದೆಹೆವೆಂದು,
ಅಮೃತವ ದಣಿಯಲುಂಡೆಹೆವೆಂದು,
ನಾನಾ ಕುಟಿಲವಾದ ಭಾವದಲ್ಲಿ ಐದಾರೆ ಕಾಣೆವಯ್ಯ.
ನಿಮ್ಮ ಶಿವಾಚಾರದ ಕುಳವನರಿಯದೆ,
ಅನೇಕರು ಬಂಧನದಲ್ಲಿ ಸಿಲುಕಿದರು ಕಾಣಯ್ಯ.
ನೀವು ಚತುರ್ವಿಧಸ್ಥಲ ಮಂಟಪವ ಮಾಡಿವ ಸಿಂಹಾಸನದ ಮೇಲಿರ್ದು
ನಿತ್ಯರಿಗೆ ಭಕ್ತಿಯನೀವುದ ಕಂಡ ಭಕ್ತರು ನಿತ್ಯರು.
ನಿಮಗೆ ಶರಣಾಗತಿವೊಕ್ಕೆ, ಮಹಾಪ್ರಸಾದ.
ದೇವಾತ್ಮಮು ಪರಿಭವಕ್ಕೆ ಬಪ್ಪನೆಯೆಂದಡೆ, ಅದು ಹುಸಿ ಕಾಣಿರೊ.

ಆ ಆತ್ಮನಿಪ್ಪ ನೆಲೆಯ ಕೇಳಿರೊ.
ಗುರುಭಕ್ತಿಯಲ್ಲಿಪ್ಪ, ದಾಸೋಹದಲ್ಲಿಪ್ಪ, ಅರ್ಪಿತ ಪ್ರಸಾದದಲ್ಲಿಪ್ಪ,
ಮಾಡುವಲ್ಲಿಪ್ಪ, ಮಾಡಿಸಿಕೊಂಬಲ್ಲಿಪ್ಪ,
ತನುಮನಧನವೊಂದಾಗಿ ನಿವೇದಿಸುವಲ್ಲಿಪ್ಪ,
ಪರಿಪೂರ್ಣಾತ್ಮವೆಂದು ನಿತ್ಯರಿಗೆ ನೀವು ಕಾರುಣ್ಯವ ಮಾಡಿದಿರಿ.
ನಿಮ್ಮ ಕರುಣಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವರಿಲ್ಲ,
ಮಾಡಿಸಿಕೊಂಬವರಿಲ್ಲ. ಅದು ಕಾರಣ,
ನಿಮ್ಮ ಬಸವಣ್ಣ ಹೇಳಿತ್ತ ಮೀರೆ ಕಾಣಾ, ಕಲಿದೇವಯ್ಯ. || ೨೨೧ ||

೬೫೯

ಪದ್ಮಾಸನದಲ್ಲಿ ಕುಳ್ಳಿರ್ದು ಲಿಂಗಾರ್ಚನೆಯ ಮಾಡುವರ ತೋರಾ ಎನಗೆ.
ಸ್ವರೂಪಿನಲ್ಲಿ ನಿಂದು, ಜಂಗಮಕ್ಕೆ
ಜಂಗಮದಾಸೋಹವ ಮಾಡುವರ ತೋರಾ ಎನಗೆ.
ಮನ ನಿಜರೂಪಿನಲ್ಲಿ ಗುರುಸಿಂಹಾಸನವನೇರಿ ಪರಿಣಾಮವಳವಟ್ಟು,
ಪ್ರಸಾದವ ಗ್ರಹಿಸುವರ ತೋರಾ ಎನಗೆ.
ಇಂತಪ್ಪವರ ಸಂಗದಲ್ಲಿರಿಸು ಕಲಿದೇವಯ್ಯಾ, ನಾ ನಿನ್ನ ಬಲ್ಲೆ.
ನನಗೆಯೂ ನಿನಗೆಯೂ ಇಂತಪ್ಪವರಪೂರ್ವ. || ೨೨೨ ||

೬೬೦

ಪರದೈವ ಪರಧನ ಪರಸ್ತ್ರೀ ಪರನಿಂದೆ ಪರಹಿಂಸೆಯಲ್ಲಿ
ಚರಿಸುವ ಹೊಲೆಯರಿಗೆ, ಕ್ರಿಯಾದೀಕ್ಷೆಯ ಮಾಡುವನೊಬ್ಬ
ಗುರುದ್ರೋಹಿ ನೋಡಾ, ಕಲಿದೇವರದೇವ. || ೨೨೩ ||

೬೬೧

ಪರಧನ ಪರಸತಿಗಳುಪಿದಡೆ,
ಮುಂದೆ ನರಕವೆಂದು ಗುರುವಾಕ್ಯ ಸಾರುತಿದೆ.
ಪರಧನ ಪರಸತಿಗಳುಪಿ
ಹತವಾಗಿ ಹೋದ ದುರ್ಯೋಧನ.
ಪಾಂಡವರ ಕಥೆಯ ಕೇಳಿ,
ಹರಿವ ನದಿಯ ಮಿಂದು, ಗೋದಾನ ಮಾಡುವ
ನರಕಿಗಳ ನುಡಿಯ ಕೇಳಲಾಗದೆಂದ, ಕಲಿದೇವರದೇವ || ೨೨೪ ||

೬೬೨

ಪರಮವಿಭೂತಿಯ ಹಣೆಯಲ್ಲಿ ಧರಿಸಿ,
ಕೊರಳಲ್ಲಿ ರುದ್ರಾಕ್ಷಿಯ ಧರಿಸಿ,
ಗುರು ಕೊಟ್ಟ ಲಿಂಗವ ಕರದಲ್ಲಿ ಧರಿಸಿ,
ಮರಳಿ ಮತ್ತೆ ಧರೆಯ ಪ್ರತಿಷ್ಠೆಗೆರಗುವ
ನರಕಜೀವಿಗಳನೇನೆಂಬೆನಯ್ಯಾ, ಕಲಿದೇವಯ್ಯ. || ೧೧೫ ||

೬೬೩

ಪರ್ವತಕ್ಕೆ ಕಂಬಿ ಕಾವಡಿಯ ಜೀಯರು ದ್ವಿಜರೊಯ್ವರಲ್ಲದೆ
ಜಂಗಮದೇವರೊಯ್ವರೆ?
ಆ ಜಂಗಮದೇವರ ಮೇಲೆ ಹೊರಿಸುವನೆ ಭಕ್ತ ?
ಅವರು ಭಕ್ತರೊಡೆಯರಲ್ಲ.
ಅವರು ದೇವಲೋಕ ಮರ್ತ್ಯಲೋಕಕ್ಕೆ ಹೊರಗು.
ಹೊಯ್ಯೋ ಡಂಗುರವ, ಕಲಿದೇವರು ಸಾಕ್ಷಿಯಾಗಿ. || ೧೧೬ ||

೬೬೪

ಪರಸ್ತ್ರೀಯರ ನೋಡುವ ಕಣ್ಣು,
ಲಿಂಗವ ನೋಡಿದ ಅವರಿಗೆ ಲಿಂಗವಿಲ್ಲ.
ಪರಬ್ರಹ್ಮವ ನುಡಿವ ನಾಲಿಗೆಯಲ್ಲಿ,
ಪರಸ್ತ್ರೀಯರ ಅಧರಪಾನವ ಕೊಂಡಡೆ, ಪ್ರಸಾದಕ್ಕೆ ದೂರ.
ಘನಲಿಂಗವ ಪೂಜಿಸುವ ಕೈಯಲ್ಲಿ,
ಪರಸ್ತ್ರೀಯರ ತೋಳು ಕುಚವ ಮುಟ್ಟಿದಡೆ,
ತಾ ಮಾಡುವ ಪೂಜೆ ನಿಷ್ಫಲ. ಇದರಿದಡೆ ವ್ರತ.
ಅಲ್ಲದಿರ್ದಡೆ, ಸುರೆಯ ಒಳಗೆ ತುಂಬಿ,
ಹೊರಗೆ ಬೂದಿಯ ಪೂಸಿದಂತಾಯಿತ್ತು, ಕಲಿದೇವಾ. || ೧೧೭ ||

೬೬೫

ಪಾದೋದಕ ಪ್ರಸಾದದಿಂದ ಮೇಲೆ ಪರವಿಲ್ಲವಾಗಿ,
ಗುರುವಿಡಿದು ಲಿಂಗವ ಕಂಡೆ.
ಲಿಂಗವಿಡಿದು ಜಂಗಮವ ಕಂಡೆ.
ಪ್ರಸಾದದಿಂದ ಪರವ ಕಂಡೆ.
ಪರವ ತೋರಿದ ಗುರುವಿನಾಜ್ಞೆಯನು ಮೀರುವ
ದುರಾತ್ಮರೆನ್ನ ಮುಖಕ್ಕೆ ತೋರದಿರು, ಕಲಿದೇವರದೇವಯ್ಯಾ. || ೧೧೮ ||

೬೬೬

ಪಾಪಿಗೆ ಪ್ರಾಯಶ್ಚಿತ್ತವುಂಟು.
ಪರವಾದಿಗೆ ಪ್ರಾಯಶ್ಚಿತ್ತವುಂಟು.
ಶಿವಭಕ್ತನಾಗಿ ಅನ್ಯದೈವವ ಪೂಜಿಸುವಂಗೆ
ಪ್ರಾಯಶ್ಚಿತ್ತವಿಲ್ಲವೆಂದ, ಕಲಿದೇವಯ್ಯ. || ೨೨೯ ||

೬೬೭

ಪುರವರಾಧೀಶ್ವರರೆಲ್ಲರೂ ಪುರದೊಡೆಯ ಬಸವಣ್ಣ ಎಂದೆಂಬರು.
ಅಮರಾಧೀಶ್ವರರೆಲ್ಲರೂ ಅಮರಪತಿ ಬಸವಣ್ಣ ಎಂದೆಂಬರು.
ಕೈಲಾಸಾಧಿಪತಿಗಳೆಲ್ಲರೂ ಶಿವಲಿಂಗ ಬಸವಣ್ಣ ಎಂದೆಂಬರು.
ದೇವಸಮೂಹವೆಲ್ಲ ಮಹಾಲಿಂಗ ಬಸವಣ್ಣ ಎಂದೆಂಬರು.
ಪಂಚವಕ್ತ್ರಗಣಂಗಳೆಲ್ಲರೂ ಪಂಚಲಿಂಗ ಬಸವಣ್ಣ ಎಂದೆಂಬರು.
ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯಗಣಂಗಳೆಲ್ಲರೂ
ಪದವೀವ ಬಸವಣ್ಣ ಎಂದೆಂಬರು.
ನಾಗಲೋಕದವರೆಲ್ಲರೂ ಸಕಲಾಧಾರ ಬಸವಣ್ಣ ಎಂದೆಂಬರು.
ಮರ್ತ್ಯಲೋಕದವರೆಲ್ಲರೂ ಗುರುಲಿಂಗ ಬಸವಣ್ಣ ಎಂದೆಂಬರು.
ಭಕ್ತ ಬಸವಣ್ಣ ಎಂದೆಂಬರು, ಸೋಹಿ ದಾಸೋಹಿ ಬಸವಣ್ಣ ಎಂದೆಂಬರು.
ತನುಮನಧನವ ಗುರುಲಿಂಗಜಂಗಮಕ್ಕೆ ನಿವೇದಿಸುವಾತ ಬಸವಣ್ಣ ಎಂದೆಂಬರು.
ಇದು ಕಾರಣ, ನಾನು ಬಸವಣ್ಣ ಬಸವಣ್ಣ ಬಸವಣ್ಣ ಎಂದು
ಬಯಲಾದೆನು ಕಾಣಾ, ಕಲಿದೇವರದೇವ. || ೨೩೦ ||

೬೬೮

ಪೃಥ್ವಿಯ ಗುಣವುಳ್ಳಡೆ ಭಕ್ತ.
ಅಪ್ಪುವಿನ ಗುಣವುಳ್ಳಡೆ ಮಾಹೇಶ್ವರ.
ಅಗ್ನಿಯ ಗುಣವುಳ್ಳಡೆ ಪ್ರಸಾದಿ.
ವಾಯುವಿನ ಗುಣವುಳ್ಳಡೆ ಶರಣ. ಆತ್ಮನ ಗುಣವುಳ್ಳಡೆ ಐಕ್ಯ.
ಇಂತೀ ಕ್ಷಮೆದಮೆಶಾಂತಿಸೈರಣೆಯುಳ್ಳಾತನೆ ಷಟ್ಸ್ಥಲಬ್ರಹ್ಮ.
ಇದು ಕಾರಣ, ಗುರುಲಿಂಗದಲ್ಲಿ ವಿಶ್ವಾಸ,
ಚರಲಿಂಗದಲ್ಲಿ ಸದ್ಭಕ್ತಿಯುಳ್ಳಾತನೆ ಭಕ್ತ ಮಾಹೇಶ್ವರ.
ಪರಬ್ರಹ್ಮದಲ್ಲಿ ಪರಿಣಾಮವುಳ್ಳಾತನೆ ಪ್ರಸಾದಿ.
ತನ್ನ ತಾನರಿದು, ಇದಿರ ಮರೆದಾತನೆ ಪ್ರಾಣಲಿಂಗಿ.
ಅನುಪಮಜ್ಞಾನದಿಂದ ತನ್ನ ನಿಜಸ್ವರೂಪವ ತಿಳಿಯಬಲ್ಲಾತನೆ ಶರಣ.

ಪಿಂಡಬ್ರಹ್ಮಾಂಡವನೊಳಕೊಂಡು
ಚಿದಾನಂದಬ್ರಹ್ಮದಲ್ಲಿ ಕೂಡಬಲ್ಲಾತನೆ ಐಕ್ಯ.
ಇಂತಪ್ಪ ವರ್ಮಾದಿ ವರ್ಮವನರಿಯದ ಅದ್ವೈತಿಗಳೆಲ್ಲ,
ಭವಕ್ಕೆ ಬೀಜರಯ್ಯಾ, ಕಲಿದೇವರದೇವ. || ೨೩೧ ||

೬೬೯

ಪೃಥ್ವಿಯ ಚಿತ್ತದ ಪಂಚಕರ್ಮೇಂದ್ರಿಯಂಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ಅಪ್ಪುವಿನ ಬುದ್ಧಿಯ ಪದಾರ್ಥಂಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ಅಗ್ನಿಯ ಅಹಂಕಾರ ಪಂಚೇಂದ್ರಿಯಂಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ವಾಯುವಿನ ಮನದ ಪಂಚಪ್ರಾಣವಾಯುಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ಆಕಾಶದ ಸುಜ್ಞಾನದ ಜ್ಞಾನಂಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ಆತ್ಮನ ಪರಮಾತ್ಮನ ಹಸ್ತಂಗಳೈದೂ
ಲಿಂಗೈಕ್ಯವಾದವು, ಬಸವಣ್ಣಾ ನಿಮ್ಮಿಂದ.
ಇಂತಿವೆಲ್ಲವೂ ಲಿಂಗೈಕ್ಯವಾದವು ಬಸವಣ್ಣಾ ನಿಮ್ಮಿಂದ.
ಕಲಿದೇವಾ, ನಿಮ್ಮ ಶರಣ ಸಂಗನಬಸವಣ್ಣನ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. || ೨೩೨ ||

೬೭೦

ಪೃಥ್ವಿಯ ಮೇಲಣ ಶಿಲೆಯ ತಂದು, ಪ್ರತಿಮೆಗಳ ಮಾಡಿ,
ಕಲ್ಲುಕುಟಿಗನಲ್ಲಿಯೆ ಗುರುವಾದ, ಕಲ್ಲು ಶಿಷ್ಯನಾದ.
ಹಿಂದಣಾದಿಯನರಿಯದ ಗುರು,
ಮುಂದೆ ವೇದಿಸಲಿಲ್ಲದ, ಉಪದೇಶಕೊಳ್ಳಲರಿಯದ ಶಿಷ್ಯ,
ಈ ಎರಡೂ ಕಲ್ಲುಕುಟಿಗನ ಕಲ್ಲಿನಂತೆ ಕಾಣಾ, ಕಲಿದೇವಯ್ಯ. || ೨೩೩ ||

೬೭೧

ಪೃಥ್ವಿ ಲಿಂಗವೆಂದು ಗತವಾದರು ಹಲಬರು.
ಅಪ್ಪು ಲಿಂಗವೆಂದು ತಪ್ಪಿದರು ಶಿವಪಥವ ಹಲಬರು.
ತೇಜ ಲಿಂಗವೆಂದು ವಾದಿಗಳಾದರು ಹಲಬರು.

ವಾಯು ಲಿಂಗವೆಂದು ಘಾಸಿಯಾದರು ಹಲಬರು.
ಆಕಾಶ ಲಿಂಗವೆಂದು ಶೂನ್ಯವಾದಿಗಳಾದರು ಹಲಬರು.
ಇಂತೀ ಹುಸಿಶಬ್ಧವ ತೊಡೆದು,
ನಿಜಲಿಂಗ ನಿಜಜಂಗಮ ನಿತ್ಯಪ್ರಸಾದದ ನಿಜವ ತೋರಿ,
ಎನ್ನ ಬದುಕಿಸಿದಾತ ಬಸವಣ್ಣ ಕಾಣಾ, ಕಲಿದೇವಯ್ಯ. || ೨೩೪ ||

೬೭೨

ಪ್ರಣಮ ಪ್ರಜ್ವಲಿತವಾಯಿತ್ತು, ಪ್ರಸಾದ ನಿಂದ ಸ್ಥಲವು.
ಪ್ರಸಾದ ಪ್ರಜ್ವಲಿತವಾಯಿತ್ತು, ಅನುಭಾವ ನಿಂದ ಸ್ಥಲವು.
ಅನುಭಾವ ಪ್ರಜ್ವಲಿತವಾಯಿತ್ತು.
ಇಂತಾ ಮಹಾಘನವು ಕಲಿದೇವಾ,
ನಿಮ್ಮ ಶರಣ ಬಸವಣ್ಣನ ನಿಜೈಕ್ಯದ ನಿಲವು. || ೨೩೫ ||

೬೭೩

ಪ್ರಥಮಕಾಲದಲ್ಲಿ ದೇವಗಣ, ಮಹಾಗಣ,
ಕಿನ್ನರಗಣ, ಆಳಾಪಗಣಸಹಿತ ಸಂಗನಬಸವಣ್ಣ.
ಗಣಪ್ರಸಾದಿಯಾಗಿ ಮರ್ತ್ಯಲೋಕಕ್ಕೆ ಮಹವ ತಂದು,
ಶಿವಗಣಂಗಳ ಮಾಡಿದಾತ ಬಸವಣ್ಣ.
ಸ್ವರೂಪ ಸಾರಾಯವ ಪದಾರ್ಥವೆಂದಾತ ಬಸವಣ್ಣ.
ಕಲಿದೇವಯ್ಯ,
ನಿಮ್ಮ ಶರಣನಿಂತಹ ಘನಮಹಿಮ, ನೋಡಯ್ಯಾ. || ೨೩೬ ||

೬೭೪

ಪ್ರಾಣಾಪಾನ ಮೊದಲಾದ ದಶವಾಯುಗಳ ಇಚ್ಛೆಯಲ್ಲಿ ಸುಳಿದಾಡದು.
ಜ್ಞಾನದಲ್ಲಿ ಬೆಳೆವುದು, ನಿರಾಲಂಬದಲ್ಲಿ ಆಡುವುದು,
ಹೃದಯಕಮಲ ಪದ್ಮಪತ್ರದುಸುರನಾಲಿಸಿ,
ಸಂಪುಟಜಂಗಮದಾಟವನಾಡುವುದು,
ಲಿಂಗದ ನೋಟವ ನೋಡುವುದು, ಮಹಾಪ್ರಸಾದದಲ್ಲಿ ಬೆಳೆವುದು,
ಕಲಿದೇವಾ, ನಿಮ್ಮ ಶರಣ ಬಸವಣ್ಣನ ನಿಲವಿದು. || ೨೩೭ ||

೬೭೫

ಬಂದೆಹೆನೆಂಬ ಸುಖವ ಹೆರೆಹಿಂಗಿದವರುಂಟೆ ?
ಕಂಡ ನಿಧಾನವ ಬೇಡ ಎಂದವರುಂಟೆ

ಕಲಿದೇವಯ್ಯ ತಾನೆ ಬಂದೆಹೆನೆಂದಡೆ,
ಬೇಡ ಎನಲೇತಕೆ, ಎಲೆ ಚಂದಯ್ಯ. || ೨೩೮ ||

### ೬೭೬

ಬಕಾರವೆ ಗುರುವಯ್ಯಾ, ಸಕಾರವೆ ಲಿಂಗವಯ್ಯಾ,
ವಕಾರವೆ ಜಂಗಮುವಯ್ಯಾ, ಅದೆಂತೆಂದಡೆ:
ಬಕಾರಂ ಗುರುರೂಪಂ ಚ ಸಕಾರಂ ಲಿಂಗಮೂರ್ತಿ ಹಿ|
ವಕಾರಂ ಚರಮಾಖ್ಯಾತಂ ತ್ರಿವಿಧಂ ತತ್ತ್ವನಿಶ್ಚಯಂ||
ಇಂತೆಂದುದಾಗಿ.
ಉದಯ ಮಧ್ಯ ಸಾಯಂಕಾಲದಲ್ಲಿ,
ಬಸವಾ ಬಸವಾ ಬಸವಾ ಎಂದು ಮಜ್ಜನಕ್ಕೆರೆವ
ಮಹಾಮಹಿಮರ ತೋರಾ, ಕಲಿದೇವರದೇವ. || ೨೩೯ ||

### ೬೭೭

ಬಲಕೆ ಮುರಿದನು ಪೌಳಿಯ ಉತ್ತರ ಬಾಗಿಲಲ್ಲಿ.
ತಲೆವಾಗಿ ಹೊಕ್ಕ ಗತಿಯ ಪವಣಿನಲ್ಲಿ ಧವಳಾರವ.
ಪಶ್ಚಿಮದ್ವಾರದಿಂದ ತ್ರಿವಿಧಗತಿಯ ಶೂನ್ಯಸಿಂಹಾಸನದ ಮೇಲೆ
ಮುಕ್ತಕೇಶದ ಪರಮ ಗುರುರಾಜನೇರಿದ, ಕಲಿದೇವರದೇವನು. || ೨೪೦ ||

### ೬೭೮

ಬಸವಣ್ಣನ ಕಿರುಗೊಳಗೆ
ನಾಗಲೋಕದ ನಾಗಗಣಂಗಳೆನಿಸುವುದು.
ಬಸವಣ್ಣನ ಜಾಣು ಜಂಘೆಯೆ
ಮರ್ತ್ಯಲೋಕದ ಮಹಾಗಣಂಗಳೆನಿಸುವುದು.
ಬಸವಣ್ಣನ ನಾಭಿಯೆ
ದೇವಲೋಕದ ದೇವಗಣಂಗಳೆನಿಸುವುದು.
ಮೇಲಣ ಘನವ ಹೊಗಳುವಡೆ ಎನ್ನಳವಲ್ಲ ಕಲಿದೇವಾ.
ಇನ್ನು ಹೊಗಳುವಡೆ ನಿನ್ನಳವಲ್ಲವೆ ಬಸವಣ್ಣನ. || ೨೪೧ ||

### ೬೭೯

ಬಸವಣ್ಣನ ನೆನೆದೆನ್ನ ತನು ಬಯಲಾಯಿತ್ತು.
ಬಸವಣ್ಣನ ನೆನೆದೆನ್ನ ಮನ ಬಯಲಾಯಿತ್ತು.
ಬಸವಣ್ಣನ ನೆನೆದೆನ್ನ ಭಾವ ಬಯಲಾಯಿತ್ತು.

ಕಲಿದೇವಯ್ಯ ನಿಮ್ಮ ಶರಣ, ಮಹಾಮಹಿಮ
ಸಂಗನಬಸವಣ್ಣನ ನೆನೆನೆನೆದು,
ಎನ್ನ ಸರ್ವಾಂಗ ಲಿಂಗವಾಯಿತ್ತೆಂದರಿದೆನಯ್ಯಾ. ॥ ೨೪೨ ॥

೬೮೦

ಬಸವಣ್ಣನ ನೆನೆವುದೆ ಷೋಡಶೋಪಚಾರ.
ಬಸವಣ್ಣನ ನೆನೆವುದೆ ಪರಮತತ್ವ.
ಬಸವಣ್ಣನ ನೆನೆವುದೆ ಮಹಾನುಭಾವ.
ಕಲಿದೇವಾ, ನಿಮ್ಮ ಶರಣ ಬಸವಣ್ಣನ ನೆನೆದು,
ಸಮಸ್ತಗಣಂಗಳೆಲ್ಲರೂ ಅತಿಶುದ್ಧರಾದರಯ್ಯ. ॥ ೨೪೩ ॥

೬೮೧

ಬಸವಣ್ಣನ ಬಳಿಯಯ್ಯಾ ಗಂಗೆವಾಳುಕಸಮಾರುದ್ರರು.
ಬಸವಣ್ಣನ ಫಲವಯ್ಯಾ ಓಂ ನಮಃ ಶಿವಾಯ ಎಂಬವರೆಲ್ಲರು.
ಬಸವಣ್ಣನ ಆಜ್ಞೆಯಯ್ಯಾ ಎಲ್ಲ ಶಿವಾರ್ಚಕರು.
ಬಸವಣ್ಣನ ಘನವಯ್ಯಾ ತನುದಾಸೋಹಿಗಳು.
ಬಸವಣ್ಣನ ಧನವಯ್ಯಾ ಪಾದೋಕಪ್ರಸಾದಿಗಳು.
ಬಸವಣ್ಣನ ಮನವಯ್ಯಾ ತನುಪದಾರ್ಥವ ಮಾಡಿ,
ಗುರುಲಿಂಗಜಂಗಮಕ್ಕರ್ಪಿಸುವರು.
ಬಸವಣ್ಣ ಮಾಡಿದ ಅನುಗಳಯ್ಯಾ,
ಕನಸಿನಲ್ಲಿ ಮನಸಿನಲ್ಲಿ ಶಿವಶಿವಾ ಎಂಬರೆಲ್ಲರು.
ಬಸವಣ್ಣನ ಬಂಧುಗಳಯ್ಯಾ ಎಲ್ಲಾ ಶಿವಲಾಂಛನಿಗಳು.
ಬಸವಣ್ಣನ ಪ್ರಸಾದಿಗಳಯ್ಯಾ.
ಬಸವಣ್ಣನ ನಾಮಾಮೃತವ ನೆನೆವರೆಲ್ಲರು.
ಎಲೆ ಕಲಿದೇವರದೇವಾ, ಬಸವಣ್ಣನ ಆಜ್ಞೆಯಲ್ಲಿ ನೀನಿರ್ದೆಯಾಗಿ,
ಎಲ್ಲ ಶಿವಭಕ್ತರ ತನುಮನಧನಸಹಿತ ನಾನಾದೆನಯ್ಯಾ. ॥ ೨೪೪ ॥

೬೮೨

ಬಸವಣ್ಣ ಮಾಡಲಿಕೆ ಗುರುವಾಯಿತ್ತು.
ಬಸವಣ್ಣ ಮಾಡಲಿಕೆ ಲಿಂಗವಾಯಿತ್ತು.
ಬಸವಣ್ಣ ಮಾಡಲಿಕೆ ಜಂಗಮವಾಯಿತ್ತು.
ಬಸವಣ್ಣ ಮಾಡಲಿಕೆ ಪ್ರಸಾದವಾಯಿತ್ತು.
ಬಸವಣ್ಣ ಮಾಡಲಿಕೆ ಈರೇಳುಲೋಕವಾಯಿತ್ತು.
ಬಸವಣ್ಣನಿಂದಾದ ಕಲಿದೇವಯ್ಯ. ॥ ೨೪೫ ॥

### ೬೮೩

ಬಸವಣ್ಣಾ ಎಂದಡೆ, ಚೆನ್ನಬಸವಣ್ಣಾ ಎಂದಡೆ,
ಪ್ರಭುದೇವಾ ಎಂದಡೆ. ಮಹಾದೇವಾ ಎಂದಡೆ,
ಮಹಾಸ್ಥಾನದಲ್ಲಿರ್ದು ಕರೆದಡೆ,
ಓ ಎನುತಿರ್ದೆ ಕಾಣಾ, ಕಲಿದೇವರದೇವಾ. || ೨೪೬ ||

### ೬೮೪

ಬಸವ ಮೊದಲಾದ ಮಹಾಪ್ರಮಥಗಣಂಗಳ ಸಮೂಹಕ್ಕೆ ಕಾರಣರಾದ,
ಮರ್ತ್ಯಲೋಕದ ಮಹಾಗಣಂಗಳ ಅಂಶೋದ್ಧಾರಕರಾದ,
ಲಿಂಗಾಚಾರ ಭಕ್ತಮಾಹೇಶ್ವರರ ಪಾಣಿಗ್ರಹಣ ಕ್ರಿಯಾಶಕ್ತಿಯರು
ಸದಾವಾಸ ಪರಿಯಂತರ ಇಷ್ಟಮಹಾಲಿಂಗವ
ತಮ್ಮ ಅಂಗವ ಬಿಟ್ಟು ಅಗಲಿಸಲಾಗದು.
ನಿರಂತರ ಶ್ರೀಗುರುಲಿಂಗಜಂಗಮದ ಚರಣೋದ್ಧೂಳನವನ್ನು
ಲಲಾಟದಲ್ಲಿ ತ್ರಿಪುಂಡ್ರ ರೇಖೆಗಳ ಧರಿಸಿ,
ಮಂತ್ರಸ್ಮರಣೆಯಿಂದ ಲಿಂಗಜಂಗಮಕ್ಕೆ ಪಾಕವ ಮಾಡಿ ಸಮರ್ಪಿಸಿ,
ಕುಶಬ್ದವನಳಿದು ಆಚರಿಸುವದೆ ಸತ್ಯಸದಾಚಾರ.
ಈ ಸನ್ಮಾರ್ಗವ ಬಿಟ್ಟು,ಭವಿಪ್ರಾಣಿಗಳಂತೆ ಸರ್ವಾಂಗಕ್ಕೆ ಹಚ್ಚೆಯನೂರಿಸಿಕೊಂಡು,
ಲಲಾಟದಲ್ಲಿ ಕುಂಕುಮಗಂಧವ ಬೊಟ್ಟು, ಏಕಾಂತವಾಸದಲ್ಲಿ ಹಲವುಪ್ರಸಂಗ.
ಭವಿಜನ್ಮಾತ್ಮರು ತೊಳೆದು ಹೊದಿಕೆ, ಅವರ ಸಂಸರ್ಗ ಮೊದಲಾದ
ದುಃಕೃತ್ಯವ ಮಾಡಿದಲ್ಲಿ ಕಂಡು ಸುಮ್ಮನಿರಲಾಗದು.
ಭಕ್ತಮಾಹೇಶ್ವರರು ಆ ಸ್ತ್ರೀಯರಿಗೆ ಪ್ರತಿಜ್ಞೆಯ ಮಾಡುವದು.
ಅದ ಮೀರಿದಡೆ ಅವರಿಂದ ಪಾಕವ ಕೊಳ್ಳಲಾಗದು.
ಈ ಮಾರ್ಗವನಾಚರಿಸದಿರ್ದಂಥ ಭಕ್ತನಲ್ಲಿ, ಗುರುಚರಮೂರ್ತಿಗಳು,
ಅವನ ಮನೆಯ ಹೊಕ್ಕು, ಲಿಂಗಾರ್ಚನೆ ಲಿಂಗಾರ್ಪಣವ ಮಾಡಲಾಗದು.
ಗುರುವಾಕ್ಯವ ಮೀರಿ. ಅರ್ಥದಿಚ್ಛೆಗೆ ಹೊಕ್ಕು ಬೆರಸಿದಡೆ,
ಅನಾದಿ ಗುರುಲಿಂಗಜಂಗಮ ಭಕ್ತಪ್ರಸಾದಕ್ಕೆ ಹೊರಗಾಗಿ.
ಅಂತ್ಯದಲ್ಲಿ ಶತಸಹಸ್ರ ವೇಳೆ ಶುನಿಸೂಕರಾದಿಗಳಲ್ಲಿ
ಬಿಪ್ಪುದು ತಪ್ಪದು ನೋಡಾ. ಕಲಿದೇವರದೇವ. || ೨೪೭ ||

### ೬೮೫

ಬಹುಜಲದಿಂ ಬಿಟ್ಟು. ಚಿಲುಮೆಯು ತೆರೆಗಡದು.
ನೆಲತುದ ಸೌಕರ್ಯವಲ್ಲದೆ ಅದು ಶೀಲವಲ್ಲ.

ಉಪ್ಪ ಬಿಟ್ಟು ಸಪ್ಪೆಯನುಂಡಡದು ಮನದ ಹೇಸಿಕೆಯಿಲ್ಲದೆ ಅದು ದೃಢವ್ರತವಲ್ಲ.
ವ್ರತ ನಿಶ್ಚಿಯವಾವುದೆಂದಡೆ,
ಪರಸ್ತ್ರೀ ಪರಧನ ಪರದೂಷಣಯವನರಿದು ಬಿಟ್ಟಡೆ,
ಅದು ಅರುವತ್ತಾರುವ್ರತವೆಂದೆ, ಕಲಿದೇವರದೇವ. || ೨೫೮ ||

೬೮೬

ಬಾಲನಹನೊಮ್ಮೆ, ಲೋಲನಹನೊಮ್ಮೆ,
ವೃದ್ಧನಹನೊಮ್ಮೆ, ಮತ್ತನಹನೊಮ್ಮೆ,
ಹೊಳೆದು ತೋರುತಲೊಮ್ಮೆ ತೋರಿ ಅಡಗುತಲೊಮ್ಮೆ.
ವಿಶ್ವವ ನೋಡಿ ಬೆರಗಾಗುತ್ತಮಿರೆ, ಇದ್ದ ಠಾವಿನಲ್ಲಿ
ಮುಂದೆ ತೋರುತ್ತವಿರಲು, ಸಂಪ್ರದಾಯದವರು
ಒಡನೊಡನೆ ಹರಿದುಬಂದು, ಹೇಳುತ್ತಿರಲು,
ಹರಿದು ಬಂದು ಹತ್ತೆಸಾರಿದ,
ಬಸವನ ಮಹಮನೆಯ ತಲೆಯೆತ್ತಿ ನೋಡಿದ.
ಮುಗಿಲ ಮೂಲೆ ತಪ್ಪದೆ ಕುಸುರಿಗೆಲಸಗಳ,
ನಂದಿಯ ಮಂಟಪಗಳ,
ಮೇಲುಪ್ಪರಿಗೆಯ ಭದ್ರಂಗಳ ನೋಡಿ ತಲೆದೂಗುತ್ತ,
ಕಲಿದೇವರದೇವ, ಬಸವನ ಮಹಮನೆಯ
ಪ್ರದಕ್ಷಿಣ ಬಂದು, ದ್ವಾರದ ಮುಂದೆ ನಿಂದಿರ್ದನು, || ೨೫೯ ||

೬೮೭

ಬಿಂದುವ ಹರಿದು, ನಾದವನತಿಗಳೆದು,
ಕಳೆಯ ಬೆಳಗ ಸಾಧಿಸಿ,
ಅಸಾಧ್ಯ ಸಾಧಕನಾದೆಯಲ್ಲಾ ಬಸವಣ್ಣಾ.
ಕಾಯವ ಹೊದ್ದದೆ, ಮಾಯವ ಸೋಂಕದೆ.
ನಿರಾಳವಾಗಿ ನಿಂದೆಯಲ್ಲಾ ಬಸವಣ್ಣಾ.
ನಾ ನಿನ್ನನವಗ್ರಹಿಸಿಕೊಂಡು, ಸಂದುಭೇದವಿಲ್ಲದಿದ್ದಲ್ಲಿ,
ಹೊಗಳಲಿಂಬುಂಟೆ ಬಸವಣ್ಣಾ.
ಕಲಿದೇವರದೇವನು ಕಾಯಗೊಂಡಿಪ್ಪುದು,
ನಿನ್ನಿಂದಲಾನು ಕಂಡೆ ನೋಡಾ, ಸಂಗನಬಸವಣ್ಣಾ. || ೨೬೦ ||

೬೮೮

ಬಿಂದುವ ಹರಿದೆಯಲ್ಲಾ ಬಸವಣ್ಣಾ.
ನಾದವ ಸಿಂಹಾಸನವ ಮಾಡಿಕೊಂಡು ಇದ್ದೆಯಲ್ಲಾ ಬಸವಣ್ಣಾ.

ಅಷ್ಟಗುಣಂಗಳ ನಷ್ಟವ ಮಾಡಿದೆಯಲ್ಲಾ
ನಿಜಲಿಂಗ ಬಸವಣ್ಣಾ.
ಶುಕ್ಲಶೋಣಿತ ಮೇಧಸ್ಸು ಇವರಿಂದಾದ
ಕಾಯವೆತ್ತ ಹೋಯಿತ್ತಯ್ಯಾ ಘನಲಿಂಗ ಬಸವಣ್ಣಾ.
ಭಕ್ತಿಯ ರೂಪುಗೆಟ್ಟು, ಮತ್ತೊಂದು ರೂಪಾದೆಯಲ್ಲಾ
ನಿರೂಪಿ ಬಸವಣ್ಣಾ.
ಶೂನ್ಯಪ್ರಸಾದಿಯಲ್ಲ, ನಿಶ್ಶೂನ್ಯಪ್ರಸಾದಿಯಲ್ಲ.
ಆವ ಪ್ರಸಾದವನೂ ಸೋಂಕದ ಪ್ರಸಾದಿ.
ಯೋನಿಜನಲ್ಲದ, ಅಯೋನಿಜನಲ್ಲದ, ನಿಜಮೂರ್ತಿಯೆನಿಸುವ ಬಸವಣ್ಣಾ.
ಭಕ್ತಿಯ ಹರಹಿಹೋದೆಯಲ್ಲಾ ಬಸವಣ್ಣಾ.
ಮೂರ್ತನಲ್ಲದ, ಅಮೂರ್ತನಲ್ಲದ ಲಿಂಗವ
ತೋರಿದೆಯಲ್ಲಾ ಬಸವಣ್ಣಾ.
ನಿರವಯವಾಗಿ ಹೋದನು ನಮ್ಮ ಬಸವರಾಜನು.
ಬೆಳಗನುಟ್ಟು ಬಯಲಾಗಿ ಹೋದನು ನಮ್ಮ ಬಸವಲಿಂಗನು.
ಬಸವಣ್ಣ ಬಸವಣ್ಣ ಬಸವಣ್ಣ ಎನಲಮ್ಮೆನು,
ಎನ್ನ ವಾಙ್ಮನಕ್ಕಗೋಚರನಾಗಿ.
ಬಸವಣ್ಣಂಗೆ ಶರಣೆಂಬ ಪಥವ ತೋರಯ್ಯಾ,
ಕಲಿದೇವರದೇವ. || ೨೫೧ ||

೬೮೯

ಬಿತ್ತು ಬೆಳಸು ಸರ್ವಜೀವಕಿವನೊಬ್ಬನೆ.
ಮತ್ತೆ ಮರಳಿ ಅನ್ಯದೈವಕ್ಕೆರಗಬೇಕೊ ?
ಪೃಥ್ವೀರಾಜವನಾಳುವವರು,
ಕಾದಿ ಹೋದವರ ಗೋತ್ರವಧೆಯಂ ಮಾಡಿ,
ಸತ್ತುಹೋದ ಪಾಂಡವರು.
ಜಗಕ್ಕೆ ಬಿತ್ತು ಬೆಳೆಯ ಕೊಟ್ಟನೆಂಬ
ನೀತಿಹೀನರ ನುಡಿಯ ಕೇಳಲಾಗದೆಂದ, ಕಲಿದೇವರದೇವ. || ೨೫೨ ||

೬೯೦

ಬಿದ್ದು ಸತ್ತ ಬಸುವ ತಿಂಬ ಹೊಲತಿಗೆ ಹೊಲೆಗಂಡು,
ಶುದ್ಧನೀರ ಮಿಂದಡೆ,
ಅವಳ ಮೊದಲ ಹೊಲೆ ಹೋಯಿತ್ತೆ ?

ಮದ್ಯವ ಸೇವಿಸುವ ಹೊಲೆಯರು,
ದೈವಕ್ಕೆರಗಿ, ಕುಲದಲ್ಲಿ ಶುದ್ಧರಹೆವೆಂಬ ಪರಿಯೆಂತೊ ?
ಮಲಭಾಂಡದ ಕುಲವೆಲ್ಲಾ ಒಂದೆ.
ಗೆಲುವಿಂಗೆ ಹೆಣಗುವ ಹದಿನೆಂಟುಜಾತಿಗಳು,
ಗುರುವಿನ ನೆಲೆಯನರಿಯದೆ,
ಕೆಟ್ಟಪ್ರಾಣಿಗಳನೇನೆಂಬೆನಯ್ಯಾ, ಕಲಿದೇವರದೇವ ? || ೨೫೩ ||

೬೯೧

ಬೆಕ್ಕು ನಾಯಿ ಸೂಳೆ ಸುರೆ ತಾಳಹಣ್ಣು
ಅನ್ಯದೈವ ಭವಿಮಿಶ್ರವುಳ್ಳವರ ಮನೆಯಲ್ಲಿ,
ನಂಟುತನದ ದಾಕ್ಷಿಣ್ಯಕ್ಕಾಗಲಿ,
ನೆಂಟರ ದಾಕ್ಷಿಣ್ಯಕ್ಕಾಗಲಿ ಅದಲ್ಲದೆ,
ಮತ್ತೆ ತನ್ನ ಒಡಲ ಕಕ್ಕುಲತೆಗಾಗಿ ಹೋಗಿ ಹೊಕ್ಕು,
ಅವರುಗಳಲ್ಲಿ ಅನ್ನ ಪಾನವ ಕೊಂಡೆನಾದಡೆ,
ಹೊಲೆಗೇರಿಯ ಹಂದಿಯ ಮುಸುಡ
ಮೂಸಿ ನೋಡಿದಂತಾಯಿತ್ತು, ಅವನ ಮಾಟ,
ಕಲಿದೇವಯ್ಯ ನೀವು ಸಾಕ್ಷಿಯಾಗಿ. || ೨೫೪ ||

೬೯೨

ಬೋಳಿಗೇಕೊ ತ್ರಿಭಸ್ಮಸುರೇಖೆ ?
ಗುರುವಿಗೇಕೊ ಕೊನರು ? ಜಂಗಮಕ್ಕೇಕೊ ಭರವಶ ?
ಲಿಂಗಕ್ಕೇಕೊ ಮುನ್ನೀರು ? ಭಕ್ತಂಗೇಕೊ ಖ್ಯಾತಿಯ ಲಾಭ ?
ಇಂತಿವರು ತಾಳಬಿಟ್ಟು ಕುರಸವ ಕೊಂಡು,
ವಡಿಗಿಡಾಗಿ ಹೊಡೆಯಿಸಿಕೊಳಬೇಡ.
ಮುಂದೆ ಮೇಲಣವರುಹ ನೋಡಿ,
ಬದುಕೆಂದನು ಮಾಚಯ್ಯ, ಕಲಿದೇವರದೇವಾ. || ೨೫೫ ||

೬೯೩

ಬ್ರಹ್ಮನ ಹೆಂಡಿರ ಮಕ್ಕಳ ಹಿಡಿತಂದು,
ಅಡಿಗೆಯ ಮಾಡಿಸಿದಾತ ಬಸವಣ್ಣ.
ವಿಷ್ಣುವಿನ ಸಾಸಿರದೇಳುನೂರು ಕುಮಾರಿಯರ
ಹಿಡಿತಂದು, ದಹಿಸಿದಾತ ಬಸವಣ್ಣ.
ರುದ್ರರ ರುದ್ರಗಣಂಗಳ ಹಿಡಿತಂದು,

ಸ್ವಾಮಿಭೃತ್ಯಾಚಾರಸಂಬಂಧವ ಮಾಡಿಸಿದಾತ ಬಸವಣ್ಣ.
ಆ ಬಸವಣ್ಣಂಗೆ ಪ್ರಸಾದವೆ ನೆಲೆಯಾದುದು,
ಕಲಿದೇವಯ್ಯಾ. || ೨೫೬ ||

೭೯೪

ಬ್ರಾಹ್ಮಣದೈವವೆಂದು ಆರಾಧಿಸಿದ [ಕಾರಣ]
ಗೌತಮಗೆ ಗೋವಧೆಯಾಯಿತ್ತು.
ಬ್ರಾಹ್ಮಣದೈವವೆಂದು ಆರಾಧಿಸಿದ ಕಾರಣ ಕರ್ಣನ ಕವಚ ಹೋಯಿತ್ತು.
ಬ್ರಾಹ್ಮಣದೈವವೆಂದು ಆರಾಧಿಸಿದ ಕಾರಣ ನಾಗಾರ್ಜುನನ ತಲೆ ಹೋಯಿತ್ತು.
ಬ್ರಾಹ್ಮಣದೈವವೆಂದು ಆರಾಧಿಸಿದ ಕಾರಣ ದಕ್ಷಂಗೆ ಕುರಿದಲೆಯಾಯಿತ್ತು.
ವಿಷ್ಣುದೈವವೆಂದು ಆರಾಧಿಸಲು ಬಲಿಗೆ ಬಂಧನವಾಯಿತ್ತು.
ವಿಷ್ಣುದೈವವೆಂದು ಆರಾಧಿಸಿದ ಕಾರಣ
ಪಾಂಡವರಿಗೆ ದೇಶಾಂತರ ಯೋಗವಾಯಿತ್ತು.
ವಿಷ್ಣುದೈವವೆಂದು ಆರಾಧಿಸಲು ಪರಶುರಾಮ ಸಮುದ್ರಕ್ಕೆ ಗುರಿಯಾದ.
ವಿಷ್ಣುದೈವವೆಂದು ಆರಾಧಿಸಲು ವ್ಯಾಸನ ತೋಳು ಆಕಾಶಕ್ಕೆ ಹೋಯಿತ್ತು.
ಈ ದೃಷ್ಟವಿದ್ದು, ಮಾಯಿರಾಣಿಯ ದೈವವೆಂದು ಆರಾಧಿಸಿದ ಕಾರಣ
ತಲೆಯಲ್ಲಿ ಕೆರವ ಕಟ್ಟಿ, ಕೊರಳಲ್ಲಿ ಕವಡೆಯ ಕಟ್ಟಿ,
ಬೇವನುಟ್ಟು, ಜಾವಡಿ ಅರಿಯ ಲಜ್ಜೆ ಹೋಯಿತ್ತು.
ಮುಂದೆ ಭೈರವ ದೇವರೆಂದು ಆರಾಧಿಸಿದ ಕಾರಣ
ಕರುಳ ಬೆರಳ ಖಂಡಿಸಿ ತುತ್ತು ತುತ್ತಿಗೆ ಅಂತರಂಗ ಬಹಿರಂಗವಾಯಿತ್ತು.
ಮುಂದೆ ಜಿನನ ದೈವವೆಂದು ಆರಾಧಿಸಿದ ಕಾರಣ
ಜೈನ ಮಾಡಿದ ಕರ್ಮ ನಿಷ್ಕರ್ಮವಾದುದಾಗಿ ನರರ ಹಾಡಿದಡೆ ಗತಿಯಿಲ್ಲ,
ಕೇಳಿದರೆ ಗತಿಯಿಲ್ಲ
ಹರ ನಿಮ್ಮ ಶರಣರ ಶ್ರೀಪಾದವೆ ಗತಿಯಾಗಿದ್ದ ನೋಡಾ.
ಹರ ನಿಮ್ಮ ಶರಣರ ಒಲವಿಂದ
ತುತ್ತು ಬುತ್ತಿಗೆ ಬೆನ್ನುಹತ್ತುವ ಮಾರಿ ಮಸಣಿ ಮೈಲಾರ
ಹೊನ್ನ ಲಕ್ಕಿಗಳು ಅರ್ಥ ಅಯುಷ್ಯವ ಕೊಡಬಲ್ಲವೆ ?
ಒಡೆಯನಿಲ್ಲದ ಮನೆಯ ತುಡುಗುಣಿನಾಯಿ ಹೊಗುವಂತೆ,
ಜಪವೇಷಿಗಳ ತನುವ ಕಾಡುತಿಹವೆಂದಾ ಕಲಿದೇವಯ್ಯ. || ೨೫೭ ||

೭೯೫

ಭಕ್ತನಾದಡೆ ತ್ರಿವಿಧದ ಮೇಲಣಾಸೆಯಳಿದಿರಬೇಕು.
ವಿರಕ್ತನಾದಡೆ ಧರಿತ್ರಿಯ ವರ್ಗದವರಿಗೊಳಗಾಗಿರದಿರಬೇಕು.

ಜಂಗಮವಾದಡೆ ಅನ್ಯರ ಬಲೆಗೆ ಸಿಲುಕದಿರಬೇಕು.
ಗುರುವಾದಡೆ ಲೇಸ ಕಂಡು ಚರಿಸದಿರಬೇಕು.
ಲಿಂಗವಾದಡೆ ತ್ರಿಶಕ್ತಿಯಿಚ್ಛೆಯಿಲ್ಲದಿರಬೇಕು.
ಕಲಿದೇವಾ, ನಿಮ್ಮ ಶರಣ [ಧರೆಯ] ಪಾವನವ ಮಾಡಿದ ಪರಿಣಾಮಕ್ಕೆ
ನಮೋ ನಮೋ ಎನುತಿರ್ದೆನು. ॥ ೨೫೮ ॥

೬೯೬

ಭಕ್ತ ಭಕ್ತರೆಂದು ನುಡಿವಿರಿ,
ಭಕ್ತರೆಂತಾದಿರೋ ನೀವು ?
ನಿತ್ಯ ನಿರಂಜನಲಿಂಗ ಹಸ್ತದೊಳಗಿದ್ದು,
ಪೃಥ್ವಿಯ ಮೇಲಣ ಪ್ರತಿಷ್ಠೆಗೆರಗುವ
ವ್ಯರ್ಥರನೇನೆಂಬೆನಯ್ಯಾ, ಕಲಿದೇವಯ್ಯ ? ॥ ೨೫೯ ॥

೬೯೭

ಭಕ್ತ ಮಾಹೇಶ್ವರರ ಇಷ್ಟಲಿಂಗವು,
ಶಕ್ತಿಸಂಪುಟದಿಂದ ಉತ್ಕೃಷ್ಟವಾದರೆ,
ಕಾಯವಳಿದೆನೆಂಬ ಕರ್ಮವ ನೋಡಾ.
ಕಾಯವಳಿದು ಕರ್ಮಕ್ಕೆ ಗುರಿಯಾಗದೆ
ಮುನ್ನಿನಂತೆ ಪೂಜಿಸುವ ಮುಕ್ತರ ತೋರಿಸಯ್ಯಾ.
ಅದೆಂತೆಂದಡೆ:
ಅನಾದಿಪ್ರಣಮ, ಆದಿಪ್ರಣಮ, ಅಂತ್ಯಪ್ರಣಮ,
ನಾದಪ್ರಣಮ, ಅನಾದ ಪ್ರಣಮವೆಂಬ
ಪಂಚಪ್ರಣಮಂಗಳ ಪಂಚಸ್ಥಾನದಲ್ಲಿ ಪ್ರತಿಷ್ಠಿಸಿ,
ನಾ ನೀನೆಂಬ ಆನಂದವ ಅರುಹಿಸಿಕೊಟ್ಟನಯ್ಯಾ ಶ್ರೀಗುರು.
ಇಂತೀ ಭೇದಾದಿಭೇದದ ಆದಿಯನರಿಯದೆ,
ಕಾಯವಳಿದೆಹೆನೆಂಬ ಕರ್ಮಭಾಂಡಿಗಳ ಮೆಚ್ಚುವನೆ,
ಕಲಿದೇವರದೇವ. ॥ ೨೬೦ ॥

೬೯೮

ಭಕ್ತರ ಭಾವವ ನೋಡಲೆಂದು
ಸಾಕಾರವಾದ ಲಿಂಗವು ನಿರಾಕಾರವಾದುದಿಲ್ಲವೆ ?
ಭಕ್ತರ ಭಾವವ ನೋಡಲೆಂದು
ಕೆಂಬಾವಿಯ ಭೋಗಣ್ಣಗಳೊಂದಿಗೆ ಹೋದುದಿಲ್ಲವೆ ?

ಭಕ್ತರ ಭಾವವ ನೋಡಲೆಂದು
ಇಷ್ಟಲಿಂಗವು ಅಪ್ಪುವಿನಲ್ಲಿ ಅಡಗಿದುದಿಲ್ಲವೆ ?
ಭಕ್ತರ ಭಾವವ ನೋಡಲೆಂದು
ಇಷ್ಟಲಿಂಗವು ಅಗ್ನಿಯಲ್ಲಿ ಅಳಿದುದಿಲ್ಲವೆ ?
ಭಕ್ತರ ಭಾವವ ನೋಡಲೆಂದು
ಇಷ್ಟಲಿಂಗವು ಶಕ್ತಿಸಂಪುಟದಿಂದ ಉತ್ಕೃಷ್ಟವಾದುದಿಲ್ಲವೆ ?
ಭಕ್ತರ ಭಾವವ ನೋಡಲೆಂದು
ಇಷ್ಟಲಿಂಗವು ಪೃಥ್ವಿಯಲ್ಲಿ ಸ್ಥಾಪ್ಯವಾದಡೇನು ?
ಎತ್ತಿ ಧರಿಸೂದೆ ಭಕ್ತ ವಿರಕ್ತರಿಗೆ, ಮುಕ್ತಿಯ ಪಥವಯ್ಯ.
ಅದೆಂತೆಂದಡೆ: ಉಂಬಲ್ಲಿ ಉಡುವಲ್ಲಿ ಕೊಂಬಲ್ಲಿ ಕೊಡುವಲ್ಲಿ,
ಅರಿವೆ ಮರದೆನೆಂಬ ನಾನಾ ಸಂದೇಹದ ಕೀಲ ಕಳೆದು,
ಇಷ್ಟಲಿಂಗದ ಪೂಜೆ, ಚರಲಿಂಗದ ದಾಸೋಹವ ಮಾಡಬಲ್ಲಡೆ,
ಕಲಿದೇವರದೇವನ ನಿಜವ ಕಾಣಬಹುದು ಕಾಣಾ, ಚಂದಯ್ಯ. || ೨೬೧ ||

೬೯೯

ಭಕ್ತವತ್ಸಲ ಕಲ್ಲಿದೇವನ ಶರಣರು ಮಹಾಪುರುಷರು.
ಕಾಮಕ್ರೋಧಾದಿಗಳಂ ನಂದಿಸುವರು.
ಮದ ಮತ್ಸರಾದಿಗಳ ಸಿಂಹಾಸನವ ಮಾಡಿಕೊಂಬರು.
ಆಶೆಯಾಹಾರಕ್ಕೆ ಕೈಯಾನರು.
ದೇಶವೆನ್ನರು, ದೇಶಾಂತರವ ಮಾಡುವರು,
ಕಲಿದೇವಾ ನಿಮ್ಮ ಶರಣರು. || ೨೬೨||

೨೦೦

ಭವಬಂಧನಂಗಳ ಮೀರಿ ನಿಂದ ಭಕ್ತಮಾಹೇಶ್ವರರು,
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಂಗಳ ಹೊದ್ದದೆ,
ಕ್ಷಮೆ, ದಯೆ, ಶಾಂತಿ, ಸೈರಣೆ, ಸತ್ಯನಿತ್ಯವೆಂಬ
ಷಡ್ಗುಣಸಂಪದಂಗಳ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ
ನಿರಾವಯದಾಚಾರವಿಡಿದಾಚರಿಸುವರೆ ನಿಜಮುಕ್ತರು ನೋಡಾ
ಅಪ್ರಮಾಣ ಅಗಮ್ಯ ಅಗೋಚರ ನಿಷ್ಕಲಂಕ ಕಲಿದೇವರದೇವ. || ೨೬೩ ||

೨೦೧

ಭಾವದಿಂದರ್ಪಿತವೆಂಬ ವ್ರತಗೇಡಿಗಳ ಮಾತ ಕೇಳಲಾಗದು.
ಅಂತರಂಗದಿಂದರ್ಪಿತವೆಂಬನಾಚಾರಿಗಳ ಮಾತ ಕೇಳಲಾಗದು.

ದೂರದಿಂದರ್ಪಿತವೆಂಬ ದುರಾಚಾರಿಗಳ ಮಾತ ಕೇಳಲಾಗದು.
ಕಾಯದ ಮೇಲಣ ಲಿಂಗದಲ್ಲಿ,
ಭಾವಶುದ್ಧಿಯಿಂದೊಡಂಬಡಿಸಿ ಕೊಟ್ಟು ಕೊಳಬಲ್ಲನೆ ಬಲ್ಲ.
ಸಕಲಪದಾರ್ಥಂಗಳ ರೂಪ ತಂದು, ಸಾಕಾರದಲ್ಲಿ ಅರ್ಪಿಸದೆ ಕೊಂಡಡೆ,
ನಾಯಡಗು ನರಮಾಂಸವಯ್ಯಾ, ಕಲಿದೇವಯ್ಯ. || ೨೬೪ ||

೨೦೨

ಭಾವದಿಂದಲಾದ ಶೇಷವ ಕ್ರೀಗರ್ಪಿಸುವೆ.
ಕ್ರೀಯಿಂದಲಾದ ಶೇಷವ ನಿಃಕ್ರೀಗರ್ಪಿಸುವೆ.
ನಿಃಕ್ರೀಯಿಂದಲಾದ ಶೇಷವ ಭಕ್ತಿಗರ್ಪಿಸುವೆ.
ಭಕ್ತಿಯಿಂದಲಾದ ಶೇಷವ ಜಂಗಮಕ್ಕರ್ಪಿಸುವೆ.
ಜಂಗಮದಿಂದಾದ ಶೇಷವ ಪ್ರಸಾದಕ್ಕರ್ಪಿಸುವೆ.
ಪ್ರಸಾದದಿಂದಾದ ಶೇಷವ ಲಿಂಗಕ್ಕರ್ಪಿಸುವೆ.
ಲಿಂಗದಿಂದಾದ ಜ್ಞಾನ, ಜ್ಞಾನದಿಂದ ತೃಪ್ತನಾದೆ ಕಾಣಾ,
ಕಲಿದೇವರದೇವಯ್ಯ. || ೨೬೫ ||

೨೦೩

ಭಾವಮೂರ್ತಿಯಾಗಬೇಕು ಆದಿಲಿಂಗಕ್ಕೆ.
ಅರಿವುಮೂರ್ತಿಯಾಗಬೇಕು ದಾಸೋಹಕ್ಕೆ.
ಹರಿವುಮೂರ್ತಿಯಾಗಬೇಕು ಜಂಗಮಲಿಂಗಕ್ಕೆ.
ಭಕ್ತಿಮೂರ್ತಿಯಾಗಬೇಕು ಪ್ರಸಾದಕ್ಕೆ.
ನಿರ್ಭಾವಮೂರ್ತಿಯಾಗಬೇಕು ಅನುಭಾವಕ್ಕೆ.
ಜ್ಞಾನಮೂರ್ತಿಯಾಗಬೇಕು ಸ್ವಾನುಭಾವಕ್ಕೆ.
ಇಂತೀ ಪ್ರಜ್ವಲಿತವಾದ ತನುವಿನ ಸಂಗದಲಿರ್ಪ,
ಕಲಿದೇವಯ್ಯ. || ೨೬೬ ||

೨೦೪

ಮಡಿಯ ಹೇರಿದ ಕತ್ತೆ ಉಡುವೆತ್ತ ಬಲ್ಲುದು,
ಉಡುವಾತ ಬಲ್ಲನಲ್ಲದೆ, ಕವಿಯ ಮಾತ ಕವಿ ಬಲ್ಲನು.
ನಾಲಗೆ ಬಲ್ಲುದು ರುಚಿಯ.
ಭವದುಃಖಿಯೆತ್ತ ಬಲ್ಲನು ಲಿಂಗದ ಪರಿಯ.
ಮಡಿವಾಳ ಮಡಿವಾಳ ಎಂದು ನುಡಿವುದು ಜಗವೆಲ್ಲ.
ಹರಿಗೊಬ್ಬ ಮಡಿವಾಳನೆ ?

ಮಡಿಯಿತು ಕಾಣಾ ಈರೇಳು ಭುವನವೆಲ್ಲ,
ಮಡಿವಾಳ ಮಾಚಯ್ಯನ ಕೈಯಲ್ಲಿ.
ಮುಂದೆ ಮಡಿದಾತ ಪ್ರಭುದೇವರು,
ಹಿಂದೆ ಮಡಿದಾತ ಬಸವಣ್ಣ.
ಇವರಿಬ್ಬರ ಕರುಣದ ಕಂದನು ನಾನು ಕಲಿದೇವಯ್ಯಾ. || ೨೬೭ ||

೨೦೫

ಮಧುರದ ಗುಣವ ಇರುಹೆ ಬಲ್ಲುದು.
ವಾಯುವಿನ ಗುಣವ ಸರ್ಪ ಬಲ್ಲುದು.
ಗೋತ್ರದ ಗುಣವ ಕಾಗೆ ಬಲ್ಲುದು.
ವೇಳೆಯ ಗುಣವ ಕೋಳಿ ಬಲ್ಲುದು.
ಇದು ಕಾರಣ, ಮನುಷ್ಯಜನ್ಮದಲ್ಲಿ ಬಂದು,
ಶಿವಜ್ಞಾನಾನುಭವವನರಿಯದಿರ್ದಡೆ,
ಆ ಕಾಗೆ ಕೋಳಿಗಿಂದ ಕರಕಷ್ಟ ಕಾಣಾ, ಕಲಿದೇವರದೇವ. || ೨೬೮ ||

೨೦೬

ಮರಣವಿಲ್ಲದ ಮಹಿಮನ ನಿಲವ ತನ್ನಲ್ಲಿ ನೋಡಿ,
ಶರಣೆಂಬುದಲ್ಲದೆ ಮರೆಯಬಹುದೆ, ತೆರಹಿಲ್ಲದ ನಿಲವು ?
ಕಲಿದೇವರದೇವನು
ಕರಸ್ಥಲದೊಳೈದಾನೆ ಕಾಣಾ, ಚೆನ್ನಬಸವಣ್ಣ. || ೨೬೯ ||

೨೦೭

ಮರಹು ಬಂದುದೆಂದರಿದು ಅರಿವ ನೆಲೆ ಮಾಡಿ,
ಅರಿವ ಕೊಟ್ಟು ಗುರುವಿನ ಕೈಯಲ್ಲಿ ಮಹವ ಕೊಂಡೆ ನಾನು.
ಎನ್ನ ಅರಿವನಾಯತದಲ್ಲಿರಿಸಿ ನಿಲ್ಲಿಸಿ,
ನಿಜಸ್ವಾಯತವ ಮಾಡಿದ ಕಾರಣ,
ಅರಿವು ಅರಿವನಾರಡಿಗೊಂಡಿತ್ತು,
ಮರಹು ಮರಹನಾರಡಿಗೊಂಡಿತ್ತು,
ಮಾಯೆ ಮಾಯೆಯನಾರಡಿಗೊಂಡಿತ್ತು,
ಕರ್ಮ ಕರ್ಮವನಾರಡಿಗೊಂಡಿತ್ತು,
ಕಲಿದೇವಯ್ಯಾ, ನಿಮ್ಮ ಶರಣ ಬಸವಣ್ಣನ ಕೃಪೆಯಿಂದ. || ೨೭೦ ||

೭೦೮

ಮಲೆತು ಮೆಟ್ಟುತ್ತ, ತನುವನೊಲೆವುತ್ತ,
ತಲೆದೂಗಿ ಮನವನಲ್ಲಾಡಿಸಿ ನೋಡಿದ.
ಭುವನ ಭುವನೇಶ್ವರನ ಹಿಂದು ಮುಂದ ನೋಡಿ ನಗುತ್ತ,
ಮುತ್ತಿನ ತೋರಣಕ್ಕೆ ಹಾರೈಸಿ,
ಬಸವನರಮನೆಯ ಹೊಕ್ಕ, ಕಲಿದೇವರದೇವ. || ೨೭೧ ||

೭೦೯

ಮಾಚಿತಂದೆಯ ಕೈಯಲಾಗದು.
ಹೋಚಿತಂದೆಯ ಕೈಯಲಾಗದು.
ಇಚ್ಛೆಗೆಟ್ಟಂತೆ ಇರಲಾಗದು.
ಅಚ್ಯೊತ್ತಿದಂತೆ ಇರಬೇಕು ಅತಿ ಚೋದ್ಯವಾಗಿ.
ಎಚ್ಚರಿಕೆಯ ಮುಚ್ಚುಮರಹಿಲ್ಲದೆ ಬೆಚ್ಚಂತಿರಬೇಕು.
ಮಚ್ಚು ಪಲ್ಲಟವಾಗದೆ ಅಚ್ಚರಿಯ ಭಕ್ತಿಭರಿತನಾಗಿರಬೇಕು.
ಕಲಿ ಕರುಳನೊತ್ತಿ ಮುಂದಕ್ಕೆ ನಡೆವನಲ್ಲದೆ,
ಎಡೆಗೋಲನಾಸೆ ಮಾಡುವನೆ ಹೇಳಾ ?
ಕಲಿದೇವರದೇವನ ಅಂಕೆಗೆ ಝುಂಕೆಗೆ,
ಬೆಚ್ಚಿ ಬೆದರಿ ಓಡದಿರು. ವೀರಕಂಕಣವ ಕಟ್ಟಾ, ಸಂಗನಬಸವಣ್ಣಾ. || ೨೭೨ ||

೭೧೦

ಮಾಡುವ ಭಕ್ತಂಗೆ, ಒಲಿದ ದೇವಂಗೆ ಭೇದವುಂಟೆ ಅಯ್ಯಾ ?
ಕಾಯದೊಳಗೆ ಕಾಯವಾಗಿಪ್ಪ,
ಪ್ರಾಣದೊಳಗೆ ಪ್ರಾಣವಾಗಿಪ್ಪ.
ಅರಿದೆಹೆನೆಂದಡೆ ತಾನೆಯಾಗಿಪ್ಪ.
ಅರಸಿ ಬಯಸಿದಡೆ ನಡೆದುಬಹನು.
ಕಲಿದೇವರದೇವನ ಬರವನೀಗಳೆ ತೋರಿ ಕೊಟ್ಟಿಹೆನು ಕೇಳಾ,
ಸಂಗನಬಸವಣ್ಣಾ. || ೨೭೩||

೭೧೧

ಮಾಡುವಾತ ಕಲಿದೇವ,
ಮಾಡಿಸಿಕೊಂಬಾತ ಕಲಿದೇವ.
ಮಾಡುವ ಮಾಡಿಸಿಕೊಂಬವೆರಡರ ಚೈತನ್ಯ, ಬಸವಣ್ಣಾ.
ಸ್ಥೂಲವನು ಸೂಕ್ಷ್ಮವ ಮಾಡಿ ಅನುಕರಿಸಿ.

ಕರಸ್ಥಲದಲ್ಲಿ ತೋರಿದ ಬಸವಣ್ಣ.
ಆ ಬಸವಣ್ಣನ ಸಂಗದಿಂದ ಬದುಕಿದೆ ಕಾಣಾ, ಕಲಿದೇವಯ್ಯ. || ೨೭೪ ||

೭೧೨

ಮಾರಾರಿಯ ಬೆಸನದಿಂದ ಧಾರುಣಿಗವತರಿಸಿ,
ಸಾರಾಯದ ಸದ್ಭಕ್ತಿಯ ತೋರಿದನು ಶಿವಶರಣರೆಲ್ಲರಿಗೆ.
ಭಕ್ತಿಯ ಸಂಚವ, ಮುಕ್ತಿಯ ಭೇದವ,
ಸತ್ಯಶರಣರಿಗೆಲ್ಲ ಉಪದೇಶವ ಮಾಡಿ,
ನಿತ್ಯಲಿಂಗಾರ್ಚನೆಯೊಳಗೆನ್ನನಿರಿಸಿ ರಕ್ಷಿಸಿದಾತ,
ಬಸವಣ್ಣ ಕಾಣಾ, ಕಲಿದೇವರದೇವ. || ೨೭೫ ||

೭೧೩

ಮುನ್ನ ಗುರುವಿಂಗೆ ಜ್ಞಾನವಿಲ್ಲ.
ಇನ್ನು ಶಿಷ್ಯಂಗೆ ಜ್ಞಾನವಿಲ್ಲ.
ಇಂತಪರ ಮಗನಹ ಕುನ್ನಿಗಳನೇನೆಂಬೆ.
ಗುಹೇಶ್ವರಾ, ಅದು ಕಾರಣ ತನ್ನ ಗುರುವಲ್ಲದೆ,
ಅನ್ಯಹಸ್ತ ಮಂಡೆಯ ಮೇಲೆ ಬಿದ್ದಡೆ,
ಆ ಭಕ್ತಿ ಮುನ್ನವೆ ಹಾಳಮದು ಎಂದ, ಕಲಿದೇವಯ್ಯ. || ೨೭೬ ||

೭೧೪

ಮುನ್ನ ಶಿವ ಕೊಟ್ಟ, ಆಯುಷ್ಯವುಂಟೆಂದು,
ವ್ಯಾಘ್ರನ ಗುಹೆಯಿಂ ಇನ್ನು ತೆಗೆವರುಂಟೆ ?
ಉನ್ನತ ಉತ್ಪತ್ಯವೆಲ್ಲಾ ಶಿವನಿಂದಾಯಿತ್ತು.
ನಿನ್ನ ಧನವನುಂಡು, ತಮ್ಮ ಅಜ್ಞಾನದಿಂದ ತಾವರಿಯದೆ ಹೋಗಿ,
ತನ್ನ ಕಾಡಿನ ಮೇಲೆ ಕಾಗೆಗೆ ಕಾಳ ಚಲ್ಲಿ, ಪಿತರುಂಡರೆಂದು
ಕುನ್ನಿಗಳು ಮರುಳಾದರು ನೋಡಾ, ಕಲಿದೇವರದೇವ. || ೨೭೭ ||

೭೧೫

ಮೂರನೊಳಕೊಂಡು ಆರ ಮೀರಿ ನಿಂದ
ಘನವನೇನೆಂಬೆನಯ್ಯಾ ? ನುಡಿವಡೆ ವಾಚಾತೀತ,
ನೋಡುವಡೆ ಕಂಗಳೆರಡೆಯ್ದವಯ್ಯಾ.
ಮಹದ ಬೆಳಗೆ ತಾನಾಗಿ ನಿಂದ, ಮರುಳ ಶಂಕರದೇವರ ನಿಲವ,
ಬಸವಣ್ಣನಿಂದ ಕಂಡು ಬದುಕಿದೆ ಕಾಣಾ, ಕಲಿದೇವರದೇವ. || ೨೭೮ ||

೭೧೬

ಮೂರುಸ್ಥಲದ ಮೂಲವನರಿಯರು.
ಪುಣ್ಯಪಾಪವೆಂಬ ವಿವರವನರಿಯರು. ಇಹಪರವೆಂಬುದನರಿಯರು.
ಇವರನೆಂತು ಮಹಂತಿನ ದೇವರೆಂಬೆನಯ್ಯಾ ?
ಹೊನ್ನ ವಸ್ತ್ರದವನ ಬಾಗಿಲಕಾಯ್ವ ಪಶುಪ್ರಾಣಿಗಳ
ದೇವರೆನ್ನಬಹುದೇನಯ್ಯಾ ?
ಜಗದ ಕರ್ತನ ವೇಷವ ಧರಿಸಿಕೊಂಡು,
ಸರ್ವರಿಗೆ ಬೇಡಿ ಕೊಟ್ಟಡೆ ಒಳ್ಳೆಯವ,
ಕೊಡದಿರ್ದಡೆ ಕೆಟ್ಟವನು.
ಪಾಪಿ ಚಾಂಡಾಲಿ ಅನಾಚಾರಿ ಎಂದು ದೂಷಿಸಿ,
ಒಳಹೊರಗೆಂದು ಬೊಗಳುವ ಮೂಳಮಾನವರಿಗೆ
ಮಹಂತಿನ ಆಚರಣೆ ಎಲ್ಲಿಯದೊ ? ಇಲ್ಲವೆಂದ, ಕಲಿದೇವರದೇವ. ‖ ೨೭೯ ‖

೭೧೭

ಮೃಡನನೊಂದು ದೈವಕ್ಕೆ ಪಡಿಗಟ್ಟಿ ನುಡಿವನ ಬಾಯಲ್ಲಿ,
ಬಿಡದೆ ನೆಟ್ಟುವೆನ್ನೆದಾರು ಗೆಜ್ಜೆಯ ಗೂಟಗಳನು.
ಭೂಮಂಡಲದೊಳಗೆ ಕಲಿದೇವಂಗೆ
ಹುಲುದೈವವ ಸರಿಯೆಂದು ನುಡಿವನ ಬಾಯ,
ಎಡದ ಕಾಲ ಕೆರಹಿಂದ ಬಡಿಯೆಂದ, ಮಡಿವಾಳ ಮಾಚಯ್ಯ. ‖ ೨೮೦ ‖

೭೧೮

ರಂಗದಕ್ಕಿಯ ಹೊಯಿಯೆಂದು ನಿಂದ ನಾಲ್ವರಿಗೆ,
ತಂದಲ್ಲಿ ಶ್ರೀಕಳಸವ ಹಿಡಿಸಿ, ಭಕ್ತಿಗೆ ಚೆಂದವಾಯಿತ್ತು.
ಮುಂದಲ್ಲಿ ಏನ ಬೇಡಲುಂಟು ?
ಬೆಂದ ಮನೆಯಲ್ಲಿ ಹುರಿಗಾವಲಿಯಾದಡೆಯೂ ಬರಲಿಯೆಂದು,
ಶ್ರೀಕಳಸಕ್ಕೆ ದಂಡವನಾಗಳೆ ಕೊಡುವರೆ, ಕಲಿದೇವಯ್ಯಾ. ‖ ೨೮೧ ‖

೭೧೯

ರೂಪನರ್ಪಿತವ ಮಾಡುವರು ತಮತಮಗೆ,
ರುಚಿಯನರ್ಪಿತವ ಮಾಡುವ ಭೇದವನರಿಯರು ನೋಡಾ.
ಅವರನೆಂತು ಭಕ್ತನೆಂಬೆ ? ಅವರನೆಂತು ಪ್ರಸಾದಿಗಳೆಂಬೆ ?
ರೂಪನು ಲಿಂಗಕ್ಕೆ ಕೊಟ್ಟು, ರುಚಿಯ ತಾವು ಭುಂಜಿಸುವ
ಪ್ರೇತಗೇಡಿಗಳಿಗೆ ಪ್ರಸಾದವುಂಟೆ ? ಕಲಿದೇವಯ್ಯ. ‖ ೨೮೨ ‖

೭೨೦

ಲಿಂಗದ ನಿಧಿಯೆ ಬಸವಾ.
ಜಂಗಮದ ವಾರಿಧಿಯೆ ಬಸವಾ.
ಪ್ರಸಾದದ ತವನಿಧಿಯೆ ಬಸವಾ.
ಅನುಭಾವದ ಮೇರುವೆ ಬಸವಾ.
ಮಹವನೊಡಗೂಡಿದ ತನು
ಬಸವಣ್ಣನೊ, ಕಲಿದೇವನೋ ? || ೧೮೩ ||

೭೨೧

ಲಿಂಗ ಬೆರಗಿನ ಪರಮಸುಖಿಯನೇನೆಂಬೆನಯ್ಯಾ !
ಕಂಗಳ ಕಳೆಯ ಸಂಗವನಗಲಿದ,
ಅಂಗವಿರಹಿತನನೇಂದುಪಮಿಸುವೆ !
ನೋಟದಲ್ಲಿ ಅನಿಮಿಷ, ಕೂಟದಲ್ಲಿ ನಿಸ್ಸಂಗಿ,
ಎಡೆಯಾಟದಲ್ಲಿ ನಿರ್ಗಮನ, ನಿಂದಲ್ಲಿ ನಿರಾಳ,
ಸುಳಿದಲ್ಲಿ ಪರಿಪೂರ್ಣ, ಘನಕ್ಕೆ ಘನಮಹಿಮ.
ಕಲಿದೇವಾ, ನಿಮ್ಮ ಶರಣ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. || ೧೮೪ ||

೭೨೨

ಲಿಂಗವೇದಿ ಬಂದೆನ್ನಂಗಣವ ಮೆಟ್ಟಿದಡೆ
ಹೆಂಡತಿ ಗಂಡನನರಿವಂತೆ ಅರಿವೆ.
ಅವರ ಬೆನ್ನಲ್ಲಿ ಬಂದ ಮಂದಿ ಹಲವಾದಡೆ
ಅದಕ್ಕೆ ಪ್ರೀತಿ ಪ್ರೇಮವ ಮಾಡಿ,
ಇಚ್ಛೆಯಲ್ಲಿ ಗಂಡನ ನೆರೆವಂತೆ ನೆರೆವೆ, ಕಲಿದೇವಯ್ಯ. || ೧೮೫ ||

೭೨೩

ಲಿಂಗಾಂಗಿಗಳೆಂದು ಒಪ್ಪವಿಟ್ಟು ನುಡಿದ ಅಣ್ಣಗಳಿರಾ
ನೀವು ಲಿಂಗಾಂಗಿಗಳೆಂತಾದಿರಿ ಹೇಳಿರಣ್ಣಾ.
ಅರಿಯದಿರ್ದಡೆ ಕೇಳಿರಣ್ಣಾ, ಅಂಗ ಲಿಂಗವಾದ ಭೇದವ.
ಪರದೈವವ ನೆನೆಯದೆ, ಪರಸ್ತ್ರೀಯರ ಮುಟ್ಟದೆ,
ಪರದ್ರವ್ಯವ ಅಪಹರಿಸದೆ, ಪರನಿಂದ್ಯವ ಮಾಡದೆ,
ಪರಹಿಂಸೆಗೊಡಂಬಡದೆ, ಪರಪಾಕವ ಮುಟ್ಟದೆ,
ಪರವಾದವ ಕಲ್ಪಿಸದೆ,

ಪರಾತ್ಪರವಾದ ಸತ್ಯಶುದ್ಧ ಕಾಯಕವ ಮಾಡಿ,
ನಿರ್ವಂಚಕತ್ವದಿಂದ ಗುರುಲಿಂಗಜಂಗಮಕ್ಕೆ ಸಮರ್ಪಿಸಿ,
ಅವರಿಗೆ ಅತಿಭೃತ್ಯರಾಗಿ ಆಚರಿಸುವರೆ
ಲಿಂಗಾಂಗಿಗಳು ನೋಡಾ, ಕಲಿದೇವರದೇವ. || ೨೮೬ ||

೭೨೪

ಲಿಂಗೈಕ್ಯ ಲಿಂಗವಂತ ಲಿಂಗಪ್ರಾಣಿ ಪ್ರಾಣಲಿಂಗಿಗಳೆಂದೆನಬಹುದು.
ಉದಯಕಾಲ ಮಧ್ಯಾಹ್ನ ಕಾಲ ವಿಚಿತ್ರಕಾಲ ತ್ರಿಕಾಲ
ಲಿಂಗಾರ್ಚಕರೆಂದೆನಬಹುದು, ಎನಬಹುದು.
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೋರಿದ
ನಿಷ್ಪೃಹರೆಂದೆನಬುಹುದು, ಎನಬಹುದು.
ಧಾರಣೆ ಪಾರಣೆ ಒಡಲ ದಂಡಣೆ ಕರಣ ದಂಡಣೆ
ಉಳ್ಳವರೆಂದೆನಬಹುದು.
ಶೀಲವಂತರು ಸಂಬಂಧಿಗಳು ಒರತೆಯಗ್ಘ[ವ]ಣಿಯ
ನೇಮಿಗಳೆಂದೆನಬುಹು, ಎನಬಹುದು.
ನೇಮ ವ್ರತ ಪಾಕದ್ರವ್ಯವ ಒಲ್ಲೆವೆಂದೆನಬಹುದು, ಎನಬಹುದು.
ಶುದ್ಧಶೈವ ಪೂರ್ವಶೈವ ವೀರಶೈವವೆಂದೆನಬುಹುದು, ಎನಬಹುದು.
ಸರವೇದಿಗಳು ಶಬ್ದವೇದಿಗಳು
ಮಹಾನುಭಾವಿಗಳೆಂದೆನಬಹುದು, ಎನಬಹುದು.
ಇಂತಿವರೆಲ್ಲರೂ
ಶಿವಪಥದೊಳಗೆ ಮಾಡುತ್ತ ಆಡುತ್ತ ಇದ್ದರಲ್ಲದೆ
ಒಂದರ ಕುಳವು ತಿಳಿಯದು ನೋಡಾ.
ಆ ಒಂದು ದಾಸೋಹದಲ್ಲಿ ಬಸವಣ್ಣ ಸ್ವತಂತ್ರ.
ಆ ಲಿಂಗವು ಬಸವಣ್ಣನ ಒಡನೊಡನೆ ಆಡುತಿರ್ದನು ನೋಡಾ. || ೨೮೭ ||

೭೨೫

ಲೋಕಾಚಾರಿಯಲ್ಲದ ಶರಣ, ಸ್ತುತಿನಿಂದೆಯಿಲ್ಲದ ಶರಣ.
ಶತ್ರುಮಿತ್ರರಿಲ್ಲದ ಶರಣ, ಸಂಪತ್ತು ಆಪತ್ತುಗಳಿಲ್ಲದ ಶರಣ.
ಸುಳಿದು ಸೂತಕಿಯಲ್ಲ, ನಿಂದು ಬದ್ಧನಲ್ಲ,
ಕಲಿದೇವಯ್ಯಾ, ನಿಮ್ಮ ಶರಣ ಪ್ರಭುದೇವರು. || ೨೮೮ ||

೭೨೬

ಲೋಕಾದಿಲೋಕ ಹದಿನಾಲ್ಕು ಲೋಕಕ್ಕೆ ಕರ್ತ,
ಒಬ್ಬನೇ ಶಿವನೆಂದು ಶ್ರುತಿಶಾಸ್ತ್ರಗಳು ಸಾರುತ್ತಿವೆ.

ಗುರುದೀಕ್ಷೆಯ ಕೊಟ್ಟು ಮಾರ್ಗವ ಮೀರಿದವಂಗೆ
ಸೂಕರಜನ್ಮ ತಪ್ಪದೆಂದು ಶ್ರುತಿ ಸಾಕ್ಷಿಯ ಹೊಗಳುತ್ತಿವೆ.
ಹರನು ಹರಿಗೆ ಸರಿಯೆಂದಾರಾಧಿಸುವ
ದುರಾಚಾರಿಗಳ ನುಡಿಯ ಕೇಳಲಾಗದೆಂದ,
ಕಲಿದೇವರದೇವಯ್ಯ. || ೨೮೯ ||

೭೨೭

ವಚನದ ರಚನೆಯ ನುಡಿವ ಬಯಲುರಂಜಕರೆಲ್ಲ
ಭಕ್ತರಪ್ಪರೆ ಅಯ್ಯಾ ?
ವಚನ ತನ್ನಂತಿರದು, ತಾನು ವಚನದಂತಿರ.
ಅದೆಂತೆಂದಡೆ:
ತನುಮನಧನವನೆಲ್ಲ ಹಿಂದಿಟ್ಟುಕೊಂಡು,
ಮಾತಿನ ಬಣಬೆಯ ಮುಂದಿಟ್ಟುಕೊಂಡು,
ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ,
ಆ ತೆರನಾಯಿತೆಂದ ಕಲಿದೇವರದೇವಯ್ಯ. || ೨೯೦ ||

೭೨೮

ಕಾಯದ ಮಾಯದ ಸಂಭ್ರಮದೊಳಗೆ
ಸಿಲುಕಿತ್ತು ನೋಡಾ ಭುವನವೆಲ್ಲ.
ಮಾಯಕ್ಕೆ ಹೊರಗಾದ ನಿರ್ಮಾಯನ ಕಂಡೆನು.
ತಾನೆಂಬ ನುಡಿಗೆ ನಾಚಿ, ನಾನೆಂಬ ನುಡಿಗೆ ಹೇಸಿ,
ತಾನು ತಾನಾದ ಘನಮಹಿಮನು.
ಕಾಯದಲ್ಲಿ ಕುರುಹಿಲ್ಲ, ಭಾವದಲ್ಲಿ ಭ್ರಮೆಯಿಲ್ಲ.
ಜ್ಞಾನ ತಾನೆಂಬ ಭೇದವಿಲ್ಲ.
ಸಾವಯನಲ್ಲ ನಿರವಯನಲ್ಲ,
ಕಲಿದೇವರದೇವಾ, ನಿಮ್ಮ ಶರಣ ಚೆನ್ನಬಸವಣ್ಣ. || ೨೯೧ ||

೭೨೯

ವಿಭೂತಿಯನಿಟ್ಟು, ರುದ್ರಾಕ್ಷಿಯಂ ಧರಿಸಿ.
ಪಂಚಾಕ್ಷರಿಯಂ ಜಪಿಸಿ. ಕೃತಾರ್ಥರಾದವೆಂಬ
ಪಂಚಮಹಾಪಾತಕರು ನೀವು ಕೇಳಿರೊ.
ಅದೆಂತೆಂದಡೆ. ವಿಭೂತಿಯನಿಟ್ಟು ವಿಶ್ವಾಸವಿಲ್ಲವಾಗಿ.
ರುದ್ರಾಕ್ಷಿಯ ಧರಿಸಿ ರುದ್ರಗಣಂಗಳನರಿಯರಾಗಿ.

ಪಂಚಾಕ್ಷರಿಯ ಜಪಿಸಿ ಪಂಚಮಹಾಪಾತಕವ ಬಿಡರಾಗಿ,
ಅವಾವೆಂದಡೆ: ಹುಸಿ ಕೊಲೆ ಕಳವು ಪಾರದ್ವಾರ
ತಾಮಸ ಭಕ್ತಸಂಗ, ಇಂತಿವ ಬಿಡದನ್ನಕ್ಕರ
ಶಿವಭಕ್ತನೆನಿಸಿಕೊಳಬಾರದು ನೋಡಾ, ಅದೆಂತೆಂದಡೆ:
ಸರ್ವಾಚಾರ ಪರಿಭ್ರಷ್ಟಃ ಶಿವಾಚಾರಸ್ಯ ಮೇಲನಮ್ |
ಶಿವಾಚಾರ ಪರಿಭ್ರಷ್ಟೋ ನರಕೇ ಕಾಲಮಕ್ಷಯಮ್ ||
ಎಂದುದಾಗಿ.
ಕಸಗೊಂಡ ಭೂಮಿಯಲ್ಲಿ ಸಸಿ ಪಲ್ಲವಿಸುವುದೆ ?
ಹುಸಿಯಿದ್ದಲ್ಲಿ ಶಿವಭಕ್ತಿ ನೆಲೆಗೊಂಬುದೆ ?
ಬಸವಗತಿಯೆನುತ ಹಿರಿದಾಗಿ ಭಸಿತವ ಪೂಸಿಕೊಂಡಿರ್ದ
ಕುನ್ನಿಗಳೆಲ್ಲರೂ ಸದ್ಭಕ್ತರಾಗಬಲ್ಲರೆ ?
ಅಶನ ಭವಿಪಾಕ ತಿಂಬುದೆಲ್ಲವೂ ಅನ್ಯದೈವದೆಂಜಲು.
ಮತ್ತೆ ಮರಳಿ ವ್ಯಸನಕ್ಕೆ ದಾಸಿ ವೇಸಿ ಹೊಲತಿ ಮಾದಗಿತ್ತಿ ಡೊಂಬತಿ
ಮೊದಲಾದವರಿಗೆ ಹೇಸದೆ ಆಶೆಯ ಮಾಡುವವರ
ಭಕ್ತಿಯ ತೆರನೆಂತೆಂದಡೆ:
ಸೂಕರನ ದೇಹವ ತೊಳೆದಡೆ, ಅದು ಕೂಡ
ಅಶುದ್ಧದೊಳಗೆ ಹೊರಳಿದ ತೆರನಾಯಿತ್ತೆಂದ, ಕಲಿದೇವರದೇವ. || ೨೯೨ ||

**೭೩೦**

ವಿಷ್ಣು ದೇವರೆಂದು ಆರಾಧಿಸುವಿರಿ
ವಿಷ್ಣು ದೇವರಾದಡೆ ತಾನೇರುವ ವಾಹನ
ಗರುಡನಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಬ್ರಹ್ಮ ದೇವರೆಂದು ಆರಾಧಿಸುವಿರಿ,
ಬ್ರಹ್ಮ ದೇವರಾದಡೆ ತಾನೇರುವ ವಾಹನ
ಹಂಸೆಯಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಮೈಲಾರ ದೇವರೆಂದು ಆರಾಧಿಸುವಿರಿ,
ಮೈಲಾರ ದೇವರಾದಡೆ ತಾನೇರುವ ವಾಹನ
ಕುದುರೆಯಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಭೈರವನೆ ದೇವರೆಂದು ಆರಾಧಿಸುವಿರಿ,
ಭೈರವನೆ ದೇವರಾದಡೆ ತಾನೇರುವ ವಾಹನ
ಚೇಳಿನಲ್ಲಿ ಉತ್ತಿ ಉಣ್ಣಬಾರದೆ ಅಯ್ಯಾ.
ಇದು ಕಾರಣ, ನಾಗಲೋಕದ ನಾಗಗಣಂಗಳು ಕೊಂಬುದು.

ಬಸವಣ್ಣನ ಪ್ರಸಾದ.
ಮರ್ತ್ಯಲೋಕದ ಮಹಾಗಣಂಗಳು ಕೊಂಬುದು
ಬಸವಣ್ಣನ ಪ್ರಸಾದ.
ದೇವಲೋಕದ ದೇವಗಣಂಗಳು ಕೊಂಬುದು
ಬಸವಣ್ಣನ ಪ್ರಸಾದ.
ಇಂತೀ ನಮ್ಮ ಬಸವಣ್ಣನ ಪ್ರಸಾದ
ಉಂಬುತ್ತ ಉಡುತ್ತ, ಕೊಂಬುತ್ತ ಕೊಡುತ್ತ,
ಅನ್ಯದೈವಕ್ಕೆರಗಿ ಆರಾಧಿಸುವ ಕುನ್ನಿಗಳನೆನ್ನ ಮುಖಕ್ಕೆ ತೋರದಿರಯ್ಯಾ,
ಕಲಿದೇವರದೇವಯ್ಯ ನಿಮ್ಮ ಧರ್ಮ. || ೨೯೩ ||

೭೩೧

ವೇದದಿಂದ ವೆಗ್ಗಳವಿಲ್ಲವೆಂಬಿರಿ, ವೇದ ಶಿವನ ಕಂಡುದಿಲ್ಲ.
ಶಾಸ್ತ್ರ[ದಿಂದ ವೆಗ್ಗಳವಿಲ್ಲ]ವೆಂಬಿರಿ, ಶಾಸ್ತ್ರ ಶಿವನ ಕಂಡುದಿಲ್ಲ.
ವೇದವೆಂಬುದು ವಿಪ್ರರ ಬೋಧೆ.
ಶಾಸ್ತ್ರವೆಂಬುದು ಸಂತೆಯ ಗೋಷ್ಠಿ.
ಅನುಭಾವದಿಂದ ತನ್ನೊಳಗಣ ತನುವ,
ತಾನರಿತಂಥ ಭಕ್ತರಿಂದ ವೆಗ್ಗಳವಿಲ್ಲವೆಂದ, ಕಲಿದೇವರದೇವಯ್ಯ. || ೨೯೪ ||

೭೩೨

ವೇದವನೋದಿದಡೇನು ? ಶಾಸ್ತ್ರವ ಕಲಿತಡೇನು ?
ಮಾಘವ ಮಿಂದಡೇನು ? ಮೂಗ ಹಿಡಿದಡೇನು ?
ಹಲ್ಲ ಕಿರಿದಡೇನು ? ಬಾಯ ಹುಯ್ದುಕೊಂಡಡೇನು ?
ಉಟ್ಟುದನೊಗೆದಡೇನು ? ಮಟ್ಟಿಯನಿಟ್ಟಡೇನು ?
ಮಂಡೆಯ ಬಿಟ್ಟಡೇನು ? ತಿಟ್ಟನೆ ತಿರುಗಿದಡೇನು ?
ಕಣ್ಣು ಮುಚ್ಚಿದಡೇನು ? ಕೈಗಳ ಮುಗಿದಡೇನು ?
ಬೊಟ್ಟನಿಟ್ಟಡೇನು ? ಬಯಲಿಂಗೆ ನೆನೆದಡೇನು ?
ಮುಸುಡ ಹಿಡಿದಡೇನು ? ಮೌನದಲ್ಲಿರ್ದಡೇನು ?
ಅವಕ್ಕೆ ಶಿವಗತಿ ಸಿಕ್ಕದು.
ಕುಲವಳಿದು ಛಲವಳಿದು ಮದವಳಿದು ಮತ್ಸರವಳಿದು,
ಗುರುಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗವ ಧರಿಸಿ,
ಗುರುಲಿಂಗಜಂಗಮಕ್ಕೆ ಭಕ್ತಿಯ ಮಾಡಬಲ್ಲಡೆ,
ಶಿವಗತಿ ಸಿಕ್ಕುವುದು.

ಶಿವಭಕ್ತನಾಗಿ ಸತ್ಯ ಸದಾಚಾರ ಭಕ್ತಿವಿಡಿದು ನಡೆಯಬಲ್ಲಡೆ,
ಕೈಲಾಸದ ಬಟ್ಟೆ ಬೇರಿಲ್ಲವೆಂದ, ಕಲಿದೇವಯ್ಯ. ॥ ೨೯೫ ॥

೭೩೩

ವೇದ ವಿಪ್ರರ ಬೋಧೆ, ಶಾಸ್ತ್ರ ಸಂತೆಯ ಮಾತು.
ಪುರಾಣ ಪುಂಡರ ಗೋಷ್ಠಿ, ಆಗಮ ಅನೃತದ ನುಡಿ.
ತರ್ಕ ವ್ಯಾಕರಣ ಕವಿತ್ವ ಪ್ರೌಢಿ.
ಇಂತಿವರಂಗದ ಮೇಲೆ ಲಿಂಗವಿಲ್ಲದ ಭಾಷೆ.
ಇದು ಕಾರಣ, ತನ್ನೊಳಗನರಿದ
ಅನುಭಾವಿಯಿಂದ ಘನವಿಲ್ಲೆಂದ, ಕಲಿದೇವ. ॥ ೨೯೬ ॥

೭೩೪

ವೇದವೆಂಬುದು ಮಾಯಿಕದ ಕೈಯವಿಕಾರದಲ್ಲಿ ಹುಟ್ಟಿತ್ತು.
ಆಗಮವೆಂಬುದು ಮಾಯಿಕದ ಬಾಯವಿಕಾರದಲ್ಲಿ ಹುಟ್ಟಿತ್ತು.
ಶಾಸ್ತ್ರವೆಂಬುದು ಮಾಯಿಕದ ವೇಷವಿಕಾರದಲ್ಲಿ ಹುಟ್ಟಿತ್ತು.
ಪುರಾಣವೆಂಬುದು ಮಾಯಿಕದ ಕಾಲವಿಕಾರದಲ್ಲಿ ಹುಟ್ಟಿತ್ತು.
ಇದು ಕಾರಣ, ಇವ ತೋರಿ ಕಳೆದು,
ಮಹಾಸ್ಥಲದಲ್ಲಿ ನಿಂದವರುಗಳಲ್ಲದೆ,
ಮಹಾಲಿಂಗ ಕಲಿದೇವರದೇವನೊಲ್ಲನು. ॥ ೨೯೭ ॥

೭೩೫

ವೇಷವ ಹೊತ್ತವರ, ಬಿಟ್ಟಿಯ ಹೊತ್ತವರೆಂಬೆ.
ಪಸರನಿಕ್ಕುವರ ಕಂಚಗಾರರೆಂಬೆ.
ಲಿಂಗವ ತೋರಿ ಉಂಬವರ ಬಂಗಾರರೆಂಬೆ.
ಡವಡಂಬಟ್ಟು ಬೆವಹಾರವ ಲಾಭವಾಗಿ ಬದುಕುವ,
ಫಲದಾಯರೆಲ್ಲರೂ ಧರ್ಮ ಕಾಮ ಮೋಕ್ಷದಲ್ಲಿ ಸಿಕ್ಕಿದರೆಂಬೆ.
ಅಲ್ಲಿಂದತ್ತ ನಿಮ್ಮ ಶ್ರೀಚರಣದ ಸೇವೆಯ ಮಾಡುವ,
ಲಿಂಗನಿಷ್ಠೆ ನಿಜೈಕ್ಯರ ಕರೆದು ಎನಗೆ ತೋರಾ, ಕಲಿದೇವಯ್ಯ. ॥ ೨೯೮ ॥

೭೩೬

ವ್ರತ ನೇಮ ಸಪ್ಪೆ ಒರತೆ ಮುಂತಾದ ನೀರ್ವಿಡಿಯ ನೇಮವಂ ತಾಳಿ,
ಅಂಗನೆಯರ ಸಂಗಸುಖವ ಮೆಚ್ಚಿ,
ಲಿಂಗವ ಕೊಂಡಾಡುವ ಬಾಯಲ್ಲಿ ಹೆಂಗಳ ಅಧರವಂ ಚುಂಬಿಸಿ,

ಲಿಂಗಜಂಗಮದ ಪ್ರಸಾದ ಹೋಯಿತ್ತು.
ಇಷ್ಟಲಿಂಗ ಹಿಡಿವ ಕೈಯಲ್ಲಿ ಬಟ್ಟಿತ್ತು ಕುಚವ ಹಿಡಿದು,
ಉಚ್ಚೆಯ ಬಚ್ಚಲ ತೋಡುವ ಕಸ್ತುಕಾರರನೊಪ್ಪೆನೆಂದ.
ಇಂತಪ್ಪವರ ಭಕ್ತರೆಂದಡೆ, ಮೆಟ್ಟುವ ನರಕದಲ್ಲಿ, ಕಲಿದೇವರದೇವ. || ೨೯೯||

೭೩೭

ವ್ರತಸ್ಥನರಿ[ದು] ವ್ರತಕ್ಕೆ ಗುರಿಯಹನಲ್ಲದೆ,
ಗುರುವ ಕಾಣ, ಲಿಂಗವ ಕಾಣ, ಜಂಗಮವ ಕಾಣ.
ಪಾದೋದಕ ಪ್ರಸಾದಕ್ಕೆ ಅವನಂದೇ ದೂರ.
ಸಾವಿರನೋಂಪಿಯ ನೋಂತು,
ಪಾರದ್ವಾರವ ಮಾಡಿದಂತಾಯಿತ್ತು, ಅವನ ವ್ರತ.
ಬಂದ ಜಂಗಮದ ಕಪ್ಪರ ಕಮಂಡಲ,
ತಮ್ಮ ಭಾಂಡ ಭಾಜನವ ಸೋಂಕಿಹವೆಂಬ
ಮುತ್ತಮುದಿಹೊಲೆಯನ ಮುಖವ ನೋಡಲಾಗದು.
ಅವನ ಮನೆಯಲುಂಡ ಜಂಗಮ,
ಮೂವಟ್ಟಿಲು ಈರಿಲು ಮೂರುದಿನ ಸತ್ತ ಹಂದಿಯ
ಕೂಳನುಂಡಂತೆ, ಕಲಿದೇವರದೇವಾ. ||೩೦೦ ||

೭೩೮

ಶಬ್ದ ಸ್ಪರ್ಶ ರೂಪು ರಸ ಗಂಧ
ಪಂಚವಿಷಯ ಸಂಗತವಾವುದೆಂದಡೆ:
ಶಬ್ದಗುರು, ಸ್ಪರ್ಶಲಿಂಗ, ರೂಪುಜಂಗಮ,
ರಸಪ್ರಸಾದ, ಗಂಧ ಅನುಭಾವ.
ಇಂತೀ ಪಂಚವಿಂಶತಿಯವನಲ್ಲವೆನಬಲ್ಲನಾಗಿ ಬಸವಣ್ಣನು.
ಮನ ಬುದ್ಧಿ ಚಿತ್ತ ಅಹಂಕಾರ ಚತುರ್ವಿಧ ಸ್ಥೂಲವಾವುದೆಂದಡೆ:
ಮನ ಧ್ಯಾನ ಬುದ್ಧಿ ವಂಚನೆ ಇಲ್ಲದುದು.
ಚಿತ್ತ ದಾಸೋಹ ಅಹಂಕಾರ ಜ್ಞಾನ
ಇವರಲ್ಲಿ ಮಾಡಬಲ್ಲನಾಗಿ ಬಸವಣ್ಣನು.
ಸತ್ವ ರಜ ತಮವೆಂಬೀ ತ್ರಿಕರಣವಾವುದೆಂದಡೆ:
ಸತ್ವಶುದ್ಧ ರಜಸಿದ್ಧ ತಮಪ್ರಸಿದ್ಧ.
ಇಂತೀ ತ್ರಿವಿಧ ಸನ್ನಹಿತನಾಗಿ ಬಸವಣ್ಣನು.
ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾವುದೆಂದಡೆ:
ಕಾಮ ಪೂಜೆ, ಕ್ರೋಧ ಅನಿಮಿಷ,

ಲೋಭ ಭಕ್ತಿ, ಮೋಹ ಅಷ್ಟವಿಧಾರ್ಚನೆ,
ಮದ ಷೋಡಶೋಪಚಾರ
ಮತ್ಸರ ಭವಂ ನಾಸ್ತಿ ಎಂದೆನಬಲ್ಲನಾಗಿ ಬಸವಣ್ಣನು,
ಮಹಾದೇವನು ಬಸವಣ್ಣನು, ಮಹಾಲಿಂಗವು ಬಸವಣ್ಣಂಗೆ
ಮತ್ತೇನು ಅಪ್ರತಿಮ ಕಾಣಾ, ಕಲಿದೇವಯ್ಯ. || ೩೦೧ ||

**೭೩೯**

ಶರಣಂಗೆ ಕಟ್ಟಿದಿರ ಕರ್ಪುರ ಜ್ಯೋತಿಯಂತೆ,
ಸಚರಾಚರ ಸಂಭ್ರಮ ಸೂತಕ ಪಾತಕವೆಂಬ ಘೋಷಣೆಗಳು ಹುಟ್ಟದಂದು,
ದೇವಲೋಕ ಮರ್ತ್ಯಲೋಕ ನಾಗಲೋಕ ಹುಟ್ಟದಂದು,
ಹುಟ್ಟಿಸುವಾಗ ಕರೆಸದರವೆಯೆನ್ನಾಧಾರಪಥ,
ಪಲ್ಲವಿಸಿ ಗರ್ಭವಾಯಿತ್ತೆಂದು.
ಮಹಾದೇವಂಗೆ ದೇವಗಣಂಗಳು ಬಿನ್ನಹಂ ಮಾಡುವಲ್ಲಿ,
ಪ್ರಾಣ ಗರ್ಭಿತರುಂಟೆ ? ಅತಿಥರುಂಟೆ ?
ಕ್ಷೀರಸಾಗರದ ನಡುವೆ ಜವುಳು ನೀರುಂಟೆ ?
ಸಂವಿತ್ತು ಸಿಂಹಾಸನದ ಮೇಲೆ ಕಂದನೈದಾನೆ.
ಇಂದು ಶಿವನು ಶಕ್ತಿಯ ಕೂಡಿಯಾಳಾಪವೊಕ್ಕನು ಕಾಣಾ.
ಕಾರುಣ್ಯದ ವಾಹನವನೇರಿಕೊಂಡು,
ಅಷ್ಟಗುಣವಿರಹಿತನು, ತ್ರಿವಿಧಗುಣ ನಷ್ಟನು, ಸದ್ಗುಣ ಸಿಂಹಾಸನನು
ಸಪ್ತಸ್ವರಹಾರದೊಳು, ಘನದೇಹಾರದೊಳು ಹೇಳುವೆ.
ಎನ್ನೊಡೆಯ ಬಂದುದ ಕಂಡು ಬಲವಿಡಿದೆ, ದೃಢವಿಡಿದೆ,
ಜ್ಞಾನವಿಡಿದೆ, ಕಲಿದೇವಾ, ನಿಮ್ಮ ಬಸವನಡಿವಿಡಿದು ಘನವಾದೆ.
ನಮೋ ನಮೋ ಎಂಬೆ ನಿಮ್ಮ ಸಂಗನಬಸವಣ್ಣಂಗೆ. || ೩೦೨ ||

**೭೪೦**

ಶರಣ ನಾದದೊಳಡಗಿ, ನಾದ ಪರನಾದದೊಳಡಗಿ,
ಪರನಾದ ಸುನಾದದೊಳಡಗಿ,
ಈ ನಾದ ಪರನಾದ ಸುನಾದವೆಂಬ ತ್ರಿಭಾವ ತ್ರಿಕೂಟನಾದ,
ಸ್ಥಿರಪ್ರಣಮನಾದದೊಳಡಗಿ,
ಆ ಸ್ಥಿರಪ್ರಣಮನಾದ, ಪ್ರಜ್ವಲಿಪ ನಾದದೊಳಡಗಿ,
ಕಲಿದೇವ ನಿಮ್ಮ ಶರಣ, ನಾದಸ್ವರೂಪನಾದ. || ೩೦೩ ||

೭೪೧

ಶರಣು ಶರಣು ಎನ್ನ ಬಿನ್ನಪವನವಧರಿಸಯ್ಯಾ.
ಬಸವಣ್ಣನೆ ಗುರುರೂಪಾಗಿ ಮರ್ತ್ಯಕ್ಕೆ ಬಂದ.
ಚೆನ್ನಬಸವಣ್ಣನೆ ಲಿಂಗರೂಪಾಗಿ ಮರ್ತ್ಯಕ್ಕೆ ಬಂದ.
ಪ್ರಭುವೆ ನೀವು ಜಂಗಮರೂಪಾಗಿ ಮರ್ತ್ಯಕ್ಕೆ ಬಂದಿರಿ.
ಭಕ್ತಿಯ ಬೆಳವಿಗೆಗೆ ಬಸವಣ್ಣನೆ ಕಾರಣಿಕನಾದ.
ಅರಿವಿನ ಬೆಳವಿಗೆಗೆ ಚೆನ್ನಬಸವಣ್ಣನೆ ಕಾರಣಿಕನಾದ.
ಈ ಇಬ್ಬರನೂ ಒಳಗೊಂಬ ಮಹಾಘನಕ್ಕೆ ನೀವು ಕಾರಣರಾದಿರಿ.
ಇಂತು ಗುರುಲಿಂಗಜಂಗಮವೊಂದೆ ಭಾವವಲ್ಲದೆ ಭಿನ್ನಭಾವವುಂಟೆ ?
ಬಸವಣ್ಣ ಚೆನ್ನಬಸವಣ್ಣನ ಬಿನ್ನಪವ ಮೀರದೆ,
ಬಿಜಯಂಗೆಯ್ಯುದಯ್ಯಾ ಕಲಿದೇವರದೇವ. || ೩೦೪ ||

೭೪೨

ಶರೀರ ತಾ ಮುನ್ನ ಮರಹು, ಶರೀರ ಅವಧಾನ ತಾ ಮುನ್ನ ಮರಹು.
ಮನ ತಾ ಮುನ್ನವೆ ಮರಹು.
ಮನವೆಂಬ ಮರ್ಕಟನ ಮರವೆಯ ನೆನಹು ತಾ ಮುಂದೆ ಮರಹು.
ಮನದಾಳಾಪನೆ ತಾ ಮುನ್ನವೆ ಮರಹು.
ಮನಶರೀರ ಭಾವಂಗಳನರಿದು ನೋಡಾ, ತಿಳಿದು ನೋಡಾ ಎಚ್ಚೆತ್ತು ನೋಡಾ.
ಸತ್ಯನಿತ್ಯ ಶಬ್ದನಿತ್ಯ ಊರ್ಧ್ವಮುಖದಲ್ಲಿ ಉತ್ಪತ್ಯವ ಮಾಡುವೆನೆಂದು,
ಕರುಣೆ ನಿತ್ಯಸಿಂಹಾಸನದ ಮೇಲೆ ದಯವನೆ ಚರಣವ ಮಾಡಿ,
ಮೂರ್ತಗೊಂಡು ಕಾರುಣ್ಯದಿಂ ನೋಡಿದ ಶಿವನು.
ಉದಯಕಾಲ ವಿನೋದಕಾಲ ಶಿವನನು,
ಮಹಾದಯವನು ಬೇಡುವ ಬನ್ನಿರಯ್ಯಾ.
ಮನದಲ್ಲಿ ದಾಸೋಹ ಪರಿಪೂರ್ಣವಾಗಿ, ದಾಸೋಹವ ಬೇಡುವ ಬನ್ನಿರಯ್ಯಾ.
ಸಂಸಾರಸಾಗರದೊಳದ್ದಿ ಹೋದರೆಂದು,
ಮಾಯೆಯೆಂಬ ಕಾಲನು ಬಿನ್ನಹಂ ಮಾಡಿದನು.
ಬ್ರಹ್ಮನರ್ಥ ವಿಷ್ಣುವರ್ಥ ರುದ್ರಾದಿಗಳರ್ಥ ವೇದಶಾಸ್ತ್ರಾಗಮಪುರಾಣಂಗಳರ್ಥ.
ಸಪ್ತಕೋಟಿ ಮಹಾಮಂತ್ರಂಗಳರ್ಥ ದೇವಾದಿದೇವಂಗಳರ್ಥ.
ವೇದಮಂತ್ರವಿಡಿದು ಪ್ರಾಣಘಾತಕರಾಗಿ ದ್ವಿಜರೆಲ್ಲ ಅದ್ದಿಹೋದರೆಂದು,
ಮಾಯೆಯೆಂಬ ಕಾಲನು ಎಲ್ಲರ ಹಿಂದೆ ಇಕ್ಕಿಕೊಂಡು,
ಶಿವಂಗೆ ಬಿನ್ನಹಂ ಮಾಡುವಲ್ಲಿ, ಗಣಂಗಳು ಅದ್ದಿಹೋದುದುಂಟೆಯೆಂದು,
ನಂದಿಕೇಶ್ವರದೇವರು ಬೆಸಗೊಂಡರು.

ಆ ನಿರೂಪಕ್ಕೆ ಮಾಯೆಯೆಂಬ ಕಾಲನು ಕರ್ಣವ ಮುಚ್ಚಿ,
ಸ್ವಯಸ್ವಹಸ್ತಂಗಳಂ ಮುಗಿದು,
ಹೀಗೆಂದು ನಿರೂಪವ ಕರುಣಿಸಿಕೊಡುವರೆ ದೇವಯೆಂದು,
ಎನ್ನ ನಿರ್ಮಿಸಿದವರಾರು? ತ್ರಿಭುವನಂಗಳ ಮಾಡಿದವರಾರು?
ಗಣಂಗಳದ್ದಿ ಹೋದುದುಂಟೆ ದೇವ?
ಯಂತ್ರವಾಹಕ ನೀನು, ಸಕಲಪಾವಕ ನೀನು.
ನಿತ್ಯಭಕ್ತರು ನಿತ್ಯರು, ನಿಮ್ಮ ಗಣಂಗಳು ದಯಾಪಾರಿಗಳು.
ನಿಮ್ಮ ಶರಣರ ನೆನಹಿಂದ,
ಸಮಸ್ತಲೋಕದವರುಗಳಿಗೆ ಚೈತನ್ಯಾತ್ಮವಹುದು.
ಅವಧಾರವಧಾರೆಂದು ಬಿನ್ನಹಂ ಮಾಡಿ,
ಮತ್ತೆ ಕಾಲನು ನಿತ್ಯ ಸಿಂಹಾಸನದ ಮೇಲೆ ಕುಳಿತಿರ್ದು,
ಭಕ್ತಿನಿತ್ಯ ದಾಸೋಹವಂ ಮಾಡಲಿಕೆ ಕರ್ಮವೆಲ್ಲಿಯದು.
ಮಹಾದಾನಿ ಕರುಣವಿಡಿದೆತ್ತಿದಿರೆನುತ ತಿರುಗಿದನು ತನ್ನವರು ಸಹಿತಿತ್ತ.
ಅತ್ತ ಮಹಾಸಂಪಾದನೆಯಲ್ಲಿ ಶರಣ ಬಸವಣ್ಣನಿಗೆ
ಶರಣೆನುತಿರ್ದೆ ಕಾಣಾ, ಕಲಿದೇವರದೇವ. || ೩೦೫ ||

೭೪೩

ಶಿವ ತಾನೀತ ಮರ್ತ್ಯಲೋಕವ ಪಾವನವ ಮಾಡಲು,
ಗುರು ತಾನೀತ ಎನ್ನ ಭವರೋಗವ ವೇಧಿಸಲು,
ಭಕ್ತ ತಾನೀತ ಎನಗೆ ವಿಸ್ತಾರವಾಗಿ.
ಎನಗೆ ಜಂಗಮ ತಾನೀತ ಅನಾದಿ ಸಂಸಿದ್ಧ ಘನಮಹಿಮನಾಗಿ.
ಲಿಂಗ ತಾನೀತ ಎನಗೆ ಪ್ರಾಣಲಿಂಗ ತಾನಾಗಿ.
ಎನ್ನ ವಿಸ್ತಾರ ತಾನೀತ ಎನ್ನ ನಿಲುಕಡೆಯ ತಾನಾಗಿ.
ಎನ್ನ ಸರ್ವಸ್ವಾಯತವ ಮಾಡಿದ ಮಹಿಮ ತಾನೀತ ಕಾಣಾ,
ಕಲಿಗೇವರದೇವ, ನಿಮ್ಮ ಶರಣ ಬಸವಣ್ಣ. || ೩೦೬ ||

೭೪೪

ಶಿವನೊಡ್ಡಿದ ಮಾಯಾಗುಣದಿಂದ ತನ್ನ ತಾನರಿಯದೆ,
ಅಜ್ಞಾನದಿಂದ ಎಂಬತ್ತನಾಲ್ಕುಲಕ್ಷ ಜೀವರಾಶಿಗಳ
ಯೋನಿಯಲ್ಲಿ ಹುಟ್ಟಿ ಹುಟ್ಟಿ,
ಶಿವಕಾರುಣ್ಯದಿಂದ ಮನುಷ್ಯಜನ್ಮಕ್ಕೆ ಬಂದು,
ಆ ಮನುಷ್ಯಜನ್ಮದೊಳಗಧಿಕವಾದ ಶಿವಭಕ್ತಿಯ ಪಡೆದು,

ಆ ಶಿವಭಕ್ತಿಯ ನೆಮ್ಮಿ ಸತ್ಯಸದಾಚಾರವಿಡಿದು ನಡೆದು.
ಏಕಲಿಂಗನಿಷ್ಠೆಯಿಂದ ತನ್ನ ಕಷ್ಟ ಭವಂಗಳ ಗೆಲದಿರ್ದಡೆ,
ಮೆಟ್ಟುವ ನರಕದೊಳಗೆ, ಕಲಿದೇವಯ್ಯ. || ೩೦೭ ||

೭೪೫

ಶಿವಭಕ್ತನಾಗಿ ಭವಿಶೈವದೈವಕ್ಕೆ ಶರಣೆಂದನಾದಡೆ,
ಭವಹರಲಿಂಗದ ಚೇತನವದಂದೇ,
ತೊಲಗುವುದೆಂದ ಕಲಿದೇವಯ್ಯ. || ೩೦೮ ||

೭೪೬

ಶಿವಭಕ್ತಿ ಸಂಗದಿಂದಾದುದಲ್ಲ.
ಸಪ್ತಸ್ವರದಿಂದ ನುಡಿವ ನುಡಿಯಲ್ಲ.
ಉಷ್ಣದಿಂದಾಗುವ ಗಮನದಿಂದ ನಡೆವ ನಡೆಯಲ್ಲ.
ಜೀವನ ಸಂಗಸುಖದಲಾದ ಜೀವಾತ್ಮನಲ್ಲ.
ರೇಚಕ ಪೂರಕ ಕುಂಭಕವೆಂಬ
ಸ್ತ್ರೀಯರ ಉಚ್ಛ್ವಾಸ ನಿಶ್ವಾಸವೆನಿಸಿಕೊಂಬುದಲ್ಲ.
ಸಪ್ತವ್ಯಸನ ಉದರಾಗ್ನಿ ಉಳ್ಳುದಲ್ಲ.
ಅಜನಾಳ ಸೋಹೆಯಲ್ಲಿ ಸುಳಿವುದಲ್ಲ.
ಸತಿಪುರುಷರ ಮಥನದಿಂದಾದುದಲ್ಲ.
ಮಹಾಘನವು ತನುವಿಡಿದು ನಿಂದ ನಿಲವ, ಮಹವೆಂದೇ ಕಾಬುದು.
ಜಂಗಮ ನೋಟ, ಪ್ರಸಾದ ತದ್ಗತ.
ಆವ ವರ್ಣವೂ ಇಲ್ಲದ ಭಕ್ತ, ಕಲಿದೇವನಿಂದಲಾದನು. || ೩೦೯ ||

೭೪೭

ಶಿವಭಕ್ತಿಸಂಪುಟವಾದ ಮಹಾಮಹಿಮರ ನಿಲವು,
ನಾದದ ಉತ್ಪತ್ಯವ ಸೋಂಕದು.
ಬಿಂದುವಿನಾಶ್ರಯದಲ್ಲಿ ಬೆಳೆಯದು.
ಶುಕ್ಲಶೋಣಿತವೆಂಬ ಪಂಚವರ್ಣಾಶ್ರಯವನು ಹೊದ್ದದು.
ಅಷ್ಟದಳಕಮಲವ ಮುಟ್ಟದು.
ಪ್ರಾಣ ಅಪಾನ ವ್ಯಾನ ಉದಾನ ಸಮಾನ
ನಾಗ ಕೂರ್ಮ ಕೃಕರ ದೇವದತ್ತ ಧನಂಜಯವೆಂಬ
ದಶವಾಯುಗಳಿಚ್ಛೆಯಲ್ಲಿ ಸುಳಿದಾಡದು.
ಜ್ಞಾನದಲ್ಲಿ ಬೆಳೆವುದು, ನಿರಾಲಂಬದಲ್ಲಿ ಆಡುವುದು.

ಹೃದಯಕಮಲಪದ್ಮಪತ್ರ ಉಸಿರನಾಲಿಸಿ,
ಶಿರಸಂಪುಟದ ಜಂಗಮದಾಟವನಾಡುವುದು.
ಲಿಂಗದ ನೋಟವ ನೋಡುವುದು, ಮಹಾಘನದಲ್ಲಿ ಬೆಳೆವುದು,
ನಿಜನಿರಾಳದಲ್ಲಿ ನಿವಾಸಿಯಾಗಿಪ್ಪುದು
ಕಲಿದೇವಾ, ನಿಮ್ಮ ಶರಣ ಬಸವಣ್ಣನ ನಿಲವು. || ೩೧೦ ||

೭೪೮

ಶಿವಾಚಾರ ಘನವೆಂಬುದ ಕೇಳಿ, ಭವಿಜಾತವಳಿದು,
ಪುನರ್ಜಾತನಾಗಿ, ಅಂಗದ ಮೇಲೆ ಲಿಂಗವ ಧರಿಸಿ,
ಆ ಲಿಂಗಜಂಗಮವನಾರಾಧಿಸಿ, ಪ್ರಸಾದವ ಕೊಂಡು,
ಭಕ್ತರಾಗಿ ಮುಕ್ತಿಯ ಪಡೆದೆನೆಂಬವರ ಹೆದರಿಸಿ,
ಜರೆದು ಝುಂಕಿಸಿ ಕೆಡೆನುಡಿದು, ಆಚಾರವ ಬಿಡಿಸಿ,
ಅವರ ಹಿಂದಣ ಭವಿಶೈವದೈವಂಗಳ ಹಿಡಿಸಿ,
ತಮ್ಮಂತೆ ನರಕದೊಳಗಾಳಬೇಕೆಂದು,
ನಿಮ್ಮ ಮುನ್ನಿನ ಹಿರಿಯರ ಬೆನ್ನಬಳಿವಿಡಿದು ಬಂದ
ಕುಲದೈವ ಮನೆದೈವ ಬಿಟ್ಟು,
ಈ ಲಿಂಗಜಂಗಮಭಕ್ತಿಯ ಮಾಡಬೇಡೆಂದು
ಹೇಳುವ ಕುನ್ನಿಗಳ ನುಡಿಯ ಕೇಳಲಾಗದೆಂದ, ಕಲಿದೇವಯ್ಯ. ||೩೧೧ ||

೭೪೯

ಶ್ರೀಗುರುವೆ ಕರ್ತನೆಂದು ಪ್ರಸಾದ ಕೊಂಬ
ಪ್ರಸಾದದೇಹಿಗಳು, ನೀವು ಕೇಳಿ ಭೋ.
ಪ್ರಸಾದವಾಯತವನಾಯತವೆಂಬ ಅನಾಚಾರಿಗೆ
ಸದಾಚಾರದ ಶುದ್ಧಿಯೆಲ್ಲಿಯದೊ ?
ಈ ತ್ರಿವಿಧ ಅಚೇತನಂಗೆ ಮುಕ್ತಿಯುಂಟೆಂಬ
ಮೂಕೊರೆಯರ ನೋಡಾ.
ಈ ಮಹಾದಿವ್ಯಪ್ರಸಾದ ಸುಖವನರಿದು,
ಚೆನ್ನಬಸವೇಶ್ವರನುದ್ಭವಿಸಿದನು.
ಈ ಪ್ರಸಾದಕ್ಕೆ ಆಯತ ಅನಾಯತವೆಂಬ
ಅನಾಚಾರಿಯ ಮುಖವನೆನಗೆ ತೋರದಿರು.
ಇಂತಪ್ಪ ಮಹಾಪ್ರಸಾದವ ಕೊಂಡು,
ನಾನು ಬದುಕಿದೆನಯ್ಯಾ, ಕಲಿದೇವಯ್ಯ. || ೩೧೨ ||

೭೫೦

ಶ್ವಾನ ಮುಟ್ಟಿದ ಎಂಜಲನು ಮಾನವರು ಕೇಳ್ವರು.
ಶ್ವಾನನಿಂದ ಕರಕಷ್ಟ ಸುರೆ ದೈವದ ಎಂಜಲ ತಂದು,
ಆನಂದವೆಂಬ ಲಿಂಗಕ್ಕೆ ತೋರಿ, ಭುಂಜಿಸುವಂಗೆ
ಆ ಶ್ವಾನ ಸೂಕರ ಗಂಗೆಯ ಮಿಂದ ತೆರನಂತೆ, ಕಲಿದೇವರದೇವಾ. ‖ ೩೧೩ ‖

೭೫೧

ಸಂಸಾರಸಾರಾಯದ ತನಿರಸವ ಹಿಂಡಿ ಹಿಳಿದಾಡಿದ.
ಕೈಯ ಸವರಿಕೊಂಡು ಹರಿದು ಹತ್ತುವನಲ್ಲ, ಮರಳಿ ನೋಡುವನಲ್ಲ.
ಇಂತಪ್ಪ ವೀರರುಂಟೆ ? ಇಂತಪ್ಪ ಧೀರರುಂಟೆ ?
ಇಂತಪ್ಪ ಪೌರುಷದ ಚರಿತನಾಗಿ ಮಾಯೆಯಂ ಹಿಂಗಿಸಿ,
ಮುಯ್ಯಾಂತು ಮುಂದಣ ನಿಲವನಾಗುಮಾಡಿದ ನಿಜೈಕ್ಯ.
ನಿರ್ವಯಲ ನಿಃಪತಿಗೆ ನಿಜವಾಗಿ, ನಿರಾಳದೊಳಗೆ
ತಾನೆ ತೊಳಲುತಿರ್ದನು. ಕಲಿದೇವಾ,
ನಿಮ್ಮ ಲಿಂಗೈಕ್ಯ ಪ್ರಭುದೇವರ ಶ್ರೀಪಾದಕ್ಕೆ ಭೃಂಗವಾಗಿರ್ದನು. ‖ ೩೧೪ ‖

೭೫೨

ಸತ್ಯರು ನಿತ್ಯರು ಮುಕ್ತರೆಂದು ಅರ್ತಿಗೊಳ್ಳುತ್ತ ನುಡಿವರು.
ಭಕ್ತಿ ಸದಾಚಾರದ ವರ್ತನೆಯ ಸತ್ಯರು ಹೇಳ ಹೋದಡೆ
ನಮಗೆ ತೀರುವುದೆ ಸಂಸಾರಿಗಳಿಗೆಂಬ
ವ್ಯರ್ಥರನೇನೆಂಬೆನಯ್ಯಾ ಕಲಿದೇವಯ್ಯ. ‖ ೩೧೫ ‖

೭೫೩

ಸತ್ಯಸದ್ಭಕ್ತಿಸದಾಚಾರ ಸತ್ಕ್ರಿಯಾ ಸಮ್ಯಗ್‌ಜ್ಞಾನ ಸದ್ವರ್ತನೆ ಸದ್ಭಾವ
ಷಟ್ಸ್ಥಲಮಾರ್ಗಸದ್ಭಕ್ತ ಮಾಹೇಶ್ವರಶರಣಗಣಂಗಳು
ಸದಾವಾಸ ಪರಿಯಂತರ ನೀಚಾಶ್ರಯಗಳ ಹೊದ್ದಲಾಗದು.
ಅದೆಂತೆಂದಡೆ, ಈಚಲಮರದಿಂದ ಮನೆಯ ಕಟ್ಟಲಾಗದು.
ಆ ಗಿಡದ ನೆರಳಲ್ಲಿ ಅರ್ಚನೆ ಅರ್ಪಣ ಶಯನ ಆಸನ
ಮೊದಲಾದ ಕೃತ್ಯಗಳ ಮಾಡಲಾಗದು.
ಪಾಕವ ಮಾಡುವಲ್ಲಿ ಅದರ ಕಾಷ್ಠದಲ್ಲಿ ಅಡಿಗೆಯ ಮಾಡಲಾಗದು.
ಅಣಬೆ ಇಂಗು ಹಾಕಿ ಭವಿಜನ್ಮಾತ್ಮರ ದರ್ಶನ ಸ್ಪರ್ಶನ
ಸಂಭಾಷಣೆಯಿಂದ ಪಾಕವ ಮಾಡಲಾಗದು.
ತಥಾಪಿಸಿ ಮಾಡಿದ ಪಾಕವ ಶರಣಗಣಂಗಳು ಲಿಂಗಾರ್ಪಿತವ ಮಾಡಲಾಗದು.

ಲಿಂಗಬಾಹ್ಯರು ಆಚಾರಭ್ರಷ್ಟರು ಭವಿಸಂಪರ್ಕರು
ಗುರುಲಿಂಗಜಂಗಮದ್ರೋಹಿಗಳು ಮೊದಲಾದವರ ಸಮ್ಮುಖದಲ್ಲಿ
ಅರ್ಚನೆ ಅರ್ಪಣಕ್ರಿಯೆಗಳ ಮಾಡಲಾಗದು.
ಅವರು ಮಾಡಿದ ಪಾಕವ ಪರಶಿವಲಿಂಗಕ್ಕೆ ಅರ್ಪಿಸಲಾಗದು.
ಪಾದೋದಕಪ್ರಸಾದದ್ರೋಹಿಗಳ ಸಮಪಙ್ತಿಯ ಮಾಡಲಾಗದು.
ಅವರಾರಾರೆಂದಡೆ, ಗಣಸಮೂಹದಲ್ಲಿ ಪ್ರಸಾದವ ಕೈಕೊಂಡು,
ಸಾವಧಾನ ಭಕ್ತಿಯಿಂದ ಮುಗಿದು, ತಾನೊಬ್ಬನೆ ಏಕಾಂತವಾಸದಲ್ಲಿ
ಸಾವಧಾನ ಭಕ್ತಿಯನುಳಿದು, ಲಿಂಗಕ್ಕೆ ಕೊಡದೆ, ತನ್ನ ಅಂಗವಿಕಾರದಿಂದ,
ಮನಬಂದಂತೆ ಸೂಸಾಡಿ ಭುಂಜಿಸುವನೊಬ್ಬ ಪಾದೋದಕಪ್ರಸಾದದ್ರೋಹಿ.
ಸಮಪಙ್ತಿಯಲ್ಲಿ ತನ್ನ ಅಂಗವಿಕಾರದಿಂದ ನನಗೆ ಓಗರವಾಯಿತ್ತೆಂದು,
ಪ್ರಸಾದಿಸ್ಥಲಹೀನರ ಕರದು ಕೊಡುವನೊಬ್ಬ ಪಾದೋದಕಪ್ರಸಾದದ್ರೋಹಿ.
ತಾ ಮುಗಿದ ಸಮಯದಲ್ಲಿ ಮಧುರ ಒಗರು ಕಾರ ಹುಳಿ ಕಹಿ ಅತಿಯಾಸೆಯಿಂದ
ನೀಡಿಸಿಕೊಂಡು, ಜಿಗುಪ್ಸೆ ಹುಟ್ಟಿ,
ಕಡೆಗೆ ಬಿಸುಟನೊಬ್ಬ ಪಾದೋದಕ ಪ್ರಸಾದದ್ರೋಹಿ.
ಗುರುಲಿಂಗಜಂಗಮದಿಂದ ಪಾದೋದಕಪ್ರಣಮ ಪ್ರಸಾದಪ್ರಣಮವ ಪಡೆದು,
ಮತ್ತಾ ಗುರುಲಿಂಗಜಂಗಮನಿಂದೆಯ
ಮಾಡುವನೊಬ್ಬ ಪಾದೋದಕಪ್ರಸಾದದ್ರೋಹಿ.
ಇಂತಪ್ಪ ಪರಮದ್ರೋಹಿಗಳ ದರ್ಶನದಿಂದ
ಪಾದಾರ್ಚನೆ ಅರ್ಪಣಗಳ
ಮಾಡಲಾಗದು ನೋಡಾ, ಕಲಿದೇವರದೇವ. || ೩೧೬ ||

೭೫೪

ಸತ್ಯಸದಾಚಾರ ಭಕ್ತಿಯನರಿಯದೆ
ಬರಿದೆ ಭಕ್ತರೆಂಬುದ ನೋಡಾ.
ಮತ್ತೆ ಮರಳಿ ಮನೆದೈವ ಕುಲದೈವಕೆರಗುತ್ತ
ಭಕ್ತರೆಂದು ನುಡಿದಡೆ ನರಕದಲ್ಲಿ ಮೆಟ್ಟುವನೆಂದ
ಕಲಿದೇವಯ್ಯ. || ೩೧೭ ||

೭೫೫

ಸತ್ತು ಗುರುವಿನ ಕಾರುಣ್ಯವ ಕೊಂಬ ಶಿಷ್ಯಂಗೆ
ಭಕ್ತಿ ವಿಸ್ತರಿಸುವುದು, ಕರ್ತಾರ ನೆಲೆಗೊಂಬ.
ಕೊಟ್ಟುದನು ಮರೆದು ಬಳಸುವ
ಮಿಟ್ಟೆಯ ಭಂಡರನೇನೆಂಬೆ ಹೇಳಾ, ಕಲಿದೇವರದೇವಯ್ಯ. || ೩೧೮ ||

೭೫೬

ಸತ್ತು ಚಿತ್ತು ಆನಂದ ನಿತ್ಯಪರಿಪೂರ್ಣನೆಂದೆಂಬರು.
ನಾನದ ಮನದಲ್ಲಿ ಹಿಡಿದು ಮಾತಾಡುವೆನಲ್ಲದೆ ಕ್ರೀಯಿಂದ ಕಾಣೆ.
ಸತ್ತೆ ಗುರು, ಚಿತ್ತೆ ಲಿಂಗ, ಆನಂದವೆ ಜಂಗಮ.
ನಿತ್ಯವೆ ಪ್ರಸಾದ, ಪರಿಪೂರ್ಣವೆ ಪಾದೋಕವೆಂಬುದನವಗ್ರಹಿಸಿ ನಿಂದು,
ಜಂಗಮಕ್ಕೆ ಭಕ್ತನಾದೆನಯ್ಯಾ.
ನಿತ್ಯನಾಗಿ ನಿಮ್ಮ ಜಂಗಮಕ್ಕೆ ವಂದಿಸುವೆ.
ಆನಂದದಿಂದ ನಿಮ್ಮ ಜಂಗಮದ ಪಾದೋದಕವ ಕೊಂಬೆ.
ಪರಿಪೂರ್ಣನಾಗಿ ನಿಮ್ಮನರ್ಚಿಸಿ ಪೂಜಿಸಿ ಪರವಶನಪ್ಪೆ ನಾನು.
ಭಕ್ತಿಪ್ರಸಾದ ಮುಕ್ತಿಪ್ರಸಾದ ನಿತ್ಯಪ್ರಸಾದವ
ನಿಮ್ಮ ಜಂಗಮದಲ್ಲಿ ವರವ ಪಡೆದು,
ಕಲಿದೇವರದೇವಾ, ನಿಮ್ಮ ಶರಣ ಪ್ರಭುದೇವರ
ಶ್ರೀಪಾದದಲ್ಲಿ ಮನಮಗ್ನನಾಗಿರ್ದೆನಯ್ಯ. || ೩೧೯ ||

೭೫೭

ಸತ್ತು ಮಣ್ಣಾಗಿ ಹೋದ ಮಾತಾಪಿತರುಗಳು
ತಮ್ಮ ಸಂತಾನವಾಗಿ ಜನಿಸಿ ಬಂದರೆಂದು
ಹೆತ್ತು ಹೆಸರಿಟ್ಟು ಕರೆವರಯ್ಯಾ.
ಕಾಗೆಯ ಬಾಯ ಕರಗದ ಬಾಯೋಗರವ ಕೊಂಡು
ಅನ್ಯದೈವಂಗಳ ಪೂಜಿಸುವ ಲೋಗರವರ
ಕೈಯಲುಪದೇಶವ ಮಾಡಿಸಿಕೊಂಡ ಶಿಷ್ಯಂಗೆ
ಉಪದೇಶವ ಕೊಟ್ಟ ಗುರುವಿಂಗೆ
ಅವರಿಬ್ಬರಿಗೆಯೂ ಅಜ್ಞಾನಭವಂ ನಾಸ್ತಿಯಾಗದೆ
ಭವಸಾಗರದೊಳಗವರಿಬ್ಬರೂ ಅಳುತ್ತ
ಮುಳುಗುತ್ತಲಿಹರು ಕಾಣಾ, ಕಲಿದೇವರದೇವ. || ೩೨೦ ||

೭೫೮

ಸನ್ಮಾರ್ಗದ ವಿಚಾರವ ಸದ್ಗುರು ಮುಖದಿಂ ತಿಳಿದು,
ತನ್ನಂತರಂಗ ಬಹಿರಂಗದ ಸಂದುಸಂಶಯವ ಪರಿಹರಿಸಿ,
ನಿಶ್ಚಿಂತನಾಗಿ ನಿಜದಲ್ಲಿ ನಿಂದು, ಅಂಗಕ್ಕಾಚಾರವ ಸಂಬಂಧಿಸಿ,
ಮನಕ್ಕೆ ಅರಿವಿನಾಚರಣೆಯ ನೆಲೆಗೊಳಿಸಿ,
ಆತ್ಮಂಗೆ ಸತ್ಕ್ರಿಯಾ ಸಮ್ಯಕ್‌ಜ್ಞಾನವ ಬೋಧಿಸಿ,

ಪ್ರಾಣಕ್ಕೆ ಲಿಂಗಮಂತ್ರಧಾರಣವ ಮಾಡಿ,
ಜೀವ ಪರಮರಿಗೆ ಚಿದ್ಘನಪಾದೋದಕಸಾದಭೋಗವನಿತ್ತು,
ಅವಕ್ಕೆ ತಾನಾಶ್ರಯನಾಗಿ, ತನ್ನ ನಿಜದಲ್ಲಿ ನಿಂದು
ನೋಡಬಲ್ಲಾತನೆ ಶಿವಯೋಗಿ ನೋಡಾ, ಕಲಿದೇವರದೇವ. || ೩೨೧ ||

೭೫೯

ಸಾಧನೆಯ ಕಲಿತು ಆಣೆಯ ತಪ್ಪಿಸಲರಿಯದವನ
ಕೈಯಲಿ ಅಲಗಿದ್ದಡೇನಯ್ಯ ?
ಮಾಡುವದಕ್ಕೆ ಕರ್ಮ ದುರಿತದ ವರ್ಮವನರಿಯದವನು
ಸಕಲಶಾಸ್ತ್ರವನೋದಿದಡೇನಯ್ಯ ?
ಗಿಳಿಯೋದಿ ತನ್ನ ಅಶುದ್ಧವ
ತನ್ನ ಮೂಗಿನಲ್ಲಿ ಕಚ್ಚಿ ತೆಗೆದಂತೆ ಆಯಿತ್ತೆಂದ,
ಕಲಿದೇವರದೇವಯ್ಯ. || ೩೨೨ ||

೭೬೦

ಸಿಂಹದ ಮುಂದೆ [ಜಿಂಕೆಯ] ಜಿಗಿದಾಟವೆ ?
ಪ್ರಳಯಾಗ್ನಿಯ ಮುಂದೆ ಪತಂಗದಾಟವೆ ?
ಸೂರ್ಯನ ಮುಂದೆ ಕೀಟದಾಟವೆ ?
ನಿಮ್ಮ ಮುಂದೆ ಎನ್ನಾಟವೆ, ಕಲಿದೇವರದೇವಾ ? || ೩೨೩ ||

೭೬೧

ಸುಖವೊಂದು ಕೋಟ್ಯಾನುಕೋಟಿ ಬಂದಲ್ಲಿ ಬಸವಣ್ಣನ ನೆನೆವೆ.
ದುಃಖವೊಂದು ಕೋಟ್ಯಾನುಕೋಟಿ ಬಂದಲ್ಲಿ ಬಸವಣ್ಣನ ನೆನೆವೆ.
ಲಿಂಗಾರ್ಚನೆಯ ಮಾಡುವಲ್ಲಿ ಬಸವಣ್ಣನ ನೆನೆವೆ.
ಜಂಗಮಾರ್ಚನೆಯ ಮಾಡುವಲ್ಲಿ ಬಸವಣ್ಣನ ನೆನೆವೆ.
ಬಸವಣ್ಣನ ನೆನೆದಲ್ಲದೆ ಭಕ್ತಿಯಿಲ್ಲ. ಬಸವಣ್ಣನ ನೆನೆದಲ್ಲದೆ ಮುಕ್ತಿಯಿಲ್ಲ.
ಇದು ಕಾರಣ, ಬಸವಣ್ಣ ಬಸವಣ್ಣ
ಎನುತಿರ್ದೆನು ಕಾಣಾ, ಕಲಿದೇವಯ್ಯ. || ೩೨೪ ||

೭೬೨

ಸೂಳೆ ಸುರೆ ಬೆಕ್ಕು ನಾಯಿ ಅನ್ಯದೈವ ತಾಳಹಣ್ಣು
ಇಷ್ಟುಳ್ಳನ್ನಕ್ಕರ ಅವ ಭಕ್ತನೆ ? ಅಲ್ಲ ಅಲ್ಲ.
ಅವ ಶಿವದ್ರೋಹಿ, ಅವ ಗುರುದ್ರೋಹಿ.
ಹಂದಿ ಹಂದಿಯ ಹೇಲ ತಿಂದು,

ಒಂದರ ಮೋರೆಯನೊಂದು ಮೂಸಿ ನೋಡುವಂತೆ ಕಾಣಾ,
ಕಲಿದೇವರದೇವ. || ೩೨೫ ||

**೭೬೩**

ಸೋಮವಾರಕ್ಕೆ ಮೀಸಲೆಂದು
ಊರ ಹೊರಗಣ ದೈವವ ಆರಾಧಿಸಿ,
ಅವಕ್ಕೆ ಇಕ್ಕಿದ ಮಿಕ್ಕಿನ ಕೂಳ ಸೋಮಧರಗರ್ಪಿತವೆಂಬವರ
ಭಕ್ತಿಯ ತೆರ ಎಂತಾಯಿತ್ತೆಂದಡೆ,
ಗ್ರಾಮ ಸೂಕರನು ಶುನಕನು ಗಂಗೆಯನೀಸಿ
ಅಶುದ್ಧ ಭುಂಜಿಸಿದ ತೆರನಾಯಿತ್ತೆಂದ, ಕಲಿದೇವಯ್ಯ. || ೩೨೬ ||

**೭೬೪**

ಸ್ವಯ ಚರ ಪರವೆಂಬ ತ್ರಿವಿಧ ಗುರುಗಳಲ್ಲಿ
ಪಾದೋದಕ ಪ್ರಸಾದವ ಕೊಳಲಾಗದು.
ಪರಿಣಾಮಿ ನಿರುಪಾಧಿ ಪರಿಪೂರ್ಣವೆಂಬ ತ್ರಿವಿಧ ಜಂಗಮದಲ್ಲಿ
ಪಾದೋದಕ ಪ್ರಸಾದವ ಕೊಳಬೇಕೆಂದಾತ, ನಮ್ಮ ಕಲಿದೇವರದೇವ. || ೩೨೭||

**೭೬೫**

ಸ್ಥಾವರಲಿಂಗ ಜಂಗಮವೆಂಬುದನಾರು ಬಲ್ಲರಯ್ಯಾ, ಬಸವಣ್ಣನಲ್ಲದೆ ?
ಎಲ್ಲಿ ಸ್ಥಾವರವಿದ್ದಲ್ಲಿ ನೋಡಲಾಗದು, ಮನದಲ್ಲಿ ನೆನೆಯಲಾಗದು.
ಲಿಂಗಕ್ಕಾದಡೆಯೂ ಜಂಗಮಬೇಕು, ಜಂಗಮವಿಲ್ಲದ ಲಿಂಗವುಂಟೆ ?
ಗುರುವಿಂಗಾದಡೆಯೂ ಜಂಗಮಬೇಕು, ಜಂಗಮವಿಲ್ಲದ ಗುರುವುಂಟೆ ?
ಎಲ್ಲಿ ಜಂಗಮವಿದ್ದಲ್ಲಿ ಗುರು ಲಿಂಗ ಜಂಗಮ ಪಾದೋದಕ
ಪ್ರಸಾದ ಅನುಭಾವ ಸನ್ನಹಿತವಾಗಿಹುದು.
ಇಂತಿವರ ಭೇದವ ಬಸವಣ್ಣ ಬಲ್ಲನು.
ಆ ಬಸವಣ್ಣನ ಶ್ರೀಪಾದಕ್ಕೆ ಅಹೋರಾತ್ರಿಯೊಳೆದ್ದು,
ನಮೋ ನಮೋ ಎಂಬೆನು ಕಾಣಾ, ಕಲಿದೇವಯ್ಯ. || ೩೨೮ ||

**೭೬೬**

ಹಣದಾಸೆಗೆ ಹದಿನೆಂಟುಜಾತಿಯ ಭಕ್ತರ ಮಾಡಿ,
ಲಿಂಗವ ಕೊಟ್ಟು ಲಿಂಗದ್ರೋಹಿಯಾದ.
ಪ್ರಸಾದವ ನೀಡಿ ಪ್ರಸಾದದ್ರೋಹಿಯಾದ.
ಪಂಚಾಕ್ಷರಿಯ ಹೇಳಿ ಪಂಚಮಹಾಪಾತಕಕ್ಕೊಳಗಾದ.
ಇಂತೀ ಹೊನ್ನ ಹಂದಿಯ ಕೊಂದು,

ಬಿನ್ನಾಣದಲ್ಲಿ ಕಡಿದುತಿಂಬ ಕುನ್ನಿಗಳನೇನೆಂಬೆನಯ್ಯಾ,
ಕಲಿದೇವರದೇವ. ॥ ೩೨೯ ॥

೭೬೭

ಹರನೊಡ್ಡಿದ ಮಾಯೆ, ಹರಿಯ ಹತ್ತು ಭವಕ್ಕೆ ತಂದಿತ್ತು.
ಅರುಹನೆಂಬವನ ಬತ್ತಲೆ ಬರಿಸಿತ್ತು.
ಪರವು ತಾನೆಂಬ ಬ್ರಹ್ಮನ ಶಿರವ ಹೋಗಾಡಿತ್ತು.
ಗುರುಲಿಂಗಜಂಗಮದ ಹವಣನರಿಯಬೇಕೆಂದು
ತಂದೆ ತಾಯಿ ಗುರುವೆಂದು ಹೊತ್ತು ತಿರುಗಿದ ಚೌಂಡಲಯ್ಯ
ಒಂದೆ ಬಾಣದಲ್ಲಿ ಗುರಿಯಾಗಿ ಸತ್ತ ಕೇಡ ನೋಡಾ.
ಇಂತಿದನರಿಯದೆ ಮರದ ನರಜೀವಿಗಳು
ಸುರೆಯ ದೈವದ ಸೇವೆಯ ಮಾಡಿ, ಇತ್ತ ಹರನ ಹೊಗಳಿ,
ವೇದ ಶಾಸ್ತ್ರ ಪುರಾಣಾಗಮಂಗಳನರಿತರಿತು,
ಮರಳಿ ಅನ್ಯದೈವಕ್ಕೆರಗುವ ದುರಾತ್ಮರಿಗೆ
ಇಹಪರವಿಲ್ಲವೆಂದ, ಕಲಿದೇವರದೇವ. ॥ ೩೩೦ ॥

೭೬೮

ಹರ ಹರ ಶಿವ ಶಿವ ಗುರುವೆ ಕರಸ್ಥಲದ ಶಾಂತಲಿಂಗ,
ಜಂಗಮ ಭಕ್ತ ಶರಣಗಣಂಗಳ ಚರಣವ ನೆನೆಯದೆ,
ಧರೆಯ ಮೇಲೆ ನೆಲಸಿಪ್ಪ ಭವಿಶೈವದೈವಂಗಳ ನೆನೆವ
ನರಕಿನಾಯಿಗಳನೇನೆಂಬೆನಯ್ಯಾ ಕಲಿದೇವಯ್ಯ. ॥ ೩೩೧ ॥

೭೬೯

ಹಲಬರ ನಡುವೆ ಕುಳ್ಳಿರ್ದು,
ಗುರುಲಿಂಗಜಂಗಮ ವಿಭೂತಿ ವೀಳ್ಯವ ಹರಿದು ಕೊಟ್ಟು,
ಆ ಗುರುವಿನಲ್ಲಿ ಕಾರುಣ್ಯವೇಕೆಂದು ಎದ್ದಾಡುವ ಗುರು.
ಹಲಬರ ಬಾರಿಕ ಕಾಣಾ, ಕಲಿದೇವಯ್ಯ. ॥ ೩೩೨ ॥

೭೭೦

ಹಲಂಬರ ನಡುವೆ ಕುಳ್ಳಿರ್ದ ಗುರುವಿಂಗೆ
ಶಿಷ್ಯನು ಸಾಷ್ಟಾಂಗವೆರಗಿ,
ಶರಣೆಂದು ಪಾದವ ಹಿಡಿದುಕೊಂಡು
ನನಗುಪದೇಶವ ಮಾಡಬೇಕೆಂದು ಬಿನ್ನಹಂ ಮಾಡಿದಡೆ,
ನಾನುಪದೇಶವ ಮಾಡಲಮ್ಮೆನು.

ನಿಮ್ಮನುಜ್ಞೆಯಿಂದುಪದೇಶವ ಮಾಡಲೇ ಎಂದು
ಆ ಹಲರಿಗೆ ಬಿನ್ನಹಂ ಮಾಡಲಿಕೆ,
ಆ ಹಲರಿಗೆ ಕೊಟ್ಟ ನಿರೂಪವಿಡಿದು,
ಉಪದೇಶವ ಮಾಡುವ ಗುರು,
ಹಲರ ಮನೆಯ ಬಾರಿಕನೆಂದ ಕಲಿದೇವರದೇವ. || ೩೩೩ ||

೭೭೧

ಹಲವುಕಾಲದ ಋಷಿಯರೆಲ್ಲರೂ
ಶಿವಭಕ್ತಿಯ ನೆಲೆಯನರಿತು ಬ್ರಾಹ್ಮಣರೆನಿಸಿಕೊಂಡರು.
ಇವರ ನೆಲೆಯನರಿಯದ ನಿಂದಕರು
ಗೆಲವಿಂಗೆ ಹೆಣಗುವ ಪರಿಯ ನೋಡಾ.
ಹಲವು ದೈವಂಗಳಿಗೆರಗಿ ಕುಲದಲ್ಲಿ ಶಿಷ್ಟರೆನಿಸಿಕೊಂಬರು.
ಮೊದಲೆ ಹುಟ್ಟಿದ ರುದ್ರನ ಹೆಸರ ಹೇಳಿ,
ಬ್ರಾಹ್ಮಣನಲ್ಲದ ಭುಜದಲ್ಲಿ ತೊಡೆಯಲ್ಲಿ
ಅಂಗದಲ್ಲಿ ಹುಟ್ಟಿದ ಶೂದ್ರ ವೈಶ್ಯ ಕ್ಷತ್ರಿಯಂಗೆ
ಹೊಡೆವಡುವ ಗುರುದ್ರೋಹಿಗಳು
ತಮ್ಮ ಹೆಸರು ವೇದಬ್ರಾಹ್ಮಣರೆನಿಸಿಕೊಂಡು,
ಗೋವನರ್ಚಿಸಿ ಪೂಜಿಸಿ ಅನಂತ ಪರಿಯಲ್ಲಿ ಶರಣೆಂಬರು.
ಮರಳಿ ಗೋಹಿಂಸೆಯ ಮಾಡುವರು.
ಗೋಸಾಯಿಗಳು ನುಡಿದಂತೆ ನಡೆಯರು,
ನುಡಿ ಹೊಲೆ ಹಿಂಗದು.
ಇಂತಿವರ ವೇದಬ್ರಾಹ್ಮಣರೆಂದವರಿಗೆ
ನಾಯಕನರಕ ತಪ್ಪದೆಂದ ಕಲಿದೇವರದೇವ. || ೩೩೪ ||

೭೭೨

ಹಸಿವು ತೃಷೆ ವ್ಯಸನಕ್ಕೆ ಕುದಿ ಕುದಿದು
ಸಚರಾಚರದೊಳಗೆಲ್ಲ ಲಯವಾಗಿ ಹೋದರಲ್ಲ.
ಉದರವ ಹೊರೆವ **ಕೋಟವೇಷಧಾರಿಗಳೆಲ್ಲ**
ಜಂಗಮವಪ್ಪರೇ ? ಅಲ್ಲ.
ಲಿಂಗಸ್ಥಲವನರಿಯರು, ಜಂಗಮಸ್ಥಲವನರಿಯರು,
ಪ್ರಸಾದಿಸ್ಥಲವನರಿಯರು.
ಇಂತೀ ತ್ರಿವಿಧಸ್ಥಲವನರಿಯದ ಕಾರಣಾ
ಅವರ ಗಾಪಿಲರ ಮಕ್ಕಳೆಂಬೆ, ಕಲಿದೇವರದೇವಾ. || ೩೩೫ ||

೭೭೩

ಹಿಂದೆ ಅನಾದಿಕಾಲದಲ್ಲಿ ಲೆಕ್ಕವಿಲ್ಲದ ಯುಗಂಗಳು ಹೋದವು.
ದ್ವಯಮುಖರು ಅದ್ವಯಮುಖರು ಸ್ವತಂತ್ರಮುಖರು
ಸನ್ನಹಿತಮುಖರು ಉಗ್ರಮುಖರು ಉತ್ಪತ್ಯಕ್ಕೆ ಹೊರಗಾದ ಮುಖರು
ಸ್ಥಿತಿಗತಿಯಿಂದರಿಯದ ಮುಖರು ಸರ್ವವಿಸ್ತೀರ್ಣದೊಳಗುಳ್ಳ ಮುಖರು
ಅಷ್ಟತನುಮೂರ್ತಿ ಮೊದಲಾದ ಅನಂತಮೂರ್ತಿಗಳೆಲ್ಲ
ದೇವಾರಾಧನೆ ಪೂಜಕರಾದರಲ್ಲದೆ ಭಕ್ತಮುಖರಲ್ಲ.
ಸಂಸಾರ ಸಂಗದೊಳಗಿದ್ದವರಲ್ಲ. ಇಂಥ ಮುಖರೆಲ್ಲ ಅಂತಿರಲಿ.
ಇಲ್ಲದ ನಿರವಯವ ಆಕಾರಕ್ಕೆ ತಂದು,
ಜಂಗಮಲಿಂಗವೆನಿಸಿ ಸಾಹಿತ್ಯವ ಮಾಡಿದಾತ ಬಸವಣ್ಣನು.
ಇದನರಿದು ಧನ್ಯನಾದೆನೆಂಬೀತ ಪರುಷದೊಳಗು.
ಈ ಕ್ರಮವನರಿಯದೆ, ಅನಂತ ಮತವ ಹಿಡಿದು ಭೂಭಾರಕರಾದರು.
ಅವರ ಮುಟ್ಟಿ, ಲಿಂಗಕ್ಕೆ ಕೊಟ್ಟು ಕೊಂಡಡೆ ಪ್ರಸಾದವಾಗದೆಂದು
ಜಂಗಮಕ್ಕೆ ಅರ್ಪಿಸಿದ ನಿತ್ಯಪ್ರಸಾದವೆನಗೆ ಬಸವಣ್ಣನ ಪ್ರಸಾದ.
ಆ ಬಸವಣ್ಣನ ಪ್ರಸಾದವೆ ಎನಗೂ ನಿನಗೂ ವಿಸ್ತಾರವಾಗಿತ್ತು ಕಾಣಾ,
ಕಲಿದೇವಯ್ಯ. || ೩೩೬ ||

೭೭೪

ಹುಟ್ಟದ ಬೀಜವಿರ್ದಡೇನಯ್ಯಾ ಧರೆಯೊಳಗೆ ?
ಅಟ್ಟುಣ್ಣಬಾರದ ಮಡಕೆ ಇರ್ದಡೇನಯ್ಯಾ ಮನೆಯೊಳಗೆ ?
ಶಿವ ನಿಮ್ಮ ಮುಟ್ಟದ ಮನವಿರ್ದಡೇನಯ್ಯಾ ತನುನಿನೊಳಗೆ ?
ಕೆಚ್ಚಲ ಕಚ್ಚಿದ ಉಣ್ಣೆ ಬಲ್ಲುದೆ ಕ್ಷೀರದ ರುಚಿಯ ?
ಬಚ್ಚಲೊಳಗಣ ಬಾಲ್ಪುಳು ಬಲ್ಲುದೆ ನಿಚ್ಚಳದ ನೀರಸುಖವ ?
ನಿಚ್ಚನಿಚ್ಚಲೋದುವ ಗಿಳಿ ಬಲ್ಲುದೆ ತನಗೆ ಬಹ ಬೆಕ್ಕಿನ ಬಾಧೆಯ ?
ಹುಚ್ಚುಕೊಂಡ ನಾಯಿ ಬಲ್ಲುದೆ ತನ್ನ ಸಾಕಿದೊಡೆಯನ ?
ಇದು ಕಾರಣ, ಒಡಲ ಪಡೆದಡೇನು ?
ಮಡದಿಯ ನೆರಹಿದಡೇನು ? ಒಡವೆಯ ಗಳಿಸಿದಡೇನು ?
ಶಿವನೆ ನಿಮ್ಮನರಿಯದ ಮನುಜನ ಒಡಲೆಂಬುದು,
ಹೊಲೆಜೋಗಿಯ ಕೈಯ ಒಡೆದ ಸೋರೆಯಂತೆ ಕಾಣಾ,
ಕಲಿದೇವಯ್ಯ. || ೩೩೭ ||

೭೭೫

ಹುಟ್ಟಿದ ಕಲ್ಲಿಗೆ, ನೆಟ್ಟ ಪ್ರತಿಷ್ಠೆಗೆ
ಕಟ್ಟಿದ ಲಿಂಗವಡಿಯಾಗಿ ಬೀಳುವ
ಲೊಟ್ಟಿಗುಡಿಹಿಗಳನೇನೆಂಬೆನಯ್ಯಾ. ಕಲಿದೇವರದೇವ. || ೩೩೮ ||

೭೭೬

ಹುಟ್ಟಿಸುವ ಹೊಂದಿಸುವ
ಶಿವನ ನಿಷ್ಠೆಯಿಲ್ಲದ ಸಾಹಿತ್ಯವ ಕೊಂಡು,
ಕ್ರೀಯಿಲ್ಲದಿರ್ದಡೆ ಭಕ್ತರೆಂತೆಂಬೆನಯ್ಯ ?
ಅಟ್ಟ ಕೂಳೆಲ್ಲವಂ ಅನ್ಯದೈವದ ಹೆಸರ ಹೇಳಿ
ಭುಂಜಿಸುವ ಚೆಟ್ಟಿ ಮಾಳ ಅಕ್ಕತದಿಗಿಯೆಂದು
ತಮ್ಮ ಗೋತ್ರಕ್ಕೆ ಬೊಟ್ಟನಿಡುವರು.
ಮುಖ್ಯರಾಗಬೇಕೆಂದು ಅಟ್ಟ ಅಡಿಗೆ ಮೀಸಲವೆಂದು
ಅಶುದ್ಧವ ತಿಂಬ ಕಾಗೆಗೆ ಕೂಳ ಚೆಲ್ಲಿ,
ತಮ್ಮ ಪಿತರುಂಡರೆಂದು
ಮಿಕ್ಕ ಕೂಳ ತಮ್ಮ ಲಿಂಗಕ್ಕೆ ತೋರಿ ಭುಂಜಿಸುವ
ಭಕ್ತರೆನಿಸಿಕೊಂಬ ಭ್ರಷ್ಟಜಾತಿಗಳು
ಕೆಟ್ಟಕೇಡಿಂಗೆ ಕಡೆಯಿಲ್ಲವೆಂದ, ನಮ್ಮ ಕಲಿದೇವರದೇವ. || ೩೩೭ ||

೭೭೭

ಹುಲಿಯ ಕೊಂದು, ಲಿಂಗಕ್ಕೆ ಬೋನವ ಮಾಡಿದಾತ ಬಸವಣ್ಣ.
ಕರಡಿಯ ಕೊಂದು, ಲಿಂಗಕ್ಕೆ ಬೋನವ ಮಾಡಿದಾತ ಬಸವಣ್ಣ.
ಹಾವಿನ ಪರಿಯಾಣವ ಮಾಡಿಕೊಡಬಲ್ಲಾತ ಬಸವಣ್ಣ ಕಾಣಾ,
ಕಲಿದೇವರದೇವ. || ೩೪೦ ||

೭೭೮

ಹೆಣ್ಣಿಗಾಗಿ ಸತ್ತಡೆ ಜನನ ಮರಣ.
ಹೊನ್ನಿಗಾಗಿ ಸತ್ತಡೆ ಜನನ ಮರಣ.
ಮಣ್ಣಿಗಾಗಿ ಸತ್ತಡೆ ಜನನ ಮರಣ.
ಪರಧನ ಪರಸತಿಗಾಗಿ ಸತ್ತಡೆ ಜನನ ಮರಣ.
ಶಿವಭಕ್ತನಾಗಿ ಏಕಲಿಂಗನಿಷ್ಠಾಸಂಪನ್ನನಾಗಿ,
ಶಿವಾಚಾರಕ್ಕಾಗಿ ಸತ್ತಡೆ ಮುಕ್ತಿಯೆಂದ ಕಲಿದೇವಯ್ಯ. || ೩೪೫ ||

೭೭೯

ಹೆತ್ತ ತಾಯಿ ತಂದೆ ಬಂಧು ಬಳಗ ಗತಿ ಸುತರಾದ ಸೋದರರುಗಳಲ್ಲಿ
ಭವಿಯಾಗಿದ್ದವರ ಮೋಹ ಬಿಟ್ಟಲ್ಲದೆ ಶಿವಭಕ್ತಿಯ ನೆಲೆ ಸಿಕ್ಕದು.
ಭಕ್ತಿಯ ಪಥವನರಿಯದೆ,
ಯುಕ್ತಿಹೀನರು ತಮ್ಮ ಹೆತ್ತ ತಾಯಿ ತಂದೆಯ ಲೋಭಕ್ಕೆ
ಸಾಹಿತ್ಯ ಸಂಬಂಧವ ಕೊಂಡು, ಮೃತ್ಯುಮಾರಿಯ ಎಂಜಲತಿಂಬ
ನಾಯಿಯ ಹೊಲೆಸೂತಕ ಬಿಡದೆ ಹೋಯಿತ್ತು.
ಕಟ್ಟಿದ ಕೂರಲಗಿನ ಮೊನೆಯಲ್ಲಿ ಸಿಕ್ಕಿಕೊಂಡು ಸತ್ತು ಹೋದವರ
ಸಿಂಹದ ಹೋಲಿಕೆಗೆ ಮರನ ಚೋಹವ ಮಾಡಿ,
ಹೊತ್ತುಕೊಂಡು [ಬೀ]ರಗೂಳನುಂಬ ದುಃಕರ್ಮಿಗಳ
ಶಿವಭಕ್ತಂಗೆ ಸರಿಯೆಂದು ಬೊಗಳುವ ನಾಯಿಗೆ
ಹತ್ತೆಂಟುಬಾರಿ ತಿರುಗುವ ನರಕ ತಪ್ಪದೆಂದ,
ಕಲಿದೇವರದೇಯ್ಯ. || ೩೪೨ ||

೭೮೦

ಹೊಗಬಾರದು ಕಲ್ಯಾಣವನಾರಿಗೆಯೂ
ಹೊಕ್ಕಡೇನು ? ಕಲ್ಯಾಣದ ಸ್ಥಾನಮಾನಂಗಳ ನುಡಿಯಬಾರದು.
ಈ ಕಲ್ಯಾಣದ ಕಡೆಯ ಕಾಣಬಾರದು.
ಕಲ್ಯಾಣದೊಳಗೆ ಹೊಕ್ಕೆಹೆವೆಂದು ಕಲ್ಯಾಣ ಚರಿತ್ರರಾದೆಹೆವೆಂದು
ದೇವ ದಾನವ ಮಾನವರೆಲ್ಲರೂ ಭಾವಿಸುತ್ತಿರ್ದುರು ನೋಡಯ್ಯಾ ಕಲ್ಯಾಣವನು.
ಅನಂತಮೂರ್ತಿಗಳು ಅನಂತ ಸ್ಥೂಲಮೂರ್ತಿಗಳು
ಅನಂತ ಸೂಕ್ಷ್ಮಮೂರ್ತಿಗಳು ಅನಂತ ಮಂತ್ರಧ್ಯಾನರೂಪರು
ಪುಣ್ಯಕ್ಕೆ ಅಭಿಲಾಷೆಯ ಮಾಡುವವರು ಪೂಜಕರು ಯೋಗಿಗಳು
ಭೋಗಿಗಳು ದ್ವೈತರು ಅದ್ವೈತರು ಕಾಮಿಗಳು ನಿಷ್ಕರ್ಮಿಗಳು ಅಶ್ರಿತರು
ಅದೆಂತು ಹೊಗಬಹುದಯ್ಯಾ ಕಲ್ಯಾಣವನು ?
ಲಿಂಗದೃಷ್ಟಂಗಲ್ಲದೆ ಲಿಂಗವೇದ್ಯಂಗಲ್ಲದೆ
ಲಿಂಗಗಂಭೀರಂಗಲ್ಲದೆ ಪ್ರಸಾದ ಕುಳಾನ್ವಯಂಗಲ್ಲದೆ
ಆಸೆಗೆಡೆಗುಡದಿಪ್ಪುದೆ ಕಲ್ಯಾಣ.
ಸರ್ವಾಂಗ ವರ್ಣವಳಿದು ಕುಲಮದ ತಲೆದೋರದೆ
ಭಕ್ತಿ ನಿತ್ಯವಾದುದೆ ಕಲ್ಯಾಣ.
ಈ ಕಲ್ಯಾಣವೆಂಬ ಮಹಾಪುರದೊಳಗೆ
ಬಸವಣ್ಣನೂ ನಾನೂ ಕೂಡಿ ಹದುಲಿರ್ದೆವು ಕಾಣಾ, ಕಲಿದೇವಯ್ಯ. || ೩೪೩ ||

೬೮೧

ಹೊನ್ನು ಹೆಣ್ಣು ಮಣ್ಣನಾವರಿಸಿಕೊಂಡು,
ಒಡವೆ ಆಭರಣಂಗಳ ಹಲ್ಲಣಿಸಿಕೊಂಡು ಬಂದು,
ಸರ್ವರಿಗೆ ಶಾಸ್ತ್ರೋಪದೇಶವ ಹೇಳುವರು ವೇಷಧಾರಿಗಳು.
ಸೂಳೆಯರಂತೆ ತಮ್ಮ ಉಪಾಧಿಕೆಗೆ ಒಡಲಾಸೆಗೆ
ಹಿತವಚನ ನುಡಿವರು.
ಇಂತಪ್ಪ ಪ್ರಪಂಚಿನ ವೇಷಡಂಭಕ ಧೂರ್ತಲಾಂಛನದಾರಿಗಳಿಗೆ
ಮಹಂತಿನ ದೇವರೆನ್ನಬಹುದೆ ? ಎನಲಾಗದು.
ಅದೇನು ಕಾರಣವೆಂದಡೆ,
ತಮ್ಮಾದಿಯ ನಿಲುವ ತಾವರಿಯರು.
ಷಟ್‌ಸ್ಥಲದ ನಿರ್ಣಯವ ಏನೆಂದರಿಯರು.
ಆಚಾರದನುಭಾವದಂತರಂಗದ ಮೂಲವ
ಮುನ್ನವೇ ಅರಿಯರು.
ಇಂತಿವನರಿಯದ ಪಶುಪ್ರಾಣಿಗಳಿಗೆ
ಜಂಗಮವೆನ್ನಬಹುದೆ ? ಎನ್ನಲಾಗದಯ್ಯಾ, ಕಲಿದೇವರದೇವ. || ೩೪೪ ||

೬೮೨

ಹೊರಗಿದ್ದಾನೆಂಬೆನೆ ಒಳಗು ತಾನೆ ನೋಡಾ.
ಒಳಗಿದ್ದಾನೆಂಬೆನೆ ಹೊರಗು ತಾನೆ ನೋಡಾ.
ಒಳಹೊರಗು ಸರ್ವಾಂಗ ಸನ್ನಿಹಿತವಾಗಿದ್ದ
ಸಮರಸದ ಮಹಿಮನನು ತಿಳಿದು ನೋಡಾ.
ಅಗಲಲಿಲ್ಲದ ಘನವ ಅಗಲಿದೆನೆಂಬ ಮಾತು,
ಶಿವಶರಣರ ಮನಕೆ ಬಹುದೆ ?
ಮರಣವಿಲ್ಲದ ಮಹಿಮನ ನಿಲವ
ತನ್ನಲ್ಲಿ ನೋಡಿ ಶರಣೆಂಬುದಲ್ಲದೆ ಮರೆಯಬಹುದೆ ?
ತೆರಹಿಲ್ಲದ ನಿಲವು.
ಕಲಿದೇವರದೇವನು ಕರಸ್ಥಲದೊಳಗೆ ಅಯಿದಾನೆ ಕಾಣಾ,
ಚೆನ್ನ ಬಸವಣ್ಣಾ. || ೩೪೫ ||

೬೮೩

ಹೋದ ದಿವಸ ವಿಷವೆಂದರಿವುದು ಮನದಲ್ಲಿ.
ಬರುವ ದಿವಸ ಸುಧಾಸಮವೆಂದರಿವುದು ಸದ್ಭಾವದಲ್ಲಿ.
ಹೋದಂತೆ ಹೋದಡೆ ಕಲಿದೇವರ ಕಾಂಬ ಪರಿಯೆಂತೊ,
ಸಿದ್ಧರಾಮಯ್ಯಾ ? || ೩೪೬ ||

■ ■

## ಮಡಿವಾಳ ಮಾಚದೇವರ
## ಸಮಯಾಚಾರದ ಮಲ್ಲಿಕಾರ್ಜುನನ ವಚನ

೭೮೪

ಅಖಂಡ ಪರಿಪೂರ್ಣ ನಿತ್ಯನಿರಂಜನ ನಿರವಯ ಲಿಂಗದೊಳು
ಸಮರಸೈಕ್ಯವನೈದಿ, ಘನಕ್ಕೆ ಘನ ವೇದ್ಯವಾದ ಬಳಿಕ
ಅರಿವೆಂಬುದಿಲ್ಲ, ಮರವೆಂಬುದಿಲ್ಲ,
ಕೂಡಿದೆನೆಂಬುದಿಲ್ಲ, ಅಗಲಿದೆನೆಂಬುದಿಲ್ಲ,
ಕಾಣೆನೆಂಬುದಿಲ್ಲ, ಕಂಡೆನೆಂಬುದಿಲ್ಲ,
ಸಂಗ ನಿಸ್ಸಂಗವೆಂಬುದಿಲ್ಲ,
ಶೂನ್ಯ ನಿಶ್ಶೂನ್ಯವೆಂಬ ಭಾವದ ಭ್ರಮೆ ಮುನ್ನಿಲ್ಲ.
ಇಂತಿವೇನುವೇನುವಿಲ್ಲದೆ ಶಬ್ದಮುಗ್ಧನಾಗಿ,
ಭ್ರಮರದೊಳಡಗಿದ ಕೀಟದಂತೆ
ಉರಿಯೊಳಡಗಿದ ಕರ್ಪುರದಂತೆ
ಕ್ಷೀರದೊಳು ಬೆರೆದ ಪಯದಂತೆ
ಅಂಬುಧಿಯೊಳಡಗಿದ ವಾರಿಕಲ್ಲಿನಂತೆ
ನಾ ನೀ ಎಂಬೆರಡಳಿದು, ತಾನೆ ತಾನಾದ ಸುಖವ
ಮಹಾಜ್ಞಾನಿಗಳು ಬಲ್ಲರಲ್ಲದೆ ಅಜ್ಞಾನಿಗಳೆತ್ತ ಬಲ್ಲರಯ್ಯಾ,
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಯ್ಯಾ ? ||೧||

೭೮೫

ಅರಿವನಲ್ಲ ಮರವನಲ್ಲ ಕುರುಹಿಟ್ಟರಸುವನಲ್ಲ.
ತಾನೆ ಪರಿಪೂರ್ಣನಾಗಿ ತಾನೆಂಬ ಭಾವವಳಿದು,
ಇದಿರೆಂಬ ಶಂಕೆಯನರಿಯ.
ಭಾವಿಸಿ ಬಳಲುವ ಭಾವದ ಭ್ರಮೆಯಳಿದು,
ಭಾವವೆ ಬ್ರಹ್ಮವಾಗಿ, ಭಾವಿಸುವ ಭಾವಕನಲ್ಲ.
ಆಗುಹೋಗು ಭೋಗಭೂಷಣಂಗಳ ಅನುರಾಗಮಂ ತ್ಯಜಿಸಿ,
ಬಂಧ ಮೋಕ್ಷ ಸಂದುಸಂಶಯವೆಂಬ ಜಡತ್ವಮಂ ಕಳೆದು,
ನಿಂದ ನಿಲವಿನ ವಶಕ್ಕೆ ವಶವಾಗದೆ,
ಸಹಜ ಶಾಂತಿಸಮತೆ ನೆಲೆಗೊಂಡು ನಿಂದಾತನೆ ಶರಣ.
ಇಂತಪ್ಪ ಶರಣ ನುಡಿದುದೆ ಸಿದ್ಧಾಂತ, ನೋಡಿದುದೆ ಅರ್ಪಿತ,
ಮುಟ್ಟಿದುದೆ ಪ್ರಸಾದ, ಪರಿಣಾಮಿಸಿದುದೆ ತೃಪ್ತಿಯಾದ ಮಹಾಶರಣಂಗೆ
ಶರಣೆಂದು ಬದುಕಿದೆನು ಕಾಣಾ,
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಯ್ಯ. ||೨||

೭೮೬

ಅಲ್ಲೆನ್ನ ಅಹುದೆನ್ನ, ಎಲ್ಲವು ತನ್ನಿಂದಾಯಿತ್ತಾಗಿ.
ಬೇಕೆನ್ನ ಬೇಡೆನ್ನ, ನಿತ್ಯತೃಪ್ತ ತಾನೆಯಾಗಿ.
ಆಕಾರ ನಿರಾಕಾರವೆನ್ನ, ಉಭಯವನೊಳಕೊಂಡ ಗಂಭೀರ ತಾನೆಯಾಗಿ.
'ನಿಶ್ಶಬ್ದಂ ಬ್ರಹ್ಮ ಉಚ್ಯತೇ ' ಎಂಬ ಶ್ರುತಿಯ ಮತದಿಂದ ನುಡಿಗೆಟ್ಟವನಲ್ಲ.
ಬೆಳಗು ಬೆಳಗನೆಯ್ದಿ ಮಹಾಬೆಳಗಾದ ಬಳಿಕ,
ಹೇಳಲಿಲ್ಲದ ಶಬ್ದ ಕೇಳಲಿಲ್ಲದ ಕೇಳುವೆ.
ರೂಹಿಲ್ಲದ ಕೂಟ, ಕೂಟವಿಲ್ಲದ ಸುಖ.
ಸುಖವಿಲ್ಲದ ಪರಿಣಾಮ, ಪರಿಣಾಮವಿಲ್ಲದ ಪರವಶ.
ಪರವಶ ಪರಮಾನಂದವೆಂಬುದಕ್ಕೆ ಎರವಿಲ್ಲವಾಗಿ ಆತ ಲಿಂಗೈಕ್ಯನು.
ಇಂತಪ್ಪ ಲಿಂಗೈಕ್ಯನೊಳಗೆ ಏಕವಾಗಿ ಬದುಕಿದೆನು ಕಾಣಾ,
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಯ್ಯ. ||೩||

೭೮೭

ಕರಸ್ಥಲದ ಲಿಂಗವ ಬಿಟ್ಟು,
ಧರೆಯ ಮೇಲಣ ಪ್ರತುಮೆಗೆರಗುವ
ನರಕಿ ನಾಯಿಗಳನೇನೆಂಬೆನಯ್ಯಾ,
ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಾ. ||೪||

೭೮೮

ಸತಿಯ ನೋಡಿ ಸಂತೋಷವ ಮಾಡಿ,
ಸುತರ ನೋಡಿ ಸುಮ್ಮಾನವ ಮಾಡಿ,
ಮತಿಯ ಹೆಚ್ಚುವಿನಿಂದ ಮೈಮರೆದೊರಗಿ,
ಸತಿಸುತರೆಂಬ ಸಂಸಾರದಲ್ಲಿ ಮತಿಗೆಟ್ಟು,
ಮರುಳಾದುದನೇನೆಂಬೆ,
ಎನ್ನ ಪರಮಪಂಚಾಕ್ಷರಮೂರ್ತಿ ಶಾಂತಮಲ್ಲಿಕಾರ್ಜುನಾ. ||೫||

## ಮಧುವಯ್ಯನ ವಚನ

೭೮೯

ಅಂಗಜನ ಮನೆಯಲ್ಲಿ
ಬಂದಬಂದವರೆಲ್ಲರೂ
ಮಿಂದು ಉಂಡು ಉಟ್ಟು ಸಂದಣಿಗೊಳ್ಳುತ್ತಿದ್ದರೆ,
ಅಂಗಜನ ಬಾಗಿಲ ಕಾವ
ಕಂದಲೆಂಕರಿಗೇಕೆ ಅರ್ಕೇಶ್ವರಲಿಂಗದ ಒಲುಮೆ ? ||೧||

೭೯೦

ಅಂಗೈಯದು ಹೆಂಗಳಾಗಿ, ನೋಡುವ ಕಂಗಳು ಪುರುಷನಾಗಿ
ಉಭಯವನರಿವುದು, ಪ್ರಜಾಪತಿಯಾಗಿ.
ಚಿದ್ಘನಶಕ್ತಿ ಯೋನಿಯಲ್ಲಿ ಕೂಡಿ,
ಬಿಂದು ವಿಸರ್ಜನವಾಯಿತ್ತು.
ಅದು ಲೀಯವಾಗಲ್ಪಟ್ಟುದು ಲಿಂಗವಾಯಿತ್ತು.
ಅದು ಅಂಗೈಯಲ್ಲಿ ಅರಿಕೆ, ಕಂಗಳಿಂಗೆ ಕುರುಹು.
ಮಂಗಳಮಯ ಅರ್ಕೇಶ್ವರಲಿಂಗವನರಿವುದಕ್ಕೆ ಇಷ್ಟದ ಗೊತ್ತೆ ?
ಅರ್ಕೇಶ್ವರಲಿಂಗವು ತಾನು ತಾನೆ. ||೨||

**೭೯೧**

ಅಂಗೈಯಲ್ಲಿ ಬೇರು ಹುಟ್ಟಿ,
ಮುಂಗೈಯಲ್ಲಿ ಮೊಳೆದೋರಿ,
ಹಿಂಗಾಲಿನಲ್ಲಿ ಮರ ಬಲಿಯಿತ್ತು.
ಮುಂಗಾಲಿನಲ್ಲಿ ಫಲ ಮೂಡಿ,
ಅಂಗೈಯಲ್ಲಿ ಹಣ್ಣಾಯಿತ್ತು.
ಕಂಗಳ ಕೂಸು ಹಣ್ಣ ಮೆದ್ದಿತ್ತು.
ಕೂಸಿನ ಅಂಗವನರಿ, ಅರ್ಕೇಶ್ವರಲಿಂಗದ ಸಂಗವ ಮಾಡು. ||೩||

**೭೯೨**

ಅಗ್ನಿವಣಿಗಡಿವಜ್ಜೆಯುಂಟೆ ?
ವಾಯುವ ಹಿಡಿದು ಬಂಧಿಸಬಹುದೆ ?
ಅನಲಂಗೆ ತಾಳು ತುದಿ ಸುಡುವುದಕ್ಕೆ ಬೇರೆ ಭಿನ್ನವುಂಟೆ ?
ಸುಗಂಧಕ್ಕೆ ಬುಡ ತುದಿಯಿಲ್ಲ.
ಅರ್ಕೇಶ್ವರಲಿಂಗವನರಿದುದಕ್ಕೆ ಎಲ್ಲಿಯೂ ತಾನೆ. ||೪||

**೭೯೩**

ಅಣ್ಣನ ಮೂರು ಕುತ್ತಿನಲ್ಲಿ,
ಅಕ್ಕ ಮೂರು ಮಕ್ಕಳ ಹೆತ್ತು,
ಅಪ್ಪನ ಕೈಯಲ್ಲಿ ಕೊಟ್ಟಳು.
ಅಣ್ಣ ಹಣ್ಣಿದ ಜಗಳ.
ಅಕ್ಕನ ಹೊಟ್ಟೆಯ ಕೇಡು.
ಅಕ್ಕನ ಕೂಸು ಅಪ್ಪನ ತಿಂದು,
ಎತ್ತ ಹೋಯಿತ್ತೆಂದರಿಯೆ.
ಅರ್ಕೇಶ್ವರಲಿಂಗವ ಕೇಳುವ ಬನ್ನಿ. ||೫||

**೭೯೪**

ಅರಿದು ಲಿಂಗಸಂಗವಾದಲ್ಲಿ ಕಾಯವಳಿದರೇನು ?
ಕಾಯವುಳಿದು ಕೈಲಾಸಕ್ಕೆ ಹೋಗಬೇಕೆಂಬುದು,
ಜೀವನ ಉಪಾಧಿಕೆ.
ಘಟಮಟಪಟನ್ಯಾಯ ಇವೆಲ್ಲವು ಬಯಲೊಳಗು.
ಅರ್ಕೇಶ್ವರಲಿಂಗವನರಿದು ಕೂಡಿದ ಮತ್ತೆ,
ಅಂಗ ಸಿಕ್ಕುವುದಕ್ಕೆ ಠಾವಿಲ್ಲ. ||೬||

೭೯೫

ಅರಿವುಳ್ಳವನಂತೆ, ಭವದಲ್ಲಿ ಬಾಹರ ಭವನವ ಕಾವನೆ ?
ತತ್ವ ಭಾವನೆಯ ಬಲ್ಲವನಂತೆ,
ತುತ್ತಿನಾಸೆಗಾಗಿ ಜೆಕ್ಕಿನಂತೆ ಧ್ಯಾನಿಸುತ್ತಿಪ್ಪನೆ ?
ಇವರಾಟ, ಮರ್ತ್ಯರ ಸಿಕ್ಕಿಸುವ ಕೂಟ,
ಅರ್ಕೇಶ್ವರಲಿಂಗನ ಕೂಟವಲ್ಲ. ||೭||

೭೯೬

ಅಸಿ ಕೃಷಿ ಮಸಿ ಯಾಚಕ ವಾಣಿಜ್ಯತ್ವವ
ಮಾಡುವುದು ಲೇಸು.
ಹುಸಿ ವೇಷವ ತೊಟ್ಟು ಅಸುವ ಹೊರೆವವನ ಘಟ
ಪಿಸಿತದ ತಿತ್ತಿಯಂತೆ
ಅಘಟಿತ, ಅವನನೊಲ್ಲ ಅರ್ಕೇಶ್ವರಲಿಂಗ. ||೮||

೭೯೭

ಆಕಾಶದ ಮಧ್ಯದಲ್ಲಿ ಒಂದು ಭೇಕ ನುಡಿಯುತ್ತದೆ.
ಅದು ಅನೇಕ ಗೀತ ವಾದ್ಯ ನೃತ್ಯಂಗಳಿಂ[ದಾಡುತ್ತಿದ್ದಿತ್ತು].
ಎನ್ನಾಟವ ನೋಡುವರಿಲ್ಲಾಯೆಂದು ನೇತಿಗಳೆಯಿತ್ತು ತನ್ನಂಗವ.
ಅದು ನಿರ್ಜಾತನ ಒಲುಮೆ.
ಅರ್ಕೇಶ್ವರಲಿಂಗವನರಿವುದಕ್ಕೆ ತೆರಪಾಗಿರಣ್ಣಾ. ||೯||

೭೯೮

ಆಕಾಶದ ಮಳೆಯನರಿತು,
ಭೂಮಿಯ ಬೆಳೆಯನರಿತು,
ಹುಟ್ಟುವ ಬೀಜವನರಿತು,
ದೃಷ್ಟವ ಕಂಡು ಹೊತ್ತಾಡಿ,
ಅರ್ಕೇಶ್ವರಲಿಂಗವನರಿವುದಕ್ಕೆ. ||೧೦||

೭೯೯

ಆಡಿನ ಕಾಲ ಕಡಿದು, ಕೋಡಗದ ಹಲ್ಲ ಕಿತ್ತು,
ಉಡುವಿನ ನಾಲಗೆಯ ಒಡಗೂಡಿ ಕೂಡಿ ತಿಂದು,
ಮತ್ತೊಡೆಯನನರಿಯಬೇಕು, ಅರ್ಕೇಶ್ವರಲಿಂಗವ. ||೧೧||

೮೦೦

ಆಡುವ ಮಾತಿಂಗೆ, ಮಾಡುವ ಕೀಲಿಂಗೆ,
ಕಡು ನಡು ಮೊದಲಿಲ್ಲ.
ಅರಿದಡೆ ಒಂದೆ ವರ್ಮ ಭೇದ.
ಮಾಡುವ ಸೂತ್ರ ಕೀಲೊಂದರಲ್ಲಿ ಅಡಗಿದಡೆ,
ಅದು ಭೇದಕತನ.
ಅರಿದು ಕುರುಹಿನಲ್ಲಿ ಮರವೆ ನಿಃಪತಿಯಾದಡೆ,
ಅರ್ಕೇಶ್ವರಲಿಂಗ ಭಿನ್ನಭಾವಿಯಲ್ಲ. ||೧೨||

೮೦೧

ಆತ್ಮ ಶಯನನಾಗಿದ್ದಲ್ಲಿ ತನುವಿನ ಸಂಚಾರವ ಮರೆದು,
ಸ್ವಪ್ನಾವಸ್ಥೆಯಲ್ಲಿ ಜಾಗ್ರದಿರವನರಿವಂತೆ,
ಸ್ವಪ್ನದ ಭೇದವ ಸುಷುಪ್ತಿಯರಿದು ವಿಶ್ರಮಿಸುವಂತೆ,
ಕಾಯದ ಇಷ್ಟದ ಭೇದವನರಿ.
ಅರ್ಕೇಶ್ವರಲಿಂಗವನರಿವುದಕ್ಕೆ ಉಳುಮೆಯ ಗೊತ್ತು. ||೧೩||

೮೦೨

ಆರು ಕಂಬದ ಮಾಳಿಗೆಯ ನಡುವೆ,
ಒಂದು ಮೂರುಮುಖದ ಹೆಗ್ಗಣ ತೋಡಿ ಕಂಡಿತ್ತು,
ತೋಡೊಲೆಗಳವ, ಸಾಗರದ ಮಂದಿರವ ಅದು.
ತನ್ನಿರವ ತೋರುವುದಕ್ಕೆ ಮೊದಲೆ ಮಾಳಿಗೆ ಜಾರಿತ್ತು.
ಅರ್ಕೇಶ್ವರಲಿಂಗವ ಕೇಳಿಕೊಂಬ ಬನ್ನಿ. ||೧೪||

೮೦೩

ಇದಿರರಿದಹರೆಂದು ಮರೆಯ ಮಾಡಿ,
ಗೂಢವ ನುಡಿಯಬಹುದೆ ವಸ್ತುವ ?
ಅರು[ವೆ]ಯಲ್ಲಿ ಕೆಂಡವ ಕಟ್ಟಿದಡೆ ಅಡಗಿಹುದೆ ?
ನೆರೆ ವಸ್ತು ಒಬ್ಬರಿಗೆ ಒಡಲೆಡೆವುಂಟೆ ?
ಅರ್ಕೇಶ್ವರಲಿಂಗ ಅರಿವರ ಮನ ಭರಿತ, ಸಂಪೂರ್ಣ. ||೧೫||

೮೦೪

ಉಂಟೆಂದಡುಂಟು, ಇಲ್ಲಾ ಎಂದಡೆ ಇಲ್ಲ.
ಅದು ತನ್ನ ವಿಶ್ವಾಸದ ಭಾವ.

ತನಗೆ ಅನ್ಯಭಿನ್ನವಿಲ್ಲ,
ಅರ್ಕೇಶ್ವರಲಿಂಗ ತಾನಾದ ಕಾರಣ. ||೧೬||

೮೦೫

ಉರಿ ತರುವಿನಲ್ಲಿ ಹುಟ್ಟಿ, ತರುವ ಸುಡುವಂತೆ,
ಜೀವ ಜೀವದಲ್ಲಿ ಹುಟ್ಟಿ, ಜೀವರ ಲಯವ ಮಾಡುವಂತೆ,
ಅರಿವು ಜ್ಞಾನದಲ್ಲಿ ನಿಂದು,
ಕುರುಹನವಗವಿಸಿತ್ತು, ಅರ್ಕೇಶ್ವರಲಿಂಗವನರಿತು. ||೧೭||

೮೦೬

ಉರಿ ಸಿರಿ ಭೂತ ಭವಿಷ್ಯತ್ ವರ್ತಮಾನಂಗಳಲ್ಲಿ
ನೋಡುವ ಆಲಿ ಮೇಲಕ್ಕೆ ಸಿಕ್ಕಿ,
ಭಾವ ಅಂಗವ ಮರೆದು,
ಧ್ಯಾನವೆ ಮೂರ್ತಿ ಜಪ.
ಪಂಚಾಕ್ಷರಿಯ ಪ್ರಣವ ಏಕೀಕರಿಸಿದಲ್ಲಿ,
ಸಂದಿತ್ತು ಜಪ ಅರ್ಕೇಶ್ವರಲಿಂಗಕ್ಕೆ. ||೧೮||

೮೦೭

ಊರ ಸುತ್ತಿ ಬಂದಡೆ ಬಾಗಿಲಲ್ಲಿ ಹೋಗುವ ತೆರನಂತೆ,
ಅರಿದು ಒಡಲಾಗದವಂಗೆ ಬೇರೊಂದು ತೆರನಿಲ್ಲ.
ಉರಿ ಧರಿಸಿದ ಸರದಂತೆ ಅಲ್ಲಿಯೇ ಲೇಪ,
ಅರ್ಕೇಶ್ವರಲಿಂಗದಲ್ಲಿಯೇ. ||೧೯||

೮೦೮

ಊರೆಲ್ಲರೂ ಕೂಡಿ, ಬೇಟೆಗೆ ಹೋಗಿ,
ಹಾರುವನ ಕೊಂದರು.
ತಲೆವೃಳಿದು, ಕಾಲ ಕಂಡಿಸಿ, ಕರುಳಡಗಿತ್ತು.
ಬೇಟೆ ಬೆಳೆಯಾದುದಿಲ್ಲ.
ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೨೦||

೮೦೯

ಊರೊಳಗಣ ದೇವಾಲಯದಲ್ಲಿ
ಐವರು ಹೊಲೆಯರು ಹೊಕ್ಕು,
ದೇವರ ಪೂಜಿಸುತ್ತೈದಾರೆ.

ಹೊಲೆಯರು ಮುಟ್ಟಿ ದೇವಾಲಯ ಹೊರಗಾಯಿತ್ತು,
ದೇವರೊಳಗದೆ.
ಕುಲಜರು ಹೊಲಬುದಪ್ಪಿ ಹೊಲೆ ಒಳಗಾಯಿತ್ತು,
ಅರ್ಕೇಶ್ವರಲಿಂಗವನರಿದ ಕಾರಣ. ||೨೧||

೮೧೦

ಎಲ್ಲವನರಿದು ಬಿಟ್ಟ ಬಳಿಕ,
ಮತ್ತಿನ್ನು ಗೆಲ್ಲ ಸೋಲಕ್ಕೆ
ಸನ್ನೆಯ ತಗರಿನಂತೆ,
ಹರಿವ ಸಮೂಹವನೊಲ್ಲದೆ,
ತಾ ನಿಂದಲ್ಲಿಯೆ ಸುಖವು.
ಅರ್ಕೇಶ್ವರಲಿಂಗವನರಿವುದಕ್ಕಿದೇ ಗೊತ್ತು. ||೨೨||

೮೧೧

ಒಸರಿ ತುಂಬಿ ಮೇಲಕ್ಕೊಸರದಂತೆ,
ಆ ಘಟದ ಮುಖದಲ್ಲಿಯೆ ಅಡಗಿ ತೆಗೆದಡೆ,
ಕಟ್ಟಣಕೆ ಕಟ್ಟಿದಲ್ಲಿಪ್ಪಂತೆ
ನಾನಾ ಸತ್ಕ್ರೀಮಾರ್ಗದಲ್ಲಿದ್ದು,
ನಿಜನಿಶ್ಚಯವ ನೆಮ್ಮಬೇಕು, ಅರ್ಕೇಶ್ವರಲಿಂಗದಲ್ಲಿ. ||೨೩||

೮೧೨

ಓಗರ ಹಸಿದು ಆಪ್ಯಾಯನವನುಂಡುದನಾರೂ ಅರಿಯರು.
ನೀರು ಬಾಯಾರಿ ಭೂಮಿಯ ಕುಡಿದುದನಾರೂ ಅರಿಯರು.
ದೇವರು ರೂಪಾಗಿ ಸಕಲರೊಳಗೆ ಗತಿಗೆಡುವುದನಾರೂ ಅರಿಯರು.
ವಿಪರೀತ ಕುರುಹಾಯಿತ್ತು, ಅರ್ಕೇಶ್ವರಲಿಂಗನ ಗೊತ್ತಿಗೆ ಬಂದ ಕಾರಣ. || ೨೪ ||

೮೧೩

ಕಂಗಳ ಮಧ್ಯದ ಮಲೆಯಲ್ಲಿ,
ಒಂದು ನಿಸ್ಸಂಗಶೃಂಗಿ ಮೇವುತ್ತದೆ.
ಅಂಬೊಂದು, ಹಿಳುಕು ಮೂರು,
ಅಲಗಾರು, ಮೊನೆ ಅಯಿದು ಕೂಡಿದಲ್ಲಿ,
ಧನು ನಾಲ್ಕು ಹಿಡಿದು, ನಾರಿಯೆಂಟ ಕೂಡಿ,
ಶರಸಂಧಾನವಲೆಸೆಯೆ,

ಶೃಂಗಿ ಬಿದ್ದಿತ್ತು, ಅಸು ಬದುಕಿತ್ತು,
ಅರ್ಕೇಶ್ವರಲಿಂಗವನರಿದ ಕಾರಣ. ||೨೫||

೮೧೪

ಕಂಗಳ ಸೂತಕವ ಯೋನಿ ತಡೆದು,
ಬಾಯ ಬಸುರಾಗಿ, ಕೈ ಬೆಸನಾಯಿತ್ತು.
ಕೈಯ ಶಿಶುವ ಕಂಗಳ ತಾಯಿ ಎತ್ತಿ,
ಭಾವದ ದಾದಿಯ ಕೈಯಲ್ಲಿ ಕೊಟ್ಟು,
ಅರ್ಕೇಶ್ವರಲಿಂಗವು ತೊಟ್ಟಿಲಲ್ಲಿ ಬೆಳಗುತ್ತದೆ. ||೨೬||

೮೧೫

ಕಂಜನಾಭನ ಸುತನ ರಂಜಿಸಿದಲ್ಲಿಯೆ
ಕಾಯಗುಣ ಕೇಡಾಯಿತ್ತು.
ಮನಸಿಜನ ಪಿತನ ಹಾಯವ ಬಿಟ್ಟಾಗಲೆ
ಸುಖ ಲಯವಾಯಿತ್ತು.
ಚಿತ್ತ ವಿಶ್ರಾಂತಿಯನೆಯ್ದಿದಲ್ಲಿ[ಯೆ]
ಸುಳಿದಾಡುವನ ಲಯ ಕೆಟ್ಟಿತ್ತು.
ತ್ರಿವಿಧ ಲೇಪವಾದಲ್ಲಿಯೆ
ಅರ್ಕೇಶ್ವರಲಿಂಗನ ಭಾವ, ಬ್ರಹ್ಮಕ್ಕೊಳಗಾಯಿತ್ತು. ||೨೭||

೮೧೬

ಕಂಜನಾಭಿಯಲ್ಲಿ ಕುಂಜರ ಬಂದು,
ಮಂದಿರದವರೆಲ್ಲರ ಕೊಂದಿತ್ತು.
ಕುಂಜರನ ಬೆಂಬಳಿಯವರಲ್ಲದೆ
ಕುಂಜರನ ಸಂದ ಮುರಿವರಿಲ್ಲ.
ಅರ್ಕೇಶ್ವರಲಿಂಗನ ಒಲುಮೆಯಿದ್ದವರಿಗಲ್ಲದೆ ಸಾಧ್ಯವಾಗದು. ||೨೮||

೮೧೭

ಕಂಡು ಕಾಬುದು, ಕಾಣದೆ ಅರಿವುದು,
ಭಾವಿಸಿ ಪ್ರಮಾಣಕ್ಕೆ ಬಾರದಿಪ್ಪುದು
ಭಾವವೋ, ಭ್ರಮೆಯೋ ?
ಅದೇನೆಂಬುದ ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೨೯||

೮೧೮

ಕಣ್ಣು, ಕಾಡುವ ಗುಂಗುರ ತಿಂದು,
ಬಾಯ, ಕಾಡುವ ಕೈಯ ತಿಂದು,
ಆಪ್ಯಾಯನವಡಸಿದ ಹೊಟ್ಟೆಯ ತಿಂದು,
ಮತ್ತಿವರ ಹುಟ್ಟು ಮೆಟ್ಟನರಿಯಲೇಕೆ ?
ಅರ್ಕೇಶ್ವರಲಿಂಗವನರಿಯಿರಣ್ಣಾ. ||೩೦||

೮೧೯

ಕಲ್ಲು ಬೆಂಕಿ ಕೂಡಿ ಉರಿವಾಗ, ಹುಲ್ಲು ಕತ್ತುದುದಿಲ್ಲ.
ಮೆಲ್ಲನೆ ಉಲುಹುವಾತನ ಸೊಲ್ಲಿನ ಬಲ್ಲತನ ಅಲ್ಲಿಯೆ ಬೆಂದಿತ್ತು.
ಅರ್ಕೇಶ್ವರಲಿಂಗವನರಿಯಿರಣ್ಣಾ. ||೩೧||

೮೨೦

ಕವಿಯ ಕಾಳಗದಲ್ಲಿ ರವಿ ಬಂಟನಾಗೆ,
ಶಶಿ ದೆಸೆಗೆಟ್ಟು, ಅರಸು ಬಂಟರ ಬಿಟ್ಟೋಡಿದ.
ರವಿ ರಥವ ತುಡುಕಿ ಅವಿರಥವಾದ.
ಅರ್ಕೇಶ್ವರಲಿಂಗದಲ್ಲಿಗೆ ಕವಿ ಕವಲಾಯಿತ್ತು. ||೩೨||

೮೨೧

ಕಾಡಿನೊಳಗಣ ವರಹನ, ಊರ ಕುಕ್ಕುರ ಕೊಲುವಾಗ
ಊರಿಗೂ ಕಾಡಿಗೂ ಏತರ ಹಗೆ ?
ಅದರ ಭೇದ ಅಲ್ಲಿಯೆ ಅಡಗಿತ್ತು.
ಅರ್ಕೇಶ್ವರಲಿಂಗವನರಿಯಿರಣ್ಣಾ. ||೩೩||

೮೨೨

ಕಾಯಕ್ಕೆ ಆಚಾರಸಂಬಂಧ.
ಜೀವಕ್ಕೆ ಅರಿವುಸಂಬಂಧ.
ಅರಿವಿಂಗೆ ಜ್ಞಾನಸಂಬಂಧ.
ಜ್ಞಾನಕ್ಕೆ ಜ್ಯೋತಿಸಂಬಂಧ.
ಜ್ಯೋತಿಗೆ ಮಹಾಬೆಳಗು ಸಂಬಂಧವಾಗಿಯಲ್ಲದೆ,
ಅರ್ಕೇಶ್ವರಲಿಂಗವ ಕಾಣಬಾರದು. ||೨೪||

೮೨೩

ಕಾಯದ ಸೂತಕವ ನೋಟದಿಂದ ಕಳೆದು,
ನೋಟದ ಸೂತಕವ ಭಾವದಿಂದ ಕಳೆದು,

ಭಾವದ ಪ್ರಕೃತಿ[ಯ] ಜ್ಞಾನದಿಂದ ಕಳೆದು.
ಜ್ಞಾನದ ಬೆಳಗು ನಿಂದಲ್ಲಿ,
ಅರ್ಕೇಶ್ವರಲಿಂಗವ ಮುಟ್ಟಿದ ಮುಟ್ಟು. ||೩೫||

೮೨೪

ಕಾಯವಳಿದು ಜೀವ ಬಯಲಾದಲ್ಲಿ,
ಭಾವಿಸುವ ಅರಿವ ನೆಲೆಯ ಕುರುಹೆಲ್ಲಿದ್ದಿತ್ತು ?
ಅದ ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೩೬||

೮೨೫

ಕಾಲು ಕೈ ತಲೆಗೆ ಹೊಣೆಯಾದ ಮತ್ತೆ
ಊರೆಲ್ಲಕ್ಕೆ ಹೇಳಲೇಕಯ್ಯ ?
ತಲೆವೊಡೆಯ ತಲೆಯಳಿಸುತ್ತಿರ್ದು,
ಹಲಬರಿಗೆ ಮೊರೆಯೇಕೆ ?
ಅರ್ಕೇಶ್ವರಲಿಂಗವನರಿಯಿರಣ್ಣಾ. ||೩೭||

೮೨೬

ಕಾಳಿಂಗನ ಮಡುವ ಕಲಕಿದವನ
ನಾಭಿಯ ಕೂಸಿನ ಶಿರಪಾಣಿಯಲ್ಲಿ ಬೇಡುವ,
ಆತನ ಶಕ್ತಿಯ ಸಮರಸದಲ್ಲಿ ಓಲಾಡುವ,
ಮುಕ್ತಿವಂತರೆಲ್ಲರೂ ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೩೮||

೮೨೭

ಕುಕ್ಕೊಂಜಿನ ಕಾಗೆಯಂತೆ, ಜೀವ ಎತ್ತ ಹಂಬಲಿಸಿದಡೂ
ಆಸೆಯೆಂಬ ಗೊತ್ತಿಗೆ ಬಹವರೆಲ್ಲರು ನಿಶ್ಚಯವನರಿಯಬಲ್ಲರೆ ?
ತುತ್ತು ಕುತ್ತಿಗಾಗಿ ವೇಷವ ತೊಟ್ಟಿಹ
ಚಿತ್ತಶುದ್ಧಾತ್ಮವಿಲ್ಲದವರ ಅರ್ಕೇಶ್ವರಲಿಂಗನೊಪ್ಪನವರ. ||೩೯||

೮೨೮

ಕುದುರೆಯ ನರಿ ಕೊಂದು,
ನರಿಯ ಇರುಹೆ ತಿಂದು,
ಆ ಇರುಹೆ ತನ್ನ ತಾ ಸತ್ತಿತ್ತು,
ಅರ್ಕೇಶ್ವರಲಿಂಗವನರಿವುದಕ್ಕೆ. ||೪೦||

೮೨೯

ಕುಲವೆರಡಲ್ಲದೆ ಹಲವಿಲ್ಲ.
ದಿನವೆರಡಲ್ಲದೆ ಸಪ್ತದಿನವಿಲ್ಲ.
ಅರಿವು ಮರವೆಯೆರಡಲ್ಲದೆ ಬೇರೊಂದು ತೊಡಿಗೆಯಿಲ್ಲ.
ಅರ್ಕೇಶ್ವರಲಿಂಗ ಏಕರೂಪನಲ್ಲದೆ
ಬಹುನಾಮದವನಲ್ಲ. || ೪೧ ||

೮೩೦

ಕೋಟಿ ಮಾತನಾಡಿದಡೂ ವಸ್ತುವಿನ ಕೂಟವೊಂದೆ ಭೇದ.
ನಾನಾ ಕ್ರೀಯ ಭಾವಿಸಿದಡೂ ಸದ್ಭಾವವೊಂದೆಯಾಗಬೇಕು.
ಊರ ಸುತ್ತಿದಡೂ ಬಾಗಿಲಲ್ಲಿ ಬರಬೇಕು.
ಮರೆಯ ಮಾತು ಬೇಡ.
ಅರ್ಕೇಶ್ವರಲಿಂಗವನರಿತಲ್ಲದಾಗದು. || ೪೨ ||

೮೩೧

ಕ್ರಿಯಾಭಾವದಲ್ಲಿ ನಿಂದು ಮಾಡುವನ ಅರ್ಚನೆ
ಕಾರ್ಪಾಸದಂತಿರಬೇಕು.
ಕಲ್ಪದ್ರುಮದ ಬಿತ್ತಿನ ಸಿಪ್ಪೆಯಂತಿರಬೇಕು.
ವರುಣಕಿರಣದ ಸಂಚಾರ ಸಂಚರಿಸುವಂತಿರಬೇಕು.
ಇದು ಕ್ರೀಶುದ್ಧತೆ, ಅರ್ಕೇಶ್ವರಲಿಂಗವನರಿವುದಕ್ಕೆ. || ೪೩ ||

೮೩೨

ಗುಬ್ಬಿ ಗುಂಭವನೊಡೆದು ಒಬ್ಬುಳಿತೆಯಾಯಿತ್ತು.
ತನ್ನ ಸಿಬ್ಬುದ್ಧಿಯ ಬಿಟ್ಟು,
ಕಬ್ಬಕ್ಕಿಯ ಹಿಂಡನೊಲ್ಲದೆ,
ನಿಬ್ಬದ್ಧಿಯಾಗಿ ಅಲ್ಲಿಯೆ ಹೋಯಿತ್ತು,
ಅರ್ಕೇಶ್ವರಲಿಂಗವನರಿತು. || ೪೪ ||

೮೩೩

ಘಟದ ಮರೆಯಲ್ಲಿ ಅಸುವಿಪ್ಪಂತೆ,
ಫಲದ ಮರೆಯಲ್ಲಿ ರಸವಿಪ್ಪಂತೆ,
ಶಿಲೆಯ ಮರೆಯಲ್ಲಿ ಕಾಲ ಲಯನ ಲೀಲೆ ತೋರುತ್ತದೆ.
ಲೀಲೆ ನಿರ್ವಯಲಾಗಿ, ಆ ಬಯಲ ಬಂಧನವನರಿ,
ಅರ್ಕೇಶ್ವರಲಿಂಗವನರಿವುದಕ್ಕೆ. || ೪೫ ||

### ೮೩೪

ಜಾತಿ ಜಾತಿಯ ಕೂಡಿದಲ್ಲದೆ ನಿಹಿತ ಸುಖವಿಲ್ಲ.
ಬಲ್ಲವ ಬಲ್ಲವನಲ್ಲಿಯಲ್ಲದೆ ಒಳ್ಳೆಯ ಗುಣವಿಲ್ಲ.
ಭಟ ಮುಗ್ಗಿದಡೆ ತಿಳಿದ ಭಟ ಕೈ ಹಿಡಿದೆತ್ತಿ,
ಇದಿರಾಗೆಂದಡೆ, ಊಣೆಯವೆಲ್ಲಿ ಅಡಗಿತ್ತು ?
ಕೇಳುವ ಬನ್ನಿ, ಅರ್ಕೇಶ್ವರಲಿಂಗವ. || ೪೬ ||

### ೮೩೫

ಜಾತಿ ಜಾತಿಯ ಕೊಂದು, ನಿಹಿತ ಅನಿಹಿತವ ಕೆಡಿಸಿ,
ಜಾತ ಅಜಾತನ ಕಂಡು ನಿಹಿತವಾಗಿರಿ,
ಅರ್ಕೇಶ್ವರಲಿಂಗವನರಿವುದಕ್ಕೆ. || ೪೭ ||

### ೮೩೬

ತನು ನಿರ್ವಾಣ, ಮನ ಸಂಸಾರ.
ಮಾತು ಬ್ರಹ್ಮ, ನೀತಿ ಅಧಮ.
ಅದೇತರ ಅರಿವು ?
ಘಾತಕನ ಕೈಯ ಕತ್ತಿಯಂತೆ,
ಇದು ನಿಹಿತವಲ್ಲ, ಅರ್ಕೇಶ್ವರಲಿಂಗವನರಿವುದಕ್ಕೆ. || ೪೮ ||

### ೮೩೭

ತಮ ಹಂಜರಿಸಿದಲ್ಲಿ, ಚಂಡಕರನ ಕಿರಣವೆಲ್ಲಿ ಹೊಂದಿತ್ತು ?
ಅಪ್ಪು ವಹ್ನಿಯ ಘಟಿಸಲಾಗಿ, ಧೂಮದಲ್ಲಿ ಉಳಿಯಿತ್ತು ?
ಘಟ ಇಷ್ಟದಲ್ಲಿ ಕುರುಹಳಿವಾಗ, ಅರಿವೆಲ್ಲಿದ್ದಿತ್ತು ?
ಅರಿವು ನಾಮ ಅವಧಿಗಿಲ್ಲವಾಗಿ,
ಅರ್ಕೇಶ್ವರಲಿಂಗದ ಕುರುಹು ಎಲ್ಲಿದ್ದಿತ್ತು ? || ೪೯ ||

### ೮೩೮

ತರು ಕುಲಿಶದಲ್ಲಿ ಹೊಕ್ಕು,
ತನ್ನಯ ಕುಲವ ಭೇದನವ ಮಾಡುವಂತೆ,
ಸಮಯವ ಹೊಕ್ಕು, ಸಮಯವ ನೇತಿಗಳೆವ
ಶ್ರಮವಿಲ್ಲದವರನೊಲ್ಲ, ಅರ್ಕೇಶ್ವರಲಿಂಗ. ||೫೦||

### ೮೩೯

ತ್ರಿವಿಧ ಘಟಿಸಿ ಕುರುಹಾದಲ್ಲಿ,
ಕುರುಹು ಅರಿವನರಿದುದಿಲ್ಲ.

ಆ ಅರಿವಿಂದ ಕುರುಹ ಪ್ರಮಾಣಿಸಿ,
ಮಧುರದಂಡದಂತೆ ಉಭಯವನರಿ.
ಅರಿದಲ್ಲಿ ಅರ್ಕೇಶ್ವರಲಿಂಗನ ಭಾವದ ಕೂಟ. ||೫೧||

**೮೮೦**

ತ್ರಿಸಂಧಿಯಲ್ಲಿ ಧ್ಯಾನ ಮರವೆಯೆಂದು,
ಮಣಿಮಾಲೆಯಲ್ಲಿ ಅಗಣಿತನ ಎಣಿಕೆಯಿಂದ ಅರಿದೆಹೆನೆಂದು,
ಸಿಕ್ಕಿತ್ತು ಧ್ಯಾನ ಜಪದ ಕೃತ್ಯದಲ್ಲಿ.
ಆ ಜಪ ಧ್ಯಾನ ಭಾವ ಸಂಚಾರವಿಲ್ಲದೆ
ಭಾವಿಸಿದಲ್ಲಿ ಜಪ ಸಂದಿತ್ತು.
ನೇಮಭಾವದಲ್ಲಿ ಅಡಗಿತ್ತು,
ಅರ್ಕೇಶ್ವರಲಿಂಗವನರಿದ ಕಾರಣ. ||೫೨||

**೮೮೧**

ಧಾರೆ ಮೊನೆ ಕಟ್ಟಿದಂತೆ, ಮೀರಿ ತಾಗಬಲ್ಲುದೆ ಅಸಿಕೂರಲಗು ?
ನಿಪುಣ ಕ್ರೀಭಾವ ಶುದ್ಧವಾಗಿಯಿದ್ದವಂಗೆ
ಬೇರೆ ಇಂದ್ರಿಯಂಗಳು ಗತಿಗೆಡಿಸಬಲ್ಲವೆ ?
ಅವು, ಅರ್ಕೇಶ್ವರಲಿಂಗನ ಗೊತ್ತ ಮುಟ್ಟಲರಿಯವು. ||೫೩||

**೮೮೨**

ನಾ ನಿನ್ನನರಿವಲ್ಲಿ, ನೀನೆನ್ನ ಕೈಯಲ್ಲಿ
ಅರಿಯಿಸಿಕೊಂಬಲ್ಲಿ, ಅದೇನು ಭೇದ ?
ನಾನೆಂದಡೆ ನಿನ್ನ ಸುತ್ತಿದ ಮಾಯೆ.
ನೀನೆಂದಡೆ ನನ್ನ ಸುತ್ತಿದ ಮಾಯೆ.
ನಾ ನೀನೆಂಬಲ್ಲಿ ಉಳಿಯಿತ್ತು, ಅರ್ಕೇಶ್ವರಲಿಂಗನ ಅರಿಕೆ. ||೫೪||

**೮೮೩**

ನಾನೆಂದಡೆ ಸ್ವತಂತ್ರಿಯಲ್ಲ.
ನೀನೆಂದು ಇದಿರಿಟ್ಟಲ್ಲಿ ಭಾವಕ್ಕೆ ಭಿನ್ನ.
ನಾನೆನಬಾರದು, ನೀನೆನಬಾರದು.
ಅರ್ಕೇಶ್ವರಲಿಂಗವ ಏನೂ ಎನಬಾರದು. ||೫೫||

**೮೮೪**

ನಾಯಿಗೆ ಕಾಲು ಕೊಟ್ಟು,
ತೋಳಗೆ ಹೊಟ್ಟೆಯ ಕೊಟ್ಟು,

ಹುಲಿಗೆ ತಲೆಯ ಕೊಟ್ಟು,
ಮೆಲಿಸಿಕೊಂಬವರೆಲ್ಲಕ್ಕು ಬಲವಂತತನವೆ ?
ಅದರ ಸಲೆ ಬಲುಮೆ,
ಅರ್ಕೇಶ್ವರಲಿಂಗವನರಿತವರಿಗಲ್ಲದೆ ಆಗದು. ||೫೬||

**೮೪೫**

ನುಡಿಯಿರಿದಡೆ ಪರಿಕೈದೇಕೆ ?
ಕೈಯಲ್ಲಿ ಅರಿವು ವಸ್ತುವಾದಡೆ,
ಬೇರೊಂದು ಕುರುಹೇಕೆ ?
ಕೈಯಲ್ಲಿ ಕುರುಹು ಕುರುಹಿಂಗೆ ಬೇಕು.
ಅರಿವು ಅರಿವಿಂಗೆ ಬೇಕು.
ಅರ್ಕೇಶ್ವರಲಿಂಗವನರಿವುದಕ್ಕೆ ಕುರುಹಿನ ಮರೆಬೇಕು. ||೫೭||

**೮೪೬**

ನೆನಹು ನಿಜದಲ್ಲಿ ನಿಂದಲ್ಲಿ ಸುರುಳಿನ ತೊಡಕು ಗಂಟುಂಟೆ ?
ಅಂಬರವನಡರಿದವಂಗೆ ಬೇರೊಂದಿಂಬ ಮಾಡಲುಂಟೆ ?
ವಸ್ತುವಿನ ಅಂಗದಲ್ಲಿ ಸರ್ವವೂ ಹಿಂಗಿದಲ್ಲಿ,
ಅರ್ಕೇಶ್ವರಲಿಂಗವ ಕಟ್ಟುವುದಕ್ಕೆ ಬೇರೊಂದು ಠಾವುಂಟೆ ? ||೫೮||

**೮೪೭**

ನೇತ್ರದಲ್ಲಿ ಕಂಡು, ಶ್ರೋತ್ರದಲ್ಲಿ ಕೇಳಿ,
ಗಾತ್ರದಲ್ಲಿ ಮುಟ್ಟಿ, ಚಿತ್ತದಲ್ಲಿ ಒಲಿಸುವಡೆ
ಮತ್ತೊಬ್ಬರಲ್ಲಿ ಹೊತ್ತುಹೋರಲೇಕಣ್ಣಾ,
ಅರ್ಕೇಶ್ವರಲಿಂಗವನರಿವುದಕ್ಕೆ ? ||೫೯||

**೮೪೮**

ನೊಣ ರಣವ ಹೊಕ್ಕು, ಶ್ರೋಣಿತವ ಭುಂಜಿಸುವಾಗ,
ಕೇಣಸರದ ಭಟರೆಲ್ಲರೂ
ನೊಣದ ರಾವಡಿಗಂಜಿ ಹೇಳದೆ ಹೋದರು.
ಅರ್ಕೇಶ್ವರಲಿಂಗವನರಿಯಿರಣ್ಣಾ. ||೬೦||

**೮೪೯**

ಪಂಜರದ ಕೋಳಿ ಮಾರ್ಜಾಲನ ಕೊಂದು ತಿಂದು,
ಬಂದುದ ಹೊಂದದೆ ತಾನೊಂದೆ ಹೊಂದಿತ್ತು,
ಪಂಜರ ಹೊರಗೆ, ಅರ್ಕೇಶ್ವರಲಿಂಗವನರಿದ ಕಾರಣ. ||೬೧||

೮೫೦

ಪಕ್ಷಿಯ ಕುಕ್ಕೆಯೊಳಗಿಕ್ಕಿ ಮಾರಬಹುದಲ್ಲದೆ
ಮತ್ತಗಜವ ಮಾರಬಹುದೆ ಅಯ್ಯಾ ?
ಚಿತ್ರವ ಬರೆವುದಕ್ಕೆ ಲೆಕ್ಕಣಿಕೆಯಲ್ಲದೆ ಚಿತ್ತಜಗುಂಟೆ ?
ಪುನರಪಿ ವಸ್ತುವನರಿವುದಕ್ಕೆ ಹೊತ್ತುಗೊತ್ತುಂಟೆ ?
ಅರ್ಕೇಶ್ವರನ ಕೂಡುವುದಕ್ಕೆ ತತ್ಕಾಲವುಂಟೆ ? ||೬೨||

೮೫೧

ಪರಮೂರ್ತಿಯಾದಡೆ ಪರಮನ ಸಂಚವನರಿಯಬೇಕು.
ವಿರಕ್ತನಾದಡೆ ಇಹಪರ ನಾಸ್ತಿ, ಪರಮ ಪರಿಣಾಮಿಯಾಗಿರಬೇಕು.
ಜ್ಞಾನಿಯಾದಡೆ ಸರ್ವಜೀವದ ಚೇತನವನರಿಯಬೇಕು.
ಸಾಕು ಮಾತಿನ ಮಾಲೆಯ ನೀತಿಯ ನುಡಿ.
ಅರ್ಕೇಶ್ವರಲಿಂಗನ ಬೆಚ್ಚಂತೆ ಇರಬೇಕು. ||೬೩||

೮೫೨

ಪಾಷಾಣದುದಕ ಏತರಿಂದ ದ್ರವ ?
ಪಾಷಾಣದ ಪಾವಕ ಅದೇತರಿಂದ ಕ್ರೋಧ ?
ಅಪ್ಪುವಿನ ಸಂಚಾರದ ರೂಪು ಅದೇತರ ಒಪ್ಪದಿಂದ ?
ಅರಿದರುಹಿಸಿಕೊಂಬ ಅರ್ಕೇಶ್ವರಲಿಂಗನ ಇರವು ಅದೇತರಿಂದ ? ||೬೪||

೮೫೩

ಪೂಜಿಸಿಕೊಂಡೆಹೆವೆಂದು, ಘನಗಂಭೀರದಲ್ಲಿ ರಾಗಿಸಿಕೊಂಡಿಪ್ಪ
ಆತ್ಮ ತೇಜದ ಮಾತಿನ ವೇಷದ ಗರ್ವಿಗಳು,
ಆಡುವ ವಾಚಕ, ಭೇಕನ ಬಾಯಲ್ಲಿ ಸಿಕ್ಕಿದ ಮಕ್ಷಿಕ,
ಶ್ರೋಣಿತದಾಸೆಗೆ ಮಚ್ಚಿದಂತೆ.
ಮತ್ತುಂಟೆ ಅರ್ಕೇಶ್ವರಲಿಂಗನ ಕೂಟ ? ||೬೫||

೮೫೪

ಪೂಜೆ ಪುಣ್ಯದ ಮಾಟ, ಭವದ ಕೂಟ, ಅರಿವು ಸಂದೇಹ.
ಅರಿಯದೆ ಮರೆಯದೆ ಕರಿಗೊಂಡಿರು,
ಅರ್ಕೇಶ್ವರಲಿಂಗವನರಿವುದಕ್ಕೆ. ||೬೬||

೮೫೫

ಬಂಧುಗಳ ಬೆಂಬಳಿಯ ಕಳ್ಳನ ಹೆಂಡತಿಗೆ
ಭಗ ಮೂರು, ಬಾಯಾರು, ಪೃಷ್ಠ ಎಂಬತ್ತನಾಲ್ಕುಲಕ್ಷ.

ರೋಮ ಎಂಟುಕೋಟಿ.
ಹಲ್ಲು ಹದಿನಾರು, ನಾಲಗೆ ಏಳು.
ಕಿವಿ ಇಪ್ಪತ್ತೈದು, ನಾಡಿ ಶತದಶ.
ಮೂಗು ಮೂವತ್ತೇಳು, ಕಾಲೆಂಟು.
ಭುಜವೆರಡು, ಕೈವೊಂದೆ.
ಹಿಂದೆ ಮುಂದೆ ನೋಡುವ ಕಣ್ಣು,
ಅಭಿಸಂಧಿಯೊಳಗೆ ಒಂದೆ ಅದೆ.
ಅರ್ಕೇಶ್ವರಲಿಂಗವ ಕಾಣಬಾರದು. ||೬೭||

೮೫೬

ಬಣ್ಣ ನುಂಗಿದ ಬಂಗಾರದಂತಾಯಿತ್ತು, ಈ ಅಂಗ.
ಶಿಥಿಲವನವಗವಿಸಿದ ಸುರಾಳದಂತಾಯಿತ್ತು, ಈ ಅಂಗ.
ಪಳುಕದ ಗಿರಿಯ ಉರಿ ನೆರೆದಂತಾಯಿತ್ತು, ಈ ಅಂಗ.
ಸರಸಮಾಧಾನವನೆಯ್ದೆ ಬೆರೆದು ನೆರೆದಂತಾಯಿತ್ತು, ಈ ಅಂಗ.
ಬಯಲು ಬಯಲೊಳಗಡಗಿ, ವಸ್ತು ವಸ್ತುವ ಕೂಡಿ,
ಅರ್ಕೇಶ್ವರಲಿಂಗದಲ್ಲಿ ಒಪ್ಪಿ ಹೋಯಿತ್ತು, ಈ ಅಂಗ. ||೬೮||

೮೫೭

ಬಲೆಯ ಮೀರಿದ ಮೃಗ ಸತ್ತಿತ್ತು.
ಕೊಲ ಹೋದಾತ, ಹಲವು ಅರಿದ ತಲೆಯ ಕಂಡು,
ಹೊಲಬುದಪ್ಪಿದ.
ಅರ್ಕೇಶ್ವರಲಿಂಗವನರಿಯಿರಣ್ಣಾ. ||೬೯||

೮೫೮

ಬಾವಿಯ ನೆಳಲ ಬಗ್ಗಿ ನೋಡುವನಂತೆ,
ಜೀವದಾಸೆ ನೋಟದ ಬೇಟ ಬಿಡದಂತೆ,
ಸಂಸಾರದ ಘಾತಕತನ, ಅರಿವಿನ ಮಾತಿನ ಮಾಲೆ.
ಉಭಯವ ನೇತಿಗಳೆಯದೆ
ಅರಿಯಬಾರದು, ಅರ್ಕೇಶ್ವರಲಿಂಗವ. ||೭೦||

೮೫೯

ಬಾಹ್ಯದಲ್ಲಿ ಶ್ರದ್ಧೆ ಭಾವ, ಭಾವದಲ್ಲಿ ಬಳಕೆ ನಾಸ್ತಿಯಾಗಿ,
ಆಮಳಕಫಲ ಕರದಲ್ಲಿದ್ದಂತೆ ಕಲೆದೋರದಿರು,
ಅರ್ಕೇಶ್ವರಲಿಂಗವನರಿವುದಕ್ಕೆ. ||೭೧||

೮೬೦

ಬಾಹ್ಯ ರಚನೆಯಲ್ಲಿ ಸತ್ಕ್ರಿಯಾಮಾರ್ಗ,
ಅಂತರಂಗ ಮಾರ್ಗದಲ್ಲಿ
ಕರಣಂಗಳ ಸಂಚ ವಿಸಂಚವನರಿಯಬೇಕು.
ಇದು ವಸ್ತುವ ಮುಂಚುವ ಭೇದ,
ಅರ್ಕೇಶ್ವರಲಿಂಗನ ಸಂಚಿತದ ಅಂಗ. ||೭೨||

೮೬೧

ಬೆತ್ತಲೆಯ ಹುತ್ತದಲ್ಲಿ ಕತ್ತಲೆಯ ಹೆಡೆಯ ಸರ್ಪ,
ತೆಕ್ಕೆ ಮಡಿಯಲರಿಯದೆ ಸಿಕ್ಕಿ,
ಅದೇ ಹುತ್ತದ ಬಾಯಲ್ಲಿ ಕಪ್ಪೆ ಹರಿದು ಬಂದು,
ಸರ್ಪನ ನುಂಗಿತ್ತು.
ಹುತ್ತ ಬಚ್ಚಬಯಲಾಯಿತ್ತು, ಅರ್ಕೇಶ್ವರಲಿಂಗನ ಗೊತ್ತು. ||೭೩||

೮೬೨

ಬೆಲ್ಲವ ಮೆಲುವಾತನ ಹಲ್ಲು ಕಹಿಯಾಗಿ,
ಹಲ್ಲು ಕಲ್ಲಿನೊಳಗಾಗಿ,
ಅಲ್ಲಿಯೆ ಅಡಗಿ ನೋಡುತ್ತದೆ.
ಅದ ನಾವು ನೀವು ಎಲ್ಲರೂ ಅರಿವ ಬನ್ನಿ,
ಅರ್ಕೇಶ್ವರಲಿಂಗವ ಬಲ್ಲವರಹರೆ. ||೭೪||

೮೬೩

ಬ್ರಹ್ಮನ ಬಾಯಲ್ಲಿ ಅದೆ, ವಿಷ್ಣುವಿನ ಕೈಯಲ್ಲಿ ಅದೆ,
ರುದ್ರನ ಶಿರದಲ್ಲಿ ಅದೆ.
ತಲೆ ಬಾಯ ನುಂಗಿ, ಕೈ ತಲೆಯೊಳಡಗಿ,
ಕಣ್ಣು ಕಾಲಾಯಿತ್ತು,
ಅರ್ಕೇಶ್ವರಲಿಂಗನನರಿವ ಭೇದದಿಂದ. ||೭೫||

೮೬೪

ಬ್ರಹ್ಮನ ಹರಿದಾಟ, ವಿಷ್ಣುವಿನ ಕಾಲಾಟ,
ರುದ್ರನ ಬಾಯಾಟ.
ಈ ತ್ರಿವಿಧ ಸಿಬ್ಬುದ್ಧಿ ಹರಿದು,
ಅಕ್ಕನ ಗುಕ್ಕಿನೊಳಗಾಗಬೇಡ.
ಅರ್ಕೇಶ್ವರಲಿಂಗವನರಿಯಿರಣ್ಣಾ. ||೭೬||

೮೬೫

ಭಕ್ತಿ ಜ್ಞಾನ ವೈರಾಗ್ಯವೆಂಬ ಮಧರವ ಮರೆಯದಿರಿ.
ಅರಿವ ನೀಗಾಡಲು ಬೇಡ.
ಹೊರವೇಷವ ಹಸನಿಸಿ,
ಮೂರುಮಲವಂದವನೆಂದಿಗೂ ಸಂಧಿಸದಿರೆಂದು
ಅರ್ಕೇಶ್ವರಲಿಂಗ ಕೂಗುತಿರ್ದ. ||೨೭||

೮೬೬

ಭವಸಾಗರವೆಂಬ ಸಮುದ್ರದಲ್ಲಿ,
ಸಾಕಾರವೆಂಬ ಹಡಗು,
ಚೇತನವೆಂಬ ಅಶ್ವಕಟ್ಟಿ, ಬರುತ್ತಿರಲಾಗಿ,
ತ್ರಿವಿಧದ ಬಲುಗಿರಿಯ ಹೊಯಿದು, ಹಡಗೊಡೆಯಿತ್ತು.
ಲಾಯದ ಅಶ್ವ ನೀರನೊಡಗೂಡಿತ್ತು.
ಹಡಗಿನ ಸೆಟ್ಟಿ ಪರಪತಿಗಡಹಿಲ್ಲಾಯೆಂದು
ಕುದುರೆಯನೊಡಗೂಡಿದ.
ಅರ್ಕೇಶ್ವರಲಿಂಗವ ಕೇಳುವ ಬನ್ನಿ. ||೨೮||

೮೬೭

ಮತ್ಸ್ಯ ಹೊಳೆಯ ನುಂಗಿ,
ಮೊಸಳೆ ಮಡುವ ನುಂಗುವಾಗ ಅಡಗಿರ್ದು ನೋಡಿ ಕಂಡೆ.
ಕೊಡಗೂಸು ಅಡಗುವ ಠಾವ, ಒಡಗೂಡಿದಲ್ಲದೆ ಕಾಣಬಾರದು,
ಅರ್ಕೇಶ್ವರಲಿಂಗವನರಿವುದಕ್ಕೆ. ||೨೯||

೮೬೮

ಮಧುರವಾಣಿಯ ಉದರದಲ್ಲಿ,
ಒಂದು ನಿಜಕುಕ್ಕುಟ ಕೂಗುತ್ತದೆ.
ಮೂವರ ಮೊಲೆಯನುಂಡು,
ಮರೆದೊರಗಬೇಡಾ ಎಂದು ಬೆಳಗಾಯಿತ್ತು.
ಅರ್ಕೇಶ್ವರಲಿಂಗವ ನೋಡುವ ಬನ್ನಿ
ಎಂದು ಕೂಗುತ್ತಿದ್ದಿತ್ತು. ||೩೦||

೮೬೯

ಮನ ಮಹದಲ್ಲಿ ನಿಂದು,
ತನುವಿನ ವಿಕಾರವ ಬಿಟ್ಟು, ಮತ್ತೆ

ಭವ ಬಂಧದವರ ಒಲವರವೇಕೆ ?
ಅದು ಸಲೆ ನೆಲೆಯಲ್ಲ, ಅರ್ಕೇಶ್ವರಲಿಂಗವನರಿವುದಕ್ಕೆ. ||೮೧||

೮೭೦

ಮನೆಯಲ್ಲಿ ಅಟ್ಟೆನೆಂದಡೆ, ಹೊಟ್ಟೆ ತುಂಬಿದುದುಂಟೆ ?
ಇರಿಯೆಂಬ ಮಾತಿಗೆ ಘಾಯವೊಡಲಾದುದುಂಟೆ ?
ಮಾತಿನ ಮಾಲೆಯ ನುಡಿದು, ಅರ್ಕೇಶ್ವರಲಿಂಗವನರಿದವರುಂಟೆ ? ||೮೨||

೮೭೧

ಮಾಡುವ ಕ್ರೀ ಕರ್ಮಕಾಂಡ, ಅರಿವ ಚಿತ್ತ ಭಾವಕಾಂಡ.
ಉಭಯ ಲೇಪವಾಗಿ ನಿಂದಲ್ಲಿ ಜ್ಞಾನಕಾಂಡ.
ತ್ರಿವಿಧ ಲಯವಾದಲ್ಲಿ, ಅರ್ಕೇಶ್ವರಲಿಂಗನ ಕೂಡವ ಕೂಟ. ||೮೩||

೮೭೨

ಮಾಡುವ ಸತ್ಕ್ರೀಮಾರ್ಗ, ಇದಿರಿಗಲ್ಲದೆ
ಲಿಂಗವ ಮುಟ್ಟಲರಿಯವು.
ಸರ್ಪ ಹೆಡೆಯಲ್ಲಿ ಹೊಯಿದಡೆ
ವಿಷ ಹತ್ತಬಲ್ಲುದೆ, ದಷ್ಟವಾಗಿಯಲ್ಲದೆ ?
ಮನ ಭಾವ ಕ್ರೀ ತ್ರಿಕರಣ ಶುದ್ಧವಾಗು,
ಅರ್ಕೇಶ್ವರಲಿಂಗವನರಿವುದಕ್ಕೆ. ||೮೪||

೮೭೩

ಮಾತಿನ ನಿಪುಣರೆಲ್ಲರೂ
ಸೋತು ಕುಳಿತರು ಅವಳ ಪೀಠಕ್ಕಾಗಿ.
ಪೀಠದ ಆಟದವರು
ಅರ್ಕೇಶ್ವರಲಿಂಗನ ಕೂಟವ ಬಲ್ಲರೆ ? ||೮೫||

೮೭೪

ಮುಕ್ತಿಯ ಪಥದಲ್ಲಿ ನಿಂದು, ಸುಚಿತ್ತವನರಿದು,
ಸುಚಿತ್ತ ನೆಲೆಗೊಂಡು, ನೆಲೆವಾಸ ಬಲಿದು,
ವಿರಕ್ತಿ ನಿರ್ವಾಣಪದವಾಗಿ,
ಪಥನಾಮ ರೂಪು ನಿರ್ಲೇಪವಾಗಿ,
ಅರ್ಕೇಶ್ವರಲಿಂಗವನರಿಯಬೇಕು. ||೮೬||

೮೭೫

ಮೂರುಲೋಕದ ದೈತೆ ಊರೆಲ್ಲರ ಕೊಂದು ತಿಂದು,
ಬೇರೊಂದು ಠಾವಿನಲ್ಲಿ ಅಯಿದಾಳೆ.
ಠಾವನರಿತು ದೈತೆಯ ದಾತ ಮುರಿದು,
ಅನಿಹಿತವ ನೇತಿಗಳೆದು, ನಿಹಿತವು ತಾನಾದಡೆ,
ಅರ್ಕೇಶ್ವರಲಿಂಗವ ಕೂಡಿದ ಕೂಟ. ||೮೭||

೮೭೬

ಮೂರು ಸುರೆಯ ಕುಡಿದು,
ಅಡಗಿಸಿದವ ಎನ್ನ ಗುರು.
ಕಾಳಾಡ ಕಣ್ಣ ಕಿತ್ತು, ಎರಳೆಯ ತಿರುಳ ತಿಂದು,
ದಿನವ ಕಳಿದುಳಿದವ ಎನ್ನ ಗುರು.
ಆತ ಅರ್ಕೇಶ್ವರಲಿಂಗಕ್ಕೆ ಸಿಕ್ಕದವ. ||೮೮||

೮೭೭

ಮೂರುಲೋಕದ ಹುಟ್ಟಿನಲ್ಲಿ
ಒಂದು ವಾರಣ ಬಂದು,
ಊರೆಲ್ಲರ ಬರಿಕೈವುತ್ತದೆ.
ಅದಾರಿಗೂ ಅಶಕ್ಯ.
ಆ ವಾರಣನ ವಾರಿಸುವರಿಲ್ಲ.
ಅರ್ಕೇಶ್ವರಲಿಂಗವನರಿತವರಿಗಲ್ಲದೆ ಆಗದು. ||೮೯||

೮೭೮

ಮೂವರು ಸಮಗಾರರ ಬಾಗಿಲಲ್ಲಿ
ಅಯಿವರು ಹಾರುವರು ಹರಸುತ್ತೈದಾರೆ.
ಒಬ್ಬನಿಗೆ ಕೊಂಬ ಕೊಟ್ಟು, ಒಬ್ಬನಿಗೆ ಕೊಳಗ ಕೊಟ್ಟು,
ಒಬ್ಬನಿಗೆ ಕರುಳ ಕೊಟ್ಟು, ಒಬ್ಬನಿಗೆ ಗರ್ಭವ ಕೊಟ್ಟು,
ಒಬ್ಬನಿಗೆ ಏನೂಯಿಲ್ಲದೆ ತಬ್ಬಿಬ್ಬಿಯಾಯಿತ್ತು.
ಆ ಮಾದಿಗನ ಮನೆಯ ಹೊಕ್ಕು, ಮಾದಗಿತ್ತಿಯ ಅ[ಡಗ] ತಿಂದ,
ಅರ್ಕೇಶ್ವರಲಿಂಗವನರಿದ ಕಾರಣ. ||೯೦||

೮೭೯

ಮೊದಲು ಬೀಜ ಬಲಿದು,
ಕಡೆಯಲ್ಲಿ ಬೀಜ ಅಳಿದಲ್ಲದೆ ಅಂಕುರವಾಗದು.

ಕ್ರೀಯಲ್ಲಿ ಆಚರಿಸಿ, ಅರಿವಿನಲ್ಲಿ ವಿಶ್ರಮಿಸಿ,
ತುರೀಯ ಆತುರ ಸಮನವೆಂಬ
ತ್ರಿವಿಧ ಲೇಪವಾಗಿ ಕಂಡ ಉಳುಮೆ,
ಅರ್ಕೇಶ್ವರಲಿಂಗನ ಅರಿಕೆ. ||೬೧||

**೮೮೦**

ರಣದಲ್ಲಿ ಧನು ಮುರಿದ ಮತ್ತೆ, ಸರವೇನ ಮಾಡುವುದು ?
ಅಂಗ ಲಿಂಗವ ಮರೆದಲ್ಲಿ,
ಅರಿವುದಕ್ಕೆ ಆಶ್ರಯ ಇನ್ನಾವುದು ಹೇಳಿರಣ್ಣಾ ?
ಅರಿವಿಂಗೆ ಕುರುಹು, ಅರಿವು ಕುರುಹಿನಲ್ಲಿ ನಿಂದು,
ಕಾಷ್ಠದಿಂದೊದಗಿದ ಅಗ್ನಿ ಕಾಷ್ಠವ ಸುಟ್ಟು,
ತನಗಾಶ್ರಯವಿಲ್ಲದಂತಾಯಿತ್ತು.
ಹಾಗಾಗಬೇಕು, ಅರ್ಕೇಶ್ವರಲಿಂಗವನರಿವುದಕ್ಕೆ. ||೬೨||

**೮೮೧**

ಲಿಂಗವನರಿತು ಅಂಗ ಲಯವಾಗಬೇಕು.
ಅಂಕುರ ತೋರಿ ಬೀಜ ನಷ್ಟವಾದಂತೆ,
ಸ್ವಯಂಭು ತೋರಿ ಪ್ರತಿಷ್ಠೆ ನಷ್ಟವಾದಂತೆ,
ಅರ್ಕೇಶ್ವರಲಿಂಗವ ಅರಿದ ಗೊತ್ತಿನ ಒಲುಮೆ. ||೬೩||

**೮೮೨**

ವನದ ಬಾಳೆಯ ಗೊನೆಯ ಹೊಯಿದ ಕಳ್ಳನ
ಅಡಿವಜ್ಜೆಯಲ್ಲಿ ಹೋಗಿ,
ಹೆಡಗುಡಿಯ ಕಟ್ಟಿ, ಬಾಧಿಸಿ,
ಗೊನೆಯ ತೋರೆಂದಡೆ,
ಗೊನೆ ಮನೆಯೊಳಗದೆಯೆಂದ.
ಮನೆಯಾಕೆಯ ಕೇಳಿದಡೆ,
ಗೊನೆಯ ನಾ ತಿಂದೆ, ಕಳ್ಳನ ತಲೆಯ ಕುಟ್ಟಿ,
ಎನ್ನದು ಕೊಯಿದುಕೊಳ್ಳಿಯೆಂದಳು,
ಅರ್ಕೇಶ್ವರಲಿಂಗವ ಬಲ್ಲಡೆ. ||೬೪||

**೮೮೩**

ಶಿಲೆಯೊಳಗಣ ಉರಿ ಅಡಗಿಪ್ಪಂತೆ,
ಬಲುಗೈಯನ ಕೋಲ ಉಡುಗಿಪ್ಪಂತೆ,

ಸಲೆ ಗರಳ ಕೊರಳೊಳಗೆ ಹೊರಹೊಮ್ಮದಂತೆ,
ಅರ್ಕೇಶ್ವರಲಿಂಗನ ತೊಡಿಗೆ ಹೀಗಾಗಬೇಕು. ||೯೫||

### ೮೮೪

ಶುಕ್ಲ ಶೋಣಿತದ ಆಶ್ರಯದಲ್ಲಿ
ಕುಕ್ಕುಟ ಪುರೆದಿರಲಾಗಿ,
ಚೆಕ್ಕು ನುಂಗ ಬಂದಿತ್ತು.
ಚೆಕ್ಕಿನ ಕುಕ್ಕುಟನ ಕುಕ್ಕುರ ನಂದಿಸಿತ್ತು.
ಕುಕ್ಕುರನ ಚೆಕ್ಕ ಕಾಲಜ್ಞಾನಿ ಎಚ್ಚತ್ತು,
ಅರ್ಕೇಶ್ವರಲಿಂಗವನರಿದ ಕಾರಣ. ||೯೬||

### ೮೮೫

ಸತ್ತವನ ಮನೆಯಲ್ಲಿ
ಹೊತ್ತವರೆಲ್ಲರು ಅಳುತಿರ್ದಾರೆ.
ಮತ್ತೊಬ್ಬನ ಮದುವೆಗೆ ದಿಬ್ಬಣಕೆ ಬಂದು,
ಮದವಳಿಗನ ಕಾಣದೆ,
ಮನೆಮನೆಯ ಹೊಕ್ಕು ಸುತ್ತುತೈದಾರೆ.
ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೯೭||

### ೮೮೬

ಸರ್ಪನಿಪ್ಪುದಕ್ಕೆ ಠಾವಲ್ಲದೆ,
ತಪ್ಪಿ ವಿಷ ಹತ್ತಿದ ಮತ್ತೆಗೊತ್ತಿಂಗೆ ನಿಲುವುದೆ ?
ಅದರೊಪ್ಪಕ್ಕೆ ಕಡೆಯೆ ಲಿಂಗಸಂಗಸಂಯೋಗ ?
ಅರ್ಕೇಶ್ವರಲಿಂಗದಲ್ಲಿ ಅಚ್ಚೊತ್ತಿದಂತಿರಬೇಕು. ||೯೮||

### ೮೮೭

ಸಾಕು ಬಹುಮಾತಿನ ಮಾಲೆ.
ಸ್ಥಾಣುವ ತಿರುಗುವ ಪಶುವಿನಂತೆ,
ವೇಣುವ ಹಿಡಿದ ಶುಕನಂತೆ,
ಅದು ಪ್ರಾಣಕ್ಕೆ ಬಂದಾಗ ಅರಿದ ಇರವು.
ಭಾಳಲೋಚನರಿಗೆ ಹೀಗಾಯಿತ್ತು.
ಅರ್ಕೇಶ್ವರಲಿಂಗವನರಿವರಿನ್ನಾರು ? ||೯೯||

೮೮೮

ಸಾಧನೆಯಲ್ಲಿ ಬೆಳೆದ ವಿಹಂಗನಂತೆ,
ದೀಹವಾದ ಮೃಗದಂತೆ,
ಜಾತಿಜಾತಿಯ ಕೊಂದು, ಭೂತಹಿತವುಂಟೆ ?
ಸಮಯ ಸಮಯವ ಕೊಂದು,
ಬಲ್ಲಹ ಬಲ್ಲವನ ಸೊಲ್ಲು ಒಳ್ಳಿತ್ತಲ್ಲಾಯೆಂದು
ಎಲ್ಲರೊಳಗೆ ಹೇಳುವ ಖುಲ್ಲನ
ಬಲ್ಲತನವನೊಲ್ಲ, ಅರ್ಕೇಶ್ವರಲಿಂಗ. ||೧೦೦||

೮೮೯

ಸೂನೆಗಾರನ ಮನೆಯಲ್ಲಿ
ಮೂವರು ಹಂದೆಗಳು ಹೊಕ್ಕು,
ಹೇಳ ಹೆಸರಿಲ್ಲದೆ ಕೊಂದರೆಲ್ಲರ.
ಸೂನೆಗಾರ ಏನೂ ಎನ್ನದೆಯಿದ್ದ,
ಕೇಳುವ ಬನ್ನಿ, ಅರ್ಕೇಶ್ವರಲಿಂಗವ. ||೧೦೧||

೮೯೦

ಹಾವನೂ ಹದ್ದನೂ ಕೂಡೆ ಮೆದ್ದು,
ಬೇವನೂ ಬೆಲ್ಲವನೂ ಕೂಡೆ ಕಲಸಿ,
ಸಾಗರದಲ್ಲಿ ಸಾಧನೆಯ ಮಾಡುವರ ಬೇಗ ನೋಡಿ,
ಅರ್ಕೇಶ್ವರಲಿಂಗನರಿವುದಕ್ಕೆ. ||೧೦೨||

■ ■

# ಮನಸಂದ ಮಾರಿತಂದೆಯ ವಚನ

೮೯೧

ಅಂಗಕ್ಕೆ ಕುರುಹೆಂಬುದೊಂದು ಲಿಂಗ.
ಆತ್ಮಂಗೆ ಅರಿವೆಂಬುದೊಂದು ಲಿಂಗ.
ಪರುಷ ಲೋಹದಂತೆ ಕೂಡುವನ್ನಬರ
ಉಭಯನಾಮ ರೂಪಾಯಿತ್ತು.
ಕೂಡಿದ ಮತ್ತೆ ಪರುಷವೆಂಬ ನಾಮವಿಲ್ಲ,
ಲೋಹವೆಂಬ ಕುರುಹಿಲ್ಲ.
ಹೇಮವೆಂಬ ನಾಮವಾಯಿತ್ತು.
ಇಷ್ಟ ಪ್ರಾಣ ಹಾಗಾದಲ್ಲಿ, ಮನಸಂದಿತ್ತು ಮಾರೇಶ್ವರಾ. ‖ ೧ ‖

೮೯೨

ಅಂಗ ಪಿಂಡದಲ್ಲಿ ತೋರುವ ನೆಲೆ
ಆತ್ಮನೋ, ಅರಿವೋ ? ಎಂಬುದ ತಿಳಿದಲ್ಲಿ,
ಅರಿದು ಮಾಡುವ ಅರಿಕೆ ಮರೆದಿಹಲ್ಲಿ ಮಗ್ನ.
ಉಭಯವಂ ವಿಚಾರಿಸಿ ತೊಲಗಿದಲ್ಲಿ,
ಮನಸಂದಿತ್ತು ಮಾರೇಶ್ವರಾ. ‖ ೨ ‖

**೮೯೩**

ಅಂಗಲಿಂಗಿಯಾದಲ್ಲಿ,
ಜಾಗ್ರದಲ್ಲಿ ಎಡೆಬಿಡುವಿಲ್ಲದಿರಬೇಕು.
ಪ್ರಾಣಲಿಂಗಿಯಾದಲ್ಲಿ,
ಸ್ವಪ್ನಕ್ಕೆ ನಾನಾ ಪ್ರಕೃತಿಯ ಹಿಂಗಿರಬೇಕು.
ಸರ್ವಗುಣಸಂಪನ್ನ ಸಾವಧಾನಿಯಾದಲ್ಲಿ,
ಸುಷುಪ್ತಿಯಲ್ಲಿ ಯುಕ್ತಿಗೆಡದಿರಬೇಕು.
ಇಂತೀ ತ್ರಿವಿಧಕ್ಕೆ ಒಳಗಹುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ॥ ೩ ॥

**೮೯೪**

ಅಂಡದಲ್ಲಿಪ್ಪ ತತ್ತ್ವಿಯ ಕಂಡು,
ಪಿಂಡದಲ್ಲಿಪ್ಪ ಪ್ರಾಣವನರಿದು,
ಆರೋಗ್ಯದ ರೋಗವ ಹರಿದು,
ಅರೋಚಕ್ಕೆ ಹೊರಗಾಗಿ ನಿಂದುದು,
ಮನಸಂದಿತ್ತು ಮಾರೇಶ್ವರಾ. ॥ ೪ ॥

**೮೯೫**

ಅಕ್ಕರ ರೂಪಾಗಿ ಲೆಕ್ಕವಟ್ಟೆಯ ಕಾಬಂತೆ,
ವಸ್ತುಮಯ ರೂಪಾಗಿ,
ಭಕ್ತರು ಜಂಗಮದಲ್ಲಿ ಲೆಕ್ಕಕ್ಕೆ ಸಿಕ್ಕಿದೆಯಲ್ಲಾ.
ಲಕ್ಷ ಅಲಕ್ಷಂಗಳಿಂದ ನಿರೀಕ್ಷಿಸಿ ತಿಳಿದಲ್ಲಿ ಸಿಕ್ಕಿ,
ಮನಸಂದಿತ್ತು ಮಾರೇಶ್ವರಾ. ॥ ೫ ॥

**೮೯೬**

ಅನಲಂಗೆ ಉರಿ ಉಷ್ಣವಿಲ್ಲದೆ,
ತೃಣ ಕಾಷ್ಠಂಗಳ ಸುಡುವ ಪರಿಯಿನ್ನೆಂತು ?
ಆತ್ಮಂಗೆ ಅರಿವಿಲ್ಲದಿರೆ,
ಬಂಧ ಮೋಕ್ಷ ಕರ್ಮಂಗಳ ಹಿಂಗುವ ಪರಿಯಿನ್ನೆಂತು ?
ಇಂತೀ ದ್ವಂದ್ವಂಗಳನರಿದು ಮರೆದಲ್ಲಿ,
ಮನಸಂದಿತ್ತು ಮಾರೇಶ್ವರಾ. ॥ ೬ ॥

೬೯೭

ಅಪ್ಪು ಅಪ್ಪುವ ನುಂಗಿದಂತೆ,
ಚಿತ್ರ ಚಿತ್ರದೊಳಡಗಿದಂತೆ,
ಮನ ಮಹವ ಕೂಡಿ
ಬೆಳಗು ಬೆಳಗನೊಳಕೊಂಡಂತೆ,
ತಾನೆಂಬುದೇನೂ ಕುರುಹುದೋರದೆ,
ಮನಸಂದಿತ್ತು ಮಾರೇಶ್ವರಾ. || ೭ ||

೬೯೮

ಅರ್ಪಿಸುವುದಕ್ಕೆ ಮುನ್ನವೆ
ಮನವರಿದು, ಕಂಗಳು ತುಂಬಿ, ಕಂಡ ಮತ್ತೆ
ಅರ್ಪಿತವೆಲ್ಲಿ ಅಡಗಿತ್ತು?
ಸಂದೇಹವ ಬಿಟ್ಟು ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೮ ||

೬೯೯

ಅರಿಕೆಗೊಡಲಾದವ ನಾನೆಂದು
ಇದಿರಿಗೆ ಹೇಳಿ ಹೋರಲೇತಕ್ಕೆ ?
ನಿಸ್ಪೃಹನಾದೆನೆಂದು ಕಚ್ಚುಟವ ಕಟ್ಟಿ,
ಮನೆಮನೆದಪ್ಪದೆ ಹೋಗಲೇತಕ್ಕೆ?
ಮಡಕೆಯ ಕೊಳಕು
ನೀರ ಹಿಡಿದಾಗಲೆ ದುರ್ಗುಣ ಕಾಣಬಂದಿತ್ತು.
ಇಂತೀ ಇವರುವ ಕಾಬುದಕ್ಕೆ ಮೊದಲೆ
ಮನಸಂದಿತ್ತು ಮಾರೇಶ್ವರಾ. || ೯ ||

೭೦೦

ಅರಿದೆನೆಂದು ಎಲ್ಲವ ತೋರದ ಮತ್ತೆ
ಅರಿವ ಮರೆದು ನೆರೆ ನೀರಸನಾಗಿ,
ತಿರುಗಿಹೆನೆಂಬ ಭವವೇತಕ್ಕೆ ?
ಅರಿದ ಒಡಲಿಂಗೆ ಸುಖದುಃಖಾದಿಗಳೆಲ್ಲವೂ
ಸರಿಯೆಂದ ಮತ್ತೆ, ಇನ್ನೊಂದನರಸಲೇತಕ್ಕೆ ?
ಇಂತೀ ಅರಿವ ಮರೆದ ಒಡಲು,
ನಡುದೊರೆಯಲ್ಲಿ ಬಿದ್ದು ಈಜಲರಿಯದೆ,

ಕೈಕಾಲ ಬೆದರಿ ಸತ್ತಂತಾಯಿತ್ತು.
ಇಂತಿವರಂಗಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. ॥ ೧೦ ॥

೯೦೧

ಅರಿದೆಹೆನೆಂದು ಕುರುಹಿಟ್ಟು ಇದಿರಿಂಗೆ ಹೇಳುವಾಗ,
ಆ ಗುಣ ಅರಿವೋ, ಮರವೆಯೋ ?
ಹೋಗಲಂಜಿ, ಹಗೆಯ ಕೈಯಲ್ಲಿ
ಹಾದಿಯ ತೋರಿಸಿಕೊಂಬಂತೆ,
ತನ್ನನರಿಯದ ಯುಕ್ತಿ, ಇದಿರಿಂಗೆ ಅನ್ಯಬೋಧೆಯುಂಟೆ ?
ಈ ಅನ್ಯಭಿನ್ನಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. ॥ ೧೧ ॥

೯೦೨

ಅರಿವೆಂಬುದ ತಾನರಿದಲ್ಲಿ, ಮರವೆಗೆಡೆ ಉಂಟೆ ?
ಅಪ್ಪುವಿನ ದೆಸೆಯಿಂದ ಸಕಲ ಸಾರಂಗಳು ಬಲಿದು,
ಅವು ತಮ್ಮ ಗುಣ ತಪ್ಪದೆ ತೋರಿಯಿಪ್ಪಂತೆ,
ಮನಸಂದಿತ್ತು ಮಾರೇಶ್ವರಾ. ॥ ೧೨ ॥

೯೦೩

ಅವಿರಳಕ್ಕೆ ವಿರಳದ ದ್ವಾರವುಂಟೆ ?
ಅರಿದವಂಗೆ ಆತ್ಮನಡಗುವುದಕ್ಕೆ ಬೇರೊಂದೆಡೆ ಉಂಟೆ ?
ವಿದ್ಯುಲ್ಲತೆಯಂತೆ, ಬೊಬ್ಬುಳಿಕೆಯಂತೆ,
ತಾನಿದ್ದಲ್ಲಿಯೆ ಲೀಯ, ಮನಸಂದಿತ್ತು ಮಾರೇಶ್ವರಾ. ॥ ೧೩ ॥

೯೦೪

ಅಳಿವುದಕ್ಕೆ ಮುನ್ನವೆ ಉಳಿಯಿತ್ತು ಆತ್ಮ.
ಉಳಿದು ಭವದುಃಖಕ್ಕೆ ಒಳಗಾಗದ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ॥ ೧೪ ॥

೯೦೫

ಆಯವಲ್ಲದ ಠಾವನಿರಿದಡೆ ಸಾವುಂಟೆ ?
ಜ್ಞಾನವಿಲ್ಲದ ಪೂಜೆ, ಸದ್ಭಾವವಿಲ್ಲದ ಭಕ್ತಿ,
ಧ್ಯಾನವಿಲ್ಲದ ಜಪ,
ಇವು ಮುನ್ನವಾಯುವಹುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ॥ ೧೫ ॥

೯೦೬

ಇದಿರೆಡೆಯಾದಲ್ಲಿ ಹಿಂದಣಲಗ ಸತ್ತಿತ್ತು.
ಕಡ ಚೀಟ ಕೊಟ್ಟಲ್ಲಿ ಒಡೆಯನ ಬೇಡಲಿಲ್ಲ.
ವಸ್ತುವ ಅಡಿ ಅರಿದು ಕೂಡಿದಲ್ಲಿ,
ಬೇರೊಂದು ಬಿಡುಗಡೆ ಉಂಟೆ ?
ಆ ತೆರನನರಿದು ಕರಿಗೊಂಡಲ್ಲಿ.
ಮನಸಂದಿತ್ತು ಮಾರೇಶ್ವರಾ. ||೧೬||

೯೦೭

ಇಷ್ಟಲಿಂಗ, ಪ್ರಾಣಲಿಂಗವೆಂದು
ಬೇರೊಂದು ಕಟ್ಟಣೆಯ ಕಟ್ಟಬಹುದೆ ?
ವೃಕ್ಷ ಬೀಜದಲ್ಲಿ ಅಡಗಿ,
ಬೀಜ ವೃಕ್ಷವ ನುಂಗಿಪ್ಪ ತೆರನಂತೆ,
ಇಷ್ಟ ಪ್ರಾಣ ಪೆಟ್ಟಂತಿರಬೇಕು.
ಅಪ್ಪು ಮುತ್ತಾದಂತೆ, ಉಭಯದ ಗೊತ್ತು ತಾನೆ,
ಮನಸಂದಿತ್ತು ಮಾರೇಶ್ವರಾ. ||೧೭||

೯೦೮

ಇಷ್ಟವ ಹಿಡಿದಾಡುವನ್ನ ಬರ
ಪೂಜೆಯ ಕಟ್ಟುಗೊತ್ತಿನಲ್ಲಿ ಇರಬೇಕು.
ಇಷ್ಟವರತು ಅಂಗದ ಆಚರಣೆ ಅಳಿದಲ್ಲಿ,
ಉಭಯ ನಷ್ಟವಾದಲ್ಲಿ, ಮನಸಂದಿತ್ತು ಮಾರೇಶ್ವರಾ. || ೧೮ ||

೯೦೯

ಇಹದಲ್ಲಿ ಕಾಬ ಸುಖ,
ಪರದಲ್ಲಿ ಮುಟ್ಟುವ ಭೇದ.
ಉಭಯದ ಗುಣ ಏಕವಾದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೧೯ ||

೯೧೦

ಉಚಿತ ಬಂದಲ್ಲಿ ನಾಳೆಗೆಂದಾಗವೆ ಕುಚಿತವಲ್ಲವೆ ?
ನೆರೆ ಅರಿಧು ಸಂಸಾರವ ಹರಿಯದಿದ್ದಾಗವೆ ಮರವೆಯಲ್ಲವೆ ?
ಅರಿವಡೆ ಮರೀಚಿಕದಂತೆ, ಸುರಚಾಪದಂತೆ,

ಅಂಬರದ ಆಕಾರದಂತೆ ತೋರಿ ಅಡಗುವ
ನಿಜಲಿಂಗಾಂಗಿಯ ಇರವು. ಅದರಂಗ ವೇಧಿಸಿದಲ್ಲಿಯೆ,
ಮನಸಂದಿತ್ತು ಮಾರೇಶ್ವರಾ. ॥ ೨೦ ॥

೬೧೧

ಉಟ್ಟುದ ಹೊದ್ದುದ ಬಿಟ್ಟು ಬಂದು,
ಮತ್ತೊಬ್ಬರ ಅಂಗಳದ ಬಟ್ಟೆಯ ಕಾಯಲೇತಕ್ಕೆ ?
ದೃಷ್ಟದ ವಸ್ತುವಿದೆಯೆಂದು ಮಿಕ್ಕಾದವರಿಗೆ ಹೇಳುತ್ತ,
ತ್ರಿವಿಧಬಟ್ಟೆಯ ತಾ ಕಾವುತ್ತ,
ಈ ಕಷ್ಟರ ಕಾಬುದಕ್ಕೆ ಮೊದಲೆ
ಮನಸಂದಿತ್ತು ಮಾರೇಶ್ವರಾ. ॥ ೨೧ ॥

೬೧೨

ಉದಕವೊಂದರಲ್ಲಿ ತಂದು,
ವರ್ಣ ಭೇದಕ್ಕೆ ಹಲವಾದ ತೆರನಂತೆ,
ಆತ್ಮ ನಾನೆಂಬುದ ಮರೆದು,
ಸರ್ವರಲ್ಲಿ ಬೆರಸುವ ಚಿತ್ತ ಒಂದೋ, ಎರಡೋ ?
ನೆಲಜಲ ಒಂದಾದಡೆ, ಬೆಳೆವ ವೃಕ್ಷ
ಹಲವಾದ ತೆರದಂತೆ,
ಅರಿವು ಮರವೆಗೊಳಗಾದ ಆತ್ಮನ ತಿಳಿದಲ್ಲಿ,
ಬೇರೊಂದೆಡೆಗೆ ತೆರಪಿಲ್ಲ, ಮನಸಂದಿತ್ತು ಮಾರೇಶ್ವರಾ. ॥ ೨೨ ॥

೬೧೩

ಉದಕ ಹಲವು ತೆರದಲ್ಲಿ ಬೆರಸಿ,
ಸವಿ ಸಾರವ ಕೊಡುವಂತೆ,
ವಸ್ತು ಸರ್ವಮಯನಾಗಿ, ಷಡುಸ್ಥಲಬ್ರಹ್ಮಿಯಾಗಿ,
ಪಂಚವಿಂಶತಿತತ್ವ ಪರಬ್ರಹ್ಮಮೂರ್ತಿಯಾಗಿ,
ಹೇಮದ ಸ್ವರೂಪದಂತೆ ರೂಪಿಂಗೊಡಲಾಗಿ,
ಅದನಳಿಯೆ, ಏಕಭಾವವಾಗಿ ನಿಂದ ನಿಜದಲ್ಲಿ ನೋಡೆ,
ಮನಸಂದಿತ್ತು ಮಾರೇಶ್ವರಾ. ॥ ೨೩ ॥

೬೧೪

ಎಲ್ಲಾ ಸಂಕಲ್ಪ ತನ್ನ ತಾನರಿಯದ ಭೇದವಲ್ಲದೆ,
ಇದಿರಿಟ್ಟು ಕಾಬುದು, ಇದಿರಿಂಗೆಡೆಯಾಗಿಪ್ಪುದು.

ಅಲ್ಲ ಅಹುದೆಂಬ ಗೆಲ್ಲಸೋಲ ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೨೪ ||

೯೧೫

ಕಂಗಳಿಂದ ಕಂಡೆಹೆನೆಂದಡೆ, ಅಲ್ಲಿಗೆ ಪರಿಪೂರ್ಣ ನೀನು.
ಚಿತ್ತದಿಂದ ನೆನೆದೆಹೆನೆಂದಡೆ, ಅಲ್ಲಿಗೆ ಅಚ್ಚೊತ್ತಿದಂತಿಹೆ.
ನಾ ನೀನೆಂಬ ಭಾವ ಬೇರಾದಲ್ಲಿ ನೆನಹಿಂಗೆ ಒಡಲಿಲ್ಲ.
ಮನಸಂದಿತ್ತು ಮಾರೇಶ್ವರಾ. || ೨೫ ||

೯೧೬

ಕಂಡೂ ಕಾಣದೆ, ಕೂಡಿಯೂ ಕೂಡದೆ,
ಹೆರೆಹಿಂಗಿಯೂ ಹಿಂಗದೆ,
ಲಿಂಗಸಂಗವೆಂಬುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. || ೨೬ ||

೯೧೭

ಕಂಡೆಹೆನೆಂಬ ಭ್ರಾಂತಿ, ಕಾಣೆನೆಂಬ ಬಯಕೆ.
ಅರಿವುದಕ್ಕೆ ಮುನ್ನ ಅರಿದ ಅರಿವು,
ಮನಸಂದಿತ್ತು ಮಾರೇಶ್ವರಾ. || ೨೭ ||

೯೧೮

ಕರ್ಪುರ ಪುತ್ಥಳಿಯು ಉರಿ ಮುಟ್ಟಲಿಕ್ಕೆ,
ಪುತ್ಥಳಿಯುಂಟುರಿವುದೆ ಚಿತ್ತ ?
ಕಾಯದ ಒಪ್ಪವನರಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೨೮ ||

೯೧೯

ಕರ್ಮದ ಧರ್ಮಂಗಳೊಳಗಾಗಿ ಮಾಡುವ
ಮಾಟಂಗಳೆಲ್ಲವೂ ಕರ್ಮಶಕ್ತಿಗೆ ಬೀಜ.
ಆ ಉಭಯವ ನೀತಿಗಳೆದು ಮಾಡುವುದೆಲ್ಲವೂ
ಜ್ಞಾನಶಕ್ತಿಗೆ ಬೀಜ.
ಸಕಲವ ವಿಚಾರಿಸಿ, ಅಹುದಲ್ಲಾ ಎಂದು
ಹರಿದು ಮಾಡುವುದೆಲ್ಲವೂ ಮುಂದೊಂದ ಕುರಿತು
ವಸ್ತುವೆಂಬ ಒಡಲಿಗೆ ರೂಪಾಯಿತ್ತು.
ಸ್ವಯವೆಂಬ ಭಾವ ನಿಜದಲ್ಲಿ ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೨೯ ||

೯೨೦

ಕರ್ಮದಿಂದ ಕಂಡೆಹೆನೆಂದಡೆ, ಮಲರೂಪು.
ವರ್ಮದಿಂದ ಅರಿತೆಹೆನೆಂದಡೆ, ಆ ಭಾವ ಪ್ರಕೃತಿರೂಪು.
ಕರ್ಮವ ಬಿಡಬಾರದು, ವರ್ಮವನರಿಯಬಾರದು.
ಸುಮ್ಮನಿದ್ದಡೆ ಸಮಯಕ್ಕಲ್ಲ, ಅರಿತಡೆ ಆತ್ಮಂಗಲ್ಲ.
ಮರವೆ ಅರಿವು ಉಭಯವರತಲ್ಲಿ,
ಮನಸಂದಿತ್ತು ಮಾರೇಶ್ವರಾ. || ೩೦ ||

೯೨೧

ಕರ್ಮವ ನೇತಿಗಳೆದು ನಿಂದಲ್ಲಿ,
ವರ್ಮವ ವಿಚಾರಿಸಲಿಲ್ಲ.
ಕರ್ಮ ವರ್ಮವೆಂಬ ಉಭಯದ ಸಂದಣಿಯಲ್ಲಿ
ಹೋರಟೆಗೊಳ್ಳದ ಮುನ್ನವೆ,
ಮನಸಂದಿತ್ತು ಮಾರೇಶ್ವರಾ. || ೩೧ ||

೯೨೨

ಕಲ್ಲು ರತಿಯಿಂದ ರತ್ನವಾದಂತೆ,
ಉದಕ ಸಾರವರತು ಲವಣವಾದಂತೆ,
ವಾರಿ ವಾಯುವ ಸಂಗದಿಂದ ಬಲಿದಂತೆ,
ಪೂರ್ವವನಳಿದು ಪುನರ್ಜಾತನಾದ ಮತ್ತೆ,
ಎನ್ನವರೆಂದು ಬೆರಸಿದಲ್ಲಿ,
ಆ ಗುಣ ಆಚಾರಕ್ಕೆ ಹೊರಗಾಯಿತ್ತು.
ಮಾತೆ ಪಿತ ಸಹೋದರ ಬಂಧುಗಳೆಂದು
ಮನ ಕೂರ್ತು ಬೆರಸಿದಲ್ಲಿ,
ಆಚಾರಕ್ಕೆ ಭ್ರಷ್ಟ, ವಿಚಾರಕ್ಕೆ ದೂರ,
ಪರಮಾರ್ಥಕ್ಕೆ ಸಲ್ಲ.
ಇವನೆಲ್ಲವ ಕಳೆದುಳಿದು ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೩೨ ||

೯೨೩

ಕಳನನೇರಿದಲ್ಲಿ ಕೈದನರಸಲಿಲ್ಲ.
ಬಲ್ಲವನಾದೆನೆಂಬಲ್ಲಿ ಗೆಲ್ಲ ಸೋಲಕ್ಕೆ ಹೋರಲಿಲ್ಲ.
ನೇಮ ಸಂದಲ್ಲಿ ತನುವಿನಾಸೆಯು,
ಮನಸಂದಿತ್ತು ಮಾರೇಶ್ವರಾ. || ೩೩ ||

೯೨೪

ಕಾಣೆನೆಂಬ ಅರಿಕೆ, ಕಂಡೆನೆಂಬ ಸಂತೋಷ.
ಉಭಯವ ವಿಚಾರಿಸುವನ್ನಬರ ಮರವೆಯ ಬೀಜ.
ಕಂಡೆನೆಂಬ ಕಾಣಿಕೆಯುವನಲ್ಲ, ಕಾಣೆನೆಂಬ ಸಂಚಾರದವನಲ್ಲ.
ಆ ಉಭಯದ ಅಂಗ ಲೇಪವಾದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೩೪ ||

೯೨೫

ಕಾಬುದಕ್ಕೆ ಮೊದಲೆ ಬಯಕೆ ಅರತು,
ಕೂಡುವುದಕ್ಕೆ ಮುನ್ನವೆ ಸುಖವರತು,
ಉಭಯ ನಾಮಧೇಯ ನಷ್ಟವಾದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೩೫ ||

೯೨೬

ಕಾಯಕಲ್ಪಿತಕ್ಕೊಳಗಲ್ಲದೆ ಇರಬೇಕು.
ಜೀವ ನಾನಾ ಭವಂಗಳಲ್ಲಿ ಬಾರದೆ ಇರಬೇಕು.
ಅರ್ತಿಗಾರಿಕೆಯಲ್ಲಿ ಎಲ್ಲ ಹೊತ್ತುಹೋಕಂಗೆ.
ನಿಶ್ಚಯದ ಮಾತೇಕೆ ? ಆ ಕುಚಿತ್ತರಿಗೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. || ೩೬ ||

೯೨೭

ಕಾಯದಲ್ಲಿ ಬತ್ತಲೆಯಿಪ್ಪವರೆಲ್ಲರು
ಜೀವರುಗಳ ಬಾಗಿಲಲ್ಲಿ ಬಾಯ ಬಿಡುತ್ತ,
ಉಂಟು ಇಲ್ಲಾ ಎಂಬುದಕ್ಕೆ ಬೇವುತ್ತ,
ಇಂತಪ್ಪವರ ಜ್ಞಾನಿಗಳೆಂಬುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. || ೩೭ ||

೯೨೮

ಕಾಯ ದಿಟವೆಂದು ಪ್ರಮಾಣಿಸುವಲ್ಲಿ ಅಳಿವುದಕ್ಕೆ ಮುಖ್ಯ.
ಜೀವ ದಿಟವೆಂದು ಪ್ರಮಾಣಿಸುವಲ್ಲಿ ಪ್ರಕೃತಿರೂಪು.
ಅರಿವು ದಿಟವೆಂದು ಪ್ರಮಾಣಿಸುವಲ್ಲಿ ಮರವೆಗೆ ಬೀಜ.
ಸ್ಥೂಲದ ಅಳಿವನರಿತು, ಸೂಕ್ಷ್ಮದ ಪ್ರಕೃತಿಯನರಿತು,
ಕಾರಣದ ಅರಿವು ಮರವೆಯನರಿತು,

ತ್ರಿಗುಣ ಭೇದಂಗಳ, ತ್ರಿಶಕ್ತಿ ಭಾವಂಗಳ,
ತ್ರಿಗುಣಮಲಕ್ಕೆ ಒಳಗಾಗದ ಮುನ್ನವೆ
ಮನಸಂದಿತ್ತು ಮಾರಿತಂದೆ. || ೩೮ ||

೯೨೯

ಕಾಯದೊಳಗಣ ಚಿತ್ತವ ಭಾವಿಸಿ,
ಇದಿರಿಟ್ಟಲ್ಲಿ ಭಾವವೋ, ಜೀವವೋ ?
ನಾನೆಂಬುದು ತಾನೋ, ಬೇರೊಂದು ನೆಲೆಯ ಪರಮನೋ ?
ಆ ಗುಣ ಸ್ಥೂಲ ಸೂಕ್ಷ್ಮ ಕಾರಣಕ್ಕೆ ಹೊರಗಾದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೩೯ ||

೯೩೦

ಕಾಯ ಮುಟ್ಟಿದ ಠಾವಿನಲ್ಲಿ ಜೀವ ಮುಟ್ಟಲಿಲ್ಲ.
ಜೀವ ಮುಟ್ಟಿದ ಠಾವಿನಲ್ಲಿ ಪರಮ ಮುಟ್ಟಲಿಲ್ಲ.
ಪರಮ ಪ್ರಕಾಶವನೆಯ್ದಿ ತ್ರಿವಿಧಗುಣವರತಲ್ಲಿ,
ಮನಸಂದಿತ್ತು ಮಾರೇಶ್ವರಾ. || ೪೦ ||

೯೩೧

ಕಾಯವ ಬಿಟ್ಟು ಪ್ರಾಣಹೋದ ಮತ್ತೆ,
ಆ ಕಾಯಕ್ಕೆ ಆ ಪ್ರಾಣ ಪುನರಪಿಯಾಗಿ ಒಪ್ಪುವದೆ ?
ಅಂಗವ ಬಿಟ್ಟು ಲಿಂಗ ಬಿದ್ದ ಮತ್ತೆ,
ಮತ್ತಾ ಅಂಗಕ್ಕೆ ಲಿಂಗವುಂಟೆ ?
ಲಯವೆಂದಿದ್ದಡೂ ತಪ್ಪದು.
ಪ್ರಾಯಶ್ಚಿತವೆಂದು ಪ್ರಕಾರವ ಮಾಡಿ,
ಶ್ವಾನನ ಕಾಲಿನಲ್ಲಿ ಸೋಮಪಾನವನೆರೆದು,
ಪಾಯಸ ಶುದ್ಧವಾಯಿತ್ತೆಂದು ಕೊಂಬವನಂತೆ,
ಈ ಗುಣವ ಕಾಬುದಕ್ಕೆ ಮೊದಲೆ
ಮನಸಂದಿತ್ತು ಮಾರೇಶ್ವರಾ. || ೪೧ ||

೯೩೨

ಕಾಯವಿಡಿದಿಹನ್ನಕ್ಕ ಕೈಯ ಕುರುಹು.
ಜೀವವಿಡಿದಿಹನ್ನಕ್ಕ ಭವಪಾಶ.
ಈ ಉಭಯವನರಿದಿಹನ್ನಕ್ಕ

ಮಹಾಶರಣರ ಸಂಗಸುಖ ಬೇಕು.
ಸುಖ ನಿಶ್ಚಯವಾದಲ್ಲಿ, ನಾ ನೀನೆಂಬ ಭಾವ
ಮನಸಂದಿತ್ತು ಮಾರೇಶ್ವರಾ. ॥ ೪೨ ॥

೬೩೩

ಕಾಯವಿಡಿದಿಹನ್ನಬರ ಆಗುಚೇಗೆಯನರಿಯಬೇಕು.
ಆಗೆಂಬುದೆ ಜೀವ, ಚೇಗೆಯೆಂಬುದೆ ಕಾಯ.
ಉಭಯವನಳಿದು ತಾ ತೊಲಗಿಪ್ಪುದೆ,
ಮನಸಂದುದು ಮಾರೇಶ್ವರಾ. ॥ ೪೩ ॥

೬೩೪

ಕಾಯವಿಡಿದಿಹನ್ನಬರ ಶಿವಭಕ್ತಂಗೆ ಕಾಯಕವೆ ಕೈಲಾಸ.
ಕಾಯಕವಿಲ್ಲದವನ ಅರಿವು ವಾಯವಾಯಿತ್ತು.
ಅಡುಗೂಲಿಯ ಮನೆಯಂತೆ ಗಡಿಗೆಯ ಗಂಜಿಯಾಸೆಬೇಡ.
ಕೊಡುವರೆಂದೊಬ್ಬರ ಮನೆಗೆ ಅಡಿಗಡಿಗೆ ಹೋಗಬೇಡ.
ಇಂತಿವರಡಿಯ ಕಾಬುದಕ್ಕೆ ಮೊದಲೆ ಅಡಗಿದೆಯಲ್ಲಾ,
ಮನಸಂದಿತ್ತು ಮಾರೇಶ್ವರಾ. ॥ ೪೪ ॥

೬೩೫

ಕಾಯಸೂತಕಿಗಳು ಕರ್ಮಕ್ಕೊಳಗು.
ಜೀವಸೂತಕಿಗಳು ಭವಕ್ಕೆ ಬೀಜ.
ಮತ್ತಾವ ಸೂತಕಿಗಳೆಲ್ಲರು
ಎಂಬತ್ತನಾಲ್ಕುಲಕ್ಷ ಜೀವರಾಶಿಗಳ ಠಾವಿಗೆ ಒಳಗು.
ಪ್ರಸೂತವಾಗಿ ಹೊರಗಾದಲ್ಲಿ ಏನೂ ಎಂದೆನಲಿಲ್ಲ,
ಮನಸಂದಿತ್ತು ಮಾರೇಶ್ವರಾ. ॥ ೪೫ ॥

೬೩೬

ಕುರುಹಿನ ಪತಾಕೆಯ ಹಿಡಿದವಂಗೆ,
ಕೊರತೆ ಉಂಟೆ, ಆಳ್ದಂಗಲ್ಲದೆ ?
ಎಚ್ಚವನಿದ್ದಂತೆ ಅಂಬಿಗೆ ಮುನಿವರೆ ?
ಎನ್ನ ಮರವೆ ನಿನ್ನ ಕೇಡಾದ ಕಾರಣ,
ನೀ ನಾನೆಂಬುದಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. ॥ ೪೬ ॥

೯೩೭

ಕುಸುಮಗಂಧ ಹಿಸುಕಿದಲ್ಲಿ ದುರ್ಗಂಧ.
ಉದಕದಲ್ಲಿ ನಿರ್ಮಲ, ಕೆದಕಿದಲ್ಲಿ ಮಲ.
ವಿನಯದಿಂದ ಸುಗುಣ, ದುರ್ವಾಸದಿಂದ ಕರ್ಕಶ.
ಇಂತೀ ಉಭಯಂಗಳೆಲ್ಲ ಕೂಡಿ,
ಜೀವ ಪರಮನೆಂಬ ಅರಿವು ಮರವೆ ಎರಡಳಿದು,
ಪಂಕವನೀಂಟಿದ ಸುಜಲ ನಿಂದಂತೆ,
ಏಕಚಿತ್ತಮೂರ್ತಿಯಾದಲ್ಲಿ, ಮನಸಂದಿತ್ತು ಮಾರೇಶ್ವರಾ. ‖ ೪೭ ‖

೯೩೮

ಕೂರ್ಮನ ಮೋಹ, ಉರಗನ ಧ್ಯಾನ,
ವಿಹಂಗನ ಚಿತ್ತ, ಪಿಪೀಲಿಕನ ಜ್ಞಾನ,
ಮಯೂರನ ಎಚ್ಚರಿಕೆ, ದಯಾಪರನ ಸರ್ವಗುಣ,
ಉಭಯವಳಿದವನ ನಿರ್ಮೋಹ, ಅಪ್ರಮಾಣನ ವಿಶ್ವಾಸ,
ಕುರುಹುದೋರುವುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ‖ ೪೮ ‖

೯೩೯

ಕೂಲಿಗೆ ಹಾವ ಕಚ್ಚಿಸಿಕೊಂಡು ಸಾಯಲೇತಕ್ಕೆ ?
ಕಂಡವರ ಬೇಡಿ ಜಂಗಮಕ್ಕೆ ಮಾಡಿಹೆನೆಂಬ ದಂದುಗವೇಕೆ ?
ಲಂದಣಗಿತ್ತಿಯಂತೆ ಸಾವ ಘಟದಂದವ ಹೊರಲೇತಕ್ಕೆ ?
ಈ ದಂದುಗಕ್ಕೆ ಮೊದಲೆ ಅಂಜಿ, ಅರಿದು ಮನಸಂದಿತ್ತು ಮಾರೇಶ್ವರಾ. ‖ ೪೯ ‖

೯೪೦

ಕೈ ತುಂಬಿ ಹಿಡಿದು, ಕಂಗಳು ತುಂಬಿ ನೋಡಿ,
ಮನ ತುಂಬಿ ಹಾರೈಸಿ,
ಎಡೆಬಿಡುವಿಲ್ಲದೆ ಅರಿದ ಮತ್ತೆ
ಆ ಕುರುಹು ಕೈಗೆ ಆದಿಯಾಗಿ, ಕಂಗಳಿಗೀಡಾಗಿ,
ಆತ್ಮನರಿವಿನಲ್ಲಿ ಉಭಯವಳಿದು ನಿಂದಲ್ಲಿಯೆ ಲೀಯವಾಗಿ,
ಮನಸಂದಿತ್ತು ಮಾರೇಶ್ವರಾ. ‖ ೫೦ ‖

೯೪೧

ಕ್ರೀಯಲ್ಲಿ ಇಷ್ಟವ ಪೂಜಿಸುವನ್ನಬರ,
ಚಿತ್ತದ ತೊಟ್ಟುಬಿಟ್ಟು ಬೆಚ್ಚಂತಿರಬೇಕು.

ಭಾವದಿಂದ ಅಧ್ಯಾತ್ಮವನರಿವನ್ನಬರ,
ಜೀವಸಂಸಾರವಿಲ್ಲದಿರಬೇಕು.
ಇಂತೀ ಎರಡಳಿದು ಒಂದರಲ್ಲಿ ನಿಜವಹನ್ನಬರ,
ಕಾಯಕ್ಕೆ ಕರ್ಮ, ಜೀವಕ್ಕೆ ಅರಿವು.
ಅರಿವಿಂಗೆ ಕುರುಹುದೋರುವುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ॥ ೫೧ ॥

೯೪೨

ಖ್ಯಾತಿಲಾಭಕ್ಕೆ ಮಾಡುವಾತ ಭಕ್ತನಲ್ಲ.
ಡಂಬಕಕ್ಕೆ ಡೊಂಬರಂತೆ ತಿರುಗುವವ ಜಂಗಮವಲ್ಲ.
ತನು ತಲೆ ಬತ್ತಲೆಯಾಗಿ,
ಮನ ತ್ರಿವಿಧ ಆಸೆ ಉಳ್ಳನ್ನಕ್ಕ ವಿರಕ್ತನಲ್ಲ.
ಇಂತೀ ಗುಣವ ಸಂಪಾದಿಸುವನ್ನಕ್ಕ,
ಎನಗೆ ಮುಕ್ತಿಯೆಂಬ ಬಟ್ಟೆಯಿಲ್ಲ.
ನೀ ಸತ್ತೆ, ನಾ ಕೆಟ್ಟೆ, ಮನಸಂದಿತ್ತು ಮಾರೇಶ್ವರಾ. ॥ ೫೨ ॥

೯೪೩

ಖ್ಯಾತಿಲಾಭದ ಪೂಜೆ, ದ್ರವ್ಯವ ಕೆಡಿಸುವುದಕ್ಕೆ ಮೊದಲಾಯಿತ್ತು.
ವೈರಾಗ್ಯದ ವಿರಕ್ತಿ ಮೂರಕ್ಕೆ ಒಡಲುಗೊಳಿಸಿತ್ತು.
ವಾಗದ್ವೈತದ ಕೇಣಸರ,
ಗೆಲ್ಲ ಸೋಲಕ್ಕೆ ಕಲ್ಲೆದೆಯ ಮಾಡಿತ್ತು.
ಇವೆಲ್ಲವ ತಿಳಿದು, ಇಲ್ಲ ಉಂಟು ಎಂಬಲ್ಲಿಯೆ,
ಮನಸಂದಿತ್ತು ಮಾರೇಶ್ವರಾ. ॥ ೫೩ ॥

೯೪೪

ಗರಳವ ಬೈಚಿಟ್ಟುಕೊಂಡಿಪ್ಪ ಉರಗನಂತೆ,
ಫಲವನಿಂಬಿಟ್ಟುಕೊಂಡಿಹ ತರುವಿನಂತೆ,
ನಿಧಾನವ ಮರೆಸಿಕೊಂಡಿಪ್ಪ ಧರೆಯಂತೆ,
ಗಂಧವನಿಂಬಿಟ್ಟ ಚಂದನದಂತೆ
ಇವರಂಗವಾವ ತೆರದಲ್ಲಿ ನಿಂದಿತ್ತು ?
ಸಂಗ ದುಸ್ಸಂಗವನರಿದು ಸಲೆ ಸಂದುದು.
ನಿಂದುದು, ಮನಸಂದುದು ಮಾರೇಶ್ವರಾ. ॥ ೫೪ ॥

೯೪೫

ಗುರಿಯನೆಚ್ಚಲ್ಲಿ ತಾಗಿದವೊಲು,
ತಪ್ಪಿದ ಭೇದವ ನಿಶ್ಚೈಸಿ ಕೈ ಅರಿವಂತೆ,
ಕಾಯ ಜೀವದ ಸಂದಣಿಯಲ್ಲಿ,
ಅರಿವೆಂಬ ವಸ್ತು ತಿರುಗಾಡುತ್ತಿರಲಾಗಿ,
ಆ ಗುಣವ ಕರಿಗೊಂಡು, ಮನಸಂದಿತ್ತು ಮಾರೇಶ್ವರಾ. ॥ ೫೫ ॥

೯೪೬

ಗುರುವಿನಲ್ಲಿ ಆಚರಣೆಯ, ಲಿಂಗದಲ್ಲಿ ಅನುಸರಣೆಯ,
ಜಂಗಮದಲ್ಲಿ ದೂಷಣ ಮಾಡುತ್ತ
ಲಿಂಗವನರಿತು, ಗುರುವ ಮರೆಯಬೇಕು.
ಅರಿವನರಿತು, ಜಂಗಮವ ಮರೆಯಬೇಕು.
ಗುರುವೆ ಲಿಂಗವಾಗಿ, ಲಿಂಗವೆ ಜಂಗಮವಾಗಿ,
ಜಂಗಮವೆ ಅರಿವಾಗಿ ನಿಂದಲ್ಲಿ
ಲಿಂಗವನರಿತು, ಗುರುವೆಂಬುದ ಮರೆಯಬೇಕು.
ಗುರುವನರಿತು, ಜಂಗಮವ ಮರೆಯಬೇಕು.
ಜಂಗಮವ ಮರೆದಲ್ಲಿ ಅರಿವು ಕರಿಗೊಂಡಿತ್ತು,
ಮನಸಂದ ಮಾರೇಶ್ವರಾ. ॥ ೫೬ ॥

೯೪೭

ಗುರುವಿನಲ್ಲಿ ವಿಶ್ವಾಸಿಸಿ, ಲಿಂಗವ ಮರೆಯಬೇಕು.
ಲಿಂಗದಲ್ಲಿ ವಿಶ್ವಾಸಿಸಿ, ಜಂಗಮವ ಮರೆಯಬೇಕು.
ಜಂಗಮದಲ್ಲಿ ವಿಶ್ವಾಸಿಸಿ, ತ್ರಿವಿಧವ ಮರೆಯಬೇಕು.
ತ್ರಿವಿಧವ ಮರೆದು ಅರಿದಲ್ಲಿ,
ಲಿಂಗ ಬಿದ್ದಿತ್ತೆಂಬ ಸಂದೇಹವಿಲ್ಲದೆ, ಎತ್ತಿ ಅವಧರಿಸಿಕೊಂಡು,
ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ,
ಅರಿವಿಂಗೆ ಎಡೆದೆರಪಿಲ್ಲದೆ ನಿಂದುದು.
ಅಂಗಕ್ಕೆ ಅದೆ ಪ್ರಾಯಶ್ಚಿತ್ತ, ಮನಸಂದ ಮಾರೇಶ್ವರಾ. ॥ ೫೭ ॥

೯೪೮

ಗೋವಧೆಯ ಮಾಡಿ, ಗೋದಾನವ ಮಾಡಿವಡೆ,
ಕೊಂದ ಕೊಲೆಗೂ ಮಾಡಿದ ದಾನಕ್ಕೂ ಸರಿಯೆ ?
ಆಚಾರಕ್ಕೂ ಅನಾಚಾರಕ್ಕೂ ಪಡಿಪುಚ್ಚವುಂಟೆ ?

ನೇಮಕ್ಕೆ ಹಾನಿಯಾದಲ್ಲಿ
ಭಂಗಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. ||೫೮||

೬೪೯

ಜ ಎಂಬುದನರಿದಲ್ಲಿ ಬ್ರಹ್ಮತತ್ವ.
ಗ ಎಂಬುದನರಿದಲ್ಲಿ ವಿಷ್ಣುತತ್ವ.
ಮ ಎಂಬುದನರಿದಲ್ಲಿ ರುದ್ರತತ್ವ.
ತ್ರಿವಿಧವ ಹರಿದು ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. ||೫೯||

೬೫೦

ಜೀರ್ಣಕುಂಭದಲ್ಲಿ ತೋರುವ ಅನಲನಂತೆ,
ಬುಡವೊಂದು ಛಿದ್ರದಿಂದ ಹಲವಾದ ತೆರದಂತೆ,
ಕಾಯಜೀವದ ಭೇದವನರಿತಲ್ಲಿ,
ಮನಸಂದಿತ್ತು ಮಾರೇಶ್ವರಾ. ||೬೦||

೬೫೧

ಜೀವದಿಂದ ಕಾಬ ಅರಿವು, ಪ್ರಕೃತಿರೂಪಾಗಿಪ್ಪುದು.
ಪರಮನಿಂದ ಕಾಬ ಜ್ಞಾನ, ಸಂದೇಹಕ್ಕೊಡಲಾಗಿಪ್ಪುದು.
ಸಂದೇಹವೊಂದೆಂದು ತಿಳಿದಲ್ಲಿ, ಮನಸಂದಿತ್ತು ಮಾರೇಶ್ವರಾ. ||೬೧||

೬೫೨

ಡಂಭಕದ ಪೂಜೆ, ಹೋಹ ಹೊತ್ತಿನ ಕೇಡು.
ಆಡಂಬರದ ಪೂಜೆ, ತಾಮ್ರದ ಮೇಲಣ ಸುವರ್ಣದ ಛಾಯೆ.
ಇಂತೀ ಪೂಜೆಗೆ ಹೂಸೊಪ್ಪನಿಕ್ಕಿ, ಮನವ ಹೂಸಿ ಮಾಡುವ ಪೂಜೆ,
ಬೇರು ನೆನೆಯದ ನೀರು, ಆಯವಿಲ್ಲದ ಗಾಯ,
ಭಾವವಿಲ್ಲದ ಗರಿ, ಮನಸಂದ ಮಾರೇಶ್ವರಾ. ||೬೨||

೬೫೩

ತತ್ವ ಅಂಗವಾಗಿ, ಪರತತ್ವ ಪ್ರಾಣವಾಗಿ,
ಉಭಯವಲ್ಲಿ ನಿಂದ ನಿಜ ಹೊರಗಾಯಿತ್ತು,
ಮನಸಂದ ಮಾರೇಶ್ವರಾ. ||೬೩||

೯೫೪

ತತ್ವವೆಲ್ಲ ಬ್ರಹ್ಮನ ಒಡಲು.
ಪರತತ್ವವೆಲ್ಲ ವಿಷ್ಣುವಿನ ಒಡಲು.
ಪಂಚವಿಂಶತಿತತ್ವದೊಳಗಾಗಿ ತೋರುವುದೆಲ್ಲ
ರುದ್ರನ ಪ್ರಳಯಕ್ಕೊಳಗು.
ಇಂತೀ ಒಳಗು ಹೊರಗ ತಿಳಿದು,
ಅಹುದು ಅಲ್ಲಾ ಎಂಬೀ ಸಂದೇಹ ನಿಂದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೬೪ ||

೯೫೫

ತನು ಒಡಲುಗೊಂಡು ನಿಂದಲ್ಲಿಯೆ
ಗುರುವಿಂಗೆ ಹಂಗಾಯಿತ್ತು.
ಲಿಂಗ ಸಾಕಾರವಾಗಿ ಬಂದಲ್ಲಿಯೆ
ಜಂಗಮಕ್ಕೆ ಹಂಗಾಯಿತ್ತು.
ಮನವು ಮಹವನರಿಯದೆ
ಸಕಲ ಜೀವಕ್ಕೆ ಹಂಗಾಯಿತ್ತು.
ಅಂಗ ಜೀವದ, ಸಂದೇಹವನರಿತಲ್ಲಿ,
ದಂದುಗಕ್ಕೆ ಮೊದಲೆ, ಮನಸಂದಿತ್ತು ಮಾರೇಶ್ವರಾ. || ೬೫ ||

೯೫೬

ತನುವಿಂದ ಅನುವನರಿತೆಹೆನೆಂದಡೆ,
ಆ ಅನುವಿಂಗೂ ತನುವಿಂಗೂ ಸಂಬಂಧವಲ್ಲ.
ಅನುವಿಂದ ತನುವನರಿತೆಹೆನೆಂದಡೆ
ಅನು ಬಯಲು, ತನು ರೂಪು.
ಕಾಷ್ಠ ಪಾಷಾಣ ಘಟದಲ್ಲಿ ತೋರಿ, ಉರಿವ ಅಗ್ನಿಯಂತೆ,
ಒಂದನಳಿದು, ಒಂದನುಳಿದಿಹವಹ್ನಿಯ ತೆರನನರಿದಲ್ಲಿ,
ಬೇರೊಂದನ್ಯವ ಕುರುಹಿಡಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೬೬ ||

೯೫೭

ತಪಕ್ಕೆ, ಬಂಧನಕ್ಕೆ ಸಿಕ್ಕದ ವಸ್ತು,
ಜಪಕ್ಕೆ, ಮಣಿಮಾಲೆಯೊಳಗಲ್ಲ.
ಮಂತ್ರಕ್ಕೆ ಅಲಕ್ಷಮಯವಾಗಿಪ್ಪುದು.
ತ್ರಿಕರಣ ಶುದ್ಧವಾದಲ್ಲಿ, ಮನಸಂದಿತ್ತು ಮಾರೇಶ್ವರಾ. ||೬೭||

### ೯೫೮

ತಮದ ಸತಿಯ ಸ್ವಯಂಜ್ಯೋತಿ,
ಪುರುಷನಪ್ಪಿದಲ್ಲಿ ತೆಕ್ಕೆಗೊಡಲುಂಟೆ ?
ಅಪ್ಪಿದಲ್ಲಿಯೆ ಬಚ್ಚಬಯಲು.
ತಮಸತಿಯೆಂಬ ನಾಮವಡಗಿತ್ತು.
ಭಾವಕ್ಕೆ ಭ್ರಮೆಯಿಲ್ಲ, ಎನಗೆ ಕುರುಹಿಲ್ಲ,
ಮನಸಂದಿತ್ತು ಮಾರೇಶ್ವರಾ. || ೬೮ ||

### ೯೫೯

ತೊರೆಯ ಹಾವನ್ನಕ್ಕ, ಒಂದು ಹರುಗೋಲ ಬೇಕು.
ಹರುಗೋಲದೊಳಗಿಹನ್ನಕ್ಕ, ಒಂದು ಅಡಿಗಟ್ಟಿಗೆ ಬೇಕು.
ತೊರೆ ಬತ್ತಿ, ಹರುಗೋಲ ಹಾಕಿ, ಅಡಿಗಟ್ಟಿಗೆ ಮುರಿದಲ್ಲಿ
ತ್ರಿವಿಧವಲ್ಲಿ, ನಾನಿಲ್ಲಿ, ನೀನೆಲ್ಲಿ ? ಮನಸಂದಿತ್ತು ಮಾರೇಶ್ವರಾ. || ೬೯ ||

### ೯೬೦

ತ್ರಿವಿಧಶಕ್ತಿಯನರಿದಲ್ಲಿ, ತ್ರಿಗುಣಾತ್ಮವ ಮರೆದಲ್ಲಿ,
ತ್ರಿಭೇದಂಗಳ ಕಾಬಲ್ಲಿ,
ತ್ರಿಗುಣ ತನ್ಮಯವಾಗಿ ಚರಿಸುವಲ್ಲಿ,
ಇಂತೀ ತ್ರಿಗುಣ ಏಕವಾದಲ್ಲಿ, ಮನಸಂದಿತ್ತು ಮಾರೇಶ್ವರಾ. ||೭೦||

### ೯೬೧

ದಿವಾರಾತ್ರಿಯೆಂಬ ಉಭಯ ಕೂಡೆ,
ದಿನಲೆಕ್ಕ ಹಾಯಿದು ಕಲ್ಪಿತವನಳಿದಂತೆ,
ಲೆಕ್ಕ ಮುಂಚು, ದಿನ ಹಿಂಚಾಗಿ
ತನ್ನ ತಪ್ಪನರಿವುದಕ್ಕೆ ಮೊದಲೆ ತಪ್ಪಿರಬೇಕು.
ಇದು ನಿಶ್ಚಯ ಬುದ್ಧಿ, ಮನಸಂದಿತ್ತು ಮಾರೇಶ್ವರಾ. || ೭೧ ||

### ೯೬೨

ಧೀರ, ಕೂರಲಗಿಂಗೆ ಹೆದರುವನೆ ?
ಸಾರಧಿ ಸರ್ಪಮಂತ್ರಕ್ಕಲಸುವಳೆ ?
ಭಾರಿಯ ಜಾಣ, ಆರೈಕೆಗೊಳಗಹನೆ ?
ಇವು ಮೀರಿ ಅರಿದ ಅರಿವು,
ತ್ರಿವಿಧ ಹೋರಾಟಕ್ಕೆ ಒಡಲಪ್ಪುದೆ ?

ಇದನರಿಯದ ಮುನ್ನವೆ ಅರಿದಾತಂಗೆ,
ಮನಸಂದಿತ್ತು ಮಾರೇಶ್ವರಾ. ||೭೨||

೯೬೩

ಧೀರನೆಂದಡೆ ಇದಿರಾದವರ ಇರಿಯಬಹುದಲ್ಲದೆ,
ತುಂಬಿದ ತೊರೆಯ ಹಾಯಬಹುದೆ ?
ಮಾತಿನಲ್ಲಿ ಶ್ರೇಷ್ಠನಾದೆನೆಂದಡೆ,
ಶಿವಶರಣರ ನೇತಿಗಳೆಯಬಹುದೆ ?
ಹಸುಳೆಗೆ ಗಲ್ಲವ ಕುಟ್ಟಿ, ಹಾಲೆರೆದಡೆ,
ಅದಾರಿಗೆ ಹಿತವೆಂಬುದನರಿದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೭೩ ||

೯೬೪

ನಡೆವಾತನ ಕಾಲ ಕೊಯಿದು,
ನುಡಿವಾತನ ನಾಲಗೆಯ ತುಂಡಿಸಿ,
ಕೊಡುವಾತನ ಕೈಯ ಮುರಿದು,
ಕೊಂಡಾಡುವಾತನ ತಲೆಯ ಕುಟ್ಟಿ,
ಮೀರಿ ನಿಂದುದು, ಮನಸಂದಿತ್ತು ಮಾರೇಶ್ವರಾ. || ೭೪ ||

೯೬೫

ನಾ ನೀನೆಂಬ ಉಭಯವ ವಿಚಾರಿಸುವುದು ಅದೇನು ಹೇಳಾ ?
ನಾನೆಂದಡೆ ಎನಗೆ ಹೊರಗು, ನೀನೆಂದಡೆ ಉಭಯಭಿನ್ನ.
ಏನೂ ಎನ್ನದಿದ್ದಡೆ ಅರಿವಿಂಗೆ ಕುರುಹಿಲ್ಲ.
ಉಭಯವ ವಿಚಾರಿಸಿ ತಿಳಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೭೫ ||

೯೬೬

ಭಕ್ತಂಗೆ ಪ್ರತ್ಯುತ್ತರ ಘಟಿಸಿದಾಗ,
ಮತ್ಸರಕ್ಕೊಡಲಾಗಲಾಗಿ, ಸತ್ಯ ಜಾರಿತ್ತು.
ನಿತ್ಯ ಕಾಲಂಗಳಲ್ಲಿ
ಅರ್ಚನೆ ಪೂಜೆ ಸತ್ತಿತ್ತು.
ಹುಸಿ ಕುಹಕವೆಂಬ ಭಾವ
ಚಿತ್ತದಲ್ಲಿ ತೋರಿದಾಗವೆ
ತೋರುವ ತೋರಿಕೆಗೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. || ೭೬ ||

೯೬೭

ಭಕ್ತರು ನಾವೆಂದು ನಿತ್ಯನೇಮವ ಮಾಡಿಕೊಂಡೆವೆಂದು
ಮನೆಮನೆಯ ಬಾಗಿಲ ತಪ್ಪಲ ಕಾಯಲೇತಕ್ಕೆ ?
ಇದು ಶಿವಭಕ್ತರಿಗೆ ಒಪ್ಪುವುದೆ ?
ಇಂತೀ ವ್ರತನೇಮವ ಮಾರಿ,
ಘಟವ ಹೊರೆವ ಕುಟಿಲರಿಗಂಜಿ,
ಮುನ್ನವೆ ಮನಸಂದಿತ್ತು ಮಾರೇಶ್ವರಾ. ||೨೭||

೯೬೮

ಭಟಂಗೆ ಭಾಷೆಯಲ್ಲದೆ, ಅಂಜಿ ತೊಲಗಿದವಂಗೆ
ಚೌಭಟದ ರಣರಂಗವುಂಟೆ ?
ವಾಗದ್ವೈತಿ ಸ್ವಯಾನುಭಾವಕ್ಕೆ ಸಂಬಂಧಿಯಪ್ಪನೆ ?
ಕೀಟಕ ಅರುಣನ ಕಿರಣವ ಜರೆದಂತೆ,
ದೂಷಣವ ಮಾಡುವಲ್ಲಿ, ಆ ದೂಷಣಕ್ಕೆ ತಾನೊಳಗಹಲ್ಲಿ,
ತಿಳಿದು ವಿಚಾರಿಸುವಲ್ಲಿ, ಒಳಹೊರಗುಯೆಂಬುದಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. ||೨೮||

೯೬೯

ಭಾವಭಾವಿಸಿದಲ್ಲಿ, ಜೀವ ಸಂಚರಿಸುವಲ್ಲಿ,
ಜ್ಞಾನ ಪರಮನೆಂದು ಅರಿದಲ್ಲಿ,
ಬೇರೊಂದು ಬೀಜವುಂಟೆ ?
ನಾನಾರೆಂಬುದ ತಾನರಿದ ಮತ್ತೆ,
ನಿರ್ಬೀಜವಾಗಿ ಮನಸಂದಿತ್ತು ಮಾರೇಶ್ವರಾ. ||೨೯||

೯೭೦

ಮನ ಬುದ್ಧಿ ಚಿತ್ತ ಅಹಂಕಾರವೆಂಬೀ ನಾಲ್ಕರಲ್ಲಿ ನಿಂದು
ವಿಚಾರಿಸುವುದು ಜೀವನೋ, ಪರಮನೋ ?
ಅದು ಮುಕುರದ ಒಳಹೊರಗಿನಂತೆ.
ಘಟ ಪ್ರಾಣದ ಯೋಗವನರಿತಲ್ಲಿ, ಮನಸಂದಿತ್ತು ಮಾರೇಶ್ವರಾ. ||೩೦||

೯೭೧

ಮನವನರಿದು, ನಯನ ಕಂಡು, ಕೈಯಲ್ಲಿ ಹಿಡಿವಂತಿರಬೇಕು.
ಮನವನರಿದಲ್ಲಿಯೂ ಕಾಯಕ್ಕೆ ಕರ್ಮವಳಿದು.

ಜೀವಕ್ಕೆ ಭವ ಹರಿದು, ಉರಿ ಕೊಂಡ ಕರ್ಪುರದಂತೆ
ಉಭಯಕ್ಕೊಡಲಿಲ್ಲ.
ನಿಂದಲ್ಲಿ ಮನಸಂದಿತ್ತು ಮಾರೇಶ್ವರಾ. ॥ ೮೧ ॥

೯೭೨

ಮನೋವಿಕಾರವೆಂದೆನಬಾರದು.
ತನುವಿಕಾರವೆಂದೆನಬಾರದು.
ತನು ಮನದ ಅನುವನರಿತಲ್ಲಿ,
ಮನಸಂದಿತ್ತು ಮಾರೇಶ್ವರಾ. ॥ ೮೨ ॥

೯೭೩

ಮಾಟದಿಂದ ಮಾಡಿ ಕಂಡೆಹೆನೆಂಬವರೆಲ್ಲರು
ಸ್ಥೂಲ ಸೂಕ್ಷ್ಮ ಅಧಮವೆಂದರಸಿ ಕೆಟ್ಟರು.
ಅರಿದೆಹೆನೆಂದು ತಿರುಗಾಡುವರೆಲ್ಲರು
ಕಂಗಳ ನೋಟ ಕಾಮನ ಕೂಟ,
ಅಂಗದ ಸುಖಕ್ಕಾಗಿ ಕೆಟ್ಟರು.
ಲಿಂಗವ ಪೂಜಿಸುವರೆಲ್ಲರು
ಆ ಲಿಂಗದ ಅರ್ಚನೆಯನರಿಯದೆ,
ಲಿಂಗದ ಅರ್ಪಿತವನರಿಯದೆ,
ನೀರು ಓಗರವೆಂಬ ರೋಗದಲ್ಲಿ ಸತ್ತರು.
ಇಂತೀ ಭೇದವನರಿದಲ್ಲಿ ಮನಸಂದಿತ್ತು ಮಾರೇಶ್ವರಾ. ॥ ೮೩ ॥

೯೭೪

ಮಾತಿಗೆ ಮಾತಡಗಿ, ನೀತಿಗೆ ನೀತಿಯಡಗಿ,
ಮತ್ತೇತಕ್ಕೂ ಕಲೆದೋರದೆ
ಉರಿ ಧರೆಯಂತೆ, ಸಿರಿ ಮೋಹದಂತೆ,
ಉರವಣಿಯಳಿದ ಪರತತ್ವದ ಬೆಳಗು.
ಇರವಿಗೆ ನಾಮ ನಷ್ಟವಾಯಿತ್ತು.
ಉಭಯದ ಕುಲವಳಿದು, ಮನಸಂದಿತ್ತು ಮಾರೇಶ್ವರಾ. ॥ ೮೪ ॥

೯೭೫

ಮೊದಲಿಗೆ ಮರ ನೀರನೆರೆದಡೆ ಎಳಕುವುದಲ್ಲದೆ,
ಕಡೆ ಕಿಗ್ಗೊಂಬಿಗೆರೆದವರುಂಟೆ ?

ಅರಿದು ಪೂಜಿಸುವಲ್ಲಿ ಹರಿವುದು ಮನಪಾಶ.
ಅರಿದು ಅರ್ಪಿಸುವಲ್ಲಿ ಲಿಂಗದ ಒಡಲೆಲ್ಲ ತೃಪ್ತಿ.
ತನ್ನನರಿದಲ್ಲಿ ಸಕಲಜೀವವೆಲ್ಲ ಮುಕ್ತಿ.
ತನ್ನ ಸುಖದುಃಖ ಇದಿರಿಗೂ ಸರಿಯೆಂದಲ್ಲಿ,
ಅನ್ನಭಿನ್ನವಿಲ್ಲ, ಮನಸಂದಿತ್ತು ಮಾರೇಶ್ವರಾ. ||೮೫||

೯೭೬

ಮೋಹದಿಂದ ಮಾಡುವುದೆಲ್ಲ ಬ್ರಹ್ಮನ ಪೂಜೆ.
ಭಾವದಿಂದ ಮಾಡುವುದೆಲ್ಲ ವಿಷ್ಣುವಿನ ಪೂಜೆ.
ನಿರ್ಭಾವದಿಂದ ಕಂಡೆಹೆನೆಂಬುದೆಲ್ಲ ರುದ್ರಪದ.
ಇಂತೀ ತ್ರಿವಿಧಕ್ಕೆ ಹೊರಗಾಗಿ ನಿಂದುದು,
ಮನಸಂದುದು ಮಾರೇಶ್ವರಾ. ||೮೬||

೯೭೭

ರಜ್ಜು ಸ್ಥಾಣು ಶಂಕೆ ಹರಿದಲ್ಲದೆ ಸಂದೇಹ ಬಿಡದು.
ಅರಿವು ಮರವೆ ಹೆರೆಹಿಂಗಿಯಲ್ಲದೆ ಬೇರೊಂದರಿಯಲಿಲ್ಲ.
ಭೇದಕ್ಕೆ ಮುನ್ನವೆ ಮನಸಂದಿತ್ತು ಮಾರೇಶ್ವರಾ. ||೮೭||

೯೭೮

ರಾಜನ ಭಕ್ತಿ ತಾಮಸದಿಂದ ಕೆಟ್ಟಿತ್ತು.
ಪಂಡಿತನ ಯುಕ್ತಿ ಖಂಡಸವಿಲ್ಲದೆ ನಿಂದಿತ್ತು.
ಸುಸಂಗಿಯ ಸಿರಂಗ ದುಸ್ಸಂಗದಿಂದ ಕೆಟ್ಟಿತ್ತು.
ಪತಂಗನಂತಾಗದೆ ಮುನ್ನವೆ ನಿನ್ನ ನೀನರಿ.
ಅರಿವಡೆ ನಿನಗಿದಿರಿಲ್ಲ, ಮನಸಂದಿತ್ತು ಮಾರೇಶ್ವರಾ. ||೮೮||

೯೭೯

ರೂಪೆಂಬುದನರಿದು ಸಂಕಲ್ಪಕ್ಕೊಳಗಾಗದೆ,
ಶೂನ್ಯವೆಂಬುದನರಿದು ಸಂಚಾರಕ್ಕೀಡಾಗದೆ,
ಉಭಯಮಾರ್ಗವ ತಿಳಿದು
ಸಂದೇಹವೆಂಬ ಸಂಕಲ್ಪದಲ್ಲಿ ನಿಲ್ಲದೆ,
ನಿಜ ಒಂದೆಂದಲ್ಲಿ, ಮನಸಂದಿತ್ತು ಮಾರೇಶ್ವರಾ. ||೮೯||

೯೮೦

ಲಿಂಗದೇಹಿಯ ಅಂಗದಲ್ಲಿ ತೋರುವ ತೋರಿಕೆ,
ಬೇರೊಂದು ಪ್ರಕೃತಿಭಾವದಲ್ಲಿ ಕಂಡಡೆ,

ಲಿಂಗದ ಅಂಗವಾದುದಕ್ಕೆ ಅದೇ ದೂರ.
ಅರಿದು ಮರೆವುದೆಲ್ಲ ಲಿಂಗಮಯವಾಗಿ,
ಪರುಷದ ಪುತ್ಥಳಿಯಂತೆ, ಎಲ್ಲಿ ಮುಟ್ಟಿದಡಲ್ಲಿ
ಲೋಹಕುಲ ಶುದ್ಧವಾದಂತೆ, ಅಂಗಲಿಂಗಸಂಯೋಗ.
ಇಂತೀ ಭಾವ ಅಳವಟ್ಟಲ್ಲಿ, ಉಭಯಗುಣ ಶುದ್ಧ,
ಮನಸಂದಿತ್ತು ಮಾರೇಶ್ವರಾ. ॥ ೯೦ ॥

೯೮೧

ವಾಚಕ ಚಪಳತ್ವದಿಂದ ಮಾತನಾಡಿದಡೇನು,
ತ್ರಿವಿಧದ ಆಸೆ ಬಿಡದನ್ನಕ್ಕ ?
ರೋಷದ ಪಾಶ ಕೀಳದನ್ನಕ್ಕ ?
ಮಾತೆಲ್ಲವೂ ಮೂರರಾಸೆಯಲ್ಲಿ ಸಿಕ್ಕಿ,
ರೋಷದ ಪಾಶದಲ್ಲಿ ಕಟ್ಟುವಡೆದು,
ಮತ್ತೇತರ ಭಾಷೆಯ ನೀತಿ ?
ಹೋತಿನ ಕೊರಳ ಮೊಲೆಯ ಆಸೆ ಮಾಡಿ ಉಂಡಡೆ,
ಅಲ್ಲೇತರ ಸುಖ ?
ಮತ್ತೀ ಗುಣದಾಸೆ ಹರಿದು ನಿಂದಡೆ,
ಮನಸಂದಿತ್ತು ಮಾರೇಶ್ವರಾ. ॥ ೯೧ ॥

೯೮೨

ವಿರಳ ಅವಿರಳವೆಂಬನ್ನಬರ,
ಕುರುಹು ನಾಮಕ್ಕೆ ಒಡಲಿಲ್ಲ.
ಆ ಉಭಯ ಏಕೀಕರವಾದಲ್ಲಿ,
ಮನಸಂದಿತ್ತು ಮಾರೇಶ್ವರಾ. ॥ ೯೨ ॥

೯೮೩

ವೀರನಾದಲ್ಲಿ ವಿತರಣ ಬೇಕು.
ವಿತರಣನಾದಲ್ಲಿ ಸಕಲವನರಿಯಬೇಕು.
ಸಕಲ ನಿಃಕಲವೆಂಬುದನರಿತು,
ಇದಿರನರಿಯದೆ ತನ್ನನರಿದಲ್ಲಿ,
ಮನಸಂದಿತ್ತು ಮಾರೇಶ್ವರಾ. ॥ ೯೩ ॥

೯೮೪

ವೇದವ ಕಲಿತಲ್ಲಿ, ಪಾಠಕನಲ್ಲದೆ ಜ್ಞಾನಿಯಲ್ಲ, ನಿಲ್ಲು.
ಶಾಸ್ತ್ರ ಪುರಾಣವನೋದಿದಲ್ಲಿ, ಪಂಡಿತನಲ್ಲದೆ ಜ್ಞಾನಿಯಲ್ಲ, ನಿಲ್ಲು.

ವ್ರತ ನೇಮ ಕೃತ್ಯ ಪೂಜಕನಾದಡೇನು ?
ದಿವ್ಯಜ್ಞಾನದ ಠಾವನರಿಯಬೇಕು.
ಈ ಭೇದಂಗಳ ತಿಳಿದರಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೯೪ ||

### ೯೮೫

ವೇದ ಹುಟ್ಟುವುದಕ್ಕೆ ಮುನ್ನವೆ ಓದಿದವರಾರು ?
ಶಾಸ್ತ್ರ ಹುಟ್ಟುವುದಕ್ಕೆ ಮುನ್ನವೆ ಕಲಿತವರಾರು ?
ಪುರಾಣ ಹುಟ್ಟುವುದಕ್ಕೆ ಮುನ್ನವೆ ಕೇಳಿದವರಾರು ?
ಉತ್ಪತ್ತಿ ಸ್ಥಿತಿ ಲಯಕ್ಕೆ ಮುನ್ನವೆ ನಾನೆಂಬವರಾರು.
ಮನಸಂದ ಮಾರೇಶ್ವರಾ ? || ೯೫ ||

### ೯೮೬

ಸತ್ಯವಾಸದಿಂದ ಮುಕ್ತಿವಾಸಕ್ಕೆ ಒಡಲು.
ಮುಕ್ತಿವಾಸದಿಂದ ಇಹಪರವೆಂಬುದಕ್ಕೆ ಬೀಜ.
ಇಹದಲ್ಲಿ ಸುಖಿಯಲ್ಲದೆ, ಪರದಲ್ಲಿ ಪರಿಣಾಮಿಯಲ್ಲದೆ,
ಉಭಯ ನಿಶ್ಚಯವಾದಲ್ಲಿ, ಮನಸಂದಿತ್ತು ಮಾರೇಶ್ವರಾ. || ೯೬ ||

### ೯೮೭

ಸಾಯದ ಮುನ್ನವೆ ಸತ್ತುದನರಿದು,
ಅರಿಯದ ಮುನ್ನವೆ ಮರೆದುದ ಕಂಡು,
ಉಭಯಸಂಕಟಕ್ಕೆ ಮುನ್ನವೆ
ಮನಸಂದಿತ್ತು ಮಾರೇಶ್ವರಾ. || ೯೭ ||

### ೯೮೮

ಹರಿವ ಗರಗಸವೊಂದೆ ಬಗೆಯಲ್ಲಿ ಹರಿವುದೆ ?
ಉಭಯದ ಕೊಯಿತೆ ಶರಣರ ಸಂಗ.
ಅರಿಬಿರಿದಿನ ತೊಡಕು.
ಉತ್ತರ ಕೊಟ್ಟಲ್ಲಿ ಭಕ್ತಿ ನಿಂದಿತ್ತು.
ಗೆಲ್ಲ ಸೋಲಕ್ಕೆ ನಾ ನುಡಿದು ಗೆದ್ದೆಹೆನೆಂದಡೆ,
ಹಿಡಿವ ನೇಮಕ್ಕೆ ಅದೇ ಕಡೆ.
ಸತಿಪತಿಯಾಗಬಹುದೆ ?
ಏನೆಂದಲ್ಲಿ ನಾನೆಂಬುದಳಿದಲ್ಲಿ,
ಮನಸಂದಿತ್ತು ಮಾರೇಶ್ವರಾ. || ೯೮ ||

೯೮೯

ಹರಿವ ಹಾವು, ಉರಿವ ಕಿಚ್ಚೆಂದಡೆ
ಮುಟ್ಟುವವರಿಗೆ ಭೀತಿಯಲ್ಲವೆ ?
ಅರಿದು ಹಿಡಿದಡೆ, ಉರಗ ಹೊರಳಿಗೆ ಸರಿ.
ಸ್ತಂಭಕ್ಕೆ ಅಗ್ನಿ ಚಂದನದ ಮಡು.
ಲಿಂಗವ ಹಿಡಿಯಬಲ್ಲಡೆ, ಅಂಗ ನಿರಂಗದ ಕೂಟ.
ಉಭಯದ ಸಂಗವನರಿದಲ್ಲಿ, ಮನಸಂದಿತ್ತು ಮಾರೇಶ್ವರಾ. || ೯೯ ||

೯೯೦

ಹುಟ್ಟದ ಮುನ್ನವೆ ಬೆಳೆದ ಬೆಳೆಯ,
ಕೊಯ್ಯದ ಮುನ್ನವೆ ಒಕ್ಕಿ,
ಒಕ್ಕುವುದಕ್ಕೆ ಮುನ್ನವೆ ರಾಸಿಯಾಗಿ,
ರಾಸಿಗೆ ಮೊದಲೆ ಅಳೆತ ಸಂದಿತ್ತು.
ಕೊಳಗದ ಕೊರಳು ಹಿಡಿಯದೆ,
ಅಳೆವನ ಕೊರಳು ತುಂಬಿ,
ಹೇಳುವಾತನ ಕಣ್ಣು ಬಚ್ಚಬಯಲಾಯಿತ್ತು,
ಮನಸಂದ ಮಾರೇಶ್ವರಾ. || ೧೦೦ ||

೯೯೧

ಹೂವ ಕೊಯಿವುದಕ್ಕೆ ಮುನ್ನವೆ,
ವಾಸನೆಯ ಕೊಯ್ಯಬೇಕು.
ಲಿಂಗ ಬಹುದಕ್ಕೆ ಮುನ್ನವೆ,
ಅರಿವನರಿಯಬೇಕು.
ನಾನೆಂಬುದಕ್ಕೆ ಮೊದಲೆ,
ವಸ್ತುಭಾವದಲ್ಲಿ ಮನಸಂದಿರಬೇಕು, ಮಾರೇಶ್ವರಾ. || ೧೦೧ ||

■ ■

# ಮನುಮುನಿ ಗುಮ್ಮಟದೇವನ ವಚನ

ಬಿಜ್ಜಳಂಗೆ ಹದಿನೆಂಟು ದೋಷಂಗಳಂ ತೀರ್ಚಿ, ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳ ಸರ್ವ ಆತ್ಮಭೂತಹಿತನಾಗಿ ಇರೆಂದು ಆತಂಗೆ ಉಪದೇಶಗುರುವಾದ ಮೀಮಾಂಸಕ, ಆ ಮೀಮಾಂಸಕಂಗೆ ಸಕಲವ್ರತನೇಮ ನಿತ್ಯವರ್ತಮಾನಕೃತ್ಯ ಜಿನನೇಮ ಗುಣನಾಮವಂ ಬೋಧಿಸಿದ ಬೌದ್ಧ ಅವತಾರಕ್ಕೆ ಮುಖ್ಯ ಆಚಾರ್ಯನಾದ, ತನ್ನ ಸಮಯಕ್ಕೆ ಸಿಂಧುಚಂದ್ರನಾದ ಮನುಮುನಿ ಗುಮ್ಮಟದೇವಗಳ ವಚನ :

೯೯೨

ಎನಗೆ ಕರಿ ಕಂಡ ಸ್ವಪ್ನದ ಇರವು.
ಹರಿ ಬಂದಂಗದಲ್ಲಿ ನಿಲೆ ಬೆದರಿ ಉಡುಗಿತ್ತು.
ಅದರಿರವು ಎನಗಾಯಿತ್ತು.
ಜಿನವಾಸ ಬಿಟ್ಟು, ದಿನನಾಶನ ವಾಸವಾಯಿತ್ತು.
ಎನಗಿದೆ ಸಾಫಲ್ಯ, ಕೇವಲ ಜ್ಞಾನ,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ||೧||

೯೯೩

ಭೂತಭವಿಷ್ಯದ್ವರ್ತಮಾನಕ್ಕೆ ಮುನ್ನವೆ
ಅನಾದಿಯಲ್ಲಿ ಆದ ಜಿನೇಶ್ವರನೆಂದಿದ್ದೆ.

ಆದಿ ನಾರಾಯಣನ ಅವತಾರ ತ್ರಿಪುರಸಂಹಾರದಿಂದೀಚೆ.
ಆದ ಕುಟಿಲ ನಾಮದಿಂದ
ದ್ವಾದಶ ಸಹಸ್ರ ಶ್ರುತಿ ಕುಟಿಲವಂ ಮಾಡಿ,
ತ್ರಿಪುರ ನಿಲಬೇಕೆಂಬುದಕ್ಕೆ ಮೊದಲೆ,
ಅಸತ್ಯ ಗೆಲಬೇಕೆಂಬುದಕ್ಕೆ [ಮೊದಲೆ],
ಶಿವನಿಲ್ಲಾ ಎಂದು ನುಡಿಯಲಾ ಸೊಲ್ಲಿಂಗೆ
ಎಲ್ಲರೂ ಕಲಿತು ಗೆಲ್ಲ ಸೋಲಕ್ಕೆ ಹೋರಿ,
ಬಲ್ಲತನವಿಲ್ಲದೆ ಬಸದಿಯ ನಿಳಯವಂ ಪೊಕ್ಕು,
ಹಿಸಿದಲೆಯಲ್ಲಿ ಗಸಣಿಗೊಳಲಾರದೆ,
ನಿಶಿತಮಯ ಕರ್ಮ ಘಟದೂರ
ಕುಟಿಲಹರ ಸ್ಫಟಿಕ ಘಟದಂತಿಪ್ಪ ವರ್ಣಭೇದ ನೀನೆ,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೨ ||

೯೯೪

ವೇದಂಗಳ ನಾಲ್ಕು ಭೇದಿಸಲರಿಯದೆ,
ಹದಿನಾರು ಶಾಸ್ತ್ರ ನಿಮ್ಮ ಶಾಂತಿಯನರಿಯದೆ,
ಇಪ್ಪತ್ತೆಂಟು ಪುರಾಣ ನಿಮ್ಮ ಪುಣ್ಯದ ಪುಂಗವನರಿಯದೆ,
ತೊಳಲಿ ಬಲುಳವುದಕ್ಕೆ [ಚ]ರ್ಚೆಯ ಮಾಡಿದೆ.
ನಾ ಕೆಟ್ಟೆ, ಹುಚ್ಚುಗೊಂಡ ನಾಯಿ ಒಡೆಯನ ಕಚ್ಚಿದಂತೆ, ಕೆಟ್ಟೆ.
ಆಗಮಗಳಲ್ಲಿ ಹೋರಿ, ದೃಷ್ಟವ ಕಾಣದೆ ಹೊತ್ತುಹೋರಿದೆನಯ್ಯಾ.
ತಿರುಗುವ ಮೃಗವ ಎಚ್ಚಂತೆ, ಎನೆಗದು ಕುರುಹಾಯಿತ್ತು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೩ ||

೯೯೫

ತಟ್ಟು ಕುಂಚ ಕಮಂಡಲಂಗಳೆಂಬ ಲೋಚು ಮುಟ್ಟಿಯ ಹಿಡಿದು,
ಭೂತಕಾಯವಾಗಿ ತಿರುಗುವ ಆತನನರಿಯದ ಬೌದ್ಧಕಾರಿಗಳು ಕೇಳಿರೊ.
ಜಾಗ್ರಸ್ವಪ್ನಸುಷುಪ್ತಿಯಲ್ಲಿ ತಟ್ಟುಗೆಡೆಯದ ತಟ್ಟಲ್ಲದೆ ಹಾಸಿಕೆಯಲ್ಲ.
ಮನ ಬುದ್ಧಿ ಚಿತ್ತ ಅಹಂಕಾರ ಎಂಬಿವು ಕೂಡಿ,
ಸುಚಿತ್ತವೆಂಬರಿವು ಹಿಂಗದ ಕೋಲಿನಲ್ಲಿ ಕಟ್ಟಿ,
ಮೂರಂಗವ ತೊಡೆವುದು ಕುಂಚ.
ಹುಟ್ಟುವ ಅಂಡ, ಜನಿಸುವ ಯೋನಿ,
ಮರಣದ ಮರವೆಯೆಂಬೀ ಗುಣವ ಅರಿತು,

ಕೀಳುವುದು ಮಂಡೆಯ ಲೋಚು.
ಹಿಂಗರಿತು ಕರಿಗೊಂಡು, ಭವವಿರೋಧವಂ ಗೆದ್ದು,
ಅಘನಾಶನನ ಅಂಗದ ಮೇಲೆ ಇಂಬಿಟ್ಟು,
ಹೆರೆಹಿಂಗದ ಸಂಗವೆ ತಾನಾಗಿ,
ಆತ ಮಂಗಳಮಯ ಗುರುಮೂರ್ತಿ,
ಎನ್ನಂಗದ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೪ ||

೯೯೬

ತರ್ಕವ ನುಡಿವುದಕ್ಕೆ ಪರಸಮಯಿಯಲ್ಲ.
ಕೃತ್ರಿಮ ನುಡಿವುದಕ್ಕೆ ಅಕೃತ್ಯನಲ್ಲ.
ಮತ್ತೆ ಇವರ ನಿಂದಿಸುವುದಕ್ಕೆ ಬಂಧ ಮೋಕ್ಷದವನಲ್ಲ.
ಇವರುವ ಅಂದಚಂದವ ಅಂತಿಂತೆಂಬುದಕ್ಕೆ
ಉಭಯದ ಗೊಂದಳದವನಲ್ಲ.
ಎನ್ನ ಅಂದವ ಇರವ ಕೇಳಲಿಕ್ಕೆ ನಿಮ್ಮಂಗವ ಹೇಳಿದೆನೈಸೆ.
ಎನಗೆ ಎನ್ನಂಗೆ ನಿರುಪಮನ ಸಂಗ ಇನ್ನೆಂದಿಗೆ,
ಎನ್ನ ಗೂಡಿನ ಒಡೆಯ ಗುಮ್ಮಟನಾಥ ಅಗಮ್ಯೇಶ್ವರಲಿಂಗ ? || ೫ ||

೯೯೭

**ಆತ್ಮನರಿವು ಭಾವಸ್ಥಲ :**

ಹುಲ್ಲೆಯ ಕಣ್ಣಿನಲ್ಲಿ ಹುಲಿ ನಿಂದಿದ್ದುದ ಕಂಡೆ.
ಪುಲ್ಲಿನ ಮಧ್ಯದಲ್ಲಿ ಪಾವಕ ಅಲ್ಲಾಡಲಮ್ಮದೆ ಇದ್ದುದ ಕಂಡೆ.
ಎನ್ನ ಗುಡಿಯ ಗುಮ್ಮಟನಾಥನೊಡೆಯ ಅಗಮ್ಯೇಶ್ವರಲಿಂಗ,
ಅಡಿಯಿಡಲಮ್ಮದುದ ಕಂಡೆ. || ೬ ||

೯೯೮

ಬೆಕ್ಕಿನ ತಲೆಯ ಗಿಳಿ ತಿಂದಿತ್ತು.
ಕತ್ತೆ ಕುದುರೆಯ ರೂಪಾಯಿತ್ತು.
ಮತ್ಸ್ಯ ಸಮುದ್ರವ ಕುಡಿದು,
ಕೆರೆಯ ತಪ್ಪಲ ನೀರಿಗಾರದೆ ಸತ್ತಿತ್ತು ನೀರಕ್ಕದೆ.
ಈ ಬಚ್ಚಬಯಲ ಇನ್ನಾರಿಗೆ ಹೇಳುವೆ,
ಗೂಡಿನ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗ. || ೭ ||

೯೯೯

ಕಲ್ಲು ಕವಣೆಯ ನುಂಗಿ, ಇಡುವಾತನ ಹಣೆ ತಾಗಿತ್ತು.
ಹಣೆ ಹನಿತು, ಮೂರು ಸೇ[ದೆ]ಯಾಯಿತ್ತು.
ಸೇ[ದೆ]ಯಲ್ಲಿ ಆರುಮಂದಿ ಹುಟ್ಟಿ,
ಮೂವರ ಕೊಂದು, ಮೂವರು ಆಲುತ್ತೈದಾರೆ.
ಆಲುವೆಗೆ ಹೊರಗಾದ ಅನಾಮಯ ಅನುಪಮ,
ಎನ್ನ ಗುಡಿಯ ಗುಮ್ಮಟೇಶ್ವರನೊಡೆಯ ಅಗಮ್ಯೇಶ್ವರಲಿಂಗ. ॥ ೮ ॥

೧೦೦೦

**ಈ ವಚನ ಉದ್ದೇಶ ಲಕ್ಷಣ ಪರೀಕ್ಷೆ ಮೂರು ತೆರನು:**

ಆಡು [ಹ] ಲ್ಲ ತಿಂಬಲ್ಲಿ, ಕೋಡಗ ನೋಡಿ ಬಾಲವ ತಿಂದಿತ್ತು.
ಕೋಡಗದ ದಾಡೆ ಆಡುವಾಗ ಬಳ್ಳು ಮಾತಾಡಿದುದಿಲ್ಲ.
ಗೊಲ್ಲನ ಬಿಲ್ಲ ಕೊಪ್ಪ ಕಂಡು,
ಆ ಬಳ್ಳು ತನಗೆ ಇಲ್ಲಿ ಇಲ್ಲವೆಂದು, ಎಲ್ಲಿ ಅಡಗಿತ್ತೆಂದರಿಯೆ.
ಅದರ ಅಡಿವಜ್ಜೆಯ ತೋರು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವೆ. ॥ ೯ ॥

೧೦೦೧

ಹಾವಿನ ಹಲ್ಲಿನ ವಿಷದ ಕೊಳಪೆಯ ಮೂಲೆಯಲ್ಲಿ,
ಮೂರು ಕಪ್ಪೆ ಹುಟ್ಟಿದವು.
ಒಂದಕ್ಕೆ ಕಾಲಿಲ್ಲ, ಒಂದಕ್ಕೆ ಬಾಯಿಲ್ಲ, ಒಂದಕ್ಕೆ ಕಣ್ಣಿಲ್ಲ.
ಕಾಲಿಲ್ಲದ ಕಪ್ಪೆ ಮೂರುಲೋಕವ ಸುತ್ತಿತ್ತು.
ಬಾಯಿಲ್ಲದ ಕಪ್ಪೆ ಬ್ರಹ್ಮಾಂಡವ ನುಂಗಿತ್ತು.
ಕಣ್ಣಿಲ್ಲದ ಕಪ್ಪೆ ಕಂಗಾಣದವರ ಕಂಡಿತ್ತು.
ಈ ಖಂಡಮಂಡಲದ ಅಂಗವ ಬಿಡಿಸು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವೆ. ॥ ೧೦ ॥

೧೦೦೨

ಗುಂಡಿಯ ಹಳ್ಳವು ತುಳುಕಲಾಗಿ ಇಳಿಯಿತ್ತು ಮತ್ಸ್ಯ,
[ಖ]ಂಡಿ[ತ]ನ ತಂಡಕಾಗಿ.
ಕಂಡವ ಮೆಲುವರ ಬಾಯಲ್ಲಿ,
ಮೂರು [ಹೆ]ಂಡವ ಕೂಡಿ ಭಂಡಾದರು,
ಮಲತ್ರಯದ ಅಂಗದಲ್ಲಿ ಸಿಕ್ಕಿ ಘನಲಿಂಗವನರಿಯದೆ.

ಆತ್ಮನ ಅಂಗದ ಲಿಂಗದ ಸಂಗವ ತೋರು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ||೧೧||

೧೦೦೩

ಫಣಿಯ ಹೆಡೆಯ ಮೇಲೆ, ಒಂದು ಮಣಿಮಾಡದ ಮಂಟಪ.
ಒಬ್ಬರಿಗಲ್ಲದೆ ಇಬ್ಬರಿಗಿಂಬಿಲ್ಲ.
ಗಂಡಹಂಡೆರಿಬ್ಬರಿಗೆ ಇಹ ತೆರನಾವುದು ?
ತೆರಪಿಲ್ಲದುದ ಕಂಡು,
ಗಂಡನ ಮಂಡೆಯ ಮೇಲೆ ಹೆಂಡತಿ ಅಡಗಿರಲಾಗಿ,
ಬಂದಬಂದವರೆಲ್ಲರೂ ಅವಳ ಕಂಡು ಮನ ಸೋತು,
ಗಂಡನ ಕೊಂದು, ಅವಳ ಕೊಂಡು ಹೋಹಾಗ,
ಹುದುಗು ಹಿಂಗದೆ, ಇವರೆಲ್ಲರೂ ಕೊಂದಾಡಿ ಸತ್ತರು.
ಇದರ ಸಂಗವಾರಿಗೂ ಚೋದ್ಯ,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ||೧೨||

೧೦೦೪

ಕಲ್ಲು, ಹೆಂಟೆ ಹೋರಿಯಾಡಿ,
ಕಲ್ಲು ಕರಗಿ, ಹೆಂಟೆ ಉಳಿಯಿತ್ತು.
ಅಳಿದ ಕಲ್ಲಿಗೆ ಹೆಂಟೆ ಹಿಂಡಿಯ ಕೂಳನಟ್ಟು,
ಉಂಬವರಿಲ್ಲದೆ ಅಳುತ್ತಿದ್ದಿತ್ತು.
ಎನ್ನ ಗೂಡಿನ ಗುಮ್ಮಟನಾಥನಲ್ಲಿ,
ಅಗಮ್ಯೇಶ್ವರಲಿಂಗ ಸತ್ತು ಕಾಣಲರಿಯದೆ. ||೧೩||

೧೦೦೫

ಅರುಹಿರಿಯರೆಂಬವರೆಲ್ಲರು ಕೂಡಿ,
ಅರಿಯದ ಕೂಸಿನ ಕೈಯಲ್ಲಿ ಮರೆಯ ಮಾಡಿ,
ಈಸಿಕೊಂಡ ಲಿಂಗಕ್ಕೆ ಕುರುಹಾವುದು ?
ಅರಿವುದಕ್ಕೆ ತೆರಹಾವುದು ?
ಅರಿವೇ ಮರವೆಗೆ ಬೀಜ.
ಮರವೆಯ ಮನದ ಕೊನೆಯಲ್ಲಿ ಅರಿವುದೇನು ?
ಅರಿವು ತಾನೋ, ಮರವೆಯ ಮುಮ್ಮೊನೆಯೋ ?
ಇಂತೀ ಉಭಯದ ಹಿಂಚುಮುಂಚನರಿತು,
ಅಂತುಕದಲ್ಲಿ ಸಿಕ್ಕದೆ, ವಿಶ್ರಾಂತಿಯೇ ತಾನಾಗಿಪ್ಪ,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ||೧೪||

೧೦೦೬

ಬಿಗಿ[ದಾ] ಜಿನಘಟಕ್ಕೆ ಗು[ಡು]ಗಿಸಲಾಗಿ ಉಡುಗುವುದೆ ನಾದ?
ಬಯಲ ಒಡಗೂಡವುದಲ್ಲದೆ.
ಅಲ್ಲಿ ಬಿಡುಮುಡಿಯಿಲ್ಲ.
ಅದರೊಲು ಅಂಗಲಿಂಗ ಲಿಂಗಾಂಗಸಂಯೋಗ ಸನ್ಮತ.
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ॥ ೧೫ ॥

೧೦೦೭

ಕೂಟದಿಂದ ಕೂಸು ಹುಟ್ಟುವಡೆ
ಬ್ರಹ್ಮನ ಆಟಕೋಟಲೆಯೇಕೆ ?
ಸ್ಥಿತಿ ಆಟದಿಂದ ನಡೆವಡೆ
ವಿಷ್ಣುವಿನ ಭೂತಹಿತವೇಕಯ್ಯಾ ?
ಘಾತಕದಿಂದ ಕೊಲುವಡೆ
ರುದ್ರನ ಆಸುರವೇತಕ್ಕೆ ?
ಇಂತಿವೆಲ್ಲವೂ ಜಾತಿಯುಕ್ತವಲ್ಲದೆ
ತಾ ಮಾಡುವ ನೀತಿಯುಕ್ತವಲ್ಲ.
ಇದಕಿನ್ನಾವುದು ಗುಣ ?
ಭೇದಿಸಾ, ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ॥ ೧೬ ॥

೧೦೦೮

ಬುದ್ಧಿಯಿಂದ ಬದುಕಿಹೆನೆಂಬುದ ನಿರ್ಧರವೆ ?
ನಿಬದ್ಧಿಸಿ ನಿಶ್ಚಯದಿಂದ ತೊಲಗಿರೆ,
ಮತ್ತೆ ಸಕಲಸುಖಭೋಗಂಗಳು ಹೊದ್ದುವುದುಂಟೆ ?
ಇವರೊಳಗೆ ನಿಲ್ಲದು ಮನ, ಸಂಸಾರವ ಗೆಲ್ಲದು ಚಿತ್ತ.
ಕೊಠಾರವನೆಲ್ಲವ ಸುತ್ತಿ ಬಳಸಿ ಬಹೆನ್ನಕ್ಕ
ಯಾಚಕಂಗೆ ಗ್ರಾಸವಿಲ್ಲದ ವಿಧಿಯೆನಗಾಯಿತ್ತು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ॥ ೧೭ ॥

೧೦೦೯

ಎನ್ನ ಮನದ ಮರವೆ ಭಿನ್ನವಾಗದು.
ಮರೆದು ಅರಿದೆಹೆನೆಂದಡೆ
ಅರಿವಿನ ಮರವೆಯ ಮಧ್ಯದಲ್ಲಿ ಎಡೆದೆರಪಿಲ್ಲ.

ಕೋಲಿನಲ್ಲಿ ನೀರ ಹೊಯ್ವಡೆ, ಸೀಳಿ ಹೋಳಾದುದುಂಟೆ ?
ಅರಿವುದೊಂದು ಘಟ, ಮರೆವುದೊಂದು ಘಟ,
ಒಡಗೂಡುವ ಠಾವಿನ್ನೆಂತೊ ?
ಹುತ್ತದ ಬಾಯಿ ಹಲವಾದಡೆ,
ಸರ್ಪನೆಯಿದುವಲ್ಲಿ ಒಡಲೊಂದೆ ತಪ್ಪದು.
ತನ್ನ ಚಿತ್ತದ ಭೇದವಲ್ಲದೆ ವಸ್ತುವಿಗೆ ಭೇದವುಂಟೆ ?
ವಿಷ ವಿಷವ ವೇಧಿಸುವಲ್ಲಿ ಬೇರೊಂದು ಅಸುವಿನ ಕಲೆವುಂಟೆ ?
ಅಸಿಯು ಮಡುವಿನಲ್ಲಿ ಲತೆಯ ಹಾಸಿಕೆಯುಂಟೆ ?
ಇಂತೀ ಹುಸಿಗಂಜಿ, ಗೂಡಿನಲ್ಲಿ ಅಡಗಿದೆ,
ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗವೆ. || ೧೮ ||

೧೦೧೦

ಹಿಮಾಚಲದ ತಳದಲ್ಲಿ, ಮಹೀತಳದ ಮಧ್ಯದಲ್ಲಿ,
ಹುಟ್ಟಿದಳೊಬ್ಬ ರಾಕ್ಷಸಿ.
ಮುಂದೆ ಮೂವರು ಮಕ್ಕಳು,
ಹಿಂದೆ ಐವರು ಒಡಹುಟ್ಟಿದವರು.
ತಂದೆ ಎಡದಲ್ಲಿ, ತಾಯಿ ಬಲದಲ್ಲಿ,
ಬಂಧುಗಳೆಲ್ಲರು ಹಿಂದೆ ಮುಂದೆ ಸುತ್ತಿ,
ರಾಕ್ಷಸಿ ಮುಂದಳ ಹಿಂದಳ ಸುತ್ತಿಪ್ಪ ಬಂಧುಗಳ
ಒಂದೆ ಬಾರಿ ನುಂಗಿದಳು.
ಕೈಗೆ ಮೈಯವಳಲ್ಲ, ಮನಕ್ಕೆ ಸಂಶಯದವಳಲ್ಲ.
ಇವಳ ಕೊಂದಡೆ ಸಂಹಾರಕ್ಕೆ ಇಲ್ಲ.
ಇವಳಿದ್ದಡೆ ಎನ್ನ ಮನಕ್ಕೆ ಭಯಂಕರ.
ಈ ಭೀತಿಯ ಬಿಡಿಸು,
ಎನ್ನ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೧೯ ||

೧೦೧೧

ಹುಟ್ಟಿದಳೊಬ್ಬ ಮೂದೇವಿ ಜಗವ ರಕ್ಷಿಸಿಹೆನೆಂದು.
ಬಾಯಲ್ಲಿ ಬಂಧ, ಕೈಯಲ್ಲಿ ಕೂರಲಗು,
ಮಂಡೆಯಲ್ಲಿ ಕಾಲು ಹುಟ್ಟಿ,
ಮನಮಂದಿರದಲ್ಲಿ ತಿರುಗಾಡುತ್ತಿದ್ದಾಳೆ.
ಕೂಡಿಕೊಂಡೆ ಕೂಪಳಲ್ಲ, ಅಗಲುವುದಕ್ಕೆ ಹಗೆಯಲ್ಲ.

ಇಂತಿವಳ ಒಡಗೂಡುವ ಭೇದವಾವುದು ?
ಕರುಣಿಸು, ಎನ್ನೊಡೆಯ
ಗೂಡಿನ ಗುಮ್ಮಟನಾಥನ ಪ್ರಾಣಮೂರ್ತಿ ಅಗಮ್ಯೇಶ್ವರಲಿಂಗ. || ೨೦ ||

೧೦೧೨

ಕಣ್ಣು ಮೂರು, ತಲೆಯಾರು,
ಬಾಯಿಯೆಂಟು, ಭಗವೊಂಬತ್ತು.
ಆರ ಬಗೆಗೂ ಅಳವಡದ ಬಾಲೆ,
ಬಾಲನನರಸಿ ಬಳಲುತ್ತೈದಾಳೆ.
ಆ ನಾಳಕ್ಕೆ ಒಡೆಯನಿಲ್ಲದೆ,
ಬಾಲನ ಬಗೆ ಎಂತಪ್ಪದು ಎನಗೆ ಹೇಳಾ,
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ? || ೨೧ ||

೧೦೧೩

ಇಚ್ಛಾಶಕ್ತಿಯೆಂಬೆನೆ ಬ್ರಹ್ಮನ ಬಲೆಗೊಳಗು.
ಕ್ರಿಯಾಶಕ್ತಿಯೆಂಬೆನೆ ವಿಷ್ಣುವಿನ ಸಂತೋಷಕ್ಕೊಳಗು.
ಜ್ಞಾನಶಕ್ತಿಯೆಂಬೆನೆ ರುದ್ರನ ಭಾವಕ್ಕೊಳಗು.
ಇಂತೀ ಮೂರರಿಂದ ಕಂಡೆಹೆನೆಂದಡೆ ಮಾಯಾಪ್ರಪಂಚು.
ಹೆರೆಹಿಂಗಿ ನೋಡಿಹೆನೆಂದಡೆ ವಾಙ್ಮನಕ್ಕೆ ಅಗೋಚರ.
ಇದ ಭೇದಿಸಲಾರೆ.
ಎನ್ನ ಗೂಡಿನ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗ,
ಎನ್ನ ಕಾಡುವುದಕ್ಕೆ ಏಕೆ ಎಡಗಿದೆ ? || ೨೨ ||

೧೦೧೪

ಕಣ್ಣಿನಲ್ಲಿ ನೋಡುವಡೆ ತೊಗಲಿನವನಲ್ಲ.
ಕೈಯಲ್ಲಿ ಹಿಡಿವಡೆ ಮೈಯವನಲ್ಲ.
ಭಾವದಲ್ಲಿ ನೋಡುವಡೆ ಬಯಲಸ್ವರೂಪ.
ನಿನ್ನೊದಗ ಏತರಿಂದರಿವೆ ?
ಎನ್ನ ಭ್ರಾಂತಿನ ಬಲೆಗೆ ಸಿಕ್ಕಿಸಿಹೋದೆ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೨೩ ||

೧೦೧೫

ಬಾಯಲ್ಲಿ ಬಸುರು ಹುಟ್ಟಿ, ಕಿವಿ ಬೆಸನಾಯಿತ್ತು.
ಕಣ್ಣಿನಲ್ಲಿ ಮೊಲೆ ಹುಟ್ಟಿ, ನಾಸಿಕದಲ್ಲಿ ಹಾಲು ಬಂದಿತ್ತು.

ತಲೆಯ ಹಣೆಯ ಮೇಲೆ ಕುಳಿತು ಕೂಸು ಉಣ್ಣುತ್ತಿರಲಾಗಿ
ಆಕಾಶದ ಬಿಜ್ಜ ಹೊಯಿದೆತ್ತಿತ್ತು.
ಆ ಶಿಶುವನೆತ್ತಿ ಕೊಕ್ಕಿನಲ್ಲಿ ತಿವಿಯಲಾಗಿ, ತಪ್ಪದೆ ನುಂಗಿತ್ತು.
ಆ ಬಿಜ್ಜು ಹೊಟ್ಟೆಗೆಯ್ದದೆ ಅಪ್ಪ ಅವ್ವೆ ಎನ್ನುತ್ತಿದ್ದಿತ್ತು.
ಇದು ದೃಷ್ಟ, ಸೋಜಿಗ.
ಗೂಡಿನೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗ ಅಪ್ರಮಾಣು. || ೨೪ ||

೧೦೧೬

ಮಾಯೆಯ ಗೆದ್ದೆ[ಹೆ]ನೆಂದು, ಮತಿ ಮಂದಿರದಲ್ಲಿ
ಕಂದಮೂಲಾದಿಗಳ ಫಲಪರ್ಣಂಗಳಿಂದ,
ಕಾಲವ ವಂಚಿಸಿಹೆನೆಂದು ಇದ್ದುದೆ ಮಾಯಾಸಂಬಂಧ.
ಅದು ದ್ವೇಷದ ಭ್ರಾಂತಲ್ಲದೆ, ಶಾಂತಿಯ ಕಲೆಯಲ್ಲ.
ಅರಿದು ಮರೆದವ, ಕಾಷ್ಠ ಕರಿಪಯ ಸಂಗದಂತೆ,
ಆತನಿರವು, ಅಷ್ಟೆ ಭಾವ.
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ತತ್ಪ್ರಾಣಮೂರ್ತಿ. || ೨೫ ||

೧೦೧೭

ವಾಯು ಹಸಿದು ಆಪೋಶನವ ಮಾಡುವಲ್ಲಿ
ಬಡಿಸುವ ತೆರಪಿನ್ನಾವುದು ?
ಆಕಾಶ ಉರಿಗಂಜಿದಡೆ, ಸೇರುವ ನೆಳಲಿನ್ನಾವುದು ?
ಭೂಮಿ ಭಯಕಂಜಿ ಓಡಿದಡೆ, ಸೇರುವ ಠಾವಿನ್ನಾವುದು ?
ಇಂತಿವೆಲ್ಲವು ಪರಿಪೂರ್ಣ ತನ್ನಲ್ಲಿಯೆ ತೋರಿದುದು,
ತನ್ನಲ್ಲಿಯೆ ಲಯವಲ್ಲದೆ ಬೇರೆ ಭಿನ್ನಭಾವವಿಲ್ಲ.
ಈ ತೆರ ಶರಣನಿರವು.
ಆತನೇತರಲ್ಲಿದ್ದರೂ ಅಜಾತಮಯನೆಂದೆ.
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ,
ತೋರಿಯೂ ತೋರದ ನಿಲವು. || ೨೬ ||

೧೦೧೮

ಗಿರಿಯ ಗುಹೆಯಲ್ಲಿ ಒಂದು ಅರಿಬಿರಿದಿನ ಹುಲಿ.
ಹುಲ್ಲೆಯ ಭಯಕಾಗಿ ಎಲ್ಲಿಯೂ ಹೊರಡಲಮ್ಮದೆ ಅಲ್ಲಿ ಅದೆ.
ಅದ ಮೆಲ್ಲನೆ ನೋಡಿ ಬಿಲ್ಲಂಬಿನಲ್ಲಿ ಎಸೆಯೆ,
ಹುಲಿ ಹಾರಿ ಹುಲ್ಲೆಯಾಯಿತ್ತು.

ಆ ಹುಲ್ಲೆ ಬಲೆಯೊಳಗಲ್ಲ, ಬಾಣದೊಳಗಲ್ಲ, ಎಲ್ಲಿಯೂ ಸಿಕ್ಕದು.
ಇದ ಬಲ್ಲವರಾರು ?
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ,
ತಿರುಗುವ ಭರಿತನು. || ೨೭ ||

೧೦೧೯

ಬಯಲು ಬ್ರಹ್ಮಾಂಡಂಗಳಿಲ್ಲದಲ್ಲಿ,
ಯುಗಜುಗಂಗಳು ತಲೆದೋರದಲ್ಲಿ,
ಅಲ್ಲಿಂದಾಚೆ ಹುಟ್ಟಿತ್ತು.
ಕರಚರಣಾದಿ ಅವಯವಂಗಳಿಲ್ಲದ ಶಿಶು.
ಬಲಿವುದಕ್ಕೆ ಬಸಿರಿಲ್ಲ,
ಬಹುದಕ್ಕೆ ಯೋನಿಯಿಲ್ಲ, ಮಲಗುವುದಕ್ಕೆ ತೊಟ್ಟಿಲಿಲ್ಲ.
ಹಿಂದು ಮುಂದೆ ಇಲ್ಲದ, ತಂದೆ ತಾಯಿಯಿಲ್ಲದ ತಬ್ಬಲಿ.
ನಿರ್ಬುದ್ಧಿ ಶಿಶುವಿಂಗೆ ಒಸೆದು ಮಾಡಿಹೆನೆಂಬವರು
ವಸುಧೆಯೊಳಗೆ ಇದು ಹುಸಿಯೆಂದೆ.
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗದಲ್ಲಿ
ಭರಿತನಾದವಂಗಲ್ಲದಿಲ್ಲ. || ೨೮ ||

೧೦೨೦

ಆರೂ ಇಲ್ಲದ ಮನೆಯಲ್ಲಿ ಹಾದರಿಗ ಹೊಕ್ಕು,
ಹೆಂಡತಿಯಿಲ್ಲದ ಪುಂಡ ಬಂದು ಅವನಂಗವ ಹೊಯ್ಯಲಾಗಿ,
ಕಂಡರು ಗ್ರಾಮದ ಪುಂಡೆಯರೆಲ್ಲರೂ ಕೂಡಿ.
ಮಿಂಡನೊಬ್ಬನೆ ಸತ್ತ.
ಅಂಗವಿಲ್ಲದ ಕಳವು, ಹೆಂಗೂಸು ಇಲ್ಲದ ಹಾದರ,
ಈ ಊರ ಅಂಗವಲ್ಲಾ ಎಂದು, ಲಿಂಗವಂತರೆಲ್ಲರೂ ಕೂಡಿ
ಕೊಂಡಾಡುತ್ತಿದ್ದುದ ಕಂಡೆ.
ಗೂಡಿನ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗದಲ್ಲಿ,
ನಂಬಲರಿಯದ ಸಂದೇಹಿಗಳಿಗುಂಟೆ ಮಹಾಸಂಗದ ಕೂಟ ? || ೨೯ ||

೧೦೨೧

ಕೈ ಗರ್ಭವಾಗಿ ನವಮಾಸ ತುಂಬಿತ್ತು.
ಕಂಗಳಲ್ಲಿ ಬೆಸನಾಯಿತ್ತು.
ಬೆನ್ನಿನಲ್ಲಿ ಮೊಲೆ ಹುಟ್ಟಿ,

ನಡುನೆತ್ತಿಯಲ್ಲಿ ಹಾಲು ಬಂದಿತ್ತು.
ನಾಲಗೆಯಿಲ್ಲದ ಶಿಶುವಿಂಗೆ
ಹಾಲು ಎಯ್ದದೆ ಬಾಯ ಬಿಡುತ್ತಿದ್ದಿತ್ತು.
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವ
ಗರ್ಭೀಕರಿ[ಸೆನೆಂ]ದು. ||೩೦||

೧೦೨೨

ಕಾಯದ ಕೈಯಲ್ಲಿಪ್ಪುದು ರೂಪುವಿಡಿದ ಲಿಂಗ.
ಮನದ ಕೊನೆಯಲ್ಲಿಪ್ಪುದು ಸಾಕಾರವಿರಹಿತಲಿಂಗ.
ಅರಿವಿನ ಭೇದಂಗಳ ತಿಳಿದು ನೋಡಿ,
ಕಂಡೆಹೆನೆಂಬ ಸಮ್ಮತ ಸದ್ಭಾವಿಗಳು ಕೇಳಿರೊ.
ಅದು ಚಿದ್ಘನ ಚಿದಾದಿತ್ಯ ಚಿತ್ಸ್ವರೂಪ ಸದಮಲಾನಂದ
ಗೂಡಿನ ಗುಮ್ಮಟನಾಥನೊಡೆಯ ಅಗಮ್ಯೇಶ್ವರಲಿಂಗ.
ಇದಾರಿಗೂ ಅಪ್ರಮಾಣಮೂರ್ತಿ. ||೩೧||

೧೦೨೩

ಸುಜ್ಞಾನ ಅಜ್ಞಾನವೆಂಬ ಉಭಯದ ಭೇದ,
ದೀಪದ ಕುಡಿವೆಳಗಿನ ಧೂಮದ ಪರಿಯಂತೆ.
ಅರಿವು ಮರವೆ ಬೇರೆ ಎಡೆದೆರಪಿಲ್ಲದೆ ಪುದಿದು,
ಆತ್ಮನಲ್ಲಿ ಎಡೆಬಿಡುವಿಲ್ಲದಿಪ್ಪುದು,
ಹೆರೆಹಿಂಗುವ ಪರಿಯಿನ್ನೆಂತೊ ?
ಪಂಕ ಸಲಿಲದಂತೆ, ಪಾಷಾಣ ಪಾವಕನಂತೆ,
ತೈಲ ರಜ್ಜುವಿನ ಯೋಗದಂತೆ
ಹೆರೆಹಿಂಗಿಪಡೆ ಅರಿಯಬಾರದು.
ಕೂಡಿಪ್ಪಡೆ ಅರಿವಿಂಗೆ ವಿರೋಧ.
ಗೋವು ಮಾಣಿಕವ ನುಂಗಿದಂತೆ.
ಇದಾರಿಗೂ ಅಸಾಧ್ಯ, ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ
ಅವನರಿದವಂಗಲ್ಲದಿಲ್ಲ. ||೩೨||

೧೦೨೪

ಕಣ್ಣಿನೊಳಗಣ ಕಸ, ಕೈಯೊಳಗಣ [ಮ]ಳೆ,
ಬಾಯೊಳಗಣ ಬಗವಳ,
ಮನದ ಶಂಕೆ ಹರಿದಲ್ಲದೆ ಪ್ರಾಣಲಿಂಗಿಯಾಗಬಾರದು.

ಕಣ್ಣಿನ ನೋಟ, ಕೈಯ ಕುರುಹು,
ಬಾಯ ಬಯಕೆ, ಚಿತ್ತದ ವೈಕಲ್ಯ ನಷ್ಟವಾಗಿಯಲ್ಲದೆ
ವಸ್ತುನಿರ್ದೇಶವನರಿಯಬಾರದು.
ಅರಕೆ ಅರತು ಅರಿತಡೆ, ಅದೇ ವಸ್ತು,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೩೩

೧೦೨೫

ಧರೆಯ ಉದಕ ಮಾರುತನ ಸಂಗದಿಂದ,
ಆಕಾಶಕ್ಕೆ ಎಯ್ದಿ ಭುವನಕ್ಕೆ ಸೂಸುವಂತೆ,
ಆತ್ಮವಸ್ತುವಿನಲ್ಲಿ ಎಯ್ದಿ ವಸ್ತುವ ಬೆರಸುವಂತೆ,
ಇದು ನಿಶ್ಚಯವೆಂದರಿದ ಆ ಚಿತ್ತ ಇಷ್ಟಲಿಂಗವೇ ಮೂರ್ತಿ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೩೪

೧೦೨೬

ವಾರಿಯ ಶಿಲೆ ಕರಗುವುದಲ್ಲದೆ ಒಡೆದುದುಂಟೆ ಅಯ್ಯಾ ?
ಹೇಮದ ಬಣ್ಣ ಪಾವಕನ ಜ್ವಾಲೆಗಂಜುವುದೆ ?
ವಿಶಾಲ ಸಂಪದ ಕಾಲನ ಕಮ್ಮಟಕ್ಕೆ ಲೋಲವಹನೆ ?
ಇದನರಿಯದ ಬಾಲರ ಮಾತೇಕೆ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ? || ೩೫ ||

೧೦೨೭

ಸ್ವಪ್ನವ ಕಂಡು ಎಚ್ಚರಿವುದು ಅರಿವೋ, ಮರವೆಯೋ ?
ಅರಿತಡೆ ದಿಟವಾಗಬೇಕು, ಮರೆತಡೆ ತೋರದಿರಬೇಕು.
ಉದಕದ ವಾಸನೆಯಂತೆ ಸ್ಥೂಲದ ಸ್ವಪ್ನ.
ಇದ ಒಡಗೂಡಿ ತಿಳಿ, ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೩೬ ||

೧೦೨೮

ಅಮ್ಮಿಕಲ್ಲಿನಲ್ಲಿ ಅಮಲವ ಅರೆದಡೆ ಹತ್ತುವುದೆ ಬಂಧ ?
ನಿರ್ಮಲಚಿತ್ತದಲ್ಲಿ ಪರಿಬಂಧ ಪ್ರವೇಶಿಸುವುದೆ ?
ಇದು ಸಾಕು ನಿಲ್ಲು, ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೩೭ ||

೧೦೨೯

ಹಾದಿಯ ತೋರಿದವರೆಲ್ಲರು
ಭಯಕ್ಕೆ ನಿರ್ಭಯವಂತರಾಗಬಲ್ಲರೆ ?

ವೇದ ಶಾಸ್ತ್ರ ಪುರಾಣ ಆಗಮಂಗಳ ಹೇಳುವರೆಲ್ಲರು
ವೇದಿಸಬಲ್ಲರೆ ನಿಜತತ್ವವ ?
ಹಂದಿಯ ಶೃಂಗಾರ, ಪ್ರೂಷನ ಕಠಿಣದಂದ,
ಅರಿವಿಲ್ಲದವನ ಸಂಗ, ಇಂತಿವರ ಬಿಡುಮುಡಿಯನರಿ.
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗದಲ್ಲಿ,
ಎಡೆಬಿಡುವಿಲ್ಲದೆ ಒಡಗೂಡು. || ೩೮ ||

೧೦೩೦

ಕಂಗಳ ಸೂತಕ ಹಿಂಗಿಯಲ್ಲದೆ ಭಕ್ತನಾಗಬಾರದು.
ಕಾಯದ ಸೂತಕ ಹಿಂಗಿಯಲ್ಲದೆ ಮಾಹೇಶ್ವರನಾಗಬಾರದು.
ಮನದ ಸೂತಕ ಹಿಂಗಿಯಲ್ಲದೆ ಪ್ರಸಾದಿಯಾಗಬಾರದು.
ಜ್ಞಾನದ ಸೂತಕ ಹಿಂಗಿಯಲ್ಲದೆ ಪ್ರಾಣಲಿಂಗಿಯಾಗಬಾರದು.
ತೋರಿ ಅಡಗುವ ಭ್ರಾಂತು ಹಿಂಗಿಯಲ್ಲದೆ ಶರಣನಲ್ಲ, ಐಕ್ಯನಲ್ಲ.
ಆರಡಗಿ ಮೂರರಲ್ಲಿ ಮುಗ್ಧನಾಗಿ,
ಮೀರಿ ಕಾಬುದಕ್ಕೆ ಏನೂ ಇಲ್ಲದೆ, ಅದು ತಾನೆ ಯೋಗಲಿಂಗಾಂಗ,
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗದಲ್ಲಿ
ಐಕ್ಯವಾದ ಶರಣಂಗೆ. || ೩೯ ||

೧೦೩೧

ನಾನೆಂಬುದೆ ಸಕಲ, ನೀನೆಂಬುದೆ ಪ್ರತಿರೂಪು.
ನಾ ನೀನೆಂಬುದು ಅರತುದೆ ನಿಃಕಲ.
ಕಂಡೆಹೆನೆಂಬುದಕ್ಕೆ ಸಂದೇಹ.
ಕಾಣದೆ ಏನೂ ಎನ್ನದಿದ್ದುದು ಭಾವಕ್ಕೆ ವಿರೋಧ.
ಕ್ರೀಯಿಂದ ಕಾಬಡೆ ಮಲಸಂಬಂಧಿ.
ನಿಃಕ್ರೀಯಿಂದ ಕಾಬುದಕ್ಕೆ, ಅರಿವ ಮನಕ್ಕೆ ಕುರುಹಿಲ್ಲ.
ಇಂತಿದ ಏನುವೆನ್ನದ ಲಿಂಗವೇ ಇದ್ದೇನೆಂದು ಕೊಟ್ಟೆ,
ಸಾಕಾರದ ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ? || ೪೦ ||

೧೦೩೨

ಶೈವಂಗೆ ಹರವರಿ, ನೇಮಸಂಗೆ ಊರ್ಧ್ವ
ಬೌದ್ಧಂಗೆ ವರ್ತುಳ, ಇದಿರಿಡದವಂಗೆ ಹಣೆಯಲ್ಲಿ ಇಡಲಿಲ್ಲ.
ಇಂತಿವೆಲ್ಲವೂ ದರುಶನವಾದ ಸಂಬಂಧಿಗಳು,
ಉಂಟು ಇಲ್ಲಾ ಎಂಬುದಕ್ಕೆ ಇರಿಸಿಹೋದ ಮೂವರಿಗೆ.

ಮೂರನರಿತು ಮೀರಿದವಂಗೆ ಏನೂ ತೋರಲಿಲ್ಲ.
ತೊಗಲಗುಡಿಯೊಳಗೇಕೆ ಅಡಗಿದೆ,
ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ? ॥ ೪೧ ॥

೧೦೩೩

ತೊಗಲೊಳಗಣ ನಾದ, ಮಾಂಸದೊಳಗಣ ಕ್ಷೀರ
ಮೃಗಯೋನಿ ಗಂಧ ಹೆರೆಹಿಂಗಿಯಲ್ಲದೆ ನೆರೆ ಯೋಗ್ಯವಿಲ್ಲ.
ಅರುಹಿರಿಯರೆಲ್ಲರೂ ತಿಲರಸಂದಂತೆ, ತಿಲರಸ ಬಿಂದುವಿನಂತೆ
ಬೆರಸಿ ಭಿನ್ನಭಾವವಾಗಿ ಇರಬೇಕು.
ಮಧು ಮಕ್ಷಿಕದಂತೆ ಆಗದೆ,
ಮತ್ತೆ ಅರಿದಡೆ ಮಧುಮಕ್ಷಿಕದಂತೆ ಇರಬೇಕು.
ಇಂತೀ ಉಭಯವನರಿದ ವಿರಕ್ತಂಗೆ
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗ ತಾನು ತಾನೆ. ॥ ೪೨ ॥

೧೦೩೪

ಕುಲ ಜಾತಿ ವರ್ಗದ ಶಿಶುಗಳಿಗೆ ಹಲವು ಭೇದದ ಹಾಲು.
ನಲವಿಂದ ತಮ್ಮ ತಮ್ಮ ಮೊಲೆಗಳ ಉಂಡಲ್ಲದೆ ಬೆಳವಣಿಗೆಯಿಲ್ಲ.
ಹಾಲು ದೇಹ ಹಲವಾದಡೆ, ಅಳಿವು ಉಳಿವು ಎರಡೇ ಭೇದ.
ಏನನರಿತಡೂ ಜೀವನ ನೋವನರಿಯಬೇಕು.
ನುಡಿ ನಡೆ ಎರಡಿಲ್ಲದೆ ದೃಢವಾಗಿ ಇರಬೇಕು.
ಬಿರುದು ಹಿರಿಯರೆಂದಡೆ ಬಿಡಬೇಕಲ್ಲದೆ,
ಕಡಿಯಬಹುದೆ ಅಯ್ಯಾ?
ಮಾತಿನಲ್ಲಿ ಬಲ್ಲವರಾದಡೆ, ನೀತಿಯಲ್ಲಿ ಮರೆದಡೆ
ಕೊಡನೊಡೆದ ಏತದ ಕಣೆಯಂತೆ,
ಶರೀರದ ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ॥ ೪೩ ॥

೧೦೩೫

ಭಕ್ತಿ ವಿಶ್ವಾಸ ವಿರಕ್ತಿ ಜಗದ ವೈಭವದ ದೇಹಿಗಳು ಕೇಳಿರೊ.
ಅಹಿ ಹಲ್ಲಿ ವಿಹಂಗ ಮಾರ್ಜಾಲ ಜಂಬುಕ ಕರೋತಿ ಜಾತಿ
ಉತ್ತರ ಪಿಂಗಲಿ ಲೆಕ್ಕ ಸಹದೇವ ಬೌದ್ಧ ಮತಂಗಳೆಂಬ
ನಿಮಿತ್ತವ ನೋಡಿ, ಕಾರ್ಯಸಿದ್ಧಿಯೆಂಬ ಸಾಕಾರಿಗಳಿಗೆ
ಆಚಾರ ಅರಿವು ನೀತಿಯೇಕೆ?
ಕರಸ್ಥಲದ ಜ್ಯೋತಿರ್ಮಯಲಿಂಗವಿದ್ದಂತೆ,

ಅಪರವನರಿವ ಪರಂಜ್ಯೋತಿಯ ಬೆಳಗು ಇದ್ದಂತೆ.
ಇಂತೀ ಅನ್ಯವ ನೀತಿಯೆಂದು ಕೇಳುವಾತ,
ಮಾಡುವ ಪೂಜೆ ಹಾವಿನ ಘಾತದಂತೆ.
ಆತ ನುಡಿವ ಮಾತಿನ ಬಳಕೆ,
ಸುರೆಯ ಮಡಕೆಯಲ್ಲಿ ಹೂಸಿಪ್ಪ ಶ್ವೇತದಂತೆ.
ಆತನಿರವು ಮೃತ್ತಿ[ಕೆ]ಯ ಬೊಂಬೆಯ ಜಲದ ಕುಪ್ಪಸದಂತೆ.
ಗೂಡಿನ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವೆ
ಇದಾರಿಗೂ ಚೋದ್ಯ. ||೪೪||

೧೦೩೬

ಅಮೃತದ ಗುಟಿಕೆಯ ಮರೆದು,
ಅಂಬಲಿಯನರಸುವನಂತೆ,
ಶಂಬರವೈರಿ ತನ್ನಲ್ಲಿ ಇದ್ದು,
ಕುಜಾತಿಯ ಬೆಂಬಳಿಯಲ್ಲಿ ಹೋಹವಂಗೆ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗ,
ಅವರಿಗೆ ಇಲ್ಲಾ ಎಂದೆ. ||೪೫||

೧೦೩೭

ಕಾಯಸೂತಕವಳಿದು ಜೀವದ ಭವ ಹಿಂಗಿ,
ಜ್ಞಾನಗುರು ಕೊಟ್ಟ ಭಾವದ ಲಿಂಗವಿರೆ,
ಮತ್ತೇನನು ನೋಡಲೇಕೆ ?
ಗಂಡನುಳ್ಳವಳಿಗೆ ಮತ್ತೊಬ್ಬ ಬಂದಡೆ ಚಂದವುಂಟೆ ?
ಅವರಂಗ ಹಿಮಗಾಯಿತ್ತು.
ಲಿಂಗವಿದ್ದಂತೆ ಜೀವಿಗಳ ಅಂಗವ ನೋಡಿ
ಬದುಕಿಹೆನೆಂಬ ಭಂಡರಿಗೇಕೆ ?
ಗುಡಿಯ ಗುಮ್ಮಟನಾಥನಲ್ಲಿ ಅಗಮ್ಯೇಶ್ವರಲಿಂಗ
ಅವರ ಬಲ್ಲನಾಗಿ ಒಲ್ಲ. ||೪೬||

೧೦೩೮

ಇಕ್ಷುದಂಡದ ತುದಿಯ ಸುಳಿಯಲ್ಲಿ ಹುಟ್ಟಿತೊಂದು ಗಿಳಿ.
ರಟ್ಟೆ ಮೂರು, ಕಾಲೊಂದು, ಬಾಯಿ ಎರಡಾಗಿ.
ಮುಚ್ಚಿದ ಕಣ್ಣು, ಮೂಗಿನ ಕೆಂಪು, ಮೈಯ ರಕ್ತವರ್ಣ.
ತುಪ್ಪುಳು ಕಪ್ಪು, ಕಾಲು ಹಳದಿ, ಬಾಯಿ ಬೆಳ್ಳಗೆ

ಹಾರಾಡುವ ಬಯಲರೂಪು,
ತೋರದ ಆಗರದಲ್ಲಿ ಹಾರಿಹೋಯಿತ್ತು.
ಆತ್ಮನೆಂಬ ರಾಮು, ಪಂಜರವಿಲ್ಲದೆ ಹೋಯಿತ್ತು,
ಗುಡಿಯೊಡೆಯ ಗುಮ್ಮಟನಾಥನಲ್ಲಿ ಅಗಮ್ಯೇಶ್ವರಲಿಂಗ. || ೪೭ ||

### ೧೦೩೯

ವಟವೃಕ್ಷದ ಘಟದ ಹೊಟ್ಟೆಯಲ್ಲಿ
ತತ್ತಿಯನಿಕ್ಕಿತ್ತೊಂದು ಗಿಳಿ.
ತತ್ತಿ ಮೂರು, ಆ ತತ್ತಿಗೆ ಪಕ್ಷಿ ಮೂರು.
ಕಂಡನೊಬ್ಬ ಅಂಧಕ.
ವೃಕ್ಷವ ಹತ್ತುವುದಕ್ಕೆ ಮೆಟ್ಟಿಲ್ಲ.
ಹೊಟ್ಟೆಯಲ್ಲಿ ಇಕ್ಕುವುದಕ್ಕೆ ಕೈಯಿಲ್ಲ.
ಗಿಳಿಯಾಸೆ ಬಿಡದು. ಇದಿರಾಸೆಯ ಬಿಡಿಸು,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೪೮ ||

### ೧೦೪೦

ನಾನೊಂದು ಗಿಳಿಯ ಕಂಡೆ, ಬೆಕ್ಕಿನ ಬಾಧೆ ಘನ.
ತಾ ಕೋಲಿನಲ್ಲಿದ್ದಡೆ ಶಯನಕ್ಕೆ ಆಸೆಯಿಲ್ಲ.
ಪಂಜರಕ್ಕೆ ಸಂದ ಕೂಡುವ ಸಂಗದವನಿಲ್ಲ.
ಕೊರೆಯ ಕೂಳನಿಕ್ಕುವುದಕ್ಕೆ ಅಡಿಗರಟವಿಲ್ಲ.
ಗಿಳಿಯ ಹಿಡಿದು ನಾ ಕೆಟ್ಟೆ. ಹಕ್ಕಿಯ ಹಂಬಲಿಲ್ಲ,
ಗುಡಿಯೊಡೆಯ ಗುಮ್ಮಟನಾಥ ಅಗಮ್ಯೇಶ್ವರಲಿಂಗ. || ೪೯ ||

### ೧೦೪೧

ಹಾರುವ ಹಕ್ಕಿಯ ಹಿಡಿದೆ, ಬೀಸುವ ಗಾಳಿಯ ಹಿಡಿದೆ.
ವೈಶಾಖದ ಬಿಸಿಲ ಹಿಡಿದು ಜಗವ ಹಾಸಿ ಕಟ್ಟಿದೆ.
ಒಂದು ತಾರು ಗಂಟು, ಒಂದು ಜಿಗುಳು ಗಂಟು,
ಒಂದು ಕುರುಹು ಗಂಟು.
ಮೂರರ ಮುದ್ರೆಯ ಮೀರಿ ಹಾರಿತ್ತು ಹಕ್ಕಿ.
ಬೀಸಿತ್ತು ಗಾಳಿ, ಹುಯ್ಯಿತ್ತು ಬಿಸಿಲು.
ಬಿಸಿಲ ಥಗೆ ತಾಗಿ, ವಸುಧೆಯವರೆಲ್ಲರೂ
ಬಾಯಿ ಕಿಸವುತ್ತಿದ್ದರು.

ಕಿಸುಕುಳರ ನೋಡಿ, ಶರೀರದ ಗೂಡಿನ ಒಡೆಯ
ಗುಮ್ಮಟನ ಪ್ರಾಣ, ಅಗಮ್ಯೇಶ್ವರಲಿಂಗ ಒಡಗೂಡುತ್ತಿದ್ದ. ||೫೦||

೧೦೪೨

ಕಾಲೆರಡರಲ್ಲಿ ನಿನ್ನಾಟವೆ?
ಕೈಯೆರಡರಲ್ಲಿ ನಿನ್ನ ಬಂಧವೆ?
ಮೈಯೊಂದರಲ್ಲಿ ನಿನ್ನ ಭೋಗವೆ?
ಬಾಯೊಂದರಲ್ಲಿ ನಿನ್ನ ತೃಪ್ತಿಯೆ?
ಅಯಿದರ ಗುಹೆಯೊಳಗೆ ಗುಹೇಶ್ವರನಾದೆ.
ಮೂರರ ಗೂಡಿನೊಳಗೆ ಗುಮ್ಮಟನಾದೆ.
ಆರರ ಅಂಗವ ಹರಿದು, ಅಗಮ್ಯೇಶ್ವರಲಿಂಗವಾದೆ.
ಮೀರಿ ಕಾಬುದೇನು ಹೇಳಿರಣ್ಣಾ? || ೫೧ ||

೧೦೪೩

ಗುಹೆಯೆಂದಡೂ ಅಂಗ, ಗುಮ್ಮೆಂದಡೂ ಅಂಗ.
ಈಶ್ವರನೆಂದಡೂ ತಾ, ಮಟವೆಂದಡೂ ತಾ,
ಎನಗೊಂದು ಕುರುಹಿಲ್ಲವಾಗಿ.
ಅಗಮ್ಯೇಶ್ವರಲಿಂಗವೆ ಗುಡಿಯೊಡೆಯನಾಗಿ
ಗುಮ್ಮಟಂಗೆ ಈಡಿಲ್ಲ. || ೫೨ ||

೧೦೪೪

**ಆತ್ಮ ಐಕ್ಯಸ್ಥಲ:**

ಅಷ್ಟಭೂಮಿಯ ಮಧ್ಯದಲ್ಲಿ ಹುಟ್ಟಿತೊಂದು ಬೆಟ್ಟ.
ತಳಸೂಜಿಯ ಮೊನೆಯಗಲ
ಹಣೆ ಲೆಕ್ಕಕ್ಕೆ ಬಾರದ ವಿಸ್ತೀರ್ಣ.
ಆ ವಿಸ್ತೀರ್ಣದಲ್ಲಿ ಹುಟ್ಟಿದರು ಮೂವರು ಮಕ್ಕಳು:
ಒಬ್ಬ ಹೇಮವರ್ಣ, ಒಬ್ಬ ಕಪೋತವರ್ಣ,
ಒಬ್ಬ ಶ್ವೇತ ವರ್ಣ.
ಈ ಮೂವರು ಮಕ್ಕಳ ತಾಯಿ:
ಒಬ್ಬಳಿಗೆ ಬಾಯಿಲ್ಲ, ಒಬ್ಬಳಿಗೆ ನಾಲಗೆಯಿಲ್ಲ,
ಒಬ್ಬಳಿಗೆ ಹಲ್ಲಿಲ್ಲ.
ಇಂತೀ ಮೂವರು ಕೂಡಿ ಮಾತಾಡುತ್ತಿದ್ದರು.
ಮಾತಾಡುವುದ ಕಂಡು, ಇದೇತರ ಮಾತೆಂದು

ಅಡಗಿದ ಗುಡಿಯೊಳಗೆ.
ಅಡಗಿದ, ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗ. ॥ ೫೩ ॥

೧೦೪೫

ಅರಿದು ಬಲ್ಲವನಾದಡೆ ಮುರಿ ಕಾಲ,
ಉಡುಗು ಕೈಯ, ಶಿರವ ಕಡಿ, ಬಿಡು ಮೂರ.
ಸಡಗರಿಸು ಗುಡಿಯ ಕಂಬವ, ಅರಿದು ನೋಡು.
ಅಡಗಿ ಗುಡಿಯೊಳಗೆ ಒಡಗೂಡು ಅಗಮ್ಯೇಶ್ವರಲಿಂಗವ. ॥ ೫೪ ॥

೧೦೪೬

ಉತ್ಪತ್ಯ ಗುರುವಿನಲ್ಲಿ, ಸ್ಥಿತಿ ಲಿಂಗದಲ್ಲಿ, ಲಯ ಜಂಗಮದಲ್ಲಿ.
ಮೂರನರಿತು ಮೀರಿದ ಘನ ಕೂಟ ವಸ್ತುವಿನಲ್ಲಿ.
ಇದ ಸಾರಿದೆ, ಗೂಡಿನ ಒಳಗನರಿತು ಕೂಡು,
ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವ. ॥ ೫೫ ॥

೧೦೪೭

ತತ್ ತ್ವಂ ಅಸಿಯೆಂಬ ತ್ರಿವಿಧಭೇದಂಗಳಲ್ಲಿ
ತ್ರಿವಿಧಮಯನಾಗಿ, ತ್ರಿಗುಣಾತ್ಮನಾಗಿ, ತ್ರಿಶಕ್ತಿಪತಿಯಾಗಿ
ಗತಿಯ ತೋರಿಹೆನೆಂದು ಪ್ರತಿರೂಪಾದೆ.
ಎಳ್ಳಿನೊಳಗಣ ಎಣ್ಣೆ, ಕಲ್ಲಿನೊಳಗಣ ಬೆಂಕಿ,
ಬೆಲ್ಲದೊಳಗಣ ಮಧುರ,
ಅಲ್ಲಿಯೆ ಅಡಗಿ ಮಥನದಿಂದಲ್ಲದೆ ತೋರದವೊಲು
ಅಲ್ಲಿಯೆ ಅಡಗಿದೆ ಗುಡಿಯೊಳಗೆ,
ಗುಮ್ಮಟನಾಥನ ಅಗಮ್ಯೇಶ್ವರಲಿಂಗ. ॥ ೫೬ ॥

೧೦೪೮

ಗುಡಿಯೊಡೆಯಂಗೆ ಕಂಬವೊಂದು, ಬಿಗಿಮೊಳೆಯೆಂಟು,
ಕಂಬಕ್ಕೆ ಕಟ್ಟಿದ ಆಧಾರ ದಾರವೈದು, ಗುಡಿಯ ಸಂದು ಹದಿನಾರು.
ಕೂಟದ ಸಂಪಿನ ಪಟ್ಟೆ ಇಪ್ಪತ್ತೈದು, ಒಂಬತ್ತು ಬಾಗಿಲು,
ಮುಗಿಯಿತ್ತು ಗುಡಿ.
ಗುಡಿಯ ಮೇಲೆ ಮೂರು ಕಳಸ, ಮೂರಕ್ಕೊಂದೆ ರತ್ನದ ಕುಡಿವೆಳಗು.
ಬೆಳಗಿದ ಪ್ರಜ್ವಲಿತದಿಂದ ಗುಡಿ ಒಡೆಯಿತ್ತು.
ಗುಡಿಯೊಳಗಾದವೆಲ್ಲವು ಅಲ್ಲಿಯೆ ಅಡಗಿತ್ತು.

ಕಳಸದ ಕಳೆ ಹಿಂಗಿತ್ತು, ಮಾಣಿಕದ ಬೆಳಗಿನಲ್ಲಿ.
ಆ ಬೆಳಗಡಗಿತ್ತು, ಅಗಮ್ಯೇಶ್ವರಲಿಂಗದಲ್ಲಿ ಒಡಗೂಡಿತ್ತು. || ೫೭ ||

೧೦೪೯

ನೋಡುವ ನಯನ ತೆರಪಾದಡೇನು,
ಆಡುವ ಬೊಂಬೆಯಿಲ್ಲದ ಮತ್ತೆ ?
ಗಾಡದ ಘಟ ಇದ್ದಡೇನು, ಮಾತಾಡುವ ಆತ್ಮನಿಲ್ಲದಂತೆ.
ರೂಢಿಯಲ್ಲಿ ಬೋಧಕರಿದ್ದಡೇನು,
ನಿಗಮಗೋಚರನ ವೇದಿಸಬೇಕು.
ಇದು ಬೋಧಕ ಗುರುವಿನ ಅರಿವು, ಇದು ಸಿದ್ಧ.
ಗುಡಿಯ ಗುಮ್ಮಟನಾಥನ ಒಡೆಯ
ಅಗಮ್ಯೇಶ್ವರಲಿಂಗದಲ್ಲಿ ಗುರುನಿರ್ವಾಣಸ್ಥಲ. || ೫೮ ||

೧೦೫೦

ಕೊಲುವಂಗೆ ಜೀವದ ದಯವಿಲ್ಲ.
ಪರಾಂಗನೆಯ ಬೆರಸುವಂಗೆ ಪರಮೇಶ್ವರನ ಒಲವರವಿಲ್ಲ.
ಪರರುವ ಬಂಧಿಸಿ ಬೇಡುವಂಗೆ ಧನದ ಒಲವರವಿಲ್ಲ.
ಪ್ರಾಣತ್ಯಾಗಿಗೆ ಕಾಣೆಯಾಚಿಯ ಕೇಣಸರವಿಲ್ಲ.
ಅಘಹರನ ಶರಣನಾಗಿ,
ಜಗವ ಬೋಧಿಸದೆ ಜಗಭರಿತನಾಗಿ ಇರಬೇಕು.
ಆತ ಅಘಹರಮೂರ್ತಿ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ತಾನೆ. || ೫೯ ||

೧೦೫೧

ಅಂಬುಧಿಯಲ್ಲಿ ಅಂಬಿಗ ಮನೆಯ ಮಾಡಿ,
ಕುಂಭಿನಿಯಲ್ಲಿ ಇರಲೊಲ್ಲದೆ,
ಹರುಗೋಲ ಬೆಂಬಳಿಯಲ್ಲಿ ಬದುಕಿಹೆನೆಂದು [ಹೋದಡೆ]
ಹರುಗೋಲು ತುಂಬಿ, ಮಂದಿ ಸಂದಣಿಸಿತ್ತು.
[ಗ]ಣೆಯ ಹಿಡಿದು ಒತ್ತುವುದಕ್ಕೆ ತಾವಿಲ್ಲದೆ, ಅಂಬಿಗ ಹಿಂಗಿದ.
ಹೆರೆಸಾರಿ ಹರುಗೋಲು ಅಂಬುಧಿಯಲ್ಲಿ ಮುಳುಗಿತ್ತು,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವನರಿಯದೆ. || ೬೦ ||

೧೦೫೨

ಕಣ್ಣೆಂಬ ಹರುಗೋಲದಲ್ಲಿ ಮಾರ ಅಂಬಿಗನಾಗಿ,
ಮಥನದ ಹೊಳೆಯಲ್ಲಿ ರಸವ ಕೋಲನಿಕ್ಕಿ ಒತ್ತಲಾಗಿ,

ಮಸಕಿತ್ತು ಹರುಗೋಲು.
ದೆಸೆಗೆ ಹೋಗಲಾರದು, ತಡಿಗೆ ಸಾಗದು,
ಮಡುವಿನಲ್ಲಿ ಮರಳಿತ್ತು.
ಇದಕಂಜಿ ನಡುಗಿದೆ, ಹರುಗೋಲ ಕಂಡು,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವನರಿಯದೆ. ||೬೧||

೧೦೫೩

ಬಂದವನಿವನಾರು, ಕಂಬಳಿಯ ಕಂಥೆಯ ತೊಟ್ಟು,
ಆಪ್ಯಾಯನ ಹಿಂಗದ ಕರಕರ್ಪರವ ಹಿಡಿದು,
ದೆಸೆವರಿವ ದಶದಂಡವ ಹಿಡಿದು,
ಮನೆ ಮನ ಮಂದಿರದ ಬಾಗಿಲಲ್ಲಿ ನಿಂದು,
ಇಂದ್ರಿಯಂಗಳೆಂಬ ತೃಷ್ಣೆ ಭಿಕ್ಷವಂ ಬೇಡಿ,
ಬೇಡಿದ ದನಿಯ ಕೇಳಿ ಎದ್ದವೈದು ನಾಯಿ.
ಹಮ್ಮಿ ಕಚ್ಚಿತ್ತು ಕಾಲ, ಮತ್ತೊಂದಡರಿ ಅಂಗವ ಹಿಡಿಯಿತ್ತು.
ಮತ್ತೊಂದು ಒಡಗೂಡಿ ಕೈಯ ಕಚ್ಚಿತ್ತು.
ಮತ್ತೊಂದು ಬೆರಸಿ, ನಾಸಿಕವ ಓಸರವಿಲ್ಲದೆ ಹಿಡಿಯಿತ್ತು.
ಮತ್ತೊಂದು ಭಿಕ್ಷೆಗೆ ತಪ್ಪದೆ ಬಾಯ ಹಿಡಿಯಿತ್ತು.
ಭಿಕ್ಷದಾಟ ತಪ್ಪಿತ್ತು, ಕಂಬಳಿಯಣ್ಣ ಕಂಬಳಿಯಲ್ಲಿ ಅಳಿದ.
ಇದಕಿನ್ನು ಬೆಂಬಳಿಯ ಹೇಳಾ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವೆ. ||೬೨||

೧೦೫೪

ಮರ್ಕಟನ ಲಂಘನ ವಿಹಂಗನ ದೃಷ್ಟಿ,
ಪಿಪೀಲಿಕನ ಚಿತ್ತ, ಕೂರ್ಮನ ಸ್ನೇಹ.
ಇಂತೀ ಚತುಷ್ಟಯದ ಭಾವ ನೆಲೆಗೊಂಡು,
ಅಂಗ ಮಧ್ಯದ ರಂಗಮಂಟಪದಲ್ಲಿ ನಿರಂಗನಾಗಿರು,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. ||೬೩||

೧೦೫೫

ಮಾತಿನ ಗೂಢವ ನುಡಿದಡೆ, ನೀತಿವಂತರು ಅರಿಯರು.
ಜ್ಞಾತೃಜ್ಞೇಯ ಭಾವವ ನುಡಿದಡೆ,
ಪ್ರಖ್ಯಾತ ಆಗಮಯುಕ್ತಿ ಅವರರಿಯರು.
ಇಂತಿವ ಹೇಳಿದಡೆ ಜಗದ ತೊಡಕು,

ಉಳಿದಡೆ ಚಿತ್ತಕ್ಕೆ ವಿರೋಧ.
ಇದರಚ್ಚುಗ ಬೇಡ,
ಗುಡಿಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವೆ. ||೬೪||

೧೦೫೬

ಬಲ್ಲವನ ಭಾವ ಶರೀರದ ಹಂಗನರಿಯಬೇಕು.
ಸಂಚಿತದಲ್ಲಿ ತೋರುವ ಸಂಕಲ್ಪ,
ಆಗಾಮಿಯಲ್ಲಿ ತೋರುವ ಸುಖಭೋಗ,
ಪ್ರಾರಬ್ಧದಲ್ಲಿ ತೋರುವ ಅಸುರ ಕರ್ಮ ಪ್ರಾಪ್ತಿ.
ಇಂತಿವ ನೇತಿಗಳೆದು ನಿರ್ಲೇಪನಾಗಿರು.
ಯೋಗ ಭೋಗ ತ್ಯಾಗ ಇಂತೀ ತ್ರಿಗುಣದಲ್ಲಿ
ಲೇಪವಾಗದೆ ಅರಿ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವ. ||೬೫||

೧೦೫೭

ಶಿಲೆಯೊಳಗಣ ಭೇದದಿಂದ ಬಲವರವಾಯಿತ್ತು.
ಹಲವು ಕಡಹಿನಲ್ಲಿ ತೆಪ್ಪವನಿಕ್ಕಿದಡೆ,
ಹೊಳೆ ಒಂದೆ, ಹಾದಿಯ ಹೊಲಬು ಬೇರಲ್ಲದೆ,
ಧರೆ ಸಲಿಲ ಪಾವಕ ಇವು ಬೇರೆ ದೇವರ ಬಲವರವುಂಟೆ ?
ಧರೆ ಎಲ್ಲರಿಗೂ ಆಧಾರ, ಸಲಿಲ ಎಲ್ಲಕ್ಕೂ ಆಪ್ಯಾಯನ ಭೇದ,
ಪಾವಕ ಸರ್ವಮಯರಿಗೆ ದಗ್ಧ.
ಸರ್ವಮಯ ಪೂಜಿತ ದೈವದ ಆಧಾರ, ನೀನಲ್ಲದೆ ಬೇರೆಯಿಲ್ಲ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವೆ. ||೬೬||

೧೦೫೮

ಇದಿರು ನೋಡುವುದಕ್ಕೆ ತೊಲಗು ಸಾಯೆಂಬ ಮಾತಲ್ಲದೆ,
ಸಿಂದಲ್ಲಿ ಅಂಬರವ ನೋಡುವುದಕ್ಕೆ ಕೊಂಡಾಡಲೇತಕ್ಕೆ ?
ಪಾದದಿಂದ ಹೋರಿ ಕಾಬುದು,
ವೇದಾಂತಿಯ ವಾಗ್ವಾದದ ಗೆಲ್ಲ ಸೋಲವಲ್ಲದೆ,
ವಸ್ತುವ ಭೇದಿಸಲರಿಯ, ಅರಿದುದಕ್ಕೆ ಒಡಲು.
ಅವರಡಿಯ ಅರಿವ ಮತ್ತೆ,
ಏನೂ ಎನ್ನದಿಪ್ಪುದೆ ವೇದಸಿದ್ಧಾಂತ.
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವನರಿವುದಕ್ಕೆ
ಇದೇ ಪ್ರಮಾಣು. ||೬೭||

೧೦೫೯

ಪ್ರಾಣ ತುಡುಕಿಗೆ ಬಂದಲ್ಲಿ,
ಕೊರಳ ಹಿಡಿದು ಅವುಕಿ ಕೊಂದರೆಂಬ ಅಪಕೀರ್ತಿಯೇಕೆ ?
ಬೀಳುವ ಪಾದುಕವ ತಳ್ಳಿ ಘನವ ಹೊರಲೇಕೆ ?
ಬೇವ ಮನೆಗೆ ಕೊಳ್ಳಿಯ ಹಾಕಿ ದುರ್ಜನವ ಹೊರುವನಂತೆ,
ಅರಿಯದವನ ಅರಿಯರೆಂದು ಬಿರುದು ಮಾಡುವನ ಅರಿವು,
ಹರಿ[ದ] ಹರುಗೋಲವನೇರಿದಂತೆ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗಾ. || ೬೮ ||

೧೦೬೦

ನೋಡುವಲ್ಲಿ ನೆರೆ ಶೃಂಗಾರವಲ್ಲದೆ, ಕೂಡುವಲ್ಲಿ ಉಂಟೆ ?
ನುಡಿವಲ್ಲಿ ಮಾತಿನ ಬಲುಮೆಯಲ್ಲದೆ,
ಸಂಸಾರವ ಸಾಧನವ ಮಾಡುವಲ್ಲಿ ಮುಟ್ಟದಿಪ್ಪುದುಂಟೆ ?
ನಡೆ ನುಡಿ ಸಿದ್ಧಾಂತವಾದ ಶರಣಂಗೆ ಪಡಿಪುಚ್ಚವಿಲ್ಲ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗದಲ್ಲಿ
ಐಕ್ಯವಾದ ಶರಣಂಗೆ. || ೬೯ ||

೧೦೬೧

ಆಲೆಯ ಮನೆಯಲ್ಲಿ ಅಕ್ಕಿಯ ಹೊಯಿದು,
ಕೋಣೆಯಲ್ಲಿ ಕೂಳನರಸುವನಂತೆ,
ತನ್ನ ಮಾತಿನ ಗೆಲ್ಲ ಸೋಲಕ್ಕೆ
ದೇವತಾಭಾವವ ಅಲ್ಲ ಅಹುದೆಂದು ಹೋರುವನ ಸೊಲ್ಲು,
ಕಾಲುವಳ್ಳವ ಮುಚ್ಚಿದ ಮತ್ಸ್ಯದಂತೆ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗ. || ೭೦ ||

೧೦೬೨

ಮದನನ ಚಾಪ, ಮನ್ಮಥನ ಗಂಧ, ಚದುರರ ಮಾತು,
ಸಂಪಲಿಯಗನ್ನ, ಇರಿಯದ ವೀರ,
ವಸ್ತುವಿನಲ್ಲಿ ಕರಿಗೊಳ್ಳದವನ ವಾಚ,
ಅಜನ ಕೊರಳ ಸೂತೆಯಂತೆ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗ. || ೭೧ ||

೧೦೬೩

ತಟಾಕ ಒಡೆವಡೆ ಪ್ರತಿಶಬ್ದವಲ್ಲದೆ ಗತಿಭಿನ್ನವುಂಟೆ ?
ಅಂಬುಧಿಗೆ ಅದು ತುಂಬಿದ ಸಂಪದ,
ಅದರಂಗದ ಇರವು, ಲಿಂಗಾಂಗಿಯ ಭಾವದ ಸಂಗ.
ಕಂಡುದ ಕಂಡು ಕಾಳ್ಗೆಡೆವ ಲಿಂಗಿಗಳಿಗುಂಟೆ,
ಗುಡಿಯೊಡೆಯ ಗುಮ್ಮಟನಾಥನ
ಅಗಮ್ಯೇಶ್ವರಲಿಂಗದ ಸಂಗದ ಸುಖವು ? || ೭೨ ||

೧೦೬೪

ಪದವನರಿಯದ ವಾಚಕ, ಘಾತಕನ ಇರವು
ಪುಸಿ ಧನುವಿನಲ್ಲಿ ಸಿಕ್ಕಿದ ಮಿಸುಕಿದ ಕಣೆಯಂತೆ,
ಹುಸಿದವನ ಒಡಲಿನ ಪ್ರತಿಮೂದಲೆಯಂತೆ.
ಇಂತೀ ಅರಿವಿನ ಒಳಗನರಿಯದ ಜೂಜಿನ ಹುದುಗಿಂಗೆ ಬಂದು,
ಸುರಿಗಾಯ ಸುರಿವವನ ವಿಧಿಯಂತೆ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೭೩ ||

೧೦೬೫

ಘಟದಲ್ಲಿ ಆತ್ಮ ದಿಟಕರಿಸುವುದಿಲ್ಲವೆಂದು ಅರಿದ ಮತ್ತೆ,
ಕುಟಿಲದ ರಸವಾದದ ಮಾತಿನ ಮಾಲೆಯೇಕೆ ?
ಆಗುಚೇಗೆಯನರಿದು ಬೋಧಿಸಲೇಕೆ, ಭೋಗಂಗಳಿಗಾಗಿ ?
ಇದು ಮರುತನ ಇದಿರಿನ ದೀಪ,
ಸುರಚಾಪದ ಬಣ್ಣ, ಶರೀರದ ಅಳಿವು.
ಸಾಕಾರದಲ್ಲಿ ಇದ್ದು, ನಿರಾಕಾರವನರಿ,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವ. || ೭೪ ||

೧೦೬೬

ಹೇಮದ ಬಣ್ಣ, ನಾನಾ ಬಗೆಯಲ್ಲಿ ತೋರುವ
ಪರಿಕೂಟದ ಕಪಟದಿಂದ,
ಕಪಟವ ಕಳೆದು ನಿಂದಲ್ಲಿ, ಅದೇತರ ಗುಣ ?
ಒಂದಲ್ಲದೆ ಈ ಪಥ ತಪ್ಪದು,
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗದಲ್ಲಿ
ಅಂಗವ ಕಳೆದು ಉಳಿದ ಶರಣಂಗೆ. || ೭೫ ||

೧೦೬೭

ಅರಿದೆಹೆನೆಂದು ಭಾವಿಸುವನ್ನಕ್ಕ,
ಶರೀರವಳಿದ ಮತ್ತೆ, ಅರಿವುದೇನು ?
ಸಕಲಭೋಗಂಗಳಲ್ಲಿ ಇದ್ದು ಬೆರಸಿ,
ಮಗ್ನವಾಗದೆ ಗೇರಿನ ಫಲದಂತೆ ಇರು.
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವನರಿವುದಕ್ಕೆ. ||೭೬||

೧೦೬೮

ಸಂಸಾರದಲ್ಲಿ ತೋರುವ ಸುಖದುಃಖಭೋಗಾದಿಭೋಗಂಗಳು
ಇವಾರಿಂದಾದವೆಂದು ಅರಿದ ಮತ್ತೆ, ಬಾಗಿಲ ಕಾಯ್ದು ಕೂಗಿಡಲೇಕೆ ?
ಎಲೆ ಅಲ್ಲಾಡದು, ಅವನಾಧೀನವಲ್ಲದಿಲ್ಲಾ ಎಂದು
ಎಲ್ಲರಿಗೆ ಹೇಳುತ ಭವಬಡಲೇಕೆ ?
ಹೋಯಿತ್ತು ಬಾಗಿಲಿಗೆ ಬಂದಾಗ ಭಾವಜ್ಞಾನ.
ಭಾವ ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗದಲ್ಲಿ
ಅರಿದು, ಹರಿದು ಬದುಕಿರಣ್ಣಾ. ||೭೭||

೧೦೬೯

ರೂಪ ಕಂಡಲ್ಲಿ ಇಷ್ಟಕ್ಕೆ, ರುಚಿಯ ಕಂಡಲ್ಲಿ ಪ್ರಾಣಕ್ಕೆ,
ಉಭಯವ ಹೆರೆಹಿಂಗಿ, ಅರ್ಪಿತವನರಿವ ಪರಿಯಿನ್ನೆಂತೊ ?
ಕುಸುಮ ಗಂಧದ ಇರವು, ಫಳರಸದಿರವು ಇಷ್ಟಪ್ರಾಣ.
ಇಷ್ಟವನರಿತಡೆ ಅರ್ಪಿತ ಅವಧಾನಿ.
ಗುಡಿಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗದಲ್ಲಿ
ಅರ್ಪಿತ ಅವಧಾನಿ[ಯ] ಇರವು. ||೭೮||

೧೦೭೦

ಬೀಜವ ಮೀರಿದ ವೃಕ್ಷವುಂಟೆ ಅಯ್ಯಾ ?
ಶಿರ ಹೊರಗಾದ ಚಕ್ಷುವುಂಟೆ ಅಯ್ಯಾ ?
ಕಾಯ ಹೊರಗಾದ ಭೋಗವುಂಟೆ ಅಯ್ಯಾ ?
ಇಷ್ಟ ಹೊರಗಾದ ಅರ್ಪಿತ ಅದೆತ್ತಣ ಬಾಯಿ ?
ಕಷ್ಟದ ಮಾತು ದೃಷ್ಟವಲ್ಲ, ಗುಡಿಯ ಗುಮ್ಮಟನಾಥನ
ಅಗಮ್ಯೇಶ್ವರಲಿಂಗವ ಅರಿತವರ ಅರಿವಲ್ಲ. ||೭೯||

೧೦೭೧

ಭಕ್ತನಾದಲ್ಲಿ ಭಕ್ತಿಸ್ಥಲ ಅಳವಟ್ಟು.
ಮಾಹೇಶ್ವರನಾದಲ್ಲಿ ಆ ಸ್ಥಲ ಅಳವಟ್ಟು.

ಪ್ರಸಾದಿಯಾದಲ್ಲಿ ಆ ಸ್ಥಲ ಅಳವಟ್ಟು.
ಪ್ರಾಣಲಿಂಗಿಯಾದಲ್ಲಿ ಆ ಸ್ಥಲ ಅಳವಟ್ಟು.
ಶರಣನಾದಲ್ಲಿ ಆ ಸ್ಥಲ ಅಳವಟ್ಟು.
ಐಕ್ಯನಾದಲ್ಲಿ ಆ ಸ್ಥಲ ಅಳವಟ್ಟು.
ಆರು ಲೇಪವಾಗಿ, ಮೂರು ಮುಗ್ಧವಾಗಿ,
ಒಂದೆಂಬುದಕ್ಕೆ ಸಂದಿಲ್ಲದೆ,
ಲಿಂಗವೆ ಅಂಗವಾಗಿಪ್ಪ ಶರಣನ ಇರವು,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ
ತಾನು ತಾನಾದ ಶರಣ. ‖ ೮೦ ‖

೧೦೬೨

ಬ್ರಹ್ಮಂಗೆ ಇಚ್ಛಾಶಕ್ತಿಯಾಗಿದ್ದಲ್ಲಿ,
ವಿಷ್ಣುವಿಂಗೆ ಕ್ರಿಯಾಶಕ್ತಿಯಾಗಿದ್ದಲ್ಲಿ,
ರುದ್ರಂಗೆ ಜ್ಞಾನಶಕ್ತಿಯಾಗಿದ್ದಲ್ಲಿ,
ಇಂತಿವರು ದಂಪತಿ ಸಹಜವಾಗಿ
ಯುಗಜುಗಂಗಳ ಜೋಗೈಸುತ್ತಿದ್ದರು.
ಬ್ರಹ್ಮಂಗೆ ಸರಸ್ವತಿಯೆಂದಾರು !
ವಿಷ್ಣುವಿಗೆ ಲಕ್ಷ್ಮೀದೇವಿಯೆಂದಾರು !
ರುದ್ರಂಗೆ ಉಮಾದೇವಿಯೆಂದಾರು !
ಬ್ರಹ್ಮ ಅಂಗವಾಗಿ, ವಿಷ್ಣು ಪ್ರಾಣವಾಗಿ,
ರುದ್ರ ಉಭಯಜ್ಞಾನವಾಗಿ,
ಅಂದು ತಾಳಿದ ಸಾಕಾರದ ಗುಡಿಯ ಐಕ್ಯನಾದ ಕಾರಣ,
ಗುಮ್ಮಟನೆಂಬ ನಾಮವ ತಾಳಿ, ಅಗಮ್ಯೇಶ್ವರಲಿಂಗ ಗುಹೇಶ್ವರನಾದ. ‖ ೮೧ ‖

೧೦೬೩

ತನುವಿನೊಳಗಣ ತನು, ಮನದೊಳಗಣ ಮನ,
ಜ್ಞಾನದೊಳಗಣ ಜ್ಞಾನ, ಕಾಣುವ ಕಂಗಳಿಂಗೆ
ಮತ್ತಮಾ ಕಣ್ಣು ತೆಗೆದು ನೋಡಲಾಗಿ,
ಬ್ರಹ್ಮ ಹರುಗೋಲವಾದ, ವಿಷ್ಣು ಸಟ್ಟುಗವಾದ,
ರುದ್ರ ಅಂಬಿಗನಾಗಿ ಒತ್ತಿದ.
ಹರುಗೋಲ ಸಿಕ್ಕಿತ್ತು,
ಮಾತಂಗವೆಂಬ ಪರ್ವತದ ತಪ್ಪಲಿನ ಸಿಕ್ಕುಗಲ್ಲಿನಲ್ಲಿ.

ಹರುಗೋಲು ಕೊಳೆತಿತ್ತು, ಹುಟ್ಟು ಮುರಿಯಿತ್ತು,
ಅಂಬಿಗ ಎತ್ತಹೋದನೆಂದರಿಯೆ.
ಎನಗಾ ಬಟ್ಟೆಯ ಹೇಳಾ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೮೨ ||

೧೦೭೪

ಒಂದು ಚಿಪ್ಪಿನಲ್ಲಿ, ಮೂರು ಮುತ್ತು ಹುಟ್ಟಿದವು :
ಒಂದು ಕಟ್ಟಾಣಿ, ಒಂದು ಸುಪ್ಪಾಣಿ,
ಒಂದು ಮಣಿ ಉದಕವಿಲ್ಲದ ಸೂತೆ.
ಬಿದ್ದ ಉದಕ ಒಂದೆ, ತಾಳಿದ ಚಿಪ್ಪು ಒಂದೆ.
ಚಿಪ್ಪಿನ ಹೊರೆಯೋ, ಉದಕವ ತೆರೆಯೋ, ಮುತ್ತಿನ ಗುಣವೋ ?
ಇವರ ಲಕ್ಷಣದ ಭೇದವೋ ಇದು ?
ಚಿತ್ತದ ಜ್ಞಾನ, ಕರ್ತುವೆ ಹೇಳಾ,
ಗುಡಿಯ ಗುಹೆಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೮೩ ||

೧೦೭೫

ಕಾಡುಗುರಿ [ತಾ]ನೆಯಾಗಿ ಬಂದು,
ಊರೊಳಗೆ ಮೂರು ಮರಿಯನೀಯಿತ್ತು.
ಅವರ ವರ್ಣ ಒಂದೆಡ, ಒಂದು ಕಾಡ,
ಒಂದು ಎಲ್ಲರ ಕೂಡಿದ ಬಣ್ಣ
ಹೆಂಗುರಿ ಸತ್ತಿತ್ತು, ಮರಿಗೆ ಒಡೆಯರಿಲ್ಲ.
ಆ ಮರಿಯ ಕಾವಡೆ,
ಕಾಲಿಲ್ಲದೆ ಕೈಯಿಲ್ಲದೆ ಕಣ್ಣಿಲ್ಲದೆ ಕಾಯಬೇಕು.
ಆ ಮರಿ ಅರಿದು ನಮಗೆ ಇನ್ನಾರು ಇಲ್ಲಾ ಎಂದು
ಎಡಕಾಡನೊಳಗಡಗಿ, ಕಾಡ ನಾನಾ ವರ್ಣದೊಳಗಡಗಿ,
ನಾಡು ನಾದದೊಳಗಡಗಿ, ನಾನಾ ವರ್ಣ ನಾಡಿನೊಳಗಡಗಿ,
ನಾದ ಸುನಾದದಲ್ಲಿ ಅಡಗಿ, ಸುನಾದ ಸುರಾಳವಾಗಿ ಇದ್ದಲ್ಲಿ,
ಗುಡಿಯ ಗುಹೆಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ,
ನೀ ನಿರಾಳವಾಗಿ ಇದ್ದೆ. || ೮೪ ||

೧೦೭೬

ಒಂದು ಉಪ್ಪರಿಗೆಯ ಮಂದಿರದಲ್ಲಿ,
ಉಭಯದ ಮಧ್ಯದ ಬಾಗಿಲಲ್ಲಿ,

ಕಟ್ಟಿದ್ದಿತ್ತೊಂದು ಬಲುಗೋಡಗಕ್ಕೆ
ಬಾಯ ಅಣಲಿನ ಸಂಚದ ಕೂಳು.
ಉಡಿಯೊಳಗಣ ಬೆಂಬೆಯ ಹಂಬು,
ಹಂಬಿನೊಳಗಣ ಬಹುಧಾನ್ಯದ ತೆನೆ,
ನೆಟ್ಟ ಗಳೆ ಮೂರು, ತಿಪ್ಪಣದ ಮಣೆ ಒಂದು,
ಮಣೆಯಲ್ಲಿ ಕುಳಿತು ಅಣಲ ಸಂಚವ ತಿಂದಿತ್ತು.
ಒಂದು ಮಣೆಯಲ್ಲಿ ಕುಳಿತು ಉಡಿಯ ತೆನೆಯ ತಿಂದಿತ್ತು.
ಮತ್ತೊಂದು ಮಣೆಗೆ ಹೋಗಿ,
ಕುಳಿತು ಹಾರೈಸಿ ದೆಸೆಯ ಕಾಣದೆ ನೆಗೆಯಲಾಗಿ,
ಗಣೆ ದಸಿ ತಾಗಿ, ಕೋಡಗನ ಅಸು ಹೋಯಿತ್ತು,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗವನರಿದೆ. ||೮೫||

೧೦೭೭

ತೃಷ್ಣೆ ಹಿಂಗಿದ ಲಿಂಗಾಂಗಿಯ ಅಂಗದ ಇರವು.
ಬಸುರಿಯ ಗರ್ಭದಲ್ಲಿ ತೋರುವ ಶಿಶುವಿನ ದೆಸೆಯ ಇರವು.
ಅನ್ನರಸಕೆ ಭಿನ್ನವಾಗಿ ಬಾಯಿಯಿಲ್ಲದೆ,
ತಾಯ ಪಥ್ಯದಲ್ಲಿ ಆತ್ಮಂಗೆ ಸುಖವಾಗಿ ಇಪ್ಪುದು.
ಘಟಮಟ ಭಿನ್ನವಹನ್ನಕ್ಕ ಸುಖದುಃಖ.
ಶಿಶುವ ತಾಳಿದ್ದ ಆ ತೆರ, ಲಿಂಗದ ಎಸಕವನರಿವವೊಲು,
ಇಷ್ಟಪ್ರಾಣ ಹೆರೆಹಿಂಗದ ಮೂರ್ತಿ ಧ್ಯಾನ ನೆಲೆಗೊಂಡು,
ಕಂಗಳು ಗರ್ಭ, ಮನ ಶಿಶುವಾಗಿ, ಲಿಂಗವೆಂಬ ಅಂಗದ ತೊಟ್ಟಿಲಲ್ಲಿ
ವಿಶ್ವಾಸ ಘನಲಿಂಗ ಇಂಬಿಟ್ಟು ಕಂಡೆ,
ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗದಲ್ಲಿ. ||೮೬||

೧೦೭೮

ಹಾವು ಹಲ್ಲಿ ಮಾರ್ಜಾಲ ಇವ ಹಾಯಿಸಿ
ಕಂಡೆಹೆನೆಂಬುದರಿಂದ ಕಡೆಯೆ,
ಲಿಂಗವ ಹಿಡಿದಿದ್ದ ಸಾಕಾರ ಅಂಗನ ಇರವು ?
ಮುಂದೆ ಬಹುದ ಹೇಳಿಹೆನೆಂದು ವಿಹಂಗನನೆಬ್ಬಿಸಿ,
ಹೋಹರ ಕಂಡು ನಂಬುವರಿಂದ ಕಡೆಯೆ,
ಲಿಂಗವ ಹಿಡಿದ ಅಂಗ ?
ಛೀ, ಸಾಕು ಸುಡು.
ಇವರಿಗೆ ಲಿಂಗ ಕೊಟ್ಟ ದರುಶನ[ವ],

ಭಂಡನ ಕಂಡು ಅಡಗಿದ ಗುಡಿಯೊಳಗೆ,
ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೮೭ ||

೧೦೭೯

ಅರಿದವನ ವಿಶ್ವಾಸ, ತೊರೆಯ ಗುಂಡಿಗೆಯಿಂದ ಕಡೆಯೆ ?
ಪಿಸಿತದ ಕುಕ್ಕೆಯ ಮೆಚ್ಚಿ, ವಿಷವ ಪೊಯ್ದುದರಿಂದ ಕಡೆಯೆ,
ಒಸೆದು ಕೊಟ್ಟ ಲಿಂಗ ?
ವಿಷರುಹನ ಜನಕನ ಪಿತ ಮೊದಲಾದ
ಮನುಮುನಿದೇವಜಾತಿ ವರ್ಗಂಗಳೆಲ್ಲ
ಶ್ರದ್ಧೆಯಿಂದ ಸದಾತ್ಮನನರಿದು,
ಸದಮಲ ಸುಧೆಯಲ್ಲಿ ಸುಖಿಯಾದರೆಂಬುದ ಕಂಡು ಕೇಳಿ,
ನಂಬುಗೆಯಿಲ್ಲದೆ ಕೊಡುವನ ಮರವೆಯೋ, ಕೊಂಬುವನ ಪ್ರಕೃತಿಯೋ ?
ಇದರ ಸಂದೇಹವ ಹೇಳು, ಗುಡಿಯ ಗುಹೆಯೊಳಗೆ ಅಡಗಬೇಡ,
ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ. || ೮೮ ||

೧೦೮೦

ಕಾಲನ ಗೆದ್ದೆಹೆನೆಂದು ಮಾಡಿ ಬೇಡದ ನಿತ್ಯಾರ್ಚನೆ.
ಘಟಲಿಂಗಕ್ಕೆ ಹೊತ್ತಿನ ಗೊತ್ತಿನ ಕಟ್ಟುಂಟೆ ?
ಕತ್ತಲೆಯ ಮನೆಯಲ್ಲಿ ಕುಳಿತು ಸಕ್ಕರೆಯ ಮೆದ್ದಡೆ,
ಕತ್ತಲೆಗೆ ಅಂಜಿ ಮೆತ್ತನಾಯಿತ್ತೆ ಸಕ್ಕರೆಯ ಮಧುರ ?
ಚಿತ್ತದ ಪ್ರಕೃತಿ ಹಿಂಗಿ,
ನಿಶ್ಚಯ ನಿಜ ನೆಮ್ಮುಗೆಯಲ್ಲಿ ಮಾಡುವಡೆ,
ಚಿತ್ತದಲ್ಲಿ ಅಚ್ಚೊತ್ತಿದಂತೆಯಿಪ್ಪ ಹೊತ್ತಿನ ಗಡಿಯವನಲ್ಲ.
ಚಿತ್ತಜಹರ ಗುಡಿಯೊಡೆಯ ಗುಮ್ಮಟನ
ಅಗಮ್ಯೇಶ್ವರಲಿಂಗ ಕಟ್ಟುಗೊತ್ತಿನೊಳಗಲ್ಲ. || ೮೯ ||

೧೦೮೧

ರಸ ಉಂಬಲ್ಲಿ, ಗಂಧ ವಾಸಿಸುವಲ್ಲಿ,
ರೂಪು ನಿರೀಕ್ಷಣೆಯಲ್ಲಿ, ಶಬ್ದ ಗೋಚರದಲ್ಲಿ,
ಸ್ಪರ್ಶ ತ್ವಕ್ಕಿನಲ್ಲಿ, ಪಂಚಪುಟ ಭೇದಂಗಳಲ್ಲಿ,
ಅಷ್ಟಗುಣ ಮದಂಗಳ ಪಟ್ಟಣದ,
ಷೋಡಶದ ರೂಢಿಯ ಷಟ್ಚಕ್ರದ ಆಧಾರದ,
ಪಂಚವಿಂಶತಿಯ ನಿಳೆಯದ ಸಂಚಾರದ,

ನವಕವಾಟದ, ತ್ರಿಶಕ್ತಿ ಸಂಪದದ,
ತ್ರಿಗುಣಾತ್ಮನ ತ್ರಿಗುಣ ಓಹರಿಯಲ್ಲಿ ಬಳಸಿಪ್ಪ
ಬಂಧದಲ್ಲಿ ಮಗ್ನವಾಗದೆ,
ಜಾಗ್ರ [ಸ್ವಪ್ನ] ಸುಷುಪ್ತಿ ತ್ರಿವಿಧ ಘಟಪಟಲ
ತತ್ವನಿರಸನ ನಿರ್ವಿಕಾರನಾಗಿ,
ಇಂತಿವರಲ್ಲಿ ಅವಧಾನವಾಗಿ ಮುಳುಗದೆ,
ನೀರನಿರಿದ ಕೈದಿನಂತೆ ಕಲೆದೋರದೆ,
ಆವ ಸುಖಂಗಳಲ್ಲಿ ಅಭಿನ್ನವಾಗಿ,
ಜಲದೊಳಗಣ ಶಿಲೆ, ಶಿಲೆಯೊಳಗಣ ವಹ್ನಿ
ಸುಳುಹುದೋರದ ತೆರ,
ಮಥನಕ್ಕೆ ಕಂಡು, ಕಾಣದಡಗಿಪ್ಪ ತೆರ,
ಲಿಂಗಾಂಗಿಯ ಇರವು.
ಇದು ಸಿದ್ಧವಾಗಬೇಕು, ಶರೀರದ ಗುಡಿಯೊಡೆಯ
ಗುಮ್ಮಟನಾಥನ ಅಗಮ್ಯೇಶ್ವರಲಿಂಗವನರಿವುದಕ್ಕೆ.
ಇದೇ ಅಂಜನಸಿದ್ಧಿ. ||೯೦||

### ೧೦೮೨

ಕರಣಂಗಳ ಕಳೆದು ಕಂಡೆಹೆನೆಂದಡೆ,
ಕುರುಹಿಂಗೆ ಅಗೋಚರ.
ಇಂದ್ರಿಯಂಗಳಿದ್ದು ಕಂಡೆಹೆನೆಂದಡೆ,
ಅವು ಕೊಂದು, ತೂಗುವದ ಅರಿ.
ಹಿಂಗಬಾರದು, ಹಿಂಗದಿರಬಾರದು.
ಇದರ ಸಂಗಸುಖವ ಹೇಳು,
ಗುಡಿಯ ಗುಮ್ಮಟನಾಥನ ಒಡೆಯ ಅಗಮ್ಯೇಶ್ವರಲಿಂಗ. ||೯೧||

### ೧೦೮೩

ಕಣ್ಣಿನಲ್ಲಿ ಕಂಡೆಹೆನೆಂದಡೆ, ಕಣ್ಣು ಎನ್ನವಲ್ಲ.
ಕೈಯಲ್ಲಿ ಮುಟ್ಟಿಹೆನೆಂದಡೆ, ಕೈಯೆನ್ನವಲ್ಲ.
ಮನದಲ್ಲಿ ನೆನೆದೆಹೆನೆಂದಡೆ, ಮನ ಎನ್ನದಲ್ಲ.
ನಾ ನಡೆವಡೆ ಸ್ವತಂತ್ರಿಯಲ್ಲ.
ಎನಗೆ ಅರಿಕೆಯಾದಡೆ ನಿನ್ನ ಇದಿರಿಡಲೇಕೆ ?
ಇದಿರಿಂಗೆ ಕುರುಹು, ಮನಕ್ಕೆ ಅರುವು,
ಉಭಯದ ತೆರ ನೀನೆ.

ಗೂಡಿನ ಗುಹೆಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ,
ಒಳಹೊರಗಿನಲ್ಲಿ ಪರಿಪೂರ್ಣ ನೀನು ನೀನೆ. ||೯೨||

೧೦೮೪

ಮಾಣಿಕದ ಮಣಿ, ಉರಿಯ ಬೆಳಗಲ್ಲದೆ ಸುಡುವುದಿಲ್ಲ.
ಉದಕದ ಮಡು, ಮುಳುಗಲ್ಲದೆ ಕೊಲುವುದಿಲ್ಲ.
ನಿನ್ನನರಿದಲ್ಲದೆ ನೀನವರನರಿಯೆನೆಂಬ ನೇಮವೆ ?
ಅಯಃಕಾಂತದ ಶಿಲೆ ಲೋಹದಂತೆ ಉಭಯಗುಣಸಂಪನ್ನ ನೀನೆ.
ಅಂದಿಗೆ ಅನಿಮಿಷನ ಕೈಯಲ್ಲಿ,
ಇಂದಿಗೆ ಪ್ರಭುವಿನ ಗುಹೆಯಲ್ಲಿ ಗುಹೇಶ್ವರನಾದೆ.
ಎನ್ನ ಗುಡಿಗೆ ಬಂದು ಗುಮ್ಮಟಂಗೆ ಮಠಸ್ಥನಾದೆ.
ಅಗಮ್ಯೇಶ್ವರಲಿಂಗವೆ, ನನಗೂ ನಿನಗೂ ಕೊಳುವಿಡಿಯೇಕೆ ?
ಕೊಂಡು ಹೋಗು, ಶಿವಶಿವಾ ಸಮರ್ಪಣ. ||೯೩||

೧೦೮೫

ಆತುರ ಹಿಂಗದವಂಗೆ ವೇಶೆಯ ಪೋಷಿಸಲೇಕೆ ?
ಈಶ್ವರನನರಿಯದವಂಗೆ ಸುಕೃತದ ಪೂಜೆಯ ಪುಣ್ಯವದೇಕೆ ?
ಹೇಳಿ ಹೊಕ್ಕು ಹೋದ ಮತ್ತೆ ವೇಷದ ಒಲವರವೇಕೆ ?
ಭವವಿರೋಧಿಯ ಭಾವದಲ್ಲಿ ನೆಲಸಿದ ಮತ್ತೆ,
ಇದಿರಿಂಗೆ ಸಂಪದಪದವೇಕೆ ?
ಒಡಗೂಡಿದಲ್ಲಿ ಅಂಗದ ತೊಡಕೇಕೆ ?
ಬಿಡು, ಶುಕ್ಲದ ಗುಡಿಯ ಸುಡು.
ಗುಮ್ಮಟನೆಂಬ ನಾಮವ ಅಡಗು,
ಅಗಮ್ಯೇಶ್ವರಲಿಂಗದಲ್ಲಿ ಗುಪ್ತನಾಗಿ, ಒಡಗೂಡಿ ಲೇಪಾಂಗವಾಗಿರು. ||೯೪||

೧೦೮೬

**ಪಿಂಡಜ್ಞಾನ ಸಂಬಂಧದ ಇರವು:**

ಪೃಥ್ವಿಯಿಂದಾದ ರೂಪು, ಅಪ್ಪುವಿನಿಂದಾದ ಘಟ್ಟಿ,
ತೇಜದಿಂದಾದ ರಜಸ್ಸು, ವಾಯುವಿನಿಂದಾದ ಸರ್ವಾತ್ಮ,
ಆಕಾಶದಿಂದಾದ ನಿರವಯ.
ಇಂತೀ ಪಂಚಭೂತಿಕದಿಂದಾದ ಆತ್ಮನಿಪ್ಪ ಪಿಂಡ[ಸ್ಥಲದಲ್ಲಿ ನಿಂದು],
ಸ್ಥೂಲ ಸೂಕ್ಷ್ಮದಿಂದರಿದು, ಕಾರಣದಿಂದ ಕಂಡು,
ಇಂತೀ ತ್ರಿವಿಧ, ಆತ್ಮನ ಆಧಾರ ಆವುದೆಂದರಿದು,

ಬ್ರಹ್ಮನ ಸೃಷ್ಟಿ, ವಿಷ್ಣುವಿನ ಶಾಂತಿ, ರುದ್ರನ ಘಟಿತ,
ಇವ ಮೂರ ಹೊದ್ದದೆಯಿಪ್ಪುದು ಪಿಂಡಜ್ಞಾನಲೇಪ, ಅಂಗದ ನಿರಸನ.
ಗುರುವಿನ ಕರಕಮಲದಲ್ಲಿ ಮನದ ನಿರಸನ.
ಲಿಂಗದ ಯೋಗದಲ್ಲಿ ಸರ್ವೇಂದ್ರಿಯ ನಿರಸನ.
ಶರಣರ ಸಂಸರ್ಗದಲ್ಲಿ ಇಂತಿವನರಿತು,
ಮನಬಂದಂತೆ ನಡೆಯದೆ, ವಿಕಾರವೆಂದಂತೆ ಪ್ರಕೃತಿಗೆ ಒಳಗಾಗದೆ,
ಮಧುರದಂಡದೊಳಗೆ ಅಡಗಿದ ಸುಧೆಯ ತೆಗೆದು,
ಸದೆಯ ಕಳೆವಂತೆ,
ಕಳೆದು ಉಳಿಯಬೇಕು, ಪಿಂಡಪ್ರಾಣಲಿಂಗಯೋಗವ.
ಇಂತಿವು ಅರಿವವರ[ರುಹು], ಕರಿಗೊಂಡವನ ತೆರ[ನರಿಕೆಯೆ] ತಾ
ಗುಡಿಯೊಡೆಯ ಗುಮ್ಮಟನಾಥನ
ಅಗಮ್ಯೇಶ್ವರಲಿಂಗವ ಅವಗವಿಸಿದ ಸದಮಲಾಂಗನ ಇರವು. ||೯೫||

೧೦೮೭

ಅರಿದು ಮರೆಯಲಿಲ್ಲ, ಕುಕ್ಕುರಜ್ಞಾನವಾಗಿ.
ಇದಿರ ಕಂಡು ತಾ ಕಾಣದಂತೆ ಇರಲಿಲ್ಲ,
ಗತಿಜಿಹ್ವೆಯ ಚತುಃಪಾದಿಯಂತೆ.
ಕಾಲವನರಿತು, ಆ ಕಾಲದಲ್ಲಿ ಹೋಹ ಕಾಲಜ್ಞಾನಿಯಂತೆ,
ಕೂಗಿ ಕರೆದು, ಕೂಲಿಸಿಕೊಂಬ ಶತಬುದ್ಧಿಪತಿ ಶಿವನಂತೆ,
ಮಾಡಿದ ಅಸಿ ಕಾರುಕನೆಂದಡೆ, ಹೊಯಿದಡೆ,
ಅಸುವಿನ ನಿಸಿತವ ಕೊಳದೆ ?
ತನ್ಮಯವಾದಡೆ, ಮರೆದಡೆ, ಎಳೆಯದೆ ಬಿಡದು, ನಿನ್ನ ಮಾಯೆ.
ಆರಿ ನಂದದ ದೀಪದಂತೆ, ರವೆಗುಂದದ ಬೆಳಗಿನಂತೆ,
ಹೊರಹೊಮ್ಮದ ದಿನಕರನಂತೆ,
ಮಧುಳುತು ಅರತ ಮಧುಕರನಂತೆ,
ವಾಯು ಅಡಗಿದ ವಾರಿಧಿಯಂತೆ,
ಅಸು ಅಡಗಿದ ಘಟಚಿಹ್ನದಂತೆ,
ದಿಟಕರಿಸು, ಗುಡಿಯ ಗುಮ್ಮಟನಾಥನ
ಅಗಮ್ಯೇಶ್ವರಲಿಂಗದಲ್ಲಿ ಪರಿಪೂರಿತವಾಗಿರು. ||೯೬||

೧೦೮೮

ಕಾಯವಿಡಿದು ಸೋಂಕಿಮುದೆಲ್ಲ, ಪ್ರಕೃತಿಗೆ ಒಳಗು.
ಜೀವವಿಡಿದು ಸೋಂಕಿಮುದೆಲ್ಲ, ಭವಕ್ಕೊಳಗು.

ಕಾಯದ ಅಳಿವನರಿತು, ಜೀವದ ಉಳಿವನರಿತು,
ಉಭಯದ ಠಾವನರಿತು,
ಕಾಯದ ಜೀವದ ಭಿನ್ನದ ಬೆಸುಗೆಯ ಠಾವನರಿತು,
ಕೂಡಬಲ್ಲಡೆ ಯೋಗ.
ಅದು ಲಿಂಗದ ಭಾವಸಂಗ, ಇದನರಿ.
ಗುಡಿಯೊಡೆಯ ಗುಮ್ಮಟನಾಥನಲ್ಲಿ
ಅಗಮ್ಯೇಶ್ವರಲಿಂಗವ ಹೆರೆಹಿಂಗದಿರು. ||೯೭||

೧೦೮೯

ನೋಡುವ ಮುಕುರ ತಾನಾಡಿದಂತೆ.
ಕೂಡಿದ ಸಂಗ, ಪುನರಪಿ ತುರೀಯಕ್ಕೆ ಏರದಂತೆ,
ಹಂದೆ, ಕಲಿಯಲ್ಲಿ ನೊಂದು, ಚೌಭಟ ಅಂಗಕ್ಕೆ ಹೋರದಂತೆ,
ಕರಣಂಗಳಲ್ಲಿ ಹಿಂಡಿ ಹಿಳಿದು ಹಿಪ್ಪೆಯಾಗಿ ನೊಂದು,
ಲಿಂಗದ ಸಂಗಕ್ಕೆ ಹಿಂಗಲಾರೆ.
ಗುಡಿಯೊಡೆಯ ಗುಮ್ಮಟನಾಥನ ಅಗಮ್ಯೇಶ್ವರಲಿಂಗವ
ಒಡಗೂಡುವ ಠಾವ ಹೇಳಾ. ||೯೮||

೧೦೯೦

ಪಂಚಭೂತಿಕದೊಳಗಾದ ಭೂತಭವಿಷ್ಯದ್ವರ್ತಮಾನ
ಯುಗಜುಗಂಗಳ ಪ್ರಮಾಣು.
ಮೂವರ ಮೊದಲಿಲ್ಲದಲ್ಲಿ, ಅಂಧರ ನಿರಂಧರ
ಮಹಾ ಅಂಧಕಾರ ಸಂದಲ್ಲಿ,
ನಿಮ್ಮ ಬೆಂಬಳಿಯನರಿದವರಾರು ?
ಮನುವಿಂಗೆ ಮನು, ಘನಕ್ಕೆ ಘನ,
ಬೆಳಗಿಂಗೆ ಬೆಳಗು, ಅವಿರಳಕ್ಕೆ ಅವಿರಳನಾಗಿ,
ನಾಮಕ್ಕೆ ನಿರ್ನಾಮನಾಗಿ,
ಅನಲ ಅನಿಲ ರವಿ ಶಶಿ ಕುಂಭ ಕುಂಭಿನಿ ನಭಯೋದ್ಯಮಾನ,
ಅಘೋರಂಧರ ಅಕ್ಷಮಾಯ, ಕುಕ್ಷಿ ಕಕ್ಷ ಮಾಯ,
ಮಹಿ ಪ್ರತ್ಯಂತರ, ವಿಸರ್ಜನ ನಿಷಿತ, ಭಸಿತೋನ್ಮಯ ಪುಂಜ.
ಸಕಲೇಂದ್ರಿಯ ದೈಹ್ಯ, ಭಕ್ತಕೃಪಾವಲ್ಲಭ
ಹೃತ್ಕಮಲನಿವಾಸಪರಿಪೂರಿತ ಗುಡಿಯ ಗುಮ್ಮಟನೊಡೆಯ
ಅಗಮ್ಯೇಶ್ವರಲಿಂಗ, ಕೂಡು ಕೂಟಸ್ಥನಾಗಿರು. ||೯೯||

■ ■

## ಮರುಳಶಂಕರದೇವರ ವಚನ

೧೯೧

ಅಂಗದಲಳವಟ್ಟ ಸುಖವು ಲಿಂಗದಲ್ಲಿ ಲೀಯವಾಗಿ,
ಲಿಂಗದಲ್ಲಿ ಲೀಯವಾದ ಸುಖವು ಮಹಾಲಿಂಗದಲ್ಲಿ ಲೀಯವಾಗಿ
ಮಹಾಲಿಂಗದಲ್ಲಿ ಲೀಯವಾದ ಸುಖವು ಜ್ಞಾನಮುಖದಲ್ಲಿ ಲೀಯವಾಗಿ,
ಜ್ಞಾನಮುಖದಲ್ಲಿ ಲೀಯವಾದ ಸುಖವು ಮಹಾಜ್ಞಾನದಲ್ಲಿ ಲೀಯವಾಗಿ,
ಮಹಾಜ್ಞಾನದಲ್ಲಿ ಲೀಯವಾದ ಸುಖವು ಸರ್ವಾಂಗಮುಖದಲ್ಲಿ ಲೀಯವಾಗಿ,
ಸರ್ವಾಂಗ[ಮುಖ]ದಲ್ಲಿ ಲೀಯವಾದ ಸುಖವು ಸಮರಸಸಂಗದಲ್ಲಿ ಲೀಯವಾಗಿ,
ಸಮರಸಸಂಗದಲ್ಲಿ ಲೀಯವಾದ ಸುಖವು ಐಕ್ಯಸ್ಥಲದಲ್ಲಿ ಲೀಯವಾಗಿ,
ಐಕ್ಯಸ್ಥಲದಲ್ಲಿ ಲೀಯವಾದ ಸುಖವು ನಿರಾಕಾರದಲ್ಲಿ ಲೀಯವಾಗಿ,
ನಿರಾಕಾರದಲ್ಲಿ ಲೀಯವಾದ ಸುಖವು ನಿಶ್ಶಬ್ದದಲ್ಲಿ ಲೀಯವಾಗಿ,
ನಿಶ್ಶಬ್ದದಲ್ಲಿ ಲೀಯವಾದ ಸುಖವು ನಿರಂಜನದಲ್ಲಿ ಲೀಯವಾಗಿ,
ನಿರಂಜನದಲ್ಲಿ ಲೀಯವಾದ ಸುಖವು ಪರಬ್ರಹ್ಮದಲ್ಲಿ ಲೀಯವಾಗಿ,
ಪರಬ್ರಹ್ಮದಲ್ಲಿ ಲೀಯವಾದ ಸುಖವ ಅಹಂ ಬ್ರಹ್ಮದಲ್ಲಿ,
ಲೀಯವ ಮಾಡಿದರು ನಮ್ಮ ಶರಣರು.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತ ಚೆನ್ನಮಲ್ಲಿಕಾರ್ಜುನದೇವಯ್ಯನಲ್ಲಿ
ಜನನಮರಣವಿರಹಿತ ನಿಜತತ್ವ ನಿಸ್ಪೃಹ ನಿಃಕಳಂಕ

ಮಹಾಶರಣನಲ್ಲದೆ ಮತ್ತೆ ಉಳಿದ ಭೂಲೋಕದ
ಭೂಭಾರ ಜೀವಿಗಳಿಗೆ ಅಳವಡುವುದೆ ಮಹಾಲಿಂಗೈಕ್ಯವು ?
ಇಂತಪ್ಪ ಮಹಾಲಿಂಗೈಕ್ಯನ ನಿಲವ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧||

೧೧೯೨

ಅಯ್ಯಾ, ಅಷ್ಟತನುಮೂರ್ತಿಗಳಿಲ್ಲದಲ್ಲಿಂದತ್ತತ್ತ
ಅನಿರ್ವಾಚ್ಯವಾಗಿರ್ದಿರಯ್ಯ.
ಅಯ್ಯಾ, ನಿಮ್ಮ ವಿನೋದದಿಂದ ನೀವೇ
ವಾಚಾಸ್ವರೂಪದಿಂದ ಜಂಗಮವಾದಿರಿ ದೇವಾ.
ನಿಮ್ಮ ಮಹಾತ್ಮೆಯ ನೀವೆ ಬಲ್ಲಿರಿ.
ನಿಮ್ಮ ಮುಖವೈದರಿಂದ ಉದಯಿಸಿದ
ಪಂಚಭೂತಾದಿ ಸಕಲತತ್ವಂಗಳೇ ಪದಾರ್ಥವೆಂದು ನಿಮಗರ್ಪಿಸಲು,
ಪಂಚಾಕ್ಷರಿ ಪ್ರಾಣಾತ್ಮಕನಾಗಿ ಬಂದಾತ ಬಸವಣ್ಣ.
ಪಾದತೀರ್ಥದಲ್ಲಿ ಬೆಳಸ ಬಿತ್ತಿ, ಕ್ರೀಯಿಂದಾದ ಬೆಳೆಸಿರಿವಂತನಾಗಿ
ಗುರುವಿಂಗಿತ್ತ, ಲಿಂಗಕಿತ್ತ, ಮತ್ತಾ ಜಂಗಮಕಿತ್ತ ಬಸವಣ್ಣ.
ಬಸವಣ್ಣನಿಂತಹ ಶ್ರೀಮಂತನೆಂದರಿದು,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನಯ್ಯಾ
ನಿಮ್ಮ ಶರಣ ಬಸವಣ್ಣಕೊಂಡಿರ್ದೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ. ||೨||

೧೧೯೩

ಆಯತದಲ್ಲಿ ಅಂಗಭೋಗಿಯಾಗಿರಬೇಕು.
ಸ್ವಾಯತದಲ್ಲಿ ಸನ್ನಹಿತನಾಗಿರಬೇಕು.
ಸನ್ನಹಿತದಲ್ಲಿ ಸದಾಚಾರಿಯಾಗಿರಬೇಕು.
ಇಂತೀ ತ್ರಿವಿಧದಲ್ಲಿ ಏಕವಾಗಿರಬಲ್ಲಡೆ,
ಅದು ವರ್ಮ, ಅದು ಸಂಬಂಧ, ಅದು ನಿಯತಾಚಾರವೆಂದೆಂಬೆನು.
ಅದಲ್ಲದೆ ಲಿಂಗವ ಮರೆದು, ಅಂಗ[ವ]ಭೋಗಿಸಿ,
ಅಂಗಸಂಗದಲ್ಲಿರ್ದು, ಅಂಗವೆ ಪ್ರಾಣವಾಗಿಹರಿಗೆಲ್ಲರಿಗೆಯೂ
ಲಿಂಗದ ಶುದ್ಧಿ ನಿಮಗೇಕೆ ಕೇಳಿರಣ್ಣಾ.
ಲಿಂಗವಂತನು ಅಂಗಸೂತಕಿಯಲ್ಲ.
ಅಲಗಿನ ಕೊನೆಯ ಮೊನೆಯ ಮೇಲಣ ಸಿಂಹಾಸನದ ಮೇಲೆ
ಲಿಂಗದ ಪ್ರಾಣವ ತನ್ನಲ್ಲಿ ಕೂಡಿಕೊಂಡು,

ತನ್ನ ಪ್ರಾಣವ ಲಿಂಗದಲ್ಲಿ ಕೂಡಿಕೊಂಡು,
ಏಕಪ್ರಾಣವ ಮಾಡಿಕೊಂಡಿಪ್ಪ ಶರಣನ ಜ್ಯೋತಿರ್ಮಯನೆಂಬೆನು,
ಜಗದ ಕರ್ತನೆಂಬೆನು, ಜಗದಾರಾಧ್ಯನೆಂದೆಂಬೆನು ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ಸಂಗಿಯ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ,
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೩||

೧೧೯೪

ಇಷ್ಟಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು.
ಪ್ರಾಣಲಿಂಗಕ್ಕೆ ಮನವನರ್ಪಿತವ ಮಾಡಬೇಕು.
ಭಾವಲಿಂಗಕ್ಕೆ ತೃಪ್ತಿಯನರ್ಪಿತವ ಮಾಡಬೇಕು.
ಈ ವರ್ಮವನರಿತು ಅರ್ಪಿತವ ಮಾಡಬಲ್ಲಡೆ ಪ್ರಸಾದಿಯೆಂಬೆ.
ಅದೆಂತೆಂದಡೆ:
ಇಷ್ಟಲಿಂಗಾರ್ಪಿತಂ ತ್ವಂಗಂ ಪ್ರಾಣಲಿಂಗಾರ್ಪಿತಂ ಮನಃ
ಭಾವಲಿಂಗಾರ್ಪಿತಾ ತೃಪ್ತಿ ರಿತಿಭೇದಂ ವರಾನನೇ ||
ಎಂದುದಾಗಿ, ಲಿಂಗಕ್ಕೆಯೂ ತನಗೆಯೂ ಎಡೆದೆರಹಿಲ್ಲ.
ಇದು ಕಾರಣ, ಲಿಂಗ ಸಹಿತವಾಗಿಯೆ ಕೇಳುವ,
ಲಿಂಗಸಹಿತವಾಗಿಯೆ ಘ್ರಾಣಿಸುವ, ಲಿಂಗಸಹಿತವಾಗಿಯೆ ರುಚಿಸುವ,
ಲಿಂಗಸಹಿತವಾಗಿಯೇ೭ ನೋಡುವ, ಲಿಂಗಸಹಿತವಾಗಿಯೆ ಸಂಗ ಮಾಡುವ,
ಲಿಂಗಸಹಿತವಾಗಿಯೆ ತೊಳಗುವ,
ಇಂತಪ್ಪ ಮಹಾಮಹಿಮ ಸದ್ಭಕ್ತನ
ಅಂಗವೆಲ್ಲವೂ ಲಿಂಗ, ಸಂಗಮವೆಲ್ಲವೂ ಲಿಂಗ,
ಅಂಗ ಸಂಗಮವೆಲ್ಲವೂ ಲಿಂಗಸಂಗಗಳಾದ ಕಾರಣ,
ಅಂಗಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳಾದ ಕಾರಣ,
ಅಂಗಭೋಗವೆಲ್ಲವೂ ಲಿಂಗಭೋಗವಾದ ಕಾರಣ,
ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀಚರಣಕ್ಕೆ
ಎನ್ನ ಶಿರವನಿರಿಸಿ ಪೂಜಿಸುವೆ ಕಾಣಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಸದ್ಭಕ್ತನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೪||

೧೧೯೫

ಇಷ್ಟಲಿಂಗಕ್ಕೊಂದು ಕಷ್ಟ ಬಂದಿತ್ತೆಂದು ಮುಟ್ಟಲಾಗದು.
ಇನ್ನು ಕೆಟ್ಟೆನೆಂಬ ಪಾಪಿಗಳು ನೀವು ಕೇಳಿರೆ.
ಇಷ್ಟಲಿಂಗ, ಪ್ರಾಣಲಿಂಗದ ಆದಿ ಅಂತುವನಾರುಬಲ್ಲರು ?
ಹೃದಯಕಮಲ ಭ್ರೂಮಧ್ಯದಲ್ಲಿ[ಯ] ಸ್ವಯಂಜ್ಯೋತಿಯ ಪ್ರಕಾಶ[ನು]
ಆದಿ ಮಧ್ಯಸ್ಥಾನದಲ್ಲಿ ಚಿನ್ಮಯ ಚಿದ್ರೂಪನಾಗಿಹ.
ಇಂತಪ್ಪ ಮಹಾಘನವ ಬಲ್ಲ ಶರಣನ ಪರಿ ಬೇರೆ.
ಇಷ್ಟಲಿಂಗ ಹೋದ ಬಟ್ಟೆಯ ಹೊಗಲಾಗದು.
ಈ ಕಷ್ಟದ ನುಡಿಯ ಕೇಳಲಾಗದು.
ಕೆಟ್ಟಿತ್ತು ಜ್ಯೋತಿಯ ಬೆಳಗು, ಅಟ್ಟಾಟಿಕೆಯಲ್ಲಿ ಅರಿವುದೇನೊ ?
ಆಲಿ ನುಂಗಿದ ನೋಟದಂತೆ, ಪುಷ್ಪ ನುಂಗಿದ ಪರಿಮಳದಂತೆ,
ಜಲ ನುಂಗಿದ ಮುತ್ತಿನಂತೆ, ಅಪ್ಪುವಿನೊಳಗಿಪ್ಪ ಉಪ್ಪಿನಂತೆ,
ಬೀಜದೊಳಗಿಪ್ಪ ವೃಕ್ಷದಂತೆ, ಶಬ್ದದೊಳಗಿನ ನಿಃಶಬ್ದದಂತೆ,
ಬಯಲ ನುಂಗಿದ ಬ್ರಹ್ಮಾಂಡದಂತೆ, ಉರಿವುಂಡ ಕರ್ಪುರದಂತೆ.
ಇಂತಪ್ಪ ಮಹಾಘನ ತೇಜೋಮೂರ್ತಿಯ ನಿಲವ ಬಲ್ಲ
ಮಹಾಶರಣನ ಮನೆಯ ಎತ್ತು ತೊತ್ತು ಮುಕ್ಕಳಿಸಿ
ಉಗುಳುವ ಪಡುಗ, ಮೆಟ್ಟುವ ಚಮ್ಮಾವುಗೆಯಾಗಿ ಬದುಕಿದೆನಯ್ಯಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಲಿಂಗವಂತನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೫ ||

೧೧೯೬

ಇಷ್ಟಲಿಂಗಾರ್ಪಿತಂ ಪ್ರಾಣಂ ತೃಪ್ತಿಲಿಂಗಾರ್ಪಿತಾ ಭವೇತ್
ಅಂಗಾಂಕಿತ ಲಿಂಗಾಂಗಿನಾಂ ತ್ರಿವಿಧಂ ಲಿಂಗಮುಚ್ಯತೇ ||
ಇಂತೆಂದುದಾಗಿ,
ಲಿಂಗಕ್ಕೂ ತನಗೂ ಎಡೆದೆರಹಿಲ್ಲದಿಪ್ಪ,
ಲಿಂಗಸಹಿತವಾಗಿಯೆ ಕೇಳುವ,
ಲಿಂಗಸಹಿತವಾಗಿಯೆ ನೋಡುವ,
ಲಿಂಗಸಹಿತವಾಗಿಯೆ ರುಚಿಸುವ,
ಲಿಂಗಸಹಿತವಾಗಿಯೆ ಸಂಗವ ಮಾಡುವ,
ಲಿಂಗಸಹಿತವಾಗಿಯೆ ಅಳಲುವ,

ಲಿಂಗಸಹಿತವಾಗಿಯೆ ಬಳಲುವ,
ಲಿಂಗಸಹಿತವಾಗಿಯೆ ತೊಳಲುವ.
ಇಂತಪ್ಪ ಮಹಾಮಹಿಮ ಲಿಂಗವಂತನ
ಅಂಗಕ್ರಿಯೆಗಳಲ್ಲಿ ಲಿಂಗಕ್ರಿಯೆಗಳಾದವು.
ಅಂಗಸಂಗವೆಲ್ಲ ಲಿಂಗಸಂಗವಾದವು. .
ಅಂಗಭೋಗವೆಲ್ಲ ಲಿಂಗಭೋಗವಾದವು.
ಇಂತಪ್ಪ ಮಹಾಮಹಿಮ ಲಿಂಗವಂತನ ಚರಣಕ್ಕೆ
ಎನ್ನ ಶಿರವನರಿದು ಪೂಜಿಸುವೆ ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ಲಿಂಗವಂತನ ನಿಲವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೬||

೧೦೯೭

ಎನಗೆ ಹರಿಯಿತ್ತು ತಮವೆಂಬ ಸಂಸಾರದ ಬಂಧನ.
ಅಡಗಿಯೂ ಉಡುಗಿಯೂ ಕಂಡೆಹೆನೆಂದೆಂಬ ಸಂಶಯ.
ಸಂಕಲ್ಪ ಸಂದೇಹ ಭ್ರಾಂತು ಭ್ರಮೆಯ ಭಾವಕ್ಕೆ ಬಯಲಾಯಿತ್ತು.
ನಿತ್ಯನಿರಂಜನ ಪರಂಜ್ಯೋತಿ ಪ್ರಕಾಶವೆನಗೆ ತಲೆದೋರಿತ್ತು.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನ ದೇವಯ್ಯಾ,
ಕಾಣಬಂದಿತ್ತು ಕಾಣಾ, ಪ್ರಭುದೇವರ ಕಾರುಣ್ಯ ಪ್ರಸಾದದಿಂದ ಬಸವಣ್ಣಾ. ||೭||

೧೦೯೮

ಎನ್ನ ಜ್ಞಾನಾತ್ಮನ ಚೇತನನಯ್ಯ ಪ್ರಭುದೇವರು.
ಎನ್ನ ಪರಮಾತ್ಮನ ಚೇತನನಯ್ಯ ಸಿದ್ಧರಾಮೇಶ್ವರದೇವರು.
ಎನ್ನ ಚಿನ್ಮಯಾತ್ಮನ ಚೇತನನಯ್ಯ ಬಸವಣ್ಣನು.
ಎನ್ನ ನಿರ್ಮಲಾತ್ಮನ ಚೇತನನಯ್ಯ ಷಟ್ಸ್ಥಲಬ್ರಹ್ಮಿ ಚೆನ್ನಬಸವಣ್ಣನು.
ಎನ್ನ ಮಹಾತ್ಮನ ಚೇತನನಯ್ಯ
ಸಂಗನಬಸವಣ್ಣನ ನಿಜಸುಖಿ ಅಪ್ಪಣ್ಣನು.
ಎನ್ನ ಜೀವಾತ್ಮನ ಚೇತನನಯ್ಯ ಮಡಿವಾಳ ಮಾಚಯ್ಯನು.
ಎನ್ನ ಅಂತರಾತ್ಮನ ಚೇತನನಯ್ಯ ಸೊಡ್ಡಳ ಬಾಚರಸರು.
ಎನ್ನ ಅರಿವಿನ ಚೇತನಾತ್ಮಕನಯ್ಯ ಕಿನ್ನರ ಬೊಮ್ಮಯ್ಯನು.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣರ ಕರುಣವ ಪಡೆದೆನಾಗಿ,
ಎನ್ನ ಕರ್ಮ ನಿರ್ಮೂಲವಾಯಿತ್ತಯ್ಯ, ನಿಮ್ಮ ಧರ್ಮ ನಿಮ್ಮ ಧರ್ಮ. ||೮||

೧೯೯

ಎನ್ನ ತನು ಬಸವಣ್ಣನ ಆದಿಪ್ರಸಾದವ ಕೊಂಡಿತ್ತು.
ಎನ್ನ ಮನ ಚನ್ನಬಸವಣ್ಣನ ನಿರ್ಮಲಪ್ರಸಾದವ ಕೊಂಡಿತ್ತು.
ಎನ್ನ ಪ್ರಾಣ ಪ್ರಭುದೇವರ ಜ್ಞಾನಪ್ರಸಾದವ ಕೊಂಡಿತ್ತು.
ಇಂತೆನ್ನ ತನುಮನಪ್ರಾಣಪ್ರಸಾದ ಎನ್ನ ಸರ್ವಾಂಗದಲ್ಲಿ ತುಂಬಿತ್ತು.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣರ ಪ್ರಸಾದವ ಕೊಂಡು ಬದುಕಿದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೯||

೧೧೦೦

ಏಕಬೀಜಂ ಸಮಾವೃಕ್ಷಂ ಲೋಕ ಲಿಂಗಂತು ಪೂಜನಂ
ಸಾಕಾರಂ ಚ ಗುರೋರ್ಲಿಂಗಂ ಏಕಲಿಂಗಂತು ಪೂಜನಂ
ಏಕಧ್ಯಾನ ಸಮಂ ಚಿತ್ತಂ ಊರ್ಧ್ವಲಿಂಗಂತು ಪೂಜನಂ
ಏಕಾಕ್ಷರಂ ತುಷಂ ಜನಂ ಮಹಾಲಿಂಗಂತು ದರುಶನಂ||
ಇಂತೆಂದುದಾಗಿ,
ಇದು ಕಾರಣ, ನಿಮ್ಮ ಶರಣ ಬಸವಣ್ಣನನು
ಲೋಕದವರು ಮರ್ತ್ಯರೆಂದಡೆ, ಅಘೋರ [ನರಕ ]ತಪ್ಪದು ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನಯ್ಯಾ.
ನಿಮ್ಮ ಶರಣ ಬಸವಣ್ಣನ ಪರಿಯ, ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧೦||

೧೧೦೧

ಗುರುಲಿಂಗಜಂಗಮಕ್ಕೆ ದಾಸೋಹವ ಮಾಡುವ
ಭಕ್ತನ ಪರಿಯಾಯವ ನೋಡಿರಯ್ಯಾ.
ಶ್ರೀಗುರು ಶಿಷ್ಯಂಗೆ ಅನುಗ್ರಹವ ಮಾಡಲೊಡನೆ,
ಆ ಶಿಷ್ಯ ಆ ಗುರುವ ಕೊಂದು ತಿಂದ ನೋಡಿರಯ್ಯಾ.
ಲಿಂಗ ಬಂದು ಪೂಜೆಯ ಮಾಡಿಸಿಕೊಂಡು ಹೋದೆಹೆನೆಂದು ಹೋದಡೆ,
ಆ ಭಕ್ತ ಆ ಲಿಂಗವ ನುಂಗಿದ ಪರಿಯ ನೋಡಿರಯ್ಯಾ.
ಜಂಗಮ ಬಂದು ಲಿಂಗಾರ್ಚನೆಯ ಮಾಡಿಹೆನೆಂದು ಮನೆಗೆ ಬಂದಡೆ.
ಆ ಭಕ್ತ ಆ ಜಂಗಮವ ಕೊಂದು ತಿಂದು ಪರಿಯ ನೋಡಿರಯ್ಯಾ.
ಇಂತೀ ಮೂವರನು ಕೊಂದು ತಿಂಬವನ ಭಕ್ತನೆಂದೆಂಬೆನೆ ಅಯ್ಯಾ ?
ಅಲ್ಲ, ಅಲ್ಲ, ಆತ ಅನಾಚಾರಿ, ವ್ರತಗೇಡಿ, ದುರಾಚಾರಿ.
ಇಂತೀ ದುರಾಚಾರವ ನುಡಿಯಲಾಗದು.

ಅತ ದೇವಲೋಕಕ್ಕೆ ಸಲ್ಲ, ಮೃತ್ಯುಲೋಕಕ್ಕೆ ಸಲ್ಲ.
ಆವ ಲೋಕಕ್ಕೆ ಯೂ ಸಲ್ಲ.
ಇಂತಪ್ಪ ಪಂಚಮಹಾಪಾತಕನ ಭಕ್ತನೆಂದೆನಗೆ ತೋರದಿರಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಇಂತಪ್ಪ ಭಕ್ತನ ಪರಿಯ, ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧೧||

೧೧೦೨

ಜಂಗಮಪಾದೋದಕವ ಮಜ್ಜನ ಮಾಡಿ,
ಪ್ರಸಾದಂಬುವ ಮಾಡಿ, ಎನಗೆನ್ನ ಗುರು ತಂದೆ,
ಶಿವ ಕಲ್ಯಾಣವ ಮಾಡಿದ.
ಹಿಂಗದಿರು ಕಂಡಾ ಎಂದು ಕಂಕಣವ ಕಟ್ಟಿದ.
ಲಿಂಗೈಕ್ಯ ಚೈತನ್ಯ ಪ್ರಸಾದವೆಂದು,
ತನಗೆ ಚೈತನ್ಯ ಜಂಗಮವೆಂದು,
ನನಗೆ ಚೈತನ್ಯ ಲಿಂಗವೆಂದು ನಿರೂಪಿಸಿದ.
ಜಂಗಮಪ್ರಸಾದ ಬಸವಣ್ಣನಿಂದಲ್ಲದೆ ದೊರಕೊಳ್ಳದೆಂದು
ಬಸವಣ್ಣನ ಸಾರಿದೆ.
ಬಸವಣ್ಣ ಮಾಡಿದುಪಕಾರವನೇನ ಹೇಳುವೆನಯ್ಯಾ.
ಒಡೆಯರೊಕ್ಕುದ ತಾ ಸವಿದು,
ತನ್ನೊಕ್ಕುದ ಮಿಕ್ಕುದ ತನ್ನ ಗೃಹಚರರುಂಡು,
ಮಿಕ್ಕ ಶೇಷಪ್ರಸಾದವು ಎನ್ನ ಲಿಂಗಕ್ಕಾಯಿತ್ತು.
ಆ ಪ್ರಸಾದ ಗುಂಡವೆ ಗೃಹವಾಯಿತ್ತು.
ಆ ಪ್ರಸಾದ [ಅರ್ಪಿಸು]ತ್ತವೆ ಎನ್ನ ಲಿಂಗಕ್ಕೆ ಪೂಜೆ.
ಎನಗೆ ಹೊದಿಕೆಯಾಗಿ ಎನ್ನ ತನು ಶುದ್ಧಪ್ರಸಾದವಾಯಿತ್ತು.
ಮನ ಸಿದ್ಧಪ್ರಸಾದವಾಯಿತ್ತು.
ಗುರುವಾಜ್ಞೆವಿಡಿದೆನಾಗಿ ಆನೆ ಪ್ರಸಿದ್ಧಪ್ರಸಾದವಾದೆನಯ್ಯಾ.
ಇನ್ನು ಬದುಕಿದೆನು ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣ ಸಿದ್ಧರಾಮಯ್ಯನ ಕಂಡು,
ಶಿಖಿಕರ್ಪೂರ ಯೋಗದಂತಾದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧೨||

೧೧೦೩

ಜಯ ಜಯ ತ್ರಾಹಿ ತ್ರಾಹಿ,
ಗರ್ಭದೊಳಗಣ ಶಿಶು ನವಮಾಸವ ಹಾರಿಕೊಂಡಿರ್ದಂದಿರ್ದೆನಯ್ಯಾ.
ಎನ್ನ ಜನ್ಮ ಸಫಲವಾಯಿತ್ತಯ್ಯಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಬಸವರಾಜದೇವರ ದಯದಿಂದ
ಪ್ರಭುದೇವರ ಶ್ರೀಮೂರ್ತಿಯಂ ಕಂಡು ಬದುಕಿದೆನು.
ನಿಮ್ಮ ಧರ್ಮ ನಿಮ್ಮ ಧರ್ಮ
ಶರಣು ಶರಣಾರ್ಥಿ ಸಕಲಪುರಾತರಿಗೆ. ||೧೩||

೧೧೦೪

ತನು ಕರಣೇಂದ್ರಿಯ ವಿಷಯಾದಿ ವಿಕಾರಂಗಳ ಹಿಂಗಿ,
ತನ್ನ ನಿಜಸ್ವರೂಪವನರಿದು, ಅಂಗಲಿಂಗಸಂಬಂಧಿಯಾಗಿ,
ಲೋಕದ ಜನರ ಸಂಗವ ತೊಲಗಿ, ಕರ್ಮದ ಹೊರೆಯಂ ಬಿಸುಟು,
ಸೀಮೆಯಂ ಬಿಟ್ಟು, ಉಪಾಧಿಯಿಲ್ಲದೆ ಜೀವ ಭಾವವ ಬಿಟ್ಟು,
ಮಲತ್ರಯವ ಹೊದ್ದದೆ, ನಿತ್ಯವಾದ ವಸ್ತುವೆ ತಾನಾಗಿ ನಿಂದ
ಮಹಾಜ್ಞಾನ ಜಂಗಮವ ನೋಡಿರಯ್ಯ.
ಅದೆಂತೆಂದಡೆ:
ನಿಸ್ಸಂಗತ್ವಂ ನಿರಾಭಾರಂ ನಿಸ್ಸೀಮಂ ನಿರುಪಾಧಿಕಂ
ನಿರ್ದೇಹಂ ನಿರ್ಮಲಂ ನಿತ್ಯಂ ತಸ್ಯ ಜಂಗಮ ಲಕ್ಷಣಂ||
ಇಂತೆಂದುದಾಗಿ, ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಘನಕ್ಕೆ ಘನವಾದ ಪ್ರಭುದೇವರ ಘನವ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧೪||

೧೧೦೫

ತನುವಿನೊಳಗೆ ತನು ಸವೆಯದೆ, ಮನದೊಳಗೆ ಮನ ಸವೆಯದೆ,
ಧನದೊಳಗೆ ಧನ ಸವೆಯದೆ, ಅನುಮಾನವರಿತು ಘನವ ಬೆರೆಸದೆ,
ತಮತಮಗೆ ಅರಿದೆಹೆನೆಂಬವರಿಗೆಲ್ಲರಿಗೆಯೂ
ಕನಸಿನ ಲಿಂಗತನುವ ಗುರುವಿನಲ್ಲಿ ಸವೆದು,
ಮನವ ಲಿಂಗದಲ್ಲಿ ಸವೆದು, ಧನವ ಜಂಗಮದಲ್ಲಿ ಸವೆದು,
ಅನುಮಾನವರಿತು ಘನವ ಬೆರಸಬಲ್ಲ ಶರಣನ ಪರಿ ಬೇರೆ.

ತನುವ ವಿವರಿಸಿ ನೋಡಿದಡೆ ತನು ಶುದ್ಧವಲ್ಲ.
ಮನವ ವಿವರಿಸಿ ನೋಡಿದಡೆ ಮನ ಶುದ್ಧವಲ್ಲ.
ಧನವ ವಿವರಿಸಿ ನೋಡಿದಡೆ ಧನ ಶುದ್ಧವಲ್ಲ.
ಇಂತೀ ತ್ರಿವಿಧವನು ವಿಚಾರಿಸಿ ನೋಡಿದಡೆ,
ಅವುದೂ ಶುದ್ಧವಲ್ಲ ಕೇಳಿರಣ್ಣಾ.
ಈ ತ್ರಿವಿಧವನು ತ್ರಿವಿಧಕ್ಕೆ ಇತ್ತಡೆ, ತ್ರಿವಿಧ ಶುದ್ಧವಾಯಿತ್ತು.
ಇಂತೀ ತ್ರಿವಿಧವನು ತ್ರಿವಿಧದಲ್ಲಿ ಸವೆಸುವ ಭಕ್ತನ
ತ್ರಿವಿಧ ಪ್ರಸಾದವನು ತ್ರಿಕಾಲದಲ್ಲಿ ನಾನು ಕೊಂಡು ಬದುಕಿದೆನು ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ತ್ರಿವಿಧ ಭಕ್ತನ ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೧೫||

೧೧೦೬

ತ್ರಿಭುವನಗಿರಿಯರಸರು ತ್ರೈಲೋಕಪಟ್ಟಣಕ್ಕೆ ದಾಳಿಯನಿಕ್ಕಿದರು.
ಆ ಪಟ್ಟಣ ಸುತ್ತಿ ಮುತ್ತಿಕೊಂಡರು.
ಏಳು ಭೂದುರ್ಗಂಗಳು ಕೊಳಹೋದವು.
ಅರಮನೆಯ ಹೊಕ್ಕರು, ಹನ್ನೆರಡುಸಾವಿರ ರಾಣಿವಾಸವ ಸೆರೆ ಹಿಡಿವರು.
ಆನೆಯ ಸಾಲೆಗೆ ಕಿಚ್ಚನಿಕ್ಕಿದರು, ಕುದುರೆಗಳ ಕಾಲ ಹರಿಯ ಹೊಯ್ದರು.
ನಾಯಿಗಳ ಕಣ್ಣ ಕೆಡಿಸಿದರು, ಹಿರಿಯರಸನ ಹಿಡಿದುಕೊಂಡರು.
ಇಪ್ಪತ್ತೈದು ತಳವಾರರ ನಿರ್ಮೂಲಿಸಿ ಬಿಟ್ಟರು.
ಮೂವರ ಮೂಗ ಕೊಯ್ದರು, ಒಬ್ಬನ ಶೂಲಕ್ಕೆ ಹಾಕಿದರು.
ಆ ಪಟ್ಟಣದ ಲಕ್ಷ್ಮಿ ಹಾರಿತ್ತು.
ಆ ಪಟ್ಟಣದ ಪ್ರಜೆಗಳಿಗೆ ರಣಮಧ್ಯ ಮರಣವಾಯಿತ್ತು.
ಆ ರಣಭೂಮಿಯಲ್ಲಿ ಕಾಡುಗಿಚ್ಚೆದ್ದುರಿಯಿತ್ತು.
ಆ ಊರ ನಡುಗಡೆಯಲ್ಲಿ ಒಬ್ಬ ಬೇತಾಳ ನಿಂದಿರ್ದ.
ಆ ಬೇತಾಳನ ಮೇಲೆ ಅಕಾಲವರುಷ ಸುರಿಯಿತ್ತು.
ಆ ವರುಷದಿಂ ಹದಿನಾಲ್ಕು ಭುವನ, ಸಚರಾಚರಂಗಳಿಗೆ
ಶಾಂತಿಯಾಯಿತ್ತು.
ಆ ಶಾಂತಿ ವಿಶ್ರಾಂತಿಯಲ್ಲಿ ಹುಟ್ಟಿದ ಸುಖವ,
ನಿಮ್ಮ ಉಂಗುಷ್ಠಾಗ್ರದಲ್ಲಿ ಕಂಡ ಘನ[ವ],
ಸುರಗಿಯ ಚೌಡಯ್ಯಗಳು ಬಲ್ಲರಲ್ಲದೆ. ನಾನೆತ್ತ ಬಲ್ಲೆನಯ್ಯಾ.

ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೧೬ ||

೧೧೦೭

ಧರೆಯ ಮೇಲೆ ಸುಳಿವ ಅರುಹಿರಿಯರೆಲ್ಲರು
ಪರಬ್ರಹ್ಮವ ನುಡಿದು ಕೆಟ್ಟರಲ್ಲಾ.
ಈ ದುರುಳತನದ ಮಾತು ನಿಮಗೇಕೆ ಹೇಳಿರಣ್ಣಾ.
ಗುರುವಿನ ಕರುಣದಿಂದ ಗುರುಕರುಣಾಮೃತರಸವ
ಕರೆದೆರದುಂಬಾತಂಗೆ ಕುರುಹಿಲ್ಲವಣ್ಣಾ.
ಇದ ಕರೆದುಂಬಾತನು ಕುರುಹುಗೆಟ್ಟುಹೋದನು.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಇದರ ಸಕೀಲವ ಬಲ್ಲ ಶರಣನ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೧೭ ||

೧೧೦೮

ಬಸವಣ್ಣ ಚೆನಬಸವಣ್ಣ ಪ್ರಭುದೇವ ಮಡಿವಾಳ ಮಾಚಯ್ಯಾ
ಸಿದ್ಧರಾಮಯ್ಯ ಸೊಡ್ಡಳ ಬಾಚರಸರು ಹಡಪದಪ್ಪಣ್ಣ
ಪಡಿಹಾರಿ ಉತ್ತಣ್ಣ ಅವ್ವೆ ನಾಗಾಯಿ ಕೋಲಶಾಂತಯ್ಯ
ಡೋಹರ ಕಕ್ಕಯ್ಯ ಮೊಗವಾಡದ ಕೇಶಿರಾಜದೇವರು
ಖಂಡೆಯ ಬೊಮ್ಮಣ್ಣ ಮೊದಲಾದ ಅಸಂಖ್ಯಾತ ಮಹಾಪ್ರಮಥಗಣಂಗಳ
ಪರಮಪ್ರಸಾದವ ಕೊಂಡು ಬದುಕಿದೆನಯ್ಯಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೧೮ ||

೧೧೦೯

ಬೆಟ್ಟವ ನೆಮ್ಮಿದಡೆ ಕಟ್ಟಿಗೆಯ ತಾಳುವದು,
ಅದಾವ ಅಚ್ಚರಿ ಎನಿಸುವದು ?
ಪ್ರಾಣಕ್ಕೆ ಹೊಣೆಯಾದಲ್ಲಿ ಕಾದುವದು,
ಅದಾವ ಅಚ್ಚರಿ ಎಂದೆನಿಸುವದು ?
ಪರಕಾಯವ ತೊಟ್ಟಿರ್ದಲ್ಲಿ ಅಚ್ಚರಿಗೆ ಅರಿಬಿರಿದೇಕೆ ?
ನಿಮ್ಮುವ ಕಾರುಣ್ಯವನಾಗಿರ್ದಲ್ಲಿ
ಎನಗೆಲ್ಲೆಲ್ಲಿ ಸುಖವಲ್ಲಲ್ಲಿಯೂ ನೀವೆ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುದೇವಯ್ಯಾ,

ಪ್ರಭುದೇವರ ಕಾರುಣ್ಯ ಪ್ರಸಾದದಿಂದ
ಆನು ಬದುಕಿದೆನು ಕಾಣಾ, ಸಂಗನಬಸವಣ್ಣಾ. ||೧೯||

೧೧೧೦

ಬೆರಸಲಿಲ್ಲದವನ ನೋಟ, ಲೇಸಿಲ್ಲದವನ ಮಾಟ,
ಕಂಗಳ ಸೂತಕ ಹರಿಯದವನ ಅಂಗದ ಕೂಟ,
ಅದೆಂದಿಗೆ ನಿಜವಪ್ಪುದು ?
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ನೀವೆ ಬಲ್ಲಿರಿ. ||೨೦||

೧೧೧೧

ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯ.
ಇಂತೀ ಷಡುಸ್ಥಲಚಕ್ರವರ್ತಿಯಯ್ಯಾ ನಮ್ಮ ಚನ್ನಬಸವಣ್ಣನು.
ಷಡಕ್ಷರಂ ಸರ್ವಮಂತ್ರಂ ಸರ್ವಾಂಚಾರಂ ಚ ಲಿಂಗಯೋ
ಷಡ್ವರ್ಗಂ ತ್ರಿವಿಧ ಏಕಂ ತಸ್ಮಾತ್ ಲಿಂಗಂತು ಪೂಜನಂ||
ಇಂತೆಂದುದಾಗಿ, ಆಚಾರವೆ ಕಾಯ, ಆಚಾರವೆ ಪ್ರಾಣ,
ಆಚಾರವೆ ಅಂಗ, ಆಚಾರವೆ ಲಿಂಗ, ಆಚಾರವೆ ಸಂಗ.
ಇಂತಪ್ಪ ಆಚಾರಕ್ಕೆ ಆಚಾರವೆ ಪ್ರಾಣವಾಗಿರಬಲ್ಲನಲ್ಲಯ್ಯಾ
ನಮ್ಮ ಚನ್ನಬಸವಣ್ಣನು.
ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೆ ಪ್ರಸನ್ನ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣ ಚನ್ನಬಸವಣ್ಣನು ಸರ್ವಾಚಾರ ಸಂಗಸಂನ್ನನು.
ಇಂತಪ್ಪ ಚೆನ್ನಬಸವಣ್ಣನ ನಿಲವ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. ||೨೧||

೧೧೧೨

ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು.
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು.
ಬಸವಣ್ಣ ನಡೆದುದೇ ಮಾರ್ಗ, ಅಖಿಳಗಣಂಗಳಿಗೆ,
ಬಸವಣ್ಣ ನುಡಿದುದೇ ವೇದ, ಮಹಾಪುರುಷರಿಗೆ,
ಬಸವಣ್ಣನನಾದಿ, ಲಿಂಗವಾದಿ ಎಂದರಿದೆನಾಗಿ,
ಬಸವಣ್ಣನ ನೆನೆವುತಿರ್ದೆನಯ್ಯಾ.
ಬಸವಣ್ಣನ ಪಾದಪಿಡಿದೆನಾಗಿ, ಲಿಂಗವೇದಿಯಾದೆನು.

ಬಸವಣ್ಣನ ಬಾಗಿಲ ಕಾಯ್ದೆನಾಗಿ, ಪ್ರಸಾದ ಸಾಧ್ಯವಾಯಿತ್ತು.
ಬಸವಣ್ಣನ ಕರುಣದಿಂದ ಪ್ರಭುದೇವರ ನಿಲವ ಕಂಡೆನು.
ಬಸವಣ್ಣನ ಬೋಧೆಯಿಂದ ಜಂಗಮವೇ ಲಿಂಗವೆಂದರಿದೆನು.
ಆ ಜಂಗಮ ಮುಖದಿಂದಲ್ಲದೆ ಲಿಂಗತೃಪ್ತಿಯಾಗದು.
ಪ್ರಸಾದಸಿದ್ಧಿಯಾದಲ್ಲದೆ ಭವಂ ನಾಸ್ತಿಯಾಗದು.
ಇದು ಕಾರಣ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣ ಬಸವಣ್ಣನ ನಂಬಿ,
ನಾನು ಕೆಟ್ಟು, ಬಟ್ಟಬಯಲಾಗಿ ಹೋದೆನೆಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೨ ||

೧೧೧೩

ಮಹಾಲಿಂಗಂ ತ್ರಯೋಲಿಂಗಂ ಷಡ್ವಿಧಂ ಚ ತಯೋರ್ಮುಖಂ
ತ್ರಿವಿಧ್ಯೈಕಮುಖಂಲಿಂಗಂ ಮಹಾಲಿಂಗಂತು ದರ್ಶನಂ||
ಇಂತೆಂದುದಾಗಿ,
ಒಂದು ಮೂರಾಗಿ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು.
ಆ ಮೂರು ಆರಾಗಿ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು.
ಆ ಆರು ಮೂವತ್ತಾರಾಗಿ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಸಂಗಪರಿತ್ಯಾಗಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾವಧಾನಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಾಂಲಿಂಗಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವಕಾರಣಯುತನಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಸರ್ವನಿರ್ವಾಣಿಯಯ್ಯಾ ನಮ್ಮ ಬಸವಣ್ಣನು.
ಇಂತಪ್ಪ ಬಸವಣ್ಣನ ಮಹಾಮಹಿಮೆಯನು ನೀವೆ ಬಲ್ಲಿರಿ.
ಅಸಂಖ್ಯಾತ ಪುರಾತರು ಪ್ರಭುದೇವರು ಮುಖ್ಯವಾದ
ಮಹಾಮಹಿಮರ ನಿಲುವಿನ ಶ್ರೀಚರಣಕ್ಕೆ
ನಾನು ಶರಣಾರ್ಥಿ ಶರಣಾರ್ಥಿ ಎಂದೆನುತ್ತ ಶಬ್ದಮುಗ್ಧ ಮೂಗನಾದೆ.
ಉರಿಯುಂಡ ಕರ್ಪುರದಂತೆ, ನಿಮ್ಮ ಶ್ರೀಚರಣವ ನಾನೆಯ್ದೆನಯ್ಯಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣ ಬಸವಣ್ಣನ ಕರುಣ ಪ್ರಸಾದವ ಕೊಂಡು
ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೩ ||

೧೧೪

ಮಹಾಶ್ರೀಗುರುವೆ ತಂದೆ, ಮಹಾಜಂಗಮವೆ ತಾಯಿ.
ಇವರಿಬ್ಬರ ಸಂಗಸಂಯೋಗದಿಂದ ನಾನು ಹುಟ್ಟಿದೆ ನೋಡಿರಯ್ಯಾ.
ಸರ್ವಾಂಗಸಾಹಿತ್ಯ ನಾನು ಹುಟ್ಟಿದ ಬಳಿಕ.
ತಂದೆ ತಾಯಿಗಳಿಬ್ಬರು ಲಿಂಗವೆಂಬ ಹೆಣ್ಣ ತಂದು,
ಎನ್ನ ಕೊರಳಲ್ಲಿ ಕಟ್ಟಿ ಮದುವೆಯ ಮಾಡಿದರಯ್ಯಾ.
ಆ ಹೆಣ್ಣಿನ ಕೈಹಿಡಿದು ನಾನು ಬದುಕಿದೆನು.
ಆ ಹೆಣ್ಣಿನ ಸಂಯೋಗದಿಂದ ಮಗನೆಂಬ ಮಹಾಲಿಂಗ ಹುಟ್ಟಿದನಯ್ಯಾ.
ಆ ಮಗ ಹುಟ್ಟಿದ ಮುನ್ನವೆ ಎನಗೆ ಮರಣವಾಯಿತ್ತು.
ಲಿಂಗವೆಂಬ ಹೆಂಡತಿ ಮುಂಡೆಯಾದಳು.
ತಂದೆ ತಾಯಿಗಳಿವರಿಬ್ಬರೂ ನನ್ನ ಒಂದಾಗಿ ಅಡಗಿ ಹೋದರು.
ಇನ್ನು ಮುನ್ನಿನ ಪರಿ ಎಂತುಟಲ್ಲವಾಗಿ ನಾನು ಬದುಕಿದೆ ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚನ್ನ ಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ಶರಣರ ಕರುಣದಿಂದ ಎನ್ನ ಕರ್ಮ ನಿರ್ಮಳವಾಯಿತ್ತಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೪ ||

೧೧೫

ಲಿಂಗವಂತನ ನಿಲವು ಸಂಗಸೂತಕಿಯಲ್ಲ.
ಕಂಗಳ ಕಳೆಯು ಬೆಳಗಳಿದು ಉಳಿದಾತ ಅಂಗಲಿಂಗೈಕ್ಯ ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ನಿಮ್ಮ ಲಿಂಗವಂತನ ನಿಲುವಿನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೫ ||

೧೧೬

ಲಿಂಗವಂತ ಲಿಂಗಭಕ್ತ ಲಿಂಗಾಚಾರಿಯೆನಿಸಿಕೊಂಡ ಬಳಿಕ,
ಲಿಂಗದ ನಚ್ಚು, ಲಿಂಗದ ಮಚ್ಚು, ಲಿಂಗವೇ ಪ್ರಾಣವಾಗಿರಬೇಕಲ್ಲದೆ,
ಮತ್ತೆ ತಪ್ಪಿ ನಡೆದು, ತಪ್ಪಿ ನುಡಿದು, ಪರಧನ ಪರಸ್ತ್ರೀಯರ ಸಂಗವ ಮಾಡಿ,
ದುರ್ಗುಣ ದುರಾಚಾರದಲ್ಲಿ ನಡೆದು,
ಮತ್ತೆ ತಾವು ಲಿಂಗವಂತರೆನಿಸಿಕೊಂಬ ಪರಿಯ ನೋಡಾ.
ಇದು ಲಿಂಗದ ನಡೆಯಲ್ಲ, ಲಿಂಗದ ನುಡಿಯಲ್ಲ.
ಇದ ನಮ್ಮ ಶಿವಶರಣರು ಮೆಚ್ಚರು.
ಲಿಂಗವಂತನ ಪರಿ ಬೇರೆ ಕಾಣಿರೆ.

ಲಿಂಗಕ್ಕೆ ಲಿಂಗವೆ ಪ್ರಾಣವಾಗಿರಲು ಬಲ್ಲ.
ಲಿಂಗಕ್ಕೆ ಲಿಂಗವೆ ಭೋಗವಾಗಿರಲು ಬಲ್ಲ.
ಲಿಂಗಕ್ಕೆ ಲಿಂಗವೆ ಸಂಗವಾಗಿ[ರಲು]ಬಲ್ಲ,
ಇಂತಪ್ಪ ಲಿಂಗವಂತನ ಸದಾಚಾರಿಯೆಂಬೆನು.
ಇಂತಪ್ಪ ಲಿಂಗವಂತನ ಸರ್ವಾಂಗಲಿಂಗಿಯೆಂಬೆನು.
ಇಂತಪ್ಪ ಲಿಂಗವಂತನ ಸರ್ವಕರಣ ನಿರ್ಮುಕ್ತನ
ಸರ್ವನಿರ್ವಾಣಿಕಾಯೆಂಬೆನು.
ಇಂತಪ್ಪ ಮಹಾಮಹಿಮನ ನಿಲವು ಎಲಗಳೆದ ವೃಕ್ಷದಂತೆ,
ಉಲುಹಡಗಿಪ್ಪ ಶರಣನ ಪರಿಯ ನೀವೇ ಬಲ್ಲಿರಲ್ಲದೆ,
ಮತ್ತೆ ಉಳಿದಾದ ಅಜ್ಞಾನ ಸಂದೇಹಿಮಾನವರೆತ್ತ ಬಲ್ಲರಯ್ಯಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಲಿಂಗಾವಧಾನಿಯ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೬ ||

೧೧೧೭

ಶಿಷ್ಯನೆಂಬ ಧರೆಯ ಮೇಲೆ, ಶ್ರೀಗುರುವೆಂಬ ಬೀಜವ ಬಿತ್ತಿ,
ಅರಿವೆಂಬ ಗೊಬ್ಬರನಿಕ್ಕಿ, ಜ್ಞಾನವೆಂಬ ಉದಕವನೆರೆಯಲಿಕೆ,
ಲಿಂಗವೆಂಬ ಆಕಾರ ಮೊಳೆದೋರಿತ್ತು ಕಾಣಿರೆ.
ಜಂಗಮವೆಂಬ ಸಸಿ ಬಲಿದು ವೃಕ್ಷ ಪಲ್ಲವಿಸಿತ್ತು.
ಸುಜ್ಞಾನವೆಂಬ ನನೆದೋರಿ ಬಿರಿಮುಗುಳಾಯಿತ್ತು.
ಮಹಾಜ್ಞಾನವೆಂಬ ಪುಷ್ಪ ವಿಕಸಿತವಾಯಿತ್ತು.
ಖಂಡಿತವೆಂಬ ಮುಗುಳಾಯಿತ್ತು, ಅಖಂಡಿತವೆಂಬ ಕಾಯಿ ಬಲಿಯಿತ್ತು.
ಪರಮಜ್ಞಾನವೆಂಬ ಹಣ್ಣಾಯಿತ್ತು.
ಆ ಹಣ್ಣು ಬಲಿದು ತೊಟ್ಟುಬಿಟ್ಟು, ಬಟ್ಟಬಯಲಲ್ಲಿ ಬಿದ್ದಿತ್ತು.
ಆ ಹಣ್ಣು ಕಂಡು ನಾನು ಇದೆಲ್ಲಿಯದೆಂದು ವಿಚಾರವ ಮಾಡಲ್ಕೆ,
ಬಿತ್ತಿದವರಾರೆಂದು ಹೇಳುವರಿಲ್ಲ.
ಬಿತ್ತಿದವನ ಸೊಮ್ಮ ನಾವು ಕೇಳಬಾರದೆಂದು
ಆ ಹಣ್ಣು ಕೊಂಡು, ನಾನು ಬಿತ್ತಿದಾತನನರಸಿಕೊಂಡು ಹೋಗಲ್ಕೆ,
ನಾನೆತ್ತ ಹೋದೆನೆಂದರಿಯೆನಯ್ಯಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ
ನಿಮ್ಮ ಬಿತ್ತಿದಾತನ ಪರಿಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೭ ||

೧೧೧೮

ಶೀಲದ ತುದಿಯ ಮೊದಲನರಿಯದೆ, ವ್ರತದಾಚರಣೆಯ ಕ್ರಮವನರಿಯದೆ,
ಆಚಾರದ ನೆಲೆಯನರಿಯದೆ, ಬರಿದೆ ವ್ರತ ಶೀಲಾಚಾರವೆಂದೆಂಬಿರಿ.
ವ್ರತಶೀಲಾಚಾರದ ಸ್ವರೂಪವನರಿಯದ,
ಅವರಾಚರಣೆಯನರಿಯದ ಶೀಲವಂತರು ನೀವು ಕೇಳಿ ಭೋ.
ತನುವಿನ [ಗುಣವ] ಮನದಲ್ಲಿಗೆ ತಂದು, ಆ ಮನದ ಅನುವನರಿದು,
ಶುಚಿ ಶೀಲ ಉಚ್ಯತೆಯೆಂದುದಾಗಿ, ಸಚ್ಚರಿತ್ರವನುಳ್ಳ ಆಚಾರವೆ ಸ್ವರೂಪವಾದ
ಘನಲಿಂಗವ ಬೆರಸಬಲ್ಲಡೆ ಅದು ಶೀಲ.
ಮನದ ತನುವ ಮಹಾಘನದರುವಿನಲ್ಲಿಗೆ ತಂದು
ಅರಿವಿನ ಆಚಾರವೆ ಗುರುಲಿಂಗಜಂಗಮ ಪ್ರಸಾದ ಪಾದತೀರ್ಥ
ಭಕ್ತಿ ಎಂದರಿದು, ಅವರ ಸ್ವರೂಪವನರಿದು, ಆಚರಿಸಿದ ಘನ ಶರಣರ
ಬೆರಸಬಲ್ಲಡೆ ಅದು ವ್ರತ.
ಸದಾಚಾರ ನಿಯತಾಚಾರ,
ಭಕ್ತ್ಯಾಚಾರ ಶಿವಾಚಾರ ಸಮಯಾಚಾರ ಗಣಾಚಾರವೆಂಬವುಗಳ
ಸ್ವರೂಪವನರಿದು ಆಚರಿಸಬಲ್ಲಡೆ ಅದು ಆಚಾರ.
ವ್ರತ ಶೀಲಾಚಾರದ ಅನುವನರಿಯದೆ,
ಘನ ಶರಣರ ಬೆರಸದೆ,
ತನುಮನಧನವ ಗುರುಲಿಂಗಜಂಗಮಕ್ಕೆ ಸವೆಸದೆ
ಬರಿದೆ ಅನುವಿನ ತನುವಿನ ಕೊನೆಯ ಮೊನೆಯ ಮೇಲಣ ಜ್ಯೋತಿಯ
ತಮ ತಮಗೆ ಅರಿದೆಹೆನೆಂಬವರೆಲ್ಲರೂ
ಅನುಮಾವನನರಿಯದೆ ಕೆಟ್ಟರು ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನ ದೇವಯ್ಯಾ.
ನಿಮ್ಮ ಶರಣರ ಅನುವನರಿದು, ಘನವ ಬೆರಸಬಲ್ಲ
ಶರಣ ಸಂಗನಬಸವಣ್ಣನು, ಇಂತಪ್ಪ ಮಹಾಲಿಂಗವಂತರ
ನಿಲವಿನ ಪರಿಯ ನೀವೇ ಬಲ್ಲಿರಲ್ಲದೆ, ನಾನೆತ್ತ ಬಲ್ಲೆನಯ್ಯಾ ?
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೮ ||

೧೧೧೯

ಶ್ರೀಗುರು ಶಿಷ್ಯಂಗೆ ಕರುಣದಿಂದ ಉಪದೇಶವ ಮಾಡಬೇಕೆಂದು ಬಂದು,
ಮೂರ್ತಿಗೊಂಡು, ಆ ಶಿಷ್ಯನ ಪೂರ್ವಜನ್ಮವಂ ಕಳೆದು,
ಪುನರ್ಜಾತನೆಂದೆನಿಸಿ, ಹಸ್ತಮಸ್ತಕಸಂಯೋಗವಂ ಮಾಡಿ,

ವಿಭೂತಿಯ ಪಟ್ಟಮಂ ಕಟ್ಟಿ, ಕಿವಿಯಲ್ಲ ಕರ್ಣಮಂತ್ರಮಂ ಹೇಳಿ,
ಮಾಂಸಪಿಂಡವಂ ಕಳೆದು, ಮಂತ್ರಪಿಂಡವಂ ಮಾಡಿ,
ಸರ್ವಾಂಗದವಗುಣವಂ ಕಳೆದು,
ಆ ಶಿಷ್ಯಂಗೆ ಉಪದೇಶವ ಮಾಡಿದ ಪರಿಯೆಂತೆಂದಡೆ:
ಆದಿಲಿಂಗ ಅನಾದಿಲಿಂಗ ಪರುಷಲಿಂಗ ಅಮೃತಲಿಂಗ
ಅಗೋಚರಲಿಂಗ ಅಪ್ರತಿಮಲಿಂಗ ಅನಾಮಯಲಿಂಗ
ಅಭೇದ್ಯಭೇದಕಲಿಂಗ, ಅಸಾಧ್ಯಸಾಧಕಲಿಂಗ,
ಇಂತಪ್ಪ ಲಿಂಗಾಕಿಂತವ ಕೊಂಡು, ಒಂದು ಇಷ್ಟಲಿಂಗವಂ ಮಾಡಿ,
ಆ ಶಿಷ್ಯನ ಹಸ್ತದಲ್ಲಿ ನಿಕ್ಷೇಪವಂ ಮಾಡಿದನು ಮಹಾಶ್ರೀಗುರು.
ಆ ಲಿಂಗ ಬಂದು, ಆ ಶಿಷ್ಯನ ಅಂಗವ ಸೋಂಕವ ಮುನ್ನವೆ,
ಆ ಲಿಂಗ ಆ ಶಿಷ್ಯನನವಗ್ರಹಿಸಿತ್ತಯ್ಯ.
ಆ ಶಿಷ್ಯನು ಆ ಗುರುವಿನ ಹಸ್ತದಲ್ಲಿ ಉಪದೇಶವಾಗದ ಮುನ್ನವೆ,
ಆ ಶ್ರೀಗುರುವನು ಆ ಶಿಷ್ಯನವಗಹ್ರಿಸಿಕೊಂಡ ನೋಡಿರಯ್ಯಾ.
ಅಂಗಸಂಗಿಗಳು ಹೋಗಿ ಲಿಂಗಂಸಂಗಿಗಳ ಸಂಗವ ಮಾಡಿಹೆನೆಂದು ಹೋದಡೆ,
ಅಂಗಸಂಗಿಗಳ ಲಿಂಗಸಂಗಿಗಳು ಅವಗ್ರಹಿಸಿಕೊಂಡರು ನೋಡಿರಯ್ಯಾ.
ಪರಿಮಳವುಳ್ಳ ಪುಷ್ಪಕ್ಕೆ ತುಂಬಿ ಬಂದು,
ಪರಿಮಳವ ಕೊಂಡೆಹೆನೆಂದು ಹೋದಡೆ,
ಆ ಪರಿಮಳವುಳ್ಳ ಪುಷ್ಪ ಆ ತುಂಬಿಯನವಗ್ರಹಿಸಿಕೊಂಡಿತ್ತು ನೋಡಿರಯ್ಯಾ.
ಅನಲ ಸಂಗವ ವಾಯು ಮಾಡಿಹೆನೆಂದು ಹೋದಡೆ,
ಆ ಅನಲನು ವಾಯುವನವಗ್ರಹಿಸಿಕೊಂಡಿತ್ತು ನೋಡಿರಯ್ಯಾ.
ರೂಪು ದರ್ಪಣವ ರೂಹಿಸಿಹೆನೆಂದು ಹೋದಡೆ,
ಆ ದರ್ಪಣ ಆ ರೂಪನವಗ್ರಹಿಸಿಕೊಂಡಿತ್ತು ನೋಡಿರಯ್ಯಾ.
ಕಂಗಳು ಕರಸ್ಥಲದ ಲಿಂಗವ ನೋಡಿಹೆನೆಂದು ಹೋದಡೆ
ಆ ಕರಸ್ಥಲದ ಲಿಂಗ ಆ ಕಂಗಳ ನುಂಗಿದ ಪರಿಯ ನೋಡಿರಯ್ಯಾ.
ಸರ್ವಾಂಗಸಾಹಿತ್ಯ ಮಹಾಲಿಂಗೈಕ್ಯರ ಸಂಗವ,
ನಾನು ಮಾಡಿಹೆನೆಂದು ಹೋದಡೆ,
ಉರಿಯುಂಡ ಕರ್ಪುರದಂತೆ ಎನ್ನನವಗ್ರಹಿಸಿಕೊಂಡರು ಕಾಣಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಶರಣರ ನಾನು ನಂಬಿ ಕೆಟ್ಟು, ಬಟ್ಟಬಯಲಾಗಿ ಹೋದೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೨೯ ||

೧೧೨೦

ಷಡ್ವಿಧಲಿಂಗಾಂಗ ಸಕೀಲವನರಿಯದ ಜಡಜೀವಿಗೆ
ದಶವಿಧಪಾದೋದಕ ಏಕಾದಶಪ್ರಸಾದದ ಸಕೀಲಸಂಬಂಧವ
ಹೇಳುವನೊಬ್ಬ, ಪ್ರಸಾದದ್ರೋಹಿ ನೋಡಾ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತ ಚನ್ನಮಲ್ಲಿಕಾರ್ಜುನದೇವಯ್ಯ. || ೩೦ ||

೧೧೨೧

ಸಂಸಾರವೆಂಬ ಸಾಗರವ ದಾಂಟುವಡೆ,
ಅರಿವೆಂಬ ಹರುಗೋಲನಿಕ್ಕಿ ಜ್ಞಾನವೆಂಬ ಅಂಬಿಗ
ಹರುಗೋಲದಲ್ಲಿ ಕುಳ್ಳಿರ್ದು,
ಸುಜ್ಞಾನವೆಂಬ ಘಾತದ ಗಳೆಯ ಪಿಡಿದು,
ನಾನೀ ಹೊಳೆಯ ಕಂಡು, ಅಂಬಿಗನು ಕೇಳಿದಡೆ,
ನಾನು ಹಾಸಿಕೊಟ್ಟೆಹೆನೆಂದನು.
ನಾನು ನಿನ್ನ ನಂಬಿ ಹರುಗೋಲನೇರಿದೆನು ಕಾಣಾ, ಅಂಬಿಗರಣ್ಣಾಯೆಂದು
ನಾನು ಹರುಗೋಲದಲ್ಲಿ ಕುಳ್ಳಿರ್ದು ಹೊಳೆಯೊಳಗೆ ಹೋಗಲಿಕೆ,
ಕಾಮವೆಂಬ ಕೊರಡು ಅಡ್ಡಬಿದ್ದಿತ್ತು.
ಕ್ರೋಧವೆಂಬ ಸುಳುಹಿನೊಳಗೆ
ಅಹಂಕಾರವೆಂಬ ಮೀನು ಬಂದು ನಿಂದಿತ್ತು.
ಮಾಯೆಯೆಂಬ ಮೊಸಳೆ ಬಂದು ಬಾಯಬಿಡುತ್ತಿದ್ದಿತ್ತು.
ಮೋಹವೆಂಬ ನೊರೆತೆರೆಗಳು ಹೆಚ್ಚಿ ಬರುತ್ತಿದ್ದಿತ್ತು.
ಲೋಭವೆಂಬ ಕಾಳ್ಗಡಲು ಎಳೆದೊಯ್ಯುತ್ತಿದ್ದಿತ್ತು.
ಮರವೆಂಬ ಮೊರಹು ನೂಕುತ್ತಲಿದ್ದಿತ್ತು.
ಮತ್ಸರವೆಂಬ ಗಾಳಿ ತಲೆಕೆಳಗು ಮಾಡುತ್ತಿದ್ದಿತ್ತು.
ಇವೆಲ್ಲವನೂ ಪರಿಹರಿಸಿ,
ಎನ್ನ ಹೊಳೆಯ ದಾಂಟಿಸಿದನು ಅಂಬಿಗರಣ್ಣನು.
ಈ ಹೊಳೆಯ ದಾಂಟಿಸಿದ ಕೂಲಿಯ ನನ್ನ ಬೇಡಿದಡೆ,
ಕೂಲಿಯ ಕೊಡುವಡೇನೂ ಇಲ್ಲೆಂದಡೆ,
ಕೈಸೆರೆಯಾಗಿ ಎನ್ನನೆಳದೊಯ್ವನಯ್ಯಾ.
ಅರುವೆಯ ಕೊಟ್ಟ ಕೂಲಿಗೆ ತನ್ನ ಕರುವ ಕಾಯಿಸಿಕೊಂಡನಯ್ಯಾ.
ಅರಿಯದೆ ಹರುಗೋಲವ ನೆರೆತೊರೆಯ ದಾಂಟಿಸಿದ ಕೂಲಿಗೆ
ಕರುವ ಕಾಯಿದೆನು ಕಾಣಾ,

ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೩೧ ||

೧೧೨೨

ಸರ್ಪನ ಹೆಡೆಯ ಮೇಲೆಪ್ಪತ್ತೇಳುಲೋಕವ ಕಂಡೆನಯ್ಯಾ.
ಎಪ್ಪತ್ತೇಳುಲೋಕದೊಳಗಿಪ್ಪ
ಎಪ್ಪತ್ತೇಳು ಕರ್ಪುರದ ಗಿರಿಗಳ ಕಂಡೆನಯ್ಯಾ.
ಎಪ್ಪತ್ತೇಳು ಕರ್ಪುರದ ಗಿರಿಗಳ ಮೇಲಿಪ್ಪ
ಎಪ್ಪತ್ತೇಳು ಉರಿಯ ಕಂಬವ ಕಂಡೆನಯ್ಯಾ.
ಆ ಎಪ್ಪತ್ತೇಳು ಉರಿಯ ಕಂಬದ ಮೇಲಿಪ್ಪ
ಎಪ್ಪತ್ತೇಳು ಅರಗಿನ ಪುತ್ಥಳಿಯ ಕಂಡೆನಯ್ಯಾ.
ಆ ಎಪ್ಪತ್ತೇಳು ಅರಗಿನ ಪುತ್ಥಳಿಯು ಕರಗಿಹೋದವು.
ಆ ಎಪ್ಪತ್ತೇಳು ಕರ್ಪುರದ ಗಿರಿಗಳೆಲ್ಲಾ ಉರಿದುಹೋದವು.
ಆ ಎಪ್ಪತ್ತೇಳುಲೋಕವೆಲ್ಲವು ಹಾಳಾಗಿಹೋದವು.
ಆ ಸರ್ಪ ಬೆಂದು ಸತ್ತುಹೋಯಿತ್ತು.
ಇನ್ನು ನಿಃಪತಿ ನಿರಾಳವೆಂಬ ನಿಜ ಒಳಕೊಂಡ ಬಳಿಕ,
ನಾನೆತ್ತ ಹೋದೆನೆಂದರಿಯೆನಯ್ಯಾ.
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ನಿಮ್ಮ ಸರ್ಪನ ಪರಿಯ ನೀವೇ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೩೨ ||

೧೧೨೩

ಸಿಂಬೆಗೆ ರಂಭೆತನವುಂಟೆ ?
ಸಂಭ್ರಮವಳಿದುದಕ್ಕೆ ನವರಸದಂಗದ ಕಳೆಯುಂಟೆ ?
ಡಿಂಗರಿಗಂಗೆ ಸಮವೆಂಬ ಸಂಭ್ರಮವುಂಟೆ ?
ಪರುಷದ ದೆಸೆಯಿಂದ ಪಾಷಾಣದ ಕುಲ ಹರಿವಂತೆ,
ನೀ ಬಂದೆಯಲ್ಲಾ.
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ, ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ,
ಪ್ರಭುದೇವರ ಕಾರುಣ್ಯದಿಂದ ಬದುಕಿದೆ. || ೩೩ ||

೧೧೨೪

ಹೃದಯದ ಕೊನೆಯ ಮೇಲೆ ಬಂದ ಪರಿಣಾಮದ ತೃಪ್ತಿಯ ಸುಖವ,
ಹೃದಯದ ಮನದ ಕೊನೆಯ ಮೊನೆಯ ಮೇಲೆ,

ಮಹಾಲಿಂಗಕ್ಕೆ ಸಮರ್ಪಿಸಬೇಕು.
ಶ್ರೋತ್ರದ ಕೊನೆಯಲ್ಲಿ ಬಂದ ಸಂಗೀತದ ಪರಿಣಾಮವ,
ಅವಧಾನದ ಶ್ರೋತ್ರದ ಕೊನೆಯ ಮೊನೆಯ ಮೇಲೆ,
ಪ್ರಸಾದಲಿಂಗಕ್ಕೆ ಅರ್ಪಿಸಬೇಕು.
ನೇತ್ರದ ಕೊನೆಯಲ್ಲಿ ಬಂದ ಸುಲಕ್ಷಣ ಸುರೂಪಿನ ಪರಿಣಾಮವ,
ಅವಧಾನದ ಮನದ ಕೊನೆಯ ಮೊನೆಯ ಮೇಲೆ,
ಶಿವಲಿಂಗಕ್ಕೆ ಸಮರ್ಪಿಸಬೇಕು.
ನಾಸಿಕದ ಕೊನೆಯಲ್ಲಿ ಬಂದ ಸುಗಂಧದ ಪರಿಣಾಮವ,
ಅವಧಾನದ ಮನದ ಕೊನೆಯ ಮೊನೆಯ ಮೇಲೆ,
ಆಚಾರಲಿಂಗಕ್ಕೆ ಅರ್ಪಿಸಬೇಕು.
ಜಿಹ್ವೆಯ ಕೊನೆಯಲ್ಲಿ ಬಂದ ಸುಸ್ವಾದುವಿನ ಪ್ರಸಾದದ ರುಚಿಯ ಪರಿಣಾಮವ,
ಅವಧಾನದ ಮನದ ಕೊನೆಯ ಮೊನೆಯ ಮೇಲೆ,
ಗುರುಲಿಂಗಕ್ಕೆ ಸಮರ್ಪಿಸಬೇಕು.
ತ್ವಕ್ಕಿನ ಕೊನೆಯಲ್ಲಿ ಬಂದ ಸುಪರ್ಶನದ ಸುಖದ ಪರಿಣಾಮವ,
ಅವಧಾನದ ಮನದ ಕೊನೆಯ ಮೊನೆಯ ಮೇಲೆ,
ಜಂಗಮಲಿಂಗಕ್ಕೆ ಸಮರ್ಪಿಸಬೇಕು.
ಮನದಲ್ಲಿ ತಟ್ಟುವ ಮುಟ್ಟುವ ತಾಗುನಿರೋಧವೆಲ್ಲವನೂ
ಅವಧಾನದ ಮನದ ಕೊನೆಯ ಮೊನೆಯ ಮೇಲೆ,
ಮಹಾಘನಲಿಂಗಕ್ಕೆ ಸಮರ್ಪಿಸಬೇಕು.
ಈ ಕ್ರಮವನರಿದು ಸರ್ವಾವಧಾನಿಯಾಗಿ,
ಗುರುಲಿಂಗಜಂಗಮಮುಖದಲ್ಲಿ ತನುಮನಧನವನರ್ಪಿಸಿ,
ಆ ಶುದ್ಧಸಿದ್ಧಪ್ರಸಿದ್ಧಪ್ರಸಾದದ ರೂಪುರುಚಿತೃಪ್ತಿಯ
ಆದಿಮಧ್ಯಾಂತವನರಿದು, ಸಾವಧಾನಭಕ್ತಿಯಿಂ
ಇಷ್ಟಪ್ರಾಣಭಾವಲಿಂಗಕ್ಕರ್ಪಿಸಿ, ಮಹಾಪ್ರಸಾದಿಯಾಗಿಪ್ಪಾತ,
ನಮ್ಮ ಚನ್ನಬಸವಣ್ಣ ಕಾಣಿರಯ್ಯಗಳಿರಾ.
ಈ ಪ್ರಕಾರದ ಅವಧಾನ ಮನವ ಕೊನೆಯ ಮೊನೆಯ ಮೇಲೆ,
ಸರ್ವಾರ್ಪಿತಕ್ರಮವನರಿದು ಪ್ರಸಾದಭೋಗಿಯಾಗಿಪ್ಪಾತನು.
ನಮ್ಮ ಸಂಗನಬಸವಣ್ಣನು ಕೇಳಿರಣ್ಣಗಳಿರಾ.
ಈ ಬಸವಣ್ಣನ ಪ್ರಸಾದವ ಕೊಂಡು ನಾನು ಬದುಕಿದೆನು ಕಾಣಾ,
ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ಮತ್ತೀ ಕ್ರಮವನರಿದು, ಅರ್ಪಿತಮುಖವನರಿದು ಅರ್ಪಿಸಿ,

ತೃಪ್ತಿಯನೈದಬಲ್ಲ ಶರಣರ ಮಹಾತ್ಮೆಯ ನೀವೆ ಬಲ್ಲಿರಲ್ಲದೆ
ನಾನೆತ್ತ ಬಲ್ಲೆನಯ್ಯಾ, ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೩೪ ||

೧೧೨೫

ಹೆಣ್ಣಿನೊಳಗೆ ಕಣ್ಣುಗೊಂಡು ಹುಟ್ಟಿ, ಮಣ್ಣು ಹೊಯ್ದುಕೊಂಬ
ಅಣ್ಣಗಳು ನೀವು ಕೇಳಿರೆ.
ಈ ಬಣ್ಣದ ಪರಿಯಾಯಕ್ಕೆ ಕಣ್ಣುಗೆಟ್ಟು ಬಿದ್ದಿರಲ್ಲಾ.
ಈ ಹೆಣ್ಣಿನ ಸಂಗ ನಿಮಗೇತಕಣ್ಣಾ.
ತನ್ನಲ್ಲಿ ಹೆಣ್ಣುಂಟು, ತನ್ನಲ್ಲಿ ಹೊನ್ನುಂಟು, ತನ್ನಲ್ಲಿ ಮಣ್ಣುಂಟು.
ಇಂತಿವ ನಿಮ್ಮಲ್ಲಿ ನೀವು ತಿಳಿದು ನೋಡಲಿಕ್ಕೆ,
ತನ್ನಲ್ಲಿ ತಾನೆ ಕಾಣಬಹುದು.
ತನ್ನ ತಾನರಿಲ್ಲದೆ ಇದಿರನರಿಯಬಾರದು.
ಇದಿರನರಿದಲ್ಲದೆ ಪರವನರಿಯಬಾರದು.
ಪರವನರಿದಲ್ಲದೆ ಸ್ವಯವನರಿಯಬಾರದು.
ಸ್ವಯವನರಿದಲ್ಲದೆ ಅರಿವು ತಲೆದೋರದು
ಅರಿವು ತಲೆದೋರಿದಲ್ಲದೆ ಕುರುಹು ನಷ್ಟವಾಗದು.
ಕುರುಹು ನಷ್ಟವಾದಲ್ಲದೆ ಮಾಯೆ ಹಿಂಗದು.
ಮಾಯ ಹಿಂಗಿದಲ್ಲದೆ ಮದವಳಿಯದು.
ಮದವಳಿದಲ್ಲದೆ ಮತ್ಸರ ಹೆರೆಸಾರದು.
ಮತ್ಸರ ಹೆರೆಸಾರಿದಲ್ಲದೆ ಮಹಾಘನವಳವಡದು.
ಮಹಾಘನವಳವಟ್ಟಲ್ಲದೆ ಮಹಾಲಿಂಗವ ಕಾಣಬಾರದು.
ಮಹಾಲಿಂಗವ ಕಂಡಲ್ಲದೆ ಮಹಾಪ್ರಕಾಶವ ಕಾಣಬಾರದು.
ಮಹಾಪ್ರಕಾಶವ ಕಂಡಲ್ಲದೆ ನಿತ್ಯವ ಕಾಣಬಾರದು.
ನಿತ್ಯವ ಕಂಡಲ್ಲದೆ ನಿಜವ ಕಾಣಬಾರದು.
ನಿಜವ ಕಂಡಲ್ಲದೆ ನಿರ್ಣಯವನರಿಯಬಾರದು.
ನಿರ್ಣಯವನರಿದಲ್ಲದೆ ಗುರುಲಿಂಗಜಂಗಮವನರಿಯಬಾರದು.
ಗುರುಲಿಂಗಜಂಗಮವನರಿದಲ್ಲದೆ ಪಾದತೀರ್ಥಪ್ರಸಾದವನರಿಯಬಾರದು.
ಪಾದತೀರ್ಥಪ್ರಸಾದವನರಿದಲ್ಲದೆ ಸಹಜ ಶರಣರ ಸಂಗವನರಿಯಬಾರದು.
ಇಂತಪ್ಪ ಶರಣರ ಸಂಗವನರಿದಲ್ಲದೆ ಸರ್ವನಿರ್ಣಯವನರಿಯಬಾರದು.
ಸರ್ವನಿರ್ಣಯವನರಿದಲ್ಲದೆ ಸಹಜಸದ್ಭಕ್ತರು ಮೆಚ್ಚರು.
ಸಹಜಸದ್ಭಕ್ತರು ಕೂಡಿ ನಡೆಯಬಲ್ಲಡೆ ಇದೇ ಸುಖವು.
ಸಂಗದೊಳಗೆ ಶರಣರ ಸಂಗವೆ ಸಂಗವು ಕೇಳಿರಯ್ಯಾ.

ಇಂತು ಸಾಯದೆ ನೋಯದೆ ಸ್ವಯವನರಿದು,
ಸದ್ಭಕ್ತರ ಸಂಗವ ಮಾಡಬಲ್ಲಾತನೆ ಲಿಂಗೈಕ್ಯನು.
ಅವ ತಾನೆ ಘನಲಿಂಗವು.
ಹೀಂಗಲ್ಲದೆ ಹಿಂದೆ ಮೆಟ್ಟಿಹೋಹ ಸಂದೇಹಿ ಮಾನವರೆಲ್ಲರೂ
ಜಗದ ಜಂಗುಳಿಗಳ ದಂದುಗದೊಳಗಾಗಿಪ್ಪರು.
ಆ ಗುಣವ ಬಿಟ್ಟು, ಶರಣರ ಸಂಗ ಸಹಜವೆಂದರಿದು,
ನಿಜವಾಗಿ ಬಂದಬಳಿಕ ಪೂರ್ವಭಾಗೆಗೆ ಬಾರೆನೆಂಬ ನಿಶ್ಚಯದಿಂ
ಪರಮ ಪ್ರಸಾದವನರಿದು, ಜಗದ ಹಂಗ ಹರಿದ ಶರಣನು
ಎನ್ನ ತಂದೆಯಾಗಿಪ್ಪನು ಕಾಣಾ, ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೆ
ಶಾಂತಚೆನ್ನಮಲ್ಲಿಕಾರ್ಜುನದೇವಯ್ಯಾ.
ಈ ಬಂದ ಪರಿಯಾಯವರಿದು, ತಾಮಸವ ಹಿಂಗಿ,
ಸಹಜ ನಿಜನಿತ್ಯವನರಿದು ಹೋದ ಶರಣರ
ನಿಲವಿನ ಪರಿಯ, ನೀವೆ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ,
ನಿಮ್ಮ ಧರ್ಮ ನಿಮ್ಮ ಧರ್ಮ ನಿಮ್ಮ ಧರ್ಮ. || ೩೫ ||

■ ■

## ಮರುಳಸಿದ್ಧೇಶ್ವರ ವಚನ

೧೧೨೬

ಆಲಿ ಆಲಯದಲ್ಲಿ ಕರಿಗೊಳಲು,
ಆಲಿಸುವ ಶ್ರವಣವು ಮೇಲಿಪ್ಪ ಆಕಾಶವನಡರಲು,
ಉಲುಹು ನಿರ್ಭೂತಚಿತ್ತ ಸಮಾಧಾನವನೆಯ್ದಲು,
ಕಾಲಕರ್ಮಭವಂಗಳ ಗೆಲುವುದಿದೇನು ಸೋಜಿಗವು ಹೇಳಾ,
ರೇವಣ್ಣಪ್ರಭುವೆ. ||೧||

# ಮಲಹರಕಾಯಕದ ಚಿಕ್ಕದೇವಯ್ಯನ ವಚನ

೧೦೨೭

ಆ ನಿಜದರಿವು ತಾನೊಂದು ಬಂಧನದಿಂದ
ಮರೆಯಾದುವ ತಾನರಿಯದೆ,
ಮರವೆಯು ಗುಣ ಇದಿರಿಗೆ ಅದೆಯೆಂದು ಸಂಪಾದಿಸುವಾಗ,
ಆ ತೆರ ಶಿಲೆಯು ನೆಳಲಿನ ಮರೆಯಲ್ಲಿ ತನ್ನಂಗ ಬಿಂಬಿಸಲಿಂತಾಗಿ,
ಅರಿ ಇದಿರಾಯಿತ್ತೆಂದು, ಶಿಲೆಯ ಕೊಂಡು,
ತಾನೊಂದು ಚೇತರಿಸಿಕೊಂಡು ನಿಂದ ಗಜದಂತೆ,
ನಿಜದರಿವು ತ್ರಿಗುಣಾತ್ಮಕದಲ್ಲಿ ಬೆರಸಿ,
ತ್ರಿದೋಷದ ದೆಸೆಯಿಂದ ನಾನಾದರುಶನ
ಪಕ್ಷಪಾತಂಗಳಲ್ಲಿ ಹೊತ್ತು ಹೋರಿ,
ಅಧ್ಯಾತ್ಮ, ಆದಿಭೌತಿಕ, ಆದಿದೈವಿಕಂಗಳ ತಿಳಿಯಬೇಕೆಂದು,
ಭೂತಭವಿಷ್ಯದ್ವರ್ತಮಾನವ ವಿಚಾರಿಸಿಹೆನೆಂದು,
ಷಡುದರುಶನವ ಸಂಪಾದಿಸಿಹೆನೆಂದು,
ಪಂಚಭೌತಿಕ ಭೇದ, ಪಂಚವಿಂಶತಿತತ್ವ
ಮೂವತ್ತಾರು ಕ್ರಮ, ಐವತ್ತೊಂದು ಮೆಟ್ಟು,
ನೂರೊಂದರ ಲಕ್ಷ.

ಇಂತಿವ ಪ್ರಮಾಣಿಸಿ ತಿಳಿದಲ್ಲಿ, ಅದಕ್ಕೆ ಬೇರೆ ಬೇರೆ
ಸೂರ್ಯ ಚಂದ್ರ ಆಕಾಶ ವಾಯು ಆಗ್ನಿ
ಉದಕ ಪೃಥ್ವಿ ಬೇರೊಂದು ನೆಲಹೊಲಬುಂಟೆ ?
ಇಂತಿವೆಲ್ಲವು ವಸ್ತುಮಯದೊಳಗಿದ್ದ ಲಕ್ಷ.
ಊರೊಳಗಣ ಹಲವು ಕುಲವೆಲ್ಲವೂ ಅರಸಿನ ದೆಸೆ ಕುಲದಲ್ಲಿ
ಎಸಕವ ತಿಳಿದಡಗಿದ ತೆರದಂತೆ,
ಅರಿದು ನಡೆವ ಪರಮವಿರಕ್ತಂಗೆ
ಹಲವುಮಾತಿನ ಬಲೆಯ ಭ್ರಮೆಯಿಲ್ಲ.
ಗೆಲ್ಲಸೋಲದ ಕಲ್ಲೆದೆಯವನಲ್ಲ.
ಅಲ್ಲಿಗಲ್ಲಿಗೆ ಬಲ್ಲರಿಯರೆಂದು ಕೋಲಾಟಿಗರಂತೆ
ಕಥೆ ಕಾವ್ಯವೆಲ್ಲವ ಹೇಳುವನಲ್ಲ.
ತ್ರಿವಿಧಮಲವಿಲ್ಲದಡೆ ಒಲ್ಲೆನೆಂದು ತನ್ನಲ್ಲಿಗೆ ಬಂದಡೆ,
ಕೂಡಿ ಕದಂಬನಾಗಿ, ಮಧು ಮಕ್ಷಿಕನಂತೆ
ಸಂಸಾರದಲ್ಲಿಯೆ ಸಾವನಲ್ಲ.
ಕಲ್ಲಿಯೊಳಗಣ ಮಕರದ ಜೀವದಂತೆ, ಸಂಸಾರದಲ್ಲಿಯೆ ಹೋದ ಕುಳಿಗೊಂಬನಲ್ಲ.
ಆತನ ಇರವು ದಗ್ಧಪಟದಂತೆ,
ರತ್ನದೀಪ್ತಿಯ ಹೊದ್ದಿಗೆಯ ತೆರದಂತೆ,
ಸ್ಫಟಿಕದ ನಿರ್ದೇಹದ ವರ್ಣದ ಹೊದ್ದಿಗೆಯಂತೆ,
ಇಂತು ಚಿದ್ರೂಪನ ಇರವು.
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗದೊಳಗಾದವನ ಇರವು ||೧||

೧೨೮

ಒಂದು ವರ್ಣದಿಂದ, ಭೇದಕ್ರಮದಿಂದ ಕೂಡಲಾಗಿ,
ಪಂಚವರ್ಣವಾಯಿತ್ತು.
ಶ್ವೇತವರ್ಣ ಮೊದಲು ಪರಿಕ್ರಮದಿಂದ ಷಡುವರ್ಣವಾಯಿತ್ತು.
ಆ ವರ್ಣದ ಭೇದ ಬಿಳುಹಿನ ಸ್ವಾಯತ್ತೆಯಲ್ಲಡಗಿತ್ತು.
ಇಂತೀ ಪರಮನಿಂದ ಇಂದ್ರಿಯ ವಿಕಾರವಾದುದನರಿಯದೆ,
ಆತ್ಮಂಗೆ ಪರಿಭ್ರಮಣವೆಂದು ಸಂದೇಹವ ಮಾಡುವ
ಬಂಧಮೋಕ್ಷಕರ್ಮಂಗಳಿಗೆ ಪರಮಸಂದ ಹರಿದಲ್ಲದೆ,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವು ಸಾಧ್ಯವಲ್ಲ. ||೨||

೧೧೨೯

ಕಂಚು ತಾಮ್ರ ಹಿತ್ತಾಳಿ ಈ ಮೂರು ಸೀಸದಂಗನ ಭೇದ.
ಮನ ಬುದ್ಧಿ ಚಿತ್ತ ಈ ಮೂರು ಅಹಂಕಾರದಂಗದೊಡಲು.
ಅರಿದುದ ಮರೆದುದ ಮತ್ತರಿದೆನೆಂಬುದು
ಆ ಗುಣ ಕ್ಷಣಿಕಾತ್ಮನ ಒಡಲು.
ಇಂತಿವನರಿದು ಬಿಡಲು,
ಹಿರಿಯ ಹಸುಬೆಯೊಳಗಡಗಿದ ನಾನಾ ವ್ಯವಹಾರದೊಡಲು.
ಇಂತೀ ಗುಣವಡಗಿ,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವ ಕೂಡಬಲ್ಲಡೆ. || ೩ ||

೧೧೩೦

ಗಜಕರ್ಣದಂತೆ, ಇಂದ್ರಮಹೇಂದ್ರಜಾಲದಂತೆ,
ಅಗ್ನಿಸ್ತಂಭನೆಯಂತೆ, ಬಿಲ್ಲುವಿದ್ಯೆಯಂತೆ,
ಜಲಸೂತ್ರದಂತೆ, ರಣಕ್ಕೆ ತೊಲಗದ ಪಟುಭಟನಂತೆ.
ಇಂತೀ ಸರ್ವಾಂಗಲಿಂಗಿಯಾದ ಪರಿಪೂರ್ಣಭಕ್ತಜಂಗಮಕ್ಕೆ
ಇಂತಿವನರಿವ ಭೃತ್ಯಕುಲಕ್ಕೆ ತ್ರಿಸಂಧ್ಯಾಕಾಲ ಶರಣೆಂದು,
ಎನ್ನ ಮುಕ್ತನ ಮಾಡು, ನಿನ್ನ ಧರ್ಮ,
ಊರ್ಧ್ವರೇತೋಮೂರ್ತಿ ಶ್ವೇತಯಂಭು ಕಪಿಲೇಶ್ವರಲಿಂಗಾ. || ೪ ||

೧೧೩೧

ತತ್ವವಿದ್ಯೆಯೆಂದು ಮಿಕ್ಕಾದವರಿಗೆ ಹೇಳುವಾಗ,
ವಸ್ತುವಿದ್ಯೆಯೆಂದು ಮಿಕ್ಕಾದವರಿಗೆ ಹೇಳುವಾಗ
ಆ ತತ್ವವೂ ಆ ವಸ್ತುವೂ ತನ್ನ ಕತ್ತಲು ಕೂಸೆ ?
ತಾ ಸತ್ತೆನೆಂದು ಹೇಳುವಾಗ,
ಆ ಗುಣ ಚೇತನವೋ ? ಅಚೇತನವೋ ?
ಮದೋನ್ಮತ್ತಂಗೆ, ಸರ್ಪದಷ್ಟಂಗೆ,
ದುರ್ಗ್ರಹವೇದಿತಂಗೆ, ತ್ರಿವಿಧಮಲಲೋಲುಪ್ತಮತ್ತಂಗೆ
ಮತ್ತೆ ತನ್ನ ಕೊರತೆಯನರಿಯದ
ದುಶ್ಚರಿತ ಕುಹಕಿ ಕ್ಷುದ್ರಂಗೆ,
ಮತ್ತೆ ನಿಜವಸ್ತುವಲ್ಲಿ ಹೊತ್ತು ನಿತ್ತರಿಸಿಪ್ಪನೆ ?
ನಿಜನಿಃಕಲರಲ್ಲಿ, ನಿರ್ದೇಹಿಗಳಲ್ಲಿ, ನಿರಾಲಂಬರಲ್ಲಿ,

ಸರ್ವಕ್ರೀ ಸಂಪೂರ್ಣರಲ್ಲಿ, ಅಕುಟಿಲರಲ್ಲಿ
ಇಂತೀ ಉಭಯದಿರವ ತಿಳಿದು ಮಾಡುವ ಭಕ್ತಂಗೆ
ಗುರುವಿನ ಇರವು, ಚರದ ಲಕ್ಷಣ.
ಲಿಂಗದ ಪರೀಕ್ಷೆಯಿಂದ ತ್ರಿವಿಧದ ಬಿಡುಗಡೆಯ ಒಳಗೆ ಹಿಡಿವ,
ಬಿಡುಮುಡಿಯಲ್ಲಿ ಕೂಡುವ, ಕೊಂಬ ಎಡೆಗಳಲ್ಲಿ
ಅಡಿಗಡಿಗೆ ಒಡಗೂಡಿ ನೋಡುತ್ತಿರಬೇಕು.
ವರ್ಮದ ಬಿಡುಗಡೆಯಲ್ಲಿ ಮಾಡುವ
ಭಕ್ತನ ಕೂಡಿಹ ವಿರಕ್ತನ ತೆರ,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವು ತಾನಾದ ಭಕ್ತನ ಯುಕ್ತಿ. || ೫ ||

೧೧೩೨

ಪರಮನಿಂದ ಮನ, ಮನದಿಂದ ಬುದ್ಧಿ,
ಬುದ್ಧಿಯಿಂದ ಚಿತ್ತ, ಚಿತ್ತದಿಂದ ಅಹಂಕಾರ,
ಅಹಂಕಾರದಿಂದವೆ ಸರ್ವಕರಣೇಂದ್ರಿಯಂಗಳ ಮೊತ್ತದ ಬಳಗ,
ಇಂತೀ ಗುಣವ ಚಿತ್ತುವಿನಿಂದ ವಿಚಾರಿಸಿ,
ಪರಮನ ಪ್ರಕಾರವ ಬಂಧಿಸಿ, ನಿಂದಿಸಿದವಂಗಲ್ಲದೆ
ಹಿಂದಣ ಮುಂದಣ ಬಂಧ ಬಿಡದು.
ಆನಂದ ಹಿಂಗೆ, ಅಶ್ರುಜಲ ನಿಂದು, ಚಿತ್ತು ಚಿದಾದಿತ್ಯದಲ್ಲಿ
ನಷ್ಟವನೆಯ್ದಿದ ಮತ್ತೆ,
ಹಸುಬೆಯ ವ್ಯವಹಾರ ಬಟ್ಟಬಯಲು,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವ ಕೂಡಿದ ಮತ್ತೆ. || ೬ ||

೧೧೩೩

ಮನ ಬುದ್ಧಿ ಚಿತ್ತ ಅಹಂಕಾರವೆಂಬ
ನಾಲ್ಕು ಲೋಹದಿಂದ ಸರ್ವೇಂದ್ರಿಯದ ಮೊತ್ತ.
ಮನ ವಸ್ತುವ ಮುಟ್ಟದೆ, ನಿಜನಿಷ್ಠೆಯನರಿಯದೆ,
ಬಹುಮೊತ್ತದ ಮಾತಲ್ಲದ ಮಾತನಾಡುವದು,
ಕಳ್ಳವಣ, ಸಲ್ಲದ ತಾರ ಇವೆಲ್ಲವ ತಿಳಿದು
ಕಂಬಳಿಯ ಚೀಲದವನ ಬೆಂಬಳಿಯಲ್ಲಿ ಬನ್ನಿ.
ನಿಮಗಲ್ಲದ ಒಡವೆಯನೊಳ್ಳಿತ್ತು ಮಾಡಿಕೊಡುವೆ,

ಊರ್ಧ್ವರೇತೋಮೂರ್ತಿ ಶ್ವೇತ ಸ್ವಯಂಭು
ಕಪಿಲೇಶ್ವರಲಿಂಗ ಸಾಕ್ಷಿಯಾಗಿ. || ೭ ||

೧೧೩೪

ಮುರಿಗಂಚು ತವರ ಹಿತ್ತಾಳೆ ತಾಮ್ರ
ಇವು ಮೊದಲಾದ ಲೋಹವ ತನ್ನಿ.
ಕಳ್ಳವಣ, ಕಂದುವೆಳ್ಳ ಮೊದಲಾದ ರೊಕ್ಕವ ತನ್ನಿ.
ನಿಮಗಲ್ಲದ ಒಡವೆ ಎನಗೆ.
ನಿಮಗೆ ಒಳ್ಳಿ[ತ]ಹ ಒಡವೆಯ ಕೊಡುವೆ.
ಎನ್ನ ಕಂಬಳಿಯ [ಚೀಲವಂ] ಬಿಡುವೆ.
ಅದರಲ್ಲಿದ್ದ ಸಂಬಾರದ್ರವ್ಯವ
ಕೊಡುವೆನೆಂಬುದಕ್ಕೆನ್ನ ನಂಬಿ ಬನ್ನಿ.
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗದಾಣತಿ. || ೮ ||

೧೧೩೫

ರತ್ನದ ಕಾಂತಿಯು ಕಳೆಯಿಂದ,
ತನ್ನಂಗದಲ್ಲಿ ಹುಟ್ಟಿದ ಜಜ್ಜರಿ ಕಾಣಿಸಿಕೊಂಬಂತೆ.
ಚಂದ್ರನ ಕಳಂಕು ತನ್ನ ಪರಿಪೂರ್ಣದ ಬೆಳಗಿನ ಕಳೆಯಿಂದ,
ತನ್ನಲ್ಲಿಯೆ ಕಲೆ ಕಾಳಿಕವ ಕಾಣಿಸಿಕೊಂಬಂತೆ,
ಇಂತೀ ಸುವಸ್ತು ವಸ್ತುಕದಲ್ಲಿ ವಿಸ್ತರಿಸಲಾಗಿ,
ಪರಮ ಜೀವನಾದುದ ತಿಳಿದು ನೋಡಿಕೊಳ್ಳಿ.
ಗೆಲ್ಲಸೋಲದ ಮಾತಲ್ಲ.
ಆಗಮದ ಮಾತಿನ ಮಾಲೆಯ ನೀತಿಯಲ್ಲ.
ಬೆಂಕಿ ಕೆಟ್ಟಡೆ, ಉರುಹಿದಡೆ ಹೊತ್ತುವುದಲ್ಲದೆ
ದೀಪ ಕೆಟ್ಟಡೆ ಮತ್ತೆ ಉರುಹಿದಡೆ ಹೊತ್ತಿದುದುಂಟೆ ?
ಕ್ರೀವಂತ ಮರದಡೆ ಅರಿವನಲ್ಲದೆ,
ಮರೆದರಿದವ ಮತ್ತೆ ಮರೆದಡೆ ಮತ್ತರಿಯಬಲ್ಲುದೆ ?
ಬೆಳಗದ ಕಂಚು, ತೊಳೆಯದ ಕುಂಭ,
ಪಕ್ವಕ್ಕೆಳಿಯದ ಫಲ, ನೆರೆಯನರಿಯದವನ ಸತ್ಕ್ರಿಯಾ ಮಾಟ,
ಬರುಕಟೆ ವ್ರಥಾಹೋಯಿತ್ತು.
ಇಂತೀ ಗುಣವ ತಿಳಿದು ಅರಿದವರಲ್ಲಿ,

ತಾನರಿದು ಕೂಡಬೇಕು, ಕೂಡಿಕೊಳ್ಳಬೇಕು.
ಕೊಂಡು ಕೊಡಬೇಕು, ಕೊಟ್ಟೆನೆಂಬ ಎಡದೆರಪಿಲ್ಲದೆ,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವ ಕೂಡಬೇಕು. ||೯||

೧೩೬

ಸದ್ಭಕ್ತನಾದಡೆ ಪರಾಪರಸ್ತ್ರೀಯ ಕೂಡಬೇಕು.
ಸಜ್ಜನಪತಿವ್ರತೆಯಾದಡೆ ಪರಾಪರಪುರುಷನ ನೆರೆಯಬೇಕು.
ಇದು ಸದ್ಭಕ್ತಿಯ ಹಾದಿ, ಸದಾಸನ್ನದ್ಧರ ಉಭಯದ ಯೋಗ
ಈ ಗುಣವ ಒಳಗು ತಿಳಿದು, ಹೊರಗೆ ಮರೆದಡೆ,
ಊರ್ಧ್ವರೇತೋಮೂರ್ತಿ ಶ್ವೇತಸ್ವಯಂಭು
ಕಪಿಲೇಶ್ವರಲಿಂಗವ ಕೂಡಬಲ್ಲಡೆ. ||೧೦||

■ ■

## ಮಲ್ಲಿಕಾರ್ಜುನ ಪಂಡಿತಾರಾಧ್ಯರ ವಚನ

೧೩೭

ಅಜ್ಞಾನಿಗಳಪ್ಪವರ ಎನ್ನವರೆಂದಡೆ,
ಅಘಟಿತ ನಿರ್ಮ್ಮಾಣೆ, ಕೇಳಾ ತಂದೆ.
ಕರ್ತೃವೆ ಎನ್ನ ಮನದಲ್ಲಿ ಬುದ್ಧಿಗೊಡಾ
ಎಂದು ಉತ್ತರಗೊಡುವ ತಂದೆ.
ನಿನಗೆ ಶರಣೆಂದು ನಂಬಿದವರನು,
ಎನ್ನವರೆಂಬೆನು ಕೇಳಾ, ಶ್ರೀಮಲ್ಲಿಕಾರ್ಜುನ ತಂದೆ. ||೧||

೧೩೮

ಆರನಾದಡೂ ಅಯ್ಯಾ ಎಂದೆನಲಾರೆ.
ಆರನಾದಡೂ ದೇವಾ ಎಂದೆನಲಾರೆ.
ನೀನು ಜಗಭರಿತನಾಗಿ
ನಾನು ನಿಮ್ಮನೇ ಅಯ್ಯಾ ಎಂಬೆ.
ಎನಗಾರೂ ಇಲ್ಲದ ಕಾರಣ
ನೀವೇ ಶರಣೆಂಬೆ, ಶ್ರೀಮಲ್ಲಿಕಾರ್ಜುನಾ. ||೨||

೧೧೩೯

ಇರುಳು ಹಗಲು ಎಮ್ಮ ನೆನೆವುತ್ತ, ಮರೆವುತ್ತ,
ಮರುಗುತ್ತ, ಕುದಿಯುತ್ತ ಇಪ್ಪೆಯೋ ಕಂದಾಯೆಂದು,
ಇತ್ತಿತ್ತ ಬಾರಾ ಮಗನೆಯೆಂದು,
ನಿಮ್ಮ ಶ್ರೀಚರಣದಿಂದಯೆಂದು ಕರೆದಿರೆನ್ನ.
ಭಕ್ತಿಯ ಕೊಡಯ್ಯಾ.
ಶ್ರೀಮಲ್ಲಿಕಾರ್ಜುನಯ್ಯಾ ಎಂದಡೆ,
ಹಿಡಿಯೋ ಮಗನೆ ಎಂದೆಂಬಿರೆನ್ನ. ॥ ೩ ॥

೧೧೪೦

ಕಲ್ಪಿತೋದಕವೊಂದು, ಅರ್ಪಣೋದಕ ಮೂರು,
ಮತ್ತೆ ಅಂಗೋದಕತ್ರಯವಾಗಿಯೂ
ಮಿಕ್ಕ ಪ್ರಸಾದೋದಕ ಅವು ಮೂರು.
ಸತ್ವರಜತಮವನತಿಗಳೆದವರಿಗಲ್ಲದೆ,
ಹತ್ತುಪಾದೋದಕವನರಿಯಲರಿದು.
ತನು ಚಿತ್ತಶುದ್ಧನಾಗಿ ಗುರುಕರುಣದಿಂದವೆ
ಹತ್ತು ಪಾದೋದಕವ ಗ್ರಹಿಸುವ ಭಕ್ತರಿಗೆ ಸಂದಿಲ್ಲದಿಹೆ.
ಅವರು ನೀನು, ಮುತ್ತು ನೀರನು ಕೂಡಿದಾನಂದದ ಭೇದದೊಲು,
ತತ್ತ್ವಮಸಿಯಪ್ಪನ್ನೆ ಶ್ರೀಮಲ್ಲಿಕಾರ್ಜುನಾ. ॥ ೪ ॥

೧೧೪೧

ಕಾರ್ಯಪ್ರಯೋಜನವೆಂದಡೆಯೂ
ಆರಿಗಾರಿಗೆಯೂ ಹೋಗಬಾರದು.
ಬಟ್ಟವಕ್ಕದ ಸಂಸಾರ ಹೋಗಿ ಬರಬಾರದು.
ಜವನ ಗಾರುಪಟ್ಟಿಗೊಳಗಾಗದ ಮುನ್ನ,
ಶರಣೆಂದಡೆ ಕಾವನಮ್ಮ, ಶ್ರೀಮಲ್ಲಿಕಾರ್ಜುನಯ್ಯನು. ॥ ೫ ॥

೧೧೪೨

ಗುರುವೆ, ಇಹ-ಪರ ಗುರುವೆ, ಗುರುವೆ ಕರುಣಾಕರನೆ,
ಗುರುವೆ, ಶುದ್ಧಾತ್ಮನೆ ನಿರ್ಮಳಾಂಗನೆ.
ಗುರುವೆ, ನಿನ್ನಂತೆ ಎನ್ನುವನು ಮಾಡಿದ
ಪರಮ ಗುರುವೆ, ನೀನು ಶ್ರೀ ಮಲ್ಲಿಕಾರ್ಜುನಾ. ॥ ೬ ॥

೧೧೪೩

ಧನ ಜವ್ವನವುಳ್ಳಲ್ಲಿ ಶಿವಶರಣೆಂಬೆ.
ಮಾನವಾ, ನೆನೆ ನೆನೆಯೋ, ನೀ ಕೆಡದ ಮುನ್ನ.
ಧನ ನಿಲ್ಲದು, ಜವ್ವನ ನಿಲ್ಲದು, ನಿನ್ನ ಪ್ರಾಣ ನಿಲ್ಲದು.
ಇದನರಿದು, ಶ್ರೀಮಲ್ಲಿಕಾರ್ಜುನನ ನೆನೆಯೋ,
ನೀ ಕೆಡದ ಮುನ್ನ. ॥ ೭ ॥

೧೧೪೪

ಧೃತಿಗೆಟ್ಟು ದೈವವೆಂಬಿರಲ್ಲಯ್ಯಾ.
ಧೃತಿಗೆಟ್ಟು ದೈವವ ಪೂಜಿಸುವಿರಲ್ಲಯ್ಯಾ.
ಧೃತಿಗೆಟ್ಟು ದೈವಂಗಳ ಬೇಡುವಿರಲ್ಲಯ್ಯಾ.
ಗತಿಯಲ್ಲ, ದುರ್ಗತಿಯ ಮಾನವರಿರಾ
ದಿಟದಿಟ, ಅಲ್ಲಿ ಬೇಡದಿರಿರೆ.
ಶ್ರುತಿ ಸ್ಮೃತಿಗಳ ಕೇಳಿ,
ಅವೂ ಕೊಡಲರಿಯವೆಂಬುದ ನೆರೆನಂಬಿರೆ,
ನಮ್ಮ ಶ್ರೀಮಲ್ಲಿಕಾರ್ಜುನ ಕೊಡುವನು. ॥ ೮ ॥

೧೧೪೫

ನಾದ ಬಿಂದುವಿನಲ್ಲಿ ಆದಿ ಅಕ್ಷರದ್ವಯವ
ನೈದಿಸಿದ ಗುರು ಬಸವಣ್ಣನೇ
ಆಮೋದದಲಿ ಕೂಟ.
ಆನಂದ ಸಾನಂದ ತಾನೊಂದು ರೂಪಾಗಿ
ಸ್ವಾನುಭಾವದ ದೀಕ್ಷಾಪನ್ನವಯವಾ
ಭಾನುಮಂಡಲದಲ್ಲಿ ತಾರೆ ಮಧುಕರನೊಪ್ಪೆ
ಅನ್ವಯ (?) ನಿನ್ನ ಗುಣವರಿಯಲ್ಕೆ
ಚೆನ್ನಬಸವ ಅಯ್ಯನಾದನೆನಗೆ ಶ್ರೀಮಲ್ಲಿಕಾರ್ಜುನಾ. ॥ ೯ ॥

೧೧೪೬

ನಿನ್ನೆ ಹುಟ್ಟಿದ ಮಾನವರೆಲ್ಲರೂ
ಇದು ಸಾಸಂಗಿಗೇಕೆಂಬರಯ್ಯಾ.
ಕಾಳ ಕುಳ ಭುವನಲೋಕಂಗಳು
ನಾವು ಸಂಗಿಗಳೇಕೆನ್ನರಯ್ಯಾ.

ಎಲ್ಲಾ ಸಾಸಂಗಿಗಳಾದಡೆಯೂ
ಲೋಕಂಗಳು ನಡೆಯರೆಂದು,
ತಾನೊಬ್ಬನೆ ಸಾಸಂ[ಗಿಗ]ನಾದನು,
ಶ್ರೀಮಲ್ಲಿಕಾರ್ಜುನಯ್ಯನು. ||೧೦||

೧೧೪೭

ಪುಣ್ಯಪಾಪಂಗಳನರಿಯದ ಮುನ್ನ,
ಅಲ್ಲಿ ಅನೇಕ ಭವಭವಂಗಳಲ್ಲಿ ಬಂದೆ ನಾನಯ್ಯಾ.
ನಂಬಿ ಶರಣುಹೊಕ್ಕೆನಯ್ಯಾ.
ನಿಮ್ಮನೆಂದೂ ಅಗಲದಂತೆ ಎನ್ನ ನಡೆಸಯ್ಯಾ.
ನಿಮ್ಮ ಧರ್ಮವು.
ನಿಮ್ಮನೊಂದು ಬೇಡುವೆನು,
ಎನ್ನ ಕರ್ಮಬಂಧವ ಬಿಡಿಸುವಂತೆ ಮಾಡಯ್ಯಾ
ಶ್ರೀಮಲ್ಲಿಕಾರ್ಜುನಾ. ||೧೧||

೧೧೪೮

ಭಾವಾಭಾವಂಗಳನೊಲ್ಲದಿರ್ದಡೆ
ಭಾವಿಯಭಾವಿಯ ಲೋಕಂಗಳ ಸುಡು.
ಸವಿಯೆಂಬೆ ಹೋ ! ಹೋ ! ಹಾ ! ಹೋ ! ಹಾ !
ಬ್ರಹ್ಮ [ ತಾ] ಬಂದು ಭವನ ಭುಜಂಗಳ ತಕ್ಕೈಸಿ ನಿಂದ
ಹೋ ! ಹಾ ! ಹೋ ! ಹಾ !
ವಿಷ್ಣು ತಾ ಬಂದು ಶ್ರೀಪದಪದ್ಮಂಗೆ ಹತ್ತಿಯೇ ನಿಂದ
ನಿಮ್ಮರೋಮದ ಸಾಮರ್ಥ್ಯಂಗಳು
ಕ್ರೀವಿಡಿದಿರ್ದಡೆ ಆ ಭವವೆಲ್ಲ
ಮುರಿದು ನಿಂದೋಡಿದವು.
ನಿಮ್ಮ ರೋಮ ಸಾಮರ್ಥ್ಯಂಗಳಂತಹವು.
ಇಂತಹವು ನಿಮ್ಮ, ಕೇಳಯ್ಯಾ ಕೇಳಯ್ಯಾ
ಶ್ರೀಮಲ್ಲಿಕಾರ್ಜುನಯ್ಯ ಶರಣಾ. ||೧೨||

೧೧೪೯

ಮೃಗಕ್ಕೆಂದು ಬಿಲ್ಲ ಹಿಡಿದು ಶರವ ತೊಟ್ಟೆ ನಾನು.
ಮೃಗ ತಪ್ಪಿ ಶಿವ ದೊರಕೊಂಡನೆನಗೆ.

ಅನುಪಮ ದುರಿತವ ಕೆಡಿಸಲೆಂದು,
ಹೊಲೆಯನ ಕುಲಜನ ಮಾಡಿದ, ಶ್ರೀಮಲ್ಲಿಕಾರ್ಜುನ. ||೧೩||

೧೧೫೦

ಮೇಲುಗೆಟ್ಟ ಸೀಮೆ, ತೆರಹುಗೆಟ್ಟ ಬ್ಯರಹ್ಮ.
ಐದಾರು ಕಣೆಯದಿಂ ಮೇಲೆ ದುರ್ಗ.
ಕಾಲಾಳು ನಾಯಕರು, ಮೇಲೆ ರಥಪಾಯಕರು,
ಆರೈದು ಓರಂತೆ ದುರ್ಗದಲ್ಲಿ.
ಧಾರುಣಿಯ ಕಳ್ಳರಿಗೆ ತಾನಂಜಿ ದುರ್ಗದೊಳು
ಓರಂತೆ ಅಡಗಿರ್ದಾತ, ಶ್ರೀಮಲ್ಲಿಕಾರ್ಜುನ. ||೧೪||

೧೧೫೧

ಸೀಮೆ ಸಾಯುಜ್ಯವ ಮೀರಿದಾತ ಗುರು[ಮಯ್ಯಾ]
ನಾಮ ನಿರ್ನಾಮವಾದಾತ ಗುರುವಯ್ಯಾ.
ಸೋಮಪ್ರಭೆಯಿಂದತ್ತತ್ತ ಪಾವನನಾದಾತ,
ಆದಿ ಅಕ್ಷರವರಿತನಾತ ಗುರುವಯ್ಯಾ.
ನಾದ ಬಿಂದು ಕಳೆಯಾದಿಯರಿದಾತ
ಅಭೇದ್ಯ ಗುರು ಬಸವಣ್ಣ, ಶ್ರೀಮಲ್ಲಿಕಾರ್ಜುನಾ. ||೧೫||

೧೧೫೨

ಹಿಡಿಯೊಳಗುದಕವ ತುಂಬಿ,
ಆಸೆ ಮಾಡುವನೆಗ್ಗ ನೋಡಾ.
ಸಂಸಾರದಿಂದ ಬೆಂದು, ಆಸೆ ಮಾಡುವನೆಗ್ಗ ನೋಡಾ.
ಅವುದೊಂದುಳಿದುದ ಕಾಣೆ,
ಶ್ರೀಮಲ್ಲಿಕಾರ್ಜುನಯ್ಯ ತಂದೆ, ಒಬ್ಬನೇ ಉಳಿದನು. ||೧೬||

■ ■

## ಮಹಾದೇವೀರಯ್ಯನ ವಚನ

೧೧೫೩

ಜಾತಿ ಶೈವರು ಅಜಾತಿ ಶೈವರೆಂದು
ಎರಡು ಪ್ರಕಾರವಾಗಿಹರಯ್ಯಾ.
ಜಾತಿ ಶೈವರೆಂಬವರು ಶಿವಂಗೆ ಭೋಗಸ್ತ್ರೀಯರಯ್ಯಾ.
ಅಜಾತಿ ಶೈವರೆಂಬವರು ಶಿವಂಗೆ ಕುಲಸ್ತ್ರೀಯರಯ್ಯಾ.
ಜಾತಿ ಶೈವರೆಂಬವರು ಸರ್ವಭೋಗಂಗಳ ಬಯಸಿ ಮಾಡುವರಾಗಿ,
ದ್ವಾರೇ ಯಸ್ಸ ಚ ಮಾತಂಗೋ ವಾಯುವೇಗ ತುರಂಗಮಃ|
ಪೂರ್ಣೆಂದು ವದನಾ ನಾರೀ ಶಿವಪೂಜಾ ವಿಧೇಃ ಫಲಂಃ||
ಎಂದುದಾಗಿ, ಇವು ಜಾತಿಶೈವರಿಗೆ ಕೊಟ್ಟ ಭೋಗಂಗಳಯ್ಯಾ.
ಅಜಾತಿಶೈವರು ಗುರುಲಿಂಗಜಂಗಮಕ್ಕೆ ತನುಮನಧನವ ನಿವೇದಿಸಿ,
ಸರ್ವಸೂತಕರಹಿತರಾಗಿಹರಯ್ಯಾ.
ಅಹಂ ಮಾಹೇಶ್ವರ ಪ್ರಾಣೇ ಮಾಹೇಶ್ವರೋ ಮಮ ಪ್ರಾಣಃ|
ತಥೈಕಂ ನಿಷ್ಕ್ರಿಯಂ ಭೂಯಾದನ್ಯಲ್ಲಿಂಗೈಕ್ಯಮೇವ ಚ||
ಇದು ಕಾರಣ, ಸರ್ವೇಶ್ವರ ಚೆನ್ನಮಲ್ಲಿಕಾರ್ಜುನಯ್ಯನು
ಭಕ್ತಕಾಯನೆಂಬೈಕ್ಯಪದವನು ಅಜಾತಿಶೈವರಿಗೆ ಕೊಡುವನಯ್ಯಾ. ||೧||

## ಮಳುಬಾವಿಯ ಸೋಮಣ್ಣನ ವಚನ

೧೧೫೪

ಆಗಿಲ್ಲದ ಸಿರಿ, ಆಯುಷ್ಯವಿಲ್ಲದ ಬದುಕು.
ಸುಖವಿಲ್ಲದ ಸಂಸಾರ.
ಎಳತಟಿಗೊಂಬ ಕಾಯದ ಸಂಗ.
ಬಳಲಿಸುವ ಜೀವಭಾವ.
ಇವರ ಕಳವಳವಳಿದಲ್ಲದೆ
ಮಳುಬಾವಿಯ ಸೋಮನ ತಿಳಿಯಬಾರದು. ॥೧॥

## ಮಾದಾರ ಚೆನ್ನಯ್ಯನ ವಚನ

೧೧೫೫

ಕಾಯದ ಸುಳುಹುಳ್ಳನ್ನಕ್ಕ ಕರ್ಮಪೂಜೆ ಬೇಕೆಂಬರು.
ಜೀವನ ಸಂಚಾರವುಳ್ಳನಕ್ಕ ಜ್ಞಾನವನರಿಯಬೇಕೆಂಬರು.
ಜ್ಞಾನ ಧ್ಯಾನಿಸಿ ಕಾಬಲ್ಲಿ, ಕಾಯದ ಕರ್ಮದಿಂದ ಮುಕ್ತಿಯೋ ?
ಜೀವನ ಜ್ಞಾನದಿಂದ ಮುಕ್ತಿಯೋ? ಜ್ಞಾನ ಧ್ಯಾನದಿಂದ ಮುಕ್ತಿಯೋ ?
ಧ್ಯಾನಿಸಿ ಕಾಲ ಕುರುಹ ಎನಗೊಂದುಬಾರಿ ತೋರಾ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ ||೧||

೧೧೫೬

ಚಕ್ರಿಯ ಕುಲವಾಸದ ಮೃತ್ತಿಕೆಯಂತೆ,
ಏನ ನೆನೆದಡೂ ಅಪ್ಪುವಾರುವುದಕ್ಕೆ ಮುನ್ನವೆ,
ಚಿತ್ತದಲ್ಲಿ ತೋರುವ ತೋರಿಕೆ.
ಚಿತ್ರಕುಂಭಂಗಳ ಒಪ್ಪೊಪ್ಪದಲ್ಲಿ ಅಹ ತೆರನಂತೆ,
ವಸ್ತು ತನ್ನಯ ಭಾವದಲ್ಲಿ ನಿಶ್ಚಯವಾಗಿ ನಿಂದಲ್ಲಿ,
ಕೃತ್ಯ ಅಕೃತ್ಯವೆಂಬ ಹೆಚ್ಚುಕುಂದಿಲ್ಲ.
ಕರ್ಮವಿಲ್ಲದ ಪೂಜೆ,

ನಿರ್ಮಲವೆಂಬುದು ತೋರದ ಆ ಜಡ,
ಉಮ್ಮಳ ದುಮ್ಮಳವೆಂಬ ಉಭಯವಳಿದ ಸುಮ್ಮಾನಸುಖಿಗೆ
ಕರ್ಮ ನಿರ್ಮಲವೆಂಬುದೊಂದೂ ಇಲ್ಲ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ || ೨ ||

### ೧೧೫೭

ನಡೆನುಡಿ ಸಿದ್ಧಾಂತವಾದಲ್ಲಿ, ಕುಲ ಹೊಲೆ ಸೂತಕವಿಲ್ಲ.
ನುಡಿ ಲೇಸು, ನಡೆಯಧಮವಾದಲ್ಲಿ,
ಅದು ಬಿಡುಗಡೆಯಿಲ್ಲದ ಹೊಲೆ.
ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ,
ಕೆಟ್ಟು ನಡೆವುತ್ತ, ಮತ್ತೆ ಕುಲಜರೆಂಬ ಒಡಲವರುಂಟೆ ?
ಆಚಾರವೆ ಕುಲ, ಅನಾಚಾರವೆ ಹೊಲೆ.
ಇಂತೀ ಉಭಯವ ತಿಳಿದರಿಯಬೇಕು.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ || ೩ ||

### ೧೧೫೮

ನರಕುಲ ಹಲವಾದಲ್ಲಿ,
ಯೋನಿಯ ಉತ್ಪತ್ಯ ಒಂದೇ ಭೇದ.
ಮಾತಿನ ರಚನೆ ಎಷ್ಟಾದಡೇನು ?
ನಿಹಿತವರಿವುದು ಒಂದು ಭೇದ.
ವಸ್ತು ಜಾತಿ ಗೋತ್ರ ವಿಶೇಷವೆಂಬಲ್ಲಿ,
ದಿನರಾತ್ರಿಯೆಂಬ ಉಭಯವನಳಿವುದಕ್ಕೆ
ತಮ ಬೆಳಗೆರಡೆಂಬವಲ್ಲದಿಲ್ಲ.
ಕುಲ ಉಭಯಶಕ್ತಿ ಪುರುಷತ್ವವಲ್ಲದಿಲ್ಲ.
ಬೇರೆ ಹಲವು ತೆರನುಂಟೆಂದಡೆ,
ಮೀರಿ ಕಾಬ ಶ್ರುತ ದೃಷ್ಟ ಇನ್ನಾವುದು ?
ಎಲ್ಲಕ್ಕೂ ನೀರು ನೆಲ ಸೂರ್ಯ ಸೋಮ
ಆರೈದು ನೋಡುವ ದೃಷ್ಟಿಯೊಂದೆ ಬೊಂಬೆ.
ಬೊಂಬೆ ಹಲವ ನೋಡಿಹೆ,
ಬೊಂಬೆ ಹಲವಂದ ಕಾಣ್ಬಂತೆ,

ಅವರಂಗವ ತಿಳಿದು ನಿಂದಲ್ಲಿ,
ಹಲವು ಕುಲದ ಹೊಲೆಯೆಂದೂ ಇಲ್ಲವೆಂದೆ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ ||೪||

೧೧೫೯

ಮಹಾಜ್ಞಾನ ದಿವ್ಯಪರಿಪೂರ್ಣವಸ್ತು
ಜಗಹಿತಾರ್ಥವಾಗಿ ಸ್ವಯಂಭುವೆಂಬ ಸ್ವರೂಪವ ಬಿಟ್ಟು,
ಲೀಲಾಸಂಭವನಾಗಿ ಉಮಾಪತಿಯಾದಲ್ಲಿ,
ಪಂಚವಕ್ತ್ರದಿಂದ ಪಂಚಭೂತಿಕಂಗಳು ಕಲ್ಪಿಸುವಲ್ಲಿ,
ಕರ್ಮಶಕ್ತಿ ವಿಷ್ಣುರೂಪಾಯಿತ್ತು.
ಭಾವಶಕ್ತಿ ಬ್ರಹ್ಮರೂಪಾಯಿತ್ತು.
ಜ್ಞಾನಶಕ್ತಿ ರುದ್ರರೂಪಾಯಿತ್ತು.
ಈ ಉಭಯವ ಘಟಿಸಿ ನಿಂದಲ್ಲಿ,
ಷಡುದರ್ಶನ ಸಂಭವಿಸಿದ ಠಾವಾವುದು ?
ಒಂದು ವೃಕ್ಷದಲ್ಲಿ ಹುಟ್ಟಿದ ಫಲ, ಮೊದಲೆ ಎಳದಾಗಿ,
ತದನಂತರ ಮೀರಿ ಬಲಿದಲ್ಲದೆ ಬೀಜಾಂಕುರವಿಲ್ಲ.
ಮರದಿಂ ಮೀರಿ ತೋರುವ ಅಂಕುರವಿಲ್ಲ.
ವಸ್ತುವ ಮೀರುವ ದರ್ಶನವಿಲ್ಲ.
ಅಪ್ಪು ಒಂದರಲ್ಲಿ ಹಲವು ಫಲವನನುಭವಿಸುವಂತೆ,
ವಸ್ತು ಒಂದರಲ್ಲಿ ಸಕಲ ಕೃತ್ಯವ ಮಾಡಿ,
ತನ್ನ ಚಿತ್ತದ ಕಲೆಯ ಹರಿದುಕೊಂಬವಂಗೆ
ಅವನೊಳು ತಥ್ಯಮಿಥ್ಯ.
ಕೈಯುಳಿ ಕತ್ತಿ ಅಡಿಗೂಂಡಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ ||೫||

೧೧೬೦

ರಜ್ಜು ರಸ ಕೂಡಿ ಅಗ್ನಿ ಮುಟ್ಟಿ ಉರಿದಲ್ಲಿ,
ಅದೇತರ ಹೊದ್ದಿಗೆಯ ಬೆಳಗು ?
ರಜ್ಜು, ರಸದಿಂದವೋ ? ಅಗ್ನಿಯ ಭಾವದಿಂದವೋ ?
ಈ ಮೂರರ ಹೊಲಬಿನ ಹೊದ್ದಿಕೆಯಲ್ಲಿ
ಬೆಳಗುವ ಪ್ರಜ್ವಲಿತ ಅನಲನ ಕೂಡುವಿನೊಳಗಾಯಿತ್ತು.

ಕಾಯದ ಕರ್ಮದ ಜ್ಞಾನದಿಂದ ಕಂಡೆಹೆನೆಂದಡೆ,
ನಾಮವಿಲ್ಲದ ರೂಪು, ಭಾವದಿಂದ ಅರಿವ ಠಾವಾವುದು ?
ಒಂದರಿಂದ ಒಂದ ಕಂಡೆಹೆನೆಂಬ ಸಂದೇಹ,
ಇನ್ನೆಂದಿಗೆ ಹರಿಗು ?
ಕೈಯುಳಿ ಕತ್ತಿ ಅಡಿಗೂಂಡಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ || ೬ ||

೧೩೬೧

ವೇದ ಶಾಸ್ತ್ರಕ್ಕೆ ಹಾರುವನಾಗಿ,
ವೀರ ವಿತರಣಕ್ಕೆ ಕ್ಷತ್ರಿಯನಾಗಿ,
ಸರ್ವವನಾರೈದು ನೋಡುವಲ್ಲಿ,
ವೈಶ್ಯನಾಗಿ ವ್ಯಾಪಾರದೊಳಗಾಗಿ,
ಕೃಷಿಯ ಮಾಡುವುದಕ್ಕೆ ಶೂದ್ರನಾಗಿ.
ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ
ಎರಡು ಕುಲವಲ್ಲದೆ,
ಹೊಲೆ ಹದಿನೆಂಟುಜಾತಿಯೆಂಬ ಕುಲವಿಲ್ಲ.
ಬ್ರಹ್ಮವನರಿದಲ್ಲಿ ಬ್ರಾಹ್ಮಣ.
ಸರ್ವಜೀವಹತ ಕರ್ಮಕ್ಕೊಳಗಾಗಿದ್ದಲ್ಲಿ ಸಮಗಾರ.
ಈ ಉಭಯವನರಿದು ಮರೆಯಲಿಲ್ಲ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ || ೭ ||

೧೩೬೨

ಶುಕ್ಲ ಶೋಣಿತ ಮಜ್ಜೆ ಮಾಂಸ ಹಸಿವು ತೃಷೆ
ವ್ಯಸನ ವಿಷಯಾದಿಗಳೊಂದೆ ಭೇದ.
ಮಾಡುವ ಕೃಷಿ ವ್ಯವಸಾಯ ಹಲವಲ್ಲದೆ,
ತೋರುವ ತೋರಿಕೆ ಅರಿವಾತ್ಮನೊಂದೆ ಭೇದ.
ಆವ ಕುಲವಾದಡೂ ಅರಿದಲ್ಲಿಯೆ ಪರತತ್ವಭಾವಿ.
ಮರೆದಲ್ಲಿಯೆ ಮಲಮಾಯಾಸಂಬಂಧಿ.
ಇಂತೀ ಉಭಯವನರಿದು ಮರೆಯಲಿಲ್ಲ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾ[ತ್ಮಾ]ರಾಮ ರಾಮನಾ || ೮ ||

೧೧೬೩

ಸ್ಥೂಲ ಸೂಕ್ಷ್ಮ ಕಾರಣವೆಂಬ ಮೂರು ಕಂಬವ ನೆಟ್ಟು,
ಆಗುಚೇಗೆಯೆಂಬ ದಡಿಗೋಲಿನಲ್ಲಿ
ಆಗಡದ ಎಮ್ಮೆಯ ಚರ್ಮವ ತೆಗೆದು,
ಉಭಯನಾಮವೆಂಬ ನಾರಿನಲ್ಲಿ ತಿತ್ತಿಯನೊಪ್ಪವ ಮಾಡಿ,
ಭಾವವೆಂಬ ತಿಗುಡಿನಲ್ಲಿ
ಸರ್ವಸಾರವೆಂಬ ಖಾರದ ನೀರ ಹೊಯಿದು,
ಅಟ್ಟೆಯ ದುರ್ಗುಣ ಕೆಟ್ಟು,
ಮೆಟ್ಟಡಿಯವರಿಗೆ ಮುಟ್ಟಿಸಬಂದೆ.
ಮೆಟ್ಟಡಿಯ ತಪ್ಪುಲ ಕಾಯದೆ
ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ.
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಆರಿ ನಿಜಾ[ತ್ಮಾ]ರಾಮ ರಾಮನಾ ||೯||

೧೧೬೪

ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ,
ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ,
ಕಶ್ಯಪ ಕಮ್ಮಾರ, ರೋಮಜ ಕಂಚುಗಾರ,
ಕೌಂಡಿಲ್ಯ ನಾವಿದನೆಂಬುದನರಿದು,
ಮತ್ತೆ ಕುಲವುಂಟೆಂದು ಛಲಕ್ಕೆ ಹೋರಲೇತಕ್ಕೆ ?
ಇಂತೀ ಸಪ್ತಋಷಿಯರುಗಳೆಲ್ಲರೂ
ಸತ್ಯದಿಂದ ಮುಕ್ತರಾದುದನರಿಯದೆ,
ಅಸತ್ಯದಲ್ಲಿ ನಡೆದು, ವಿಪ್ರರು ನಾವು ಘನವೆಂದು
ಹೋರುವ ಹೊತ್ತುಹೋಕರ ಮಾತೇತಕ್ಕೆ ?
ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಆರಿ ನಿಜಾ[ತ್ಮಾ]ರಾಮ ರಾಮನಾ ||೧೦||

■ ■

## ಮಾದಾರ ಧೂಳಯ್ಯನ ವಚನ

೧೬೫

ಅಂಗಕ್ಕೆ ಲಿಂಗ, ಮನಕ್ಕೆ ಅರಿವಾಗಬೇಕೆಂದು
ಸಂದೇಹಗೊಂಬುದು ಅರಿವೋ, ಆತ್ಮನೋ ?
ಅಂಗಕ್ಕೆ ಅರಿವೆಂಬುದೊಂದು ಜೀವ,
ಜೀವಕ್ಕೆ ಕೊಡುವುದೊಂದು ಬೆಳಗು.
ತನ್ನಲ್ಲಿ ತೋರುವ ಘಟಬಿಂಬದ ಛಾಯೆ
ಹಲವು ತೆರನಾದಂತೆ,
ಸ್ಥೂಲಕ್ಕೆ ಸ್ಥೂಲ, ಸೂಕ್ಷ್ಮಕ್ಕೆ ಸೂಕ್ಷ್ಮವಾಗಿ
ಹೆಚ್ಚು ಕುಂದಿಲ್ಲದೆ ತೋರುವ ತೋರಿಕೆ,
ಘಟದ ಗುಣವೋ, ಬಿಂಬದ ಗುಣವೋ ?
ಎಂಬುದ ತಾನರಿತಲ್ಲಿ, ಉಭಯದ ಸೂತಕಕ್ಕೆ ಹೊರಗು.
ಹೊರಗೆಂಬ ಭಾವವ ಅರಿದಲ್ಲಿ,
ಕಾಮಧೂಮ ಧೂಳೇಶ್ವರನೆಲ್ಲಿಯೂ ತಾನೆ. ||೧||

೧೬೬

ಅಂಗದಲ್ಲಿ ಲೀಯವಾಗಿ ತೋರುವುದೆಲ್ಲ
ರೂಪೋ, ವಿರೂಪೋ ? ಎಂಬುದ ತಾನರಿತಲ್ಲಿ,

ಅಂಗ ಅರಿಯಿತ್ತೋ, ಆತ್ಮ ಅರಿಯಿತ್ತೋ ?
ಇಂತೀ ಉಭಯದ ಸಂದಣಿಯಲ್ಲಿ ಗೊಂದಳಗೊಳಲಾರದೆ,
ಆರಾರೆಂದಂತೆ ಆರೈಕೆಯಲ್ಲಿದ್ದು ; ತಾನು ತಾನಾದವಂಗೆ
ಮತ್ತೇನೂ ಎನಲಿಲ್ಲ, ಕಾಮಧೂಮ ಧೂಳೇಶ್ವರಾ. ||೨||

೧೧೬೭

ಅಂಗದಲ್ಲಿ ಸೋಂಕಿದ ಸೋಂಕ ಲಿಂಗವೆಂದು
ಪ್ರಮಾಣಿಸಿ ಕೊಟ್ಟೆಹೆನೆಂಬುದು,
ಆ ಅಂಗ ಲಿಂಗದಂಗವೋ ? ಲಿಂಗ ಅಂಗದಂಗವೋ ?
ಉಭಯದಂಗ ಬೇರೊಂದು ಆತ್ಮನ ಸಂಗವೋ ?
ಅದು ವಾರಿಯ ಶಿಲೆಯಂತೆ, ನೋಡನೋಡಲಿಕ್ಕೆ ನೀರಾಯಿತ್ತು.
ನೀರು ಕಲ್ಲಾದ ಭೇದ, ಕಲ್ಲು ನೀರಾದ ಭೇದ.
ಈ ಉಭಯದಲ್ಲಿಯೆ ದೃಷ್ಟ ನಿರ್ಲೇಪ,
ಕಾಮಧೂಮ ಧೂಳೇಶ್ವರಾ. ||೩||

೧೧೬೮

ಅಂಗ ಪ್ರಾಣ ಸಂಗವುಳ್ಳನ್ನಕ್ಕ,
ಲಿಂಗಪೂಜೆಯೆಂಬ ದಂದುಗ ಬಿಡದು.
ಈ ಹೊರಗು ಒಳಗಾಗಿಯಲ್ಲದೆ,
ಪ್ರಾಣಲಿಂಗಿಯೆಂಬ ಸಂಬಂಧಿಯಲ್ಲ.
ಲಿಂಗಕ್ಕೆ ಪ್ರಾಣ, ಪ್ರಾಣಕ್ಕೆ ಲಿಂಗ
ಉಭಯಸಂಬಂಧವಾದಲ್ಲಿ,
ಉರಿ ಕೊಂಡ ಕರ್ಪುರಕ್ಕೆ ತೊಡರುವುದಕ್ಕೆ ಠಾವಿಲ್ಲ,
ಕಾಮಧೂಮ ಧೂಳೇಶ್ವರಾ. ||೪||

೧೧೬೯

ಅಂಗಲಿಂಗವೆಂಬನ್ನಕ್ಕರ ಕಾಯದ ಸೂತಕ.
ಪ್ರಾಣಲಿಂಗವೆಂಬನ್ನಕ್ಕರ ಅರಸುವುದೆ ಜನನಸೂತಕ.
ಮರೆವುದೆ ಮರಣಸೂತಕ.
ಸೂತಕವ ಹಿಂಗಿ ಅಜಾತನಾಗಬಲ್ಲಡೆ,
ಆತಂಗೆ ಏತರ ಬಂಧವೂ ಇಲ್ಲ, ಕಾಮಧೂಮ ಧೂಳೇಶ್ವರಾ. ||೫||

೧೧೭೦

ಅಗ್ನಿಯ ದೃಷ್ಟಿಯಂತೆ, ವಾಯುವಿನ ಆತ್ಮನಂತೆ,
ಬೆಳಗಿನ ಕಳೆಯಂತೆ, ಕಳೆಯ ಕಾಂತಿಯಂತೆ,
ಕಾಂತಿಯ ಬೆಳಗಿನಂತೆ, ಆ ಬೆಳಗಿನ ಬಳುವಳಿಯ ಸುಳುಹಿನಲ್ಲಿ
ಒಳಗಾಯಿತ್ತು, ನಿಜಾತ್ಮನ ನಿರ್ಲೇಪಭಾವ,
ಕಾಮಧೂಮ ಧೂಳೇಶ್ವರಾ. ||೬||

೧೧೭೧

ಅಟ್ಟೆಯ ಚುಚ್ಚುವ ಉಳಿಯ ಮೊನೆಯಲ್ಲಿ,
ಪ್ರತ್ಯಕ್ಷವಾದ ಪರಮೇಶ್ವರನ ಕಂಡು,
ಇತ್ತಲೇಕಯ್ಯಾ, ಕಾಯದ ತಿತ್ತಿಯ ಹೊತ್ತಾಡುವನ ಮುಂದೆ?
ನಿನ್ನ ಭಕ್ತರ ಠಾವಿನಲ್ಲಿಗೆ ಹೋಗಿ ಮುಕ್ತಿಯ ಮಾಡು.
ನೀ ಹೊತ್ತ ಬಹುರೂಪ[ದಿ] ತಪ್ಪದೆ
ರಜತಬೆಟ್ಟದ ಮೇಲಕ್ಕೆ ಹೋಗು,
ನಿನ್ನ ಭಕ್ತರ ಮುಕ್ತಿಯ ಮಾಡು.
ಕಾಮಧೂಮ ಧೂಳೇಶ್ವರನ ಕರುಣದಿಂದ ನೀನೆ ಬದುಕು. ||೭||

೧೧೭೨

ಅಣುವಿಂಗಣು, ಮಹತ್ತಿಂಗೆ ಮಹತ್ತಪ್ಪ ಘನವನರಿತಲ್ಲಿ,
ಮಣಿಮಾಲೆಯ ತಿರುಹಿ ತೊಳಲಲೇತಕ್ಕೆ?
ಅತ್ಯತಿಷ್ಠದ್ದಶಾಂಗುಲ ವಸ್ತುವಿಪ್ಪ ನೆಲೆಯನರಿತ ಮತ್ತೆ,
ಹತ್ತಿಹಿತ್ತು ಹಾವಸೆಯೆಂದು ಒರಸಲೇತಕ್ಕೆ?
ಉತ್ತರಕಕ್ಷೆಯ ತಿಳಿದು, ಪೂರ್ವಕಕ್ಷೆಯನರಿತು,
ಹೆಚ್ಚುಕುಂದೆಂಬ ಭಾವ ಅಚ್ಚೊತ್ತಿದಂತೆ ನಿಂದ ಮತ್ತೆ,
ಕರ್ತೃ ಭೃತ್ಯತ್ವವೆಂಬ ಉಭಯದ ಸೂತಕ ಅಳಿದಲ್ಲಿಯೆ,
ಕಾಮಧೂಮ ಧೂಳೇಶ್ವರನೆಂದೆನಲಿಲ್ಲ. ||೮||

೧೧೭೩

ಅಪ್ಪು ಉಳ್ಳನ್ನಕ್ಕ ತೊಪ್ಪೆ ಕಿಚ್ಚಿಗೊಳಗಪ್ಪುವೆ?
ಅಪ್ಪುವಾರಿ, ಕಿಚ್ಚು ಮುಟ್ಟಿದ ಮತ್ತೆ
ತೊಪ್ಪೆಯೆಂಬ ನಾಮ ಎತ್ತಹೋಯಿತ್ತು?
ಈ ಕಷ್ಟವ ಮುಟ್ಟಿದ್ದ ತನು, ದೃಷ್ಟವ ಕಂಡಿದ್ದ ಚಿತ್ತ,
ಈ ಉಭಯದ ಗೊತ್ತ ಕಂಡು,

ಈ ಗುಣ ಮುಕ್ತಿಯಹ ಭೇದವೆಂದು ಅರಿದ ಮತ್ತೆ,
ಕಟ್ಟಿ ಬಿಟ್ಟು ನೋಡಿ, ವಸ್ತುವ ಕಂಡೆಹೆನೆಂಬುದು
ಎತ್ತಣ ಶುದ್ಧಿ ಹೇಳಾ, ಕಾಮಧೂಮ ಧೂಳೇಶ್ವರಾ ? ||೯||

೧೧೭೪

ಅರಿದು ಕಂಡೆಹೆನೆಂಬನ್ನಬರ,
ಅರಿವಿಂಗೆ ಮುನ್ನವೆ ಪರಿಪೂರ್ಣವಸ್ತು.
ಬೇರೊಂದ ಕುರುಹಿನಿಂದ ಅರಿದೆಹೆನೆಂದಡೆ,
ಆ ಅರಿವಿನಿಂದ ಕುರುಹಿನ ಕುಲ ಹರಿಯಬೇಕು.
ಉತ್ತರ ಪೂರ್ವವೆಂಬ ಉಭಯದ ರಕ್ಷೆಯ ಸೂತಕ ಹರಿದು,
ನಿಶ್ಚಯವಾದ ಪರಿಪೂರ್ಣಂಗೆ ಹೆಚ್ಚು ಕುಂದೆಂಬುದಿಲ್ಲ,
ಕಾಮಧೂಮ ಧೂಳೇಶ್ವರಾ. ||೧೦||

೧೧೭೫

ಅರಿದು ಚುಚ್ಚುವರೆಲ್ಲರೂ ದನದಟ್ಟೆ.
ಮರೆದು ಚುಚ್ಚುವರೆಲ್ಲರೂ ದನದಟ್ಟೆ.
ನಾ ಚುಚ್ಚುವುದೆಲ್ಲ ಸತ್ತ ಜೀವದನದಟ್ಟೆ.
ಅಟ್ಟೆಯ ಕೊಯ್ದು ಮೆಟ್ಟಿಸಿದ ಸತ್ಯರಿಗೆಲ್ಲಕ್ಕೂ
ಎನಗೆ ಬಟ್ಟಬಯಲ ತೋರಬೇಕೆಂದು.
ನಿಮ್ಮ ಬಟ್ಟೆಯಲ್ಲಿ ನೀವೆ ಹೋಗಿ,
ಎನ್ನ ಬಟ್ಟೆ ಕಾಮಧೂಮ ಧೂಳೇಶ್ವರನ ಬಟ್ಟೆಯೇ ಸಾಕು. ||೧೧||

೧೧೭೬

ಅರಿದು ಮರೆದು ಎಚ್ಚತ್ತೆನೆಂಬಲ್ಲಿ ಅರಿವುಂಟೆ ?
ತೊಳಗಿ ಬೆಳಗಿ ಪ್ರಜ್ವಲಿಸಿ ಉರಿವ ಬೆಳಗು ಕೆಡುವಲ್ಲಿ,
ಉಡುಗುತ್ತಿದ್ದೇನೆ ಎಂದು ನುಡಿಯಿತ್ತೆ ?
ಇಂತಿವ ಹಿಡಿವಲ್ಲಿ, ಬಿಡುವಲ್ಲಿ, ಮಿಕ್ಕಾದವ ಒಡಗೂಡುವಲ್ಲಿ,
ಅಡಿಯೇರಿದ ಮತ್ತೆ ಪುನರಪಿ ಅಡಿ ಉಂಟೆ ?
ತೊಟ್ಟು ಬಿಟ್ಟ ಹಣ್ಣಿಂಗೆ ಮತ್ತಾ ಬುಡದಾಸೆಯೇಕೆ ?
ನಿಶ್ಚಯವೆಂಬುದು ನಷ್ಟವಾದಲ್ಲಿ,
ಕಾಮಧೂಮ ಧೂಳೇಶ್ವರನೆಂಬ ಲಕ್ಷವೇತಕ್ಕೆ ? ||೧೨||

೧೧೭೭

ಅರಿದೆಹೆ ಅರುಹಿಸಿಕೊಂಡೆಹೆನೆಂಬ ಉಭಯವುಳ್ಳನ್ನಕ್ಕ,
ಆ ಗುಣ ಅರಿವೋ, ಮರವೆಯೋ ಎಂಬುದ ತಿಳಿವುದು ಅದೇನು ಹೇಳಾ ?
ಕ್ರೀ ಉಳ್ಳನ್ನಕ್ಕ ನಿಃಕ್ರೀ ಕುರುಹುಗೊಂಡಿತ್ತು.
ಅರಿವುಳ್ಳನ್ನಕ್ಕ ಅಜ್ಞಾನ ಒಡಲುಗೊಂಡಿತ್ತು.
ತಮವುಳ್ಳನ್ನಕ್ಕ ಆ ಬೆಳಗು ತಮಕ್ಕೊಳಗಾಯಿತ್ತು.
ಅದೆಂತೆಂದಡೆ:
ವಾಯುವ ಬೆಂಬಳಿಯಲ್ಲಿ ಗಂಧಸ್ವರೂಪವಾದಂತೆ,
ಆವಾವ ಕುಸುಮದ ಗಂಧವ ವಾಯು ತಾ ಬೆರೆದಲ್ಲಿ,
ಬಂಧವಿಲ್ಲದ ತೆರದಂತೆ.
ಅರಿವುದು, ಅರುಹಿಸಿಕೊಂಬುದು ಎರಡಳಿದಲ್ಲಿ,
ಕುರುಹೆಂದು ಪ್ರಮಾಣಿಸುವುದಕ್ಕೆ, ಅರಿವೆಂದು ಕೂಡುವುದಕ್ಕೆ,
ಆ ಉಭಯದ ಎಡೆಯ ಹೇಳಾ.
ಕ್ರೀಯಿಂದ ಕಾಬ ಮುಕ್ತಿ, ಜ್ಞಾನದಿಂದ ಕಾಬ ನಿರವಯ.
ಆ ಗುಣ, ಶುಕ್ತಿಯಲ್ಲಿ ಅಡಗಿಪ್ಪ ಅಪ್ಪುವಿನಂತೆ,
ಒಪ್ಪಕ್ಕೆ ತಾನಾಗಿ ಕುಕ್ಕಿದಡೆ,
ಅಪ್ಪುವೆಂಬ ನಾಮಕ್ಕೆ ಸಿಕ್ಕಿಲ್ಲದೆ ನಿಶ್ಚಯವಾದುದು.
ನೀರು ಸಾರ ಕೂಡಿದಲ್ಲಿ,
ಏರ ಕಾಸಲಿಕ್ಕೆ ನೀರರತು ಸಾರ ಉಳಿದಂತೆ,
ಸಾರ ನೀರಿಂದ ಕುರುಹುಗೊಂಡಿತ್ತು.
ಆ ನೀರೆ ಸಾರವಾದಲ್ಲಿ, ಕೂಡಿ ಸವಿಯೆಂಬ ನಾಮವಾಯಿತ್ತು.
ಸವಿ ಸಾರ ಕೂಡಿ ಅಂಗದ ಮೇಲೆ ರೂಪವಾಯಿತ್ತು.
ನುಂಗಿದ ಮತ್ತೆ ಸವಿಸಾರ ಒಂದೂ ಇಲ್ಲ.
ಅಂಗವೆಂಬನ್ನಕ್ಕ ಲಿಂಗ, ಲಿಂಗವೆಂಬನ್ನಕ್ಕ ಅಂಗ.
ಉಭಯದ ಸಂಗವ ಜಡನೆಂದು ನುಂಗಿದ ಮತ್ತೆ,
ಆತ್ಮಂಗೆ ಬಂಧ ಮೋಕ್ಷವೆಂಬುದೊಂದೂ ಇಲ್ಲ.
ಕಾಮಧೂಮ ಧೂಳೇಶ್ವರನೆಂದು ಎನಲಿಲ್ಲ. || ೧೩ ||

೧೧೭೮

ಅರಿವು ಅರಿದಲ್ಲದೆ ಲಿಂಗವೆಂಬ ರೂಪಿಲ್ಲ.
ಅರಿವು ಅರಿದಲ್ಲದೆ ಜೀವಭಾವ ಹಿಂಗದು.
ಅರಿವೆಂಬ ಸೂತಕ ಹೆರೆಹಿಂಗುವನ್ನಬರ,

ನಾ ನೀನೆಂಬನ್ನಕ್ಕ ಒಡಲು.
ಅದೇನು ಕಾರಣ ಹೇಳಾ , ಕಾಮಧೂಮ ಧೂಳೇಶ್ವರಾ. ||೧೪||

೧೧೭೯

ಅರಿವು ಮರವೆಯೆಂಬ ಉಭಯದ ಭೇದವ ತಿಳಿದಲ್ಲಿ,
ಅಕ್ಷಿಯ ಮುಚ್ಚಿದಲ್ಲಿ ಬಯಲು, ಬಿಟ್ಟಲ್ಲಿ ಒಡಲುಗೊಂಡಿತ್ತು.
ಉಭಯದೃಷ್ಟವೆಂಬುದು ಇಷ್ಟಲ್ಲದಿಲ್ಲ.
ಇಷ್ಟವ ಹಿಡಿದಲ್ಲಿ ಕ್ರೀ, ಬಿಟ್ಟಲ್ಲಿ ಜ್ಞಾನವೆಂಬ ಕಟ್ಟಣೆವುಂಟೆ ?
ಕಾಷ್ಠವ ಹಿಡಿದ ಅಗ್ನಿಗೆ, ಅಗ್ನಿಯಲ್ಲಿ ನಷ್ಟವಾದ ಕಾಷ್ಠಕ್ಕೆ,
ಕೆಟ್ಟ ಮತ್ತೆ ಕೆಂಡವೆಂಬುದಿಲ್ಲ.
ನಷ್ಟವಾದ ಮತ್ತೆ ಕಟ್ಟಿಗೆಯೆಂಬುದಿಲ್ಲ.
ಕ್ರೀ ಭಾವ ಅಳವಟ್ಟು, ಭಾವ ಶೂನ್ಯವಾದಲ್ಲಿ
ಕಾಮಧೂಮ ಧೂಳೇಶ್ವರ ತಾನೂ ತಾನೆ. ||೧೫||

೧೧೮೦

ಅಲಗು ಮೊನೆಧಾರೆ ಕಟ್ಟುಳ್ಳವ ರಣಕ್ಕಂಜುವನೆ ?
ಮಲತ್ರಯದೂರ ಹಲವ ಕೆಲವರ ಒಲವರಕ್ಕೆ ಸಿಕ್ಕುವನೆ ?
ವಿರಳವೆಂಬುದ ಕಂಡು, ಅವಿರಳವೆಂಬುದನರಿತು,
ಶ್ರುತದೃಷ್ಟ ಅನುಮಾನಂಗಳ ಕಳೆದುಳಿದ ಮತ್ತೆ,
ಅರ್ಚಿಸಿ, ಪೂಜಿಸಿ ಕಂಡೆಹೆನೆಂಬುದು ಇತ್ತಲೆ ಉಳಿಯಿತ್ತು,
ಕಾಮಧೂಮ ಧೂಳೇಶ್ವರನತ್ತಲೈದಾನೆ. ||೧೬||

೧೧೮೧

ಆಕಾಶ ಆಕಾರವಾಗಿ ತೋರಿಯಡಗುವನ್ನಬರ,
ಬಯಲು ಬೆಳಗ ನುಂಗಿ, ಒಳಗಾಗಹನ್ನಬರ,
ವಾಯು ಗಂಧವ ಕೂಡುವನ್ನಬರ,
ಕಾಯದ ಇಷ್ಟವ ಜೀವವರಿವನ್ನಬರ,
ಆವ ಭಾವವನೂ ಆಡಿ ಭಾವಜ್ಞರೆನಿಸಿಕೊಂಬರಲ್ಲದೆ
ಭಾವದ ಸೂತಕವುಳ್ಳನ್ನಕ್ಕ,
ಜೀವ ಆವಾವ ಭಾವಂಗಳಲ್ಲಿ ಬಹುದು ತಪ್ಪದು.
ಇದಕ್ಕೆ ಎನಗಿನ್ನಾವುದು ಬಟ್ಟೆ, ಕಾಮಧೂಮ ಧೂಳೇಶ್ವರಾ. ||೧೭||

೧೧೮೨

ಆಕಾಶದ ನೀರಿಂಗೆ, ಮತ್ತೇತರಲ್ಲಿಯೂ
ತಿಳಿದಿಹೆನೆಂಬ ಸೂತಕವುಂಟೆ ?
ಪೃಥ್ವಿಯ ಸಂಗವ ಕೂಡಿದ ಅಪ್ಪುವಿಂಗಲ್ಲದೆ
ನಿಶ್ಚಯದ ಸುಜಲಕ್ಕುಂಟೆ ?
ಕರ್ಮದ ಕಪಟ, ನಿಶ್ಚಯವಾದ ನಿಜತತ್ವಭಾವಿಗೆ
ಮೇಲೊಂದು ಹತ್ತುವ ಹಾವಸೆ ಒಂದೂ ಇಲ್ಲ,
ಕಾಮಧೂಮ ಧೂಳೇಶ್ವರಾ. || ೧೮ ||

೧೧೮೩

ಆತ್ಮಕ್ಕೂ ಇಂದ್ರಿಯಕ್ಕೂ ಭಿನ್ನ ಉಂಟು, ಇಲ್ಲಾ ಎಂಬಲ್ಲಿ
ಆ ಆತ್ಮಂಗೆ ಇಂದ್ರಿಯಂಗಳು ತುಷಕಂಬು ತಂಡುಲದಂತೆ.
ಆತ್ಮದ ಇಂದ್ರಿಯದಲ್ಲಿ, ಹೊರೆ ಹೊರೆಯಲ್ಲಿ,
ನಿಂದು ನೋಡಲಿಕ್ಕೆ ಆತ್ಮ ಎಂದಿನ ನಿಜ ?
ತಾ ಬಂದ ಸ್ವಯದಂತೆ, ಕಾಮಧೂಮ ಧೂಳೇಶ್ವರನು. || ೧೯ ||

೧೧೮೪

ಆತ್ಮನ ಅರಿವು ಜೀವ ಭಾವವೆಂಬುದು ಅದೇತರ ಕೂಟಸ್ಥ ?
ಕಾಯದ ಸಂಸರ್ಗವೆಂಪಡೆ, ಅದು ವಿಭೇದರೂಪು.
ಕರಣಂಗಳ ಸಂಸರ್ಗದಿಂದ ಎಂದಡೆ,
ಆ ಇಂದ್ರಿಯಂಗಳು ಸ್ವತಂತ್ರಗಳಲ್ಲ.
ಜೀವಾತ್ಮ ಭಾವಾತ್ಮ ಪರಮಾತ್ಮನೆಂದಲ್ಲಿ,
ಜಾಗ್ರ ಸ್ವಪ್ನ ಸುಷುಪ್ತಿಗಳಲ್ಲಿ
ಕಂಡು ಕೂಡಿ ಅರಿದು ಮರೆದುದೇನೊ ?
ಎಂಬ ತ್ರಿವಿಧವ ತಿಳಿದು ಸಂಧಿಸಿ, ಕಂಡೆಹೆನೆಂಬ ಸಂದನಳಿದು,
ಅಳಿದೆನೆಂಬ ಸಂದೇಹ ನಿಂದಲ್ಲಿ, ಅದಾವ ಬೆಂಬಳಿಯ ಹೊಲಬು ?
ಅದು ನಾಮ ರೂಪು ಭಾವ ಬಯಲು, ಕಾಮಧೂಮ ಧೂಳೇಶ್ವರಾ. || ೨೦ ||

೧೧೮೫

ಆಧ್ಯಾತ್ಮಿಕದಿಂದಾವ ದೇಹವ.
ವ್ಯಾಧಿ ಬಾಧಿಸುವದಕ್ಕೆ ಮುನ್ನವೆ
ಬೇಗ ಬೇಗ ಶಿವನ ಭಜಿಸಿರೊ.
ದೇಹಧರ್ಮವು ಆರ ವಶವಲ್ಲ.

ದೇವ ದಾನವ ಮಾನವಾದಿಗಳಾದಡೂ
ಆವುದಾನೊಂದು ವ್ಯಾಧಿ ಬಿಡವು.
'ತೇನ ವಿನಾ ತೃಣಾಗ್ರಮಪಿ ನ ಚಲತಿ'
ಎಂದುದಾಗಿ, ಅಂದಂದಿಗೆ ದಿನ ತುಂಬಿದಂತೆ ನಿಶ್ಚೈಸಿ,
ಕಾಮಧೂಮ ಧೂಳೇಶ್ವರನನೊಲಿಸಲೋಸುಗ
ಬಂದ ಬಳಿಕ ಮರೆಯದಿರಿರೊ. || ೨೧ ||

೧೮೬

ಆವಾವ ವಾದ್ಯ ಘಟಭೇದಂಗಳಲ್ಲಿಯೂ
ಭಾವಶುದ್ಧವಾಗಿಪ್ಪುದು ನಾದ.
ಆರಾರ ವಿಶ್ವಾಸದ ಭಾವದಲ್ಲಿಯೂ
ದೈವಶುದ್ಧವಾಗಿಪ್ಪುದು ವಸ್ತು.
ಸ್ಥೂಲಕ್ಕೆ ಸ್ಥೂಲ, ಸೂಕ್ಷ್ಮಕ್ಕೆ ಸೂಕ್ಷ್ಮ ತನ್ಮಯವಾಗಿ,
ವರುಣನ ಕಿರಣದಂತೆ, ತನಗೆ ಮರೆಯಾದಲ್ಲಿ ನಿಂದು,
ಮರೆಗೆ ಹೊರಗಾದಲ್ಲಿ
ತನ್ನಿರವು ಎಲ್ಲಾ ಎಡೆಯಲ್ಲಿ ಪರಿಪೂರ್ಣವಾದಂತೆ.
ನೆನೆವರ ಮನದ ಕೊನೆಯಲ್ಲಿ, ಮರೆದವರ ಮರೆಯಲ್ಲಿ,
ಎಡೆದೆರಪಿಲ್ಲದ ವಸ್ತು ನೀನೆ, ಕಾಮಧೂಮ ಧೂಳೇಶ್ವರಾ. || ೨೨ ||

೧೮೭

ಆವುದ ಹಿಡಿದು ಬೀಸಿದಲ್ಲಿಯೂ ಗಾಳಿ ತಪ್ಪದು.
ಏನ ಹಿಡಿದು ನುಡಿದಿಹೆನೆಂಬನ್ನಕ್ಕ ಮನದ ಸೂತಕ ಮೊದಲು.
ಒಂದು ಕಂಡು ಒಂದರಲ್ಲಿ ಕೂಡಿಹೆನೆಂಬನ್ನಬರ,
ಅರಿವಿನ ಸೂತಕ ಬಿಡದು.
ದೀಪವ ಕೆಡಿಸಿದ ಸೆರಗಿನಂತೆ,
ಅನಲನಾಹುತಿಗೊಂಡ ಸಾರದಂತೆ,
ಬಯಲು ಬಯಲ ಕೂಡಿದ ನಿರಾಳಕ್ಕೆ ಲಕ್ಷವುಂಟೆ ?
ಅರಿವುದಕ್ಕೆ ಮುನ್ನವೆ ಅರಿದ ಅರಿವನು,
ಕರಿಗೊಂಡಲ್ಲಿಯೆ ಲೋಪ, ಕಾಮಧೂಮ ಧೂಳೇಶ್ವರಾ. || ೨೩ ||

೧೮೮

ಇಂತಿವನೆಲ್ಲವನರಿತು, ಕ್ರೀಯೊಳಗೆ ನೀನಿದ್ದಿಹೆಯೆಂಬ
ತೊಳಲಿಕೆಯೇಕೆ ಬಿಡದು ?

ನಾ ನೀನೆಂಬ ಸಂದೇಹ ಅದೇನು ಹೇಳಾ ?
ಹಾಂಗೆಂಬ ಕುರುಹು ಅರಿತು, ಅರಿವು ನಷ್ಟವಾಗಿ,
ಕುರುಹೆಂಬ ನಾಮ ನಿರ್ನಾಮವಾಯಿತ್ತು,
ಕಾಮಧೂಮ ಧೂಳೇಶ್ವರಾ. || ೨೪ ||

### ೧೮೯

ಇಂದ್ರಿಯಂಗಳ ಹಿಂಗಿ ನೋಡಿಹೆನೆಂಬ ಎಡೆಯಲ್ಲಿ,
ಇಂದ್ರಿಯಂಗಳ ಕೂಡಿ, ಸನ್ಮತನಾಗಿ ನಿಂದು ನೋಡಿಹೆನೆಂದಡೆ,
ತಿಲ ತೈಲದಂತೆ ಅಂಗವಳಿದು, ಆ ತಿಲದ ಬಿಂದು ದ್ವಂದ್ವವಳಿದು,
ಈಚೆಯಲ್ಲಿ ಬಂದು ನಿಂದಲ್ಲಿ,
ಅಂಗದ ಕರ್ಮ, ಇಂದ್ರಿಯಂಗಳ ಸಂದು,
ಆತ್ಮನ ಸಂದೇಹದ ಗುಣವೆಂಬೀ ಭೇದವ ತಿಳಿದಲ್ಲಿ,
ಕಾಮಧೂಮ ಧೂಳೇಶ್ವರನು ನಿರಂಗದ ಭಾವ. || ೨೫ ||

### ೧೯೦

ಇಷ್ಟಗುಟ್ಟೆಂಬುದು, ನಿಶ್ಚಯ ವಸ್ತುವೆಂಬುದು,
ಆತ್ಮನೇಕವೆಂಬುದು, ಇಂದ್ರಿಯಂಗಳು ಹಲವೆಂಬುದು,
ಅರಿವು ಹಿಂಗಲಿಕೆ ಒಂದೆಂಬುದು,
ಅಣೋರಣೀಯಾನ್ಮಹತೋ ಮಹೀಯಾನ್ ಎಂಬುದು,
ಎಲ್ಲಾ ದೃಷ್ಟದ ಲಕ್ಷದಲ್ಲಿ ಉಂಟೆಂಬುದು,
ಉಭಯಭಾವದಲ್ಲಿ ತೋರಿ ಹರಿದಾಡುವುದು,
ಅದು ಚಿತ್ತೋ, ಚಿದಾದಿತ್ಯನೋ, ವಸ್ತು ಭಾವವೋ ?
ಇಂತೀ ಲಕ್ಷ ಅಲಕ್ಷಂಗಳೆಂಬ ಗೊತ್ತ ಮೆಟ್ಟಿ, ಬಟ್ಟಬಯಲಾದ
ಕಾಮಧೂಮ ಧೂಳೇಶ್ವರನೊಳಗಾದೆ, ಆಗೆನೆಂಬ ಭಾವ ನಿಂದಲ್ಲಿ. || ೨೬ ||

### ೧೯೧

ಇಷ್ಟದಲ್ಲಿ ಲಕ್ಷಿಸಿ ನೋಡಿಹೆನೆಂಬುದು,
ಭಾವದಲ್ಲಿ ಭ್ರಮೆಯಳಿದು ಕಂಡೆಹೆನೆಂಬುದು,
ಭೂತ ಭವಿಷ್ಯದ್ವರ್ತಮಾನಂಗಳ ನಿರಾಕರಿಸಿ
ಕಂಡೆಹೆನೆಂಬುದು ಅದೇತರ ಚಿಹ್ನ ?
ಈ ತೆರದ ಭೇದಂಗಳಲ್ಲಿ
ದೃಕ್ಕಿನ ಸೂತ್ರದ ಬೊಂಬೆಯಂತೆ,
ತಾ ಕಂಡು ತನ್ನ ಕಾಣಿಸಿಕೊಂಬಂತೆ,

ಇದಿರ ದೃಶ್ಯಕ್ಕೆ ತಾನೊಳಗಾಗಿ,
ತನ್ನ ದೃಶ್ಯ ತನ್ನೊಳಗಾದ ಮತ್ತೆ
ಅನ್ಯಭಿನ್ನವೆಂಬ ಉಭಯವಡಗಿತ್ತು,
ಕಾಮಧೂಮ ಧೂಳೇಶ್ವರನಲ್ಲಿ. || ೨೭ ||

೧೯೨

ಇಷ್ಟಾರ್ಥವ ಬಯಸಿ, ಮುಟ್ಟಿ ಪೂಜಿಸುವಲ್ಲಿ,
ಬ್ರಹ್ಮನ ಉತ್ಪತ್ಯಕ್ಕೆ ಒಳಗು,
ಮಾಡಿ ನೀಡಿ ಕೊಟ್ಟೆಹೆನೆಂಬುದೆಲ್ಲ,
ವಿಷ್ಣುವಿನ ಆಗುಚೇಗೆಗೆ ಒಳಗು.
ಅರ್ಚನೆ ಪೂಜನೆಯಿಂದ ಕೃತ್ಯ ತಪ್ಪದೆ ಮಾಡಿಹೆನೆಂಬುದೆಲ್ಲ,
ರುದ್ರನ ಗಿರಿಯ ತಪ್ಪಲಿನೊಳಗು.
ತಪ್ಪಲ ಕಾಯ್ದು ಸಾಯದ ಮುನ್ನವೆ ನಿಶ್ಚಯಿಸಿಕೊಳ್ಳಿ,
ಕಾಮಧೂಮ ಧೂಳೇಶ್ವರನನರಿಯಬಲ್ಲಡೆ. || ೨೮ ||

೧೯೩

ಉಂಟೆಂಬಲ್ಲಿಯೆ ಜ್ಞಾನಕ್ಕೆ ದೂರ.
ಇಲ್ಲಾ ಎಂಬಲ್ಲಿಯೆ ಸಮಯಕ್ಕೆ ದೂರ.
ತನುವಿಗೆ ಬಂದ ಪ್ರಾಪ್ತಿಯ ಅನುಭವಿಸುವುದಕ್ಕೆ ಒಡಲಾಯಿತ್ತು.
ಪ್ರಾಪ್ತಿಯನುಂಬುದು ಘಟವೋ, ಆತ್ಮನೋ ?
ಒಂದನಹುದು, ಒಂದನಲ್ಲಾ ಎನಬಾರದು.
ಇಲ್ಲಾ ಎಂದಡೆ ಕ್ರೀವಂತರಿಗೆ ಭಿನ್ನ.
ಅಹುದೆಂದಡೆ ಅರಿದಾತಂಗೆ ವಿರೋಧ.
ತೆರಪಿಲ್ಲದ ಘನವ ಉಪಮಿಸಲಿಲ್ಲ.
ಕಾಮಧೂಮ ಧೂಳೇಶ್ವರನ ಮುಂದೆ ಹೋಗಲಿಲ್ಲ,
ಹಿಂದೆ ಉಳಿಯಲಿಲ್ಲ. || ೨೯ ||

೧೯೪

ಉಂಡು ಉಪವಾಸಿಯಾದನಾಗಿ, ಬಳಸಿ ಬ್ರಹ್ಮಚಾರಿಯಾದನಾಗಿ,
ಕಂಡೂ ಕಾಣದಂತೆ ಇದ್ದನಾಗಿ.
ಅಂಗವೆಂಬ ಭಾವ, ಲಿಂಗವೆಂಬ ಕುರುಹು, ನಿರಂಗವೆಂಬ ಅರಿವು,
ತ್ರಿವಿಧದ ಕುರುಹು ಅಲ್ಲಿಯೆ ಅಡಗಿತ್ತು.
ಉರಿಯ ತುದಿಯ ಕರ್ಪೂರದಂತೆ, ಅಡಗಿದ ಭೇದವ ಸಡಗರಿಸಿದಲ್ಲಿ,
ಕಾಮಧೂಮ ಧೂಳೇಶ್ವರನೆಂಬ ಭಾವ ಕಲ್ಪಿತವಿಲ್ಲ. || ೩೦ ||

### ೧೧೯೫

ಉತ್ಪತ್ಯ ಪಿಂಡವೆಲ್ಲಕ್ಕೂ ಜನನವೊಂದೆ ಭೇದ.
ಲಯವಹ ಘಟಕ್ಕೆ ಹಲವು ತೆರನುಂಟು.
ಹಲವು ತೆರದ ಲಯವ ಬಲ್ಲಡೆ,
ಬೇರೊಂದು ಕುಲಹೊಲೆಸೂತಕವೆಂಬುದುಂಟೆ ?
ಬಂದ ಯೋನಿಯ ಹೊಂದುವ ಘಟದ ಉಭಯಸಂಧಿಯಲ್ಲಿ ಸಿಕ್ಕದೆ,
ನಿಂದ ನಿಜವೆ ತಾನಾದವಂಗೆ
ಬೇರೊಂದು ಇಲ್ಲಾ ಎಂದೆ, ಕಾಮಧೂಮ ಧೂಳೇಶ್ವರಾ. ||೩೧||

### ೧೧೯೬

ಎನ್ನ ತನುವ ನಿರ್ಮಲ ಮಾಡಿದನಯ್ಯಾ,
ಬಸವಣ್ಣನು.
ಎನ್ನ ಮನವ ನಿರ್ಮಲ ಮಾಡಿದನಯ್ಯಾ,
ಚೆನ್ನಬಸವಣ್ಣನು.
ಎನ್ನ ಪ್ರಾಣವ ನಿರ್ಮಲ ಮಾಡಿದನಯ್ಯಾ,
ಪ್ರಭುದೇವರು.
ಇಂತೆನ್ನ ತನುಮನಪ್ರಾಣವ ನಿರ್ಮಲ ಮಾಡಿ,
ತಮ್ಮೊಳಿಂಬಿಟ್ಟುಕೊಂಡ ಕಾರಣ,
ಕಾಮಧೂಮ ಧೂಳೇಶ್ವರಾ
ನಿಮ್ಮ ಶರಣರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು. ||೩೨||

### ೧೧೯೭

ಎಸಳು ಬಿಟ್ಟು, ಕುಸುಮ ಉದುರಿ, ನಸುಫಲ ನಿಂದಲ್ಲಿ,
ಹಣ್ಣಿನ ಎಸಕದ ರಸ ಎಲ್ಲಿ ಇದ್ದಿತ್ತು ?
ಆ ವೃಕ್ಷದ ಬೇರಿನ ಸಾರದಲ್ಲಿ ಇದ್ದಿತ್ತು.
ಬೇರಿನ ಸಾರ ಒಣಗೆ, ಹಣ್ಣಿನ ಸಾರ ಅಲ್ಲಿಯೆ ಅಡಗಿತ್ತು.
ಆ ಗುಣವ ನೀ ತಿಳಿ, ಕಾಮಧೂಮ ಧೂಳೇಶ್ವರನಲ್ಲಿಯೆ. ||೩೩||

### ೧೧೯೮

ಓಗರವಿಲ್ಲದಿರ್ದಡೆ ಓಂ ನಮಃ ಶಿವಾಯ ಎಂಬ ನುಡಿಯಿಲ್ಲ.
ಕಾಮವಿಲ್ಲದಿರ್ದಡೆ ಪ್ರೇಮವಿಲ್ಲ.
ಭೂಮಿಯಿಲ್ಲದಿರ್ದಡೆ ಜೀವನಿಗೆ ಜನ್ಮವಿಲ್ಲ.
ಇದ ಮಹಾಮಹಿಮರು ಬಲ್ಲರಲ್ಲದೆ ಮಹಿಮರರಿಯರು.

ಕಾಮಧೂಮ ಧೂಳೇಶ್ವರಲಿಂಗದ ಶರಣರ ಕಂಡೆ,
ಬಲ್ಲೆನೆಂಬವರಂತಿರಲಿ. ||೩೪||

೧೧೯೯

ಕಂಗಳ ಸೂತಕದಿಂದ ಕಾಣಿಸಿಕೊಂಬುದು,
ಮನದ ಸೂತಕದಿಂದ ನೆನೆಯಿಸಿಕೊಂಬುದು,
ಕಾಯದ ಸೂತಕದಿಂದ ಮುಟ್ಟಿಸಿಕೊಂಬುದು,
ಮೂರರ ಸೂತಕದಲ್ಲಿ ಗಾರಾಗುತ್ತ,
ಮೀರಿ ಕಾಬ ಅರಿವು ಸೂರೆಯೇ ?
ನೆನಹಿಂಗೆ ಮುನ್ನವೆ ನೆನೆಯಿಸಿಕೊಂಡು,
ಅರಿವುದಕ್ಕೆ ಮುನ್ನವೆ ಅರುಹಿಸಿಕೊಂಡು,
ಬಂದುದನರಿಯದೆ ಕುರುಹಿನ ಹಾವಸೆಯಲ್ಲಿ
ಮರೆದು ಒರಗುತ್ತಿಹರ ಕಂಡು,
ಮರೆ ಮಾಡಿದೆಯಲ್ಲಾ, ಕಾಮಧೂಮ ಧೂಳೇಶ್ವರಾ. ||೩೫||

೧೨೦೦

ಕಂಗಳಲ್ಲಿ ನೋಡಿ ದೃಕ್ಕಿಂಗೆ ಒಳಗಪ್ಪುದದೇನು ಹೇಳಾ.
ನಾಸಿಕದಲ್ಲಿ ವಾಸಿಸಿ ಲೇಸಾಯಿತ್ತೆಂಬುದದೇನು ಹೇಳಾ.
ಕರ್ಣದಲ್ಲಿ ಕೇಳಿ ಜೊಂಪಿಸಿ ತಲೆದೂಗುವುದು ಅದೇನು ಹೇಳಾ.
ಜಿಹ್ವೆಯಲ್ಲಿ ಚಪ್ಪರಿದು ಪರಿಭಾವ
ಪರಿಪೂರ್ಣವಾಯಿತ್ತೆಂಬುದದೇನು ಹೇಳಾ.
ಕೈಯಲ್ಲಿ ಮುಟ್ಟಿ ಮೃದು ಕಠಿನವಾಯಿತ್ತೆಂಬುದದೇನು ಹೇಳಾ.
ಇಂತೀ ಗುಣ, ಐದರ ಸೂತಕವೋ ?
ತಾನರಿದೆ ಮರದೆನೆಂಬ ಭಾವದ ಸೂತಕವೋ?
ಒಂದು ಆತ್ಮನೆಂದಲ್ಲಿ,
ಇಂದ್ರಿಯಂಗಳು ಒಂದು ಬಿಟ್ಟು ಒಂದರಿಯವಾಗಿ.
ಹಲವೆಡೆ ಉಂಟೆಂದಲ್ಲಿ, ಆತ್ಮನ ಹೊಲಬುದಪ್ಪಿದಲ್ಲಿ,
ಆ ಕಳೆಯೆಲ್ಲಿ ಅಡಗಿತ್ತು ಹೇಳಾ ?
ಇಂತೀ ರೂಪು ಘಟಭಿನ್ನ ಹಲವು ಚೇತನಂಗಳಲ್ಲಿ ಚೇತನಿಸುವುದು
ಅದೇತರ ಗುಣವೆಂದು ಅರಿತಲ್ಲಿ,
ಅರಿವು ಸೂತಕ ಭ್ರಾಂತಿ ನಿಂದಲ್ಲಿ,
ಕಾಮಧೂಮ ಧೂಳೇಶ್ವರನೆಂಬುದಕ್ಕೆ ಠಾವಾವುದಯ್ಯಾ ? ||೩೬||

೧೨೦೧

ಕಂಡು ಅರ್ಪಿಸುವುದು ಬ್ರಹ್ಮತತ್ವ.
ಸಂದೇಹದಲ್ಲಿ ಅರ್ಪಿಸುವುದು ವಿಷ್ಣುತತ್ವ.
ಬಂಧಮೋಕ್ಷಕರ್ಮಗಳಿಲ್ಲವೆಂದು ಅರ್ಪಿಸುವುದು ರುದ್ರತತ್ವ.
ತತ್ವಂಗಳ ಗೊತ್ತ ಮುಟ್ಟದೆ ನಿಶ್ಚಯವಾದ ಪರಿಪೂರ್ಣಂಗೆ
ಉತ್ಪತ್ತಿ ಸ್ಥಿತಿ ಲಯವೆಂಬುದು ಇತ್ತಲೇ ಉಳಿಯಿತ್ತು,
ಕಾಮಧೂಮ ಧೂಳೇಶ್ವರನ ಮುಟ್ಟಲಿಲ್ಲವಾಗಿ. || ೩೭ ||

೧೨೦೨

ಕಟ್ಟದೆ ಘಟದಟ್ಟೆಯ ಹೊಲಿದು,
ಇಕ್ಕದೆ ಚತುರ್ವಿಧದ ನಾಲ್ಕು ಗುಂಟವ ಬಲಿದು.
ಗುಂಟದ ದ್ವಾರದಲ್ಲಿ, ಉಭಯಸಂಚದ ಬಾರ ತೆಗೆದು,
ತೊಡಕು ಬಂಧವನಿಕ್ಕಿ,
ಅಡಿಯ ಬಿಡದಂತೆ, ಹಿಂದಣ ಮಡ
ಮುಂದಣ ಉಂಗುಷ್ಠಕ್ಕೆ ಒಂದನೊಂದು ಬಾರದಂತೆ ಬಂಧಿಸಿ,
ಸಕಲೇಂದ್ರಿಯವೆಂಬ ಉಭಯವ ಸಂಧಿಸಿ ಕುಣಿಕೆಯನಿಕ್ಕಿ,
ಕಾಮದ ಒಡಲ ಮಾದಿಗ ಬಂದೆ,
ಘಟ ತೋಕುಳು ತೊಗಲು ಹದಬಂದಿತ್ತು.
ಹೊತ್ತು ಹೋದಿಹಿತಣ್ಣಾ.
ಮೆಟ್ಟಡಿಯ ಕೊಂಡ ರೊಕ್ಕವ ಕೊಡಿ.
ಒಪ್ಪಿದರಿರಲಿ. ಒಪ್ಪದಿದ್ದಡೆ
ಮೂರು ಮುಖದಪ್ಪಗೆ ಕೊಟ್ಟೆಹೆ.
ತಪ್ಪಡಿಯ ಮೆಟ್ಟೆ ಹೋಗುತ್ತಿದ್ದೇನೆ,
ಚನ್ನಯ್ಯಪ್ರಿಯ ಧೂಳನ ಧೂಳಿಗೊಳಗಾಗಿ. || ೩೮ ||

೧೨೦೩

ಕರಚರಣಾದಿ ದೇಹಂಗಳಲ್ಲಿ ಹೊಕ್ಕು,
ಒಳಗಡಗಿ. ಹೊರಗಣ ಬಾಹ್ಯವ ಹಿಡಿವುದದೇನೋ ?
ಹೊರಗಣ ಅರ್ಪಿತವ ಒಳಗೆ ಕೊಟ್ಟು, ಅರ್ಪಿಸುವುದದೇನೋ ?
ಆ ಒಳಗು ಹೊರಗೆಂಬ ಉಭಯವ ತಿಳಿದಲ್ಲಿ,
ಅನಲಂಗೆ ಕೀಳು ಮೇಲೆಂಬುದುಂಟೆ ?
ನೆರೆ ಅರಿದ ಆತ್ಮಂಗೆ, ಒಳಹೊರಗೆಂಬ
ಉಭಯದ ಸೂತಕವಿಲ್ಲ, ಕಾಮಧೂಮ ಧೂಳೇಶ್ವರಾ. || ೩೯ ||

೧೨೦೪

ಕಾಮವೆಂದಡೆ ಕುರಿತು ಕಾಬುದೊಂದು.
ಧೂಮವೆಂದಡೆ ಅದರಲ್ಲಿ ಉದಿಸಿ ತೋರುವ ತಮ.
ಇಂತೀ ಕಾಮ ಧೂಮವೆಂಬೀ ಎರಡ ಪುಡಿಗಟ್ಟಿ,
ಧೂಳಿ ಧೂಳೇಶ್ವರನಾದ. ||೪೦||

೧೨೦೫

ಕಾಮಿಗೆ ಯೋನಿಯೆಲ್ಲವೂ ಸರಿ.
ಕ್ರೋಧಿಗೆ ಕೊಲೆ ಸರ್ವಜೀವವೆಲ್ಲವೂ ಸರಿ.
ಲೋಭಿಗೆ ಜಯ ಅಪಜಯದಿಂದ ಬಂದ ದ್ರವ್ಯವೆಲ್ಲವೂ ಸರಿ.
ಪಾತಕಂಗೆ ಪಾಪಪುಣ್ಯವೆಂಬುದಿಲ್ಲ.
ಇಂತೀ ಜಗದ ಸೂತಕಕ್ಕೆ ಹೊರಗಾಗಿ,
ತ್ರಿಕರಣಸೂತಕಕ್ಕೆ ಒಳಗಲ್ಲದೆ,
ಕಾತು ಕರ್ಮವನರಿಯದೆ, ಜೀವ ಭವವ ನುಣ್ಣದೆ,
ಆವ ಠಾವಿನಲ್ಲಿಯೂ ಕಲೆ ನಿಷ್ಪತ್ತಿಯಾದ ಮತ್ತೆ
ಕಾಯಕ್ಕೆ ಕುರುಹಿಲ್ಲ, ಜೀವಕ್ಕೆ ಭಯವಿಲ್ಲ,
ಅರಿವಿಂಗೆ ಮರವೆಯಿಲ್ಲದೆ ತೋರದ ನಿರಾಳ,
ಕಾಮಧೂಮ ಧೂಳೇಶ್ವರ ತಾನೂ ತಾನೆ. ||೪೧||

೧೨೦೬

ಕಾಲಿಗೆ ಕೋಳ, ಕೈಗೆ ಸಂಕಲೆ,
ಕೊರಳಿಗೆ ಪಾಶ ಪಾಷಂಡಿಗಳಾಗುತ್ತ,
ಮತ್ತಾ ಅರಿವಿನ ಹೊಲಬೆಲ್ಲ ಅಡಗಿತ್ತು.
ಅಂಗದ ಕ್ರೀ, ಲಿಂಗದ ಕೂಟ, ನಿರಂಗದ ಸುಖವೆಂಬುದು
ಆ ಮೂರರ ಬಂಧದಲ್ಲಿ ಅಡಗಿತ್ತು.
ಬೇರೊಂದು ಸಂಗವೆಲ್ಲಿದ್ದಿತ್ತು ಹೇಳಾ ?
ನಿರಂಗವೆಂಬ ನಾಮವಿಲ್ಲದನೆ
ಕಾಮಕ್ಕೇಕೆ ಕೂಟವಾದೆ ? ದುರ್ಮುಖಕ್ಕೇಕೆ ಆತ್ಮನಾದೆ ?
ಕಾಮಧೂಮ ಧೂಳೇಶ್ವರನೆಂಬುದಕ್ಕೆ
ಕುರುಹಿಲ್ಲದ ನೆರೆ ನಾಮವಾದೆಯಲ್ಲಾ. ||೪೨||

೧೨೦೭

ಕುಂಭಘಟಕ್ಕೆ ಒಳಗೂ ಬಯಲು, ಹೊರಗು ಬಯಲು.
ಮೀರಿ ತಾ ನೋಡಿದಲ್ಲಿಯೂ ಬಯಲು.

ಶುಕ್ಲ ಶೋಣಿತದಾದ ಘಟಕ್ಕೆ, ಬಯಲೆಂಬುದಕ್ಕೆ ತೆರಪಿಲ್ಲ,
ಚೇತನಕ್ಕೆ ಒಳಗಾಗಿದ್ದುದಾಗಿ.
ಪೃಥ್ವಿ ಪೃಥ್ವಿಯ ಕೂಡುವನ್ನಬರ,
ಅಪ್ಪು ಅಪ್ಪುವ ಕೂಡುವನ್ನಬರ,
ತೇಜ ತೇಜವ ಕೂಡುವನ್ನಬರ,
ವಾಯು ವಾಯುವ ಕೂಡುವನ್ನಬರ,
ಆಕಾಶ ಆಕಾಶವ ಕೂಡುವನ್ನಬರ,
ಪಂಚತತ್ವಂಗಳು ತತ್ವವನೆಯ್ದಿದಲ್ಲಿ,
ಆತ್ಮಂಗೆ ಬಂಧಮೋಕ್ಷವೆಂಬ ಅಂದವಾವುದು ?
ಉಂಟೆಂಬುದು ತನ್ನಿಂದ, ಇಲ್ಲಾ ಎಂಬುದು ತನ್ನಿಂದ,
ತನ್ನಿಂದನ್ಯವಪ್ಪುದೊಂದಿಲ್ಲವಾಗಿ.
ಸ್ಥಾಣು ಚೋರನಂತೆ, ರಜ್ಜು ಸರ್ಪನಂತೆ,
ತಿಳಿದು ನೋಡಲಿಕೆ ಮತ್ತೇನೂ ಇಲ್ಲ.
ಕಾಮಧೂಮ ಧೂಳೇಶ್ವರನೆಂಬಲ್ಲಿ ಏನೂ ಇಲ್ಲ. || ೪೩ ||

೧೨೦೮

ಕುಸುಮದೊಳಗಡಗಿದ ಸುವಾಸನೆಯಂತೆ,
ರಸಿಕನಲ್ಲಿ ಅಡಗಿದ ಎಸಕದಂತೆ,
ಕೇಶದಲ್ಲಿ ಅಡಗಿದ ರಸರಂಜನೆಯಂತೆ,
ಅರಿದು, ಅರುಹಿಸಿಕೊಂಬುದು.
ಎರಡಳಿದು ಪರಿಪೂರ್ಣವಾದಲ್ಲಿ,
ಹಲವುಮಾತಿನ ಹೊಲಬಿನ ಸೂತಕವೇತಕ್ಕೆ
ಕಾಮಧೂಮ ಧೂಳೇಶ್ವರಾ ? || ೪೪ ||

೧೨೦೯

ಕೆಂಡ ಕೆಟ್ಟು ಕೆಂಡವಾಗಬಲ್ಲುದಲ್ಲದೆ,
ಬೂದಿಯಾಗಿ ಬೂದಿ ಹೊತ್ತಬಲ್ಲುದೆ ?
ಸೂತಕ ಸೂತಕಕ್ಕೊಳಗಪ್ಪುದಲ್ಲದೆ,
ಭಸ್ಮ ಮೇಲೆ, ಕೆಂಡ ಒಳಗಡಗಿದುದುಂಟೆ ?
ಅರಿದ ಅರಿವು ಮರವಿಂಗಪ್ಪುದೆ ?
ಅರಿವೆ ಶೂನ್ಯವಾಗಿ ಸುಖದುಃಖಕ್ಕೆ ಹೊರಗಾಗಬೇಕು.
ಕಾಮಧೂಮ ಧೂಳೇಶ್ವರಾ. || ೪೫ ||

೧೨೧೦

ಕ್ರಿಯಾದ್ವೈತ, ಭಾವಾದ್ವೈತ, ಅಧ್ಯಾತ್ಮಾದ್ವೈತ, ಅದ್ವೈತಂಗಳೆಂದು
ದಂಪತಿ ಸಂಬಂಧವಾಗಿ ನುಡಿವ ವಾಗ್ವಿಲಾಸಿತರೆಲ್ಲರು
ಜ್ಞಾನಾದ್ವೈತಸಂಬಂಧಿಗಳಾದರು.
ಸ್ಥೂಲದಿಂದ ಕಂಡು, ಸೂಕ್ಷ್ಮದಿಂದ ಅರಿದು,
ಕಾರಣದಲ್ಲಿ ಲಯವಾದ ಮತ್ತೆ, ತೋರಿಕೆ ದ್ವೈತವಾಯಿತ್ತು.
ದ್ವೈತ ಲೇಪವಾದಲ್ಲಿ, ಕುರುಹಿನ ಸೂತಕ ಅಲ್ಲಿಯೇ ಅಡಗಿತ್ತು,
ಕಾಮಧೂಮ ಧೂಳೇಶ್ವರನೆಂಬಲ್ಲಿಯೆ. || ೪೬ ||

೧೨೧೧

ಕ್ರೀಯೆಂದು ಕಲ್ಪಿಸುವಲ್ಲಿ, ನಿಃಕ್ರೀಯೆಂದು ಆರೋಪಿಸುವಲ್ಲಿ,
ಆ ಗುಣ ಭಾವವೋ, ನಿರ್ಭಾವವೋ ?
ಕ್ರೀಯಲ್ಲಿ ಕಾಬ ಲಕ್ಷ, ನಿಃಕ್ರೀಯಲ್ಲಿ ಕಾಬ ಚಿತ್ತ,
ಉಭಯದ ಗೊತ್ತು ಅದೇನು ಹೇಳಾ.
ಬೀಜದ ಸಸಿಯ ಒಳಗಣ ಬೇರಿನಂತೆ,
ಅದಾವ ಠಾವಿನ ಕುರುಹು ಹೇಳಾ.
ಲಕ್ಷ ನಿರ್ಲಕ್ಷವೆಂಬುದು ಅದೆಂತೆ ಇದ್ದಿತ್ತು
ಅಂತೆ ಇದ್ದಿತ್ತು, ಕಾಮಧೂಮ ಧೂಳೇಶ್ವರನು. || ೪೭ ||

೧೨೧೨

ಖಂಡಿತರಿಗೆ ಖಂಡಿತನಾಗಿ, ಅಖಂಡಿತರಿಗೆ ಪರಿಪೂರ್ಣನಾಗಿ,
ಕರಿ ಮುಕುರದೊಳಗಡಗಿ ತೋರುವಂತೆ,
ಚಿತ್ತಶುದ್ಧವುಳ್ಳವರಲ್ಲಿ ಅಚ್ಚೊತ್ತಿದಂತೆ ಅಡಗಿದೆಯಲ್ಲಾ,
ಕಾಮಧೂಮ ಧೂಳೇಶ್ವರಾ. || ೪೮ ||

೧೨೧೩

ಗುರುವೆಂಬ ಸೂತಕ, ಅರಿವಿನಿಂದ ಹರಿಯಬೇಕು.
ಲಿಂಗವೆಂಬ ಸೂತಕ, ಅರಿವಿನಿಂದ ಹರಿಯಬೇಕು.
ಅರಿವೆಂಬ ಸೂತಕಕ್ಕೆ ಮುಂದೆ ಒಂದ ಕಂಡೆಹೆನೆಂಬ
ಒಡಲಸೂತಕ ಹರಿಯಬೇಕು.
ಸೂತಕ ನಿಹಿತವಾದಲ್ಲಿ, ಕಾಮಧೂಮ ಧೂಳೇಶ್ವರ
ಎಂದೂ ಏನೂ ಎನಲಿಲ್ಲ. || ೪೯ ||

೧೨೧೪

ಜಲದಿಂದ ಮಲವ ತೊಳೆಯಬೇಕೆಂಬಲ್ಲಿ,
ಆ ಮಲ ಜಲದ ಸಾರದಿಂದ ಕೆಸರಾದಂತೆ.
ಅದು ಉಭಯದ ಕೂಟದಿಂದ ಪಂಕವಾದ ಸಂಚವನರಿಯಬೇಕು.
ತಿಳಿದು ನಿಂದಲ್ಲಿ, ಪಂಕವಡಿ ತಾ ಮೇಲಾದ ಶಂಕೆಯನರಿಯಬೇಕು.
ಈ ಉಭಯದ ಘಾಸ ಕಿರಿದಿನಲ್ಲಿ,
ಮಲವೇತರಿಂದ ಆಯಿತ್ತೆಂಬ ಒಲವರವನರಿದಲ್ಲಿ,
ಆತ ಆತ್ಮನ ನೆಲೆಯ ಬಲ್ಲನೆಂಬೆ, ಕಾಮಧೂಮ ಧೂಳೇಶ್ವರಾ. || ೫೦ ||

೧೨೧೫

ಜಾಗ್ರದಲ್ಲಿ ವ್ಯಾಪಾರ, ಸ್ವಪ್ನದಲ್ಲಿ ಕೂಟಸ್ಥ,
ಸುಷುಪ್ತಿಯಲ್ಲಿ ಮಗ್ನತೆ ಆಯಿತ್ತೆಂಬುದು ಅದೇನು ಹೇಳಾ.
ಸ್ಥೂಲತನುವಿನಲ್ಲಿ ಕೂಟಸ್ಥ, ಸೂಕ್ಷ್ಮತನುವಿನಲ್ಲಿ ಏಕಾರ್ಥ,
ಕಾರಣತನುವಿನಲ್ಲಿ ಲೇಪವಾಯಿತ್ತೆಂಬ ಭಾವವದೇನು ನೋಡಾ.
ಇಂತೀ ಜೀವಾತ್ಮ ಭಾವಾತ್ಮ ಪರಮಾತ್ಮ.
ಇಂತೀ ತ್ರಿವಿಧಾತ್ಮದಲ್ಲಿ ತಿರುಗುವ ಆತ್ಮ ಅದೇನು ಹೇಳಾ.
ಮೂರೆಂಬುದು, ಬೇರೊಂದು ಭಾವವೆಂಬುದು,
ಅವ ಕೂಡಿ ನಿರ್ಭಾವವೆಂಬುದು,
ಆ ಗುಣ ಇದಿರದೋ, ತನ್ನದೋ ? ಎಂಬುದನರಿದು ಮರೆದಲ್ಲಿ,
ಕಾಮಧೂಮ ಧೂಳೇಶ್ವರನು ಭಿನ್ನರೂಪನಲ್ಲ. || ೫೧ ||

೧೨೧೬

ಜಾತ, ಅಜಾತ, ನಿರ್ಜಾತನೆಂಬುದು ಅದೇತರ ಭಾವ ?
ಅದು ತನ್ನ ಭ್ರಾಂತಿನ ಕಲೆ.
ಸತ್ತೆನೆಂದು ಹೇಳುತಿಪ್ಪುದೆ ಹೆಣ ?
ಆ ನಿಶ್ಚಯವೆಂಬುದು ಹುಟ್ಟುಗೆಟ್ಟಲ್ಲಿ,
ಮತ್ತೆ ಬಟ್ಟಬಯಲೆಂಬ ದೃಷ್ಟವಿಲ್ಲ,
ಕಾಮಧೂಮ ಧೂಳೇಶ್ವರಾ. || ೫೨ ||

೧೨೧೭

ತನ್ನ ಗುಣವ ತಾನರಿತೆನೆಂಬಲ್ಲಿ, ಇದಿರಿನಲ್ಲಿ,
ಭಿನ್ನಗುಣವ ಸಂಪಾದಿಸಲುಂಟೆ ?

ಕರಿ ಮುಕುರದ ಇರವು, ಆ ಗುಣವ ಪರಿಹರಿಸಿ ನಿಂದಲ್ಲಿ,
ಉಭಯಭಾವಕ್ಕೆ ಹೊರಗು, ಕಾಮಧೂಮ ಧೂಳೇಶ್ವರಾ. || ೫೩ ||

೧೨೧೮

ತಾನೆಂಬುದ ಅರಿದೆನೆಂದರಿತಲ್ಲಿ,
ಇಷ್ಟಲಿಂಗದ ಪೂಜೆಯ ಗೊತ್ತು.
ಆ ಇಷ್ಟವ ನೆನೆವ ಚಿತ್ತ,
ಕರ್ಪುರದ ಘಟ್ಟಿಯ ಉರಿ ಕೊಂಡಂತೆ.
ತೊಳೆವ, ಹಿಳಿಕ ಸೂತಕ ನಿಂದಲ್ಲಿ,
ಪ್ರಾಣಲಿಂಗಸಂಬಂಧವೆಂಬ ಸಮಯಸೂತಕ ನಿಂದಲ್ಲಿ,
ಕಾಮಧೂಮ ಧೂಳೇಶ್ವರ ಏನೂ ಎನಲಿಲ್ಲ. || ೫೪ ||

೧೨೧೯

ತಿಲದೊಳಗಣ ತೈಲ, ಫಲದೊಳಗಣ ರಸ,
ಹೇಮದೊಳಗಣ ಬಣ್ಣ, ಮಾಂಸದೊಳಗಣ ಕ್ಷೀರ,
ಇಕ್ಷುದಂಡದ ಸಾರದ ಸವಿ,
ಒಳಗು ಹೊರಗಾಗಿಯಲ್ಲದೆ ಕುಲದ ಸೂತಕ ಬಿಡದು.
ಇಷ್ಟದಲ್ಲಿ ತೋರುವ ವಿಶ್ವಾಸ ದೃಷ್ಟವಾಗಿಯಲ್ಲದೆ,
ಶಿಲೆಕುಲದ ಸೂತಕ ಬಿಡದು.
ಬಿಡುವನ್ನಕ್ಕ ಜ್ಞಾನಶೂನ್ಯವಿಲ್ಲ, ಕಾಮಧೂಮ ಧೂಳೇಶ್ವರಾ. || ೫೫ ||

೧೨೨೦

ದರ್ಪಣವ ನೋಡುವ ದೃಷ್ಟಿ ನಷ್ಟವಾದ ಮತ್ತೆ,
ಆ ದರ್ಪಣವ ಲಕ್ಷಿಸಲಿಲ್ಲ.
ಅರಸುವ ಅರಕೆಯರತು, ಆ ಅರಕೆ ಕರಿಗೊಂಡ ಮತ್ತೆ,
ಆ ಬಯಕೆ ನಿಂದಿತ್ತು. ಆ ಬಯಕೆಯ ಭ್ರಮೆ ನಿಂದಲ್ಲಿ,
ಕಾಮಧೂಮ ಧೂಳೇಶ್ವರನೆಂಬುದಕ್ಕೆ ಇದಿರೆಡೆಯಿಲ್ಲ. || ೫೬ ||

೧೨೨೧

ಧರೆಯ ಮೇಲೆ ನಿಂದು ಹೊಡೆವಡಿಸಿಕೊಂಬ
ದೈವದ ಕುರುಹು ಎಲ್ಲಿ ಇದ್ದಿತ್ತು ಹೇಳಿರಣ್ಣಾ ?
ಶರೀರದ ಮೇಲೆ ಕಟ್ಟಿ, ಕರ ಚರಣಾದಿ ಅವಯವಂಗಳು ಮುಂತಾದ
ಹಲವು ಪರಿಭ್ರಮಣದಿಂದ ಪೂಜಿಸಿಕೊಂಬುದು, ಅದಾವ ಲಿಂಗವಣ್ಣಾ ?

ಸರ್ವರೆಲ್ಲರ ಕೈಯಲ್ಲಿ, ಇದು ವಸ್ತು ಅಲ್ಲ, ಅಹುದೆಂದು
ಗೆಲ್ಲ ಸೋಲಕ್ಕೆ ಹೋರುವುದು, ಅದಾವ ವಸ್ತುವಿನ ಕುರುಹಣ್ಣಾ ?
ಇಂತೀ ಸ್ಥಾವರ ಚರ ಅರಿವಿನ ಕುರುಹೆಂಬುದೊಂದು ಸೆರಗ ತೋರಾ ?
ಅದು ನುಡಿವಡೆ ಸಮಯಕ್ಕೆ ದೂರ.
ಅದು ಮುನ್ನವೆ ಅರಿವರಿವ ಈಗ ಕುರುಹಿಡುವಲ್ಲಿ,
ಅದು ಪರಿಭ್ರಮಣ ಭ್ರಾಂತಿ.
ಇಂತೀ ಕರ್ಮಕಾಂಡ, ಇಂತಿವನರಿದು ಬೆರೆದೆನೆಂಬ ಜ್ಞಾನಕಾಂಡ.
ಸುಮುದ್ರಿತವಾಗಿ, ಆ ಸುಮುದ್ರೆಯಲ್ಲಿ ಸೂತಕ ನಿಂದು,
ಅದೇತಕ್ಕೂ ಒಡಲಿಲ್ಲದಿಪ್ಪುದು,
ಕಾಮಧೂಮ ಧೂಳೇಶ್ವರ ತಾನು ತಾನೆ. ॥ ೫೭ ॥

೧೨೨೨

ಧೀರೆಯಾದ ಮಾಸ್ತಿಗೆ ವೀರತ್ವವಲ್ಲದೆ,
ಧಾರುಣಿಯ ಜನರೆಲ್ಲರೂ ಹೇಡಿ ಮಾಸ್ತಿ ಎಂದ ಬಳಿಕ,
ವೀರತ್ವ ಎಲ್ಲಿಯದೋ ?
ಧೀರೆಯಾದ ಮಾಸ್ತಿಯ ವೀರರಾಗಿದ್ದವರು
ಮುಡಿಯಲರ, ಹಿಡಿದ ನಿಂಬೆಯ ಹಣ್ಣ ಬೇಡಿದಂತೆ ಕೊಡುವಳು.
ದೃಢವುಳ್ಳ ವೀರರು ತರುವರು, ದೃಷ್ಟವ ನೋಡಿರಣ್ಣಾ.
ಕೊಡುವಾಕೆ ದಹನವಾದಳು, ಕೊಂಬಾತ ರೂಪಾದ.
ಈತ ಬೇಡಿದ ಇಷ್ಟವ ಕೊಟ್ಟಾ, ತನು
ಯಾತವೋ, ಆತ್ಮನೋ ? ಬಲ್ಲಡೆ ನೀವು ಹೇಳಿರಣ್ಣಾ.
ನಿಮ್ಮ ಜ್ಞಾನದ ಮುಸುಕ ತೆರೆದು.
ನಿಮ್ಮ ಬಲ್ಲಂತಿಕೆಯ ಕಾಣಬಹುದು.
ಕಾಮಧೂಮ ಧೂಳೇಶ್ವರಲಿಂಗವನರಿವುದಕ್ಕೆ
ಇದೇ ದೃಷ್ಟ. ॥ ೫೮ ॥

೧೨೨೩

ನಡೆವಾತನ ಕಾಲ ತರಿದು, ಕೊಡುವಾತನ ಕೈಯ ಮುರಿದು,
ನುಡಿವಾತನ ನಾಲಗೆಯ ಕಿತ್ತು, ನೋಡುವಾತನ ಕಣ್ಣ ಕಳೆದು,
ಅರಿದೆಹೆನೆಂಬ ಸೂತಕವ ಮುನ್ನವೆ ಮರೆದು. ಅರಿದ ಮತ್ತೆ
ತರುವಿನ ಶಾಖೆಯಲ್ಲಿ ತೋರುವ ಅರಗಿನ ಉರಿಯ ಯೋಗದಂತೆ,
ತನುವಿನ ಮೇಲಣ ಕುರುಹು. ಮನದ ಮೇಲಣ ಸೂತಕ.

ನೆನಹು ನಿಷ್ಪತ್ತಿಯಾದಲ್ಲಿ,
ಕಾಮಧೂಮ ಧೂಳೇಶ್ವರ, ಏನೂ ಎನಲಿಲ್ಲ. ||೫೯||

೧೨೨೪

ನಾನಾ ಚಿತ್ರ ವಿಚಿತ್ರ, ನಾನಾ ದೃಷ್ಟವಿದ್ಯಂಗಳಲ್ಲಿ
ಕಾಯಸಿದ್ಧಿ ಲೋಹಸಿದ್ಧಿ ಅಂಜನಸಿದ್ಧಿ ಒಳಗಾದ
ಸಂದೇಹಸಿದ್ಧಿವುಳ್ಳವರುಂಟು.
ಭಾವ ನಿರ್ಭಾವಸಿದ್ಧಿವಂತರನಾರನೂ ಕಾಣೆ.
ಅವರು ಕಂಡಲ್ಲಿಯೆ ನಾನೆಂಬ ಪ್ರತಿರೂಪು,
ಆ ಭಾವದಲ್ಲಿಯೆ ಲೇಪವಾಯಿತ್ತು,
ಕಾಮಧೂಮ ಧೂಳೇಶ್ವರನೆಂಬುದು ಭಾವ ಲೇಪವಾದಲ್ಲಿ. ||೬೦||

೧೨೨೫

ನಾನಾ ಜೀವದ ನೋವು ಒಂದೆಂದಲ್ಲಿ,
ಮರಣಕ್ಕೆ ನಾನಾ ಭೇದಂಗಳುಂಟು.
ಯೋನಿಯ ಕೂಟದ ಸುಖವೊಂದೆಂದಲ್ಲಿ,
ಯೋಗ ನಾನಾ ಭೇದಂಗಳುಂಟು.
ನಾನಾ ಸ್ಥಳಂಗಳ ಭೇದಿಸಿ, ವೇಧಿಸಿ, ಮೆಟ್ಟಿ ನೋಡಲಿಕ್ಕೆ
ಇಂದ್ರಿಯಂಗಳಿಗೆ ಭಿನ್ನರೂಪಾಗಿ ತೋರುತ್ತಿಹವು.
ಅದೇತರ ಗುಣವೆಂದು ನಿರಾಕರಿಸಿ ನೋಡಲಿಕ್ಕೆ ಅದಂತೆ ಇದ್ದಿತ್ತು.
ಅಂತೆಯಿದ್ದ ಮೇಲೆ ಅಂತೆಯಿಂತೆಯೆಸಲಿಲ್ಲ
ಆ ಗುಣ ಚಿಂತನೆಗೆ ಹೊರಗು, ಕಾಮಧೂಮ ಧೂಳೇಶ್ವರನು. ||೬೧||

೧೨೨೬

ನಾನಾ ಶಬ್ದಂಗಳ ಮುಟ್ಟುವ ಕೈ,
ಮುಟ್ಟಿಸಿಕೊಂಬ ವಾದ್ಯ,
ಈ ಉಭಯದ ತಂತ್ರವನರಿದು ಮುಟ್ಟುವ ಆತ್ಮಂಗೆ
ಮನ ನೆನೆದು ಮುಟ್ಟಿ, ವಾದ್ಯ ರಚನೆಯಾಗಿ,
ಕಳಾಸ ಕಡೆಗೇರಿದ ಮತ್ತೆ,
ತ್ರಿವಿಧದ ಗೊತ್ತು, ಸೂತಕ ಇತ್ತಲೆ ಉಳಿಯಿತ್ತು,
ಕಾಮಧೂಮ ಧೂಳೇಶ್ವರಾ. ||೬೨||

೧೨೨೭

ನಿಶ್ಚಯಿಸಿಕೊಂಡಲ್ಲಿಯೆ ನಿಜತತ್ವ.
ಉತ್ತರ ಪೂರ್ವ ಉಭಯದ ಕಕ್ಷೆಯ ಬಿಟ್ಟಲ್ಲಿಯೆ ನಿತ್ಯತ್ವ.
ಅನಿತ್ಯತ್ವವೆಂಬ ಗೊತ್ತ ಮರೆದಲ್ಲಿಯೆ,
ಕಾಮಧೂಮ ಧೂಳೇಶ್ವರನು ಸಚ್ಚಿದಾನಂದ. || ೬೩ ||

೧೨೨೮

ನುಡಿವಡೆ ಮಿಥ್ಯ, ಸುಮ್ಮನಿದ್ದಡೆ ತಥ್ಯವಲ್ಲ.
ಈ ಉಭಯದ ಹೆಚ್ಚು ಕುಂದ ಹೊತ್ತುಹೋರಿಯಾಡುತ್ತ,
ಮತ್ತೆ ನಿಶ್ಚಯವಂತ ನಾನೆಂದು,
ಹೆಚ್ಚು ಕುಂದಿನೊಳಗೆ ಬೇವುತ್ತ,
ಮತ್ತೆ ನಿಶ್ಚಯಕ್ಕೆ ದೃಷ್ಟವ ಕೇಳಲಿಲ್ಲ.
ಕಾಮಧೂಮ ಧೂಳೇಶ್ವರನು ನಿತ್ಯಾನಿತ್ಯದವನಲ್ಲ. || ೬೪ ||

೧೨೨೯

ನೆನೆವುದು ನೆನೆಹಿಸಿಕೊಂಬುದು ಜಡನೆಂದು ಮತ್ತೆ,
ನಾ ನೀನೆಂಬುದಿಲ್ಲ.
ಬಾಳೆಯ ಫಲದಂತೆ. ಚೇಳಿಗೆ ಗರ್ಭವಾದಂತೆ,
ವೇಣುವಿಗೆ ಅಕ್ಕಿ ಹುಟ್ಟಿದ ಮತ್ತೆ ಬಾಳುವೆ ಉಂಟೆ ?
ನೀನೆಂಬುದ ತಾನರಿದಲ್ಲಿ, ನಾ ನೀನೆಂಬ ಭಾವವೇನೂ ಇಲ್ಲ.
ಕಾಮಧೂಮ ಧೂಳೇಶ್ವರ ಏನೂ ಎನಲಿಲ್ಲ. || ೬೫ ||

೧೨೩೦

ನೋಡುವ ನೋಡ ತಾನೆಯಾದ ಮತ್ತೆ,
ನೋಡಿಸಿಕೊಂಬುದೊಂದೂ ಇಲ್ಲ.
ಕೂಡಿಹೆನೆಂಬ ಕೂಡ ಎರಡಳಿದಲ್ಲಿ,
ಉಭಯವೆಂಬ ನಾಮವಿಲ್ಲ.
ಅರ್ಚಿಸಿಕೊಂಬುದೊಂದು ವಸ್ತು.
ಅರ್ಚಿಸಿಕೊಂಬುದೊಂದು ಚಿತ್ತ.
ಎರಡೆಂಬ ಭಾವವಾದಲ್ಲಿ ಲಿಂಗಕ್ಕೆ ದೂರ.
ಅರಿವ ಅರಿವಿಂಗೆ ಸೂತಕ.
ಪರುಷದ ಪುತ್ಥಳಿಯಲ್ಲಿ, ಲೋಹದ ಅವಯವಂಗಳುಂಟೆ ?

ಪರಿಪೂರ್ಣವಾದ ಪರಂಜ್ಯೋತಿಗೆ
ಪರಕ್ಕೆ ಕೊಟ್ಟು, ಆ ಪರವನರಿದೆಹೆನೆಂಬ
ಪರಿಭ್ರಮಣದ ಸೂತಕವಿಲ್ಲ.
ಸಂದಿಲ್ಲದ ವಸ್ತುವಿಗೆ ಮೇಲೆ ಕಂಡೆಹೆನೆಂದಡೆ ಒಂದೂ ಇಲ್ಲ,
ಕಾಮಧೂಮ ಧೂಳೇಶ್ವರಾ. ||೬೬||

೧೨೩೧

ನೋಡುವುದಕ್ಕೆ ಮುನ್ನವೆ ಕಂಡು,
ಕಾಬುದಕ್ಕೆ ಮೊದಲೆ ಕೂಡಿ,
ಕೂಡುವುದಕ್ಕೆ ಮೊದಲೆ
ಶೂನ್ಯವೆಂಬ ಭಾವವೇನೂ ಕಲೆದೋರದೆ,
ನಿರಾಳ ಸುರಾಳವಾಯಿತ್ತು, ಕಾಮಧೂಮ ಧೂಳೇಶ್ವರಾ. ||೬೭||

೧೨೩೨

ಪಂಚೇಂದ್ರಿಯಂಗಳಲ್ಲಿ ಒಂದರ ಗುಣವ ಒಂದರಿಯದಿರೆ,
ಹಿಂಗಿ ಲಿಂಗಕ್ಕರ್ಪಿತವಾದ ಮುಖವಿನ್ನೆಂತೊ ?
ತದ್ಭಾವಂಗಳ ತದ್ಭಾವದಿಂದಲ್ಲದೆ ಅರಿಯಬಾರದು.
ಕೊಡುವ ಅಂಗಭೇದ ಹಲವಲ್ಲದೆ ಅರಿವಾತ್ಮ ಒಂದೆ ಭೇದ.
ತಾ ತನ್ನ ಮರೆದಲ್ಲಿ ಮರಣ, ತಾ ತನ್ನನರಿದಲ್ಲಿ ಜನನ.
ನಾ ನೀನೆಂಬ ಭಾವದ ಭ್ರಮೆ ಹರಿದಲ್ಲಿ,
ತಟ್ಟುವ ಮುಟ್ಟುವ ಕೃತ್ಯದ ಸೂತಕ ಇತ್ತಲೆ ಉಳಿಯಿತ್ತು.
ಕಾಮಧೂಮ ಧೂಳೇಶ್ವರನತ್ತಲೈದಾನೆ. ||೬೮||

೧೨೩೩

ಪೂಜಿಸಿಕೊಂಬುದು, ಪೂಜಿಸಿಹೆನೆಂಬುದು,
ಉಭಯದ ಸೂತಕವುಳ್ಳನ್ನಕ್ಕ ಪರಿಪೂರ್ಣ ಜ್ಞಾನವುಂಟೆ ?
ನಾನೆಂಬನ್ನಕ್ಕ ವಿಚಾರಿಸಿಕೊಂಡು,
ನೀನೆಂಬನ್ನಕ್ಕ ಪರಿಪೂರ್ಣವಸ್ತುವೆಂಬುದುಂಟೆ ?
ಕಾಯದ ಸುಳುಹು ನಿಂದು, ಜೀವನ ಪ್ರಕೃತಿ ಹಿಂಗಿ
ಮೇಲೊಂದ ಕಂಡೆಹೆನೆಂಬುದು ಜೀವನಲ್ಲದೆ ಪರಮನಲ್ಲ.
ಕಂಡೆಹೆನೆಂಬುದೆ ಜೀವ, ಕಾಣಿಸಿಕೊಂಡೆಹೆನೆಂಬುದೆ ವಸ್ತು.
ಉಭಯಶೂನ್ಯವಾಗಿ ನಿಂದುದು,
ಕಾಮಧೂಮ ಧೂಳೇಶ್ವರನೆಂಬುದು ತಾನೆ. ||೬೯||

೧೨೩೪

ಪೂಜೆ ಪುಣ್ಯಕ್ಕೆ ಒಡಲು, ಜ್ಞಾನ ಶೂನ್ಯಕ್ಕೆ ಒಡಲು.
ಉಂಟು, ಇಲ್ಲ ಎಂಬುದು ಸಂದೇಹಕ್ಕೆ ಒಡಲು.
ಇಂತೀ ಒಡಲಳಿದು, ಕೊಡುವ ಕೊಂಬ ಎಡೆಯಾಟ ನಿಂದು,
ಜಿಡ್ಡೆಂಬ ಜಿಗುಡು ಹರಿದು, ಶೂನ್ಯವೆಂಬ ಸುಳುಹು ಸತ್ತು,
ಮತ್ತಾವುದೂ ಕಲೆದೋರದೆ ನಿಂದ ನಿಜ, ತಾನು ತಾನೆ,
ಕಾಮಧೂಮ ಧೂಳೇಶ್ವರಾ. ||೭೦||

೧೨೩೫

ಪೃಥ್ವಿ ಅಪ್ಪು ತೇಜ ವಾಯು ಆಕಾಶಂಗಳ ಕಲ್ಪಿಸಿದಾತ,
ಒಬ್ಬ ವಸ್ತು ಎಂದಲ್ಲಿ,
ಆ ಕಲ್ಪನೆಗೆ ಆ ವಸ್ತು ತೀತವೋ, ಅತೀತವೋ ?
ಆ ಪಂಚಭೂತಿಕಕ್ಕೆ ಆ ವಸ್ತು ಒಳಗೋ, ಹೊರಗೋ ?
ಒಳಗೆಂದಲ್ಲಿ ಆ ಭಾವಕ್ಕೆ ಭ್ರಮೆ,
ಹೊರಗೆಂದಲ್ಲಿ ಉಭಯದ ಶಂಕೆ ನಿಜಯೆಂತಿದ್ದಿತ್ತು,
ಅರಿವ ಆತ್ಮನಂತೆಯಿದ್ದಿತ್ತು.
ಉಭಯದ ಕಾಂತಿ ಅಡಗಿದಲ್ಲಿ,
ಕಾಮಧೂಮ ಧೂಳೇಶ್ವರನ ಲಕ್ಷ್ಯ ನಿರ್ಲಕ್ಷ್ಯವಾಗಿತ್ತು. ||೭೧||

೧೨೩೬

ಬಂದ ಮಣಿಹ ಹಿಂಗಿತ್ತು.
ಎದೆಯಲ್ಲಿದ್ದ ಲಿಂಗದ ಕುರುಹೇಕೆ ಅಡಗದು ?
ಸಂದಣಿಸಿ ಸಂಶಯವ ಮಾಡುವ
ನಿರಂಗದ ನಿಜವೇಕೆ ಉಡುಗದು ?
ಹಾಗೆಂಬುದಕ್ಕೆ ಮುನ್ನವೆ
ಕಾಯದ ಕುರುಹು ಶೂನ್ಯವಾಗಿ,
ಭಾವ ಭಾವಿಸುವುದಕ್ಕೆ ಇಂಬಿಲ್ಲದೆ,
ಉಭಯ ನಿರ್ಮಾಣ ನಿರಾಳವಾಯಿತ್ತು,
ಕಾಮಧೂಮ ಧೂಳೇಶ್ವರಾ. ||೭೨||

೧೨೩೭

ಬಣ್ಣವನರಿಯದ ಬಯಲಿನಂತೆ,
ಭಿನ್ನ ಅಭಿನ್ನವನರಿಯದ ಬೆಳಗಿನಂತೆ,

ಛಿನ್ನ ವಿಚ್ಛಿನ್ನವನರಿಯದ ಪರಿಪೂರ್ಣದಂತೆ,
ಅವಧಿಗೊಡಲಿಲ್ಲದ ಭಾವವಿರಹಿತನಾದೆಯಲ್ಲಾ.
ಸುಳುಹುಗೆಟ್ಟು ಸೂಕ್ಷ್ಮವರತು,
ಬೆಳಗೆಂಬ ಕಳೆನಾಮ ನಷ್ಟವಾಗಿ,
ಅದೆಂತೆಯಿದ್ದಿತ್ತು, ಅಂತೆ ಆದೆಯಲ್ಲಾ
ಕಾಮಧೂಮ ಧೂಳೇಶ್ವರಾ. || ೭೩ ||

೧೨೩೮

ಬತ್ತೀಸ ಆಯುಧದಲ್ಲಿ ಕಾದಿ ಕೊಂದಡೂ
ಪ್ರಾಣಕ್ಕೆ ಕೈದುವಿನ ಹೆಚ್ಚುಗೆ ತಗ್ಗುಂಟೆ ?
ನಿಶ್ಚಯಿಸಿ ನಿಜತತ್ವವನರಿದವಂಗೆ
ಮತ್ತೆ ಹತ್ತುವ ಹಾವಸೆಯುಂಟೆ ?
ಉಂಟೆಂಬ ಭಾವ, ಇಲ್ಲಾ ಎಂಬ ಶಂಕೆ ನಿಶ್ಶಂಕೆಯಾದಲ್ಲಿ,
ಅರಿದೆ, ಮರೆದೆನೆಂಬ ಆ ತೆರದ ಸೂತಕವಿಲ್ಲ.
ಕಾಮಧೂಮ ಧೂಳೇಶ್ವರ ಎಂದೂ ಏನೂ ಎನಲಿಲ್ಲ. || ೭೪ ||

೧೨೩೯

ಬಯಲು ಬಯಕೆಗೆ ಒಳಗಾದಲ್ಲಿ ಇಕ್ಕುವರಿನ್ನಾರೊ ?
ಅರಿವ ಆತ್ಮ ಪ್ರಕೃತಿ ರೂಪಾದಲ್ಲಿ ಬೇಡಾ ಎಂದು ಬಿಡಿಸುವರಾರೊ ?
ದೀಪವೊಂದರಲ್ಲಿ ಉದಿಸಿ, ಹಲವು ಜ್ಯೋತಿಯ ಕುರುಹಿಟ್ಟಂತೆ,
ಆತ್ಮವೊಂದರಲ್ಲಿ [ಉದಿಸಿ] ಹಲವು ಇಂದ್ರಿಯಂಗಳಾದ ಸಂದನರಿಯದೆ,
ಅವ ಬಂದಬಂದಂತೆ ಆಡುವ ಸಂದೇಹಿಗಳಿಗುಂಟೆ, ನಿಜಾಂಗದ ನಿಜ ?
ಈ ದ್ವಂದ್ವವನಳಿದು ಒಂದೆಂದಲ್ಲಿ, ಅದು ನಿಜದ ಸಂಗ.
ಆ ಸಂಗವ ಹಿಂಗಿದಲ್ಲಿ, ಕಾಮಧೂಮ ಧೂಳೇಶ್ವರನು ಒಂದರವನೂ ಅಲ್ಲ. ||೭೫||

೧೨೪೦

ಬಯಲೊಳಗಣ ಬಣ್ಣದಂತೆ, ನೀರಿನೊಳಗಣ ಸಾರದಂತೆ,
ಅನಲ ಅನಿಲನ ಸಂಗದಿಂದ ಲಯವಾದ ಸಾಕಾರದಂತೆಯಿಪ್ಪಾತನಿರವು
ಎಂತಿದ್ದಿತ್ತು, ಅಂತೆ ಇರಬಲ್ಲಡೆ ಆತ್ಮಯೋಗಸಂಬಂಧ.
ಈ ಸಂಬಂಧವ ಸಮೂಹ ನಿಂದಲ್ಲಿ,
ಕಂಡೆಹೆ, ಕಾಣಿಸಿಕೊಂಡೆಹೆನೆಂಬ ದಂದುಗ ನಿಂದಿತ್ತು,
ಕಾಮಧೂಮ ಧೂಳೇಶ್ವರಾ. || ೭೬ ||

೧೨೪೧

ಬಲ್ಲವ ತಾನಾದೆನೆಂಬಲ್ಲಿ,
ಮಿಕ್ಕಾದವರಲ್ಲಿ ಗೆಲ್ಲ ಸೋಲಕ್ಕೆ ಹೋರಿಹೆನೆಂಬಲ್ಲಿ,
ಆ ಬಲ್ಲತನವಲ್ಲಿಯೆ ನಿಂದಿತ್ತು.
ಈ ಉಭಯದಲ್ಲಿ ಎಲ್ಲಿಯೂ ತಾನಿಲ್ಲದೆ,
ಆ ಭಾವದ ಸೊಲ್ಲಿಗೆ ಸಿಕ್ಕದೆ, ನಿಜವರಿತವರೆಲ್ಲರಲ್ಲಿ
ಪರಿಪೂರ್ಣನಲ್ಲಿಯೆ, ಕಾಮಧೂಮ ಧೂಳೇಶ್ವರಾ. ||೭೭||

೧೨೪೨

ಬಸವಣ್ಣನ ಡಿಂಗರಿಗನಯ್ಯಾ,
ಚನ್ನಬಸವಣ್ಣನ ಹಳೆಯನಯ್ಯಾ,
ಪ್ರಭುದೇವರ ಬಂಟನಯ್ಯಾ,
ಮಡಿವಾಳಯ್ಯನ ಲೆಂಕನಯ್ಯಾ,
ಸಿದ್ಧರಾಮಯ್ಯನ ಭೃತ್ಯನಯ್ಯಾ.
ಇಂತೀ ಐವರ ಒಕ್ಕು ಮಿಕ್ಕ ಶೇಷಪ್ರಸಾದವನುಂಡು,
ಬದುಕಿದೆನಯ್ಯಾ.
ಕಾಮಧೂಮ ಧೂಳೇಶ್ವರಾ.
ನಿಮ್ಮ ಶರಣರೆನ್ನ ಪಾವನವ ಮಾಡಿದ ಪರಿಣಾಮವ,
ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನು. ||೭೮||

೧೨೪೩

ಬೆಳಗೆಂದಡೂ ಒಂದರಲ್ಲಿ ಪ್ರಜ್ವಲಿಸಿ
ತೋರುವುದಕ್ಕೆ ಒಡಲಾಯಿತ್ತು,
ಅರಿವೆಂಬಡೂ ಒಂದ ಕುರಿತು ಒಂದಿಲ್ಲ
ಎಂಬುದಕ್ಕೆ ಬುಡವಾಯಿತ್ತು.
ಇಂತೀ ನಿಶ್ಚಯವ ತಿಳಿದು ನಿಬಿಡನಾದವಂಗೆ
ಗಜಬಜೆ, ಕೂಜನ ಒಂದೂ ಇಲ್ಲವೆಂದೆ,
ಕಾಮಧೂಮ ಧೂಳೇಶ್ವರಾ. ||೭೯||

೧೨೪೪

ಬೇರು ಮೇಲಾದ ವೃಕ್ಷದ ತುದಿಯಲ್ಲಿ,
ನಾದ ಬಿಂದು ಕಳೆಯಿಲ್ಲದ ಹಣ್ಣು ತಲೆದೋರಿತ್ತು.
ಪಿರ್ಭೇದವಿಲ್ಲದ ಪಕ್ಷಿ ಸುನಾದವಿಲ್ಲದೆ ಎರಗಿತ್ತು.

ಎರಗಿ ಮುಟ್ಟುವುದಕ್ಕೆ ಮುನ್ನವೆ,
ಹಣ್ಣು ತೊಟ್ಟುಬಿಟ್ಟು ಬಟ್ಟಬಯಲಾಯಿತ್ತು,
ಕಾಮಧೂಮ ಧೂಳೇಶ್ವರ ಭಾವವಿಲ್ಲದವನಾಗಿ. ||೮೦||

೧೨೪೫

ಬ್ರಹ್ಮ ಪ್ರಳಯವಾದಲ್ಲಿ, ವಿಷ್ಣು ಪ್ರಳಯವಾದಲ್ಲಿ,
ರುದ್ರ ಅರ್ಧನಾರೀಶ್ವರನಾಗಿ,
ದೇವಕಾಂತಿ ಕಾಂತೆಯರಲ್ಲಿ ಉಳಿಯಿತ್ತು.
ತ್ರಿವಿಧಮೂರ್ತಿ ತ್ರಿವಿಧದಿಂದ ಕೆಟ್ಟ ಮತ್ತೆ ಅರಿವಲ್ಲಿ,
ಆದಿಶೂನ್ಯ ಬ್ರಹ್ಮಪದವಾಯಿತ್ತು,
ಭೇದಶೂನ್ಯ ವಿಷ್ಣುಪದವಾಯಿತ್ತು.
ಅನಾದಿಶೂನ್ಯ ರುದ್ರಪದವಾಗಿ ಭೇದಿಸಿ ತಿರುಗುವಲ್ಲಿ,
ಸ್ಥೂಲದಲ್ಲಿ ತೋರುವ ಶೂನ್ಯ ಅಂಧಕಾರವಾಗಿಪ್ಪುದು.
ಸೂಕ್ಷ್ಮದಲ್ಲಿ ತೋರುವ ಶೂನ್ಯ,
ದಿವಾರಾತ್ರಿಯಂತೆ ಉಭಯವ ಕೂಡಿಕೊಂಡಿಪ್ಪುದು.
ಕಾರಣದಲ್ಲಿ ತೋರುವ ಶೂನ್ಯ,
ಘಟಪಟವ ಗರ್ಭೀಕರಿಸಿಕೊಂಡಿಪ್ಪುದು.
ಇಂತೀ ಶೂನ್ಯ ನಾಮರೂಪ ನಿಃಶೂನ್ಯ ನಿರಾಲಂಬ
ಕುಂದದ ಬೆಳಗು ನುಂಗಿತ್ತು.
ನುಂಗಿದ ಘನಲಿಂಗವೆಂದು ಪ್ರಮಾಣಿಸಲಿಲ್ಲ,
ಕಾಮಧೂಮ ಧೂಳೇಶ್ವರವೆಂದೆನಲಿಲ್ಲ. ||೮೧||

೧೨೪೬

ಮನವಚನಕಾಯ ತ್ರಿಕರಣಶುದ್ಧವಾಗಿ
ಭಕ್ತಂಗೆ ಸತ್ಯ, ವಿರಕ್ತಂಗೆ ಜ್ಞಾನವೆಂದು
ತತ್ತುಗೊತ್ತನಿಕ್ಕಿ ಹಚ್ಚಿ ಹಾ[ಕಿ]ದಲ್ಲಿ,
ಈ ಉಭಯದ ಚಿತ್ತದಲ್ಲಿ ವೇಧಿಸುವ ವಸ್ತು ಆವುದು ?
ಭಕ್ತಿಗೂ ಜ್ಞಾನ, ವಿರಕ್ತಿಗೂ ಜ್ಞಾನ.
ಅದು ತನ್ನ ಬೆಳಗಿನಲ್ಲಿ ತನ್ನ ಕಾಣಿಸಿಕೊಂಬಂತೆ
ಆ ಗುಣ ಉಭಯಭಿನ್ನವಿಲ್ಲ.
ಕಾಮಧೂಮ ಧೂಳೇಶ್ವರನೆಂಬುದಕ್ಕೆ ಎಡೆದೆರಪಿಲ್ಲ. ||೮೨||

೧೨೪೭

ಮರದಲ್ಲಿ ಉರಿ ಹುಟ್ಟಿ, ಅಡಗಿ ಸುಡದ ಭೇದವ ಬಲ್ಲಡೆ,
ಕಾಯದ ಲಿಂಗದ ಸೂತಕವಿಲ್ಲ.
ಕಲ್ಲಿನಲ್ಲಿ ಕಿಡಿ ಹುಟ್ಟಿ, ಅಲ್ಲಿ ಉರಿಯದೆ,
ಆಚೆಯಲ್ಲಿ ಸಾಕಾರವ ಮುಟ್ಟಿ ಉರಿವಂತೆ,
ಆ ನಿಹಿತವನರಿದಲ್ಲಿ ಪ್ರಾಣಲಿಂಗವೆಂಬ ಮನಸೂತಕವಿಲ್ಲ.
ಸೂತಕ ಪ್ರಸೂತಕವಾಗಿ, ಏತಕ್ಕೂ ಒಡಲಿಲ್ಲದಿಪ್ಪುದು,
ಅದೇ ಅಜಾತತ್ವ, ಕಾಮಧೂಮ ಧೂಳೇಶ್ವರಾ. ||೮೩||

೧೨೪೮

ಮರೀಚಿಕಾಜಲವ ಮೊಗೆದವರುಂಟೆ ?
ಸುರಚಾಪವ ಹಿಡಿದು ಎಸೆದವರುಂಟೆ ?
ವಾರಿಯ ಮಣಿಗೆ ದಾರವನೇರಿಸಿದವರುಂಟೆ ?
ಬಯಲೊಳಗಡಗಿದ ಬ್ರಹ್ಮ,
ಶಿಲೆಯೊಳಗಾಡುವ ಸಲೆ ನೆಲೆಯರಿಯದ ಸೂತಕರಿಗೆ
ಮಹಾಘನದ ಹೊಲಬೇತಕ್ಕೆ ಕಾಮಧೂಮ ಧೂಳೇಶ್ವರಾ ? ||೮೪||

೧೨೪೯

ಯುಕ್ತಿಯಿಂದ ಚಿತ್ರಾರ್ಥವ ಕಾಬ ಆತ್ಮನು
ತನ್ನ ಹೆಚ್ಚುಗೆ ತಗ್ಗನರಿಯದೆ. ಮತ್ತತ್ವದಿಂದ ಕೆಲವನಾಡಿ,
ಎಚ್ಚತ್ತಲ್ಲಿ ಚಿತ್ರವನಾಡುವುದು.
ಅದು ಸಚ್ಚಿತ್ತ, ಒಂದೋ, ಎರಡೋ ?
ಕೆಟ್ಟಲ್ಲಿ ಕೆಂಡವಾಗಿ, ಉರಿದಲ್ಲಿ ಬೆಂಕಿಯಾಗಿ,
ಉಭಯಕ್ಕೆ ಬೇರೊಂದೊಡಲುಂಟೆ ?
ಕಾಷ್ಠವೃಕ್ಷನ್ನಕ್ಕ ಹೊತ್ತಿ, ಕಾಷ್ಠ ಹಿಂಗಿದ ಮತ್ತೆ ಹೊತ್ತಬಲ್ಲುದೆ ?
ದೃಷ್ಟದ ಇಷ್ಟ ಚಿತ್ತದಲ್ಲಿ ಲೋಪವಾದ ಮತ್ತೆ,
ಕಟ್ಟಿಬಿಟ್ಟೆನೆಂಬುದು ಇತ್ತಲೆ ಉಳಿಯಿತ್ತು,
ಕಾಮಧೂಮ ಧೂಳೇಶ್ವರಾ. ||೮೫||

೧೨೫೦

ರೂಪುರಹಿತ ಶೂನ್ಯ, ರೂಪುವಿರಹಿತ ನಿಶ್ಶೂನ್ಯ.
ರೂಪುರಹಿತ ಲಿಂಗ, ರೂಪುವಿರಹಿತ ಆತ್ಮ.
ರೂಪುರಹಿತ ಜೀವ, ರೂಪುವಿರಹಿತ ಪರಮ.

ಸಮಯರಹಿತ ಲೋಕ, ಸಮಯವಿರಹಿತ ಶರಣ.
ಉಭಯವಿರಹಿತವಾಗಿ ನಿಂದ ನಿಲವು,
ಸರ್ವತೂಕಕ್ಕೆ ಹೊರಗು, ಕಾಮಧೂಮ ಧೂಳೇಶ್ವರಾ. || ೮೬ ||

೧೨೫೧

ರೂಪುವಿಡಿದು ಭಾವಿಸುವನ್ನಕ್ಕ ಸಂದೇಹಕ್ಕೊಡಲು.
ನಿರವಯದಲ್ಲಿ ಕಂಡೆಹೆನೆಂದಡೆ ಲಕ್ಷವಿಲ್ಲದ ಒಪ್ಪ.
ರೂಪು ನಿರೂಪೆಂಬ ಸಂಕಲ್ಪದ ಸೂತಕವ ಹರಿದು,
ರೂಪೆಂಬ ಅಂಗವ ತಿಳಿದು, ನಿರೂಪೆಂಬ ಆತ್ಮನನರಿದು,
ಜೀವ ಪರಮನೆಂಬ ಶಂಕೆ ಹರಿದಲ್ಲಿ,
ಕಾಮಧೂಮ ಧೂಳೇಶ್ವರ ತಾನು ತಾನೆ. || ೮೭ ||

೧೨೫೨

ಲಿಂಗದಿಂದ ಅರಿವನರಿದೆಹೆನೆಂದಡೆ, ಆತ್ಮಂಗೆ ಸೂತಕ.
ಅರಿವಿನಿಂದ ಉಭಯವ ಕಂಡೆಹೆನೆಂದಡೆ, ಅರಿವಿಂಗೆ ಸೂತಕ.
ಅರಿದ ಅರಿವು, ಆ ಅರಿವುದಕ್ಕೆ ಮುನ್ನವೆ ಕುರುಹುಗೊಂಡ ಮತ್ತೆ
ಅರಿವುದಕ್ಕೆ ಒಡಲಿಲ್ಲ, ಮರೆವುದಕ್ಕೆ ತೆರಹಿಲ್ಲ.
ಆದಿಶೂನ್ಯಕ್ಕೆ ಮೊದಲೆ, ನಾದಶೂನ್ಯವಾದ ಮತ್ತೆ
ಕಾಮಧೂಮ ಧೂಳೇಶ್ವರನೆಂದೆನಲಿಲ್ಲ. || ೮೮ ||

೧೨೫೩

ಲಿಂಗದಿಂದ ಕಂಡೆಹೆನೆಂಬುದು, ಮನದ ಸೂತಕ.
ಮನದಿಂದ ಅರಿದೆಹೆನೆಂಬುದು, ಅರಿವಿನ ಸೂತಕ.
ಅರಿವಿನಿಂದ ಅರಿದೆಹೆನೆಂಬುದು, ಮಹತ್ತಪ್ಪ ಘನದ ಸೂತಕ.
ಕಾಯದಿಂದ ಕರ್ಮವ ಮಾಡಿ,
ಲಿಂಗವನರಿದೆಹೆನೆಂಬುದು ಭಾವದ ಭ್ರಮೆ.
ಭ್ರಮೆಯಳಿದು, ಅರಿವನರಿದೆಹೆನೆಂಬುದು ಉಭಯದ ಬೀಜ.
ಬೀಜ ನಷ್ಟವಾಗಿ, ಅಂಕುರ ಮಳೆದೋರದೆ,
ಶಂಕೆಯೆಂಬ ಸಂದೇಹ ನಂದಿದಲ್ಲಿ,
ಅದೇ ನಿಸ್ಸಂಗದ ಇರವೆಂದೆ, ಕಾಮಧೂಮ ಧೂಳೇಶ್ವರಾ. || ೮೯ ||

೧೨೫೪

ವಾದ್ಯಕ್ಕೆ ಬಂಧವಲ್ಲದೆ, ನಾದಕ್ಕೆ ಬಂಧವುಂಟೆ ?
ಅರಿವಿಂಗೆ ಬಂಧವಲ್ಲದೆ, ಅರುಹಿಸಿಕೊಂಬವಂಗುಂಟೆ ಬಂಧ ?

ಅರಿದೆಹೆನೆಂಬ ಭ್ರಮೆ. ಅರುಹಿಸಿಕೊಂಡೆಹೆನೆಂಬ ಕುರುಹು,
ಉಭಯನಾಸ್ತಿಯಾಗಿಯಲ್ಲದೆ ಭಾವಶುದ್ಧವಿಲ್ಲ,
ಕಾಮಧೂಮ ಧೂಳೇಶ್ವರಾ. ||೯೦||

೧೨೫೫

ಪಾರಿ ತೆಂಗಿನ ಮರದಲ್ಲಿ ಏರಿತ್ತೊ ?
ಅಲ್ಲಾ, ಬೇರೊಂದು ಮಂತ್ರದಲ್ಲಿ ತುಂಬಿತ್ತೊ ?
ಅಲ್ಲಾ ವೃಕ್ಷದ ಸಹಜ ಬೀಜವೊ ?
ನೀರು ಬಲಿದು ಅದರೊಳಗೆ ಅರತು. ಆ ಸಾರವೆ ಕಾಯಾದಲ್ಲಿ,
ಆ ಕಾಯ ತುಷಾರ ಹಿಂಗಿ, ನೆರೆ ಬಲಿತು, ಹಣ್ಣು ಎಣೆಯಾದಲ್ಲಿ,
ನೀರೆಲ್ಲಿ ಅಡಗಿತ್ತು? ಹಿಪ್ಪೆ, ಕವಚವೆಲ್ಲಿದ್ದಿತ್ತು ?
ಇಂತೀ ಕಾಯ ಆತ್ಮ ಮೇಲೆಂದರಿವೆಂಬ ಕುರುಹೆಲ್ಲಿದ್ದಿತ್ತು ?,
ಎಂಬುದನರಿವುದಕ್ಕೆ ಪುರಾಣವ ಪೋಷಿಸಿಕೊಳ್ಳಿ,
ಶಾಸ್ತ್ರವ ಸಂದಣಿಸಿಕೊಳ್ಳಿ, ವೇದದ ಆದ್ಯಂತವ ಸಾಧಿಸಿಕೊಳ್ಳಿ,
ಶ್ರುತದಲ್ಲಿ ಕೇಳಿ ದೃಷ್ಟದಲ್ಲಿ ಕಂಡುಕೊಳ್ಳಿ,
ಇಂತೀ ಚಿದಾತ್ಮನು ಬಂಧಮೋಕ್ಷಕರ್ಮಂಗಳಲ್ಲಿ ದ್ವಂದಿತನೋ ?
ಆ ಅಂಗಭಾವ ವಿರಹಿತನೋ ?
ಈ ಉಭಯದ ಸಂದೇಹವುಳ್ಳನ್ನಕ್ಕ
ಕರ್ಮವ ಮಾಡುವಂಗೆ, ನಿರ್ಮಲವೊಂದುಂಟೆಂದು ಅರಿವಂಗೆ,
ಇಂತೀ ಭೇದಂಗಳನರಿತು,
ನಿರವಯದ ಸಮ್ಮಾನದ ಸುಖಿಯಾದೆನೆಂಬವಂಗೆ,
ಅದು ಭಿನ್ನರೂಪೋ, ಅಭಿನ್ನರೂಪೋ ?
ಆ ನಿಜದ ನೆಲೆಯ ನೀವೇ ಬಲ್ಲಿರಿ.
ಕಾಮಧೂಮ ಧೂಳೇಶ್ವರನಲ್ಲಿ
ಕಾಳಿಕೆ ಹಿಂಗಿದ ಕಣ್ಣನವಂಗಲ್ಲದೆ ಕಾಣಬಾರದು. ||೯೧||

೧೨೫೬

ವಿದ್ಯುಲ್ಲತೆಯಂತೆ, ಆಕಾಶದ ಗರ್ಜನೆಯಂತೆ,
ಬೊಬ್ಬುಳಿಕೆಯಂತೆ, ಸ್ವಪ್ನದಲ್ಲಿ ತೋರುವ ವಿದ್ರುಮ ಸೌಭಾಗ್ಯದಂತೆ,
ಇಂತಿವು ಹೊಪ್ಪದ ನಿಲವು ತನ್ನಾತ್ಮನೊಲು.
ಕ್ಷುದ್ರದ ಸೂತಕವ ಹರಿದು ನಿಂದ ಅಬದ್ಧ ಭವಿ ಅನಾಚಾರಿಗೆ
ಆರ ಹೊದ್ದಿಗೆಯೂ ಇಲ್ಲ, ಕಾಮಧೂಮ ಧೂಳೇಶ್ವರಾ. ||೯೨||

೧೨೫೭

ವಿದ್ಯೆ ಅವಿದ್ಯೆಯಾದಲ್ಲಿ, ಆ ಅರಿವ ಹೊದ್ದುವ ಬಂಧವಾವುದು ?
ಕ್ಷುದ್ರ ಇಂದ್ರಿಯಂಗಳೆಂಬ ಸಂದುಸಂಶಯವಾವುದು ?
ಅದು ಒಡೆದ ಕುಂಭದ ನೀರಿನ ನೆಳಲಿನಂತೆ,
ಅದು ಕುಂಭವ ಹಿಂಗಲಿಕೆ, ಆ ಬಿಂಬ ಅಲ್ಲಿಯೆ ಅಡಗಿತ್ತು,
ಮತ್ತೆ ಕುಂಭವ ನೋಡಲಿಕ್ಕೆ ಒಂದೂ ಇಲ್ಲ.
ಆ ಅಂಗ ಲಕ್ಷದ ಕುಂಭದಲ್ಲಿ, ಇಂಗಿಹೋದ ಆತ್ಮಂಗೆ
ಬಂಧಮೋಕ್ಷಕರ್ಮಂಗಳು, ಒಂದೂ ಇಲ್ಲ,
ಕಾಮಧೂಮ ಧೂಳೇಶ್ವರನೆಂಬ ಭಾವಸಂದೇಹ ನಂದಿತ್ತಾಗಿ. || ೯೩ ||

೧೨೫೮

ವೇದಕ್ಕೆ ಉತ್ತರದವನಲ್ಲ, ಶಾಸ್ತ್ರಕ್ಕೆ ಸಂತೆಯವನಲ್ಲ.
ಪುಣ್ಯಕ್ಕೆ ಪುಣ್ಯವಂತನಲ್ಲ, ವಚನದ ರಚನೆಗೆ ನಿಲ್ಲ.
ವಾಙ್ಮನ ಅಗೋಚರಕ್ಕೆ ಸಲ್ಲ, ಪ್ರಮಾಣು ಅಪ್ರಮಾಣುವೆಂಬುದಕ್ಕೆ ನಿಲ್ಲ.
ಇಂತೀ ಭೇದ ಅಭೇದ್ಯಂಗಳಲ್ಲಿ ವೇದ್ಯವಿಲ್ಲ,
ಕಾಮಧೂಮ ಧೂಳೇಶ್ವರನು. || ೯೪ ||

೧೨೫೯

ವೇದನೆಯಿಂದ ವಸ್ತುವ ವೇದಿಸಿ ಕಾಣಬೇಕೆಂಬುದು ಅದೇನು ಹೇಳಾ.
ಸರ್ವೇಂದ್ರಿಯಂಗಳ ಸಂಚವ ಬಿಟ್ಟು,
ಏಕೇಂದ್ರಿಯದಲ್ಲಿ ವಸ್ತುವ ಆಚರಿಸಬೇಕೆಂಬುದು ಅದೇನು ಹೇಳಾ.
ಅಲ್ಲ ಅಹುದು, ಉಂಟು ಇಲ್ಲ ಎಂಬುದು
ಗೆಲ್ಲ ಸೋಲಕ್ಕೆ ಹೋರುವುದು ಅದೇನು ಹೇಳಾ.
ಅದು ಪಂಚಲೋಹದ ಸಂಚದಂತೆ ಹಿಂಚು ಮುಂಚಿನ ಭೇದ.
ಅರಿದೆ ಮರೆದೆನೆಂಬುದು ಪರಿಭ್ರಮಣದ ಭೇದ.
ಅರಿಯಲಿಲ್ಲ ಮರೆಯಲಿಲ್ಲ ಎಂಬುದು ಅದು ಪರತತ್ವದ ಭೇದ.
ಇಂತೀ ಗುಣ ಭಾವಂಗಳ ಲಕ್ಷಿಸಿ, ದೃಷ್ಟಿ ಉಂಟೆಂದಲ್ಲಿ ಆತ್ಮ,
ದೃಷ್ಟ ನಷ್ಟವಾಯಿತ್ತೆಂಬಲ್ಲಿಯೆ ಪರಮ.
ಉಭಯದ ತೊಟ್ಟು ಬಿಟ್ಟಲ್ಲಿ,
ನಿಜ ನಿಶ್ಚಯ ಅದೆಂತು ತಾನಂತೆ, ಕಾಮಧೂಮ ಧೂಳೇಶ್ವರನು. || ೯೫ ||

೧೨೬೦

ವ್ಯೋಮದಲ್ಲಿ ತೋರುವ ತೋರಿಕೆ,
ಸಾಮವ ಮುಟ್ಟಿ ಬೆರಸಬಲ್ಲುದೆ ?
ಸಾಗರ ಸಂಬಂಧಕ್ಕೆ ಕಟ್ಟು ಒಡೆವುದೆ ?
ಮಹದಲ್ಲಿ ಬೆರಸಿದ ಮಹಾಯೋಗಿ,
ಸಂಸಾರಸಾಗರದ ಸಂಬಂಧಕ್ಕೆ ಒಳಗಪ್ಪನೆ ?
ಇಂತೀ ಸೂತಕವಳಿದ ಅಜಾತಂಗೆ
ಏತರಲ್ಲಿ ನಿಂದು ನೋಡಿದಡೂ
ನಿರ್ಜಾತ ಶೂನ್ಯ ಕಾಮಧೂಮ ಧೂಳೇಶ್ವರಾ. ||೯೬||

೧೨೬೧

ಶಂಕೆಯ ಹರಿದು ನುಡಿದೆಹೆನೆಂದಡೆ
ಸಕಲಗುಣಂಗಳ ಸಂಕೇತದಲ್ಲಿದ್ದೆಹೆನೆ ?
ಆತ್ಮನ ಬಿಂಕವ ಹರಿದೆಹೆನೆಂದಡೆ
ಚಲುರ್ವಿಧಫಲಪದದ ಅಂಕದಲ್ಲಿ ಸಿಕ್ಕಿ ಇದ್ದೆಹೆನೆ ?
ಶಂಕೆಯ ಸೂತಕ ಇನ್ನೆಂದಿಗೆ ಹರಿವುದು,
ಕಾಮಧೂಮ ಧೂಳೇಶ್ವರಾ ? ||೯೭||

೧೨೬೨

ಶರೀರದ ಮಧ್ಯದಲ್ಲಿ ನಿರವಯವಪ್ಪ ಆತ್ಮ,
ಸುಖದುಃಖಗಳಲ್ಲಿ ಅನುಭವಿಸುವುದು,
ಅರಿವೋ ? ಆತ್ಮನೋ? ಬೇರಿಪ್ಪುದೊಂದು ಕುರುಹೋ?
ಅರಿದಡೆ ಕುರುಹೆಂಬುದೊಂದು ತೆರನಿಲ್ಲ.
ಶಿಲೆಯಿಂದ ಹಲವು ರೂಪು ಮಾಡಿ,
ತಮ್ಮ ತಮ್ಮ ಒಲವರಕ್ಕೆ ಬಲುಹೆಂಬುದು ಶಿಲೆಯೋ ? ಮನವೋ ?
ಈ ಹೊಲಬನರಿತಲ್ಲಿ, ವಿಶ್ವರೂಪಂಗೆ
ನೆಲೆ ಹೊಲೆ ಕುಲ ಛಲ ಭಾವ ಭ್ರಮೆ ಮತ್ತೇನೂ ಇಲ್ಲ,
ಕಾಮಧೂಮ ಧೂಳೇಶ್ವರಾ. ||೯೮||

೧೨೬೩

ಷಡುವರ್ಣ ದಶವಾಯು ಚತುಷ್ಟಯಂಗಳು
ಪಂಚೇಂದ್ರಿಯ ಅಷ್ಟಮದಂಗಳೆಂದು, ಷೋಡಶಕಳೆಗಳೆಂದು,
ತ್ರಿವಿಧ ಶಕ್ತಿಯೆಂದು, ತ್ರಿವಿಧ ಆತ್ಮನೆಂದು.

ತ್ರಿವಿಧ, ಭೂತಿಕವೆಂದು,
ಪಂಚವಿಂಶತಿತತ್ವಂಗಳೆಂದು, ಪಿಂಡಪಿಂಡಭಾವವೆಂದು,
ಜ್ಞಾನಜ್ಞಾನ ಸಂಬಂಧವೆಂದು
ಇಂತೀ ಭೇದಂಗಳ ಸಂಕಲ್ಪಿಸಿ ನುಡಿವುದು ಅದೇನು ಹೇಳಾ.
ಅದು ಅರಿವಿನ ಮರವೆಯೋ ?
ಮರೆದು ಅರಿದ ಎಚ್ಚರಿಕೆಯೋ ?
ಇಂತೀ ಭೇದವ ತೆರೆದು ಕಂಡೆನೆಂಬ ಸೂತಕವ ಮರೆದಲ್ಲಿ,
ಆ ಗುಣ ಎಂತೆಯಿದ್ದಿತ್ತು ಅಂತೆ ವಸ್ತು,
ಕಾಮಧೂಮ ಧೂಳೇಶ್ವರನು. || ೯೯ ||

೧೨೬೪

ಸಂಚಾರದಿಂದ ತರಗೆದ್ದು, ತನ್ನಂಗದ ಸಂಚಿತವ ಬಿಟ್ಟು,
ವಾಯುವಿನ ಸಂಚಾರದಲ್ಲಿ ಎಯ್ದಿ, ಸಂಚಾರ ನಿಂದು,
ಆ ತರಗು ಮತ್ತೊಂದು ಸೀಮೆಯ ಸಂಚಿತದಲ್ಲಿ ನಿಂದು,
ಆ ತರಗು ಮತ್ತೊಂದು ಸಂಚಾರಕ್ಕೆ ಒಳಗಾಯಿತ್ತು.
ಇಂತೀ ಕಾಯಸಂಚಿತವ ಬಿಟ್ಟು,
ವಸ್ತುವಿನ ಶಂಕೆಯಲ್ಲಿ ಒಳಗಾಗಬೇಕೆಂಬುದು,
ಆ ಗುಣ ಶಂಕೆಯೋ ?, ನಿಶ್ಶಂಕೆಯೋ? ಎಂಬುದಕ್ಕೆ ಮುನ್ನವೆ
ಅರಿದು ಮರೆದಲ್ಲಿ,
ಕಾಮಧೂಮ ಧೂಳೇಶ್ವರನು ಸಂದು ಸಂಶಯದವನಲ್ಲ. || ೧೦೦ ||

೧೨೬೫

ಸಕಲದ್ರವ್ಯಂಗಳೆಂದು ಕಲ್ಪಿಸಿ,
ಇದಿರಿಟ್ಟು ಅರ್ಪಿಸಿಕೊಂಬುದು,
ಅರ್ಪಿಸಿಹೆನೆಂಬುದು, ಅದಾವ ಚಿತ್ತ ?
ಅದು ಉದಕ ವರ್ಣದ ಭೇದ, ವರ್ಣಕೂಟದ ಭಾವ.
ಲೆಪ್ಪವ ಲಕ್ಷಿಸಿದಂತೆ,
ಅದೆಂತೆಯಿದ್ದಿತ್ತು ಚಿತ್ತವಂತೆ ಇದ್ದಿತ್ತು,
ಕಾಮಧೂಮ ಧೂಳೇಶ್ವರಾ. || ೧೦೧ ||

೧೨೬೬

ಸತ್ಯಶುದ್ಧಕಾಯಕವ ಮಾಡಿ ತಂದು,
ವಂಚನೆಯಿಲ್ಲದೆ ಪ್ರಪಂಚಳಿದು,

ನಿಚ್ಚ ಜಂಗಮಕ್ಕೆ ದಾಸೋಹವ ಮಾಡುವ
ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ,
ಕಾಮಧೂಮ ಧೂಳೇಶ್ವರ. ||೧೦೨||

೧೨೬೭

ಸತ್ತು ಸಾಯದುದ ಕಂಡು, ಸಾಯದುದ ಸತ್ತಿತ್ತೆಂಬುದನರಿದು,
ಈ ಉಭಯದ ಗೊತ್ತಿನಲ್ಲಿ ಲಕ್ಷ್ಯದ ಭಾವ ನಷ್ಟವಾಗಿ,
ಉರಿ ಸಾರವ ಕೊಂಡು ಉರಿದಂತೆ,
ಆ ಉರಿ ನಂದಿದಲ್ಲಿ, ಉಭಯ ನಿರವಯವಾಯಿತ್ತು,
ಕಾಮಧೂಮ ಧೂಳೇಶ್ವರಾ. ||೧೦೩||

೧೨೬೮

ಸರ್ವಘಟಂಗಳಲ್ಲಿ ಸುಖದುಃಖ ಅನುಭವಿಸುವ
ಆ ಆತ್ಮ ಒಂದೋ, ಎರಡೋ?
ಸರ್ವಯೋನಿಗಳಲ್ಲಿ ಕೂಡುವ ಶಿಶ್ನೆಯ ಸುಖ ಒಂದೋ, ಎರಡೋ ?
ಆತ್ಮ ಒಂದೆಂದಡೆ ಘಟಭೇದಕ್ಕೆ ಭಿನ್ನವಾಗಿಪ್ಪುದು.
ಆತ್ಮ ಹಲವೆಂದಡೆ ಚೇತನ ಸ್ವಭಾವ ಏಕವಾಗಿಪ್ಪುದು.
ಆ ಘಟ ಆತ್ಮನ ಕೂಟ ಎಂತೆಯಿದ್ದಿತ್ತು ಅಂತೆ ಸುಖವಿದ್ದಿತ್ತು.
ಯೋನಿಯ ಘಟ ಸಾಕಾರ ಎಂತೆಯಿದ್ದಿತ್ತು ಅಂತೆಯಿದ್ದಿತ್ತು ಶಿಶ್ನೆಯ ಯೋಗ.
ಆತ್ಮನ ಘಟಸಂಗ ಜಾತಿಯ ಸುಜಾತಿಯ ಕೂಟಸ್ಥ
ವಿಶ್ವಾಸದ ಭ್ರಾಂತಿಯ ಭ್ರಾಮಕಯೆಂತಿದ್ದಿತ್ತು ಅಂತೆಯಿದ್ದಿತ್ತು ಆತ್ಮ.
ಇಂತೀ ಘಟದ ಸಾಕಾರವಡಗಿ ತೋರುವ ಆತ್ಮನ ಪರಿ.
ಭಿನ್ನ ಇಂದ್ರಿಯಂಗಳ ಹಲವು ಸಂಚಿನ ಯೋನಿ.
ಅವ ಸಂಧಿಸಿ ಕೂಡಿಹೆನೆಂಬ ಅರಿಕೆಯ ತೃಷ್ಣೆಯ ಶಿಶ್ನೆ ತಲಹಗೆಟ್ಟಲ್ಲಿ,
ಭ್ರಾಂತಿನ ಭ್ರಮೆಯ ಸೂತಕ ಹೋಯಿತ್ತು,
ಕಾಮಧೂಮ ಧೂಳೇಶ್ವರನ ತಾನು ತಾನಾದ ಕಾರಣ. ||೧೦೪||

೧೨೬೯

ಸುಳಿವ ಅನಿಲಂಗೆ ಮೈಯೆಲ್ಲ ಕೈ.
ಸುಡುವ ಅನಲಂಗೆ ಭಾವವೆಲ್ಲ ಬಾಯಿ.
ಹರಿವ ನೀರಿಂಗೆ ತನ್ಮಯವೆಲ್ಲ ಅಡಿ.
ಅರಿಯದೆ ಮರೆಯದೆ ಮುಟ್ಟಿಹಂಗೆ
ಕಡೆ ನಡು ಮೊದಲೆಂದು ಅರ್ಪಿತವಿಲ್ಲ.

ಇಲ್ಲಾ ಎಂಬ ಸೂತಕಕ್ಕೆ ಮುನ್ನವೆ ಇಲ್ಲ,
ಕಾಮಧೂಮ ಧೂಳೇಶ್ವರನು. ||೧೦೫||

೧೨೬೦

ಹಲವು ಚಿತ್ರವ ನೆನೆವ ಮನಕ್ಕೆ ಬೇರೆ ಸಲೆ ವಸ್ತು,
ಒಂದೆಂದು ನೆಲೆಯಲ್ಲಿ ನಿಲಬಲ್ಲುದೆ?
ಜಲವ ತಪ್ಪಿದ ಮತ್ಸ್ಯ, ಬಿಲವ ತಪ್ಪಿದ ಸರ್ಪ,
ನೆಲೆಯ ತಪ್ಪಿದ ಆತ್ಮ ಬೇರೊಂದಕ್ಕೆ ಒಲವರವುಂಟೆ?
ಕಳನನೇರಿಯಿಳಿದ ಮತ್ತೆ, ಒಡೆಯನ ಹೊಲಬಿಲ್ಲಾ ಎಂದೆ,
ಕಾಮಧೂಮ ಧೂಳೇಶ್ವರಾ. ||೧೦೬||

■ ■

## ಮಾರುಡಿಗೆಯ ನಾಚಯ್ಯನ ವಚನ

೧೨೭೧

ತನು ಉಡುಗಿ ಮನ ಉಡುಗಿ ಧ[ನ ಉಡುಗಿ]
ನಾಚಿ ಮಾಡಬಲ್ಲಡೆ, ನಾಚನೆಂದೆಂಬೆ.
ನಾಚದೆ ಮಾಡುವ ನೀಚರು ನೀವು ಕೋಟಿಯಾಗದೆ,
ಯಾಚಕತನವ ಬಿಟ್ಟು ಆಚರಿಸಿ, ಅಗೋಚರನ ಗೋಚರಿಸಿ,
ನಿಷ್ಠಾನಿಷ್ಠೆಯಿಂ ವ್ಯವಹರಿಸಬೇಡ.
ಊಟವೊಂದಿಲ್ಲದೆ ಮಾರೂಟ ಕೋರೂಟವನುಣ್ಣೆ.
ಉಡಿಗೆವೊಂದಲ್ಲದೆ ಮಾರುಡಿಗೆ ಮೀರುಡೆಗೆಯನು[ಡೆ]
ಉಂಡುಟ್ಟೆನಾದಡೆ ಎನ್ನ ಹೊದ್ದಿದಾರುಸ್ಥಲದ ಘೂಳಣ್ಣಗಳು
ನಗುವರು ಕಾಣಾ, ಮಾರುಡಿಗೆಯ ನಾಚೇಶ್ವರಾ. ||೧||

■ ■

## ಮಾರೇಶ್ವರೊಡೆಯರ ವಚನ

೧೨೭೨

ಅಪ್ಪುವಿನ ಶಿಲೆಯ, ಉಳಿಯ ಮೊನೆಯಲ್ಲಿ ಚಿತ್ರಿಸಬಹುದೆ ?
ಅರಗಿನ ಪಟವ, ಉಳಿಯ ಮೊನೆಯಲ್ಲಿ ಅಕ್ಷರವ ಬರೆಯಬಹುದೆ ?
ಮೃತ್ತಿಕೆಯ ಹರುಗೋಲನೇರಿ, ನದಿಯ ತಪ್ಪಲಿಗೆ ಹೋಗಬಹುದೆ ?
ನಿಜನಿಶ್ಚಯವನರಿಯದವನ ವಾಚಾರಚನೆ ಇಪ್ಪಲ್ಲದಿಲ್ಲ.
ನಿಜತತ್ವವನರಿದವನ ವಾಚಾರಚನೆಯ ಕುರುಹೆಂತುಟೆಂದಡೆಃ
ಶಿಲೆಯೊಳಗಣ ಸುರಭಿಯಂತೆ, ಪ್ರಳಯದೊಳಗಾಗದ ನಿಜನಿವಾಸದಂತೆ,
ಆಯದ ಗಾಯದಂತೆ, ಸಂಗಾಯದ ಸುಖದಂತೆ.
ಇಂತೀ ಭಾವರಹಿತವಾದ ಭಾವಜ್ಞನ ತೆರ,
ಕೂಗಿಂಗೆ ಹೊರಗು, ಮಹಾಮಹಿಮ ಮಾರೇಶ್ವರಾ. ||೧||

೧೨೭೩

ಉಂಬವರೆಲ್ಲ ಒಂದೇ ಪರಿಯೆ,
ತಮ್ಮ ತಮ್ಮ ಬಾಯಿಚ್ಛೆಯಲ್ಲದೆ ?
ಇಕ್ಕುವರಂದಕ್ಕೆ ಉಂಡಡೆ,
ತನಗೇ ಸಿಕ್ಕೆಂದೆ ಮಾರೇಶ್ವರಾ. ||೨||

೧೨೭೪

ಉಕ್ಕುವ ಬೆಣ್ಣೆಯ ಒಲೆಯ ಮೇಲಿರಿಸಿ,
ಅಳಲುತ್ತ ಬಳಲುತ್ತಲಿರ್ದಾರಯ್ಯ.
ಅಲ್ಲದ ಚೇಳಿನೊಳು ಚಲ್ಲವಾಡಿ,
ಎಲ್ಲರೂ ನಾಣುಗೆಟ್ಟರಲ್ಲಯ್ಯಾ.
ಎಲ್ಲರ ಅರಿವು, ಇಲ್ಲಿಯೆ ಉಳಿಯಿತ್ತು.
ಇದ ಬಲ್ಲವರಾರೊ, ಮಾರೇಶ್ವರಾ ? ॥ ३ ॥

೧೨೭೫

ಊಡಿದರುಣ್ಣದು, ಒಡನೆ ಮಾತಾಡದು.
ನೋಡದು, ನುಡಿಯದು, ಬೇಡದು, ಕಾಡದು.
ಕಾಡಬೆರಣೆಯ ಕೈಯಲ್ಲಿ ಕೊಟ್ಟು,
ಹೇಳದೆ ಹೋದೆಯೋ ಮಾರೇಶ್ವರಾ. ॥ ೪ ॥

೧೨೭೬

ಊರೆಲ್ಲರೂ ನೆರೆದು ಕಳ್ಳನ ಬೆಳ್ಳನೆಂದಡೆ,
ಅವ ಕಳ್ಳನೋ, ಬೆಳ್ಳನೋ? ನೀವು ಹೇಳಿರೆ.
ಇವರೆಲ್ಲರೂ ಕೂಡಿ ಬಲ್ಲವನವನಲ್ಲ ಎಂದಡೆ,
ಅವನೆಲ್ಲಿರ್ದಡೇನು ಮಾರೇಶ್ವರಾ. ॥ ೫ ॥

೧೨೭೭

ಓಪಿದ ಬೆಣ್ಣೆಯ ಓಡಿನಲಿಕ್ಕಿ,
ಸಾವುತ ಬೇವುತಲೈದರಲ್ಲಾ.
ಇರ್ದ ತಳವಾರ ನಿದ್ರೆಯಲೊರಗಲು,
ಹೊದ್ದಿರ್ದ ನಿಧಾನ ಹೋಯಿತ್ತಲ್ಲಾ.
ಬದ್ಧಕತನದಲಿ ಬಳಲುವರೆಲ್ಲರ
ಹೊದ್ದದೆ ಹೋದನೊ ಮಾರೇಶ್ವರಾ. ॥ ೬ ॥

೧೨೭೮

ಕನಸಿನ ಕಾಮಿನಿ, ಕಾಯವಿಲ್ಲದ ವಿಟನನಪ್ಪಿ
ನೋಡಿದಲ್ಲಿ, ಆರುವನೂ ಕಾಣೆ.
ಉಕ್ಕಿತ್ತು ಕಾಯದೊಳಗಿದ್ದ ಬಿಂದು.
ಜನದ ಸಲುಗೆಯಲೊಲಿಯದೆ,
ಏನೆನ್ನ ನಿದ್ದೆಯಲೊಲಿವರೆ ಮಾರೇಶ್ವರಾ. ॥ ೭ ॥

೧೨೭೯

ತನ್ನಲ್ಲಿ ಒಂದು ಗುಣ ತೋರಲಿಕೆ,
ಆ ಗುಣವ ಇದಿರ ಕಂಡು ನುಡಿದರೆಂದು ನೋಯಲೇಕೆ ?
ಆ ನುಡಿ ತನಗೆ ನಿರುತ್ತರವೆಂಬುದನರಿತು,
ಘಾಯ ಬಾವುಗಳಲ್ಲಿ, ಶೋಣಿತ ಹೊರೆಯಲ್ಲಿ ನಿಂದಿರಲಿಕ್ಕಾಗಿ,
ಪಾಳಿಸಿ ಹೊರವಡಿಸಿದಾತನೇನು ಹಗೆಯೇ?
ತನಗೆಂಬುದನರಿತು ತನ್ನಲ್ಲಿ ಉಂಟಾದ ಅವಗುಣ,
ತನಗೆ ತೋರಿದಡೆ, ದೃಷ್ಟವ ಕಂಡು ಹೇಳಿದ ಮತ್ತೆ
ಮಿಥ್ಯಗುಣವಿಲ್ಲದೆ ಆ ಕಪಟಗುಣವ ಬಿಡಬೇಕು.
ಈ ಗುಣ ಅಂಗವಿರ್ದಲ್ಲಿ, ನಿಂದೆ ದುರ್ಗುಣ ಸೋಂಕದಿಹುದೆ ?
ಅರಿಯದೆ ಸೋಂಕಿದಲ್ಲಿ, ಅರಿದ ಮತ್ತೆ ತೊರೆಯಬೇಕು.
ತೊರೆದಡೆ ಕೂಗಿನ ದನಿಗೆ ಹೊರಗು,
ಮಹಾಮಹಿಮ ಮಾರೇಶ್ವರಾ. || ೮ ||

೧೨೮೦

ನುಡಿದ ಮಾತಿಂಗೆ ಕೊರತೆಯೆಂದು,
ಮನವ ಮಾಡಿ ತನು ಅಂಡಿಸಲೇತಕ್ಕೆ ?
ಹಾವಿನ ಹೇಳಿಗೆಯ ತೆಗೆದ ಕೋಡಗದಂತೆ,
ಮಾತಾಡಲೇಕೆ, ಮತ್ತುಡುಗಲೇಕೆ,
ಮಕರಧ್ವಜವೈರಿ ಮಾರೇಶ್ವರಾ ? || ೯ ||

೧೨೮೧

ಬಯಲೊಳಗಣ ರೂಪು, ರೂಪಿನೊಳಗಣ ಬಯಲು,
ಉಭಯವ ವಿಚಾರಿಸಿ ನೋಡುವಲ್ಲಿ,
ಕುಂಭದೊಳಗೆ ನೀರ ತುಂಬಿ, ಸಿಂಧುವಿನೊಳಗೆ ಮುಳುಗಿಸಲಾಗಿ,
ಅದರೊಳಗೂ ನೀರು, ಹೊರಗೂ ನೀರು.
ಹೊರಗಣ ನೀರು ಒಳಗಾಯಿತ್ತು, ಒಳಗಣ ನೀರು ಹೊರಗಾಯಿತ್ತು.
ಕುಂಭದೊಳಗಣ ನೀರಂಗಕ್ಕೆ ಒಳಗೋ ಹೊರಗೋ ಎಂಬುದ ವಿಚಾರಿಸಿ ತಿಳಿದು,
ಅಂಗದ ಮೇಲಿಹ ಲಿಂಗ, ಲಿಂಗವ ಧರಿಸಿಹ ಅಂಗ,
ಆ ಅರುಹಿನ ಕುರುಹಿಂಗೆ ಒಳಗೋ ಹೊರಗೋ ಎಂಬುದ ವಿಚಾರಿಸಿ,
ಕರ್ಪುರದ ಹೊಗೆಯೊಳಗೆ ಉಭಯ ಬಯಲಾಗಿ,
ಮಡಕೆ ಉಳಿಯಿತ್ತದೇಕೆ ? ಘಟ ಉಳಿದು ಆತ್ಮ ಬಯಲಾಯಿತ್ತದೇಕೆ ?

ಉಭಯ ನಿರಂತವಾದಲ್ಲಿ, ಉರಿಯಿಂದ ಕರ್ಪುರ ನಷ್ಟ,
ಕರ್ಪುರದಿಂದ ಉರಿ ನಷ್ಟವಾದಂತೆ.
ಇಂತೀ ಉಭಯಸ್ಥಲದೊಳಗೆ ಅಂಗಲಿಂಗ, ಪ್ರಾಣಲಿಂಗ
ಉಭಯವನೊಂದು ಮಾಡಿ ತಿಳಿದು, ನಿಜದಲ್ಲಿ ನಿಂದ
ಲಿಂಗಾಂಗಿಯ ಕೂಗಿನ ಕುಲವಿಲ್ಲ, ಮಹಾಮಹಿಮ ಮಾರೇಶ್ವರಾ. ||೧೦||

೧೨೮೨

ಬಿಂಗಕ್ಕೆ ಹೊರೆ ಹೊರೆಯಲ್ಲದೆ,
ನಿಜ ಶಿಲೆಯ ದೀಪ್ತಿಯ ತರಂಗಕ್ಕೆ ಹೊರೆ ಹೊರೆಯುಂಟೆ ?
ಸಂಸಾರಿಗೆ ಪ್ರಕೃತಿ ರಾಗದ್ವೇಷವಲ್ಲದೆ,
ಮನವು ಮಹದಲ್ಲಿ ನಿಂದ ನಿಜಲಿಂಗಾಂಗಿಗೆ
ಈ ಉಭಯದ ಸಂದುಂಟೆ ?
ಈ ಗುಣದಂಗ ಲಿಂಗಾಂಗಿಯ ಸಂಗ,
ಮಹಾಮಹಿಮ ಮಾರೇಶ್ವರಾ. ||೧೧||

೧೨೮೩

ರಂಜಕರೆಲ್ಲರೂ ರತ್ನವ ಕೆಡಿಸಿ,
[ಅ]ಂಧಕಾರದಲ್ಲಿ ಬಂದು ಅರಸುವರು.
ಅದರಂದ ತಿಳಿಯದು, ಛಂದ ಕಾಣಬಾರದು.
ಬಂದ ಬಟ್ಟೆಯಲ್ಲಿ ತೊಳಲುವರು.
ಸಂದೇಹವಿಡಿದು ಬಂದವರೆಲ್ಲಾ
ಅಂದಂದಿಗೆ ದೂರ, ಮಾರೇಶ್ವರಾ. ||೧೨||

೧೨೮೪

ಹುಟ್ಟಿದ ಗಿಡವನು ಮುಟ್ಟಿದುದ ಕೊಟ್ಟಲ್ಲಿ,
ಮುಂದೆ ಫಲವೇನು ?
ಹುಟ್ಟಿದ ಹುಸಿಯನು, ಅಷ್ಟಮದಂಗಳ ಸುಟ್ಟಲ್ಲದಿಲ್ಲ,
ಮಾರೇಶ್ವರಾ. ||೧೩||

■ ■

## ಮೆರೆಮಿಂಡಯ್ಯನ ವಚನ

೧೨೮೫

ಅಂಗದಲ್ಲಿ ಕಟ್ಟಿದ ವಸ್ತ್ರವ ಬಿಟ್ಟು ನೋಡಲಾಗಿ,
ಲಿಂಗದ ಕುರುಹು ಇಲ್ಲದಿರೆ,
ಇದೇನು ಅಂಗ ನಾಸ್ತಿಯಾದೆ, ಐಘಟವ ಬಿಟ್ಟು ಘಟ ನಾಸ್ತಿಯಾದೆ
ಎಂಬುದಕ್ಕೆ ಮೊದಲೇ ಅಂಗ ಬಯಲಾಯಿತ್ತು,
[ಐಘಟದೂರ] ರಾಮೇಶ್ವರಲಿಂಗದಲ್ಲಿ. ||೧||

೧೨೮೬

ಅಂಗದಲ್ಲಿದ್ದು ಕೈಗೆ ಬಂದೆ.
ಕೈಯಿಂದ ಮನಕ್ಕೇಕೆ ಬಾರೆಯಯ್ಯಾ ?
ನಾ ಹಾಡಿ ನೀ ಕೇಳಿ, ಬಾಯಿ ಕಿವಿ ನೋವಿಲ್ಲವೆ ಅಯ್ಯಾ?
ನೀ ಸಾವ ದಿನವಿಲ್ಲ, ನಾನುಳಿವ ದಿನವಿಲ್ಲ.
ನಿನ್ನಂಗವಡಗದು, ಎನ್ನ ಮನವುಡುಗದು.
ಕ್ರೀಯೆಂಬ ಹಾವಸೆಯಲ್ಲಿ ಸಿಕ್ಕಿ,
ಮೇಲನರಿಯದೆ ತೊಳಲುತ್ತೈದೇನೆ.
ಐಘಟಕ್ಕೆ ಠಾವ ಹೇಳಾ, ಐಘಟದೂರ ರಾಮೇಶ್ವರಲಿಂಗವೆ. ||೨||

೧೨೮೭

ಅಂಗಲಿಂಗಸಂಬಂಧದಿರವು,
ಬೀಜವೊಡೆದು, ಮೊಳೆದೋರುವಂತೆ,
ಕುಸುಮ ಬಲಿದು, ದೆಸೆಗೆ ವಾಸನೆ ಪಸರಿಸುವಂತೆ,
ಘನಲಿಂಗ ಘಟ, ಕುರುಹಿನಲ್ಲಿ ನಿಜದೋರುತ್ತದೆ.
ಐಘಟದೂರ ರಾಮೇಶ್ವರಲಿಂಗ ಮೂರ್ತಿ, ಅಮೂರ್ತಿ ಆಗುತ್ತದೆ. || ೩ ||

೧೨೮೮

ಅಂಗವ ಕಳೆದು ನಿಂದ ವಿಹಂಗವೈರಿಯಂತೆ,
ಅಂಗಕ್ಕೆ ಅಸು ಹೊರತೆಯಾಗಿ ನಿಂದುದು.
ಅದರಂಗ ಶುದ್ಧ, ಅದರಂದವಿರಬೇಕು.
ತ್ರಿವಿಧವ ಹಿಡಿದ ಚಂದ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೪ ||

೧೨೮೯

ಅಂಬುಜಾತ ದ್ವಾರವಳಿವೆಳವಾದಡೆ,
ವಾದಕ್ಕೆ ಸಿಕ್ಕುಂಟೆ ಅಯ್ಯಾ?
ಶರೀರ ಸಂಪದದಲ್ಲಿದ್ದಡೆ, ಅರಿವು ಮಹದಲ್ಲಿ ನಿಂದು,
ನೆರೆ ವಸ್ತು ತಾನಾದಲ್ಲಿ, ಬೇರೊಂದೆಡೆಯುಂಟೆ?
ಕರಣಂಗಳ ಹಿಂಡಿಗೆ ಉರಿಯುದ್ದ ನೆಲೆ,
ವಸ್ತುವಾಗಿಯಲ್ಲದೆ ಬೇರೊಂದ ಹಿಡಿಯಲಿಲ್ಲ.
ಅದು ಘಟಿಸಿ ನಿಂದಲ್ಲಿ, ಐಘಟದೂರ ರಾಮೇಶ್ವರಲಿಂಗ ತಾನೆ. || ೫ ||

೧೨೯೦

ಅತೀಂದ್ರಿಯರೆಲ್ಲರೂ ಮದನನ ಮನೆಯ
ಬೆಸನುಡಿಕೆಯ ನೀರೆರೆವುದಕ್ಕೊಳಗಾದರು.
ವ್ರತಿಗಳೆಲ್ಲರೂ ಹೊರಗೆ ಆಚಾರವನರಿಸಿ,
ಒಳಗೆ ಭವಿಸಂಗದಲ್ಲಿ ಬಳಲುತ್ತೈದಾರೆ.
ವಿರಾಕೆವಂತರು ಕೊಡುವರ ಬಾಗಿಲಲ್ಲಿ,
ಇಕ್ಕುವರ ಮಂದಿರದಲ್ಲಿ ಸಿಕ್ಕಿ ಅಯಿದಾರೆ.
ಇವಕ್ಕೆ ಹೊರಗಾಗು, ಐಘಟದೂರ ರಾಮೇಶ್ವರಲಿಂಗಕ್ಕೆ. || ೬ ||

೧೨೯೧

ಅದ್ರಿಯಲ್ಲಿ ಕರೆಯೆ, ಆ ಶಬ್ದ ತನ್ನ ಒಡಗೂಡಿ ಕರೆದಂತೆ,
ಚಿತ್ತ ನೆನೆದು ತಾ ಹೊತ್ತಿದ್ದ ಘಟವ ಎತ್ತಿಕೊಂಡು ಹೋಹಂತೆ,
ವಿಹಂಗನ ರಟ್ಟೆಯಲ್ಲಿ ಮರಳುವ ಸಂಚಾರದ ಒಳುಪಿನಂತೆ,
ಮಿಂಚಿನ ಸಂಚ ತೋರಿ, ಹಿಂಚುಮುಂಚಿಲ್ಲದಂತಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೭ ॥

೧೨೯೨

ಅಪ್ಪುಮಯ ಬಲಿದು, ಜಗ ಸಾಕಾರವಾಗಿ ನಿಂದಲ್ಲಿ,
ಧರೆ ಸಲಿಲ ಅನಲ ಕುರುಹಾಗಿ ನಿಂತಿತ್ತು.
ಅವು ನಿಳಯಾಂತವಾಗಿ ವಾಯು ಘಟಿಸಿತ್ತು.
ಇಂತಿವು ಪಂಚಬ್ರಹ್ಮಮೂರ್ತಿ ಐಘಟವಾಯಿತ್ತು,
ಇಂತಿವು ಪ್ರಳಯಕ್ಕೊಳಗೆಂದು ಹೊರಗಾಗಿ ನಿಂದ,
ಐಘಟದೂರ ರಾಮೇಶ್ವರಲಿಂಗ. ॥ ೮ ॥

೧೨೯೩

ಅಪ್ಪುವಾಸವ ತುಂಬುವ ಲೆಪ್ಪಣದಂತೆ,
ತುಂಬುವಲ್ಲಿ ಕಟ್ಟಿಲ್ಲ.
ಸೂಸುವಲ್ಲಿ ಪರಿಮಳವಾದಂತೆ ಅರಿವಿನ ಭೇದ.
ಇಷ್ಟದ ಮುಟ್ಟು, ಕಳೆಯ ಗೊತ್ತನರಿಯಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೯ ॥

೧೨೯೪

ಅಪ್ಪುವಿಲ್ಲದ ಏರಿ, ಚಿತ್ತವಿಲ್ಲದ ಘಟ,
ನಿಜತತ್ವವನರಿಯದ ಪೂಜೆ, ವ್ಯರ್ಥವಾಯಿತ್ತು.
ಅವನಿರವು, ಐಘಟದೂರ ರಾಮೇಶ್ವರಲಿಂಗವನರಿವುದೆ ? ॥ ೧೦ ॥

೧೨೯೫

ಅರಿದವನಿರವು ಕಮಠನ ಅಂಗದಂತೆ,
ಲಂಪಟನುಲುಹಿನ ಬೆಂಬಳಿಯ ಅಂಗವಾಸಿಯಂತಿರಬೇಕು.
ಅದು ಲಿಂಗಾಂಗಿಯ ಬೆಡಗು.
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ
ಅದೇ ಸದ್ಭಾವದ ಗೊತ್ತು. ॥ ೧೧ ॥

### ೧೨೯೬

ಅರಿವೆಂಬುದೆ ಕ್ರೀ, ಕ್ರೀಯೆಂಬುದೆ ನಿರವಯ.
ಅದೆಂತೆಂದಡೆ :
ಧರೆಯ ವಾರಿಯ ವಾಯು, ಆಕಾಶಕ್ಕೆ ತಂದು ಸುರಿವಂತೆ,
ಬಾವಿಯ ನೀರ, ಭಾಜನ ತಂದು ಕೊಡುವಂತೆ,
ಇಷ್ಟಲಿಂಗದ ನಿಷ್ಠೆ ದೃಷ್ಟವಾದಲ್ಲಿ,
ವಸ್ತುವ ಕಟ್ಟಿ ತಂದು ಕೊಡುವುದು.
ಕೊಡುವುದಕ್ಕೆ ಸಂದೇಹವಿಲ್ಲ.
ಅದಕ್ಕೆ ದೃಷ್ಟವ ಕೇಳುವುದಕ್ಕೆ, ಅನ್ಯಭಿನ್ನಕ್ಕೆ ತೆರಪಿಲ್ಲ.
ಐಘಟದೂರ ರಾಮೇಶ್ವರಲಿಂಗಕ್ಕೆ
ಸಾವಯ ನಿರವಯವೆಂಬುದಿಲ್ಲ. ||೧೨||

### ೧೨೯೭

ಅಶನದಾಸೆಗಾಗಿ ಆಚಾರವ ತಪ್ಪಿ,
ವಿಷಯದಾಸೆಗಾಗಿ ವಿರಕ್ತಿಯ ಬಿಟ್ಟು,
ಸಕಲರ ಕೂಟದಲ್ಲಿ ವಿಕಳತೆಗೊಂಬ
ಪ್ರಕೃತಿಭಾವಿಗುಂಟೆ ನಿಜಭಕ್ತಿ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ ? ||೧೩||

### ೧೨೯೮

ಅಸಿಯಾಗಲಿ ಕೃಷಿಯಾಗಲಿ,
ವಾಚಕ ವಾಣಿಜ್ಯ ಮಸಿಯಾಗಲಿ,
ಮಾಡುವಲ್ಲಿ ಹುಸಿಯಿಲ್ಲದಿರಬೇಕು.
ಅದು ಅಸಮಾಕ್ಷನ ಬರವು, ಪಶುಪತಿಯ ಇರವು,
ಐಘಟದೂರ ರಾಮೇಶ್ವರಲಿಂಗ ತಾನೆ. ||೧೪||

### ೧೨೯೯

ಆಡುವಾತ ಗಣೆಮಿಣೆಯಲ್ಲಿ ಕುಣಿದಡೆ,
ಕೆಳಗೆ ನೋಡುವಾತನಿಗೆ ಆಶ್ಚರ್ಯವಾದಂತೆ,
ವಸ್ತುಕೂಟ ಆಟ, ಮರ್ತ್ಯರ ಬೇಟ ನಿಶ್ಚಯವಾಗಿರಬೇಕು,
ಐಘಟದೂರ ರಾಮೇಶ್ವರಲಿಂಗಕ್ಕೆ. ||೧೫||

೧೩೦೦

ಆಸೆ ತ್ರಿವಿಧದ ಗೊತ್ತು, ನಿರಾಸೆ ಏಕಮಯನ ಗೊತ್ತು.
ಅಲ್ಲ, ಅಹುದೆಂಬುದು ಬಲ್ಲವನ ಮತವಲ್ಲ.
ಎಲ್ಲಿಯೂ ಸದ್ಗುಣ, ಎಲ್ಲರಲ್ಲಿ ನಿಜಭಾವ,
ಪರಿಪೂರ್ಣ ತಾನಾಗಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೧೬ ||

೧೩೦೧

ಇಚ್ಛಾಶಕ್ತಿ ರೂಪಾಗಿ ಬ್ರಹ್ಮಪದವಾಯಿತ್ತು.
ಕ್ರಿಯಾಶಕ್ತಿ ರೂಪಾಗಿ ವಿಷ್ಣುಪದವಾಯಿತ್ತು.
ಜ್ಞಾನಶಕ್ತಿ ರೂಪಾಗಿ ರುದ್ರಪದವಾಯಿತ್ತು.
ತ್ರಿವಿಧಪದ ಕೂಡಿ ಕಾಮ ನಾಸ್ತಿಯಾಯಿತ್ತು,
ಐಘಟದೂರ ರಾಮೇಶ್ವರಲಿಂಗವನರಿಯದೆ. || ೧೭ ||

೧೩೦೨

ಇಚ್ಛಾಶಕ್ತಿಸ್ವರೂಪ ವರ್ತುಳವಾಗಿ,
ಕ್ರಿಯಾಶಕ್ತಿಸ್ವರೂಪ ಗೋಮುಖವಾಗಿ,
ಜ್ಞಾನಶಕ್ತಿಸ್ವರೂಪ ಸಲಾಖೆರೂಪಾಗಿ,
ತ್ರಿವಿಧಭೇದವ ಒಡಗೂಡಿ ತ್ರಿವಿಧಶಕ್ತಿ ಲಿಂಗವಾಯಿತ್ತು.
ಇಚ್ಛಾಶಕ್ತಿಗೆ ಕ್ರೀ, ಕ್ರಿಯಾಶಕ್ತಿ ಜ್ಞಾನ,
ಜ್ಞಾನಶಕ್ತಿಗೆ ಸರ್ವಭಾವಕೂಟ.
ಭಾವ ಇಷ್ಟದಲ್ಲಿ ನಿಂದು, ತ್ರಿವಿಧವ ತೊಟ್ಟು ಬಿಟ್ಟು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ ಇದೇ ಗೊತ್ತು. || ೧೮ ||

೧೩೦೩

ಇರುಳಿಗೆ ಮೊಲೆ ಯೋನಿ ಅಧರ.
ಹಗಲಿಗೆ ಸಂಪುಟ ಲೇಖ.
ಮಾತಿನ ಮಾಲೆಯ ಸರಕು ವೇಷದ ಪುಣ್ಯ
ಸುಡು ಭ್ರಾಂತರ ಮಾತು, ಸಾಕು ನಿಲ್ಲು,
ಐಘಟದೂರ ರಾಮೇಶ್ವರಲಿಂಗ, ಅವರ ಬಲ್ಲನಾಗಿ. || ೧೯ ||

೧೩೦೪

ಇಷ್ಟದ ಪೂಜೆಯನರಿವುದಕ್ಕೆ
ಕೋಲ ಸುತ್ತಿದ ನೂಲಿನಂತಿರಬೇಕು.

ಭಾವದ ಭ್ರಮೆ ಹಿಂಗುವುದಕ್ಕೆ
ಸಾವಧಾನದಲ್ಲಿ ಸಾವಯವವಾದ ಸಾಹಿನಂತೆ.
ಭಾವ ಎಯ್ದಬೇಕು.
ಇಷ್ಟ ಪ್ರಾಣದಲ್ಲಿ ಉರಿ ಅರಗಿನ ಯೋಗದಂತೆ,
ಕ್ರೀಯಲ್ಲಿ ಕರಗಬೇಕು.
ಇದೇ ದೃಷ್ಟ, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೩೦ ||

೧೩೦೫

ಇಷ್ಟಪ್ರಾಣಸಂಬಂಧಯೋಗ ಭೇದದ ಪರಿ ಯಾವುದೆಂದಡೆ :
ಅಕ್ಷಿಯ ಮುಚ್ಚಿದಲ್ಲಿ ನಿರೂಪಾಯಿತ್ತು, ತೆರೆದಲ್ಲಿ ರೂಪಾಯಿತ್ತು.
ತನ್ನಯ ಅರಿವು ಮರವೆಯಿಂದ
ಕ್ರೀ, ನಿಃಕ್ರೀಯೆಂಬ ಸಂದೇಹವಾಯಿತ್ತು.
ನಿಂದ ನೀರ ನೆಳಲು, ಚರಿಸಿದಲ್ಲಿ ಅಡಗಿತ್ತು.
ಆ ತೆರದ ದೃಷ್ಟವನರಿ,
ಐಘಟದೂರ ರಾಮೇಶ್ವರಲಿಂಗ ಏಕಸ್ವರೂಪು. || ೩೧ ||

೧೩೦೬

ಇಷ್ಟಲಿಂಗ ವಸ್ತುವನರಸುವುದಕ್ಕೆ ದೃಷ್ಟವಿಲ್ಲ.
ವಸ್ತು ತಾನೆ ಕುರುಹಿನಲ್ಲಿ ನಿಂದರುಹಿಸಿಕೊಳ್ಳಬೇಕು.
ಅದೆಂತೆಂದಡೆ :
ಮಣಿ ದಾರವನೊಳಕೊಂಡು ತಾ ಕುರುಹಿಗೆ ಬಂದು ನಿಲುವಂತೆ.
ವಸ್ತುವನೊಳಕೊಂಡು ಕುರುಹಿನ ರೂಪು ಮಣಿದಾರದಂತೆ.
ಇಂತೀ ಉಭಯದ ಭೇದ. ಎಡೆವೆರಟಿಲ್ಲ,
ಐಘಟದೂರ ರಾಮೇಶ್ವರಲಿಂಗ ತಾನೆ. || ೩೨ ||

೧೩೦೭

ಇಷ್ಟಲಿಂಗಸಂಬಂಧ ಮುಕ್ತಿಪದ.
ಭಾವಲಿಂಗಸಂಬಂಧ ಭವಕ್ಕೆ ಬೀಜ.
ಪ್ರಾಣಲಿಂಗಸಂಬಂಧ ಪ್ರಾಣದ ಗೊತ್ತು.
ಇಂತೀ ತ್ರಿವಿಧಭೇದವರತು ನಿಂದುದು, ಐಕ್ಯಲಿಂಗಸಂಬಂಧ.
ಐಘಟದೂರ ರಾಮೇಶ್ವರಲಿಂಗದಲ್ಲಿ. || ೩೩ ||

೧೩೦೮

ಉಂಟೆಂಬುದು ಭಾವದ ನೆಮ್ಮುಗೆ,
ಇಲ್ಲಾ ಎಂಬುದು ಚಿತ್ತದ ಪ್ರಕೃತಿ.
ಉಭಯನಾಮ ನಷ್ಟವಾಗಿ ನಿಂದುಳುಮೆ,
ಐಘಟದೂರ ರಾಮೇಶ್ವರಲಿಂಗ ಇಕ್ಕಿದ ಗೊತ್ತು. || ೨೪ ||

೧೩೦೯

ಊರ್ಧ್ವಮುಖದಲ್ಲಿಯೈದಿದ ವಿಹಂಗ,
ಅಧೋಮುಖದಲ್ಲಿ ಧರೆಯ ನೋಡಿ,
ತಾನಡರುವ ತೆರನ ಕಾಬಂತೆ,
ತುರೀಯದಲ್ಲಿಯೈದಿ, ತೂರ್ಯಾತೀತದಲ್ಲಿ ನೋಡಿ,
ತತ್ವದಲ್ಲಿ, ನಿಶ್ಚಯವ ಮಾಡಬೇಕು, ಇಷ್ಟಲಿಂಗವ.
ಆ ಇಷ್ಟ ನಿಶ್ಚಯದ ನಿಜತತ್ವದಲ್ಲಿ ಆಶ್ರಯಿಸಿ,
ಬಚ್ಚಬಯಲಾಗಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೨೫ ||

೧೩೧೦

ಎಂಬತ್ತುನಾಲ್ಕುಲಕ್ಷ ಜೀವವ್ರತ. ಐವತ್ತಾರು ನೇಮವ್ರತ.
ಅರುವತ್ತನಾಲ್ಕು ಶೀಲವ್ರತ. ಮೂವತ್ತಾರು ಆಚಾರವ್ರತ.
ತ್ರಿವಿಧ ಕ್ರೀಭಾವ ನೇಮವ್ರತ. ಇಂತಿವರಲ್ಲಿ ಶುದ್ಧಾತ್ಮನಾಗಿ
ಅರಿದುದೇ ಜೀವನ್ಮುಕ್ತವ್ರತ. ಐಘಟದೂರ ರಾಮೇಶ್ವರಲಿಂಗದಲ್ಲಿ
ಸರ್ವ ಅವಧಾನಿಯ ಕ್ರೀ ಶುದ್ಧತೆ. || ೨೬ ||

೧೩೧೧

ಎನ್ನ ಘ್ರಾಣ ಶುದ್ಧವಾಯಿತ್ತಯ್ಯಾ,
ಏಕೋರಾಮಿತಂದೆಗಳ ಧರ್ಮದಿಂದ.
ಎನ್ನ ಜಿಹ್ವೆ ಶುದ್ಧವಾಯಿತ್ತಯ್ಯಾ,
ಪಂಡಿತಾರಾಧ್ಯರ ಧರ್ಮದಿಂದ.
ಎನ್ನ ನೇತ್ರ ಶುದ್ಧವಾಯಿತ್ತಯ್ಯಾ.
ರೇವಣಸಿದ್ಧೇಶ್ವರದೇವರ ಧರ್ಮದಿಂದ.
ಎನ್ನ ತ್ವಕ್ಕು ಶುದ್ಧವಾಯಿತ್ತಯ್ಯಾ,
ಸಿದ್ಧರಾಮೇಶ್ವರದೇವರ ಧರ್ಮದಿಂದ.
ಎನ್ನ ಹೃದಯ ಶುದ್ಧವಾಯಿತ್ತಯ್ಯಾ.

ಮರುಳಸಿದ್ಧೇಶ್ವರದೇವರ ಧರ್ಮದಿಂದ
ಸಕಳೇಶ ಮಾದಿರಾಜಯ್ಯಗಳ ಧರ್ಮದಿಂದ.
ಎನ್ನ ಅಂತರಂಗ ಶುದ್ಧವಾಯಿತ್ತಯ್ಯಾ,
ತೆಲುಗುಜೊಮ್ಮಯ್ಯಗಳ ಧರ್ಮದಿಂದ.
ಎನ್ನ ಬಹಿರಂಗ ಶುದ್ಧವಾಯಿತ್ತಯ್ಯಾ,
ಕೇಶಿರಾಜಯ್ಯಗಳ ಧರ್ಮದಿಂದ.
ಎನ್ನ ಸರ್ವಾಂಗ ಶುದ್ಧವಾಯಿತ್ತಯ್ಯಾ,
ಬಸವಣ್ಣ, ಚನ್ನಬಸವಣ್ಣ, ಪ್ರಭು, ವೀರಮಡಿವಾಳಯ್ಯಗಳ ಧರ್ಮದಿಂದ.
ಐಘಟದೂರ ರಾಮೇಶ್ವರಾ, ನಿಮ್ಮ ಶರಣರ ಧರ್ಮದಿಂದ
ನಾನು ಶುದ್ಧನಾದೆನಯ್ಯಾ. || ೨೭ ||

೧೩೧೨

ಐಶ್ವರ್ಯವುಳ್ಳವಂಗೆ ನಿಜಭಕ್ತಿಯಿಲ್ಲ.
ಡಂಬಕದ ವೇಷಧಾರಿಗೆ ನಿಜತತ್ವದ ಜ್ಞಾನವಿಲ್ಲ.
ಕುಟಿಲರ ನೆಮ್ಮಿಗೆ ಘನಲಿಂಗದ ನೆಮ್ಮಿಗೆಯಿಲ್ಲ,
ಐಘಟದೂರ ರಾಮೇಶ್ವರಲಿಂಗ. || ೨೮ ||

೧೩೧೩

ಒಂದು ಬಿಟ್ಟೊಂದ ಹಿಡಿದಿಹೆನೆಂಬಲ್ಲಿ ಸಿಕ್ಕಿತ್ತು ಅರಿವು,
ತಮಂಧವೆಂಬ ಮಂದಿರದಲ್ಲಿ.
ಹಿಡಿದುದ ಬಿಟ್ಟು, ವಾರಿಯಲ್ಲಿ ಹೊಳಹುದೋರಿದ ಮತ್ಸ್ಯಕ್ಕೆ
ಹೋದ ಶಿವಬುದ್ಧಿಯಂತಾಗಬೇಡ.
ಹಿಡಿದಲ್ಲಿ ಕಂಡು, ಕಂಡಲ್ಲಿ ನಿಂದು, ನಿಂದಲ್ಲಿ ಕೂಡಿ,
ಕೂಡಿದಲ್ಲಿಯೇ ಉಭಯ ಬಯಲಾಯಿತ್ತು.
ಐಘಟದೂರ ರಾಮೇಶ್ವರಲಿಂಗ, ತಾನು ತಾನೆ. || ೨೯ ||

೧೩೧೪

ಕಂಡು ಹಿಡಿಯುವುದು ಘಟದ ಭೇದ.
ಕಾಣದರಸುವುದು ಆತ್ಮನ ಭೇದ.
ಕಂಡುದ ಕಾಣದುದ ಹಿಂಗಿ ಕೂಡುವುದು, ಅರಿವಿನ ಭೇದ.
ತ್ರಿವಿಧ ನಿಂದಲ್ಲಿ, ಐಘಟದೂರ ರಾಮೇಶ್ವರಲಿಂಗನ ನಿಲವು ಅಸಾಧ್ಯ || ೩೦ ||

೧೩೧೫

ಕಂಡೆನೆಂದಡೆ ಮುಂದಕ್ಕೊಂದನರಿವುತ್ತಿದ್ದಿತ್ತು.
ಕಾಣೆನೆಂದಡೆ ಅಂಗದಲ್ಲಿದ್ದ ಕುರುಹು ಇದ್ದಿತ್ತು.
ಈ ಉಭಯವ ಹಿಂಗಿ ಕಂಡೆಹೆನೆಂದಡೆ,
ಐಘಟದೂರ ರಾಮೇಶ್ವರಲಿಂಗ ಸಾಧ್ಯ. ||೩೧||

೧೩೧೬

ಕರ್ತೃ ಭೃತ್ಯವಾದಲ್ಲಿ, ಸರಸ ಸುರತಸಂಗ ಪರಿಹಾಸಕಂಗಳಿಂದ
ಮಾಡುವುದು, ಮಾಡಿಸಿಕೊಂಬುದು ಉಭಯದ ಕೇಡು.
ಅದು ನೀರಸವಾಗಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೩೨||

೧೩೧೭

ಕರ್ಮದ ಗಸಣಿ ಬೇಡ.
ವರ್ಮವನರಿದಲ್ಲಿ ಬ್ರಹ್ಮವೆಂದೆನಬೇಡ.
ಸಮಾಧಾನ ನೆಲೆಗೊಂಡಲ್ಲಿ,
ನಿರ್ಮಳ ನಿಜ ತಾನಾದಲ್ಲಿ,
ಆನಂದಸಿಂಧು [ಐಘಟದೂರ] ರಾಮೇಶ್ವರನೆನಲಿಲ್ಲ. ||೩೩||

೧೩೧೮

ಕಲ್ಪಿಸಿ ಅರ್ಪಿಸಿ, ಅರ್ಪಿಸಿ ಭೋಗಿಸಲಿಲ್ಲ,
ಅರ್ಪಿತ ಅನರ್ಪಿತವೆಂಬೆರಡಳಿದನಾಗಿ.
ಕಾಯದ ಕೈಗಳಲ್ಲಿ, ಮನದ ಕೈಗಳಲ್ಲಿ,
ಭಾವದ ಕೈಗಳಲ್ಲಿ ಅರ್ಪಿಸುವವನಲ್ಲ, ಆತ ಅನರ್ಪಿತನಾಗಿ.
ಅರ್ಪಿತ ಅನರ್ಪಿತವೆಂಬೆರಡಳಿದನಾಗಿ,
ಕೂಡಿದೆನಗಲಿದೆ, ಅಳಿದೆನುಳಿದೆನೆಂದಡೆ,
ಸಂದನಳಿದ ಸದಮಲಾನಂದಸಿಂಧು
[ಐಘಟದೂರ] ರಾಮೇಶ್ವರನು ತಾನೆ. ||೩೪||

೧೩೧೯

ಕಾಣಬೇಕೆಂದು ಮುಂದೆ ನಿಂದು, ಕೇಳಬೇಕೆಂದು ಕೂಗಿ ಕರೆದು,
ಈ ಕೇಣಸರದ ಜಾಣತನದ ಗುರುವೇಕೆ ?
ಸುಡು ಒಡಲ, ಬಿಡು ಅಸುವ, ನಿನಗೆ ಒಡೆಯತನವೇಕೆ ?

ಸುಖಿವಡಗಿಂಗೆ ಸಿಕ್ಕಿ, ಒಡಿಮೊಲಕ್ಕೆ ಗಿಡುಪಿನ ಹಂಗಿಲ್ಲ.
ಬಿಡುವನವರ, ಐಘಟದೂರ ರಾಮೇಶ್ವರಲಿಂಗ. ||೩.೫||

೧೩.೨೦

ಕಾಮದಲ್ಲಿ ಅಳಿದು, ಕ್ರೋಧದ ದಳ್ಳುರಿಯಲ್ಲಿ ಬೆಂದು,
ಮೋಹದ ಸಮುದ್ರದಲ್ಲಿ ಮುಳುಗಿ,
ನಾನಾ ಭವರಸಂಗಳನುಂಡು ಘೋರಸರಾಗಬೇಡ.
ಅರಿ, ಐಘಟದೂರ ರಾಮೇಶ್ವರಲಿಂಗವ. ||೩.೬||

೧೩.೨೧

ಕಾಮವ ಬ್ರಹ್ಮಂಗಿಕ್ಕಿ, ಮೋಹವ ವಿಷ್ಣುವಿಂಗಿಕ್ಕಿ,
ಲೋಭವ ರುದ್ರಂಗಿಕ್ಕಿ, ಮದವ ಮದನಂಗೆ ಕೊಟ್ಟು,
ಕಳೆದುಳಿಯಬೇಕು, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೩.೭||

೧೩.೨೨

ಕಾಯಶೂನ್ಯ, ಜೀವಶೂನ್ಯ,
ಪ್ರಾಣಶೂನ್ಯವೆಂದೆಂಬರು. ಅದೆಂತಯ್ಯ ?
ಮನ ಮನನ ಮನನೀಯಂಗಳಲ್ಲಿ
ಮಂತ್ರಲೀಯವಾದುದೆ ಕಾಯಶೂನ್ಯ.
ಆ ಮಂತ್ರ ಪಿಂಡಾಂಡದಲ್ಲಿ,
ಪರಿಪೂರ್ಣವೇದ್ಯ ತೋರಿದಾಗಲೆ ಜೀವಶೂನ್ಯ.
ಆ ಬ್ರಹ್ಮಾಂಡ ಪರಿಣಾಮದಲ್ಲಿ ಜೀವನ ಉಪಾಧಿ ನಷ್ಟವಾಗಿ.
ಜೀವ ಪರಮ ಸಂಯೋಗವೆಂಬ ಸಂದೇಹವಳಿದಾಗಲೇ ಪ್ರಾಣಶೂನ್ಯ,
ಇದು ತ್ರಿವಿಧಶೂನ್ಯ.
ಐಘಟದೂರ ರಾಮೇಶ್ವರಲಿಂಗದಲ್ಲಿ ನಿಲುಕಡೆ. ||೩.೮||

೧೩.೨೩

ಕಾಲವಿರಹಿತ ಗುರುವಾಗಬೇಕು.
ಕರ್ಮವಿರಹಿತ ಲಿಂಗವಾಗಬೇಕು.
ಭವವಿರಹಿತ ಜಂಗಮವಾಗಬೇಕು.
ಮೂರನರಿತು ಭೇದಿಸಿ, ವಿರಕ್ತನಾಗಬೇಕು.
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೩.೯||

೧೩೨೪

ಕಾಳಿಕೆ ಹರಿದ ಹೇಮದಂತೆ,
ನಾರಿಕೇಳಫಲವ ನುಂಗಿದ ವಾರಣದಂತೆ,
ಬೆರಸಿ ಬೆರಸದಂತಿರಬೇಕು.
ಅದು ನಾಲಿಗೆಯ ಹುಣ್ಣಿನಂತೆ,
ಮೀರಬಾರದು, ಅಂಗೀಕರಿಸಬಾರದು.
ಕ್ರೀಜ್ಞಾನಸಂಪದದಲ್ಲಿ ಕಾಬವಂಗೆ
ಭಾವಶುದ್ಧವಾಗಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೪೦||

೧೩೨೫

ಕುಂಭ ಘಟದಂತೆ ಕುರುಹಾಗಿ,
ತುಂಬಿದ ಜಲದಂತೆ ಮನವಾಗಿ,
ತಂಡುಲದಂತೆ ಚಿತ್ತಶುದ್ಧವಾಗಿ,
ಮಾಡುವ ಕ್ರೀ ಅಗ್ನಿಯಂತಾಗಿ.
ಇಂತಿವು ಕೂಡಿ ಘಟಿಸಿ,
ಕ್ರೀಜ್ಞಾನ ಶುದ್ಧವಾಗಿ ಅರಿಯಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೪೧||

೧೩೨೬

ಕುಟಿಲಕ್ಕಲ್ಲದೆ ಜಗ ಸಿಕ್ಕದು.
ವಾಚಕಂಗಲ್ಲದೆ ಭೋಗವಿಲ್ಲ. ಘಟಧರ್ಮಕ್ಕೆ ಹೊರಗು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೪೨||

೧೩೨೭

ಕುರುಹಿಟ್ಟಲ್ಲಿ ಅರಿವು ನಷ್ಟವಾಯಿತ್ತು.
ಅರಿವ ನುಂಗಿದ ಕುರುಹು, ಇದಿರಭಾವಕ್ಕೊಡಲಾಯಿತ್ತು.
ತನ್ಮಯ ನಷ್ಟವಾಗಿ, ಉಭಯದೋರದೆ ನಿಂದಲ್ಲಿ,
ಆ ನಿಲವು ತಾನೆ, ಐಘಟದೂರ ರಾಮೇಶ್ವರಲಿಂಗ. ||೪೩||

೧೩೨೮

ಕುರುಹೆ ಘಟವಾಗಿ, ಅರಿವೆ ಆತ್ಮನಾಗಿ.
ಉಭಯವನರಿವುದು ಆಚಾರದಂಗವಾಗಿ.

ಇವು ನಿಂದು ಉಳಿಯೆ,
ಐಘಟದೂರ ರಾಮೇಶ್ವರಲಿಂಗದ ಇರವು,
ಬಚ್ಚಬಯಲಾಯಿತ್ತು. || ೪೪ ||

೧೩೨೯

ಕುಸುಮ ಒಣಗಿದಾಗ ಸೌರಭವಡಗಿತ್ತು.
ಸಾರವರತಾಗ ಸಸಿ ಹೊಂದಿತ್ತು.
ಕುರುಹ ಮರೆದಾಗ ಅರಿವು ನಿಂದಿತ್ತು.
ಐಘಟದೂರ ರಾಮೇಶ್ವರಲಿಂಗ ಭಜನೆಗೊಳಗಾಗಬೇಕು. || ೪೫ ||

೧೩೩೦

ಕೈ ಕಾಲಿನಲ್ಲಿ ಕೊಂಡಡೇನು,
ಬಾಯಿಗೆ ಬಂದಲ್ಲದೆ ಒಡಲೆಡೆಯಿಲ್ಲ.
ಮಾತಿನಲ್ಲಿ ಆಡಿದಡೇನು, ಮನದಲ್ಲಿ ಅರಿದಡೇನು,
ಆ ಇರವು, ಆತನ ಮುಟ್ಟಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೪೬ ||

೧೩೩೧

ಕ್ರೀಭಾವಶುದ್ಧತೆ ಆದವನಿರವು, ಬೆಂಕಿ ಕಾಷ್ಠವ ಕೂಡಿ,
ದ್ವಂದ್ವವಾಗಿ ಉರಿದು, ಹಿಂಗಿ ನಂದಿದಂತಿರಬೇಕು.
ಹುಳಿ ಸಿಹಿಯ ಕೂಡಿ,
ಕೂಟಸ್ಥದಿಂದ ಉಳುಮೆಯ ಘೃತವಂತಿರಬೇಕು.
ವಿಷ ಶರೀರದಲ್ಲಿ ವೇಧಿಸಿ, ದೆಸೆಯನಳಿದಂತಿರಬೇಕು.
ಅಗ್ನಿಯಲ್ಲಿ ಅರತ ಉದಕದಂತೆ,
ಬಯಲೊಳಡಗಿದ ಶಬ್ದದಂತಿರು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೪೭ ||

೧೩೩೨

ಕ್ರೀಯ ತೆರನನರಿಯೆನೆಂದು ಬಿಡಬಹುದೆ ಆಚಾರವ ?
ಆಚಾರದ ತೆರನನರಿಯೆನೆಂದು ಮರೆಯಬಹುದೆ ಮಾರ್ಗವ ?
ಇಂತೀ ನಾನಾ ಭೇದಂಗಳಲ್ಲಿ ಅರಿದು, ವಿಚಾರಿಸಿ,
ಮಣ್ಣಿನಲ್ಲಿ ಕೆಡಿಸಿ, ಮಣ್ಣಿನಲ್ಲರಸುವಂತೆ,
ಮನೆಯಲ್ಲಿ ಇರಿಸಿದ ಒಡವೆಯ ಮರೆದು, ನೆನೆವಂತೆ ಅರಿ.

ಇಷ್ಟಲಿಂಗದ ಪ್ರಾಣಲಿಂಗದ ಗೊತ್ತೆಂಬುಭಯ ಬೇಡ.
ಅದು ನಿಶ್ಚಯ, ಒಂದಲ್ಲದೆ ಬೇರೆ ನಾಮವಿಲ್ಲ,
ಐಘಟದೂರ ರಾಮೇಶ್ವರಲಿಂಗಕ್ಕೆ. || ೪೮ ||

೧೩೩೩

ಕ್ರಿಯಾಸಂಪದನಾದಲ್ಲಿ, ಉರಿ ಕಾಷ್ಠವ ವೇಧಿಸಿದಂತಿರಬೇಕು.
ಆ ಚರಪರ ಒಡಗೂಡಿದಂತಿರಬೇಕು.
ಜಲ ಜಲವ ಕೂಡಿದಂತೆ ಹೆರೆಹಿಂಗುವುದಕ್ಕೊಡಲಿಲ್ಲ.
ವಾರಿಯ ಶಿಲೆ ಬಲಿದು ನೋಡ ನೋಡ ನೀರಾದಂತಿರಬೇಕು.
ಇಷ್ಟಲಿಂಗಸಂಬಂಧದ ನಿಷ್ಠೆ, ಪ್ರಾಣಕೂಟ ಉಭಯ ಮೋಸವಿಲ್ಲದಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೪೯ ||

೧೩೩೪

ಗರ್ಭದಲ್ಲಿ ಶಿಶು ಬಲಿದು,
ಹಸಿದೆನೆಂದು ಅತ್ತುದುಂಟೆ ಅಯ್ಯಾ ?
ಬೆಸನಾಗಿ ಪ್ರತಿರೂಪಿಂಗೆ ಕುಚಕ್ಷೀರವಲ್ಲದೆ
ಘಟದಿಂದಡಗಿದಲ್ಲಿ, ಸುಖ ತಾಯ ಇರವಿನಲ್ಲಿ ನಿಂದಂತೆ,
ಉಭಯಭೇದ, ಇಷ್ಟಲಿಂಗಸಂಬಂಧಯೋಗ.
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ
ಇದಿರಿಟ್ಟ ಭೇದ. || ೫೦ ||

೧೩೩೫

ಗುರುವಿಗೆ ಲಿಂಗ ಸಾಕ್ಷಿ, ಲಿಂಗಕ್ಕೆ ಜಂಗಮ ಸಾಕ್ಷಿ,
ಆ ಜಂಗಮಕ್ಕೆ ಅರಿವು ಸಾಕ್ಷಿ.
ಇಂತೀ ಅರಿವ ಮರೆದು,
ನರಗುರಿಗಳ ಬಾಗಿಲಲ್ಲಿ ನಿಂದು ತಡೆಯಿಸಿಕೊಂಬ
ಅರಿಗುರಿಗೇಕೆ ಅರಿವಿನ ಮಾತು ?
ಐಘಟದೂರ ರಾಮೇಶ್ವರಲಿಂಗಕ್ಕೆ
ಅವರ ಇರವು ಹೊರಗಾಗಿಹುದು. || ೫೧ ||

೧೩೩೬

ಚಿನ್ನ ವಿಶೇಷ ಮಣ್ಣು ಅಧಮವೆಂದಡೆ,
ಅದು ನಿಂದು ಕರಗುವುದಕ್ಕೆ

ಮಣ್ಣಿನ ಕೋವೆಯೆ ಮನೆಯಾಯಿತ್ತು.
ಇಷ್ಟವನರಿವ ವಸ್ತುವ ನೆಮ್ಮುವುದಕ್ಕೆ ಇದೇ ದೃಷ್ಟ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೫೨||

೧೩೩೭

ತಕ್ಕುರಂಗೆ ವಾಚಕ, ಭೂಪತಿಗೆ ದೆಸೆ, ಅಜಾತಂಗೆ ನಿಶ್ಚಯ,
ನೇಮಂಗೆ ಖಂಡಿತಭಾವ ನಿರ್ಧರವಾಗಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೫೩||

೧೩೩೮

ತಡೆವನ ಬಾಗಿಲಲ್ಲಿ ನಿಂದು,
ಕರೆಯಿಸಿಕೊಂಡು ಹೋದೆಹೆನೆಂಬ ಒಡೆಯತನವೇಕೆ ?
ಇವೆಲ್ಲವನರಿದು ಬಿಟ್ಟು, ತಿರುಗಿ ಅಲ್ಲಿಗೆ ಬಹ
ಸ್ಥಾಣುವಿನ ಮರೆಯ ಖಿಲ್ಲನ ಪಸುವಿನಂತಾಯಿತ್ತು,
ನಿಮ್ಮ ಅರಿವು, ಐಘಟದೂರ ರಾಮೇಶ್ವರಲಿಂಗವನರಿಯದೆ. ||೫೪||

೧೩೩೯

ತನ್ನ ಕಾಯ್ದು ಸೆಡೆಯುವಲ್ಲದೆ,
ಸೆಡೆಯುವ ಕಾಯ್ದು ಅಂಗವುಂಟೆ ಅಯ್ಯಾ ?
ವಸ್ತುಮುಖದಿಂದ ಎಲ್ಲವನರಿಯಬೇಕಲ್ಲದೆ,
ವಸ್ತು ತನ್ನ ಕಟ್ಟಿಗೆ ನಿಶ್ಚಯವೆ ?
ಅದು ತನ್ನ ಉಭಯದ ಕೇಡು,
ಐಘಟದೂರ ರಾಮೇಶ್ವರಲಿಂಗಕ್ಕೆ. ||೫೫||

೧೩೪೦

ತನ್ನ ತಾನರಿದಡೆ, ತನ್ನರಿವೆ ಗುರು,
ತಾನೆ ಲಿಂಗ, ತನ್ನ ನಿಷ್ಠೆಯೇ ಜಂಗಮ.
ಇಂತೀ ತ್ರಿವಿಧವು ಒಂದಾದಡೆ,
[ಐಘಟದೂರ] ರಾಮೇಶ್ವರಲಿಂಗವು ತಾನೆ. ||೫೬||

೧೩೪೧

ತನ್ನವರನ್ಯರಹರು, ಹೆಣ್ಣು ಹೊನ್ನು ಮಣ್ಣು ಹಿಡಿದು ಹೋರಲಾಗಿ.
ಆ ಮೂರ ಬಿಟ್ಟಡೆ ಅನ್ಯರು ತನ್ನವರಹರು.
ಅರಿದವಂಗೂ ಸರಿ. ಜಗದ ಒಡಲಾದವಂಗೂ ಸರಿ ಆಸೆವೊಂದೇ ಭೇದ.
ಉಭಯಕ್ಕೆ ಹೊರಗಾಗು, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೫೭||

೧೩೪೨

ತಾ ಮೀವನ್ನಕ್ಕ ಲಿಂಗಕ್ಕೆ ಮಜ್ಜನ.
ತಾನುಂಬನ್ನಕ್ಕ ಲಿಂಗಕ್ಕೆ ನೈವೇದ್ಯ.
ತನ್ನ ತನು ಭೋಗವ ಮಾಡುವನ್ನಕ್ಕ
ಲಿಂಗಾರ್ಪಿತವಾಗಬೇಕು.
ಇದು ಸದ್ಭಕ್ತಮಾರ್ಗದಿರವು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೫೮ ||

೧೩೪೩

ದ್ವೈತವಳಿದು ಅದ್ವೈತವಾಗಬೇಕು.
ಜ್ಞಾನವಳಿದು ಕ್ರೀಯಲ್ಲಿ ನಿಂದು, ದಿವ್ಯ ಜ್ಞಾನವಾಗಬೇಕು.
ಹಾಲು ಒಗುವಲ್ಲಿ ನೀರ ಬೆರಸಿದಂತೆ,
ಅದು ಹೊತ್ತುವುದಕ್ಕೆ ವಾರಿ ನಿಂದಂತಾಗಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೫೯ ||

೧೩೪೪

ಧನವ ಗಳಿಸಿದವ ಹೆಣನಾದ.
ಧರೆಯ ಗಳಿಸಿದವ ಅರಿಗಳಿಗೆ ಒಡಲಾದ.
ಕನ್ಯೆಯ ಗಳಿಸಿದವ ಕುಕ್ಕುರಯೋನಿಯಲ್ಲಿ ಸಿಕ್ಕಿದಂತಾದ.
ಅಟ್ಟುವ ವಾಸಿಯಲ್ಲಿ ಕುಕ್ಕುಳಗುದಿಯಬೇಡ.
ಸತ್ಯಕ್ಕೆ ಹೊರಗಾಗು, ಅಸತ್ಯಕ್ಕೆ ಒಳಗಾಗು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೬೦ ||

೧೩೪೫

ನರದೇಹವ ತೊಟ್ಟು, ತಾ ಗುರುವೆಂದು ಇದಿರಿಗೆ ಇಷ್ಟವ ಕೊಟ್ಟು,
ಅವರ ಮನೆಯಲ್ಲಿ ಒಲ್ಲದೆ, ಅಕ್ಕಿ ತುಪ್ಪವ ನೀಡಿಸಿಕೊಂಡು,
ಅಟ್ಟುಕೊಂಡುಂಬ ಮಿಟ್ಟೆಯಭಂಡರ ಕೈಯಲ್ಲಿ
ಕಟ್ಟಿಸಿಕೊಂಡ ಲಿಂಗ, ದೃಷ್ಟದಿ ಶ್ರವಕಾಯ.
ಇದನರಿತು, ಅಲ್ಲಿ ಹೊಕ್ಕು ಉಂಡವಂಗೆ
ಕರಟನ ಕೈಯ ಕೀಟಕ, ಆ ಕಾಕೂಳು,
ಘಟಿತಮಯ ಐಘಟದೂರ ರಾಮೇಶ್ವರಲಿಂಗ ಅವರ ಒಲ್ಲನಾಗಿ. || ೬೧ ||

೧೩೪೬

ನಾನಾ ಫಲವ ಸಲಹುವಲ್ಲಿ, ಮೂಲದ ಬೆಳೆಯನರಿತು ನೀರನೆರೆಯಬೇಕು.
ವ್ರತ ನೇಮ ಕೃತ್ಯ ನಿತ್ಯವ ಮಾಡುವಲ್ಲಿ, ಅತಿಶಯನಾಗಿರಬೇಕು.

ಪಟುಭಟನಾದಲ್ಲಿ ಉಭಯದಳ ಪಿತಾಮಹನಾಗಿರಬೇಕು.
ಗತಿ ಬಟ್ಟೆಯ ತೋರುವ ಚರಗುರುದ್ವಯ ಗತಿಮಹನಾಗಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೬೨ ||

೧೩೪೭

ನೀರೊಳಗಣ ಕಿಚ್ಚಿಗೆ ನೀರೆ ತಾಯಿ.
ಕಲ್ಲೊಳಗಣ ಕಿಚ್ಚಿಗೆ ಕಲ್ಲೆ ತಾಯಿ.
ಮರದೊಳಗಣ ಕಿಚ್ಚಿಗೆ ಮರನೆ ತಾಯಿ.
ಅವು ಹೊರಹೊಮ್ಮಿದಾಗ ತಾಯ ತಿಂದು, ತಾವು ತಲೆದೋರುವಂತೆ
ಕುರುಹಿಂದ ಅರಿವನರಿತು
ಅರಿವು ಕುರುಹು ನಷ್ಟವ ಮಾಡಿ ನಿಂದಲ್ಲಿಯೆ,
ಐಘಟದೂರ ರಾಮೇಶ್ವರಲಿಂಗ, ಅಂಗವ ಅರಿತು ನಿಂದ ನಿಲವು. || ೬೩ ||

೧೩೪೮

ನೀರೊಳಗಣ ಕಿಚ್ಚು ತಾಯಲ್ಲಿ ಅಡಗಿತ್ತು.
ಶಿಲೆಯೊಳಗಣ ಕಿಚ್ಚು ತಾಯನುಳುಹಿ, ಇದಿರ ಸುಟ್ಟಿತ್ತು.
ಮರದೊಳಗಣ ಕಿಚ್ಚು ಮರನನೂ ಸುಟ್ಟು,
ಇದಿರನೂ ಸುಟ್ಟು, ಪರಿಸ್ಪಂದಕ್ಕೆ ಹರಿಯಿತ್ತು.
ಇಂತೀ ತ್ರಿವಿಧಭೇದದಿಂದ, ಜ್ಞಾನದ ಭೇದವನರಿ
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೬೪ ||

೧೩೪೯

ಪಂಚೇಂದ್ರಿಯಂಗಳಲ್ಲಿ ಲಿಂಗಮುಖವಾಗಿ ಕೊಳ್ಳಬೇಕೆಂಬರು.
ಆ ಇಂದ್ರಿಯಂಗಳು ಲಿಂಗಕ್ಕೆ ಹೊರತೆಯೆ ?
ಲಿಂಗದ ಮುಖದಲ್ಲಿ ಇಂದ್ರಿಯಂಗಳು ಬಂದು ನಿಂದು,
ತಮ್ಮ ಸಂದೇಹವ ಬಿಡಿಸಿಕೊಂಬವಲ್ಲದೆ,
ಇಂದ್ರಿಯಂಗಳ ಮುಖಕ್ಕೆ ಲಿಂಗವಿಲ್ಲ.
ಲಿಂಗಮುಖದಲ್ಲಿ ಇಂದ್ರಿಯಂಗಳು ನಿವೃತ್ತಿ,
ಐಘಟದೂರ ರಾಮೇಶ್ವರಲಿಂಗದಲ್ಲಿ. || ೬೫ ||

೧೩೫೦

ಪಟುಕದ ಘಟದಲ್ಲಿ, ರಜನೀರ ತುಂಬಿದ ಪರಿಸೂತ್ರವುಂಟೆ ?
ಉದಕ ಹಿಂಗೆ, ಆ ಘಟ ಮುನ್ನಿನಂದ.
ಅದನಳಿದು ಕಾಣು, ಐಘಟದೂರ ರಾಮೇಶ್ವರಲಿಂಗವ. || ೬೬ ||

೧೩೫೧

ಪಶು ವಾಹನವ ಕಟ್ಟುವುದಕ್ಕೆ ನೆಟ್ಟಗೊತ್ತಿಲಿಲ್ಲದೆ ಕಟ್ಟಲಿಲ್ಲ.
ಅಸು ಆತ್ಮನ ಕಟ್ಟುವ ಗೊತ್ತು,
ಇಷ್ಟದ ನಿಷ್ಠೆಯಿಂದ ಸ್ಥಾಣು ಕಟ್ಟುವಡೆಯಬೇಕು.
ಇದು ನಿಶ್ಚಯವೆಂದರಿ, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ ॥ ೬೭ ॥

೧೩೫೨

ಪಾಕವನರಿತು ಮಾಡುವ ಗರತಿಯಂತೆ,
ಲಾಗವನರಿತು ಲಂಘಿಸುವ ವನಚರನಂತೆ,
ಮೇಘವನರಿತು ಕರೆವ ಭೇಕನಂತೆ,
ಉಚಿತಕಾಲಂಗಳಲ್ಲಿ ಮಾಡುವ ಸತ್ಕ್ರೀ, ಲಿಂಗಕ್ಕೆ.
ಅರಿದು ಕೂಡುವುದು, ಘನ ವಸ್ತುವಿನಲ್ಲಿ.
ಉಭಯಭಾವದಲ್ಲಿ ನಿಂದು ಮತ್ತೆರಡಳಿಯಬೇಕು,
ಆ ಕುರುಹಿನಲ್ಲಿ, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೬೮ ॥

೧೩೫೩

ಪಾದತೀರ್ಥವ ಕೊಂಡಲ್ಲಿ ತೃಷೆಯರತು,
ಪ್ರಸಾದವ ಕೊಂಡಲ್ಲಿ ಹಸಿವರತು,
ಭೃತ್ಯಭಾವವಾದಲ್ಲಿ ನಾನೆಂಬುದಿಲ್ಲದೆ
ಅಹಂಕಾರ ವಿಸರ್ಜನವಾಗಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ॥ ೬೯ ॥

೧೩೫೪

ಪೃಥ್ವಿ, ಸದ್ಯೋಜಾತನ ಹಂಗು.
ಜಲ, ವಾಮದೇವನ ಹಂಗು.
ಅಗ್ನಿ, ಅಘೋರನ ಹಂಗು.
ವಾಯು, ತತ್ಪುರುಷನ ಹಂಗು.
ಆಕಾಶ, ಈಶಾನ್ಯನ ಹಂಗು.
ಪಂಚಬ್ರಹ್ಮನ ಮರೆದು, ಓಂಕಾರ ಬ್ರಹ್ಮವನರಿ,
ಐಘಟದೂರ ರಾಮೇಶ್ವರಲಿಂಗವ. ॥ ೭೦ ॥

೧೩೫೫

ಪ್ರಸಾದವ ಕೊಂಡಲ್ಲಿ, ಪ್ರಾಣದಾಸೆಯಿಲ್ಲದಿರಬೇಕು.
ಭಕ್ತಿಯ ಹೊತ್ತಲ್ಲಿ, ನಿಜನಿಶ್ಚಯವಿರಬೇಕು.

ಅದು ಸಚ್ಚಿತ್ತದ ನಿಚ್ಚಟದಿರವು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೭೧||

೧೩೫೬

ಫಲ, ರಸವ ಇರಿಸಿಕೊಂಡಿದ್ದಂತೆ,
ನೆಲ, ನಿಧಾನವನಿರಿಸಿಕೊಂಡಿದ್ದಂತೆ,
ತಾಯಿ, ಗರ್ಭದ ಶಿಶುವ ಆರೈಕೆಯಲ್ಲಿ ತಾಳಿಕೊಂಡಿಪ್ಪಂತೆ,
ಇದ್ದೆಯಲ್ಲಾ ನೀ ಕುರುಹಾಗಿ.
ಅರಿವ ಆತ್ಮನ ಮರೆಯಮಾಡಿಕೊಂಡಿದ್ದೆಯಲ್ಲಾ, ಅರಿವನರಿವುದಕ್ಕೆ.
ಕುರುಹಿನ ಮೂರ್ತಿಯಲ್ಲಿ ಅಂಗವ ಮರೆದು, ವಸ್ತುವ ಹಿಂಗದಿರು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೭೨||

೧೩೫೭

ಬಂಧನಂ ಪಾಪರೂಪಂ ಚ ನಿರ್ಬಂಧಃ ಪುಣ್ಯರೂಪಕಃ
ಸತ್ಯಜ್ಞಾನ ಸಂಬಂಧಶ್ಚ ತದ್ಯಥಾ ಶ್ರುಣು ಪಾರ್ವತಿ ||
ಎಂದಕಾರಣ, ಬಂಧನದೈಕ್ಯವ ಶಿವಶರಣರೊಪ್ಪರಾಗಿ.
ಅದೆಂತೆಂದಡೆ: ತೈಲ ಬತ್ತಿಯುಳ್ಳನ್ನಕ್ಕ ಜ್ಯೋತಿ ಬಯಲಾಗದು.
ಎಣ್ಣೆ ಬತ್ತಿ ತೀರಿದ ಮೇಲೆ ಗೃಹದೊಳಗಣ ಜ್ಯೋತಿ
ಉರಿಯಬಲ್ಲುದೆ ಹೇಳಿರಣ್ಣಾ ?
ಈ ದೃಷ್ಟಾಂತದಂತೆ, ದೇಹಿಗಳ ದೇಹಮಧ್ಯದಲ್ಲಿ
ಸಪ್ತಧಾತುಗಳುಳ್ಳ ಪರಿಯಂತರ
ಪಂಚಾಗ್ನಿಯಿದ್ದು ಜೀವರುಗಳು ಪ್ರಾಣತ್ಯಾಗವ ಮಾಡುವುದು.
ಹಾಗೆ ಶರಣನ ದೇಹಮಧ್ಯದಲ್ಲಿ ಚಿದಗ್ನಿಯಿದ್ದು,
ಪ್ರಾಣ ದಗ್ಧವ ಮಾಡಿ, ವಸ್ತುವಿನಲ್ಲಿ ಎಯ್ದುಸುತ್ತಿರಲಾಗಿ,
ಆತನ ಅರಿವು ಮರವೆಗೆ ಕರ್ತರಾಗಿಪ್ಪ ತೆತ್ತಿಗತ್ತ್ವವಲ್ಲದೆ
ತಾವು ಕಳಂಕರಾಗಿ, ಆತನ ವಿಕಳತೆಯಿಂದ ಐಕ್ಯವ ಮಾಡಿದಡೆ,
ಆ ದ್ರೋಹ ತಮಗಲ್ಲದೆ ಆತಂಗಿಲ್ಲ.
ಇಂತೀ ವಿವೇಕವುಳ್ಳ ವೀರಮಾಹೇಶ್ವರರ ಐಘಟದೂರ ರಾಮಲಿಂಗವೆಂಬೆ.
ಅಲ್ಲದಿರ್ದಡೆ, ನೀ ಸಾಕ್ಷಿಯಾಗಿ ಛೀ ಎಂಬೆನು. ||೭೩||

೧೩೫೮

ಬಸವಣ್ಣ ಚೆನ್ನಬಸವಣ್ಣ ಪ್ರಭು ಮಡಿವಾಳ ನಿಜಗುಣ
ಶಿವಯೋಗಿ ಸಿದ್ಧರಾಮ ಮೋಳಿಗೆಯ್ಯ ಆಯ್ದಕ್ಕಿಯ ಮಾರಯ್ಯ

ಏಕಾಂತರಾಮಯ್ಯ ಅಜಗಣ್ಣ ಶಕ್ತಿಮುಕ್ತಿ ಮಹಾದೇವಿಯಕ್ಕ
ಮುಂತಾದ ಏಳುನೂರೆಪ್ಪತ್ತು ಅಮರಗಣಂಗಳು
ಕೊಟ್ಟ ವ್ರತಪ್ರಸಾದ, ಆ ಪ್ರಸಾದವೆನಗೆ ಪ್ರಸನ್ನ.
ನಿಮಗೆ ಮರ್ತ್ಯದ ಮಣಿಹ ಹಿಂಗುವನ್ನಕ್ಕ ಎನ್ನ ವ್ರತದಲ್ಲಿ, ಎನ್ನ ಆಚಾರದಲ್ಲಿ,
ನಾ ಹಿಡಿದ ನೇಮದಾ ಭಿಕ್ಷೆಯಲ್ಲಿ,
ನಾ ತಪ್ಪಿದಡೆ, ತಪ್ಪು ಹೊತ್ತಲ್ಲಿ ನಿಮ್ಮ ಕೇಳಿದಡೆ,
ನಾ ಸತ್ತಿಹೆನೆಂದು ಕೂಡಿದಡೆ,
ಮತ್ತೆ ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಯಿಂದ
ಘಟವ ಬಿಟ್ಟಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಕ್ರೀಭಿನ್ನ ಭಿನ್ನದೋರಿದಲ್ಲಿ ಆಚಾರವೆ ಪ್ರಾಣವಾದ
[ಐಘಟದೂರ] ರಾಮೇಶ್ವರಲಿಂಗದಲ್ಲಿಯೇ ಲೀಯ. ||೭೪||

೧೩೫೯

ಬೀಜ ಕೊಳೆತಾಗ ಅಂಕುರ ನಷ್ಟವಾಯಿತ್ತು.
ಸಸಿಯಿಲ್ಲದ ಫಲವುಂಟೆ ಅಯ್ಯಾ ?
ಇಷ್ಟದ ಅರ್ಚನೆ ಅರತು, ಚಿತ್ತ ದೃಷ್ಟವ ಕಾಬುದಕ್ಕೆ
ಗೊತ್ತಾವುದು ಹೇಳಯ್ಯಾ ?
ಅದು ಮುಟ್ಟಿದ ಮುಟ್ಟಿನಲ್ಲಿ ಒದಗು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೭೫||

೧೩೬೦

ಬೀಜ ಗುರುವಾಗಿ, ಅಂಕುರ ಲಿಂಗವಾಗಿ,
ಅದರ ಫಲರಸಕಳೆ ಜಂಗಮವಾಗಿ,
ಮೂರನುಳಿಯೆ ನಿಂದುದು ನಿಜತತ್ವವಾಗಿ,
ವಿರಕ್ತಭಾವದಲ್ಲಿ ನಿಂದುದು ಜ್ಞಾನಜಂಗಮ.
ಆ ಭಾವ, ಐಘಟದೂರ ರಾಮೇಶ್ವರಲಿಂಗ ತಾನೆ. ||೭೬||

೧೩೬೧

ಭಕ್ತನಾದಲ್ಲಿ ಪಂಕವ ಹೊದ್ದದ ವಾರಿಯಂತಿರಬೇಕು,
ಜಲವ ಮುಟ್ಟದ ತೈಲದಂತಿರಬೇಕು,
ರಸಬದ್ಧ ಯೋಗದಂತಿರಬೇಕು,
ಮರಾಳನ ಮಾಟದಂತೆ, ಸಂಸಾರದ ಒದಗನರಿತು ಅರಿಯದಂತಿರಬೇಕು,
ಐಘಟದೂರ ರಾಮೇಶ್ವರಲಿಂಗದಲ್ಲಿ. ||೭೭||

೧೩೬೨

ಭಕ್ತಿ ಹೋಯಿತ್ತು, ಗುರುವಿನಲ್ಲಿ ಇದಿರಾದಲ್ಲಿ.
ಭಕ್ತಿ ಹೋಯಿತ್ತು, ಜಂಗಮದಲ್ಲಿ ಸಂದೇಹವ ಮಾಡಲಿಕೆ.
ಭಕ್ತಿ ಹೋಯಿತ್ತು, ಲಿಂಗದ ಅಂಗದ ಸಂಗವನರಿಯದೆ.
ಅರ್ತಿಗಾರಿಕೆಯಲ್ಲಿ ಮಾಡುವ ವ್ಯರ್ಥರ ಭಕ್ತಿ
ಇತ್ತಲೆ ಉಳಿಯಿತ್ತು, ಐಘಟದೂರ ರಾಮೇಶ್ವರಲಿಂಗವನರಿಯದೆ. ||೭೮||

೧೩೬೩

ಭಾಷೆ ತಪ್ಪಿದ ಬಂಟ, ನಿಹಿತವಿಲ್ಲದವನ ಅರಿವು,
ದಾತನರಿದವನ ದೊರೆತನ, ತೂತಕುಂಭದ ಏತದ ಘಾತದಂತೆ,
ಐಘಟದೂರ ರಾಮೇಶ್ವರಲಿಂಗ. ||೭೯||

೧೩೬೪

ಭೋಧೆಯ ಹೇಳಿ ಉಂಬವಂಗೆ ಆಗುಚೇಗೆಯ ಮಾತೇಕೆ ?
ಅವ ಮಾತ ಕಲಿತ ಮಾತುಗನಂತೆ, ಆಟವ ಕಲಿತ ಕೋಲಾಟಿಕನಂತೆ.
ಛೀ ಅದೇತರ ಅರಿವು ?
ಐಘಟದೂರ ರಾಮೇಶ್ವರಲಿಂಗಕ್ಕೆ ಮುನ್ನವೆ ದೂರ. ||೮೦||

೧೩೬೫

ಮಣ್ಣಿನಲ್ಲಿ ನೀರ ಬೆರಸಿ, ಮಥಿತಾಗಿ ನಿಂದು,
ನಿಲಿಸಿ ತೋರಿ, ಮುನ್ನಿನಂತಾಯಿತ್ತು.
ಅಪ್ಪು ಸಂಗವನೆಯ್ದಿದಂತೆ ಇರಬೇಕು,
ಇಷ್ಟಪ್ರಾಣಯೋಗಸಂಬಂಧ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೮೧||

೧೩೬೬

ಮಣ್ಣು ಬೆಂದು ಮಡಕೆಯಾಗಿ ಒಡೆದಡೆ, ಮುನ್ನಿನಂತಾದುದಿಲ್ಲ.
ಮಿಸುನಿ ವಿಶ್ವದೊಳಗಿದ್ದು, ತನ್ನಯ ರಸಕುಲವ ಬೆರೆಸಿದುದಿಲ್ಲ.
ಕ್ಷೀರ ಬಲಿದು ನಿಂದು, ಮುನ್ನಿನ ಪಿಸಿತವ ಸಾರಿದುದಿಲ್ಲ.
ಮೂರನರಿದು ಹರಿದು, ಮೂರನೊಡಗೂಡುವ
ಡಾಗಿನ ಪಶುಗಳಿಗೇಕೆ ನೆರೆ ನಿರಸ ಹೊಲಬು,
ಐಘಟದೂರ ರಾಮೇಶ್ವರಲಿಂಗವನರಿಯರಾಗಿ ? ||೮೨||

೧೩೬೭

ಮನ ಮುಟ್ಟದ ಪೂಜೆ,
ಮಣ್ಣುಗೋಡೆಯ ತೊಳೆದು, ನಿರ್ಮಲವನರಸುವನಂತೆ.
ವಸ್ತುವ ಮುಟ್ಟದ ಅರ್ಪಿತ,
ಕುಕ್ಕರ ಅಸ್ಥಿಯ ಕಡಿದು, ತನ್ನಯ ಶೋಣಿತಕ್ಕೆ ಚಪ್ಪರಿವಂತೆ,
ಇದು ನಿಶ್ಚಯದ ಮುಟ್ಟಲ್ಲ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೩ ||

೧೩೬೮

ಮನೆಯಲ್ಲಿ ಮನುಜರು ಅಡಗುವರಲ್ಲದೆ,
ಮನುಜರಲ್ಲಿ ಮನೆ ಅಡಗಿದುದುಂಟೆ ?
ಮಾಡುವುದಕ್ಕೆ ಕರ್ತನಲ್ಲದೆ ಆ ಘಟವ ಘಟಿಸುವುದಕ್ಕೆ ಅಗೋಚರ,
ಐಘಟದೂರ ರಾಮೇಶ್ವರಲಿಂಗ. || ೮೪ ||

೧೩೬೯

ಮನೆಯ ಹೊರಗಿದ್ದವನ, ಮನೆಯ ಒಳಗಿದ್ದವ ಕರೆದಡೆ
ವಿರೋಧವುಂಟೆ ಅಯ್ಯಾ ?
ಕ್ರೀ ಹೊರಗಾಗಿ ಆತ್ಮನೊಳಗಾದಲ್ಲಿ, ನಾನೆಂಬನ್ನಕ್ಕ ಕ್ರೀ ಶೂನ್ಯವಿಲ್ಲದಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೫ ||

೧೩೭೦

ಮರದ ಘಟಕ್ಕೆ, ತೊಗಲ ಬಿಗಿದು ಹೊಡೆಯೆ,
ಅದು ಒಡಗೂಡೆ ನಾದವಾಯಿತ್ತು.
ಈ ತೊ[ಗಲಿ]ನ ಭೇದ, ಒಡಗೂಡುವ ಲಿಂಗದ ಭಾವ
ಕುರುಹಿನ ನೆಮ್ಮುಗೆಯನರಿ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೬ ||

೧೩೭೧

ಮರುತ ಸಂಗವ ಮಾಡಿದ ಉರಿ, ವಾರಿ ಗಂಧದಂತೆ,
ವಾಳುಕ ಸಂಬಂಧಿಯಾದ ಜಲದ ಇರವಿನಂತೆ,
ಶಿಲೆ ತೈಲದ ಒಲುಮೆಯಂತಿರಬೇಕು,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೭ ||

೧೩೭೨

ಮೆಟ್ಟಿದ ಅಡಿಯ ದೃಢವಾಗಿ ಮೆಟ್ಟಿ, ಆಚೆಯಲ್ಲಿ ಕಿತ್ತಡಿಯಿಡಬೇಕು.
ಮುಂದಕ್ಕೆ ಒದಗು, ಹಿಂದಕ್ಕೆ ದೂರವಾಯಿತ್ತು.
ಇಷ್ಟದಲ್ಲಿ ಚಿತ್ತ ನೆಮ್ಮಿ, ಮತ್ತೆ ಪ್ರಾಣನ ಪಥ್ಯವನರಿಯಬೇಕು.
ಫಲದ ತೊಡಪು ಕೈಗೆ ತಾಹಂತೆ, ಘಟಜ್ಞಾನಕ್ಕೆ ಭಿನ್ನವಿಲ್ಲ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೮ ||

೧೩೭೩

ಮೇಘ ಒಸರಿ ಧರೆಯಲ್ಲಿ ನಿಂದು, ಆ ಧರೆಯ ತೋಡಿ ತೆಗೆಯೆ,
[ಆ ಸಲಿಲ] ಮುನ್ನಿನ ಹಾಂಗೆ ಧರೆಗಿಳಿಯೆ.
ಹಾಗಿರಬೇಕು, ಇಷ್ಟಪ್ರಾಣಯೋಗಸಂಬಂಧ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೮೯ ||

೧೩೭೪

ಮೊದಲು ರೂಪಾದ ಬಿತ್ತು, ಭೂಮಿಯಲ್ಲಿ ಬಿತ್ತಿ,
ಅದು ಬೀಜ ನಾಮ ನಿಂದು, ಸಸಿಯೆಂಬ ನಾಮವಾಯಿತ್ತು.
ಸಸಿ ಬಲಿದು ಬೆಳೆದು, ಉಂಡಿಗೆಯ ಬೀಜವೆಂಬ ಉಭಯನಾಮವ ತಾಳಿದುದು.
ಬೀಜ ಒಂದೋ, ಎರಡೋ ? ಎಂಬುದನರಿದಲ್ಲಿ,
ಕ್ರೀ ಶೂನ್ಯವೆಂಬ ಉಭಯನಾಮವಡಗಿತ್ತು.
ಐಘಟದೂರ ರಾಮೇಶ್ವರಲಿಂಗ[ದ] ಉಭಯನಾಮ ನಿಂದಿತ್ತು. || ೯೦ ||

೧೩೭೫

ಮೊನೆಯುರಿವಡೆ ಕರವಿಡಿಯಲ್ಲಿ ಇರಿದಲ್ಲದಾಗದು.
ಮನ ಅರಿವಡೆ ಕುರುಹಿನ ನೆರಿಗೆಯಲ್ಲಿ ಸಲೆ ಸಂದು ನಿಂದಲ್ಲದಾಗದು.
ಕ್ರೀ ಭಾವಶುದ್ಧ, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೯೧ ||

೧೩೭೬

ರಾಜರ ಬಾಗಿಲಲ್ಲಿ ನಿಂದು, ಕೂಗಿ ಮೊರೆಯಿಟ್ಟು,
ನೀನಾರೊ ಎಂದು ಕೇಳಿದಡೆ, ನಾನೊಡೆಯ ಎಂದಡೆ,
ಅಡಗದೇಕೆ ನಿನ್ನ ಬಾಯಿ ?
ತಡೆಯುಸಿಕೊಂಡು ಒಡೆಯತನವುಂಟೆ ನಿನಗಲ್ಲಿ ?
ಇಂತೀ ಬಿಡುಹೋರಿಗಳ ಬುಡ ಅಡಗದೇಕೆ,
ಐಘಟದೂರ ರಾಮೇಶ್ವರಲಿಂಗವನರಿಯದೆ ? || ೯೨ ||

೧೩೭೭

ಲಕ್ಷಿಸಿ ಕಂಡೆಹೆನೆಂದಡೆ ಅಲಕ್ಷ್ಯ, ಅನಾಮಯ.
ಅದನುಳಿದು ಕಂಡೆಹೆನೆಂದಡೆ ಮಿಕ್ಕಾದವು ಮೃತಕಾಯ.
ಉಭಯವನರಿದು ವಿಚಾರಿಸಬೇಕು, ಐಘಟದೂರ ರಾಮೇಶ್ವರಲಿಂಗವ. ||೯೩||

೧೩೭೮

ಲಿಂಗಪ್ರಾಣಿಗಳಾದ ಭಕ್ತ ಮಾಹೇಶ್ವರರ
ವ್ರತಲಿಂಗ ಸಂಕಲ್ಪವನು ತಿಳಿದು, ವಿಚಾರಿಸಿ ನೋಡಿ,
ಮುಹೂರ್ತವ ಮಾಡಿಸಿಕೊಂಡಿಪ್ಪ ಸಮಯದಲ್ಲಿ,
ರಾಜಭಯ ಚೋರಭಯದಿಂದವೆ ಕಂಟಕ ಬರಲು,
ಅಂಜಿ ಕಥನವಂ ಮಾಡಿಕೊಳಲಾಗದು.
ಅದೆಂತೆಂದಡೆ:
ಆ ವಿಚಾರವೆಲ್ಲವ ಭಕ್ತ ಮಾಹೇಶ್ವರರು ತಿಳಿದು ನೋಡಿಕೊಂಡು,
ಆ ಲಿಂಗಸಮ್ಮರ್ಧನ ಸಂದೇಹವಿಲ್ಲದೆ ಶಿರಚ್ಛೇದಮಂ ಮಾಡುವುದು.
ಇದಕ್ಕೆ ದ್ರೋಹವಿಲ್ಲ.
ಉಂಟೆಂದು ನುಡಿದವವರ, ರವಿಚಂದ್ರರುಳ್ಳ ಪರಿಯಂತರ
ಎಕ್ಕಲನರಕದಲ್ಲಿಕ್ಕುವರು.
ಇದಕ್ಕೆ ಆದ್ಯರ ವಚನವೆ ಸಾಕ್ಷಿ.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ಐಘಟದೂರ ರಾಮೇಶ್ವರಲಿಂಗವೆ,
ಆ ವೀರಮಾಹೇಶ್ವರರನೇನೆಂಬೆನು. ||೯೪||

೧೩೭೯

ವಾಯು ಪಟವಾಡುವಲ್ಲಿ, ಹಿಡಿದವನ ಕೈಯಲ್ಲಿ ನೂಲು ಸಿಕ್ಕಿ ಆಡುವಂತೆ,
ತನ್ನಯ ಅರಿವು ಕುರುಹಿನಲ್ಲಿ ಸಿಕ್ಕಿ, ಎಡೆ ಬಿಡುವಿಲ್ಲದಾಡಬೇಕು,
ಐಘಟದೂರ ರಾಮೇಶ್ವರರಲಿಂಗವನರಿವುದಕ್ಕೆ. ||೯೫||

೧೩೮೦

ವಾಯುವೆದ್ದು ಪರ್ಣ ತೃಣ ಘಟವನೆತ್ತುವಂತೆ,
ಮನ ನೆನೆದು, ಘಟವ ಕೊಂಡುಹೋದಂತೆ,
ಚಿತ್ತ ನೆನೆದು, ಇಷ್ಟದಲ್ಲಿ ನಿಂದು, ಇಷ್ಟವ ಕೊಂಡು ಎಯ್ದಬೇಕು.
ಇದು ನಿಶ್ಚಯವೆಂದರಿ,
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೯೬||

೧೩೮೧

ವಾಹನದ ಕೀಲಾಗಿ ತಿರುಗುವ, ಚೂಣಿಯಲ್ಲಿ ಹೋಹ,
ವೇಳೆಯು ಕಾವ ಕಾಳುಗುಡಿಹಿಗೇಕೆ ಭಾಳೇಕ್ಷಣನ ಭಾವ ?
ಕೀಳುಜೀವವೇಕೆ ಅಡಗದು ?
ಮತ್ತೆ ನಾನೆಂಬುದೇಕೆ ಅಡಗದು,
ಐಘಟದೂರ ರಾಮೇಶ್ವರಲಿಂಗವನರಿಯದೆ ? ॥ ೯೭ ॥

೧೩೮೨

ವಿಷದೇಹಿಗೆ ಆಹಾರ ಒದಗದೆ ?
ನಸು ಸುಳುಹ ಭುಂಜಿಸುವಂತೆ,
ಕ್ರೀ ಶುದ್ಧತೆಯಲ್ಲಿ ಒದಗಲರಿಯದಿರೆ,
ಮಾಡುವ ಆಚರಣೆ ಮಾರ್ಗವಾಗಬೇಕು.
ಎಯ್ದದಿರೆ ಮಾನ್ಯರ ಕಂಡು ಮನ್ನಣೆಯಾಗಿರಬೇಕು.
ಈ ಭಾವವೇನೂ ಇಲ್ಲದಿರೆ,
ಐಘಟದೂರ ರಾಮೇಶ್ವರಲಿಂಗಕ್ಕೆ ದೂರ. ॥ ೯೮ ॥

೧೩೮೩

ವ್ರತಭ್ರಷ್ಟನ, ಗುರುಘಾತಕನ ವಂದಿಸಿ,
ನಿಂದಿಸುವವನ ದ್ರವ್ಯದಾಸೆಗೆ
ಅವನ ಮಂದಿರವ ಹೊಕ್ಕುಂಡಡೆ,
ಜಂಬುಕ ತಿಂದ ಹಡಿಕವ, ಮಿಕ್ಕು ಹುಳಿತವ ತಾ ತಿಂದಂತೆ,
ಐಘಟದೂರ ರಾಮೇಶ್ವರಲಿಂಗ. ॥ ೯೯ ॥

೧೩೮೪

ಶಬ್ದಶಾಸ್ತ್ರಂಗಳಲ್ಲಿ ತಿಳಿದು,
ನ್ಯೂನ್ಯಾದಿಗಳಿಲ್ಲದೆ ನುಡಿದು,
ತ್ರಿವಿಧದೊಳಗೆ ಹುದುಗಿ,
ಭವಪಾಶದ ಪಾಕುಳದಲ್ಲಿ ಬಿದ್ದು,
ನಿಚ್ಚಟಭಕ್ತನೆಂದಡೆ ಒಪ್ಪುವನೆ,
ಐಘಟದೂರ ರಾಮೇಶ್ವರಲಿಂಗ ? ॥ ೧೦೦ ॥

೧೩೮೫

ಶರಣಸತಿ ಲಿಂಗಪತಿಯೆಂದು ಆಚರಿಸುವ ಮಾಹೇಶ್ವರರ
ಲಿಂಗ ಓಸರಿಸಿ ಹೋದಲ್ಲಿ,

ಮಾಹೇಶ್ವರರ ಮಧ್ಯದಲ್ಲಿ ಮುಹೂರ್ತವ ಮಾಡಿಕೊಂಡು
ಐಕ್ಯವಾಗುವ ಸಮಯದಲ್ಲಿ,
ಆ ಲಿಂಗ ಸಿಕ್ಕಿದಡೆ, ತೆತ್ತಿಗರಾದವರು ಧರಿಸುವುದು.
ಇದಲ್ಲದೆ ಸಂದೇಹವ ಮಾಡಿದಡೆ ನಾಯಕ ನರಕ.
ನೀವೇ ಬಲ್ಲಿರಯ್ಯಾ, ಐಘಟದೂರ ರಾಮೇಶ್ವರ. ||೧೦೧||

೧೩೮೬

ಶರೀರ ಬೆಳೆದು, ಪ್ರಳಯಕ್ಕೊಳಗು.
ಬುದ್ಧಿ ಬೆಳೆದು, ಸುಖಕ್ಕೊಳಗು.
ಸುಖ ಬೆಳೆದು, ವಿಕಾರಕ್ಕೊಳಗು.
ವಿಕಾರ, ಸಕಲಮರಣಕ್ಕೆ ಒಳಗಾಯಿತ್ತು.
ಇಂತಿವಕ್ಕೆ ಹೊರಗಾಗು, ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. ||೧೦೨||

೧೩೮೭

ಸತ್ಕ್ರೀಯೆಂಬುದೆ ಜ್ಞಾನ, ಜ್ಞಾನದೊಡಲೆ ಕ್ರೀ.
ಸುಗಂಧವನಿರಿಸಿಕೊಂಡಿಪ್ಪ ಕರಂಡದಂತೆ
ಆ ಒಡಲಿಲ್ಲದೆ ಗಂಧವಿರಬಲ್ಲುದೆ ?
ಐಘಟದೂರ ರಾಮೇಶ್ವರಲಿಂಗ ಕುರುಹಾಗಿ,
ಅರಿವ ಇರಿಸಿಕೊಂಡಿತ್ತು. ||೧೦೩||

೧೩೮೮

ಸರ್ವವೆಲ್ಲವೂ ವಸ್ತುವಿನ ಅಧೀನವಾದಲ್ಲಿ,
ಬೇರೊಂದು ತಟ್ಟುವ ಮುಟ್ಟುವ ಠಾವುಂಟೆ ?
ಸರ್ವಭಾವಜ್ಞಗೆ ಭಿನ್ನಭಾವವಿಲ್ಲ,
ಐಘಟದೂರ ರಾಮೇಶ್ವರಲಿಂಗದಲ್ಲಿ. ||೧೦೪||

೧೩೮೯

ಸ್ವಪ್ನದ ಭಾಷೆ, ಮರ್ತ್ಯರ ಮುಟ್ಟದ ಭಕ್ತಿ
ಚಿತ್ತವನರಿಯದೆ ಕಾಡುವನ ಯುಕ್ತಿ,
ಮೃತ್ತಿಕೆಯ ಬೊಂಬೆಯು ಅಪ್ಪುವಿನ ಮಂದಿರಕ್ಕೆ ಹೋದಂತಾಯಿತ್ತು.
ಐಘಟದೂರ ರಾಮೇಶ್ವರಲಿಂಗವನರಿ. ||೧೦೫||

೧೩೯೦

ಸ್ವಪ್ನದಲ್ಲಿ ಮರೆದು, ಸಕಲವ ಕಂಡು ಅರಿದು, ಹೇಳುವುದು,
ಆತ್ಮ ಭಿನ್ನವೋ, ಘಟ ಭಿನ್ನವೋ ?

ಇಷ್ಟಲಿಂಗವೆಂದು, ಪ್ರಾಣಲಿಂಗವೆಂದು ಕಟ್ಟಿ ಹೋರುವಾಗ,
ತಾನು ದೃಷ್ಟದ ಅಂಗವ ಹೊತ್ತು ಹೋರುತ್ತಿದ್ದು,
ಮತ್ತೆ ಕ್ರೀಯಲ್ಲಾವೆಂಬುದಕ್ಕೆ ತೆರಪಾವುದು ?
ಅಲ್ಲ, ಅಹುದೆಂದು ಗೆಲ್ಲ ಸೋಲಕ್ಕೆ ಹೋರುವುದು,
ಕ್ರೀಯೋ, ನಿಃಕ್ರೀಯೋ ?
ಮಂದಿಯ ನಡುವೆ ನಿಂದಿರ್ದ ಉಡುವಿನಂತೆ,
ಕಣ್ಣು ಮುಚ್ಚಿ ಗೆದ್ದೆನೆಂದು ಬಡಿಯಿಸಿಕೊಂಬ ತೆರದ
ಮಾತಿನ ಮಾಲೆ ಬೇಡ.
ನೂಲ ಹಿಡಿದು ಬೆಟ್ಟವನೇರುವಂತೆ,
[ವಿ]ಧವೆ ಬಾಲನ ಹಿಡಿದು ಬದುಕುವಂತೆ,
ಕೂಷ್ಮಾಂಡವ ಹಿಡಿದು ಎಯ್ದುವ ಜಲದಲ್ಲಿ ಚರಿಸುವನಂತೆ,
ಕಡೆಯಾಗಬೇಡ, ನೆರೆ ನಂಬು.
ಮಾಡುವ ಕ್ರೀಯಲ್ಲಿ ಅರಿವುಹೀನವಾಗಬೇಡ.
ಮಡುವಿನ ನಡುವೆ ಕಟ್ಟಿದ ಹಾಲದ ಹಾದಿಯಂತೆ,
ಅಡಿ ತೊಲಗಿದಡೆ ಕುಡಿವಿರಿ ನೀರ.
ಬಿಡದಿರು ಮಾಡುವ ಸತ್ಕ್ರೀಯ.
ಇದನರಿದು ಒಡಗೂಡು,
ಐಘಟದೂರ ರಾಮೇಶ್ವರಲಿಂಗವ, ಉಭಯ ಭಾವವಳಿದು. || ೧೦೬ ||

೧೩೯೧

ಸ್ಥಾಣುವಿನ ರಜ್ಜು, ಮೀರಿ ಎಯ್ದದೆ ಆಡಿ, ತನ್ನಯ ಸ್ಥಾನಕ್ಕೆ ಬಹಂತೆ,
ವಸ್ತುವಿನ ಗೊತ್ತಿನಿಂದ ಕಟ್ಟು ಮೀರಲಿಲ್ಲವಾಗಿ,
ಐಘಟದೂರ ರಾಮೇಶ್ವರಲಿಂಗದಲ್ಲಿಗೆ ಎಯ್ದುವ ತೆರ. || ೧೦೭ ||

೧೩೯೨

ಸ್ಥೂಲದಿಂದ ಕಾಬುದು, ಸೂಕ್ಷ್ಮದಿಂದರಿವುದು, ಕಾರಣದಲ್ಲಿ ಮಾಡುವುದು.
ತ್ರಿವಿಧದ ಭೇದವ ನಿಃಕರಿಸಿ, ತ್ರಿವಿಧ ಭೇದದಿಂದ ಕಾಣು.
ತ್ರಿವಿಧದ ಭೇದವ ಕೂಡಿ ಮರೆ.
ಐಘಟದೂರ ರಾಮೇಶ್ವರಲಿಂಗವ ಏನೂ ಎನ್ನದಿರು. || ೧೦೮ ||

೧೩೯೩

ಹುಡಿ ಹತ್ತದ ಗಾಳಿಯಂತೆ,
ವಾ[ಸ] ಹತ್ತದ ಸರ್ವಸಾರ ಸಂಬಂಧಿಯಂತೆ,

ಭಸ್ಮದಲ್ಲಿದ್ದ ಸುಘಟಿಯ ಬೀಜದಂತೆ,
ಘೃತಕಿಸಲಯದಂತೆ ಏತರಲ್ಲಿಯೂ ಬಂಧವಿಲ್ಲದೆ,
ಕಟಿತ್ವ ವಕ್ಷದಲ್ಲಿದ್ದ ಮಧುಪಾನದಂತಿರಬೇಕು
ಐಘಟದೂರ ರಾಮೇಶ್ವರಲಿಂಗವನರಿವುದಕ್ಕೆ. || ೧೦೯ ||

೧೩೯೪

ಹೆರುವ ಹೆಂಗೂಸು, ಕೂಸು ಸಿಕ್ಕಿ ತನ್ನ ಉಡಿಯ ತೋರುವಂತೆ,
ಅದು ಕೂಸಿನ ಆಸೆಯೋ ? ತನ್ನ ಅಪಮಾನದಾಸೆಯೋ ?
ತನ್ನ ಅಸುವಿನ ಆಸೆಯೋ ?
ಮಾತ ಕಲಿತು, ವೇಷವ ತೋರಿ, ಘಾತುಕತನದಲ್ಲಿ ಉಂಬ
ಪಾಶಧಾರಿಗಳಿಗೇಕೆ ನಿರ್ಜಾತನ ಮಾತು ?
ಅದು ನೀತಿಯಲ್ಲ, ಐಘಟದೂರ ರಾಮೇಶ್ವರಲಿಂಗ ಅವರ ಬಲ್ಲನಾಗಿ. ||೧೧೦||

■ ■

## ಮೇದರ ಕೇತಯ್ಯನ ವಚನ

೧೩೯೫

ಅರಿವಿನ ಕುಳವನರಿಯೆ, ಮರಹಿನ ತೆರನನರಿಯೆ.
ಅರಿವು, ಮರಹಳಿದ ಗವರೇಶ್ವರಲಿಂಗಕ್ಕೆ
ಅರಿವೇ ಅರ್ಪಿತ, ಮರವೇ ಅನರ್ಪಿತ.
ಮೊರನ ಹೆಣೆವ ಗೌರ, ನಾನೆತ್ತ ಬಲ್ಲೆನಯ್ಯಾ. ॥ ೧ ॥

೧೩೯೬

ಇಂದ್ರಿಯಂಗಳ ಕೊಂದೆಹೆನೆಂದಡೆ, ಅವು ಕಂದರ್ಪನ ಹಂಗು.
ಕಂದರ್ಪನ ಕೊಂದೆಹೆನೆಂದಡೆ, ಅವು ಕಂಗಳ ಲಾಭ.
ಕಂಗಳು ಮುಚ್ಚಿಯಲ್ಲದೆ ಲಿಂಗವ ಕಾಣಬಾರದು.
ಅದು ನಿರಂಗಂಗಲ್ಲದೆ, ಜಗದ ಹಂಗಿನವರಿಗಿಲ್ಲಾ ಎಂದೆ, ಗವರೇಶ್ವರಾ. ॥ ೨ ॥

೧೩೯೭

ಎನ್ನ ಆಧಾರಚಕ್ರದಲ್ಲಿ ಅಪಾನವಾಯುವು ಆಚಾರಲಿಂಗವಾದಾತ ಬಸವಣ್ಣ.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ವ್ಯಾನವಾಯುವು ಗುರುಲಿಂಗವಾದಾತ ಬಸವಣ್ಣ.
ಎನ್ನ ಮಣಿಪೂರಕಚಕ್ರದಲ್ಲಿ ಸಮಾನವಾಯುವು ಶಿವಲಿಂಗವಾದಾತ ಬಸವಣ್ಣ.
ಎನ್ನ ಅನಾಹುತಚಕ್ರದಲ್ಲಿ ಪ್ರಾಣವಾಯುವು ಜಂಗಮಲಿಂಗವಾದಾತ ಬಸವಣ್ಣ.

ಎನ್ನ ವಿಶುದ್ಧಿ ಚಕ್ರದಲ್ಲಿ ಉದಾನವಾಯುವು ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ನಿಃಪ್ರಪಂಚದಲ್ಲಿ ಮಹಲಿಂಗವಾದಾತ ಬಸವಣ್ಣ.
ಇಂತಿದನರಿದೆನಾಗಿ ಗವರೇಶ್ವರಲಿಂಗದಲ್ಲಿರ್ದೆನಯ್ಯಾ. ||೩||

೧೩೯೮

ಎನ್ನ ಆಧಾರಚಕ್ರದಲ್ಲಿ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಗುರುಲಿಂಗವಾದಾತ ಬಸವಣ್ಣ.
ಎನ್ನ ಮಣಿಪೂರಕ ಚಕ್ರದಲ್ಲಿ ಶಿವಲಿಂಗವಾದಾತ ಬಸವಣ್ಣ.
ಎನ್ನ ಪಾಣಿಯಲ್ಲಿ ಜಂಗಮಲಿಂಗವಾದಾತ ಬಸವಣ್ಣ.
ಎನ್ನ ವಾಕ್ಕಿನಲ್ಲಿ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ನಿಃಪ್ರಪಂಚದಲ್ಲಿ ಮಹಲಿಂಗವಾದಾತ ಬಸವಣ್ಣ.
ಇಂತಿದನರಿದೆನಾಗಿ. ಗವರೇಶ್ವರಲಿಂಗದಲ್ಲಿರ್ದೆನಯ್ಯಾ. ||೪||

೧೩೯೯

ಎನ್ನ ಆಧಾರಚಕ್ರದಲ್ಲಿ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಸ್ವಾಧಿಷ್ಠಾನಚಕ್ರದಲ್ಲಿ ಗುರುಲಿಂಗವಾದಾತ ಬಸವಣ್ಣ.
ಎನ್ನ ಮಣಿಪೂರಕಚಕ್ರದಲ್ಲಿ ಶಿವಲಿಂಗವಾದಾತ ಬಸವಣ್ಣ.
ಎನ್ನ ಅನಾಹುತಚಕ್ರದಲ್ಲಿ ಜಂಗಮಲಿಂಗವಾದಾತ ಬಸವಣ್ಣ.
ಎನ್ನ ವಿಶುದ್ಧಿಚಕ್ರದಲ್ಲಿ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ಆಜ್ಞಾಚಕ್ರದಲ್ಲಿ ಮಹಲಿಂಗವಾದಾತ ಬಸವಣ್ಣ.
ಇಂತಿದನರಿದೆನಾಗಿ ಗವರೇಶ್ವರಲಿಂಗದಲ್ಲಿರ್ದೆನಯ್ಯಾ. ||೫||

೧೪೦೦

ಎನ್ನ ಕಾಯದ ಕಳವಳವ ನಿಲಿಸಿ, ಗುರುಲಿಂಗವ ತೋರಿದ,
ಎನ್ನ ಮನದ ವ್ಯಾಕುಳವ ನಿಲಿಸಿ, ಜಂಗಮಲಿಂಗವ ತೋರಿದ,
ಇಂತು ಅಂತರಂಗ ಬಹಿರಂಗದಲ್ಲಿ ತಾನೆಯಾಗಿ, ಎನ್ನ ಪಾವನವ ಮಾಡಿದ,
ಅಮರಗಣಂಗಳು ಮುನಿದು ಎನ್ನ ಕೈಲಾಸಕ್ಕೆ ಒಯ್ವಡೆ,
ಸದ್ಯೋನ್ಮುಕ್ತಿಯ ತೋರಲೆಂದು ಮರ್ತ್ಯಕ್ಕೆ ಮರಳಿ ತಂದ
ಸಂಗನಬಸವಣ್ಣನೆ ಗುರುವೆನಗೆ, ಸಂಗನಬಸವಣ್ಣನೆ ಪರವೆನಗೆ.
ಸಂಗನಬಸವಣ್ಣನ ಕರುಣದಿಂದ, ಘನಕ್ಕೆ ಘನಮಹಿಮ ಅಲ್ಲಮಪ್ರಭುವಿನ
ಶ್ರೀಪಾದವ ಕಂಡು ಬದುಕಿದೆನು ಕಾಣಾ, ಗವರೇಶ್ವರಾ. ||೬||

೧೪೦೧

ಎನ್ನ ಘ್ರಾಣದಲ್ಲಿ ಆಚಾರಲಿಂಗವಾಗಿ ಮೂರ್ತಿಗೊಂಡನಯ್ಯಾ, ಬಸವಣ್ಣನು.
ಎನ್ನ ಜಿಹ್ವೆಯಲ್ಲಿ ಗುರುಲಿಂಗವಾಗಿ ಮೂರ್ತಿಗೊಂಡನಯ್ಯಾ, ಚನ್ನಬಸವಣ್ಣನು
ಎನ್ನ ನೇತ್ರದಲ್ಲಿ ಶಿವಲಿಂಗವಾಗಿ ಮೂರ್ತಿಗೊಂಡನಯ್ಯಾ,
ಘಟ್ಟಿವಾಳ ಮುದ್ದಯ್ಯನು.
ಎನ್ನ ತ್ವಕ್ಕಿನಲ್ಲಿ ಜಂಗಮಲಿಂಗವಾಗಿ ಮೂರ್ತಿಗೊಂಡನಯ್ಯಾ, ಸಿದ್ಧರಾಮಯ್ಯನು.
ಎನ್ನ ಶ್ರೋತ್ರದಲ್ಲಿ ಪ್ರಸಾದಲಿಂಗವಾಗಿ ಮೂರ್ತಿಗೊಂಡನಯ್ಯಾ,
ಮರುಳಶಂಕರದೇವರು,
ಎನ್ನ ಹೃದಯದಲ್ಲಿ ಮಹಾಲಿಂಗವಾಗಿ ಮೂರ್ತಿಗೊಂಡನಯ್ಯಾ, ಪ್ರಭುದೇವರು.
ಎನ್ನ ಸರ್ವಾಂಗದಲ್ಲಿ ಮೂರ್ತಿಗೊಂಡರು ಪ್ರಮಥರು.
ಗವರೇಶ್ವರಲಿಂಗದಲ್ಲಿ ಸುಖಿಯಾಗಿ ಬದುಕಿದೆನು ಕಾಣಾ,
ಮಡಿವಾಳ ಮಾಚಯ್ಯ. || ೭ ||

೧೪೦೨

ಎನ್ನ ಚಿತ್ತಕ್ಕೆ ಆಚಾರಲಿಂಗವಾದಾತ, ಬಸವಣ್ಣ.
ಎನ್ನ ಬುದ್ಧಿಗೆ ಗುರುಲಿಂಗವಾದಾತ, ಬಸವಣ್ಣ.
ಎನ್ನ ಅಹಂಕಾರಕ್ಕೆ ಶಿವಲಿಂಗವಾದಾತ, ಬಸವಣ್ಣ.
ಎನ್ನ ಮನಕ್ಕೆ ಜಂಗಮಲಿಂಗವಾದಾತ, ಬಸವಣ್ಣ.
ಎನ್ನ ಜೀವಕ್ಕೆ ಪ್ರಸಾದಲಿಂಗವಾದಾತ, ಬಸವಣ್ಣ.
ಎನ್ನ ಅರುವಿಂಗೆ ಮಹಾಲಿಂಗವಾದಾತ, ಬಸವಣ್ಣ.
ಎನ್ನ ಸ್ಥೂಲತನುವಿಂಗೆ ಇಷ್ಟಲಿಂಗವಾದಾತ, ಬಸವಣ್ಣ.
ಎನ್ನ ಸೂಕ್ಷ್ಮತನುವಿಂಗೆ ಪ್ರಾಣಲಿಂಗವಾದಾತ, ಬಸವಣ್ಣ.
ಎನ್ನ ಕಾರಣತನುವಿಂಗೆ ತೃಪ್ತಿಲಿಂಗವಾದಾತ, ಬಸವಣ್ಣ.
ಇಂತೆಂದರಿದೆನಾಗಿ, ಗವರೇಶ್ವರಲಿಂಗದಲ್ಲಿ ಆನು ಸುಖಿಯಾಗಿರ್ದೆನಯ್ಯಾ. || ೮ ||

೧೪೦೩

ಎನ್ನ ಪ್ರಾಣಕ್ಕೆ ಆಚಾರಲಿಂಗವಾದಾತ ಬಸವಣ್ಣ.
ಎನ್ನ ಜಿಹ್ವೆಗೆ ಗುರುಲಿಂಗವಾದಾತ ಬಸವಣ್ಣ.
ಎನ್ನ ನೇತ್ರಕ್ಕೆ ಶಿವಲಿಂಗವಾದಾತ ಬಸವಣ್ಣ.
ಎನ್ನ ಶ್ರೋತ್ರಕ್ಕೆ ಪ್ರಸಾದಲಿಂಗವಾದಾತ ಬಸವಣ್ಣ.
ಎನ್ನ ಹೃದಯಕ್ಕೆ ಮಹಲಿಂಗವಾದಾತ ಬಸವಣ್ಣ.
ಇಂತಿದನರಿದೆನಾಗಿ ಗವರೇಶ್ವರಲಿಂಗದಲ್ಲಿರ್ದೆನಯ್ಯಾ. || ೯ ||

೧೪೦೪

ಎನ್ನ ಭಕ್ತಿ, ಬಸವಣ್ಣನಲ್ಲಿ ಬಯಲಾಯಿತ್ತು.
ಎನ್ನ ಜ್ಞಾನ, ಚೆನ್ನಬಸವಣ್ಣನಲ್ಲಿ ಬಯಲಾಯಿತ್ತು.
ಎನ್ನ ವೈರಾಗ್ಯ, ಪ್ರಭುದೇವರಲ್ಲಿ ಬಯಲಾಯಿತ್ತು.
ಇಂತೀ ಮೂವರು ಒಬ್ಬರೊಂದ ಬಯಲಮಾಡಿದರಾಗಿ,
ಗವರೇಶ್ವರಲಿಂಗದಲ್ಲಿ ನಿಶ್ಚಿಂತವಾಯಿತ್ತು. ||೧೦||

೧೪೦೫

ಒಂದು ಬಿದಿರಿಂಗೆ ಕವೆ ಮೂರು, ಆ ಕವೆಯ ಒಳಗೆ ಲಕ್ಕ ಸಿಬಿರು.
ಮೂರು ಕವೆಯ ಕೊಚ್ಚಿಸಿ, ಬಿಲ್ಲ ಸಿಕ್ಕ ಬಿಡಿಸಿ, ಸೀಳಿದ ಬಿದಿರ
ಹೊರೆಹೊರೆಯಲ್ಲಿ ನೆಯಿದೆ, ತೊಟ್ಟಿಲ ಸಂದ ಕಾಣದಂತೆ.
ನಾಲ್ಕು ಕಾಲನಿಕ್ಕಿ, ಅಂದಅಂದವಾದ ತೊಟ್ಟಿಲ ದಂಡೆಯನಿಕ್ಕಿ,
ಕಟ್ಟುವದಕ್ಕೆ ಶ್ರುತ ದೃಷ್ಟವೆಂಬೆರಡು ದಾರದಲ್ಲಿ ತೊಟ್ಟಿಲ ಕಟ್ಟಿ,
ಗವರೇಶ್ವರಲಿಂಗಕ್ಕೆ ಹುಟ್ಟುಗೆಟ್ಟು ಹೋಗೋ
ಎಂದು ಜೋಗುಳವಾಡಿದೆ. ||೧೧||

೧೪೦೬

ಕರಣದ ಶರಣ[ನ]ನು ಕಂಡಿಹೆ, ಕೇಳಿಹೆ,
ಉಂಡುಟ್ಟುದ್ದವಾಗಿ ಹೇಳಿ ಜೋಗೈಸಿಹೆನೆಂಬ
ಬಾಲರಿಗಿನ್ನೆಲ್ಲಿಯ ಅನುಭಾವ,
ಪರಮ ಗುರುವೆ, ಗವರೇಶ್ವರಾ. ||೧೨||

೧೪೦೭

ಗುರು ಹುಸಿ, ಲಿಂಗ ದಿಟವೆನಲಿಲ್ಲ.
ಲಿಂಗ ಹುಸಿ, ಜಂಗಮ ದಿಟವೆನಲಿಲ್ಲ.
ಜಂಗಮ ಹುಸಿ, ಪಂಚಾಚಾರ ದಿಟವೆನಲಿಲ್ಲ.
ಇಂತಿವರಂಗವನು ಗವರೇಶ್ವರ ಬಲ್ಲ. ||೧೩||

೧೪೦೮

ಪ್ರಾಣಸ್ಥಾನದಲ್ಲಿ ಆಪ್ಯಾಯನವಾಯಿತ್ತು, ಲಿಂಗಜಂಗಮ.
ತನುಸ್ಥಾನದಲ್ಲಿ ಆಪ್ಯಾಯನವಾಯಿತ್ತು,
ಆಚಾರಲಿಂಗಸ್ಥಲ, ಗುರುಲಿಂಗಸ್ಥಲ.
ಈ ಉಭಯಸ್ಥಲ ನಿಃಸ್ಥಲವಾಗಿ,
ತಾನೊಂದೇ ತೋರುತ್ತಿರ್ದಿತ್ತು.
ಈ ತೋರುವ ತೋರಿಕೆಯೆ ಬಸವಣ್ಣನೆನಗೆ.

ಆ ಬಸವಣ್ಣನ ಕರುಣದಿಂದ ಪ್ರಭುದೇವರ ಶ್ರೀಪಾದವ ಕಂಡು,
ನಾನು ಬದುಕಿದೆನು ಕಾಣಾ, ಗವರೇಶ್ವರಾ. || ೧೪ ||

೧೪೦೯

ಭಕ್ತಂಗೆ ಸುಖವೂ ಸರಿ, ದುಃಖವೂ ಸರಿ,
ಉರಿ ಸಿರಿ ಉಭಯವೂ ಸರಿ ಎನ್ನದಿರ್ದಡೆ ಭಕ್ತನಿಗದೇ ಹಾನಿ.
ಜಂಗಮವೆಂದು ಪ್ರಮಾಣಿಸಿ,
ತನ್ನ ಕಂಗಳ ಮುಂದೆ ಕಂಡವರ ಭಂಜಿಸಲಿಕ್ಕೆ,
ತನ್ನಂಗವ ಹೊರೆದಡೆ ತೀರ್ಥಪ್ರಸಾದಕ್ಕೆ ಅವನಂದೇ ಹೊರಗು, ಗವರೇಶ್ವರಾ.
|| ೧೫ ||

೧೪೧೦

ಮೊದಲಿಲ್ಲದೆ ಲಾಭವುಂಟೆ?
ನಿರೀಕ್ಷಣೆಯಿಲ್ಲದೆ ಪರೀಕ್ಷೆಯುಂಟೆ?
ಗುರುವಿಲ್ಲದೆ ಲಿಂಗವುಂಟೆ ?
ಇಂತೀ ವೇಷದ ಭಾಷೆಗೆ ಹೇಸಿದೆನು ಕಾಣಾ, ಗವರೇಶ್ವರಾ. || ೧೬ ||

೧೪೧೧

ಮೊದಲು ಹುಸಿ, ಲಾಭ ದಿಟವೆ?
ನಿರೀಕ್ಷಣೆಯಿಲ್ಲದೆ ಪರೀಕ್ಷೆ ಉಂಟೆ?
ಈ ಯಾವ ಸರದಂಗವ, ಗವರೇಶ್ವರಲಿಂಗ ನೀನೇ ಬಲ್ಲೆ? || ೧೭ ||

೧೪೧೨

ಮೊರನ ಹೊಲಿವ ಗವರ ನಾನೆತ್ತ ಬಲ್ಲೆನು?
ಕಟ್ಟಿಕೊಂಡಾತ ಭಕ್ತನಪ್ಪನೆ, ಕೆಡಹಿದಾತ ದ್ರೋಹಿಯಪ್ಪನೆ?
ಆ ಲಿಂಗವು ಕಟ್ಟಲಿಕೆ, ತನ್ನ ಕೈಯಲ್ಲಿಪ್ಪುದೆ?
ಕೆಡಹಲಿಕೆ, ಬೀಳಲು ಬಲ್ಲುದೆ?
ಆ ಲಿಂಗ ಬಿದ್ದ ಬಳಿಕ, ಜಗತ್ತು ಉಳಿಯಬಲ್ಲುದೆ.
ಆ ಪ್ರಾಣಲಿಂಗ ಬಿದ್ದಬಳಿಕ, ಆ ಪ್ರಾಣ ಉಳಿಯಬಲ್ಲುದೆ.
ಆ ಲಿಂಗ ಬಿದ್ದಿತ್ತೆಂಬ ಸೂತಕದ ಶಬ್ದ ಭ್ರಾಂತುವಿನ ಪುಂಜ
ಅಂತು ಅದ ಕೇಳಲಾಗದು.
ಯುಗಜುಗಂಗಳು ಗತವಹವಲ್ಲದೆ, ಲಿಂಗಕ್ಕೆ ಗತ ಉಂಟೆ?
ಲಿಂಗ ಬಿದ್ದಿತ್ತೆಂದು ನಿಂದಿಸಿ ನುಡಿವ ದ್ರೋಹಿಗಳ
ಮಾತ ಕೇಳಲಾಗದು, ಗವರೇಶ್ವರಾ. || ೧೮ ||

■ ■

## ಮೈದುನ ರಾಮಯ್ಯನ ವಚನ

### ೧೪೧೩

ಆಲಿಕಲ್ಲ, ನೀರೊಳಗೆ ಬೆರಸಿದಂತೆ,
ಉಪ್ಪಿನ ಹರಳ, ಉದಕದೊಳಗೆ ಹಾಕಿದಂತೆ,
ಕರ್ಪುರದ ಹಣತೆಯಲ್ಲಿ, ಜ್ಯೋತಿಯ ಬೆಳಗ ಬೆರಸಿದಂತೆ,
ಮಹಾಲಿಂಗ ಚೆನ್ನ ರಾಮೇಶ್ವರಲಿಂಗದಲ್ಲಿ ಬೆರಸಿ,
ಎರಡಳಿದಡಗಿದ ನಿಜಲಿಂಗೈಕ್ಯನು. ||೧||

### ೧೪೧೪

ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ಭಂಡಾರಿ ಬಸವಣ್ಣನೆ.
ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ನಂಬಿಯಣ್ಣನೆ.
ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ಜಗದೇವನೆ.
ಎನಗೆ ನೀ ಕಟ್ಟಿದೊರೆಯೆಂಬಲ್ಲಿಗೆ ಕೇಳು, ಚೆನ್ನಬಸವಣ್ಣನೆ.
ಆನೆ ಮುರಿದಲ್ಲಿ ಸುಂಡಾಳವೆ ಹೇಳಾ?
ನಾನಿಲ್ಲದಿರ್ದಡೆ ನೀನಿಲ್ಲ, ನೀನಿಲ್ಲದಿರ್ದಡೆ ನಾನಿಲ್ಲ.
ನಾನು ನೀನೆಂಬುದಂತಿರಲಿ.
ಹಿಡಿಯೊ, ಮುಡಿಯೊ ಮಾಡಿದಂತೆಯಪ್ಪೆನು.
ನಗುವುದು ಕೆಲಕಡೆ ನೋಡಾ.

ಸಾತ್ವಿಕ ಸಜ್ಜನ ಸದ್ಗುರುವಿನಿಂದ ಬದುಕಿದೆ ನಾನು,
ನಿನಗಂಜೆ ಮಹಾಲಿಂಗ ಚೆನ್ನರಾಮಾ. || ೨ ||

೧೪೧೫

ಮಳಲಲ್ಲಿ ರಸ ಉಂಟೆ? ನೆಳಲಿಗೆ ತಡೆ ಉಂಟೆ?
ರಣದಲ್ಲಿ ತಪ ಉಂಟೆ?
ನೇಹ ತಪ್ಪಿದಲ್ಲಿ ಮೋಹವನರಸಲುಂಟೆ?
ಮಹಾಲಿಂಗ ಚೆನ್ನರಾಮ,
ಮನ ಮುರಿದ ಬಳಿಕ, ಕಂಗಳಿಗೆ ವಿಷವಯ್ಯಾ. || ೩ ||

೧೪೧೬

ಶಿವಶರಣರ ಬರವ ಕಂಡು
ಶಿರಬಾಗಿ, ಕರ ಮುಗಿದಂಜಲೇಬೇಕು.
ಶರಣೆನ್ನಲೊಲ್ಲದೀ ಮನವು.
ಆಗಿನ ಸಧ್ಯಃಫಲದ ಲಾಭದ ಭಕ್ತಿಯನರಿಯದಾಗಿ,
ಶರಣೆನ್ನಲೊಲ್ಲದೀ ಮನವು.
ಆಳ್ದರೆಂದು ನಂಬಿಯೂ ನಂಬಲೊಲ್ಲದಾಗಿ,
ಮಹಾಲಿಂಗ ಚೆನ್ನರಾಮೇಶ್ವರನೆನ್ನ ಕಡೆಗೆ ನೋಡಿ, ನಗು[ತ್ತಲೈದಾನೆ] || ೪ ||

೧೪೧೭

ಹುಸಿಯಂಕುರವಾಯಿತ್ತು, ಡೊಂಬ ಡೋಹರರಲ್ಲಿ.
ಹುಸಿ ಎಲೆ ಹೂವಾಯಿತ್ತು, ದಾಸಿ ವೇಶಿಯರಲ್ಲಿ.
ಹುಸಿ ಕಾಯಿ ಹಣ್ಣಾಯಿತ್ತು, ಭವಿಭಕ್ತರಲ್ಲಿ.
ಹುಸಿ ಕೊಳತಿತ್ತು, ಜಂಗಮದಲ್ಲಿ.
ಹುಸಿ ಮರಣವಾಯಿತ್ತು ಸತ್ಪುರುಷರಲ್ಲಿ.
ಇಂತಪ್ಪ ಹುಸಿಯ ಬಿಟ್ಟಾತನೆ ಪಶುಪತಿಯಾಗಿರ್ದ ಕಾಣಾ,
ಮಹಾಲಿಂಗ ಚೆನ್ನರಾಮಾ. || ೫ ||

೧೪೧೮

ಹೊನ್ನು ಪ್ರಾಣನಾಯಕ, ಹೆಣ್ಣು ಜೀವರತ್ನ,
ಮಣ್ಣು ಮೈಸಿರಿಯ ಕೇಡು.
ಈ ಮೂರು, ಮಹಾಲಿಂಗ ಚೆನ್ನರಾಮಯ್ಯಂಗೆ ಸಲ್ಲಲಿತವಲ್ಲ. || ೬ ||

■ ■

## ಮೋಳಿಗೆ ಮಾರಯ್ಯನ ವಚನ

೧೪೧೯

ಅಂಗದ ಕಳವು ಕೈಯಲ್ಲಿದ್ದಂತೆ ಹಿಂಗುವದಕ್ಕೆ ನಾಲಿಗೆಯೇಕೊ?
ಪರರಂಗವನರಿದು ಹೆರರಂಗದಲ್ಲಿ ಸಿಲ್ಕಿ ಭಂಗಿತನಾಗಲೇಕೊ?
ನದಿಯೊಳಗೆ ಮುಳುಗಿ ತನ್ನೊಡವೆಯ ಸುದ್ದಿ ಯಾಕೊ?
ಅದರ ವಿಧಿ ನಿಮಗಾಯಿತ್ತು, ಬಿಡು ಕಡುಗಲಿತನವ
ನಿಃಕಳಂಕ ಮಲ್ಲಿಕಾರ್ಜುನಾ. ||೧||

೧೪೨೦

ಅಂಗದ ನಿರಾಭಾರಿಗಳೆಲ್ಲರೂ ಕೂಡಿ,
ಲಿಂಗದ ಹೊಲಬ ಬಲ್ಲೆವೆಂದು, ಅನಂಗನ ಬಲೆಯೊಳಗಿಲ್ಲವೆಂದು,
ಸಕಲರ ಸಂಸರ್ಗವನೊಲ್ಲೆವೆಂದು
ಮತ್ತೆ ಅಖಿಲರೊಳಗೆ ಸಕಲಭೋಗವನುಂಡು,
ವಿಕಳಗೊಂಡವರ ನೋಡಾ.
ಪ್ರಕೃತಿ ಹರಿಯದೆ, ಸುಖವ ಮೆಚ್ಚಿ ತಿರುಗದೆ,
ಇಂತಿಹ ಅಖಿಳಂಗೆ ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ. ||೨||

೧೪೨೧

ಅಂಗದ ಮೇಲೆ ಶಿವಲಿಂಗ ನೆಲಸುವಂಗೆ
ಮೂರುಸ್ಥಲವಾಗಬೇಕು. ಅವಾವವಯ್ಯಾಯೆಂದಡೆ:
ಗುರುಲಿಂಗಜಂಗಮದಲ್ಲಿ ಭಕ್ತಿ.
ಅರಿವ ಸಾಧಿಸುವಲ್ಲಿ ಜ್ಞಾನ.
ಕರಣಾದಿಗಳ ಭಂಗ ವೈರಾಗ್ಯ.
ಇನಿತಿಲ್ಲದೆ ಲಿಂಗವ ಪೂಜಿಸಿಹೆನೆಂಬ,
ಲಿಂಗವ ಧರಿಸಿಹೆನೆಂಬ ಲಜ್ಜೆಭಂಡರ ಕಂಡು,
ನಾ ನಾಚಿದೆನಯ್ಯಾ.
ಇದು ಕಾರಣ ಗದ್ದುಗೆಗೆಟ್ಟು, ಎದ್ದಾತನು ಲಿಂಗವಲ್ಲ ಕಾಣಾ.
ಲಿಂಗ ಸತ್ತ, ನಾ ಕೆಟ್ಟೆ, ರಂಡೆಗೂಳೆನಿಸಲಾರೆ.
ಎನ್ನ ಹತ್ಯವ ಮಾಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೩ ||

೧೪೨೨

ಅಂಗಭವಿ, ಗುರುವಿನ ಹಂಗು; ಮನಭವಿ, ಲಿಂಗದ ಹಂಗು.
ರುಚಿಭವಿ, ಜಂಗಮದ ಹಂಗು.
ಇಂತೀ ತ್ರಿವಿಧದ ಭೇದವನರಿಯಬೇಕು.
ಅಂಗಭವಿಯ ಕಳೆದಲ್ಲದೆ ಭಕ್ತನ ಮಾಡಬಾರದು.
ಮನಭವಿಯ ಕಳೆದಲ್ಲದೆ ಲಿಂಗವ ಕೊಡಬಾರದು.
ತನುರುಚಿಯ ಕಳೆದಲ್ಲದೆ ಜಂಗಮದ ಪ್ರಸಾದವ ಕೊಳಬಾರದು.
ಹೀಂಗಲ್ಲದೆ, ಮಾತಿನ ಬಣಬೆಯ ಕಲಿತು,
ನೀತಿಯ ಹೇಳುವರೆಲ್ಲರೂ ತ್ರಿವಿಧಕ್ಕಾಚಾರ್ಯರಲ್ಲವೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೪ ||

೧೪೨೩

ಅಂಗಭವಿ, ಭಕ್ತಂಗೆ ಮನಭವಿ ಮಹೇಶ್ವರಂಗೆ.
ರುಚಿಭವಿ ಪ್ರಸಾದಿಗೆ, ಕುರುಹುಭವಿ ಪ್ರಾಣಲಿಂಗಿಗೆ.
ತ್ರಿವಿಧನಾಮಭವಿ ಶರಣಂಗೆ, ಕೂಟಸ್ಥಭವಿ ಐಕ್ಯಂಗೆ.
ಇಂತೀ ಸ್ಥಲಂಗಳಲ್ಲಿ, ಕುರುಹ ಕುರುಹಿನಲ್ಲಿ ಕಂಡು,
ಅರಿವ ಅರಿವಿನಲ್ಲಿ ತಿಳಿದು, ಐಕ್ಯ ಐಕ್ಯನಾದ ಮತ್ತೆ,
ಅದು ಕಲ್ಲಿನೊಳಗಣ ಬೆಳಗು, ಮುತ್ತಿನೊಳಗಣ ಅಪ್ಪು,
ಕರ್ಪುರದೊಳಗಣ ಉರಿಯಂತೆ,
ದೃಷ್ಟವಿದ್ದು ನಿಃಪತಿಯಾಗಬೇಕು, ನಿಃಕಳಂಕ ಮಲ್ಲಿಕಾರ್ಜುನಾ. || ೫ ||

೧೪೨೪

ಅಂಗ ಲಿಂಗವಂತವಾದ ಮತ್ತೆ
ಮುಟ್ಟುವ ತಟ್ಟುವ, ಸೋಂಕಿನಲ್ಲಿ ಸುಳಿವ,
ಇದಿರಿಟ್ಟು ಬಂದ ಪದಾರ್ಥವ
ಅಂಗಲಿಂಗಕ್ಕೆ ಕೊಟ್ಟುಕೊಳಬೇಕು.
ಪ್ರಾಣಲಿಂಗವಾದ ಮತ್ತೆ ಕರಣಂಗಳಿಗಿಂಬುಗೊಡದಿರಬೇಕು.
ತನ್ನನರಿದುದಕ್ಕೆ ಉಭಯಾರೂಢನಾಗಿರಬೇಕು.
ಉಭಯವೇಕವಾದ ಮತ್ತೆ ಸಾಕು ಸತ್ಕ್ರೀ, ನಿಃಕಳಂಕ ಮಲ್ಲಿಕಾರ್ಜುನಾ || ೬ ||

೧೪೨೫

ಅಂಗಲಿಂಗವೆಂದು, ಪ್ರಾಣಲಿಂಗವೆಂದು,
ಉಭಯದ ಒಡಲನೊಡಗೂಡುವ ಪರಿಯಿನ್ನೆಂತೊ?
ಅದು ಶಿಲೆಯ ಬೆಳಗಿನಂತೆ, ಶಿಲೆ ಅಡಗಿದಡೆ ಬೆಳಗಿಲ್ಲ.
ಬೆಳಗಡಗಲಿಕ್ಕೆ ಆ ಶಿಲೆ ಅಚೇತನ ಪಾಷಾಣವಾಯಿತ್ತು.
ಅಪ್ಪು ಕೂಡಿದ ಪರ್ಣಯೆಲೆ ನಾಮರೂಪಾದಂತೆ,
ಅಪ್ಪುವಡಗೆ ಅಚೇತನ ತರಗಾಯಿತ್ತು.
ಅಂಗದ ಮೇಲಣ ಲಿಂಗ, ಲಿಂಗದ ಮೂರ್ತಿಯ ನೆನಹು,
ಈ ತ್ರಿವಿಧ ಒಂದುಗೂಡಿದಲ್ಲಿ,
ಅಂಗವೆಂಬ ಭಾವ, ಲಿಂಗವೆಂಬ ನೆನಹು ನಿರಂಗವಾದಲ್ಲಿ,
ಕಾಯಕ್ಕೆ ಕುರುಹಿಲ್ಲ, ಜೀವಕ್ಕೆ ಭಯವಿಲ್ಲ.
ಈ ಗುಣ ಪ್ರಾಣಲಿಂಗಿಯ ಭೇದ, ನಿ:ಕಳಂಕ ಮಲ್ಲಿಕಾರ್ಜುನಾ. || ೭ ||

೧೪೨೬

ಅಂಗಲಿಂಗ ಸಂಬಂಧ, ಭಾವಲಿಂಗ ಸಂಬಂಧ, ಪ್ರಾಣಲಿಂಗ ಸಂಬಂಧವೆಂದು
ಭಾವಿಸಬೇಕು, ಭಾವಿಸಬೇಡಾ ಎಂಬ ಉಭಯದ ತೆರನೆಂತುಟೆಂದಡೆ:
ಮೃದುಕಠಿನವನರಿವನ್ನಕ್ಕ ಕುರುಹ ಮರೆಯಲಿಲ್ಲ.
ಶೀತ ಉಷ್ಣಾದಿಗಳನರಿವನ್ನಕ್ಕ ಭಾವವ ಮರೆಯಲಿಲ್ಲ.
ರೂಪು ನಿರೂಪೆಂಬ ದ್ವಯಂಗಳ ಭೇದಿಸುವನ್ನಕ್ಕ
ಪ್ರಾಣಲಿಂಗವೆಂಬ ಉಭಯದ ಕುರುಹುಂಟು, ನಿಃಕಳಂಕ ಮಲ್ಲಿಕಾರ್ಜುನಾ. || ೮ ||

೧೪೨೭

ಅಂಗವಿರಲಾಗಿ ಲಿಂಗವೆಂಬುದೊಂದು ಕುರುಹು.
ಆ ಕುರುಹನರಿವುದಕ್ಕೆ ಅರಿವೆಂಬುದೊಂದು ಭಾವ.

ಭಾವದ ಮರೆಯಲ್ಲಿ ಚಿತ್ತ, ಚಿತ್ತದ ಮರೆಯಲ್ಲಿ ನಿಶ್ಚಯ,
ನಿಜವನೆಯ್ದಿದಲ್ಲಿ ವಸ್ತುಭಾವಲೇಪ.
ಅದು ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. ||೯||

೧೪೨೮

ಅಂಗಸ್ಥಲ ಮೂರು, ಲಿಂಗಸ್ಥಲ ಮೂರು, ಜ್ಞಾನಸ್ಥಲ ಮೂರೆಂಬಲ್ಲಿ,
ಆತ್ಮ ಹಲವು ರೂಪಾಗಿ ತೊಳಲುತ್ತಿದೆ ನೋಡಾ.
ಅಂಗಸ್ಥಲದ ಲಿಂಗ, ಲಿಂಗಸ್ಥಲದ ಜ್ಞಾನ,
ಜ್ಞಾನಸ್ಥಲದ ಸರ್ವಚೇತನಾದಿಗಳೆಲ್ಲ ಎಯ್ದುವ ಪರಿಯೆಂತು?
ಎಯ್ದಿಸಿಕೊಂಬುವನಾರೆಂದು ನಾನರಿಯೆ.
ಹಿನ್ನಿಗೆ ದಯವಾದಡೆ ಹರಿವುದಲ್ಲದೆ ಮುಮ್ಮೊನೆಗುಂಟೆ ಉಭಯ?
ಪೂರ್ವಕ್ಕೆರಡು, ಉತ್ತರಕ್ಕೆ ಒಂದೆಂದಲ್ಲಿ,
ನಿಶ್ಚಯವ ತಿಳಿಯಬೇಕು, ನಿ:ಕಳಂಕ ಮಲ್ಲಿಕಾರ್ಜುನಾ. ||೧೦||

೧೪೨೯

ಅಂದಚಂದದ ಬಣ್ಣವ ಹೊದ್ದು,
ಹರನ ಶರಣರೆಂಬ ಅಣ್ಣಗಳೆಲ್ಲರು
ಕರಣಂಗಳೆಂಬ ಉರವಣೆಯ ಅಂಬಿಗಾರದೆ,
ಭಕ್ತಿಯೆಂಬ ಹರಿಗೆಯ ಹಿಡಿದು,
ಮುಕ್ತಿಯೆಂಬ ಗ್ರಾಮವ ಮುತ್ತಿ ಕಾದಿ,
ಸತ್ತರೆಲ್ಲರು ರುದ್ರನ ಶೂಲದ ಘಾಯದಲ್ಲಿ.
ಎನಗೆ ಹೊದ್ದಿಗೆ ಯಾವುದೋ, ನಿಃಕಳಂಕ ಮಲ್ಲಿಕಾರ್ಜುನಾ? ||೧೧||

೧೪೩೦

ಅಂದಳದ ಮುಂದೆ ವಂದಿಸಿಕೊಂಡೆನೆಂದು
ತ್ರಿವಿಧವ ಹೆರೆಹಿಂಗಿ ಮಾಡುವ ನಿರ್ಬಂಧಿಗನ ನೋಡಾ.
ಕಂಡಕಂಡವರ ಮನೆಯಲ್ಲಿ ಕೊಂಡಾಡಬೇಕೆಂದು
ಹಿಂಡ ಕೂಡಿ ಕೂಳನಿಕ್ಕುವ ಭಂಡರಿಗೆಲ್ಲಿಯದೊ ಭಕ್ತಿ?
ಇವರಂದಕ್ಕೆ ಅಂದೇ ಹೊರಗು, ಸಂದೇಹವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ ||೧೨||

೧೪೩೧

ಅಂಧಕ ಪಂಗುಳನಾದ, ಪಂಗುಳ ಅಂಧಕನಾದ.
ಈ ಉಭಯದ ಬೆಂಬಳಿಯನರಿಯಬೇಕು.

ಮಂಜರಿ ವಿಹಂಗನ ಕೊಂದು ಉಭಯವನರಿಯಬೇಕು.
ಪರಮ ಜೀವನದೊಳಗಡಗಿ ಪರಮನಾದ ಉಭಯವ ತಿಳಿಯಬೇಕು.
ಬೆಂಕಿ ಮರದೊಳಗಿದ್ದು, ಮಥನದಿಂದ ಮರ ಸುಟ್ಟು,
ಮರ ಬೆಂಕಿಯಾದ ತೆರನನರಿತಡೆ ಪ್ರಾಣಲಿಂಗಸಂಬಂಧಿ.
ಪ್ರಾಣಲಿಂಗವೆಂಬುಭಯ ಸಮಯ ನಿಂದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೧೩ ||

**೧೪೩೨**

ಅಂಬರದಲ್ಲಿ ಒಂದು ಕೋಡಗ ಹುಟ್ಟಿ, ಕೊಂಬಿಲ್ಲದೆ ನೆಗೆವುತ್ತಿಹುದ ಕಂಡೆ.
ಮತ್ತಾ ಕೊಂಬಿನ ಮೇಲಣ ಕೋಡಗ ಅಂಬರವ ಕಾಣದೆ,
ಲಂಘಿಸಿ ನಿಲುವುದಕ್ಕೆ ನೆಲದ ಅಂಗವ ಕಾಣದೆ
ಕೊಂಬಿನಲ್ಲಿಯೆಯ್ದುದ ಕಂಡೆ, ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ. ||೧೪||

**೧೪೩೩**

ಅಂಬರ ಹರಿದಡೂ ಸಂಭವಿಸದಡೂ ಕಲೆ ಬಿಡದು.
ಇದರಂದವ ತಿಳಿ.
ಹೀಂಗಲ್ಲದೆ ಮನವ ಲಿಂಗದಲ್ಲಿ ನಿಕ್ಷೇಪಿಸಿ, ಬಂಧವ ಹಿಂಗಿ, ಸುಸಂಗನಾಗು.
ಮಹಾಲಿಂಗಿಗಳ ಸಂಭಾಷಣದಲ್ಲಿ ನಿಂದು ನಿರ್ವಾಣನಾಗು,
ನಿಃಕಳಂಕ ಮಲ್ಲಿಕಾರ್ಜುನಾ. || ೧೫ ||

**೧೪೩೪**

ಅಂಬುವಿನ ಸಾರ ಒಡಗೂಡಿ,
ಆ ಮಣ್ಣಿಂಗೆ ಕುಂಭವೆಂಬುದಕ್ಕೆ ಕುರುಹುಗೊಟ್ಟು,
ಘನ ಕಿರಿದಲ್ಲದೆ, ಕುಂಭದಲ್ಲಿ ಲೀಯವಾದಂತೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿಯೆ ಲೀಯ. || ೧೬ ||

**೧೪೩೫**

ಅಂಬುವಿಲ್ಲದಿರ್ದಡೆ ಅಂಬುಜವನಾರು ಬಲ್ಲರು?
ನೀರಿಲ್ಲದಿರ್ದಡೆ ಹಾಲನಾರು ಬಲ್ಲರು?
ನಾನಿಲ್ಲದಿರ್ದಡೆ ನಿನ್ನನಾರು ಬಲ್ಲರು? ನಿನಗೆ ನಾ, ನನಗೆ ನೀ.
ನಿನಗೂ ನನಗೂ ಬೇರೊಂದು ನಿಜವುಂಟೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೭ ||

**೧೪೩೬**

ಅಕ್ಕಿಯ ಕುದಿಸಿದಡೆ ಪಕ್ವವಲ್ಲದೆ, ಮಿಕ್ಕುಳಿದುದಕ್ಕೆ ಪಕ್ವವುಂಟೆ?
ಮರವೆಯಲ್ಲಿ ಅರಿವಲ್ಲದೆ, ಅರಿವಿನಲ್ಲಿ ಮರವೆಯುಂಟೆ?

ಆದ ಉಂಟೆನಬಾರದು, ಇಲ್ಲೆನಬಾರದು.
ಈ ಉಭಯವನೀಂಟಿಯಲ್ಲದೆ,
ಗಂಟಿಕೆಗೆ ಹೊರಗಾಗ, ನಿಃಕಳಂಕ ಮಲ್ಲಿಕಾರ್ಜುನ. || ೧೮ ||

೧೪೩೭

ಅಗ್ನಿ ವಾಯುವ ಧರಿಸಿ, ವಾಯು ಆಕಾಶವ ಧರಿಸಿ,
ಆಕಾಶ ಅಪ್ಪುವ ಧರಿಸಿ, ಅಪ್ಪು ಪೃಥ್ವಿಯ ಧರಿಸಿ,
ಆ ಪೃಥ್ವಿಗೆ ಅಪ್ಪು, ಆ ಅಪ್ಪುವಿನ ಮಧ್ಯದ ಕಮಠ,
ಕಮಠನ ಮಧ್ಯದ ಶೇಷ, ಶೇಷನ ಮಧ್ಯದ ಜಗ,
ಜಗದ ಆಗುಚೇಗೆಯಲ್ಲಿ ಲೋಲನಾಗದೆ,
ಕಾಯಗುಣವ ಕರ್ಮದಿಂದ ಕಳೆದು, ಜೀವ ಗುಣವ ಅರಿವಿನಿಂದ ಮರೆದು,
ಭಾವ ನಿರ್ಭಾವವಾದಲ್ಲಿ, ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೆ. || ೧೯ ||

೧೪೩೮

ಅಚ್ಚಿನಲ್ಲಿ ಬೆಟ್ಟದ ರೂಹು ದೃಷ್ಟವಾಯಿತ್ತು.
ಮನಮಚ್ಚಿ ಕೊಟ್ಟ ಲಿಂಗ, ಹೃತ್ಕಮಲದಲ್ಲಿ ಮುಟ್ಟಿದುದಿಲ್ಲ.
ತಾ ದೃಷ್ಟಿತನಾದಲ್ಲದೆ ಇದಿರಿಂಗಿಷ್ಟವ ಕಟ್ಟಬಾರದು.
ಕಟ್ಟಿಕೊಂಡು ಮತ್ತೆ ಗುರಿಯನೆಚ್ಚ ಕೈಯ [ಲಾ]ಹರಿಯಂತಿಬೇಕು.
ರಣವ ಗೆಲಿದ ಧೀರನ ಉದಾರದಂತಿರಬೇಕು.
ಹೀಂಗಲ್ಲದೆ ಗುರುಸಂಬಂಧವೆಲ್ಲ
ಮಡಕೆಯ ಮರೆಯ ಕ್ಷೀರದಂತೆ ಕೈಗುಡಿತೆಗೆ ಬಂದುದಿಲ್ಲ,
ಈ ಗುರುಸ್ಥಲವೆಂದಡಕವೇಕೆ, ನಿಃಕಳಂಕ ಮಲ್ಲಿಕಾರ್ಜುನಾ? || ೨೦ ||

೧೪೩೯

ಅಜ ಅರ್ಕನ ಕೊಂಬಿನಲ್ಲಿ ನಿಂದು, ಭಜನೆವಂತರ ಕಂಡು,
ತ್ರಿಜಗವೆಲ್ಲ ತಾನೆಂದು ಗಜಬಜೆಯಲ್ಲಿ ಅಡಗಿತ್ತು,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ. || ೨೧ ||

೧೪೪೦

ಅಜ ಗಳದಲ್ಲಿ ಬಿಡುಮೊಲೆಯಿದ್ದಡೆ ಅದು ಗಡಿಗೆಗೇಡು.
ದೃಢವೆನಗಿಲ್ಲದಲ್ಲಿ ಒಡಗೂಡುವುದಕ್ಕೆಡಹೆ ?
ತುಡುಗುಣಿಯಲ್ಲಿ ಮೀಸಲುಂಟೆ ?
ಅಡಿಯನರಿಯದವಂಗೆ ದೃಢಭಕ್ತಿಯುಂಟೆ ?

ಇಂತಿವರೊಡಗೂಡುವ ಗುರುಶಿಷ್ಯನ ಇರವು,
ಪರಿಭ್ರಮಣ ಬಂದು ಶರೀರವನೊಡಗೂಡಿದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. ||೨೨||

೧೪೪೧

ಅ[ಜಾ]ಮಲ ಲಿಂಗವಾದಲ್ಲಿ, ಲೆಕ್ಕದ ಬುಡ ನಿಶ್ಚಯಲಿಂಗವಾದಲ್ಲಿ ಮತ್ತೆ
ಕಾಷ್ಠದ ವೇಷ ಗುರುಚರ[ಲಿಂಗ]ವಾದಲ್ಲಿ, ಎನ್ನ ಕಾಯಕದ ಕಾಷ್ಠ ಚಿನ್ನವಾದಲ್ಲಿ,
ಮತ್ತಾವಾವ ಗುಣ ಅವಗುಣ ಹಿಂಗಿ ಲೇಸಾದಲ್ಲಿ,
ಅದು ತನ್ನಯ ವಿಶ್ವಾಸದಿಂದ, ತನಗೆ ಆರೆಂಬುದನರಿತು, ಕುರಿತು
ಆ ಭಾವಕ್ಕೆ ಬಲೋತ್ತ[ರ]ನಾಗಿದ್ದಾತನ ಇರವು,
ಎಂತಿದ್ದಡಂತೆ ಸುಖ, ನಿಃಕಳಂಕ ಮಲ್ಲಿಕಾರ್ಜುನಾ. ||೨೩||

೧೪೪೨

ಅಡಗಿದ ಕಿಚ್ಚು ಉರಿದಾಗವೆ ತನ್ನ ಇರವು ನಷ್ಟ.
ತುರೀಯದ ಮೋಹ ಬೆರಸಿದಾಗವೆ ಆ ತುರೀಯ ನಷ್ಟ.
ಇಷ್ಟದ ಮೇಗಣ ಚಿತ್ತ ಅಭಿ[ವಾ]ರ್ಥವೆಂಬ ಗುಟ್ಟ ಬಿಟ್ಟಲ್ಲಿಯೆ ನಿಜನಿಶ್ಚಯ.
ಆ ನಿಶ್ಚಯ ಅಚ್ಚೊತ್ತುವುದಕ್ಕೆ ಮುನ್ನವೆ, ಸಚ್ಚಿತ್ತವಾದ[ಲ್ಲಿಯೆ]
ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. ||೨೪||

೧೪೪೩

ಅಣುಮಾತ್ರವಪ್ಪ ವಾಯುವ, ಮನದ ಕೊನೆಯ ಮೊನೆಯಲ್ಲಿ
ಸಪ್ತಸಮುದ್ರ, ದಿಗ್ವಳಯದ ಗಿರಿಗಳು ಮುಂತಾದವ
ತನ್ನ ಸತ್ವದಲ್ಲಿ ಎತ್ತುವದ ಕಂಡೆ.
ಕೊಂಡು ಹೋ[ಹು]ದ ಕಂಡುದಿಲ್ಲ.
ಎತ್ತಿ ಎಯ್ದಿಹೆನೆಂಬುದರಲ್ಲಿ, ವಾಯುಸತ್ವ ನಷ್ಟವಾಯಿತ್ತು.
ಇಂತೀ ಗುಣವ ತ್ರಿಗುಣಾತ್ಮಕರು ತಿಳಿದು, ಜಡ ಅಜಡವೆಂಬುದ ಕಳೆದು
ನಿಃಕಳಂಕ ಮಲ್ಲಿಕಾರ್ಜುನಲಿಂಗವನೊಳಗು ಮಾಡಿರೆ. ||೨೫||

೧೪೪೪

ಅದಿರಿನ ತಲೆ, ಬದಿರಿದ ಬಾಯಿ,
ಕಾಡಿನ ಹಕ್ಕೆ, ಓಡಿನ ಊಟ
ಹತ್ತಿದ ಹೊಟ್ಟೆ, ಬತ್ತಿದ ಗಲ್ಲ,
ಊರಿದ ಚರಣ, ಏರಿದ ಭಾಷೆ.

ಇದು ಶರಣಂಗಲ್ಲದೆ ನಡುವಣ ಪುಕ್ಕಟವಾದವರಿಗೆಲ್ಲಿಯದೊ,
ನಿಃಕಳಂಕ ಮಲ್ಲಿಕಾರ್ಜುನಾ. || ೨೬ ||

೧೪೪೫

ಅದ್ವೈತವ ಹೇಳುವ ಹಿರಿಯರೆಲ್ಲರೂ ದ್ವೈತಕ್ಕೊಳಗಾದರು.
ನಿಸ್ಸಂಸಾರವ ಹೇಳುವ ಹಿರಿಯರೆಲ್ಲರೂ
ಸಂಸಾರದ ಸಾರವ ಚಪ್ಪರಿದು ಕೆಟ್ಟರು.
ಭಕ್ತರಿಗೆ ನಿತ್ಯವಲ್ಲೆಂದು ಹೇಳಿ, ತಾವು ಅನಿತ್ಯವ ಹಿಡಿದು,
ಪಾಶಕ್ಕೆ ಸಿಕ್ಕಿ ಸತ್ತುದನರಿಯದೆ,
ನಾವು ಮುಕ್ತರಾದೆವೆಂಬ ಭ್ರಷ್ಟರ ನೋಡಾ.
ನನಗಿನ್ನೆತ್ತಣ ಮುಕ್ತಿ ಎಂದಂಜಿದೆ, ನಿಃಕಳಂಕ ಮಲ್ಲಿಕಾರ್ಜುನಾ || ೨೭ ||

೧೪೪೬

ಅನಲನೆಂಬ ಗಂಡಂಗೆ ತೃಣವೆಂಬ ಹೆಂಡತಿ ಮೋಹದಿಂದಪ್ಪಲಾಗಿ,
ಬೇಯ್ದು[ಆಕೆಯ] ಕರಚರಣಾದಿಗಳು, ಆ ಗಂಡನಲ್ಲಿಯೆ ಒಪ್ಪವಿಟ್ಟಂತಿರಬೇಕು.
ಇಂತಪ್ಪ ಇಷ್ಟಲಿಂಗವ ದೃಷ್ಟದಲ್ಲಿ ಹಿಡಿದುದಕ್ಕೆ ಇದೇ ದೃಷ್ಟ.
ಹೀಂಗಲ್ಲದೆ ಲೌಕಿಕಾರ್ಚನೆಯ ಮಾಡುವ ಪೂಜಕರ ಮೆಚ್ಚೆನೆಂದ,
ನಚ್ಚಿನಗ್ಘಣೆಯ ಮಜ್ಜನದೊಡೆಯ ನಿಃಕಳಂಕ ಮಲ್ಲಿಕಾರ್ಜುನಾ. || ೨೮ ||

೧೪೪೭

ಅನ್ಯ ಶಬ್ದವ ನುಡಿಯೆ, ಕೇಳೆನೆಂದು ಗಂಟೆಯ ಕರ್ಣದಲ್ಲಿ ಕಟ್ಟಿಕೊಂಡೆ.
ಮತ್ತೆಯೂ ಅಪಶಬ್ದವ ನುಡಿವುದಕ್ಕೆ ನೀನೆ ತಿಳಿದು ನೋಡು,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯಬಲ್ಲಡೆ. || ೨೯ ||

೧೪೪೮

ಅನಾಚಾರದಲ್ಲಿ ಆಚಾರವಡಗಿ, ಭಕ್ತನಲ್ಲದೆ ಭವಿಯಾಗಿ,
ನಿತ್ಯನಲ್ಲದೆ ಅನಿತ್ಯನಾಗಿದ್ದವಂಗಲ್ಲದೆ, ಮೂರು ಕುಳವಿಲ್ಲ.
ಆರು ಕುಳದಲ್ಲಿ ಬಲ್ಲವನಲ್ಲದೆ,
ಇಂತಿವರೊಳಗಾದ ನೂರೊಂದು ಕುಳಕ್ಕೆ ಸ್ಥಲಜ್ಞನಲ್ಲ.
ಇಂತಿವ ಬಲ್ಲವರೆಲ್ಲರಲ್ಲಿ ನಿಃಕಳಂಕ ಮಲ್ಲಿಕಾರ್ಜುನಲಿಂಗ,
ಸೊಲ್ಲಿನೊಳಗಾಗಿಹನು. || ೩೦ ||

೧೪೪೯

ಅನುಪಮ ಲಿಂಗವೆ, ಎನ್ನ ನೆನಹಿಂಗೆ ಬಾರೆಯಾ, ಅಯ್ಯಾ?
ಎನ್ನ ತನುಮನ ಶುದ್ಧವಿಲ್ಲೆಂದು, ಎನ್ನ ನೆನಹಿನಲ್ಲಿ ನೀ ನಿಲ್ಲೆಯಾ, ಅಯ್ಯಾ ?

ಎನ್ನ ಪಾತಕದ ಪುಂಜವ ನೀ ಅತಿಗಳೆಯಾ.
ಎನ್ನ ಹಸುವಿಂಗೆ ಅಸು ನೀನೆ, ವಿಷಯಕ್ಕೆ ಮನ ನೀನೆ,
ಭೋಗಿಸುವುದಕ್ಕೆ ಅಂಗ ನೀನೆ.
ಸ್ಫಟಿಕದ ಘಟದೊಳಗಣ ಬಹುರಂಗಿನಂತೆ,
ಎನ್ನ ಅಂಗಮಯ ನೀನಾಗಿ ಹಿಂಗಲೇಕೆ ನಿಃಕಳಂಕ ಮಲ್ಲಿಕಾರ್ಜುನಾ ? ||೩೧||

೧೪೫೦

ಅನುವನರಿವನ್ನಕ್ಕ ಅರ್ಚನೆ ಬೇಕು.
ಪುಣ್ಯವನರಿವನ್ನಕ್ಕ ಪೂಜೆ ಬೇಕು.
ನಾ ನೀನೆಂಬುದನರಿವನ್ನಕ್ಕ
ಎಲ್ಲಾ ನೇಮವ ಭಾವಿಸಬೇಕು.
ಕಾಲಕರ್ಮಜ್ಞಾನಭಾವ ತಾನುಳ್ಳನ್ನಕ್ಕ ಭಾವಿಸಬೇಕು.
ತನ್ನನರಿದು ವಸ್ತುವ ಕುರಿತು ನಿಂದ ಮತ್ತೆ
ಬತ್ತಲೆ ಹೋಹವಂಗೆತ್ತಲೂ ಭಯವಿಲ್ಲ
ನಿಃಕಳಂಕ ಮಲ್ಲಿಕಾರ್ಜುನಾ. ||೩೨||

೧೪೫೧

ಅಪಮಾನಿಗೇಕೆ ಸೀರೆ? ವೀರಗೇಕೆ ಕೈದು ? ಧೀರಗೇಕೆ ಮಂತ್ರ?
ಇವರಾಗುಹೋಗನರಿಯದೆ,
ಬಾಧೆಗೆ ಸಿಕ್ಕಿ ನಾದವ ಲಾಲಿಸುವ ನಾಗಫಣೆಯಂತೆ
ಆಡುತ್ತಿದ್ದು, ಹೋದ ಹೊಲಬೇಕೆಂದ
ನಿಃಕಳಂಕ ಮಲ್ಲಿಕಾರ್ಜುನಾ. ||೩೩||

೧೪೫೨

ಅಪರವನರಿತೆನೆಂದು ಪರಮನ ಬಿಡಲೇತಕ್ಕೆ ?
ನಿಃಕ್ರೀಯವನರಿತೆನೆಂದು ಕ್ರೀಯ ಬಿಡಲೇಕೆ ?
ಭಕ್ತಿಯಿಂದ ಜ್ಞಾನ, ಜ್ಞಾನದಿಂದ ವೈರಾಗ್ಯ,
ವೈರಾಗ್ಯದಿಂದ ನಿಜದ ನಿಶ್ಚಯ.
ಅದಕ್ಕೆ ಸಂದಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೩೪||

೧೪೫೩

ಅಪರವನರಿದುದೆ ಖರ್ಪರ, ತ್ರಿವಿಧವ ಮುರಿದುದೆ ಕಟ್ಟಿಗೆ.
ಸರ್ವವ ಕೇಳಿ ಕೇಳದಂತಿಪ್ಪುದೆ ಕುಂಡಲ.
ರುದ್ರಪಾಶವ ಕಿತ್ತು ಗಟ್ಟಿಗೊಂಬುದೆ ಜಡೆ.

ಜ್ಞಾನ ವಿಜ್ಞಾನ ಸುಜ್ಞಾನ ಮಹಾಜ್ಞಾನ ಅಪರಜ್ಞಾನ.
ಇಂತೀ ಪಂಚಜ್ಞಾನ ದಹ್ಯಮಂ ಮಾಡಿ,
ಬ್ರಹ್ಮಲಿಖಿತವ ತೊಡೆವಂತೆ ಧರಿಸುವುದು ತ್ರಿಪುಂಡ್ರವ.
ಇಂತೀ ವೇಷವ ಧರಿಸಿ ಭಕ್ತನೆಂಬ ಭೂಮಿಯಲ್ಲಿ,
ಸಕಲಕರಣಂಗಳ ತೀರ್ಥಯಾತ್ರೆಯಂ ಮಾಡುತ್ತ,
ಕಳೆದುಳಿಯಬಲ್ಲಡೆ, ಆತನೇ ಲಿಂಗಜಂಗಮ,
ನಿಃಕಳಂಕ ಮಲ್ಲಿಕಾರ್ಜುನಾ. ||೩೫||

೧೪೫೪

ಅಪ್ಪು ಬೆರಸಿದ ಕಟ್ಟಿಗೆಯ ಕಿಚ್ಚಿನಲ್ಲಿಕ್ಕಿದಡೆ,
ಅದು ಚಿತ್ತಶುದ್ಧವಾಗಿ ಹೊತ್ತಬಲ್ಲುದೆ, ತಟ್ಟಾರಿದ ಕಾಷ್ಠದಂತೆ ?
ಇಂತೀ ಅರ್ತಿಕಾರರಿಗೆ ಸಿಕ್ಕುವನೆ ನಿಜವಸ್ತು, ನಿಃಕಳಂಕ ಮಲ್ಲಿಕಾರ್ಜುನಾ. ||೩೬||

೧೪೫೫

ಅಪ್ಪುವರತಲ್ಲಿಯೆ ಪೃಥ್ವಿಯ ಅಂಕುರ ನಷ್ಟ.
ಅಂಕುರ ನಷ್ಟವಾದಲ್ಲಿಯೆ ಮುಂದಣ ಬಿತ್ತಿಲ್ಲ.
ಇಂತೀ ಭಾವವ ತಿಳಿದು, ಸ್ಥಲ ನಿಃಸ್ಥಲವಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ಭಾವವಿರಹಿತ. ||೩೭||

೧೪೫೬

ಅಪ್ಪುವಿನ ಯೋಗದ ಕಾಷ್ಠ ಹೊತ್ತುವಲ್ಲಿ,
ಮೆಚ್ಚನೆ ತಮದ ಧೂಮ, ಶುಷ್ಕದ ಅಪ್ಪುವಿನ ಗುಣ.
ಅಪ್ಪುವರತು ಶುಷ್ಕ [ತೊ]ಟ್ಟಾರೆ, ಕಿಚ್ಚು ಮುಟ್ಟುವುದಕ್ಕೆ ಮುನ್ನವೆ,
ಹೊತ್ತಿ ಬೇವುದದು ಕಿಚ್ಚೋ, ಮತ್ತೊಂದೋ ?
ಇಂತೀ ಉಭಯವನರಿತು, ಒಂದರಲ್ಲಿ ಒಂದು ಅದೆಯೆಂಬ
ಸಂದೇಹವ ನೋಡಾ.
ಅಲ್ಲಾ ಎಂದಡೆ ಭಿನ್ನಭಾವ, ಅಹುದೆಂದಡೆ ಇಷ್ಟದ ದೃಷ್ಟವೊಂದೆಯಾಗಿದೆ.
ಜನ ಜಾತ್ರೆಗೆ ಹೋದವನಂತೆ ಕೂಟದಲ್ಲಿ ಗೋಷ್ಠಿ ಹ[ರಿ]ವಲ್ಲಿ,
ತಮ್ಮ ತಮ್ಮ ಮನೆಯ ಇರವಿನ ಹಾದಿ.
ಇಂತಿವನರಿದು ಬಾಡಗೆಯ ಮನೆಗೆ
ಹೊಯ್ದಾಡಲೇತಕ್ಕೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೮||

೧೪೫೭

ಅಪ್ಪುವಿನೊಳಗಣ ಅಗ್ನಿಯಂತೆ ಅಪ್ಪುವಿನೊಳಗೆ ಬೆರೆದು,
ಕೆಡದ ಕಿಚ್ಚಿನಂತೆ ಸ್ಥಲಕುಳಭರಿತನಾಗಿ,
ಸ್ಥಲದಲ್ಲಿದ್ದು ಸ್ಥಲವ ನೇತಿಗಳೆದಲ್ಲಿ ಒಳಗು ಹೊರಗಾಯಿತ್ತು.
ಆ ಹೊರಗಣ ಹೊಲಬ ಕಂಡು, ಆ ಹೊಲಬಿ[ಗ]ನ ಹೊಲನ ನೋಡಿ,
ವಿರಳ ಅವಿರಳವೆಂಬುದನರಿತು, ಕುರುಹು ನಷ್ಟವಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ನಾಮನಷ್ಟ. ||೩೯||

೧೪೫೮

ಅಪ್ಪು ಷಡುವರ್ಣವ ಕೂಡಿ ಚಿಹ್ನವಿಚ್ಛಿನ್ನವಿಲ್ಲದೆ
ವರ್ಣಭೇದವ ಕೊಟ್ಟು, ಬಿನ್ನಾಣದಿ ತಾನ[ರಿ]ತಂತೆ ತ್ರಿವಿಧಮೂರ್ತಿಯಾಗಿ,
ಷಟ್ಸ್ಥಲಬ್ರಹ್ಮಿಯಾಗಿ ನಾನಾತತ್ವಂಗಳಲ್ಲಿ ಕಲ್ಪಿತನಾಗಿ,
ಸತ್ಕ್ರೀಯಲ್ಲಿ ಭಾವಿತನಾಗಿ, ನಿಃಕ್ರೀಯಲ್ಲಿ ನಿರಂಗನಾಗಿ,
ಕರ್ಪುರದ ಬುಡದಲ್ಲಿ ಕಿಚ್ಚು ಹುಟ್ಟಿದಂತೆ,
ಅದು ಹುಟ್ಟುವಲ್ಲಿ ಆ ಬುಡಕ್ಕೆ ನಿಶ್ಚಯವಾಯಿತ್ತು.
ಅರಿದರುಹಿಸಿಕೊಂಬ ಉಭಯವಲ್ಲದಿಲ್ಲ.
ಭಕ್ತಿಗೆ ಕ್ರೀ, ವಿರಕ್ತಿಗೆ ನಿರವಯ.
ಇಂತೀ ದ್ವಂದ್ವವುಳ್ಳನ್ನಕ್ಕ ನೀನು, ನೀನೆಂಬನ್ನಕ್ಕ ನಾನು
ಎನ್ನ ಭಾವದಲ್ಲಿ ಮನೋಮೂರ್ತಿಯಾದಲ್ಲಿ,
ನಿಃಕಳಂಕನಾದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. ||೪೦||

೧೪೫೯

ಅಪ್ಪು ಫಲವ ನುಂಗಿ, ಫಲ ಅಪ್ಪುವ ನುಂಗಿ,
ಒಪ್ಪಿ ಗಟ್ಟಿಗೊಂಡ ಭೇದ[ವೆ] ಭಕ್ತಿಜ್ಞಾನ.
ರುಚಿಯ ಜಿಹ್ವೆ ನುಂಗಿ, ಜಿಹ್ವೆಯ ರುಚಿ ನುಂಗಿ,
ಈ ಉಭಯ[ದ] ಭೇದವೆಲ್ಲಿ[ಯೂ] ಭಿನ್ನವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೧||

೧೪೬೦

ಅಮೃತ ಸಾರವ ಬಲ್ಲುದೆ ? ಶಾಖೆ ಫಲವ ಬಲ್ಲುದೆ ?
ನಿರ್ಜಾತರ ಜಾತ ಬಲ್ಲನೆ ?
ಅವನೇತಕ್ಕೂ ಸಿಕ್ಕ ಅರಿಯದವರಾಸೆಗೆ ಸಿಕ್ಕುವ,
ಇದು ಭಾಷೆ ಎಂದೆ, ನಿಃಕಳಂಕ ಮಲ್ಲಿಕಾರ್ಜುನಾ ||೪೨||

೧೪೬೧

ಅಯ್ಯಾ ಎನ್ನ ಕೇಡು ನಿನಗಲ್ಲದೆ ಎನಗೊಂದಿಲ್ಲ.
ಕಾಳಗದಲ್ಲಿ ಪೌಜನಿಕ್ಕಿ ಮುರಿದಲ್ಲಿ, ಅರಸೆಂಬರಲ್ಲದೆ ಬಂಟರೆಂಬುದಿಲ್ಲ.
ಅದರೊಚ್ಚೆಯವಾರಿಗೆಂಬುದನರಿ.
ನಾ ನಿಮಗೆ ಕೊರತೆಯ ತರಬಾರದೆಂಬುದಕ್ಕೆ ನಿಮಗೆ ಹೇಳಿಹೆನಲ್ಲದೆ,
ಕೊಟ್ಟ ಜೀವಿತಕ್ಕೆ ಓಲೈಸುವಂಗೆ ರಾಜ್ಯದ ಕಟ್ಟೇಕೆ,
ನಿಃಕಳಂಕ ಮಲ್ಲಿಕಾರ್ಜುನಾ? || ೪೩ ||

೧೪೬೨

ಅಯ್ಯಾ [ನಾ] ನಿನಗಂಜುವೆ.
ಕಚ್ಚುವ ಹಾವ ಕೈಯಲ್ಲಿ ಹಿಡಿದೆ.
[ಕು]ತ್ತುವ ಹಸುವ ಬಾಗಿಲಲ್ಲಿ ಕಟ್ಟಿದೆ.
ತಿಂಬ ಹುಲಿಯ ಅಂಗಳದಲ್ಲಿ ಕೂಡಿದೆ.
ನಿನ್ನಂಗವಿದೇನೊ, ಅಭಂಗ ನಿಃಕಳಂಕ ಮಲ್ಲಿಕಾರ್ಜುನಾ. || ೪೪ ||

೧೪೬೩

ಅಯ್ಯಾ, ನಿಮ್ಮಾದ್ಯರ ವಚನವ ಕೇಳಿ, ಎನ್ನ ಅಂಗಭಂಗ ಹಿಂಗಿದವಯ್ಯಾ.
ಅಯ್ಯಾ, ನಿಮ್ಮಾದ್ಯರ ವಚನ ಕೇಳಿ, ಪ್ರಸಾದದ ಪರುಷವ ಕಂಡೆನಯ್ಯಾ.
ಆ ಪರುಷದ ಮೇಲೆ ಮೂರುಜ್ಯೋತಿಯ ಕಂಡೆನಯ್ಯಾ.
ಒಂದು ಜ್ಯೋತಿ ಕೆಂಪು ವರ್ಣ, ಒಂದು ಜ್ಯೋತಿ ಹಳದಿ ವರ್ಣ,
ಒಂದು ಜ್ಯೋತಿ ಬಿಳಿಯ ವರ್ಣ.
ಈ ಮೂರು ಜ್ಯೋತಿಯ ಬೆಳಗಿನಲ್ಲಿ,
ಒಂಬತ್ತು ರತ್ನವ ಕಂಡೆನಯ್ಯಾ.
ಆ ಒಂಬತ್ತು ರತ್ನದ ಮೇಲೊಂದು ವಜ್ರವ ಕಂಡೆನಯ್ಯಾ.
ಆ ವಜ್ರದ ಮೇಲೊಂದು ಅಮೃತದ ಕೊಡನ ಕಂಡೆನಯ್ಯಾ.
ಆ ಕೊಡನ ಕಂಡವನೆ ಉಂಡ, ಉಂಡವನೆ ಉರಿದ,
ಉರಿದವನೆ ಕರಿದ, ಕರಿದವನೆ ನೆರೆದ, ನೆರೆದವನೆ ಕುರುಹನರಿದಾತ,
ನಿಮ್ಮನರಿದಾತ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ. || ೪೫ ||

೧೪೬೪

ಅರಗಿನ ಪುತ್ಥಳಿ ಉರಿಯ ಮನೆಯ ಹೊಕ್ಕಂತಿರಬೇಕು.
ಸಿರಿಯ ಲಕ್ಷ್ಮಿ ಉದಕದಲ್ಲಿ ನೆರೆದು ಹೋದಂತಿರಬೇಕು.
ಅಂಬರಕ್ಕೆ ಸಂಭ್ರಮ ಹರಿದಂತಿರಬೇಕು.

ಆತನಿರವು ಕಣ್ಣಿನಲ್ಲಿ ಪು[ಟ್ಟಿ]ದ ಆಲಿಯ ತೆರದಂತಿರಬೇಕು.
ಭಿನ್ನವಹುದು, ಅಲ್ಲಾ ಎಂಬ ಸಂದೇಹ[ವೇಕೊ]
ನಿಃಕಳಂಕ ಮಲ್ಲಿಕಾರ್ಜುನಾ ? ||೪೬||

೧೪೬೫

ಅರಗಿನ ಮಣಿಯ ಮಾಡಿ, ಉರಿಯ ನೇಣ ಮಾಡಿ,
ಹಿರಿಯರೆಲ್ಲರು ಪವಣಿಸಲಾರರು.
ಈ ಮಣಿಯ ಗುಣಕ್ಕೆ ಗುಣಜ್ಞರಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೭||

೧೪೬೬

ಅರ್ಚನೆಗೊಳಗಾಯಿತ್ತು ಲಿಂಗವೆಂಬರು, ಅದು ಹುಸಿ, ನಿಲ್ಲು.
ಪೂಜನೆಗೊಳಗಾಯಿತ್ತು ಲಿಂಗವೆಂಬರು, ಅದು ಹುಸಿ, ನಿಲ್ಲು.
ಇಂತೀ ಉಭಯದೊಳಗಾದ ಅಷ್ಟವಿಧಾರ್ಚನೆ,
ಷೋಡಶೋಪಚಾರಕ್ಕೊಳಗಾಯಿತ್ತು ಲಿಂಗವೆಂಬರು,
ಇಲ್ಲ, ಇಂತೀ ನೇಮ ಹುಸಿ, ನಿಲ್ಲು.
ಇಂತೀ ನೇಮಕ್ಕೆ ಒಳಗಾದಡೆ, ಇಷ್ಟಾರ್ಥ ಕಾಮ್ಯಾರ್ಥ ಮೋಕ್ಷಾರ್ಥ,
ತನಗೆ ದೃಷ್ಟದಲ್ಲಿ ಅದುದಿಲ್ಲ.
[ಇಹ]ದಲ್ಲಿ ಕಾಣದೆ, ಪರದಲ್ಲಿ ಕಂಡೆನೆಂಬುದು, ಹುಸಿ, ಸಾಕು ನಿಲ್ಲು.
ಕುರುಹಿನಿಂದ ಕಾಬಡೆ, ತನ್ನಿಂದಲೋ, ಕುರುಹಿನಿಂದಲೋ ?
ಅರಿವಿನಿಂದಲೋ, ಕುರುಹಿನಿಂದಲೋ ?
ಕುರುಹಿನಿಂದಲರಿದೆಹೆನೆಂದಡೆ, ಆ ಅರಿವಿನಿಂದ ಬೇರೊಂದು ಕಂಡೆಹೆನೆಂದಡೆ,
ಕಾಣಿಸಿಕೊಂಡುದು ನೀನೋ, ನಾನೋ ?
ಇಂತುಭಯವೇನೆಂದರಿಯದಿಪ್ಪುದೆ
ಬೆಳಗಿನ ಕಳೆಯ ಕಾಂತಿಯೊಳಗಣ ನಿಶ್ಚಯ ತಾನಾದ ಮತ್ತೆ
ಏನೂ ಎನಲಿಲ್ಲ, ಅದು ತಾನೇ.
ಅದು ತಾ[ನೇನೂ] ಇಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೮||

೧೪೬೭

ಅರ್ಚನೆಯಲರ್ಚಿಸಿದಲ್ಲಿ ಪುಣ್ಯದ ಫಲ, [ಭಕ್ತಿ].
[ಈ] ದ್ರವ್ಯವ ಕೊಡುವುದು ಮುಕ್ತಿಲೋಕದೊಳಗು.
ಈ ಉಭಯದ ಭಿತ್ತಿಯನರಿದು ನಿತ್ಯವ ತಿಳಿದವಂಗೆ
ಏನೂ ಎನಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೯||

೧೪೭೮

ಅರ್ಚನೆಯ ಮಾಡುವಲ್ಲಿ, ಮಚ್ಚಿ ಬಯಸಲಾಗದು ಇಷ್ಟಾರ್ಥವ.
ಲೋಕದ ಪೂಜೆಯ ಮಾಡುವಲ್ಲಿ, ಪುಣ್ಯಲೋಕವ ಮಚ್ಚಲಾಗದು.
ಇಂತೀ ಗುಣವಿರಹಿತನಾಗಿ, ಚತುರ್ವಿಧಫಲ ಹೊರತೆಯಾಗಿ,
ನಿತ್ಯನೇಮವೆಂಬ ಮಾಡುವ ಭಕ್ತವಿದಂಗೆ ಮಾಡಿಯೂ ಮಾಡದಿರ್ದಡೇನು
ದಗ್ಧಪಟದಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೦ ||

೧೪೭೯

ಅರ್ಪಿತ ಭಿನ್ನವ ಮಾಡಬಹುದೆ ಅಯ್ಯಾ ?
ಸರ್ಪ ದಷ್ಟವಾದಲ್ಲಿ ಕಚ್ಚಿದ ಠಾವಿನಲ್ಲಿರ್ಪುದೆ ವಿಷ ?
ತನುವಿನ ದರ್ಪವ ಮುರಿವುದಲ್ಲದೆ,
ಸಿಲುಕುವುದೆ ಒಂದು ಠಾವಿನಲ್ಲಿ ?
ಭಕ್ತಿ ಜ್ಞಾನ ವೈರಾಗ್ಯ[ವೆಂಬ] ಮೂರರ ತೊಟ್ಟುಬಿಟ್ಟ ಶರಣಂಗೆ
ಅರ್ಪಿತವೆರಡಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೫೧ ||

೧೪೮೦

ಅರಿತೆಹೆನರಿತೆಹೆನೆಂದು ಹೊರಹೊಮ್ಮುವಾಗ
ಕಾಯ ಮರುಜವಣಿಯೆ ? ಮಹಾಪ್ರಳಯಕ್ಕೆ ಹೊರಗಾದ ಶ್ರ[ಮ]ಣವೆ ?
ಅವತಾರಕ್ಕೆ ಹೊರಗಾದ ನಿರಂಗವೆ ?
ಅಸಗ ನೀರಡಿಸಿ ಸತ್ತಂತಾಯಿತ್ತು ಅವನಿರವು,
ನಿಃಕಳಂಕ ಮಲ್ಲಿಕಾರ್ಜುನಾ. || ೫೨ ||

೧೪೮೧

ಅರಿದವ ತಾ[ನರಿ]ದ ಮತ್ತೆ ಹೆರೆ ಹಿಂಗದಿರಬೇಕು.
ಆಸೆ, ಆಮಿಷ, ತಾಮಸ, ಸಕಲೇಂದ್ರಿಯವ ಭಾವಿಸಲಿಲ್ಲ ಭ್ರಮೆಗೊಳಗಾದ ಮನುಷ್ಯರು
ಜ್ಞಾನಿ ತಾನಾದ ಮತ್ತೆ
ಮಾನವರ ಮೊರೆಹೊಗದೆ ತಾನು ತಾನಾಗಬಲ್ಲಡೆ,
ಆತಂಗೆ [ಭ]ವದ ಭ್ರಮೆ ಇಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೩ ||

೧೪೮೨

ಅರಿದ ಶರಣಂಗೆ ಅಡಗುವ ಠಾವುಂಟೆ ?
ಅಡಗಿದ ಮತ್ತೆ ಬಿಡಬೇಕು
[ಆದಿ]ಯ ಮೆಟ್ಟುವ ಜಡರ ಸಂಸರ್ಗ ಬಿಡವು ಸರಿ.

ಇಂತೀ ದೃಢಚಿತ್ತಂಗೆ ಕಡೆ ನಡು ಮೊದಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೫೪ ||

೧೪೭೩

ಅರಿದು ಮಾಡುವ ಮಾಟ ಮರವೆಗೆ ಬೀಜವೆಂದೆ.
ಅದಕ್ಕೆ ಮರೆದರಿವು ತಪ್ಪದು.
[ಆ] ಅರಿವಿನ ಭೇದ ಎತ್ತಿದ ದೀಪದ ಬೆಳಗಿನಂತೆ.
ಅರಿದು ಮರೆಯದೆ, [ಮರೆದು ಅರಿಯದೆ]
ಇಂತೀ ಅರಿಕೆಯಲ್ಲಿ ಮಾಡುವವನ ಅರಿವು,
ಹೊತ್ತ ದೀಪದ ನಿಶ್ಚಯದಂತೆ.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ,
ಚನ್ನಬಸವಣ್ಣಂಗೆ ನಮೋ ನಮೋ ಎನುತಿರ್ದೆನು. || ೫೫ ||

೧೪೭೪

ಅರಿದೆನೆಂಬುದೇನೊ ? ಮರೆದೆನೆಂಬುದೇನೊ ?
ಅರಿವು ಮರವೆ ಎರಡರ ಎಡೆಯಲ್ಲಿ [ಇದರ] ತೆರನನರಿಯಾ,
ನಿಃಕಳಂಕ ಮಲ್ಲಿಕಾರ್ಜುನಾ. || ೫೬ ||

೧೪೭೫

ಅರಿವ ಕತ್ತಿ ಹರಣದ ಇರವ ಬಲ್ಲುದೆ ?
ಬಿರುನುಡಿಯ ನುಡಿವವ ಮಾನ್ಯರ [ಮಾ]ನದ ಮನ್ನಣೆಯ ಬಲ್ಲನೆ ?
ಹೆತ್ತವರಿಗೆ ಕೂಸು ಹುಚ್ಚಾದರೆ,
ಅದರರ್ತಿ ಹೆತ್ತವರಿಗಲ್ಲದೆ ಮಿಕ್ಕಾದವರಿಗುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ. || ೫೭ ||

೧೪೭೬

ಅರಿವನರಿವನ್ನಕ್ಕ ಅರ್ಚನೆ ಬೇಕು, ಪುಣ್ಯವನರಿವನ್ನಕ್ಕ ಪೂಜೆ ಬೇಕು.
ತಾನೆಂಬುದನರಿವನ್ನಕ್ಕ ಎಲ್ಲ ನೇಮವ ಭಾವಿಸಬೇಕು.
ಕಾಲ ಕರ್ಮ ಜ್ಞಾನ ಭಾವ ತಾನುಳ್ಳನ್ನಕ್ಕ ಭಜಿಸಬೇಕು.
ತನ್ನ ಮರೆದು, ವಸ್ತುವ ಕುರಿತು ನಿಂದ ಮತ್ತೆ
ಬತ್ತಲೆ ಹೋಹವಂಗೆ ಎತ್ತಲೂ ಭಯವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೫೮ ||

೧೪೭೭

ಅರಿವ ಮನ ಏಕವಾಗಿಯಲ್ಲದೆ, ವಸ್ತುವನೊಡಗೂಡಬಾರದು.
ಹುರಿ ರಜ್ಜು ಒಂದೆ ಗಡಣದಲ್ಲಿಯಲ್ಲದೆ ಎಡಬಲಕ್ಕಿಲ್ಲ.

ಆ ಉಭಯದ ಬಿಡುಗಡೆಯನರಿದು,
ಅಡಗಿಯಲ್ಲದೆ ಸ್ವಯಂಭುವಲ್ಲ, ನಿಃಕಳಂಕಮಲ್ಲಿಕಾರ್ಜುನಾ. ॥ ೫೯ ॥

೧೪೭೮

ಅರಿವಲ್ಲಿ ಉಭಯ, ಅರಿದಲ್ಲಿ ಏಕ.
ಏಕಕ್ಕುಂಟೆ ಬಹುಶಾಖೆಯ ಸ್ಥಲ ?
ಪೂರ್ವದಲ್ಲಿ ಸ್ವಸ್ವನಾಗಿ, ಉತ್ತರದಲ್ಲಿ ನಿಶ್ಚಯವಾದ ಮತ್ತೆ
ಉಭಯದ ತೆತ್ತು ಮುತ್ತ[ರಿ]ಗೆ ಹೊಡೆದಾಡಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೦ ॥

೧೪೭೯

ಅರಿವ ಹೇಳುವರೆಲ್ಲರೂ ಮರವೆಯಲ್ಲಿ ಬಿದ್ದು ಮೂರೆಲೆ ಹಿಡಿದರಲ್ಲಾ.
ಅದು ಬಾಯಿಗೆ ಪಸಲೆ, ಕೈಗೆ ಕಳಂಕ, ಜ್ಞಾನಕ್ಕೆ ದೈವ.
ಇದ ಭಾವಿಸುವರಿಗೇಕೆ ಜ್ಞಾನ, ನಿಃಕಳಂಕ ಮಲ್ಲಿಕಾರ್ಜುನಾ ? ॥ ೬೧ ॥

೧೪೮೦

ಅರಿವ ಹೇಳುವ ಹಿರಿಯರೆಲ್ಲರೂ
ಕುರುಹಿನ ಶಿಲೆಯ ಕೈಯಲ್ಲಿ ಹಿಡಿದು,
ನರಗುರಿಗಳ ಕುರುಹಿನ ಬಾಗಿಲಲ್ಲಿ ನಿಂದು,
ಮೊರೆಯಿಡುತಿರ್ಪ ಈ ಅರಿಗುರಿಗಳ ಮೆಚ್ಚು,
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೨ ॥

೧೪೮೧

ಅರಿವಿಂದ ಕಂಡೆಹೆನೆಂದಡೆ, ಅರಿವಿಂಗೆ ಮರಹು ಹಿಡಿಯಬೇಕು.
ಕುರುಹಿನಿಂದ ಕಂಡೆಹೆನೆಂದಡೆ, ಆ ಕುರುಹಿನಲ್ಲಿ ಅರಿವು ಕರಿಗೊಳ್ಳಬೇಕು.
ಉಭಯವನರಿದ ಮತ್ತೆ ಅರಿವಿನಿಂದ ಅರಿದೆಹೆನೆಂದಡೆ
ಆ ಅರಿವು ನಾನಾ ಯೋನಿಯಲ್ಲಿ ಒಳಗಾಯಿತ್ತು.
ಕುರುಹಿನಿಂದ ಅರಿದೆಹೆನೆಂದಡೆ, ಆ ಕುರುಹು ಪುನರಪಿಗೊಳಗಾಯಿತ್ತು.
[ಆ] ಅರಿವನರಿ[ವ] ಅರಿವೇನೋ? ಕುರುಹನರಿವ ಅರಿವದೇನೋ?
ಅರಿವನರಿದಲ್ಲಿಯೂ ಕುರುಹನರಿದಲ್ಲಿಯೂ ಅರಿವಿಂಗೆ ತೆರಹಿಲ್ಲ.
ಬರಿದೆ ಅರಿದೆನೆಂಬ ಬರುಬರ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನಾ. ॥ ೬೩ ॥

೧೪೮೨

ಅರಿವು ಕರಿಗೊಂಡಲ್ಲಿ ಇವರ ತೆರನನರಿಯಬೇಕು.
ತನ್ನ ಮರೆಯಬೇಕು. ಲಿಂಗವನರಿಯಬೇಕು.

ಅರಿದ ಮತ್ತೆ ಎರಡಕ್ಕೆ ತೆರಪಿಲ್ಲ, ಹಿಡಿವುದಕ್ಕೆ ಅಂಗವಿಲ್ಲ.
ಅರಿವುದಕ್ಕೆ ಆತ್ಮವಿಲ್ಲ. ಬೇರೆ ಬಿಡುಗಡೆ ಇಲ್ಲವಾಗಿ,
ಆ ಅರಿಕೆ ತಾನೆ ಶರಣನಲ್ಲಿ. [ಇದು]ನಿರ್ಲೇಪ, ಶರಣಸ್ಥಲ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೪ ॥

೧೪೮೩

ಅರುವಿಂಗೆ ಅರ್ಚನೆ ಒಳಗು.
ಅರ್ಚನೆಗೆ ಎಚ್ಚರೆ ನಿತ್ಯಕ್ಕೊಳಗು.
ನಿತ್ಯತ್ವ ನಿಂದರೆ ಬಚ್ಚಬರಿಯ ಬಯಲು,
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೫ ॥

೧೪೮೪

ಅಲ್ಲಿಗೆ ಮರ್ಕಟನಂತಾಗದೆ, ಇಲ್ಲಿಗೆ ವಿಹಂಗನಂತಾಗದೆ.
ಈಚೆಯಲ್ಲಿಗೆ ಪಿಪೀಲಿಕನಂತಾಗದೆ,
ರಾಜಸ ತಾಮಸ ಸಾತ್ವಿಕದಲ್ಲಿ ಸಾಯದೆ,
ಭಾಗೀರಥಿಯಂತೆ ಹೆಚ್ಚು ಕುಂದಿಲ್ಲದೆ,
ಮಾಸದ ಚಂದ್ರನಂತೆ, ಕಲೆಯಿಲ್ಲದ ಮೌಕ್ತಿಕದಂತೆ,
ರಜವಿಲ್ಲದ ರತ್ನದಂತೆ, ತೆರೆದೋರದ ಅಂಬುಧಿಯಂತೆ,
ಒಡಲಳಿದವಂಗೆ, ನೆರೆ ಅರಿದವಂಗೆ,
ಕುರುಹೆಂಬುದು ಆತ್ಮನಲ್ಲಿ ಘಟಿಸಿದವಂಗೆ ಬೇರೊಂದೆಡೆಯಿಲ್ಲ.
ಆ ಗುಣವಡಗಿದಲ್ಲಿ ಪ್ರಾಣಲಿಂಗಸಂಬಂಧ.
ಆ ಸಂಬಂಧ ಸಮಯ ಸ್ವಸ್ಥವಾದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೭ ॥

೧೪೮೫

ಅಷ್ಟ[ಕು]ಲ ದಿಗ್ದೇಶವನೆಲ್ಲವನು,
ತತ್ತಿಯೊಳಗಣ ತುಪ್ಪುಳು ನುಂಗಿತ್ತು.
ತುಪ್ಪುಳ ಬಲಿದು ಮತ್ತೆ ಹಾರಲಾಗಿ,
ಮತ್ತಾ ತತ್ತಿಯ ನುಂಗಿತ್ತು.
ಮಹಾಹಕ್ಕಿಯ ತುಪ್ಪುಳ, ತತ್ತಿಯ ಚಿತ್ತು ನುಂಗಿತ್ತು.
ನುಂಗಿದ ಚಿತ್ತುವ ಅಭಂಗ ಕೊಂಡಿತ್ತು.
ಅದಕ್ಕೆ ಸಂಗ ನಿರ್ಲೇಪ, ನಿಃಕಳಂಕ ಮಲ್ಲಿಕಾರ್ಜುನಾ. ॥ ೬೭ ॥

೧೪೮೭

ಅಷ್ಟತನುಮೂರ್ತಿ ಕೂಡಿ ನಿಂದು, ವಸ್ತುವನರಿಯಬೇಕೆಂದು,
ತತ್ವ ಇಪ್ಪತ್ತೈದು ಕೂಡಿ ನಿಂದು, ವಸ್ತುವನರಿಯಬೇಕೆಂಬುದು,
ಶತ ಏಕವನರಸಿ ಒಂದುಗೂಡಿ ವಸ್ತುವನರಿಯಬೇಕೆಂಬುದು,
ತಾಪತ್ರಯವಾರು, ತನುತ್ರಯ ಮೂರು,
ದಶವಾಯುವಿನಲ್ಲಿ ಸೂಸುವ ಆತ್ಮನ ಮುಕ್ತವ ಮಾಡಿ
ವಸ್ತುವನರಿಯಬೇಕೆಂಬುದು,
ಅಷ್ಟಮದಂಗಳ ಹಿಟ್ಟುಗುಟ್ಟಿ, ವಸ್ತುವ ಕಾಣಬೇಕೆಂಬುದು,
ಪಟ್ಟುಲವನಾಚರಿಸಿ ನಿಂದು ವಸ್ತುವ ಒಡಗೂಡಿ ಅರಿಯಬೇಕೆಂಬುದು,
ಬ್ರಹ್ಮನ ಉತ್ಪತ್ಯಕ್ಕೆ ಹುಟ್ಟದೆ, ವಿಷ್ಣುವಿನ ಸ್ಥಿತಿಗೊಳಗಾಗದೆ,
ರುದ್ರನ ಲಯಕ್ಕೆ ಸಿಕ್ಕದೆ,
ನಿಜದಲ್ಲಿ ನಿಂದು ವಸ್ತುವನರಿಯಬೇಕೆಂಬುದು ಅದೇನು ಹೇಳಾ?
ಆ ಗುಣ ಸ್ವಾದೋದಕ ಮೇಘದಲ್ಲಿ ಏರಿ ಧರೆಗೆಯ್ದಿದಂತೆ,
ಆ ಅಪ್ಪುವಿನಿಂದ ತರು, ಸಸಿ ಸಕಲಜೀವಂಗಳಿಗೆ
ಸುಖವನೆಯ್ದಿಸುವಂತೆ,
ಎಂಬುದನರಿದು ವರ್ತನಕ್ಕೆ ಕ್ರೀ, ಕ್ರೀಗೆ ನಾನಾ ಭೇದ,
ನಾನಾ ಭೇದಕ್ಕೆ ವಿಶ್ವಮಯ ಸ್ಥಲಂಗಳಾಗಿ,
ಸ್ಥಲ ಏಕೀಕರಿಸಿ ನಿಂದುದು ಮಹಾಜ್ಞಾನ.
ಆ ಮಹಾಜ್ಞಾನವನೇಕೀಕರಿಸಿ ನಿಂದುದು ದಿವ್ಯಜ್ಞಾನ.
ಆ ಜ್ಞಾನ ಸುಳುಹುದೋರದೆ ನಿಂದುದು ಪ್ರಾಣಲಿಂಗಿಯ ಭಾವ.
ಆ ಭಾವ ನಿರ್ಭಾವವಾದುದು ಐಕ್ಯಾನುಭಾವ.
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ ಸಂದನಳಿದು ನಿಂದ ನಿಜ. ‖ ೬೮ ‖

೧೪೮೮

ಅಸಿ ಮಸಿ ಕೃಷಿ ವಾಣಿಜ್ಯ ಗೋಪಾಲ ಯಾಚನ
ಷಟ್ಕೃಷಿವ್ಯಾಪಾರವ ಮಾಡುವಾತ ಜಂಗಮವಲ್ಲ.
ಆ ಜಂಗಮದ ಪಾದೋದಕ ಪ್ರಸಾದವ ಕೊಂಬ
ಪಂಚಮಹಾಪಾತಕರ ಅಂಗಳವ ಮೆಟ್ಟಿದಡೆ,
ಸಂಗದಲ್ಲಿ ನುಡಿದಂತೆ, ಕುಂಭಿನಿಪಾತಕ.
ಅವರನು ಹಿಂಗದಿರ್ದಡೆ ಲಿಂಗವಿಲ್ಲ, ಜಂಗಮವಿಲ್ಲ
ಪಂಚಾಚಾರಕ್ಕೆ ಹೊರಗು.
ಮಾಟಕೂಟದವರೆಲ್ಲ ಜಗದಾಟದ ಡೊಂಬರೆಂಬೆ.
ಈಶನಾಣೆ ತಪ್ಪದು, ನಿಃಕಳಂಕ ಮಲ್ಲಿಕಾರ್ಜುನಾ. ‖ ೬೯ ‖

೧೪೮೮

ಅಸಿಯಾಗಲಿ ಮಸಿಯಾಗಲಿ ಕೃಷಿಯಾಗಲಿ
ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ,
ಪಶುಪತಿಗೆಂದೇ ಪ್ರಮಾಣಿಸಿ ಭಕ್ತಿಯೆಸಕದಿಂದ,
ಹಸಿವಿಲ್ಲದೆ ತೃಷೆಯಿಲ್ಲದೆ ವಿಷಯವನರಿಯದೆ,
ಮಾಡುವ ಭಕ್ತಿಯಲ್ಲಿ ಹುಸಿಯಿಲ್ಲದೆ ಮಾಡುತಿರ್ಪ ಭಕ್ತನ ಅಂಗಣವೆ ವಾರಣಾಸಿ.
ಆತನ ಆಶ್ರಯವೆ [ಅ]ವಿಮುಕ್ತಕ್ಷೇತ್ರ, ಆತನ ಮುಖವೆ ಮೋಕ್ಷದಾಗರ.
ಆತನಂಗವೆ [ಲಿ]ಂಗದ ಬೆಳಗು, ಆತನ ಪಾದವೆ ಪವಿತ್ರ ಸುಧೆ.
ಹೀಂಗೆ ತ್ರಿಕರಣ ಶುದ್ಧಾತ್ಮ ಭಕ್ತನಂತೆ
ಒಕ್ಕುದ ಕಾಯ್ದುಕೊಂಡಿರ್ಪ ಕುಕ್ಕು[ಟ]ನಂತೆ ಮಾಡಾ.
ಎನಗಿದೇ ನಿಶ್ಚಯ, ನಿಃಕಳಂಕ ಮಲ್ಲಿಕಾರ್ಜುನಾ. ||೭೦||

೧೪೮೯

ಅಹುದಹುದು, ಮಹಾಂತಿನ ಮನ ಎಲ್ಲರಿಗೆಲ್ಲಿಯದೊ ?
ಆ ಚಿದ್ರೂಪ ಚಿನ್ಮಯನ ಅನುವನರಿಯದೆ,
ಮಹಾಂತಿನ ಕೂಡಲಸಂಗದೇವರೆಂಬ ಮೂಕೊರೆಯರನೇನೆಂಬೆನಯ್ಯಾ ?
ಹಾಗದಾಸೆಗೆ ಶಿಲೆಯ ಮಾರುವ ಕಲ್ಲುಕಟಿಗರ, ದಾಯಾದ್ಯರ,
ಮಹಾಂತಿನ ಕೂಡಲದೇವರೆನಬಹುದೆ ?
ವೀರಶೈವದ ನಿರ್ಣಯವ ತಿಳಿಯರು.
ಭಕ್ತಿ ಜ್ಞಾನ ವೈರಾಗ್ಯದ ಆಚಾರದ ಅನುಭಾವದ ಅನುವನರಿಯರು.
ಆರುಸ್ಥಲದಂತಸ್ಥವನರಿಯರು.
ಮೂರುಸ್ಥಲದ ಮೂಲವ ಮುನ್ನವರಿಯರು.
ಭಕ್ತಿಗೆ ಆರಕ್ಷರದ ಆದ್ಯಂತವನರಿಯದ ಮಂದಮತಿಗಳ
ಮಹಾಂತಿನ ಕೂಡಲದೇವರೆಂದು ನುಡಿವ ನರಕಿಜೀವಿಗಳ
ಮುಖವ ನೋಡಲಾಗದಯ್ಯಾ, ನಿಃಕಳಂಕ ಮಲ್ಲಿಕಾರ್ಜುನಾ. ||೭೧||

೧೪೯೦

ಅಳಿವರಿಗೆ ಉಳಿವು ಎಲ್ಲಿಯೂ ಇಲ್ಲವೆಂಬುದ ತಿಳಿ.
ಉಳಿವರಿಗೆ ಅಳಿವು ಎಲ್ಲಿಯೂ ಇಲ್ಲವೆಂಬುದ ತಿಳಿ.
ಈ ಅಳಿವು ಉಳಿವು ಎಂಬುಭಯವನೇನೆಂಬುದ ತಿಳಿ.
ತಿಳಿದ ಮತ್ತೆ ನಿಃಕಳಂಕ ಮಲ್ಲಿಕಾರ್ಜುನನ ಏನೂ ಇಲ್ಲವೆಂಬುದ ತಿಳಿ. ||೭೨||

೧೪೯೧

ಆಕಾಶದಲಾಡುವ ಪಕ್ಷಿ, ಆಕಾಶವ ನುಂಗಿ,
ಮಹದಾಕಾಶದಲ್ಲಿ ಆಡುತ್ತಿದ್ದಿತ್ತು.

ಆ ಆಡುವ ಪಕ್ಷಿಯ, ಪಕ್ಷಿಯೊಳಗಾದ ಆಕಾಶವ,
ಪಕ್ಷಿಗೆ ತೆರಪುಗೊಟ್ಟ ಮಹದಾಕಾಶವ,
ಒಂದು ಸಂಖ್ಯೆಯಲ್ಲಿ ಒಡಗೂಡಿ, ಷಡ್ಭಾಗವಾದ ಕುಕ್ಕುಟನ ಕೊರಳು ನುಂಗಿತ್ತು.
ನಿಃಕಳಂಕ ಮಲ್ಲಿಕಾರ್ಜುನಾ. || ೭೩ ||

೧೪೯೨

ಆಕಾಶದಲ್ಲಿ ಗುಡುಗಿ ಅಡಗುವ ಭೇದವ, ಮಿಂಚಿನ ಹರಿವ ಸಂಚಾರವ
ಅದರ ಸಂಚವನಂಜಿಸುವ ಭೇದವ ಮುಂಚೆ ಬಲ್ಲಡೆ,
ವಸ್ತುವಿಪ್ಪೆಡೆಯ ಸಂಚವ ಬಲ್ಲರೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೪ ||

೧೪೯೩

ಆಕಾಶ ಸತ್ತಿತ್ತು, ಬಯಲು ಅತ್ತಿತ್ತು, ವಾಯು ಹೊತ್ತಿತ್ತು,
ಬೆಂಕಿ ಸತ್ತ ಠಾವಿನಲ್ಲಿ ಸುಟ್ಟಿತ್ತು.
ಕೈಯಿಲ್ಲದ ಮೋಟ ಹಿಡಿ ಖಂಡವ ಕೊಯ್ವ.
ನಾಲಗೆಯಿಲ್ಲದೆ ಬಾಯಲ್ಲಿ ಮೆದ್ದು,
ಪರಿಣಾಮವಿಲ್ಲದ ಸಂತೋಷಿಯಾದನಯ್ಯಾ, ಆ ಶರಣ.
ಆತನ ಇರವು, ಇಹದಲ್ಲಿ ಅಜ್ಞಾನಿ, ಪರದಲ್ಲಿ ಸುಜ್ಞಾನಿ.
ಇಹಪರವೆಂಬ ಸಂದನಳಿದಲ್ಲದೆ ಲಿಂಗವಂತನಲ್ಲ.
ಲಿಂಗ ಪ್ರಾಣದ ಮೇಲೆ ನಿಂದುದಕ್ಕೆ ಸಾಕ್ಷಿ:
ಉರಿ ಕೊಂಡ ಕರ್ಪುರದಂತೆ, ವಿಷ ಕೊಂಡ ಘಟದಂತೆ
ಘಟ ಕೊಂಡ ಸೂತ್ರದಂತೆ, ಶೌರ್ಯ ಕೊಂಡ ಪ್ರತಾಪದಂತೆ.
ಹಾಂಗಿರಬೇಕು ಮನ.
ಲಿಂಗ ಕೊಂಡ ಮನಕ್ಕೆ ಇದೇ ದೃಷ್ಟ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸ್ವಾನುಭಾವಿಗೆ. || ೭೫ ||

೧೪೯೪

ಆ ಖಂಡವ ಕೊಯ್ದು ಉಂಡವ ಭಕ್ತ, ಕೊಂಡವ ಮಾಹೇಶ್ವರ.
ಕೊಂಡವನ ಕೊಂದು, ಖಂಡವ ಕೊಯ್ವವ ಪ್ರಸಾದಿ.
ಅದರ ಸಂದ ಮುರಿದವ ಪ್ರಾಣಲಿಂಗಿ.
ಆನಂದಿಸಿದವನ ಕೊಂದು ಹಿಂಡೆಯ ಕೂಳನುಂಡವ ಶರಣೈಕ್ಯ.
ಇವರಂದವ ಐಕ್ಯವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೭೬ ||

೧೪೯೫

ಆಗಮವನರಿವಲ್ಲಿ ಆಗುಚೇಗೆಯನರಿಯಬೇಕು.
ಶಾಸ್ತ್ರವನರಿವಲ್ಲಿ ಸಾಪನರಿಯಬೇಕು.

ಪುರಾಣವನರಿದಲ್ಲಿ ಪುಂಡರ ಸಂಗವ ಹರಿಯಬೇಕು.
ಇಂತಿವನರಿದ ಚಿತ್ತಶುದ್ಧಂಗಲ್ಲದೆ ಸನ್ಮತವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೭೭ ||

೧೪೯೬

ಆಚಾರ ಅನುಸರಣೆಯಾದಲ್ಲಿ, ಲಿಂಗ ಬಾಹ್ಯವಾದಲ್ಲಿ,
ತನ್ನ ವ್ರತ ನೇಮಕ್ಕೆ ಅನುಕೂಲವಾಗದೆ ಭಿನ್ನಭಾವಿಗಳಾದಲ್ಲಿ,
ಸತಿ ಸುತ ಪಿತ ಮಾತೆ ಸರ್ವಚೇತನ ಬಂಧುಗಳಾದಡೂ
ಗುರು ಲಿಂಗ ಜಂಗಮವಾದಡೂ ಒಪ್ಪೆನು.
ಇದಿರಿಂಗೆ ದೃಷ್ಟವ ತೋರಿ, ಪರಕ್ಕೆ ಕೊಂಡುಹೋದೆಹೆನೆಂದಡೂ
ಆ ಕೈಲಾಸ ಎನಗೆ ಬೇಡ.
ಆಚಾರಕ್ಕೆ ಅನುಸರಣೆಯಿಲ್ಲದೆ, ನೇಮಕ್ಕೆ ಕುಟಿಲವಿಲ್ಲದೆ ನಿಂದ
ಸದ್ಭಕ್ತನ ಬಾಗಿಲ, ಬಚ್ಚಲ ಕಲ್ಲೆ,
ಎನಗೆ ನಿಶ್ಚಯದ ಕೈಲಾಸ, ನಿಃಕಳಂಕ ಮಲ್ಲಿಕಾರ್ಜುನಾ. || ೭೮ ||

೧೪೯೭

ಆಚಾರಗುರು, ಸಮಯಗುರು, ಜ್ಞಾನಗುರು.
ಆಚಾರಗುರು ಬ್ರಹ್ಮಕಲ್ಪವ ತೊಡೆಯಬೇಕು.
ಸಮಯಗುರು ವಿಷ್ಣುವಿನ ಸ್ಥಿತಿಯ ಹರಿಯಬೇಕು.
ಜ್ಞಾನಗುರು ಉತ್ಪತ್ಯಸ್ಥಿತಿಲಯ ಮೂರನೂ ಕಳೆಯಬೇಕು.
ಇಂತೀ ತ್ರಿವಿಧಗುರು ಏಕವಾದಲ್ಲಿ,
ಸದ್ಗುರು ಮದ್ಗುರು ಮಹಾಗುರುವೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೯ ||

೧೪೯೮

ಆಡುವಂಗೆ ಅವಧಾನ ಆಭಾಸಾಂಗವಲ್ಲದೆ
ನೋಡುವಂಗೆ ಚೋದ್ಯವಪ್ಪಂತೆ,
ಈ ಉಭಯವನೊಡಗೂಡಿದ ಭೇದದ ನೋಡಾ.
ಕೈಯಲ್ಲಿ ಅಡಗುವಾಗ ಕಲ್ಲಲ್ಲ.
ಮನದಲ್ಲಿ ಒಡಗೂಡಿ ಸುಳಿವಾಗ ಗಾಳಿಯಲ್ಲ.
ಏನೂ ಎನ್ನದೆ ಇಹಾಗ ಬಯಲಲ್ಲ.
ಎಲ್ಲಿ ತನ್ನನರಿದಲ್ಲಿಯೆ ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೮೦ ||

೧೪೯೯

ಆಡುವ ಆಟವು ತಪ್ಪಿದ ಮತ್ತೆ
ಆಟದವನ ಮನಸ್ಸಿಂಗೆ ಕಿಂಕಿಲದೋರಿ, ಮತ್ತೆ ಒಡಬೇಕಲ್ಲದೆ,

ಅರಿದು ಮರೆದೆನೆಂಬ, ಮರೆದು ಮತ್ತರಿದೆನೆಂಬ
ಖಿಲ್ಲರ ನೋಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೮೧ ||

೧೫೦೦

ಆತ್ಮತೇಜಕ್ಕೆ ಬೀಗಿ ಬೆರೆದು, ಶಾಸ್ತ್ರದ ಸಂತೋಷಕ್ಕೆ ಸಾಧ್ಯವಾದಿಹಿತೆಂದು,
ವಚನದ ರಚನೆಗೆ ರಚಿಸಿದೆನೆಂದು,
ತರ್ಕಕ್ಕೆ ಹೊತ್ತುಹೋರುವನ್ನಕ್ಕರ ಗುರುವೆಂತಾದಿರೊ ?
ಘಟದ ಮಧ್ಯದಲ್ಲಿ ಪೂಜಿಸಿಕೊಂಬವನಾರೆಂದು ಅರಿಯದೆ,
ಫಲವ ಹೊತ್ತಿರ್ಪ ಮರನಂತೆ, ಕ್ಷೀರವ ಹೊತ್ತಿರ್ಪ ಕೆಚ್ಚಲಂತೆ,
ನಿನ್ನ ನೀನೆ ತಿಳಿದು ನೋಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೮೨ ||

೧೫೦೧

ಆತ್ಮತೇಜದಲ್ಲಿ ಪೂಜಿಸಿಕೊಂಬ ಹಿರಿಯರುಗಳೆಲ್ಲರೂ
ಕೆಟ್ಟು ಕೇಡ ನೋಡಾ.
ಅಂದಳ ಸತ್ತಿಗೆ ಕರಿ ತುರಗಂಗಳಿಂದ,
ನಾನಾ ಭೂಷಣ ಸುಗಂಧ ಸುಖದಿಂದ
ಮೆಚ್ಚಿ ಪೂಜಿಸಿಕೊಂಬ ಹಿರಿಯರೆಲ್ಲರೂ
ಬೋಧನೆಯ ಹೇಳಿ ಬೋಧಿಸಿಕೊಂಡುಂಬ ಹಿರಿಯರುಗಳೆಲ್ಲರೂ
ಹಿರಿಯರಲ್ಲದೆ ಕಿರಿಯರಾದವರಾರೂ ಇಲ್ಲ.
ಇದುಕಾರಣ, ಅಂಧಕನ ಕೈಯ ಅಂಧಕ ಹಿಡಿದಂತೆ.
ಹೆಣನ ಕಂಡಂಜುವಂಗೆ ರಣದ ಸುದ್ದಿಯೇಕೆ ?
ತನುಸುಖವ ಮೆಚ್ಚಿದ, ಗುರು ಮುಟ್ಟಿದ ಭಕ್ತಂಗೆ
ನಿಶ್ಚಯ ಹೇಳಲಾಗಿ, ಅವನಿಗಿನ್ನೆತ್ತಣ ಮುಕ್ತಿಯೊ,
ನಿಃಕಳಂಕ ಮಲ್ಲಿಕಾರ್ಜುನಾ ? || ೮೩ ||

೧೫೦೨

ಆತ್ಮತೇಜವ ಬಿಟ್ಟಾಗವೆ ಗುರುವನರಿದವ.
ಮನವಿಕಾರವ ಬಿಟ್ಟಾಗವೆ ಲಿಂಗವನರಿದವ.
ಧನವಿಕಾರವ ಬಿಟ್ಟಾಗವೆ ಜಂಗಮವನರಿದವ.
ಇಂತೀ ತ್ರಿವಿಧ ನಾಸ್ತಿಯಾದಂಗಲ್ಲದೆ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸಹಜಭಕ್ತನಲ್ಲ. || ೮೪ ||

೧೫೦೩

ಆತ್ಮನನರಿದೆಹೆವೆಂದು ಭೀಷ್ಮಿಸಿಕೊಂಡಿಪ್ಪ
ಜಗದಾಟ ತ್ರಿವಿಧ ಕಾಟದ ನೀತಿವಂತರು ಕೇಳಿರೊ.
ಆತ್ಮನ ಇರವು ಶ್ವೇತವೋ, ಹರೀತವೋ, ಕಪೋತವೋ, ಮಾಂಜಿಷ್ಠವೋ ?
ಕೃಷ್ಣಗೌರವ ಗಾತ್ರಕ್ಕೆ ಮೊದಲಾದ ಬಣ್ಣದ ವರ್ಣವೋ ?
ಇವೇಕೊ ? ಬಾಯಲ್ಲಿ ಆಡುವ ಮಾತಲ್ಲದೆ, ಭಾವಜ್ಞರನಾರನೂ ಕಾಣೆ.
ಆತ್ಮನ ಕಂಡವನ ಇರವು ಮುಕುರದೊಳಗಣ ಪ್ರತಿಬಿಂಬದಂತೆ,
ಶ್ರುತಿಯೊಳಗಡಗಿದ ಗತಿ ನಾದದಂತೆ, ಸುಖದೊಳಗಡಗಿದ ಪ್ರತಿರೂಪದಂತೆ.
ಇದರ ಎಸಕದ ಕುರುಹನರಿದವ ನೀನೋ, ಆತ್ಮನೋ ?
ಇದನೇನೆಂದು ಅರಿಯೆ.
ಭಾವಭ್ರಮೆಗೆ ದೂರ ಜ್ಞಾನ ನಿರ್ಲೇಪ,
ತಾನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೮೫ ||

೧೫೦೪

ಆತ್ಮ ಪೃಥ್ವಿಯ ಗುಣವೊ ? ಅಪ್ಪುವಿನ ಗುಣವೊ ?
ತೇಜದ ಗುಣವೊ ? ವಾಯುವಿನ ಗುಣವೊ ? ಆಕಾಶದ ಗುಣವೊ ?
ತನ್ನ ಸ್ವಬುದ್ಧಿಯೊ ? ಎಂಬುದ ತಿಳಿಯಬೇಕು,
ಆಧ್ಯಾತ್ಮವನರಿದೆಹೆನೆಂಬ ಲಿಂಗಾಂಗಿಗಳು.
ಅದು ಅಡಗಿ, ಉಡುಗಿಹ ಭೇದವನರಿದಡೆ,
ಅದೇ ಲಿಂಗೈಕ್ಯವು, ನಿಃಕಳಂಕ ಮಲ್ಲಿಕಾರ್ಜುನಾ. || ೮೬ ||

೧೫೦೫

ಆದ್ಯರ ವಚನವ ನೋಡಿ, ಓದಿ ಹೇಳಿದಲ್ಲಿ ಫಲವೇನಿ ಭೋ ?
ತನ್ನಂತೆ ವಚನವಿಲ್ಲ, ವಚನದಂತೆ ತಾನಿಲ್ಲ.
ನುಡಿಯಲ್ಲಿ ಅದ್ವೈತವ ನುಡಿದು, ನಡೆಯಲ್ಲಿ ಅಧಮರಾದಡೆ,
ಶಿವಶರಣರು ಮೆಚ್ಚುವರೆ ?
ಇದು ಕಾರಣ, ಅವರ ನಡೆನುಡಿ ಶುದ್ಧವಿಲ್ಲವಾಗಿ,
ಅವರಿಗೆ ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ವಿಭೂತಿ ರುದ್ರಾಕ್ಷಿ ಪಂಚಮ ಪಂಚಾಕ್ಷರವಿಲ್ಲ.
ಇಂತಿವಿಲ್ಲದೆ ಬರಿಯಮಾತಿನಲ್ಲಿ ಬೊಮ್ಮವ ನುಡಿವ
ಬ್ರಹ್ಮೇತಿಕಾರರ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನ. || ೮೭ ||

೧೫೦೬

ಆದಿ ಅನಾದಿ ಅಂತರಾದಿ ನಾದ ಬಿಂದು ಕಳೆ
ಸ್ಥೂಲ ಸೂಕ್ಷ್ಮ ಕಾರಣ ಆದಿ ಮಧ್ಯಾವಸಾನಂಗಳಲ್ಲಿ
ಜಗದಲ್ಲಿ ಸಾಧಿಸುತ್ತಿರ್ದ ಬೋಧರುಗಳು ನೀವು ಕೇಳಿರೊ.
ಅಭೇದ್ಯಲಿಂಗವ ಭೇದಿಸಿ ಸುಬುದ್ಧಿಯಿಂ ಕಂಡ ಪರಿ ಇನ್ನೆಂತೊ ?
ಮಾತಿನ ಮಾಲೆಯ ಕಲಿತು ಸಂತೆಯ ಹೋತಿನಂತೆ ಹೋರುವ
ತೂತಜ್ಞಾನಿಗಳಿಗಿನ್ನೇತರ ಭಕ್ತಿ ವಿರಕ್ತಿ, ನಿಃಕಳಂಕ ಮಲ್ಲಿಕಾರ್ಜುನಾ ? ॥ ೮೮ ॥

೧೫೦೭

ಆದಿ ಮಧ್ಯ ಅವಸಾನವ ತಿಳಿದು ಆತ್ಮನನೆಯ್ದುಬೇಕೆಂಬುದು
ಅದಾವ ಭಾವ ? ತಿಳಿದು ಹೇಳಿರಣ್ಣಾ.
ಆದಿಯ ತಿಳಿವುದು ಅದಾವ ಆತ್ಮ ?
ಮಧ್ಯವ ತಿಳಿವುದು ಅದಾವ ಆತ್ಮ ?
ಅವಸಾನವ ತಿಳಿವುದು ಅದಾವ ಆತ್ಮ ?
ಅದು ಅರುವೋ, ಮರವೆಯೋ ?
ಕೆಂಡ ಕೆಟ್ಟಡೆ ಹೊತ್ತುವುದಲ್ಲದೆ,
ದೀಪ ನಂದಿದ ಕಿಡಿ ತುಷ ಮಾತ್ರಕ್ಕೆ ಹೊತ್ತಿದುದುಂಟೆ ?
ಇಂತೀ ಆಧ್ಯಾತ್ಮವ ತಿಳಿದಲ್ಲಿ,
ಮೂರುಸ್ಥಲ ಮುಕ್ತ, ಉಭಯವಾರುಸ್ಥಲ ಭರಿತ.
ಮಿಕ್ಕಾದ ನೂರೊಂದೆಂದು ಗಾರಾಗಲೇತಕ್ಕೆ ?
ಪೂರ್ವದಲ್ಲಿ ನಿಂದು, ಉತ್ತರದಲ್ಲಿ ಒಂದೆಂದು,
ಸಲೆ ಸಂದಲ್ಲಿ ನಾನಾ ಸ್ಥಲ ಐಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. ॥ ೮೯ ॥

೧೫೦೮

ಆದಿಯನರಿದ ಮತ್ತೆ ಅನಾದಿಯಲ್ಲಿ ನಡೆವ ಪ್ರಪಂಚೇಕೆ ?
ಅನಾಗತವನರಿದ ಮತ್ತೆ ಅನ್ಯಾಯವಲ್ಲಿ ನಡೆವ ಗನ್ನವೇಕೆ ?
ಇಹಪರವೆಂಬುಭಯವನರಿದ ಮತ್ತೆ ಪರರ ಬೋಧಿಸಿ
ಒಡಿಯನಾದೆಹೆನೆಂಬ ಹೊರೆಯೇತಕ್ಕೆ ?
ಯೋಗಿಯಾದ ಮತ್ತೆ ರೋಗದಲ್ಲಿ ನೋಯಲೇತಕ್ಕೆ ?
ಆದಿಮಧ್ಯಾಂತವನರಿದ ಮತ್ತೆ ಸಾಯಸವೇಕೆ ಕರ್ಮದಲ್ಲಿ ?
ಇಂತೀ ಭೇದಕರಿಗೆ ಅಭೇದ್ಯ, ಅಪ್ರಮಾಣ ಅಭಿನ್ನನಾದ ಶರಣಂಗೆ
ನಮೋ ನಮೋ ಎಂದು ಬದುಕಿದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೯೦ ॥

೧೫೦೯

ಆದಿಶೂನ್ಯಲಿಂಗಕ್ಕೆ ಮಜ್ಜನವಾವುದು ?
ಕುಸುಮಭರಿತಲಿಂಗಕ್ಕೆ ಪೂಜೆ ಯಾವುದು ?
ಪರಿಪೂರ್ಣಲಿಂಗಕ್ಕೆ ನೈವೇದ್ಯವಾವುದು ?
ಅರ್ಪಿಸುವುದಕ್ಕೆ ಮುನ್ನವೆ ತೃಪ್ತಿಯಾದ ಮತ್ತೆ
ಮುಟ್ಟಿ ಕೊಡುವ ಠಾವಿನ್ನಾವುದೊ ?
ಅಟ್ಟ ಮಡಕೆಯ ನೆತ್ತಿಯ ಮೇಲೆ ಹೊತ್ತು ತಿರುಗುವವನಂತೆ,
ಹೊಟ್ಟೆಗೆ ಕಾಣದೆ ಇವರು ಕೆಟ್ಟ ಕೇಡ ನೋಡಿರೆ.
ಈ ಬಟ್ಟೆಯ ಮೆಟ್ಟದಂತೆ ಮಾಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೬೧ ||

೧೫೧೦

ಆನಂದಿಸಿ ಕಣ್ಣ ಮುಚ್ಚಿ ಆಹಾ ಎಂಬುದು ಆವೇಶಭಕ್ತಿ.
ತಲೆದೂಗಿ ಝುಂಪಿಸಿ ಅಂತಃಕರಣ ಕದಡಿ ಆನಂದಿಸುವುದು ಭಾವಭಕ್ತಿ.
ಬಿಂಬಿಸುವುದಕ್ಕೆ ಪ್ರತಿರೂಪಿಲ್ಲದೆ ಆನಂದ ಅಶ್ರುಗಳು ನಿಂದು,
ಮುತ್ತಿನೊಳಗಣ ಅಪ್ಪುವಿನಂತೆ ಹೆಪ್ಪಳಿಯದೆ ನಿಂದುದು ಜ್ಞಾನಭಕ್ತಿ.
ಇಂತೀ ತುರೀಯಾತುರೀಯವು ಏಕಚಿತ್ತವೆಂಬುದು ನಿಹಿತವಾದಲ್ಲಿ,
ಸ್ಥಲಲೇಪ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ. || ೬೨ ||

೧೫೧೧

ಆನೆ ಕುದುರೆ ಭಂಡಾರವಿರ್ದಡೇನೊ ?
ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ.
ಈ ಹುರುಳಿಲ್ಲದ ಸಿರಿಯ ನೆಚ್ಚಿ ಕೆಡಬೇಡ ಮನುಜಾ.
ಒಡಲು ಭೂಮಿಯ ಸಂಗ, ಒಡವೆ ತಾನೇನಪ್ಪುದೊ ?
ಕೈವಿಡಿದ ಮಡದಿ ಪರರ ಸಂಗ, ಪ್ರಾಣ ವಾಯುವಿನ ಸಂಗ.
ಸಾವಿಂಗೆ ಸಂಗಡವಾರೂ ಇಲ್ಲ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ. || ೬೩ ||

೧೫೧೨

ಆ ಮಹಾಂತಿನ ಘನವೆಂತೆಂದಡೆ, ಹೇಳಿಹೆ ಕೇಳಿರಣ್ಣಾ.
ನಿರ್ಮಾಯ ನಿಶ್ಚಿಂತ ನಿರ್ಗಮನ ನಿರುಪಮ ನಿರ್ಮೋಹಿ
ನಿರ್ಲೇಪ ನಿಃಕಳಂಕ ನಿರ್ದೇಹಿ ನಿರಂಜನ ಪರಶಿವನು.
ಅಂತಪ್ಪ ಶಿವನ ಕೂಡಿದಾತನೆಂತಿಹನೆಂದಡೆ,
ನಡೆವುದು ಶಿವಮಾರ್ಗ, ನುಡಿವುದು ಶಿವಾನುಭಾವ.
ಮಹಾನುಭಾವಿಗಳ ಸಂಭಾಷಣೆ,

ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಶಿವಮಂತ್ರದೊಡನೆ ಕೂಡಿದ ಮಹಾತ್ಮನೆ
ಮಹಾಂತಿನ ಕೂಡಲದೇವರೆಂಬೆನಯ್ಯಾ.
ಉಳಿದ ಪಶು ಪ್ರಾಣಿಗಳ ಹುಸಿಯೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೯೪ ||

೧೫೧೩

ಅರುದರುಶನದೊಡೆಯನ ಅಂತರಂಗದೊಳಿಪ್ಪ
ಅರಿಗಾದಡೆ[ಯೂ] ಗಗನ ಭುವನವೊಂದೆ ಎಂದುದಾಗಿ,
ಮಹಾಬಯಲು ಕಡಿದು ಎರಡ ಮಾಡಿಹೆನೆಂದು, ಆ ಬಯಲು ಎರಡಹುದೆ ?
ಅಣುರೇಣು [ತೃಣಕಾಷ್ಠ] ಮಧ್ಯ ಗುಣಭರಿತ ಅಖಂಡ ಬ್ರಹ್ಮವ
ಪ್ರಾದೇಶಿಕ ಪರಿಚ್ಛಿನ್ನವೆಂದು ನುಡಿಯಲುಂಟೆ
ನಿಃಕಳಂಕ ಮಲ್ಲಿಕಾರ್ಜುನಾ ? || ೯೫ ||

೧೫೧೪

ಅರೂಢನಾಗಿ ತಿರುಗಿ, ಮೂಢರ ಬಾಗಿಲಲ್ಲಿ ನಿಂದು,
ಬೇಡಲೇಕೆ ಭಿಕ್ಷವ ? ಕಾಡಲೇಕೆ ಮರ್ತ್ಯರ ?
ರೂಢಿಯೊಳಗೆ ಸಿಕ್ಕಿ ಅಡುವಂಗೆ, ಆ ರೂಢಿ ಬೇಡಾ ಎಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೯೬ ||

೧೫೧೫

ಆರೂಢನಾದ ಮತ್ತೆ, ರೂಢಿಯ ಅವತಾರವ ಹೊರಲೇಕೊ ?
[ಕೋಡಗ] ಕಂಡಕಂಡವರಲ್ಲಿ ಓಂಡಿನೊಳಗೆ ಹೊಕ್ಕು,
ಬಂಡುಗೆಡೆಯಲೇತಕ್ಕೋ ?
ಈ ಅಂದಗಾರ ಅಣ್ಣಗಳ ಕಂಡು ಭಂಡಾದಿರಯ್ಯಾ.
ಅರ್ತಿಗೆಯಾಡುವ ಸತ್ಯವಂತರಿಗಿನ್ನೆತ್ತಣ ಮುಕ್ತಿಯೊ,
ನಿಃಕಳಂಕ ಮಲ್ಲಿಕಾರ್ಜುನಾ ? || ೯೭ ||

೧೫೧೬

ಆ ಲಿಂಗಸ್ಥಲ ಭಾವ[ಸ್ವ]ರೂಪವಾದಲ್ಲಿ,
ಪ್ರಾಣಲಿಂಗಿ ಶರಣ ಐಕ್ಯನೆಂಬೀ ತ್ರಿವಿಧವ ತಾಳ್ದು,
ಮೂರ್ತಿ ಕುರುಹುಗೊಂಬಲ್ಲಿ,
ನಾನಾ ಮಧುರ[ರ]ಸವಂಡ ವೃಕ್ಷಂಗಳಲ್ಲಿ, ಮಿಕ್ಕಾದ ಲತೆ ಪಚ್ಚೆ ಪೈರುಗಳಲ್ಲಿ,
ಕುಸುಮ ಗಂಧ ಮೃಗಗಂಧಗಳು ಮುಂತಾದ
ಸ್ಥಾವರ ಸುಗಂಧ ಸುವಾಸನೆಗಳಿಗೆಲ್ಲಕ್ಕೂ

ತದ್ರೂಪಿಂಗೆ ಹಿಂಗದಂತೆ ಬಂದೊದಗಿ, ಸಂಗದಂತೆ ಕುರುಹುಗೊಂಡೆಯಲ್ಲಾ.
ಕಾಯದ ಜೀವದ ಉಭಯದ ಮಧ್ಯದಲ್ಲಿ ನಿಂದು,
ದೇವಾನಾದೆಯಲ್ಲಾ ನಿನ್ನ ಲೀಲೆ ಕಾರಣವಾಗಿ.
ಸಂದೇಹಿಗಳಿಗೆ ಸಂಕಲ್ಪಿಯಾಗಿ, ನಿರಂಗಿಗೆ ನಿರಾಲಂಬನಾಗಿ,
ಸಮ್ಯಕ್‌ಜ್ಞಾನ ಮುಕುರದಂತೆ ಸಂಬಂಧಿಸಿದೆಯಲ್ಲಾ.
ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ, ನಿನ್ನಿರವ ನೀನೇ ಬಲ್ಲೆ. || ೯೮ ||

೧೫೧೭

ಆವಾವ ವಸ್ತು ತನ್ನ ಸ್ಥಾನದಲ್ಲಿ ರಿತುಕಾಲ ತುಂಬುವನ್ನಕ್ಕ.
ಫಲ ಕುಸುಮ ಚಂದನ ಸುಗಂಧ ಮುಂತಾದ ಲೌಕಿಕ ರತ್ನಂಗಳು
ಕುಲಸ್ಥಾನವಂ ಬಿಟ್ಟು ಯೋಗ್ಯವಾದಂತೆ,
ಸ್ಥಲ ಬಂಧದಲ್ಲಿ ಬಲಿದು, ಕಳೆದುಳಿದ ಮತ್ತೆ
ಆರು ಮೂರು ಇಪ್ಪತ್ತೈದು ನೂರೊಂದು ಅವು ಕೂಡಿದವಲ್ಲ,
ನಿಃಕಳಂಕ ಮಲ್ಲಿಕಾರ್ಜುನನನಾರೆಂದರಿದಲ್ಲಿಯೆ. || ೯೯ ||

೧೫೧೮

ಆವಾವ ವಿಶ್ವಾಸದಲ್ಲಿ, ಭಕ್ತಿಯ ಮಾಡುವಲ್ಲಿ,
ಸತಿ ಸುತ ಬಂಧುಗಳು ಮುಂತಾದ ಬಂಧಿತವಳಯವೆಲ್ಲವೂ
ಭಕ್ತಿಗೆ ಏಕರೂಪವಾಗಿ, ಸತ್ಯಕ್ಕೆ ನಿಜರೂಪಾಗಿ.
ಕೃತ್ಯಕ್ಕೆ ತಪ್ಪುವರಲ್ಲದೆ, ವಸ್ತು ಭಾವದಲ್ಲಿ ತಪ್ಪದೆ ಇದ್ದಾತನ ಭಕ್ತಿ,
ನಿಃಕಳಂಕ ಮಲ್ಲಿಕಾರ್ಜುನನ ನಿಶ್ಚಯದ ನಿಜನಿವಾಸ. || ೧೦೦ ||

೧೫೧೯

ಆವಾವ ಸ್ಥಲಂಗಳನಾದರಿಸಿ ನಡೆವಲ್ಲಿ,
ಆ ಘಟನೆ ಬೀಗವಾಗಿ ಎಸಳೆ ಆತ್ಮವಾಗಿ, ಅರಿವೆ ಕೈಯಾಗಿ,
ಸ್ವಸ್ಥ ಘಟಕ್ಕೆ, ಸ್ವಸ್ಥ ಕೈಗಳಿಂದ ಸಿಕ್ಕು ಹರಿವುದಲ್ಲದೆ,
ಮತ್ತೊಂದು ಕೈಯಿಕ್ಕಿ ತುಡುಕಿದಡೆ ಬಿಟ್ಟುದುಂಟೆ ಆ ಸಿಕ್ಕು ?
ಇಂತೀ ಕ್ರೀಯಲ್ಲಿ ಕ್ರೀಯ ಕಂಡು, ಭಾವದಲ್ಲಿ ಭ್ರಮೆ ಹಿಂಗಿ,
ಜ್ಞಾನದಲ್ಲಿ ಸಂಚವಿಲ್ಲದೆ ನಿಂದ ನಿಲವು,
ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೆ. || ೧೦೧ ||

೧೫೨೦

ಆಳಿನಪಮಾನ ಅಳ್ದಂಗೆ[ಂ]ದಲ್ಲಿ, ಆಳ್ದನಪಮಾನ ಆಳಿ[ಂ]ಗೆ ಬಂದಲ್ಲಿ,
ಉಭಯದ ನೋವು ಒಂದೆಂದು ತಿಳಿದಲ್ಲಿ,

ಕರ್ತನ ಭೃತ್ಯ ನುಡಿದನೆಂದು ಹೊತ್ತುಹೋರಲೇತಕ್ಕೆ ?
ತನ್ನ ಮನೆ ಬೇವಲ್ಲಿ ಕೆಡಹಿ ಕಿತ್ತಡೆ ಕೇಡೆ ?
ನಾನೊಡೆಯ, ತುಡುಗುಣಿಯ ಸವಿತ.
[ಅವ]ನೊಡೆಯನಲ್ಲ, ನಾನಡಿಗನಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೧೦೨ ||

೧೫೨೧

ಆಳು ಸಿಕ್ಕಿದಲ್ಲಿ ಕೈಮುಪಿನ ಒರೆಯ ತೆಗೆಯಬೇಕಲ್ಲದೆ,
ಅವಧಿಗೆ ಬಂದಲ್ಲಿ ಒದಗಬೇಕಲ್ಲದೆ,
ಬಯಲ ಚಿಪ್ಪಿರಿದು ಬೆಲ್ಲವ ಮೆದ್ದೆನೆಂದಡೆ ಮೆಚ್ಚುವರೆ ?
ಗೆಲ್ಲದ ಜೂಜು, ಕೊಲ್ಲದ ಅರಿಗಳ ಬಲ್ಲವರು ಮೆಚ್ಚುವರೆ ?
ಸೊಲ್ಲಿನ ಮಾತಿಂಗೆ ನೆರೆ ಬಲ್ಲವರು ಸಿಕ್ಕುವಡೆ, ಗೆಲ್ಲ ಗೂಳಿತನವೆ ?
ಬರಿಯ ಚೀರದ ಪಸರಕ್ಕೆ ಲಲ್ಲೆಯ ಮಾತೇ
ಒಳ್ಳಿಹ ನಿಃಕಳಂಕ ಮಲ್ಲಿಕಾರ್ಜುನನ ಸಂಗ. || ೧೦೩ ||

೧೫೨೨

ಇಂತೀ ಗುರುಸ್ಥಲವ ಲಿಂಗಸ್ಥಲವ, ಅಂಗೀಕರಿಸಿ ನಿಂದ ಶರಣನ ಇರವು
ವಾಯುವಿನ ಕೈಯ ಗಂಧದಂತೆ,
ಸಾವಯ ನಿರವಯವ ಭೇದಿಸುವ ಸುನಾದದಂತೆ,
ಅದ್ರಿಯ ಮುಸುಕಿದ ಮುಗಿಲ ರಂಜನೆಯ ಸಂದೇಹದ ನಿರಂಜನದಂತೆ,
ಅಂಬುಧಿಯ ಚಂದ್ರನ ಪೂರ್ಣದ ಬೆಂಬಳಿಯಂತೆ.
ಇಂತೀ ನಿಸ್ಸಂಗದಲ್ಲಿ ಸುಸಂಗಿಯಾದ ಐಕ್ಯಂಗೆ,
ಬಂಧ ಮೋಕ್ಷ ಕರ್ಮಂಗಳೆಂದು ಸಂದೇಹವಿಲ್ಲ,
ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ. || ೧೦೪ ||

೧೫೨೩

ಇಂದ್ರಿಯಂಗಳ ಕಟ್ಟಿ, ವಸ್ತುವನರಿಯದೆಹೆನೆಂದಡೆ, ಕರೆವ ಹಸುವಲ್ಲ.
ಇಂದ್ರಿಯಂಗಳ ಬಿಟ್ಟು, ವಸ್ತುವನರಿದೆಹೆನೆಂದಡೆ, ಬಿಡಾಡಿಯಲ್ಲ.
ವಸ್ತುವನರಿವುದಕ್ಕೆ ಎರಡಳಿದು ಒಂದುಳಿಯಬೇಕು,
ಆ ಸಂಧಿಯ ಬೆಸುಗೆಯಲ್ಲಿ ನಿಂದಿರ್ದವನ ಅಂದವ ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೧೦೫ ||

೧೫೨೪

ಇಕ್ಕುವುದಕ್ಕೆ ಮುನ್ನವೆ ಬಾಯಾರಿ,
ಕೊಡುವುದಕ್ಕೆ ಮುನ್ನವೆ ಕೈಯಾಂತು ಮತ್ತೇಕೆ ?

ಮಾತಿನ ಮಾಲೆಯ ತೂತರುಗಳ ಕಂಡು,
ನಿರ್ಜಾತನಡಗಿದ, ನಿಃಕಳಂಕ ಮಲ್ಲಿಕಾರ್ಜುನಾ. || ೧೦೬ ||

೧೫೨೫

ಇಡಾ ಪಿಂಗಳ ಸುಷಮ್ನನಾಳ ನಾಡಿಗಳಲ್ಲಿ,
ಆತ್ಮನು ಸಂಚರಿಸಬಾರದೆಂಬ ಯೋಗಾಂಗದ ಅಣ್ಣಗಳು ಕೇಳಿರಯ್ಯಾ.
ಆ ವಾಯುವನಧೋಮುಖಕ್ಕೆ ತರಬಾರದೆಂದು,
ಊರ್ಧ್ವಮುಖಕ್ಕೆ ತಂದು, ಅಮೃತವನುಂಡೆಹೆನೆಂಬ
ಅಷ್ಟಾಂಗಕರ್ಮಿಗಳು ಕೇಳಿರೊ.
ಶರೀರದಲ್ಲಿ ಶುಕ್ಲ ಶೋಣಿತ ಮಜ್ಜೆ ಮಾಂಸ ಇವರೊಳಗಾದ
ಸಾಕಾರದ ತಲೆಯಲ್ಲಿ ನಿರಾಕಾರದ ಅಮೃತವ ಉಂಡೆಹೆನೆಂಬುದು ಹುಸಿಯಲ್ಲವೆ ?
ಬಂಜೆಯಾವಿಂಗೆ ಕ್ಷೀರದ ಕೆಚ್ಚಲುಂಟೆ ?
ಕಲ್ಲಿನ ಹಳ್ಳದಲ್ಲಿ ಚಿಲುಮೆಯ ಸಾರವುಂಟೆ ?
ಹೊಲ್ಲಹ ದೇಹದಲ್ಲಿ ನಲ್ಲಹ ಕ್ಷೀರವುಂಟೆ ?
ಇವನೆಲ್ಲವನರಿಯದೆ ಬಲ್ಲತನವ ಸೂರೆಗೊಟ್ಟು
ಗೆಲ್ಲಗೂಳಿಗೆಲ್ಲಿಯದೊ, ಲಿಂಗಾಂಗಸಂಯೋಗದ ಪರಿ ?
ಹರಿವ ವಾರಿಧಿಗೆ ನೊರೆ ಪಾಂಸೆ ಮುಸುಕುವುದೆ ?
ಸುಡುವ ಅನಲಂಗೆ ತೃಣದ ಕಟ್ಟು ನಿಲುವುದೆ ?
ಅರಿವ ಪರಂಜ್ಯೋತಿ ಪ್ರಕಾಶಂಗೆ ತನುವ ದಂಡಿಸಿ,
ಕಂಡೆಹೆನೆಂಬ ಭ್ರಾಂತೆಲ್ಲಿಯದೊ ?
ಆತನಿರವು ಘಟಮಠದೊಳಗೆ ಗೃಹಿಸಿರ್ಪ ಬಯಲಿನ ಇರವಿನಂತೆ
ರವಿಯೊಳಗೆ ಸೂಸುವ ಕಿರಣದಂತೆ, ವಾಯುವಿನ ಬೆಂಬಳಿಯ ಗಂಧದಂತೆ
ಬಿತ್ತಳಿದ ರಜ್ಜುವಿನ ತೈಲದ ಕುಡಿವೆಳಗಿನ ಕಳೆಯಂತೆ
ಭಾವದ ಮಧ್ಯದಲ್ಲಿ ನಿಂದ ಓಂಕಾರಸ್ವರೂಪವನರಿಯದೆ
ಕೆಟ್ಟರಲ್ಲ ಕರ್ಮಯೋಗಿಗಳು.
ಪಳುಕಿನ ಶಿಲೆಯ ತೆರದಲ್ಲಿ ನಿಂದ ವಾರಣದಂತೆ, ನಿನ್ನ ನೀ ತಿಳಿಯಾ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸರ್ವಾಂಗಭರಿತವಾದ ಶರಣ. || ೧೦೭ ||

೧೫೨೬

ಇದ್ದುದ ಇಲ್ಲದಲ್ಲಿ ನೋಡಲಿಕೆ ಅಲ್ಲಿಯೆ ಅಡಗಿತ್ತು.
ಇಲ್ಲದುದ ಇದ್ದುದೆಂದು ನೋಡಲಿಕಾಗಿ,
ಇದ್ದಲ್ಲಿಯೆ ತಲ್ಲೀಯವಾಯಿತ್ತು

ಇಂತು ಉಭಯವ ಕಡೆಗಾಣಿಸಲಾಗಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿಯೆ ಇದ್ದಿತ್ತು. ||೧೦೮||

೧೫೨೭

ಇನ್ನು ಕೇಳಿ ಅರಿದೆಹೆನೆಂಬಾಗ ಮುಂದಕ್ಕೆ ಮರವೆಯೆ ?
ಮುಂದನರಿದು ಹಿಂದೆ ಮರೆವಾಗ ಭೂತಕಾಯವೆ ?
ಹಿಂದಕ್ಕೂ ಮುಂದಕ್ಕೂ ಈ ದ್ವಂದ್ವ ಭೇದವ,
ಇದರಂದವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. ||೧೦೯||

೧೫೨೮

ಇನ್ನೇನಹುದೆಂಬೆ, ಇನ್ನೇನಲ್ಲೆಂಬೆ, ಎಲ್ಲಾಮಯವು ನೀನಾಗಿ ?
ಹಿರಿದಹ ಗಿರಿಯ ಹತ್ತಿ, ಬಿದಿರೆಲೆಯ ತರಿದ[ವ]ನಂತೆ,
ಒಂದ ಬಿಟ್ಟೊಂದ ಹಿಡಿದಡೆ ಅದೆಲ್ಲಿಯ ಚಂದ ?
ಹಿಂಗುವುದಕ್ಕೆ ಠಾವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೧೧೦||

೧೫೨೯

ಇರಿ ಎಂಬುದಕ್ಕೆ ಮುನ್ನವೆ ಒಡಲು ಹರಿಯಿತ್ತೆ ?
ಮಾತನಾಡುವುದಕ್ಕೆ ಮುನ್ನವೆ ಮನ ಸಂದಿತ್ತೆ ?
ಕಲ್ಪತರುವಿನ ನಾಮವ ಹಡೆದ ದುತ್ತೂರದಂತೆ,
ಭಕ್ತ ವಿರಕ್ತರೆಂದಡೆ ಸತ್ಯರಪ್ಪರೆ ?
ಅದು ನಿಶ್ಚಯವಲ್ಲ, ನಿಃಕಳಂಕ ಮಲ್ಲಿಕಾರ್ಜುನೊಪ್ಪದ ಮಾತು. ||೧೧೧||

೧೫೩೦

ಇರಿವ ಅಸಿ, ನೋವ ಬಲ್ಲುದೆ ?
ಬೇಡುವಾತ ರುಜವ ಬಲ್ಲನೆ ?
ಕಾಡುವ ಕಾಳುಮೂಳರ ವಿಧಿ ಎನಗಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೧೧೨||

೧೫೩೧

ಇರುವೆ ಆನೆಯ ನುಂಗಿತ್ತು, ಹೊಟ್ಟೆಗೆಯ್ದದೆ ಮಿಕ್ಕುವರ ನುಂಗಿತ್ತು.
ಮತ್ತೊಂದು ಗಜ ಒತ್ತಿ ಬರಲಾಗಿ ಕಚ್ಚಿತ್ತು.
ಕಚ್ಚಿದ ವಿಷ ತಾಗಿ ಮತ್ತನಾಗಿ ಬಿದ್ದಿತ್ತು.
ನಾಗಾಲಡಿಯಾಗಿ ಆನೆಯುದೆ
ತಾನುಳಿದ ಪರಿಯ ನೋಡಾ.
ಈ ವಸ್ತುವನ್ನೇನೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೧೩||

೧೫೩೨

ಇಷ್ಟಲಿಂಗಕ್ಕವಿರ್ತದ ಭಾಜನದೆಂದು,
ತುತ್ತ ನುಂಗವುದಕ್ಕೊಂದು ಮಿಥ್ಯದ ಭಾಜನದೆಂದು,
ಈ ಅಚ್ಚುಗದಲ್ಲಿ ಬಿದ್ದು ಸಾವರಿಗೆತ್ತಣ ಲಿಂಗಾರ್ಪಿತ ?
ಮಜ್ಜನ ಮಲಿನ ಹೊದ್ದಿಹ ಸುಖ ಶೃಂಗಾರ, ಇವರೊಳಗೆ ವರ್ಜಿತವೆಂದೆ.
ಲಿಂಗಕ್ಕೊಂದು ಹಂಗು, ತಾನುಂಬದಕ್ಕೆ ಒಂದು ಹಂಗು,
ಇದರಂದವನರಿಯದೆ ಬೆಳದಿಂಗಳಲ್ಲಿ ನಿಂದು, ಹೆಂಡವ ಕೊಂಡವನಂತೆ
ಲಿಂಗದ ಸಂದನೇನ ಬಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೧೧೪||

೧೫೩೩

ಇಷ್ಟಲಿಂಗದಲ್ಲಿ ಮುಟ್ಟುತಟ್ಟು ಬಲ್ಲವಂಗೆ
ಕಷ್ಟನಿದ್ರೆಯ ಮುಟ್ಟುವ ಭೇದವ, ತಟ್ಟುವ ಪರಿಯಿನ್ನೆಂತುಟೋ ?
ಇಂತಿವರು ಮುಟ್ಟರು, ಅರಿಯರು, ನಿಶ್ಚಯದ ನಿಜ ಏಕತ್ವವನರಿಯರು.
ಇವರಿಷ್ಟಲಿಂಗವ ಮುಟ್ಟಿ ಪೂಜಿಸಲೇಕೆ, ನಿಃಕಳಂಕ ಮಲ್ಲಿಕಾರ್ಜುನಾ ? ||೧೧೫||

೧೫೩೪

ಇಷ್ಟಲಿಂಗ ನಿದ್ರೆಯಲ್ಲಿ ಸೃಷ್ಟಿಯ ಮೇಲೆ ಬಿದ್ದು ಹೊರಳುವಾಗ,
ನಿಷ್ಠಾವಂತರೆಂತಾದಿರೊ ?
ಅದು ನಿಮಗೆ ಇಷ್ಟಲಿಂಗವೊ, ಪ್ರಾಣಲಿಂಗವೊ ?
ಕಟ್ಟಿದವನ ಕೈಯ ಕೇಳಿಕೊಳ್ಳಿ.
ಹೀಂಗಲ್ಲದೆ, ಬಟ್ಟಗುತ್ತತನಕ್ಕೆ ಹೋರುವ ಭ್ರಷ್ಟಭಂಡರನೇನೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. ||೧೧೬||

೧೫೩೫

ಇಷ್ಟಲಿಂಗವನರ್ಚಿಸುವನ ಇರವು,
ಹೇಮಾಚಲದ ಶಿಲೆಯಂತಿರಬೇಕು.
ಕುಸುಮದ ಅಪ್ಪುವಿನ ಸ್ನೇಹದಂತಿರಬೇಕು,
ಅಯಕಾಂತದ ಶಿಲೆ ಲೋಹದಂತಿರಬೇಕು,
ಅಣುವಿನನೊಳಗಣ ನೇಣಿನಂತಿರಬೇಕು.
ಇಷ್ಟಕ್ಕೂ ಪ್ರಾಣಕ್ಕೂ ತತ್ತುಗೊತ್ತಿಲ್ಲದೆ ಬೆಚ್ಚಂತಿರಬಲ್ಲಡೆ,
ಆತನೇ ಇಷ್ಟ ಪ್ರಾಣ ತೃಪ್ತಿವಂತನೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೧೭||

೧೫೩೬

ಇಷ್ಟಲಿಂಗವನರಿದು ಪೂಜೆಯ ಮಾಡಿ,
ಪ್ರಾಣಲಿಂಗವನರಿದು ಪಥ್ಯವ ಕೊಂಡು,

ಜಂಗಮವಾದೆವೆಂಬ ಮಿಥ್ಯತಥ್ಯದ ಅಣ್ಣಗಳು ಕೇಳಿರೊ.
ಕೊಟ್ಟಾತ ಗುರು, ಕೊಂಡಾತ ಶಿಷ್ಯನೆಂದು
ಜಗದಲ್ಲಿ ಅಂದಗಾರಿಕೆಯಲ್ಲಿ ನಡೆವ ಭಂಡರಿಗೇಕೆ ಲಿಂಗಾಂಗ,
ನಿಃಕಳಂಕ ಮಲ್ಲಿಕಾರ್ಜುನಾ. || ೧೧೮ ||

೧೫೩೭

ಇಷ್ಟಲಿಂಗದಂಗ ಭಕ್ತಿಸ್ಥಲ, ಭಾವಲಿಂಗದಂಗ ಮಹೇಶ್ವರಸ್ಥಲ,
ಪ್ರಾಣಲಿಂಗದಂಗ ಪ್ರಸಾದಿಸ್ಥಲ, ಶರಣಸ್ಥಲದಂಗ ಐಕ್ಯಸ್ಥಲ.
ಐಕ್ಯಸ್ಥಲದಂಗ ಅಭೇದ್ಯಸ್ಥಲದಂಗ.
ಇಂತೀ ಉಭಯವಳಿದ ನಿರಂಗಂಗೆ ಸ್ಥಲ ಕುಳ ಲೇಪವಾಯಿತ್ತು.
ನಿಃಕಳಂಕ ಮಲ್ಲಿಕಾರ್ಜುನಾ. || ೧೧೯ ||

೧೫೩೮

ಇಷ್ಟಲಿಂಗಸಂಬಂಧ, ಭಾವಲಿಂಗಸಂಬಂಧ,
ಪ್ರಾಣಲಿಂಗಸಂಬಂಧವೆಂದು ಭಾವಿಸಿ ಕಲ್ಪಿಸುವಾಗ,
ಅಂಗದ ಮರೆಯ ಇಷ್ಟ, ಇಷ್ಟದ ಮರೆಯ ಭಾವ,
ಭಾವದ ಮರೆಯ ಪ್ರಾಣ, ಪ್ರಾಣದ ಮರೆಯ ಜ್ಞಾನ,
ಇಂತೀ ಗುಣಂಗಳ ಏಕವ ಮಾಡಿ,
ಉಭಯ ದೃಷ್ಟಕ್ಕೆ ಒಡಲಿಲ್ಲದೆ ನಿಂದ ನಿಜ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೧೨೦ ||

೧೫೩೯

ಇಷ್ಟಲಿಂಗಸಂಬಂಧಿಗಳು ಭಕ್ತಿಸ್ಥಲವನರಿಯರು.
ಪ್ರಾಣಲಿಂಗಸಂಬಂಧಿಗಳು ಮಾಹೇಶ್ವರಸ್ಥಲವನರಿಯರು.
ಪ್ರಸಾದಲಿಂಗಸಂಬಂಧಿಗಳು ಪ್ರಾಣಲಿಂಗಸ್ಥಲವನರಿಯರು.
ಶರಣಸ್ಥಲಭರಿತರು ಪ್ರಾಣಲಿಂಗಸಂಬಂಧವನರಿಯರು.
ಐಕ್ಯ ನಿರ್ಲೇಪವಾದಲ್ಲಿ ಶರಣಸ್ಥಲ ನಿಂದಿತ್ತು.
ಇಂತೀ ಐದು ಸ್ಥಲವ ಆರೋಪಿಸಿ,
ಇದಿರಿಟ್ಟು ಕೂಡಿದಲ್ಲಿ ಆರುಸ್ಥಲವಾಯಿತ್ತು.
ಆರುಸ್ಥಲ ವೇಧಿಸಿ ನಿಂದಲ್ಲಿ, ನೀ ನಾನೆಂಬ ಭಾವ.
ಎಲ್ಲಿ ಅಡಗಿತ್ತು ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೧೨೧ ||

೧೫೪೦

ಇಷ್ಟಲಿಂಗವ ಹಿಡಿದು ಪೂಜೆಯ ಮಾಡುವಲ್ಲಿ,
ಕಷ್ಟಗುಣಕ್ಕೆ ಬಾರದಿರಬೇಕು.
ಪ್ರಾಣಲಿಂಗವನರಿದು ಭಾವಿಸಿದಲ್ಲಿ,
ಜಾಗ್ರ ಸ್ವಪ್ನ ಸುಷುಪ್ತಿ ವಿಪತ್ತಿ ಲಯಕ್ಕೊಳಗಾಗದಿರಬೇಕು.
ಹೀಂಗೆ ಉಭಯವನರಿದು ದಗ್ಧವಾದಂಬರದಂತೆ,
ವಾರಿಯ ಕೂಡಿದ ಕ್ಷೀರದಂತೆ,
ಭಾವಕ್ಕೆ ಭ್ರಮೆಯಿಲ್ಲದೆ, ಸಾಕಾರವ ಮರೆದು,
ಪರತ್ರಯದ ತುತ್ತಿಂಗೆ ತುಚ್ಛನಾಗದೆ,
ನಿಶ್ಚಯನಾದ ಮಹಾತ್ಮಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. ||೧೨೨||

೧೫೪೧

ಇಹದಲ್ಲಿ ಸುಖಿ, ಪರದಲ್ಲಿ ಪರಿಣಾಮಿ ಎಂಬರು,
ಅದು ಹುಸಿ, ನಿಲ್ಲು.
ಇಹದಲ್ಲಿ ದುಃಖಿ, ಪರದಲ್ಲಿ ಪ್ರಕೃತಿಯೆಂದೆ.
ಇಂತೀ ಇಹಪರವೆಂಬೆರಡು.
ಲಕ್ಷ್ಮಿಯ ಮನೆಯ ತೊತ್ತಿನ ತೊತ್ತಾದವರಿಗೆ
ಇನ್ನೆತ್ತಣ ಮುಕ್ತಿ, ನಿಃಕಳಂಕ ಮಲ್ಲಿಕಾರ್ಜುನಾ. ||೧೨೩||

೧೫೪೨

ಈದ ಪಶುವಿನ ಮೊಲೆಯಲ್ಲಿ ಕೈಯನಿಕ್ಕಿದಡೆ ಕ್ಷೀರವಲ್ಲದೆ,
ಬಂಜೆಯಾವಿನ [ಮೊಲೆಯಲ್ಲಿ] ಉಂಟೆ ?
ಇದರಂದವ ತಿಳಿವುದು ಲಿಂಗಾಂಗಿಗಳು.
ಹೊತ್ತು ತುಂಬಿದವಳು ಬಲ್ಲಳು ತನ್ನ ನಿತ್ತರಿಸುವ ಬೇನೆಯ.
ಭಕ್ತಿಯುಳ್ಳವರು ಬಲ್ಲರು ನಿಶ್ಚಟದ ಲಿಂಗಾಂಗಿಗಳ.
ಇಂತೀ ಸತ್ಯವನರಿಯದೆ ಹೊತ್ತುಹೋಕನಾಗಿ ನುಡಿವ
ಮರ್ತ್ಯರಿಗೇಕೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೨೪||

೧೫೪೩

ಈರೇಳುಭುವನ ವಳಯ ಮಧ್ಯದಲ್ಲಿ, ಹುಟ್ಟಿದುದೊಂದು ಚಿತ್ರ.
ಅದನೇನ ಹೇಳುವೆ ? ಕಣ್ಣಿಂಗೆ ರೂಪಿಲ್ಲ, ಕೈಗೆ ಹಿಡಿಯಿಲ್ಲ.
ನೆನೆವುದಕ್ಕಗೋಚರವಾಗಿ ನಿಂದು ಸುಳಿಯಿತ್ತು ನೋಡಾ.

ಆ ಸುಳುಹಿನ ಮರೆಯಲ್ಲಿ ಬಂದು ಹಿಡಿಯಲಾಗಿ,
ಕೂಸು ಸತ್ತು, ಅತ್ತ ನೀರಿನಲ್ಲಿ ಮುಕ್ತಿಯೆಂಬವಳು ಹುಟ್ಟಿದಳು.
ಮುಕ್ತಿಯ ಬಸುರಲ್ಲಿ ಸತ್ತವರೆಲ್ಲ ಐದಾರೆ.
ಹೊತ್ತುಹೋರಿ ಕರೆಯಲಾಗಿ,
ನಿಚ್ಚಟದ ಅಲಗ ಹಿಡಿದು ಕುತ್ತಿದರಯ್ಯಾ, ಹೊಟ್ಟೆಯ ಹುರಿಯ.
ಕುತ್ತಿದ ಬಾಯಲ್ಲಿ ಕೂಳ ಸುರಿದು, ಅವರೆಲ್ಲ ಉಂಟಾದರು.
ಅವರಿಗಿನ್ನೆತ್ತಣ ಮುಕ್ತಿ, ನಿಃಕಳಂಕ ಮಲ್ಲಿಕಾರ್ಜುನಾ ? || ೧೨೫ ||

೧೫೪೪

ಈರೇಳುಲೋಕವ ಕೋಡಗ ನುಂಗಿತ್ತ ಕಂಡೆ.
ನುಂಗಿದ ಕೋಡಗವ ಗುಂಗುರ ನುಂಗಿತ್ತು.
ಗುಂಗುರ ಬಂದು ಕಣ್ಣ ಕಾಡಲಾಗಿ,
ಕಣ್ಣಿನ ಕಾಡಿಗೆ ಅಳಿಯಲಾಗಿ, ಕಣ್ಣಿನ ಬಣ್ಣ ಕೆಟ್ಟಿತ್ತು.
ಕಣ್ಣಿನ ಒಡೆಯ ನೋಡಿ ಗುಂಗುರ ಒರಸಲಾಗಿ,
ಆ ಗುಂಗುರ ಸತ್ತು, ಕೋಡಗ ಉಳಿಯಿತ್ತು.
ಆ ಕೋಡಗವನಾಡಿಸಿಕೊಂಡುಂಬ ಜೋಗಿಗಳಿಗೇಕೆ,
ಆ ರೂಢನ ಸುದ್ದಿ, ನಿಃಕಳಂಕ ಮಲ್ಲಿಕಾರ್ಜುನಾ. || ೧೨೬ ||

೧೫೪೫

ಈಶ್ವರನಂಗವ ತಾಳಿದ ಮತ್ತೆ ಪರ[ಕೆ ದೇಗುಲವಾಗಿರಬೇಕು]
ತ್ರಿವಿಧದ ಆಶೆಗೆ ಮನ ಪಸರಿಸದಂತಿರಬೇಕು, ಆತನ ಗುಣ.
ನಿರ್ಜಾತನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೨೭ ||

೧೫೪೬

ಉಂಟು ಉಂಟೆಂಬನ್ನಕ್ಕ ಸಂದೇಹಕ್ಕೀಡಾಗದೆ,
ಇಲ್ಲಾ ಇಲ್ಲಾ ಎಂದು ಶೂನ್ಯಕ್ಕೊಳಗಾಗದೆ,
ಇಂತೀ ಕ್ರೀಯ ಒಳಗಿನಲ್ಲಿ, ನಿಃಕ್ರೀಯ ತೆರಪಿನಲ್ಲಿ,
ಉಭಯಚಕ್ಷು ಒಡಗೂಡಿ ಕಾಬಂತೆ,
ನೋಡುವುದು, ಉಭಯ ನೋಡಿಸಿಕೊಂಬುದು ಒಂದೆ.
ಕ್ರೀಯಲ್ಲಿ ಇಷ್ಟ, ಅರಿವಿನಲ್ಲಿ ಸ್ವಸ್ಥ.
ಈ ಉಭಯ ನಿಜಾಹನ್ನಕ್ಕ ದೃಷ್ಟವಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೧೨೮ ||

೧೫೪೭

ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿಯಾದೆನೆಂಬ
ಡಿಂಡೆಯ ಮತದ ಹಿರಿಯರುಗಳೆಲ್ಲಾ ನೀವು ಕೇಳಿರೊ.
ಬಲೆಯೊಳಗಾದ ಹುಲಿಗೆ ಬಲಾತ್ಕಾರವುಂಟೆ ?
ಲಲನೆಯರ ಸಂಸರ್ಗದಲ್ಲಿದ್ದು ಚಲನೆಯಿಲ್ಲದೆ ಬಿಂದುವುಂಟೆ ?
ಶಿಲೆಯೊಳಗಣ ಬೆಂಕಿಗೆ ಅಲಂಕಾರ ಉಂಟೆ ?
ಸಲಿಲದೊಳಗಣ ತೃಷ್ಣೆಗೆ ಅಪ್ಯಾಯನ ಉಂಟೆ ?
ಅರಿವನರಿದಂಗಕ್ಕೆ, ಮರವೆಗೆ ತೆರನುಂಟೆ ?
ತೆರನನರಿದು, ಹರಿದಲ್ಲಿಯೆ ಅರಿಕೆ ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೨೯||

೧೫೪೮

ಉಂಡು ಕೊಂಡಾಡುವನ್ನ ಬರ,
ವೇಶಿಯ ಮನೆಯ ದಾಸಿಯ [ಬರಿಹುಂಡವೆಂಬೆ].
ಈಶ್ವರನ ರೂಪ ತೊಟ್ಟು ಕೈಯಾಂತು ಬೇಡಿದಡೆ.
ವೇಷದ ಮರೆಯ ಬಲೆಯ ಬೀಸುವ ಬೇಟೆಗಾರನೆಂಬೆ.
ಆಗಮವ ಕಲಿತು ಅವರಿಗೆ ಆಗಹೇಳಿ, ಹೋಗಿನ ದ್ರವ್ಯಕ್ಕೆ ಕೈಯಾನುವ
ಈ ಲಾಗಿನ ಅಣ್ಣಗಳ ಬಗೆಯ ಭಕ್ತಿಯಲ್ಲಿ ಇದ್ದೆಹೆನೆಂಬವರಿಗೆ
ಸತ್ತು ಸಾಯದ ಕುದುರೆಗೆ ಹುಲ್ಲನಡಕುವಂತಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೧೩೦||

೧೫೪೯

ಉಂಬ ಊಟ ನಿನಗೊ, ಅಶನಕ್ಕೊ ಎಂಬುದನರಿ,
ಮಾಡುವ ಭಕ್ತಿ ಮಾಡುವಂಗೊ, ಮಾಡಿಸಿಕೊಂಬವಂಗೊ
ಎಂಬುದ ತಿಳಿದ ಮತ್ತೆ ಹೋರಿ ಆರ್ಜವ ಮಾಡಲೇಕೆ ?
ಎಂಬುದ ತಿಳಿದ ಕೊಂಡು ಬಪ್ಪಂತೆ, ತಾ ತನ್ನ ತಿಳಿದ ಮತ್ತೆ ಅನ್ಯವೇಕೊ,
ನಿಃಕಳಂಕ ಮಲ್ಲಿಕಾರ್ಜುನಾ? ||೧೩೧||

೧೫೫೦

ಉಂಬ ತಳಿಗೆಯ ಬೆಳಗಿದಡೆ ನೊಂದಿತ್ತೆ, ನನ್ನ ಬೆಳಗಿದರೆಂದು ?
ಬೆಂದ ಮಸಿಯ ತೊಳೆದಡೆ ನೊಂದಿತ್ತೆ, ಎನ್ನ ಹೊರೆಯನೆತ್ತಿದರೆಂದು ?
ಅಂ[ಧ] ಮಂದರಂದವ ನುಡಿದಡೆ ನೊಂದು ಬೇಯಲೇಕೆ ?
ಅವರು ನೊಂದರೂ ನೋಯಲಿ
ಹಿಂಗಬೇಕೆಂದೆ ನಿಃಕಳಂಕ ಮಲ್ಲಿಕಾರ್ಜುನಾ. ||೧೩೨||

೧೫೫೧

ಉಡುಪ ತನ್ನ ಕಳೆಯ ತಾ ಕಾಣಿಸಿಕೊಂಬಂತೆ,
ಸೂರ್ಯ ತನ್ನ ಬೆಳಗ ತಾ ಕಾಣಿಸಿಕೊಂಬಂತೆ,
ಫಲ ತನ್ನ ರುಚಿಯ ತಾ ಕಾಣಿಸಿಕೊಂಬಂತೆ,
ಇಂತೀ ತ್ರಿವಿಧ ಉಂಟೆನಬಾರದು, ಇಲ್ಲೆನಬಾರದು.
ತನ್ನಿಂದರಿವಡೆ ಸ್ವತಂತ್ರಿಯಲ್ಲ, ಇದಿರಿನಿಂದರಿವಡೆ ಪರತಂತ್ರಿಯಲ್ಲ.
ಈ ಉಭಯವನಿನ್ನಾರಿಗೆ ಹೇಳುವೆ ?
ಕಡಲೊಳಗೆ ಕರೆದ ವಾರಿಯಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೩೩ ||

೧೫೫೨

ಉದಕದ ಬಾಯಲ್ಲಿ ಒಂದು ರಸದ ಗಿರಿ ಹುಟ್ಟಿ,
ಹೊಸಮಾಣಿಕ್ಯವ ನುಂಗಿತ್ತ ಕಂಡೆ.
ನುಂಗುವಾಗ ಒಂದು, ಗುಟುಕಿಸುವಾಗ ಎರಡು,
ಸ್ವಸ್ಥಾನದಲ್ಲಿ ನಿಂದಾಗ ಮೂರು,
ಅದರಂಗವ ತಿಳಿದು ಕಳೆಯಬಲ್ಲಡೆ
ನಿಃಕಳಂಕ ಮಲ್ಲಿಕಾರ್ಜುನನ ಲಿಂಗವ ಬಲ್ಲವ. || ೧೩೪ ||

೧೫೫೩

ಉದಕದಲ್ಲಿ ತೊಳೆದು ಕಂಡೆಹೆನೆಂದಡೆ ಮಲಿನವಲ್ಲ.
ಪುಷ್ಪದಲ್ಲಿ ಪೂಜಿಸಿ ಕಂಡೆಹೆನೆಂದಡೆ,
ಹೊತ್ತಿನ ವೇಳೆಗೆ ಬಂದು ಗೊತ್ತು ಮುಟ್ಟುವನಲ್ಲ.
ನಾನಾ ಉಪಚಾರದಿಂದ ಭಾವಿಸಿ ಕಂಡೆಹೆನೆಂದಡೆ ಭ್ರಮೆಯವನಲ್ಲ.
ಇವನರಿದು ಮರವೆಗೆ ತೆರಹಿಲ್ಲದಿರ್ದ,
ನಿಃಕಳಂಕ ಮಲ್ಲಿಕಾರ್ಜುನನ ಒಡಗೂಡಿದವನೇ. || ೧೩೫ ||

೧೫೫೪

ಉದಕದಲ್ಲಿ ಮಜ್ಜನವ ಮಾಡಿ, ಇಹ ಪರವ ಹರಿದವರಾರುವ ಕಾಣೆ.
ಪುಷ್ಪದಲ್ಲಿ ಪೂಜೆಯ ಮಾಡಿ, ಪುನರಪಿಯು ಗೆದ್ದವರನಾರನು ಕಾಣೆ.
ಕರ್ಮದಿಂದ ಒದಗಿದ ಸುಖ,
ಚತುರ್ವಿಧಕ್ಕೆ ಒಳಗಲ್ಲದೆ ಹೊರಗಾದುದಿಲ್ಲ.
ಕರ್ಮವ ಮಾಡುವಲ್ಲಿ ಧರ್ಮವನರಿವಡೆ, ಅದು ಪಥಕ್ಕೆ ಹೊರಗೆಂದೆ.
ಮೌಕ್ತಿಕ ಉಂಡ ಜಲಕ್ಕೆ ರಾಗ ಉಂಟೆ ಅಯ್ಯಾ ?
ಅಮೃತವನೊಡಗಿರ್ದ ಆಜ್ಯವ ಧರಿಸಿದ ಜಿಹ್ವೆಗೆ

ಕರತಳ ಉಂಟೆ ಅಯ್ಯಾ ?
ಕರದಲ್ಲದೆ ಅರಿದು ಹಿಡಿದವಂಗೆ ಬಿಡುಗಡೆ ಇನ್ನೇನೊ ?
ಅರಿದಡೆ ತಾ, ಮರೆದಡೆ ಜಗವೆಂಬ ಉಭಯವ ಹರಿದಾಗವೆ ಪೂಜಕನಲ್ಲ,
ಪ್ರತಿಷ್ಠೆಯಲ್ಲಿ ಪರಿಣಾಮಿಯಲ್ಲ, ಸ್ವಯಂಭುವಿನಲ್ಲಿ ಸ್ವಾನುಭಾವಿಯಲ್ಲ.
ಏನೂ ಎನಲಿಲ್ಲವಾಗಿ, ನಿಃಕಳಂಕ ಮಲ್ಲಿಕಾರ್ಜುನಲಿಂಗ ತಾನೆಯಾಗಿ. || ೧೩೬ ||

೧೫೫೫

ಉದಕವ ನುಂಗಿದ ಕೆಸರಿನಂತೆ, ಆತ್ಮ ಗಸಣಿಗೊಳಗಾಯಿತ್ತು.
ಉದಕವರತ ಕೆಸರಿನ ತೆರನುಂಟೆ ?
ಈ ಉಭಯಭೇದವನರಿದಡೆ ಪ್ರಾಣಲಿಂಗಿಯೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. || ೧೩೭ ||

೧೫೫೬

ಉದಕವಿಲ್ಲದಿರೆ ಅಂಬುಧಿ ತಟಾಕಂಗಳೆಂಬ ನಾಮವುಂಟೆ ?
ಬಣ್ಣ ನಾಸ್ತಿಯಾಗಿರೆ ಬಂಗಾರವೆಂಬ ವಿಶೇಷವುಂಟೆ ?
ಗಂಧವಿಲ್ಲದಿರೆ ಚಂದನವೆಂಬ ಅಂಗವುಂಟೆ ?
ನೀನಿಲ್ಲದಿರೆ ನಾನೆಂಬ ಭಾವವುಂಟೆ ?
ಜಗವೆಲ್ಲ ನಿನ್ನ ಹಾಹೆ, ಉತ್ಪತ್ಯ ಸ್ಥಿತಿ ಲಯವೆಲ್ಲ ನಿನ್ನ ಹಾಯೆ.
ಕ್ರೀ, ನಿಃಕ್ರೀಯೆಂಬುದೆಲ್ಲ ನಿನ್ನ ಹಾಹೆ.
ಜಗಹಿತಾರ್ಥವಾಗಿ ಭಕ್ತನಾದೆ.
ಭಕ್ತಿ ತದರ್ಥವಾಗಿ ಮಾಹೇಶ್ವರನಾದೆ.
ಮಾಹೇಶ್ವರ ತದರ್ಥವಾಗಿ ಪ್ರಸಾದಿಯಾದೆ.
ಪ್ರಸಾದಿ ತದರ್ಥವಾಗಿ ಪ್ರಾಣಲಿಂಗಿಯಾದೆ.
ಪ್ರಾಣಲಿಂಗಿ ತದರ್ಥನಾಗಿ ಶರಣನಾದೆ.
ಶರಣ ತದರ್ಥವಾಗಿ ಐಕ್ಯನಾದೆ.
ಇಂತೀ ಷಡುಸ್ಥಲಮೂರ್ತಿಯಾಗಿ ಬಂದೆಯಲ್ಲಾ
ಸಂಗನಬಸವಣ್ಣಾ, ಚೆನ್ನಬಸವಣ್ಣಾ,
ನಿಮ್ಮ ಸುಖದುಃಖದ ಪ್ರಮಥರು ಸಹಿತಾಗಿ
ಏಳುನೂರೆಪ್ಪತ್ತು ಅಮರಗಣಂಗಳು, ಗಂಗೆವಾಳುಕ ಸಮಾರುದ್ರರು
ಮತ್ತೆ ಅವಧಿಗೊಳಗಲ್ಲದ ಸಕಲಪ್ರಮಥರು ಬಂದರಲ್ಲಾ.
ಬಂದುದು ಕಂಡು ಎನ್ನ ಸಿರಿ ಉರಿಯೊಳಗಾಯಿತ್ತು.
ಎನ್ನ [ಭ]ವದ ಉರಿಯ ಬಿಡಿಸು,
[ಭ]ವವಿರಹಿತ ನಿಃಕಳಂಕ ಮಲ್ಲಿಕಾರ್ಜುನಾ. || ೧೩೮ ||

೧೫೫೭

ಉದಕದ ರಸದಂತೆ, ಅಗ್ನಿಯ ಉಭಯದಂತೆ,
ವಿಷ ನಿರ್ವಿಷದಂತೆ ಕಾಬ, ಕಾಣಿಸಿಕೊಂಬ ಭೇದ.
ತನುವಿನ ಮೇಲಿನ ಲಿಂಗದ ನೆನಹು, ಪ್ರಾಣನ ಮೇಲಿಹ ಭಾವದ ಸಂಚು.
ಆ ಉಭಯವನೊಳಕೊಂಡ ಜ್ಞಾನದ ಬಿಂದು,
ಸದಮಲ ಬೆಳಗಿನೊಳಗೆಯ್ದಿದ ಮತ್ತೆ ಬಿಡುಮುಡಿ ಎರಡಿಲ್ಲ.
ಅದು ಶರಣನ ನಿಜದೈಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. || ೧೩೯ ||

೧೫೫೮

ಉದ್ಯಾಪನ ವ್ಯಾಪಾರ ಕೃತಭೇದ ಸರ್ವವನರಿದು,
ತ್ಯಾಗಾಂಗನಾಗಿ, ಭೋಗಾಂಗನಾಗಿ, ಯೋಗಾಂಗನಾಗಿ,
ತಾಮಸ ನಿರಸನವಾಗಿ, ಭೂತ ಭವಿಷ್ಯದ್ವರ್ತಮಾನಕ್ಕೆ ಹೊರಗಾಗಿ ನಿಂದ
ನಿಜತತ್ವದಂಗಕ್ಕೆ ಬೇರೆ ಮಂಗಲೋತ್ತರವರಸಲಿಲ್ಲ.
ಲಿಂಗವನಂಗಬಾಹ್ಯದಲ್ಲಿ ಇರ್ದಿಹೆನೆಂಬ ಭ್ರಾಂತಿಲ್ಲ.
ಆತ ಲಿಂಗವೆ ಅಂಗವಾದ ಕಾರಣ, ಪೃಥಕ್ ಎಂಬುದಿಲ್ಲ.
ಆತನಂಗವೆ ಮಂಗಲದೊಡಲು, ನಿಃಕಳಂಕ ಮಲ್ಲಿಕಾರ್ಜುನಾ. || ೧೪೦ ||

೧೫೫೯

ಉಪೇಕ್ಷೆಯಿಂದ ಉರಿವ ಬೆಳಗು, ಪವನನ ಪ್ರಾಣಕ್ಕೆ ಒಳಗು.
ಸ್ವಯಸಂಪರ್ಕದಿಂದ ಒದಗಿದ ಬೆಳಗು, ಅನಲನ ಆಹುತಿಗೆ ಹೊರಗಾಗಿಪ್ಪುದು.
ಇಂತೀ ವಾಗದ್ವೈತದ ಮಾತಿನ ಮಾಲೆ, ಸ್ವಯಾದ್ವೈತವ ಮುಟ್ಟಬಲ್ಲುದೆ ?
ಸ್ಥಲಜ್ಞಾನ, ಯಾಚಕತ್ವ, ಸ್ಥಲಭರಿತನ ಮುಟ್ಟಬಲ್ಲುದೆ ?
ಇಂತೀ ಉಭಯದೊಳಗನರಿತು,
ಇಷ್ಟಕ್ಕೆ ಕ್ರೀ, ಭಾವಕ್ಕೆ ಜ್ಞಾನ ಸಂಪೂರ್ಣವಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೆ. || ೧೪೧ ||

೧೫೬೦

ಉಭಯವ ನೆಮ್ಮಿ ಹರಿವ ನದಿಯಂತೆ, ಮಾಡುವ ಕ್ರೀ, ಅರಿವ ಚಿತ್ತ.
ಈ ಉಭಯದ ನೆಮ್ಮುಗೆಯಲ್ಲಿ ಭಾವಿಸಿ ಅರಿವ ಚಿತ್ತ,
ಅಂಗದ ಮುಟ್ಟನರಿತು ನಿಜಸಂಗದ ನೆಲೆಯಲ್ಲಿ ನಿಂದು,
ಉಭಯ ನಿರಂಗವಾದಲ್ಲಿ,
ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೧೪೨ ||

೧೫೬೧

ಉರಿ ಆತ್ಮಸ್ಥಾವರಂಗಳಲ್ಲಿ ನಂದದಿಹನ್ನಕ್ಕ,
ನೀರು ಒಂದರಲ್ಲಿಯೆ ಇಂಗದಿಹನ್ನಕ್ಕ,
ಬೆಳಗು ಒಂದರಲ್ಲಿ ಸಂದಳಿದಿಹನ್ನಕ್ಕ,
ಲಿಂಗವೆಂಬುದೊಂದು ಪ್ರಮಾಣವುಂಟು.
ಆ ಪ್ರಮಾಣು ಅಪ್ರಮಾಣಹನ್ನಕ್ಕ,
ಭಾವ ಮೂರು, ನಿರ್ಭಾವ ಮೂರು,
ಸ್ಥೂಲವಾರು, ತತ್ತ್ವವೈದು, ಇಂತಿವು ಕೂಡೆ,
ಅಳೆದು ಮರಳಲಿಕ್ಕೆ ಹಲವು ಸ್ಥಲ ಕುಳ ಬೇರಾಯಿತ್ತು.
ಬಂಗಾರವೊಂದು ಹಲವು ತೊಡಿಗೆಯ ಹೊಲಬಾದಂತೆ,
ತನ್ನಷ್ಟೇ ತದ್ವೃಷ್ಟವುಭಯವ ಕೂಡುವನ್ನಬರ,
ನಿಃಕಳಂಕ ಮಲ್ಲಿಕಾರ್ಜುನನೆಂದೆನುತ್ತಿರಬೇಕು. ||೧೪೩||

೧೫೬೨

ಉರಿಗೆ ರಸ ನಿಂದಾಗವೆ ರಸಸಿದ್ಧಿ ಎಂದೆ.
ಅಸಿಗೆ ಶರೀರ ನಿಂದಲ್ಲಿಯೆ ಕಾಯಸಿದ್ಧಿ ಎಂದೆ.
ಲಿಂಗವಿಡಿದ ತನುವಿಂಗೆ ಅಂಗವ್ಯಾಪಾರವ ಬಿಟ್ಟಾಗವೆ, ಲಿಂಗಸಿದ್ಧಿ ಎಂಬೆ.
ಇದರಂಗ ಒಂದೂ ಇಲ್ಲದಿರ್ದಡೆ,
ತ್ರಿಭಂಗಿಯಂ ತಿಂದು ಅಂದಗೆಡುವನಿಗೇಕೆ, ಲಿಂಗದ ಶುದ್ಧಿ,
ನಿಃಕಳಂಕ ಮಲ್ಲಿಕಾರ್ಜುನಾ. ||೧೪೪||

೧೫೬೩

ಉರಿದು ಬೇವುದು ಉರಿಯೋ, ಮರನೋ ?
ಹರಿದು ಕೊರೆವುದು ನೆಲನೋ, ನೀರೊ ?
ನೆಲ ನೀರಂತಾದುದು ಅಂಗಲಿಂಗಸಂಬಂಧ.
ಉರಿ ಮರೆದಂತಾದುದು ಪ್ರಾಣಲಿಂಗಸಂಬಂಧ.
ಇಂತೀ ನಾಲ್ಕರ ಗುಣ ಉಭಯಕೂಟವಾದುದು ಶರಣಸ್ಥಲ.
ಆ ಸ್ಥಲ ಸುರಧನುವಿನ ಕೆಲವಳಿಯಂತೆ, ಮರೀಚಿಕಾಜಲದ ವಳಿಯಂತೆ,
ಮಂಜಿನ ರಂಜೆಯ ಝುಂಝಾಮಾರುತನಂತೆ.
ಆ ಸಂಗ ನಿಸ್ಸಂಗ ಐಕ್ಯಸ್ಥಲ, ನಿಃಕಳಂಕ ಮಲ್ಲಿಕಾರ್ಜುನಾ. ||೧೪೫||

೧೫೬೪

ಉರಿದು ಸತ್ತುದು, ಮತ್ತುರಿದು,
ನಾನಾ ಭೇದಂಗಳ ಘಟಮಟಂಗಳ ಆಶ್ರಯಕ್ಕೊಡಲಾಗಿ,
ಮತ್ತೆ ಭಸ್ಮವಾಗಿ, ಒಡಲಗಿಡದ ತೆರದಂತೆ.
ಇಂತೀ ತ್ರಿವಿಧದ ಕುರುಹಿನ ಲಕ್ಷದ ಭೇದ ಒಪ್ಪಿರಬೇಕು,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ. || ೧೪೬ ||

೧೫೬೫

ಉರಿ ನೀರು ಕುಂಭದಂತೆ ಆಗಬಲ್ಲಡೆ, ಕಾಯಲಿಂಗಸಂಬಂಧಿ.
ತರು ಧರಿಸಿದ ನೀರು ಉರಿಯಂತಾಗಬಲ್ಲಡೆ, ಭಾವಲಿಂಗಸಂಬಂಧಿ.
ಕರ್ಪೂರ ಧರಿಸಿದ ಅಪ್ಪು ಉರಿಯ ಯೋಗದಂ[ತಾಗಬಲ್ಲಡೆ] ಪ್ರಾಣಲಿಂಗ ಸಂಬಂಧಿ.
ಇಂತೀ ಇವನಿಪ್ಪ ಭೇದವನರಿದು ನಿಶ್ಚಯಿಸಿದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೧೪೭ ||

೧೫೬೬

ಉರಿಯ ಬಣ್ಣದ ಸೀರೆಯನುಟ್ಟು, ಹರಶರಣರೆಲ್ಲರೂ ಮದುವೆಗೆ ಹೋದರು.
ನಿಬ್ಬಣಿಗನ ಹಿಂದುಳುಹಿ, ಮದುವೆಯ ಹರೆ ಮುಂದೆ ಹೋಯಿತ್ತು.
ಮದುವೆಗೆ ಕೂಡಿದ ಬಂಧುಗಳೆಲ್ಲರು,
ಮದವಳಿಗನ ಮದವಳಿಗಿತ್ತಿಯ ಕಾಣದೆ,
ಕದನವಾಯಿತ್ತು ಮದುವೆಯ ಮನೆಯಲ್ಲಿ.
ಈ ಗಜಬಜೆಗಂಜಿ ಹರೆಯವ ಸತ್ತ.
ಎಣ್ಣೆಯ ಗಡಿಗೆಯ ಒಡೆಯ ಹಾಕಿದ.
ಇನ್ನು ಮದುವೆಯ ಸಡಗರವೇಕೆಂದ, ನಿಃಕಳಂಕ ಮಲ್ಲಿಕಾರ್ಜುನ. || ೧೪೮ ||

೧೫೬೭

ಉರಿಯೊಳಗಣ ಶೈತ್ಯದಂತೆ, ಶೈತ್ಯದೊಳಗಣ ಉರಿಯಂತೆ,
ಅರಿದು ಅರುಹಿಸಿಕೊಂಬುದೇನು ಹೇಳಾ ?
ಅದು ಚಂದ್ರನೊಳಗಣ ಕಲೆ.
ತನ್ನಂಗದ ಕಳೆಯಿಂದ ಉಭಯದೃಷ್ಟವ ಕಾಣಿಸಿಕೊಂಬಂತೆ.
ಆ ಇಷ್ಟದ ದೃಷ್ಟದ ಕಾಣಿಸಿಕೊಂಡಂತೆ,
ಅರಿವುದು. ಅರುಹಿಸಿಕೊಂಬುದು ಒಡಗೂಡಿದಲ್ಲಿ ಶರಣ ಸ್ಥಲ.

ಆ ಸಂಬಂಧಸಮಯ ನಿಂದಲ್ಲಿ ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೧೪೯ ||

೧೫೬೮

ಉ[ರಿವ] ಗಿರಿಯ ಮೇಲೆ ಬೆಣ್ಣೆಯ ಕೋಣ ಹುಟ್ಟಿ,
ಕರ್ಪುರದ ಘಟ್ಟಿ ಸೋಪಾನ ಕಟ್ಟಿತ್ತು.
ಅಜು ಮಂಜಿನ ನೀರು, ಆ ನೀರ ತುಂಬುವುದಕ್ಕೆ ಮಳಲ ಮಡಕೆ,
ತುಂಬಿ ಹಿಡಿವುದಕ್ಕೆ ಕೈಯಿಲ್ಲದೆ, ನಡೆವುದಕ್ಕೆ ಕಾಲಿಲ್ಲದೆ,
ಮೀರಿ ಹೊರುವುದಕ್ಕೆ ತಲೆಯಿಲ್ಲದೆ ತುಂಬಿ ತರಬೇಕು.
ತಂದು ಬಂದು ನಿಂದಲ್ಲಿ, ಕಣ್ಣಿಲ್ಲದೆ ನೋಡಿ,
ಕೈಯಿಲ್ಲದೆ ಮುಟ್ಟಿ, ಬಾಯಿಲ್ಲದೆ ಈಂಟಿ,
ಅರಿವಿಲ್ಲದ ತೆರದಲ್ಲಿ ಸುಖಿಯಾದ ಐಕ್ಯಂಗೆ ಲಕ್ಷಿಸಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೧೫೦ ||

೧೫೬೯

ಊಟದ ಸುಖವ ಕಲಿತ ಮತ್ತೆ ನೋಟಕ್ಕೆ ದೃಷ್ಟ.
ನೋಟದ ಸುಖವ ಕಲಿತ ಮತ್ತೆ ಬೇಟಕ್ಕೆ ದೃಷ್ಟ.
ಬೇಟದ ಸುಖವ ಕಲಿತ ಮತ್ತೆ ಕೂಟಕ್ಕೆ ದೃಷ್ಟ.
ಕೂಟದ ಸುಖವ ಕಲಿತ ಮತ್ತೆ ಜಗದಾಟಕ್ಕೆ ದೃಷ್ಟ.
ಇಷ್ಟನರಿಯದೆ ನಿರ್ಜಾತನೆನಲೇಕೆ.
ಇಷ್ಟಕ್ಕಂಜಿ ಈಶನ ಮರೆಯ ವೇಷವ ಬಿಟ್ಟು,
ಎನ್ನಗಿನ್ನೇಸು ಕಾಲ ಆಸೆಯೆಂಬ ಕೋಳವ್ರೋ, ನಿಃಕಳಂಕಮಲ್ಲಿಕಾರ್ಜುನಾ. ||೧೫೧||

೧೫೭೦

ಊರ ಗುಬ್ಬಿಯೂ ಕಾಡಗುಬ್ಬಿಯೂ ಕೂಡಿಕೊಡು,
ಒಣಗಿಲ ಮೇವ ತೆರನಂತೆ,
ಭಕ್ತ ಮಾಡುವ ಠಾವಿನಲ್ಲಿ ಗುರುಚರ ಕರ್ತೃಗಳೆಂದು ಪೂಜಿಸಿಕೊಂಡು,
ತಮ್ಮ ಆತ್ಮತೇಜರ ಸತ್ಯಮಿಥ್ಯಕ್ಕೆ ಕಡಿದಾಡುತ್ತ,
ಆಸನ ಪಜ್ಜಿ, ವಾಹನವಿಶೇಷ ಭೋಗಂಗಳಿಗೆ ಕುಕ್ಕನೆ ಕುದಿದು.
ಬಿಕ್ಕನೆ ಬಿರಿವ ದುರ್ವೃತ್ತರಿಗೆ
ವಿರಕ್ತಿಯ ಮಾತಿನ ನಿಹಿತ ಇಂತೀ ಹೊತ್ತು ವಿಸ್ತರಿಸಲಾರದೆ,
ಭಕ್ತರಿಚ್ಛೆವನರಿಯದೆ ತನ್ನ ನಿತ್ಯಾನಿತ್ಯವ ತಿಳಿಯಲರಿಯದೆ,
ತನ್ನ ಪ್ರಕೃತಿಮತ್ಸರಗುಣದಿಂದ ಭಕ್ತರಂತಿಂತೆಂದು ನುಡಿವ, ತಟ್ಟುವ ಭಂಡನ,

ಇಂತಿವರ ಕಂಡು ಅರ್ಚಿಸಿ ಪೂಜಿಸಿ ಶರಣೆಂಬ ಮಿಟ್ಟೆಯ ಭಂಡನ.
ಈ ಉಭಯದ ಗುಣವನೆತ್ತಲೆಂದರಿಯೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೫೨ ||

೧೫೭೧

ಊರ ಮುಂದೊಂದು ದೇವರ ಗುಡಿಯ ಕಂಡೆ.
ದೇವರಿಲ್ಲದೆ ದೇಗುಲವಿದ್ದಿತ್ತು.
ದೇಗುಲದೊಳಗಣ ತಮ್ಮಡಿ ಅರ್ಯೆದು ನೋಡುತ್ತಿರ್ದ,
ತನ್ನೋಗರದೊಡೆಯನ ಕಾಣದೆ.
ಇದನಿನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೫೩ ||

೧೫೭೨

ಊರಾಡಿದಂತಾಡದಿರ್ದಡೆ ದೂರಿಹರೆನ್ನನು.
ನಾಡಾಡಿದಂತಾಡದಿರ್ದಡೆ ಬೈದಹರೆನ್ನನು.
ಕೆಸರೊಳಗೆ ಮುಳುಗಿ ಹೊಸನೀರೆಯಿಂದಡೆ,
ಅದರ [ಪಾಶ] ಕುಸುಕಿರಿ[ಯದೆ] ಮಾಣ್ಬುದೆ ?
ಈ ದೂಷಣೆ ಇನ್ನೇಸು ಕಾಲ ?
ಭವಪಾಶರಹಿತ ನಿಸರಿಸುವಂತೆ ಮಾಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೧೫೪ ||

೧೫೭೩

ಊರಿಗೆ ಹೋ[ಹಾಗ] ಓಣಿಯ ಇಕ್ಕೆಲದ ದಾರಿಯಲ್ಲಿ ಕಟ್ಟಿದ ಕಳ್ಳರ ದಂಡೆ.
ಅವರ ವರ್ಣ:ಒಬ್ಬ ಕಪೋತ, ಒಬ್ಬ ಕೃಷ್ಣ.
ಕಪೋತನ ಕಾಲ ಹೊಯ್ದು, ಕೃಷ್ಣನ ಕುತ್ತಿ ಕೆಡಹಿ, ಮತ್ತೆ ಹೋಗುತ್ತಿರಲಾಗಿ.
ಓಣಿಯ ತಪ್ಪಲ ತಲಹದಲ್ಲಿ ಕಟ್ಟಿದ್ದನೊಬ್ಬ ಕಳ್ಳ.
ಅವನ ಕಂಡು ಕೂಗುವಡೆ ಬಾಯಿಲ್ಲ, ಹೊಯ್ವಡೆ ಕೈದಿಲ್ಲ.
ಮೀರಿ ಹೋದಹೆನೆಂದಡೆ ಹಾದಿಗೆ ಹೊಲಬಿಲ್ಲ.
ಇದು ಅವನ ಕೌತುಕವೋ ? ಎನ್ನ ಭಾವದ ಭ್ರಮೆಯೋ ?
ಮುಂದಣಾವನ ಸುದ್ದಿ[ಯ] ಹಿಂಗಿ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೧೫೫ ||

೧೫೭೪

ಊರಿನ ದಾರಿಯಲ್ಲಿ ಹೋಗುತ್ತಿರಲಾಗಿ, ಎದ್ದು ಬಂದಿತ್ತೊಂದು ಹಾವು .
ಆರೂ ಇಲ್ಲದ ಠಾವಿನಲ್ಲಿ ಅದ ಮೀರಿ ಹೋಗಲಂಜಿದೆ.
ಬಿಡಿವಡಿಕ್ಕಿತ್ತು ಮೀರಿ ನಿಂದಡೆ ಕಚ್ಚಿತ್ತು.

ಗಾರಾದೆನಯ್ಯಾ ಈ ಹಾವ ಕಂಡು.
ಹೋಗಲಿಲ್ಲ ನಿಲ್ಲಲಿಲ್ಲ, ಇದಕ್ಕಾರದೆ ಮೀರಿ ಹಿಡಿದ ಹಾವು
ನಟ್ಟನಡುವೆ ಹಿಡಿಗೊಳಗಾಗಿ ಕಚ್ಚಿತ್ತು. [ಆ] ಹಾ[ವಿಗೆ] ತಲೆಯಿದ್ದಂತೆ ಬಾಲದಲ್ಲಿ
[ ವಿಷ].
ಬಾಲದ ವಿಷ ತಾಗಿ, ಊರೆಲ್ಲರೂ ಸತ್ತರು.
ನಾ ಬದುಕಿದೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೫೬ ||

### ೧೫೭೫

ಊರು ಕೆಟ್ಟು ಸೂರೆಯಾಡುವಲ್ಲಿ ಆರಿಗಾರೂ ಇಲ್ಲ.
ಬಸವಣ್ಣ ಸಂಗಮಕ್ಕೆ , ಚನ್ನಬಸವಣ್ಣ ಉಳುವೆಗೆ,
ಪ್ರಭು ಕದಳಿಗೆ, ಮಿಕ್ಕಾದ ಪ್ರಮಥರೆಲ್ಲರೂ
ತಮ್ಮ ತಮ್ಮ ಲಕ್ಷಭಾವಕ್ಕೆ ಮುಕ್ತಿಯನೆಯ್ದಿಹರು.
ನನಗೊಂದು ಬಟ್ಟೆಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೧೫೭ ||

### ೧೫೭೬

ಊರೆಲ್ಲರು ಬೇಟೆಗೆ ಹೋಗಿ ಕೊಂದರು ಕಾಡೆಮ್ಮೆಯ.
[ಅದು ] ಸಂದಿಗೆ ಸಾವಿರ ರೂಪು, ಕೊಂಬಿಗೆ ಹಿಂಗದ ವೆಜ್ಜ,
ಅದರಂಗದ ಕಂಗಳು ಕಪ್ಪು.
ಅದ ಕೊಂದವ[ರ]ತಂದು ಕೂಡಿದೆ ನನ್ನಂಗಳದಲ್ಲಿ.
ಆ ಅಂಗಳ, ಅವರ ತಿಂದು ನುಂಗಿತ್ತು.
ಮೂರು ಭುವನವ ನುಂಗಿದವರ ಕಂಡು, ಹಿಂಗಲಾರೆ,
ನಿಃಕಳಂಕ ಮಲ್ಲಿಕಾರ್ಜುನಾ. || ೧೫೮ ||

### ೧೫೭೭

ಊರೊಳಗಣ ಉಡು ಕೇರಿಯ ನುಂಗಿತ್ತು.
ಜಾಗಟದೊಳಗಣ ಧ್ವನಿ ಆ ಜಾಗಟವ ನುಂಗಿತ್ತು.
ಸಾರಬಂದ ಧೀರನ ಬಾರಿಕ ಕೊಂದ.
ನಾಡು ಹಾಳಾಯಿತ್ತು, ಪಟ್ಟಣ ಸೂರೆಹೋಯಿತ್ತು.
ಕಟ್ಟರಸು ಸಿಕ್ಕಿದ, ಪ್ರಧಾನ ತಪ್ಪಿದ.
ಎಕ್ಕಟಿಗನ ಮಕ್ಕಳು ಕೆಟ್ಟೋಡಿದರು.
ತಪ್ಪಿದ ಪ್ರಧಾನ ಒಪ್ಪವಿಟ್ಟ ರಾಜ್ಯವ,
ಸಿಕ್ಕಿದರಸ ಬಿಡಿಸಿ, ಎಕ್ಕಟಿಗನ ಮಕ್ಕಳ ಸಂತೈಸಿ,
ಹಿರಿಯರಸನ ಕೈಸೆರೆಯ ಬಿಡಿಸಿ,

ತಾ ಕೈಯೊಳಗಾಗಿ ಕೆಟ್ಟ ಪ್ರಧಾನಿ, ಸಿಕ್ಕದೆ ಕೆಟ್ಟ ಅರಸು.
ಇವರೆಲ್ಲರು ಕೆಟ್ಟ ಕೇಡ ನೋಡಿ ತಪ್ಪಿದೆನಯ್ಯಾ.
ಈ ಮಾಟಕೂಟದ ಹೋರಟೆಗಂಜಿ ಬಿರಿದ ಬಿಟ್ಟ ಮೇಲೆ,
ಅಲಗಿನ ಹಂಗೇಕೆ ?
ನಾಡಬಿಟ್ಟು ತೊಲಗಿದವಂಗೆ. ಒಂದೂರ ಸುದ್ದಿಯೇಕೆ,
ನಿಃಕಳಂಕ ಮಲ್ಲಿಕಾರ್ಜುನಾ. || ೧೫೯ ||

೧೫೭೮

ಊರೊಳಗಿದ್ದು ಊರು ಸುಡಬೇಕಲ್ಲದೆ,
ಊರ ಹೊರಗಿದ್ದು ಸುಡಬಹುದೆ ಅಯ್ಯಾ ?
ಕ್ರೀಯೊಳಗಿದ್ದು ಕ್ರೀಯನರಿಯಬೇಕಲ್ಲದೆ,
ಕ್ರೀ ಹೊರಗಾಗಿ ಜ್ಞಾನವುಂಟೆ ಅಯ್ಯಾ ?
[ಕೈದಟ್ಟುವ ಠಾವಿನಲ್ಲಿ ಕಾಳವಗಲ್ಲದೆ ]
ಕೈದಟ್ಟದ ಠಾವಿನಲ್ಲಿ ಕಾಳಗವುಂಟೆ ಅಯ್ಯಾ ?
ನಾ ನೀನಾದಡೆ ದೇವ, ನೀ ನಾನಾದಡೆ ದೇವ.
ಉಭಯವ ವೇಧಿಸಿದಲ್ಲಿ ತಾನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೧೬೦ ||

೧೫೭೯

ಎನಗೆ ಗುರುವಾಗಿ ಬಂದನಯ್ಯಾ ಬಸವಣ್ಣನು.
ಎನಗೆ ಲಿಂಗವಾಗಿ ಬಂದು, ಎನ್ನಂಗದಲ್ಲಿ ನಿಂದನಯ್ಯಾ ಬಸವಣ್ಣನು.
ಎನಗೆ ಜಂಗಮವಾಗಿ ಬಂದು, ಎನ್ನ ಸಂಸಾರ ಪ್ರಕೃತಿಯ ಹರಿದ.
ಭಕ್ತಿ ಜ್ಞಾನ ವೈರಾಗ್ಯವ ತುಂಬಿ,
ಪಾದೋದಕ ಪ್ರಸಾದವನಿತ್ತು ಸಲಹಿದನಯ್ಯಾ ಬಸವಣ್ಣನು.
ಆ ಬಸವಣ್ಣನ ಶ್ರೀಪಾದವನರ್ಚಿಸಿ, ಪೂಜಿಸಿ,
ನಮೋ ನಮೋ ಎಂದು ಸುಖಿಯಾದೆನಯ್ಯಾ,
ನಿಃಕಳಂಕ ಮಲ್ಲಿಕಾರ್ಜುನಾ. || ೧೬೧ ||

೧೫೮೦

ಎನಗೆ ನೀನಿಂಬುಕೊಡುವಲ್ಲಿ ಸಕಲವ ಪ್ರಮಾಣಿಸುವದ ಬಿಟ್ಟು,
ನಿಃಕಲವಸ್ತುವಾಗು.
ಶಕ್ತಿಸಮೇತವ ಬಿಟ್ಟು, ನೀ ಶಕ್ತಿ ನಿರ್ಲೇಪವಾಗು.
ಚಿತ್ತವ ನೋಡಿಹೆನೆಂಬ ಹೆಚ್ಚು ಕುಂದಬಿಟ್ಟು, ನಿಶ್ಚಿಂತನಾಗು.
ಅಂದು ಮಿಕ್ಕಾದ ಭಕ್ತರ ಗುಣವ ನೋಡಿಹೆನೆಂದು ಕೊಟ್ಟ, ತಕ್ಕುಠವಾಳವ ಬಿಡು.

ಸರ್ವರಾಗ ವಿರಾಗನಾಗಿ, ಸರ್ವಗುಣಸಂಪನ್ನನಾಗಿ,
ಜ್ಞಾನಸಿಂಧು ಸಂಪೂರ್ಣನಾಗಿ,
ನಿನ್ನ ಅರಿವಿನ ಗುಡಿಯ ಬಾಗಿಲ ತೆರೆದೊಮ್ಮೆ ತೋರಾ.
ಎನ್ನಡಿಗೆ ನಿನ್ನ ಗುಡಿಯ ಸಂಬಂಧವ ನೋಡಿಹೆ,
ಇದಕ್ಕೆ ಗನ್ನಬೇಡ ಚೆನ್ನ, ನಿಃಕಳಂಕ ಮಲ್ಲಿಕಾರ್ಜುನಾ. ||೧೬೨||

೧೫೮೧

ಎನ್ನ ಅರಿವು ಮರಹು ಬಸವಣ್ಣನಂಗರ್ಪಿತ.
ಎನ್ನ ಆಚಾರ ವಿಚಾರ ಬಸವಣ್ಣನಂಗರ್ಪಿತ.
ಎನ್ನ ಭಾವ ನಿರ್ಭಾವ ಬಸವಣ್ಣನಂಗರ್ಪಿತ.
ಎನ್ನ ಅಂತರಂಗ ಬಹಿರಂಗ ಬಸವಣ್ಣನಂಗರ್ಪಿತ.
ನಾ ನೀನೆಂಬುದು ಬಸವಣ್ಣನಂಗರ್ಪಿತ.
ಇಂತು ಎನ್ನನೆ ಬಸವಣ್ಣನಂಗೆ ನಿಷೇಧಿಸಿ, ಆವ ಅವಲಂಬವು ಇಲ್ಲದೆ,
ನಿರಾಲಂಬದಲ್ಲಿ ನಿಜನಿವಾಸಿಯಾಗಿರ್ದೆನು ಕಾಣಾ,
ನಿಃಕಳಂಕ ಮಲ್ಲಿಕಾರ್ಜುನಾ. ||೧೬೩||

೧೫೮೨

ಎನ್ನ ಚಿತ್ತಕ್ಕೆ ನಕಾರವಾದನಯ್ಯಾ ಬಸವಣ್ಣನು.
ಎನ್ನ ಬುದ್ಧಿಗೆ ಮಕಾರವಾದನಯ್ಯಾ ಬಸವಣ್ಣನು.
ಎನ್ನಅಹಂಕಾರಕ್ಕೆ ಶಿಕಾರವಾದನಯ್ಯಾ ಬಸವಣ್ಣನು.
ಎನ್ನ ಮನಕ್ಕೆ ವಕಾರವಾದನಯ್ಯಾ ಬಸವಣ್ಣನು.
ಎನ್ನ ಜ್ಞಾನಕ್ಕೆ ಯಕಾರವಾದನಯ್ಯಾ ಬಸವಣ್ಣನು.
ಎನ್ನ ಮತಿಗೆ ಓಂಕಾರವಾದನಯ್ಯಾ ಬಸವಣ್ಣನು.
ಎನ್ನ ನಾದಕ್ಕೆ ಅಕಾರವಾದನಯ್ಯಾ ಬಸವಣ್ಣನು.
ಎನ್ನ ಬಿಂದುವಿಂಗೆ ಉಕಾರವಾದನಯ್ಯಾ ಬಸವಣ್ಣನು.
ಎನ್ನ ಕಳೆಗೆ ಮಕಾರವಾದನಯ್ಯಾ ಬಸವಣ್ಣನು.
ಎನ್ನ ಭವವ ಕೊಂದೆಹೆನೆಂದು ಬಕಾರವಾದನಯ್ಯಾ ಬಸವಣ್ಣನು.
ಎನ್ನ ಸಕಲಾಸೆಯ ಕೊಂದೆಹೆನೆಂದು ಸಕಾರವಾದನಯ್ಯಾ ಬಸವಣ್ಣನು.
ಎನ್ನ ವಿಕಾರವ ಕೊಂದೆಹೆನೆಂದು ವಕಾರವಾದನಯ್ಯಾ ಬಸವಣ್ಣನು.
ಎನ್ನ ಭಕ್ತಿಗೆ ಬಕಾರವಾದನಯ್ಯಾ ಬಸವಣ್ಣನು.
ಎನ್ನ ಶಕ್ತಿಗೆ ಸಕಾರವಾದನಯ್ಯಾ ಬಸವಣ್ಣನು.
ಎನ್ನ ವಚಸ್ಸಿಂಗೆ ವಕಾರವಾದನಯ್ಯಾ ಬಸವಣ್ಣನು.

ಇಂತಪ್ಪ ಮಹಾಪ್ರಣಮಂಗಳೇ ಬಸವಣ್ಣನಾಗಿ,
ಬಸವಣ್ಣನೇ ಮಹಾಪ್ರಣಮಂಗಳಾಗಿ,
ತಮ್ಮ ಮಠಕ್ಕೆ ತಾವೇ ಬಂದು, ಭಕ್ತಿ ವಸ್ತುವನಿತ್ತಡೆ,
ನಾನದ ನಿಃಕಳಂಕ ಮಲ್ಲಿಕಾರ್ಜುನನ ಶರಣರಿಗಿತ್ತು ಸುಖಿಯಾದೆನು. ||೧೬೪||

೧೫೮೩

ಎನ್ನ ತನುವಿನಲ್ಲಿ ಗುರುಮೂರ್ತಿ ಸಂಗನಬಸವಣ್ಣನ ಕಂಡೆನು.
ಎನ್ನ ಮನದಲ್ಲಿ ಲಿಂಗಮೂರ್ತಿ ಚನ್ನಬಸವಣ್ಣನ ಕಂಡೆನು.
ಎನ್ನ ಭಾವದಲ್ಲಿ ಜಂಗಮಮೂರ್ತಿ ಸಿದ್ಧರಾಮಯ್ಯನ ಕಂಡೆನು.
ಎನ್ನ ತೃಪ್ತಿಮುಖದಲ್ಲಿ ಪ್ರಸಾದಮೂರ್ತಿ ಮರುಳಶಂಕರದೇವರ ಕಂಡೆನು.
ಎನ್ನ ಅರಿವಿನ ಮುಖದಲ್ಲಿ ನೈಷ್ಠಿಕಾಮೂರ್ತಿ ಮಡಿವಾಳಯ್ಯನ ಕಂಡೆನು.
ಎನ್ನ ಹೃದಯಮುಖದಲ್ಲಿ ಜ್ಞಾನಮೂರ್ತಿ ಪ್ರಭುದೇವರ ಕಂಡೆನು.
ಇಂತೀ ಷಟ್‌ಸ್ಥಲವ ಎನ್ನ ಸರ್ವಾಂಗದಲ್ಲಿ ಪ್ರತಿಷ್ಠೆಯ ಮಾಡಿ ತೋರಿದ
ನಿಃಕಳಂಕ ಮಲ್ಲಿಕಾರ್ಜುನಾ,
ನಿಮ್ಮ ಶರಣರ ಕಂಡು, ಪರಮಸುಖಿಯಾಗಿರ್ದೆನು. ||೧೬೫||

೧೫೮೪

ಎನ್ನ ನೆನಹಿನ ನಿಧಿಯು ನೋಡಾ, ಎನ್ನ ಅನುವಿನ ಘನವ ನೋಡಾ.
ಆಹಾ ಎನ್ನ ಪುಣ್ಯವೆ, ಆಹಾ ಎನ್ನ ಭಾಗ್ಯವೆ,
ಆಹಾ ಎನ್ನ ಕಂಗಳ ಮನೆಯ ಮಾಡಿಕೊಂಡಿಪ್ಪ ನಿತ್ಯದ ಬೆಳಗೆ.
ಎನ್ನ ಧಾನ್ಯದೊಳಗಣ ವೃಥವೆ, ಎನ್ನ ಸುಖದೊಳಗಣ ಸುಗ್ಗಿಯೆ.
ನಿಃಕಳಂಕ ಮಲ್ಲಿಕಾರ್ಜುನಾ,
ನಿಮ್ಮ ಶರಣ ಪ್ರಭುದೇವರ ಶ್ರೀಪಾದಕ್ಕೆ
ನಮೋ ನಮೋ ಎನುತಿರ್ದೆನು. ||೧೬೬||

೧೫೮೫

ಎನ್ನ ಮಾಟ, ಕುರುಡ ಸಭೆಯಲ್ಲಿರ್ದು ನಗೆನಕ್ಕಂತಾಯಿತ್ತು.
ಶ್ರೋತ್ರನಾಶವಲ್ಲಿ ಜಯಸ್ವರದ ಪಾಡಿದಂತಾಯಿತ್ತು.
[ಬೆಳ್ಳ], ಹೆಣ್ಣಿಂಗೆ ತಾಳಿದ ದೃ[ಷ್ಟದಂ]ತಾಯಿತ್ತು.
ನಾ ಬಂದ ಲೀಲೆಯನಿನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೬೭||

೧೫೮೬

ಎನ್ನ ವಿಶ್ವಾಸದಿಂದ ನಿನ್ನ ನೋಡಿಹೆನೆಂದಡೆ, ನೀ ವಿಶ್ವಾಸಹೀನ.
ನಿನ್ನ ವಿಶ್ವಾಸ ಎನ್ನಲ್ಲಿ ಕರಿಗೊಂಡು, ಎನ್ನ ಅದೃಷ್ಟ, ನಿಮ್ಮ ಅದೃಷ್ಟವಾಗಿ ನಿಂದಲ್ಲಿ,

ಲಿಂಗ ಭಕ್ತ, ಭಕ್ತಲಿಂಗವೆಂಬ ಶ್ರುತಿ ತಪ್ಪದು,
ನಿಃಕಳಂಕ ಮಲ್ಲಿಕಾರ್ಜುನಾ. ||೧೬೮||

೧೫೮೭

ಎಲೆ ಆತ್ಮನೆ ಪಾತಕದ ಪಾಕುಳದಲ್ಲಿ ಏಕೆ ಹುಟ್ಟಿದೆ ?
ಹಸಿದಡುಣಬೇಕು, ವಿಷಯವನನುಕರಿಸಬೇಕು, ಹುಸಿಯಬೇಕು.
ಇವರೆಲ್ಲರು ಎಂದಂತೆ ಗಸಣೆಗೊಳಗಾದೆನೆನ್ನಸುವ ಕೊಂಡೊಯ್ಯೊ.
ನಿಃಕಳಂಕ ಮಲ್ಲಿಕಾರ್ಜುನಾ. ||೧೬೯||

೧೫೮೮

ಎಷ್ಟು ಪಟುಭಟನಾದಡೂ ಸ್ಫುಟದ ಮನೆಯಲ್ಲಿ ಅಡಗಬೇಕು.
ದಿಟಪುಟವನರಿದಡೂ ಗುರು ಕೊಟ್ಟ ನಿಟಿಲಲೋಚನನ ಘಟಿಸಬೇಕು.
ಭಿತ್ತಿಯ ಮೇಲೆ ಚಿತ್ತಾರ ಒಪ್ಪವಿಟ್ಟಂತಿರಬೇಕು.
ಗುರು ಕೊಟ್ಟ ಇಷ್ಟದ ಬೆಂಬಳಿಯ ದೃಷ್ಟವನರಿಯಬೇಕು.
ಮೆಟ್ಟಿದುದು ಜಾರಿ, ಹಿಡಿದುದ ಮುರಿದ ಮತ್ತೆ,
ಎರಡುಗೆಟ್ಟವಂಗೆ ಇನ್ನೇತಕ್ಕೆ, ನಿಃಕಳಂಕ ಮಲ್ಲಿಕಾರ್ಜುನಾ ? ||೧೭೦||

೧೫೮೯

ಏಕಜಲ ಬಹುಜಲವಾದ ಕ್ರಮವನರಿವುದು.
ಅದಕ್ಕೆ ದೃಷ್ಟ;
ಅನಾದಿಯ ಪ್ರಣವನರಿಯದೆ, ಹಾದಿಯ ಕಲ್ಲ ಪೂಜಿಸಿದರಯ್ಯಾ,
ಸಂಸಾರಕ್ಕೆ ಬೋಧೆಗೆ ಸಿಕ್ಕಿರೆ
ಅನಾಗತಸಿದ್ಧಿಯ ಹೋದ ಹೊಲಬನರಿಯದೆ ಕೆಟ್ಟರಯ್ಯಾ.
ಅಂಧಕಂಗೆ ಚಂದಾದ ಮುಖವುಂಟೆ ?
ಶೃಂಗಾರ ಪಂಗುಳಂಗೆ ಯೋಜನದ ಸುದ್ದಿಯಿಲ್ಲ.
ಲಿಂಗವನರಿಯದಂಗೆ ಜಗದ ಹಂಗಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೧೭೧||

೧೫೯೦

ಏಕಾಕಾಶದಿಂದ ಅಂಬು ಸಂಭ್ರಮಿಸಿತ್ತು.
ಬಹುವರ್ಣದ ಧರಿತ್ರಿಯಲ್ಲಿ, ಅವರವರ ವರ್ಣಛಾಯೆ ನಿಂದಿತ್ತು.
ಕೂಡಿ ವೇಧಿಸಿ ಚರಿಸಲಾಗಿ, ಒಂದೆ ಗುಣ ನಿಂದಿತ್ತು.
ಅದು ತಟಾಕದಲ್ಲಿ ಆಶ್ರಯಿಸಲಾಗಿ, ಸ್ತೋಮವಾಯಿತ್ತು.
[ಕೀಳಿನಲ್ಲಿ] ನಿಂದು ಜಾಳಿಸಲಾಗಿ, ಸ್ತೋಮ ಬಿಟ್ಟಿತ್ತು.

ಭಾವಿಸಿ ನೋಡಿಹೆನೆಂದಡೆ ಪ್ರಮಾಣವಿಲ್ಲ ಕಂಡಯ್ಯಾ.
ಇಂತೀ ಪ್ರಕಾರದಲ್ಲಿ ಜನಿಸಿದ ಪಿಂಡ ಹಿಂಗುವ ಠಾವಿನ್ನಾವುದೊ ?
ಒಂದು ಚಕ್ರದಲ್ಲಿ ಜನಿಸಿದ ನಾನಾವರ್ಣದ ಕುಂಭಂಗಳಿಗೆ
ಸ್ಥೂಲ ಸೂಕ್ಷ್ಮದ ಅನ್ಯವ ಕಲ್ಪಿಸಲುಂಟೇ
ಒಂದೆ ಗುಣದ ಬಗೆಯಲ್ಲದೆ ?
ಅಡಗಿದ ತತ್ವಂಗಳ ತತ್ವಮುದ್ಧೆಯ ತುತ್ತನೊಲ್ಲದೆ ನಿಶ್ಚಯವಾದ,
ನಿಃಕಳಂಕ ಮಲ್ಲಿಕಾರ್ಜುನಾ. ||೧೭೨||

೧೫೯೧

ಏತದ ತುದಿಯಲ್ಲಿ ಕಟ್ಟಿದ ಮಡಕೆಯಂತೆ, ಅದ ನೀತಿವಂತರು ಮೆಟ್ಟಿ,
ಧರೆ ಪಾತಾಳದ ಉದಕವ ತಂದು ಪಾತ್ರೆಗೆ ಹರಹಿದ ತೆರದಂತೆ,
ಸರ್ವಮಯದಲ್ಲಿ ಒಪ್ಪಿಪ್ಪ ವಸ್ತುವನರಿಯದು, ನಿರ್ಜಾತನಾಗಬಲ್ಲಡೆ,
ಆತ್ಮನೆ ಜೀವನ್ಮುಕ್ತ, ನಿಃಕಳಂಕ ಮಲ್ಲಿಕಾರ್ಜುನಾ. ||೧೭೩||

೧೫೯೨

ಏರಿ ನೀರ ಕುಡಿಯಿತ್ತು, ಬೇರು ಬೀಜವ ನುಂಗಿತ್ತು.
ಆರೈಕೆಯ ಮಾಡುವ ತಾಯಿ, ಧಾರುಣಿಯಲ್ಲಿ ಕೊರಳ ಕೊಯ್ದಳು.
ಮಗು ಸತ್ತು, ಆ ಕೊರಳು ಬಿಡದು, ನಿಃಕಳಂಕ ಮಲ್ಲಿಕಾರ್ಜುನಾ. ||೧೭೪||

೧೫೯೩

ಐಕ್ಯ ಶರಣಸನ್ಮತವಾಗಿ, ಶರಣ ಪ್ರಾಣಸನ್ಮತವಾಗಿ,
ಪ್ರಾಣ ಪ್ರಸಾದಸನ್ಮತವಾಗಿ, ಪ್ರಸಾದ ಮಾಹೇಶ್ವರಸನ್ಮತವಾಗಿ,
ಮಾಹೇಶ್ವರ ಭಕ್ತಸನ್ಮತವಾಗಿ, ಆ ಭಕ್ತ ಸಮ್ಯಕ್ರೀ ಸನ್ನದ್ಧವಾಗಿ,
ಕ್ರೀಯಿಕ್ಕಿದ ಕಿಚ್ಚಿನಂತೆ, ಅರ್ಕ ಚಂದ್ರನಂತೆ, ಆರಾರ ಚಿತ್ತಕ್ಕೆ ಹೆಚ್ಚುಕುಂದಿಲ್ಲದೆ
ನಿಶ್ಚಿಂತನಾದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. ||೧೭೫||

೧೫೯೪

ಐದು ವರ್ಣದ ಪಶುವಿನ ಬಸುರಿನಲ್ಲಿ, ಮೂರು ವರ್ಣದ ಕರು ಹುಟ್ಟಿ,
ಒಂದೇ ವರ್ಣದ ಹಾಲ ಸೇವಿಸಿ, ಹಲವು ಹೊಲದಲ್ಲಿ ತಿರುಗಾಡುತ್ತಿದ್ದಿತ್ತು.
ನಿಃಕಳಂಕ ಮಲ್ಲಿಕಾರ್ಜುನಲಿಂಗದ ಕುಳದ ಹೊಲಬುಗಾಣದೆ. ||೧೭೬||

೧೫೯೫

ಒಂದ ಕಂಡು ಒಂದನರಿದೆಹೆನೆಂಬನ್ನಕ್ಕ, ಸಂದೇಹಪದದಲ್ಲಿ ಅರಿವುದಿನ್ನೇನೋ?
ಒಂದನರಿತು, ಒಂದ ಮರೆತು, ಬೇರೊಂದ ಕಂಡೆಹೆನೆಂಬುವ ಒಡಲದೇನೋ ?

ಆ ದ್ವಂದ್ವವಳಿದು, ನಿಂದ ನಿಜವೆ ಸಂದೇಹಕ್ಕೆ ಒಡಲಿಲ್ಲದೆ ನಿಂದುದು,
ಷಡುಸ್ಥಲಭರಿತ ಪರಿಪೂರ್ಣ ನಿಃಕಳಂಕ ಮಲ್ಲಿಕಾರ್ಜುನಾ. ||೧೭೭||

೧೫೯೬

ಒಂದು ದ್ವಾರದಲ್ಲಿ ಬಂದ ಆತ್ಮಂಗೆ, ಹಲವು ದ್ವಾರದಲ್ಲಿ ಉಂಟೆಂದು,
ಹೊಲಬುದಪ್ಪಿ ನುಡಿದವರ ನೋಡಾ.
ವಾಯು ಒಂದಲ್ಲದೆ ಶತವಾಯುವಿಲ್ಲೆಂದೆ, ಇಂದ್ರಿಯ ಒಂದಲ್ಲದೆ ಐದಿಲ್ಲವೆಂದೆ.
ಕರಣ ಒಂದಲ್ಲದೆ ನಾಲ್ಕಿಲ್ಲವೆಂದೆ, ಮದ ಒಂದಲ್ಲದೆ ಎಂಟಿಲ್ಲವೆಂದು.
ವ್ಯಸನ ಒಂದಲ್ಲದೆ ಏಳಿಲ್ಲವೆಂದೆ, ಆಧಾರ ಒಂದಲ್ಲದೆ ಷಡಾಧಾರವಿಲ್ಲವೆಂದೆ.
ಒಂದು ಬೀಜದಲ್ಲಿ ಆದ ಹಣ್ಣಿನ ರುಚಿಗೆ, ನಾನಾ ಫಲದ ರಸದ ರುಚಿ ಉಂಟೆ ?
ಆ ಬೀಜ ಮೊಳೆತಲ್ಲಿ ಏಕರೂಪವಾಗಿ ತಲೆದೋರಿತ್ತು.
ಬಲಿದು ಮತ್ತೆ ಹಲವುರೂಪಾಗಿ ಪಲ್ಲವಿಸಿತ್ತು.
ನೆಲೆಯ ಕಡಿದ ಮತ್ತೆ ರೂಪೆಲ್ಲ ನೆಲೆಯೊಳಡಗಿದವು.
ಸೆಲೆಸಂದ ಹೊನ್ನಿಂಗೆ ಒಟ್ಟವುಂಟೆ ?
ಬಲುಹು ಮುರಿದವಂಗೆ ರಣದ ಸುದ್ದಿಯೇಕೋ ?
ಜಲದಲ್ಲಿ ಮುಳುಗಿದವಂಗೆ ಇಳೆಯವರ ಸುದ್ದಿಯೇಕೋ ?
ಇದು ಕಾರಣ, ನಾನಾ ವರ್ಣದ ಹೇಮವ ಭಾವಿಸಿ,
ಒಂದರಲ್ಲಿ ಕಡೆಗಾಣಿಸಿದ ಮತ್ತೆ
ಭಾವನೆಯ ಬಣ್ಣ ಒಂದಲ್ಲದೆ ಮತ್ತೆ ಭಾವಿಸಲಿಲ್ಲವಾಗಿ,
ಅರಿದಲ್ಲಿ ಜ್ಞಾನ, ಮರೆದಲ್ಲಿ ಅಜ್ಞಾನ,
ನಾನಾರೆಂಬುದನರಿದಲ್ಲಿಯೆ ಒಂದು ಗುಣ ನಿಂದಿತ್ತು.
ತನ್ನ ಮರೆದಲ್ಲಿಯೆ ನಾನಾ ಸಂಚಲವಾಯಿತ್ತು, ಇದಕ್ಕಿದೇ ದೃಷ್ಟ.
ದೇಹವಿಡಿದುದಕ್ಕೆರಡಿಲ್ಲದೆ ಮೀರಲಿಲ್ಲವಾಗಿ,
ಜಗವನರಿವುದಕ್ಕೆ ದಿವರಾತ್ರಿಯದೆ ಮೀರಿ ತೋರಲಿಲ್ಲವಾಗಿ,
ಸಂಸಾರ ಹರಿವುದಕ್ಕೆ ನಿಃಕಳಂಕ ಮಲ್ಲಿಕಾರ್ಜುನನಲ್ಲದಿಲ್ಲವಾಗಿ. ||೧೭೮||

೧೫೯೭

ಒಂದು ಪಕ್ಷಿಗೆ ಐದು ತಲೆ, ಶಿರವೊಂದರಲ್ಲಿಯೆ ಮೂಡಿತ್ತು ನೋಡಾ.
ಒಡಲು ಒಂದಾಯಿತ್ತು, ಬಣ್ಣ ಹದಿನಾರಾಯಿತ್ತು.
ಅದರ ಚಂದ ಇಪ್ಪತ್ತೈದಾಯಿತ್ತು, ಹುಟ್ಟಿದ ಗರಿ ನೂರೊಂದಾಯಿತ್ತು.
ಆ ಹಕ್ಕಿಯ ಜೀವವಿದ್ದಂತೆ ಕೊಂದು, ಸುಡದ ಬೆಂಕಿಯಲ್ಲಿ ಸುಟ್ಟು,
ತಲೆಯಿಲ್ಲದ ಕಣ್ಣಿನಲ್ಲಿ ನೋಡಿ, ಬಾಯಿಲ್ಲದ ನಾಲಗೆಯಲ್ಲಿ ಸವಿದು,

ಸವಿವುದಕ್ಕೆ ಮೊದಲೆ ರುಚಿಯನರ್ಪಿತವ ಮಾಡಿದ ಜ್ಞಾನಜಂಗಮವ ನೋಡಾ.
ಆತನ ಇರವು ತುರುಬೊ ? ಜಡೆಯೊ ? ಅರಿಯಬಾರದಣ್ಣಾ.
ಎಣ್ಣೆ ಕೊಂಡ ಮಣ್ಣಿನಂತೆ, ಅನಲ ಕೊಂಡ ದ್ರವ್ಯದಂತೆ,
ಕುಸುಮ ಕೊಂಡ ಗಂಧದಂತೆ, ರಸ ಕೊಂಡ ಪಾಷಾಣದಂತೆ,
ಹೆಸರಿಡಬಾರದಯ್ಯಾ, ಆ ಜಂಗಮದಿರವ.
ಆ ಜಂಗಮ ಬಂದು ಎನ್ನ ಹುಳ್ಳಿಯಂ ಬಿಡಿಸಿ, ತಳ್ಳಿಯಂ ಹರಿದು,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ತಲ್ಲೀಯವಾದ. ||೧೭೯||

೧೫೯೮

ಒಂದು ಬಾಲೆ ಕಂದನ ಹೊತ್ತು ಬಂದಿತ್ತು.
ಕಂದ ಹುಟ್ಟಿ, ಎಡದ ಕೈಯಲ್ಲಿ ಗಡಿಗೆ, ಬಲದ ಕೈಯಲ್ಲಿ ಕಟ್ಟಿಗೆ.
ಮಂಡೆಯ ಮೇಲೆ ಕಿಚ್ಚುಸಹಿತವಾಗಿ ಅಟ್ಟುಂಬುದಕ್ಕೆ ನೆಲಹೊಲನ ಕಾಣದೆ,
ತಿಟ್ಟನೆ ತಿರುಗಿ, ಗಟ್ಟದ ಒತ್ತಿನಲ್ಲಿ, ಕಟ್ಟಕಡೆಯಲ್ಲಿ,
ಒಂದು ಬಟ್ಟಬಯಲು ಮಾಳವಿದ್ದಿತ್ತು.
ಕೈಯ ಕಂದನನಿರಿಸಿ ಕಟ್ಟಿಗೆಯ ಹೊರೆಯ ಕಟ್ಟ ಬಿಟ್ಟು,
ಮಸ್ತಕದ ಬೆಂಕಿಯ ಕಟ್ಟಿಗೆಯ ಒತ್ತಿನಲ್ಲಿರಿಸಿ,
[ಒತ್ತಿನ ಕಾಲ] ಕಾಣದೆ ಹೊಲಬುದಪ್ಪಿ, ಆ ಹೊಲದೊಳಗೆ ತಿರುಗಿ ನೋಡಿ,
ಪಶ್ಚಿಮದಲ್ಲಿ ಕಂಡ ಪಚ್ಚೆಯ ಕಲ್ಲು, ಉತ್ತರದಲ್ಲಿ ಕಂಡ ಪುಷ್ಕರದ ಕಲ್ಲು,
ಪೂರ್ವದಲ್ಲಿ ಕಂಡ ಬಿಳಿಯಕಲ್ಲು ಮೂರೂ ಕೂಡಿ,
ಮಡಕೆಯ ಮಂಡೆಯ ಮೇಲಿರಿಸಲಾಗಿ, ಕಂಡಿತ್ತು ಕಲ್ಲಿನ ಇರವ.
ಉದಕವನರಸಿ ಅ[ಳಲು]ತ್ತಿರ್ದಿತ್ತು [ಬೆಂಕಿ. ಆ ] ಬೆಂಕಿ ಬೇಗೆಗಾರದೆ,
ಉದಕ ಒಡೆದು ಮಡಕೆ ನಿಂದಿತ್ತು.
ನಿಂದ ಮಡಕೆಯ ಅಂಗವ ಕಂಡು, ಇದರ ಹಂಗೇನೆಂದು ಕೈ ಬಿಡಲಾಗಿ,
ಮಡಕೆಯಡಗಿತ್ತು ಮೂರುಕಲ್ಲಿನ ಮಧ್ಯದಲ್ಲಿ
ಕಟ್ಟಿಗೆ ಸುಟ್ಟು[ವನ ] ಮಕ್ಕಳುಂಡರು ಮಿಕ್ಕವರೆಲ್ಲಾ ಹಸಿದರು.
ಹಸಿದವರ ಸಂಗ ಗಸಣಿಗೊಳಿಸಿತ್ತು.
ಇಂತೀ ಹುಸಿಯ ದೇಹವ ತೊಟ್ಟು, ದೆಸೆಗೆಟ್ಟೆನಯ್ಯಾ,
ನಿಃಕಳಂಕ ಮಲ್ಲಿಕಾರ್ಜುನಾ. ||೧೮೦||

೧೫೯೯

ಒಂದು ಬೀಜವ ಬಿತ್ತಿದಡೆ ಮೂರುಫಲವಾಯಿತ್ತು.
ಆ ಫಲ ಬಲಿದು ಬೆಳೆದ ಮತ್ತೆ.

ಒಂದ ಉದಯದಲ್ಲಿ ಕೊಯ್ದೆ, ಒಂದ ಮಧ್ಯಾಹ್ನದಲ್ಲಿ ಕೊಯ್ದೆ,
ಒಂದ ಹೊತ್ತು ಸಂದ ಮತ್ತೆ ಕೊಯ್ದೆ.
ಈ ಮೂರರೆಯನೊಂದು ಮಾಡಿ ಮೆಟ್ಟಿಸಿದೆ.
ಭಕ್ತಿಜ್ಞಾನವೈರಾಗ್ಯವೆಂಬ ಎತ್ತಿನ ಕೈಯಲ್ಲಿ ತೂರಿದೆ ಕೊಂಗವನೆತ್ತಿ
ಅಂಗವೆಂಬ ಹೊಳ್ಳು ಹಾರಿತ್ತು.
ಸಂಸಾರವೆಂಬ ಚೊಳ್ಳು ನಿತ್ಯಾನಿತ್ಯ ವಿವೇಕವೆಂಬ ಕೊಳಗವ ಹಿಡಿದಳೆಯಲಾಗಿ,
ನೂರೊಂದು ಕೊಳಗವಾಯಿತ್ತು.
ಹೆಡಗೆಗೆ ಅಳವಡಿಸುವಾಗ ಐವತ್ತೊಂದು ಕೊಳಗವಾಯಿತ್ತು.
ನಡುಮನೆಯಲ್ಲಿ ಸುರಿವಾಗ ಇಪಪತ್ತೈದು ಕೊಳಗವಾಯಿತ್ತು.
ಪಡುವಣಕೋಣೆಯಲ್ಲಿ ಮಡಗಿರಿಸುವಾಗ,
ಪಡಿಯ ನೋಡಲಾಗಿ ಐಗಳವಾಯಿತ್ತು.
ಅದು ಬಿಡುಬಿಸಿಲಿನಲ್ಲಿ ಒಣಗೆ, ಅದು ಪಡಿಪುಚ್ಚಕ್ಕೆ ಮೂಗಳವಾಯಿತ್ತು.
ಆ ಮೂಗಳವ ನಡುಮೊರದಲ್ಲಿ ಸುರಿಯೆ,
ಪಡಿಗಣೆಸುವಾಗ ಒಕ್ಕುಳವಾಯಿತ್ತು.
ಆ ಒಕ್ಕುಳವ ಕುಟ್ಟಿ, ಮಿಕ್ಕುದ ಕೇರೆ ಮತ್ತೆ ಒಬ್ಬುಳವಾಯಿತ್ತು.
ಒಬ್ಬುಳವ ಕುಡಿಕೆಯಲ್ಲಿ ಹೊಯ್ದು ನಿರುತದಿಂ ನೋಡೆ,
ಮೂರು ಮಾನವ ನುಂಗಿ, ಒಂದು ಮಾನವಾಯಿತ್ತು.
ಒಂದು ಮಾನವನಟ್ಟು ಕುಡಿಕೆಯಲ್ಲಿ ಕುಸುರೆ
ಕೂಳೊಡೆದು ಬಾಲಗೋಗರವಾಯಿತ್ತು.
ಉಂಡವರತ್ತ, ನಾನಿತ್ತ ನಿಃಕಳಂಕ ಮಲ್ಲಿಕಾರ್ಜುನಾ. ||೧೮೧||

೧೬೦೦

ಒಂದು ಮೂರಾದ ಭೇದವ, ಮೂರು ಆರಾದ ಭೇದವ,
ಆರು ಇಪ್ಪತ್ತೈದಾದ ಭೇದವ, ಇಪ್ಪತ್ತೈದು ನೂರೊಂದಾದ ಭೇದವ,
ಒಂದನರಿಯದ ಯೋಗಿಗಳ ಪಾಶವನಳೆವ ತೆರದಂತೆ,
ಆ ನೂರೊಂದು ಇಪ್ಪತ್ತೈದರಲ್ಲಿ ಅಡಗಿತ್ತು.
ಆ ಇಪ್ಪತ್ತೈದು ಆರರಲ್ಲಿ ಅಡಗಿತ್ತು.
ಆ ಆರು ಮೂರರಲ್ಲಿ ಆಡಗಿತ್ತು, ಆ ಮೂರು ಒಂದರಲ್ಲಿ ಸಂದಿತ್ತು.
ಆ ಒಂದು ಸಂದೇಹವಳಿಯಿತ್ತು.
ಇದರಂದವನಾರು ಬಲ್ಲರಯ್ಯಾ ?
ಸಂದೇಹದಲ್ಲಿ ಬಿದ್ದು, ಲಿಂಗವನರಿಯದೆ ಭಂಗಿತರಾದರಯ್ಯಾ,

ಆಗಮಕ್ಕತೀತ ಆನಂದ ದಾವಾನಲ, [ಭ] ವರಹಿತ
ನಿಃಕಳಂಕ ಮಲ್ಲಿಕಾರ್ಜುನಾ. || ೧೮೨ ||

೧೬೦೧

ಒಂದು ಶಿಲೆಯೊಡೆದು ಮೂರಾದ ಭೇದವ ನೋಡಾ.
ಒಂದು ಶಿಲೆ, ಶೂಲ ಕಪಾಲ ಡಿಂಡಿಮ ರುಂಡಮಾಲೆ ಐದು ತಲೆ,
ತಲೆಯೊಳಗೊಬ್ಬಳು, ತೊಡೆಯೊಳಗೊಬ್ಬಳು.
ಇಂತೀ ಕಡುಗಲಿಯ ದೇವನೆಂಬರು ನೋಡಾ.
ಎನ್ನ ದೇವಂಗೈದು ಮುಖವಿಲ್ಲ, ಈರೈದು ಭುಜವಿಲ್ಲ.
ಎನ್ನ ದೇವಂಗೆ ತೊಡೆಮುಡಿಯೊಳಾರನೂ ಕಾಣೆ.
[ಹಿಡಿ]ವುದಕ್ಕೆ ಕೈದಿಲ್ಲ, ಕೊಡುವುದಕ್ಕೆ ವರವಿಲ್ಲ.
ತೊಡುವುದಕ್ಕಾಭರಣವಿಲ್ಲ, ಒಡಗೂಡುವುದಕ್ಕೆ ಪುರುಷ[ನಿಲ್ಲ].
ತನಗೆ ಮತಿಯಿಲ್ಲ, ತನ್ನನರಿವವರಿಗೆ ಗತಿಯಿಲ್ಲ.
ಗತಿಯಿಲ್ಲವಾಗಿ ಶ್ರುತಿಯಿಲ್ಲ, ಶ್ರುತಿಯಿಲ್ಲವಾಗಿ ನಾದವಿಲ್ಲ.
ನಾದವಿಲ್ಲವಾಗಿ ಬಿಂದುವಿಲ್ಲ, ಬಿಂದುವಿಲ್ಲವಾಗಿ ಕಳೆಯಿಲ್ಲ.
ಇಂತಿವೆಲ್ಲವೂ ಇಲ್ಲವಾಗಿ ಹೊದ್ದಲಿಲ್ಲ,
ಹೊದ್ದಲಿಲ್ಲವಾಗಿ ಸಂದಿಲ್ಲ, ಸಂದಿಲ್ಲವಾಗಿ ಸಂದೇಹವಿಲ್ಲ.
ನಿಃಕಳಂಕ ಮಲ್ಲಿಕಾರ್ಜುನನಲ್ಲಿಯಲ್ಲದೆ ಎಲ್ಲಿಯೂ ಕಾಣೆ. || ೧೮೩ ||

೧೬೦೨

ಒಡಗೂಡಿಪ್ಪ ಲಿಂಗವನರಿಯದೆ ಅಡಿಯಿಟ್ಟು,
ಪೊಡವಿಯೊಳಗಣ ಅಡವಿ ಗಿಡುಗಳಲ್ಲಿಪ್ಪ ಮೃಡಾಲಯಮಂ ಕಂಡು, ಪೊಕ್ಕು
ಸಡಗರಿಸಿಕೊಂಡು ವರವ ಹಡೆವೆನೆಂದು ಬೇಡುವುದು ಕುರಿತು,
ಅದು ಜರಿದು ಬೀಳೆ, ಕೊಟ್ಟ [ನೆ]ರವನೆಂದು ನಿಶ್ಚಯ ಮಾಡಿದ ಮತ್ತೆ,
ಸಾವರ ಕಂಡು ಅಚ್ಚುಗಬಡುತ್ತಿದ್ದೇನೆ.
ಇವರಿಗಿನ್ನೆತ್ತಣ ಮುಕ್ತಿಯೊ, ನಿಃಕಳಂಕ ಮಲ್ಲಿಕಾರ್ಜುನಾ ? || ೧೮೪ ||

೧೬೦೩

ಒಡಲಿಲ್ಲದ ಭಕ್ತಂಗೆ ನಿರ್ಜೀವಿ ಜಂಗಮ ಸುಳಿದ ನೋಡಯ್ಯಾ.
ಆ ಜಂಗಮ ಸುಳಿದಡೆ, ಆ ಭಕ್ತನೊಡಲು ತುಂಬಿ ಜೀವವಾಯಿತ್ತು.
ಆ ಜಂಗಮದ ಭೇದವನರಿಯಲಾಗಿ,
ಆ ಜೀವವಳಿದು, ನೀ ನಾನೆಂಬ ಭಾವಕ್ಕೆ ನೆಲೆಯಾಯಿತ್ತು.
ಆ ಜಂಗಮದ ಕಳಾಪರಿಪೂರ್ಣವನರಿಯಲಾಗಿ,
ಆ ಭಾವ ಮಹತ್ವವನೊಳಕೊಂಡಿತ್ತಯ್ಯಾ.

ಆ ಒಳಕೊಂಡ ಮಹತ್ವವೆ ಮಹದೊಡಗೂಡಿ ಹೋಯಿತ್ತು.
ಹೋದ ಮತ್ತೆ ನಾ ನೀನೆಂಬುದಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೧೮೫||

೧೯೦೪

ಒಡಲಿಲ್ಲದೆ ಆತ್ಮ ನಿರಬಲ್ಲುದೆ ? ಕ್ರೀಯಿಲ್ಲದೆ ಸತ್ಯ ನಿಲಬಲ್ಲುದೆ ?
ಭಾವವಿಲ್ಲದೆ ವಸ್ತು ಈಡಪ್ಪುದೆ ?
ಒಂದರಾಸೆಯಲ್ಲಿ ಒಂದ ಕಂಡು, ದ್ವಂದ್ವನೊಂದು ಮಾಡಿ,
ಒಂದೆಂಬುದನರಿತು, ಪ್ರಾಣಕ್ಕೆ ಸಂಬಂಧವ ಮಾಡಿ,
ಕೂಡಿಯಿದ್ದುದು ಪ್ರಾಣಲಿಂಗ.
ಆ ಉಭಯದ ಸಂದಳಿದುದು, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. ||೧೮೬||

೧೯೦೫

ಒಡೆಯರ ಕಟ್ಟಳೆಯಾದ ಮತ್ತೆ,
ಒಡಗೂಡಿ ಸಹಪಂಜ್ತೆಯಲ್ಲಿ ಮೃಡಶರಣನ ಪ್ರಸಾದವ ಕೊಳಲೊಲ್ಲದೆ,
ತುಡುಗುಣಿನಾಯಂತೆ ತೊಗಲಗಡಿಗೆಯ ತುಂಬುವ,
ಗುರುಪಾತಕರಿಗೆಲ್ಲಿಯದೊ ಒಡೆಯರ ಕಟ್ಟಳೆ ?
ಒಡೆಯನ ನಿರೀಕ್ಷಣೆಯಲ್ಲಿ ಸರಿಗದ್ದುಗೆಯನೊಲ್ಲದೆ,
ಒಡೆಯಂಗೆ ಮನೋಹರವಾಗಿ ಸಡಗರಿಸಿ ಸಮರ್ಪಿಸಿದ ಮತ್ತೆ,
ತನ್ನೊಳಗಿಪ್ಪ ಆತ್ಮಂಗೆ ತೃಪ್ತಿ, ಕೂರ್ಮನ ಶಿಶುವಿನ ಸ್ನೇಹದಂತೆ.
ಹೀಂಗಲ್ಲದೆ ಭಕ್ತಿ ಸಲ್ಲ. ಎನಗೆ ಪರಸೇವೆ ಪರಾಙ್ಮುಖವೆಂದು,
ಒಡೆಯರಿಗೆ ಎಡೆಮಾಡೆಂದು ಎನಗೆ ತಳುವೆಂದಡೆ, ಒಪ್ಪುವರೆ ನಿಜಶರಣರು ?
ಸತಿ ಕೋಣೆಯಲ್ಲಿದ್ದು, ಪತಿ ನಡುಮನೆಯಲ್ಲಿದ್ದಡೆ ರತಿಕೂಟವುಂಟೆ ?
ಇದರ ಗಸಣೆಗಂಜಿ, ವಿಶೇಷವನರಿಯದ ಪಶುಗಳಿಗೆಲ್ಲಿಯದೊ, [ಐಕ್ಯಾನುಭಾವ],
ನಿಃಕಳಂಕ ಮಲ್ಲಿಕಾರ್ಜುನಾ ? ||೧೮೭||

೧೯೦೬

ಒಡೆಯರು ದೇವರಿಗೆ ಕೊಟ್ಟಲ್ಲದೆ, ಕೊಳ್ಳೆನೆಂಬ ಮೃಡನ ಭಕ್ತರ ನೋಡಾ.
ಒಡೆಯರಿಗೊಂದು ಪರಿ, ತನಗೊಂದು ಪರಿ ಮಾಡುವ ಸಡಗರವ ನೋಡಾ.
ಒಡೆಯಂಗೆ ಭೆಟ್ಟಿ, ಮನೆಯೊಡಯಂಗೆ ತುಪ್ಪ ಕಟ್ಟುಮೊಸರು ಮೃಷ್ಟಾನ್ನ.
ಒಡೆಯರಿಗೆ ಕುರುಹ ತೋರಿ, ತಾ ಹಿರಿದಾಗಿ ಉಂಬ ಕಡುಗಲಿಯ ನೋಡಾ.
ಇವರಡಿಯಲ್ಲಿ ಬಂದಡೆ, ಇವರನೊಡಗೂಡಿ ನುಡಿದೆನಾದಡೆ,
ಜೇನಗಡಿಗೆಯಲ್ಲಿ ಬಿದ್ದ ಗುದಿಮಕ್ಷಿಕನಂತೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೮೮||

### ೧೬೦೭

ಒಪ್ಪದ ಕಪ್ಪೆ ಸರ್ಪನ ನುಂಗಿತ್ತ ಕಂಡೆ.
ತುಪ್ಪುಳು ಬಾರದ ಮರಿ ಹೆತ್ತ ತಾಯ ನುಂಗಿತ್ತ ಕಂಡೆ.
ಕೊಂಬಿನ ಮೇಲಣ ಕೋಡಗ ಕೊಂಬ ನುಂಗಿತ್ತ ನೋಡಾ.
ಬೀಸಿದ ಬಲೆಯ ಮತ್ಸ್ಯ ಗ್ರಾಸವ ಕೊಂಡಿತ್ತು ನೋಡಾ.
ಅರಿದೆಹೆನೆಂಬ ಅರಿವ, ಮರೆದೆಹೆನೆಂಬ ಮರವೆಯ ಕಳೆದುಳಿದ ಪರಿಯಿನ್ನೆಂತೊ ?
ಅರಿವುದೆ ಮರವೆ, ಮರೆವುದೆ ಅರಿವು.
ಅರಿವು ಮರವೆ ಉಳ್ಳನ್ನಕ್ಕ ಕುರಿತು ಮಾಡುವುದೇನು ?
ಕುರುಹಿಂಗೆ ನಷ್ಟ, ಆ ಕುರುಹಿನಲ್ಲಿ ಅರಿದೆಹೆನೆಂಬ ಅರಿವು ತಾನೆ ಭ್ರಮೆ.
ಆರೆಂಬುದ ತಿಳಿದಲ್ಲಿ, ಕೂಡಿದ ಕೂಟಕ್ಕೆ ಒಳಗಲ್ಲ ಹೊರಗಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೧೮೯ ॥

### ೧೬೦೮

ಒಳಲೆಯಲಟ್ಟಿದ ಹಾಲು, ಆ ಮಗುವಿನ ತಳದ ಏಣಲೆ ಕುಡಿಯಿತ್ತು.
ಬಟ್ಟಿನಲ್ಲಿಕ್ಕಿದ ತುಪ್ಪವ, ಆ ಮಗುವಿನ ಪಿಟ್ಟವೆ ತಿಂದಿತ್ತು.
ಬೆಣ್ಣೆಯ ಮಡಕೆಯ ನೊಣ ನುಂಗಿತ್ತು.
ನುಂಗಿದ ನೊಣದ ಹಿಂದೆ ಹಿಡಿಯಲಾಗಿ;
ಉಗುಳದು ಬೆಣ್ಣೆಯ, ಕೊಡದು ಮಡಕೆಯ
ಇದರಗಡುತನವ ನೋಡಾ, ಅದ ಹಿಡಿದು ಕೊಡಾ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೦ ॥

### ೧೬೦೯

ಓ ಎಂದಲ್ಲಿ ನಿರಾಕಾರವಸ್ತುವಾದೆಯಲ್ಲಾ,
ಓಂ ಎಂದಲ್ಲಿ ಸಾಕಾರವಸ್ತುವಾದೆಯಲ್ಲಾ.
ತತ್ತ್ವಮಸಿಯೆಂದಲ್ಲಿ ತತ್ತ್ವರೂಪಾಗಿ,
ಜಗವ ರಕ್ಷಿಸಿಹೆನೆಂದು ಕರ್ತೃರೂಪಾದೆಯಲ್ಲಾ.
ನಿಮಗೆ ಮರ್ತ್ಯದ ಮಣಿಹ ಎಲ್ಲಿ[ಯ] ಪರಿಯಂತರ, ಎನಗೆ ಕಟ್ಟುಗುತ್ತಗೆಯೆ?
ನಾ ಕಟ್ಟಿಗೆಯ ಹೊತ್ತೆ, ಶಿವಭಕ್ತರ ಮನೆಗೆ.
ನೀವು ಕೊಟ್ಟ ಕಾಯಕದ ಕೃತ್ಯ, ಇನ್ನೆಷ್ಟುದಿನ ಹೇಳಾ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೧ ॥

೧೬೧೦

ಓದಿನಲ್ಲಿ ಕಾಬಡೆ ಅಕ್ಷರಜ್ಞನಲ್ಲ, ಪಾಠದಲ್ಲಿ ಕಾಬಡೆ ಗಂಧರ್ವನಲ್ಲ.
ಬಯಲಿನಲ್ಲಿ ಕಾಬಡೆ ಭೂಮಿಯಾಕಾಶ ಮಧ್ಯದಲ್ಲಿಪ್ಪವನಲ್ಲ.
ಅರಸಿದಡೆ ಎಲ್ಲಿಯೂ ಇಲ್ಲ, ಅರಸದಿರ್ದಡೆ ಅಲ್ಲಿಯೇ ಇಹೆ.
ನಿನ್ನ ಬಲ್ಲವರಾರೊ, ನಿಃಕಳಂಕ ಮಲ್ಲಿಕಾರ್ಜುನಾ. ||೧೯೨||

೧೬೧೧

ಔದುಂಬರದ ಕುಸುಮದಲ್ಲಿ ಪಾದರಿ ಫಲವಾಗಿ,
ಆ ಫಲಬಿಂದು ಎಲವದ ಮರದಲ್ಲಿ ಹಣ್ಣಾಯಿತ್ತು.
ಆ ಹಣ್ಣನೊಡೆದು ನೋಡಲಾಗಿ, ರಸವಿಲ್ಲದೆ ತುಷಾರ ಹಾರಿತ್ತು.
ಇಂತೀ ಅಂಗವಿದ್ದು, ನಿರಂಗವಾಗಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಬಲ್ಲವನೆಂಬೆ. ||೧೯೩||

೧೬೧೨

ಕಂಚಗಾರನ ಕೈಯ ಮೈಣವಿದ್ದಡೆ, ನಾನೆಂತು ಉಪಮಿಸುವೆ ?
ಅದರ ಸಂಚವ ಕಂಚಗಾರನೆ ಬಲ್ಲ.
ಸಂಚಿತಕರ್ಮ ಪ್ರಾರಬ್ಧವೆಂಬಿವ ಮುಂದಕ್ಕೆ ನಾನೇನ ಬಲ್ಲೆ.
ಹಿಂಗಿದ್ದ ದೇಹದ ಸಂಚವನರಿಯೆ, ನಿಃಕಳಂಕ ಮಲ್ಲಿಕಾರ್ಜುನಾ. ||೧೯೪||

೧೬೧೩

ಕಂಡು ನೋಡಿದಲ್ಲಿ ಕಂಗಳಿಗೆ ಸುಖ, ಉಂಡು ನೋಡಿದಲ್ಲಿ ಜಿಹ್ವೆಗೆ ಸುಖ,
ಮುಟ್ಟಿ ನೋಡಿದಲ್ಲಿ ತ್ವಕ್ಕಿಗೆ ಸುಖ.
ಮುಖಮುಖಂಗಳಲ್ಲಿ ಭಿನ್ನವಿಲ್ಲದೆ, ಅರ್ಪಿತಾವಧಾನ ಏಕಮುಖವೆಂದೆ.
ಜಾತಿಗೆ ಬೇರೆ ಹರುಗೋಲುಂಟೆ ? ಆಚಾರಕ್ಕೆ ಬೇರೆ ಕುಲಛಲವುಂಟೆ ?
ಶಿಲೆ ಹಲವು ರೂಪಾದ ತೆರನಂತೆ,
ಅವರ ಒಲವರದ ರೂಪು ಅವರ ಛಲದ ಗುಣ.
ಬಳಿಕೆವಂತರೆಲ್ಲ ನಳಕೆಯ ಕೀರನಂತೆ, ಅವರರಿದಾಗ ಅರಿವಲ್ಲ,
ನಾ ನುಡಿದ ತಪ್ಪನೊಪ್ಪುಗೊಳ್ಳಾ, ನಿಃಕಳಂಕ ಮಲ್ಲಿಕಾರ್ಜುನಾ. ||೧೯೫||

೧೬೧೪

ಕಂಡೆನಯ್ಯಾ, ಕಂಗಳೊಳಗೊಂದು ಹೆಸರಿಡಬಾರದು ವಸ್ತುವ.
ಅದು ನಿಂದಲ್ಲಿ ನಿಲ್ಲದು, ಬಂದಲ್ಲಿ ಬಾರದು, ಹೊದ್ದಿದಲ್ಲಿ ಹೊದ್ದದು.
ಇವರ ಸಂದುಸಂಶಯದಿಂದ ನಂಬಿಯೂ ನಂಬದಿನ್ನೇವೆ ?

ಕಾಬಡೆ ಕಂಗಳಲ್ಲಿ ನಿಲ್ಲದು, ನೆನೆವಡೆ ಮನದಲ್ಲಿ ನಿಲ್ಲದು,
ಹೊಡೆವಡೆ ಕೈಯೊಳಗಲ್ಲ.
ಇದರ ಕೂಟದ ಕುಶಲವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೬ ॥

೧೬೧೫

ಕಂಡೆನೊಂದು ನೆಟ್ಟ ಶೂಲವ, ಮೊದಲೊಂದು, ತುದಿಮೂರು.
ಆ ಮೂರರ ತುದಿಯಲ್ಲಿ ಆರು ಸೂನಗೆ.
ಆರು ಸೂನಗೆಯ ಮೇಲೆ ಇಪ್ಪತ್ತೈದು ಹೆಣ ತೆಗೆಯಿತ್ತು.
ಹೆಣನೂದಿ ರುಧಿರ ಸುರಿಯಲಾಗಿ, ಅದರ ಭಾರ ತಾಗಿ, ಸೂನಗೆ ಮುರಿಯಿತ್ತು.
ಸೂನಗೆ ಕಾಣಬಾರದು. ಹೆಣ ಬಯಲಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೭ ॥

೧೬೧೬

ಕಂಥೆಯೊಳಗಣ ಕಪ್ಪ[ಡ]ವ ಹರಿದಲ್ಲದೆ ಕಾಯವಂಚಕನಲ್ಲ.
ಕಟ್ಟಿಗೆಯೊಳಗಣ ಗಣ್ಣ ಮುರಿದಲ್ಲದೆ ಕರ್ಮರಹಿತನಲ್ಲ.
ಕಪ್ಪರದೊಳಗಣ ಆಪ್ಯಾಯನವನೊಡದಲ್ಲದೆ [ಜೀ]ವಭಾವಕನಲ್ಲ.
ಕಣ್ಣೊಳಗಣ ಕಾಳಿಕೆ ಹಿಂಗಿಯಲ್ಲದೆ ಜ್ಞಾನಭಾವುಕನಲ್ಲ.
ಮಾಯೆಯೊಳಗಣ ಕಂಥೆಯ ಹರಿದು, ಕಾಯದೊಳಗಣ ಕಟ್ಟಿಗೆಯ ಮುರಿದು,
ಮನದೊಳಗಣ ಕಪ್ಪರವನೊಡೆದು, ಸೂಸಿ ಸುಳಿದಾಡುವ ಕಣ್ಣ ಕಿತ್ತು,
ನಿಶ್ಚಯದ ನಿಜದಲ್ಲಿ ಚ[ರಿ]ಸುವ ಜಂಗಮಕ್ಕೆ ನಮೋ ನಮೋ [ಎಂಬೆ],
ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೮ ॥

೧೬೧೭

ಕಂಬಳಿಯ ಹರಿಕಿನಲ್ಲಿ ಛತ್ತೀಸಕೋಟಿದೇವರ್ಕಳೆಲ್ಲರೂ ಸಿಕ್ಕಿ,
ಅಳಲುತ್ತ ಬಳಲುತ್ತಲೈದಾರೆ.
ಆ ಕಂಬಳಿಯಲ್ಲಿ ಮಹಾರುದ್ರನುದ್ಭರಿಸಿದ.
ಮಹಾರುದ್ರನ ಕಪಾಲದಲ್ಲಿ ಇಷ್ಟಾರ್ಥವೆಂಬ ಶಕ್ತಿ ಹುಟ್ಟಿದಳು.
ಆ ಶಕ್ತಿಯ ಯೋನಿಕಮಲದಲ್ಲಿ ವಿಷ್ಣು ಹುಟ್ಟಿದ.
ವಿಷ್ಣುವಿನ ನಾಭಿಕಮಲ ಮಧ್ಯದಲ್ಲಿ ಬ್ರಹ್ಮ ಹುಟ್ಟಿದ.
ಬ್ರಹ್ಮನ ಸೃಷ್ಟಿಯಾಂತ ಕೈಯಲ್ಲಿ ಸಕಲಬಹುರೂಪಂಗಳು ಹುಟ್ಟಿದವು.
ಅಮುತಿರ್ದರಯ್ಯಾ ಕಂಬಳಿಯ ಹರಿಕಿನ ಮಧ್ಯದಲ್ಲಿ.
ಕುರಿ ಸಾಯದು, ಕಂಬಳಿ ಹರಿಯದು.
ಇದಕ್ಕಂಜುತಿದ್ದೇನೆ ನಿಃಕಳಂಕ ಮಲ್ಲಿಕಾರ್ಜುನಾ. ॥ ೧೯೯ ॥

೧೬೧೮

ಕಂಬಳಿಯಲ್ಲಿ ಕೂಳ ಕಟ್ಟಿ, ಕೂದಲ ಸೋದಿಸಬಹುದೆ ಅಯ್ಯಾ ?
ಸಂಸಾರಕ್ಕಂಗವನಿತ್ತು, ಮೋಹಕ್ಕೆ ಮನವವಿತ್ತು,
ಮನುಜರ ಗುಣ ತಮಗೊಂದೂ ಬಿಡದೆ,
ಘನವನರಿತೆಹೆನೆಂಬ ಬಿನುಗಾಟದ ಮಾತೇಕೆ ?
ಹಸಿವು ತೃಷೆ ವ್ಯಸನ ವ್ಯಾಪ್ತಿ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಲಯವಾಗುತ್ತಿರ್ದು,
ದ್ವೈತಾದ್ವೈತದ ಮಾತಿನ ಬಣಬೆಯ ವೇಷಗಳ್ಳಗೇಕೆ ಪರದೇಶಿಗನ ಸುದ್ದಿ ?
ಅರಿದವನ ಅಂಗ ದಗ್ಧಪಟದಂತೆ, ಬೆಂದ ನುಲಿಯಂತೆ,
ಬೆಳಗಿನ ರೂಪಿನಂತೆ, ಉದಕದ ಪ್ರತಿಬಿಂಬದಂತೆ,
ಅದು ತೋರಲಿಲ್ಲವಾಗಿ, ಅದು ಅಂಗಲಿಂಗಪ್ರಾಣಸಂಯೋಗ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೨೦೦ ॥

೧೬೧೯

ಕಕ್ಷದಲ್ಲಿ ಅಂಗವ ಧರಿಸಿದ ಮತ್ತೆ ಕುಕ್ಷಿಯ ವರ್ತನೆ ಬಿಡಬೇಕು.
ಕರಸ್ಥಲದಲ್ಲಿ ಲಿಂಗವ ಧರಿಸಿದ ಮತ್ತೆ ಪರದ್ರವ್ಯಕ್ಕೆ ಕೈಯಾನದಿರಬೇಕು.
ಉತ್ತಮಾಂಗದಲ್ಲಿ ಲಿಂಗವ ಧರಿಸಿದ ಮತ್ತೆ ಮರ್ತ್ಯರುಗಳಿಗೆ ನೆಟ್ಟನೆ ಇರಬೇಕು.
ಅಮಳೋಕ್ಯದಲ್ಲಿ ಲಿಂಗವ ಧರಿಸಿದ ಮತ್ತೆ ತುತ್ತಿನಿಚ್ಛೆಯ ಬಿಡಬೇಕು.
ಉರಸೆಜ್ಜೆಯಲ್ಲಿ ಲಿಂಗವ ಧರಿಸಿದ ಮತ್ತೆ ಪರಸ್ತ್ರೀಯರ ಸಂಗವ ಬಿಡಬೇಕು,
ಮುಖಸೆಜ್ಜೆಯಲ್ಲಿ ಲಿಂಗವ ಧರಿಸಿದ ಮತ್ತೆ ಸಕಲಗುಣವನರಿಯಬೇಕು.
ಇಂತಿವನರಿಯದೆ ಸತ್ಕ್ರಿಯೆಯಲ್ಲಿ ನಡೆವ ನಡೆ ಎಂತುಟಯ್ಯಾ ?
ಭಕ್ತನಾದ ಮತ್ತೆ ಮರ್ತ್ಯರ ಸಂಗ ಬಿಡಬೇಕು.
ಮಾಹೇಶ್ವರನಾದ ಮತ್ತೆ ಮಹಾವಿಚಾರವ ತಿಳಿಯಬೇಕು.
ಪ್ರಸಾದಿಯಾದ ಮತ್ತೆ ಪರದೂಷಣೆಯ ಕೇಳದಿರಬೇಕು.
ಪ್ರಾಣಲಿಂಗಿಯಾದ ಮತ್ತೆ ಜಾಗ್ರ ಸ್ವಪ್ನ ಸುಷುಪ್ತಿಯಲ್ಲಿ ಮತ್ತತ್ವವಿಲ್ಲದಿರಬೇಕು.
ಶರಣನಾದ ಮತ್ತೆ ಸರ್ವಾವಧಾನಿಯಾಗಿರಬೇಕು.
ಐಕ್ಯನಾದ ಮತ್ತೆ ಸತ್ತುಚಿತ್ತಾನಂದವೆಂಬ ತ್ರಿವಿಧದ ಗೊತ್ತು ಮುಟ್ಟದಿರಬೇಕು.
ಹೀಂಗಲ್ಲದೆ ಷಟ್‌ಸ್ಥಲಕ್ಕೆ ಸಲ್ಲ, ಪರಬ್ರಹ್ಮಕ್ಕೆ ನಿಲ್ಲ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ನಿರ್ಲೇಪವಾದ ಶರಣ. ॥ ೨೦೧ ॥

೧೬೨೦

ಕಕ್ಷೆ, ಕರಸ್ಥಲ, ಉತ್ತಮಾಂಗ, ಉರಸೆಜ್ಜೆ, ಮುಖಸೆಜ್ಜೆ, ಅಮಳೋಕ್ಯ,
ಇಂತೀ ಷಟ್‌ಸ್ಥಾನ ಲಿಂಗಸಂಬಂಧವೆಂಬ ಅಂಗಹೀನರ ಮುಖವ ನೋಡಲಾಗದು.

ಉಂಗುಷ್ಠದಲ್ಲಿ ಸರ್ಪ ದಷ್ಟವಾದಡೆ, ದೇಹವೆಲ್ಲ ತದ್ವಿಷವಾದ ತೆರೆದಂತೆ,
ಆ ತೆರ ಸರ್ವಾಂಗಲಿಂಗಿಗೆ ಉಂಟಿಲ್ಲವೆಂಬುದ ನೀವೆ ಬಲ್ಲಿರಿ.
ಇದು ಕಾರಣ, ವಿಷಕ್ಕೆ ಸ್ಥಾಪ್ಯವಿಲ್ಲ, ಸರ್ವಾಂಗಲಿಂಗಿಗೆ ಷಟ್‌ಸ್ಥಾನವಿಲ್ಲ.
ಇಂತೀ ವ್ಯರ್ಥರು ಕೆಟ್ಟ ಕೇಡ ನೋಡಿ ದೃಷ್ಟವಾಗಿ,
ಎನಗೆ ನಾಚಿಕೆಯಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೨೦೨ ||

೧೬೨೧

ಕಚ್ಚುವ ಹಾವ ಹಿಡಿವುದಕ್ಕೆ ಗಾರುಡವ ಕಲಿಸಿದುದಿಲ್ಲ.
ಕುತ್ತುವ ಹಸುವಿನ ಕೊಂಬ ಹಿಡಿಯ ಕಲಿಸಿದುದಿಲ್ಲ.
ತಿಂಬ ಹುಲಿಗೆ ಅಂಗವ ತಪ್ಪಿಸುವುದ ಕಲಿಸಿದುದಿಲ್ಲ.
ಇದು ನಿನಗೆ ದಿಂಡೆಯತನವೊ, ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ ? || ೨೦೩ ||

೧೬೨೨

ಕಟ್ಟರಸಿನೊ[ಡನೆ] ಎಕ್ಕಸಕ್ಕವನಾಡಿದಡೆ,
ಅವರು ಮುಕ್ತಿ ಮುಸುರಿ ಹಿಕ್ಕದೆ ಬಿಡುವರೆ, ಅಸುವಿನೊಡೆಯರು ?
ಮರ್ಕಟಬುದ್ಧಿಯಲ್ಲಿ ತಪ್ಪಿ ನುಡಿದಡೆ, [ಅದ] ಒಪ್ಪವಿಟ್ಟುಕೊಳ್ಳಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೦೪ ||

೧೬೨೩

ಕಟ್ಟಿಗೆ ಕಸ ನೀರ ಹೊತ್ತು ಭಕ್ತರನ್ನಲ್ಲದೆ ಬೇಡೆನೆಂದು,
ಅವರು ಕರ್ತೃ, ನಾನು ತೊತ್ತೆಂದು, ಅವರು ಒಕ್ಕುದನಿಸಿಕೊಂಡು ಬಂದು,
ತನ್ನ ಕೃತ್ಯದ ನೇಮ ತಪ್ಪದೆ,
ಆಗವೆ ತನ್ನ ಸತಿ ಸುತ ಬಂಧು ದೇವರು ಮುಂತಾಗಿ
ಲಿಂಗಾರ್ಚನೆ ಮಾಡಬೇಕಲ್ಲದೆ,
ಇಂದಿಂಗೆ ನಾಳಿಂಗೆಂದು ಸಂದೇಹವ ಮಾಡಿದಡೆ,
ಲಿಂಗಕ್ಕೆ ದೂರ, ಜಂಗಮಕ್ಕೆ ಸಲ್ಲ, ಪ್ರಸಾದವಿಲ್ಲ.
ಇದಕ್ಕೆ ಸೋಲ ಬೇಡ, ನಿಃಕಳಂಕ ಮಲ್ಲಿಕಾರ್ಜುನಲಿಂಗವೆ ಸಾಕ್ಷಿ. || ೨೦೫ ||

೧೬೨೪

ಕಟ್ಟಿ ಬಿಟ್ಟು ಕಂಡೆಹೆವೆಂದು ಬಿಗಿದಿಪ್ಪರಂತೆ ಕೆಲ[ವರು].
ಕಣ್ಣು ಮುಚ್ಚಿ ಧ್ಯಾನದಿಂದರಿದು ನಿಂದಿಹೆವೆಂದು ಕೆಲ[ವರು].
ಜಪತಪ ನೇಮದಿಂದ ತಿರುಹಿ ಕಂಡೆಹೆವೆಂದು ಕೆಲ[ವರು].
ವೇದ ಶಾಸ್ತ್ರ ಆಗಮವ ನೋಡಿ ಕಂಡೆಹೆವೆಂದು ಕೆಲ[ವರು].

ಮಾಡಿ ನೀಡಿ ಕೊಟ್ಟುಕೊಂಡು ಸುಖಿಯಾಗಿ ನಿಂದಿಹೆವೆಂದು [ಕೆಲವರು].
ಕರ್ತೃ ಭೃತ್ಯರಾದೆಹೆವೆಂದು [ಕೆಲವರು].
ಲೋಕವೆಲ್ಲ ಕೆಟ್ಟು, ಮುನ್ನಾದಿಯಲ್ಲಿ ಆದ ಲಿಂಗ,
ಇದೆ ಸಾಮ್ಯಕೃತ್ಯವೆಂದು ಭೇದಿಸುವುದಕ್ಕೆ
ಅತೀತನಾದ ಶೂನ್ಯಲಿಂಗ. ಅನ್ಯಸಾಧ[ಕ]ಕ್ಕೆ ಸಿಕ್ಕದಿಪ್ಪ ಅನಾಗತ ಸಂಸಿದ್ಧಲಿಂಗವನು,
ತನ್ನನರಿದು ಇದಿರ ಕಂಡಡೆ, ಪ್ರಾಣಲಿಂಗವದೇಕೊ ?
ಏನೂ ಎನ್ನದೆ, ಅದೆಂತೂ ಎನ್ನದಿರ್ಪ
ನಿಃಕಳಂಕ ಮಲ್ಲಿಕಾರ್ಜುನ ತಾನೆ ಬಲ್ಲ. || ೨೦೬ ||

೧೬೨೫

ಕಣ್ಣ ಮುಚ್ಚಿ ದೃಷ್ಟಿಯಲ್ಲಿ ನೋಡಬಲ್ಲಡೆ ಆತನ ಬಲ್ಲವನೆಂಬೆ.
ಬಾಯ ಮುಚ್ಚಿ ನಾಲಗೆಯಲ್ಲಿ ಉಂಡಡೆ, ಆತ ಸಂ[ಗ]ಗೊಳಿಸಿದವನೆಂಬೆ.
ತನುವ ಮರೆದು, [ಆ ತ]ನುವ ಕಂಡಡೆ, ಆತನ ಅರಿದವನೆಂಬೆನಯ್ಯಾ.
ಬೆಳಗಿನೊಳಗಣ ಬೆಳಗು ಕಳೆಯೊಳಗಣ ಕಾಂತಿ,
ನಿಃಕಳಂಕ ಮಲ್ಲಿಕಾರ್ಜುನಾ. || ೨೦೭ ||

೧೬೨೬

ಕಣ್ಣಿನಲ್ಲಿ ನೋಡಿ ಕಂಡೆಹೆನೆಂದಡೆ ರೂಪಿಂಗೊಡಲಿಲ್ಲ.
ಕೈಯಲ್ಲಿ ಮುಟ್ಟಿ ಕಂಡೆಹೆನೆಂದಡೆ ನೆಟ್ಟಗೂಟವಲ್ಲ.
ಮನದಲ್ಲಿ ನೆನೆದು ಕಂಡೆಹೆನೆಂದಡೆ ಅನುವಿಂಗಗೋಚರ,
ಈ ಅನುಪಮಲಿಂಗವಾರಿಗೂ ಸಾಧ್ಯವಿಲ್ಲ.
ಘನಮಹಿಮ ನೀವೆ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನಾ. || ೨೦೮ ||

೧೬೨೭

ಕಣ್ಣಿಲ್ಲದವ ಕನ್ನಡಿಯ ನೋಡಿ ಕಂಡ.
ಬಾಯಿಲ್ಲದವ ಹೊಟ್ಟೆ ತುಂಬ ಉಂಡು ದಣಿದ.
ತಾನಿದ್ದು ಸತ್ತ, ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿಗೆ
ಹೊದ್ದಿ ಹೋಗುತ್ತಿರ್ದ. || ೨೦೯ ||

೧೬೨೮

ಕಣ್ಣಿಲ್ಲವವಂಗೆ ಬಣ್ಣಬಚ್ಚಣೆಯೇಕೆ ?
ಮನ್ನಣೆಯಿಲ್ಲದ ಠಾವಿನಲ್ಲಿ ಅಣ್ಣ ಅಪ್ಪ ಎನಲೇಕೆ ?

ನನ್ನಿಯ ಗುಣವಿಲ್ಲದಲ್ಲಿಗೆ, ಪನ್ನಗಧರನ ಶರಣರು ಮತ್ತಲ್ಲಿಗೆ ಹೋದಡೆ,
[ಕಾಲಿಗೆ] ತಾಗಿದ ಸರ[ಳ]ಕಂತಾಯಿತ್ತು.
ಬಲ್ಲವರಿಗೆ ಇದೇ ಗುಣವೆಂದೆ, ಪ್ರಾಣವಲ್ಲಭ
ನಿಃಕಳಂಕ ಮಲ್ಲಿಕಾರ್ಜುನಾ. || ೨೧೦ ||

೧೬೨೯

ಕಣ್ಣು ಕಳೆದು ದೃಷ್ಟಿ ಕಾಬುದ ಕಂಡೆ.
ಬಯಲು ಬಡಿವಡೆಯಿಸಿಕೊಂಡು, ಬಂಧನದಲೊಡಗೂಡುವುದ ಕಂಡೆ.
ಈ ಅಂಗವನೂ ನಿರಂಗವನೂ ಉಭಯಭಾವವಳಿದು ತಿಳಿಯಲಾಗಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗ, ತನ್ನೊಳಗಾದ ಚೋದ್ಯ. || ೨೧೧ ||

೧೬೩೦

ಕತ್ತಲೆಯ ಉದಕದಲ್ಲಿ ಮತ್ಸ್ಯ ಹುಟ್ಟಿದುದ ಕಂಡೆ.
ಮತ್ಸ್ಯಕ್ಕೆ ಮೂರು ಗರಿ, ಮರಿಗೆ ಆರು ಗರಿ.
ಮರಿ ಮತ್ಸ್ಯವ ನುಂಗಿತ್ತೊ ? ಅದು ತಾಯ ಬಸುರಲ್ಲಿ ಬಸರಿಕ್ಕಿತ್ತೊ ?
ಕೆರೆಯೊಡೆದು ಇಹುದಕ್ಕೆ ಠಾವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೨೧೨ ||

೧೬೩೧

ಕತ್ತಿಯನೆತ್ತಿ ಕೊಲೆಗೆಣೆಸಿದಡೆ,
ಕಲ್ಪಿತವ ತೊಡುವುದು ಕತ್ತಿಯೋ, ಹೊತ್ತವನೋ ?
ಈ ಉಭಯದ ಚಿತ್ರವನರಿದಡೆ,
ಅತ ಮುಕ್ತಿಗೆ ಹೊರಗು, ನಿಃಕಳಂಕ ಮಲ್ಲಿಕಾರ್ಜುನಾ. || ೨೧೩ ||

೧೬೩೨

ಕತ್ತೆ, ಕರ್ಪೂರವ ಬಲ್ಲುದೆ ? ನಾಗ, ನಾಣ್ಣುಡಿಯ ಬಲ್ಲುದೆ ?
ನಾಯಿ, ಸುಭಕ್ಷ್ಯವ ಬಲ್ಲದೆ ? ಮಕ್ಷಿಕ, ಗಂಧವ ಬಲ್ಲುದೆ ?
ಹುಟ್ಟುಗೊಡ್ಡು, ಮಕ್ಕಳ ಗರ್ಭವ ಬಲ್ಲುದೆ ?
ಜಗದಲ್ಲಿ ಹೊತ್ತುಹೊರುವ ಮಿಥ್ಯವಂತರಿಗೆ ತತ್ವದ ಶುದ್ಧಿಯ ಹೇಳಿದಡೆ,
ಚಿತ್ರರುದ್ರನಾದಡೂ ತಪ್ಪದು ನರಕ. ನಿಃಕಳಂಕ ಮಲ್ಲಿಕಾರ್ಜುನಾ. || ೨೧೪ ||

೧೬೩೩

ಕತ್ತೆ ಬತ್ತಲೆ ಇದ್ದಡೆ ನೆಟ್ಟನೆ ನಿರ್ವಾಣಿಯೆ ?
ಹುಚ್ಚ ಹೊಟ್ಟೆಗೆ ಕಾಣದೆ, ಬತ್ತಲೆಂದರಿಯದೆ.
ಮಾತೃದೊಳಗಿರ್ದಡೆ ಶಿಶು ವಿರಕ್ತನೆ ?

ಇಂತಿವರ ತತ್ತುಗೊತ್ತ ಬಲ್ಲವಂಗೆ ಇನ್ನೆತ್ತಣ ಭಕ್ತಿ ವಿರಕ್ತಿಯೊ,
ನಿಃಕಳಂಕ ಮಲ್ಲಿಕಾರ್ಜುನಾ ? ||೨೧೫||

**೧೬೩೪**

ಕದ್ದ ಕಳವ ಮರೆಸಿಕೊಂಡು, ನಾ ಸಜ್ಜನನೆಂಬಂತೆ,
ಇದ್ದ ಗುಣವ ನೋಡಿ, ಹೊದ್ದಿ ಸೋದಿಸಲಾಗಿ,
ಕದ್ದ ಕಳವು ಕೈಯಲ್ಲಿದ್ದ ಮತ್ತೆ, ಸಜ್ಜನತನವುಂಟೆ ?
ಇಂತೀ ಸಜ್ಜನಗಳ್ಳರ ಕಂಡು ಹೊದ್ದದೆ ಹೋದ,
ನಿಃಕಳಂಕ ಮಲ್ಲಿಕಾರ್ಜುನ. ||೨೧೬||

**೧೬೩೫**

ಕಪ್ಪೆ ಸತ್ತು ಸರ್ಪನ ನುಂಗಿತ್ತು ನೋಡಾ.
ಮೊಲ ಸತ್ತು ಬಲೆಯ ಮೀರಿತ್ತು ನೋಡಾ.
ಮತ್ತೊಡೆದು ಜಲವ ನುಂಗಿತ್ತು ನೋಡಾ.
ಜೀವ ಸತ್ತು ಕಾಯ ನುಂಗಿತ್ತು ನೋಡಾ.
ಉದಕ ಒಡೆದು ಏರಿ ತುಂಬಿತ್ತು, ರೆಕ್ಕೆ ಮುರಿದು ಪಕ್ಷಿ ಹಾರಿತ್ತು.
ಹಾರುವ ಪಕ್ಷಿಯ ಮೀರಿ ನಿಂದಿತ್ತು ಬಯಲು.
ನುಂಗಿದ ಬಯಲವ, ಹಿಂಗಿದ ಪಕ್ಷಿಯ ಕಂಗಳು ನುಂಗಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೨೧೭||

**೧೬೩೬**

ಕರ್ತೃ ನೀನಾಗಿ, ಭೃತ್ಯ ನಾನಾದ ಅಚ್ಚುಗವ ಬಿಡಿಸಯ್ಯಾ.
ಜ್ಞಾನಕ್ಕೆ ಜ್ಞಾನವ ಹೇಳಿದಡೆ ಕೇಳಬಲ್ಲವರಾರು.
ಸವಿಗೆ ಸ್ವಾದವನಿಕ್ಕಿದಡೆ ಉಣಬಲ್ಲವರಾರು.
ಬೆಳಗಿಂಗೆ ಬೆಳಗನಿತ್ತಡೆ ಉಡಬಲ್ಲವರಾರು.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ನಿಜೈಕ್ಯನಾದೆನೆಂಬಾತ ಮತ್ತೊಬ್ಬನಾರು. ||೨೧೮||

**೧೬೩೭**

ಕರಣ ನಾಲ್ಕು, ಮದುವೆಂಟು, ವ್ಯಸನವೇಳು, ಅರಿಷಡ್ವರ್ಗಂಗಳಲ್ಲಿ
ಬುದ್ಧಿಯಾಗಿರಬೇಕೆಂದು ಹೇಳುತ್ತಿರ್ಪ ಅಣ್ಣಗಳು ಕೇಳಿರೊ.
ಆತ್ಮ ಸಂಬಂಧವಾದಲ್ಲಿ ಆವ ಕರಣಂಗಳೂ ಇಲ್ಲ.
ಆತ್ಮನಿಂದ ಒದಗಿದ ಇಂದ್ರಿಯಂಗಳಲ್ಲದೆ, ಬೇರೆ ಕರಣಂಗಳಿಗೆ ಗುಣವಿಲ್ಲವಾಗಿ.
ಸ್ಥಾವರ ಮೂಲವ ಕಡಿದು ಶಾಖೆಗಳಿಲ್ಲವಾದ ಕಾರಣ,

ಆತ್ಮನ ನಿಲವನರಿದವಂಗೆ, ಬೇರೆ ಕರಣಂಗಳ ಬಂಧನವಿಲ್ಲವಾದ ಕಾರಣ,
ಲಿಂಗವ ಕುರಿತಲ್ಲಿ, ಅಂಗವ [ಮ]ರೆಯಬಾರದು.
ಅಂಗಕ್ಕೂ ಪ್ರಾಣಕ್ಕೂ ಹಿಂಗಿತೆನಬಾರದು,
ನಿಃಕಳಂಕ ಮಲ್ಲಿಕಾರ್ಜುನನ ಸಂಗದಲ್ಲಿ ನಿರ್ವಾಣವಾದವಂಗೆ. || ೨೧೯ ||

೧೬೩೮

ಕರ್ಪುರದ ಘಟ ಬೆಂದಂತೆ, ಭಿತ್ತಿಯ ಮೇಲಣ ಚಿತ್ರಪಟ ನೆನೆದಂತೆ,
ಅಪ್ಪುವಿನ ಮೇಲಣ ಬಹುಮಣಿ ಲಕ್ಷಿಸಿದಂತೆ,
ದೃಷ್ಟವಾಗಿ ದೃಕ್ಕಿಂಗೆ ಒಡಲಳಿವಂತೆ,
ಅರಿತು ಅಳಿದ ಸ್ಥಲಭರಿತಂಗೆ ಕುಳಭೇದವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನ, ಅವಿರಳದ ಹೊಲಬಿಗನಾದ ಕಾರಣ. || ೨೨೦ ||

೧೬೩೯

ಕರ್ಮವ ಮಾಡುವಲ್ಲಿ, ಆ ಕರ್ಮದ ವರ್ಮವನರಿಯಬೇಕು.
ಆ ಕರ್ಮದ ವರ್ಮವನರಿವಲ್ಲಿ,
ಉಮ್ಮಳದುಮ್ಮಳವೆಂಬ, ಸುಖಸುಮ್ಮಾನವೆಂಬ ಉಭಯವಡಗಿದಲ್ಲಿ,
ಪ್ರಾಣಲಿಂಗಸಂಬಂಧಿ, ನಿಃಕಳಂಕ ಮಲ್ಲಿಕಾರ್ಜುನಾ. || ೨೨೧ ||

೧೬೪೦

ಕಲ್ಲನೊಡೆದು ಕಲ್ಲು ಒಡಗೂಡುವಂತಾಗಬಲ್ಲಡೆ ಇಷ್ಟಲಿಂಗಸಂಬಂಧಿ.
ಮಣ್ಣಿನಲ್ಲಿ ಸುಟ್ಟ ಓಡು ಮಣ್ಣಿನಂತಾಗಬಲ್ಲಡೆ ಭಾವಲಿಂಗಸಂಬಂಧಿ.
ಇಷ್ಟಭಾವವನರಿವ ಆ ಚಿತ್ತ ದೃಷ್ಟವನರಿವುದಕ್ಕೆ ಶ್ರುತದೃಷ್ಟವೆಂತುಟೆಂದಡೆ:
ವಾರಿಕಲ್ಲು ನೋಡ ನೋಡಲಿಕ್ಕೆ ನೀರಾದಂತೆ. ಇಷ್ಟ ಭಾವ ಕರಿಗೊಂಡು,
ನಿಶ್ಚಯಪದವೆಂಬ ಗೊತ್ತ ಮುಟ್ಟದೆ, ಅದು ಸಚ್ಚಿತ್ತವಾದಲ್ಲಿ,
ಪ್ರಾಣಲಿಂಗಸಂಬಂಧಿ, ನಿಃಕಳಂಕ ಮಲ್ಲಿಕಾರ್ಜುನಾ. || ೨೨೨ ||

೧೬೪೧

ಕಲ್ಲಿನೊಳಗಣ ದಳ್ಳುರಿ, ಹುಳ್ಳಿಯ ಕಿಚ್ಚಿನಂತೆ
ಅಲ್ಲಿಯೇ ಉರಿಯಬಲ್ಲುದೆ ?
ಕ್ರೀಯಲ್ಲಿಗೆ ಸ್ಥಲ, ಜ್ಞಾನದಲ್ಲಿಗೆ ಕೂಟ,
ಸ್ವಾನುಭಾವದಲ್ಲಿಗೆ ನಿರ್ಲೇಪ, ನಿಃಕಳಂಕ ಮಲ್ಲಿಕಾರ್ಜುನಾ. || ೨೨೩ ||

೧೬೪೨

ಕಲ್ಲಿನೊಳಗೆ ಪಲ್ಲಭನಿದ್ದಹನೆಂದು ಎಲ್ಲರೂ ಬಳಲುತಿರ್ಪರು ನೋಡಾ.
ಅಲ್ಲಿ ಎಲ್ಲಿಯೂ ಕಾಣೆ ತನ್ನಲ್ಲಿ ಕುರಿತು ಇದಿರಿಟ್ಟಲ್ಲಿಯಲ್ಲದೆ,

ಮತ್ತೆಯಿಲ್ಲವಾಗಿ ಇದು ಬಲ್ಲವರ ಬಲ್ಲತನ.
ಹಾಗಲ್ಲದೆ ತನ್ನ ಮರೆದು, ಅನ್ಯವ ಕಂಡೆಹೆನೆಂದಡೆ, ಅದು ನನ್ನಿಯಲ್ಲ, ಹುಸಿ.
ಮನ್ನಣೆಗೆ ಸಿಕ್ಕಿದ ಶಿಲೆಯ ಬಣ್ಣಿಸುತ್ತಿರ್ಪವರ ನೋಡಾ.
ಬಣ್ಣಿಸುತ್ತಿಪ್ಪ ಅಣ್ಣಗಳೆಲ್ಲರೂ ಸನ್ನದ್ಧವಾದರೂ
ಕೋಟೆಯಲ್ಲಿ ಸಿಕ್ಕಿ ಸತ್ತುದಿಲ್ಲ.
ಎಲ್ಲರೂ ಕೋಟೆಯ ಹೊರಗಿರ್ದು ಸತ್ತು ಕೆಟ್ಟರಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೨೪ ||

೧೬೪೩

ಕಲ್ಲಿಯ ಬಿಗಿದಡೆ, ತಲ್ಲೀಯವಾದ ಕ[ಲ್ಲಿ]
ಕೀಳುವುದೆ ಅಯ್ಯಾ ?
ಈ ಹೊಳ್ಳುಗರ ಮಾತಿಗೆ, ಬಲ್ಲವ[ನ]ಲ್ಲಿ ಸಿ[ಕ್ಕು]ವ[ನೆ]
ನಿಃಕಳಂಕ ಮಲ್ಲಿಕಾರ್ಜುನಾ ? || ೨೨೫ ||

೧೬೪೪

ಕಲ್ಲದೇವರೆಂದು ನಂಬಿ ಪೂಜಿಸಿದವರೆಲ್ಲರೂ
ಕಲಿಯುಗದ ಕತ್ತೆಗಳಾಗಿ ಸಿಲ್ಕಿ, ಕೆಟ್ಟಳಿದು ಹೋದರು ನೋಡಾ.
ಮಣ್ಣುದೇವರೆಂದು ನಂಬಿ ಪೂಜೆಯ ಮಾಡಿದವರೆಲ್ಲರೂ
ಮುಕ್ತಿಪಥ ಕಾಣದೆ ಕೆಟ್ಟು, ಶುನಿಸೂಕರಾದಿಗಳಾಗಿ ಕೆಟ್ಟುಹೋದರು ನೋಡಾ.
ಎಲ್ಲ ದೇವರಿಗೆ ಮಸ್ತಕಪೂಜೆ.
ನಮ್ಮ ಶಿವಭಕ್ತರ ಕರಮನಭಾವದೊಳು ಪೂಜೆಗೊಂಬುವ
ಶ್ರೀಗುರುಲಿಂಗಜಂಗಮಕ್ಕೆ ಉಂಗುಷ್ಟಪೂಜೆ ನೋಡಾ.
ಇಕ್ಕಿದಡೆ ಉಂಬುವದು, ಒಡನೆ ಮಾತನಾಡುವದು.
ಅನೇಕ ಬುದ್ಧಿಯ ಪೇಳ್ವುದು.
ಇಂಥ ಪರಮ ದೈವವನುಳಿದು, ಭೂತ ಪ್ರೇತ ಪಿಶಾಚಿಗೆ ಅನ್ನವನಿಕ್ಕಿ,
ನಿಧಾನವ ಪಡೆವೆನೆಂಬ ಭವಭಾರಿಗೆ
ನಾಯಕ [ನರಕ], ಮಹಾಪಾತಕ ತಪ್ಪದು ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೨೬ ||

೧೬೪೫

ಕಲ್ಲು ಮಣ್ಣು ಮರದಲ್ಲಿ ದೇವನಿದ್ದಹನೆಂದು
ಎಲ್ಲಿಯೂ ತೊಳಲುತ್ತಿರ್ಪ ಅಣ್ಣಗಳು ಕೇಳಿರೊ.
ಅದನಲ್ಲಲ್ಲಿಟ್ಟು ಬಲ್ಲತನದ ಕುರುಹಲ್ಲದೆ, ಸೊಲ್ಲಿ[ಂ]ಗತೀತನನರಿಯ
ಮನದಿರವೆಲ್ಲಿಹುದೊ ಅವನಲ್ಲಿಹ, ನಿಃಕಳಂಕ ಮಲ್ಲಿಕಾರ್ಜುನಾ. || ೨೨೭ ||

೧೬೪೬

ಕವಡೆ ಕಟಕವ ನುಂಗಿತ್ತು, ಕುಡಿಕೆ ಹಿರಿದಪ್ಪ ಮಡಕೆಯ ನುಂಗಿತ್ತು.
ಅಡಕೆ ಮರನ ನುಂಗಿದ ಮತ್ತೆ ಫಲವುಂಟೆ?
ಅರ್ಚನೆ ಭಕ್ತಿಯಲಡಗಿ, ಭಕ್ತಿ ಮುಕ್ತಿಯಲಡಗಿ,
ಮುಕ್ತಿ ಜ್ಞಾನದಲಡಗಿ. ಜ್ಞಾನ ನಾನೆಂಬಲ್ಲಿ ಅಡಗಿದ ಮತ್ತೆ
ಲಿಂಗೈಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. || ೨೨೮ ||

೧೬೪೭

ಕಳಬಂದ ಕಳ್ಳ ಬೆಳ್ಳನ ಕಾಲದೆಸೆಯಲ್ಲಿ, ಮರೆದು ನಿದ್ರೆಗೈದ ನೋಡಾ.
ತೆರನನರಿಯದೆ ಎಚ್ಚತ್ತು, ಮನೆಯ ಒಡೆಯನೆಂದಡೆ ಮೆಚ್ಚುವರೆ ?
ಅದು ಕಾರಣದಲ್ಲಿ, ಇರಿವ ಮನ ಪಾಪಕ್ಕೆ ಸಿಕ್ಕಿ,
ಪಾಷಂಡಿಗಳಪ್ಪ ಪಾಶವ ಹೊತ್ತು ತಿರುಗುವ ವೇಷಧಾರಿಗಳೆಲ್ಲರೂ
ಜಂಗಮವಲ್ಲದೆ, ಜ್ಞಾನಜಂಗಮವಲ್ಲ.
ಕರದಲ್ಲಿ ಖರ್ಪರವಿಲ್ಲ, ಕೈಯಲ್ಲಿ ಕಟ್ಟಿಗೆಯಿಲ್ಲ,
ಕರಣದಲ್ಲಿ ಮುದ್ರಿಕೆಯಿಲ್ಲ, ಶಿರದಲ್ಲಿ ಜಟಾಬಂಧವಿಲ್ಲ.
ಕಕ್ಷೆಯಲ್ಲಿ ಭಸ್ಮಘಟಿಕೆಯಿಲ್ಲ.
ಇವೆಲ್ಲ ರುದ್ರನ ವೇಷವ ಹೊತ್ತು,
ಗ್ರಾಸಕ್ಕೆ ತಿರುಗುವ ಘಾತಕರೆಲ್ಲರೂ ಜಂಗಮವೆ ?
ಮನದಾಸೆಯ ಬಿಟ್ಟು, ರೋಷವ ಕಿತ್ತು,
ಮಹದಾಶ್ರಿತರಾಗಿ ನಾನೆಂಬುದ ತಾನರಿದು,
ನಾ ನೀನೆಂಬುಭಯವನೇನೆಂದರಿಯದೆ,
ತಾನು ತಾನಾದ. ನಿಃಕಳಂಕ ಮಲ್ಲಿಕಾರ್ಜುನಾ. || ೨೨೯ ||

೧೯೪೮

ಕಳವಿನಲ್ಲಿ ಬಂದಿರಿದಾತ ಕಳ್ಳನಲ್ಲದೆ ಧೀರನಲ್ಲ.
ಆಲಗಿನ ಮೊನೆ ಹಳಚಿನಲ್ಲಿ ಗತಿ ತಪ್ಪಿ ಬಿದ್ದಡೆ,
ಕೈದು ಸಹಿತ ಕೋಯೆಂದು ಇದಿರಾಗು ಎನಬೇಕಲ್ಲದೆ,
ಬಸವಳಿದು ಬಿದ್ದವನ ಅಸುವ ಕೊಂಬ ಸುಗಡಿಗಳನೇನೆಂಬೆ.
ನಿಃಕಳಂಕ ಮಲ್ಲಿಕಾರ್ಜುನಾ ? || ೨೩೦ ||

೧೬೪೯

ಕಳೆ ಮೆಳೆಯ ಕಿತ್ತಲ್ಲದೆ ಹೊಲ ಶುದ್ಧವಲ್ಲ.
ಹೊಲೆ ಮಲವ ಕಳೆದಲ್ಲದೆ ಮನ ಶುದ್ಧವಲ್ಲ.

ಜೀವನ ನೆಲೆಯನರಿದಲ್ಲದೆ ಕಾಯ ಶುದ್ಧವಲ್ಲ.
ಕಾಯ ಜೀವದ ಸಂಚವನರಿದಲ್ಲದೆ ಜ್ಞಾನಲೇಪಿಯಲ್ಲ.
ಇಂತೀ ಭಾವದ ಭ್ರಮಿತರಿಗೇಕೆ ಜ್ಞಾನದ ಒಳಗು,
ನಿಃಕಳಂಕ ಮಲ್ಲಿಕಾರ್ಜುನಾ. ||೨೩೧||

೧೬೫೦

ಕಾಡೆಮ್ಮೆಯ ಹಾಲ, ಊರ ಕೋಣ ಕುಡಿದು,
ಮತ್ತಾರನೂ ಲೆಕ್ಕಿಸದೆ, ಬಹುಜನರ ನೋಯಿಸಿ ಬರುವಲ್ಲಿ,
ಒಂದಾಡಿನ ಬಾಲದ ಹೊಯ್ಲಿಗಂಜಿ ಓಡಿಹೋಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಭೇದಿಸಲರಿಯದೆ. ||೨೩೨||

೧೬೫೧

ಕಾಣಬಾರದ ಲಿಂಗವ ಕಾಬ ಪರಿಯಿನ್ನೆಂತೊ ?
ಕುರುಹಿಲ್ಲದ ಜ್ಞಾನವ ಕುರುಹಿಟ್ಟರಿವ ಪರಿಯಿನ್ನೆಂತೊ ?
ನೋಟಕ್ಕೆ ಬಾರದ ರೂಪ, ಕೂಟದಲ್ಲಿ ಸುಖವನರಿವ ಪರಿಯಿನ್ನೆಂತೊ ?
ಅರಿದೆಹೆನೆಂಬುದೇನು, ಇದಿರಿಟ್ಟರಿಸಿಕೊಂಡಿಹೆನೆಂಬುದೇನು ?
ಅರಿವಿಂಗೂ ಮರವೆಗೂ ಒಡಲಾಯಿತ್ತೆ ಲಿಂಗವು ?
ಘಟದೊಳಗಣ ಜ್ಯೋತಿ ಮಠಕ್ಕೆ ಭಿನ್ನವುಂಟೆ ?
ಘಟಕ್ಕೆ ಮಠ ಬೇರೆಯುಂಟೆ ?
ಅರಿಯಲಿಲ್ಲವಾಗಿ ಮರೆಯಲಿಲ್ಲ,
ಮರೆದರಿಯಲಿಲ್ಲವಾಗಿ, ತೆರಹಿಲ್ಲದ ಮತ್ತೆ ಕುರುಹಿಡಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೩೩ ||

೧೬೫೨

ಕಾಣೆಯ ಹಾಕಿ ಮುಕ್ಕಾಣೆಯನರಸುವನಂತೆ,
ಒಂದ ಬಿಟ್ಟೊಂದನರಿದೆಹೆನೆಂಬ ಸಂದೇಹಿಗೇಕೆ ಲಿಂಗ ?
ಸರ್ವವ್ಯಾಪಾರವ ಕಟ್ಟಿಕೊಂಡಿರ್ಪ ಹರದಿಗನ ತೆರನಂತೆ,
ಕೊಂಡುದಕ್ಕೆ ಕೊಡುವಲ್ಲಿ, ವಾಸಿಯಂ ಕಂಡು ಬಿಟ್ಟ ಲಾಭಗಾರನಂತೆ,
ಮೊದಲಿಂಗೆ ಮೋಸ ಲಾಭಕ್ಕರಸಲುಂಟೆ ?
ಅಯ್ಯಾ, ಒಂದನರಿದಲ್ಲದೆ ಮೂರನು ಮರೆಯಬಾರದು.
ಮೂರ ಮರೆದಲ್ಲದೆ ಐದ ಹರಿಯಬಾರದು.
ಐದ ಹರಿದಲ್ಲವೆ ಆರ ಮೆಟ್ಟಬಾರದು.
ಆರ ಮೆಟ್ಟಿದಲ್ಲದೆ ಎಂಟನೀಂಟಬಾರದು.

ಎಂಟರೊಳಗಣ ಬಂಟರೆಲ್ಲರೂ ಮಹಾಪ್ರಳಯರಾದರು.
ಹೀಂಗಲ್ಲದೆ ಪ್ರಾಣಲಿಂಗಿಗಳೆಂತಾದಿರೊ ?
ಗಂಟ ಕೊಯ್ದು ಕೊಡದ ಗಂಟುಗಳ್ಳರಂತೆ,
ತುಂಟರ ಮೆಚ್ಚುವನೆ, ನಿಃಕಳಂಕ ಮಲ್ಲಿಕಾರ್ಜುನ ? ॥ ೨೩೪ ॥

೧೬೫೩

ಕಾಬ ಕಣ್ಣಿದ್ದು ಕನ್ನಡಿಯ ನೋಡುವನಂತೆ,
ನಡೆವ ಕಾಲಿದ್ದು ದಡಿಯನೂರಿ ನಡೆವನಂತೆ,
ಇರುವ ಕೈಯಿದ್ದು ಕೈದ ಹಿಡಿದು ಇರಿವನಂತೆ,
ದೃಷ್ಟಕ್ಕೆ ದೃಷ್ಟವ ಕೊಟ್ಟು, ನೀ ತಪ್ಪಿಸಿಕೊಂಬರೆ,
ನಿಃಕಳಂಕ ಮಲ್ಲಿಕಾರ್ಜುನಾ ? ॥ ೨೩೫ ॥

೧೬೫೪

ಕಾಯ ಇಂದ್ರಿಯಂಗಳಲ್ಲಿ ಮಚ್ಚಿ ಇಹನ್ನಕ್ಕ ಭಕ್ತಿಸ್ಥಲವಿಲ್ಲ.
ಆತ್ಮ ಹಲವು ವಿಷಯಂಗಳಲ್ಲಿ ಹರಿವನ್ನಕ್ಕ ಮಹೇಶ್ವರಸ್ಥಲವಿಲ್ಲ.
ಹಿರಿದು ಕಿರಿದನರಿದು ರೋಚಕ ಆರೋಚಕವೆಂಬನ್ನಕ್ಕ ಪ್ರಸಾದಿಸ್ಥಲವಿಲ್ಲ.
ಜಾಗ್ರದಲ್ಲಿ ಕಂಡು ಸ್ವಪ್ನದಲ್ಲಿ ತೋರಿ ಸುಷುಪ್ತಿಯಲ್ಲಿ ಅಳಿವನ್ನಕ್ಕ
ಪ್ರಾಣಲಿಂಗಸಂಬಂಧಿಯಲ್ಲ.
ಚತುರ್ವಿಧಫಲಪದಂಗಳಲ್ಲಿ ಕಾಬ ಕಾಣಿಕೆ ಉಳ್ಳನ್ನಕ್ಕ ಶರಣಸ್ಥಲವಿಲ್ಲ.
ಅರಿದೆ ಮರೆದೆನೆಂದು ಉಭಯದ ಸಂದೇಹವುಳ್ಳನ್ನಕ್ಕ ಐಕ್ಯಸ್ಥಲವಿಲ್ಲ.
ಇಂತೀ ಷಟ್ಸ್ಥಲಂಗಳಲ್ಲಿ ಸೋಪಾನದ ಮೆಟ್ಟಿಲಿನಂತೆ,
ಒಂದ ಮೆಟ್ಟಿ, ಒಂದನೇರುವನ್ನಕ್ಕ ಸ್ಥಲಕುಳಭರಿತನಾಗಬೇಕು.
ಮೇಲನೇರಿ ಕೆಳಗೆ ಇಳಿಯೆನೆಂಬ ಭಾವ ನಿಂದಲ್ಲಿ ಆರನೆಣಿಸಲಿಲ್ಲ.
ಮೂರೆಂದು ಬೇರೊಂದ ಮುಟ್ಟಲಿಲ್ಲ.
ಕರಗಿದ ಬಂಗಾರಕ್ಕೆ ಕರಚರಣಾದಿಗಳು ಇಲ್ಲದಂತೆ,
ಆತ ಕುರುಹಡಗಿದ ಷಡುಸ್ಥಲಬ್ರಹ್ಮ, ನಿಃಕಳಂಕ ಮಲ್ಲಿಕಾರ್ಜುನಾ. ॥ ೨೩೬ ॥

೧೬೫೫

ಕಾಯಕ್ಕೆ ಕಲ್ಪಿತವುಂಟೆಂಬುದು ಹುಸಿಯೋ, ದಿಟವೋ ?
ಜೀವಕ್ಕೆ ಜನ್ಮವುಂಟೆಂಬುದು ಹುಸಿಯೋ, ದಿಟವೋ ?
ಕೆಂಡದೊಳಗೆ ಹೊಗೆಯಡಗಿತ್ತೋ, ಹೊಗೆಯಲ್ಲಿ ಕೆಂಡವಿದ್ದಿತ್ತೋ ?
ಲಿಂಗದಲ್ಲಿ ಮನವಿದ್ದಿತ್ತೋ, ಮನದಲ್ಲಿ ಲಿಂಗವಡಗಿತ್ತೋ ?

ಇಂತೀ ಉಭಯದ ಸಂದನಳಿದು ಬೆರಸಬಲ್ಲಡೆ ಆತನೆ ಪ್ರಾಣಲಿಂಗಿ,
ನಿಃಕಳಂಕ ಮಲ್ಲಿಕಾರ್ಜುನಾ. || ೨೩೭ ||

೧೬೫೬

ಕಾಯಗುಣವಿಡಿದು ಮಾಡುವನ್ನಕ್ಕ ಸತ್ಯಸದ್ಭಕ್ತನಲ್ಲ.
ಜೀವಗುಣವಿಡಿದು ತಿರುಗುವನ್ನಕ್ಕ ಪರಶಿವರೂಪನಲ್ಲ.
ಕ್ರೀಯನರಿದು ಆಚಾರದಲ್ಲಿ ನಿಂದು,
ರಿಣಾತೂರ್ಯ ಮುಕ್ತ್ಯಾತೂರ್ಯ ಸ್ವ ಇಚ್ಛಾತೂರ್ಯವೆಂಬ
ಮೂರುಮಾಟವ ಕಂಡು,
ಭಕ್ತಿ ಜ್ಞಾನ ವೈರಾಗ್ಯವೆಂಬ ತ್ರಿವಿಧ ನಿಶ್ಚಯವನರಿದು,
ಸುಮನ ವಚನ ಕಾಯ ತ್ರಿಕರಣ ಶುದ್ಧಾತ್ಮನಾಗಿ,
ಆಪ್ಯಾಯನದ ಅನುವನರಿದು,
ಸಮಯದಲ್ಲಿ ಮಾನ್ಯರ ಇರವನರಿತು ಕೂಡುವಲ್ಲಿ,
ಇಂತೀ ಭಾವ ಸದ್ಭಕ್ತ ಸ್ಥಲ.
ಹೆಣ್ಣು ಹೊನ್ನು ಮಣ್ಣಿನಲ್ಲಿ, ಸ್ತುತಿ ನಿಂದ್ಯಾದಿಗಳಲ್ಲಿ,
ತಥ್ಯ ಮಿಥ್ಯಂಗಳಲ್ಲಿ ವಿರಾಗನಾಗಿ,
ಸುಖದುಃಖಗಳಲ್ಲಿ ಸರಿಗಂಡು ನಿಃಕಳಂಕನಾಗಿ ಚರಿಸಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನನೆಂಬೆನು. || ೨೩೮ ||

೧೬೫೭

ಕಾಯ ಜೀವದ ನಡುವೆ ಒಂದ ಭಾವಿಸಿ, ಇಷ್ಟಲಿಂಗವೆಂದು ಕೊಡುವಾಗ,
ಆ ಲಿಂಗ ಕಾಯಕ್ಕೋ, ಜೀವಕ್ಕೋ ?
ಕಾಯಕ್ಕೆಂದಡೆ ಕಾಯದೊಳಗಾಗಿ ಪೂಜಿಸಿಕೊಂಬುದು.
ಜೀವಕ್ಕೆಂದಡೆ ನಾನಾ ಭವಂಗಳಲ್ಲಿ ಬಪ್ಪುದು.
ಆ ಲಿಂಗ ಉಭಯಕ್ಕೆಂದಡೆ ಇನ್ನಾವುದು ಹೇಳಾ ?
ಅಂಗಕ್ಕೆ ಲಿಂಗವಾದಡೆ ಬಣ್ಣ ಬಂಗಾರದಂತೆ ಇರಬೇಕು.
ಜೀವಕ್ಕೆ ಲಿಂಗವಾದಡೆ ಅನಲ ಅನಿಲನಂತೆ ಇರಬೇಕು.
ಉತ್ಪತ್ಯಕ್ಕೂ ನಷ್ಟಕ್ಕೂ ಉಭಯದ ಒಡಲನರಿತಲ್ಲಿ,
ಅದು ಅಂಗಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೨೩೯ ||

೧೬೫೮

ಕಾಯದ ಕರದಲ್ಲಿ ಲಿಂಗವ ಹಿಡಿದು,
ಜಾಯಾರಿ, ಭವಗೆಟ್ಟು, ನಾಣುಗೆಟ್ಟು, ನಾನಾರೆಂಬುದನರಿಯದೆ.

ಇದಿರಿಚ್ಛೆಯನೇನೆಂದರಿಯದೆ,
ಕಾಯದ ಸುಖಕ್ಕಾಗಿ ಜೀವರ ಬೇಡುವ ಜಾರರಿಗೆಲ್ಲಿಯದೊ ಲಿಂಗ,
ನಿಃಕಳಂಕ ಮಲ್ಲಿಕಾರ್ಜುನಾ? || ೨೪೦ ||

೧೬೫೯

ಕಾಯದ ಕಳವಳದಿಂದ, ಜೀವನ ಭ್ರಾಂತಿಯಿಂದ,
ಅರಿದು ಮರೆದೆನೆಂದು ಎಡದೆರಹಿಲ್ಲದ ವಸ್ತುವಿಂಗೆ,
ಜೇರೊಂದೆಡೆಯುಂಟೆಂದು, ಕಲ್ಪಿಸಲೇಕೆ, ನಿಃಕಳಂಕ ಮಲ್ಲಿಕಾರ್ಜುನಾ? || ೨೪೧ ||

೧೬೬೦

ಕಾಯದ ಕೈಯಲ್ಲಿ ಲಿಂಗಪೂಜೆ.
ಮನದ ಕೈಯಲ್ಲಿ ಸಂಸಾರ.
ಎಂತಹದಯ್ಯಾ ಲಿಂಗಪೂಜೆ?
ಎಂತಹದಯ್ಯಾ ಜಂಗಮಪೂಜೆ?
ಇಂತಪ್ಪ ನಾಚಿಕೆಗೆಟ್ಟ ಮೂಕೊರೆಯರ ತೋರದಿರಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೪೨ ||

೧೬೬೧

ಕಾಯದ ಗುಣವನರಿವುದು ಕಾಯವೋ, ಜೀವವೋ?
ಜೀವನ ಗುಣವ ಸಂಬಂಧಿಸುವುದು ಜ್ಞಾನವೋ, ಆ ಜೀವವೋ?
ಈ ಉಭಯವುಳ್ಳನ್ನಕ್ಕ ಪ್ರಾಣಲಿಂಗಿಯಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೪೩ ||

೧೬೬೨

ಕಾಯದೊಳಗುಂಟೆಂದಡೆ ಕರ್ಮಕಾಂಡಿಯಲ್ಲ.
ಜೀವದೊಳಗುಂಟೆಂದಡೆ ನಾನಾ ಯೋನಿಯವನಲ್ಲ.
ಭಾವದೊಳಗುಂಟೆಂದಡೆ ನಾನಾ ಪ್ರಕೃತಿಯವನಲ್ಲ.
ಅದು ಇದ್ದಿಲು ಶುಭ್ರದ ತೆರ.
ಅದು ಹೊದ್ದದಾಗಿ ಬದ್ಧಕತನವಿಲ್ಲೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೪೪ ||

೧೬೬೩

ಕಾಯಪ್ರಕೃತಿ. ಜೀವಪ್ರಕೃತಿ. ಭಾವಪ್ರಕೃತಿ.
ಸಂಚಾರಭ್ರಮೆ ಮುಂಚದೆ.

ಸಂಚಿತ ದುಃಕರ್ಮಂಗಳ ಪಙ್ತಿಯಲ್ಲಿ ಕುಳ್ಳಿರದೆ,
ಇದರಂಚೆಯ ತಿಳಿ, ಮುಂಚು ಬೇಗ,
ನಿಃಕಳಂಕ ಮಲ್ಲಿಕಾರ್ಜುನನ ನಿಸ್ಸಂಗದ ಕೂಟ. ॥ ೨೪೫ ॥

೧೬೬೪

ಕಾಯಬಂಧನ ಭಾವ, ಭಾವಬಂಧನ ಜ್ಞಾನ, ಜ್ಞಾನಬಂಧನ ಸಕಲೇಂದ್ರಿಯ.
ಇಂತೀ ಸ್ವರೂಪಂಗಳ ಕಲ್ಪಿಸುವಲ್ಲಿ,
ಕಾಯಕ್ಕೆ ಬಂಧವಲ್ಲದೆ ಜೀವಕ್ಕೆ ಬಂಧವುಂಟೆ ಎಂದೆಂಬರು.
ಭೇರಿಗೆ ಬಂಧವಲ್ಲದೆ ನಾದಕ್ಕೆ ಬಂಧವುಂಟೆ ಎಂಬರು.
ಉಭಯದ ಭೇದವ ತಿಳಿದಲ್ಲಿ, ಕಾಯಕ್ಕೆ ಬಂಧವುಂಟೆ, ಜೀವಕ್ಕಲ್ಲದೆ ?
ಭೇರಿಗೆ ಬಂಧವುಂಟೆ, ನಾದಕ್ಕಲ್ಲದೆ?
ಇಂತೀ ಅಳಿವುಳಿವ ಎರಡ ವಿಚಾರಿಸುವಲ್ಲಿ,
ಜೀವ ನಾನಾ ಭವಂಗಳಲ್ಲಿ ಬಪ್ಪುದ ಕಂಡು, ಮತ್ತಿನ್ನಾರನೂ ಕೇಳಲೇತಕ್ಕೆ?
ನಾದ ಸ್ಥೂಲ ಸೂಕ್ಷ್ಮಂಗಳಲ್ಲಿ ಹೊರಳಿ ಮರಳುತ್ತಿಹುದ ಕಂಡು,
ಆರಡಿಗೊಳಲೇಕೆ ?
ಇಂತಿವ ಶ್ರುತದಲ್ಲಿ ಕೇಳಿ, ದೃಷ್ಟದಲ್ಲಿ ಕಂಡು, ಅನುಮಾನದಲ್ಲಿ ಅರಿದ ಮತ್ತೆ,
ಲಿಂಗಕ್ಕೆ ಪ್ರಾಣವೋ, ಪ್ರಾಣಕ್ಕೆ ಲಿಂಗವೋ ಎಂಬುದ ಪ್ರಮಾಣಿಸಿದಲ್ಲಿ,
ಐಕ್ಯಾನುಭಾವ, ನಿಃಕಳಂಕ ಮಲ್ಲಿಕಾರ್ಜುನಾ. ॥ ೨೪೬ ॥

೧೬೬೫

ಕಾಯ ಸಮಾಧಿಯನೊಲ್ಲೆ, ನೆನಹು ಸಮಾಧಿಗೆ ನಿಲ್ಲೆ,
ಕೈಲಾಸವೆಂಬ ಭವಸಾಗರವನೊಲ್ಲೆ.
ನೀ ಎನ್ನ ಅಲ್ಲಿಗೆ ಇಲ್ಲಿಗೆ ಎಂದೆಳೆಯದೆ,
ನಿನ್ನಲ್ಲಿಗೆ ಕೂಟಸ್ಥವ ಮಾಡು, ನಿಃಕಳಂಕ ಮಲ್ಲಿಕಾರ್ಜುನಾ. ॥ ೨೪೭ ॥

೧೬೬೬

ಕಾಯಸೂತಕಿಗಳು ಗುರುವನರಿಯರಾಗಿ,
ಭಾವಸೂತಕಿಗಳು ಲಿಂಗವನರಿಯರಾಗಿ,
ತ್ರಿವಿಧಸೂತಕಿಗಳು ಜಂಗಮವನರಿಯರಾಗಿ,
ತನುಶುದ್ಧವಾಗಿ ಗುರುವನರಿಯಬೇಕು.
ಮನಶುದ್ಧವಾಗಿ ಲಿಂಗವನರಿಯಬೇಕು.
ತ್ರಿವಿಧ ಮಲಶುದ್ಧವಾಗಿ ಜಂಗಮವನರಿಯಬೇಕು.
ಇಂತೀ ಸ್ಥಲ ಕುಳಂಗಳ ಭಾವಿಸಿ, ತನಮನಧನ ನಿರತನಾಗಿ,

ತ್ರಿವಿಧಕ್ಕೆ ತ್ರಿವಿಧವಸಿತ್ತು, ತ್ರಿವಿಧಾಂಗ ಭರಿತನಾಗಿಪ್ಪ ನಿಜಲಿಂಗಾಂಗಿಗೆ
ಇಹ ಪರವೆಂಬ ಉಭಯವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೨೪೮ ||

೧೬೬೭

ಕಾಯ ಹಸಿದು ಓಗರವ ಬೇಡುವಾಗ, ಲಿಂಗಕ್ಕೆ ಅರ್ಪಿತವೆಲ್ಲಿಯಿತ್ತೊ ?
ಮನ ತನುವ ಬಿಟ್ಟು, ಸರ್ವವಿಕಾರದಲ್ಲಿ ಭ್ರಮಿಸುವಾಗ, ಸಾವಧಾನಿಗಳೆಂತಾದಿರೊ?
ಸ್ಥೂಲದಲ್ಲಿ ಹಿಡಿದು, ಸೂಕ್ಷ್ಮದಲ್ಲಿ ಮರೆದು, ಕಾರಣದಲ್ಲಿ ಏನೆಂದರಿಯದೆ,
ಜಗದ ಉತ್ಪತ್ಯಕ್ಕೆ ಒಳಗಾಹವರ ಪ್ರಾಣಲಿಂಗಿಗಳೆಂಬೆನೆ? ಎನ್ನೆನು.
ಇಂತಿವರೆಲ್ಲರೂ ಡಾಗಿನ ಪಶುಗಳು, ವೇಷಧಾರಿಗಳು,
ಶಾಸ್ತ್ರದ ಸಂತೆಯವರು, ಪುರಾಣದ ಪುಂಡರು,
ತರ್ಕದ ಮರ್ಕಟರು, ಭವಸಾಗರದ ಬಾಲಕರು.
ತತ್ವವನರಿಯದ ಮತ್ತರು.
ಇಂತಿವರು ಕೆಟ್ಟ [ಕೇಡ] ನೋಡಿ ಗುರು[ವಿನ] ಕೊರಳ ಕೊಯ್ದು,
ಲಿಂಗದ ತಲೆಯೊಡೆಯಲಿಕ್ಕಿ, ಜಂಗಮದ ಸಂದ ಮುರಿದೆ.
ದ್ವಂದ್ವವ ಹಿಂಗಿದೆ, ಸಂದನಳಿದೆ, ಸದಮಲಾನಂದ ಹಿಂಗಿದೆ.
ಹೊಂದದ ಬಟ್ಟೆಯಲ್ಲಿ ಸಂದೆನಯ್ಯಾ,
ಮಹಾದಾನಿ ನಿಃಕಳಂಕ ಮಲ್ಲಿಕಾರ್ಜುನಾ. || ೨೪೯ ||

೧೬೬೮

ಕಾಯ ಹೋಗಿ ಕರ್ಮವ ಮಾಡಿ, ಜೀವಕ್ಕೆ ಬಾಧೆಯ ತಂದಿತ್ತೆಂಬರು.
ಆ ಜೀವವಿಲ್ಲದೆ ಕಾಯ ಹೋಗಿ ಕರ್ಮವ ಮಾಡುವಾಗ,
ಅದಾವುದರ ಬಲುಹೋ ?
ಕಾಯ ನಾನು, ಜೀವ ನೀನು, ನನಗೂ ನಿನಗೂ ಸಮ ಹುದುಗು.
ಎನ್ನನೇಕೆ ಕಾಡಿಹೆ ? ಗನ್ನತನವೆ ? ಹೇಳಾ ಚೆನ್ನ,
ನಿಃಕಳಂಕ ಮಲ್ಲಿಕಾರ್ಜುನಾ. || ೨೫೦ ||

೧೬೬೯

ಕಾಲಜ್ಞಾನ, ಕರ್ಮಜ್ಞಾನ, ಭಾವಜ್ಞಾನ ಭ್ರಮೆಯಳಿದು,
ನಾ, ನೀನೆಂಬ ಮದ ಮತ್ಸರ ಮುರಿದು,
ಭಕ್ತಿಜ್ಞಾನವೈರಾಗ್ಯವೆಂಬ ಸಂತೋಷವ ಮೆಟ್ಟಿನಿಂದು,
ನಿಜವೆ ತಾನಾಗಿರ್ಪ ಪರಿಪೂರ್ಣಂಗೆ ಇಹ ಪರವೆಂಬ ಉಭಯದವನಲ್ಲ.
ಇಂತೀ ಪರಂಜ್ಯೋತಿ ಪ್ರಕಾಶಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. || ೨೫೧ ||

೧೬೭೦

ಕಾಳಗಕ್ಕೆ ಆಳಾಗಿ ಬಂದೆ.
ಎನಗಿದಿರಾಗಿ ಕೈದುವ ಹಿಡಿವವರನಾರನೂ ಕಾಣೆ.
ಅಗೆದು ನೋಡಿದೆ, ಮೊಗೆದು ನೋಡಿದೆ, ಎನಗೆ ಇದಿರಹವರಿಗೆ.
ಎನ್ನ ದೇಹ ವಜ್ರಾಂಗಿಯೆ ? ಎನ್ನ ಕರ ಕಂಪಿಸುವ ಕೈದೆ ?
ಎನ್ನ ಹೃದಯ ಬೆಳಗಿನೆದೆಗಿಚ್ಚೆ ? ನಿರ್ಭೀತಿ ನೀತಿಯೆ ?
ಎನ್ನನೊಡಗೂಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೨೫೨ ||

೧೬೭೧

ಕಾಳಗದಲ್ಲಿ ಹೋದ ಮತ್ತೆ ಆಳುತನವೆನಗಿಲ್ಲ ಎಂದಡೆ,
ಅವರು ಸೀಳದಿಪ್ಪರೆ ತನ್ನುದರವ?
ಭಾಳಾಂಬಕನ ಭಕ್ತನಾಗಿ ಭಕ್ತಿಯ ತಾರಲಾರೆನೆಂದಡೆ,
ಅದು ಬಾಲರ ಚಿತ್ತದ ಲೀಲೆಯಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೫೩ ||

೧೬೭೨

ಕಾಳರಾತ್ರಿಯೆಂಬ ಕತ್ತಲೆಯ ಮನೆಯ ಹೊಕ್ಕು,
ಜಾಳಿಗೆಯ ಮುದ್ರೆಯನೊಡೆದನೆಂಬವನಂತೆ,
ಸಭೆಯಲ್ಲಿರ್ದು ನಭವನಡರಿದೆನೆಂಬವನಂತೆ,
ಗಡಿಗೆಯಲ್ಲಿ ಸಮುದ್ರವ ತುಂಬಿ ಅಡಗಿಸಿದೆನೆಂಬವನಂತೆ
ಸರ್ವವನೊಡಗೂಡಿ ಹರಿದಾಡುತ್ತ, ಸಡಗರಿಸುತ್ತ,
ಲಲನೆಯರೊಡಗೂಡುತ್ತ, ಕರಣಂಗಳಲ್ಲಿ ಬಡಿಹೋರಿಯಾಗುತ್ತ,
ಲಿಂಗವನರಿದೆನೆಂಬ ಸುಗುಡರ ನೋಡಾ.
ಜಾಗ್ರದಲ್ಲಿ, ಕನಸಿನಲ್ಲಿ ತಾ ಸತ್ತೆನೆಂದು ಎಚ್ಚತ್ತು ಅಳುವ ಕುಚಿತ್ತನಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೫೪ ||

೧೬೭೩

ಕಾಳಾಂಧರವೆಂಬ ಕಾಳರಕ್ಕಸಿಯ ಬಸುರಲ್ಲಿ,
ಒಬ್ಬ ಭಾಳಲೋಚನ ಹುಟ್ಟಿದ.
ಆತ ಕಾಲಸಂಹಾರ, ಕಲ್ಪಿತನಾಶನ.
ಆತ ಕಾಳಾಂಧರ ರಕ್ಕಸಿಯ ಕೊಂದ.
ತಾಯ ಕೊಂದ ನೋವಿಲ್ಲ, ಹೆತ್ತ ತಾಯ ಕೊಂದ ಅನಾಚಾರಿ.
ನಿಃಕಳಂಕ ಮಲ್ಲಿಕಾರ್ಜುನ, ಕಟ್ಟುಮೆಟ್ಟನವನಲ್ಲ. || ೨೫೫ ||

೧೬೭೪

ಕಾಳೆಮ್ಮೆಯ ಕರೆಯಲಾಗಿ, ಹಾಲು ರೋಹಿತವಾಗಿ ಬಿದ್ದಿತ್ತು.
ರೋಹಿತವಾದುದ ಕಂಡು, ಕರೆವ ಬಾಲೆ ಹಾಲಿಲ್ಲಾ ಎಂದಡೆ,
ಮೇಲಿದ್ದಾತ ನೋಡಿ ಹಾಲನಳಿದು ಹೆಪ್ಪ ಬಿಡೆಂದ.
ಶೋಣಿತವಳಿದು ಹೋಗಲಾಗಿ ಹೆಪ್ಪಾಯಿತ್ತು,
ಅದು ಶೂಲಪಾಣಿಯ ಮರದ ಮಂತಿನಲ್ಲಿ,
ಏನೂ ಇಲ್ಲದ ನೇಣು ಹೂಡಿ ಕಡೆಯೆ,
ಮಡಕೆಯ ಬಾಯಲ್ಲಿ ಕರಗಿತ್ತು ಬೆಣ್ಣೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೫೬ ||

೧೬೭೫

ಕಿವಿಯ ಮುಚ್ಚಿ ಕಣ್ಣಿನಲ್ಲಿ ಕೇಳಿದಾಗ ಭಕ್ತಸ್ಥಲ.
ಕಣ್ಣ ಮುಚ್ಚಿ ಕರ್ಣದಲ್ಲಿ ನೋಡಿದಾಗ ಮಾಹೇಶ್ವರಸ್ಥಲ.
ಈ ಉಭಯ ಮುಚ್ಚಿ ನಾಸಿಕದೋಹರಿ ನಷ್ಟವಾದಲ್ಲಿ ಪ್ರಸಾದಿಸ್ಥಲ.
ಆ ಸುಗುಣ ದುರ್ಗುಣವೆಂಬುದು ನಿಂದಲ್ಲಿ ಪ್ರಾಣಲಿಂಗಿಸ್ಥಲ.
ಆ ಪ್ರಾಣ ಪರಿತೋಷಂಗಳಲ್ಲಿ ಪ್ರವರ್ತನ ನಿಂದಲ್ಲಿ ಶರಣಸ್ಥಲ.
ಆ ಶರಣ ಆರೂಢ ಸಲೆ ಸಂದು ನಿಂದಲ್ಲಿ ಐಕ್ಯಸ್ಥಲ.
ಐಕ್ಯವೆಂಬ ಕೂಟಸ್ಥ[ಲ] ನಿಂದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನನೆಂಬ ನಾಮಕ್ಕೆ ನಷ್ಟವಿಲ್ಲ.
ಆ ನಾಮವುಳ್ಳನ್ನಕ್ಕ ಎನ್ನ ಬಿರಿದಿನ ಸಾರ ಸಾಯದು. || ೨೫೭ ||

೧೬೭೬

ಕೀಲಿಂಗೆ ಕೀಲ ಮಾಡಿಹೆನೆಂದಡೆ, ಆ ತರುವಿಂಗೆ ಕಡೆ ನಡು ಮೊದಲಿಲ್ಲ.
ಸ್ಥಲವ ಹಿಡಿದು ಸ್ಥಲವನೆಯ್ದಿಹೆನೆಂದಡೆ, ಅದು ನಾಮ ರೂಪು.
ಭಾವ ಹಿಡಿವಲ್ಲಿ, ಅರಿತು ಬಿಡುವಲ್ಲಿ, ಮರೆವಡೆ ಆತನೊಡಗೂಡಿಪ್ಪ,
ನಿಃಕಳಂಕ ಮಲ್ಲಿಕಾರ್ಜುನ. || ೨೫೮ ||

೧೬೭೭

ಕೀಲಿನೊಳಗೊಂದು ಕೀಲ ಕಂಡೆ.
ಆ ಕೀಲಿನೊಳಗೊಂದು ಸಕೀಲವ ಕಂಡು, ಸಕಲವನೆಲ್ಲವನರಿವೆ.
ಆ ಅರಿವು ಮರವೆಗೊಳಗಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಅರಿವಿನಲ್ಲಿ. || ೨೫೯ ||

೧೬೭೮

ಕೀಳು ಮೇಲನರಸುವುದಕ್ಕೆ ಕೋಳಿಯ ಕಾಳಗವೆ ?
ಆ[ಳು] ಮೇಳದಲ್ಲಿ ಲೋಲಿತನಾಗಿಹಾಗ, ಸೂಳೆಯ ಮನೆಯ ಆಳೆ ?
ಬಾಲರಾಳಿಯ ಜೂಜಿನ ಸೋಲುವೆಯೆ ?
ಅವರ ಗಾಣದಲ್ಲಿ ಬಪ್ಪ ಸಾಲಿನ ಹೆಜ್ಜೆಯಂತೆ ಇನ್ನಾರಿಗೆ ಹೇಳುವೆ ?
ಮೆಟ್ಟಿದ ಹೆಜ್ಜೆಯ ಮೆಟ್ಟುವ ಕಷ್ಟಜೀವಿಗಳಿಗೆ ಇನ್ನೆತ್ತಣ ಗತಿಯೊ,
ನಿಃಕಳಂಕ ಮಲ್ಲಿಕಾರ್ಜುನಾ ? || ೨೬೦ ||

೧೬೭೯

ಕುಕ್ಕುಟನ ಗರ್ಭದಲ್ಲಿ ಒಂದು ಮಾರ್ಜಾಲ ಹುಟ್ಟಿ,
ಹೆತ್ತ ತಾಯ ತಿಂದು, ತತ್ತಿಯ ಬಿಟ್ಟಿತ್ತು.
ಈ ಗುಣ ಉಭಯದೃಷ್ಟವಿದೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೬೧ ||

೧೬೮೦

ಕುರಿ ಕುನ್ನಿ ಮೊದಲಾಗಿರ್ದವು ಒಡೆಯನ ಬಲ್ಲವು.
ಅರ್ಚಿಸಿ ಪೂಜಿಸಿ ಭಾವಿಸಿ ಏಕೆ ಅರಿಯೊ ?
ಅಯ್ಯಾ ಹೋಯಿತ್ತು ಭಕ್ತಿ, ಮ[ಳ]ಲ ಕೂಡಿದೆಣ್ಣೆಯಂತೆ.
ಹೋಯಿತ್ತು ಪೂಜೆ, ಪುರೋಹಿತನ ಕೊಂದು ಪುರಾಣವ ಕೇಳಿದಂತೆ.
ತಾ ಮಾಡುವ ಭಕ್ತಿಯ, ತಾ ಮಾಡುವ ಸತ್ಯವ,
ತಾ ಮಾಡುವ ಸದಾಚಾರವನರಿಯದೆ,
ಮಾಡುವ ಭಕ್ತ[ನ] ಮನೆಯಲ್ಲಿ ಹೊಕ್ಕುಂಡ ಜಂಗಮಕ್ಕೆ ಏಳನೆಯ ಪಾತಕ.
ಆ ಜಂಗಮಪ್ರಸಾದವ ಕೊಂಡ ಭಕ್ತಂಗೆ,
ಹುಲಿ ಕವಿಲೆಯ ತಿಂದು, ಮಿಕ್ಕುದ ನರಿ ತಿಂದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೬೨ ||

೧೬೮೧

ಕುರುಡನ ಮುಂದೆ ಗುಣಮಣಿ ಇದ್ದಡೆ,
ಅದ ಎಡಹುವನಲ್ಲದೆ ಕಾಣಲರಿಯ.
ಸರ[ಟ]ನ ಮುಂದೆ ಸತ್ಯವಿದ್ದಡೆ ನಿಶ್ಚಯಿಸಬಲ್ಲನೆ ?
ಬರಡಿಯ ಕೈಯಲ್ಲಿ ಮಕ್ಕಳಿದ್ದಡೆ ತೊರೆವುದೆ ಮೊಲೆ ?
ಅರಿವುಹೀನರಂಗದಲ್ಲಿ ಕುರುಹಿರಲಾಗಿ ಅರಿಯಬಲ್ಲರೆ ?
ಇವು ಬರಿಯಮಾತಿನ ಸೊಲ್ಲೆಂದೆ.
ಎನ್ನೊಡೆಯ ಕೈಯ ಗಡಿಗೆಯ ಬಿಡಿಸಾ, ನಿಃಕಳಂಕ ಮಲ್ಲಿಕಾರ್ಜುನಾ. || ೨೬೩ ||

೧೬೮೨

ಕುರುಹ ಕೊಡುವಲ್ಲಿ ಗುರುವಾಗಿ,
ವೇಷವ ತೊಟ್ಟು ತಿರುಗುವಲ್ಲಿ ಚರವಾಗಿ,
ಭಾಷೆಯ ತೊಟ್ಟು ಮಾಡುವಲ್ಲಿ ಭಕ್ತನಾಗಿ,
ಈ ತ್ರಿವಿಧದಾಟ ಇದರ ಭೇದ.
ಘನಲಿಂಗವ ಕೂಡಿಹೆನೆಂಬ ಕೂಟದ ಭೇದ.
ಎತ್ತ ಸುತ್ತಿ ಬಂದಡೂ ವಂಕದ ತಪ್ಪಲಿನಲ್ಲಿ ಹೋಗಬೇಕು.
ಇದು ನಿಶ್ಚಯ, ನಿಃಕಳಂಕ ಮಲ್ಲಿಕಾರ್ಜುನಾ. || ೨೬೪ ||

೧೬೮೩

ಕುರುಹಡಗಿಯಲ್ಲದೆ ಒಂದನರಿಯಬಾರದು.
ತಾನರಿದಲ್ಲಿಯಲ್ಲದೆ ಕುರುಹಿನ ಕುಲ ಕೆಡದು.
ಅರಿಯದುದನರಿದಲ್ಲಿ ಮರೆದು, ಮರೆದುದನರಿದಲ್ಲಿ ಕಂಡು,
ಉಭಯದ ತೋಟಿಯ ತೊಳಸಿ ನಿಂದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗದ ಅಂಗ, ಕರತಳಾಮಳಕವಾಯಿತ್ತು. || ೨೬೫ ||

೧೬೮೪

ಕುರುಹವಿಡಿದು ಕಂಡೆಹೆನೆಂದಡೆ, ಪುಣ್ಯವ ಮಾಡಬೇಕೆಂಬರು.
ಅರಿದು ಕಂಡೆಹೆನೆಂದಡೆ ಕಾಯದ ಕರಣಂಗಳ ಬಿಡಬೇಕೆಂಬರು.
ಕೆಟ್ಟೆವಯ್ಯಾ, ಚಕ್ರದಂಡದಲ್ಲಿ ಸಿಕ್ಕಿದ ಮರ್ಕಟನಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೬೬ ||

೧೬೮೫

ಕುಲ ಛಲ ಪಿಷ್ಠ ನೈಷ್ಠಿಕತೆಯಿಂದ ದೃಷ್ಟಿಸಿಕೊಂಡಿರ್ಪ
ಕಷ್ಟಮನುಜರಿಗೇಕೆ ನಿಜತತ್ವದ ಮಾತು ?
ಅವರು ಎತ್ತಿ ಹೋರುವ ಮತ್ತತ್ವವೈಸೆ ನಿತ್ಯತ್ವವಿಲ್ಲ.
ಇವರು ಭಕ್ತರು, ಜಂಗಮವೆಂದಡೆ ಮತ್ತೆ ಮತ್ತೆ ನರಕ,
ನಿಃಕಳಂಕ ಮಲ್ಲಿಕಾರ್ಜುನಾ. || ೨೬೭ ||

೧೬೮೬

ಕುಲಿಶ ಅಂಗುಲದೊಳಗಡಗಿವಡೆ, ಕುಟ್ಟದೆ ಬೆಟ್ಟವ ಹಿಟ್ಟುಗುಟ್ಟೆ ?
ಶಿಲೆಯೊಳಗಡಗಿಪ್ಪ ಪಾವಕ ಉದಯಿಸಿ ಸುಡದೆ ಮಹಾರಣ್ಯವ ?
ಚಿತ್ತುವಿನಲ್ಲಿ ಉದಯಿಸಿದ ಜ್ಞಾನ, ತನುವಿನ ಮೊತ್ತದೊಳಗಿಪ್ಪ

ಕಟ್ಟೇಂದ್ರಿಯವ ನಷ್ಟವ ಮಾಡದೆ ?
ಸರ್ಪದಷ್ಟವಾದಡೇನು ವಿಷ ಚಲನೆಯಾಗಿಯಲ್ಲದೆ ತನುವಿನ ಮರವೆಯಿಲ್ಲ.
ಹೀಂಗೆ ಘಟಿಸಿಯಲ್ಲದೆ ಅಘಟಿತವಾಗಬಾರದು.
ಇಂತಪ್ಪ ಪ್ರಕಾಶಿತಂಗೆ ನಮೋ ನಮೋ [ಎಂಬೆನು],
ನಿಃಕಳಂಕ ಮಲ್ಲಿಕಾರ್ಜುನಾ. || ೨೬೮ ||

೧೬೮೭

ಕುಸುಮ ಗಂಧ[ವ] ಉಪದೃಷ್ಟದಿಂದ ಹೊರೆವಂತೆ,
ಕಿಸಲಯದ ಘೃತ, ಅದು ತನ್ನ ಎಸಳದಿಂದ ಬಂಧ ಬಿಡುವಂತೆ,
ರಸಿಕರ ವಿವೇಕವ ಹೊಸ ನವನೀತದಲ್ಲಿ ನಿಶಿತ ಅಳಕವ ತೆಗೆದಂತೆ,
ಆವಾವ ಸ್ಥಲವ ವೇಧಿಸಿದಲ್ಲಿ, ಭಾವಕ್ಕೆ ಭ್ರಮೆಯಿಲ್ಲದೆ,
ಉಭಯಕ್ಕೆ ನೋವು ಇಲ್ಲದೆ, ಭಾವ ನಿರ್ಭಾವವಾಗಬೇಕು.
ಆತ ಷಟ್ಸ್ಥಲವೇದಿ, ಉಭಯಸ್ಥಲಭರಿತ, ಸರ್ವಸ್ಥಲಸಂಪೂರ್ಣ,
ಸರ್ವಭಾವ ಲೇಪ ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಉಭಯಸ್ಥಲಲೇಪವಾದ ಶರಣ. || ೨೬೯ ||

೧೬೮೮

ಕುಸುಮದಲ್ಲಿ ವಾಸನೆಯಿದ್ದಡೇನು ಅದು ಎಸೆಯದನ್ನಕ್ಕರ ?
ಕುಶಲನಲ್ಲಿ ರಸಿಕವಿದ್ದಡೇನು ಅದು ಎಸಗದನ್ನಕ್ಕರ ?
ಕುಟಿಲದ ವಸ್ತು ಕೈಯಲ್ಲಿದ್ದಡೇನು, ಅದು ಒಸೆದು ಪ್ರಾಣವ ಬೆರ[ಸದ]ನ್ನಕ್ಕರ?
ಇಂತೀ ಹುಸಿನುಸುಳ ಕಲಿತು ಬೆರಸಿದೆ ಲಿಂಗವನೆಂದಡೆ,
ಕಟ್ಟೋಗರದ ಮೊಟ್ಟೆಯಂತೆ, ಬಿಟ್ಟ ಶಕಟದಂತೆ,
ತೃಷೆಯ ಗಡಿಗೆಯಂತೆ, ಇದು ಸಹಜವಲ್ಲ ಲಿಂಗೈಕ್ಯರಿಗೆ
ನಿಃಕಳಂಕ ಮಲ್ಲಿಕಾರ್ಜುನಾ. || ೨೭೦ ||

೧೬೮೯

ಕುಸುಮದೊಳಗಣ ಗಂಧ ಹೋದ ಮತ್ತೆ, ಕುಸುಮವನಾರು ಬಲ್ಲರು ?
ದರುಶನದಲ್ಲಿ ಜ್ಞಾನವಿಲ್ಲದ ಮತ್ತೆ, ದರುಶನವನಾರು ಬಲ್ಲರು ?
ಮಾತು ಕಲಿತು ನುಡಿವರಲ್ಲಿ, ನಿರ್ಜಾತನ ನೆಲೆ ಇಲ್ಲದಲ್ಲಿ, ಮಾತನಾರು ಬಲ್ಲರು?
ಇಷ್ಟನರಿಯದೆ ಇದ್ದಡೆ, ಇವರೆಲ್ಲರೂ ಭ್ರಾಂತುಯೋಗಿಗಳೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೭೧ ||

೧೬೯೦

ಕೂಟಗೆಯ ಕೂಳನುಣ್ಣಬಂದವರೆಲ್ಲರೂ ಅಜಾತನ ನಿಲವ ಬಲ್ಲರೆ ?
ಬೇಟದ ಕಣ್ಣಿನವರೆಲ್ಲರೂ ಸಕಳೇಶನ ಬಲ್ಲರೆ ?
ಈಷಣತ್ರಯವ ಕೂಡುವರೆಲ್ಲರೂ ಪರದೇಶಿಗನ ಕೂಡಬಲ್ಲರೆ ?
ಆಶೆಯೆಂಬ ಕೊಳದಲ್ಲಿದ್ದು, ನಿರಾಶೆಯ ನಿರ್ನಾಮವ ಬಲ್ಲರೆ ?
ದೋಷದೂರ ನಿರ್ಜಾತನು ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೭೨ ||

೧೬೯೧

ಕೂಟದ ಲಕ್ಷಣವುಳ್ಳನ್ನಕ್ಕ ಐಕ್ಯಸ್ಥಲ.
ಭಾವದ ಕಲ್ಪಿತಂಗಳುಳ್ಳನ್ನಕ್ಕ ಶರಣಸ್ಥಲ.
ಕೊಂಡೆಹೆ ಕೊಟ್ಟೆಹೆನೆಂಬನ್ನಕ್ಕ ಪ್ರಾಣಲಿಂಗಿಸ್ಥಲ.
ಉಂಡೆಹೆ ಕೊಟ್ಟೆಹೆನೆಂಬನ್ನಕ್ಕ ಪ್ರಸಾದಿಸ್ಥಲ.
ಅರಿದೆಹೆ ಅರಿದೆಹೆನೆಂಬನ್ನಕ್ಕ ಮಾಹೇಶ್ವರಸ್ಥಲ.
ಗುರುವಿಂಗೆ ತನು, ಲಿಂಗಕ್ಕೆ ಮನ,
ಜಂಗಮಕ್ಕೆ ಧನವ ಕೊಟ್ಟೆಹೆನೆಂಬನ್ನಕ್ಕ ಭಕ್ತಸ್ಥಲ.
ಇವ ನಿಶ್ಚಯಿಸಿ ನಿಜಐಕ್ಯವೆಂದರಿತಲ್ಲಿ, ಷಟ್ಸ್ಥಲಲೇಪ,
ನಿಃಕಳಂಕ ಮಲ್ಲಿಕಾರ್ಜುನಾ. || ೨೭೩ ||

೧೬೯೨

ಕೂಟದಲ್ಲಿ ಸುಖಿಯಾದ ಮತ್ತೆ ಬೇಟ ಕೂಟವೇಕೆ ?
ಕೂಟವ ಮಾಡಿದ ಮತ್ತೆ ವಸ್ತುವಿನಲ್ಲಿ ಕೂಡಿದೆನೆಂಬ ಅರಿವೇಕೆ ?
ನಿತ್ಯಸುಖಿಯಾದ ಮತ್ತೆ ಒಚ್ಚಿ ಹೊತ್ತಿಂಗೊಂದು ಪರಿಯಾಗಲೇಕೆ ?
ನಿಜನಿತ್ಯಘನದೊಳಗೈಕ್ಯನಾದಾತ ಭಕ್ತಿಮುಕ್ತಿಗೆ ದೂರ,
ನಿಃಕಳಂಕ ಮಲಿಕಾರ್ಜುನಾ. || ೨೭೪ ||

೧೬೯೩

ಕೃತಯುಗಕ್ಕರಸು ಶೂಲಿ, ತ್ರೇತಾಯುಗಕ್ಕರಸು ರಘು.
ದ್ವಾಪರಕ್ಕರಸು ಸರಸ್ವತೀಪತಿ, ಕಲಿಯುಗಕ್ಕರಸು ರಾಮ ರಾವಣ.
ಇವರೊಳಗಾದ ಚಕ್ರವರ್ತಿಗಳು, ನರಕುಲಜಾತಿ,
ಪುಣ್ಯಪಾಪವೆಂಬ ಅರಸುತನಕ್ಕೊಳಗಾದರಯ್ಯಾ.
ಕೃತಯುಗದಲ್ಲಿ ಆ ಶೂಲಿ ಆಚಾರ್ಯನಾದ.
ತ್ರೇತಾಯುಗದಲ್ಲಿ ಆ ರಘು ದಶಾವತಾರನಾದ.
ದ್ವಾಪರಯುಗದಲ್ಲಿ ಆ ಬ್ರಹ್ಮ ಚತುರ್ಮುಖನಾದ.

ಕಲಿಯುಗದಲ್ಲಿ ಷಡ್ದರ್ಶನ ಪಲ್ಲವಿಸಿತ್ತು.
ಈ ದೃಷ್ಟವ ಹಂಚಿಕೊಂಡರು.
ದೃಷ್ಟವ ಕಾಬುದಕ್ಕೆ ಮಟ್ಟನಿರಿಸಿ ಪ್ರಳಯಗತರಾದರಯ್ಯ.
ಮೂರರೊಳಗಲ್ಲದ, ಆರಕ್ಕತೀತನ ತೋರಲಿಲ್ಲದ
ಘನವ ಮೀರಿ ನಿಂದವರಾರೋ ?
ಸೂರೆಯೊಳು ಗಾರಾದವರಿಗೆ ಮೀರಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೭೫ ||

೧೬೯೪

ಕೃತಯುಗದಲ್ಲಿ ಕುಂಜರನೆಂಬ ಆನೆಯ ತಿಂದರು ವಿಪ್ರರು.
ತ್ರೇತಾಯುಗದಲ್ಲಿ ಅಶ್ವನೆಂಬ ಕುದುರೆಯ ತಿಂದರು ವಿಪ್ರರು.
ದ್ವಾಪಾರದಲ್ಲಿ ಮಹಿಷನೆಂಬ ಕೋಣನಂ ತಿಂದರು ವಿಪ್ರರು.
ಕಲಿಯುಗದಲ್ಲಿ ಅಜನೆಂಬ ಹೋತ ತಿಂದರು ವಿಪ್ರರು.
ಇಂತು ಅನಂತ ಯುಗಂಗಳಲ್ಲಿ ಅನಂತ ಪ್ರಾಣಿ ವಧೆಯಂ ಮಾಡಿದರು.
ಇದಕ್ಕೆ ಕೊಟ್ಟು, ಸೆರಗು ಹಾಕಿದ ಮುಂಡಿಗೆಯು
ಇದು ಯಥಾರ್ಥ, ನಿಃಕಳಂಕ ಮಲ್ಲಿಕಾರ್ಜುನಾ. || ೨೭೬ ||

೧೬೯೫

ಕೆಚ್ಚ[ಲಿನ] ಹಾಲಲ್ಲಿ ತುಪ್ಪವಿಪ್ಪ ಭೇದವ ಬಲ್ಲಡೆ ಬಲ್ಲರೆಂಬೆ.
ಬೆಂಕಿಯೊಳಗಣ ಬೇಗೆಯ ಬಲ್ಲಡೆ ಬಲ್ಲರೆಂಬೆ.
ವಾಯುವಿನೊಳಗಿರ್ಪ ಸಂಚಾರವ ಬಲ್ಲಡೆ ಬಲ್ಲರೆಂಬೆ.
ಬೀಜದೊಳಗಿರ್ಪ [ರ]ಸಾಂಕುರ[ವ] ಬಲ್ಲಡೆ ಬಲ್ಲರೆಂಬೆ.
ಕಾಯದೊಳಗಿರ್ಪ ಪ್ರಾಣನ ನೆಲೆಯ ಬಲ್ಲಡೆ ಬಲ್ಲರೆಂಬೆ.
ಚಂದನದೊಳಗಿಪ್ಪ ಗಂಧವ ಬಂಧಿಸಿ ಹಿಡಿಯಬಲ್ಲಡೆ.
ಲಿಂಗವಿಪ್ಪೆಡೆಯ ಬಲ್ಲರೆಂಬೆ.
ಶಿಲೆಯೊಳಗಿಪ್ಪ ಕುಲಹೀನನ ಬೆಳಗಿ ತೋರುವ
[ಆ]ಮಲಿನ[ರ] ಮುಖವ ಕಂಡು ಮತ್ತೆ ದಿಂಗು[ವಿ]ಡಿಯಲೇಕೊ?
ದಿಂ[ಗ ವಿ]ಡಿದು ಭಂಡರಹ ಲಂಡರಿಗೇಕೆ ಲಿಂಗದ ಸುದ್ದಿ,
ನಿಃಕಳಂಕ ಮಲ್ಲಿಕಾರ್ಜುನಾ ? || ೨೭೭ ||

೧೬೯೬

ಕೆರೆಯೊಳಗಣ ಮೊಸಳೆಯ ತಡಿಯ, ಉಡು ನುಂಗಿತ್ತು.
[ಆ] ಉಡುವ ಪಡಿಯಲ್ಲಿಡಲಾಗಿ [ಅದು ಆ] ಬಡಿಗೆಯ ನುಂಗಿ,
ತನ್ನ ಬಳಗವನೊಡಗೂಡಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೨೭೮ ||

೧೬೯೭

ಕೆಸರ ತೊಳೆವರಲ್ಲದೆ ಉದಕವ ತೊಳೆವರುಂಟೆ ಅಯ್ಯಾ ?
ಕನ್ನಡಿಯ ಬೆಳಗುವರಲ್ಲದೆ ಮಣ್ಣ ಬೆಳಗುವರೆ ಅಯ್ಯಾ ?
ಹಾಲಿಂಗಂತರವಲ್ಲದೆ ಕೀಳಿಂಗೆ ಮೇಲುಂಟೆ ಅಯ್ಯಾ ?
ಕಾಳುಹೃದಯರಲ್ಲಿ ಪ್ರವೀಣರಿಗೆ ತೆರಪಿಲ್ಲ.
ಅವರಿಗದೇ ಭಂಗ, ನಿಃಕಳಂಕ ಮಲ್ಲಿಕಾರ್ಜುನಾ. || ೨೭೯ ||

೧೬೯೮

ಕೈಯಲ್ಲಿ ಕುರುಹ ಹಿಡಿದು, ಕಣ್ಣಿನಲ್ಲಿ ನೋಡಿ,
ಆತ್ಮವಲ್ಲಿ ಅರಿದು, ತನ್ನ ತಾನೇ ತಿಳಿದು,
ಕೈಯಲ್ಲಿದ್ದುದೇನು, ಕಣ್ಣಿನಲ್ಲಿ ನೋಡಿದುದೇನು,
ಆತ್ಮನಿಂದ ಅರಿದುದೇನು,
ಇಂತೀ ತ್ರಿವಿಧಗುಣವ ತಿಳಿಯಬೇಕಣ್ಣಾ.
ಕೈಯಲ್ಲಿದ್ದುದು ಕಡದ ಲಿಂಗವೋ ?
ಕಣ್ಣಿನಲ್ಲಿ ನೋಡಿದುದು ಬಣ್ಣದ ಲಿಂಗವೋ ?
ಆತ್ಮನಿಂದ ಅರಿದುದು ಬಯಲ ಲಿಂಗವೋ ?
ಕೈಗೂ ಕಣ್ಣಿಗೂ ಮನಕ್ಕೂ ಭಿನ್ನವಾಯಿತ್ತು.
ಲಿಂಗಪ್ರಾಣಿ, ಪ್ರಾಣಲಿಂಗಿಗಳ ಇನ್ನಾರನೂ ಕಾಣೆ.
ಭಾವಿಸಲಿಲ್ಲ, ಭ್ರಮೆಗೊಳಗಾಯಿತ್ತು.
ಆದಿಯ ಶರಣರೆಲ್ಲಾ ಹೋದರಲ್ಲ ಹೊಲಬುಗೆಟ್ಟು.
ನಾದಕ್ಕೊಳಗಾಯಿತ್ತು, ಆತ್ಮನ ಕಳೆಯನೈದಿದವರಿನ್ನಾರನೂ ಕಾಣೆ.
ಕಳಾತೀತ ಪರಂಜ್ಯೋತಿ ಪ್ರಕಾಶ ನೀನೇ, ನಿಃಕಳಂಕ ಮಲ್ಲಿಕಾರ್ಜುನಾ. ||೨೮೦ ||

೧೬೯೯

ಕೈಯಲ್ಲಿ ಹಿಡಿದಡೆ ಕಲ್ಲು ಸಿಕ್ಕಿತ್ತಲ್ಲದೆ, ಲಿಂಗವಿಲ್ಲಾ ಎಂದೆ.
ಕಣ್ಣಿನಲ್ಲಿ ನೋಡಿ ಕಬಳೀಕರಿಸಿದೆನೆಂದಡೆ ಅದು ಕವುಳಿಕವೆಂಬೆ.
ಮನದಲ್ಲಿ ನೆನೆದು ಘನದಲ್ಲಿ ನಿಂದೆಹೆನೆಂದಡೆ ಭವಕ್ಕೆ ಬೀಜವೆಂದೆ.
ಕೈಗೂ ಕಣ್ಣಿಗೂ ಮನಕ್ಕೂ ಬಹಾಗ ತೊತ್ತಿನ ಕೂಸೆ ?
ಕಂಡಕಂಡವರ ಅಪ್ಪಾ ಅಪ್ಪಾ ಎಂಬ ಇಂತೀ ಸುಚಿತ್ತರನರಿಯದೆ,
ಉದ್ಯೋಗಿಸಿ ನುಡಿವ ಜಗದ ಭಂಡಕರನೊಲ್ಲೆನೆಂದ,
ನಿಃಕಳಂಕ ಮಲ್ಲಿಕಾರ್ಜುನ. || ೨೮೧ ||

೧೭೦೦

ಕೊಂಡ ಅನ್ನದಿಂದ ಅಜೀರ್ಣ ಬಂದಡೆ,
ಆ ಅಜೀರ್ಣ ತನಗೊ, ಅಂಗಕ್ಕೊ ?
ತನ್ನ ಅನುವ ತಾನರಿಯದೆ, ಬಂದುಂಬ ಜಂಗಮದಲ್ಲಿ
ಅಂಗವನರಸುವ ಲಿಂಗದೂರರಿಗೇಕೆ ಜಂಗಮಭಕ್ತಿ,
ನಿಃಕಳಂಕ ಮಲ್ಲಿಕಾರ್ಜುನಾ ? || ೨೮೨ ||

೧೭೦೧

ಕೊಂದು ಕುಟ್ಟಿ ದಂಡವ ಕೊಂಬವಂಗೆ,
ಅದು ಬಂದಿಕಾರತನವೊ, ಕೃಪೆಯೊ ?
ಇದರಂದವ ತಿಳಿಯಬೆಕು.
ಬಂದು ಉಂಡುಹೋಹ ಜಂಗಮಕ್ಕೆ,
ಇದರ ಸಂದನರಿಯದಿರ್ದಡೆ,
ಬಂಧದಲ್ಲಿ ಬಿದ್ದ ವಿಹಂಗನಂತೆ,
ಇದರ ದಂದುಗವ ನೋಡಲಾರೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೮೩ ||

೧೭೦೨

ಕೊಟ್ಟ ದ್ರವ್ಯವನು ತಮ್ಮ ತಮ್ಮ ಲಿಂಗಕ್ಕೆ
ಸಮರ್ಪಣೆಯ ಮಾಡಿಕೊಂಡು,
ತನು ಭೋಗಾದಿ ಭೋಗಂಗಳ ಭೋಗಿಸುತ್ತಿರ್ದರಲ್ಲಾ
ಹೊನ್ನಪರಿಯಾಣಂಗಳಲ್ಲಿ.
ಅನಂತಪರಿಯ ಗುಗ್ಗುಳ ಧೂಪ ದಶಾಂಗವೆಸೆಯಲು,
ಭರದಿಂದ ನಡೆತಂದು ಶೂನ್ಯಸಿಂಹಾಸನದ ಮುಂದೆ ನಿಂದಿರ್ಪರು.
ಪಂಚಮಹಾವಾದ್ಯ ಮೊಳಗುತ್ತಿರಲು,
ಅವರವರ ಕೈಯ ನಿವಾಳಿಗಳನೀಸಿಕೊಂಡು,
ನಾಗಾಯವ್ವೆಗಳು ನಿಃಕಳಂಕ ಮಲ್ಲಿಕಾರ್ಜುನ ಪ್ರಭುವಿಂಗೆ
ಆರತಿಯನೆತ್ತುತಿರ್ದರಲ್ಲಾ. || ೨೮೪ ||

೧೭೦೩

ಕೊರಳ ಕಟ್ಟಿದ ನೇಣು ತಿರುಗಲಾಗಿ,
ತನ್ನ ಸುತ್ತಿ ತಾ ಬಿದ್ದುದಕ್ಕೆ ಕಟ್ಟಿದವನ ದುಷ್ಟನೆಂಬುದು ಕಷ್ಟವಲ್ಲವೆ ?
ತನ್ನ ಭಕ್ತಿಯ ತಾನೊಪ್ಪಿ, ಅದರ ಚನ್ನನರಿಯದೆ.

ಇದಿರಿನಲ್ಲಿ ಅನ್ಯಾಯವೆಂಬ ಕನ್ನಗಳ್ಳರ ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೮೫ ||

೧೭೦೪

ಕೊರಳಿಗೆ ಒಂದು ನೇಣಿನಲ್ಲಿ ಸಂದೇಹ ಬಿಡದು.
ಎರಡು ನೇಣಿನಲ್ಲಿ ಹಿಂಗಿ ಹೋಗದು,
ಮೂರು ನೇಣಿನಲ್ಲಿ ಮುಕ್ತಾಯವಾಗದು.
ಹಲವು ನೇಣಿನಲ್ಲಿ ಕಟ್ಟುವಡೆದುದು ಕೂಸು,
ಅದಕ್ಕೆ ಒಲವರವೇಕೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೮೬ ||

೧೭೦೫

ಕೊಲ್ಲಬಾರದು ಎಂದು ಎಲ್ಲಕ್ಕೆ ಹೇಳಿ,
ಮತ್ತೆ ಗೆಲ್ಲ ಸೋಲದ ಮಾತು.
ಅಲ್ಲ ಅಹುದೆಂದು ಹೋರಲೇಕೆ ?
ಅದೆ ಕೊಲ್ಲದ ಕೊಲೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೮೭ ||

೧೭೦೬

ಕೋಡಗ ಜೋಗಿನಾಡಿಸುವುದ ಕಂಡೆ.
ಹಾವು ಹಾವಾಡಿಗನ ಗಾರುಡವನಿಕ್ಕಿ,
ಹೇಳಿಗೆಯ ಬಂಧನದಲ್ಲಿ ಕೂಡಿ ಕಾಡುವುದ ಕಂಡೆ.
ಉರಿಗೆಂಡ ತೃಣಕಂಜಿ, ಅಲ್ಲಿಯೆ ಅಡಗಿ ತನ್ನ ಉಷ್ಣವಿಲ್ಲದುದ ಕಂಡೆ.
ಇಂತೀ ದೃಷ್ಟವ ಮರೆದು, ಇಷ್ಟವನರಿಯದ ವಿಶ್ವಾಸಹೀನರು,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ ಹೋದರು. || ೨೮೮ ||

೧೭೦೭

ಕೋಡಗದಣಲಿನಲ್ಲಿ ಮೂರಗುಳ ಕಂಡೆ.
ಒಂದಗುಳು ಚಪ್ಪೆಗಲ್ಲಿನಂದ, ಒಂದಗುಳು ಅಪ್ಪುಗಲ್ಲಿನಂದ,
ಒಂದಗುಳು ಅರ್ಘ್ಯಗಲ್ಲಾಗಿ ನಿಂದಿಹುದು.
ಆ ಕಲ್ಲಿನ ತುದಿಯಲ್ಲಿ ನಿಂದು ಕೋಡಗವ ಕೊಂದೆ.
ಚಪ್ಪೆಗಲ್ಲನಪ್ಪಳಿಸಿದೆ, ಅಪ್ಪುಗಲ್ಲನಡ್ಡಿಗೆಯನಿಕ್ಕಿ ಒಡೆದೆ.
ನಿಂದ ಕಲ್ಲ ಸಂದೇಹವಿಲ್ಲದೆ ತಳ್ಳಿದೆ.
ಅದರಂದವ ತಿಳಿ. ಲಿಂಗೈಕ್ಯನಾದವೆ ಹೊಂದದ ಬಟ್ಟೆಯೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೮೯ ||

೧೭೦೮

ಕೋಲ ಹಿಡಿದು ಆನೆಯನೇರಿದ ಮತ್ತೆ, ಅದು ಭಾವಿಸದು ನೋಡಾ.
ಲೋಕಜ್ಞಾನವನರಿದು, ಭಾವಭ್ರಮೆಯಲ್ಲಿ ಚರಿಸಿದಡೆ,
ಅರಿಯಬಾರದು ನೋಢಾ.
ಅರಿದಲ್ಲಿ ಸಾಗುವನೊಡಲು, ತೆಪ್ಪದ ಮೇಲಿಪ್ಪ ಒಪ್ಪದವೊಲೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೯೦ ||

೧೭೦೯

ಕೋಳು ಹೋದ ಮತ್ತೆ ಕಾಳಗದ ಇರವೇಕೆ ?
ಜಾಣನಾದ ಮತ್ತೆ ಕೇಳಲೇಕೆ ಆರುವನು ?
ಜ್ಞಾನಿಯಾದ ಮತ್ತೆ ಬಾಳಲೇಕೆ ಭವದಲ್ಲಿ ?
ಇದು ವೇಣುವಿನೊಳಗಣ ಕಿಚ್ಚಿನಂತಾಯಿತ್ತು.
ಇದಕ್ಕೆ ಜಾಣತನವೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೯೧ ||

೧೭೧೦

ಕ್ರೀ ಆಚರಣೆ ಶುದ್ಧವಾದಲ್ಲಿ ಇಷ್ಟಲಿಂಗಪೂಜೆ.
ರೂಪು ರುಚಿ ಏಕವಾದಲ್ಲಿ ಪ್ರಾಣಲಿಂಗಪೂಜೆ.
ರೂಪು ನಿರೂಪೆಂಬ ಉಭಯವಳಿದಲ್ಲಿ ಐಕ್ಯನ ಅನುಭವ ತೃಪ್ತಿ.
ಕೂಡುನ್ನಬರ ನೋಟ ಸುಖಿಯಾಗಿ,
ಬೇಟದ ನೋಟ ಕೂಟದಲ್ಲಿ ಅಳಿದ ಮತ್ತೆ,
ಉಭಯದೃಷ್ಟ ಏಕವಾಯಿತ್ತು.
ಚರ ಅಚರವಾದಲ್ಲಿ ಉಭಯನಾಮರೂಪು ನೀನೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೯೨ ||

೧೭೧೧

ಕ್ರೀವಂತಂಗೆ ಅಂಗ ಭವಿ, ನಿಃಕ್ರೀವಂತಂಗೆ ಮನ ಭವಿ,
ವೇಷವ ಹೊತ್ತು ತಿರುಗವ ಜಂಗಮಕ್ಕೆ ಆಶೆ ಭವಿ.
ಇನ್ನಾನೇವೆನಯ್ಯಾ ?
ಹಿಡಿವ ಎಡೆ ಕಾದ ಮತ್ತೆ ಪಿಡಿವುದಿನ್ನಾವುದೋ ?
ಆತ್ಮನು ಅಲಗಾದ ಮತ್ತೆ ಕೊಲುವ ಹಗೆ ಬೇರಿಲ್ಲವಾಗಿ,
ಹೇಳುವ ಜ್ಞಾನಿ ಸಂಸಾರಿಯಾದ ಮತ್ತೆ, ಕೇಳಿಗೊಂಡವ ಕೆಟ್ಟ, ನೋಡಾ.
ಸಾಧನೆಯಿಂದ ಬಂದ ಒದಗು. ಕಳನೇರಿ ಕೈ ಮರೆದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೯೩ ||

೧೭೧೨

ಕ್ರೀವಂತಂಗೆ ಪಡಿಪುಚ್ಚಕ್ಕೆ ಬಂದಾಗವೆ ಆಚಾರಕ್ಕೆ ಭಂಗ.
ಪಟುಭಟಂಗೆ ರಣಕ್ಕೆ ಹಂದೆಯಾದಲ್ಲಿಯೆ ಮಾತಿನ ಕೊರತೆ.
ವಿರಾಗಿ ರಾಗಿಯಾದಲ್ಲಿಯೆ ಸಮತೆಯೆಂಬುದಕ್ಕೆ ಸಮಾಧಾನವಿಲ್ಲ.
ವಿರಕ್ತನಾದಲ್ಲಿ ಸ್ತುತಿನಿಂದ್ಯಾದಿ ಕಂಗಳಲ್ಲಿ,
ಅಂಗಭಾವ ನಿಂದಲ್ಲಿಯೆ ವಿರಕ್ತಿಯೆಂಬ ಸಂಗವಿಲ್ಲ.
ಇಂತಿವರ ಸಂದನಳಿದಲ್ಲದೆ ಕ್ರೀ ಭಾವ ಜ್ಞಾನ ಒಂದೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೯೪ ||

೧೭೧೩

ಕ್ರೀಶುದ್ಧವಾದವಂಗೆ ಭಾವಶುದ್ಧ.
ಭಾವಶುದ್ಧವಾದವಂಗೆ ಆತ್ಮಶುದ್ಧ.
ಆತ್ಮಶುದ್ಧವಾದವಂಗೆ ಅರಿವು ಕರಿಗೊಂಡು ನಿಂದ ನಿಜವೆ,
ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೨೯೫ ||

೧೭೧೪

ಕ್ರೂರ, ಮೃಗ, ಜಾರ, ಚೋರ, [ಸ]ಂದಣಿಗ, ಭಂಡ, ಚಾರ್ವಕ,
ಸರ್ವಪಾತಕ,
ಸುರಾಪಾನಭುಂಜಕ, ಪಣ್ಯಾಂಗನಾಸಂಗಿ,
ಇಂತಿವರಲ್ಲಿ ತತ್ವಭಾವವ ಭಾವಿಸಿ ವ್ಯಕ್ತೀಕರಿಸಿದರೆ,
ದೃಷ್ಟಿಯಲ್ಲಿ ಇದಿರಾಗಿ ಹೊತ್ತು ನುಡಿದಡೆ,
[ಆ] ಭಕ್ತಂಗೆ ಭಕ್ತಿಯಿಲ್ಲ, ಮುಕ್ತಂಗೆ ಮುಕ್ತಿಯಿಲ್ಲ, ಜ್ಞಾನಿಗೆ ಜ್ಞಾನವಿಲ್ಲ.
ಸತಿಪತಿಸಂಯೋಗ ಸುಸಂಗವಲ್ಲದೆ,
ದುಸ್ಸಂಗದಿಂದ, ವ್ಯಾಪಾರದಿಂದ ನುಡಿಯಬಹುದೆ ?
ಬಲ್ಲವನಾದೆಹೆನೆಂದು ಅಲ್ಲಿಗಲ್ಲಿಗೆ ನುಡಿದಡೆ,
ಆತ್ಮನಲ್ಲಿದ್ದುದೇ ದ್ರೋಹ, ನಿಃಕಳಂಕ ಮಲ್ಲಿಕಾರ್ಜುನಾ. || ೨೯೬ ||

೧೭೧೫

ಕ್ರೋಧವ ಬಿಟ್ಟಲ್ಲದೆ ಇಚ್ಛಾಶಕ್ತಿಯ ಹೊರಗಲ್ಲ.
ಮೋಹವ ಬಿಟ್ಟಲ್ಲದೆ ಜ್ಞಾನಶಕ್ತಿಯ ಹೊರಗಲ್ಲ.
ವ್ಯಾಪಾರ ಮುಂತಾದ ಸಕಲಕೃತ್ಯದ ತಾಪವ ಬಿಟ್ಟಲ್ಲದೆ
ಕ್ರಿಯಾಶಕ್ತಿ ಹೊರಗಲ್ಲ.

ಇಂತೀ ತ್ರಿವಿಧ ನಿರ್ಲೇಪವಾಗಿಯಲ್ಲದೆ ಲಿಂಗೈಕ್ಯವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೨೯೭||

೧೭೧೬

ಖ್ಯಾತಿಲಾಭಕ್ಕೆ ಮಾಡುವಾತನೆಂಬುದನರಿದು,
ಭೂತಹಿತ ದಯಾ ದಾಕ್ಷಿಣ್ಯಕ್ಕೆ ಇಕ್ಕುವಾತನೆಂಬುದನರಿದು,
ಮಹಿಮಾಸ್ಪದದಿಂದ ವೀರವೈರಾಗ್ಯಗಳಿಂದ ಇಕ್ಕುವಾತನೆಂಬುದನರಿದು,
ಮಾಡಿಕೊಂಡ ಕೃತ್ಯಕ್ಕೆ ಬಿಟ್ಟಡೆ ನುಡಿದಿಹರೆಂದು
ಗುತ್ತಿಗೆಯಲ್ಲಿ ಇಕ್ಕುವಾತನೆಂಬುದನರಿದು,
ಅರ್ತಿ ತಪ್ಪದೆ, ಬಾಹ್ಯದ ಭಕ್ತಿ ತಪ್ಪದೆ,
ಅರ್ಚನೆ ಪೂಜನೆಗಳಲ್ಲಿ ನಿತ್ಯನೇಮ ತಪ್ಪದೆ,
ಸುಚಿತ್ತ ಧರ್ಮದಲ್ಲಿ ಮಾಡುವಾತನನರಿದು,
ಇಂತೀ ವರ್ಮಧರ್ಮಂಗಳಲ್ಲಿ ಅರಿದು,
ಸುಮ್ಮಾನದ ಸುಖತರದಲ್ಲಿ ಮಾಡುವ ಧರ್ಮಿಗನನರಿದು,
ಆರಾರ ಭಾವದ ಕಲೆಯನರಿದು, ಗುಣವೆಂದು ಸಂಪಾದಿಸದೆ,
ಅವಗುಣವೆಂದು ಭಾವದಲ್ಲಿ ಕಲೆಗೆ ನೋವ ತಾರದೆ,
ಇಂತೀ ಸರ್ವಗುಣಸಂಪನ್ನನಾಗಿ ಪೂಜಿಸಿಕೊಂಬ ಗುರುವಿಂಗೆ,
ಚರಿಸುವ ಜಂಗಮಕ್ಕೆ, ಉಪಾಧಿ ನಷ್ಟವಾದ ವಿರಕ್ತಂಗೆ,
ಕೂಗಿಂದ ನಮೋ ನಮೋ ಎಂದು ಬದುಕಿದೆ, ನಿಃಕಳಂಕ ಮಲ್ಲಿಕಾರ್ಜುನಾ.||೨೯೮||

೧೭೧೭

ಗರಳವಿಲ್ಲದ ಉರಗಂಗೆ ಹಲಬರಂಜಿದರುಂಟೆ ?
ಕೈದಿಲ್ಲದ ಭಟ ಗರ್ಜಿಸಿದಡೆ ಅಂಜಿದರುಂಟೆ ?
ಇಷ್ಟ ಬಾಹ್ಯ ದೃಷ್ಟ ಮಾತನಾಡಿದಡೆ,
ನೆಟ್ಟನೆ ಪ್ರಾಣಲಿಂಗಿಯಪ್ಪನೆ ?
ಅದು ನಿಶ್ಚಯವಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೨೯೯||

೧೭೧೮

ಗಾಜಿನ ಗೋಡೆಯ ಸುಣ್ಣ ವೇಧಿಸಬಲ್ಲುದೆ ?
ನಾಗರಹೆಡೆಯ ಚಿಕ್ಕೆರ ಬಲ್ಲುದೆ ?
ಉರಿಯ ಪುತ್ಥಳಿಯ ಅರಗು ಮುಟ್ಟಿ ಅಪ್ಪಬಲ್ಲುದೆ ?
ಲಿಂಗಮಯ ಸಿರಿವಂತರ ಅಂಗವ ಸಂಗಿಸಬಲ್ಲವೆ ಇಂದ್ರಿಯಂಗಳು,

ಇಂತೀ ಗುಣವ ಹಿಂಗಿ, ಲಿಂಗವೆ ತಾನಾಗಿಪ್ಪ
ನಿಃಕಳಂಕ ಮಲ್ಲಿಕಾರ್ಜುನನ ? ||೩೦೦||

೧೭೧೯

ಗಾಣದಲ್ಲಿ ಸಿಲುಕಿದ ಎಳ್ಳು, ನೋಯದೆ ಎಣ್ಣೆಯ ಬಿಡುವುದೆ ?
ಕಾಯದಲ್ಲಿ ಸಿಲುಕಿದ ಜೀವ, ನೋಯದೆ ಕರಣಂಗಳ ಬಿಡುವನೆ ?
ಭಾವದಲ್ಲಿ ಸಿಲುಕಿದ ಭ್ರಮೆ, ನೋಯದೆ ವಿಕಾರವ ಬಿಡುವುದೆ ?
ಇಂತಿವನರಿದಲ್ಲದೆ ಜ್ಞಾನಲೇಪವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೩೦೧||

೧೭೨೦

ಗಾರುಡವ ತಿಳಿದಡೆ ಹಾವಿನ ಸರಸವೆ ಲೇಸು.
ಆಪ್ಯಾಯನವನರತಡೆ ಹಸುವಿನ ಸಂಗವೆ ಲೇಸು.
ವಿಕಾರವರತಡೆ ಕಾಲವ್ಯಾಘ್ರನ ಸಂಭಾಷಣೆಯೆ ಲೇಸು.
ನನ್ನನರಿತು, ನಿಮ್ಮ ಬೆರೆದಡೆ ನಿನಗೆ ಲೇಸು,
ನಿಃಕಳಂಕ ಮಲ್ಲಿಕಾರ್ಜುನಾ. ||೩೦೨||

೧೭೨೧

ಗಾಳಿಯಲೆದ್ದ ಧೂಳು, ತೃಣ ಎಲೆ ಮೊದಲಾದ
ಬಹುವ್ಯಾಪಾರ, ಗಾಳಿಯ ಮುಟ್ಟಿದುದಿಲ್ಲ.
ಶರಣನ ಸರ್ವೇಂದ್ರಿಯ, ಗಾಳಿಯ ಧೂಳಿನ ಪರಿಯಂತೆ,
ಪಳುಕದ ಭಾಂಡ ಬಹುವರ್ಣದಂತೆ,
ಮುಟ್ಟಿಯೂ ಮುಟ್ಟದಿರ್ಪ ಮಹಾಶರಣಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. ||೩೦೩||

೧೭೨೨

ಗುಣವ ಕಂಡು ನೆನೆದೆಹೆನೆಂದಡೆ ಆ ನೆನಹು ನಿನ್ನ ಹಂಗು.
ಅಂಗವ ಬಿಟ್ಟು ಕಂಡೆಹೆನೆಂದಡೆ, ಆ ದೇಹ ಕರಣಂಗಳ ಹಂಗು.
ಅರಿಯಬಾರದು, ಅರಿಯದೆ ಇರಬಾರದು.
ಈ ಉಭಯದ ಭೇದವ ಇನ್ನಾರಿಗೆ ಹೇಳುವೆ,
ನಿಃಕಳಂಕ ಮಲ್ಲಿಕಾರ್ಜುನಾ. ||೩೦೪||

೧೭೨೩

ಗುತ್ತಿಗೆಕಾರ ನುಡಿದಡೆ, ಅವ ಒಪ್ಪವಿಡಲರಿಯರು.
ಹೊತ್ತುಹೊರಗೆಯವರು ನುಡಿದಡೆ, ತಪ್ಪನೊಪ್ಪವಿಡಬೇಕು.

ಮುಂದಣ ತಪ್ಪಿಗೆ ಈಡಾದ ಕಾರಣ, ಇದು ನಿಶ್ಚಯವೆಂದು ತಿಳಿ,
ನಿಃಕಳಂಕ ಮಲ್ಲಿಕಾರ್ಜುನಾ. ||೩೦೫||

೧೭೨೪

ಗುರುಜಂಗಮದ ಪಾದೋದಕವ ಲಿಂಗಕ್ಕೆ ಮಜ್ಜನವ ಮಾಡುವಲ್ಲಿ,
ಆ ಲಿಂಗ ಮೊದಲೋ, ಗುರುಚರ ಮೊದಲೋ ?
ಅನಾದಿಬೀಜ ಲಿಂಗ, ಆದಿಬೀಜ ಗುರುಚರ.
ಇಂತೀ ಉಭಯವನರಿತಲ್ಲಿ,
ಗುರುಚರಕ್ಕೆ ಲಿಂಗವೆ ಆದಿ, ನಿಃಕಳಂಕ ಮಲ್ಲಿಕಾರ್ಜುನಾ. || ೩೦೬ ||

೧೭೨೫

ಗುರುಪೂಜಕರೆಲ್ಲರೂ ಬ್ರಹ್ಮನ ಪಾಶಕ್ಕೊಳಗಾದರು.
ಲಿಂಗಪೂಜಕರೆಲ್ಲರೂ ವಿಷ್ಣುವಿನ ಪಾಶಕ್ಕೊಳಗಾದರು.
ಜಂಗಮಪೂಜಕರೆಲ್ಲರೂ ರುದ್ರನ ಪಾಶಕ್ಕೊಳಗಾದರು.
ಇಂತೀ ಮೂವರ ಹಂಗಿಗೆ ಸಿಲ್ಕಿ ಜ್ಞಾನಿಗಳೆಂತಾದಿರಯ್ಯಾ ?
ಮುಟ್ಟಿ ಪೂಜಿಸುವದಕ್ಕೆ ರೂಪಿಲ್ಲದ ಲಿಂಗದ
ದೃಷ್ಟವ ಕಂಡ ಪರಿಯಿನ್ನೆಂತೊ ?
ಇದು ಮರ್ತ್ಯದಲ್ಲಿ ಮಾಡುವ ಅಭ್ಯಾಸವಲ್ಲದೆ ನಿಜವಲ್ಲ.
ಅನಿತ್ಯವ ಬಿಟ್ಟ ನಿಜನಿಶ್ಚಯಂಗಲ್ಲದೆ,
ಸುಚಿತ್ತ ನಿರ್ಮುಕ್ತ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಐಕ್ಯನಲ್ಲ. || ೩೦೭ ||

೧೭೨೬

ಗುರು ಭಕ್ತನಂಗ, ಲಿಂಗ ಮಹೇಶ್ವರನಂಗ, ಜಂಗಮ ಪ್ರಸಾದಿಯಂಗ.
ಇಂತೀ ತ್ರಿವಿಧಸ್ಥಲಂಗಳಲ್ಲಿ ತ್ರಿವಿಧವಡಗಿ,
ತ್ರಿವಿಧ ಇದಿರಿಟ್ಟು, ತ್ರಿವಿಧ ಐಕ್ಯವಾಗಿ,
ಬೆಳಗಿಂಗೆ ಕಳೆದೋರಿ, ಕಳೆಗೆ ಕಾಂತಿ ಪ್ರಜ್ವಲಿಸುವಂತೆ,
ಅರ್ಕನ ಕಿರಣದಂತೆ, ಸಾಕಾರ ರೂಪಿಂಗೆ ಉಭಯಚಕ್ಷುವಾಗಿ,
ಬೆಳಗಿನಿಂದ ಬೆಳಗ ಕಂಡಂತೆ,
ಸ್ಥಲವ ನೆಮ್ಮಿ, ಸ್ಥಲದಲ್ಲಿ ಒಲವರವಿಲ್ಲದೆ ನೋಡಲಿಕ್ಕೆ,
ಸ್ಥಲಭರಿತಮೆಲ್ಲಿಯೂ ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೦೮||

೧೭೨೭

ಗುರುಭಕ್ತನಾದಡೆ ತನುವಿನಾಸೆಯ ಬಿಡಬೇಕು.
ಲಿಂಗಭಕ್ತನಾದಡೆ ಮನದಾಸೆಯ ಬಿಡಬೇಕು.

ಜಂಗಮಭಕ್ತನಾದಡೆ ಧನದಾಸೆಯ ಬಿಡಬೇಕು.
ಗುರುವಿನ ಅನುವನರಿಯನಾಗಿ ಗುರು ಸಂಬಂಧಿಯಲ್ಲ.
ಲಿಂಗದ ನಿಲವನರಿಯನಾಗಿ ಲಿಂಗಸಂಬಂಧಿಯಲ್ಲ.
ಜಂಗಮದಲ್ಲಿ ನಿಜವನರಿಯನಾಗಿ ಜಂಗಮ ಸಂಬಂಧಿಯಲ್ಲ.
ಇದು ಕಾರಣ, ಗುರುಲಿಂಗಜಂಗಮವನರಿಯಲೇ ಆಗದು,
ನೆರೆ ಅರಿದಡೆ, ಅರಿಯಬೇಕು ನಿಃಕಳಂಕ ಮಲ್ಲಿಕಾರ್ಜುನಲ್ಲಿ.
ಆ ಶರಣ ಉರಿಯುಂಡ ಕರ್ಪುರದಂತೆ. || ೩೦೯ ||

೧೭೨೮

ಗುರುಲಿಂಗಜಂಗಮಕ್ಕೆ ತನುಮನಧನವಂ ಸವೆಸಿ,
ದೃಢಚಿತ್ತವಿಲ್ಲದೆ ಪೊಡವಿಯ ಜನಂಗಳು ಮೆಚ್ಚಬೇಕೆಂದು,
ಮೃಡನ ಭಕ್ತರಿಗೆ ನೆರೆನಿಶ್ಚಟವುಂಟೆನಿಸಿಕೊಂಡೆಹೆನೆಂಬ
ಧಾರುಣಿಯ ಚೋರರಿಗೆಲ್ಲಿಯದೊ ನಿಜಭಕ್ತಿ,
ನಿಃಕಳಂಕ ಮಲ್ಲಿಕಾರ್ಜುನಾ ? || ೩೧೦ ||

೧೭೨೯

ಗುರುಲಿಂಗದ ಕುರುವಹುದಕ್ಕೆ ಕೆಟ್ಟ ದನವೆ ?
ಅರಸಿಕೊಂಬುದಕ್ಕೆ ಓಡಿಹೋದ ತೊತ್ತೆ ?
ದೃಷ್ಟದಲ್ಲಿ ಕಾಬುದಕ್ಕೆ ನೆಟ್ಟನೆ ಗೊತ್ತೆ ?
ಈ ಸಂದೇಹದ ಅಚ್ಚುಗದಲ್ಲಿ ಬಿದ್ದು ಕೆಟ್ಟೆನಯ್ಯಾ.
ಇದಕಿನ್ನೇನು ದೃಷ್ಟ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೩೧೧ ||

೧೭೩೦

ಗುರುವನರಿದವಂಗೆ ಗುರುವಿಲ್ಲ, ಲಿಂಗವನರಿದವಂಗೆ ಲಿಂಗವಿಲ್ಲ.
ಜಂಗಮವನರಿದವಂಗೆ ಜಂಗಮವಿಲ್ಲ, ಪ್ರಸಾದವನರಿದವಂಗೆ ಪ್ರಸಾದವಿಲ್ಲ,
ಪಾದೋದಕವನರಿದವಂಗೆ ಪಾದೋದಕವಿಲ್ಲ.
ಇವೆಲ್ಲವನರಿದು ಮರೆದವಂಗೆ,
ಅಲ್ಲಿಯೂ ಇಲ್ಲ, ಇಲ್ಲಿಯೂ ಇಲ್ಲ, ಎಲ್ಲಿಯೂ ಇಲ್ಲ.
ಮತ್ತೆ ಎಲ್ಲಾ ಎಡೆಯಲ್ಲಿಯೂ ತಾನೆ.
ಲೀಲೆಗೆ ಹೊರಗೆಂದಡೆ ಕೇಡಿಲ್ಲದವನೆ, ನಿರ್ಭಾವ ನೀ,
ನಿಃಕಳಂಕ ಮಲ್ಲಿಕಾರ್ಜುನಾ. || ೩೧೨ ||

೧೭೩೧

ಗುರುವನರಿಯದ ಕಾರಣ ತನು ಸವೆಯಬೇಕೆಂಬರು.
ಲಿಂಗವನರಿಯದ ಕಾರಣ ಮನ ಸವೆಯಬೇಕೆಂಬರು.
ಜಂಗಮವನರಿಯದ ಕಾರಣ ಧನ ಸವೆಯಬೇಕೆಂಬರು.
ಇಂತೀ ತ್ರಿವಿಧವನರಿಯದ ಕಾರಣ ಮಾಟಕೂಟಕ್ಕೆ
ಮನೆಗಟ್ಟಿ ಮಾಡುತ್ತಿರ್ದರಯ್ಯಾ ಮಹಾಗಣಂಗಳು, ತಾವು ಸ್ವಇಚ್ಛಾಪರರಲ್ಲದೆ.
ಬ್ರಹ್ಮನ ಹಂಗಿಂದ ಬಂದ ಗುರುವನರಿಯರಾಗಿ,
ವಿಷ್ಣುವಿನ ಹಂಗಿಂದ ಬಂದ ಲಿಂಗವನರಿಯರಾಗಿ,
ರುದ್ರನ ಹಂಗಿಂದ ಬಂದ ಜಂಗಮವನರಿಯರಾಗಿ,
ಅಹಂಕಾರವ ಮರೆದಲ್ಲಿಯೆ ಗುರುವನರಿದವ,
ಚಿತ್ತದ ಪ್ರಕೃತಿಯ ಹರಿದಲ್ಲಿಯೆ ಲಿಂಗವನರಿದವ,
ಮಾಟಕೂಟದ ಅಲಸಿಕೆಯ ಮರೆದಾಗವೆ ಜಂಗಮವನರಿದವ.
ಇಂತೀ ತ್ರಿವಿಧಸ್ಥಲನಿರತಂಗಲ್ಲದೆ ವರ್ಮವಿಲ್ಲಾ ಎಂದೆ.
ಖ್ಯಾತಿ ಲಾಭಕ್ಕೆ ಮಾಡುವಾತನ ಭಕ್ತಿ, ಅಗ್ನಿಯಲ್ಲಿ ಬಿದ್ದ ಬಣ್ಣವನರಸುವಂತೆ,
ನಿಃಕಳಂಕ ಮಲ್ಲಿಕಾರ್ಜುನಾ. ||೩೧೩||

೧೭೩೨

ಗುರುವ ಭಾವಿಸಿದಲ್ಲಿ ಲಿಂಗವ ಮರೆಯಬೇಕು.
ಲಿಂಗವ ಭಾವಿಸಿದಲ್ಲಿ ಜಂಗಮವ ಮರೆಯಬೇಕು.
ಜಂಗಮವ ಭಾವಿಸಿದಲ್ಲಿ ಪ್ರಸಾದವ ಮರೆಯಬೇಕು.
ಪ್ರಸಾದವ ಭಾವಿಸಿದಲ್ಲಿ ಪಾದೋದಕವ ಮರೆಯಬೇಕು.
ಪಾದೋದಕವ ಭಾವಿಸಿದಲ್ಲಿ ಪ್ರಸನ್ನವನರಿಯಬೇಕು.
ಅರಿದರಿದು [ಮರೆವುದು] ಮತ್ತೆ ಎಡೆಯ ಕುರುಹಲ್ಲ.
[ಬೇಡುವ]ವರ ಬಯಕೆ.
ಎನ್ನೊಡೆಯನೆ ಒಡಗೂಡಾ, ನಿಃಕಳಂಕ ಮಲ್ಲಿಕಾರ್ಜುನಾ. ||೩೧೪||

೧೭೩೩

ಗುರುವಾದಡೆ ಕಾಲಿಲ್ಲದಿರಬೇಕು.
ಲಿಂಗವಾದಡೆ ಬಾಯಿಲ್ಲದಿರಬೇಕು.
ಜಂಗಮವಾದಡೆ ಅಂಗವಿಲ್ಲದಿರಬೇಕು.
ಈ ಮೂವರು ಮೂವರ ಹಂಗಿಗರಾದರು.
ಏತರ ಹಂಗಿಲ್ಲದಾತ ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೧೫||

೧೭೩೪

ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನ.
ಇಂತಿವ ಕೊಟ್ಟು ಮುಕ್ತಿಯ ಗಳಿಸಿಕೊಂಡೆಹೆನೆಂಬ
ಮುಯ್ಯ ಬಂಧುಗಳಂತೆ,
ಬಡ್ಡಿಯಾಸೆಗೆ ಕೊಟ್ಟ ಲುಬ್ಧನಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೧೬ ||

೧೭೩೫

ಗುರುವಿಂಗೆ ತನುವ ಕೊಟ್ಟಾಗವೆ ಬ್ರಹ್ಮನ ಬಲೆ.
ಲಿಂಗಕ್ಕೆ ಮನವ ಕೊಟ್ಟಾಗವೆ ವಿಷ್ಣುವಿನ ಬಲೆ.
ಜಂಗಮಕ್ಕೆ ಧನವ ಕೊಟ್ಟಾಗವೆ ರುದ್ರನ ಬಲೆ.
ಈ ಇದಿರಿಟ್ಟ ಭೇದ,
ಸ್ಥೂಲ ಸೂಕ್ಷ್ಮ ಕಾರಣ ಮೂರು ಮೂರಕ್ಕೊಡಲಾದ ಮತ್ತೆ,
ಇದ ಸಾರಲೇಕೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೧೭ ||

೧೭೩೬

ಗುರುವಿಂಗೆ ತನುವ ಕೊಟ್ಟೆಹೆವೆಂದು
ಗುರುವಿಂಗೆ ಭವಭಾರವ ಹೊರಿಸಲೇಕೊ ?
ಲಿಂಗಕ್ಕೆ ಮನವ ಕೊಟ್ಟೆಹೆವೆಂದು ಬೆಂಬಳಿಯಲ್ಲಿ ತಿರುಗಲೇಕೊ ?
ಜಂಗಮಕ್ಕೆ ಧನವ ಕೊಟ್ಟೆಹೆವೆಂದು ಪಾಶವ ತಪ್ಪಿಸಲೇಕೊ ?
ಕೊಟ್ಟೆನೆಂಬುದು ಆಶೆಯೊ, ನಿರಾಶೆಯೊ ?
ಕೊಡುವುದಕ್ಕೆ ತಾನಾರೆಂಬುದನರಿದು,
ಇದಿರಿಟ್ಟು ಈಸಿಕೊಂಬವನಾರೆಂದರಿದು,
ಮಾಡುವ ಭಕ್ತಿಗೆ ಕೇಡಿಲ್ಲದ ಪದವೆಂದರಿದು,
ಕೊಟ್ಟವ ಭಕ್ತ, ಕೊಂಡವ ದೇವ.
ಇದರ ಬಂಧ ಎನಗೊಂದೂ ಬೇಡ, ನಿಮ್ಮಲ್ಲಿ ಹಿಂಗದಂತಿರಿಸು.
ಆನಂದಕ್ಕತೀತ, ಸ್ವಾನುಭಾವಾತ್ಮಕ, ನಿಃಕಳಂಕ ಮಲ್ಲಿಕಾರ್ಜುನಾ. || ೩೧೮ ||

೧೭೩೭

ಗುರುವಿಲ್ಲವೆಂದೆ, ಶಿಕ್ಷೆಯೊಳಗಣ ನಿಳಯವನರಿಯನಾಗಿ.
ಲಿಂಗವಿಲ್ಲವೆಂದೆ, ಜಂಗಮದ ತ್ರಿಕರಣವನರಿಯನಾಗಿ.
ಜಂಗಮವಿಲ್ಲವೆಂದೆ, ಗುರುವಿನ ಅನಾದಿಸಂಸಿದ್ಧಿಯನರಿಯನಾಗಿ.
ಈ ತ್ರಿವಿಧವಿಲ್ಲವೆಂದೆ, ತನ್ನ ತಾನರಿಯನಾಗಿ.

ತನ್ನ ತಾನರಿದಲ್ಲಿಯೆ, ನಿಃಕಳಂಕ ಮಲ್ಲಿಕಾರ್ಜುನನ ಒಡಲುಗೊಂಡು,
ಕುರುಹಾದ ಭೇದ. ||೩೧೯||

೧೭೩೮

ಗುರುವೆಂದಡೆ ತನು, ಲಿಂಗವೆಂದಡೆ ಆತ್ಮ,
ಜಂಗಮವೆಂದಡೆ ಆತ್ಮನರಿವು.
ತ್ರಿವಿಧದ ವ್ಯಾಪ್ತಿಯ ಕಳೆದುಳಿದ ಸಂಬಂಧವದು ನೀನೆ,
ಅನುಪಮಲಿಂಗ, ನಿರವಯ, ನಿಃಕಳಂಕ ಮಲ್ಲಿಕಾರ್ಜುನಾ. ||೩೨೦||

೧೭೩೯

ಗುರುವೆಂದು ಪ್ರಮಾಣಿಸಿದಲ್ಲಿ, ಪ್ರತ್ಯುತ್ತರವಿಲ್ಲದೆ ನಿಗರ್ವಿಯಾಗಿರಬೇಕು.
ಲಿಂಗವೆಂದು ಪ್ರಮಾಣಿಸಿದಲ್ಲಿ, ಸಂದೇಹವಿಲ್ಲದಿರಬೇಕು.
ಜಂಗಮವೆಂದು ಪ್ರಮಾಣಿಸಿದಲ್ಲಿ, ತ್ರಿವಿಧದ ಹಂಗಿಲ್ಲದಿರಬೇಕು.
ಇದರಂದ ಒಂದೂ ಇಲ್ಲದೆ ಭಕ್ತರಾದೆವೆಂಬ ಮಿಟ್ಟೆಯ ಭಂಡರ ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. ||೩೨೧||

೧೭೪೦

ಗುರುವೆಂಬೆನೆ, ಕಂಡಕಂಡವರಿಗೆ ಲಿಂಗವ ಕೊಟ್ಟು, ದ್ರವ್ಯಕ್ಕೆ ಹಂಗಿಗನಾದ.
ಲಿಂಗವೆಂಬೆನೆ, ಸಂಸಾರಕ್ಕೆ ಅಂಗವ ಕೊಟ್ಟ.
ಜಂಗಮವೆಂಬೆನೆ, ಕಂಡಕಂಡವರ ಅಂಗಳವ ಹೊಕ್ಕು, ಬಂಧನಕ್ಕೊಳಗಾದ.
ಎನಗಿದರಂದವಾವುದೊ, ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ. ||೩೨೨||

೧೭೪೧

ಗುರುಶಿಷ್ಯ ಸಂಬಂಧ, ಕಮಠನ ಶಿಶುವಿನ ಕೂರ್ಮೆಯಂತಿರಬೇಕು.
ಗುರುಶಿಷ್ಯ ಸಂಬಂಧ, ಬಿತ್ತಳಿದ ಕಾರ್ಪಾಸದ ಪಾವಕನ ಸಂಗದಂತಿರಬೇಕು.
ಗುರುಶಿಷ್ಯ ಸಂಬಂಧ, ಪಯದ ಅಪ್ಪುವಿನ ಸಂಗದಂತಿರಬೇಕು.
ಗುರುಶಿಷ್ಯ ಸಂಬಂಧ, ಲೆಕ್ಕಣಿಕೆಯೊಳಡಗಿದ ಸುರೇಖೆಯಂತಿರಬೇಕು.
ಹೀಂಗಲ್ಲದೆ ಹಸ್ತಮಸ್ತಕಸಂಯೋಗವ ಮಾಡಿದ ಗುರುವಿನ ಇರವು.
ಒಡೆದ ಗಡಿಗೆಯಲ್ಲಿ ಸುಧೆಯ ತುಂಬಿ ಆದಿರಬೇಕೆಂದಡೆ,
ಪಡಿಗೆ ತೆರಹಿಲ್ಲ ಎಂದೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೨೩||

೧೭೪೨

ಗುರುಸೇವೆಯ ಮಾಡುವಲ್ಲಿ, ಉತ್ಪತ್ಯದ ಒಡಲೊಡೆಯಬೇಕು.
ಲಿಂಗಪೂಜೆಯ ಮಾಡುವಲ್ಲಿ,

ಸುಖದುಃಖ ಭೋಗಂಗಳ ಸಕಲವ ಬಿಡಗೆಡೆಯಬೇಕು.
ಜಂಗಮ ಪೂಜೆಯ ಮಾಡುವಲ್ಲಿ,
ಚತುರ್ವಿಧಫಲಪದಂಗಳ ಭಾವ ನಷ್ಟವಾಗಬೇಕು.
ತ್ರಿವಿಧವ ತ್ರಿವಿಧದಿಂದ ಕೂಡಿ, ಬೆಳಗಿಂಗೆ ಬೆಳಗೊಳಗಾದಂತೆ,
ಷಟ್ಸ್ಥಲಭಾವ ಲೇಪವಾಯಿತ್ತು, ಪ್ರಾಣಲಿಂಗದ ಸಂಗವ ಮಾಡಲಾಗಿ.
ಇಂತೀ ಗುಣವ ತಿಳಿದು ನೋಡಲಾಗಿ ಐಕ್ಯವಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ನಿಜಭಾವದ ಬೆಳಗು. || ೩೨೪ ||

೧೭೪೩

ಗುರುಸ್ಥಲ ಭಕ್ತಿವಂಶಿಕ, ಲಿಂಗಸ್ಥಲ ಮಾಹೇಶ್ವರ ವಂಶಿಕ,
ಜಂಗಮಸ್ಥಲ ಪ್ರಸಾದಿಯ ವಂಶಿಕ.
ಪ್ರಾಣಲಿಂಗಿ ಶರಣ ಐಕ್ಯನೆಂಬೀ ತ್ರಿವಿಧ ಅನಾದಿಯ ಸೋಂಕು.
ಅವು ಪೂರ್ವಗತಿಗೆ ಬಂದು, ಉತ್ತರಗತಿಯನೆಯ್ದಿಸುವುದಕ್ಕೆ ಗೊತ್ತಾಗಿ,
ನಿತ್ಯ ಅನಿತ್ಯವೆಂಬ ಉಭಯದ ಹೆಚ್ಚುಕುಂದ ತಿಳಿವುದಕ್ಕೆ
ದೃಷ್ಟವ ಕೊಟ್ಟೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. || ೩೨೫ ||

೧೭೪೪

ಗುರುಸ್ಥಲ ಮೂರಾಗಿ ನಡೆವ ಭೇದವನಾರೂ ಅರಿಯರಲ್ಲಾ.
ಭವಿಗೆ ಲಿಂಗವ ಕೊಡುವಲ್ಲಿ, ಲಿಂಗವಂತಂಗೆ ಹರರೂಪ ಮಾಡುವಲ್ಲಿ,
ಹರರೂಪಿಂಗೆ ಅರಿವ ಹೇಳುವಲ್ಲಿ, ತ್ರಿವಿಧ ಗುರುರೂಪಾಯಿತ್ತು.
ಅಂಗಕ್ಕೆ ಲಿಂಗವ ಕೊಡುವಲ್ಲಿ, ಜಂಗಮಸ್ಥಲವ ಮಾಡುವಲ್ಲಿ,
ಆತ್ಮಬೋಧನೆಯ ಹೇಳುವಲ್ಲಿ. ಲಿಂಗಕ್ಕೆ ಆಚಾರ,
ಸಮಯಕ್ಕೆ ದರಿಸಿನ, ಆತ್ಮಕ್ಕೆ ಬೋಧೆ,
ಇಂತಿವನಾಧರಿಸಿ ಮಾಡಬೇಕು, ನಿಃಕಳಂಕ ಮಲ್ಲಿಕಾರ್ಜುನಾ. || ೩೨೬ ||

೧೭೪೫

ಗುರುಸ್ಥಲ ಲಿಂಗಸ್ಥಲ ಜಂಗಮಸ್ಥಲ.
ಈ ತ್ರಿವಿಧಭೇದವ ವಿವರಿಸಿ ಹೇಳಿಹೆ ಕೇಳಿರಣ್ಣಾ.
ಗುರುಸ್ಥಲ ವೇದಾಂತ, ಲಿಂಗಸ್ಥಲ ಸಿದ್ಧಾಂತ, ಜಂಗಮಸ್ಥಲ ಪ್ರಸಿದ್ಧಾಂತ.
ಇಂತೀ ತ್ರಿವಿಧಭೇದ ಐಕ್ಯವಹ ತೆರ ಸಮರ್ಪಣವೆಂತಾದುದಣ್ಣಾ ?
ಗುರುಸ್ಥಲ ಸಂಗನಬಸವಣ್ಣನಾದ, ಲಿಂಗಸ್ಥಲ ಚೆನ್ನಬಸವಣ್ಣನಾದ.
ಜಂಗಮಸ್ಥಲ ಪ್ರಭುವಾಗಿ ಬಂದ. ಬಂದ ಅಂದವ ತಿಳಿದು ನೋಡು.

ಗುರುಲಿಂಗಜಂಗಮವೆಂಬ ಸಂದೇಹದಲ್ಲಿ ನಿಂದು,
ಆನಂದಿಸುತ್ತಿರ್ಪ ಭಾವದ ಬಳಲಿಕೆಯ ಅಣ್ಣಾಗಳು ಕೇಳಿರೊ.
ಕಾಯ ಬಸವಣ್ಣನಾದ, ಜೀವ [ಚೆನ್ನ]ಬಸವಣ್ಣನಾದ.
ಅದರ ಅರಿವು ಕಳೆ ಪರಿಪೂರ್ಣ ಪರಂಜ್ಯೋತಿ ಪ್ರಭುವಾದ.
ಇಂತೀ ತ್ರಿವಿಧಭೇದವ ಕೊಟ್ಟು ಬಂದು,
ಭಕ್ತಿ ಮುಕ್ತಿ ವಿರಕ್ತಿಯಿಂದ ಮಹಾಮನೆಯಲ್ಲಿ ಮಾಡಿ ಕೆಟ್ಟ ಬಸವಣ್ಣ.
ಹೇಳಿ ಕೆಟ್ಟ ಚೆನ್ನಬಸವಣ್ಣ,
ಉಂಡೆಹೆನೆಂದು ಗರ್ವದಲ್ಲಿ ಕುಳಿತು ಕೆಟ್ಟ ಪ್ರಭುದೇವರು.
ಅಂತುಕದಲ್ಲಿರ್ದ ಸಂಗನಬಸವಣ್ಣ, ಸಂಕಲ್ಪದಲ್ಲಿರ್ದ ಚೆನ್ನಬಸವಣ್ಣ.
ಸಂದೇಹದಂಗವ ತಾಳಿರ್ದ ಪ್ರಭುದೇವರು.
ಇಂತಿವರಂಗದಲ್ಲಿ ಲಿಂಗವುಂಟೆಂಬೆನೆ, ಜ್ಞಾನಕ್ಕೆ ದೂರ.
ಇಲ್ಲವೆಂಬೆನೆ ಸಮಯಕ್ಕೆ ದೂರ.
ಇಂತೀ ಉಭಯದ ಸಂದನಳಿದರೆಂಬೆನೆ, ಪ್ರಭು ಸಂದೇಹಿಯಾದ.
ಇವರೆಲ್ಲರೂ ಅಡುವ ಲಂದಣಗಿತ್ತಿಯ ಮನೆಯ ಉಂಬಳಿಕಾರರಾದರು.
ಇದು ಸಂದೇಹವಿಲ್ಲ. ಗುರುವೆಂದಡೆ ಸರ್ವರಿಗೆ ಬೋಧೆಯ ಹೇಳಿ,
ಕರ್ಮಕಾಂಡಿಯಾದ.
ಲಿಂಗವೆಂದಡೆ ಯುಗಯುಗಂಗಳಿಗೊಳಗಾದ, ಪ್ರಳಯಕ್ಕರುಹನಾದ.
ಪ್ರಭುದೇವರು ಜಂಗಮವೆಂಬೆನೆ ಗೆಲ್ಲ ಸೋಲಕ್ಕೆ ಹೋರಿ,
ಕಾಯದೊಳು ನಾನಿಲ್ಲವೆಂದು ಚೌವಟಗೊಳಗಾದ.
ಎಲ್ಲಿಯೂ ಕಾಣೆ, ಲೀಲೆಗೆ ಹೊರಗಾದವನ.
ಭಕ್ತಿ ಮುಕ್ತಿ ವಿರಕ್ತಿ ಲೇಪವಾಗಿ, ನಾನೆನ್ನದೆ ಇದಿರೆನ್ನದೆ,
ಜಗದಲ್ಲಿ ತಾನೇನೂ ಎನ್ನದಿರ್ಪುದೆ ತ್ರಿವಿಧ ಸಮರ್ಪಣ ಆಚಾರ.
ಭಾವರಹಿತ ವಿಕಾರ, ನಿರುತ ಪರಿಪೂರ್ಣನಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. ||೩೨೭||

೧೭೪೬

ಗುರುಸ್ಥಲವಾರು, ಲಿಂಗಸ್ಥಲ ಮೂರು,
ಜಂಗಮಸ್ಥಲ ಒಂದೆಯೆಂದಲ್ಲಿ ಓಂಕಾರ ಬಿಂದು ಸಹಿತಾದಂತೆ.
ಆರೋಹ ಅವರೋಹವಾಗಿ ನಿಂದು, ಏರಿದ ವಿಷ ಇಳಿದು ಸೋರುವಂತೆ.
ಅದಾರ ಗುಣವೆಂದು ಪ್ರಣವದ ಬೇರನರಿತಲ್ಲಿ,
ಸರ್ವಸ್ಥಲ ಜಾರಿ ಮೀರಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ||೩೨೮||

೧೭೪೭

ಗುರುಸ್ಥಲವೆಂದು ಬಂದೆ, ಆಚಾರ್ಯನಾಗಿ.
ಲಿಂಗಸ್ಥಲವೆಂದು ಬಂದೆ, ಆರೋಹ ಅವರೋಹಂಗಳ ಪರಿಹರಿಸಿಹೆನೆಂದು.
ಶರಣನಾಗಿ ಬಂದೆ, ಭಕ್ತಿಜ್ಞಾನ ವೈರಾಗ್ಯ
ತ್ರಿವಿಧದ ಗೊತ್ತ ಮುಕ್ತಿಯ ಮಾಡಿಹೆನೆಂದು.
ದುತ್ತೂರಕ್ಕೆ, ಕಲ್ಪತರುವಿಂಗೆ ಮತ್ತಾವ ವೃಕ್ಷಫಲಾದಿಗಳಿಗೆ ಅಪ್ಪುವೊಂದು,
ಹಲವು ವೃಕ್ಷಂಗಳು ತಮ್ಮ ತಮ್ಮ ಸಶ್ಚಿತ್ತದ ಸವಿಯಾದಂತೆ,
ನಾನಾ ಸ್ಥಲಕ್ಕೆ ದೇವನೊಬ್ಬನೆ.
ಊರೊಳಗಾದಲ್ಲಿ ಅರಸು ಆಳಿನೊಳಗಾದಂತೆ ಆದೆಯಲ್ಲಾ.
ಕ್ರೀಗೆ ತುತ್ತಾಗಿ ಸಿಕ್ಕಿದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. || ३೨೯ ||

೧೭೪೮

ಗೂಳಿಯ ಕೋಡಿನಲ್ಲಿ ನಾಡೆಲ್ಲ ಸಿಕ್ಕಿತ್ತು.
ಗೂಳಿಯ ಕೊಲಬಾರದು, ನಾಡು ಕಾಡ ಕೂಡಿತ್ತು.
ಈ ರೂಢಿಯೊಳಗಣ ಹೊಲನ ಮೇದು, ಆಡ ಬಂದೆಯೋ ?
[ಕಾ]ಡಿನ ನಾಡ ಬಿಟ್ಟು ರೂಢಿಯ [ಮೊ]ೀಹ ಬಿಡಬೇಡ.
ನಿನ್ನ ಬೇಡಿಕೊಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೩೦ ||

೧೭೪೯

ಗೆಲ್ಲಾಳೆಲ್ಲರು ಬಿಲ್ಲನೂರಿ ನಿಂದಿರಲಾಗಿ
ಬಿಲ್ಲಿನ ಹೆದೆ [ಹರಿದು] ಬಿಲ್ಲಿನ ಹೆದೆಯ ಕೊಪ್ಪು ಅಲ್ಲಲ್ಲಿಗೆ ತೊಡಕು,
ಮೆಲ್ಲಗೆ ಏರಿಸಿದಡೆ ಹೆದೆ ಅಲ್ಲಿಯೆ ಸಿಕ್ಕಿತ್ತು.
ಆ ಹೆದೆಯನಿಳುಹುವರ ಕಾಣೆ.
ಬಲ್ಲತನದಿಂದ ಬಿಲ್ಲು ಬೆರಗಾಯಿತ್ತು.
ಬಿಲ್ಲ ಹಿಡಿದಾತ ಮರೆದೊರಗಿದ.
ಮರೆದೊರಗಿದಾತನ ಕರೆಯಲಾಗಿ,
ಬಿಲ್ಲಿನ ಹೆದೆ ಇಳಿಯಿತ್ತು, ಸೈವೆರಗು ಬಿಟ್ಟಿತ್ತು.
ಅಂಬಿನ ಕಣೆ ಎಲ್ಲಿ ಹೋಯಿತ್ತೆಂದರಿಯೆ.
ನಿಃಕಳಂಕ ಮಲ್ಲಿಕಾರ್ಜುನಾ. || ೩೩೧ ||

೧೭೫೦

ಗೇಣಗಲದ ಹಳ್ಳ ಕುಡಿಯಿತ್ತು ಸಪ್ತಸಮುದ್ರದುದಕವ.
ಗಾವುದ ಹಾದಿಯ ಊರು ಭುವನ ಹದಿನಾಲ್ಕು ಲೋಕವ ನುಂಗಿತ್ತು.

ಮನೆಯೊಳಗಣ ಒರಳು ಜಂಬೂದ್ವೀಪ ನವಖಂಡ ಪೃಥ್ವಿಯ ನುಂಗಿತ್ತು.
ನುಂಗಿದ ಮುಚ್ಚಳಿಗೆ ತೆರಹಿಲ್ಲದೆ ಮತ್ತೆ ಆ ಮನೆಯ ನುಂಗಿತ್ತು.
ಇಂತೀ ಒಳಗಾದವನೆಲ್ಲ ಪತಂಗ ನುಂಗಿತ್ತು.
ನುಂಗಿದ ಪತಂಗ ಹಿಂಗಿಯಾಡುತ್ತಿದ್ದಿತ್ತು.
ಕಂಡಿತ್ತು ಬೆಂಕಿಯ ಬೆಳಗ,
ಬಂದು ಸುಖಿಸಿಹೆನೆಂದು ಹೊಂದಿ ಹೋಯಿತ್ತು.
ಇದರಂದವ ತಿಳಿ, ಲಿಂಗೈಕ್ಯನಾದಡೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೩೨ ||

೧೭೫೧

ಗ್ರಾಮ ಮಧ್ಯದೊಳಗೆ ದೇಗುಲ, ದೇಗುಲದೊಳಗೆ ಮೂವರ ಕಂಡೆ.
ಒಬ್ಬನೆಡೆಯಾಡುತ್ತಿರ್ದ, ಒಬ್ಬ ನುಡಿಯುತ್ತಿರ್ದ, ಒಬ್ಬ ಅಳುತ್ತಿರ್ದ,
ಬಂದು ನೋಡಲಾಗಿ ನಡೆವನ ಕಾಲ ನಡಗಿಸಿ, ನುಡಿವನ ಬಾಯ ಮುಚ್ಚಿ,
ಅಳುವನ ಕಣ್ಣಿನಲ್ಲಿ ಬಣ್ಣಬಚ್ಚಣೆಯ ಮಣ್ಣ ತುಂಬಿ,
ಈ ಮೂವರೆಡೆಯಾಟದಲ್ಲಿ ನೋಯಲಾರದೆ,
ಅಂಜಿ ಅಲಸಿ ಹಿಂಗಿರ್ದೆ, ನಿಃಕಳಂಕ ಮಲ್ಲಿಕಾರ್ಜುನಾ. || ೩೩೩ ||

೧೭೫೨

ಘಟತತ್ವ ಪೃಥ್ವಿಭೇದವಾಗಿ, ಆತ್ಮತತ್ವ ಅಪ್ಪುಭೇದವಾಗಿ,
ತೇಜಸ್ತತ್ವ ಅರಿವುಭೇದವಾಗಿ,
ಇಂತೀ ತ್ರಿವಿಧಭೇದ ವರ್ತುಳ ಗೋಮುಖ ಗೋಳಕಾಕಾರ ಕೂಡಿ ಲಿಂಗವಾದಲ್ಲಿ,
ಈಶ್ವರತತ್ವ ವಾಯುಭೇದವಾಗಿ, ಸದಾಶಿವತತ್ವ ಆಕಾಶಭೇದವಾಗಿ,
ಉಭಯ ಏಕವಾಗಿ, ಅಗ್ನಿತತ್ವ ಕೂಡಲಿಕ್ಕೆ ಆ ತ್ರಿವಿಧ ಏಕವಾಗಿ,
ಅಪ್ಪುತತ್ವವ ಕೂಡಲಿಕ್ಕೆ ಆ ಚತುರ್ಭಾವ ಏಕವಾಗಿ,
ಪೃಥ್ವಿತತ್ವ ಕೂಡಲಾಗಿ, ಉತ್ಪತ್ಯವೆಲ್ಲಿ ಅಡಗಿತ್ತು ?
ಸ್ಥಿತಿಯೆಲ್ಲಿ ನಡೆಯಿತ್ತು ? ಲಯವೆಲ್ಲಿ ಸತ್ತಿತ್ತು ?
ಲಿಂಗ ಮಧ್ಯ ಸಚರಾಚರವೆಂದಲ್ಲಿ, ಕಂಡು ಕಾಣೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೩೪ ||

೧೭೫೩

ಘಟದೊಳಗೆ ರಸವಿದ್ದು, ರಸದೊಳಗೆ ಘಟವಿದ್ದು,
ಸಂಗಗುಣದಿಂದ ನೀರಾಗಿ.
ಸಂಗ ಹಿಂಗಲಿಕೆ ಉಭಯದಂಗ ಒಂದಾದ ತೆರನಂತೆ,
ಈ ಗುಣ ಲಿಂಗಾಂಗಿಯ ಸಂಗದ ವಿವರ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಕೂಡಿದ ಪರಮಸುಖಿಯಂಗ. || ೩೩೫ ||

೧೭೫೪

ಚಂದ್ರಕಾಂತಶಿಲೆಯನೊಂದು ಹಿಳಿದಲ್ಲಿ, ಬಿಂದು ಬಂದುದುಂಟೆ ?
ಸುಗಂಧದ ನನೆಯ ತಂದು ಬಂಧಿಸಿದಲ್ಲಿ, ಆ ಸುವಾಸನೆ ಬಂದುದುಂಟೆ ?
ಆ ಕಿರಣ ಪರುಷಶಿಲೆ ಸತಿಯಾಗಿ ಬೆರಸಿದಲ್ಲಿ, ಬಿಂದು ರೂಪಾಯಿತ್ತು.
ರಿತುಕಾಲಕ್ಕೆ ಕುಸುಮ ಬಲಿಯಲಾಗಿ, ಸುವಾಸನೆಯೆಸಗಿತ್ತು.
ಇಂತೀ ಉಭಯದಿಂದ ಅರಿವಲ್ಲಿ, ಸ್ಥಲಸ್ಥಲವ ನೆಮ್ಮಿ ನಿಃಸ್ಥಲವನರಿತಲ್ಲಿ,
ದೃಷ್ಟದ ಇಷ್ಟ ಅಲ್ಲಿಯೇ ಲೇಪ, ನಿಃಕಳಂಕ ಮಲ್ಲಿಕಾರ್ಜುನಾ. || ೩೩೬ ||

೧೭೫೫

ಚಂದ್ರಮಂಡಲದಲ್ಲಿ ನಿಂದಿರ್ಪ ಭೇದ[ವ], ಅದರಂಗದ ನಿಲುವೆಂತುಟೊ ?
ಅಂಗಮಂಡಲದಲ್ಲಿ ಲಿಂಗವಿಪ್ಪ ಭೇದವ, ಸಂಗೊಳಿಸುವ ಪರಿಯಿನ್ನೆಂತುಟೊ ?
ಈ ಭಂಗಿತವ ಮಾಡುವ ಇಂದ್ರಿಯ ಕರಣಂಗಳಲ್ಲಿ ನಿಂದಿಹ ಪರಿಯಿನ್ನೆಂತುಟೊ ?
ಈ ಭೇದ, ರಸಫಲದಂಗ, ಬಸವಣ್ಣ ಮೊದಲಾದ ಪ್ರಮಥರು ಬಲ್ಲರು.
ಇದನಾನೇವೆ, ನಿಃಕಳಂಕ ಮಲ್ಲಿಕಾರ್ಜುನಾ ? || ೩೩೭ ||

೧೭೫೬

ಚಿಕ್ರಿಯ ಚಿತ್ತದಂತೆ, ಚಿತ್ರಜ್ಞನ ಕೈಯ ಲೆಕ್ಕಣಿಕೆಯಂತೆ,
ಅಪ್ಪುವಿನ ಮಡುವಿನ ಮತ್ಸ್ಯದ ಪಥದಂತೆ,
ಇಂತೀ ಭಕ್ತಿಜ್ಞಾನವೈರಾಗ್ಯ ನಿಃಪತಿಯಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ಹುಟ್ಟುಗೆಟ್ಟ. || ೩೩೮ ||

೧೭೫೭

ಚಿತ್ತಶುದ್ಧವನರಿಮು ನಡೆಯಬೇಕೆಂಬರು,
ನಡೆದು ಹೊಡೆವಾಗ ಹೂಡಿದ ಬಂಡಿಯೆ, ಆಡುವ ವಿಘಾತನೆ ?
ಈ ಭೇದವನರಿಯದೆ,
ಗಾಜಿನ ಕುಪ್ಪಿಗೆಯಲ್ಲಿ ತೋರುವ ಪ್ರತಿಬಿಂಬದಂತೆ,
ಅದ ಭೇದಿಸಿ ನೋಡಿ, ನಿಃಕಳಂಕ ಮಲ್ಲಿಕಾರ್ಜುನಾ. || ೩೩೯ ||

೧೭೫೮

ಚಿತ್ತ ಶುದ್ಧವಾದಲ್ಲಿಯೆ ಮಜ್ಜನದ ಮಂಡೆ.
ಅಂಗದಾಪ್ಯಾಯನವರತಲ್ಲಿಯೆ ಎಂಬುವಕ್ಕೆ ಬಾಯಿ.
ಸಂದುಸಂಶಯ ಹರಿದಲ್ಲಿಯೆ ಲಿಂಗದ ಸಂಸರ್ಗ.
ಇವರಂದವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೩೪೦ ||

೧೭೫೯

ಚಿತ್ರದ ಹುಲಿ ಮನುಷ್ಯನ ಕಚ್ಚಬಲ್ಲುದೆ?
ಮರ್ತ್ಯದೊಳಗೆ ಈಶ್ವರನ ದರ್ಶನ ಹೊತ್ತವರಿಗೆಲ್ಲ ನಿತ್ಯತ್ವವುಂಟೆ?
ಇದರಚ್ಚೆಯ ಹೊರಲಾರದಿರ್ದಡೆ, ಮರ್ತ್ಯಕ್ಕೆ ಹೊರಗೆಂದ ನಿಚ್ಚಟ ಶರಣ,
ನಿಃಕಳಂಕ ಮಲ್ಲಿಕಾರ್ಜುನಾ. ||೩೪೧||

೧೭೬೦

ಚಿನ್ನದ ಕುರುಹ ಒರೆದಲ್ಲದೆ ಅರಿಯಬಾರದು.
ಚಂದನದ ಗುಣವ ಮರ್ದನಂಗೈದಲ್ಲದೆ ಗಂಧವ ಕಾಣಬಾರದು.
ಇಕ್ಷುದಂಡದ ಪರಿಯ ಬಂಧಿಸಿದಲ್ಲದೆ ವಿಶೇಷವ ಕಾಣಬಾರದು.
ನಾನಾ ರಸ ಗಂಧಂಗಳ ಗುಣವ ಸವಿದಲ್ಲದೆ ಕಾಣಬಾರದು.
ಕ್ಷೀರದ ಘಟ್ಟಿಯ ಮಥನದಿಂದಲ್ಲದೆ ರುಚಿಸಬಾರದು.
ಮಹಾತ್ಮರ ಸಂಗ ಮಹಾನುಭಾವದಿಂದಲ್ಲದೆ ಕಾಣಬಾರದು.
ಇದು ಕಾರಣ, ಮಾತು ಮಾತಿಂಗೆಲ್ಲಕ್ಕೂ ಮಹದನುವುಂಟೆ?
ಲಿಂಗವ ಸೋಂಕಿದ ಮನಕ್ಕೆ ಅಂಗ ಭಿನ್ನವಾವುದೆಂದಡೆ,
ಶೇಷನ ಅವಸಾನದಂತಿರಬೇಕು, ತ್ರಾಸಿನ ವಾಸದ ಭಾಷಾಂಗದಂತಿರಬೇಕು.
ಹೀಂಗಲ್ಲದೆ ಸರ್ವಾನುಭಾವಿಗಳೆಂತಾದಿರಣ್ಣಾ.
ಕೊಲ್ಲದ ಕೋಲೆಯ, ಗೆಲ್ಲದ ಜೂಜವ,
ಬಲ್ಲತನವಿಲ್ಲದ ಬರಿವಾಯ ಮಾತಿನ ಗೆಲ್ಲ ಸೋಲಕ್ಕೆ ಹೋರಿದಡೆ,
ವಲ್ಲಭ ನಿಃಕಳಂಕ ಮಲ್ಲಿಕಾರ್ಜುನನವರನೊಲ್ಲನಾಗಿ. ||೩೪೨||

೧೭೬೧

ಚಿನ್ನದಲ್ಲಿ ಮಾಡಿದ ರೂಪು, ಮಣ್ಣಿನಲ್ಲಿ ಮಾಡಿದ ರೂಪು,
ಕಲ್ಲಿನಲ್ಲಿ ಮಾಡಿ ರೂಪು ಪ್ರಳಯವಾಗಲು,
ಸ್ಥೂಲವಳಿದಡೆ ಸೂಕ್ಷ್ಮಕ್ಕೆ ತರಬಹುದು.
ಬಣ್ಣದ ರೂಪು ಚೆನ್ನುತನ ಹರಿದಲ್ಲಿ, ಅದ ನನ್ನಿಯ ಮಾಡಬಹುದೆ?
ಅದು ತನ್ನಲ್ಲಿಯೆ ಲೇಪ, ಅದು ಭಿನ್ನಕ್ಕೆ ಬಾರದು.
ಇವ ಚೆನ್ನಾಗಿ ಹೇಳಾ, ಅಭಿನ್ನಮೂರ್ತಿ ನಿಃಕಳಂಕ ಮಲ್ಲಿಕಾರ್ಜುನಾ. ||೩೪೩||

೧೭೬೨

ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ,
ಮೃತ್ತಿಕೆಯ ಸಾರದಲ್ಲಿ ಹೊಮ್ಮಿದ ಹೊಂಗಳ ಪರಿಯಂತೆ,

ಕಾಯದಲ್ಲಿ ಬೆಳಗಿ ತೋರುವ ಮಹದರಿವಿನ ಕೊನೆಯಲ್ಲಿ,
ಪ್ರಜ್ವಲಿತ ಪ್ರಭಾಕರ ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೩೪೪ ॥

೧೭೬೩

ಚೇತನವಳಿದು ಅಚೇತನವಸ್ತು ರೂಪಾಗಿ ಬಂದಿತ್ತದೇತಕ್ಕೆ ಎಂಬುದು ತಿಳಿದು,
ಬಂಗಾರವ ಕಳೆದು ಬಣ್ಣವ ನೋಡಬಾರದು.
ಕುಸುಮವ ಕಳೆದು ಗಂಧವ ಕಾಣಬಾರದು.
ದರ್ಪಣದ ಘಟವ ಕಳೆದು ನೋಡಲಿಕ್ಕೆ ಪ್ರತಿಬಿಂಬಿಸುವುದೆ ?
ಅಂಗವ ಕಳೆದು ಲಿಂಗವನರಿಯಬಾರದು.
ಲಿಂಗವ ಕಳೆದು ಆತ್ಮನನರಿವ ಪರಿಯಿನ್ನೆಂತೊ ?
ಆತ್ಮನ ಚೇತನವ ಬಿಟ್ಟು ಹಿತಜ್ಞಾನವರಿಯಬೇಕೆಂಬ
ಅಜಾತರು ಕೇಳಿರೊ.
ಅಂಗವ ಕಳೆದು ಲಿಂಗವ ಕಂಡೆನೆಂಬುದು,
ಲಿಂಗವಳಿದು ಆತ್ಮನನರಿದೆನೆಂಬುದು,
ಆತ್ಮನಳಿದು ಅರಿವನರಿದೆನೆಂಬುದು, ಅದೇತರ ಮರೆ ಹೇಳಾ.
ತೃಷೆಯರತು ನೀರ ಕೊಳಬಹುದೆ ?
ಅಪ್ಯಾಯನವನರತು ಓಗರವನುಣಬಹುದೆ ?
ಸತ್ಕ್ರೀಯಿಲ್ಲದೆ ಲಿಂಗವನರಿಯಬಹುದೆ ?
ಆ ಲಿಂಗಕ್ಕೆ ಅರ್ಚನೆ ಪೂಜನೆ ಹೀನವಾಗಿ ವಸ್ತುವನರಿತೆನೆಂಬ
ನಿಃಕ್ರಿಯವಂತರು ನೀವೇ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನಾ. ॥ ೩೪೫ ॥

೧೭೬೪

ಜಂಗಮ ಸುಳಿವಡೆ ವಸಂತ ಗಾಳಿಯಂತೆ ಸುಳಿವ.
ಬಿರುಗಾಳಿಯಂತೆ ಸುಳಿವನೆ ? ಸುಳಿಯ.
ಜಂಗಮಸ್ಥಲವೆಂತೆಂದಡೆ, ಮಳಲೊಳಗಣ ಅಗ್ನಿಣಿಯಂತೆ.
ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವೆಂಬ ಕದಡ ಚೆಲ್ಲಿ,
ತಿಳಿಯ ಕೊಳಬಲ್ಲಡೆ ಜಂಗಮವೆಂಬೆ.
ಇಂತಲ್ಲದಿರ್ದಡೆ ಭೂತಪ್ರಾಣಿಯೆಂಬೆ ಕಾಣಾ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೩೪೬ ॥

೧೭೬೫

ಜಂಗಮಕ್ಕೆ ಇಕ್ಕಿದಲ್ಲದೆ ಒಲ್ಲೆವೆಂಬ ಭಕ್ತರು ಕೇಳಿರೊ.
ಆ ಜಂಗಮ ಮುಂದೆ ಬಂದು ನಿಂದಿರಲು,

ತಾ ಕುಳಿತಿದ್ದು, ಏನು ಬಂದಿರಯ್ಯಾ ಎಂದು, ಉದಾಸೀನ ಪಕ್ಷಿತನಾಗಿ,
ಆಸನವ ತೊಲಗದೆ, ಲೇಸ ನುಡಿಯದೆ,
ವಾಸಿವಟ್ಟಕ್ಕೆ ಕೂಳನಿಕ್ಕುವ ದಾತರಿಗೆಲ್ಲಿಯದೊ, ಜಂಗಮಲಿಂಗದ ಪೂಜೆ ?
ಮನವೊಲಿದು ಮಾಡುವ ಭಕ್ತನ ಸ್ಥಲ,
ತಾ ಹೋಹಲ್ಲಿ, ಜಂಗಮ ಬಾಹಲ್ಲಿ ಇದಿರೇಳಬೇಕು.
ಮೆಟ್ಟಡಿಯಂ ಕಳೆದು, ಬಟ್ಟೆಯಂ ತೊಲಗಿ,
ಸಾಷ್ಟಾಂಗವೆರಗಿ, ಪ್ರತಿಶಬ್ದವಿಲ್ಲದೆ ಕೈಕೊಂಡು,
ತ್ರಿಕರಣಶುದ್ಧನಾಗಿ ಕೊಡುವುದ ಕೊಟ್ಟು, ತನಗೆ ಬೇಕಾದುದ ಕೇಳಿಕೊಂಡು,
ಭಾವಿಸಬಲ್ಲಡೆ, ಅದೇ ಸದ್ಭಕ್ತಿ, ಅದೇ ಜೀವನ್ಮುಕ್ತಿ.
ಇಷ್ಟವನರಿಯದೆ, ಕಾಬವರ ಕಂಡು, ಮಾಡುವರ ನೋಡಿ ಮಾಡುವ ಮಾಟ,
ರಾಟಾಳದ ಕಂಭದ ಪಾಶದಂತೆ.
ಆಶೆಕರನೊಲ್ಲೆನೆಂದ ನಿಃಕಳಂಕ ಮಲ್ಲಿಕಾರ್ಜುನಾ. || ೩೪೭ ||

೧೭೬೬

ಜಂಗಮಭಕ್ತಿಯ ಮಾಡಿಹೆನೆಂದು ಮಹಾಮನೆಯ ಕಟ್ಟಿದ ಮತ್ತೆ,
ಹಗೆ ಕಪಟವಂ ತಾಳ್ದು, ಶಿವರೂಪಿನಲ್ಲಿ ಬಂದು ಇರಿದಡೆ,
ಅಂಗವ ಕೊಡದಿದ್ದಡೆ ಭಕ್ತಂಗದೆ ಭಂಗ.
ಕಪಟದಿಂದ ಸತಿಯ ಹಿಡಿದಡೆ, ಗದಕದಲ್ಲಿದ್ದೇನೆಂದಡೆ, ತನ್ನ ಸತ್ಯಕ್ಕೆ ಭಂಗ.
ಆಶೆಯಿಂದ ಬಂದು, ವೇಷವ ತಾಳಿ, ರಾಶಿಯ ಹೊನ್ನ ಬೇಡಿದಡೆ,
ಮನದಲ್ಲಿ ಆಶೆದೋರಿದಡೆ, ತಾ ಪೂಜಿಸುವ ಈಶ್ವರಂಗೆ ಭಂಗ.
ಇದಿರಾಶೆಯ ಬಿಡದೆ ಮಾಡುವನ ಭಕ್ತಿ,
ಕೂಸು ಸತ್ತು ಹೇತದ ನಾತ ಬಿಡದಂತೆ,
ಅವರಿಗೇತಕ್ಕೊಲಿವ, ನಿಃಕಳಂಕ ಮಲ್ಲಿಕಾರ್ಜುನಾ. || ೩೪೮ ||

೧೭೬೭

ಜಂಗಮವೆಂದು ಮಾಡಿ ಪಂಙ್ತಿಯಲ್ಲಿ ವಿಂಗಡಿಸಿ,
ಲೆಕ್ಕವ ಮಾಡುವ ದಂಡದ ಮನೆಯಲ್ಲಿ ಕೂಳನುಂಬ ಜಂಗಮಕ್ಕೆ
ಭಂಪುಗೆಲಿದು ಬೇಡಿ ತಂದ ಭಂಡನ ಎಂಜಲ ತಿಂದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೪೯ ||

೧೭೬೮

ಜಗದಲ್ಲಿ ಪರಿವೇಷ್ಟಿಸುವ ದೈವಜಾತಿಗಳ ಪರಿಪ್ರಕಾರವ ನೋಡಿರೆ.
ಬ್ರಹ್ಮಮೂರ್ತಿ ಗುರುವಾದ, ವಿಷ್ಣುಮೂರ್ತಿ ಲಿಂಗವಾದ,

ರುದ್ರಮೂರ್ತಿ ಜಂಗಮವಾದ.
ಇಂತೀ ಮೂವರು ಬಂದ ಭವವ ನೋಡಾ.
ಇಷ್ಟಲಿಂಗವ ಕೊಟ್ಟು ಕಷ್ಟದ್ರವ್ಯಕ್ಕೆ ಕೈಯಾನುವ ಕಾರಣ,
ಗುರುಬ್ರಹ್ಮನ ಕಲ್ಪಿತವ ತೊಡೆದುದಿಲ್ಲ.
ಲಿಂಗ ಸರ್ವಾಂಗದಲ್ಲಿ ಸಂಬಂಧಿಸಿದ ಮತ್ತೆ,
ಕಾಯದಲ್ಲಿ ಮೆಟ್ಟಿಸಿಕೊಂಬ ಕಾರಣ, ವಿಷ್ಣುವಿನ ಸ್ಥಿತಿ ಬಿಟ್ಟುದಿಲ್ಲ.
ಜಂಗಮ ರುದ್ರನ ಪಾಶವ ಹೊತ್ತ ಕಾರಣ, ರುದ್ರನ ಲಯಕ್ಕೆ ಹೊರಗಾದುದಿಲ್ಲ.
ಇಂತಿವರ ಗುರುವೆನಬಾರದು, ಲಿಂಗವೆನಬಾರದು, ಜಂಗಮವೆನಬಾರದು.
ಪೂಜಿಸಿದಲ್ಲಿ ಮುಕ್ತಿಯಲ್ಲದೆ ನಿತ್ಯತ್ವವಿಲ್ಲ.
ಸತ್ಯವನರಸಿ ಮಾಡುವ ಭಕ್ತ, ನಿತ್ಯಾನಿತ್ಯವ ವಿಚಾರಿಸಬೇಕು.
ಸತ್ತು ಗುರುವೆಂಬುದ, ಚಿತ್ತು ಲಿಂಗವೆಂಬುದ, ಆನಂದ ಜಂಗಮವೆಂಬುದ [ಅರಿದು].
ಇಂತೀ ತ್ರೈಮೂರ್ತಿಯಾಗಬೇಕು.
ತಾನೆ ಗುರುವಾದಡೆ ಬ್ರಹ್ಮಪಾಶವ ಹರಿಯಬೇಕು.
ತಾನೆ ಲಿಂಗವಾದಡೆ ಶಕ್ತಿಪಾಶವ ನಿಶ್ಶೈಸಬೇಕು.
ತಾನೆ ಜಂಗಮವಾದಡೆ ರುದ್ರನ ಬಲೆಯ ಹರಿಯಬೇಕು.
ಇಂತಿವರೊಳಗಾದವೆಲ್ಲವು ಪ್ರಳಯಕ್ಕೆ ಒಳಗು.
ಗುರುವೆಂಬುದು ಬಿಂದು, ಲಿಂಗವೆಂಬುದು ಕಳೆ,
ಜಂಗಮವೆಂಬುದು ಕಳಾತೀತ, ಜ್ಞಾನ ಜಂಗಮ.
ಆ ವಸ್ತುವಿಂಗೆ ಗುರುವಿಲ್ಲ ಲಿಂಗವಿಲ್ಲ ಜಂಗಮವಿಲ್ಲ.
ಪಾಶಬದ್ಧನಲ್ಲ, ವೇಷಧಾರಿಯಲ್ಲ, ಗ್ರಾಸಕ್ಕೋಸ್ಕರವಾಗಿ ಭಾಷೆಯ ನುಡಿವನಲ್ಲ.
ಈಶಲಾಂಛನವ ಹೊತ್ತು, ಕಾಸಿಂಗೆ ಕಾರ್ಪಣ್ಯಬಡುವನಲ್ಲ.
ಮಹದಾಶ್ರಯವನಾಶ್ರಯಿಸಿದನಾಗಿ, ಮನೆಯ ತೂತಜ್ಞಾನಿಗಳ ಮೆಚ್ಚ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ನಿರ್ಲೇಪನಾದ ಶರಣ. ||೩೫೦||

೧೭೬೯

ಜಗದಲ್ಲಿ ಸುಳಿವ ಗುರುಗಳ ಉಪದೇಶದ ಬೋಧೆಯ
ಚೋರತನವ ಕಂಡು ಅಂಜಿದೆನಯ್ಯಾ.
ಮನೆಯ ಕೂಡಿಕೊಂಡು ಅನ್ನವನಿಕ್ಕಿದಲ್ಲಿ
ಸುಳಿವ ಚೋರರ ಕಂಡು ಗುರುವೆನಲಾರೆ.
ಅದೆಂತೆಂದಡೆ :
ಮಹತ್ತರವಪ್ಪ ಜ್ಯೋತಿರ್ಲಿಂಗವ ಕೈಯಲ್ಲಿ ಕೊಟ್ಟು,

ಪಾತಕವಪ್ಪ ಫಲಭೋಗಂಗಳ ಕೈಯಲ್ಲಿ ಕೊಟ್ಟು,
ಅಜಾತರೆಂದಡೆ ನಾಚಿದೆನಯ್ಯಾ.
ಇಂತೀ ಭ್ರಾಂತರ ಕಂಡು ವಂದಿಸಲಾಗದು,
ತನ್ನ ರೋಗಕ್ಕೆ ನಿರ್ವಾಹವ ಕಾಣದೆ, ಇದಿರ ರೋಗವ ಮಾಣಿಸಿಹೆನೆಂದು,
ಮದ್ದಿನ ಚೀಲವ ಹೊತ್ತು ಸಾವ ಕದ್ದೆಹಕಾರನಂತೆ,
ಕ್ಷುದ್ರಜೀವಿಗೆಲ್ಲಿಯದು ಸದ್ಗುರುಸ್ಥಲ ?
ಸದ್ಗುರುವಾದಡೆ ಅವ ಬದ್ಧನಾಗಿರಬೇಕು.
ತಂತ್ರದಲ್ಲಿ ಹೋಹ ಮಂತ್ರದಂತಿರಬೇಕು.
ಮಂದಾರದಲ್ಲಿ ತೋರುವ ಸುಗಂಧದಂತಿರಬೇಕು.
ಇಂತಿಪ್ಪ ಗುರುವಿಂಗಿಹವಿಲ್ಲ, ಪರವಿಲ್ಲ, ಭಾವಕ್ಕೆ ಭ್ರಮೆಯಿಲ್ಲ.
ಆ ಗುರುವಿನ ಕೈಯಲ್ಲಿ ಬೋಧಿಸಿಕೊಂಡ ಶಿಷ್ಯಂಗೆ
ತುಪ್ಪವನಿಕ್ಕಿದ ಚಿತ್ತೆಯಂತೆ ಸ್ಫಟಿಕವ [ಸಾರಿ] ದ [ಒರತೆ ]ಯಂತೆ.
ಹೀಂಗಲ್ಲದೆ, ಗುರುಶಿಷ್ಯಸಂಬಂಧವಾಗಬಾರದು.
ಇದನರಿಯದಿರ್ದಡೆ ಅಂಧಕನ ಕೈಯ ಅಂಧಕ ಹಿಡಿದಂತೆ,
ಪಂಗುಳ[ನ]ಲ್ಲಿ ಚಂದವನರಸುವನಂತೆ,
ಸ್ವಯಾನಂದಭರಿತ, ನಿಃಕಳಂಕ ಮಲ್ಲಿಕಾರ್ಜುನಾ. || ೩೫೧ ||

೧೭೭೦

ಜನನ ಮರಣಕ್ಕೊಳಗಹ ಆತ್ಮನ ಪರಿಭವಕ್ಕೆ ಬರ್ಪುದು,
ಇಲ್ಲವೆಂದು ನುಡಿವುತ್ತಿಹರು ಅಧ್ಯಾತ್ಮಯೋಗಿಗಳು.
ಶರೀರದಲ್ಲಿ ಸೋಂಕಿದ ವ್ಯಾಧಿ ಆತ್ಮಂಗಲ್ಲದೆ ಶರೀರಕ್ಕುಂಟೆ ?
ಘಟಕ್ಕೆ ನೋವಲ್ಲದೆ ಆತ್ಮಂಗೆ ನೋವೆಲ್ಲಿಯದೆಂಬುದು ಹುಸಿ.
ಘಟದಲ್ಲಿ ತೋರುವ ಆತ್ಮನು ಘಟವ ಬಿಟ್ಟು, ಮತ್ತೆ ಘಟಕ್ಕೆ ಚೇತನಿಸಬಲ್ಲುದೆ ?
ನಾನಾ ಸುಖಂಗಳ ಸುಖಿಸಬಲ್ಲುದೆ ?
ಇದು ಕಾರಣ, ಕ್ರೀಯೆವಿಡಿದು ಮಾಡುವಂಗೆ ಕರ್ಮಶೇಷವಿಲ್ಲ,
ನಿಃಕ್ರೀಯಲ್ಲಿ ಚರಿಸುವಂಗೆ ನಾನಾ ಭವವುಂಟಾಗಿ.
ಇಂತೀ ಆತ್ಮನಲ್ಲಿ ಪರಿಭವಕ್ಕೆ ಬರಬಾರದು.
ಬಂದಡೆ ಅಳಿವು ಉಳಿವನರಿಯಬೇಕು, ಅರಿಯಲಾಗಿ ಮರೆಯಬೇಕು.
ಆ ಮರವೆ ತಾನೆ ತೆರಹಿಲ್ಲದರಿಕೆ ಕಾಣಾ, ನಿಃಕಳಂಕ ಮಲ್ಲಿಕಾರ್ಜುನಾ. || ೩೫೨ ||

೧೭೭೧

ಜಪವೇಕೊ ಅಪ್ರಮಾಣಂಗೆ ?
ತಪವೇಕೊ ಚತುರ್ವಿಧಪ[ಥ]ಕ್ಕೆ ಹೊರಗಾದಾತಂಗೆ ?

ನೇಮವೇಕೊ ನಿತ್ಯತೃಪ್ತಂಗೆ ?
ನಿತ್ಯವೇಕೊ ಅಷ್ಟವಿಧಾರ್ಚನೆ ಷೋಡಶೋಪಚಾರಭರಿತಂಗೆ ?
ಜಪಕ್ಕೊಳಗಾದ ರುದ್ರ, ತಪಕ್ಕೊಳಗಾದ ವಿಷ್ಣು,
ನೇಮಕ್ಕೊಳಗಾದ ಬ್ರಹ್ಮ, ನಿತ್ಯಕ್ಕೊಳಗಾದ ಈಶ್ವರ,
ಉಪಚರಣೆಗೊಳಗಾದ ಸದಾಶಿವ.
ಇಂತಿವರೆಲ್ಲರೂ ಸೃಷ್ಟಿಯ ಮೇಲಣ ತಪ್ಪಲಿಲ್ಲಿರ್ದರೇಕೆ,
ಎಲ್ಲಾ ಬೆಟ್ಟವನೇರಿ ?
ಇಂತಿವರ ಬೆಟ್ಟೆಯ ಮೆಟ್ಟದೆ ನಿಶ್ಚಯವಾದ ಶರಣ,
ಇಹದವನಲ್ಲ, ಪರದವನಲ್ಲ.
ಆ ಶರಣ ಉಡುವಲ್ಲಿಯೂ ತಾನೆ, ತೊಡುವಲ್ಲಿಯೂ ತಾನೆ,
ಕೊಡುವಲ್ಲಿಯೂ ತಾನೆ, ಮುಟ್ಟುವಲ್ಲಿಯೂ ತಾನೆ,
ತಟ್ಟುವಲ್ಲಿಯೂ ತಾನೆ ಬೇರೊಂದಿಲ್ಲವಾಗಿ.
ಕ್ಷೀರವ ಕೂಡಿದ ಜಲವ ಭೇದಿಸಬಹುದೆ ಅಯ್ಯಾ ?
ವಾರಿಧಿಯ ಕೂಡಿದ ಸಾರವ ಬೇರೆ ರುಚಿಸಲುಂಟೆ ಅಯ್ಯಾ ?
ಅರಡಿ ಕೊಂಡ ಗಂಧವ ಬೇರು ಮಾಡಿ ಮುಡಿಯಲಿಲ್ಲ.
ತೋರಲಿಲ್ಲದ ರೂಪಿಂಗೆ ಆರಾಧಿಸುವುದಕ್ಕೆ ಬೇರೆ ಒಡಲಿಲ್ಲ.
ಸಾಕಾರಕ್ಕೆ ಆರೈಕೆಯಿಲ್ಲದೆ ಸತ್ತು ರೂಪಾದಲ್ಲಿಯೆ,
ಇ[ಹದ]ಲ್ಲಿ ಪರದಲ್ಲಿ ಪರಿಣಾಮಿಗಳಾಗಲಿ,
ಇಂತಿವಕ್ಕೆ ದೂರವಾಗಿ ಬಾಳುಗೆಟ್ಟು ಬಾಳಾದೆ,
ಹೇಳಹೆಸರಿಲ್ಲದಂತಾದೆನಯ್ಯಾ, ನಿಃಕಳಂಕ ಮಲ್ಲಿಕಾರ್ಜುನಾ. ||೩೫೩||

೧೭೭೨

ಜಲ ಅನಲ ಮಣ್ಣು ಕೂಡಿ ಬಲಿದ ಮತ್ತೆ ಜಲ ಅನಲನಿಗುಂಟೆ ?
ಕ್ರೀವ್ಯಾಪಾರ ಜ್ಞಾನವ ಕೂಡಿದ ಮತ್ತೆ ಪ್ರಳಯ ಉಂಟೆ ?
ಹಾಕಿದೆ ಮುಂಡಿಗೆಯ, ಶಿವನಾಣೆ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸತ್ಯವಂತರೆತ್ತಿರಣ್ಣಾ. ||೩೫೪||

೧೭೭೩

ಜಲಮಣಿಯ ಜಗಡವನಿಕ್ಕಬಹುದೆ ? ಬಯಲ ಬಂಧಿಸಬಹುದೆ ?
ಒಲುಮೆಯ ರಸಿಕಕ್ಕೆ ಸಲೆ ನಿಳಯವುಂಟೆ ?
ಇದು ಸುಲಲಿತ. ಇದರ ಒಲುಮೆಯ ಹೇಳಾ,
ನಿಃಕಳಂಕ ಮಲ್ಲಿಕಾರ್ಜುನಾ. ||೩೫೫||

೧೭೭೪

ಜಾಗ್ರದಲ್ಲಿ ಕಾಬುದು ಬ್ರಹ್ಮನಿರವು.
ಸ್ವಪ್ನದಲ್ಲಿ ಕಾಬುದು ವಿಷ್ಣುವಿನಿರವು.
ಸುಷುಪ್ತಿಯಲ್ಲಿ ಕಾಬುದು ರುದ್ರನಿರವು.
ಇಂತೀ ಗುಣವನರಿಯದೆ,
ಪರಮನ ಇರವನರಿವ ಪರಿಯೆಂತೊ ?
ಭ್ರಾಂತರ ಭ್ರಮೆಗೆ ದೂರ, ಶಾಂತರ ವಿಶ್ರಾಂತಿಯೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೫೬ ||

೧೭೭೫

ಜಾಲಗಾರನ ಡೋಣಿಯಂತೆ, ಬಳಸುವ ಹುಟ್ಟಿನಂತೆ,
ಬೈಚಿಟ್ಟ ನೆಲೆಯಂತಿರ್ದಡೇನು ಭೋಗಿಸಲರಿಯನಾಗಿ,
ಲಿಂಗವಂಗದ ಮೇಲಿದ್ದಡೆ ಮನ ಸಂಗವ ಮಾಡಬಲ್ಲುದೆ ?
ಇವರಂಗವ ನೋಡಾ.
ಕೆಳಗೆ ನಿಂದು ಚಪ್ಪರಿದಡೆ ತೊಟ್ಟು ಬಿಟ್ಟಿತ್ತೇ ಹಣ್ಣು ?
ಅದರ ಒಲುಮೆ ಈ ಪರಿ, ನಿಃಕಳಂಕ ಮಲ್ಲಿಕಾರ್ಜುನಾ. || ೩೫೭ ||

೧೭೭೬

ಜಿಹ್ವೆಯ ಲಂಪಟಕ್ಕಾಗಿ ಅನ್ಯರ ಬೋಧಿಸಲೇಕೆ ?
ಗುಹ್ಯದ ವಿಷಯಕ್ಕಾಗಿ ಮನುಷ್ಯರೊಳು ದೈನ್ಯಬಡಲೇಕೆ ?
ಅಂಗದ ಇಂದ್ರಿಯಕ್ಕಾಗಿ ನಿಜಲಿಂಗವ ಹಿಂಗಲೇಕೆ ?
ಮನುಷ್ಯರ ಹಂಗ ಬಿಟ್ಟು, ನಿಜಾಂಗವಾದ ಮಹಾತ್ಮಂಗೆ ಇದಿರಿಡಲಿಲ್ಲ.
ಇದಿರಿಂಗೆ ತಾನಿಲ್ಲ.
ಉಭಯವಳಿದ ಮತ್ತೆ ಏನೂ ಇಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೩೫೮ ||

೧೭೭೭

ಜೀವವ ಕಡಿದವಂಗಿಲ್ಲದ ಪಾಪ, ಕತ್ತಿಗುಂಟೆ ಎಲೆದೇವಾ ?
ಎಚ್ಚವನಿದ್ದಂತೆ ಅಂಬಿಗೆ ಮುನಿವರೆ ?
ಕೊಲಿಸಿದ ಅರಸಿದ್ದಂತೆ ಬಂಟಂಗೆ ಮುನಿವರೆ ?
ಎಲೆ ದಿವ್ಯಜ್ಞಾನವೆ,
ಎನ್ನೊಡೆಯ ನಿಃಕಳಂಕ ಮಲ್ಲಿಕಾರ್ಜುನನಿದ್ದಂತೆ,
ಎನ್ನನೇಕೆ ಕಾಡಿಹೆ ? || ೩೫೯ ||

೧೭೭೮

ಜ್ಞಾತೃಚಕ್ಷುವಿನಿಂದ ಜಗದ ರೂಪ ಕಾಬಲ್ಲಿ,
ಜ್ಞಾನಚಕ್ಷುವಿನಲ್ಲಿ ಕಾಬ ಸ್ವಪ್ನಂಗಳು,
ಜ್ಞೇಯಚಕ್ಷುವಿನಲ್ಲಿ ಕೂಡಿ ಕಾಬ ಸುಖಂಗಳು.
ಇಂತೀ ತ್ರಿವಿಧ ದೃಷ್ಟಂಗಳ ಕಾಬುದೆಲ್ಲ ಜ್ಞಾತೃವಿನಲ್ಲಿ ಉಪದೃಷ್ಟ,
ಜ್ಞಾನದಲ್ಲಿ ಸ್ವಪ್ನದೃಷ್ಟ, ಜ್ಞೇಯದಲ್ಲಿ ಕೂಟದೃಷ್ಟವಾಗಿ ಕಾಬುದು
ತನುತ್ರಯದ ಭೇದವೋ, ಆತ್ಮತ್ರಯದ ಭೇದವೋ ?
ಆತ್ಮನೊಂದೆಂದಡೆ ಘಟ ಪರಿಕರಂಗಳಾಗಿ ತೋರುತ್ತಿಹವಾಗಿ,
ಆತ್ಮನ ಏಕವೆನಬಾರದು.
ಆತ್ಮನ ಹಲವೆಂದಡೆ, ಮೃದು ಕಠಿನ ಶೀತ ಉಷ್ಣಾದಿಗಳಲ್ಲಿ ಹೆಚ್ಚುಕುಂದಿಲ್ಲದೆ,
ಆತ್ಮಂಗೆ ಒಂದೆ ಭೇದವಾಗಿ ತೋರುತ್ತಿಹವಾಗಿ, ಆತ್ಮನ ಹಲವೆನಬಾರದು.
ಇಂತೀ ಘಟಭೇದವನರಿತು, ಆತ್ಮನ ಸುಖದುಃಖವನರಿತು,
ಭಕ್ತಿಗೆ, ಸತ್ಯ ವಿರಕ್ತಿಗೆ, ಮಲತ್ರಯದೂರ ಸರ್ವಜೀವಕ್ಕೆ
ಹೆಚ್ಚುಕುಂದಿಲ್ಲದೆ ನಿಶ್ಚಯವಾಗಿ ನಿಂದ
ನಿಶ್ಚಿಂತಸಂಗವೆ ಷಟ್ಸ್ಥಲ.
ಬ್ರಹ್ಮವೇ ಸರ್ವಸ್ಥಲಭರಿತ ಸರ್ವಾಂಗಲಿಂಗಿ, ಆತ
ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೆ. ||೩೬೦||

೧೭೭೯

ಜ್ಞಾನಕ್ಕೆ ಲೇಪವಾದವನಿರವು, ತುಪ್ಪವ ನಂಬಿದ ಬತ್ತಿಯಂತೆ,
ಕಾದ ಲೋಹದ ಜಲದಿರವಿನಂತೆ, ನಾದವ ನುಂಗಿದ ಬಯಲಿನಂತೆ,
ಚೋದ್ಯವ ಕಂಡ ಕನಸಿನಂತೆ,
ಇದಾರಿಗೆ ಭೇದಕ ? ಇದ ಶೋಧಿಸಬೇಕು.
ಲಿಂಗವಾದಿಯ ಅಂತುವನರಿದಡೆ, ಗುಣಸಂಗಿಯಲ್ಲದೆ ಯೋಗಿಯಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೩೬೧||

೧೭೮೦

ಜ್ಞಾನವಲ್ಲಿ ಸುಳಿವ ಜಂಗಮಸ್ಥಲದ ಇರವು ಹೇಂಗಿರಬೇಕೆಂದಡೆ:
ಅಂಬುಧಿಯ ಕೂಡಿದ ಸಂ[ಭೇದದ]ತಿರಬೇಕು.
ಮುಖ ಶಿರ ಬೋಳಾದಡೇನೊ.
ಹುಸಿ ಕೊಲೆ ಕಳವು ಪಾರದ್ವಾರ ಅತಿಕಾಂಕ್ಷೆಯ ಬಿಡದನ್ನಕ್ಕರ ?
ಗಡ್ಡ ಜಡೆ ಕಂಥೆ ಲಾಂಛನವ ತೊಟ್ಟಿಹ ಬಹುರೂಪರಂತೆ.

ಜಗದೊಳಗೆ ಸುಳಿವ ಬದ್ಧಕತನದಲ್ಲಿ
ದ್ರವ್ಯಕ್ಕೆ ಗೊಡ್ಡೆ[ಯ]ರ[ನ]ರಿವ ದೊಡ್ಡ ಮುದ್ರೆಯ ಕಳ್ಳರು,
ತುರುಬ ಚಿಮ್ಮುರಿಗಳ ಕಟ್ಟಿ,
ನಿರಿಗುರುಳ ಬಾಲೆಯರ ಮುಂದೆ ತಿರುಗುತಿಪ್ಪ
ಬರಿವಾಯ ಭುಂಜಕರುಗಳು ಅರಿವುಳ್ಳವರೆಂದು ಬೀಗಿ ಬೆರೆವುತಿಪ್ಪರು.
ಅರಿವಿನ ಶುದ್ಧಿಯನರಿದ ಮಹಾತ್ಮಂಗೆ ಹಲುಬಲೇತಕ್ಕಯ್ಯಾ,
ಮೊಲೆಯ ಕಾಣದ ಹಸುಳೆಯಂತೆ ?
ಅರಿವಿನ ಶುದ್ಧಿ ಕರಿಗೊಂಡವಂಗೆ, ನರಗುರಿಗಳ ಭವನವ ಕಾಯಲೇತಕ್ಕೆ ?
ಅರಿವೆ ಅಂಗವಾದ ಲಿಂಗಾಂಗಿಗೆ
ಬರುಬರ ಭ್ರಾಂತರ ನೆರೆ ಸಂಗವೇತಕ್ಕೆ ?
ಇದು ಕಾರಣ, ತುರುಬೆಂಬುದಿಲ್ಲ, ಜಡೆಯೆಂಬುದಿಲ್ಲ, ಬೋಳೆಂಬುದಿಲ್ಲ.
ಅರುಹು ಕುರುಹಿಂಗೆ ಸಿಕ್ಕದು,
ಅರಿದುದು ಕುರುಹಿಂಗೆ ಸಿಕ್ಕದು,
ಅರಿದುದು ಮರೆಯಲಾಗಿ, ಮರೆದುದು ಅರಿದುದಕ್ಕೆ ಕುರುಹಿಲ್ಲವಾಗಿ,
ಇಂತೀ ಸಂಚಿತ ಪ್ರಾರಬ್ಧ ಆಗಾಮಿಗೆ ಹೊರಗಾದುದು, ಜ್ಞಾನ ಜಂಗಮಸ್ಥಲ.
ಹೀಂಗಲ್ಲದೆ ಗೆಲ್ಲ ಸೋಲಕ್ಕೆ ಹೋರಿ ಬಲ್ಲವರಾದೆವೆಂಬವರ
ವಲ್ಲಭ ನಿಃಕಳಂಕ ಮಲ್ಲಿಕಾರ್ಜುನಲಿಂಗನವರನೊಲ್ಲನಾಗಿ. || ೩೬೨ ||

೧೭೮೧

ಜ್ಞಾನಲಿಂಗದ ಆದಿ ಅಂತ್ಯವನರಿವಡೆ,
ಈ ಗುಣ ಸಾ[ಧಿ]ಸಿಯಲ್ಲದೆ ಯೋಗಿಯಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೩೬೩ ||

೧೭೮೨

ಜ್ಞಾನವನರಿದೆನೆಂದು ಕಾಯವ ದಂಡಿಸಲೇಕೆ ?
ನಾನೆಲ್ಲವನರಿದೆನೆಂದು ಸೊಲ್ಲು ಸೊಲ್ಲಿಗೆ ಹೋರಲೇಕೆ ?
ನಾನೆಲ್ಲವ ಕಳೆದುಳಿದೆನೆಂದು ಅಲ್ಲಲ್ಲಿಗೆ ಹೊಕ್ಕು,
ಬಲ್ಲೆನೆಂದು ಕಲ್ಲಿಗೆ ಸನ್ನೆಯ ಕೊಡುವನಲ್ಲಿರುವನಂತೆ,
ಇಂತಿವರ ಬಲ್ಲತನ ಬರುಸೂರೆಹೋಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. || ೩೬೪ ||

೧೭೮೩

ಜ್ಞಾನಾರೂಢನಾದಲ್ಲಿ ಮಾನವರಲ್ಲಿ ಅಶ್ರಯಿಸಲಾಗದು.
ಮಾನವರಿಚ್ಛೆಯ ನುಡಿಯಲಾಗದು.

ಪೂಜೆಗೆ ಸಿಲ್ಕಿ ಬಾಧಿಸಿಕೊಳಲಾಗದು.
ಸಾಧನೆಯ ಹೇಳಿ ಸಾವಂತೆ ಮಾಡಲಾಗದು.
ಸಾವಧಾನದಿಂದ ಸೋಹೆಯ ತಿಳಿದು,
ಏನೂ ಎನ್ನದಿಪ್ಪುದೆ ಲಿಂಗೈಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. ||೩೬೫||

೧೭೮೪

ಜ್ಞಾನಿ ತಾನಾದಡೆ ಮಾನವರ ಗುಣವೇನಾದಡೂ ಆಗಲಿ.
ಭಾನುತೇಜಕ್ಕೆ ನಾನಾಗುಣವೆಲ್ಲವೂ ಸರಿ.
ಬೀಸುವ ವಾಯುವಿಂಗೆ ಸುಗುಣ ದುರ್ಗುಣವಿಲ್ಲ.
ಇದು ಅಜಾತನ ಒಲುಮೆ.
ಮಿಕ್ಕಿನ ಮಾತಿನ ಮಕ್ಕಳಿಗಿಲ್ಲಯೆಂದೆ, ಜಗದೀಶನ ಒಲುಮೆ,
ನಿಃಕಳಂಕ ಮಲ್ಲಿಕಾರ್ಜುನಾ. ||೩೬೬||

೧೭೮೫

ಜ್ಞಾನಿಯ ಸಂಗ ನೇಕೆಯ ಶಿಶುವಿನಂತಿರಬೇಕು.
ಜ್ಞಾನಿಯ ಸಂಗ ಭಾನುವಿನ ಉದಯದಂತಿರಬೇಕು.
ಜ್ಞಾನಿಯ ಸಂಗ ಸೌಖ್ಯದ ಆಲಯದ ಠಾವಿನಂತಿರಬೇಕು.
ಹೀಂಗಲ್ಲದೆ ಮಾತಿಂಗೆ ಮಾತ ಕಾಳ್ಗೆಡವವರನೇನೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ ? ||೩೬೭||

೧೭೮೬

ಜ್ಯೋತಿಯ ಬೆಳಗಿನಲ್ಲಿ [ನೋಡಿ] ಜ್ಯೋತಿಯ ಪಟವ ಕಾಬಂತೆ,
ಕಣ್ಣಿನಿಂದ ಕನ್ನಡಿಯ ನೋಡಿ ಕಣ್ಣ ಕಲೆಯ ಕಾಬಂತೆ,
ತನ್ನಿಂದ ತಾ ನೋಡಿ ತನ್ನನರಿಯಬೇಕು.
ತನ್ನನರಿಯದವ ನಿಮ್ಮನೆತ್ತಬಲ್ಲನೋ ?
ತನ್ನನರಿವುದಕ್ಕೆ ದೃಷ್ಟವ ಕೈಯಲ್ಲಿ ಕೊಟ್ಟು
ಕಾಣದುದಕ್ಕೆ ಚಿತ್ತವ ನೆನಹಿಂಗಿತ್ತ.
ಚಿತ್ತ ಇಷ್ಟದಲ್ಲಿ ಅಚ್ಚೊತ್ತಿದ ಮತ್ತೆ ದೃಷ್ಟವ ಕಾಬುದಿನ್ನೇನೋ ?
ಉರಿಯೊಳಗಣ ಕರ್ಪುರ, ಅನಿಲನೊಳಗಣ ಪಾವಕ,
ಶಿಲೆಯುಂಡ ಎಣ್ಣೆ ಅಳತೆ[ಗೆ ಉ]ಂಟೇ ಅಯ್ಯಾ.
ಲಿಂಗವ ಮೆಚ್ಚಿದ ಅಂಗಕ್ಕೆ ಜಗದ ಹಂಗಿಲ್ಲ.
ಅನಂಗ, ಅತೀತ ನಿಃಕಳಂಕ ಮಲ್ಲಿಕಾರ್ಜುನಲಿಂಗವೇ
ತಾನಾದ ಶರಣಂಗೆ. ||೩೬೮||

### ೧೭೮೭

ಡೊಂಬರ ಡೊಳ್ಳುಧ್ವನಿ ಕೇಳಬಂದಿತ್ತು.
ಪೌಜೆಂದು ಮುಂದೆ ಹರಿವನಂತೆ,
ಅದರಂದವ ಕೇಳದೆ, ಹಿಂದು ಮುಂದ ತಿಳಿಯದೆ,
ಕಂಡಕಂಡವರೊಳಗೆ ಬಂಧಕ್ಕೆ ಹೋರಿಯಾಡುವ ಬಂಧನಿಗೇಕೆ ಜ್ಞಾನ,
ನಿಃಕಳಂಕ ಮಲ್ಲಿಕಾರ್ಜುನಾ. ||೩೬೯||

### ೧೭೮೮

ತತ್ವಬ್ರಹ್ಮವನರಿವ ಹಿರಿಯರೆಲ್ಲರೂ
ಕ್ಷುತ್ತಿನ ಸುಖವ ಮೆಚ್ಚಿ, ಇಚ್ಛೆಯ ನುಡಿವುತ್ತಿಪ್ಪರು ನೋಡಾ.
ಚಿತ್ತವನರಿದಲ್ಲಿ ಕುಚಿತ್ತ ಬೋಧೆಯ ಹೇಳಲಾಗದು.
ಆಳಾಗಿರ್ದು ಅರಸಾಗಬಹುದಲ್ಲದೆ, ಅರಸಾಗಿರ್ದು ಆಳಾಗಬಾರದು.
ರೂಪಾಗಿರ್ದು ನಿರೂಪಾಗಬಹುದಲ್ಲದೆ, ನಿರೂಪಾಗಿರ್ದು ರೂಪಾಗಬಾರದು.
ಇದು ಕಾರಣ, ನಾ ಸತ್ತೆನೆಂಬ ಹೆಣವಿಲ್ಲವಾಗಿ,
ನಾ, ನೀನೆಂಬ ಉಭಯವ ಹಿಂಗಿಯಲ್ಲದೆ, ಪರಿಪೂರ್ಣವಾಗಬಾರದು,
ನಿಃಕಳಂಕ ಮಲ್ಲಿಕಾರ್ಜುನಾ. ||೩೭೦||

### ೧೭೮೯

ತತ್ವಬ್ರಹ್ಮವ ನುಡಿವ ಹಿರಿಯರೆಲ್ಲರೂ ಮೃತ್ಯುವಿನ ಬಾಯ ತುತ್ತಾದರು.
ಇಹ ಪರ ಶುದ್ಧಿಯ ಹೇಳುವ ಹಿರಿಯರೆಲ್ಲರೂ
ಅನ್ನವನಿಕ್ಕಿ ಹೊನ್ನ ಕೊಡುವ ಅಣ್ಣಗಳ ಮನೆಯ ಎತ್ತುವ ಕೂಸಾದರು.
ಇನ್ನಾರಿಗೆ ಹೇಳುವೆ, ಆರೂಢ ಶುದ್ಧಿಯ, ನಿಃಕಳಂಕ ಮಲ್ಲಿಕಾರ್ಜುನಾ. ||೩೭೧||

### ೧೭೯೦

ತಥ್ಯವುಳ್ಳವಂಗೆ ತತ್ವದ ಮಾತು ನುಡಿದು, ಹೊತ್ತು ಹೋರಲೇಕೆ ?
ಭಕ್ತಿಯುಳ್ಳವಂಗೆ ಕೃತ್ಯಕ್ಕೆ ಸಿಕ್ಕಿ ಸುಚಿತ್ತವನರಸಲೇಕೆ ?
ಚಿತ್ತದ ಕಲೆಯ ಬಲ್ಲ ವಿರಕ್ತನೆನಿಸಿಕೊಂಬವಂಗೆ,
ತ್ರಿವಿಧಕ್ಕೆ ಹೊತ್ತು ನಿತ್ತರಿಸಲೇಕೆ ?
ಇವರೆಲ್ಲರ ಗುಣ, ಕತ್ತೆ ಹೊರೆಯ ಹೊತ್ತಿರ್ಪುದನರಿಯದೆ,
ವಿಷಯಕ್ಕೆ ಹರಿವ ಅದರಚ್ಚಿಗದಂತಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೩೭೨||

೧೭೯೧

ತನ್ನಂಗವ ತಾ ಬಡಿದು, ಇದಿರಿನಲ್ಲಿ ನೋವ ಕೇಳುವನಂತೆ,
ತನ್ನ ದ್ರವ್ಯ ತಾನಿಕ್ಕಿ, ಪರರುವ ಕೈಯಲ್ಲಿ ಜರೆಯಿಸಿಕೊಂಬವನಂತೆ.
ವರ್ಮವನರಿಯದವನ ಸುಮ್ಮಾನ, ಹೆಮ್ಮೆಗೆ ಹುಯ್ಯಲಿನಲ್ಲಿ ಸಿಕ್ಕಿ,
ತನ್ನ ತಾನರಿಸಿಕೊಂಡಂತಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ||೩೭೩||

೧೭೯೨

ತನ್ನ ತಾನರಿದು ಕಂಡೆಹೆನೆಂದಡೆ, ಆ ಚಿತ್ತ ಬಣ್ಣದ ಬಯಲು.
ಇದಿರುವ ಕುಳಿತು ಕೇಳಿ ಕಂಡೆಹೆನೆಂದಡೆ, ಆ ಭಾವ ಭ್ರಮೆಗೊಳಗು.
ಭಕ್ತಿಯಲ್ಲಿ ನಡೆವ ಭಕ್ತರಿಗಿನ್ನೆತ್ತಣ ಮುಕ್ತಿಯೊ,
ನಿಃಕಳಂಕ ಮಲ್ಲಿಕಾರ್ಜುನಾ ? ||೩೭೪||

೧೭೯೩

ತನು ನಿರ್ವಾಣವೊ, ಮನ ನಿರ್ವಾಣವೊ, ಭಾವ ನಿರ್ವಾಣವೊ ?
ತ್ರಿವಿಧ ತನಗಿಲ್ಲದ ನಿರ್ವಾಣವೊ ? ಇದ ನಾ ನುಡಿಯಲಂಜುವೆ.
ತೊಟ್ಟು ಘಟಧರ್ಮಕ್ಕೆ ಬೇಡೂದೆ,
ಲೆಕ್ಕವಿಲ್ಲದೆ ಆಸೆ ಮನದೊಳಗೆ ಹೊಕ್ಕು ತಿರುಗಾಡುತ್ತ ?
ಇಂತೀ ಚಿಕ್ಕಮಕ್ಕಳಿಗೆಲ್ಲಿಯದೊ ನಿರ್ವಾಣ, ಘಟ್ಟಿವಾಳಂಗಲ್ಲದೆ
ನಿಃಕಳಂಕ ಮಲ್ಲಿಕಾರ್ಜುನಾ ? ||೩೭೫||

೧೭೯೪

ತನುವ ನೆಮ್ಮಿ ಕಾಬ ಮನವಿಲ್ಲ.
ಮನವ ನೆಮ್ಮಿ ಕಾಬ ಅರಿವಿಲ್ಲ.
ಅರಿವ ನೆಮ್ಮಿ ಕಾಬ ಕುರುಹಿಲ್ಲ.
ಬರುದೊರೆ ಹೋಯಿತ್ತಲ್ಲ ಎನ್ನ ಬಾಲಲೀಲೆ.
ಅಗಣಿತ ಅಗೋಚರವ ನೆರೆಯರಿವುದಕ್ಕೆ
ಕುರುಹ ತೋರುವರ [ನಾ] ಕಾಣೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೭೬||

೧೭೯೫

ತನುವಿಗೆ ಕುರುಹು ಕೊಟ್ಟು, ಮನಕ್ಕೆ ಅರಿವ ಕೊಟ್ಟು,
ಘನಕ್ಕೆ ವಿಶ್ರಾಂತಿಯ ಕೊಟ್ಟು, ಚರಿಸಾಡುವ ಪರಿಪೂರ್ಣಂಗೆ
ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ. ||೩೭೭||

೧೭೯೬

ತನುವಿಂಗೆ ಲಿಂಗ ಬಾಹಾಗ ಕಂಕುಳ ಕೂಸೆ ?
ಮನಕ್ಕೆ ಲಿಂಗ ಬಾಹಾಗ ತೊಂಡಿನ ದನವೆ ?
ಕಂಡಕಂಡವರಂಗದಲ್ಲಿ ಹಿಂಗಿಹನೆಂದಡೆ, ಬಂಧುಗಳ ಮನೆಯ ಲಂದಣಗಾರನೆ ?
ಇವರಂದದ ಮಾತು ಸಾಕು.
ಲಿಂಗವಿಪ್ಪೆಡೆಯ ಹೇಳಿಹೆ ಕೇಳಿರಣ್ಣಾ.
ಸುಖಿಯಲ್ಲದೆ ದುಃಖಿಯಲ್ಲದೆ, ಅ ಗಿಗೆ ಮನಗುಡದೆ, ಚೇಗೆಗೆ ದುಃಖಿತನಾಗದೆ,
ಕಂಡಕಂಡವರಲ್ಲಿ ಭಂಡ ಗೆಲಿಯದೆ,
ತೊಂಡಿನ ಜೀವದನದಂತೆ, ಬಂದು ಹೊಯ್ವವರನರಿಯದೆ,
ಇವರಂದವನರಿಯ ಮತ್ತೆ ಉಭಯದ ಸಂದಳಿದು,
ಒಂದೂ ಎನ್ನದಿಪ್ಪುದೆ ಲಿಂಗೈಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. || ೩೭೮ ||

೧೭೯೭

ತನುವಿನ ಮೇಲಿಪ್ಪ ಲಿಂಗಕ್ಕೆ, ಅನವರತ ಬಿಡದೆ ನೆನಹಿರಬೇಕೆಂಬರು.
ಅಂಗದ ಮೇಲಣ ಲಿಂಗವ, ಪ್ರಾಣಸಂಬಂಧವ ಮಾಡುವ ಪರಿ ಇನ್ನೆಂತೊ ?
ಇದರಂದವನರಿಯದೆ ತ್ರಿಭಂಗಿಯಲ್ಲಿ ಸಿಕ್ಕಿ,
ಬೆಂದವರಿಗೇಕೆ ಲಿಂಗದ ಸುದ್ದಿ, ನಿಃಕಳಂಕ ಮಲ್ಲಿಕಾರ್ಜುನಾ. || ೩೭೯ ||

೧೭೯೮

ತನುವಿನಾಶೆಯ ಬಿಟ್ಟು ಕಂಡೆಹೆನೆಂದಡೆ, ಗುರುವಿನ ಹಂಗು ಬಿಡಬೇಕು.
ಮನಾದಾಶೆಯ ಬಿಟ್ಟು ಕಂಡೆಹೆನೆಂದಡೆ, ಲಿಂಗದ ಹಂಗು ಬಿಡಬೇಕು.
ಸರ್ವವ್ಯಾಪಾರದ ಹಿಂಗಿ ಕಂಡೆಹೆನೆಂದಡೆ, ಜಂಗಮದ ಹಂಗು ಬಿಡಬೇಕು.
ಒಂದ ಬಿಟ್ಟು, ಒಂದ ಕಂಡೆಹೆನೆಂದಡೆ, ಒಂದಕ್ಕೂ ನೆಲೆಯಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೩೮೦ ||

೧೭೯೯

ತನುವಿನಿಂದ ಕಂಡೆಹೆನೆಂದಡೆ ರೂಪಿನ ಜಡ.
ಮನದಿಂದ ಕಂಡೆಹೆನೆಂದಡೆ ಕರಣಂಗಳ ಹೊಲ.
ಘನದಿಂದ ಕಂಡೆಹೆನೆಂದಡೆ ನಿರಾಳದ ಬಯಲು.
ಇನ್ನೇತರಿಂದ ಅರಿವಿನ ಈಡು ಎನಗೆ.
ಅನಾಥರ ನಾಥಾ, ಕರುಣಿಸು, ನಿಃಕಳಂಕ ಮಲ್ಲಿಕಾರ್ಜುನಾ. || ೩೮೧ ||

೧೮೦೦

ತಮದಲ್ಲಿ ಸ್ಥಾಣುವ ನಟಿಸಿದ ವ್ಯಾಧನಂತೆ ಅಂಜಲೇಕೋ ?
ಅರಿದ ಮತ್ತೆ ಹೆದರಲೇಕೋ ?
ಇದಿರಿಂಗರಿವ ಹೇಳುವ, ಮರೆದೊರಗುವನ ಕಂಡು
ಒಡಗೊಡಲಂಜಿದೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೮೨||

೧೮೦೧

ತಮಂಧವೆಂಬ ಕೊಪ್ಪರಿಗೆಯಲ್ಲಿ, ತಾರಾಮಂಡಲದ ಉದಕವ ತುಂಬಿ,
ಮಹಾಂಧಕಾರದಿಂದುರುಹಲಾಗಿ ದಾವಾನಳವೆದ್ದಿತ್ತು.
ವಿಶ್ವಾಸಭಕ್ತಿಯೆಂಬ ಅಟ್ಟಕಳಿಯನಿಕ್ಕಿ, ಚಿತ್ತಶುದ್ಧದ ಕೈಯಲ್ಲಿ ಒರಸಲಾಗಿ,
ರುದ್ರನ ಜಡೆಮಣ್ಣು ಬಿಟ್ಟಿತ್ತು, ಮಂದಿರಕ್ಕೊಳಗಾಯಿತ್ತು.
ಮಣ್ಣು ಬಿಟ್ಟು ಮಂಡೆ ಚೆನ್ನಾಯಿತ್ತು.
ಮಂಡೆಯ ಹತ್ತಿ ನೋಡಲಾಗಿ, ಮೂರು ಮಂಡಲ ಕಾಣಲಾಯಿತ್ತು.
ಒಂದು ಮಂಡಲ, ಉಪದೇಶವ ಹೇಳುವ ಗುರುವಿನ ಬಾಯ ನುಂಗಿತ್ತು.
ಮಧ್ಯಮಂಡಲ ಶುದ್ಧವೆಂದು ಕೊಟ್ಟ ಲಿಂಗವ ಗರ್ಭೀಕರಿಸಿತ್ತು.
ಬಟ್ಟಬಯಲ ಕಟ್ಟಕಡೆಯ ಮಂಡಲ ಸುತ್ತಿತ್ತು.
ಜಂಗಮವ ನಿಷ್ಠೆಯಿಂದ ಪೂಜಿಸುವ, ಭಕ್ತರ ಬಟ್ಟೆ ಹುಳು ಹತ್ತಿತ್ತು.
ಆ ಬಟ್ಟೆಯ ಹೊಲಬುತಪ್ಪಿ ಸುತ್ತಿಯಾಡುತ್ತಿಹ
ಸದ್ಭಕ್ತರಿಗಿನ್ನೆತ್ತಣ ಮುಕ್ತಿಯೊ, ನಿಃಕಳಂಕ ಮಲ್ಲಿಕಾರ್ಜುನಾ ? ||೩೮೩||

೧೮೦೨

ತರಬಾರದ ಠಾವಿನಲ್ಲಿ ಪರುಷರಸವಿದ್ದರೇನೋ ?
ಹತ್ತಬಾರದ ಠಾವಿನಲ್ಲಿ ಸಂಜೀವನಫಳವಿದ್ದರೇನೋ ?
ಲಿಂಗವನರಿಯದ ಠಾವಿನಲ್ಲಿ ವೇಷಯುಕ್ತರಿದ್ದರೇನೋ ?
ಜಂಗಮವನರಿಯದ ಠಾವಿನಲ್ಲಿ
ತ್ರಿವಿಧವಿಧ ಸಮೃದ್ಧಿಯಾಗಿದ್ದರೇನೋ ?
ಅಪ್ಯಾಯನವಡಿಸಿದಲ್ಲಿ ಅಪ್ಯಾಯನ ಭೇದಿಸಿದಲ್ಲಿಯೆ
ಸಂಜೀವನವೊಳಗಾಯಿತ್ತು.
ಸಂಗದ ಭೇದದಿಂದ ಮಂಗಳದ ಬೆಳಗು.
ನಿಜ ನೆಲೆಗೊಳಲಿಕೆ ಲಿಂಗವಾಯಿತ್ತು.
ಅದು ಕಾರಣ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಆ ಶರಣ ಉರಿವುಂಡ ಕರ್ಪೂರದಂತೆ. ||೩೮೪||

೧೮೦೩

ತಲೆಯನಿತ್ತವಂಗೆ ನಯನದ ಹಂಗೇಕೆ ?
ಮನವನಿತ್ತವಂಗೆ ತನುವಿನ ಹಂಗೇಕೆ ?
ಮೋಹವನಿತ್ತವಂಗೆ ಅಪಮಾನದ ಹಂಗೇಕೆ ?
ಇಂತೀ ಭೇದವನರಿದು ಕಳೆದುಳಿದವಂಗೆ, ಮಾತಿನ ನೀತಿ ಯಾಕೆ,
ನಿಃಕಳಂಕ ಮಲ್ಲಿಕಾರ್ಜುನಾ ? ||೩೮೫||

೧೮೦೪

ತಲೆಯ ಹಿಡಿಯಲರಿಯದೆ ನಡುವ ಹಿಡಿದ ಮತ್ತೆ,
ಕಚ್ಚದೆ ಸರ್ಪನೇನ ಮಾಡುವುದು ?
ಹಗೆಯ ಕೊಲಹೋಗಿ, ಅವನ ಕಡುಗಲಿತನಕ್ಕಂಜಿ ಅಡಿಗೆರಗಿದಡೆ,
ಅವ ಒಡಗೂಡಿ ಇರಿಯದೆ ಮಾಣ್ಬನೆ ?
ಮೃಡನಡಿಯನರಿಯದೆ ನರಕದಲ್ಲಿ ಬೀಳುವ ಕುರಿಗಳಿಗೇಕೆ, ನೆರೆ ಅರಿವು ?
ಕರಿಗೊಂಡವಂಗಲ್ಲದೆ ಬರಿಮಾತಿಂಗುಂಟೆ, ನಿಃಕಳಂಕ ಮಲ್ಲಿಕಾರ್ಜುನಾ ? ||೩೮೬||

೧೮೦೫

ತಲೆಯಿಲ್ಲದೆ, ಹಾವು ಕಚ್ಚಿ, ವಿಷ ಹತ್ತುವುದಕ್ಕೆ ಮೊದಲೆ ಜೀವ ಸತ್ತಿತ್ತು.
ಜೀವ ಬಿದ್ದು, ಘಟದ ಬಂಧುಗಳೆಲ್ಲರೂ ಕೂಡಿ ಶೋಕವ ಮಾಡುತ್ತಿದ್ದಹರು.
ಅವರೊಳಗೊಬ್ಬ ನಗುತ್ತಿದ್ದಹನು.
ನಗುವನ ಕಂಡು ಒಬ್ಬ ಹೆಣನ ಬಾಯ ಹೊಯ್ದು,
ಐವರ ಮೂಗ ಕೊಯ್ದು, ಐವತ್ತಿಬ್ಬರ ನಾಲಗೆಯ ಕೀಳುವುದ ಕಂಡಂಜಿ,
ಹದಿನಾರುಮಂದಿ ಹಳುಹಾದರು, ಎಂಟು ಬಂಟರು ಕಂಟಕನಾಶವಾದರು.
ಇಪ್ಪತ್ತೈದುಮಂದಿ ಸೊಪ್ಪಡಗಿದರು.
ಇವರೆಲ್ಲರ ಕಳೆವನ್ನಕ್ಕರ ಕತ್ತಲೆ ಹರಿದು ಬೆಳಗಾಯಿತ್ತು,
ಅಂಗೈಯೊಳಡಗಿದ ಬರಿಯ ಕಂಗಳಿಗೆ ತಂದೆ.
ಕಂಗಳು ಸುಂಗಿ ಹಿಂಗದಿರ್ದೆ, ನೀ ಸತ್ತೆ, ನಾ ಸಾಯೆ.
ಸಾವವರ ಕಂಡು ಸಾವಧಾನಿಯಾಗಿರ್ದೆನಯ್ಯಾ.
ಆದ ಮತ್ತೆ ಆದೆಹೆ ಆಗೆನೆಂಬುದಿಲ್ಲ,
ನಿಃಕಳಂಕ ಮಲ್ಲಿಕಾರ್ಜುನನ ಏನೆಂದು ಎನಲಿಲ್ಲವಾಗಿ. ||೩೮೭||

೧೮೦೬

ತಲೆಯಿಲ್ಲದೆ ಕಾಲು ನಡೆಯಬಲ್ಲುದೆ ?
ಕುಕ್ಷಿಯಿಲ್ಲದಿರೆ ಬಾಯಿ ಉಣ್ಣಬಲ್ಲುದೆ ?

ಆತ್ಮನಿಲ್ಲದಿರೆ ಕರಚರಣಾದಿಗಳಿಗೆ ಏತರ ಹೊಲಬು ?
ನಿನ್ನ ಭಕ್ತಿಯ ಬೆಳೆ ಎನಗೆ ಸತ್ಯದ ಹಾದಿ.
ಇದು ನಿಶ್ಚಯ, ನಿಃಕಳಂಕ ಮಲ್ಲಿಕಾರ್ಜುನಾ. || ೩೮೮ ||

೧೮೦೭

ತಾಗಿದ ಮತ್ತೆ ಬಾಗುವರೆಂಬುದನೆಲ್ಲರೂ ಬಲ್ಲರು.
ಸೋಂಕಿದ ಮತ್ತೆ ಅರ್ಪಿತವೆಂಬುದನೆಲ್ಲರೂ ಬಲ್ಲರು.
ಅರ್ಪಿತ ಅನರ್ಪಿತವೆಂಬುದನು ಮುಂದಕ್ಕೆ ಮುನ್ನವರಿದು,
ಭೇದಿಸುವ ಅರ್ಪಿತ ಅವಧಾನಿಗೆ ಬಿಡುಮುಡಿ ಇಲ್ಲವೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೮೯ ||

೧೮೦೮

ತಾ ನಡೆಯಲರಿದೆ, ಪೊನೆಯ ಮೆಟ್ಟಿ ಬಯ್ವವನಂತೆ,
ತನ್ನ ಇಷ್ಟವ ತಾನರಿಯದೆ, ಕೊಟ್ಟವನ ಕಷ್ಟವ ಮಾಡುವನಂತೆ,
ಈ ದೃಷ್ಟವನರಿಯದೆ, ಮೆಟ್ಟಿದ ಹೆಜ್ಜೆಯ ಮೆಟ್ಟುವ ಗಾಣದ ಎತ್ತಿನ ತೆರದಂತೆ,
ಇವರಿಗೆ ಇಷ್ಟದ ಶುದ್ಧಿ ಯಾಕೋ, ನಿಃಕಳಂಕ ಮಲ್ಲಿಕಾರ್ಜುನಾ ? || ೩೯೦ ||

೧೮೦೯

ತಾನರಿಯದಿರ್ದಡೆ, ಅರಿವ ಮುಖ ಬೇಕು, ದೃಷ್ಟಿಗೆ ಪ್ರತಿಬಿಂಬದಂತೆ.
ಮರೆದಡೆ, ಅರಿಯೆಂದು ಹೇಳಿದಡೆ, ಇದು ಕೊರತೆಯೇ ?
ನೆರೆ ಬಲ್ಲವರಿಗೆ ಅದು ತೆರಪಿನ ಹೃದಯ, ಅರಿವಿನಾಗರ.
ಮಿಥ್ಯವನಳಿದು ತಥ್ಯ ಕರಿಗೊಂಡಡೆ, ಲಿಂಗದಲ್ಲಿ ಅಚ್ಯೊತ್ತಿದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೩೯೧ ||

೧೮೧೦

ತಾನಳಿದ ಮತ್ತೆ ತಾನಾದುದ ಕಂಡೆ,
ತಾನಾಗಿ ಮತ್ತೆ ಅಳಿದುದ ಕಂಡೆ,
ಏನೂ ಇಲ್ಲದೆ ನೀನಾಗಿ ಮತ್ತೆ ನಾನಾದುದ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗ ನಿಶ್ಚಿಂತನಾಗಿ. || ೩೯೨ ||

೧೮೧೧

ತಾನು ಹೊಳೆಯಲ್ಲಿ ಮುಳುಗಿ ಹೋಗುತ್ತ, ಈಸಬಲ್ಲವರ ಕಂಡೆನೆಂಬಂತೆ.
ತಾ ಪಾತಕನಾಗಿ, ಇದಿರಿನಲ್ಲಿ ನಿರಾಶೆಯನರಸುವನಂತೆ.
ತಾನಿದ್ದು ತನ್ನ ಕಾಣದೆ, ಕೆಟ್ಟುಹೋದೆನೆಂದು ಅರಸುವನಂತೆ.

ಇಂತೀ ಗುಣವುಳ್ಳನ್ನಕ್ಕ ಗುರುವಲ್ಲ.
ಆ ಗುರುವಿನ ಬೆಂಬಳಿಯಿಂದಾದುದು ಲಿಂಗವಲ್ಲ.
ಇದಕ್ಕೆ ಮುಂಡಿಗೆಯ ಹಾಕಿದೆ, ಎತ್ತುವ ಧೀರರನಾರುವ ಕಾಣೆ.
ಸತ್ತ ಹೆಣನನೆತ್ತಿ ಅರ್ತಿಮಾಡುವನಂತೆ,
ಸಚ್ಚಿದಾನಂದ, ನಿಃಕಳಂಕ ಮಲ್ಲಿಕಾರ್ಜುನವರುವ ಬಲ್ಲನಾಗಿ ಒಲ್ಲನು. ||೩೯೩||

೧೮೧೨

ತಾನೇನೊಂದ ನೆನೆದು ಮಾಡಿ ಆಯಿತ್ತೆಂದಡೆ ತಾನೇನು ಬ್ರಹ್ಮನೆ ?
ತಾನೊಬ್ಬರಿಗೆ ಕೊಟ್ಟು ಸುಖವಾಯಿತ್ತೆಂದಡೆ ತಾನೇನು ವಿಷ್ಣುವೆ ?
ತಾನೊಬ್ಬರ ಕೊಂದು ಸತ್ತರೆಂದಡೆ ತಾನೇನು ರುದ್ರನೆ ?
ಇಂತಿವನೇನೂ ಅರಿಯದೆ, ಅಹಂ ಬ್ರಹ್ಮವೆಂಬ ಭಾವಭ್ರಮಿತರಿಗೇಕೆ ಜ್ಞಾನ,
ನಿಃಕಳಂಕ ಮಲ್ಲಿಕಾರ್ಜುನಾ. ||೩೯೪||

೧೮೧೩

ತಾನೇ ಬಲ್ಲವನೆಂದು ಇಲ್ಲದ ಹುಸಿಯ ಹುಸಿವ,
ಗೆಲ್ಲ:ಗೂಳಿತನಕ್ಕೆ ವಲ್ಲಭನೆಂದು, ಇವರೆಲ್ಲರೂ ಅರಿಯರೆಂದು
ಬಲ್ಲಹ ನಾನೆಂದು ನಿಲ್ಲದೆ ಹೋರುವ ಖುಲ್ಲರ ನೋಡಾ.
ಕಳ್ಳರ ಹಾದಿಯೊಳಗಿಪ್ಪ ಅನುವಿನ ನೆರೆಮೊಂಡನಂತೆ,
ಕೊಳ್ಳದ ಬೆಲೆಯ ಬೇಡಿ ಕಾಡುವ ಖುಲ್ಲನ ಬಲ್ಲತನದಂತೆ,
ಇವರೆಲ್ಲರ ಹಿರಿಯರೆಂದಡೆ, ಕಲ್ಲಿಯೊಳಗಾದ ಮೃಗದಂತೆ,
ಇವರೆಲ್ಲಕ್ಕೂ ಬಲ್ಲತನವೇಕೆ, ನಿಃಕಳಂಕ ಮಲ್ಲಿಕಾರ್ಜುನಾ. ||೩೯೫||

೧೮೧೪

ತಾ ಮಾಡಿದೆನೆಂದಡೆ ತನ್ನ ಕೆಳಗಣದೆ,
ಆಣವ ಮಾಯಿಕ ಕಾರ್ಮಿಕ ಕೊಡೆನೆಂದು ಮನಕ್ಕೆ ತೋರಿದಡೆ,
ತನ್ನ ಕೆಳಗಣ ಬೇಡುಗವೆ, ಈ ಮೂರು.
ಉಭಯಕ್ಕೆ ಒಡಲಿಲ್ಲ, ತನಗೆ ತೆರಹಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೩೯೬||

೧೮೧೫

ತಾವು ಬಲ್ಲವರಾದೆವೆಂದು ಗೆಲ್ಲಸೋಲಕ್ಕೆ ಹೋರುತಿಪ್ಪರು.
ಇದೆಲ್ಲವನತಿಗಳೆದ ಮತ್ತೆ ಗೆಲ್ಲಸೋಲಕ್ಕೆ ಹೋರಲೇಕೋ ?
ಗೆಲ್ಲುವಂಗೆ ಸೋಲುವದೆ ಧರ್ಮ, ಸೋತ ಮತ್ತೆ ಒಲವರವಿಲ್ಲವಾಗಿ.

ಜಲನದಿಯಲ್ಲಿ ಹೋಹ ಬಲುಮರನಂತೆ,
ಇವರ ನೆಲೆ ಇಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೩೯೭ ॥

೧೮೧೭

ತಾವು ಸತ್ಯರೆಂದು ನುಡಿಯದಿಪ್ಪುದೆ ಶೀಲ.
ತಾವು ವ್ರತಿಗಳೆಂದು ಇದಿರಿಂಗೆ ಹೇಳದಿಹುದೆ ವ್ರತ.
ಗುರುಲಿಂಗಜಂಗಮವ ದೂಷಿಸದಿಹುದೆ ವ್ರತ.
ಸಹಪಂಙ್ತಿಯಲ್ಲಿ ವಿಶೇಷವ ಕೊಳದಿಪ್ಪುದೆ ವ್ರತ.
ಇಂತಪ್ಪ ವ್ರತಕ್ಕೆ ನಮೋ ನಮೋ ಎಂಬೆ.
ಇಂತಲ್ಲದೆ ಜಗವ ಸಿಕ್ಕಿಸುವ ಬಹುಮುಖಿಗಳಿಗೆಲ್ಲಿಯದೊ ಮುಕ್ತಿ ?
ಮಾತಿನಲ್ಲಿ ಭಕ್ತಿ, ಮನದಲ್ಲಿ ಕತ್ತರಿ,
ಭಕ್ತಿಯಲ್ಲಿ ಬಲೆ, ಚಿತ್ತದಲ್ಲಿ ಕತ್ತಲೆಯಿಪ್ಪವರಿಗೆಲ್ಲಿಯದೊ ಭಕ್ತಿಶೀಲ ?
ಇಂತಿವ ಬಲ್ಲೆನಾಗಿ ಭಕ್ತಿ ನನಗಿಲ್ಲ.
ಇನ್ನೆತ್ತಣ ಮುಕ್ತಿಯೋ, ನಿಃಕಳಂಕ ಮಲ್ಲಿಕಾರ್ಜುನಾ. ॥ ೩೯೮ ॥

೧೮೧೮

ತಿಲದ ಮರೆಯ ತೈಲವ ಅರೆದು ಕಾಬ ತೆರದಂತೆ,
ಫಲದ ಮೆರಯ ರಸವ ಹಿಳಿದು ಕಾಬ ಸವಿವ ರುಚಿಯಂತೆ,
ತೆರೆಯ ಮರೆಯ ರೂಪ ತೆಗೆದು ಕಾಬ ಸುಖದಂತೆ,
ಇಷ್ಟದ ಮರೆಯಲ್ಲಿದ್ದ ದೃಷ್ಟವ, ಉಭಯವ ನಿಶ್ಚಿಯಿಸಿದಲ್ಲಿ
ಅದು ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. ॥ ೩೯೯ ॥

೧೮೧೮

ತೃಣ ತ್ರಿಣಯನ ಹೆಡಗೈಯ ಕಟ್ಟಿತ್ತು.
ಭಾವ ಕಾಲನ ಸಂಕಲೆಯನಿಕ್ಕಿತ್ತು.
ಕುರುಹು ಅರಿವವರ ಕೈಯಲ್ಲಿ,
ನೆರೆನಂಬಿ ಎಂದು ತೆರಪ ಹೇಳುತ್ತ, ಈ ಅರಿಕೆ ಇನ್ನಾವುದೊ ?
ನುಡಿವಡೆ ಮಾತಿಂಗಗೋಚರ, ನಡೆವರಂಗಕ್ಕೆ ಅಗೋಚರ.
ಇಂತಿವರೊಳಗೆ ಭಂಗಿತರಾಗಿ ಸಾವವರಿಗೇಕೆ
ಲಿಂಗಾಂಗಸಂಯೋಗ, ನಿಃಕಳಂಕ ಮಲ್ಲಿಕಾರ್ಜುನಾ ? ॥ ೪೦೦ ॥

೧೮೧೯

ತೃಣವತಿಶುಷ್ಕವಾದ ಪರ್ಣ ತರುವ ಹಿಡಿದ ಅನಲನ ನಡುವೆ
ಎಡಗೈಯ ಬಲ್ಲದೆ ?

ನಿರ್ಮಲ ಸುಚಿತ್ತನ ಪರಮವಿರಕ್ತನ ಭಾವ,
ವಸ್ತುವ ಮುಟ್ಟಿದಲ್ಲಿ, ತ್ರಿವಿಧಮಲಕ್ಕೆ ಸಿಕ್ಕುವನೆ ?
ಅವು ತನ್ನೊಳಗಿರ್ದಡೂ ತಾನವರೊಳಗಿರ್ದಡೂ
ಗಾಜಿನ ಕುಪ್ಪಿಗೆಯ ನೀರೆಣ್ಣೆಯಂತೆ,
ಸ್ಫಟಿಕದ ಮಧ್ಯದಲ್ಲಿ ಬಹುವರ್ಣವಾದ ಹೊರೆಯ ತೋರಿ ಹಿಡಿವವನಂತೆ,
ಅದು ಸ್ವಯವಲ್ಲ, ಇದು ಸ್ವಯವಲ್ಲದಿಪ್ಪ
ಬಾಹ್ಯಕ್ರಿಯಾವರ್ತಕನ ಲಕ್ಷಣದ ಭಿತ್ತಿಯ ತೆರ
ನಿಃಕಳಂಕ ಮಲ್ಲಿಕಾರ್ಜುನನ ಒಡಗೂಡಿದ ಪರಮವಿರಕ್ತನ ಭೇದ. || ೪೦೧ ||

೧೮೨೦

ತೊಗಲ ಕೈಯಲ್ಲಿ ಶಿಲೆಯ ಲಿಂಗವ ಹಿಡಿದು,
ಮಣ್ಣ ಪರಿಯಾಣದಲ್ಲಿ ಓಗರವನಿಕ್ಕಿ, ಲಿಂಗನೈವೇದ್ಯವ ತೋರಿದಡೆ,
ಓಗರ ಸವೆದುದಿಲ್ಲ, ನೈವೇದ್ಯದ ರುಚಿಯನರಿದುದಿಲ್ಲ.
ಒಳಗು ಶುದ್ಧವಿಲ್ಲದೆ ಮುಟ್ಟಿ ಅರ್ಪಿತವೆಂದಡೆ,
ಮೆಚ್ಚುವರೆ ಪ್ರಾಣಲಿಂಗಿಸಂಬಂಧಿಗಳು.
ಉಂಡವನು ಉಂಡಂತೆ ತೇಗುವ ಸಂದಳಿದು,
ದ್ವಂದ್ವ ಹಿಂಗಿ ನಿಜವಾರೆಂಬುದ ವಿಚಾರಿಸಿ ಕೊಡುವುದಕ್ಕೆ ಮೊದಲೆ,
ಕೊಂಡವರಾರು ಎಂಬುದ ಭಾವಿಸುವುದಕ್ಕೆ ಮೊದಲೆ,
ಭಾವನೆಗೆ ಬಂದವರಾರೆಂದು ವಿಚಾರಿಸಿ,
ಬೀಜ ನೆರೆ ಬಲಿದು ಪುನರಪಿ ಬಪ್ಪಂತೆ ಲಿಂಗ ತಾನಾಗಿ,
ಸಂದೇಹವಿಲ್ಲದೆ ಸೋಂಕುವುದಕ್ಕೆ ಮುನ್ನವೆ ಅರ್ಪಿತ ನಿಂದಾಯಿತ್ತಾಗಿ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಪ್ರಾಣಲಿಂಗ ಸಮರ್ಪಣ. || ೪೦೨ ||

೧೮೨೧

ತೊಗಲಚೀಲದಲ್ಲಿ ಪರಶಿವನಿದ್ದಾನೆಂದು
ಪೊಡವಿಯ ಮೃಡಭಕ್ತರೆಲ್ಲ ನುಡಿವುತಿಪ್ಪರು.
ಇದ ನಾ ನುಡಿಯಲಂಜುವೆ.
ಹಡಕಿಯ ಕೊಳಕಿನ ತೊಗಲ ಹೊದಿಕೆಯ ಹೊರೆಯೊಳಗೆ
ಅರಸಿ ಕಂಡಿಹೆನೆಂಬ ಕುರುಕರ ನೋಡಾ.
ಅರಿವಿಡೆ ತೆರಹಿಲ್ಲ, ಕುರುಹಿಡುವದಕ್ಕೆ ನೆರೆ ನಾಮವಿಲ್ಲ.
ಅರಿದಡೆ ತಾನೇ, ಮರೆದಡೆ ಮಾಯೆ.
ಇದಕ್ಕೆ ಬಿಡುಗಡೆಯಿಲ್ಲ.

ಪ್ರೈಡನ ಮುಂಡಿಗೆಯ ಹಾಕಿದೆ, ಎತ್ತುವ ಕಡುಗಲಿಗಳ ಕಾಣೆ.
ಎನ್ನೊಡೆಯಾ ಎನ್ನ ಬಿಡದಿರಾ, ನಿಃಕಳಂಕ ಮಲ್ಲಿಕಾರ್ಜುನಾ. || ೪೦೩ ||

೧೮೨೨

ತೊಳೆದು ಕಂಡೆಹೆನೆಂದಡೆ ಅಂಗದವನಲ್ಲ.
ಪೂಜಿಸಿ ಕಂಡೆಹೆನೆಂದಡೆ ಮಂಡೆಯವನಲ್ಲ.
ಊಡಿಸಿ ಕಂಡೆಹೆನೆಂದಡೆ ಬಾಯವನಲ್ಲ.
ಅವರು ಮೂವರು ನೆರಿಕೆಯೊಳಗಿರ್ದಡೆ,
ಆ ನೆರಿಕೆಯ ಹೊರಗಿರ್ದು ಬರುಕಾಯನಾದೆಯಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೪೦೪ ||

೧೮೨೩

ತೊಳೆದು ನೋಡಿಹೆನೆಂದಡೆ ಉದಕಕ್ಕೆ ಭೇದಿಸೆ.
ಕಣ್ಣಿನಲ್ಲಿ ಒಸೆದು ನೋಡಿಹೆನೆಂದಡೆ ಶಿಲೆಯ ಮರೆಯೊಳಗಾದೆ.
ಮನಸ್ಸಿನಲ್ಲಿ ನೆನೆದು ನೋಡಿಹೆನೆಂದಡೆ ಬಟ್ಟಬಯಲುನೊಳಕೊಂಡೆ.
ಇನ್ನೇತರಿಂದರಿವೆ ?
ಈ ಮನಸ್ಸಿನ ಸೂತಕವ ಬಿಡಿಸಾ, ನಿಃಕಳಂಕ ಮಲ್ಲಿಕಾರ್ಜುನಾ. || ೪೦೫ ||

೧೮೨೪

ತೋಹಿನ ಶಬರನಂತೆ, ಲಾಗಿನ ವ್ಯಾಘ್ರನಂತೆ,
ಆಡುವ ವಿಧಾಂತನಂತೆ, ಇಂತೀ ವೇಷ ಸಹಜವೆ ?
ದೊರೆವನ್ನಬರ ಭಕ್ತ, ದೊರೆವನ್ನಬರ ವಿರಕ್ತ.
ಇಂತೀ ಇವರಿರವ ಕಂಡು ಬೆರಸಿದೆನಾದಡೆ,
ಎನಗೆ ಘೋರ ನರಕ, ನಿಮಗೆ ಎಕ್ಕಲ ತಪ್ಪದು.
ಇದಕ್ಕೆ ಮುಂಡಿಗೆಯ ಹಾಕಿದೆ, ಎತ್ತಿ ಶುದ್ಧರಾಗಿ,
ನಿಃಕಳಂಕ ಮಲ್ಲಿಕಾರ್ಜುನಾ. || ೪೦೬ ||

೧೮೨೫

ತ್ರಿಕರಣ ಶುದ್ಧವಿಲ್ಲದವನ ಮಾಟ, ನೇಣು ಹರಿದವನಾಟ.
ಭಯಭಕ್ತಿ ಇಲ್ಲದವನ ಕೈಯ ದ್ರವ್ಯಕ್ಕೆ
ಆಶೆಯ ಮಾಡುವ ಭವಭಾರಿಗೆ, ಭವವೇ ಕಡೆ.
ಅದಕ್ಕೆ ಏನೂ ಇಲ್ಲಾ ಎಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೦೭ ||

೧೮೨೬

ತ್ರಿಭುವನದಗ್ರದಲ್ಲಿ ಮೂವತ್ತಾರು ಲೋಕ.
ಅದರ ಮಧ್ಯದಲ್ಲಿ ಇಪ್ಪತ್ತೈದು ಮಹಾಮೇರುವೆ.
ಹದಿನಾರು ವರ್ತನದ ಕೊಂಡಿಗರು.
ಲಘುವೆಂಬ ತಾರುಗದ, ಅದಕ್ಕೆ ಅಗುಳಿ ದಿವಾರಾತ್ರಿಯೆಂಬವೆರಡು.
ಅಗುಳಿಯ ಸನ್ನರ್ಧವಾಗಿ ಬಲಿದವನ ನೋಡಾ.
ಅವನ ನಖದ ಕೊನೆಯಲ್ಲಿ ಲಕ್ಷ ಅಲಕ್ಷವೆಂಬ ಭೇದ.
ಆ ಭೇದವೆಂಬ, ಜರನಿರ್ಜರವೆಂಬ, ಅಹುದಲ್ಲವೆಂಬ,
ಆಗುಚೇಗೆಯೆಂಬ, ಶಂಕೆ ಸಂತೋಷವೆಂಬ,
ಕಾಂಕ್ಷೆ ನಿಃಕಾಂಕ್ಷೆಯೆಂಬ, ಜೀವ ಪರಮವೆಂಬ
ಇಂತೀ ದ್ವಂದ್ವಂಗಳೆಲ್ಲ ದ್ವಾರಸಂಚಾರಕ್ಕವಧಿಯಾದವು.
ಇದಕ್ಕಿಂದ ಮುನ್ನವೆ ಭುವನ ಕೆಟ್ಟಿತ್ತು.
ಕೋಟೆ ಕೋಳು ಹೋಯಿತ್ತು, ಹಿರಿಯರಸು ಸಿಕ್ಕಿದ,
ಪ್ರಧಾನನ ತಲೆ ಹೋಯಿತ್ತು, ತಳವಾರನ ಕಣ್ಣು ಕಳೆಯಿತ್ತು.
ಎಕ್ಕಟಿಗನ ಮಕ್ಕಳೆಲ್ಲರೂ ನಷ್ಟಸಂತಾನವಾದರು.
ಸೃಷ್ಟಿಯೊಳಗೆಲ್ಲ ರಣಮಯವಾಯಿತ್ತು.
ರಣಮಧ್ಯದಲ್ಲೊಂದು ವೃಕ್ಷವ ಕಂಡೆ, ಸತ್ತವನಿರ್ದ, ಇರ್ದವಸತ್ತ.
ಇವರಿಬ್ಬರ ಮಧ್ಯದಲ್ಲೊಂದು ವೃಕ್ಷವ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಾ. ||೪೦೮||

೧೮೨೭

ದಂಡಕ್ಕಂಜಿ, ಜಂಗಮಕ್ಕೆ ಇಕ್ಕುವ
ದೋಷಕ್ಕಂಜಿ ಧರ್ಮವ ಮಾಡುವ, [ಬೇಡುವ] ಕಾಟಕ್ಕಂಜಿ,
ತ್ರಿವಿಧವ ಕೊಡುವ ನಾಟರಿಗೇಕೊ ಸದ್ಭಕ್ತಿ ?
ಜಗದ ಘಾತಕರ ಘಾತಿಸದೆ, ವಿಷಯವನರಿಯದೆ,
ಆಶೆಯಲ್ಲಿ ಸುಳಿವ ಭ್ರಾಂತು ಮಾರಿಗಳನೇನೆಂದರಿಯದೆ,
ವಸ್ತುವಿನಲ್ಲಿ ಓತಿರ್ಪ ಸಾತ್ವಿಕರನರಿದು ಸದ್ಭಕ್ತಿಯ ಮಾಡುವುದು.
ಅರಿದುದಕ್ಕೆ ಇದೇ ಕುರುಹೆಂದು, ಮರೆಯೊಳಡಗಿ ಮೊರೆಯಿಡುತ್ತಿದ್ದೇನೆ,
ನಿಃಕಳಂಕ ಮಲ್ಲಿಕಾರ್ಜುನಾ. ||೪೦೯||

೧೮೨೮

ದಯವೆ ಭಕ್ತಿಗೆ ಬೀಜ, ಭಕ್ತಿಯೆ ಮುಕ್ತಿಗೆ ಬೀಜ.
ಮುಕ್ತಿಯೆ ಸತ್ಯಕ್ಕೆ ಬೀಜ, ಸತ್ಯವೆ ಫಲಕ್ಕೆ ಬೀಜ.

ಫಲವೆ ಭವಕ್ಕೆ ಬೀಜ.
ಇಂತೀ ಭೇದವ ಭೇದಿಸಿ ಶ್ರುತಿಸ್ಮೃತಿತತ್ವಂಗಳಿಂದ
ಬೇಡಿದವರಿಗೆ ಬಯಕೆಯ ಕೊಟ್ಟು, ಬೇಡದವರಿಗೆ ನಿಜವನಿತ್ತು,
ಲೇಸು ಕಷ್ಟವೆಂಬುದ ಸಂಪಾದಿಸದೆ,
ಉಭಯದ ತೆರನ ಸಂದನರಿದಿಪ್ಪ ಲಿಂಗಾಂಗಿಗೆ
ಆತನಂಗಕ್ಕಿನ್ನಾವುದು ಸರಿ, ನಿಃಕಳಂಕ ಮಲ್ಲಿಕಾರ್ಜುನಾ. ||೪೧೦||

೧೪೨೯

ದಳ್ಳುರಿಯಲ್ಲಿಗೆ ಹೋದಡೆ, ಮೆಲ್ಲನೆ ಮುಟ್ಟುವುದೆ ಅಯ್ಯಾ ?
ಬಲ್ಲವ ಗೆಲ್ಲ ಸೋಲಕ್ಕೆ ಹೋರಿದಡೆ, ಕಲ್ಲುಹೃದಯಿ ಬಲ್ಲನೆ ಬಲ್ಲವನಿರವ ?
ಇದೆಲ್ಲಕ್ಕೂ ಸಾಧ್ಯವಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೧೧||

೧೪೩೦

ದೀಕ್ಷಾಗುರು ಶಿಕ್ಷಾಗುರು ಮೋಕ್ಷಗುರುವಾದಲ್ಲಿ,
ತ್ರಿವಿಧ ಕಾರಣಂಗಳನರಿತು,
ಕರ್ಮ ಕ್ರೀ ಆಚಾರ ಸಂಬಂಧವ ಸಂಬಂಧಿಸಿ,
ಮಾಡುವಲ್ಲಿ ದೀಕ್ಷಾಗುರು.
ಆ ಕ್ರೀ ತಪ್ಪಿದಲ್ಲಿ ಬಂಧನವ ಮಾಡುವಲ್ಲಿ ಶಿಕ್ಷಾಗುರು.
ಇಷ್ಟ ಕಾಮ್ಯ ಮೋಕ್ಷಂಗಳ ಗೊತ್ತ ಕೆಡಿಸಿ, ನಿಶ್ಚಯಿಸಿ ಮಾಡುವುದು ಮೋಕ್ಷಗುರು.
ಇಂತೀ ಭೇದದ ಆಗನರಿತು, ಭಾಗೀರಥಿಯಂತೆ ಆಗಬಲ್ಲಡೆ,
ಪರಮಗುರು ನಿಃಕಳಂಕ ಮಲ್ಲಿಕಾರ್ಜುನಾ. ||೪೧೨||

೧೪೩೧

ದೀಪದ ಕೊನೆಯ ಮೊನೆಯ ಮೇಲಿದ್ದುದು, ತಮವೋ, ಬೆಳಗೋ ?
ಮನದ ಕೊನೆಯ ಮೇಲಿದ್ದುದು, ಅರಿವೊ, ಮರವೆಯೋ ?
ಬೀಜದ ಕೊನೆಯ ಮೊನೆಯ ಮೇಲಿದ್ದುದು,
ಮುಂದಕ್ಕದು ಬೀಜವೋ, ಸಂದೇಹವೋ ?
ಅರಿವುದಕ್ಕೆ ತೆರಹಿಲ್ಲ, ಮರೆವುದಕ್ಕೆ ಒಡಲಿಲ್ಲ.
ಅದರ ಹೂ ಮುಡಿಯಲ್ಲಿದ್ದು ಬಿಡುಗಡೆಯಾವೆ,
ನಿಃಕಳಂಕ ಮಲ್ಲಿಕಾರ್ಜುನಾ. ||೪೧೩||

೧೪೩೨

ದೀರ್ಘಕ್ಕೆ ದೀರ್ಘವನೈದಿಸಿ, ಸಾಗಿಸಿ ಮುರಿವನಂತೆ,
ನಾದಕ್ಕೆ ಸುನಾದವನೈದಿಸಿ, ಭೇದಿಸಿ ಕಾಬವನಂತೆ,

ನಿನ್ನೊಡನೈದಿ ನಿನ್ನ ಕಂಡ ಮತ್ತೆ ಎನಗಿನ್ನೇತರ ಸಾಧನ,
ನಿಃಕಳಂಕ ಮಲ್ಲಿಕಾರ್ಜುನಾ ? || ४೧४ ||

೧೮೩೩

ದೇಶ ಮಾತಿನ ಬಿನ್ನಾಣಿಗಳಿಗೆ ಗ್ರಾಸ ಉಂಟಲ್ಲದೆ ನಿಜವಿಲ್ಲ.
ಇಂತೀ ಉಭಯವನತಿಗಳೆದ ನಿರತಿಶಯ ಲಿಂಗಾಂಗಿಗೆ ಗ್ರಾಸದಾಸೆ ಇಲ್ಲ.
ಸರ್ವಸುಖದಾಲಯದ ಪಾಶದ ಕಟ್ಟಿಲ್ಲ.
ಅವರವರ ಕಂಡಲ್ಲಿಯೇ ಸುಖಿ.
ನಿಧಾನಿಸಿ ಕೂಡಿದಲ್ಲಿಯೇ ತೃಪ್ತಿ.
ಆತ ತ್ರಿವಿಧಮಲದ ಹಂಗಿನವನಲ್ಲ.
ಗ್ರಾಮ ನಿಳಯ ಬಂಧಂಗಳಿಲ್ಲ.
ಮಾತಿನ ರಚನೆಯ ಪಾಶವನೊಲ್ಲ.
ಆತ ಸರ್ವಾಂಗಲಿಂಗ ಸನ್ಮತ,
ನಿಃಕಳಂಕ ಮಲ್ಲಿಕಾರ್ಜುನನ ಒಡಗೂಡಿದ ಪರಮವಿರಕ್ತನ ಭೇದ. || ४೧೫ ||

೧೮೩४

ದೇವರು ಹುಟ್ಟುವಾಗ ಮಾಯೆ ಕವಳೀಕರಿಸಿ ಬಂ[ದುದೆ]ಂಬರು.
ಅದು ಬಣ್ಣ ಬಚ್ಚಣಿಕೆಯ ಮಾತು.
ದೇವಪದವಾದ ಬಳಿಕ ಮತ್ತೆ ದೇವರಿಗುಂಟೆ ಮೂರುಕುಲ ?
ಅವ ಬೇಡಿದವರಿಗೀವ ಭಾವಜ್ಞನಾಗಿ.
ಭಾವಕ್ಕೆ ಹೊರಗಾದಾತಂಗೆ ಲೀಲೆಯುಂಟೆ ?
ಆ ಗುಣ ಚಿಪ್ಪು ಮುತ್ತಿನ ತೆರ.
ಕಸ್ತೂರಿ ಶುಕ್ಲದ ತೆರ, ಕದಳಿ ಕರ್ಪುರದ ತೆರ.
ಬಂದುದಕ್ಕೆ ಸಂದೇಹವ ಮಾಡಲಿಲ್ಲ.
ನಿರಂಗ ನಿರುತ ಸುಸಂಗ ನಿಃಕಳಂಕ ಮಲ್ಲಿಕಾರ್ಜುನಾ,
ಇದರಂಗವ ಹೇಳಾ. || ४೧೬ ||

೧೮೩೫

ದೇಹದ ಕಲೆಯನರಿವನ್ನಬರ ಇಷ್ಟಲಿಂಗ ಸಂಬಂಧಿಯಲ್ಲ.
ಭಾವದ ಭ್ರಮೆ ಉಳ್ಳನ್ನಕ್ಕ ಭಾವಲಿಂಗ ಸಂಬಂಧಿಯಲ್ಲ.
ಪ್ರಾಣ ಪ್ರಳಯವನರಿವನ್ನಬರ ಪ್ರಾಣಲಿಂಗ ಸಂಬಂಧಿಯಲ್ಲ.
ಭಾವ ಇಷ್ಟದಲ್ಲಿ ನಿಂದು, ಇಷ್ಟಕ್ಕೆ ಭಾವ ಚೇತನವಾಗಿ
ರಜ್ಜು ತೈಲವ ಅಗ್ನಿಗೆ ಛೇದಿಸಿಕೊಡುವಂತೆ,

ಇಷ್ಟಭಾವದ ಸತ್ವ, ಆ ಉಭಯಸಾಧರಿಸಿ ನಿಂದ ಒಡಲು ಸದ್ಭಾವವಂತನ ಕ್ರೀ.
ಈ ಮೂರು ಏಕವಾಗಿ ವೇಧಿಸಿ, ಉದಯಿಸಿ ತೋರುವ ಬೆಳಗು,
ಆ ಕಳೆಯನೊಳಕೊಂಡಲ್ಲಿ, ಪ್ರಾಣಲಿಂಗಸಂಬಂಧ,
ನಿಃಕಳಂಕ ಮಲ್ಲಿಕಾರ್ಜುನಾ. || ೪೧೭ ||

೧೮೩೭

ದ್ರವ್ಯದ ಸಂಗದಿಂದ ಅರಸಿಕೊಂಬ ಅಪ್ಪು,
ದ್ರವ್ಯವ ಕಳೆದುಳಿದು ಅರಸಿಕೊಂಬುದೆ ?
ಅಂಗದಲ್ಲಿ ದ್ವಂದ್ವವಾದ ಆತ್ಮಬಂಧಕ್ಕೆ ಈಡಪ್ಪುದಲ್ಲದೆ
ನಿರಂಗವ ಬಂಧಿಸಬಹುದೆ ?
ಆ ನೀರು ಸಾರವ ಕೊಟ್ಟ ದ್ರವ್ಯಕ್ಕೆ
ಮತ್ತೆ ತುಷಾರವಾಗಿ ಸಾರವನೆಯ್ದಿದಂತೆ,
ವಸ್ತು ತ್ರಿವಿಧನಾಗಿ, ನಿತ್ಯಾನಿತ್ಯವ ಹೊತ್ತಾಡಿ ಭಕ್ತಿ ಕಾರಣವಾಗಿ,
ಭಕ್ತಿ ಮುಕ್ತಿಯಾಗಿ, ಮುಕ್ತಿ ನಿಶ್ಚಯವಾದಲ್ಲಿ, ಪ್ರಾಣಲಿಂಗಸಂಬಂಧ.
ಪ್ರಾಣ ಪ್ರಣವದಲ್ಲಿ ಲೇಪವಾದ ಮತ್ತೆ ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೪೧೮ ||

೧೮೩೮

ದ್ವೇಷವಿಲ್ಲದ ಭಕ್ತ, ಆಶೆಯಿಲ್ಲದ ವಿರಕ್ತ,
ಸಂಸಾರಪಾಶವಿಲ್ಲದ ಗುರು.
ಇಂತೀ ಮೂವರು ಈಶ್ವರ[ನ] ರೂಪವಲ್ಲ.
ಸದಾಶಿವಮೂರ್ತಿಗಿಂದತ್ತ ನಿಃಕಳೆಯಾದ,
ನಿಃಕಳಂಕ ಮಲ್ಲಿಕಾರ್ಜುನನು. || ೪೧೯ ||

೧೮೩೯

ಧರೆ ನೀರ ಕುಡಿದಲ್ಲಿ, ಉರಿ ಶಿಲೆ ಮರನ ಸುಡುವಲ್ಲಿ,
ಜಲ ಉರಿ ನಿಲುವುದಕ್ಕೆ ಒಡಲುಂಟೆ ?
ನೆರೆ ಅರಿದ ಅರಿವು ಮರೆದು ಮತ್ತೆ ಬೇರೊಬ್ಬ ಅರಿವನುಂಟೆ ?
ಆ ತೆರ ದರಿಸಿನವನರಿದಲ್ಲಿ, ಪ್ರಾಣಲಿಂಗಸಂಬಂಧ,
ನಿಃಕಳಂಕ ಮಲ್ಲಿಕಾರ್ಜುನಾ. || ೪೨೦ ||

೧೮೪೦

ಧರೆಯ ಮೇಲಣ ಮರದಲ್ಲಿ, ಹಿರಿದಿಹ ಕೊಂಬಿನ ತುದಿಯಲ್ಲಿ,
ಅರಿಬಿರಿದಿನ ಪಕ್ಷಿ ಬಂದಿತ್ತು ನೋಡಾ.

ಆ ಪಕ್ಷಿಯ ವರ್ಣ, ಹಾರುವ ರಟ್ಟೆ ಕೆಂಪು, ತೋರಿಹ ರಟ್ಟೆ ಕಪ್ಪು.
ಮೀರಿಹ ರಟ್ಟೆಯ ತುಟ್ಟತುದಿಯಲ್ಲಿ ನಾನಾ ವರ್ಣದ ಬಣ್ಣ.
ಆ ಹಕ್ಕಿಯ ಗಳದಲ್ಲಿ ಹೇಮವರ್ಣ, ಆ ಹಕ್ಕಿಯ ತುದಿಯಲ್ಲಿ ಧವಳವರ್ಣ.
ಆ ಹಕ್ಕಿಯ ಹಾರುವ ರಟ್ಟೆಯ ಕಳೆದು, ತೋರಿಹ ರಟ್ಟೆಯ ಮುರಿದು,
ಮೀರಿಹ ರಟ್ಟೆ[ಯ] ಬೆಂದು, ಕೊರಳಿನ ಹಳದಿ, [ಹಾರಿ], ಕೊಕ್ಕಿನ ಬೆಳ್ಪು
ನಿಃಪತಿಯಾಗಿ, ನಿಃಕಳಂಕ ಮಲ್ಲಿಕಾರ್ಜುನ ಸತ್ತನೊ. || ೪೨೧ ||

೧೮೪೦

ಧರೆ ಸಲಿಲ ಅನಲ ಅನಿಲ ಆಕಾಶ ಮುಂತಾದ ಭೇದಂಗಳ ಕಲ್ಪಿಸುವಲ್ಲಿ,
ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವಮೂರ್ತಿಗಳು
ಕುರುಹುಗೊಂಬಲ್ಲಿ, ನಾದಬಿಂದುಕಳೆ ಲಕ್ಷಿಸುವಲ್ಲಿ,
ಆ ಪರಶಿವತತ್ವದ ಅಂಗ ಗುರುರೂಪಾಗಿ, ಆ ಪರತತ್ವದ ಅಂಗ ಲಿಂಗವಾಗಿ,
ಆ ಪರತತ್ವದ ಅಂಗ ಜಂಗಮವಾಗಿ, ಆ ಜಂಗಮ ಲಿಂಗದಲ್ಲಿ ಲೀಯವಾಗಿ,
ಆ ಲಿಂಗ ಗುರುವಿನಲ್ಲಿಲೀಯವಾಗಿ, ಆ ಗುರು ಉಭಯಸ್ಥಲವ ಗರ್ಭೀಕರಿಸಿ,
ಗುರುವೆಂಬ ಭಾವ ತನಗಿಲ್ಲದೆ
ತರು ಫಲವ ಹೊತ್ತಂತೆ, ಫಲ ರಸವ ಇಂಬಿಟ್ಟುಕೊಂಡಂತೆ,
ಅಂಗಕ್ಕೆ ಆತ್ಮತೇಜವರತು, ಭಾವಕ್ಕೆ ಭೀಷ್ಮ ನಿಂದು,
ಮನ ಮಹವನೊಡಗೂಡಿದಲ್ಲಿ,
ಆತ ಸದ್ಗುರುಮೂರ್ತಿಯ ಕರದಲ್ಲಿ ಬಂದ ಲಿಂಗ,
ಕರ್ಣದಲ್ಲಿ ಹೇಳಿದ ಮಂತ್ರ, ಕಪಾಲವ ಮುಟ್ಟಿದ ತಂತ್ರ.
ಆದು ಸದ್ಗುರು ಕಾರುಣ್ಯ, ಆ ಶಿಷ್ಯಂಗೆ ಜೀವನ್ಮುಕ್ತಿ.
ಇದು ಆಚಾರ್ಯಮತ, ನಿಃಕಳಂಕ ಮಲ್ಲಿಕಾರ್ಜುನಾ. || ೪೨೨ ||

೧೮೪೧

ಧಾನ್ಯವ ಹೊಯ್ದಿದ್ದ ಘಟ, ಅಳತೆಗೆ ಬಪ್ಪುದೆ, ಆ ಧಾನ್ಯವಲ್ಲದೆ ?
ಘಟ ಕರ್ಮವನುಂಬುದೆ, ಆತ್ಮನಲ್ಲದೆ ?
ಹೆಪ್ಪಿಗೆ ರುಚಿ ಉಂಟೆ, ಮಧುರಕ್ಕಲ್ಲದೆ ?
ಅವು ಒಂದೊಂದೆಡೆಯಿಪ್ಪ ಸ್ವಸ್ಥಾನವಲ್ಲವೆ ?
ಆ ಸ್ವಸ್ಥಾನವ ನಿಶ್ಚೈಯಿಸಿ ಅರಿದಲ್ಲಿ ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೪೨೩ ||

೧೮೪೨

ನಡುನೀರ ಮಧ್ಯದಲ್ಲಿ ಅಗಮ್ಯದ ಜ್ಯೋತಿ ಉರಿವುತ್ತಿದೆ.
ಅಗಲದೆ ನೋಡಲಿಕೆ ನೀರಿನ ಮೇಲೆ ಉರಿವುತ್ತಿಪ್ಪುದು.

ಹೊದ್ದಿ ನೋಡಲಿಕ್ಕೆ ನೀರಿನೊಳಗೆ ಮುಳುಗಿ ಉರಿವುತ್ತಿಪ್ಪುದು.
ಅದು ಜ್ಯೋತಿಯ ಗುಣವೋ, ತನ್ನ ಭ್ರಾಂತಿನ ಗುಣವೋ ?
ಎಂಬುದ ತಿಳಿದಡೆ, ನಿಃಕಳಂಕ ಮಲ್ಲಿಕಾರ್ಜುನಲಿಂಗವ ಬಲ್ಲವ. || ೪೨೪ ||

೧೮೪೩

ನರಸುರ ಚೌರಾಸಿಗಳಿಗೆಲ್ಲಾ ನೀನಿತ್ತಲ್ಲದಿಲ್ಲ ನೋಡಯ್ಯಾ.
ಬೊಮ್ಮ ಹರಿ ಸುರರಿಗೆಲ್ಲಾ ನೀನಿತ್ತಲ್ಲದಿಲ್ಲ ನೋಡಯ್ಯಾ.
ನೀನಿದ್ದು ಶಿವಭಕ್ತರನು ಬಡವರೆಂಬ ಬಡಮತಿಗಳನೇನೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೪೨೫ ||

೧೮೪೪

ನಾಣ್ಯವ ಹೊದ್ದಡೆ ಬೇಲಿಯ ಮೇಲೆ ಸಿಲ್ಕಿಸಿ ಸೀಳಬಹುದೆ ?
ಧಾಳಾಂಬಕನ ಬಲ್ಲಡೆ ಕಾಳುಮರ್ತ್ಯರಲ್ಲಿ ಸತ್ಯವ ಹೇಳಬಹುದೆ ?
ಇದು ಸತ್ಯದ ಅಳುತನಕ್ಕೆ ಭಂಗ.
ಜಾಣನಾಗಿರಬೇಕು, ನಿಃಕಳಂಕ ಮಲ್ಲಿಕಾರ್ಜುನಾ. || ೪೨೬ ||

೧೮೪೫

ನಾ ತಪ್ಪಿ ನುಡಿದಡೆ ಒಪ್ಪವಿಟ್ಟುಕೊಳ್ಳಿರಣ್ಣಾ.
ಕಣ್ಣಿನಲ್ಲಿ ಕಸ ಹೊಕ್ಕಡೆ ಕೈ ಹಗೆಯೆ ಅಯ್ಯಾ ?
ಇದು ಬಣ್ಣಗಾರಿಕೆಯಲ್ಲ, ಸನ್ನರ್ಥರಿರವು,
ನಿಃಕಳಂಕ ಮಲ್ಲಿಕಾರ್ಜುನಾ. || ೪೨೭ ||

೧೮೪೬

ನಾನರಿತು, ನಿನ್ನ ಕುರಿತೆಹೆನೆಂದಡೆ ನಿನಗೆ ಭಿನ್ನವಾದೆ.
ನಿನ್ನನರಿತು, ಎನ್ನನರಿದಿಹೆನೆಂದಡೆ ಪ್ರತಿರೂಪನಾದೆ.
ನಾನಿನ್ನೇತರಿಂದರಿವೆ ?
ಅರಿವುದಕ್ಕೆ ಮೊದಲೆ ಅಪ್ರಮಾಣನಾದೆ.
ನಾಮ ರೂಪಿಗೆ ಬಂದು ಒಡಲಾದೆ.
ಒಡಲಪಿಡಿದು ಕಂಡೆಹೆನೆಂದಡೆ ಅಗೋಚರ.
ಒಡಲು ಹರಿದು ಕಂಡೆಹೆನೆಂದಡೆ ನಿರವಯಾಂಗ.
ಇನ್ನೇವೆನ್ನೇವೆ, ಸನ್ನರ್ಥ ಎನಗನ್ಯಭಿನ್ನನಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೪೨೮ ||

೧೮೪೭

ನಾನರಿದು ಕಂಡೆಹೆನೆಂದಡೆ ಸ್ವತಂತ್ರಿಯಲ್ಲ.
ನಿನ್ನ ಭೇದಿಸಿ ಕಂಡೆಹೆನೆಂದಡೆ ವಿಶ್ವಾಸಿಯಲ್ಲ.
ಈ ಉಭಯದ ತೆರನ ಹೇಳಾ.
ಚಿತ್ತಶುದ್ಧವಾಗಿ ಕಂಡೆಹೆನೆಂದಡೆ,
ಆ ಚಿತ್ತವ ಪ್ರಕೃತಿಗೊಳಗುಮಾಡಿದೆ.
ನಿನ್ನನರಿದು ಭೇದಿಸಿ ಕಂಡೆಹೆನೆಂದಡೆ,
ಅವರ ಮನದ ಧರ್ಮಕ್ಕೊಳಗಾದೆ.
ಅಂಧಕ ಅಂಧಕನ ಕೈ ಹಿಡಿದಡೆ,
ಅವರೆಲ್ಲಿಗೆ ಹೋಗುವರು, ನಿಃಕಳಂಕ ಮಲ್ಲಿಕಾರ್ಜುನಾ ? || ೪೨೯ ||

೧೮೪೮

ನಾನರಿದು ಬಲ್ಲೆನೆಂದು ನುಡಿಯಲೇಕೆ ?
ಸರಿಗುಡುಗನಾಡುವ ಬಾಲಕರಂತೆ,
ನಾನೊಡವೆರಸಿ ಹೋಗಿ ಕೆಡಹಿದೆನೆಂಬತೆ,
ಅರಿವಿಗೇಕೆ ಗೆಲ್ಲಸೋಲ ?
ಆಕಾಶವ ನೋಡವುದಕ್ಕೆ ತಳ್ಳು ನೂಕೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೪೩೦ ||

೧೮೪೯

ನಾನರಿಯದಿರ್ದಡೆ ಜ್ಞಾನಿಗಳ ಸಂಭಾಷಣೆಯನರಸುತ್ತಿದ್ದೇನೆ.
ಕಲಿಗಳೊಂದಿಗೆ ಹಂದೆ ಹೋಹಂತೆ,
ಹೊಳೆಯಲ್ಲಿ ಹೋಹನ ಉಡಿಯ ಹಿಡಿದು ಹೋಹಂತೆ,
ಅಂಧಕ ದೃಷ್ಟಿಯವನೊಡನೆ ನಡೆವಂತೆ,
ಆನು ನಿಮ್ಮ ಶರಣರ ಬೆಂಬಳಿವಿಡಿದೆಯ್ದುವೆ,
ನಿಃಕಳಂಕ ಮಲ್ಲಿಕಾರ್ಜುನಾ. || ೪೩೧ ||

೧೮೫೦

ನಾನಾ ಚಿಹ್ನವಿಚ್ಛಿಹ್ನಂಗಳು ತಲೆದೋರದೆ,
ನಾನಾ ವೇಷ ಪಾಶ ರೋಷದೋಷ ನಾಶವಾಗಿ,
ವಿಮಲಾಂಗವಾಗಿಪ್ಪುದು ಶಿವಲಿಂಗಸ್ಥಲ.
ಫಲಭೋಗಭೋಜ್ಯಂಗಳು ನಿವೃತ್ತಿಯಾಗಿ,
ಕಾಮ ಲೋಭ ಮೋಹ ಮದ ಮತ್ಸರಂಗಳಲ್ಲಿ ನಿರತನಾಗಿ,

ಹಸಿವು ಕ್ರೋಧ ತೃಷೆ ವ್ಯಸನಂಗಳಲ್ಲಿ ಅಲಕ್ಷಿತನಾಗಿ,
ಪಾಶಬದ್ಧ ವಿರಹಿತನಾಗಿ, ಗುಣ ಅವಗುಣವ ವಿಚಾರಿಸದೆ,
ಖಿಣ್ಣಾತುರಿಯ, ಮುಕ್ತ್ಯಾತುರಿಯ, ಸ್ವೇಚ್ಛಾತುರಿಯಂಗಳಲ್ಲಿ
ಉಂಬ ಠಾವಿನಲ್ಲಿ ಬದ್ಧನಾಗದೆ,
ಸ್ತುತಿಯಲ್ಲಿ ನಿಲ್ಲದೆ, ನಿಂದೆಯಲ್ಲಿ ಓಡದೆ, ಆ ಉಭಯವ ಒಂದೂ ಅರಿಯದೆ,
ಸರ್ವಾಂಗಮುಖ ಜಂಗಮವಾಗಿ,
ಗುರುಲಿಂಗ ಉಭಯಸ್ಥಲ ಗರ್ಭೀಕರಿಸಿ ನಿಂದ,
ಪರಮವಿರಕ್ತನ ಪಾದಾಂಬುಜವೆ ಮಜ್ಜನವಾಗಿ, ಪ್ರಸಾದವೆ ಸಂಜೀವನವಾಗಿ,
ಆತನ ನಿಜಸ್ವರೂಪವೆ ಎನ್ನ ಕಂಗಳು ತುಂಬಿ, ಹಿಂಗದಿದ್ದಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. || ೪೩೨ ||

೧೮೫೧

ನಾನಾ ಯೋನಿಯಲ್ಲಿ ತಿರುಗಿ ಬಂದನಾಗಿ ಗುರುವಲ್ಲ.
ನಾನಾ ಶಿಲೆಯಲ್ಲಿ ರೂಹಿಟ್ಟು ಬಂದುದಾಗಿ ಲಿಂಗವಲ್ಲ.
ನಾನಾ ಯಾಚಕ ವಿಕಾರದಿಂದ ತಿರುಗುವನಾಗಿ ಜಂಗಮವಲ್ಲ.
ಜನನರಹಿತ ಗುರು, ಅವತಾರರಹಿತ ಲಿಂಗ, ಮರಣರಹಿತ ಜಂಗಮ.
ಹೀಗಲ್ಲದೆ ತ್ರಿವಿಧವ ಕಳೆಯಬಾರದು.
ತ್ರಿವಿಧಕ್ಕೆ ತ್ರಿವಿಧವನಿತ್ತು, ಗುರುವಿನ ಹಂಗ ಮರೆಯಬೇಕು.
ತ್ರಿವಿಧಕ್ಕೆ ತ್ರಿವಿಧವನಿತ್ತು, ಲಿಂಗದ ಹಂಗ ಮರೆಯಬೇಕು.
ತ್ರಿವಿಧಕ್ಕೆ ತ್ರಿವಿಧವನಿತ್ತು, ಜಂಗಮದ ಹಂಗ ಮರೆಯಬೇಕು.
ಮೂರರೊಳಗಾದ ಆರು ಕೊಟ್ಟು, ಐದನಿರಿಸಿಕೊಂಡು,
ಇಪ್ಪತ್ತೈದರ ಲೆಕ್ಕದಲ್ಲಿರಿಸಿ, ಐವತ್ತೊಂದು ಬಿಂದುವಿನಲ್ಲಿ ಹೊಂದಿಸಿ,
ಓಂಕಾರವಪ್ಪ ಪ್ರಣಮವ ಪರಿಣಾಮಿಸಿ,
ವ್ಯಾಪಾರದ ಲತೆಯ ಬಳ್ಳಿಯ ಬೇರ ಕಿತ್ತು,
ಪರ್ವಿ ಪ್ರಕಾರದಿಂದ ಉರ್ವಿಯ ಸುತ್ತಿಮುತ್ತಿ ಬೆಳೆದ
ಚಿತ್ತಬಿದಿರಿನ ನಡುವಿದ್ದ ಹುತ್ತದ ಬಹುಮುಖದ ಸರ್ಪನ ಹಿಡಿದು,
ಕಾಳೋರಗನಂ ಬೇರು ಮಾಡಿ,
ಲೀಲೆಗೆ ಹೊರಗಾಗಿ ಭಾಳಲೋಚನನಂ ಕೀಳುಮಾಡಿ,
ಬಾಲೆಯರ ಬಣ್ಣಕ್ಕೆ ಸೋಲದೆ, ಕಾಳುಶರೀರವೆಂಬ ಒತ್ತರಂಗೊಳ್ಳದೆ,
ಗತಿ ಮತಿ ಗುಣ ಸಂಸರ್ಗ ವಿಪಿನ ಕಂಟಕಕ್ಕೊಳಗಾಗದೆ,
ಪಿಂಡಪ್ರಾಣದ ವಾಯುಸಂಚಾರಕ್ಕೀಡುಮಾಡದೆ,
ಅರಿದೆನೆಂಬುದಕ್ಕೆ ಕುರುಹಿಲ್ಲದೆ, ಕುರುಹಿಗೆ ಅವಧಿಗೊಡಲಿಲ್ಲದೆ,

ಹುಸಿ ಮಸಿಯ ಮಣಿಮಾಡದಲ್ಲಿ ಒರಗದೆ,
ಪರಿಣಾಮವೇ ಪಥ್ಯವಾಗಿ, ಅಂತರಂಗಶುದ್ಧಿ ಪರಿಪೂರ್ಣವಾಗಿ ನಿಂದು,
ಸಂಸಾರಕ್ಕೆ ಸಿಕ್ಕದೆ, ನಿಂದ ನಿಜ ತಾನಾಗಿ ಲಿಂಗೈಕ್ಯವು.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ಸರ್ವಾಂಗದಲ್ಲಿ ನಿರ್ಲೇಪವಾ[ದುದೇ] ಶರಣಸ್ಥಲ. || ೪೩೩ ||

೧೮೫೨

ನಾನಾ ವರ್ಣವ ನೀರುಂಡು,
ಆ ವರ್ಣ ನೀರೆರಡಿಲ್ಲದೆ ಅವಗವಿಸಿದಂತೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗನೊಡಗೂಡಿರಬೇಕು. || ೪೩೪ ||

೧೮೫೩

ನಾನಾ ಸಾರಂಗಳ ಸವಿಯ, ಆ ಸಾರ ಅರಿಯಬಲ್ಲುದೇ,
ಸವಿಸಾರವ ಬಲ್ಲವನಲ್ಲದೆ ?
ನಾನಾ ಘಟಪಟವ ಆ ಘಟಪಟಂಗಳು ಬಲ್ಲವೆ, ಇದಿರಿಟ್ಟವಲ್ಲದೆ ?
ತಾ ನೋಡುವಲ್ಲಿ ನಾನಾ ಛಾಯಂಗಳು ದರ್ಪಣದಲ್ಲಿ ಒಪ್ಪುವಂತೆ,
ಆ ದರ್ಪಣಕ್ಕೆ ತನ್ನ ಮುಖಕ್ಕೆ ದೃಷ್ಟವುಂಟೆ ?
ಆ ನೆನಹಿಂಗೆ ಇಷ್ಟ, ಆ ಇಷ್ಟಕ್ಕೆ ಈ ಗುಣದೃಷ್ಟ.
ಇಂತೀ ಪ್ರಾಣಲಿಂಗಿಯ ಕೂಟ, ಮೇಲೆ ಐಕ್ಯಾನುಭಾವಿಯ ಲೇಪ,
ನಿಃಕಳಂಕ ಮಲ್ಲಿಕಾರ್ಜುನಲಿಂಗದೊಳಗಿನಾಟ. || ೪೩೫ ||

೧೮೫೪

ನಾನಾ ಸ್ಥಲಂಗಳ ಮಾತಿನ ಮಾಲೆಯಲ್ಲಿ,
ನಿತ್ಯ ಅನಿತ್ಯವೆಂಬ ಮಾತ ಬಣ್ಣಿಸಿ ನುಡಿವಲ್ಲಿ, ಅದೇತರ ಸ್ಥಲ ?
ಕಾಮದಲ್ಲಿ ಕಂದಿ, ಕ್ರೋಧದಲ್ಲಿ ಬೆಂದು,
ನಾನಾ ಲೋಭ ಮೋಹಂಗಳಲ್ಲಿ ಸಲೆಸಂದು ಸಾವುತ್ತ,
ಭಾವದ ಭ್ರಮೆಯಡಗದೆ, ಜೀವವಿಕಾರ ಹಿಂಗದೆ,
ಕೂರಲಗಿನ ಒಪ್ಪದಂತೆ, ಕಣ್ಣಿಗೆ ನೋಟ, ಘಟ ಅಸುವಿಂಗೆ ಓಟ.
ಆ ಅಸಿಯ ಘಾತಕತನದಂತೆ, ಇವರ ಭಾವಕ್ಕೆ ಭಕ್ತರೆನಲಾರೆ,
ಜ್ಞಾನಕ್ಕೆ ಗುರುವೆನಲಾರೆ, ಸದ್ಭಾವಕ್ಕೆ ಜಂಗಮವೆನಲಾರೆ.
ಎಂದಡೆ ಎನಗದು ಬಂಧನವಲ್ಲ, ಅದು ಕಾಯ ಜೀವದ ಭೇದ.
ಅದು ಸ್ಥಾಣು ರಜ್ಜು, ಎಣ್ಣೆ ಉರಿಯೋಗದ ಕೂಟ.
ಆ ಗುಣ ಒಂದೂ ತೋರದೆ, ಬೆಳಗೆಂಬ ನಾಮವಡಗಿತ್ತು.

ಇಂತೀ ಉಭಯ ಭಿನ್ನವಾದಲ್ಲಿ,
ಎನ್ನ ಮರವೆ ನಿನ್ನ ಕೇಡು, ನಿನ್ನ ಮುಳಿ ಎನ್ನ ಕೇಡು.
ಅದು ದೃಕ್ಕು ಬೆಸುಗೆಯಂತೆ,
ನಿಶ್ಚಯವಾದಲ್ಲಿ ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೩.೬ ||

೧೬೫೫

ನಾನಾ ಸ್ಥಲಂಗಳ ಹೊಲಬಿನ ಹೊಲಬ ನಿವಾರಿಸುವಲ್ಲಿ,
ಸುಖದುಃಖದೊಳು ಉಭಯವಾಗುವುದು.
ತಾನರಿದಲ್ಲಿ, ನಡೆನುಡಿ ಸಿದ್ಧಾಂತವಾದಲ್ಲಿ, ಇಹಪರಸುಖ.
ಭಾವಕ ಪರಿಭ್ರಮಣದಿಂದ, ದಾಹಕ ಮಾತುಗಾರುತನದಿಂದ,
ವಸ್ತುಭಾವದ ನಿಹಿತವನರಿಯದೆ, ವಾಗ್ವಾದಕ್ಕೆ, ಗೆಲ್ಲಸೋಲಕ್ಕೆ ಹೋರುವಲ್ಲಿ,
ಇಹಪರ ಉಭಯದಲ್ಲಿಗೆ ದುಃಖ.
ಇಂತೀ ಸ್ಥಲಂಗಳ ಗರ್ಭೀಕರಿಸಿ, ಆದಿಸ್ಥಲವ ಅಷ್ಟು ಎನ್ನದೆ,
ಮಧ್ಯಸ್ಥಲ ಇಷ್ಟು ಎನ್ನದೆ, ಬೇರೊಂದು ಸ್ಥಲವಾಯಿತೆಂದು ಉಸರಲ್ಲಕ್ಕೆ ದೂರದೆ,
ಆವಾವ ಅರಿವಿನಲ್ಲಿ, ಆವಾವ ಸ್ಥಲಂಗಳಲ್ಲಿ, ಆವಾವ ಕ್ರೀ ನೇಮಂಗಳಲ್ಲಿ ಇಷ್ಟ
ವಿಶ್ವಾಸಕ್ಕೆ ತಪ್ಪದಿಪ್ಪ ಆ ವಸ್ತುವ,
ಬೇರೊಂದು ಲಕ್ಷಿಸಿ, ಕಟ್ಟಿಗೊತ್ತಿಗೆ ತರವಲ್ಲ.
ದೃಷ್ಟವಿಲ್ಲ ಒಂದು ಇದಿರಿಂಗೆ ಹೇಳಲಿಲ್ಲ.
ತನ್ನ ಭಾವ ನಿಶ್ಚಯವಾದಲ್ಲಿ, ನಿಃಕಳಂಕ ಮಲ್ಲಿಕಾರ್ಜುನನ ಹುಟ್ಟುಗೆಟ್ಟು || ೪೩.೭ ||

೧೬೫೬

ನಾನು ನೀನೆಂಬ ಉಭಯದ ಭೇದಿಸಿ ಹೋರಲೇಕೆ,
ವಸ್ತು ತಾನಾದ ಮತ್ತೆ ?
ಇಷ್ಟವನರಿಯದೆ ಅತ್ತತ್ತಲಕ್ಕೆ, ಮಾತಿನ ಘಾತಕಕ್ಕೆ,
ತಮ್ಮ ಪ್ರತಿಷ್ಠತದ ಧಾತು ಕುಂದಿಹಿತೆಂದು
ಮಾತಿಗೆ ಮಾತ ಮುರಿದು, ಗದ್ದುಗೆಯ ಹಾಸಂಗಳಿಗೇಕೆ
ಸುಚಿತ್ತ ಸಮ್ಯಜ್ಞಾನ, ನಿಃಕಳಂಕ ಮಲ್ಲಿಕಾರ್ಜುನಾ ? || ೪೩.೮ ||

೧೬೫೭

ನಾನೆಂಬುದನರಿದಲ್ಲದೆ ಅರಿವನೊಳಕೊಂಡುದು.
ಆ ಅರಿವು ಐಕ್ಯವಾದಲ್ಲದೆ ಗುರುವ ಭಾವಿಸಲಿಲ್ಲ.
ಆ ಗುರು ಐಕ್ಯವಾದಲ್ಲದೆ ಲಿಂಗವನರಿಯದು.
ಆ ಲಿಂಗವು ಐಕ್ಯವಾದಲ್ಲದೆ ತ್ರಿವಿಧವ ಮರೆಯದು.

ಆ ಲಿಂಗ ಐಕ್ಯವಾದಲ್ಲಿಯೆ ಜಂಗಮವ ಮರೆದುದು.
ತ್ರಿವಿಧವ ಮರೆದಲ್ಲಿಯೆ ತನ್ನ ಮರೆದುದು.
ತನ್ನ ಮರೆದಲ್ಲಿಯೆ ಇದಿರಿಟ್ಟುದನರಿದುದು.
ಮತ್ತೆ ಅರಿದು ಮರೆಯಲಿಲ್ಲ, ಮರೆದು ಅರಿಯಲಿಲ್ಲ.
ತೆರಹಿಲ್ಲವಾಗಿ ಭಾವಿಸಿ ಕಂಡೆಹೆನೆಂಬ ಭ್ರಮೆಯೆಲ್ಲಿಯದೊ ?
ಪೂಜಿಸಿ ಕಂಡೆಹೆನೆಂಬ ಕ್ರೀ ಎಲ್ಲಿಯದೊ ?
ಹೂಬಲಿದು ಕಾಯಾಗಬೇಕಲ್ಲದೆ ಕಾಯಿ ಬಲಿದು ಹೂವಾಗಬಲ್ಲುದೆ ?
ಹಣ್ಣು ಬಲಿದು ಬಣ್ಣವಹುದಕ್ಕೆ ಮೊದಲೆ, ಕೊಂಬು ಮುರಿಯಿತ್ತು,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಐಕ್ಯವಾದ ಶರಣಂಗೆ. ||೪೩೯||

೧೮೫೮

ನಾನೇಕೆ ಬಂದೆ ಸುಖವ ಬಿಟ್ಟು ?
ಬಂದುದಕ್ಕೆ ಒಂದೂ ಆದುದಿಲ್ಲ.
ಸಂಸಾರದಲ್ಲಿ ಸುಖಿಯಲ್ಲ, ಪರಮಾರ್ಥದಲ್ಲಿ ಪರಿಣಾಮಿಯಲ್ಲ.
ಸಿಕ್ಕಿದೆ ಅರ್ತಿಗಾರಿಕೆಯೆಂಬ ಭಕ್ತಿಯಲ್ಲಿ.
ದಾಸಿಯ ಕೂಸಿನಂತೆ ಒಡವೆಗಾಸೆಮಾಡಿ,
ಗಾಸಿಯಾದೆ ಮನೆಯೊಡೆಯನ ಕೈಯಲ್ಲಿ.
ಈ ಭಾಷೆ ಇನ್ನೇಸು ಕಾಲ, ನಿಃಕಳಂಕ ಮಲ್ಲಿಕಾರ್ಜುನಾ ? ||೪೪೦||

೧೮೫೯

ನಾ ಬಾಹಾಗ ಎನ್ನ ಗುರು ಮೂರು ರತ್ನವ ಕೊಟ್ಟ.
ಅವ ನಾನೊಲ್ಲದೆ ಒಂದ ಬ್ರಹ್ಮಂಗೆ ಕೊಟ್ಟೆ.
ಒಂದ ವಿಷ್ಣುವಿಗೆ ಕೊಟ್ಟೆ, ಒಂದ ರುದ್ರಂಗೆ ಕೊಟ್ಟೆ.
ಆ ಕೊಟ್ಟುದನು ಬ್ರಹ್ಮ ಬೆಗಡವನಿಕ್ಕಿ ಪವಣಿಸಿ ಕಟ್ಟಿದ.
ಅದ ವಿಷ್ಣು ಕುಂದಣದಲ್ಲಿ ಕೀಲಿಸಿ ಮುಂಗೈಯಲ್ಲಿಕ್ಕಿದ.
ಮತ್ತೊಂದವನಾ ರುದ್ರನೊಡೆದು ಬೆಳಗ ಬಯಲು ಮಾಡಿದ.
ಇಂತೀ ಮೂವರು ರತ್ನದ ಹಂಗಿಗರಾದರು.
ಅವರ ಹಂಗನೊಲ್ಲದೆ ಸಂದೇಹ ಬಿಡಲಾರದೆ,
ಬಂದ ಬಂದ ಯೋನಿಯಲ್ಲಿ ಸಂದಿಲ್ಲದೆ ತಿರುಗಲಾರದೆ, ನೊಂದೆನಯ್ಯಾ.
ಬ್ರಹ್ಮನ ಬಲೆಯಲ್ಲಿ ಸಿಲುಕಿ, ವಿಷ್ಣುವಿನ ಬಂಧನದಲ್ಲಿ ಕಟ್ಟುವಡೆದು,
ರುದ್ರನ ಹಣೆಗಿಚ್ಚಿನಲ್ಲಿ ಉರಿಯಲಾರದೆ, ಹಾರಿದೆನಯ್ಯಾ ಕೇಡಿಲ್ಲದ ಪದವ.
ಗುರುವಿನ ಹಂಗ ಬಿಟ್ಟೆ, ಅಡಿಗಡಿಗೆ ಏಳಲಾರದೆ.

ಲಿಂಗದ ಹಂಗ ಬಿಟ್ಟೆ, ಮಜ್ಜನಕ್ಕೆರೆದ ಹಾಪಸೆಗಾರದೆ.
ಜಂಗಮದ ಹಂಗ ಬಿಟ್ಟೆ, ಸಂದೇಹದಲ್ಲಿ ಸಾಯಲಾರದೆ.
ಇವರಂದ ಒಂದೂ ಚಂದವಿಲ್ಲ.
ಅಭಂಗ ನಿರ್ಲೇಪ, ನಿಃಕಳಂಕ ಮಲ್ಲಿಕಾರ್ಜುನಂಗೆ. || ೪೪೧ ||

೧೮೬೦

ನಾರಿ ಸುತ್ತನಾರ್ಯೆಕೆಗೊಂಬವನ ಬೇರಿನ ಬಿಲ್ಲ ನುಂಗಿತ್ತು.
ಬಿಲ್ಲಿನ ಬಾಗಿನಲ್ಲಿ ಇವರೆಲ್ಲರೂ ಸಿಕ್ಕಿದರು.
ಬಿಲ್ಲಿನ ನಾರಿಯನಿಲಿ ಬಂದು ಕಡಿಯಲಾಗಿ,
ನಾರಿ ಜಾರಿತ್ತು, ಬಿಲ್ಲು ಮುರಿಯಿತ್ತು.
ಬಿಲ್ಲಿನೊಳಗಾಡುವ ಚೋಲ್ಲೆ ಹಸರವೆಲ್ಲಿಯೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೪೪೨ ||

೧೮೬೧

ನಾಲ್ಕು ಯುಗವು ಕೂಡಿ ಇಪ್ಪತ್ತೊಂದುವೇಳೆ ತಿರುಗಿದಡೆ,
ಇಂದ್ರಂಗೆ ಮರಣ, ಬ್ರಹ್ಮಂಗೊಂದು ದಿನ.
ಅಂಥಾ ಬ್ರಹ್ಮರು ಸಹಸ್ರ ಕೂಡಿದಡೆ, ವಿಷ್ಣುವಿಂಗೆ ಪರಮಾಯು.
ಅಂಥಾ ವಿಷ್ಣು ಕೋಟಿ ಕೂಡಿದಡೆ ರುದ್ರಂಗೊಂದು ಜಾವ.
ಅಂಥಾ ರುದ್ರರು ಏಕದಶ ಕೋಟಿ ಕೂಡಿದಡೆ, ಈಶ್ವರಂಗೆ ಎರಡು ಜಾವ.
ಅಂಥಾ ಈಶ್ವರರು ದ್ವಾದಶರು ಕೂಡಿದಡೆ, ಸದಾಶಿವಂಗೊಂದು ಜಾವ.
ಅಂಥಾ ಸದಾಶಿವರು ಒಂದುಕೋಟಿ ಕೂಡಿದಡೆ, ಮಹಾಪ್ರಳಯವಹುದು.
ಅಂಥಾ ಪ್ರಳಯ ಹದಿನೆಂಟು ಕೂಡಿದಡೆ, ಮಹಾ ಅಂಧಕಾರವಹುದು.
ಅಂಥಾ ಅಂಧಕಾರ ಸಂದಿಲ್ಲದೆ ತಿರುಗುವಲ್ಲಿ, ಬಯಲು ಬರಿದಹುದು.
ಅಲ್ಲಿಂದಾಚೆ ನೀವೆ ಬಲ್ಲಿರಿ, ನಾನರಿಯೆ.
ಸೊಲ್ಲಿಂಗತೀತನಪ್ರಮಾಣನಗೋಚರ ಘನವು,
ನಿಃಕಳಂಕ ಮಲ್ಲಿಕಾರ್ಜುನ. || ೪೪೩ ||

೧೮೬೨

ನಿನಗೆ ಮಜ್ಜನವ ಮಾಡುವಲ್ಲಿ, ನಾ ಮಲದೇಹಿ, ನೀ ನಿರ್ಮಲದೇಹಿ.
ನಿನಗೆ ಪೂಜೆಯ ಮಾಡುವಲ್ಲಿ, ನಾ ಕರ್ಮಜೀವಿ, ನೀ ಪುಣ್ಯಜೀವಿ.
ನಿನಗೆ ಗಂಧವ ಹೂಸುವಲ್ಲಿ, ನಾ ದುರ್ಗುಣ ಜೀವಿ, ನೀ ಸುಗಂಧ ಭಾವಿ.
ನಿನಗೆ ಅಕ್ಷತೆಯನಿಕ್ಕುವಲ್ಲಿ, ನಾ ಲಕ್ಷಿತ, ನೀ ಅಲಕ್ಷಿತ.
ನಿನಗೆ ಧೂಪವನಿಕ್ಕುವಲ್ಲಿ, ನಾ ಭಾವಿತ, ನೀ ನಿರ್ಭಾವಿತ.

ನಿನಗೆ ದೀಪವನೆತ್ತುವಲ್ಲಿ, ನಾ ಜ್ಯೋತಿ, ನೀ ಬೆಳಗು.
ಇಂತೀ ಭಾವಂಗಳಲ್ಲಿ ಭಾವಿಸಿ ಕಂಡೆಹೆನೆಂದಡೆ,
ಭಾವಕ್ಕೆ ಅಗೋಚರನಾಗಿಪ್ಪೆ.
ನಿನ್ನನರಿವುದಕ್ಕೆ ತೆರನಾವುದೆಂದಡೆ, ಗುರುವಿಂಗೆ ತನು, ನಿನಗೆ ಮನ,
ಜಂಗಮಕ್ಕೆ ಧನ, ತ್ರಿವಿಧಕ್ಕೆ ತ್ರಿವಿಧವನಿತ್ತು,
ದಗ್ಧಪಟದಂತೆ ರೂಪಿಗೆ ಹೊದ್ದಿಗೆಯಾಗಿ,
ಕಲ್ಲಿಗೆ ಹೊದ್ದದಿಪ್ಪ ಲಿಂಗ ಸದ್ಭಕ್ತನ ಸ್ಥಲ.
ಆ ಭಕ್ತನಲ್ಲಿ ತಪ್ಪದಿಪ್ಪೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೪೪ ||

೧೮೬೩

ನಿನ್ನ ಇರವು, ನಿನ್ನನರಿವಿನ ಇರವು ಮೃತ್ತಿಕೆಯ ಚಕ್ರದಂತೆ,
ನಿನ್ನನರಿವಿನ ಇರವು ತರುಸಾರದ ಹೇಮದಾಶ್ರಯದಂತೆ,
ನಿನ್ನನರಿವಿನ ಇರವು ಲೋಹದ ವಹ್ನಿಯ ಸಂಗದಂತೆ,
ಇದಾರಿಗೂ ಅಸಾಧ್ಯ ನೋಡಾ.
ಅಸಮಾಕ್ಷ ಅನಾಮಯ ನೀನೇ, ನಿಃಕಳಂಕ ಮಲ್ಲಿಕಾರ್ಜುನಾ. || ೪೪೫ ||

೧೮೬೪

ನಿನ್ನನರಿತು ಅರಿದೆನೆಂದಡೆ,
ನಾ ಕುತ್ತದ ಕೊಮ್ಮೆ, ನೀ ಮದ್ದಿನ ಗುಳಿಗೆ.
ನಿನ್ನನರಿತು ನೆರೆದಿಹೆನೆಂದಡೆ, ನೀ ಹೆಣ್ಣು, ನಾ ಗಂಡು.
ಸಾಕು, ಬಲ್ಲಹರ ಮಾತು ಬಿಡು,
ನಿನ್ನದು ನೀತಿಯಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೪೪೬ ||

೧೮೬೫

ನಿನ್ನನರಿವುದಕ್ಕೆ ಹೊನ್ನು ಹೆಣ್ಣು ಮಣ್ಣೆಂಬ
ಸನ್ನೆಯ ತೊರೆಯ ಹಾಯಬೇಕು.
ಆ ಮೂರನರಿವಲ್ಲಿ, ಮರೆದು ಹಿಡಿವಲ್ಲಿ, ಅರಿದು ಬಿಡುವಲ್ಲಿ,
ಆ ಉಭಯದ ಒಡಲು ಹರಿದು, ತೋರಿಕೆ ನಷ್ಟವಾಗಿ ನಿಂದವಂಗಲ್ಲದೆ,
ನಿನ್ನ ಚರಣದ ಬಾಗಿಲ ಬಾದಳವನೇರಬಾರದು.
ಅದಕ್ಕೆ ಸನ್ನೆಗಟ್ಟಿಗೆಯೆ ಚೆನ್ನ, ನಿಃಕಳಂಕ ಮಲ್ಲಿಕಾರ್ಜುನಾ. || ೪೪೭ ||

೧೮೬೬

ನಿನ್ನಿಂದ ನಾ ಭವಸಾಗರವ ಗೆದ್ದೆಹೆನೆಂದಡೆ,
ಭಕ್ತರಿಗೆ ನೀನೇರುವ ಹರುಗೋಲವೆ ?

ನಿನ್ನ ಮರೆಯಲ್ಲಿ ಇದ್ದೆಹೆನೆಂದಡೆ, ಕರದ[ಲ್ಲಿ] [ಕಡ್ಡಾ]ಯವೆ ?
ಚಿನ್ಮಯ ನೀನಾಗಿ, ತನ್ಮಯ ನಾನಾಗಿ ಭಿನ್ನಭಾವಿಯಾದಲ್ಲಿ,
ನೀನಾರು, ನಾನಾರು ನಿಃಕಳಂಕ ಮಲ್ಲಿಕಾರ್ಜುನಾ ? || ೪೪೮ ||

೧೮೬೭

ನಿಮಿತ್ತ ಶುಭಸೂಚನೆಯ ಚಿನ್ನಪವನವಧರಿಸು.
ಅತಿಥಿಯ ಮಸ್ತಕ ತಾಗಿ,
ಶೂನ್ಯಸಿಂಹಾಸನದ ಫಳಹರಂಗಳೆಲ್ಲವೂ ಅಲ್ಲಾಡುವುದ ಕಂಡೆನಯ್ಯಾ.
ಮುಕ್ತಿನಾರತಿಯ ಮುಂದೆ ಹಿಡಿದುಕೊಂಡು,
ಮುಕ್ತಿವನಿತೆಯರು ನಿತ್ಯನಿರಂಜನಂಗೆ ನಿವಾಳಿಸುವುದ ಕಂಡೆನಯ್ಯಾ.
ಇದರಿಂದ, ನಿಃಕಳಂಕ ಮಲ್ಲಿಕಾರ್ಜುನದೇವರು ಬಾರದಿರ್ದಡೆ,
ನೀನಾದಂತೆ ಅಹೆನು. ಕಟ್ಟು ಗುಡಿಯ ಸಂಗನಬಸವಣ್ಣಾ. || ೪೪೯ ||

೧೮೬೮

ನಿರ್ಘಟದಲ್ಲಿ ಘಟ ಹುಟ್ಟಿ, ಪ್ರಕಟಿಸುವುದ ಕಂಡೆ.
ನಿರ್ವಿಕಳತೆಯಲ್ಲಿ ವಿಕಳತೆ ಹುಟ್ಟಿ, ಉಭಯಗತಿ[ಗೆಟ್ಟವರ ಕಂಡೆ].
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ ಹೋದವರ [ಕಂಡೆ]. ||೪೫೦ ||

೧೮೬೯

ನಿರವಯಲಿಂಗ ಲೀಲೆಗೆ ರೂಪಾಯಿತ್ತೆಂದು ನುಡಿವರು,
ಬಯಲು ರೂಪಾದ ಪರಿಯಿನ್ನೆಂತೊ ?
ಮೊದಲುಗೆಟ್ಟು, ಲಾಭನರಸುವ ಪರಿಯಿನ್ನೆಂತೊ ?
ರೂಪಿಂಗೆ ಬಂದುದು ನಿರೂಪವಾದ ಮತ್ತೆ ? ರೂಪಿಂಗೆ ಈಡಪ್ಪುದೆ ?
ಇದು ಕಾರಣ, ತಮ್ಮಲ್ಲಿರ್ದ ಜ್ಞಾನವ ತಾವರಿಯದೆ,
ತಾವು ಹಿಡಿದಿರ್ದ ಲಿಂಗದ ಆದಿ, ಅಳಿ ಉಳಿವ ಉಭಯವ ಭೇದಿಸಲರಿಯದೆ,
ಜ್ಞಾನವ ಸಾಧಿಸಲರಿಯದೆ, ಸಾಧ್ಯರೆಂತಾದಿರೊ ?
ಆ ಸಾಧ್ಯ, ನಿರುಪಮ ನಿರವಯ ಪರಂಜ್ಯೋತಿ ಲಿಂಗವ
ಕುರುಹಿಡುವ ಪರಿಯಿನ್ನೆಂತೊ ?
ಕುರುಹಿನ ಮರೆಯೊಳಗಿಪ್ಪ ವಸ್ತುವ ಕಾಬ ತೆರ ಇನ್ನಾವುದೊ ?
ಇವೆಲ್ಲವೂ ಮರವೆಯ ಮಾತಲ್ಲದೆ, ಅರಿವು ಹೋರಟೆಗೆ ಬಲ್ಲವರಲ್ಲದೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೪೫೧ ||

೧೮೭೦

ನಿರುಪಾಧಿಭಕ್ತಂಗೆ ನಿರಂಜನ ಜಂಗಮ, ನಿರವಯ ಅಭೇದ್ಯ ಲಿಂಗ.
ಆ ಲಿಂಗದ ಸ್ವರೂಪವು ಜಂಗಮ, ಆ ಜಂಗಮವೆ ಲಿಂಗ.
ಆ ಲಿಂಗಜಂಗಮವ ಹೃತ್ಕಮಲ ಮಧ್ಯದಲ್ಲಿ
ನಿಜಾನಂದಸ್ವರೂಪನಾಗಿ ಇಂಬಿಟ್ಟುಕೊಂಡಿಪ್ಪ ಮಹಾಭಕ್ತಂಗೆ
ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ. ||೪೫೨||

೧೮೭೧

ನಿಶ್ಚಟ ಭಾಷೆಯ ನುಡಿದ ಮತ್ತೆ, ರಣದಲ್ಲಿ ವಾಸಿಗೆ ಸಾಯಲೇಬೇಕು.
ಈಶಲಾಂಛನವ ಹೊತ್ತು ಮತ್ತೆ, ಸತ್ಯದ ವಾಸಿಗೆ ಸಾಯದ
ವೇಷಧಾರಿಗಳವರೇತಕ್ಕೆ ಬಾತೇ, ನಿಃಕಳಂಕ ಮಲ್ಲಿಕಾರ್ಜುನಾ ? ||೪೫೩||

೧೮೭೨

ನಿಷ್ಠೆಯ ಹರಿದು ಭಕ್ತಿಯೆಂಬ ತೂರ್ಯದಲ್ಲಿ ಸಿಲ್ಕಿ ಸಾಯದೆ,
ವಿರಕ್ತಿಯಿಂದ ಕರಿಗೊಂಡು ಮಾಡುವ ಸದಾನಂದನ ಇರವು
ಹೇಂಗಿರಬೇಕೆಂದಡೆ :
ಬಂದುದನೊಲ್ಲೆನ್ನದೆ, ಬಾರದುದಕ್ಕೆ ಬಯಸದೆ, ಮಾಟದಲ್ಲಿ ಮನ ಸಂದೇಹಿಸದೆ,
ಜಗದಲ್ಲಿ ಸುಳಿವ ಆಟದವರ ನೋಡುತ್ತ,
ಉಣಬಂದವರಿಗಿಕ್ಕಿ, ಬೇಡ ಬಂದವರಿಗೆ ಕೊಟ್ಟು,
ಆರೂಢರನರಿದು ಶೋಧಿಸಿ ಮಾಡುವುದು.
ನಿಷ್ಪತ್ತಿ ನಿರವಯ ಭಕ್ತನ ಯುಕ್ತಿ, ನಿಃಕಳಂಕ ಮಲ್ಲಿಕಾರ್ಜುನಾ. ||೪೫೪||

೧೮೭೩

ನೀತಿಗೆ ನೀತಿ, ಜಾತಿಗೆ ಜಾತಿ ಭೇದವನರಿದು,
ಕೂಟಕ್ಕೆ ಕೂಟ, ಕ್ಷೀರಕ್ಕೆ ಕ್ಷೀರ ಕೂಡಿದಂತಿರಬೇಕು.
ವಾರಿಯ ವಾರಿ ಕೂಡಿದಂತಿರಬೇಕು.
ಇದು ಜ್ಞಾನಿಗಳ ಮಹಾಪ್ರಕಾಶದ ಕೂಟದ ಸುಖ,
ನಿಃಕಳಂಕ ಮಲ್ಲಿಕಾರ್ಜುನಾ. ||೪೫೫||

೧೮೭೪

ನೀನೊಳ್ಳಿಹನೆಂಬೆನೆ ಮನಧರ್ಮವನರಸಿಹೆ.
ನಾನೊಳ್ಳಿಹನೆಂಬೆನೆ ನೀನೆಲ್ಲಿದ್ದಹನೆಂದರಸಿಹೆ.
ಕೈದು ಕೈದು ಹಳಚಿವಲ್ಲಿ ಅಲಸಿದುದುಂಟೆ ?

ಆ ಅಲಸಿ ಅಸುವಿಂಗಲ್ಲದೆ ಈ ದೆಶೆಯ ಹೇಳಾ,
ಕುಶಲ ತನ್ಮಯ ನಿಃಕಳಂಕ ಮಲ್ಲಿಕಾರ್ಜುನಾ. ||೪೫೬||

೧೮೭೫

ನೀರು ಕೂಡಿ[ದ] ಕ್ಷೀರ ಬೆಂದಲ್ಲದೆ ಮತ್ತಾ
ನೀರು ಸಾರವರತು ಹೊತ್ತದೆ ಉಳಿದ ಉಳುಮೆಯೆಂತೋ ?
ಇಕ್ಷುವಿನ ಸಾರ ಅಪ್ಪುವಿನ ಕೂಟದಿಂದ ಪಕ್ವವಾಗಿ,
ಮತ್ತೆ ಉಳಿದುದು ಸಕ್ಕರೆಯಾದಂತೆ,
ಎಣ್ಣೆ ನೀರ ಕೂಡಿ ಬೆಂದು, ಬಿನ್ನಾಣದಿ ಮೇಲೇರಿ,
ಆ ಉಭಯಕ್ಕೆ ಅನ್ಯವಿಲ್ಲದೆ ಬೇರೆಯಾದಂತೆ,
ಇಂತೀ ಸ್ಥಲವನೆಯ್ದಿ, ನಿಃಸ್ಥಲವಾಗಬೇಕು.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಷಟ್ಸ್ಥಲ ಸಂಪೂರ್ಣ. ||೪೫೭||

೧೮೭೬

ನೀರ ನೆಳಲಿನಲ್ಲಿ ಒಂದು ಆರವೆ ಹುಟ್ಟಿತ್ತು:
ಅದು ಬೇರಿಲ್ಲದೆ, ಆ ಮರನ ಮೀರುವ ಕೊಂಬಿಲ್ಲದೆ,
ಕೊಂಬ ಮೀರುವ ಎಲೆಯಿಲ್ಲದೆ, ಎಲೆಯ ಮೀರುವ ಹೂವಿಲ್ಲದೆ,
ಹೂವ ಮೀರುವ ಕಾಯಿಯಿಲ್ಲದೆ,
ಇದು ಚೆನ್ನಾಗಿ ತಿಳಿದು ನೋಡಿ.
ಆ ನೀರು ಬೇರ ನುಂಗಿ, ಬೇರು ವೃಕ್ಷವ ನುಂಗಿ,
ಪರ್ಣ ಕುಸುಮವ ಕೊಂಡು, ಕುಸುಮ ಕಾಯವ ಕೊಂಡು,
ಕಾಯಿ ಹಣ್ಣಾಸು ಮೆದ್ದಲ್ಲಿ ಭಾವವಳಿಯಿತ್ತು.
ಇದನಾರು ಬಲ್ಲರು ? ನಿಃಕಳಂಕ ಮಲ್ಲಿಕಾರ್ಜುನಾ, ನೀನೆ ಬಲ್ಲೆ. ||೪೫೮||

೧೮೭೭

ನೀರ ಹೊಳೆಯಲ್ಲಿ ಹೋಗುತ್ತಿರಲಾಗಿ, ಅಲ್ಲಿ ಒಬ್ಬ ಸತ್ತು, ಬೇವುತ್ತಿರ್ದ.
ತಲೆ ಕಾಲು ಬೇಯದು. ಕೈ ಮುರುಟದು,
ಕಪಾಲ ಸಿಡಿಯದು. ಕೂದಲು ಉಳಿಯಿತ್ತು.
ಆ ಕೂದಲ ಮೊನೆಯಲ್ಲಿ ಮೂರು ಲೋಕ ಎಡೆಯಾಡುತ್ತದೆ,
ನಿಃಕಳಂಕ ಮಲ್ಲಿಕಾರ್ಜುನಾ. ||೪೫೯||

೧೮೭೮

ನೀರಿನ ಮೇಲಣ ತೆಪ್ಪ ಒಪ್ಪವಾಗಿ ಹೋಹುದು
ತೆಪ್ಪದ ಗುಣವೋ, ಅಪ್ಪುವಿನ ಗುಣವೋ ? ಮೇಲಿದ್ದು ಒತ್ತುವನ ಗುಣವೋ ?

ಇಂತೀ ಭೇದವ ಭೇದಿಸಿ, ನೀರ ಬಟ್ಟೆಯಲ್ಲಿ ಹೋಹವನ ಯುಕ್ತಿ.
ಇಷ್ಟದ ಪೂಜೆ, ದೃಷ್ಟದ ನಿಷ್ಠೆ,
ನಿಷ್ಠೆಯ ಶ್ರದ್ಧೆಯ ಸದಮಲದಲ್ಲಿ ತೊಳಗಿ ಬೆಳಗುವ ಬೆಳಗು.
ಆ ಕಳೆಯೆನ್ನಲ್ಲಿ ಕಾಂತಿ ಕಳೆದೋರೆ,
ಕರಣಂಗಳ ವೇಷದ ಪಾಶ ಹರಿಗು, ನಿಃಕಳಂಕ ಮಲ್ಲಿಕಾರ್ಜುನಾ. || ೪೬೦ ||

೧೮೭೯

ನೀರು ನೆನೆದುದ ಕಂಡೆ.
ಹೆಚ್ಚದ ಕುಂದದ ವಾರುಧಿ, ವಾರುಣೆಸಿ ಸೋರಿಹೋದುದ ಕಂಡೆ.
ಇಂತಿವನಾರಯ್ದು ನೋಡಲಾಗಿ,
ನೀರು ನೆನೆದುದಿಲ್ಲ, ವಾರುಧಿ ಸೋರಿದುದಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿಯೆ ಲೀಯವಾಗಬಲ್ಲಡೆ. || ೪೬೧ ||

೧೮೮೦

ನೀರು ನೇಣು ಭೂಮಿಯ ತಡಿಯ ಕುಂಭ ಮುಂತಾಗಿ ಬಂದಲ್ಲದೆ,
ಪಾತಾಳ ಜಲವೆಯ್ದದು ಧರೆಗೆ.
ಭಕ್ತಿ ಜ್ಞಾನ ವೈರಾಗ್ಯಂಗಳೆಂಬವು,
ಒತ್ತಿ ಬೆಳೆದ ಶರೀರದ ಪೃಥ್ವಿಯ ಪಜ್ತಿಯಲ್ಲಿ
ಹೊಯ್ದ ಉದಕ ಸಾರಾಯವಾಯಿತ್ತು.
ಸಸಿಗೆ ಸಸಿ ಬೆಳೆದು, ಕೊಯ್ದು ಒಕ್ಕಿ ಒಯ್ದ ಮತ್ತೆ
ಬಾವಿ ಬಿದ್ದಿತ್ತು, ನೇಣು ಹರಿಯಿತ್ತು, ಕುಂಭ ಒಡೆಯಿತ್ತು,
ಭೂಮಿ ಹಾಳಾಯಿತ್ತು, ಅಳೆವವ ಸತ್ತ.
ಆ ಬತ್ತ ಸಿಕ್ಕಿತ್ತು ಅರಮನೆಯಲ್ಲಿ.
ಸಿಕ್ಕಿದ ಬತ್ತವನುಂಡು ಮತ್ತರಾದರು, ಮರ್ತ್ಯದವರೆಲ್ಲರೂ ತುತ್ತ ನುಂಗಿದರು.
ಇತ್ತಲಿದ್ದು ಬದುಕಿದೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೬೨ ||

೧೮೮೧

ನೀರು ಪ್ರಳಯವಾದಲ್ಲಿ ತೋಡಲುಂಟೆ ಬಾವಿಯ ?
ಆರನರಿತು, ಮೂರ ತಿಳಿದು, ಬೇರೊಂದು ಇದೆಯೆಂದು ಲಕ್ಷಿಸಿದಲ್ಲಿ,
ಆ ಲಕ್ಷ ನಿರ್ಲಕ್ಷ್ಯವಾಗಬೇಕು, ನಿಃಕಳಂಕ ಮಲ್ಲಿಕಾರ್ಜುನಾ. || ೪೬೩ ||

೧೮೮೨

ನೀರೆಂತು ನೆನೆವುದೆಂದು ಬೆಸಗೊಂಡರೆ, ಹೇಳಬಹುದೆ ಅಯ್ಯಾ ?
ನಿರಾಳ ನಿರ್ಮಾಯ ಪರಶಿವನಲ್ಲಿ ಐಕ್ಯವಾದ ನಿಜಲಿಂಗೈಕ್ಯನ
ಉಪಮಿಸಲುಂಟೆ, ನಿಃಕಳಂಕ ಮಲ್ಲಿಕಾರ್ಜುನಾ ? || ೪೬೪ ||

೧೮೮೩

ನೀರೊಳಗಣ ಶಿಲೆಯ ಒಡೆಯರುಗಳೆಲ್ಲರೂ ಕೂಡಿ,
ಅದ ಊರಿ ನೆನೆಯಿತ್ತೆಂದಡೆ, ಅದು ಸಾರಾಯವಾಯಿತ್ತೆ ?
ಮೀರಿದ ಶರಣರೆಲ್ಲರೂ ಕೂಡಿ,
ಗುರು ಕೊಟ್ಟ ಲಿಂಗವ ಸೇರುವ ಸಾರಾಯವ ಬಲ್ಲರೆ ?
ಹುತ್ತವ ಬಡಿದಡೆ ಹಾವು ಸತ್ತುದುಂಟೆ ?
ಇದು ನಿಶ್ಚಯವೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೬೫ ||

೧೮೮೪

ಸೂಲೆಳೆಯ ಗಾತ್ರದ ಮರದಲ್ಲಿ, ಬೆಟ್ಟದ ತೋರದ ಕಾಯಿ ಫಲವಾಯಿತ್ತು.
ಅದು ಹಣ್ಣಾಗದು, ನೋಡಿರಯ್ಯಾ ಇನ್ನೆಂತೊ ?
ಏರಬಾರದು ಮರನ, ಕೊಯ್ದು ಹಿಡಿಯಬಾರದು ಕಾಯ.
ಈ ಭೇದವನರಿದು ಮರನನೇರದೆ, ಕಾಯ ಮುಟ್ಟದೆ,
ಹಣ್ಣಿನ ರುಚಿಯ ಚೆನ್ನಾಗಿ ಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗ ತನ್ನಲ್ಲಿ ನಿರ್ಲೇಪಸಂಬಂಧಿ. || ೪೬೬ ||

೧೮೮೫

ನೆಟ್ಟ ಲಿಂಗವ ಪ್ರತಿಷ್ಠೆಯೆಂಬರು.
ಹುಟ್ಟಿದ ಲಿಂಗವ ಸ್ವಯಂಭುವೆಂಬರು.
ಈ ಉಭಯದಲ್ಲಿ, ಸ್ವಯಂಭು ಪ್ರತಿಷ್ಠೆಯನರಿವುತ್ತಿರ್ದವರ ಕಂಡು,
ಮರ್ತ್ಯದ ಮಹಾಜನಂಗಳು ಹೊತ್ತುಹೋರಲೇಕೆ ?
ಎನಗೆ ಇಷ್ಟವ ಕೊಟ್ಟ ಗುರು, ಬಟ್ಟೆಯ ಹೇಳಿದುದಿಲ್ಲ.
ಪೃಥ್ವಿಯೊಳಗಣ ಮುತ್ತರದ ಅಚ್ಚಿಗವ ಬಿಡಿಸಾ,
ನಿಃಕಳಂಕ ಮಲ್ಲಿಕಾರ್ಜುನಾ. || ೪೬೭ ||

೧೮೮೬

ನೆಲ ತಳವಾರನಾದಡೆ, ಕಳ್ಳಂಗೆ ಹೊಗಲೆಡೆಯುಂಟೆ ?
ಸರ್ವಾಂಗಲಿಂಗಿಗೆ ಅನರ್ಪಿತವುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೪೬೮ ||

೧೮೮೭

ನೇಮಕ್ಕೊಳಗಾದ ಬ್ರಹ್ಮ, ತಪಕ್ಕೊಳಗಾದ ವಿಷ್ಣು.
ಜಪಕ್ಕೊಳಗಾದ ರುದ್ರ, ನಿತ್ಯಕ್ಕೊಳಗಾದ ಈಶ್ವರ.
ಉಪಚಾರಕ್ಕೊಳಗಾದ ಸದಾಶಿವ, ಶೂನ್ಯಕ್ಕೊಳಗಾದ ಪರಮೇಶ್ವರ.
ಇಂತಿವರೆಲ್ಲರೂ ಪ್ರಳಯಕ್ಕೊಳಗಾದರು. ನಿಃಕಳಂಕ ಮಲ್ಲಿಕಾರ್ಜುನಾ. || ೪೬೯ ||

೧೮೮೮

ನೇಮವ ಮಾಡುವರೆಲ್ಲರೂ ಬ್ರಹ್ಮಪಾಶಕ್ಕೊಳಗಾದರು.
ನಿತ್ಯವ ಮಾಡುವರೆಲ್ಲರು ವಿಷ್ಣುಪಾಶಕ್ಕೊಳಗಾದರು.
ಜಪವ ಮಾಡುವರೆಲ್ಲರು ರುದ್ರಪಾಶಕ್ಕೊಳಗಾದರು.
ತಪವ ಮಾಡುವರೆಲ್ಲರು ರತಿಪಾಶಕ್ಕೊಳಗಾದರು.
ಇಂತಿವು ಮೊದಲಾದ ನಾನಾ ಕೃತ್ಯವ ಮಾಡುವ
ಸಂಕಲ್ಪಜೀವಿಗಳೆಲ್ಲರು ನಾನಾ ಯೋನಿಸಂಭವದಲ್ಲಿ ಬರ್ಪುದಕ್ಕೆ
ತಮ್ಮ ತಾವೇ ಲಕ್ಷವಿಟ್ಟುಕೊಂಡರು.
ಅಲಕ್ಷ ಅತೀತ ಅನಾಮಯ ಅಮಲ ಅದ್ವಂದ್ವ
ಕಾಲಭೇದಚ್ಛೇದನಕುಠಾರ ನಾನಾ ಶಾಸ್ತ್ರ ನಿರ್ಲೇಪ
ಸಕಲ ಕೃತ್ಯ ಹೇತುದಾವಾನಲ ನಿಃಕಾರಣಮೂರ್ತಿ ಸಹಜಭರಿತಂಗೆ
ಹಿಡಿಯಲ್ಲಿಲ್ಲಾಗಿ ಬಿಡಲಿಲ್ಲ, ಅರಿಯಲಿಲ್ಲಾಗಿ ಅರಿದೆನೆಂಬ ತೆರನಿಲ್ಲ.
ಮತ್ತೆ ಕುರುಹಿನಿಂದ ಕಂಡ ಅರಿಕೆ ಇನ್ನೇಕೆ ?
ಸಿಪ್ಪೆಯ ಕಳೆದು, ಸುಭಿಕ್ಷವ ಸೇವಿಸಿ, ಬಿತ್ತನುಳಿದೆ,
ನಿತ್ಯವ ಪರಿದು, ಅನಿತ್ಯವ ಕಳೆದು,
ಮತ್ತೇನು ಎನ್ನದಿರ್ಪುದೆ ಲಿಂಗೈಕ್ಯವು, ನಿಃಕಳಂಕ ಮಲ್ಲಿಕಾರ್ಜುನಾ. || ೪೭೦ ||

೧೮೮೯

ಪಂಚಭೌತಿಕದಿಂದ ಬಂದ ತನುವಿನಲ್ಲಿ, ಪಂಚಮುಖವನರಿವುದೆ ದೃಷ್ಟ.
ಸಂಚಿತವ ಹರಿವ ವಸ್ತುವನರಿವುದಕ್ಕೆ, ಸಂಚಾರ ಹಿಂಗಿ ಅರಿವುದೆ ದೃಷ್ಟ.
ಈ ಉಭಯಸಂಚವನರಿದು ಮುಂಚಬಲ್ಲಡೆ, ಆತನೆ ಲಿಂಗೈಕ್ಯ,
ನಿಃಕಳಂಕ ಮಲ್ಲಿಕಾರ್ಜುನಾ. || ೪೭೧ ||

೧೮೯೦

ಪಂಚಮುಖದ ಗಿರಿಯ ಗಹ್ವರದಲ್ಲಿ,
ಮುಂಚಿದರ್ಕೈದುವ ಹುಲಿಗಳ ಕಂಡೆ.
ಆ ಹುಲಿಯೊಂದಕ್ಕೆ ಐದು ಬಾಯಿ.
ಆ ಬಾಯೊಳಗೆ ಹೊಕ್ಕು ಹುಲಿಯ ಕುಲಗೆಡಿಸಬೇಕು,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯಬಲ್ಲಡೆ. || ೪೭೨ ||

೧೮೯೧

ಪಟ ಬಾಲಸರವು ಕೂಡಿರ್ದಡೇನು ?
ಸೂತ್ರ ಕಿಂಚಿತ್ತು ತಪ್ಪಿದಡೆ ಖೇಚರತ್ವದಲ್ಲಿ ಆಡಲರಿಯದಂತೆ,

ಹೊರಗಣ ಮಾತಿನಿಂ ಗುರುವೆಂದು ಶರಣೆಂದಡೇನಾಯಿತ್ತು ?
ಕೈಯಲ್ಲಿ ಲಿಂಗವ ಹಿಡಿದುಕೊಂಡು, ಕಣ್ಣಿನಲ್ಲಿ ನೋಡಿ.
ಮನಮುಟ್ಟವಿರ್ದಡೇನಾಯಿತ್ತು ?
ಖ್ಯಾತಿ ಲಾಭಕ್ಕೆ ಜಂಗಮಕ್ಕೆ ಧನವ ಕೊಟ್ಟಡೇನಾಯಿತ್ತು?
ಇದು, ಉಸಿರ ಹಿಡಿದಡೆ, ಪ್ರಾಣಂಗಳೆಲ್ಲವೂ ಮುಚ್ಚುವ ತೆರನಂತೆ,
ಮಹಾಘನವನರಿದಲ್ಲಿಯೆ ತ್ರಿವಿಧವೂ ಸಮರ್ಪಣ.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸ್ಥಲನಿರ್ದೇಶ. ॥ ೪೭೩ ॥

೧೮೯೨

ಪಯವ ಕೂಡಿದ ನೀರಿನಂತೆ, ಮಧುರವ ಕೂಡಿದ ಅಂಬುಸಿಯಂತೆ,
ತೈಲವ ಕೂಡಿದ ಉದಕದಂತೆ,
ನೋಡಿ ಏರ ಕಾಸಲಿಕ್ಕೆ ಅಲ್ಲಿಯೆ ಅರತಂತೆ, ಸ್ಥಲ ಬೇರಾಗಲಿಲ್ಲ.
ಆ ಅರಿವು ಸ್ಥಲಂಗಳನರಿತು, ಉಭಯ ತಲೆದೋರದಿದ್ದಲ್ಲಿಯೆ
ನಿಃಕಳಂಕ ಮಲ್ಲಿಕಾರ್ಜುನನು ಷಡುಸ್ಥಲ ಸಂಪೂರ್ಣನು. ॥ ೪೭೪ ॥

೧೮೯೩

ಪರಬ್ರಹ್ಮವ ನುಡಿಯುತ್ತ, ಪರದ್ರವ್ಯವ ಕೈಯಾಂತು ಬೇಡುತ್ತ,
ಮಾತಿನಲ್ಲಿ ಶೂನ್ಯತನ, ಮನದಲ್ಲಿ ಆಶೆಯೆಂಬ ತೊರೆ
ಹಾಯಬಾರದೆ ಹರಿವುತ್ತಿದೆ.
ಮತ್ತೆಂತಯ್ಯ ಪರಬ್ರಹ್ಮದ ಮಾತು ?
ಇದು ಎನಗೆ ಹೇಸಿಕೆಯಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ॥ ೪೭೫ ॥

೧೮೯೪

ಪರರ ಕಾಡಿ ಬೇಡಿ ಮಾಡೆಹೆನೆಂಬ ಮೋಡಿ ಏತಕ್ಕೆ ?
ಕಾಡ ಸೊಪ್ಪಾದಡೇನು, ಬೇಡದೆ ಉಂಬ ಆರೂಢಂಗೆ
ಮೂರಡಿಗೊಮ್ಮೆ ನಮೋ ನಮೋ ಎಂಬೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೪೭೬ ॥

೧೮೯೫

ಪರುಷದ ಪುತ್ಥಳಿಯ ಇರವಿನಂತೆ, ಪೃಥ್ವಿಯ ನುಂಗಿದ ಉದಕದಂತೆ,
ಅನಲ ನುಂಗಿದ ತಿಲದಂತೆ, ವರುಣನ ಕಿರಣ ಕೊಂಡ ದ್ರವದಂತೆ,
ಇನ್ನೇನನುಪಮಿಸುವೆ ? ಇನ್ನಾರಿಗೆ ಹೇಳುವೆ ?
ನೋಡುವಡಕ್ಕೆ ಕಣ್ಣಿಲ್ಲ, ಕೇಳುವಡಕ್ಕೆ ಕಿವಿಯಿಲ್ಲ,
ಕೀರ್ತಿಸುವಡಕ್ಕೆ ಬಾಯಿಲ್ಲ, ಮನೂ ಎಂಬುವಡಕ್ಕೆ ತೆರಹಿಲ್ಲ,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯವು. ॥ ೪೭೭ ॥

೧೮೯೬

ಪಾದತೀರ್ಥವ ಕೊಂಡಲ್ಲಿ ಬ್ರಹ್ಮಂಗೆ ಹೊರಗು.
ಪ್ರಸಾದವ ಕೊಂಡಲ್ಲಿ ವಿಷ್ಣುವಿಂಗೆ ಹೊರಗು.
ಮಹದ ಒಳಗನರಿದಲ್ಲಿ ರುದ್ರಂಗೆ ಹೊರಗು.
ಇಂತೀ ಭಾವಭೇದವನರಿಯದೆ,
ಹುತ್ತವ ಬಡಿದಡೆ ಸರ್ಪ ಸಾಯಬಲ್ಲುದೆ ?
ಭಕ್ತರೆಂದಡೆ ಶಿವನೊಪ್ಪುಗೊಂಬನೆ, ನಿಶ್ಚಟರನಲ್ಲದೆ ?
ನಿಃಕಳಂಕ ಮಲ್ಲಿಕಾರ್ಜುನನವರ ಬಲ್ಲನಾಗಿ ಒಲ್ಲನು. || ೪೭೮ ||

೧೮೯೭

ಪಾದೋಕದದಿಂದ ಪದಂ ನಾಸ್ತಿಯಾಗಿರಬೇಕು.
ಲಿಂಗೋದಕದಿಂದ ಅಂಗ ಮಂಗಳಮಯವಾಗಬೇಕು.
ಪ್ರಸಾದೋದಕದಿಂದ ಆತ್ಮಭಾವಕ್ಕೆ ಬೀಜವಿಲ್ಲದಿರಬೇಕು.
ಒಂದನಳಿದು, ಒಂದ ಕಂಡೆಹೆನೆಂದಡೆ,
ತಾವು ತಾವು ನಿಂದಲ್ಲಿಯೆ ನಿರುತರು.
ಎನಗಾ ಉಭಯದ ಬಂಧವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೪೭೯ ||

೧೮೯೮

ಪಾದೋದಕ ಪ್ರಸಾದೋದಕ ಲಿಂಗೋದಕಗಳಲ್ಲಿ,
ಕೊಂಬ ಕೊಡುವ ಇಂಬಿಡುವ ಭೇದವನರಿಯಬೇಕು.
ಪಾದೋದಕವ ಲಿಂಗಕ್ಕೆ ಮಜ್ಜನಕ್ಕೆರೆಯಲಿಲ್ಲ.
ಪ್ರಸಾದೋದಕವ ಸೂಸಲಿಲ್ಲ, ಲಿಂಗೋದಕವ ತನ್ನಂಗಕ್ಕೆ ಕೊಳಲಿಲ್ಲ.
ಅದೆಂತೆಂದಡೆ :
ಪಾದಕ್ಕೂ ಲಿಂಗಕ್ಕೂ ಸಂಬಂಧವಿಲ್ಲವಾಗಿ,
ಆ ಪ್ರಸಾದೋದಕಕ್ಕೂ ಆತ್ಮಕ್ಕೂ ಸಂಬಂಧವಿಲ್ಲವಾಗಿ,
ಆ ಲಿಂಗೋದಕಕ್ಕೂ ಲಿಂಗಕ್ಕೂ ಸಂಬಂಧವಿಲ್ಲವಾಗಿ.
ಇಂತೀ ತ್ರಿವಿಧಂಗಳಲ್ಲಿ ಕೊಡಬಲ್ಲಡೆ, ಕೊಳಬಲ್ಲಡೆ,
ಆದಿ ಆಧಾರವನರಿತು, ಅನಾದಿ ಪೂರ್ವಯುಕ್ತವ ತಿಳಿದು,
ಗುರುವಾರು ಲಿಂಗವಾರು ಜಂಗಮವಾರೆಂಬುದ ತಿಳಿದು,
ಪೂರ್ವ ಉತ್ತರಂಗಳಲ್ಲಿ ನಿಶ್ಚಯಿಸಿ,
ಪಾದೋದಕವಾರಿಗೆ, ಪ್ರಸಾದೋದಕವಾರಿಗೆ ಲಿಂಗೋದಕವಾರಿಗೆಂಬುದನರಿತು,
ಮರಕ್ಕೆ ನೀರನೆರೆದಲ್ಲಿ ಬೇರಿಗೋ, ಮೇಲಣ ಕೊಂಬಿಗೋ ?
ಎಂಬ ಭೇದವ ಕಂಡು,

ಗುರುಲಿಂಗಜಂಗಮ ಮೂರೊಂದೆನಬೇಕು.
ಹೀಗಲ್ಲದೆ ಕಾಬವರ ಕಂಡು ಏಗೆಯ್ದು ಮಾಡಿದಡೆ,
ಅದು ಭವಭಾರಕ್ಕೊಳಗು, ನಿಃಕಳಂಕ ಮಲ್ಲಿಕಾರ್ಜುನಾ. || ೪೮೦ ||

೧೮೯೯

ಪಾದೋದಕ ಮಂಡೆಗೆ ಮಜ್ಜನ, ಪ್ರಸಾದೋದಕ ಜಿಹ್ವೆಗೆ ಭಾಜನ.
ಲಿಂಗೋದಕ ಅಂಗಕ್ಕೆ ಲೇಪನ.
ಈ ಮೂರು ಮುನ್ನಿನ ಅನಾದಿಯ ಲಿಂಗ ಸೋಂಕು.
ಆದಿಯಿಂದತ್ತ ನೀವೆ ಬಲ್ಲಿರಿ, ನಾನರಿಯೆ,
ನಿಃಕಳಂಕ ಮಲ್ಲಿಕಾರ್ಜುನಾ. || ೪೮೧ ||

೧೯೦೦

ಪಾಪ ಪುಣ್ಯವಿಲ್ಲವೆಂದು ನುಡಿವ ಕಾಕರ ಮಾತ ಕೇಳಲಾಗದು.
ಅವರು ಇದಿರಿಗೆ ನಿರಾಶೆಯ ಹೇಳಿ,
ತಾವು ಆಶೆಯೆಂಬ ಪಾಶದಲ್ಲಿ ಕಟ್ಟುವಡೆವ ವೇಷಧಾರಿಗಳ ಕಂಡು,
ನಾಚಿತ್ತೆನ್ನ ಮನ, ನಿಃಕಳಂಕ ಮಲ್ಲಿಕಾರ್ಜುನಾ. || ೪೮೨ ||

೧೯೦೧

ಪಾಪ ಪುಣ್ಯವೆಂದು ಹೇಳುವ ಕೂಪರಪ್ಪ ಭಕ್ತರು ಕೇಳಿರಣ್ಣಾ.
ಎನಗೆ ನಾ ಕಾಣದೆ ನಿಂದಿಸುವವನಲ್ಲ, ಕಂಡು ನುಡಿವವಲ್ಲ.
ಅಂದಗಾರಿಕೆಯಲ್ಲಿ ನುಡಿವವನಲ್ಲ.
ಉಂಬಾಗ ಜಂಗಮವೆಂದು, ಸಂಜೆಗೆ ಕಳ್ಳನೆಂದು ಹಿಂಗಿ ನುಡಿವನವನಲ್ಲ.
ವಂದಿಸಿ ನಿಂದಿಸುವ ಸಂದೇಹದವನಲ್ಲ.
ಎನಗೆ ಅಂದಂದಿಗೆ ನೂರಿಪ್ಪತ್ತು ಸಂದಿತ್ತು.
ಎನ್ನ ನಿನ್ನ ಬಂಧವ ಹೇಳಿರಣ್ಣಾ.
ದ್ವಿತೀಯ ಶಂಭು ಬಸವಣ್ಣ ಮೊದಲಾದ ಅಸಂಖ್ಯಾತ ಪ್ರಮಥಗಣಂಗಳು.
ನೀವು ಹೋದ ಹೊಲಬಿನ ಹಾದಿಯಲ್ಲದೆ ಎನಗೊಂದು ಹಾದಿಯಿಲ್ಲ.
ಬೊಂಬೆಗೆ ಸ್ವತಂತ್ರವಿಲ್ಲ, ಆಡಿಸುವ ಸೂತ್ರಧಾರಿಗಲ್ಲದೆ.
ಐದರಲ್ಲಿ ಹುದುಗಿದ, ಇಪ್ಪತ್ತೈದರಲ್ಲಿ ಕೂಡಿದ,
ಒಂಬರಲ್ಲಿ ಉಳಿದ, ನಿಜಸಂದಿಯಲ್ಲಿ ನಿಂದು ವಂದನೆಯ ಮಾಡುತ್ತ ಇದ್ದೆನೆ.
ಇದರಂದವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೪೮೩ ||

೧೯೦೨

ಪಿಂಡ ಪಿಂಡಸ್ಥಲ, ಭಾವ ಭಾವಸ್ಥಲ, ಜ್ಞಾನ ಜ್ಞಾನಸ್ಥಲ.
ಒಂದು ಕೆಂಡದ ಬುಡದಲ್ಲಿ ನಾನಾ ಉರಿ.

ದಿಕ್ಕುದಿಕ್ಕಿನಲ್ಲಿ ಹತ್ತಿ ಬೇವುದ ಕಂಡು ಲಕ್ಷಿಸಿದ ಮತ್ತೆ,
ಒಂದು ಮೂರಾಗಿ, ಮೂರು ಆರಾಗಿ,
ಇಂತೀ ನಾನಾ ಭೇದಂಗಳ ತಾ ಕಂಡ ಮತ್ತೆ,
ಬಾಗಿಲವಳಿ ಹೊಳಹಿನಂತೆ ಎಯ್ದುವುದು ಒಂದೇ ದಾರಿ.
ಆ ಭೇದವನರಿತಲ್ಲಿ, ಅಭೇದ್ಯಮೂರ್ತಿ,
ಏಕಛತ್ರಕ್ಕೆ ನೀವೆ ಅರಸು, ನಿಃಕಳಂಕ ಮಲ್ಲಿಕಾರ್ಜುನಾ. ||೪೮೪||

೧೯೦೩

ಪಿಂಡ ಪಿಂಡಸ್ಥಲವಾದಲ್ಲಿ ಆತ್ಮನೆರಡುಂಟೆ ?
ಕರಚರಣ ಅವಯವಾದಿಗಳು ಹಲವಲ್ಲದೆ, ಆತ್ಮ ಹಲವುಂಟೆ ?
ಅದು ಏಕರೂಪು ವರುಣನ ಕಿರಣದಂತೆ.
ನಿನ್ನ ನೀ ತಿಳಿ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ. ||೪೮೫||

೧೯೦೪

ಪುಷ್ಪಗಂಧದಂತೆ ಪ್ರಾಣಲಿಂಗಭಾವ.
ನೀರು ಗಂಧದಂತೆ ಇಷ್ಟಲಿಂಗಭಾವ.
ಇಂತೀ ನಾಲ್ಕರ ಯೋಗ ಕೂಡಿದಲ್ಲಿ ಶರಣಸ್ಥಲಭಾವ.
ಇಂತೀ ಐದರ ಭಾವವ ಅವಗವಿಸಿ ನಿಂದುದು,
ಐಕ್ಯಸ್ಥಲಂಗೆ ಅವಧಿಗೊಡಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೪೮೬||

೧೯೦೫

ಪೂಜಿಸುವಲ್ಲಿ ಹೂ ನೀರು ಮುಂತಾದ ಷೋಡಶ ಉಪಚರಿಯಕ್ಕೆ ನಿಲ್ಲ.
ವೇದದ ಕಡೆ, ಶಾಸ್ತ್ರದ ಮೊದಲು, ಪುರಾಣದ ಸುದ್ದಿಯ ಸುಮ್ಮಾನಂಗಳಲ್ಲಿ
ವಚನವ ರಚನೆಗೆ ನಿಲ್ಲ, ಮಹಾಜ್ಞಾನಿಗಳಲ್ಲಿಯಲ್ಲದೆ.
ಘಟದಲ್ಲಿ ವೈಭವ, ಆತ್ಮನಲ್ಲಿ ವಿರೋಧ, ಆಚಾರದಲ್ಲಿ ಕರ್ಕಶ.
ಇಂತೀ ನಿಹಿತಾಚಾರಂಗಳಲ್ಲಿ ನಿರತನಾಗಿ,
ಕಾಯಕ ಕರ್ಮ, ಜೀವನ ಭಾವ, ಜ್ಞಾನದ ಒಳಗನರಿಯಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. ||೪೮೭||

೧೯೦೬

ಪೂಜೆಯ ಮಾಡುವಲ್ಲಿ, ಪುಣ್ಯವನರಿಯದೆ ಮಾಡಬೇಕು.
ಹೆಣ್ಣು ಹೊನ್ನು ಮಣ್ಣು ಕೊಡುವಲ್ಲಿ, ಹಮ್ಮುಬಿಮ್ಮಿಲ್ಲದಿರಬೇಕು.
ಎರಡು ತಲೆದೋರದೆ, ಒಂದು ನಾಮ ನಷ್ಟವಾಗಿ,
ಇಂತಿವ ಕಳೆದುಳಿದ ಮತ್ತೆ ಹೋದ ಹೊಲಬಿಲ್ಲ.
ಕೊಟ್ಟು ಕೊಂಡೆಹೆನೆಂಬ ಕೊಳುಮಿಡಿಯಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ ||೪೮೮||

### ೧೯೦೭

ಪೂಜೆಯಲ್ಲಿ ಮುಕ್ತನೆಂದು ಜ್ಞಾನವ ಮರೆಯಲಿಲ್ಲ.
ಜ್ಞಾನವನರಿತೆನೆಂದು ಪೂಜೆಯ ಬಿಡಲಿಲ್ಲ.
[ಈ ಉಭಯದ] ಭೇದ, ಬೆಳಗಿನಲ್ಲಿ ಉದಯಿಸಿದ ಕಳೆಯಂತೆ,
ಆ ಕಳೆ ಬೆಳಗನೊಳಕೊಂಡಂತೆ,
ಉಭಯವಿರಹಿತವಾದಲ್ಲಿ ನಿಃಕಳಂಕ ಮಲ್ಲಿಕಾರ್ಜುನಾ. || ೪೮೯ ||

### ೧೯೦೮

ಪೂಜೆಯಿಂದ ತಾ ಪೂಜ್ಯವಂತನಾದೆಹೆನೆಂದು ಮಾಡುವನ ಇರವು,
ಹೊಲತಿ ತನ್ನ ಹೊಲೆಯ ಮರೆದು,
ಶುದ್ಧನೀರ ಮಿಂದೆನೆಂದು ಕೆಲಬರ ಮುಟ್ಟುವಂತೆ,
ಆ ವಿಧಿ ನಿಮಗಾಯಿತ್ತು.
ತ್ರಿಕರಣಶುದ್ಧವಿಲ್ಲದ ಪೂಜೆ[ಯ]ವರು
ಕೆಟ್ಟ ಕೇಡಿಂಗೆ ಇನ್ನೇವೆ, ನಿಃಕಳಂಕ ಮಲ್ಲಿಕಾರ್ಜುನಾ ? || ೪೯೦ ||

### ೧೯೦೯

ಪೂರ್ವತತ್ವ ಬಿಟ್ಟುದು ಭಕ್ತಸ್ಥಲ,
ಮಧ್ಯದ ಭಾವವ ಬಿಟ್ಟುದು ಮಾಹೇಶ್ವರಸ್ಥಲ.
ತ್ರಿವಿಧದ ಕೂಟವ ಬಿಟ್ಟುದು ಪ್ರಸಾದಿಸ್ಥಲ.
ಗಮನ ನಿರ್ಗಮನವ ಬಿಟ್ಟುದು ಪ್ರಾಣಲಿಂಗಿಸ್ಥಲ.
ಶ್ರುತದಲ್ಲಿ ಕೇಳಿ ಕೇಳದಂತೆ, ದೃಷ್ಟದಲ್ಲಿ ಕಂಡು ಕಾಣದಂತೆ,
ಅನುಮಾನದಲ್ಲಿ ಅರಿದು ಅರಿಯದಂತೆ ಇದ್ದುದು ಶರಣಸ್ಥಲ.
ವಿರಳ ಅವಿರಳವೆಂಬ ಸುಳುಹು ಸೂಕ್ಷ್ಮಂಗಳು ನಿಂದಲ್ಲಿ ಐಕ್ಯಸ್ಥಲ.
ಇಂತೀ ಸ್ಥಲಂಗಳಲ್ಲಿ ಸ್ವೀಕರಿಸಿ, ಆರೋಪಿಸಿ,
ಪೂರ್ವಕಕ್ಷೆಯ ಕಂಡು, ಮಧ್ಯದ ಕಕ್ಷೆಯಲ್ಲಿ ನಿಂದು,
ಉತ್ತರರಕ್ಷೆಯ ಕೂಡಿದಲ್ಲಿ,
ಆರುಸ್ಥಲದ ಸೋಂಕಿಲ್ಲ, ಮೂರುಸ್ಥಲದ ಮುಟ್ಟಿಲ್ಲ.
ಬೇರೊಂದು ಸ್ಥಲವೆಂದು ಲಕ್ಷಿಸುವುದಕ್ಕೆ ಗೊತ್ತಿಲ್ಲ.
ಅದು ಉರಿಯು ಬುಡ ತುದಿಯಂತೆ ಕತ್ತುವುದು ಪೂರ್ವವಾಗಿ.
ಮೇಲೆ ಹತ್ತಿ ಉರಿವುದು ಉತ್ತರವಾಗಿ.
ಆ ಉಭಯದ ಗೊತ್ತು ನಿಂದಲ್ಲಿ, ಸ್ಥಲ ನಿಃಸ್ಥಲವಾಯಿತ್ತು.
ನಿಃಕಳಂಕ ಮಲ್ಲಿಕಾರ್ಜುನ ದೃಷ್ಟಕ್ಕೆ ಗೋಚರವಾದನು. || ೪೯೧ ||

೧೯೧೦

ಪೂರ್ವಧಾತುವಿನ ಮೋಹ, ಉತ್ತರಧಾತುವಿನ ನಿರ್ಮೋಹ,
ಉಭಯದ ಕಕ್ಷೆಯ ತಿಳಿದು ಅರಿದಲ್ಲಿ,
ಅರಿದು ಮರೆದಲ್ಲಿ, ಮತ್ತೇತರ ದರಿಸಿನ ?
ಇಂತೀ ಗುಣವ ಸಂದೇಹಕ್ಕೆ ಇಕ್ಕಿ, ಬೇರೊಂದರಲ್ಲಿ ನಿಂದು ಕಂಡೆಹೆನೆಂದಡೆ,
ಉಭಯಲಿಂಗದಂಗ ಒಂದೂ ಇಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೪೯೨ ||

೧೯೧೧

ಪೂರ್ವವನಳಿದು ಪುನರ್ಜಾತನ ಮಾಡಿದೆವೆಂಬಿರಿ.
ಪೂರ್ವವನಳಿದುದಕ್ಕೆ ಭವ ಹಿಂಗಬೇಕು.
ಪುನರ್ಜಾತನಾದ ಮತ್ತೆ ಪುನರಪಿ ಇಲ್ಲದಿರಬೇಕು.
ಹೀಂಗಲ್ಲದೆ ಗುರುಕರಜಾತನಾಗಬಾರದು.
ತಾನರಿದು ಸರ್ವೇಂದ್ರಿಯವ ಮರೆದು, ಅಳಿವು ಉಳಿವು ಉಭಯವ ಪರಿದ
ಸುಖನಿಶ್ಚಯ ಜ್ಯೋತಿರ್ಮಯ ಪ್ರಕಾಶಂಗೆ,
ಪಿಂಡದ ಜನ್ಮವ ಕಳೆದುಳಿಯಬೇಕು.
ಹೀಂಗಲ್ಲದೆ ಗುರುಸ್ಥಲ ಇಲ್ಲ.
[ತ್ರಿವಿಧಕ್ಕೋಲು], ಅದಾರಿಗೆ ದೃಷ್ಟ ?
ಇನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ. || ೪೯೩ ||

೧೯೧೨

ಪೃಥ್ವಿ ಅಪ್ಪು, ಅಗ್ನಿಯ ಘಟ.
ವಾಯು ಆಕಾಶ, ಅಗ್ನಿಯ ಪ್ರಾಣ.
ಆ ಅಗ್ನಿ ಜಗದ ಜೀವ.
ಇಂತೀ ಪಂಚತತ್ವವ ಧರಿಸಿ, ಉರಿಲಿಂಗವಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೪೯೪ ||

೧೯೧೩

ಪೃಥ್ವಿ ಅಪ್ಪು ತೇಜ ವಾಯು ಆಕಾಶಂಗಳು ತಲೆದೋರುವುದಕ್ಕೆ ಮುನ್ನವೆ,
ಯುಗಜುಗಂಗಳು ಪ್ರಮಾಣಿಸುವುದಕ್ಕೆ ಮುನ್ನವೆ,
ನಾಲ್ಕು ವೇದ ಹದಿನಾರುಶಾಸ್ತ್ರ ಇಪ್ಪತ್ತೆಂಟು ದಿವ್ಯಪುರಾಣಂಗಳು
ಕುರುಹುಗೊಳ್ಳುವುದಕ್ಕೆ ಮುನ್ನವೆ,
ನಿರಾಳ ಸುರಾಳವೆಂಬ ಬಯಲು ಅವಗವಿಸುವುದಕ್ಕೆ ಮುನ್ನವೆ,
ಬ್ರಹ್ಮಾಂಡವೆಲ್ಲಿ ಆಯಿತ್ತು ? ವಿಷ್ಣುವಿನ ಚೇತನ ಎಲ್ಲಿ ಹುಟ್ಟಿತ್ತು ?

ಮಹಾರುದ್ರನ ದ್ವೇಷ ಎಲ್ಲಿ ಹುಟ್ಟಿ, ಎಲ್ಲಿ ಅಡಗಿತ್ತು ಹೇಳಾ ?
ನಾದಬಿಂದುಕಳೆಗೆ ಅತೀತವಪ್ಪ ಲಿಂಗವ ಭೇದಿಸಿ ವೇಧಿಸಲರಿಯವೆ.
ಭಾವಭ್ರಮೆಯಿಂದ ನಾನಾ ಸಂದೇಹಕ್ಕೆ ಒಳಗಾಗಿ,
ಜೀವ ಪರಮನ ನೆಲೆಯ ಕಂಡೆಹೆನೆಂದು ಆವಾವ ಠಾವಿನಲ್ಲಿ ಕರ್ಕಶಗೊಂಬವಂಗೆ,
ಪ್ರಾಣಲಿಂಗಿಯೆಂಬ ಭಾವ ಒಂದೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೪೯೫||

೧೯೧೪

ಪೃಥ್ವಿ ಅಪ್ಪು ತೇಜ ವಾಯು ಆಕಾಶದಿಂದ
ಹೊಂದುವ, ಹುಟ್ಟುವ ದೇಹದ ಅಂದಗಾರಿಕೆಯಲ್ಲಿ ಬಂದುದನರಿಯು.
ಬಂದಂತೆ ಹಿಂಗಿತೆಂದು ಇರು.
ಮುಂದಣ ನಿಜಲಿಂಗವನರಿಯಾ, ನಿಃಕಳಂಕ ಮಲ್ಲಿಕಾರ್ಜುನಾ. ||೪೯೬||

೧೯೧೫

ಪೃಥ್ವಿ ಅಪ್ಪು ತೇಜ ವಾಯು ಆಕಾಶವೆಂಬ
ಪಂಚಭೌತಿಕದ ಜಗದುತ್ಪತ್ಯವೆಂಬುದು ಹುಸಿಮಾತು.
ನಾನೆಂಬುವೆ ಐದು. ಆ ಐದರಿಂದ ಒದಗಿದ ಜಗ,
ಲಯವಾದ ಮತ್ತೆ ಜಗವಿಲ್ಲವಾಗಿ.
ತನ್ನ ಗುಣವೆ ಪೃಥ್ವಿ, ತನ್ನ ಗುಣವೆ ಅಪ್ಪು,
ತನ್ನ ಗುಣವೆ ವಾಯು, ತನ್ನ ಗುಣವೆ ಆಕಾಶ.
ತನ್ನಿಂದನ್ಯವಪ್ಪುದೊಂದಿಲ್ಲವಾಗಿ.
ಅದಕ್ಕೆ ದೃಷ್ಟ: ಮರ್ಕಟ ದರ್ಪಣಸ್ಥಾನವೆಂದರಿವುದು.
ಆ ಉಚಿತ ಬೀಜಕ್ಕುಚಿತವಪ್ಪುದೆ ಅದಕ್ಕೆ ದೃಷ್ಟ.
ಪರುಷದ ಗಿರಿಯಲ್ಲಿ ಕಬ್ಬುನದ ಮೊರಡಿಯುಂಟೆ ?
ಕ್ಷೀರ ಜಲಧಿಯಲ್ಲಿ ಕ್ಷಾರಜಲ ಸ್ವಾಪ್ಯವುಂಟೆ ?
ಕಲ್ಪದ್ರುಮದಗ್ರದಲ್ಲಿ ದತ್ತೂರದ ಫಲವುಂಟೆ ?
ನೆರೆ ಸತ್ಯನಲ್ಲಿ [ಹಾ]ರುವ ಮ[ನದವನು]ಂಟೆ ?
ಇಂತಿವನರಿದು ನಿಃಶಬ್ದನಾದ ಮಹಾತ್ಮಂಗೆ
ಗುರುವೆಂದವರು, ಲಿಂಗವೆಂದರು, ಜಂಗಮವೆಂದರು.
ಸಾವರಪೊಂದಾದಡೆ, ಶಾಖೆಯ ಲಕ್ಷ್ಯದ ತೆರನಂತೆ.
ಅದಕ್ಕೆ ಪರಿಯಾಯ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣೈಕ್ಯ.
ಇಂತೀ ಷಟ್‌ಸ್ಥಲದ ಎಲ್ಲಾ ಬೆಳಗಿನ ಕಳೆಯನೊಳಕೊಂಡಿಪ್ಪ ಮಹಾತ್ಮನಂ

ಶಿವಭೌತಿಕವೆಂದರಿಯದೆ, ಬೀಗವ ತೆಗೆದಲ್ಲಿಯೆ ಕಂಡಿತ್ತು,
[ಆಭ]ರಣದ ಇರವು, ನಿಃಕಳಂಕ ಮಲ್ಲಿಕಾರ್ಜುನಾ. ||೪೯೭||

### ೧೯೧೬

ಪೃಥ್ವಿ ಅಪ್ಪುವಿನ ಸಂಗದಲ್ಲಿ, ಅನಲ ಅನಿಲವೆಂಬ ಪುತ್ಥಳಿ ಹುಟ್ಟಿತ್ತು.
ಆ ಪುತ್ಥಳಿಯ ಗರ್ಭದಲ್ಲಿ, ಆಕಾಶ ಮಹದಾಕಾಶವೆಂಬ ಕುರುಹುದೋರಿತ್ತು.
ಅದು ನಾದಪೀಠ ಬಿಂದುಲಿಂಗ ಕಳೆ ವಸ್ತುವಾಗಿ, ಹೊಳಹುದೋರುತ್ತದೆ.
ಆ ಹೊಳಹು ಆರುಮೂರಾದ ಭೇದವ ತಿಳಿದು,
ಮೂರು ಏಕವಾದಲ್ಲಿ, ಐಕ್ಯವನರಿತಲ್ಲಿ, ನಾದಬಿಂದುಕಳೆಭೇದವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೪೯೮||

### ೧೯೧೭

ಪೃಥ್ವಿಗೆ ಹಲವು ತೆರ, ಅಪ್ಪುವಿಗೆ ನಾನಾ ಸಾರ.
ಅಗ್ನಿಗೆ ಹಲವು ಘಟಕ್ಷುಧೆ, ವಾಯುವಿಗೆ ನಾನಾ ರೂಪು ಸಂಚಾರ.
ಆಕಾಶಕ್ಕೆ ಬಹುವರ್ಣ ಚೇತನ.
ಇಂತೀ ದೃಕ್ಕಿಂಗೆ ಲಕ್ಷ್ಯವಿದ್ದಂತೆ ಲಕ್ಷಿಸಿ,
ಕಂಡಂತೆ ಕಂಡು, ಸದ್ಗುಣ ಆರೆಂದಂತೆಯೆಂದಡೆಂದು,
ಮನಕ್ಕೆ ಕುರುಹುದೋರದೆ, ತನ್ನ ತಾನರಿದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ಭಿನ್ನರೂಪನಲ್ಲ. ||೪೯೯||

### ೧೯೧೮

ಪೃಥ್ವಿಯ ಅಂಗ ಭಕ್ತನಾದಲ್ಲಿ,
ಸರ್ವಸಮಾಧಾನಿಯಾಗಿ ಭೂತಹಿತನಾಗಿರಬೇಕು.
ಅಪ್ಪುವಿನ ಅಂಗ ಮಾಹೇಶ್ವರನಾದಲ್ಲಿ,
ಮಲ ನಿರ್ಮಲವೆನ್ನದೆ ಇರಬೇಕು.
ತೇಜದ ಅಂಗ ಪ್ರಸಾದಿಯಾದಲ್ಲಿ,
ಜಿಗುಪ್ಸೆ ಚಿಕಿತ್ಸೆಯನರಿಯದಿರಬೇಕು.
ವಾಯುವಿನ ಅಂಗ ಪ್ರಾಣಲಿಂಗಿಯಾದಲ್ಲಿ,
ಸುಗುಣ ದುರ್ಗುಣಂಗಳನರಿಯದಿರಬೇಕು.
ಆಕಾಶದ ಅಂಗ ಶರಣನಾದಲ್ಲಿ,
ಲೇಖ ಅಲೇಖಂಗಳನರಿಯದಿರಬೇಕು.
ಮಹದಾಕಾಶದಂತೆ ಐಕ್ಯನಾದಲ್ಲಿ,
ಸುರಾಳ ನಿರಾಳಂಗಳನರಿಯದಿರಬೇಕು.

ಇಂತೀ ಷಟ್ಸ್ಥಲವ ಒಂದ ನೆಮ್ಮಿ, ಒಂದ ವೇಧಿಸಬೇಕು.
ವೇಧಿಸುವನ್ನಕ್ಕ ವಿರಳನಾಗಿ, ವೇಧಿಸಿ ನಿಂದಲ್ಲಿ ಅವಿರಳನಾಗಿ,
ತತ್ವಮಸಿಯೆಂಬ ಭಿತ್ತಿಯ ಮೆಟ್ಟದೆ, ನಿಶ್ಚಿಂತನಾಗಿರಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. ||೫೦೦||

೧೯೧೯

ಪೃಥ್ವಿಯಂಗ ಭಕ್ತನಲ್ಲ, ಅಪ್ಪುವಿನಂಗ ಮಹೇಶ್ವರನಲ್ಲ,
ಅಗ್ನಿಯಂಗ ಪ್ರಸಾದಿಯಲ್ಲ, ವಾಯುವಂಗ ಪ್ರಾಣಲಿಂಗಿಯಲ್ಲ,
ಆಕಾಶದಂಗ ಶರಣನಲ್ಲ.
ಇಂತೀ ಪಂಚತತ್ವವ ಮೆಟ್ಟಿ ನೋಡಿ ಕೂಡಿಹೆನೆಂಬುದು ಐಕ್ಯನಲ್ಲ.
ಅದೆಂತೆಂದಡೆ:
ಆ ಪೃಥ್ವಿ ಅಪ್ಪುವಿನ ಪ್ರಳಯಕ್ಕೊಳಗು,
ಆ ಅಪ್ಪು ಅಗ್ನಿಯ ಆಪೋಶನಕ್ಕೆ ಒಡಲು.
ಆ ಅಗ್ನಿ ವಾಯುವಿನ ಭಾವಕ್ಕೊಳಗು, ಆ ವಾಯು ಆಕಾಶದ ಅವಧಿಗೊಡಲು.
ಇಂತೀ ಪಂಚತತ್ವಂಗಳಲ್ಲಿ ಬೆರಸಿ,
ಕೂಡಿಹೆನೆಂಬ ಷಟ್ಸ್ಥಲವ ನಾನರಿಯೆ.
ಅದು ನಿಮ್ಮ ಭಾವ, ನಿಮ್ಮಲ್ಲಿಯೆ ಆರರ ಹೊಳಹು.
ಅದು ನಿಮ್ಮ ಲೀಲಾಭಾವ. ನಿಃಕಳಂಕ ಮಲ್ಲಿಕಾರ್ಜುನಾ. ||೫೦೧||

೧೯೨೦

ಪೃಥ್ವಿಯ ಗುಣವ ಅಪ್ಪು ನುಂಗಿತ್ತಾಗಿ, ಪೃಥ್ವಿಯ ಗುಣವಿಲ್ಲ.
ಅಪ್ಪುವಿನ ಗುಣವ ಅನಲ ನುಂಗಿತ್ತಾಗಿ, ಅಪ್ಪುವಿನ ಗುಣವಿಲ್ಲ.
ಅನಲನ ಗುಣವ ಅನಿಲ ನುಂಗಿತ್ತಾಗಿ, ಅನಲನ ಗುಣವಿಲ್ಲ.
ಅನಿಲನ ಗುಣವ ಆಕಾಶ ನುಂಗಿತ್ತಾಗಿ, ಅನಿಲನ ಗುಣವಿಲ್ಲ
ಅನಿಲನ ಗುಣವ ತನ್ನನೆ ನುಂಗಿತ್ತಾಗಿ, ಆಕಾಶದ ಗುಣವಿಲ್ಲ.
ಆಕಾಶದ ಗುಣವ ತನ್ನ ತನ್ನನೆ ನುಂಗಿತ್ತಾಗಿ, ಆಕಾಶದ ಗುಣವಿಲ್ಲ.
ಇದು ಕಾರಣ, ಐದರ ಗುಣವಲ್ಲಿ ಅರ್ಪಿಸಿ,
ಮುಕ್ತಿಯ ಕಂಡೆಹೆನೆಂಬ ನಿಷ್ಠೆ ನಿನಗೆಲ್ಲಿಯದೊ?
ಹೊಯ್ಬುರಿಸಿದ ಹೊಯ್ಗುಲದಂತೆ ಭೋಗಿಸಿಹೆನೆಂದಡೆ ಕರ್ತೃತ್ವವಿಲ್ಲ.
ದರುಶನವ ಹೊತ್ತು ಹೊತ್ತು ತಿರುಗುವುದಕ್ಕಲ್ಲದೆ, ಜ್ಞಾನಕ್ಕೆ ಸಂಬಂಧಿಗಳಲ್ಲ.
ಐದರ ಗುಣವಡಗಿ, ಮೂರರ ಗುಣ ಮುಗಿದು,
ಆರರ ಗುಣ ಹಾರಿ, ಎಂಟರ ಗುಣದ [ನೆ]ಂಟತನವ ಬಂಧಿಸಿ,

ತೋರುವುದಕ್ಕೆ ಮುನ್ನವೆ ಮನ ಜಾರಿ ನಿಂದ ಮತ್ತೆ ಮೀರಲಿಲ್ಲವಾಗಿ,
ಸ್ವಯ ಚರ ಪರ ತ್ರಿವಿಧವನರಿದು ಹೊರಗಾಗಿ,
ಮೂರು ಮಾಟದ ಬೆಡಗನರಿದು ವಿಚಾರಿಸದೆ,
ಉದರ ಘಾತಕತನಕ್ಕೆ ಹೊಟ್ಟೆಹೊರಕರೆಲ್ಲ ಜಂಗಮವೆ ? ಅಂತಲ್ಲ, ನಿಲ್ಲಿರಣ್ಣಾ.
ನೀವೆ ಲಿಂಗ ಜಂಗಮವಾಗಬಲ್ಲಡೆ ನಾನೆಂಬುದ ವಿಚಾರಿಸಿಕೊಳ್ಳಿರಣ್ಣಾ.
ನೀವು ಪೂಜೆಯ ಮಾಡಿಸಿಕೊಂಬುದಕ್ಕೆ ವಿವರ :
ಪೂಜೆಯ ಮಾಡುವ ಭಕ್ತಂಗೆ, ಭಾರಣೆಯ ವಿದ್ಯವ ಹೊತ್ತ
ವಿಧಾತ್ಯನಂತಿರಬೇಕು.
ಜಲವ ನಂಬಿದ ಜಲಚರದಂತಿರಬೇಕು, ಆಡುವ ಪಶುವಿನ ಲಾಗಿನಂತಿರಬೇಕು.
ಇಂತಿವನೆಲ್ಲವಂ ಕಳೆದುಳಿದು, ಆ ಚರಲಿಂಗಮೂರ್ತಿ ತಾನಾಗಿ ನಿಂದಾತನೆ
ನಿಃಕಳಂಕ ಮಲ್ಲಿಕಾರ್ಜುನಾ. || ೫೦೨ ||

೧೯೨೧

ಪೃಥ್ವಿಯ ಪೃಥ್ವಿ ಎಲ್ಲಿಪ್ಪುದು ?
ಅಪ್ಪುವಿನ ಅಪ್ಪು ಎಲ್ಲಿಪ್ಪುದು ?
ತೇಜದ ತೇಜ ಎಲ್ಲಿಪ್ಪುದು ?
ವಾಯುವಿನ ವಾಯು ಎಲ್ಲಿಪ್ಪುದು ?
ಆಕಾಶದ ಆಕಾಶ ಎಲ್ಲಿಪ್ಪುದು ?
ಇಂತೀ ಭೇದಂಗಳನರಿವುದಕ್ಕೆ ದೃಷ್ಟ,
ಆತ್ಮಕ್ಕೆ ಆತ್ಮನ ಪ್ರತಿರೂಪ ಕಂಡಲ್ಲಿ.
ಇಂತೀ ಇವಕ್ಕೆ ಉಭಯನಾಮವುಂಟು.
ಪೃಥ್ವಿಗೆ ಆಧರಣೆ ಒಂದೇಮಯ.
ಅಪ್ಪುವಿಗೆ ಸರ್ವಸಾರ ಒಂದೇ ಭೇದ.
ತೇಜಕ್ಕೆ ಉಷ್ಣ ಹಲವು ಪರಿಯಿಲ್ಲ.
ವಾಯುವಿಂಗೆ ಸಂಚಾರ ಕಡೆ ನಡು ಮೊದಲಿಲ್ಲ.
ಇಂತಿವ ತಿಳಿದಡೆ ಒಂದೇ ಭೇದ,
ಹೊಲಬನರಿದಡೆ ಹಲವು ಭೇದವುಂಟು,
ನಿಃಕಳಂಕ ಮಲ್ಲಿಕಾರ್ಜುನಾ. || ೫೦೩ ||

೧೯೨೨

ಪೃಥ್ವಿಯಿಂದ ಅಪ್ಪು, ಅಪ್ಪುವಿನಿಂದ ಪೃಥ್ವಿ.
ಅಗ್ನಿಯಿಂದ ವಾಯು, ವಾಯುವಿನಿಂದ ಅಗ್ನಿ.

ಆಕಾಶದಿಂದ ಮಹದಾಕಾಶ, ಮಹದಾಕಾಶದಿಂದ ಆಕಾಶ.
ನಿನ್ನಿಂದ ನಾ, ನನ್ನಿಂದ ನೀ, ನಾ ನೀನೆಂಬ ಭಾವ ಲೀಲೆವುಳ್ಳನ್ನಕ್ಕ.
ಮತ್ತೆ ತಿಳಿದು ನೋಡಲಿಕ್ಕೆ ಮತ್ತೆಯೂ ಪರಿಪೂರ್ಣ ನೀನೆ,
ನಿಃಕಳಂಕ ಮಲ್ಲಿಕಾರ್ಜುನಾ. || ೫೦೪ ||

### ೧೯೨೩

ಪೃಥ್ವಿಯೊಳಗಿದ್ದು ಸಾಯದಿರಬೇಕು,
ಅಪ್ಪುವಿನೊಳಗಿದ್ದು ಚರಿಸದಿರಬೇಕು.
ತೇಜದೊಳಗಿದ್ದು ಬೇಯದಿರಬೇಕು,
ವಾಯುವಿನೊಳಗಿದ್ದು ಸಂಚರಿಸದಿರಬೇಕು.
ಆಕಾಶದೊಳಗಿದ್ದು ಬಹುವರ್ಣಕ್ಕೆ ಅಲೇಖವಾಗಿರಬೇಕು.
ಸಕಲಸುಖಭೋಗಂಗಳಲ್ಲಿದ್ದು,
ವಿರಾಗಿಯಾಗಿರಬಲ್ಲಡೆ ಆರುಸ್ಥಲ ಒಂದಾಯಿತ್ತು.
ಒಂದರಲ್ಲಿ ಪಂಚವಿಂಶತಿತತ್ವ ಸಂದನಳಿದವು.
ನಾಮ ರೂಪು ಕ್ರೀಯೆಂಬ ಭಾವದ್ವಂದ್ವವಳಿದು,
ನಿಜ ಒಂದೆಯೆಂಬುದಕ್ಕೆ ತೆರಪಿಲ್ಲದೆ ಶರಣನಾದೆಯಲ್ಲಾ.
ಶರಣ ಸನ್ಮತನಾಗಿ ಐಕ್ಯನಾದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. || ೫೦೫ ||

### ೧೯೨೪

ಪೃಥ್ವಿಶೂನ್ಯ ಅಪ್ಪುಶೂನ್ಯ ತೇಜಶೂನ್ಯ ವಾಯುಶೂನ್ಯ ಆಕಾಶಶೂನ್ಯ.
ಇಂತೀ ಪಂಚಭೌತಿಕ ಶೂನ್ಯದ ಗುಣದ ವಿವರದ ಪರಿಭೇದದ ದೇವರ,
ಸದ್ಯೋಜಾತ ಮುಖದಲ್ಲಿ ಉದಕ ಉರಿದು ಬೆಂಕಿ ನುಂಗಿತ್ತ ಕಂಡೆ.
ನಿಧಾನ ನೆಲನ ನುಂಗಿತ್ತ ಕಂಡೆ.
ಮಡಕೆ ಕರಗಿ ಬೆಣ್ಣೆ ಉಳಿಯಿತ್ತು ನೋಡಾ.
ಉಳಿದುದ ಮತ್ತೆಣಿಸಲುಂಟೆ ಅಯ್ಯಾ ?
ಬೀಜದೊಳಗಣ ವೃಕ್ಷ ಗಾಳಿಗೆ ಉರುಳಿ ಬೀಳುವ ತೆರನುಂಟೆ ?
ಶಿಲೆಯೊಳಗಣ ಪಾವಕ ಸುಡಬಲ್ಲುದೆ ಅಯ್ಯಾ ?
ಜೀವ ಸತ್ತು, ಕಾಯವಳಿದ ಮತ್ತೆ
ಕಾಯ ಸತ್ತು, ಜೀವ ಉಳಿದ ಮತ್ತೆ ಕಾಬುದಿನ್ನೇನೋ ?
ಕಾಯದ ಗುಣದಿಂದ ಜೀವದ ಮರೆಮ ಕಾಬುದಿನ್ನೇನೊ !
ಜೀವಗುಣದಲ್ಲಿ ಕಾಯದ ಜೀವದ ಹಂಗಿನೊಳಗಿದು ಸಾವ ಲಿಂಗವ
ದೇವರೆಂದು ಪೂಜಿಸುತಿಪ್ಪರು ನೋಡಾ.

ಕರ್ತಾರನ ಕಮ್ಮಟದಲ್ಲಿ
ಚಿತ್ರಮಿತ್ರಳ ಕೈಯ ಅಸ್ಕಗೋಳಿನೊಳಗಾಯಿತ್ತು, ನೋಡಾ.
ನಿತ್ಯತೃಪ್ತನೆಂಬ ಲಿಂಗ ಸಿಕ್ಕಿತ್ತಯ್ಯಾ.
ಭವದಾಶೆಗೊಂಡಲಾಗಿ ನಿತ್ಯತ್ವವನರಿಯದೆ, ಆಸ್ತಮೊಳಗೆ ಸಿಕ್ಕಿ ಕೆಟ್ಟರಲ್ಲಾ.
ಜಗವೆಲ್ಲ ಕೆಟ್ಟ ಕೇಡ ನೋಡಾ. ಹುಟ್ಟುಹುರಿಯಲ್ಲಿ ನಿಂದು ಬಿಟ್ಟೆನಯ್ಯಾ.
ಮರ್ತ್ಯದ ಮಹಾಗಣಂಗಳ ಕಟ್ಟಿಗೆಯ ಹೊತ್ತು
ಸತ್ತವರಿಗನ್ನತ್ತಣ ಮುಕ್ತಿಯೊ, ನಿಃಕಳಂಕ ಮಲ್ಲಿಕಾರ್ಜುನಾ? ||೫೦೬||

೧೯೨೫

ಪ್ರಭುದೇವರು ಬಂದ [ಬರವಿನ ಪೃಥ್ವಿಗೆ] ಅವಧಿಯಿಲ್ಲ.
ಕಲ್ಲನೆತ್ತಿದವರ ಕೂಡೆ ಗೆಲ್ಲಸೋಲಕ್ಕೆ ಹೋರಿಯಾಡಿ,
ಬಲ್ಲೆವೆಂದು ಗೆಲ್ಲಗೂಳಿಗಳ ಕೂಡೆ ಬಲ್ಲತನಕ್ಕೆ ನಲಿ[ಗೊ]ಟ್ಟು,
ಬಳ್ಳಿಹನ ಗುಣವನರಸಹೆನೆಂದು, ಎಲ್ಲಾ ಠಾವಿನಲ್ಲಿ ತಿರುಗಿಬಂದು
ಅಟ್ಟಿ ಅಡಿದಲ್ಲಿ ನಿಷ್ಠೆಯ ತೋರಿಹೆನೆಂದು,
ಕಷ್ಟಗುಣವಾದ [ಬೇಟ]ವ ಹೊಕ್ಕೆನೆಂಬ ಕಷ್ಟಗುಣ ಬಿಡದು.
ಭಾವದ ಕವಳಿಯಂ ಮರೆದು, ವಾಯುದ ಕವಳಿಯಂ ಹೊಕ್ಕು,
ಭಾವದ ಭ್ರಮೆಯಿಂದ ತಿರುಗಿ ಬಂದು,
ಸಂಗನಬಸವಣ್ಣಂಗೆ ಸಂಗವಿಶೇಷವ ತೋರದೆ [ಹ]ಂಗಿಸಿ ಕೊಟ್ಟೆಯಲ್ಲಾ.
ಸಂಗಮೇಶ್ವರದೇವರೆಂಬ ಕಲ್ಲಿನ ಮನೆಯ
ಕಲ್ಲಿನೊಳಗೆ ಹೊಕ್ಕು ವಲ್ಲಭನನರಿಯದೆ,
ಪ್ರಭು ಮೊದಲಾಗಿ ಅವರೆಲ್ಲರು ಕೆಟ್ಟರಲ್ಲಾ.
ನಮಗೆ ಬಲ್ಲತನವ ತೋರಿದ ಎನ್ನ ವಲ್ಲಭ ನೀನೆ
ಚೆನ್ನಬಸವಣ್ಣ, ಸಂಗನಬಸವಣ್ಣಂಗೆ,
ಪ್ರಮಥಗಣಂಗಳು ಮೊದಲಾದವರಿಗೆ, ಎನಗೆ,
ನಿಃಕಳಂಕ ಮಲ್ಲಿಕಾರ್ಜುನಂಗೆ, ನಿನ್ನಿಂದ ಭಾವವಿರಹಿತನಾದೆ. ||೫೦೭||

೧೯೨೬

ಪ್ರಮಾಣಿಸಿ ಅವಧರಿಸಿ ನಡಸುವಂಗೆ,
ನುಡಿದ ವ್ರತಕ್ಕೆ ಹೇಗೆಂದು ಮನಗುಂದದಿರಬೇಕು.
ನೀಡಿದ ಮತ್ತೆ, ನಿಜವಸ್ತುವಿನಲ್ಲಿರಬೇಕು.
ಕೂಡಿದ ಮತ್ತೆ, ಹಿಂದಣ ಹಂಗ ಹರಿದು, ಸಂದಳಿದು
ಅದರಂತೆ ಬಂದುದ ಕಂಡು. ಬಾರದುದಕ್ಕೆ ಭ್ರಮೆಯಿಲ್ಲದಿರಬೇಕು.

ಇಂತೀ ಸ್ಥಲ, ಭಕ್ತಂಗೆ.
ಮುಕ್ತಿಯನರಿಸಿ ಇಪ್ಪಂಗೆ ಇದೇ ಸತ್ಯಸಮರ್ಪಣ.
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸದ್ಭಕ್ತಿ ನಿರ್ಲೇಪ. ||೫೦೮||

೧೯೨೭

ಪ್ರಾಣಲಿಂಗಸಂಬಂಧಿಗಳೆಂಬ ಭಾವದ ಭ್ರಮೆಯಿಂದ ಬಳಲುತ್ತಿಪ್ಪ
ಜ್ಞಾನಿಗಳು,
ನೀವು ಕೇಳಿರೋ, ಲಿಂಗಪ್ರಾಣವೋ ? ಪ್ರಾಣಲಿಂಗವೋ?
ಸಂಗದ ಗುಣವೋ ? ಎಂಬುದನರಿದಾಗವೆ,
ಲಿಂಗ ಅಂಗ, ಅಂಗ ಲಿಂಗ ಉಭಯದ ಸಂದ ಹರಿದಾಗವೆ ಪ್ರಾಣಲಿಂಗ.
ಪ್ರಾಣನ ಪ್ರಕೃತಿಯ ಭಾವಿಸದಿದ್ದಾಗವೆ, ಪರಮಪ್ರಕಾಶ.
ಇಪ್ಪರಿಂದ ನಾನರಿಯೆ, ನೀನಾಡಿಸುವ ಬೊಂಬೆ ನಾನು.
ನಿನ್ನ ಭಾವದ ಭ್ರಮೆಯ ಬಿಡಿಸಿ, ನಿರ್ಭಾವಕ್ಕೆ ನೆಲೆಗೊಳ್ಳಯ್ಯಾ,
ನಿಃಕಳಂಕ ಮಲ್ಲಿಕಾರ್ಜುನಾ. ||೫೦೯||

೧೯೨೮

ಪ್ರಾಣಲಿಂಗಿಗಳೆಂದು ನುಡಿವ ನಾಚಿಕೆಯಿಲ್ಲದ ಅಜ್ಞಗಳು ಭಾವಿಸಿರಯ್ಯಾ.
ತನು ಸೋಂಕುವುದಕ್ಕೆ ಮೊದಲೆ, ಮನ ಸೋಂಕಿತ್ತಲ್ಲಾ.
ತನು ಹಿಂಗಿ ಅರ್ಪಿಸುವ ಠಾವಿನ್ನೆಲ್ಲಿಯದೊ?
ಅಂಗವರಿದು ಮನವರಿಯದಿಲ್ಲ. ಅಂಗಲಿಂಗ ಅರ್ಪಿತವೆಂತಾಯಿತ್ತೊ?
ಇಂತೀ ಭಂಗಿತರ ಕಂಡು ಹಿಂಗಿದೆನಯ್ಯಾ,
ನಿಃಕಳಂಕ ಮಲ್ಲಿಕಾರ್ಜುನಾ. ||೫೧೦||

೧೯೨೯

ಪ್ರಾಣಲಿಂಗಿಗಳೆಂದು ನುಡಿವುತಿಪ್ಪ ಅಜ್ಞಗಳು ನೀವು ಕೇಳಿರೆ.
ಲಿಂಗಕ್ಕೆ ಪ್ರಾಣ ಮೊದಲೋ? ಪ್ರಾಣಕ್ಕೆ ಲಿಂಗ ಮೊದಲೋ?
ಈ ಉಭಯವ ವಿಚಾರಿಸಿಕೊಂಡು ನುಡಿಯಿರಣ್ಣಾ.
ವಾಯು ಗಂಧವ ಸೋಂಕಿತೊ? ಗಂಧ ವಾಯುವ ಸೋಂಕಿತೊ?
ಲಿಂಗವ ಮನವರಿಯಿತೊ? ಮನವ ಲಿಂಗವರಿಯಿತೊ?
ಕಾಯದಿಂದ ಸೋಂಕಿದ ಸುಖವ ಮನದಿಂದರಿವವರಾರೊ?
ಮನದಲ್ಲಿ ಮುಟ್ಟಿದ ಗುಣವ ತನುವಿನಿಂದರಿವವರಾರೊ?
ಇಂತೀ ಉಭಯವನರಿವದೆ ಪ್ರಾಣಲಿಂಗಿಗಳೆಂಬ.
ಉರಿ ಸೋಂಕಿದ ಕರ್ಪೂರಕ್ಕೆ ನಿಲುವುದಕ್ಕೆ ನೆಲೆವನೆಯುಂಟಾವುದೆ?

ಭ್ರಮರ ಸೋಂಕಿದ ಸುವಾಸನೆಗೆ ಕಡೆ ನಡು ಮೊದಲಾವುದೊ?
ಧೂಳು ಕೊಂಡ ಜಲಕ್ಕೆ ನೆಲೆಯಿನ್ನಾವುದೊ?
ಲಿಂಗ ಸೋಂಕಿದ ಮನಕ್ಕೆ, ಲಿಂಗನವರಿವುದಕ್ಕೆ ನೆಲೆಗೊಂಬ ಠಾವಿನ್ನಾವುದೊ?
ಇಂತೀ ಗುಣಂಗ[ಳೆಲ್ಲ] ಕಳೆದುಳಿದ ಮಹಾತ್ಮಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. || ೫೧೧ ||

೧೯೩೦

ಪ್ರಾಣಲಿಂಗಿಯ ಯೋಗಸಂಬಂಧವೆಂತುಟೆಂದಡೆ:
ಫಲರಸ ಪರುಣನ ಕಿರಣ ಕೊಂಡಂತಿರಬೇಕು.
ಪಯದೊಳಗಣ ನವನೀತದಂತಿರಬೇಕು. ವಾಯುವಿನ ಗಂಧದ ತೆರದಂತಿರಬೇಕು.
ದೃಷ್ಟಿಯ ಚಿತ್ತದಂತಿರಬೇಕು. ಅಪ್ಪುವಿನ ಮೆಚ್ಚಿಕೆಯಂತಿರಬೇಕು.
ಹೀಂಗೆ ಲಿಂಗದಲ್ಲಿ ಒಪ್ಪವಿಟ್ಟ ಶರಣಂಗೆ
ಅರ್ಚನೆಯ ಮಾಡಿದಡೂ ಸರಿ, ಅರ್ಪಣದಲ್ಲಿ ಒಪ್ಪವಿಟ್ಟಡೂ ಸರಿ,
ನಿಃಕಳಂಕ ಮಲ್ಲಿಕಾರ್ಜುನಾ. || ೫೧೨ ||

೧೯೩೧

ಫಲದ ಸವಿಯ ವೃಕ್ಷವರಿದಡೆ, ಕೊಡುವುದೆ ಇದಿರಿಂಗೆ?
ಅನ್ನದ ಸವಿಯ ಕುಡಿಕೆಯರಿದಡೆ, ಮಿಗುವುದೆ ಇದಿರಿಂಗೆ?
ಲಿಂಗಸಂಗಿಯಾದಡೆ, ಕಂಡಕಂಡವರಲ್ಲಿ ಉಲಿವನೆ?
ನಿಸ್ತರಂಗವನ್ನೈದಿದ ಮಂಗಲೋತ್ತರದಂತೆ ಇದರ ಸಂಗವು.
ಲಿಂಗೈಕ್ಯವು ಹೀಂಗಿದೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೧೩ ||

೧೯೩೨

ಬಂದ ಪದಾರ್ಥವ ಸವಿದು ಚಪ್ಪರಿದು,
ಆಹಾ ಲಿಂಗಕ್ಕೆ ಅರ್ಪಿತವಾಯಿತ್ತೆಂದು ಕಂಗಳ ಮುಚ್ಚಿ, ಅಂಗವ ತೂಗಿ,
ಮಹಾಲಿಂಗವೆ ನೀನೇ ಬಲ್ಲೆ ಎಂದು ಕಂಡವರು ಕೇಳುವಂತೆ,
ಹಿಂಗದ ಲಿಂಗಾಂಗಿ ಇವನೆಂದು ವಂದಿಸಿಕೊಳ್ಳಬೇಕೆಂದು,
ಅಂದಗಾರಿಕೆಯಲ್ಲಿ ನಡೆವ ಭಂಡರಿಗೆಲ್ಲಿಯದೊ ಲಿಂಗಾರ್ಪಿತ?
ಲಿಂಗಕ್ಕೆ ಸಂದ ಸವಿಯು,
ಹಿಂದೆ ಮುಂದೆ ಇದ್ದವರು ಕೇಳುವಂತೆ ಲಿಂಗಾರ್ಪಿತವುಂಟೆ?
ಭ್ರಮರ ಕೊಂಡ ಕುಸುಮದಂತೆ, ಪರುಣ ಕೊಂಡ ಕಿರಣದಂತೆ,
ವಾರಿ ಕೊಂಡ ಸಾರದಂತೆ, ತನ್ನಲ್ಲಿಯೇ ಲೇಪ ಅರ್ಪಿತ ಅವಧಾನಿಗೆ.

ಹಿಂಗಲ್ಲದೆ ಕೀಲಿನೊಳಗಿಪ್ಪ ಕೀಲಿಗನಂತೆ,
ಇನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೧೪||

೧೯೩೩

ಬಂದ ಬಟ್ಟೆಯುಂ ಮರೆದು, ಪೂರ್ವಾಶ್ರಯವನಳಿದು,
ಭೋಗ ಭೋಜ್ಯಂಗಳಂ ಪರಿದು, ಪರಕ್ಕೆ ಪರಾಙ್ಮುಖನಾಗಿ,
ವಿರಳವಿಲ್ಲದೆ ಅವಿರಳನಾಗಿ, ಬಿಡುಮುಡಿಯಲ್ಲಿ ನಿಂದ ನಿರುತಂಗೆ
ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ. ||೫೧೫||

೧೯೩೪

ಬಂದ ಲಿಂವಣಗಿತ್ತಿಯರೆಲ್ಲರೂ ಓಗರವನುಂಡು ಹೋದರಲ್ಲದೆ,
ಮದುವಳಿಗನ ಕಂಡು ಹೋದುದಿಲ್ಲ.
ನಿಬ್ಬಣ್ಣಕ್ಕೆ ಬಂದವರೆಲ್ಲರೂ ಅದ್ದಿಹೋದರು ಹೊಲೆನೀರ ಮಿಂದು.
ಮದುವಣಿಗನ ಮುಂದೆ [ಒಬ್ಬ]ಳಿಕೆ[ಯಿ]ಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೫೧೬||

೧೯೩೫

ಬ ಎಂಬಲ್ಲಿ ಬಳಿಸಂದೆನು.
ಸ ಎಂಬಲ್ಲಿ ಸಯವಾದೆನು.
ವ ಎಂಬಲ್ಲಿ ನಿರವಯವಾದೆನು.
ನಿಃಕಳಂಕ ಮಲ್ಲಿಕಾರ್ಜುನಾ,
ಬಸವಣ್ಣನ ನಿಜಪದದಲ್ಲಿ ಸಂದಿಲ್ಲದೆ ಬೆರಸಿ,
ನಮೋ ನಮೋ ಎಂಬ ಹಂಗಳಿದುಳಿದೆನು. ||೫೧೭||

೧೯೩೬

ಬಡವಂಗೆ ನಿಧಾನ ಕಡವರ ಕೈಸಾರಿತ್ತಯ್ಯಾ.
ಕಾಣಬಾರದ ಬಯಲು ರೂಪುಗೊಂಡಿತ್ತಯ್ಯಾ.
ನಿರಾಳ ನಿರ್ಣಯದ ಮೇಲೆ ನಿಂದಿತ್ತಯ್ಯಾ.
ಜನ್ನ ಭಾವದ ಕೊನೆಯ ಮೊನೆಯ ಮೇಲೆ,
ಮನೆಯ ಮಾಡಿಕೊಂಡಿಪ್ಪ ಪ್ರಭುವ ಕಂಡು,
ಬದುಕಿದೆನು ಕಾಣಾ, ನಿಃಕಳಂಕ ಮಲ್ಲಿಕಾರ್ಜುನ. ||೫೧೮||

೧೯೩೭

ಬಧಿರನೊಂದಾಗಿ ಮದವಳಿಗ ಕೂಟದ.
ಮದವಳಿಗನ ಹಿಂದುಗಡೆಯ ಕಳಶ ಕನ್ನಡಿ

ಮದವಳಿಗನ ಮುಂದೆ ಸಾಯು[ವೆಡೆ],
ಮೂದೇವರು ಮುಂದೆ ಅಳುತ್ತಿಪ್ಪುದ ಕಂಡೆ.
ಶಕುನ ಹೊಲ್ಲಾ ಎಂದು ಮದವಳಿಗ ತಿರುಗಿದ.
ಮದುವೆ ಉಳಿಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ||೫೧೯||

೧೯೩೮

ಬಯಲು ಬತ್ತಲೆಯಾದಡೆ ಹೊದಿಸುವರಿನ್ನಾರೊ ?
ಏರಿ ನೀರ ಕುಡಿದಡೆ ಬಿಡಿಸುವರಿನ್ನಾರೊ ?
ಮಹಾಮೇರು ನಡೆವಡೆ ಪಥಕಿಂಬುಗೊಡುವರಿನ್ನಾರೊ ?
ಅರಿದವ ಮರೆದವನಾದಡೆ, ಅರಿಕೆಯ ಹೇಳುವರಿನ್ನಾರೊ ?
ನಿಮ್ಮ ನಿಜವ ನೀವೇ ಬಲ್ಲಿರಿ.
ನಾನಂಜುವೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೨೦||

೧೯೩೯

ಬಯಲೊಳಗಣ ಬಯಲಿನಲ್ಲಿ ಒಂದು ಕಲ್ಪತರು ಹುಟ್ಟಿ,
ಫಲವಿಲ್ಲದೆ ಬಂಜೆಮರನಾದುದ ಕಂಡೆ.
ಇದ ತಿಳಿದುನೋಡಲಿಕ್ಕಾಗಿ ಬಯಲು ಬಯಲ ಕೂಡಿ,
ಕಲ್ಪತರು ಫಲವು ಎಡಬಿಡವಿಲ್ಲದುದ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯಲಾಗಿ. ||೫೨೧||

೧೯೪೦

ಬಲ್ಲೆಂದಟ್ಟು ಅದೆಲ್ಲಿದ್ದರೂ ತನ್ನ ವೇದನೆಯ ಬಿಡದು.
ಭಾವಜ್ಞರ ಮನೆಯ ಬಾಗಿಲಲ್ಲಿದ್ದರೂ,
ಸ್ವಜಾತಿಯ ಗುಣವಲ್ಲದೆ ನೀತಿಯ ಗುಣವಿಲ್ಲ.
ಇಂತಿವರುಗಳ ಮಾತೇಕೆ, ನಿಃಕಳಂಕ ಮಲ್ಲಿಕಾರ್ಜುನಾ ? ||೫೨೨||

೧೯೪೧

ಬಲ್ಲವನಾದಡೆ ಕಲ್ಲಿಯಡಗಿದಂತಿರಬೇಕು.
ಬಲ್ಲವರು ಬಂದಡೆ, ಆ ಕಲ್ಲಿಯೆಲ್ಲವನವಗವಿಸಿದಂತಿರಬೇಕು.
ಇದೇ ಬಲ್ಲವರ ಬಲ್ಲತನ, ನಿಃಕಳಂಕ ಮಲ್ಲಿಕಾರ್ಜುನಾ. ||೫೨೩||

೧೯೪೨

ಬಲ್ಲವರಾದಡೆ ಗೆಲ್ಲಸೋಲಕ್ಕೆ ಹೋರಲೇಕಯ್ಯಾ ?
ಮಹದಲ್ಲಿ ಅನುವನರಿದವಂಗೆ ಹೋರಟೆಯೇಕಯ್ಯಾ ?

ಗೆಲ್ಲಗೂಳಿತನವಲ್ಲದೆ ಬಲ್ಲವರೆಂತಾದಿರಣ್ಣಾ?
ಅರಕೆಗೊಂಡವನೊಡಲು ನಂದಿಸಿದಡೀ ಪದ,
ಕೊನೆಯ ಮೊನೆಯಂತೆ, ಶಿಶು ಕಂಡ ಕನಸಿನಂತೆ,
ಪಶುವಿನ ಉದರದಲ್ಲಿ ಸೋಂಕಿದ ಶತವ್ಯಾಧಿಯಂತೆ,
ಇದು ಲಿಂಗೈಕ್ಯವು.
ಮುಟ್ಟಲಿಲ್ಲವಾಗಿ ಒಡಲಿಲ್ಲ, ಒಡಲಿಲ್ಲವಾಗಿ ನೀನೆನಲಿಲ್ಲ,
ನಿಃಕಳಂಕ ಮಲ್ಲಿಕಾರ್ಜುನ ತಾನೆಯಾಗಿ. ॥ ೫೨೪ ॥

೧೯೪೩

ಬಲ್ಲವರೆಂದು ಎಲ್ಲಕ್ಕೂ ಹೇಳಿ, ಅಲ್ಲಿ ಎಲ್ಲಿಯೂ ಬೋಧಿಸಬಲ್ಲವ
ನಾನೆಂದು ನುಡಿವ ಕಲ್ಲೆದೆಯವನೆ ಕೇಳಾ.
ಲಿಂಗವ ಕುರಿತಲ್ಲಿ ಒಳ್ಳಿತ್ತು, ಹೊಲ್ಲೆಹವುಂಟೆ?
ಜಂಗಮವ ಕುರಿತಲ್ಲಿ ಒಳ್ಳಿತ್ತು, ಹೊಲ್ಲೆಹವುಂಟೆ?
ಪ್ರಸಾದವ ಕುರಿತಲ್ಲಿ ಒಳ್ಳಿತ್ತು, ಹೊಲ್ಲೆಹವುಂಟೆ?
ಸಾಮ್ಯಸಂಬಂಧಕ್ಕೆ ಕರ್ತೃಭೃತ್ಯತ್ವವಲ್ಲದೆ,
ಜ್ಞಾನಾತೀತಂಗೆ ಸಾಮ್ಯಸಂಬಂಧವ ಭಾವಿಸಲಿಲ್ಲ.
ಇಕ್ಕಿದ ಕರುವಿಂಗೆ ಲೆಪ್ಪಣವಲ್ಲದೆ, ಮನಸ್ಸಿನಲ್ಲಿ ಒಪ್ಪವುಂಟೆ ಅಯ್ಯಾ?
ಇದು ತಪ್ಪದು.
ಕ್ರಿಯಾನಿರತವಾದ ಭಕ್ತಂಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೫೨೫ ॥

೧೯೪೪

ಬಲುಗೈಯನೊಡನೆ ಹಗೆವಡೆದು ಕೊಲೆಗಂಜಲೇಕೆ?
ಭವಸಾಗರದ ಬಲೆಗೆ ಸಿಕ್ಕಿ, ನಿರ್ಗುಣದ ಒಲುಮೆಯ ಮಾತ ನಟಿಸಲೇಕೆ?
ತ್ರಾಸಿಂಗೆ ಒಲವರವುಂಟೆ? ಭಾಷೆಗೆ ನುಡಿ ಎರಡುಂಟೆ?
ಪರಮೇಶ್ವರನನರಿವವಂಗೆ ಜಗದಾಸೆಯ ಮುಖವಿಲ್ಲವೆಂದೆ.
ಅವ ಈಷಣತ್ರಯಕ್ಕೆ ಹೊರಗೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೫೨೬ ॥

೧೯೪೫

ಬಲ್ಲೆಬಲ್ಲೆನೆಂದು ಎಲ್ಲರೊಳಗೆ ಗೆಲ್ಲಸೋಲವೇತಕ್ಕೆ?
ಬಲ್ಲತನ ಅಲ್ಲಿಯೇ ಉಳಿಯಿತ್ತು.
ಮಿಥ್ಯ ತಥ್ಯವ ತಲೆಯಲ್ಲಿ ಹೊತ್ತು ಹೋರಬೇಡ.
ನಿಃಕಳಂಕ ಮಲ್ಲಿಕಾರ್ಜುನಾ. ॥ ೫೨೭ ॥

೧೯೪೬

ಬಸವಣ್ಣ ಮೊದಲಾದ ಮಹಾಭಕ್ತರೆಲ್ಲರೂ ಕಂಡರಯ್ಯಾ.
ಮಹಾ ಕೈಲಾಸವೆಂಬ ಬೆಳ್ಳಿಯ ಬೆಟ್ಟವನೇರಿ,
ಒಳ್ಳೆಯ ಪದದಲ್ಲಿ ತಲ್ಲೀಯರಾದಿಹೆವೆಂದು, ಬಲ್ಲತನವ ಮಚ್ಚಿ ಇರಲಾಗಿ,
ಆ ಬೆಳ್ಳಿಯ ಬೆಟ್ಟ ಕಲ್ಲೋಲವಾಗಲಾಗಿ,
ಅಲ್ಲಿರ್ದವರನೆಲ್ಲಿಯೂ ಕಾಣೆ. ಇವರಿಗಿನ್ನೆಲ್ಲಿಯ ಮುಕ್ತಿ ?
ಜಲ್ಲೆಯನಡರ್ದು ಎಲ್ಲೆಯ ಪಾಯಿಸುವನಂತೆ,
ಇವರೆಲ್ಲರೂ ಬಲ್ಲಹರೆ, ಬಲ್ಲಹ ಚೆನ್ನಬಸವಣ್ಣನಲ್ಲದೆ ?
ಇವರೆಲ್ಲರನೊಲ್ಲೆನೆಂದೆ,
ಬಲ್ಲರ ಬಲ್ಲಹನೆ ನಿಃಕಳಂಕ ಮಲ್ಲಿಕಾರ್ಜುನಾ. || ೫೨೮ ||

೧೯೪೭

ಬಳ್ಳಿ ಮರನ ಸುತ್ತಿ, ಅದು ಸಾಲದೆ ಮತ್ತೊಂದಕ್ಕೆ ಅಲ್ಲಾಡುವಂತೆ,
ನಿಲ್ಲದು ಮನ ಕ್ರೀಯಲ್ಲಿ, ಸಲ್ಲದು ಮನ ನಿಶ್ಚಯದಲ್ಲಿ.
ಬೆಲ್ಲವ ಮೆಲಿದ ಕೋಡಗದಂತೆ, ಕಲ್ಲಿನೊಳಗಾದ ಮತ್ಸ್ಯದಂತೆ,
ಅಲ್ಲಿಗೆ ಹೊಲಬು ಕಾಣದೆ, ಇಲ್ಲಿಗೆ ನೆಲೆಯ ಕಾಣದೆ, ತಲ್ಲಣಗೊಳ್ಳುತ್ತಿದ್ದೇನೆ.
ಎನ್ನ ಭಾವದಲ್ಲಿ ನೀನಿರು, ನಿಃಕಳಂಕ ಮಲ್ಲಿಕಾರ್ಜುನಾ. || ೫೨೯ ||

೧೯೪೮

ಬಾಯ ಮುಚ್ಚಿ, ಹೊಟ್ಟೆ ತುಂಬ ಉಂಬವರನಾರನೂ ಕಾಣೆ.
ಕಣ್ಣ ಮುಚ್ಚಿ, ಬಣ್ಣ ಸುಣ್ಣವನರಿವವರನಾರನೂ ಕಾಣೆ.
ಕರ್ಣವ ಮುಚ್ಚಿ, ಚೆನ್ನಾಗಿ ಕೇಳುವ ಅಣ್ಣಗಳನಾರನೂ ಕಾಣೆ.
ಪ್ರಸನ್ನ ಎನಗಿನ್ನಾವುದೋ, ನಿಃಕಳಂಕ ಮಲ್ಲಿಕಾರ್ಜುನಾ? || ೫೩೦ ||

೧೯೪೯

ಬಾಲಲೀಲೆಯಲ್ಲಿ ಕಟ್ಟಿದ ಲಿಂಗವನೇನೆಂದರಿಯದಿರ್ದಲ್ಲಿ,
ಜ್ಞಾನಭಾವ ತಲೆದೋರಿದಲ್ಲಿ ಇದೇನೆಂದರಿಯಬೇಕು.
ಮಕ್ಕಳ ಮದುವೆಯ ಚಿಕ್ಕಂದು ಮಾಡಿದಡೆ,
ಯೌವನದೋರೆ, ಆ ವಿಷಯಕ್ಕೆ ಹೊಕ್ಕು,
ಹೋರಟೆಗೊಂಬುದ ಮರೆದಡೆ, [ಇಷ್ಟವ ಮರೆ]ಯಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. || ೫೩೧ ||

೧೯೫೦

ಬಾವಿಯ ಓರೆಯ ಮೆಟ್ಟಿ, ಜಾರಿಬಿದ್ದವರಾರೊ ?
ಮೀರಿತ್ತು ಬಾವಿಯ ನೀರು.
ತೋರಲಿಲ್ಲದಂತೆ ಮುಸುಕಿ ಮುಳುಗಿ ಹೋಹಾಗ,
ಮೂರಡಿಯ ಕಪ್ಪೆಯ ಮರಿ ಬಂದು, ತೋರಲಿಲ್ಲದಂತೆ ನುಂಗಿತ್ತು,
ಬಾವಿಯ ಓರೆಯ ಜಾರಿಬಿದ್ದಾತನ.
ಇನ್ನಾರಿಗೆ ಹೇಳುವ, ಮೀರಿದ ಘನವ, ನಿಃಕಳಂಕ ಮಲ್ಲಿಕಾರ್ಜುನಾ. || ೫೩೨ ||

೧೯೫೧

ಬಿಂದು ನಾದವ ನುಂಗಿತ್ತೆಂಬರು, ನಾದ ಬಿಂದುವ ನುಂಗಿತ್ತೆಂಬರು.
ಕಳೆ ಬಿಂದುವ ನುಂಗಿತ್ತೆಂಬರು, ಬಿಂದು ಕಳೆಯ ನುಂಗಿತ್ತೆಂಬರು.
ಈ ಮೂರರ ಅಂದವ ಅತೀತ ತಿಂದಿತ್ತು, ತಿಂದವನ ತಿಂದ ಅಂದವ ನೋಡಾ.
ಇದಕ್ಕೊಂದೂ ಇಲ್ಲಾ ಎಂದೆ,
ಸಂದನಳಿದ ನಿಃಕಳಂಕ ಮಲ್ಲಿಕಾರ್ಜುನಾ. || ೫೩೩ ||

೧೯೫೨

ಬಿದ್ದ ಬೀಜ, ಇಕ್ಕಿದ ಸಸಿ ಮುಂತಾದವಕ್ಕೆ
ಬೇರು ಬಿಟ್ಟಲ್ಲದೆ ಮೊಳೆಗೆ ಅಂಕುರವಿಲ್ಲ.
ಸಸಿಗೆ ಹೊಸಬೇರು ಬಿಟ್ಟಲ್ಲದೆ ಎಲೆದೋರದು.
ಚಿತ್ತ ವಸ್ತುವಿನಲ್ಲಿ ನಿಂದಲ್ಲದೆ ನಾನಾ ಸ್ಥಲಂಗಳ ವಿವರವ ಮುಟ್ಟದು.
ಸಸಿ ಬಲಿದು ಹೊಸಸುಳಿ ತೋರಿದಲ್ಲಿಯಲ್ಲದೆ ಆ ತುಷಪರ್ಣ ಬಿಡದು.
ಅಂಗಕ್ಕೆ ಕ್ರೀ, ಆತ್ಮಂಗೆ ಅರಿವು ಉಭಯಸಂಬಂಧವಾಗಿಯಲ್ಲದೆ,
ಲಿಂಗವೆಂಬ ಕುರುಹಿಲ್ಲ.
ಆ ಕುರುಹು ಉಭಯವ ನೆಮ್ಮಿನಿಂದುದು ಭಕ್ತಸ್ಥಲ.
ಆ ಭಕ್ತಿ ತ್ರಿವಿಧವ ನೆಮ್ಮಿ ನಿಂದುದು ಮಾಹೇಶ್ವರಸ್ಥಲ.
ಆ ಮಾಹೇಶ್ವರಸ್ಥಲ ಮೂರ ಮೆಟ್ಟಿ ಆರ ಕಂಡುದು ಪ್ರಸಾದಿಸ್ಥಲ.
ಆರಡಗಿ ಬೇರೆ ಒಂದೆಯೆಂದಲ್ಲಿ ಪ್ರಾಣಲಿಂಗಿಸ್ಥಲ.
ಒಂದೆಂಬುದು ನಿಂದು ಸಂದನಳಿದಲ್ಲಿ ಶರಣಸ್ಥಲ.
ಶರಣನ ಆಯಿದುಗೂಡಿ ಪ್ರಮಾಣ ನಷ್ಟವಾದಲ್ಲಿ ಐಕ್ಯಸ್ಥಲ.
ಇಂತೀ ಷಡ್ಭಾವ ಸ್ಥಲಂಗಳು ಆಕಾಶವ ನೆಮ್ಮಿ, ಮಹದಾಕಾಶದೊಳಗಾಯಿತ್ತು.
ಅದು ಭಾವವಿಲ್ಲದ ಬ್ರಹ್ಮ, ನಿಃಕಳಂಕ ಮಲ್ಲಿಕಾರ್ಜುನಾ. || ೫೩೪ ||

೧೯೫೩

ಬೀಜದ ಮೊಳೆಯ ಮುರಿದ ಮತ್ತೆ, ಅದು ಸಾಗಬಲ್ಲುದೆ ?
ಸುನಾದದ ಭೇದವನರಿದ ಮತ್ತೆ, ಅದು ವೇಧಿಸಬಲ್ಲುದೆ ?
ಆದಿಯವರೆಲ್ಲರೂ ಹೋದರು ಹೊಲಬುಗೆಟ್ಟು.
ಎನಗಿನ್ನಾದವರಾರೋ,
ಭೇದಕ್ಕತೀತ, ಚೋದ್ಯಮಯ ನಿಃಕಳಂಕ ಮಲ್ಲಿಕಾರ್ಜುನಾ ? ||೫೩೫||

೧೯೫೪

ಬೀಜದಲ್ಲಿ ಅಂಕುರವಿದ್ದಂತೆ ಏಕಡಗಿದೆ ?
ಮತ್ತೆ ಮೊಳೆದೋರಿ ಹಲವು ರೂಪಿಗೆ ಕಡೆಯಾದೆ.
ಇರಿಸಿದಲ್ಲಿ ಏಕಗುಣ, ಬಿತ್ತಿದಲ್ಲಿ ಹಲವುಗುಣದಂತಾದೆ.
ಉಭಯದ ಹೊಲಬ ತಿಳಿದು,
ಪೂರ್ವ ಉತ್ತರವೆಂಬ ಉಭಯದ ಗೊತ್ತ ಮುಟ್ಟದೆ,
ನಿಶ್ಚಯವಾಗಬೇಕು, ನಿಃಕಳಂಕ ಮಲ್ಲಿಕಾರ್ಜುನಾ. ||೫೩೬||

೧೯೫೫

ಬೀಜದೊಳಗಣ ವೃಕ್ಷ ಉಲಿಯಬಲ್ಲುದೆ ?
ರತ್ನದೊಳಗಣ ಉರಿ ಹೊತ್ತಬಲ್ಲುದೆ ?
ಭಿತ್ತಿಯ ಮೇಲಣ ಚಿತ್ರ ಬಟ್ಟೆಯಲ್ಲಿ ನಡೆಯಬಲ್ಲುದೆ ?
ಇದರಚ್ಚುಗವ ಕಂಡು ಮತ್ತೆ ಹಿರಿಯರೆಂದಡೆ,
ಅದೆತ್ತಣ [ಭೀತಿ] ಎನಗೆ, ನಿಃಕಳಂಕ ಮಲ್ಲಿಕಾರ್ಜುನಾ ? ||೫೩೭||

೧೯೫೬

ಬೀಜ ಹುಟ್ಟುವಲ್ಲಿ ಒಂದೆ ಗುಣ.
ನಿಂದಲ್ಲಿ ನಾನಾ ಪ್ರಕಾರಗಳಿಂದ
ಭೂಮಿಯಲ್ಲಿ ಪ್ರವೇಶಿಸಿಕೊಂಡಿಪ್ಪ ತೆರದಂತೆ,
ಆ ಮೂಲ ಮೇಲಂಕುರಿಸಿದ ಮತ್ತೆ
ಐಮುಗುಣದಲ್ಲಿ ಶಾಖೆವಡೆಯಿತ್ತು,
ಮೂರುಗುಣದಲ್ಲಿ ಎಲೆಯಂಕುರಿಸಿತ್ತು,
ಎಂಟುಗುಣದಲ್ಲಿ ಕುಸುಮ ಬಲಿಯಿತ್ತು,
ಉಮುರಿ ಹರಳು ನಿಂದಿತ್ತು.
ನವಗುಣದಲ್ಲಿ ಆ ರಸ ಬಲಿಯಿತ್ತು, ಷೋಡಶದಲ್ಲಿ ತೊಟ್ಟು ಬಿಟ್ಟಿತ್ತು.

ಪಂಚಪಿಂಶತಿಯಲ್ಲಿ ಸವಿದ ರುಚಿ ನಿಂದಿತ್ತು, ಶತಕದಲ್ಲಿ ಮರ[ನಾ]ಯಿತ್ತು.
ವೃಕ್ಷದ ಬೇರು ಕಡಿಯಿತ್ತು, ಮರ ಬಿದ್ದಿತ್ತು, ಕೊಂಬು ಹಂಗ ಬಿಟ್ಟಿತ್ತು,
ಕೊಂಬಿನೊಳಗಣ ಕೋಡಗ ಬಂಧುಗಳನೊಡಗೂಡಿ,
ಸಂದೇಹವಿಲ್ಲವಾಗಿ, ಶ್ರುತ ದೃಷ್ಟ ಅನುಮಾನದಲ್ಲಿ ತಿಳಿಯಿರಣ್ಣಾ.
ಬ್ರಹ್ಮನ ಉತ್ಪತ್ತಿ, ವಿಷ್ಣುವಿನ ಸ್ಥಿತಿ, ರುದ್ರನ ಲಯ.
ಇಂತೀ ಮೂವರ ಹಂಗಿಂದ ಬಂದ ದೇಹಕ್ಕೆ ಕಟ್ಟುವ ದೃಷ್ಟವ ನೋಡಾ.
ಒಮ್ಮೆಗೆ ಕಾರುಕನಲ್ಲಿ, ಇಮ್ಮೆಗೆ ಹರದಿಗನಲ್ಲಿ,
ತ್ರಿವಿಧಕ್ಕೆ ಮುಮ್ಮಾರಿನಲ್ಲಿ ಆದಿಯ ಹೆಣ್ಣಿನ ತೆರದಂತೆ,
ಅವರ ಕಂಡು ಆಹಾ ಅ[ದ]ಲ್ಲವೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೩೮ ||

೧೯೫೭

ಬೆಂಕಿಗೆ ಶೈತ್ಯ ಕೊಂಡು, ಉದಕಕ್ಕೆ ಉರಿ ಹುಟ್ಟಿ
ಮತ್ತುದಕವನರಸುವುದ ಕಂಡೆ.
ಮಡಕೆ ನಿಂದುರಿದು, ಅಕ್ಕಿ ಉಳಿಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಮರೆಯಲಾಗಿ. || ೫೩೯ ||

೧೯೫೮

ಬೆಟ್ಟದ ಮೇಲಣ ಗುಂಡು, ಬೆಟ್ಟವ ನುಂಗಿತ್ತು.
ಸೃಷ್ಟಿಯ ಮೇಲಣ ಜಗ, ಪೃಥ್ವಿಯ ನುಂಗಿತ್ತು.
ಹಸುವಿನ ಗರ್ಭದ ವತ್ಸ, ಹಸುವ ನುಂಗಿತ್ತು.
ಹೆಸರಿಡುವುದಿನ್ನೇನೊ ?
ಕಣ್ಣೊಳಗಣ ಎರಳೆ ಬಣ್ಣವ ನುಂಗಿದ ಮತ್ತೆ
ಬಣ್ಣಿಸಿ ಪೂಜಿಸಿಕೊಂಬುದಿನ್ನೇನೊ ?
ಕಣ್ಣಾಪಗಾಲದ ಹೊಳೆಯಲ್ಲಿ ಮುಳುಗಿ ಬೆಸ್ನುಗೆಟ್ಟಿರಲ್ಲಾ.
ಅಣ್ಣಗಳೆಲ್ಲರೂ ಮುಕ್ಕಣ್ಣನ ಪೂಜಿಸಿ ಮೂರುಬಟ್ಟೆಯ ಸುತ್ತಿ,
ಊರ ಹೊಕ್ಕು ಆರೈದಿರಯ್ಯಾ, ನೀವಾರಾಧಿಸುವ ಲಿಂಗವ.
ಆ ಲಿಂಗದಲ್ಲಿ ಲೀಯವಾದರೆ ಸಂಗಕ್ಕೆ ಒಳಗಾದರು.
ನಮ್ಮ ನಿಸ್ಸಂಗಿ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ದಿಕ್ಕುಗೆಟ್ಟೆನಯ್ಯಾ. || ೫೪೦ ||

೧೯೫೯

ಬೆಣ್ಣೆಯ ಮಡಕೆಯಲ್ಲಿ ಕಿಚ್ಚು ತುಂಬಿ, ಉರಿವುತ್ತಿದ್ದುದ ಕಂಡೆ.
ಕಿಚ್ಚು ಕರಗಿ, ಬೆಣ್ಣೆ ಉಳಿಯಿತ್ತು.
ಉಳಿದ ಉಳುಮೆಯ ಒಡಗೂಡಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ [ಅರಿ]. || ೫೪೧ ||

೧೯೬೦

ಬೆಲ್ಲದ ಗೋಟು ಕುಬ್ಜವಾದಡೇನು,
ಅದರ ಸಿಹಿಯೆಲ್ಲಕ್ಕೂ ಗುಡ್ಡನೆ ?
ಮುಕುರದ ಸಾಕಾರ ಚಿಕ್ಕದಾದಡೇನು,
ಅದರ ಪ್ರತಿಬಿಂಬ ಚಿಕ್ಕದೆ ಅಯ್ಯಾ ?
ಸಕಲರೊಳು ತನು ಕೂಡಿರ್ದಡೇನು,
ವಿಕಳನಾಗದಿರ್ದಡೆ ಸಾಲದೆ ?
ಆತನಿರವು ಘೃತಕ್ಷೀರದಂತೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೪೨||

೧೯೬೧

ಬೆಲ್ಲದ ದಂಟು ಅದೆಲ್ಲಿದ್ದಡೂ,
ತನ್ನ ನೇಯ ಪಲ್ಲಟದಲ್ಲಿದ್ದಡೂ
ನರಪ್ರಕೃತಿ ಭಾವಜ್ಞರ ಮನೆಯ ಬಾಗಿಲಲ್ಲಿದ್ದಡೂ
ವಿಜಾತಿಗುಣವಲ್ಲದೆ ನೀತಿಗುಣವಿಲ್ಲ.
ಅವರುಗಳಲೇತಕ್ಕೆ ಬಾತೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೪೩||

೧೯೬೨

ಬೆಳಗಿಂಗೆ ಬೆಳಗಿನಿತ್ತಡೆ ನೋಡಬಲ್ಲವರಾರು ?
ಸವಿಗೆ ಸ್ವಾದವನಿತ್ತಡೆ ರುಚಿಸಬಲ್ಲವರಾರು ?
ಜ್ಞಾನಕ್ಕೆ ಜ್ಞಾನವ ಹೇಳಿದಡೆ ಕೇಳಬಲ್ಲವರಾರು ?
ಕರ್ತ ನೀನಾಗಿ, ಭೃತ್ಯ ನಾನಾಗಿ ಇದರಚ್ಚುಗವ ಬಿಡಿಸಾ,
ನಿಃಕಳಂಕ ಮಲ್ಲಿಕಾರ್ಜುನಾ. ||೫೪೪||

೧೯೬೩

ಬೆಳಗಿನಲ್ಲಿದ್ದು ಬೆಳಗ ಕಾಬುದು ತಾನೊ, ಇದಿರೊ ?
ಇಷ್ಟದ ಮರೆಯಲ್ಲಿರ್ದ ದೃಷ್ಟವ ಕಂಡೆಹೆನೆಂದಡೆ,
ಕಾಬುದು, ಕಾಣಿಸಿಕೊಂಬುದು ಅದನೇನೆಂದರಿಯಬೇಕು.
ಅರಿದಲ್ಲದೆ ಇಷ್ಟ, ಪ್ರಾಣ ಸಮರ್ಪಣವಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ ||೫೪೫||

೧೯೬೪

ಬೇಟದಲ್ಲಿ ಸುಖಿಯಾದ ಮತ್ತೆ ಕೂಟದ ಆಟವೇಕೆ ?
ಜಂಗಮದಲ್ಲಿ ಕೂಟ ಕೂಡಿದ ಮತ್ತೆ, ವಸ್ತುವಿನಲ್ಲಿ ಕೂಡಿಹೆನೆಂಬ ಆತುರವೇಕೆ?
ನಿತ್ಯಸುಖಿಯಾದ ಮತ್ತೆ ಬಚ್ಚೊತ್ತಿಗೊಂದು ಪರಿಯಾಗಲೇಕೊ?

ಈ ಸಚ್ಚಿದಾನಂದನವರಿದಡೆ, ಭಕ್ತಿ ಮುಕ್ತಿಗೆ ದೂರ,
ನಿಃಕಳಂಕ ಮಲ್ಲಿಕಾರ್ಜುನಾ. || ೫೪೬ ||

೧೯೬೫

ಬೇಡ ಬಿಲ್ಲ ಹಿಡಿದು, ರೂಢಿಯಲ್ಲಿ ತಿರುಗಾಡುತ್ತಿರಲಾಗಿ,
ಬೇಡನ ಬಿಲ್ಲ ಬೇಡಿ ಕಾಡಿಪರೆಲ್ಲರು.
ಆ ಬಿಲ್ಲು ರೂಢಿಯದಲ್ಲ, ಇನ್ನಾರು ಕೊಟ್ಟರೊ.
ಕೊಟ್ಟವರ ಕೊಂದು, ಕೊಡದವರ ಹಿಂಗಿ.
ಬಟ್ಟೆಯ ಹಂಗಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೫೪೭ ||

೧೯೬೬

ಬೇರು ಒಣಗಿದಲ್ಲಿ ಅಂಕುರವುಂಟೆ ?
ಆರನರಿಯದೆ ಮೂರ ಪ್ರಮಾಣಿಸದೆ,
ಮೀರಿ ಇಪ್ಪಾತನ ಭೇದವನರಿಯದೆ,
ಮತ್ತೆ ತೋರಿಕೆಗೆ ಇನ್ನಾವುದು ಹೇಳಾ ?
ಯುಗ ಪ್ರಮಾಣಿಸುವುದಕ್ಕೆ ಮುನ್ನ,
ಆಚೆಯಲ್ಲಿ ನಾನರಿಯೆ. ಈಚೆಯಲ್ಲಿ ನಾ ಬಲ್ಲ ಇಷ್ಟ,
ಆವ ಸ್ಥಲದಲ್ಲಿಯೂ ಸ್ಥಲಭರಿತನಾಗಿ,
ಹಿಡಿವಲ್ಲಿ ಕ್ರೀ ಶುದ್ಧವಾಗಿ, ಅರಿವಲ್ಲಿ ಆತ್ಮಶುದ್ಧವಾಗಿ.
ಇಂತೀ ಉಭಯದ ಒಡಲನರಿದು ಒಡಗೂಡಬೇಕು,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯಬಲ್ಲಡೆ. || ೫೪೮ ||

೧೯೬೭

ಬೋಧೆನೆಯ ಬೋಧಿಸಿ ಉಂಬವರೆಲ್ಲರೂ ಸಾಧಾರಣಕ್ಕೆ ಈಡಾವರು.
ನಿರ್ಬೋಧೆಯ ಹೇಳುವ ಹಿರಿಯರೆಲ್ಲರೂ ಬಾಗಿಲ ಕಾಯ್ವುದಕ್ಕೊಳಗಾದರು.
ಈಜಲರಿಯದವನೊಂದಾಗಿ ಹೊಳೆಯ ಹಾಯ್ದು,
ಪ್ರಾಣಕ್ಕೆ ಆಸೆ ಮಾಡುವನಂತೆ,
ಇಷ್ಟವನರಿಯದವರ ಮಾತ ಕೇಳಿ,
ತಾ ಮುಕ್ತನಾದೆಹೆನೆಂಬ ಧೂರ್ತರ ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೫೪೯ ||

೧೯೬೮

ಬ್ರಹ್ಮನ ಉತ್ಪತ್ಯವ ಕಳೆದಲ್ಲದೆ ಲಿಂಗಕ್ಕೆ ಮಜ್ಜನವೆರೆಯಲಾಗದು.
ವಿಷ್ಣುವಿನ ಸ್ಥಿತಿಯನರಿದಲ್ಲದೆ ಲಿಂಗಕ್ಕೆ ನೈವೇದ್ಯವ ತೋರಲಾಗದು.

ರುದ್ರನ ಲಯವ ಹಿಂಗಿಯಲ್ಲದೆ ಲಿಂಗಸಂಗಿಯಾಗಬಾರದು.
ಮಾತಿನ ಗೆಲ್ಲಸೋಲಕ್ಕೆ ಹಿರಿಯರಾದಿರಲ್ಲದೆ ಬಲ್ಲವರಾದುದಿಲ್ಲ.
ಭಕ್ತರೆಂಬವರು ಉಂಟು, ಇಲ್ಲವೆಂಬ ಸಂದೇಹದಲ್ಲಿ ಸಂಕಲ್ಪಜೀವಿಗಳಾದರು.
ಇಂತೀ ದ್ವಯದ ಅವಧಿಯನರಿಯದೆ ಭಕ್ತರೆಂತಾದಿರಪ್ಪಾ.
ಇಂತೀ ಉಭಯದ ತೆರನನರಿಯದ ಜಂಗಮವೆಂತಾದಿರಣ್ಣಾ.
ಆಜ್ಞೆಯೊಳಡಗದ ಹೆಂಡತಿಗೆ ಗಂಡನಾದಂತೆ ಇದಕ್ಕಿನ್ನೇವೆ,
ನಿಃಕಳಂಕ ಮಲ್ಲಿಕಾರ್ಜುನಾ ? ||೫೫೦||

೧೯೬೯

ಬ್ರಹ್ಮನ ಕಲ್ಪಿತವ ಕಳೆಯನಾಗಿ, ಗುರು ಲಿಂಗವ ಕೊಟ್ಟುದು ಹುಸಿ.
ಆ ಲಿಂಗ ಬಂದು ತನುವನಿಂಬುಗೊಳ್ಳದಾಗಿ, ವಿಷ್ಣುವಿನ ಸ್ಥಿತಿ ಬಿಟ್ಟುದು ಹುಸಿ.
ಆ ವಿಷ್ಣುವಿನ ಹಂಗಿನಲ್ಲಿ ಉಂಡುಹೋಹ ಕಾರಣ, ಜಂಗಮದ ಮಾಟ ಹುಸಿ.
ಇದು ಕಾರಣ, ರುದ್ರನ ಹಂಗಿನಲ್ಲಿ ಜಗವೆಲ್ಲ ಲಯವಾಗುತ್ತಿರ್ಪ ಕಾರಣ,
ಪ್ರಾಣಲಿಂಗಿಗಳೆಂಬುದು ಹುಸಿ.
ಇಂತಿವು ನಿರ್ಲೇಪವಾಗಿಯಲ್ಲದೆ ಸಹಜಭರಿತನಲ್ಲ, ಇಹ ಪರಕ್ಕೆ ಸಲ್ಲ.
ಸೊಲ್ಲಿಗಭೇದ್ಯ ನಿಃಕಳಂಕ ಮಲ್ಲಿಕಾರ್ಜನ ಬಲ್ಲರ ಬಲ್ಲಹ. ||೫೫೧||

೧೯೭೦

ಬ್ರಹ್ಮನ ಡಾಗು ಬೆನ್ನಮೇಲೆ, ವಿಷ್ಣುವಿನ ಡಾಗು ಕೈಯ ಮೇಲೆ.
ರುದ್ರನ ಡಾಗು ತಲೆಯ ಮೇಲೆ.
ಇಂತೀ ಡಾಗಿನ ಪಶುಗಳಿಗೇಕೆ ಅನಾಗತನ ಸುದ್ದಿ ?
ಇದು ನಿಮಗೆ ಸಾ[ಧಿ]ಸದೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೫೨||

೧೯೭೧

ಭಂಡವ ತುಂಬಿದ ಹಸುಬೆ, ಕೊಂಡವನ ನುಂಗಿತ್ತು.
ಆ ಚೀಲದ ಮದ್ದು, ನುಂಗಿದವನ ಖಂಡವನೊಡೆದು,
ದಿಂಡುಗೆಡಹಿತ್ತು ತನುವ.
ಆ ಖಂಡವ ಕೊಂಡುಹೋಗಿ ಉಂಡವ ಸತ್ತ,
ನಿಃಕಳಂಕ ಮಲ್ಲಿಕಾರ್ಜುನಾ. ||೫೫೩||

೧೯೭೨

ಭಕ್ತಂಗೆ ಪೃಥ್ವಿಯಂಗವಾಗಿ, ಮಾಹೇಶ್ವರಂಗೆ ಅಪ್ಪುವಂಗವಾಗಿ,
ಪ್ರಸಾದಿಗೆ ಅಗ್ನಿಯಂಗವಾಗಿ, ಪ್ರಾಣಲಿಂಗಿಗೆ ಪವನನಂಗವಾಗಿ,

ಶರಣಂಗೆ ಆಕಾಶವಂಗವಾಗಿ, ಐಕ್ಯಂಗೆ ಮಹಾಬೆಳಗೆ ಅಂಗವಾದಲ್ಲಿ,
ಪಂಚತತ್ವ ಕೂಡಿ ಒಂದರಲ್ಲಿ ಎಯ್ದುವಲ್ಲಿ, ಷಡುಸ್ಥಲ ರೂಪಾಯಿತ್ತು.
ಆರುವರ್ಣಕ್ಕೆ ಅಪ್ಪು ಅರಸಾದಂತೆ,
ಏಕಛತ್ರ ಮಹಾರಾಜ ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೫೫೪ ॥

೧೯೭೩

ಭಕ್ತಂಗೆ ಬೀಜರೂಪು, ಮಾಹೇಶ್ವರಂಗೆ ಅಂಕುರರೂಪು,
ಪ್ರಸಾದಿಗೆ ಸಸಿರೂಪು, ಪ್ರಾಣಲಿಂಗಿಗೆ ಫಲರೂಪು,
ಶರಣಂಗೆ ಆ ಕೆಯ್ಯ ಕೊಯ್ವರೂಪು,
ಐಕ್ಯಂಗೆ ಆ ಹುಲ್ಲ ಒಕ್ಕಿ, ಮೆಟ್ಟಿಸಿ ತೂರುವಾಗ,
ಹೊಟ್ಟ ಕಳೆದು, ಭತ್ತ ನಿಂದು, ಹುಲ್ಲು ಹೊರೆಗಟ್ಟಿತ್ತು.
ಒಕ್ಕಿದ ಮೇಟಿ ಕಿತ್ತಿತ್ತು.
ಹುಲ್ಲು ಮೆದೆಗೆ ಹೋಯಿತ್ತು, ಹೊಳ್ಳುಗೋಡು ಬಿದ್ದಿತ್ತು.
ನಿಂದ ಭತ್ತ ಪುನರಪಿ ಬೀಜವಹುದಕ್ಕೆ ಮುನ್ನವೆ,
ನಿಃಕಳಂಕ ಮಲ್ಲಿಕಾರ್ಜುನನೆಂಬ ಹಗೆಯದಲ್ಲಿ ಹೋಯಿತ್ತು. ॥ ೫೫೫ ॥

೧೯೭೪

ಭಕ್ತಂಗೆ ಭಕ್ತಿಯ ಲಕ್ಷಣವೆಂತೆಂದಡೆ :
ಕಳ್ಳ ಹಾದರಿಗ ಹಾವಾಡಿಗ ಆರಾದಡೂ
ಶಿವಲಾಂಛನವ ತಾಳಿ ಬಂದಲ್ಲಿ, ಶಿವನೆಂದೇ ಪ್ರಮಾಣಿಸುವುದು.
ಮಾಡುವಾತನ ಭಕ್ತಿಯ ಲಕ್ಷಣ ವರ್ಮವನರಿದು,
ಮಾಡುವ ಸದ್ಭಕ್ತನ ಇರವೆಂತೆಂದಡೆ :
ಒರತೆಯ ಘಟದಲ್ಲಿ ತೋರುವ ಚಿತ್ರ, ಚಿತ್ರವಪ್ಪುದೆ ?
ಕತ್ತಲೆಯ ಮನೆಯಲ್ಲಿ ಒಪ್ಪುವ ಚಿತ್ತಾರದಂತೆ,
ಚಿತ್ತಾರದಲ್ಲಿ ಅಡಗಿದ ನಿಶ್ಚಯದ ಲೆಕ್ಕಣಿಕೆಯಂತೆ,
ಚಿತ್ತದೊಳಡಗಿದ ನಿಶ್ಚಯದಂತೆ ಓಗರಿದು ಮಾಡುವುದೇ ವರ್ಮಸ್ಥಲ,
ಸಮೂಹದಲ್ಲಿ ಮಾಡುವುದೇ ಭಕ್ತಸ್ಥಲ.
ಇಂತೀ ಉಭಯದಾವರ್ತವನರಿದಲ್ಲದೆ ಭಕ್ತನಲ್ಲ, ವಿರಕ್ತನಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ॥ ೫೫೬ ॥

೧೯೭೫

ಭಕ್ತಂಗೆ ಭಕ್ತಸ್ಥಲ, ಮಹೇಶ್ವರಂಗೆ ಮಾಹೇಶ್ವರಸ್ಥಲ,
ಪ್ರಸಾದಿಗೆ ಪ್ರಸಾದಿಸ್ಥಲ, ಪ್ರಾಣಲಿಂಗಿಗೆ ಪ್ರಾಣಲಿಂಗಿಸ್ಥಲ,

ಶರಣಂಗೆ ಶರಣಸ್ಥಲ, ಐಕ್ಯಂಗೆ ಮಹದೈಕ್ಯಸ್ಥಲ.
ಇಂತೀ ಈರಾರ ಭೇದಮಿಶ್ರಂಗಳು ಕೂಡಿ, ತತ್ವವೊಂದರಲ್ಲಿ ಎಯ್ದಿ,
ಆ ವಸ್ತುವಿಗೆ ಒಂದೆ ವಿಶ್ವಾಸದಲ್ಲಿ ಸಂಭವಿಸಿ ಲೇಪವಾಯಿತ್ತು.
ಇಂತೀ ಗುಣಸ್ಥಲ ಲೇಪ ಐಕ್ಯ.
ನಿಃಕಳಂಕ ಮಲ್ಲಿಕಾರ್ಜುನ ನಾಮವಡಗಿದ ನಿರ್ನಾಮಭೇದ. ||೫೫೭||

೧೯೭೬

ಭಕ್ತಂಗೆ ವಿಶ್ವಾಸ ಗುರುವೆಂದು ಪ್ರಮಾಣಿಸಿದಲ್ಲಿ,
ಪ್ರತ್ಯುತ್ತರವಿಲ್ಲದೆ ನಿಗರ್ವಿಯಾಗಿರಬೇಕು.
ಲಿಂಗವೆಂದು ಪ್ರಮಾಣಿಸಿದಲ್ಲಿ, ಸಂದೇಹವಿಲ್ಲದಿರಬೇಕು.
ಜಂಗಮವೆಂದು ಪ್ರಮಾಣಿಸಿದಲ್ಲಿ, ತ್ರಿವಿಧದ ಹಂಗಿಲ್ಲದಿರಬೇಕು.
ಇದರಂದ ಒಂದೂ ಇಲ್ಲದೆ ಭಕ್ತರಾದೆವೆಂಬ
ಮಿಟ್ಟೆಯಭಂಡರ ನೋಡಾ, ನಿಃಕಳಂಕ ಮಲ್ಲಿಕಾರ್ಜುನಾ. ||೫೫೮||

೧೯೭೭

ಭಕ್ತಂಗೆ ಹೆಣ್ಣುಬೇಡ, ಹೊನ್ನುಬೇಡ, ಮಣ್ಣುಬೇಡವೆಂದು ಹೇಳಿ,
ತಾ ಮುಟ್ಟುವನ್ನಬರ ಆ ಬೋಧೆಯ ಹುಸಿಯೆಂದ.
ತಾ ಮುಟ್ಟದೆ ತನ್ನ ಮುಟ್ಟಿಪ್ಪ ಭಕ್ತನ ತಟ್ಟದೆ,
ಕರ್ಮಕ್ಕೆ ಕರ್ಮವನಿತ್ತು ತಾ ವರ್ಮಿಗನಾಗಬಲ್ಲಡೆ,
ಹೊಳೆಯಲ್ಲಿ ಹಾಕಿದ ಸೋರೆಯಂತೆ, ಅನಿಲ ಕೊಂಡೊಯ್ದ ಎಲೆಯಂತೆ,
ಯಾತಕ್ಕೂ ಹೊರಗಾಗಿ ಜಗದಾಸೆಯಿಲ್ಲದಿಪ್ಪ ವೇಷಕ್ಕೆ ಒಳಗಲ್ಲ.
ಆತ ಜಗದೀಶನೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. ||೫೫೯||

೧೯೭೮

ಭಕ್ತದೇವನಿಗೆ ನೀರು ತಾವರೆಯ ತೆರನಂತೆ,
ಭಕ್ತ ದೇವನಿಗೆ ಕ್ಷೀರನೀರಿನ ತೆರನಂತೆ,
ನಿನಗೂ ನನಗೂ ಬೇರೊಂದೆಡೆಯುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ ? ||೫೬೦||

೧೯೭೯

ಭಕ್ತನ ಅಂಗಸ್ಥಲ, ಮಹೇಶ್ವರನ ಭಾವಸ್ಥಲ,
ಪ್ರಸಾದಿಯ ಜ್ಞಾನಸ್ಥಲ, ಪ್ರಾಣಲಿಂಗಿಯ ಉಭಯಸ್ಥಲ,
ಶರಣನ ಏಕಸ್ಥಲ, ಐಕ್ಯನ ಕೂಟಸ್ಥಲ.

ಇಂತೀ ಆರುಸ್ಥಲವ ವೇಧಿಸಿ ನಿಂದಲ್ಲಿ, ಮಹದೈಕ್ಯ ಏಕಮೂರ್ತಿ,
ನಿಃಕಳಂಕ ಮಲ್ಲಿಕಾರ್ಜುನಾ. ||೫೬೧||

೧೯೮೦

ಭಕ್ತನಂಗ ಕಾಮ, ಮಹೇಶ್ವರನಂಗ ಲೋಭ,
ಪ್ರಸಾದಿಯಂಗ ಕ್ರೋಧ, ಪ್ರಾಣಲಿಂಗಿಯಂಗ ಮೋಹ,
ಶರಣನಂಗ ಮದ, ಐಕ್ಯನಂಗ ಮತ್ಸರ.
ಇಂತೀ ಷಡ್ಭಾವಸ್ಥಲಂಗಳ ಕೂಡುವಲ್ಲಿ,
ಸ್ಥೂಲವ ಕೂಡಿದಂಗ ಭಕ್ತನಾಗಿ,
ಸೂಕ್ಷ್ಮವ ಕೂಡಿದಂಗ ಮಾಹೇಶ್ವರನಾಗಿ,
ಕಾರಣವ ಕೂಡಿದಂಗ ಪ್ರಸಾದಿಯಾಗಿ,
ಇಂತೀ ಮೂರು ಭಕ್ತಿಸ್ವರೂಪವಾಗಿ,
ಆ ಸ್ಥೂಲದ ಕಳೆ ಪ್ರಾಣಲಿಂಗಿಯಾಗಿ, ಆ ಸೂಕ್ಷ್ಮದ ಕಳೆ ಶರಣನಾಗಿ,
ಆಕಾಶದ ಕಳೆ ಐಕ್ಯನಾಗಿ, ಏಕಮೂರ್ತಿ ತ್ರೈಮೂರ್ತಿಯಾಗಿ,
ಭಕ್ತಿಜ್ಞಾನವೈರಾಗ್ಯವೆಂಬುದನಾಧರಿಸಿದೆಯಲ್ಲಾ.
ಅದು ನಿನ್ನ ಲೀಲಾಭಾವ, ನಿಃಕಳಂಕ ಮಲ್ಲಿಕಾರ್ಜುನಾ. ||೫೬೨||

೧೯೮೧

ಭಕ್ತನ ತ್ರಿವಿಧ ಲಿಂಗಬೇದ,
ಚಿಪ್ಪಿನ ಮುತ್ತಿನ ಅಪ್ಪುವಿನಂತೆ ಇದ್ದಿತ್ತು.
ಆ ತ್ರಿವಿಧದ ಆದಿಯನರಿದಲ್ಲಿ ಭಕ್ತಸ್ಥಲ ಸಂಪೂರ್ಣ.
ಮಾಹೇಶ್ವರನ ತ್ರಿವಿಧಲಿಂಗ ಭೇದ,
ವಾರಿವಾಯುವಿನ ಸಂಗದ ಕಲ್ಲಿನ ಬೆಗಡದಂತೆ ಇದ್ದಿತ್ತು.
ಪ್ರಸಾದಿಯ ತ್ರಿವಿಧಲಿಂಗದ ಭೇದ,
ಉರಿಯ ತುದಿಯ ಮೇಲೆ ಎರೆದೆಣ್ಣೆಯ ಕೊಂಡು ಉರಿವ ಸರದಂತೆ ಇದ್ದಿತ್ತು.
ಪ್ರಾಣಲಿಂಗಿಯ ತ್ರಿವಿಧಲಿಂಗದ ಭೇದ,
ಹರಿವ ಅಪ್ಪುವಿನಲ್ಲಿ ಬರೆದ ಚಿತ್ತಾರದಂತೆ ಇದ್ದಿತ್ತು.
ಶರಣನ ತ್ರಿವಿಧಲಿಂಗದ ಭೇದ,
ವಜ್ರದ ಬೆಳಗಿನ ಕಳೆಯ ಹೊಳಹಿನಂತೆ ಇದ್ದಿತ್ತು.
ಐಕ್ಯನ ತ್ರಿವಿಧವಡಗಿದ ಭಾವ,
ಈ ಪೂರ್ವದ ಐದನವಗವಿಸಿ ಸ್ವಯವಾದುದು ಐಕ್ಯಾನುಭಾವ.
ಇಂತೀ ಸ್ಥಲವನೆಯ್ದಿ, ನಿಃಸ್ಥಲವಾದಲ್ಲಿ ನಿಃಕಳಂಕನಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. ||೫೬೩||

೧೯೮೨

ಭಕ್ತನ ಭಕ್ತಿ, ಮಹೇಶ್ವರನ ಮಾಹೇಶ, ಪ್ರಸಾದಿಯ ಪ್ರಸಾದಿ,
ಪ್ರಾಣಲಿಂಗಿಯ ಪ್ರಾಣಲಿಂಗಿ, ಶರಣನ ಶರಣ, ಐಕ್ಯನ ಐಕ್ಯವೆಂಬಲ್ಲಿ
ದೃಷ್ಟವಾವುದು ಹೇಳಿರಣ್ಣಾ ?
ಘಟ ಬಿದ್ದಲ್ಲಿ ಆತ್ಮನೆಲ್ಲಿ ಅಡಗಿತ್ತು ಎಂಬುದನರಿದಲ್ಲಿ, ಭಕ್ತನ ಭಕ್ತಸ್ಥಲ.
ಕೆಚ್ಚಲ ಕೊಯಿದು ಹಿಕ್ಕಿದಲ್ಲಿ ಅಮೃತವಿಪ್ಪೆಡೆಯ ಬಲ್ಲಡೆ,
ಮಹೇಶ್ವರನ ಮಾಹೇಶ್ವರಸ್ಥಲ.
ಇಂಗಳ ಕೆಡಿಸಿ ನಂದಿದಲ್ಲಿ ಆ ವಹ್ನಿಯ ಅಂಗವೆಲ್ಲಿ ಅಡಗಿತ್ತು
ಎಂಬುದನರಿದಲ್ಲಿ, ಪ್ರಸಾದಿಯ ಪ್ರಸಾದಿಸ್ಥಲ.
ರತ್ನದ ಶಿಲೆ ಒಡೆದು ಪುಡಿಯಾದಲ್ಲಿ ರತಿಯೆಲ್ಲಿ ಅಡಗಿತ್ತು
ಎಂಬುದನರಿದಲ್ಲಿ, ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ.
ವಾಸನೆಯ ಕುಸುಮವ ಹೊಸೆದು ವಾಸನೆ ಹೋಗಿ,
ಆ ಸುವಾಸನೆ ಅಡಗಿತ್ತೆಂಬುದನರಿದಲ್ಲಿ, ಶರಣನ ಶರಣಸ್ಥಲ.
ಅನಲ ಆಹುತಿಗೊಂಡು ಬೇವಲ್ಲಿ ಆ ಭಾವವ ಭಾವಿಸಬಲ್ಲಡೆ, ಐಕ್ಯನ ಐಕ್ಯಸ್ಥಲ.
ಇಂತೀ ಆರು ಸ್ಥಲದ ಭೇದವನರಿತು, ಮೂರು ಆರಾದ ಉಭಯವ ಕಂಡು,
ಇಂತೀ ಆರರೊಳಗೆ ಆರಾದ ಭೇದವ ಭಾವಿಸಿ ತಿಳಿದು,
ಮುಕುರದೊಳಗಣ ಬಿಂಬವ ಪ್ರತಿಬಿಂಬಿಸಿ ಕಾಬುದು,
ಒಂದೋ, ಎರಡೋ ? ಎಂಬುದ ತಿಳಿದಲ್ಲಿ, ಸರ್ವಸ್ಥಲ ಸಂಪೂರ್ಣ.
ಆತ ಸರ್ವಾಂಗಲಿಂಗಿ ಐಕ್ಯಾನುಭಾವಿ, ನಿಃಕಳಂಕ ಮಲ್ಲಿಕಾರ್ಜುನಾ. || ೫೬೪ ||

೧೯೮೩

ಭಕ್ತನ ಭಕ್ತಸ್ಥಲದ ಮಹೇಶ್ವರನ ಭಾವ, ಧರೆಪಂಕಜಲದಂತೆ.
ಮಹೇಶ್ವರನ ಮಹೇಶ್ವರನ ಪ್ರಸಾದಿಯ ಭಾವ, ತರುಗಂಧ ಅನಿಲದಂತೆ.
ಪ್ರಸಾದಿಯ ಪ್ರಸಾದಿಯ ಪ್ರಾಣಲಿಂಗಿಯ ಭಾವ,
ಮರೀಚಿಕಾಜಲದ ತೆರೆಯ ಹೊಳಹಿನ ಅರುಣನ ಕಿರಣ ಗ್ರಹಿಸಿಕೊಂಡಂತೆ.
ಪ್ರಾಣಲಿಂಗಿಯ ಪ್ರಾಣಲಿಂಗಿಯ ಶರಣಸ್ಥಲದ ಭಾವ, ತಿಲ ತೈಲ ನೀಡಿಸಂತೆ.
ಶರಣನ ಶರಣನ ಐಕ್ಯಸ್ಥಲದ ಭಾವ,
ದರ್ಪಣದ ಬಿಂಬ ಬಿಂಬಿಸುವ ಉಭಯದೃಷ್ಟಿ ಏಕವಾದಂತೆ.
ಐಕ್ಯನ ಮಹದೈಕ್ಯಭಾವ, ಮಿಂಚಿನ ಕುಡಿವೆಳಗಿನ
ಸಂಚದ ಸಂಚಲದ ಸಂಚಾರ ಸಂಚಲಿಸುವ ಸರದಂತೆ.
ಇಂತೀ ಸ್ಥಲ, ಭಾವಕ್ಕೆ ಭಾವ, ಜ್ಞಾನಕ್ಕೆ ಜ್ಞಾನ ವೇಧಿಸಿ ಭೇದಿಸುವಲ್ಲಿ,
ದೃಕ್ಕು ದೃಶ್ಯಕ್ಕೆ ಒಡಲಿಲ್ಲದಿರಬೇಕು, ನಿಃಕಳಂಕ ಮಲ್ಲಿಕಾರ್ಜುನಾ. || ೫೬೫ ||

೧೯೮೪

ಭಕ್ತನಾದ ಮತ್ತೆ ಬಂಧಗಳ ಬಿಡಬೇಕು.
ವಿರಕ್ತನಾದ ಮತ್ತೆ ಧರಿತ್ರಿಯಲ್ಲಿ ಸುಳಿಕ್ಕೆ ಸಿಕ್ಕ ಮತ್ತನಾಗದಿರಬೇಕು.
ಇಕ್ಕುವರ ಬಾಗಿಲ ಕಾಯದೆ, ಸುಚಿತ್ತದಿಂದ ಬಂದ ಭಿಕ್ಷವ ಕೊಂಡು,
ಅಚಿತ್ತವ ಮರೆದು, ಸತ್ಯಚಿತ್ತನಾದ ಭಕ್ತ ಜಂಗಮಕ್ಕೆ
ನಿತ್ಯ ನಮೋ ನಮೋ, ನಿಃಕಳಂಕ ಮಲ್ಲಿಕಾರ್ಜುನಾ. ||೫೬೬||

೧೯೮೫

ಭಕ್ತನಾದಲ್ಲಿ ಧರಿತ್ರಿಯಂತಿರಬೇಕು.
ಮಾಹೇಶ್ವರನಾದಲ್ಲಿ ಅಪ್ಪುವಿನಂತಿರಬೇಕು.
ಪ್ರಸಾದಿಯಾದಲ್ಲಿ ವಹ್ನಿಯಂತಿರಬೇಕು.
ಪ್ರಾಣಲಿಂಗಿಯಾದಲ್ಲಿ ಶುಕ್ತಿ ಕೊಂಡ ಬಿಂದುವಂತಿರಬೇಕು.
ಶರಣನಾದಲ್ಲಿ ಉರಿಯುಂಡ ಕರ್ಪೂರದಂತಿರಬೇಕು.
ಐಕ್ಯನಾದಲ್ಲಿ ಹಸುಳೆ ಕಂಡ ಕನಸಿನಂತಿರಬೇಕು.
ಒಂಗಿಂದದಕೆ ಆರರಲ್ಲಿ ಲೇಪ, ಮೂರರಲ್ಲಿ ಮುಕ್ತಿ.
ಇದ ಮೀರಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೫೬೭||

೧೯೮೬

ಭಕ್ತನಾದಲ್ಲಿ ಬ್ರಹ್ಮನ ಬಲೆಗೊಡೆಯಬೇಕು.
ಮಾಹೇಶ್ವರನಾದಲ್ಲಿ ವಿಷ್ಣುವಿನ ಚೇತನಕ್ಕೆ ಸಿಕ್ಕದಿರಬೇಕು.
ಪ್ರಸಾದಿಯಾದಿಯಲ್ಲಿ ರುದ್ರನ ಬಂಧಕ್ಕೆ ಹೊದ್ದದಿರಬೇಕು.
ಪ್ರಾಣಲಿಂಗಿಯಾದಲ್ಲಿ ಈಶ್ವರನ ಗೊತ್ತ ಮೆಟ್ಟದಿರಬೇಕು.
ಶರಣನಾದಲ್ಲಿ ಸದಾಶಿವಮೂರ್ತಿಯ ತಪ್ಪಲ ತಪ್ಪಿರಬೇಕು.
ಐಕ್ಯನಾದಲ್ಲಿ ಪರಶಿವನೆಂಬ ಪ್ರಮಾಣು ನಷ್ಟವಾಗಿರಬೇಕು.
ಇಂತೀ ಸ್ಥಲಂಗಳ ಮೆಟ್ಟಿ, ತೆಪ್ಪದ ಹತ್ತಿ ಒತ್ತುವನಂತೆ.
ತೆಪ್ಪದ ತಪ್ಪಲಿಗೆ ಸೇರಿದ ಮತ್ತೆ ಒತ್ತುವುದು ಹತ್ತುವುದು.
ಆ ಹೊಳೆ ಕಾಲಿಂಗೆ ಹೊಲಬಾದರದ ಮತ್ತೆ ಪೂರ್ವದತ್ತ ಉತ್ತರದತ್ತ,
ಊರ್ಧ್ವಮಧ್ಯದತ್ತ.
ಅತ್ತಲೆ ತಪ್ಪಿಪ್ಪ ಮತ್ತೆ ನಿಃಕಳಂಕ ಮಲ್ಲಿಕಾರ್ಜುನಾ. ||೫೬೮||

೧೯೮೭

ಭಕ್ತ ಮಾಹೇಶ್ವರ ಪ್ರಸಾದಿ ಇಂತೀ ತ್ರಿವಿಧವಾಯಿತು.
ಆ ತ್ರಿವಿಧಸ್ಥಲಂಗಳಲ್ಲಿ ಕಾಯ ಜೀವ ಭಾವ ಈ ತ್ರಿವಿಧವಾಯಿತು.

ಕಾಯದ ಕರ್ಮವ ಕಳೆದು, ಜೀವದ ಭವವ ಹಿಂಗಿಸಿ,
ಭಾವದ ಪ್ರಕೃತಿಯ ನಂದಿಸಿ,
ಇಷ್ಟಲಿಂಗವ ದೃಷ್ಟದ ತನುವಿಂಗೆ ಪ್ರಮಾಣಿಸುವಲ್ಲಿ,
ಅದು ಗುರುಸ್ಥಲಭಾವ, ಅಲ್ಲಿ ಮೂರುಸ್ಥಲ ಲೇಪ,
ನಿಃಕಳಂಕ ಮಲ್ಲಿಕಾರ್ಜುನಾ. || ೫೮೯ ||

೧೯೪೪

ಭಕ್ತ ಮಾಹೇಶ್ವರ ಪ್ರಸಾದಿ ಈ ಮೂರು ಭಕ್ತನಂಗ.
ಪ್ರಾಣಲಿಂಗಿ ಶರಣ ಐಕ್ಯ ಈ ಮೂರು ಜಂಗಮದಂಗ.
ಮೂರಕ್ಕಾರು ಸತಿಪತಿಭೇದವನರಿವುದು.
ಆ ಆರರ ಒದಗು ಇಪ್ಪತ್ತೈದರ ಬೀಜ.
ಈ ಭೇದವನರಿದ ಮತ್ತೆ ನೂರೊಂದು ಆರರಲ್ಲಿ ಅಡಗಿ,
ಆ ಆರು ಐದರಲ್ಲಿ ನಿಂದು, ಐದು ಮೂರರಲ್ಲಿ ನಿಂದು ಭೇದಿಸಿ,
ಮೂರು ಒಂದರಲ್ಲಿ ನಿಂದು ಸಂದೇಹವಳಿಯಿತ್ತು.
ಇಂತು ಎನ್ನ ಭ್ರಮೆ ಹಿಂಗಿತ್ತು.
ಇಂತಿವರ ನಾನಾ ಸ್ಥಳ ಕುಳಂಗಳೆಲ್ಲವು ಆದಿಗತೀತವಾದ ಮತ್ತೆ
ಭಾವದ ಗುರುವೆನಲೇಕೆ ? ಅವತಾರದ ಲಿಂಗವೆನಲೇಕೆ ?
ಅರಿದು ಮರೆದವ ಜಂಗಮವೆನಲೇಕೆ ?
ಇಂತಿವ ಕಂಡೂ ಕಾಣದ, ನಂಬಿಯೂ ನಂಬದ ಸಂದೇಹಿಗೇಕೆ,
ಗುರು ಲಿಂಗ ಜಂಗಮ ?
ಪ್ರಥಮ ಕ್ರಿಯೆಯಲ್ಲಿ ಮೋಸ, ಜ್ಞಾನಕ್ಕೆ ಲಾಭವೆ ?
ಇದು ದೃಷ್ಟದ ದರ್ಪಣದ ಒಳಹೊರಗಿನಂತೆ ತಿಳಿದು ನೋಡೆ,
ಉಭಯಸ್ಥಲವೈಕ್ಯ ನಿಃಕಳಂಕ ಮಲ್ಲಿಕಾರ್ಜುನಾ. || ೫೭೦ ||

೧೯೪೯

ಭಕ್ತ ಮಾಹೇಶ್ವರಸ್ಥಲ ಏಕವಾದಲ್ಲಿ,
ಶಿಲೆ ಬಿಂದುವಿನ ಚಂದ್ರನ ಬಿಂಬದಂತೆ ಇದ್ದಿತ್ತು.
ಪ್ರಸಾದಿಯ ಪ್ರಾಣಲಿಂಗಿಯ ಸ್ಥಲ ಏಕವಾದಲ್ಲಿ,
ಅರಗಿನ ಪುತ್ಥಳಿಯ ಅವಯವಂಗಳ ಉರಿ ಹರಿದು, ಪರಿಹರಿಸಿದಂತೆ ಇದ್ದಿತ್ತು.
ಶರಣನ ಐಕ್ಯಸ್ಥಲದ ಭಾವ ಕರ್ಪುರವ ಅಗ್ನಿ ಆಹುತಿಯ ಕೊಂಡಂತೆ ಇದ್ದಿತ್ತು.
ಇಂತೀ ಆರು ಮೂರರಲ್ಲಿ ಅಡಗಿನಿಂದ ಕೂಟಸ್ಥಲ.
ಲೆಪ್ಪದ ಮೇಗಣ ಚಿತ್ರದ ದೃಕ್ಕಿನ ದೃಶ್ಯದಂತೆ ಇದ್ದಿತ್ತು.

ಇಂತೀ ತ್ರಿವಿಧಸ್ಥಲ ಏಕರೂಪವಾದಲ್ಲಿ, ಆಕಾಶದ ವರ್ಣದ ಬಹುರೂಪ
ಗರ್ಭೀಕರಿಸಿದ ನಿರಾಕಾರದಂತೆ ಇದ್ದಿತ್ತು.
ನಾಮವಿಲ್ಲದ ರೂಪು, ಭಾವವಿಲ್ಲದ ಮಾತು,
ನೀ ನಾನೆಂಬ ಸ್ಥಲ ಅದೇನು ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. || ೫೭೧ ||

### ೧೯೯೦

ಭಕ್ತ [ತಾ] ಮಾಡುವ ಕಾಯಕ, ತನಗೆಂದಡೆ ಗುರುವಿಂಗೆ ದೂರ,
ತನ್ನ ಸತಿಗೆಂದಡೆ ಲಿಂಗಕ್ಕೆ ದೂರ, ತನ್ನ ಸುತರಿಗೆಂದಡೆ ಜಂಗಮಕ್ಕೆ ದೂರ.
ತನ್ನ ಬಂಧುಗಳಿಗೆಂದಡೆ ಸಂಗನಬಸವಣ್ಣ ಮೊದಲಾದ
ಶರಣ ಸಂಕುಳಕ್ಕೆಲ್ಲಕ್ಕೂ ದೂರ.
ನನಗೂ ದೂರ,
ಎನ್ನೊಳಗಾದ ನಿಃಕಳಂಕ ಮಲ್ಲಿಕಾರ್ಜುನ ನಿನಗೂ ದೂರ. || ೫೭೨ ||

### ೧೯೯೧

ಭಕ್ತರ ಪಾಪನವ ಮಾಡಿಹೆನೆಂದು ಮೊತ್ತವ ಕೂಡಿ,
ಚಿತ್ತಕ್ಕೆ ಬಂದಂತೆ ಕಂಡುದ ಬೇಡಿ,
ಭಕ್ತರ ಭವವ ತೊಳೆದೆಹೆನೆಂದು ನಿಶ್ಚಯಿಸಿಕೊಂಡಿಪ್ಪ
ಅಚ್ಚುಗದವರ ಕಂಡು ಬೆಚ್ಚಿದೆನಯ್ಯಾ, ನಿಃಕಳಂಕ ಮಲ್ಲಿಕಾರ್ಜುನಾ. || ೫೭೩ ||

### ೧೯೯೨

ಭಕ್ತರು ಭವಪಾಶದಲ್ಲಿದ್ದಹರೆಂದು
ತೆಗೆವುದಕ್ಕೆ ಸುಳಿವ ಜಂಗಮದ ಇರವೆಂತೆಂದಡೆ :
ಆಸೆಯೆಂಬ ಪಾಶವ ಹರಿದು, ಈಷಣತ್ರಯದ ದೋಷವ ತರಿದು,
ತಾನೇತರಾಸೆಯಿಲ್ಲದೆ,
ತನುವಿಂಗೆ ಶೀತೋಷ್ಣಾದಿ ಭೋಗಂಗಳೆಂಬ ಸುಖಂಗಳಂ ಮರೆದು,
ಜಿಹ್ವೆಗೆ ಮಧುರರಸ ನಾನಾ ಪರಿಕರಂಗಳಂ ಮರೆದು,
ಭಕ್ತರಿಗೆ ಇಚ್ಛೆಯಂ ನುಡಿವ, ಕುಚಿತ್ತರಂ ಬಿಟ್ಟು, ಚಿತ್ತಶುದ್ಧನಾಗಿ,
ಇದ ನಿಶ್ಚಯವೆಂದರಿದ ಮತ್ತೆ ಮೆಚ್ಚಲೇಕೊ, ನಾನಾ ಮೋಹಂಗಳ ?
ವಿರಕ್ತಿಯಿಂದ ಸುಳಿವ ಜಂಗಮಕ್ಕೆ ಮತ್ತೆ ನರರೊಂದಾಗಿ ಸುತ್ತಿ ಬಳಲಲೇಕೊ?
ಇದು ಕಾರಣ, ಧರ್ಮವನರಿಯದೆ ಮಾಡುವ ಭಕ್ತ ಕರ್ಮಕ್ಕೊಳಗಾದ.
ಧರ್ಮವನರಿಯದೆ ತಿರುಗುವ ಜಂಗಮ ಬ್ರಹ್ಮನಿಗೊಳಗಾದ.
ಇವರಿಬ್ಬರೂ ಕೆಟ್ಟ ಕೇಡ ನೋಡಿ ಬೆಚ್ಚಿದೆನಯ್ಯಾ,
ನಿಃಕಳಂಕ ಮಲ್ಲಿಕಾರ್ಜುನಾ. || ೫೭೪ ||

೧೯೯೩

ಭಕ್ತರೆಂಬವರೆಲ್ಲರೂ ಲೆಕ್ಕಕ್ಕೆ ಹಾಯ್ದು,
ದೃಷ್ಟವಪ್ಪ ಜಂಗಮದ ಕೈಯಲೂ ಕಷ್ಟತನವಹ ಊಳಿಗವ ಕೊಂಡು,
ಮತ್ತೆ ಜಂಗಮವೆಂದು ಪ್ರಸಾದವನಿಕ್ಕಿಸಿಕೊಂಡುಂಬ
ಸಿಕ್ಕಿಸುಗಾರರ ನೋಡಾ.
ಇಂತೀ ಹೊಟ್ಟೆಯ ಹೊರೆವ ಜಂಗಮಕ್ಕೆಯೂ
ಠಕ್ಕಿಂದ ಮಾಡುವ ಭಕ್ತಂಗೆಯೂ
ಹುಚ್ಚುಗೊಂಡ ನಾಯಿ ಒಡೆಯನ ತಿಂದು,
ಅದರಲ್ಲಿ ಮಿಕ್ಕುದ ನರಿ ತಿಂದಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೭೫ ||

೧೯೯೪

ಭಕ್ತಿ ಒಳಗಾದ ಕ್ರೀ, ಕ್ರೀಯೊಳಗಾದ ಆಚಾರ,
ಆಚಾರದೊಳಗಾದ ಅನುವು,
ಅನುವಿನೊಳಗಾದ ಭಾವಲಿಂಗವನರಿದು,
ಉಭಯದ ಬೆಸುಗೆಯ ನಿಶ್ಚಯಿಸಿದಲ್ಲಿ, ಪ್ರಾಣಲಿಂಗ ಸಂಬಂಧ,
ನಿಃಕಳಂಕ ಮಲ್ಲಿಕಾರ್ಜುನಾ. || ೫೭೬ ||

೧೯೯೫

ಭಕ್ತಿ ಜ್ಞಾನ ಕ್ರೀ ಮಾಡುವ ಮಾಟಂಗಳಲ್ಲಿ,
ಚಿತ್ತಶುದ್ಧವಿಲ್ಲದ ಸತಿಯಾದಡೂ ಒಲ್ಲೆ, ಪುತ್ರ ಬಂಧುಗಳಾದಡೂ ಒಲ್ಲೆ.
ಇಂತೀ ಇವನರಿತು ಕೂಡಿದೆನಾದಡೆ, ಎನ್ನ ಭಾವಕ್ಕೆ ಇದೆ ಭಂಗ.
ಇದು ಪ್ರಸನ್ನವಪ್ಪ ಭಕ್ತಿಯ ಬೆಳೆ, ನಿಃಕಳಂಕ ಮಲ್ಲಿಕಾರ್ಜುನಾ. || ೫೭೭ ||

೧೯೯೬

ಭಕ್ತಿ ಮಂದಿರದಲ್ಲಿ ಪೂಜಿಸಿಕೊಂಬ ಜಂಗಮವ ನೋಡಾ, ಅಯ್ಯಾ.
ಜಂಗಮವೆಂಬುದಕ್ಕೆ ನಾಚರಯ್ಯಾ.
ಭಕ್ತರ ಮಂದಿರಕ್ಕೆ ಹೂ ಕಾಯಿ ಹಣ್ಣು ಹುಲ್ಲು ಹೊರೆ ಬೊಕ್ಕಸ
ಪಹರಿ ಪಾಡಿತನ ಬಾಗಿಲು ಮುಂತಾಗಿ ಶುಶ್ರೂಷೆಯಂ ಮಾಡಿ ಉಂಬಾಗ,
ಒಡೆಯರೆನಿಸಿಕೊಂಬ ತುಡುಗುಣಿಗೆಲ್ಲಿಯದೊ, ನಿಜಜಂಗಮಸ್ಥಲ ?
ಹೊಟ್ಟೆಯ ಕಕ್ಕುಲತೆಗೆ ಕಷ್ಟಜೀವವ ಹೊರೆವ
ಹೆಬ್ಬೊಟ್ಟೆಯ ಡೊಂಬರ ಕಂಡು, ಬಟ್ಟಬಯಲಾದೆಯಾ,
ನಿಃಕಳಂಕ ಮಲ್ಲಿಕಾರ್ಜುನಾ? || ೫೭೮ ||

೧೯೯೭

ಭಕ್ತಿಯಿಂ ಮಾಡಿ ವಸ್ತುವಂ ಕಾಣಬೇಕೆಂಬರು ಕರ್ಮಕಾಂಡಿಗಳು.
ಭಕ್ತಿಯಿಲ್ಲದೆ ಚಿತ್ತದ ಗೊತ್ತನರಿಯಬೇಕೆಂಬರು ಅಧ್ಯಾತ್ಮ ಭಾವಕಾಂಡಿಗಳು.
ದರ್ಪಣದಲ್ಲಿಪ್ಪ ಒಪ್ಪದ ಭೇದವ,
ಅದರ ಇಷ್ಟವಿಲ್ಲದೆ ದೃಷ್ಟವ ಕಾಬ ಪರಿಯಿನ್ನೆಂತೊ ?
ಮುಕುರದ ಅಂಗವಿದ್ದು, ಪ್ರಕೃತಿತನು ಮುಸುಕಿದಲ್ಲಿ,
ಮುಖದ ಸುಖದ ಸುಖನೆಲೆಯ ವಿಚಾರಿಸಬಹುದೆ ?
ಸಕಲವೆಂದಡೆ ಇಷ್ಟ, ನಿಷ್ಕಲವೆಂದಡೆ ಅದರ ಅಭೀಷ್ಟ,
ಈ ಉಭಯದ ತಟ್ಟಿಗಾರದೆ, ಹೊತ್ತು ಹೋರುವರ
ಮಾತಿನ ಕತ್ತಿಯ ಬಾಯಿಧಾರೆಯ ಗಾಯಕ್ಕೆ,
ಇನ್ನೇತರ ಮದ್ದೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೫೭೯ ॥

೧೯೯೮

ಭಕ್ತಿಯಿಂದ ಮಾಡುವುದೆಲ್ಲವು ಬ್ರಹ್ಮನ ಒಡಲು.
ಜ್ಞಾನದಿಂದರಿದು ಮಾಡುವುದೆಲ್ಲವು ವಿಷ್ಣುವಿನ ಒಡಲು.
ವೈರಾಗ್ಯ ತೋರಿ ಮಾಡುವುದೆಲ್ಲವು ರುದ್ರನ ಒಡಲು.
ಶ್ರದ್ಧೆಯಿಂದ ಮಾಡುವ ಭಕ್ತಿ ಬ್ರಹ್ಮನ ಉತ್ಪತ್ಯಕ್ಕೆ ಈಡಾಯಿತ್ತು.
ಧರ್ಮವ ಕುರಿತು ಮಾಡುವ ಭಕ್ತಿ ವಿಷ್ಣುವಿನ ಅವತಾರಕ್ಕೆ ಸಲೆ ಸಂದಿತ್ತು.
ಬಯಕೆ ಹಿಂಗಿ ಮಾಡುವ ಭಕ್ತಿ ರುದ್ರನ ಆವೇಶಕ್ಕೊಳಗಾಗಿತ್ತು.
ಇಂತೀ ಭಕ್ತಿ ಜ್ಞಾನ ವೈರಾಗ್ಯವೆಂಬವು,
ಸಂದಿಲ್ಲದ ಸಂದೇಹದಲ್ಲಿ ಬರ್ಪುದು ತಪ್ಪದೆಂದು ಶರ್ವನ ಮುಂಡಿಗೆ ಹಾಕಿದೆ.
ಎತ್ತಬಲ್ಲ ದೃಷ್ಟವಂತರು ಸರ್ವನೇಳುವುದಕ್ಕೆ ಮೊದಲೆ ಎತ್ತಿರಣ್ಣಾ.
ಎತ್ತಿ ಹೇಳಿಗೆಯ ಕೂಡಿ ಮುಚ್ಚಳವನಿಕ್ಕಿದ ಮತ್ತೆ,
ಮುತ್ತೆರದ ಮುಕ್ತಿಯಿಲ್ಲಾ ಎಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೫೮೦ ॥

೧೯೯೯

ಭಕ್ತಿಯುಳ್ಳನ್ನಕ್ಕ ಇಷ್ಟಲಿಂಗದ ಹಂಗು ಬೇಕು.
ಆತ್ಮನುಳ್ಳನ್ನಕ್ಕ ಅರಿವೆಂಬುದ ವಿಚಾರಿಸಬೇಕು.
ಮರ್ತ್ಯವೆಂಬುದು ನಾ ಬಲ್ಲನ್ನಕ್ಕ ಕರ್ಕಶದ ಜಗ.
ಇದು ಕಾರಣದಲ್ಲಿ, ಕೈಲಾಸವೆಂಬ ಬಟ್ಟೆಯನರಸಬೇಕು
ಎನ್ನ ಸತ್ಯಕ್ಕೆ, ಎನ್ನ ಭಕ್ತಿಗೆ, ಎನ್ನ ಮನಕ್ಕೆ ಎನ್ನ ಮುಕ್ತ್ಯಂಗನೆ.
ಎನ್ನ ನಿಶ್ಚಯಕ್ಕೆ ಬಂದು ಗೊತ್ತು ತೋರಾ.
ನಿಃಕಳಂಕ ಮಲ್ಲಿಕಾರ್ಜುನನ ಎಲ್ಲಿ ಇಪ್ಪಹನು ಹೇಳಾ ? ॥ ೫೮೧ ॥

೨೦೦೦

ಭಕ್ತಿಯುಳ್ಳವಂಗೆ ನಿಷ್ಠುರದ ಮಾತೇಕೆಂಬರು
ನಾಲ್ಕುರ ಮುಕ್ತಿಯ ಭಕ್ತರು.
ನಿಷ್ಠೆವಂತರಿಗೆ ಇದೇ ಭಕ್ತಿ,
ಅನಿತ್ಯವನರಿದ ನಿಶ್ಚಟಂಗೆ ಮಿಥ್ಯವನಾರಾದಡೂ ನುಡಿಯಲಿ,
ಸತ್ಯವಿದ್ದ ಮತ್ತೆ.
ಕಲ್ಲಿನ ಮನೆಯಲ್ಲಿದ್ದವಂಗೆ ದಳ್ಳುರಿ ಬಿದ್ದಡೇನು ?
ಇವರೆಲ್ಲರ ಬಲ್ಲತನಕ್ಕಂಜಿ ನಾನೊಳ್ಳಿಹನೆಂದಡೆ,
ಆತನು ಎಲ್ಲಿಗೆ ಯೋಗ್ಯ, ನಿಃಕಳಂಕ ಮಲ್ಲಿಕಾರ್ಜುನಾ ? || ೫೮೨ ||

೨೦೦೧

ಭಕ್ತಿಯೆಂಬ ಪಾಶವ ಹೊತ್ತು ಮಾಡುವ ಭಕ್ತನ ಸತ್ಯ ಹೇಗೆಂದಡೆ :
ಲಾಂಛನವ ಹೊತ್ತು ಜಂಗಮ ಮನೆಗೆ ಬಂದಡೆ,
ಮುಯ್ಯಾಂತು ಅಡಿಗೆರಗಿ ಸಡಗರಿಸಿ, ಮೃಡನೆಂದು ಪ್ರಮಾಣಿಸಿ,
ಮನದಲ್ಲಿ ಒಡಗೂಡಿ ಗುಡಿಕಟ್ಟಿ ಪುಳಕವೇರಿ, ಎರಡಿಲ್ಲದೆ ತ್ರಿವಿಧಕ್ಕೆ ಬಿಡಬೀಸಿ,
ಒಡೆಯಂಗೆ ಒಡವೆಯಂ ಕೊಟ್ಟು, ಹಡೆವೆಡೆಯೊಳಗಿರ್ಪ ದೃಢಚಿತ್ತಂಗೆ
ಬಿಡುವಿಲ್ಲದೆ ನಮೋ ನಮೋ [ಎಂಬೆ], ನಿಃಕಳಂಕ ಮಲ್ಲಿಕಾರ್ಜುನಾ. || ೫೮೩ ||

೨೦೦೨

ಭಕ್ತಿಯೊಳಗಾದ ಕ್ರೀ, ಕ್ರೀಯೊಳಗಾದ ಆಚಾರ,
ಆಚಾರದೊಳಗಾದ ಅನುವು, ಅನುವಿನೊಳಗಾದ ಭಾವಲಿಂಗವನರಿದು,
ಉಭಯದ ಬೆಸುಗೆಯ ನಿಶ್ಚಯಿಸಿದಲ್ಲಿ ಪ್ರಾಣಲಿಂಗಸಂಬಂಧ,
ನಿಃಕಳಂಕ ಮಲ್ಲಿಕಾರ್ಜುನಾ. || ೫೮೪ ||

೨೦೦೩

ಭಕ್ತಿಸೂತ್ರ ಬಸವಣ್ಣಂಗೆ, ಭಾವಸೂತ್ರ ಚೆನ್ನಬಸವಣ್ಣಂಗೆ,
ಜ್ಞಾನಸೂತ್ರ ಪ್ರಭುದೇವಂಗೆ.
ಇಂತೀ ಸ್ಥೂಲತನು ಬಸವಣ್ಣಂಗೆ, ಸೂಕ್ಷ್ಮತನು ಚೆನ್ನಬಸವಣ್ಣಂಗೆ,
ಕಾರಣತನು ಪ್ರಭುದೇವಂಗೆ.
ಕಾಯ ಬಸವಣ್ಣನಾಗಿ, ಜೀವ ಚೆನ್ನಬಸವಣ್ಣನಾಗಿ,
ಉಭಯದರಿವು ಪ್ರಭುದೇವರಾಗಿ.
ಇಂತೀ ತ್ರಿವಿಧ ಪ್ರಸಾದ ಎನಗೆ ನಿಂದು,

ಎನ್ನ ಜನ್ಮವಾಸನೆ ಬಿಡದಿದೆ ನೋಡಾ.
ಈ ವಾಸನೆ ನಿಃಕಳಂಕ ಮಲ್ಲಿಕಾರ್ಜುನ ನಷ್ಟವಾಗಿಯಲ್ಲದೆ,
ಎನ್ನ ಭಾವ ನಷ್ಟವಿಲ್ಲ. ||೫೮೫||

೨೦೦೪

ಭಕ್ತಿಸ್ಥಲ ಅಳವಟ್ಟವಂಗೆ ಮಾಹೇಶ್ವರಸ್ಥಲವಿಲ್ಲ.
ಮಾಹೇಶ್ವರಸ್ಥಲ ಅಳವಟ್ಟವಂಗೆ ಪ್ರಸಾದಿಸ್ಥಲವಿಲ್ಲ.
ಪ್ರಸಾದಿಸ್ಥಲ ಅಳವಟ್ಟವಂಗೆ ಪ್ರಾಣಲಿಂಗಿಸ್ಥಲವಿಲ್ಲ.
ಪ್ರಾಣಲಿಂಗಿಸ್ಥಲ ಅಳವಟ್ಟವಂಗೆ ಶರಣಸ್ಥಲವಿಲ್ಲ.
ಶರಣಸ್ಥಲ ಅಳವಟ್ಟವಂಗೆ ಐಕ್ಯಸ್ಥಲವಿಲ್ಲ.
ಐಕ್ಯಸ್ಥಲ ಅಳವಟ್ಟಂಗೆ ನಾನಾಸ್ಥಲ ನಿಃಸ್ಥಲವಾಯಿತ್ತು.
ಸ್ಥಳಕ್ಕೆ ಕ್ರೀಯಾಗಿ, ನಿಃಸ್ಥಲಕ್ಕೆ ನಿರವಯವಾಗಿ,
ನಿಜವಾದೆಯಲ್ಲಾ ನಿಃಕಳಂಕ ಮಲ್ಲಿಕಾರ್ಜುನಾ. ||೫೮೬||

೨೦೦೫

ಭಕ್ತಿಸ್ಥಲ ಬ್ರಹ್ಮನಾಶನ, ಮಾಹೇಶ್ವರಸ್ಥಲ ವಿಷ್ಣುನಾಶನ,
ಪ್ರಸಾದಿಸ್ಥಲ ರುದ್ರನಾಶನ, ಪ್ರಾಣಲಿಂಗಿಸ್ಥಲ ಈಶ್ವರನಾಶನ,
ಶರಣಸ್ಥಲ ಸದಾಶಿವನಾಶನ, ಐಕ್ಯಸ್ಥಲ ಪರಮವಸ್ತು ಭಾವನಾಶನ.
ಇಂತೀ ಸ್ಥಲಂಗಳನಾರೋಪಿಸುವಲ್ಲಿ,
ಪೂರ್ವವನಾಧರಿಸಿ, ಉತ್ತರವ ನಿರೀಕ್ಷಿಸಿ,
ಮೇಲಣ ನಿಶ್ಚಯಪದವ ನಿಜವೆಂದು ನಿಶ್ಚಯಿಸಿದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನನ ಸ್ಥಲ ನಿಃಸ್ಥಲವನೆಯ್ದಿತ್ತು. ||೫೮೭||

೨೦೦೬

ಭಕ್ತಿಸ್ಥಲ ಮಾಹೇಶ್ವರನ ನಿರ್ಬೀಜ.
ಆ ನಿರ್ಬೀಜ, ಪ್ರಸಾದಿಯ ಪ್ರಣಮ.
ಆ ಪ್ರಣಮ, ಪ್ರಾಣಲಿಂಗಿಯ ಎರಡಳಿದ ಅರಿವು.
ಆ ಅರಿವು, ಶರಣನ ಪರಿಪೂರ್ಣಕಳೆ.
ಆ ಕಳೆ, ನಿಃಪತಿಯಾದಲ್ಲಿ ಐಕ್ಯನ ನಿರವಯ.
ಆ ನಿರವಯವಸ್ತು ಬೇರೊಂದೇಕೆ, ಕುರುಹುಗೊಂಡೆ ?
ಅದು ನಿನ್ನದಲ್ಲ, ಎನ್ನ ಅಂಗಕ್ಕೋಸ್ಕರವಾಗಿ
ಲಿಂಗವಾದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. ||೫೮೮||

೨೦೦೭

ಭಕ್ತಿಸ್ಥಲವಳವಟ್ಟಲ್ಲಿ, ಮಾಟಕೂಟವೆಂಬ ಕೋಟಲೆಯೇತಕ್ಕೆ ?
ಮಾಹೇಶ್ವರಸ್ಥಲವಳವಟ್ಟಲ್ಲಿ, ಅಹುದು ಅಲ್ಲಾ ಎಂಬ ದುಃಖವೇತಕ್ಕೆ ?
ಪ್ರಸಾದಿಸ್ಥಲವಳವಟ್ಟಲ್ಲಿ, ಉಂಡೆಹೆ ಉಟ್ಟೆಹೆನೆಂಬ ದಂದುಗವೇತಕ್ಕೆ ?
ಪ್ರಾಣಲಿಂಗಿಸ್ಥಲವಳವಟ್ಟಲ್ಲಿ, ಜನನ ಮರಣವೆಂಬ ಕುರುಹೇತಕ್ಕೆ ?
ಶರಣಸ್ಥಲವಳವಟ್ಟಲ್ಲಿ, ಸುಖದುಃಖ ಭೋಗಾಧಿಗಳಲ್ಲಿ ಹೊಡೆಗೆಡೆಯಲೇತಕ್ಕೆ?
ಐಕ್ಯಸ್ಥಲವಳವಟ್ಟಲ್ಲಿ, ನಾಮರೂಪಕ್ರೀಯೆಂದು ಭಾವವ ಲಕ್ಷಿಸಲೇತಕ್ಕೆ ?
ಇಂತಿವು ಆರಂಕಣದ ಮನೆಯ ಬಾಡಿಗೆಯ ಹಿಡಿದು,
ಮೀರಿತು ಘನ ಕಿರಿದೆಂದು ಹೊಯಿದಾಡುವಂತೆ,
ಈ ದೂರ ಇನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ ?
ಗಾರಾಗದ ಮುನ್ನವೆ ತೋರಿಕೆಯೇತಕ್ಕಡಗದು ? || ೫೮೯ ||

೨೦೦೮

ಭಕ್ತಿಸ್ಥಲವಾರು, ಮಹೇಶ್ವರಸ್ಥಲವಾರು, ಪ್ರಸಾದಿಸ್ಥಲವಾರು,
ಪ್ರಾಣಲಿಂಗಿಸ್ಥಲವಾರು, ಶರಣಸ್ಥಲವಾರು, ಐಕ್ಯನ ಐಕ್ಯ ಆರೆಂಬಲ್ಲಿ,
ನೇತಿಗಳೆದು ಸ್ಥಲನಿಂದ ಮತ್ತೆ ಐಕ್ಯನ ಆರುಕೂಟವಾವುದಯ್ಯಾ ?
ಅದು ದರ್ಪಣದ ಭಾವದೊಪ್ಪ. ಅದು ಭಾಗೀರಥಿಯ ಅಪ್ಪುವಿನ ಭೇದ.
ಇದು ಆರ ಭಾವಕ್ಕೂ ತಪ್ಪದ ಸ್ಥಲ.
ಸಂದೇಹವುಳ್ಳನ್ನಕ್ಕ ಷಟ್ಸ್ಥಲ, ಸಂದೇಹ ನಿಂದು ಒಂದೆಂದಲ್ಲಿ ಏಕಸ್ಥಲ.
ಏಕಸ್ಥಲ ಪ್ರತಿರೂಪಾಗಿ ಕರ್ತೃಭೃತ್ಯನೆಂಬ ಉಭಯರೂಪಾಯಿತ್ತು.
ಉಭಯದ ರೂಪಿಂದ ಹಲವುಸ್ಥಲ ಒಲವರವಾಯಿತ್ತು.
ಆ ಹೊಲಬ ತಿಳಿದು, ಸಲೆ ವಸ್ತು ಒಂದೆಂದಲ್ಲಿ ಸ್ಥಲಲೇಪ,
ನಿಃಕಳಂಕ ಮಲ್ಲಿಕಾರ್ಜುನಲಿಂಗವೆಂಬ ಕುರುಹಡಗಿದಲ್ಲಿ. || ೫೯೦ ||

೨೦೦೯

ಭಗದಲೊಂದು ಬಕ ಹುಟ್ಟಿ,
ಅರುಹಿರಿಯರೆಲ್ಲರ ಭಗದೊಳಗು ಮಾಡಿತ್ತು.
ಆ ಭಗವನಾ ಬಕನನೊಂದು ಇರುಹೆಯ ಮರಿ, ನುಂಗಿತ್ತ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯಲಾಗಿ. || ೫೯೧ ||

೨೦೧೦

ಭವಘೋರಕ್ಕಾರದೆ ಭವದಾಳಿಯ ತೊಡೆದೆನಯ್ಯಾ.
ಬಡವನೆಂದು ನಿಮ್ಮವರು ನಿಧಾನವನೀವರಯ್ಯಾ.
ನಾನು ಬಡವನಾದಡೆ, ನೀ ಬಡವನೆ ನಿಃಕಳಂಕ ಮಲ್ಲಿಕಾರ್ಜುನಾ? || ೫೯೨ ||

೨೦೧೧

ಭವಾರಣ್ಯದಲ್ಲಿ ಒಂದು ವನಚರ ಹುಟ್ಟಿತ್ತು.
ಅದಕ್ಕೆ ಮೂರು ಮುಖ ತಲೆದೋರಿ,
ಆರು ಕೊಂಬಿನ ಹಣ್ಣ ಅರಸುತ್ತಿದ್ದಿತ್ತು.
ಆರು ಮೂರರೊಳಗಡಗಿದುದನರಿಯದೆ,
ಮೂರು ಒಂದರೊಳಗಾದುದನರಿಯದೆ,
ಹಲವು ಕೊಂಬೆಗೆ ಹಾರೈಸಿ, ಒಂದೂ ಹಣ್ಣ ಮೆಲಲರಿಯದೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ ಹೋಯಿತ್ತು. || ೫೯೩ ||

೨೦೧೨

ಭಾವ ತ್ರಿವಿಧ, ನಿರ್ಭಾವ ತ್ರಿವಿಧ ದಂಪತಿ ಸಂಬಂಧವಾಗಿ,
ಆರುಸ್ಥಲವಾಯಿತ್ತು.
ಭೃತ್ಯಸ್ಥಲ ಮೂರು, ಕರ್ತೃಸ್ಥಲ ಮೂರು,
ಈರಾರು ಕೂಡಿ ನಡೆವಲ್ಲಿ ಲಕ್ಷವಾಯಿತ್ತು.
ಲಕ್ಷ ಅಲಕ್ಷವನರಿತು, ಹಿಡಿವ ಬಿಡುವ ಭಾವವ್ರೊಡಗೂಡಿದಲ್ಲಿ,
ಕಡೆ ನಡು ಮೊದಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೫೯೪ ||

೨೦೧೩

ಭಾಳಾಂಬಕ ಬಲೆಗೆ ಸಿಲ್ಕಿದ, ಲೀಲಾಂಗ ಕಾಲಕ್ಕೊಳಗಾದ.
ಪುಷ್ಪೋದ್ಭವ ಹಿಡಿಗಟ್ಟಿಗೀಡಾದ.
ಇವರ ಮೂವರ ದೇವರೆಂದಾರಾಧಿಸಿದಡೆ,
ಜೇನಮಡಕೆಯಲ್ಲಿ ಸಿಕ್ಕಿದ ನೊಣದಂತಾದಿರಯ್ಯಾ.
ಅಂಟಿಗೆ ಸಿಕ್ಕಿದ ವಿಹಂಗನಂತಾದಿರಣ್ಣಾ.
ಅಂಥವರ ಕಂಡು ಎನಗಂಜಿಕೆಯಾಯಿತ್ತಯ್ಯಾ.
ಇವರ ಮೂವರ ಬಿಡಲಾರದೆ, ಭಾಳಾಂಬಕನ ಭಾಳದಲ್ಲಿ ಧರಿಸಿದೆ.
ವಿಷ್ಣುವಿನ ಅಕ್ಷಿಯಲ್ಲಿ ಧರಿಸಿದೆ, ಬ್ರಹ್ಮನ ಬಾಯಲ್ಲಿ ಧರಿಸಿದೆ.
ಇವರ ಮೂವರ ಕೊಂದ ಭೇದ.
ಲಲಾಟದಲ್ಲಿದ್ದವನ ತಲೆಯ ಹೊಯ್ದೆ.
ಅಕ್ಷಿಯಲ್ಲಿದ್ದವನ ಕುಕ್ಷಿಯಂ ಕುಕ್ಕಿದೆ.
ಬಾಯಲ್ಲಿದ್ದವನ ಬಸುರ ಒಡೆಯ ಹೊಯ್ದೆ.
ಹೊಯ್ಯಲಾಗಿ ಅವರು ಬದುಕಿದರು, ನಾ ಸತ್ತೆ.
ಸತ್ತವನಿಗೆತ್ತಣ ಮುಕ್ತಿಯೋ, ನಿಃಕಳಂಕ ಮಲ್ಲಿಕಾರ್ಜುನಾ ? || ೫೯೫ ||

೨೧೧೪

ಭಿತ್ತಿಯ ಮೇಲಣ ಚಿತ್ರದ ಬೊಂಬೆಯ ಕೈಯಲ್ಲಿ,
ಹೊತ್ತುವ ದೀಪ ಇದ್ದಡೇನು, ಕತ್ತಲೆಯ ಬಿಡಿಸಬಲ್ಲುದೆ ?
ನಿಷ್ಠೆಹೀನನಲ್ಲಿ ಇಷ್ಟಲಿಂಗ ಇರುತಿರಲಿಕ್ಕೆ ದೃಷ್ಟವ ಬಲ್ಲನೆ ?
ಭಕ್ತಿಹೀನಂಗೆ ನಿತ್ಯಾನಿತ್ಯವ ಹೇಳಲಿಕ್ಕೆ ನಿಶ್ಚಯಿಸಬಲ್ಲನೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೫೯೬ ||

೨೧೧೫

ಭೂತಹಿತವುಳ್ಳನ್ನಕ್ಕ ಇಷ್ಟಲಿಂಗಪೂಜೆ.
ಸರ್ವರ ಚೇತನ ಭಾವವನರಿವನ್ನಕ್ಕ ಭಾವಲಿಂಗಪೂಜೆ.
ಸರ್ವಜೀವಂಗಳಲ್ಲಿ ದಯವುಳ್ಳನ್ನಕ್ಕ ಪ್ರಾಣಲಿಂಗಪೂಜೆ.
ಇಂತೀ ತ್ರಿವಿಧಭೇದಂಗಳಲ್ಲಿ ತ್ರಿವಿಧಾತ್ಮಭರಿತನಾಗಿ,
ಕ್ರೀಯಲ್ಲಿ ತ್ರಿವಿಧ, ಭಾವದಲ್ಲಿ ತ್ರಿವಿಧ, ಜ್ಞಾನದಲ್ಲಿ ತ್ರಿವಿಧ.
ತನ್ನ ತ್ರಿವಿಧವ ತಾನರಿದು, ಅನ್ಯಭಿನ್ನವಿಲ್ಲದೆ ನಿಂದುದು,
ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೫೯೭ ||

೨೧೧೬

ಭೂಮಿಯ ಮರೆಯ ಹೇಮ, ನಾನಾ ರತ್ನಮೂಲಿಕ ದ್ರವ್ಯಂಗಳಂತೆ,
ಅಪ್ಪುವಿನ ಮರೆಯ ಷಡುವರ್ಣದ ಟಿಪ್ಪಣದಂತೆ,
ತೇಜದ ಮರೆಯ ನವಗುಣದ ಹೊಳಹಿನಂತೆ,
ವಾಯುವಿನ ಮರೆಯ ನಾನಾ ಸುಳುಹಿನಂತೆ,
ಆಕಾಶ ವಿದ್ಯುಲ್ಲತೆಯ ಗರ್ಜನೆಯ ಮೊಳಗಿನಂತೆ.
ಇಂತೀ ತದ್ರೂಪ ಹೊದ್ದದಿಹವಾದ ಕಾರಣ,
ಇಂತೀ ಆತ್ಮತತ್ವ ಭೇದದಲ್ಲಿ ಆಗುಚೇಗೆಯನರಿಯಬೇಕು.
ಆಕಾಶದ ಸೂರ್ಯ, ಹಲವು ಕುಂಭದಲ್ಲಿ ತೋರುವವೊಲು,
ಮರೆದಡೆ ಪ್ರತಿಷ್ಠೆ, ಅರಿದಡೆ ಸ್ವಯಂಭು,
ನಿಃಕಳಂಕ ಮಲ್ಲಿಕಾರ್ಜುನಾ. || ೫೯೮ ||

೨೧೧೭

ಭೂಮಿಯಲ್ಲಿ ಪೂಜಿಸಿಕೊಂಬ ಅರುಹಿರಿಯರೆಲ್ಲರೂ
ವೇದ ಶಾಸ್ತ್ರ ಪುರಾಣ ಆಗಮ ಶ್ರುತಿ ಸ್ಮೃತಿ ತತ್ವದಿಂದ
ಇದಿರಿಗೆ ಬೋಧಿಸಿ ಹೇಳುವ ಹಿರಿಯರೆಲ್ಲರೂ ಹಿರಿಯರಪ್ಪರೆ ?

ನುಡಿದಂತೆ ನಡೆದು, ನಡೆದಂತೆ ನುಡಿದು,
ನಡೆನುಡಿಸಿದ್ಧಾಂತವಾಗಿಯಲ್ಲದೆ ಅರುಹಿರಿಯರಾಗಬಾರದು.
ಗಲ್ಲಸೋಲಕ್ಕೆ ಹೋರಿ ಬಲ್ಲಿದರಾದೆವೆಂದು
ತನ್ನಲ್ಲಿದ್ದ ಹುಸಿಯ ಹುಸಿವ ಕಲ್ಲೆದೆಯವನ ನೋಡಾ.
ಇವರೆಲ್ಲರ ಬಲ್ಲತನವ ಕಂಡು ನಿಲ್ಲದೆ ಹೋದ,
ನಿಃಕಳಂಕ ಮಲ್ಲಿಕಾರ್ಜುನ. || ೫೯೯ ||

೨೦೧೮

ಭೂಮಿಯ ಹಿಡಿದು ಉಳುತ್ತಿದ್ದೇನಯ್ಯಾ, ಕಡೆ ನಡು ಮೊದಲಿಲ್ಲದೆ.
ಎನ್ನ ಸ್ವಾಮಿಯ ಬರವಿಂಗೆ ಇದಿರಾದವು ಮೂರೆತ್ತು.
ಕಡೆಯ ಹೊಲದ ತೆವರಿನಲ್ಲಿ, ಮರ ತಾಗಿ,
ನೇಗಿಲು ಮುರಿಯಿತ್ತು, ನೊಗ ಸೀಳಿತ್ತು, ಎತ್ತು ಸತ್ತವು.
ಎನಗಿನ್ನಾವುದು ದಿಕ್ಕು, ನಿಃಕಳಂಕ ಮಲ್ಲಿಕಾರ್ಜುನಾ ? || ೬೦೦ ||

೨೦೧೯

ಭೃತ್ಯನಾದಲ್ಲಿ ಕರ್ತೃವಿನ ಕೈಯ ಊಳಿಗವ ಕೊಂಬ
ಭಕ್ತರ ಕಂಡು ನಾಚಿತ್ತೆನ್ನ ಮನ.
ಆಳುವ ಅರಸಿನ ಕೈಯಲ್ಲಿ ಊಳಿಗವ ಕೊಂಬಂತೆ,
ತೊತ್ತು ಒಡತಿಯ ಕೈಯಲ್ಲಿ ಭೃತ್ಯತ್ವವ ಮಾಡಿಸಿಕೊಂಬಂತೆ,
ಮೊದಲಿಗೆ ಮೋಸ ಲಾಭವನರಸಲುಂಟೆ ?
ಅರ್ತಿಗಾರರೆಲ್ಲಕ್ಕೆ ನಿಶ್ಚಯದ ಭಕ್ತಿಯುಂಟೆ ?
ಹೊತ್ತುಹೋಕರ ಭಕ್ತರೆಂದಡೆ, ಒಪ್ಪುವರೆ ನಿಚ್ಚಟಶರಣರು ?
ಅಚ್ಚು ಮುರಿದ ಹಾರಕ್ಕೆ ಎತ್ತಿನ ಹಂಗೇಕೆಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೬೦೧ ||

೨೦೨೦

ಭೃತ್ಯರೂಪೊಂದು ಭಕ್ತಿಸ್ಥಲ, ಕರ್ತೃರೂಪೊಂದು ವಸ್ತು.
ಈ ಉಭಯ ಜಗದ ಹಾಹೆ ನಡೆಯಬೇಕಾವಲ್ಲಿ,
ಮೂರು ಭಕ್ತಿಸ್ಥಲವಾಯಿತ್ತು. ಮೂರು ಕರ್ತೃಸ್ಥಲವಾಯಿತ್ತು.
ಭಕ್ತ ಮಾಹೇಶ್ವರ ಪ್ರಸಾದಿ, ಈ ತ್ರಿವಿಧಭಾವ ಭಕ್ತಿರೂಪು.
ಪ್ರಾಣಲಿಂಗಿ ಶರಣ ಐಕ್ಯ, ಈ ತ್ರಿವಿಧ [ಭಾವ] ಕರ್ತೃಸ್ವರೂಪು.
ಇಂತೀ ಉಭಯಭೇದವಲ್ಲಿ, ವಸ್ತು ಮರ್ತ್ಯಕ್ಕೆ ಬಂದು,

ಮುಂದೆ ಆಶ್ರಯವ ಕಟ್ಟಿದ ಕಾರಣ,
ಭಕ್ತಿಗೆ ಬಸವಣ್ಣನಾಗಿ, ಆ ಭಕ್ತಿಯನೊಪ್ಪುಗೊಂಬುದಕ್ಕೆ
ವಸ್ತು ಪ್ರಭುರೂಪಾಗಿ ಬಂದ ಕಾರಣದಲ್ಲಿ,
ಉಭಯಸ್ಥಲ ಗೋಚರಿಸದೆಂದು ಷಟ್ಸ್ಥಲವಾಯಿತ್ತು.
ಆ ಸ್ಥಲದ ನಾಮ ರೂಪಿನಲ್ಲಿ ನಾನಾಸ್ಥಲ ಒಡಲಾಯಿತ್ತು.
ಪೂರ್ವಗತಿಯಾದಲ್ಲಿ ಸ್ಥಲ, ಉತ್ತರಗತಿಯಾದಲ್ಲಿ ನಿಃಸ್ಥಲ
ಉಭಯನಾಮರೂಪು ಲೇಪವಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ ನಿರ್ಲೇಪವಾದನು. ||೬೦೨||

### ೨೦೨೧

ಭೇರಿಯು ಈರಹವಾದಲ್ಲಿ ಅದಿರಲ್ಲದೆ ಸುನಾದವಿಲ್ಲ.
ಪಾಷಾಣದ ಬೆಳಗು ಮೀರಿ[ದ]ಲ್ಲದೆ ರತ್ನವಲ್ಲ.
ಇಂತೀ ವರ್ಮಭೇದವೆಂತುಟೆಂದಡೆ,
ಭೇರಿಯಿದ್ದಲ್ಲದೆ ನಾದಕ್ಕೆ ಸಾಕಾರವಿಲ್ಲ.
ಪಾಷಾಣವಿದ್ದಲ್ಲದೆ ದೀಪ್ತಿಗೆ ತೋರಲೊಡಲಿಲ್ಲ.
ಕ್ರಿಯಾಶುದ್ಧಾತ್ಮನಾಗಿಯಲ್ಲದೆ,
ವಿರಕ್ತಿಯನರಿವುದಕ್ಕೊಡಲಿಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ||೬೦೩||

### ೨೦೨೨

ಭೇರಿಯೊಳಗಣ ನಾದವ ಭೇದಿಸಬಲ್ಲಡೆ,
ವಸ್ತುವ ಸಾಧಿಸಬಲ್ಲರೆಂಬೆ, ಅಭೇದ್ಯವ ಭೇದಿಸಬಲ್ಲರೆಂಬೆ.
ಚೋದ್ಯದೊಳಗಳಣ ಸ್ವರೂಪವ ಸಾಗಿಸಿ ಬೋಧಿಸಬಲ್ಲಡೆ,
ವಸ್ತುವ ಸಾಧಿಸಬಲ್ಲರೆಂಬೆ.
ಇಂತಿವರಾಗುಹೋಗನರಿಯದೆ,
ಜ್ಞಾನಕ್ಕೆ ನಾವೆ ಅರ್ಹರೆಂಬ ಕಾಳು ಮೂಳರ ನೋಡಿ,
ಜಾಣನಾಗಿ ಅಡಗಿದೆಯಲ್ಲಾ, ನಿಃಕಳಂಕ ಮಲ್ಲಿಕಾರ್ಜುನಾ. ||೬೦೪||

### ೨೦೨೩

ಮಂಜಿನ ಧರೆಯಲ್ಲಿ ಬಿಸಿಲ ಬೀಜ ಬಿದ್ದು,
ಮರೀಚಕದ ಮಳೆ ಹೊಯ್ಯಿತ್ತು.
ಬೇರು ಬೀಳದೆ ಮೊಳೆ ಒಡೆಯಿತ್ತು.
ಎಲೆದೋರುವುದಕ್ಕೆ ಮೊದಲೆ,
ತಲೆಯಿಲ್ಲದ ಎರಳೆ ಬಂದು ಮೇವುತ್ತಿರಲಾಗಿ,

ಅಂಜನಸಿದ್ಧ ಬಂದು ನೋಡುತ್ತಿರ್ದ,
ಅದು ನಿರಂಗವಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೬೦೫ ||

೨೦೨೪

ಮಂಜಿನ ಮಡಿಕೆಯ ನೀರಿನಂತೆ,
ಮರೀಚಿಕಾಜಲದ ಹೊಳಹಿನಂತೆ,
ಅಂಬುಧಿ ತುಂಬಿದಲ್ಲಿ ಕುಡಿವ ವಡಬಾನಳನಂತೆ,
ಕಲ್ಲಿಗೆ ಸಂಭ್ರಮಿಸಿ ಹೂಸಿದ ನವನೀತದಂತೆ,
ಮತ್ತವಕ್ಕೆ ಸಂದುಸಂಶಯವುಂಟೆ ?
ಕ್ರೀಯಲ್ಲಿದ್ದು ಕ್ರೀಯನೀಂಟಿ, ಭಾವದಲ್ಲಿದ್ದು ಭಾವವನೀಂಟಿ,
ಜ್ಞಾನದಲ್ಲಿದ್ದು ಜ್ಞಾನವನೀಂಟಿ ತಾನಾಗಿದ್ದಲ್ಲಿ,
ತನ್ನನರಿದು ತನಗೆ ಅನ್ಯಭಿನ್ನವಿಲ್ಲದಲ್ಲಿ, ಸರ್ವಮಯ ಪರಿಪೂರ್ಣನಾದಲ್ಲಿ,
ಪ್ರಾಣಲಿಂಗಸಂಬಂಧಿ, ನಿಃಕಳಂಕ ಮಲ್ಲಿಕಾರ್ಜುನಾ. || ೬೦೬ ||

೨೦೨೫

ಮಂಜಿನ ರಂಜನೆಯ ನೀರಿಗೆ ತಟಾಕ ತುಂಬಿದುದುಂಟೆ ?
ಮರೀಚಿಕಾಜಲದ ತೆರೆಯ ತಳ್ಳಿ ನೀರ ಕೊಂಡೆಹೆನೆಂಬವರುಂಟೆ ?
ಅಂಗಸ್ಥಲವಾರು, ಉಭಯಲಿಂಗಸ್ಥಲ ಮೂರು.
ಏಕತತ್ವ ಇಪ್ಪತ್ತೈದು ಪೂರ್ವ ಉಭಯವನೆಯ್ದಿ, ಉತ್ತರಕ್ಕೆ ನೂರೊಂದೆಂದಲ್ಲಿ,
ಆ ಕಲ್ಪಿತವ ಕಂಡು, ಅಕಲ್ಪಿತನಾಗಬೇಕು.
ಅದು ಸ್ಥಲಭರಿತ ನಿರ್ದೇಹ, ಐಕ್ಯಸ್ಥಲ ನಿರ್ಲೇಪ,
ನಿಃಕಳಂಕ ಮಲ್ಲಿಕಾರ್ಜುನಾ. || ೬೦೭ ||

೨೦೨೬

ಮಂಡೆ ಮಾಸಿದಡೆ ಮಜ್ಜನ ಮಾಡಿದಲ್ಲದೆ, ಹಿಂಗದು ವ್ಯಾಪಾರ.
ಮನ ಮರೆದಡೆ ಮಹಾತ್ಮರ ಗುಣಜಲದಿಂದಲ್ಲದೆ, ಅಮಲವಾಗದು.
ಇನ್ನೇನ ಮಾಡುವೆ, ಇನ್ನಾರಿಗೆ ಹೇಳುವೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೬೦೮ ||

೨೦೨೭

ಮಂತ್ರಸಂಸ್ಕಾರವಾದುದೆ ಲಿಂಗ, ಭಿನ್ನವಾದಡೆ ಲಿಂಗವಲ್ಲ.
ವ್ರತಭ್ರಷ್ಟನಾಗಿ ಜಂಗಮವಾದಡೆ ಜಂಗಮವಲ್ಲ.
ಅದೆಂತೆಂದಡೆ :
ಸ್ಥಾವರಂ ಭಿನ್ನದೋಷೇಣ ವ್ರತಭ್ರಷ್ಟೇನ ಜಂಗಮಃ

ಉಭಯೋಭಿನ್ನಭಾವೇನ ನಾರ್ಚನಂ ನ ಚ ವಂದನಮ್ ||
ಎಂದುದಾಗಿ, ಇದು ಕಾರಣ, ಉಭಯಕ್ಕೆ ಅರ್ಚನೆ ವಂದನೆಯಂ ಮಾಡಲಾಗದು,
ಅವಕ್ಕೆ ಪ್ರಾಯಶ್ಚಿತ್ತವಿಲ್ಲದ ಕಾರಣ, ನಿಃಕಳಂಕ ಮಲ್ಲಿಕಾರ್ಜುನಾ || ೬೦೯ ||

### ೨೦೨೮

ಮಗು ಸತ್ತು ಕೊರಳು ಕುಗ್ಗದು, ಅಂಗುಳಾರದು, ಬಾಯ ಬರೆ ಹಿಂಗದು.
ಇನ್ನಾವ ನೇಣ ಹಾಕುವೆ ಕೊರಳಿಗೆ ?
ಒಂದು ನೇಣಿನಲ್ಲಿ ಸಂದೇಹ ಬಿಡದು. ಎರಡು ನೇಣಿನಲ್ಲಿ ಹಿಂಗಿ ಹೋಗದು.
ಮೂರು ನೇಣಿನಲ್ಲಿ ಮುಗಿತಾಯವಾಗದು.
ಹಲವು ನೇಣಿನಲ್ಲಿ ಕಟ್ಟುವಡೆದ ಕೂಸು,
ಅದಕ್ಕೆ ಒಲವರವೇಕೆ, ನಿಃಕಳಂಕ ಮಲ್ಲಿಕಾರ್ಜುನಾ ? || ೬೧೦ ||

### ೨೦೨೯

ಮಜ್ಜನಕ್ಕೆರೆವ ಮಹಿಮರೆಲ್ಲರೂ ಭೋಗಕ್ಕೊಳಗಾದರು.
ಜ್ಞಾನವ ಹೇಳುವ ಹಿರಿಯರೆಲ್ಲರೂ ಉಂಟು, ಇಲ್ಲವೆಂಬ ಸಂದೇಹಕ್ಕೊಳಗಾದರು.
ಏನೂ ಇಲ್ಲವೆಂಬ ಜ್ಞಾನಿಗಳೆಲ್ಲರೂ ಶೂನ್ಯಕ್ಕೊಳಗಾದರು.
ಈ ಮೂರರಂದವ ಹಿಂಗಿ, ಇಂತಿವನೇನೂ ಎನ್ನದೆ,
ನಾ, ನೀನೆಂಬ ಉಭಯವನಳಿದವಂಗಲ್ಲದೆ ಲಿಂಗೈಕ್ಯವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೬೧೧ ||

### ೨೦೩೦

ಮಡಕೆ ಕಾವುದಕ್ಕೆ ಮುನ್ನವೆ ಜಲ ಕಾದು ಉಕ್ಕಿತ್ತು.
ಜಲ ಉಕ್ಕುವುದಕ್ಕೆ ಮುನ್ನವೆ ಅಕ್ಕಿ ಬೆಂದಿತ್ತು.
ಉಂಬುದಕ್ಕೆ ಮುನ್ನವೆ ಓಗರ ಮಿಕ್ಕಿತ್ತು.
ಮಿಕ್ಕೋಗರವನಾರೋಗಿಸಿದವರು ಹೊಲಬುಗೆಟ್ಟರು.
ಎನಗಿನ್ನು ಹೊಲಬಾವುದೊ ?
ಎನಗಾರಕರಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೬೧೨ ||

### ೨೦೩೧

ಮಣ್ಣ ಬೆಕ್ಕು, ನನ್ನಿಯ ಮೂಷಕನ ಮುಟ್ಟಿದುದುಂಟೆ ?
ಜಗಗನ್ನರ ಕ್ರೀ, ವಿರಕ್ತಿ ಪ್ರಸನ್ನನ ಮುಟ್ಟಿದುದುಂಟೆ ?
ಇವ ಚೆನ್ನಾಗಿ ತಿಳಿದು ನೋಡಿ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ. || ೬೧೩ ||

೨೦೩೨

ಮಣ್ಣಿನ ಗುಣವನರಿದು ಕಳೆದಡೆ, ಗುರು[ಸಿ]ದ್ಧಾತ್ಮಿಯೆಂಬೆ.
ಹೆಣ್ಣಿನ ಗುಣವನರಿದು ಕಳೆದಡೆ, ಲಿಂಗಸಿದ್ಧಾತ್ಮಿಯೆಂಬೆ.
ಹೊನ್ನಿನ ಗುಣವನರಿದು ಕಳೆದಡೆ, ಜಂಗಮ ಸಿದ್ಧಾತ್ಮಿಯೆಂಬೆ.
ಈ ತ್ರಿವಿಧ ಗುಣವನರಿಯದೆ, ವೇಷದ ಬಲುಮೆಯ
ತೂತಮಾತುಗರನೊಪ್ಪ, ಅಜಾತರನಲ್ಲದೆ ನಿಃಕಳಂಕ ಮಲ್ಲಿಕಾರ್ಜುನ. || ೬೧೪ ||

೨೦೩೩

ಮಣ್ಣು ಕೊಂಡ ನೀರಿನಂತೆ, ಬಣ್ಣವನೊಳಕೊಂಡ ಕಪ್ಪಡದಂತೆ,
ಬಣ್ಣವನೊಳಕೊಂಡ ಬಂಗಾರದಂತೆ,
ಈ ತ್ರಿವಿಧವನೊಳಕೊಂಡ ಭೇದಭಾವದಂತೆ,
ಬಂದ ಘಟ, ಸಂಧಿಸಿದ ಇಷ್ಟ, ಉಭಯದ ಸಂದನರಿವ ಭಾವ.
ಈ ತ್ರಿವಿಧವನೊಂದುಗೂಡಿ ಸಕಲಸುಖಿಯಾದ ನಿರಂಗನೆ ಪ್ರಾಣಲಿಂಗಿ,
ನಿಃಕಳಂಕ ಮಲ್ಲಿಕಾರ್ಜುನಾ. || ೬೧೫ ||

೨೦೩೪

ಮಣ್ಣು ದೇಹ, ಹೊನ್ನು ಪ್ರಾಣ, ಹೆಣ್ಣು ಸಕಲಪ್ರಪಂಚು.
ಈ ಮೂರರೊಳಗೆ ಒಂದ ಬಿಟ್ಟೊಂದ ಹಿಡಿದೆಹೆನೆಂದಡೆ,
ಹಿಂಗಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೬೧೬ ||

೨೦೩೫

ಮಣ್ಣು ನೀರಿನಂತೆ ಆದಾಗವೆ ಭಕ್ತನ ಭಕ್ತಸ್ಥಲ.
ಬಂಗಾರ ಬಣ್ಣ ಆದಂತೆ ಮಹೇಶ್ವರನ ಮಾಹೇಶ್ವರಸ್ಥಲ.
ಅನಲ ಅನಿಲನಂತಾದಾಗವೆ ಪ್ರಸಾದಿಯ ಪ್ರಸಾದಿಸ್ಥಲ.
ದೀಪವೊಂದರಲ್ಲಿ ಉದಯಿಸಿ ಪ್ರತಿಜ್ಯೋತಿ ಪ್ರಮಾಣಿಸಿದಾಗವೆ,
ಪ್ರಾಣಲಿಂಗಿಯ ಪ್ರಾಣಲಿಂಗಿಸ್ಥಲ.
ಶ್ರುತವ ಕೇಳಿ, ದೃಷ್ಟಾದೃಷ್ಟವ ಕಂಡು,
ಅನುಮಾನ ಅನುಮಾನವನರಿದು, ಸುಮ್ಮಾನ ತಲೆದೋರದಿದ್ದಾಗವೆ,
ಶರಣನ ಶರಣಸ್ಥಲ.
ಪಾರಿ ಶಿಲೆಯ[ಂತೆ] ಮಣಿಯ ದಾರದಂತೆ,
ಬುದ್ಬುದ[ದ] ನೀರಿನ[ಂತೆ] ಮಣಿಯ ವಜ್ರದ ಬಂಧದಂತೆ.
ಮರೀಚಿಕಾಜಲದ ತುಂಬಿ ತಂದ ಕುಂಭದಂತೆ.

ಸಾಕಾರವಳಿದು ನಿರಾಕಾರ ಉಳಿದಲ್ಲಿ ಐಕ್ಯನ ಐಕ್ಯಸ್ಥಲ.
ಇಂತೀ ತ್ರಿವಿಧ ಭಕ್ತಸ್ಥಲ. ಇಂತೀ ತ್ರಿವಿಧ ಮಾಹೇಶ್ವರಸ್ಥಲ.
ಇಂತೀ ತ್ರಿವಿಧ ಪ್ರಸಾದಿಸ್ಥಲ, ಇಂತೀ ತ್ರಿವಿಧ ಪ್ರಾಣಲಿಂಗಿಸ್ಥಲ,
ಇಂತೀ ತ್ರಿವಿಧ ಶರಣಸ್ಥಲ, ಇಂತೀ ತ್ರಿವಿಧ ಐಕ್ಯಸ್ಥಲ.
ಇಂತೀ ಷಟ್ಸ್ಥಲ, ದ್ವಾದಶಂಗಳಾಗಿ ಕೂಡುವಲ್ಲಿ ತ್ರಯೋದಶಭಾವವಾಯಿತ್ತು.
ಉಭಯವನೇಕೀಕರಿಸುವಲ್ಲಿ ಒಂದೊಡಲಾದುದಾಗಿ,
ರೂಪು ರೂಪಿನಲ್ಲಿದ್ದು ನಿರೂಪನ ಕೂಡಬೇಕೆಂಬ ಕೂಟ.
ತ್ರಿವಿಧದ ಆಟವಾಯಿತ್ತು.
ಗುರುವಿಂಗೂ ಗುರುವುಂಟೆಂಬ ಭಾವ.
ಲಿಂಗಕ್ಕೆ ಆಶ್ರಯವುಂಟೆಂಬುದೊಂದು ವಾಸ.
ಜಂಗಮಕ್ಕೂ ರುದ್ರನ ಪಾಶವ ಕೂಡಬೇಕೆಂಬುದೊಂದು ಆಸೆ.
ಇಂತೀ ಮೂರರ ಮೂರು ಈರಾರರ ಭಂಡ, ಇಪ್ಪತ್ತೈದರ ಅಗ್ಗದಲ್ಲಿ ಕೊಂಡು,
ದಶಹತ್ತರಲ್ಲಿ [ಮಾರಿ] ಒಂದೇ ಲಾಭವಾಯಿತ್ತು.
ಆ ಲಾಭವ ಮೊದಲಿನಲ್ಲಿ ಸರ್ವಭಕ್ತಿ ಸಂಪೂರ್ಣನಾಗಿ,
ಭಕ್ತಿಯನರಿವುದಕ್ಕೆ ಬಸವಣ್ಣನಾಗಿ,
ನಿತ್ಯಾನಿತ್ಯವನರಿವುದಕ್ಕೆ ಚೆನ್ನಬಸವಣ್ಣನಾಗಿ,
ಆಕಾರ ನಿರಾಕಾರಗಳಲ್ಲಿ ಭಕ್ತಿ ವಿರಕ್ತಿಯ ತಾಳ್ದ
ಚೇತನಮೂರ್ತಿಗಳಲ್ಲಿ ಅವಿರಳನಾಗಿ,
ನಿಜವನೆಯ್ದಿದ ಪ್ರಭುದೇವರು ಮುಂತಾದ ಸಕಲ ಪ್ರಮಥರ
ಪ್ರಸಾದವೇ ಎನಗೆ ಷಟ್ಸ್ಥಲ.
ಇಂತಿವರೊಳಗಾದ ಏಕೋತ್ತರಶತಸ್ಥಲ ಮೊದಲಾದ ಭಾವವೂ
ನಿಮ್ಮಲ್ಲಿಯೆಂದು ಅರಿದ ಮತ್ತೆ ಅದನೇನೆಂದುಪಮಿಸುವೆ ?
ಅದು ಭಾವವಿಲ್ಲದ ಬಯಲು, ನಾಮವಿಲ್ಲದ ನಿರ್ಲೇಪ,
ನಿಜ ನೀನೆ ಎನ್ನುತ್ತಿದ್ದೆ, ನಿಃಕಳಂಕ ಮಲ್ಲಿಕಾರ್ಜುನಾ. || ೬೧೭ ||

೨೦೩೬

ಮತ್ಸ್ಯದ ಮನೆಯ ಕೀಟಕನಂತೆ,
ಸಂಸಾರದಲ್ಲಿಯೆ ಹುಟ್ಟಿ, ಸಂಸಾರದಲ್ಲಿಯೆ ಸಾವುತ್ತ,
ತೂಳದ ಬೀರರಂತೆ ಅರಿದಲ್ಲಿ ಭಕ್ತನಾಗಿ, ಮರೆದಲ್ಲಿ ಮಾನವನಾಗುತ್ತ,
ಇತ್ತಲೆಯ ಸರ್ಪನಂತೆ,
ಎತ್ತ ನೋಡಿದರತ್ತ ಕತ್ತಲೆಯ ತೆರನಂತೆ ಇಪ್ಪವರ ಕಂಡು
ಭಕ್ತರೆನಲಾರೆ, ವಿರಕ್ತರೆನಲಾರೆ. ಭಕ್ತಿಯುಳ್ಳವ ಮಿಥ್ಯವೆನಿಸಿಕೊಳಲಾರ.

ಆ ಉಭಯ ಕೆಟ್ಟ ಕೇಡು, ಎನ್ನ ಸತ್ವದ ಹಾನಿ.
ಇದಕ್ಕೆ ನಿಶ್ಚಯವ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. ||೬೧೮||

೨೦೩೭

ಮದವಳಿಗ ಮದವಳಿಗಿತ್ತಿಯ ಮುಟ್ಟದೆ,
ಅತ್ತೆಯ ಭಗವ ಮುಟ್ಟಿ ನೋಡಿ,
ಎನ್ನ ಮದವಳಿಗೆಯ ಹೆತ್ತ ಠಾವೆಂದು ಮತ್ತರಿದು ಮುಟ್ಟದೆ,
ಭಗವ ನೋಡುತ್ತ ಬಟ್ಟಬಯಲಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೬೧೯||

೨೦೩೮

ಮದಸೊಕ್ಕಿದ ಗಜ, ಅಜಕ್ಕಂಜಿ, ಅಡಿಯಿಡಲಮ್ಮದುದ ಕಂಡೆ.
ಕಡುಗಲಿ ಬಂಟ ಕತ್ತಲೆಗಂಜಿ, ಒಡಗೂಡುವರು ಬೇಕೆಂದು,
ಅಡಿಗಡಿಗಂಜುವುದ ಕಂಡೆ.
ಇಂತಿವರೆಲ್ಲರೂ ನಳಿಕೆಯ ಕೀರನಂತೆ, ಲಾಗ ಮರೆದು,
ಬಳಲಿ ಧರೆಗೆ ಸೇರುವಾಗ ಆಗಲರಿದಂತಾಗದೆ ಬೇಗರಿದುಕೊಳ್ಳಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಕೂಡಬಲ್ಲಡೆ. ||೬೨೦||

೨೦೩೯

ಮಧುರದ ಗುಣ ಬದರಿಯಿಂದಳಿಯಿತ್ತು,
ಶರಧಿಯ ಗುಣ ಸಾಗಲಾಗಿ ಅಳಿಯಿತ್ತು,
ಬೇಟದ ಗುಣ ಕೂಟದಿಂದಳಿಯಿತ್ತು, ಸಾರದ ಗುಣ ಕಠಿಣದಿಂದಳಿಯಿತ್ತು,
ಕಠಿಣದ ಗುಣ ಪಾಕದಿಂದಳಿಯಿತ್ತು,
ಕಾಯದ ಗುಣ ಪ್ರಾರಬ್ಧದಿಂದಳಿಯಿತ್ತು,
ವಿಷದ ಗುಣ ನಿರ್ವಿಷದಿಂದಳಿಯಿತ್ತೆಂಬುದಜನ ಸಿದ್ಧಾಂತವಾಗಿ ನುಡಿವುತ್ತಿದೆ.
ಎನ್ನ ಗುಣ ನಿನ್ನಿಂದಲ್ಲದೆ ಅಳಿಯದಯ್ಯಾ.
ಕಾಲಕ್ಕಂಜಿ, ಕರ್ಮಕಂಜಿ, ವಿಧಿವಿಧಾಂತನಿಗಂಜಿ,
ಹಿರಿಯರೆನಿಸಿಕೊಂಬ ಗ್ರಾಸವಾಸಿಗಳು ನೀವು ಕೇಳಿರಯ್ಯಾ.
ರುದ್ರನ ಪಸರವ ಹೊತ್ತು, ಆಶೆಯೆಂಬ ಕಂಥೆಯಂ ತೊಟ್ಟು,
ಜಗದಾಟವೆಂಬ ವೇಷವ ಧರಿಸಿ,
ಈಶನ ಶರಣರೆಂದು ಭವಪಾಶದಲ್ಲಿ ತಿರುಗುವ ದೇಶಿಗರ ಕಂಡು ನಾಚಿದೆ.
ಭಾಷೆಗೆ ತಪ್ಪದ ನಿರ್ಗುಣ ನಿರಾಶಕ,
ನಿಃಕಳಂಕ ಮಲ್ಲಿಕಾರ್ಜುನನಲ್ಲದಿಲ್ಲ, ನಿಲ್ಲು ಮಾಣಿರೋ. ||೬೨೧||

೨೦೪೦

ಮಧುರವ ಕೂಡಿದ ಜಲವ ತೆಗೆದು ಭಿನ್ನವ ಮಾಡಬಹುದೆ ಅಯ್ಯಾ ?
ಘಟವ ಹೊದ್ದಿದ ಬೆಳಗ ಪ್ರಕಟಿಸಬಹುದೆ ಅಯ್ಯಾ ?
ಇಂತೀ ಉಭಯದ ತೆರದಂತೆ ಪ್ರಾಣಲಿಂಗಿಯ ಸಂಬಂಧದ ಇರವು.
ಮಾತಿನ ಮಾಲೆಯಿಂದ, ನೀತಿಯಲ್ಲಿ ಕಾಬ ವಾದದಿಂದ,
ಇಂತಿವರಿಗೇತಕ್ಕೊಲಿವ, ನಿಃಕಳಂಕ ಮಲ್ಲಿಕಾರ್ಜುನ ? ||೬೨೨||

೨೦೪೧

ಮಧುರವ ಬಲ್ಲರಲ್ಲದೆ ಮಧುರ ರಸವ ಬಲ್ಲಡೆ, ಬಲ್ಲರೆಂಬೆ.
ಬೆಳಗಬಲ್ಲರಲ್ಲದೆ ಬೆಳಗಿನ ಕಳೆಯನೊಳಕೊಂಡಿರ್ಪ ಭೇದವ ಬಲ್ಲಡೆ, ಬಲ್ಲರೆಂಬೆ.
ಸುಳುಹಿನ ಸೂಕ್ಷ್ಮವ ತಿಳುಹಿನ ವಳಯವ ತೋಳೆಡೆಯಬಲ್ಲಡೆ, ಬಲ್ಲರೆಂಬೆ.
ಇವನೆಲ್ಲವನರಿಯದೆ ಸೊಲ್ಲಿನ ಮಾತಿಂಗೆ ಬಲ್ಲೆವೆಂದು ಹೋರುವ
ಚೊಲ್ಲೆಹಗಾರಿಗೆಲ್ಲಿಯದೆಂದೆ,
ಬಲ್ಲರ ಬಲ್ಲಹ ಭವವಿಲ್ಲದವನೆ, ನಿಃಕಳಂಕ ಮಲ್ಲಿಕಾರ್ಜುನಾ. ||೬೨೩||

೨೦೪೨

ಮನಸ್ಸು ಏತರಿಂದ ಅರಿವುದು ಲಿಂಗವನು ?
ಬುದ್ಧಿ ಏತರಿಂದ ಅರಿವುದು ಮನಸ್ಸನು ?
ಚಿತ್ತ ಏತರಿಂದ ಅರಿವುದು ಬುದ್ಧಿಯ ?
ಅಹಂಕಾರ ಏತರಿಂದ ಅರಿವುದು ಚಿತ್ತವನು ?
ಈ ಚತುಷ್ಟಯವ ಏತರಿಂದ ಅರಿವೆ ? ಒಂದಕ್ಕೊಂದು ಹಂದಿಲ್ಲದೆ ಕಾಣೆ.
ಒಂದನೆಣಿಸಿ ಎಣಿಕೆಗೆ ತುಂಬಿದ ಮತ್ತೆ, ಮತ್ತೊಂದೆಂದಲ್ಲದೆ ಸಂಗವಿಲ್ಲ ಲೆಕ್ಕ.
ಇದರಂದದ ತೆರ ಲಿಂಗ.
ಇದ ಸಂಗಂಗೊಳಿಸು, ಭಂಗಿತನಾಗಲಾರೆ,
ನಿಃಕಳಂಕ ಮಲ್ಲಿಕಾರ್ಜುನಾ. ||೬೨೪||

೨೦೪೩

ಮನೆಯು ಕೋಡಗ ಊರ ಮಂತವ ನುಂಗಿತ್ತು.
ಮಂತದೊಳಗಣ ಮಂದಿ ಹೋದಿದುದಿಲ್ಲ.
ಅದರಂದದ ಇರವ ಇನ್ನಾರಿಗೆ ಉಸುರುವೆ ?
ಎಂಟುಕಾಲ ಮಂಟಪವ ಟೆಂಟಣಿಸಿ ನಿಂದವೈದು ಕಂಬ.
ಕಂಬದ ಮೇಲಣ ಜೋದಿಗೆ ಮೂರು ಸಂದ ಬಿಟ್ಟುದಿಲ್ಲ.

ಹಿಂಗಿದ ಮಣಿಮಾಡದ ಮಂತಪ, ನುಂಗಿದ ಕೋಡಗವ,
ಕಂಗಳು ನುಂಗಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೬೨೫ ||

೨೦೪೪

ಮರ್ತ್ಯಕ್ಕೆ ಸಂಗನಬಸವಣ್ಣ ಬಾಹಲ್ಲಿ, ಮೂರು ಮಹಾರತ್ನವ ಕಂಡು,
ಒಂದ ಸಿರಿಯ ಕೈಯಲ್ಲಿ ಕೊಟ್ಟ, ಒಂದ ಗಿರಿಯ ಕೈಯಲ್ಲಿ ಕೊಟ್ಟ,
ಒಂದ ಉರಿಯ ಕೈಯಲ್ಲಿ ಕೊಟ್ಟ.
ಇಂತೀ ಮೂರು ರತ್ನಕ್ಕೆ ಲಯ ಈರೇಳುಲೋಕ ಹದಿನಾಲ್ಕುಭುವನವೆಲ್ಲವೂ
ಆ ಮೂರು ರತ್ನದ ಬೆಳಗಿನಲ್ಲಿ, ತೊಳಗಿ ಆಡುತ್ತಿಪ್ಪವರ ನೋಡಾ.
ಒಂದು ರತ್ನ ಬಂದ ಬೆಳಗು, ಒಂದು ರತ್ನ ಮಂದ ಬೆಳಗು,
ಒಂದು ರತ್ನ ಸಂದೇಹ ಬೆಳಗು.
ಇಂತೀ ರತ್ನವ ತಂದು, ಸಂಗನಬಸವಣ್ಣ
ಸಂಗಮೇಶ್ವರದೇವರಲ್ಲಿ ಐಕ್ಯವಾದೆಹೆನೆಂದು ಹರ್ಷಂಬಡುತ್ತಿಹ.
ಇದ ಕಂಡು, ಎನ್ನ ಮನಕ್ಕೆ ನಾಚಿಕೆಯಾಯಿತ್ತು.
ಮರ್ಮವನರಿಯದೆ ಇಕ್ಕಿ ಕೆಟ್ಟನೆಂದು,
ತನ್ನ ಕಾಯ್ದು, ಇದಿರ ಕಾಯ್ವ ಶೂರನಂತಿರಬೇಕು.
ತಾರಣದಲ್ಲಿ ನಿಂದು, ಅಂಜಿ ಹೋಗುತ್ತಿರ್ಪವರ ಕಂಡು,
ಅಂಜದಿರೆಂದು ಹೇಳುವ ಧೀರನಂತಿರಬೇಕು.
ಇಂತೀ ಮರ್ಮವನರಿಯದೆ ಮಾಡಿ,
ಧರ್ಮಕ್ಕೊಳಗಾದ ಬಸವಣ್ಣನ ಹಾದಿಯಂ ಬಿಡಿಸಿ,
ಚೆನ್ನಬಸವಣ್ಣನ ಹಾದಿಯ ತೋರು ನಿಃಕಳಂಕ ಮಲ್ಲಿಕಾರ್ಜುನಾ. || ೬೨೬ ||

೨೦೪೫

ಮಹಾಜಗವು ಪ್ರಳಯವಹಲ್ಲಿ, ಮಣ್ಣುಮೊರಡಿ ಕದಡಿಮದಿಲ್ಲ.
ಮಹಾಹೇತು ದಹನವಹಲ್ಲಿ, ಹುಲ್ಲುಮೆದೆ ಬೆಂದುದಿಲ್ಲ.
ಬಲ್ಲಿದರೆಲ್ಲರು ಕಾದಿ ಮಡಿವಲ್ಲಿ, ಹಂದೆ ಹುಯ್ಯಲಲಿದ್ದು ಅಂಜಿಮದಿಲ್ಲ.
ಲಿಂಗವ ಹಿಡಿದವರೆಲ್ಲರೂ ಬಂದ ಮೆಟ್ಟಿ, ಬಂದನರಿದು ಸಂಗವ ಮಾಡುವಾಗ,
ಇದರಂದವನೇನೆಂದು ಅರಿಯೆ. ನಿಃಕಳಂಕ ಮಲ್ಲಿಕಾರ್ಜುನಾ. || ೬೨೭ ||

೨೦೪೬

ಮಹಾಬಯಲ ಕಡಿದು ಎರಡು ಮಾಡಿಹೆನೆಂದಡೆ
ಆ ಬಯಲು ಎರಡಹುದೆ ?
ಅಣುರೇಣು ಮಧ್ಯಗುಣಭರಿತ ಅಖಂಡ ಬ್ರಹ್ಮವ

ಪ್ರಾದೇಶಿಕ ಪರಿಚ್ಛಿನ್ನವೆಂದು ನುಡಿಯಲುಂಟೆ
ನಿಃಕಳಂಕ ಮಲ್ಲಿಕಾರ್ಜುನಾ ? ||೬೨೮||

೨೦೪೭

ಮಹಾಂಧಕಾರದಲ್ಲಿ ಸಂದಿಲ್ಲದೆ,
ಹೊಂದಿ ಹೊಂದಿ ಬಾಹಾಗ, ಬಂದುದ ಬಲ್ಲೆಯಾ ?
ಈಗ ಮಾಡುವ ಮಾಟದ ಅಂದವ ಬಲ್ಲೆಯಾ ?
ನಿಸ್ಸಂಗವ ಮಾಡುವ ಲಿಂಗದ ಪುಂಗವ ಬಲ್ಲೆಯಾ ?
ಇದಕ್ಕೆ ಸಾರಂದಗಾರಿಕೆಯ ಮಾ[ತೇಕೆ?]
ಅಂದು ನೀ ಬಂದ ಬೆಂಬಳಿಯ ಕಂಬಳಿಯಲ್ಲದೆ ಲಿಂಗ[ವೆ],
ನಿಃಕಳಂಕ ಮಲ್ಲಿಕಾರ್ಜುನ. ||೬೨೯||

೨೦೪೮

ಮಹಾಭಕ್ತರು ಮಾಡುವ ಅಭ್ಯಾಸ, ಕ್ರೀ ಲೇಸಿನ ಭಕ್ತಿಯ ಕೇಳಿರಣ್ಣಾ.
ಜಂಗಮದ ಕೈಯಲ್ಲಿ ಅಸಿ ಕೃಷಿ ವಾಣಿಜ್ಯ ಮುಂತಾದ
ಊಳಿಗವ ಮಾಡಿಸಿಕೊಂಡು,
ಪ್ರಸಾದವ ಕೊಂಬ ಪಂಚಮಹಾಪಾತಕರ ಅಂಗಳವ ಮೆಟ್ಟಿದಡೆ,
ಸಂಗದಲ್ಲಿ ನುಡಿದಡೆ ಕುಂಭೀಪಾತಕ.
ಅವರ ಹಿಂಗದಿರ್ದಡೆ ಲಿಂಗವಿಲ್ಲ, ಜಂಗಮವಿಲ್ಲ, ಪಂಚಾಚಾರ ಶುದ್ಧಕ್ಕೆ ದೂರ.
ಇದು ಕಾರಣ, ಮಾಟಕೂಟದವರೆಲ್ಲಾ ಜಗದಾಟದ ಡೊಂಬರೆಂದೆ.
ಈಶನಾಣೆ ತಪ್ಪದು, ನಿಃಕಳಂಕ ಮಲ್ಲಿಕಾರ್ಜುನಾ. ||೬೩೦||

೨೦೪೯

ಮಹಾಮಲೆಯಲ್ಲಿ ಕೊಲುವ ವ್ಯಾಘ್ರನ ನಾಲಗೆಯ ತುದಿಯಲ್ಲಿ,
ಒಂದು ಮೊಲ ಹುಟ್ಟಿತ್ತು.
ಆ ಮೊಲಕ್ಕೆ ಮೂರು ಕಾಲು, ತಲೆಯಾರು, ಬಾಯಿ ಐದು.
ಒಂದು ಬಾಯಿ ಎಲ್ಲಿ ಅಡಗಿತ್ತೆಂದರಿಯೆ.
ಆರು ತಲೆಗೆ ಒಂದು ಕಣ್ಣು, ಅರೆ ನಾಲಗೆ, ಕಿತ್ತಿ ಹತ್ತಾಗಿ ಹರಿದಾಡುತ್ತದೆ.
ಎಸುವರ ಕಾಣೆ, ಬಲೆಗೊಳಗಾಗದು.
ಆ ಶವಕವ ಹೊಸ ಕೋಳಿ ನುಂಗಿತ್ತು, ನುಂಗಿದ ಕೋಳಿಯ ಶರಣ ನುಂಗಿದ.
ಆ ಶರಣಸನ್ಮತವಾಗಿ ಪ್ರಣವ ನುಂಗಿತ್ತು.
ಆ ನುಂಗಿದ ಪ್ರಣವವ ಆದರಂಗವನರಿದಡೆ, ಐಕ್ಯಾನುಭಾವ.
ನಿಃಕಳಂಕ ಮಲ್ಲಿಕಾರ್ಜುನಾ. ||೬೩೧||

೨೦೫೦

ಮಹಾಮುಗಿಲಿನ ಮರೆಯ ವರುಣನ ಕಿರಣದಂತೆ,
ಮಹಾನಿರ್ಮಲ ಶಿಲೆಯ ಮರೆಯಲ್ಲಿ ಬೆಳಗುವ ದೀಪ್ತಿಯಂತೆ,
ಮಹಾಸುಕ್ಷೇತ್ರ ವಾಸದ ವಾಳುಕದ ಮರೆಯ ಅಪ್ಪುವಿನಂತೆ,
ಇಂತೀ ದೃಷ್ಟದ ಇಷ್ಟದ ಮರೆಯಲ್ಲಿ ನಿಶ್ಚಯವ ನಿಶ್ಚಯಿಸಿದಲ್ಲಿ,
ಪ್ರಾಣಲಿಂಗಸಂಬಂಧಿ, ನಿಃಕಳಂಕ ಮಲ್ಲಿಕಾರ್ಜುನಾ. ||೬೩೨||

೨೦೫೧

ಮಹಾರಾಣುವೆಯ ಬಿಟ್ಟು ಬಂದು,
ಮತ್ತೆ ಒಡೆಯರು ಭಕ್ತರಲ್ಲಿ ರಾಣಿವಾಸವೆಂದು ಕಟ್ಟು ಮೆಟ್ಟುಂಟೆ ?
ಖಂಡಿತ ಕಾಯವನಂಗೀಕರಿಸಿದ ಭಕ್ತಂಗೆ,
ಮತ್ತೆ ಹೆಂಡತಿ ಮಕ್ಕಳು ಬಂಧುಗಳೆಂದು
ಜಂಗಮಕ್ಕೆ ತಂದ ದ್ರವ್ಯವನ್ಯರಿಗಿಕ್ಕಿ, ತಾನುಂಡನಾದಡೆ,
ತಿಂಗಳು ಸತ್ತ ಹುಳಿತನಾಯ ಕಾಗೆ ತಿಂದು,
ಆ ಕಾಗೆಯ ಕೊಂದು ತಿಂದ ಭಂಡಂಗೆ ಕಡೆ.
ನಿಃಕಳಂಕ ಮಲ್ಲಿಕಾರ್ಜುನಲಿಂಗವೆ, ನೀವೆ ಬಲ್ಲಿರಿ. ||೬೩೩||

೨೦೫೨

ಮಳಲ ಹಿಳಿದು ದ್ರವವ ಕಾಣಬಲ್ಲಡೆ, ಇಷ್ಟಲಿಂಗಸಂಬಂಧಿ.
ಕಲ್ಲ ಹಿಳಿದು ಮೃದುವ ಕಂಡಲ್ಲಿ, ಭಾವಲಿಂಗಸಂಬಂಧಿ.
ನೀರ ಕಡೆದು ಬೆಣ್ಣೆಯ ಮೆದ್ದಲ್ಲಿ, ಪ್ರಾಣಲಿಂಗಸಂಬಂಧಿ.
ಇಂತೀ ಇಷ್ಟ ಭಾವ ಪ್ರಾಣ ತ್ರಿವಿಧಗೂಡಿ ಏಕವಾದಲ್ಲಿ,
ಪ್ರಾಣಲಿಂಗಿಯೆಂಬ ಭಾವವಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ||೬೩೪||

೨೦೫೩

ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡಿದೆವೆಂದು
ಸಂತೈಸಿಕೊಂಬಾದ್ಯರು ನೀವು ಕೇಳಿರಯ್ಯಾ.
ಭ್ರಮರ ಕೀಟಕವ ತಂದಳಿದು ತನ್ನಂತೆ ಮಾಡಿದುದಿಲ್ಲವೆ ?
ಚಕ್ರ ಮೃತ್ತಿಕೆಯ ತಂದು ತನ್ನ ನೆನಹಿನಲ್ಲಿ ತೋರಿದ
ಗುಣ ಕುಂಭವ ಮಾಡಿದುದಿಲ್ಲವೆ ?
ಕಾರುಕಶಿಲೆಯ ತಂದು ತನ್ನ ಮನಕ್ಕೆ ತೋರಿದ
ಸ್ವರೂಪವ ಮಾಡಿದುದಿಲ್ಲವೆ ?

ಇಂತಿವೆಲ್ಲವು ಹಿಡಿದವರ ಗುಣಕ್ಕೊಳಗಾದವು.
ಇದನರಿಯದೆ ನಾವು ಗುರುವಾದೆವೆಂದು,
ಇದಿರು ಶಿಷ್ಯರೆಂದು ಭಾವಿಸಿ, ಸೇವೆಯ ಕೊಂಬ ಗುರು,
ಹರಿದ ಹರುಗೋಲನೇರಿ ತೊರೆಯ ಪಾಯ್ವುದಕ್ಕೆ ತೆರನಿಲ್ಲದೆ,
ಅದರಡಿಯಲ್ಲಿ ತುಂಬಿ ಸೂಸುವ ತೆರ ನಿಮಗಾಯಿತ್ತು,
ನಿಃಕಳಂಕ ಮಲ್ಲಿಕಾರ್ಜುನಾ. ||೬೩೫||

೨೦೫೪

ಮಾಟಕೂಟವೆಂಬ ಹೊಲದಲ್ಲಿ, ಪಾಪಪುಣ್ಯವೆಂಬ ಬೀಜವ ಬಿತ್ತೆ,
ತಂಗಾಲಕ್ಕೆ ಬೆಳೆದು, ಮಳೆಗಾಲಕ್ಕೆ ತಗ್ಗಿ,
ಹೊಲದ ಓವರಿಯಲ್ಲಿ ಜಲಬಿದ್ದು ಹೋಯಿತ್ತು.
ಮತ್ತೆ ಹೊಲದ ಹೊಲಬಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. ||೬೩೬||

೨೦೫೫

ಮಾಟಕೂಟವೆಂಬುದು ಮೂರರ ಒದಗಿನಾಟ.
ನೀತಿ, ನಿರ್ವಾಣ, ವಿರಕ್ತಿಯೆಂಬಿವು ಮೂರು ಆತ್ಮನ ಓಟದಾಟ.
ಇಂತೀ ಉಭಯದಾಟದ ಕಾಟ ಸ್ವಸ್ಥವಾಗಿ,
ಭಕ್ತಂಗೆ ಸೊಪ್ಪಡಗಿ, ವಿರಕ್ತಂಗೆ ಹೆಚ್ಚುಕುಂದೆಂಬ
ಉಭಯ ನಿಶ್ಚಯವಾದಲ್ಲಿ, ಆತ ನಿಃಕಳಂಕ ನಿರತ,
ಸರ್ವನಿರ್ವಾಣಿ, ನಿಃಕಳಂಕ ಮಲ್ಲಿಕಾರ್ಜುನಾ. ||೬೩೭||

೨೦೫೬

ಮಾಡಿ ಮರುಗುವ, ನೀಡಿ ನಿಜವಿಲ್ಲದೆ ಇಹ,
ಕೊಟ್ಟು ಹೊಟ್ಟೆ ರೋಗವಿಕ್ಕುವ ಘಟ್ಟುವಿನ ಇರವು,
ಬಟ್ಟೆಬಡಿದುಂಬ ಹೊಟ್ಟೆಹೊರಕ ಮಾಡುವ ಭಕ್ತಿ.
ಮೆಟ್ಟುಗುಳಿಯಲ್ಲಿ ನಿಂದು ತುತ್ತ ನುಂಗಿದಂತೆ,
ನಿಃಕಳಂಕ ಮಲ್ಲಿಕಾರ್ಜುನಾ. ||೬೩೮||

೨೦೫೭

ಮಾತನಳಿಪ ಮಾತು ಬಂದಡೆ,
ಹೋತಿನಂತೆ ಹೋರಲೇಕೆ ?
ಮಾತಿಂಗೆ ಮಣಿದಡೆ, ಅಜಾತನ ಒಲುಮೆ,
ನಿಃಕಳಂಕ ಮಲ್ಲಿಕಾರ್ಜುನಾ. ||೬೩೯||

೨೦೫೮

ಮಾತನಾಡುವ ಪಂಜರದ ವಿಂಹಗನ ಕೊಂದು, ಕೋಡಗ ನುಂಗಿತ್ತು.
ನುಂಗಿದ ಕೋಡಗವ ಮಂಜರಿ ತಿಂದಿತ್ತು. ತಿಂದ ಮಂಜರಿಯ ಅಂಧಕ ಕಂಡ.
ಆ ಅಂಧಕ ಪಂಗುಳಗೆ ಹೇಳಲಾಗಿ, ಪಂಗುಳ ಹರಿದು ಮಂಜರಿಯ ಕೊಂದ.
ಪಂಜರದ ಗಿಳಿಯ, ಮಂಜರಿಯ ಲಾಗ, ಅಂಧಕನ ಧ್ಯಾನವ, ಪಂಗುಳನ ಹರಿತವ,
ಈ ದ್ವಂದ್ವಗಳನೊಂದುಮಾಡಿ,
ಈ ಚತುರ್ವಿಧವಂಗವ ತಿಳಿದಲ್ಲಿ, ಪ್ರಾಣಲಿಂಗಸಂಬಂಧ.
ಸಂಬಂಧವೆಂಬ ಸಮಯ ಹಿಂಗಿದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. ||೬೪೦||

೨೦೫೯

ಮಾತ ಹೇಳುವ ಹಿರಿಯರೆಲ್ಲರೂ ನೀತಿಗೊಡಲಾದರು.
ನಿರ್ಜಾತನ ಮರೆದು, ಭ್ರಾಂತಿಗೆ ಸಿಕ್ಕಿದ ಮತ್ತೆ ಇನ್ನೇತರ ಮಾತು ?
ಸೂತ್ರದ ಬೊಂಬೆಯ ನೂಕುವ ಪಾಶದಂತೆ, ಇವರೇತರ ಹಿರಿಯರು,
ನಿಃಕಳಂಕ ಮಲ್ಲಿಕಾರ್ಜುನಾ. ||೬೪೧||

೨೦೬೦

ಮಾತಿಗೆ ಮಾತನಾಡಿಹೆನೆಂದಡೆ ಪಥಕ್ಕೆ ಕಡೆ ಮೊದಲಿಲ್ಲ.
ನಿರ್ಜಾತರನರಿವುದೆ ನಿತ್ಯ.
ಮಿಕ್ಕಾದ ಶಾಸ್ತ್ರದ ಸಂತೆಯ ಮಾತು ಅದೇತಕ್ಕೆ ?
ಭಾಸುರತೇಜನು ನಿರ್ಜಾತನು ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. ||೬೪೨||

೨೦೬೧

ಮಾತಿಗೆ ಮಾತು ಕೊಟ್ಟು, ನೀತಿ ನಿರ್ಣಯವನರಿಯದೆ,
ಜ್ಞಾತೃ ಜ್ಞಾನ ಜ್ಞೇಯವೆಂಬ ಭ್ರಾಂತಿನ ಕುಡಿಕೆಯಲ್ಲಿ ಸಿಕ್ಕಿ,
ಕೂಗುತ್ತಿದ್ದವರ ಕಂಡು, ಅದೇತಕ್ಕೆ ಬಾತೆ ಎಂದೆ,
ನಿಃಕಳಂಕ ಮಲ್ಲಿಕಾರ್ಜುನಾ. ||೬೪೩||

೨೦೬೨

ಮಾತಿನಲ್ಲಿ ಗೆಲ್ಲಸೋಲದಲ್ಲಿ ಅಜಾತನನರಿಯಬಾರದು.
ಶಾಸ್ತ್ರದ ಗೀತೆಯ ಗುಣದಲ್ಲಿ,
ಪ್ರಖ್ಯಾತನಾದವನ ನೀತಿಯ ಭೇದವನರಿಯಬಾರದು.
ಬಂಟೆಯವನಲ್ಲಿ, ಇನ್ನು ಏನಲೇಕೆ ?

ಇಲ್ಲ ಎಂಬವನಲ್ಲಿ, ಉಂಟು ಎನಲೇಕೆ ?
ಈ ಉಭಯದ ಕಂಟಕವನೀಂಟಿಯಲ್ಲದೆ, ನಿಜವಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. ||೬೪೪||

೨೦೬೩

ಮಾತಿನ ಮಾಲೆ ಎಷ್ಟಾದಡೆಯೂ ಉಂಟು.
ಖ್ಯಾತಿಯ ಮಾಟ ಜಗದೊಳಗೆ ಎಷ್ಟಾದಡೂ ಉಂಟು.
ಜಗದೀಶನನರಿವ ಆತನಿದ್ದ ಠಾವೇ, ಭಾಸುರತೇಜಪ್ರಕಾಶ,
ಅದರಿಂದಾಚೆಯ ಮಾತು, ನಿಃಕಳಂಕ ಮಲ್ಲಿಕಾರ್ಜುನಾ. ||೬೪೫||

೨೦೬೪

ಮಾತಿನ ಮಾಲೆಗೆ ಹೋರಲೇಕೊ, ಆತನನರಿದಿರ್ದವಂಗೆ ?
ಜಗದಲ್ಲಿ ಸುಳಿವ ಭ್ರಾಂತರ ಶುದ್ಧಿಯೇಕೆ, ನಿಭ್ರಾಂತಂಗೆ ?
ಅಕಳಂಕಗೇಕೆ, ಉರಿ ಸಿರಿ ಹೊರಗು, ನಿಃಕಳಂಕ ಮಲ್ಲಿಕಾರ್ಜುನಾ ? ||೬೪೬||

೨೦೬೫

ಮಾತಿನಲ್ಲಿ ನಿರ್ವಾಣ, ಆತ್ಮನಲ್ಲಿ ಘಾತಕ, ಕೂಸು ಹೇತು ಕಲಿಸುವಂತೆ,
ತ್ರಿವಿಧದ ಆಸೆಗೆ ಸಿಕ್ಕಿ ಸಾವ ತೂತರಿಗೆಲ್ಲಿಯದೊ ಲಿಂಗ ?
ಅದೇತರ ನಿರ್ವಾಣ ?
ಏತದ ಕೂನಿಯಂತೆ, ರಾಟಾಳದಂತೆ,
ಭವಪಾಶದಲ್ಲಿ ಬಿದ್ದು ಘಾಸಿಯಾದ ಮತ್ತೆ ನಿನಗಿನ್ನೇತರ ಭಾಷೆಯೊ,
ನಿಃಕಳಂಕ ಮಲ್ಲಿಕಾರ್ಜುನಾ ? ||೬೪೭||

೨೦೬೬

ಮಾತು ಮಾತಿನಂತೆ, ಮನವು ಮುನ್ನಿನಂತೆ,
ಏತಕ್ಕೊಲಿವನೋ, ನಮ್ಮ ಲಿಂಗದೇವನು ?
ತೂತುಮಡಿಕೆಯಲಮೃತವ ತುಂಬಿ, ಓಸರಿಸಲುಂಟೆ,
ನಿಃಕಳಂಕ ಮಲ್ಲಿಕಾರ್ಜುನಾ ? ||೬೪೮||

೨೦೬೭

ಮಾತು ಮಾತಿನೊಳಗೇಕೆ ಆಜಾತನ ಸಂವಾದ ?
ಆ ನೀತಿವಂತನೇತರೊಳಗಿದ್ದಹನೆಂಬುದನರಿಯದೆ,
ಉದರಘಾತಕಕ್ಕಾಗಿ ಮಹತ್ತುಪದದಾಸೆಯ ಬಯಸಲೇಕೆ ?
ಇಂತೀ ತೂತಜ್ಞಾನಿಗಳ ಮೆಚ್ಚ, ನಿಃಕಳಂಕ ಮಲ್ಲಿಕಾರ್ಜುನ. ||೬೪೯||

೨೦೬೮

ಮಾಯೆ ತನ್ಮಯವೆಂಬ ಭವಜನ್ಮದಲ್ಲಿ ಬಂದು,
ಗೋರಸವನೆ ಉಂಡು ನಾಚವೇಕೆ ಮನ ? ಹೇಸದೇಕೆ ಮನ ?
ತಿತ್ತಿಯ ಹಿಡಿದ ಮಾದಿಗನಿಗೆ,
ಹೊತ್ತಿದ ಮೂಗಿನ ನಾತ ನಿಶ್ಚಯವುಂಟೆ, ಇತ್ತಣವರಿಗಲ್ಲದೆ ?
ಕಚ್ಚಿದವನಿಗೆ ಸುಖಿಸಂಸಾರವೆಂಬಡಗುಮಾಯೆ,
ಮತ್ತತನದಿಂದ ಕೊಂದಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ॥ ೬೫೦ ॥

೨೦೬೯

ಮುಂದರಿದು ಕಂಡೆಹೆನೆಂಬಾಗ, ತನು ಶಿಲೆಯ ನೆಲೆಮನೆಯೆ ?
ನಡೆದು ಕಂಡೆಹೆನೆಂಬಾಗ, ವಸ್ತು ಹೊಲದ ಹಾದಿಯೆ ?
ಇಂತೀ ಉಭಯವನರಿದು ಕಾಬುದ ಕಂಡು, ಕೇಳುವಲ್ಲಿ ಕೇಳಿ,
ಉಂಡಲ್ಲಿ ಉಂಡು, ಭಾವಿಸಿದಲ್ಲಿ ಭಾವಿಸಿ,
ಹೊಳೆಯ ದಾಟಿದ ಮತ್ತೆ ಹರುಗೋಲೇಕೆ,
ನಿಃಕಳಂಕ ಮಲ್ಲಿಕಾರ್ಜುನಾ ? ॥ ೬೫೧ ॥

೨೦೭೦

ಮುಕುರಕ್ಕೆ ತಮಂಧವೆಂದು ಒರಸಿದವರುಂಟೆ ?
ಉದರಕ್ಕೆ ತೃಷೆಯೆಂದು ನೀರಡಸಿದವರುಂಟೆ ?
ಬೆಂಕಿಗೆ ಚಳಿಯೆಂದು ಅಂಗಕ್ಕೆ ಹೊದಿಸಿದವರುಂಟೆ ?
ಲಿಂಗಾರೂಢಗೆ ಅವರಂಗಕ್ಕೆ ಮಾಡಿದೆವೆಂಡಡೆ,
ಅದರಂದವ ತಿಳಿಯಾ, ನಿಃಕಳಂಕ ಮಲ್ಲಿಕಾರ್ಜುನಾ. ॥ ೬೫೨ ॥

೨೦೭೧

ಮುಗಿಲ ತೆರೆಯ ಮರೆಯಲ್ಲಿ ಉರಿವ ಬೆಂಕಿಯು ಹೊಗೆಯ ಹಿಡಿವಲ್ಲಿ,
ಮತ್ತೆ ಅಳಿವುದಿನ್ನೇನೊ ? ಉಳಿವುದಿನ್ನೇನೊ ?
ಕೆಂಡ ಕೆಟ್ಟಲ್ಲಿ ಹೊಗೆ ನಿಂದಿತ್ತು.
ಅವಸಾನಕ್ಕೆ ಸಂದಿಲ್ಲ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ
ನಿಃಪತಿಯಾದವಂಗೆ. ॥ ೬೫೩ ॥

೨೦೭೨

ಮುಚ್ಚಿ ಕಾಬುದು ಸ್ವಪ್ನದ ಇರವು, ತೆರೆದು ಕಾಬುದು ಜಾಗ್ರದ ಇರವು.
ಸುಷುಪ್ತಿಯಲ್ಲಿ ಕಾಬುದು ಚಿತ್ತುವಿನ ಇರವು.

ಚಿತ್ತು ನಾಮನಷ್ಟವಾದ ಮತ್ತೆ ನಿಶ್ಚಯದಿರವು,
ನಿಃಕಳಂಕ ಮಲ್ಲಿಕಾರ್ಜುನಾ. ||೬೫೪||

೨೦೭೩

ಮುತ್ತೊಡೆದ ಚಿಪ್ಪಿನಲ್ಲಿ ನಿವಾಳಿಗಳ ಮಾಡಿ,
ಹೊನ್ನಪರಿಯಾಣಂಗಳ ನಡುವೆ ತಂದು, ಮೇಳೈಸಿ,
ಉಟ್ಟ ಪಟ್ಟಾವಳಿಯ, ದೇವಾಂಗದ ಸರ್ವಾಂಗಮಯ ಶೃಂಗಾರದಿಂದ
ಕಳಸಕನ್ನಡಿಯ ಕನ್ನಿಕೆಯರ ಜವಳಿಪಂಕ್ತಿ ಶೋಭಿಸುತ್ತಿರಲು,
ಶಿವಭಕ್ತಜನಸತಿಯರು ನಡೆದು ಬಂದು, ಸಿಂಹಾಸನದ ಮುಂದೆ ನಿಂದಿರ್ದರು,
ನಿಃಕಳಂಕ ಮಲ್ಲಿಕಾರ್ಜುನ ಪ್ರಭುವಿಂಗೆ ಆರತಿಯನೆತ್ತಿಹೆವೆಂದು. ||೬೫೫||

೨೦೭೪

ಮುನ್ನ ಸತ್ತವರ ಕೇಳಿ, ಈಗ ಸತ್ತವರ ಕಂಡು,
ನಾನು ಸತ್ತೆಹೆನೆಂಬುದ ತಾನರಿದ ಮತ್ತೆ, ಇದಿರ ನೋವನರಿಯಬೇಡವೆ ?
ಇದಿರ ನೋವನರಿದವಂಗೆ ನಿಜಭಾವದಲ್ಲಿ ತಪ್ಪದೆ ಇಪ್ಪುದು,
ಅವ ತಾನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. ||೬೫೬||

೨೦೭೫

ಮೂಕೊರೆಯನ ಕೈಯಲ್ಲಿ ವಾಸನೆಯ ಕುಸುಮವ ಕೊಟ್ಟಡೆ,
ಅವನಿಗದು ಲೇಸೋ, ಕಷ್ಟವೋ ? ಭಾವಿಸಿಕೊಳ್ಳಿರಣ್ಣಾ.
ಭಕ್ತಿಹೀನಂಗೆ ಸತ್ಯವ ಹೇಳಿದಡೆ, ಅದೆತ್ತಣ ಸುದ್ದಿ,
ನಿಃಕಳಂಕ ಮಲ್ಲಿಕಾರ್ಜುನಾ ? ||೬೫೭||

೨೦೭೬

ಮೂಗೇಣಗಲದ ಬಾವಿಗೆ, ಆರುಗೇಣಗಲದ ಗಾತ್ರದ ಕುಂಭವ ಬಿಟ್ಟು,
ಹುರಿಗೂಡದ ಕಣ್ಣಿಯಲ್ಲಿ ಸೇದುತ್ತಿರಲಾಗಿ,
ನೀರು ನೆಲನ ಮುಟ್ಟದೆ,. ಕುಂಭವ ಬಿಟ್ಟು, ಕಣ್ಣಿಯಲ್ಲಿ ತುಂಬಬಂದಿತ್ತು,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿಗೆ. ||೬೫೮||

೨೦೭೭

ಮೂರು ತಟ್ಟೆಯ ನಡುವೆ. ಒಂದು ಕಂಬವ ನಟ್ಟು,
ಎಂಬತ್ತನಾಲ್ಕು ಲಕ್ಷ ದಾರವ[ಟ್ಟ] ಕಟ್ಟಿ, ಅದರ ಮೇಲೆ ನಿಂದಾಡುತ್ತಿರಲಾಗಿ,
ನಡುವಣ ಕಂಬ ಮುರಿದು ಬೀಳುತ್ತಿರಲಾಗಿ,
ಕಂಡೆ, ಮೂರು ತಟ್ಟೆಯಲ್ಲಿ ಕಟ್ಟಿದ ನೇಣ ಹಿಡಿದು,

ಕೆಳಯಿಕ್ಕೆ ಧುಮುಕಲಮ್ಮದೆ, ಮೇಲಕ್ಕೆ ಹತ್ತಲಮ್ಮದೆ,
ನಡುವೆ ಉಯ್ಯಾಲೆಯನಾಡುತ್ತಿರ್ದೆನಯ್ಯಾ.
ಇರ್ದವನ ಕಂಡು, ಹಿರಿದಪ್ಪ ಆಕಾಶದಲ್ಲಡಗಿರ್ದ
ಹದ್ದು ಬಂದು ಹೊಯ್ಯಲಾಗಿ, ಕಪಾಲ ಸಿಡಿಯಿತ್ತು.
ಮೂರು ತಟ್ಟೆ ಮುರಿಯಿತ್ತು.
ಎಂಬತ್ತುನಾಲ್ಕುಲಕ್ಷ ಕಣ್ಣ ಒಂದೂ ಇಲ್ಲದಂತೆ ಕಿತ್ತವು.
ಅದಕ್ಕೆ ಬಂಧಮುಕ್ತವೇನೆಂಬೆ, ನಿಃಕಳಂಕ ಮಲ್ಲಿಕಾರ್ಜುನಾ. || ೬೫೯ ||

೨೦೭೮

ಮೂರುಸ್ಥಲದಲ್ಲಿ ಎಯ್ದಿಹೆನೆಂದಡೆ, ಮಲಮೂರು ಮುಟ್ಟಲೀಸದಿವೆ ನೋಡಾ.
ಆರುಸ್ಥಲದಲ್ಲಿ ಕೂಡಿಹೆನೆಂದಡೆ, ಅರಿಷಡುವರ್ಗಂಗಳು ಹಗೆಯಾಗಿವೆ ನೋಡಾ.
ಐದು ಗುಣದಲ್ಲಿ ಅರಿದೆಹೆನೆಂದಡೆ, ಈರೈದು ಕೊಂದು ಕೂಗುತ್ತವೆ ನೋಡಾ.
ಇವರ ಸಂದನಳಿದು ಒಂದರಲ್ಲಿ ಕೂಡೆಹೆನೆಂದಡೆ,
ಇಂದ್ರಿಯಂಗಳ ಬಂಧ ಬಿಡದು.
ಈ ಉಭಯಸಂದೇಹ. ನೀನು ಎನ್ನಲ್ಲಿ ಬಂದಡೆ ಬಿಡುಗು,
ನಿಃಕಳಂಕ ಮಲ್ಲಿಕಾರ್ಜುನಾ. || ೬೬೦ ||

೨೦೭೯

ಮೂರುಸ್ಥಲದಲ್ಲಿ ವೇಧಿಸಿ, ಆರುಸ್ಥಲದಲ್ಲಿ ಕೂಡಿ,
ಇಪ್ಪತ್ತೈದುಸ್ಥಲವನವಗವಿಸಿ, ನೂರೊಂದರಲ್ಲಿ ವಿಭಾಗಿಸಿ,
ನೂರ ಕಳೆದು, ಒಂದರಲ್ಲಿ ಐಕ್ಯವಾಗಿ ನಿಂದ ಮತ್ತೆ,
ಉಭಯದ ಸುಳುಹು ಅಡಗಿತ್ತು, ನಿಃಕಳಂಕ ಮಲ್ಲಿಕಾರ್ಜುನನಲ್ಲಿ. || ೬೬೧ ||

೨೦೮೦

ಮೂಲದ್ವಾರದ ಮೂಲೆಯಲ್ಲಿ ಏಳುಮಂದಿ ಕಳ್ಳರಡಗಿ,
ಬಹಳ ಬಂಗಾರವ ಕದ್ದರು ನೋಡಾ.
ಕದ್ದ ಕಳವರಗದೆ ಮತ್ತೊಂದು ಬುದ್ಧಿಯ ನೆನೆದು,
ಹೊದ್ದಿ ಸೇರಿದರು ಮನೆಯಾತನ.
ಅವನಿರುವ ಹೆಜ್ಜೆಯನರಿದು ಎದ್ದು ಹಿಡಿದ.
ಕೈಯೊಳಗಾದರು. ಕಳ್ಳರು ಬೆಳ್ಳರೆಂದು ಹೋದರೆ,
ಇದ ಬಲ್ಲವರಾರೊ. ನಿಃಕಳಂಕ ಮಲ್ಲಿಕಾರ್ಜುನಾ? || ೬೬೨ ||

೨೦೮೧

ಮೃತ್ಪಿಂಡದ ಹದನ ಚಕ್ರಿಯ ಚಿತ್ತದ ಕರದಂತೆ,
ಚಿತ್ರಜ್ಞನ ಚಿತ್ರದ ಲೆಕ್ಕಣಿಕೆಯ ಒಪ್ಪದಂತೆ.
ಇಂತೀ ಆತ್ಮನ ದೃಷ್ಟ, ತನ್ನ ಇಷ್ಟದ ಲಕ್ಷದಲ್ಲಿ.
ಇಂತೀ ಉಭಯದ ದೃಷ್ಟವಿದ್ದಂತೆ, ಚಿತ್ತ ಅಚ್ಚೊತ್ತಿರಬೇಕು,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ. ||೬೬೩||

೨೦೮೨

ಯಾತದ ತುದಿಯಲ್ಲಿ ಕಟ್ಟಿದ ಮಡಕೆಯಂತೆ, ಅದ ನೀತಿವಂತರು ಮೆಟ್ಟಿದಡೆ,
ಪಾತಾಳದ ಉದಕವ ತಂದು, ಪಾತಿಗೆ ಹರಹಿದ ತೆರದಂತೆ,
ಸರ್ವಮಯದಲ್ಲಿ ಒಪ್ಪಿಪ್ಪ ವಸ್ತುವನರಿದು, ನಿರ್ಜಾತನಾಗಬಲ್ಲಡೆ,
ಆತನೆ ಜೀವನ್ಮುಕ್ತ, ನಿಃಕಳಂಕ ಮಲ್ಲಿಕಾರ್ಜುನಾ. ||೬೬೪||

೨೦೮೩

ಯುಗ ಹದಿನೆಂಟು ಸಹಸ್ರ ಕೂಡೆ, ಬ್ರಹ್ಮಂಗೆ ಪರಮಾಯು.
ಇಂತಾ ನವಬ್ರಹ್ಮರು ಸಹಸ್ರ ಕೂಡೆ, ವಿಷ್ಣುವಿಂಗೆ ಪರಮಾಯು.
ಇಂತಾ ವಿಷ್ಣುವಿನ ಸಹಸ್ರ ಕೂಡೆ, ರುದ್ರಂಗೆ ಒಂದು ಜಾವ.
ಇಂತಾ ರುದ್ರರು ಏಕಾದಶ ಕೂಡೆ, ಈಶ್ವರಂಗೆ ಎರಡು ಜಾವ.
ಇಂತಾ ಈಶ್ವರರು ದ್ವಾದಶ ಕೂಡೆ, ಸದಾಶಿವಂಗೆ ಮೂರು ಜಾವ.
ಇಂತಾ ಸದಾಶಿವರು ಶತಸಹಸ್ರ ಕೂಡೆ, ಮಹಾಪ್ರಳಯವಾಯಿತ್ತು.
ಇಂತಾ ಮಹಾಪ್ರಳಯ ಹದಿನೆಂಟು ಕೂಡೆ, ಮಹಾಂಧಕಾರ ಸಂದಿತ್ತು.
ಇಂತಾ ಮಹಾಂಧಕಾರ ಸಂದಿಲ್ಲದೆ ತಿರುಗುವಲ್ಲಿ, ಬಯಲು ಬರಿಕೆಯ್ಯಿತ್ತು.
ಅಲ್ಲಿಂದಾಚೆ ನೀವೆ ಬಲ್ಲಿರಿ, ನಾನರಿಯೆನಯ್ಯಾ.
ಸೊಲ್ಲಿಗತೀತನ ಕಲ್ಲಿಲಿರ್ದಹೆನೆಂಬರಯ್ಯಾ.
ನಂಬಿಗೆ ಅಂಜಿ ಹಿಂದುಮುಂದಾದೆ, ಸಂದೇಹಿ ನಾನಯ್ಯಾ.
ಎಲ್ಲಿ ಭಾವಿಸಿದಡಲ್ಲಿ ವಲ್ಲಭ ನೀನಾಗಿರ್ಪೆ,
ಎನ್ನ ನಲ್ಲನೆ, ನಿಃಕಳಂಕ ಮಲ್ಲಿಕಾರ್ಜುನಾ. ||೬೬೫||

೨೦೮೪

ಯೋನಿಯಲ್ಲಿ ಹುಟ್ಟಿದ ಸಕಲಜೀವಂಗಳೆಲ್ಲ,
ಮತ್ತೆ ಯೋನಿಯ ಬಯಕೆ, ಮತ್ತಾ ಯೋನಿಗಾಗಿ ಜನನ,
ಯೋನಿಗಾಗಿ ಮರಣ.

ಇಂತಿವ ತಿಳಿದ ಮತ್ತೆ ತಾವು ಅದರಲ್ಲಿ ಅಳಿವುತ್ತ ಮತ್ತೆ ಜ್ಞಾನವೆ ?
ಮತ್ತೆ ಶಿವಧ್ಯಾನವೆ ? ಮತ್ತೆ ನಾನಾ ವ್ರತ ನೇಮವೆ ? ಶುದ್ಧ ಭಾವವೆ ?
ಎಲ್ಲೆಲ್ಲಿ ನೋಡಿದಡೆ ಕಟಿಹದ ಬಿದಿರಿನಂತೆ,
ತೊಟ್ಟು ಬಿಟ್ಟ ಹಣ್ಣಿನಂತೆ, ದ್ರವ ತಟ್ಟಾರಿದ ಫಲದಂತೆ,
ನಿಶ್ಚಯವಾಗಿರ್ಪವರಲ್ಲಿಯಲ್ಲದೆ,
ನಿಃಕಳಂಕ ಮಲ್ಲಿಕಾರ್ಜುನನು ಮತ್ತೆಲ್ಲಿಯೂ ಇಲ್ಲ. || ೬೬೬ ||

## ೨೦೮೫

ರಣಕ್ಕೆ ಅಲಗೇರಿದಲ್ಲಿ ಹಲುಬಿದಡೆ ಬಿಡುವರೆ ?
ಭಕ್ತಿಗೊರೆಗಟ್ಟಿ ತಪ್ಪಿಹೆನೆಂದಡೆ ಬಿಡುವರೆ ?
ಸತ್ಯನಾಗಿದ್ದು ಅಸತ್ಯಕ್ಕೆ ಒಡಲಪ್ಪನೆ ?
ವಿರಕ್ತನಾಗಿದ್ದು ತಥ್ಯಮಿಥ್ಯಕ್ಕೆ ಹೋರುವನೆ ?
ಇಂತೀ ಗುಣವ ತಾನರಿದು ತಿಳಿದು, ತನ್ನಲ್ಲಿ ಬಂದ ಗುಣದೋಷವ
ಅನ್ಯರು ನುಡಿದರೆಂದು ಭಿನ್ನವ ಮಾಡಿ ನೋಡುವನ್ನಕ್ಕ,
ಭಕ್ತಂಗೆ ಸತ್ಯವಿಲ್ಲ, ವಿರಕ್ತಂಗೆ ಜ್ಞಾನವಿಲ್ಲ.
ನಾನು ಇವನಾಡಿ ನೊಂದಹರೆಂಬ ಭಾವ ಎನಗಿಲ್ಲ.
ಕಣ್ಣಿನೊಳಗಣ ಕಸ, ಕಾಲೊಳಗಣ ಮುಳ್ಳು,
ಆವ ಬಗೆಯಿಂದ ಹೋದಡೆ ಲೇಸು, ನಿಃಕಳಂಕ ಮಲ್ಲಿಕಾರ್ಜುನಾ. || ೬೬೭ ||

## ೨೦೮೬

ರಸ ಆತ್ಮನಂಗ, ಗಂಧ ವಾಯುವಿನಂಗ, ರೂಪು ಭಾವದಂಗ,
ಶಬ್ದ ಆಕಾಶದಂಗ, ಸ್ಪರ್ಶ ಪೃಥ್ವಿಯಂಗವಾಗಿ ಅಂಗೀಕರಿಸುವಲ್ಲಿ,
ಪಂಚೇಂದ್ರಿಯಮುಖಂಗಳಿಂದ ಅರ್ಪಿಸಿಕೊಂಬವನಾರು ಹೇಳಾ.
ಅದು ಸ್ಥಾಣು ಚೋರನಂತೆ, ರಜ್ಜು ಸರ್ಪನಂತೆ,
ತಿಳಿದು ನೋಡಲಿಕೆ ಮತ್ತಲ್ಲಿ ಏನೂ ಇಲ್ಲ.
ತನ್ನರಿದು ಮುಟ್ಟುವಲ್ಲಿ ತಾನು ತಾನೆ.
ತನ್ನನರಿಯದೆ ಮುಟ್ಟುವಲ್ಲಿ, ಇಂದ್ರಿಯಂಗಳು ಅನ್ಯಭಿನ್ನವಾಗಿಹವು.
ಅನ್ಯವಿಲ್ಲದೆ ಚೆನ್ನಾಗಿ ತಿಳಿದು ನೋಡಲಾಗಿ,
ಅಭಿನ್ನಮೂರ್ತಿ ನಿಃಕಳಂಕ ಮಲ್ಲಿಕಾರ್ಜುನ. ತಾನು ತಾನೆ. || ೬೬೮ ||

## ೨೦೮೭

ರಸ ಗಂಧ ರೂಪ ಸ್ಪರ್ಶವೆಂಬ ಪಂಚೇಂದ್ರಿಯಂಗಳಲ್ಲಿ,
ಲಿಂಗಕರ್ಪಿತವ ಮಾಡಬೇಕೆಂಬ ಭಂಗಿತರ ನೋಡಾ.

ಅಂಗುಷ್ಠದಲ್ಲಿ ಸರ್ಪದಷ್ಟವಾದಡೆ,
ಸರ್ವಾಂಗದಲ್ಲಿ ವಿಷಾವರ್ತಿಸುವುದಲ್ಲದೆ, ಖಂಡಿತವಾಗಿ ನಿಂದುದಿಲ್ಲ.
ಸರ್ವಾಂಗಲಿಂಗಿಗೆ ಬೇರೆ ಐದು ಸ್ಥಾನದಲ್ಲಿ, ಅರ್ಪಿತವ ಮಾಡಬೇಕೆಂಬುದಿಲ್ಲ.
ಇಷ್ಟಕ್ಕೂ ಪ್ರಾಣಕ್ಕೂ ಕಟ್ಟಿದ ಈಡ ನೋಡಾ ಅಯ್ಯಾ,
ಪರುಷಸರ ಕೈಯಲ್ಲಿದ್ದು ಹೇಮವನರಸಿ ತಿರುಗುವನಂತೆ.
ಖೇಚರತ್ವದಲ್ಲಿ ಬಹ ಸಾಮರ್ಥ್ಯವಿದ್ದಡೇನೊ, ಅಂಬಿಗನ ಹಂಗನರಸುವನಂತೆ.
ನಿತ್ಯನಿತ್ಯ ತೃಪ್ತಂಗೆ ಉಂಡೆಹೆನೆಂದು ತಳಿಗೆ ಕಂಕುಳೊಳಗಿನ ತೆರನಂತೆ.
ಸ್ವಯಂಜ್ಯೋತಿಯ ಬೆಳಗುಳ್ಳವಂಗೆ,
ಜ್ಯೋತಿಯ ಹಂಗಿನಲ್ಲಿ ಕಂಡೆಹೆನೆಂಬ ಭ್ರಾಂತನಂತೆ.
ವಾಯುಗಮನವುಳ್ಳವಂಗೆ ತೇಜಿಯನರಸುವಂತೆ.
ಅಮೃತದ ಸೇವನೆಯುಳ್ಳವಂಗೆ ಆಕಳನರಸಿ ಬಳಲಿ ಬಪ್ಪವನಂತೆ.
ತಾ ಬೈಚಿಟ್ಟ ನಿಕ್ಷೇಪದ ಹೊಲಬುದಪ್ಪಿ ಬಳಲುವನಂತೆ.
ಇದು ಕಾರಣ, ಐದರ ಗುಣದಲ್ಲಿ ಅರ್ಪಿತವೆಂಬ,
ಮೂರರ ಗುಣದಲ್ಲಿ ಮುಕ್ತಿಯೆಂಬ,
ಆರರ ಗುಣದಲ್ಲಿ ಆಧಾರವೆಂಬ, ಎಂಟರ ಗುಣದಲ್ಲಿ ಸಂತೋಷವೆಂಬ,
ಭ್ರಾಂತ ಹರಿದು ಕಾಳಿಕೆಯೊಳಗಿಪ್ಪ ಕರಿಯ ಬಣ್ಣವ ಕಳೆದು,
ಬೆಳಗಿನೊಳಗಿಪ್ಪ ಜ್ವಲಿತಮಂ ಕಡಿದು ತಾನು ತಾನಾಗಬಲ್ಲಡೆ,
ಆತನೆ ನಿರ್ಮುಕ್ತ, ನಿಃಕಳಕಂ ಮಲ್ಲಿಕಾರ್ಜುನಾ. ||೬೬೯||

**೨೦೮೮**

ರಸರುಚಿಸುವಲ್ಲಿ, ಗಂಧ ವಾಸಿಸುವಲ್ಲಿ,
ರೂಪು ನೋಡುವಲ್ಲಿ, ಶಬ್ದ ಕೇಳುವಲ್ಲಿ, ಸ್ಪರ್ಶ ಮುಟ್ಟುವಲ್ಲಿ.
ಇಂತೀ ಐದರ ಮುಖದಲ್ಲಿ, ಅರ್ಪಿಸಿಕೊಂಬವನಾರೆಂಬುದನರಿತು,
ಬಂಗಾರದ ಹಲವು ತೆರದ ಆಭರಣವ ಸ್ವಸ್ಥಾನಂಗಳಲ್ಲಿ ಶೃಂಗರಿಸುವುದು,
ಘಟದಂದಚೆಂದವಲ್ಲದೆ ಆತ್ಮಂಗೊಂದೆ ವಿಲಾಸಿತ.
ತನ್ನಭೀಷ್ಟೆಯ ತಾನರಿದು, ಲೀಲೋಲ್ಲಾಸತೆಯನೆಯ್ದುವಂತೆ,
ಲೌಕಿಕಕ್ಕೆ ಕ್ರೀಭರಿತನಾಗಿ, ಭಾವಕ್ಕೆ ಸತ್ಕ್ರೀವಂತನಾಗಿ,
ಜ್ಞಾನಕ್ಕೆ ಸರ್ವಸಂತುಷ್ಟನಾಗಿ, ರಾಗವಿರಾಗಿಯಾಗಿ,
ನಿಜದಲ್ಲಿ ನಿಂದಾತನೆ ಪ್ರಾಣಲಿಂಗಸಂಬಂಧಿ,
ನಿಃಕಳಂಕ ಮಲ್ಲಿಕಾರ್ಜುನಾ. ||೬೭೦||

೨೦೮೯

ರಾಜರಲ್ಲಿ ಹೊಕ್ಕ ಮತ್ತೆ, ಅವರ ಆಗುಚೇಗೆಯ ಹೇಳಬೇಕು.
ಬೇಗೆಯ ಅಳರಿನಲ್ಲಿ ಹೊಕ್ಕ ಮತ್ತೆ, ಸೂಡಿಗೆ ಅಂಜಲೇಕೆ ?
ಸುಖವ ಮೆಚ್ಚಿ ಅಖಿಳರೊಡನೆ ಬೆರಸಿದ ಮತ್ತೆ, ಅಕಳಂಕತನವುಂಟೆ ?
ಇಂತೀ ಬಕಧ್ಯಾನಿಗಳ ಧ್ಯಾನ, ಮಕರದ ಒಲುಮೆಯಂತೆ,
ನಿಃಕಳಂಕ ಮಲ್ಲಿಕಾರ್ಜುನಾ. || ೬೭೧ ||

೨೦೯೦

ರಿಣಾತೂರ್ಯ, ಮುಕ್ತ್ಯಾತೂರ್ಯ, ಸ್ವೇಚ್ಛಾತೂರ್ಯ.
ಇಂತೀ ಮಾಟವ ಮಾಡುವಲ್ಲಿ, ಉಂಡಲ್ಲಿ ಓಗರ ವಾಂತಿಯಾದಂತೆ,
ತಾ ಮಾಡಿದ ಸುಖ ತನಗೆ ದುಃಖವಹ ಭೇದಮಂ ಬಿಟ್ಟು,
ಸ್ವೇಚ್ಛಾತೂರ್ಯವೆಂಬ ತುದಿಯಲ್ಲಿ ನಿಂದು,
ಆ ತೂರ್ಯವಂ ಬಿಟ್ಟು ತುದಿಯಲ್ಲಿ ನಿಂದು,
ಒಡೆಯನು ಕೈಲೆಡೆಯ ಮಡಗಿರಲಾಗಿ ಕೇಳಿದಡೆ,
ಒಡೆಯಂಗೆ ಒಡವೆಯಂ ಕೊಟ್ಟು, ದೃಢಚಿತ್ತದಲ್ಲಿರ್ಪವಂಗೆ
ಪೊಡವಿಯ ಮಾಟಕೂಟದಾಟದವರು ಸರಿಯೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೬೭೨ ||

೨೦೯೧

ರುದ್ರತತ್ವ ಲಿಂಗಮೂರ್ತಿಯಾಗಿ, ಈಶ್ವರತತ್ವ ಶರಣಮೂರ್ತಿಯಾಗಿ,
ಸದಾಶಿವತತ್ವ ಐಕ್ಯಕೂಟಸ್ಥವಾಗಿ, ನಾಮರೂಪ ಭಾವವಳಿದಲ್ಲಿ,
ಪರಶಿವಮೂರ್ತಿ ಪರಾಪರದೊಳಗಾಯಿತ್ತು.
ಅದು ಅವರೋಹಾರೋಹವಾದಲ್ಲಿ,
ಬಸವಣ್ಣ ಚೆನ್ನಬಸವಣ್ಣನೆಂದು ಒಂದು ಮೂರಾಗಿ,
ಮೂರು ಆರಾಗಿ, ಆರು ಮಿಶ್ರವಾಗಿ,
ನೂರೊಂದರಲ್ಲಿ ತೋರಿಹ ಸ್ಥಲ ಕುಳಂಗಳೆಲ್ಲ
ಸುವರ್ಣದ ಸಾರವಂತೆ ಉರಿಗೆ ಕರಗಿ, ಉರಿಯಡಗೆ ಮುನ್ನಿನಂತಿರವು.
ಆ ತೆರವಾದ ಸ್ಥಲಕುಳ ವಿವರ, ಸ್ಫಟಿಕದ ಬಹುವರ್ಣದಂತೆ.
ವರ್ಣವಳಿಯೆ ಘಟವುಳಿದ ಮತ್ತೆ, ಮುನ್ನಿನಂದ,
ನಿಃಕಳಂಕ ಮಲ್ಲಿಕಾರ್ಜುನಾ. || ೬೭೩ ||

೨೦೯೨

ರುದ್ರದೈವವೆಂದಡೆ ಅರ್ಥವಾರಿಗೆ ಸಿಕ್ಕಿದ.
ಚಿದ್ರೂಪ ದೈವವೆಂದಡೆ ಹೊಟ್ಟೆಹುದಕ್ಕೆ ರೂಪಿಲ್ಲ.

ಮತ್ತೆ ಮಹತ್ತಪ್ಪ ಘನವ ನೆನೆದೆಹೆನೆಂದಡೆ, ಮಾತಿಂಗೊಳಗಾಯಿತ್ತು.
ಮತ್ತೆ ವಸ್ತುವ ಇನ್ನೇತರಿಂದ ಕಾಬೆ.
ಗುರು ನರನಾದ, ಲಿಂಗ ಪಾಷಾಣವಾಯಿತ್ತು, ಜಂಗಮ ಆಶೆಕನಾದ.
ಇವೆಲ್ಲವನರಿವ ಮನ ಬೀಜವಾಯಿತ್ತು,
ಎನಗಿನ್ನೇವೆ, ನಿಃಕಳಂಕ ಮಲ್ಲಿಕಾರ್ಜುನಾ ? || ೬೭೪ ||

೨೦೯೩

ರುದ್ರನ ದೇವರೆಂದು ಆರಾಧಿಸಿ,
ಶಿಲೆಯೊಳಗೆ ಹೋರಟೆಗೊಂಡು, ಕೆಟ್ಟರಲ್ಲಾ ಭಕ್ತಜನಂಗಳು.
ವಿಷ್ಣುವ ದೇವರೆಂದು ಆರಾಧಿಸಿ,
ಮರನ ಸುತ್ತಿ ಕಾಲುಗೆಟ್ಟರಲ್ಲಾ ಭೂಸುರಾದಿಗಳು.
ಬ್ರಹ್ಮನ ದೇವರೆಂದು ಆರಾಧಿಸಿ,
ಬೆಂಕಿಯಲ್ಲಿ ಬೆಂದಿರಲ್ಲಾ ಮರ್ತ್ಯಲೋಕದ ಮಹಾಜನಂಗಳು.
ಇಂತೀ ಮೂವರು ಗಂಪಧಾರಿಗಳೆಂಬೆ ಧರೆಯೊಳಗೆ.
ಹೇರಿನ ಅಕ್ಕಿ, ಉಳಿಗೆಯ ಎಣ್ಣೆ, ಹೂವು ಕಾಯಿ ಹಣ್ಣು ಮೊದಲಾದವಸು,
ತಪ್ಪ ಸಾಧಿಸಿ ತರಿಸಿಕೊಂಡುಂಬ ಚಿಕ್ಕಮಕ್ಕಳಿಗೆಲ್ಲಿಯದೊ ನೆಟ್ಟನೆಯ ದೇವತ್ವ?
ಎನ್ನ ದೇವಂಗೆ ಇಂತಿವರಂಗ ಒಂದೂ ಇಲ್ಲ.
ಕಾಲದೊಳಗಾದ ಪ್ರಳಯವಿರಹಿತ, ಕರ್ಮದೊಳಗಾದ ಚತುರ್ವಿಧರಹಿತ,
ಗಂಗೆವಾಳುಕಸಮಾರುದ್ರರೊಳಗಾದ ಬಂಧನವಿರಹಿತ.
ಲೀಲೆಗೆ ಹೊರಗಾದ ಸ್ವಯಂಭುವಯ್ಯಾ ಎನ್ನ ದೇವ.
ಇಂತಿವರೆಲ್ಲರೂ ಪ್ರತಿಷ್ಠೆಯನಾರಾಧಿಸಿ ಪ್ರಸನ್ನರಾದರಯ್ಯಾ.
ಇಂತೀ ಪುಣ್ಯದ ಫಲ ಎನಗೊಂದೂ ಬೇಡ.
ಇದ್ದವರೆಲ್ಲ ಒಳಗಿರಲಿ, ನಾ ಹೊರಗಯ್ಯಾ.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ.
ಅಲಸಿದೆನಲಸಿದೆ, ನಿಮ್ಮ ಕಾಷ್ಠದ ಸೇವೆಯನಯ್ಯಾ.
ಕಾಷ್ಠದವನ ಕಾಷ್ಠವ ಮಾಡದೆ, ಎನ್ನ ಹೊರಗಿರಿಸಿ ನಿನ್ನೊಳಗಾದ,
ನಿಃಕಳಂಕ ಮಲ್ಲಿಕಾರ್ಜುನಾ. || ೬೭೫ ||

೨೦೯೪

ರೂಪಗೊಂಡ ಲಿಂಗವ ನಿರೂಪಿನಿಂದರಿವಾಗ, ಅದೇತರ ಕಳಾಸ್ವರೂಪು ?
ನಿಷ್ಠೆಯ ಭಾವವೋ ? ಇಷ್ಟದ ದೃಷ್ಟವೋ ?
ಉಭಯವನರಿವ ಚಿತ್ತುವಿನ ಭೇದವೋ ?
ಇಷ್ಟನರಿತಲ್ಲಿ ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೬೭೬ ||

೨೦೯೫

ರೂಪಿನಲ್ಲಿ ಪೂಜಿಸಿಕೊಂಬ ಲಿಂಗ, ಶಿಲೆಯ ಹಂಗು ಬಿಡದಾಗಿ,
ಮುಟ್ಟಿ ಪೂಜಿಸುವ ಭಕ್ತಂಗೆ ಭವ ಬಿಡದು.
ಭಾವದಿಂದರಿದು ಭಾವಿಸಿಹೆನೆಂದಡೆ, ಆ ಭಾವ ಕುರುಹಿಲ್ಲದೆ ಅರಿಯಬಾರದು.
ಅರಿವು ಕುರುಹ ನುಂಗಿ, ಕುರುಹು ಅರಿವಿನಲ್ಲಿ ಲೇಪವಾಗಬೇಕು.
ಲೇಪವಾದ ಮತ್ತೆ ಕುರುಹಿಗೆಯೂ ಅರಿವಿಗೂ ತೆರದರ್ಶನವಿಲ್ಲವಾಗಿ,
ಸೊಪ್ಪನೊಳಕೊಂಡ ಬಿತ್ತಿನಂತೆ, ಕರ್ಪುರವನೊಳಕೊಂಡ ಕಿಚ್ಚಿನಂತೆ,
ಚಿತ್ರವನೊಳಕೊಂಡ ಭಿತ್ತಿಯಂತೆ, ಮುತ್ತನೊಳಕೊಂಡ ನಿಜಕಾಂತಿಯಂತೆ,
ಸದ್ಭಕ್ತಿಯನೊಳಕೊಂಡ ಘನಲಿಂಗದಂತೆ.
ಹೀಂಗಲ್ಲದೆ ಪ್ರಾಣಲಿಂಗವಾಗಬಾರದು, ಲಿಂಗಪ್ರಾಣವಾಗಬಾರದು.
ಈ ದ್ವಂದ್ವವನಳಿದ ಸಂಬಂಧಿಗೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. || ೬೭೭ ||

೨೦೯೬

ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ
ಮಿಕ್ಕು ಅವರಿಗೆ ಲೆಕ್ಕಕ್ಕೆ ಕಡೆಯಿಲ್ಲದೆ ಮಾಡಿ,
ಹೊಕ್ಕು ಭಕ್ತಿಯಲ್ಲಿ, ಲೆಕ್ಕ ತಪ್ಪದೆ ಅವತಾರದಲ್ಲಿ ಬಂದು,
ಮರ್ತ್ಯಕ್ಕೆ ಬಸವೇಶ್ವರನೆಂಬ ಗಣನಾಥನಾಮಮಂ ಪಡೆದು,
ಭಕ್ತರಿಗೆ ಮುಖ್ಯವಾಗಿ ಭಕ್ತಿಯಂ ತೋರಿ,
ಸತ್ಯದ ಬಟ್ಟೆಯಂ ಕಾಣದೆ, ಚಿದ್ಘನಲಿಂಗವ ಹೊಗಲರಿಯದೆ,
ಬದ್ಧಕತನವನು ಸುಬದ್ಧವ ಮಾಡದೆ,
ಶುದ್ಧಶೈವ ಕಪ್ಪಡಿಯ ಸಂಗಮನಾಥನಲ್ಲಿ,
ಐಕ್ಯವಾದ ಚಿದ್ರೂಪ ಚಿತ್ಪ್ರಕಾಶಘನಲಿಂಗ,
ಕೈಯಲ್ಲಿದ್ದಂತೆ ಹೊದ್ದಿದನೇಕರುದ್ರಮೂರ್ತಿಯಲ್ಲಿ.
ರಜತಾದ್ರಿಯಲಿರ್ದು ಸುಬದ್ಧವಾಗಿ ಪ್ರಳಯವಾಗಿತ್ತು ರುದ್ರಲೋಕವೆಲ್ಲಾ.
ರುದ್ರಗಣಂಗಳೆಲ್ಲರೂ ಮರ್ದನಂಗೆಯ್ಯಲ್ಲಿ,
ಸುದ್ದಿಯ ಹೇಳುವರನಾರನೂ ಕಾಣೆ.
ಇಕ್ಕಿದ್ದವರಿಗೆ ಬುದ್ಧಿ ಇನ್ನಾವುದೊ ?
ರುದ್ರಶೈವವ ಹೊದ್ದದೆ, ಪೂರ್ವಶೈವವನಾಚರಿಸದೆ,
ಮಾರ್ಗಶೈವವ ಮನ್ನಣೆಯ ಮಾಡದೆ, ವೀರಶೈವವನಾರಾಧಿಸದೆ,
ಆದಿಶೈವವನನುಕರಿಸದೆ, ಭೇದಿಸಬಾರದ ಲಿಂಗ ಕರದಲ್ಲಿದ್ದು,
ಕಂಗಳಿನಲ್ಲಿ ನಿಂದು, ಮನದಲ್ಲಿ ಸಿಂಹಾಸನಂಗೆಯ್ದು,

ಸಕಲೇಂದ್ರಿಯವ ಮರೆದು,
ಕಾಯಜೀವನ ಹೊಲಿಗೆಯ ಬಿನ್ನಾಣದಿಂ ಬಿಚ್ಚಿ,
ಬೇರೊಂದರಸಲಿಲ್ಲವಾಗಿ ಬಯಕೆಯರತು,
ಭವಹಿಂಗಿ, ತಾನೆನ್ನದೆ ಇದಿರೆನ್ನದೆ, ಏನೂ ಎನ್ನದ ಲಿಂಗೈಕ್ಯಂಗೆ
ಸ್ವಾನುಭಾವದಿಂದ ನಮೋ ನಮೋ [ಎಂಬೆ ]
ನಿಃಕಳಂಕ ಮಲ್ಲಿಕಾರ್ಜುನಾ. || ೬೭೮ ||

೨೦೯೭

ಲಿಂಗಕ್ಕೆ ಮಜ್ಜನವ ಮಾಡುವಲ್ಲಿ ಮಂಡೆಯ ಕುರುಹ ಕಾಣೆ.
ಲಿಂಗಕ್ಕುಣಬಡಿಸುವಡೆ ಬಾಯ ನೆಪ್ಪ ಕಾಣೆ.
ಇದಕ್ಕಿನ್ನೇವೆ ? ಇನ್ನಾರಿಗೆ ಹೇಳುವೆ ?
ಕೊಟ್ಟ ಗುರು, ದೃಷ್ಟವ ಹೇಳಿದುದಿಲ್ಲ.
ಸೊಡರ ಹಿಡಿದು ಹಾಳುಹಗಹದಲ್ಲಿ
ಬೀಳುವ ತೆರನೆನಗಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೬೭೯ ||

೨೦೯೮

ಲಿಂಗಕ್ಕೊಂದು, ತನಗೊಂದೆಂಬಾಗ ಆ ಅಂಗ, ಲಿಂಗವಿರೋಧಿಯೆ ?
ಆ ಅಂಗ, ಇಷ್ಟಲಿಂಗವ ಆತ್ಮನ ನೆಲೆಯಲ್ಲಿ, ಅರಿದೆಹೆನೆಂಬುದು ನಿರ್ಮಾಲ್ಯವೆ ?
ಇವು ಕುಲಛಲ ವಾಗ್ವಾದದ ಮಾತಲ್ಲದೆ, ಬಲಿಕೆವಂತರ ನೀತಿಯಲ್ಲ.
ಕೊಂಬಲ್ಲಿ ಕೊಡುವಲ್ಲಿ, ಉಂಬಲ್ಲಿ ಉಡುವಲ್ಲಿ, ಓಡುವಲ್ಲಿ,
ಲಿಂಗವನೊಡಗೂಡಿರ್ಪುದು, ಕ್ರಿಯಾಶುದ್ಧಾತ್ಮನ ಇರವು.
ಹೀಂಗಲ್ಲದೆ ಪತ್ರಚಿತ್ರದಲ್ಲಿ ಎತ್ತಿ ನೋಡಿದಡೆ,
ಸೂರ್ಯ ತತ್ತುಗೊತ್ತಾಗಿರ್ಪುದು, ನಿಃಕಳಂಕ ಮಲ್ಲಿಕಾರ್ಜುನಾ. || ೬೮೦ ||

೨೦೯೯

ಲಿಂಗ ಪ್ರಾಣ, ಪ್ರಾಣ ಲಿಂಗವಾದ ನಿರಂಗನ ಇರವು ಹೇಗೆಂದಡೆ :
ಉರಿಯೊಳಗಣ ಸರಮಣಿಯಂತೆ, ಧರೆಯೊಳಗಣ ಸುರತರುವಿನಂತೆ,
ಕರಿಯೊಳಗಣ ಬರವಿನಂತೆ, ವರದೊಳಗಣ ಕರುಣದಂತೆ,
ಸರಧಿಯೊಳಗಣ ಸಾರದಂತೆ.
ಇಂತೀ ಭರದಲ್ಲಿ ತಿರುಗುವ ಸುಳುಹು ಅರಿಬಿರಿದಯ್ಯಾ.
ಎನಗವರು ಭವರೋಗ ವೈದ್ಯರು.
ಆ ಪರಾಪರ ಶಿವಮೂರ್ತಿ, ಪರಬ್ರಹ್ಮಗುರು ತಾನೆ,
ನಿಃಕಳಂಕ ಮಲ್ಲಿಕಾರ್ಜುನ. || ೬೮೧ ||

೨೧೦೦

ಲಿಂಗ ಬಿದ್ದರೆ ಸಮಾಧಿಯ ಕೊಂಡೆನೆಂಬಿರಿ.
ಗುರು ಸತ್ತರೇಕೆ ಸಮಾಧಿಯ ಕೊಳ್ಳರಣ್ಣಾ.
ಬಲ್ಲರೆ ಹೇಳಿ, ಅರಿಯದಿದ್ದರೆ ಕೇಳಿ.
ಪೃಥ್ವಿಯಲ್ಲಿ ಹುಟ್ಟಿದ ಕಣಿಯನೆ ತಂದು, ಅಷ್ಟತನುವಿನ ಕೈಯಲ್ಲಿ ಕೊಡಲು.
ಇದ ಮುಟ್ಟಿ ಪೂಜಿಸಲಿಕ್ಕೆ, ನಾ ಹೇಗೆ ಪೂಜಿಸಲಯ್ಯಾ ?
ಲಿಂಗ ಮೂವರಿಗೆ ಹುಟ್ಟಿತ್ತು.
ಪೃಥ್ವಿಯಲ್ಲಿ ಶಿಲೆಯಾಯಿತ್ತು, ಬಿನ್ನಾಣದ ಕೈಯಲ್ಲಿ ರೂಪಾಯಿತ್ತು,
ಗುರುವಿನ ಕೈಯಲ್ಲಿ ಮೋಕ್ಷವಾಯಿತ್ತು.
ಈ ಲಿಂಗ ಬೀಳಬಲ್ಲುದೆ ? ಪೃಥ್ವಿ ತಾಳಬಲ್ಲುದೆ ?
ಲಿಂಗ ಬಿದ್ದೀತೆಂದು ಷೋಡಶೋಪಚಾರವ ಮಾಡಲಾಗದು.
ಲಿಂಗದ ಕೂಡ ಸಮಾಧಿಯ ಕೊಂಡೆನೆಂತೆಂಬ ಭಕ್ತರಿಗೆ
ನಾಯಕನರಕ ತಪ್ಪದೆಂದ, ನಿಃಕಳಂಕ ಮಲ್ಲಿಕಾರ್ಜುನ. || ೬೮೨ ||

೨೧೦೧

ಲಿಂಗಬಾಹ್ಯಂಗೆ ಲಿಂಗಬಾಹ್ಯನಾಗಬೇಕಲ್ಲದೆ,
ಸುಜಾತಿ ವಿಜಾತಿಯ ಬೆರಸಿದುದುಂಟೆ ?
ಇಂತೀ ಆರುಶೈವವ ಹೊದ್ದದ ವೀರಶೈವವೆಂದ ಮತ್ತೆ.
ಇವ ಮೀರಲಿಲ್ಲ, ಪಂಚಾಚಾರಶುದ್ಧಂಗೆ.
ಇಂತೀ ಪಥವನೇರಿ ಬದುಕಿ, ನಿಃಕಳಂಕ ಮಲ್ಲಿಕಾರ್ಜುನಾ. || ೬೮೩ ||

೨೧೦೨

ಲಿಂಗ ಮೂರು, ಸ್ಥಲವಾರೆಂಬುದು ತಮ್ಮ ಸಂದೇಹದ ಗುಣ.
ಲಿಂಗವೊಂದು, ಸ್ಥಲವೊಂದೆಂಬುದು ಖಂಡಿತನ ಗುಣ.
ಅವರವರೆಂದಂತೆ ಎನ್ನದೆ, ತನ್ನಿರವ ಭಿನ್ನವ ಮಾಡದೆ,
ಮೂಢಸಾಧನೆಯುವನೊಡನೆ ಕಾದುವ ತೆರದಂತೆ,
ಅವನಿಗೆ ಚೋಕೈಹ. ಇವನಿಗೆ ನಿಶ್ಚಯ.
ಉಭಯವ ನೀವೆ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನಾ. || ೬೮೪ ||

೨೧೦೩

ಲಿಂಗವ ಕೈಯಲ್ಲಿ ಹಿಡಿದು, ಭಕ್ತರಂಗಣವ ಕಾಯಲೇತಕ್ಕೋ ?
ಲಿಂಗವ ಕೈಯಲ್ಲಿ ಹಿಡಿದು, ಅವರಂಗದಿಚ್ಛೆಯ ನುಡಿದು,
ತನ್ನ ದಿಂಡ ಹೊರೆಯಲೇತಕ್ಕೋ ?

ಸಂದನಳಿದ ಸದಮಲಾನಂದಂಗೆ ಇದರಿಂದ ಒಂದೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೬೮೫ ||

೨೧೦೪

ಲಿಂಗವನರಿದನಾಗಿ ಗುರುವೆಂಬುದ ಬಲ್ಲ.
ಪ್ರಸಾದವನರಿದನಾಗಿ ಜಂಗಮವೆಂಬುದ ಬಲ್ಲ.
ಪ್ರಸನ್ನವನರಿದನಾಗಿ ಪಾದೋದಕವೆಂಬುದ ಬಲ್ಲ.
ಪಾದೋದಕವೆಂಬುದ ಬಲ್ಲನಾಗಿ,
ಬ್ರಹ್ಮನ ಬಲೆಗೆ ಸಿಲುಕ, ವಿಷ್ಣುವಿನ ನೇಣಿನಲ್ಲಿ ಕಟ್ಟುವೊಡೆಯ,
ರುದ್ರನ ಶೂಲದಲ್ಲಿ ಬಗೆಯಿಸಿಕೊಳ್ಳ.
ಇಂತೀ ಅಗ್ಗಳೆಯಂಗೆ, ಜಗದ ನುಗ್ಗುಗಳು ಸರಿಯೆಂದಡೆ, ಸಿಗ್ಗಾಗದಿರ್ಪನೆ ?
ಚಿದ್ರೂಪನ ನಿಲವಿಂಗೆ ಹೊದ್ದಿ, ನಮೋ ನಮೋ ಎಂದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೬೮೬ ||

೨೧೦೫

ಲಿಂಗವಿದ್ದು ಇದಿರಿಂಗೆ ಕೊಟ್ಟ ಕಾರಣ ಗುರುವಾದ.
ಆ ಗುರು ಸನ್ಮತವಾಗಿ ಹರಸ್ವರೂಪವ ಮಾಡಲಾಗಿ ಜಂಗಮವಾದ.
ಇಂತೀ ಲಿಂಗ ಬೀಜ ಅಂಕುರಿಸಿ ಎರಡಾಯಿತ್ತು.
ತಾ ಕುರಿತು ಮೂರಾಯಿತ್ತು.
ಮೂರು ಆರಾದ ಭೇದವ ಉಪಮಿಸಲಿಲ್ಲ.
ವಿಶ್ವಮಯನಾಗಿ, ವಿಶ್ವಾಸಕ್ಕೆ ಒಡಲಾಗಿ, ಪ್ರಣವ ಬೀಜವಾಗಿ,
ಉತ್ಪತ್ಯ ಲಯಕ್ಕೆ ಕರ್ತರ ಕೊಟ್ಟು,
ಮಿಕ್ಕಾದ ತತ್ವಗಳಿಗೆ ಎಲ್ಲರಿಗೆ ಹಂಚಿ ಹಾಯಿಕಿ,
ಅವು ಯಂತ್ರವಾಗಿ, ಯಂತ್ರವಾಹಕವಾಗಿ,
ಜಲದಿಂದಾದ ಮಲವ ಮತ್ತೆ ಜಲ ತೊಳೆವಂತೆ,
ನಿನ್ನ ಲೀಲೆಗೆ ನೀನೆ ಹಂಗಾದೆಯಲ್ಲ.
ಅ[ಲ್ಲಿಗೆ] ಮಲವಾಗಿ ಎನ್ನಲ್ಲಿಗೆ ಅಮಲವಾಗಿ,
ಪಾಶಬದ್ಧ ವಿರಹಿತನಾದ, ನಿಃಕಳಂಕ ಮಲ್ಲಿಕಾರ್ಜುನ. || ೬೮೭ ||

೨೧೦೬

ಲಿಂಗಸ್ಥಲ ಭಾವಸ್ವರೂಪವಾದಲ್ಲಿ,
ಪ್ರಾಣಲಿಂಗಿ ಶರಣ ಐಕ್ಯನೆಂಬ ತ್ರಿವಿಧವ ತಾಳ್ದು, ಮೂರ್ತಿ ಕುರುಹುಗೊಂಬಲ್ಲಿ,
ನಾನಾ ಮಧುರ ರಸವಂಡ ವೃಕ್ಷಂಗಳಲ್ಲಿ ಮಿಕ್ಕಾದ

ಲತೆ ಪಚ್ಚೆ ಪೈರುಗಳಲ್ಲಿ ಕುಸುಮಗಂಧ ಮೃಗಗಂಧಂಗಳು
ಸ್ಥಾವರ ಮುಂತಾದ ಸುಗಂಧ ಸುವಾಸನೆಗಳಿಗೆಲ್ಲಕ್ಕೂ
ತದ್ರೂಪಿಂಗೆ ಹಿಂಗದಂತೆ ಬಂದೊದಗಿದ ಸಂಗದಂತೆ
ಕುರುಹುಗೊಂಡೆಯಲ್ಲಾ.
ಕಾಯದ ಜೀವದ ಉಭಯದ ಮಧ್ಯದಲ್ಲಿ ನಿಂದು ದೇವನಾದೆಯಲ್ಲಾ.
ನಿನ್ನ ಲೀಲೆ ಕಾರಣವಾಗಿ, ಸಂದೇಹಿಗಳಿಗೆ ಸಂಕಲ್ಪಿಯಾಗಿ,
ನಿರಂಗಿಗೆ ನಿರಾಲಂಬನಾಗಿ, ಸಮ್ಯಕ್‌ಜ್ಞಾನ ಮುಕುರದಂತೆ
ಸಂಬಂಧಿಸಿದೆಯಲ್ಲಾ,
ನಿರಂಗ ನಿಃಕಳಂಕ ಮಲ್ಲಿಕಾರ್ಜುನಾ, ನಿನ್ನಿರವ ನೀನೇ ಬಲ್ಲೆ. ‖ ೬೮೮ ‖

೨೧೦೭

ಲಿಂಗಸ್ವರೂಪದಲ್ಲಿ ನಿಜವಸ್ತುವಿನ ಕಳೆಯದೆ,
ಮತ್ತಿಲ್ಲದುದ ಕಂಡೆ.
ರುದ್ರನ ವೇಷದಲ್ಲಿ ಪರಮನ ಪರಮ ವಿರಕ್ತಿಯದೆ,
ಮತ್ತಿಲ್ಲಾ ಎಂದೆ.
ಉಂಟಾದುದು ಇಲ್ಲವಾಗಿ, ಇಲ್ಲವಾದುದು ಉಂಟಾಗಿ,
ಈ ಉಭಯದ ಜೆಡಗಿನ ಬಿನ್ನಾಣವ,
ಬಲವರದಿಂದಲ್ಲದೆ ತಿಳಿಯಬಾರದು,
ನಿಃಕಳಂಕ ಮಲ್ಲಿಕಾರ್ಜುನಲಿಂಗವ. ‖ ೬೮೯ ‖

೨೧೦೮

ಲಿಂಗಾಂಗಿಯೆಂದು ಜಗದಲ್ಲಿ ಸುಳಿವ ಜಂಗಮಲಿಂಗವೆ ಕೇಳಿರಯ್ಯಾ,
ಭೃತ್ಯನ ಬಿನ್ನಹವ.
ಲಿಂಗವೇ ಅಂಗವಾದ ಮತ್ತೆ, ಹೆಣ್ಣಿನ ವಿಷಯಕ್ಕೆ ಸಿಕ್ಕಿ, ಬಣ್ಣಗೆಟ್ಟಿರಲ್ಲಾ.
ಹೊನ್ನಿನಾಶೆಗೆ ಸಿಕ್ಕಿ, ಪ್ರಸನ್ನವಪ್ಪ ಲಿಂಗವ ಮರೆದಿರಲ್ಲಾ.
ಮಣ್ಣಿಗೆ ಆಶೆಮಾಡಿ, ಘನಲಿಂಗವನರಿಯದೆ ಘಾಸಿಯಾದಿರಲ್ಲಾ.
ಜಂಗಮಲಿಂಗವ ನುಡಿವಡೆ ಸಮಯಕ್ಕೆ ದೂರ,
ತಾಳಿದಡೆ ಜ್ಞಾನಕ್ಕೆ ದೂರ.
ಬಿಡಬಾರದು, ಪೂಜಿಸಿ ಹಿಡಿಯಬಾರದು. ಮನಮುಟ್ಟದಾಗಿ.
ಹಡಿಯಡಿಯಲ್ಲಿ ಸಿಕ್ಕಿದ ತುಡುಗುಣಿನಾಯಂತೆ ಮೊರೆಯಿಡುತ್ತಿದ್ದೇನೆ.
ನಿಮ್ಮಡಿಗಳ ಬಿಡುಮುಡಿಯನರಿಯದೆ,
ಎನ್ನೊಡೆಯನೆ ಕೇಳಾ, ನಿಃಕಳಂಕ ಮಲ್ಲಿಕಾರ್ಜುನಾ. ‖ ೬೯೦ ‖

೨೧೧೯

ಲಿಂಗಾಲಯದಲ್ಲಿ ಸತ್ತಿತ್ತೆಂದು,
ಸಂಪ್ರೋಕ್ಷಣವ ಮಾಡಬೇಕೆಂಬ ಸಂದೇಹಿಗಳ ನೋಡಿರೆ.
ಲಿಂಗಮಧ್ಯದಲ್ಲಿ ಜಗದಳಿವುಳಿವೆಂಬುದನರಿಯದೆ,
[ಪ್ರೇ]ತಲಿಂಗವೆಂದು ಭೂಸುರರು ಕೂಡಿ,
ಜಗದೀಶಂಗೆ ಅಭಿಷೇಕವಂ ಮಾಡಿ ಘಾಸಿಯಾದರಲ್ಲಾ,
ಸಂಗನಬಸವ ಮುಂತಾದ ಅಂಗಲಿಂಗಿಗಳೆಲ್ಲರು.
ಸಂಗನಬಸವಣ್ಣಂಗೆ ಶೈವಸಂಗಮೇಶ್ವರನೇ ಗುರುವಾದ.
ಪ್ರಾಣಲಿಂಗವೆಂದು ಇನ್ನಾರಿಗೆ ಹೇಳುವೆ ?
ಇನ್ನು ಸಂದೇಹವಿಲ್ಲ, ನಾನಂಜುವೆನಯ್ಯಾ.
ಬಂದ ಬಟ್ಟೆಯಲ್ಲಿ ಬರಲಾರದೆ, ಈ ದ್ವಂದ್ವವ ಹರಿಯಾ,
ಜಂಗಮಪ್ರಾಣ ಸಂದಿಲ್ಲದಿಪ್ಪ ನಿಃಕಳಂಕ ಮಲ್ಲಿಕಾರ್ಜುನಾ. || ೭೯೧ ||

೨೧೨೦

ಲೀಲಾಭಾವಿಯಾಗಿ ಯಾಕೆ ಬಂದೆನೆಂಬುದನರಿದು,
ಸಾಕಾಗದ ನೀತಿಯ ನಿರ್ಣಯವ ಕಂಡು,
ಇನ್ನೇತರಿಂದ ಅಳಿವು, ಇನ್ನೇತರಿಂದ ಉಳಿವು ?
ಈ ಉಭಯನೀತಿಯಲ್ಲಿ ನಿಂದು ಮೇಲಿಪ್ಪಾತನನರಿಯಲು,
ಅದು ತಾನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೯೨ ||

೨೧೨೧

ಲೀಲೆಯರತು ಆಡುವರೆಲ್ಲರು,
ಕಾಲಸಂಹಾರನ ಬಂಧುಗಳು.
ಲೀಲಾಂಗನಾ ಸುಖವ ಕುರಿತು ಆಡುವರೆಲ್ಲರು,
ಲೋಲೆಯ ಬಂಧುಗಳು.
ಶೈಲಾಂಗನಾ ಲೀಲೆಯನಾಡುವರೆಲ್ಲರು,
ಕಾಲನ ಬಂಧುಗಳು.
ಲೀಲೆಯ ಜಾಳಿಸಾ, ಅಂಕಸೂನೆಗಾರ
ನಿಃಕಳಂಕ ಮಲ್ಲಿಕಾರ್ಜುನಾ. || ೭೯೩ ||

೨೧೨೨

ಲೆಕ್ಕದಲ್ಲಿ ಲೇಪಿತವಾದವರಿಗೇಕೆ ಅಜಾತನ ಸುದ್ದಿ ?
ಪ್ರಖ್ಯಾತದಲ್ಲಿ ನೀತಿಯ ಹೇಳಿಹೆನೆಂದು

ವೇಷದಲ್ಲಿ ಸುಳಿವರಿಗೇಕೆ ಪರದೋಷನಾಶನ ಸುದ್ದಿ ?
ಇವರೆಲ್ಲರೂ ಈಶನ ಭಾಷೆಯಲ್ಲಿ ಸಿಕ್ಕಿ, ಭೂಭಾರಕರಾದರು,
ನಿಃಕಳಂಕ ಮಲ್ಲಿಕಾರ್ಜುನಾ. || ೬೯೪ ||

೨೧೧೩

ಲೇಸಾಯಿತ್ತಯ್ಯಾ ಎನ್ನ ಕಾಡುವುದು.
ಎಲೆ ದೇವ, ನಿನಗದು ಕಾರುಕನ ಬುದ್ಧಿಯಂತೆ.
ಅಡಿಗೆ ನಾನಾಗಿ, ಮೇಲೆ ಹೊಡೆವುದಕ್ಕೆ ನೀನಾಗಿ.
ಎರಡರ ನಡುವೆ ಹೊಡೆಯಿಸಿಕೊಂಬುದಕ್ಕೆ ನೀನಾಗಿ.
ತನ್ನ ವಂಶ ತನಗೆ ಹಗೆಯಾಗಿ,
ಕೊಡಲಿಯ ಕಾವು ಕುಲಕ್ಕೆ ಮಿತ್ರಾದಂತೆ,
ಎಲ್ಲವೂ ನೀನಾಗಿ, ಎನ್ನನೇಕೆ ಕಾಡಿಹೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೬೯೫ ||

೨೧೧೪

ವರ್ತ[ನ] ಶುದ್ಧವಾದಲ್ಲಿ ಭಕ್ತಸ್ಥಲವಾಯಿತ್ತು.
ಕ್ರೀಭಾವ ಶುದ್ಧವಾದಲ್ಲಿ ಮಾಹೇಶ್ವರಸ್ಥಲವಾಯಿತ್ತು.
ನಡೆನುಡಿ ಶುದ್ಧವಾಗಲಾಗಿ ಪ್ರಸಾದಿಸ್ಥಲವಾಯಿತ್ತು.
ಕಾಯ ಜೀವದ ಭೇದವನರಿಯಲಿಕ್ಕೆ ಪ್ರಾಣಲಿಂಗಿಸ್ಥಲವಾಯಿತ್ತು.
ಸಕಲವನರಿದು ಹಿಡಿದು ಬಿಡುವಲ್ಲಿ ಶರಣಸ್ಥಲವಾಯಿತ್ತು.
ಇಂತೀ ಐದರಲ್ಲಿ ಏರಿ ಭೇದವಿಲ್ಲದೆ ನಿರಾಕರಿಸಿ ನಿಂದಲ್ಲಿ
ಐಕ್ಯಸ್ಥಲವಾಯಿತ್ತು.
ಇಂತೀ ಆರುಸ್ಥಲವನರಿದು,
ಮತ್ತವರೊಳಗಾದ ನಾನಾ ಸ್ಥಲಂಗಳ ತಿಳಿದು ನಿಂದ
ಸಂಗನಬಸವಣ್ಣಂಗೆ, ಚೆನ್ನಬಸವಣ್ಣಂಗೆ, ಪ್ರಭು, ಮಡಿವಾಳಯ್ಯಂಗೆ,
ನಮೋ ನಮೋ ಎನುತಿದ್ದೆ, ನಿಃಕಳಂಕ ಮಲ್ಲಿಕಾರ್ಜುನಾ. || ೬೯೬ ||

೨೧೧೫

ವರ್ಮವನೆತ್ತಿ ನುಡಿವಲ್ಲಿ ವರ್ಮಿಗನಲ್ಲದೆ ಕರ್ಮಕ್ಕೊಳಗಲ್ಲ.
ತನ್ನ ಭಾಷೆಗೆ ತಾ ತಪ್ಪಿದಲ್ಲಿ ಅನ್ಯರಯೇರೇಕೆ ?
ಅದು ತನ್ನ ತಾ ತಿಳಿವ ಯುಕ್ತಿ.
ನಿಃಕಳಂಕ ಮಲ್ಲಿಕಾರ್ಜುನದೇವರಲ್ಲಿ ಮಿಥ್ಯವಿಲ್ಲದ ಸದ್ಭಕ್ತಿ. || ೬೯೭ ||

೨೧೧೬

ವಸ್ತ್ರದ ಹರಿತು ಅನ್ನದ ಸಂಸಾರವಲ್ಲದೆ,
ಅನ್ನದ ಹರಿತು ವಸ್ತ್ರದ ಸಂಸಾರವಹುದೆ?
ಬಿತ್ತಿದ ಬಿತ್ತು ಹುಟ್ಟುವದಲ್ಲದೆ,
ಬೆಳೆದ ಬಿತ್ತು ಹುಟ್ಟಬಲ್ಲುದೆ?
[illegible]
[illegible]
[illegible]
[illegible]
[illegible]
[illegible] ನಿಃಕಳಂಕ ಮಲ್ಲಿಕಾರ್ಜುನಾ. ॥ ೬೯೮ ॥

೨೧೧೭

[illegible]
[illegible]
[illegible]
[illegible]
[illegible]
ನಿಃಕಳಂಕ ಮಲ್ಲಿಕಾರ್ಜುನಾ. ॥ ೬೯೯ ॥

೨೧೧೮

[illegible]
[illegible]
[illegible]
[illegible]
[illegible]
[illegible] ನಿಃಕಳಂಕ ಮಲ್ಲಿಕಾರ್ಜುನಾ. ॥ ೭೦೦ ॥

೨೧೧೯

[illegible]
[illegible]
[illegible]
[illegible]

ಅದರಂತೆ ಪರಿ ಭಿನ್ನವಾಗಿ, ಸ್ವಸ್ಥಾನಂಗಳಲ್ಲಿ ಮುಟ್ಟಿ,
ವೇಧಿಸಿಕೊಂಬ ವಸ್ತು ಒಂದಾದಲ್ಲಿ
ಅದು ಖಿಂಡನೆಯ ಪತ್ರದ ಚಂಡಿಕಾ ಕಿರಣದಂತೆ.
ಸಂಗವನರಿದಲ್ಲಿ, ನಿಃಕಳಂಕ ಮಲ್ಲಿಕಾರ್ಜುನಲಿಂಗ ಭಿನ್ನರೂಪನಲ್ಲ. || ೨೦೧ ||

೨೧೨೦

ವಾಯುವ ಹಿಡಿದು, ದಂಡವ ಕೊಂಡು,
ಸಾವರ ಹಿಡಿದು, ಸಂಕಲೆಯನಿಕ್ಕಿ,
ಈ ವಿಧಿಯಲ್ಲಿ ಸಯಸಗೊಳ್ಳದೆ,
ಭಾವವಾಡಿವಂತೆ ಭ್ರಮೆಗೊಳಗಾಗದೆ,
ಮತ್ತಿವನೇನನೂ ಎನ್ನದಿರ್ಪುದೆ, ಸರ್ವಜ್ಞಾನದೊಳಗು.
ಆ ನಿಜವಸ್ತು, ತಾನು ತಾನೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೦೨ ||

೨೧೨೧

ವಾಯುವಿನ ಬೆಂಬಳಿಯ ಗಂಧ, ಅದಾವ ತಾವಿನಲ್ಲಿ ನಿಲುವುದು ?
ವಾರಿಯ ಬೆಂಬಳಿಯ ತೆರೆ, ಅದಾವ ತಾವಿನಲ್ಲಿ ಸೇರಿ ನಿಲುವುದು ?
ಈ ಭೇದವನರಿದು ತಿಳಿದಲ್ಲಿ, ಅದು ಸ್ವಾನುಭಾವಸಿದ್ಧ ಐಕ್ಯಲೇಪ.
ನಿಃಕಳಂಕ ಮಲ್ಲಿಕಾರ್ಜುನಾ. || ೨೦೩ ||

೨೧೨೨

ವಾರಿಧಿಯ ಹೊಯ್ಲು ಬೇರ್ಪಡಿಸಬಹುದೆ ?
ಫಲದೊಳಗಣ ಬೀಜ ಬಲಿವುದಕ್ಕೆ ಮೊದಲೆ ತೆಗೆಯಬಹುದೆ ?
ಮಹಾಘನವನರಿವುದಕ್ಕೆ ಮೊದಲೆ,
ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಶರಣ ಐಕ್ಯನಹ ಪರಿ ಇನ್ನೆಂತೊ ?
ಇಕ್ಷುದಂಡ ಬಲಿವುದಕ್ಕೆ ಮೊದಲೆ ತನಿರಸ ಬಹುದೆ ?
ನಾನೆಂಬುದಕ್ಕೆ ಸ್ಥಾಣು, ಅಹುದಕ್ಕೆ ಭಾವದ ಬಲಿಕೆ ಇನ್ನಾವುದು.
ನಿಃಕಳಂಕ ಮಲ್ಲಿಕಾರ್ಜುನಾ ? || ೨೦೪ ||

೨೧೨೩

ವಾರುವ ಮುಗ್ಗಿದಡೆ ವಾಗೆದಲ್ಲಿ ಆದರಿಸಬೇಕಲ್ಲದೆ,
[ಅ]ದ ಗಾರುಮಾಡಿ ಹೊಯ್ವರೆ ಮಿಡಿಯನು?
ಮಾರಾರಿಯ ಶರಣರು ಮೀರಿ ಬಂದು ನುಡಿವಡೆ, ದೂರು ಮಾಡುವರೆ ?
ನೀರರವ ಅಡಿಯೊಳಗಾದವನ ಸೂರೆಗೊಂಬವರುಂಟೆ?
[ಲೇಸ] ತೋರುವರಯ್ಯಾ [ಬ]ದರ ಬೇಗೆಯಲಿ ಬೆಂದು ಗಾರಾದೆ.
ನಿಃಕಳಂಕ ಮಲ್ಲಿಕಾರ್ಜುನಾ. || ೨೦೫ ||

೨೧೨೪

ವಿಕಾರಿಗೇಕೊ ವ್ರತ ನೇಮ ? ವಿಶ್ವಾಸಹೀನಂಗೇಕೊ ಭಕ್ತಿಕೃತ್ಯ ?
ವಂದಿಸಿ ನಿಂದಿಸುವಗೇಕೊ ಜಂಗಮಪೂಜೆ ?
ಲಿಂಗವೆಂದು ಅರ್ಚಿಸಿ, ಸಂಗವನರಿಯದ ಲಿಂಗಿಗಳಿಗೆಲ್ಲಿಯದೊ ಶಿವಲಿಂಗಪೂಜೆ?
ಆರಂಗವ ತೊರೆಯದೆ, ಮೂರಂಗವ ಮೀರದೆ, ತೋರಿಪ್ಪ [ಗುಣವ] ಜರೆಯದೆ,
ಅರುವತ್ತುನಾಲ್ಕು ನೇಮವನರಿವ ಪರಿ ಇನ್ನೆಂತೊ ?
ಇಂತೀ ಗುಣವನರಿಯರಾಗಿ ಶೀಲವಂತರಿಗೆ ನೇಮವಿಲ್ಲ.
ಪಾತಕಂಗೆ ಭಕ್ತಿಯಿಲ್ಲ. ಪೂಜೆವಂತಂಗೆ ಲಿಂಗವಿಲ್ಲ.
ತ್ರಿವಿಧವ ಮರೆಯದವಂಗೆ ಜಂಗಮವಿಲ್ಲ.
ಇಂತೀ ಕಾಯಜೀವದ ಬೆಸುಗೆಯ ಬಿನ್ನಾಣವನರಿಯದವಂಗೆ ಪ್ರಾಣಲಿಂಗವಿಲ್ಲ.
ಇಂತಿವರಂಗ ಒಂದೂ ಇಲ್ಲದವಂಗೆ ನೀನೂ ನಾನೂ ಇಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೨೦೬ ||

೨೧೨೫

ವಿರಕ್ತಿಯ ಹೇಳಿ ಹರಿದಾಡುವ ಹಿರಿಯರೆಲ್ಲರೂ
ಕರಸ್ಥಲದಲ್ಲಿ ಲಿಂಗವ ಹಿಡಿದು, ಎರವಿನ ದ್ರವ್ಯ ಸ್ಥಿರವಲ್ಲವೆಂದು ಹೇಳಿ,
ಅವರು ಕೊಡುವುದಕ್ಕೆ ಮೊದಲೆ,
ತಾವು ಕೈಯಾಂತ ಬರುಕಪಿಗಳ ನೋಡಿ ಬೆರಗಾದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೨೦೭ ||

೨೧೨೬

ವಿರಳವಿಲ್ಲದ ಮಣಿಗೆ ದಾರದ ಹಂಗೇಕೆ ?
ನಿರವಯಾಂಗಗೆ ಪರಿಭ್ರಮಣವೇತಕ್ಕೆ ?
ನಿರಾಳದಲ್ಲಿ ನಿಂದ ಸುಖಿಗೆ ವಿರಾಳದಲ್ಲಿ ಸುತ್ತಿ ತಿರುಹಲೇಕೆ ?
ಸಂಸಾರದ ಸುಖದುಃಖಮಂ ಮರೆದು,
ಅಂಗ ಮೊದಲು, ಮನವೆ ಕಡೆಯಾಗಿ ಮನುಜರ ಹಂಗ ಬಿಟ್ಟವಂಗೆ
ಮನೆಮನೆಯ ಹೊಗಲೇಕೆ ? ತಲೆಹುಳಿತ ದನವಿನಂತೆ ಗಳುವಿನಾಸೆಗಾಗಿ
ಇವರಿಗೆ ಲಿಂಗದ ಅನುವಿನ ಆಸೆಯೇಕೆ ?
ಘನಮಹಿಮಾ, ಅಲಸಿದೆ ಅಂಜಿದೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೦೮ ||

೨೧೨೭

ವಿಶ್ವಾಸದ ಹರವರಿಯಲ್ಲಿ ವಿಶ್ವಮಯ ಸ್ಥಲಕುಳಂಗಳಾದವು.
ಅದು ನಾನಾ ತಟಾಕಂಗಳಲ್ಲಿ ತೋರುವ ದಿನಕರನಂತೆ,
ಹಲವುಮಯ ತೋರುವುದಲ್ಲಿಗಲ್ಲಿಗೆ ಒಲವರವಿಲ್ಲದೆ.

ಆ ವರುಣನ ನೆಲೆ ಒಂದೆ ಹಲವು ಜಗಕ್ಕೆ ಹೊಲಬಾದಂತೆ ಸ್ಥಲಜ್ಞನಾದೆಯಲ್ಲಾ.
ಸ್ಥಲಲೇಪ ಒಂದೆಂದರಿತಲ್ಲಿ, ಏಕಸ್ಥಲಮೂರ್ತಿ ನೀನೆ.
ಏಕವು ಸಾಕೆಂದಲ್ಲಿ ನಿರಾಕಾರನಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೦೯ ||

೨೧೨೮

ವೃಕ್ಷ ಬೀಜವ ನುಂಗಿತ್ತೋ, ಬೀಜ ವೃಕ್ಷವ ನುಂಗಿತ್ತೋ
ಎಂಬುದನರಿದಾಗವೆ ಭಕ್ತಸ್ಥಲ.
ಮುತ್ತು ಜಲವ ನುಂಗಿತ್ತೋ, ಜಲವು ಮುತ್ತು ನುಂಗಿತ್ತೋ
ಎಂಬುದನರಿದಾಗವೆ ಮಾಹೇಶ್ವರಸ್ಥಲ.
ಪ್ರಭೆ ಪಾಷಾಣವ ನುಂಗಿತ್ತೋ, ಪಾಷಾಣ ಪ್ರಭೆಯ ನುಂಗಿತ್ತೋ
ಎಂಬುದನರಿದಾಗವೆ ಪ್ರಸಾದಿಸ್ಥಲ.
ವಹ್ನಿ ಕಾಷ್ಠವ ನುಂಗಿತ್ತೋ, ಕಾಷ್ಠ ವಹ್ನಿಯ ನುಂಗಿತ್ತೋ
ಎಂಬುದನರಿದಾಗವೆ ಪ್ರಾಣಲಿಂಗಿಸ್ಥಲ.
ಸಾರ ಬಲಿದು ಶರಧಿಯ ಕೂಡಿದಾಗವೆ ಶರಣಸ್ಥಲ.
ವಾರಿ ಬಲಿದು ವಾರಿಧಿಯಂತಾದಾಗವೆ ಐಕ್ಯಸ್ಥಲ.
ಹೀಂಗಲ್ಲದೆ ಷಟ್ಸ್ಥಲಬ್ರಹ್ಮಿಗಳೆಂತಾದಿರಣ್ಣಾ ?
ಕರೆಯದೆ ಪಶುವಿಂಗೆ ತೃಣವ ಘಳಿಸುವನಂತೆ,
ಒಲ್ಲದ ಸತಿಯರಲ್ಲಿ ರತಿಕೂಟವ ಬಯಸುವನಂತೆ,
ಗೆಲ್ಲತನಕ್ಕೆ ಹೋರುವರಲ್ಲಿ ಬಲ್ಲತನವನರಸುವನಂತೆ,
ಕೊಲ್ಲಿಯಾವಿನಲ್ಲಿ ಸ್ವಲೀಲೆಯನರಸುವನಂತೆ,
ಬಲಿವ ವಂಶದಲ್ಲಿ ಕಳಿಲೆಯನರಸುವನಂತೆ,
ಬರಿಮಾತಿಂಗೆಡೆಯಾದುದುಂಟೆ ?
ಬಯಲ ಕೊಂಡ ಘನಕ್ಕೆ ಅವಧಿಗೊಡಲಿಲ್ಲ.
ಉರಿಕೊಂಡ ಕರ್ಪುರಕ್ಕೆ ರೂಪಿಂಗೆಡೆಯಿಲ್ಲ.
ಬಯಲ ಬಡಿವಡೆವಂಗೆ ಕೈಗೆ ಮೃದುವಿಲ್ಲ.
ಮನ ಮಹದಲ್ಲಿ ನಿಂದವಂಗೆ ಆರನೆಣಿಸಲಿಲ್ಲ. ಮೂರ ಮುಟ್ಟಲಿಲ್ಲ.
ಮೀರಿದ ತೋರಿದ ಘನ ತನ್ನಲ್ಲಿ ನಿರ್ಲೇಪ.
ನಿಃಕಳಂಕ ಮಲ್ಲಿಕಾರ್ಜುನಾ. || ೨೧೦ ||

೨೧೨೯

ವೇದಕ್ಕೆ ಹೋರುವಡೆ ವೇದಕ್ಕತೀತ,
ಶಾಸ್ತ್ರಕ್ಕೆ ಹೋರುವಡೆ ಬಳಸಿನವನಲ್ಲ.

ಪುರಾಣದಲ್ಲಿ ಹೋರುವಡೆ ರೂಪಿನವನಲ್ಲ.
ಅರ್ಚಿಸಿ ಪೂಜಿಸಿ ಕಾಬುದಕ್ಕೆ ಹಕ್ಕಿ ಹಂಗನ ನಿಮಿತ್ತವೆ ?
ಈ ಸಚ್ಚಿದಾನಂದನ ಸಂಗ ಬಚ್ಚಬಯಲು,
ನಿಃಕಳಂಕ ಮಲ್ಲಿಕಾರ್ಜುನಾ. || ೭೧೧ ||

೨೧೩೦

ವೇದಂಗಳ ಉತ್ತರದಲ್ಲಿ, ಶಾಸ್ತ್ರದ ಮಧ್ಯದಲ್ಲಿ,
ಪುರಾಣದ ಮೊದಲಿನಲ್ಲಿ, ಪೂರ್ವ ಆದಿಯ ಇಷ್ಟದಲ್ಲಿ,
ಮಧ್ಯಭಾವ ಆತ್ಮನಲ್ಲಿ, ಉತ್ತರ ತುತ್ತತುದಿಯಲ್ಲಿ,
ಮೆಟ್ಟಿ ನೋಡಲಾಗಿ ಹಿಂದೆಸೆಯಲ್ಲಿ ಕಂಡೆ,
ಸ್ಥೂಲಸೂಕ್ಷ್ಮಕಾರಣ ಈ ಮೂರ.
ಮುಂದೆಸೆಯಲ್ಲಿ ಕಂಡೆ ಭೂತಭವಿಷ್ಯದ್ವರ್ತಮಾನವ.
ಹಿಂದೆಸೆ ಮುಂದೆಸೆಯ ಬಿಟ್ಟು,
ಊರ್ಧ್ವಾಂಗ ಅಭಿಮುಖವಾಗಿ ನೋಡಲಾಗಿ ಮಹದಾಕಾಶವ ಕಂಡೆ.
ಮಹದಾಕಾಶದ ಮಧ್ಯದಲ್ಲಿ ಒಂದು ನಿಃಕಲತತ್ವ.
ಆ ನಿಃಕಲತತ್ವದ ರೂಪು, ಆರೋಹ ಅವರೋಹವಾಗಿ ಎಡೆಯಾಡುತ್ತಿಪ್ಪುದು.
ಅದು ಅಂಗಕ್ಕೆ ಲಿಂಗವಾಗಿ, ಆತ್ಮಂಗೆ ಅರಿವಾಗಿ,
ಹಿಂದು ಮುಂದು ಒಂದೆಯಾಗಿಪ್ಪ ನಿಜ ನಿಂದ ನಿಲವು.
ನಿಃಕಳಂಕ ಮಲ್ಲಿಕಾರ್ಜುನನು ದ್ವಂದ್ವವಳಿದ ನಿರಂಗ. || ೭೧೨ ||

೨೧೩೧

ವೇದವ ಕಲಿತು, ಶಾಸ್ತ್ರವನೋದಿ,
ನಾನಾ ಪುರಾಣಂಗಳಲ್ಲಿ ಪರಿಣತೆಯಾದೆವೆಂದು
ಶ್ರುತಿ ಸ್ಮೃತಿಗಳಲ್ಲಿ ಪರತತ್ವವ ನೋಡಿ
ಕಂಡೆಹೆವೆಂದು ಹೇಳುತ್ತಿರ್ಪ ಹಿರಿಯರೆಲ್ಲರೂ
ಇಕ್ಕುವ ದಾತನ ಬಾಗಿಲ ಕಾಯ್ದು, ಚಿಕ್ಕಮಕ್ಕಳಾದರು.
ದೃಷ್ಟವ ಬೋಧಿಸುವ ಹಿರಿಯರೆಲ್ಲರೂ ಕೆಟ್ಟರಲ್ಲಾ,
ಉತ್ತರದ ಬಲೆಗೆ ಸಿಕ್ಕಿದ ಮೂಷಕನಂತೆ.
ಇವರ ದೃಷ್ಟವ ಕಂಡು ಮತ್ತೆ ಹಿರಿಯರೆಂದು ಹೋರುತ್ತಿರ್ಪ
ಮಿಟ್ಟೆಯ ಭಂಡರ ನೋಡಾ, ನಿಃಕಳಂಕ ಮಲ್ಲಿಕಾರ್ಜುನಾ. || ೭೧೩ ||

೨೧೩೨

ವೇದಾಂತವ ನುಡಿವವರ ಕಂಡೆ, ಸಿದ್ಧಾಂತವ ನಡೆವವರ ಕಾಣೆ.
ಇಲ್ಲ ಎಂದಡೆ ಸಮಯಕ್ಕೆ ದೂರ, ಉಂಟೆಂದಡೆ ಜ್ಞಾನಕ್ಕೆ ದೂರ.

ಉಭಯವ ಸಂಪಾದಿಸುವದಕ್ಕೆ ಎನಗೆ ಭಂಗ,
ನಿಃಕಳಂಕ ಮಲ್ಲಿಕಾರ್ಜುನಾ. || ೨೧೪ ||

೨೧೩೩

ವೇಷಮಾತಿನ ಬಿನ್ನಾಣಿಗಳಿಗೆ ಗ್ರಾಸ ಉಂಟಲ್ಲದೆ ನಿಜವಿಲ್ಲ.
ಇಂತೀ ಉಭಯವನತಿಗಳೆದ ನಿರತಿಶಯ ಲಿಂಗಾಂಗಿಗೆ ಗ್ರಾಸದಾಸೆಯಿಲ್ಲ.
ಸರ್ವಸುಖಿದಾಲಯದ ಪಾಶದ ಕಟ್ಟಿಲ್ಲ.
ಅವರವರ ಕಂಡಲ್ಲಿಯೆ ಸುಖಿ, ನಿಧಾನಿಸಿ ಕೂಡಿದಲ್ಲಿಯೆ ತೃಪ್ತ.
ಆತ ತ್ರಿವಿಧಮಲದ ಹಂಗಿನವನಲ್ಲ.
ಗ್ರಾಮ ನಿಳಯ ಬಂಧಂಗಳಿಲ್ಲ. ಮಾತಿನ ರಚನೆಯ ಪಾಶವನೊಲ್ಲ.
ಆತ ಸರ್ವಾಂಗಲಿಂಗ ಸನ್ಮತ.
ನಿಃಕಳಂಕ ಮಲ್ಲಿಕಾರ್ಜುನನ ಒಡಗೂಡಿದ ಪರಮವಿರಕ್ತನ ಭೇದ.|| ೨೧೫ ||

೨೧೩೪

ವ್ರತನೇಮ ನಿತ್ಯಕೃತ್ಯವ ಮಾಡುವ ಸತ್ಯರುಗಳು ಕೇಳಿರೋ.
ಲಿಂಗಕ್ಕೆ ಜಂಗಮ ವಿಶೇಷವೆಂದು,
ಆ ಜಂಗಮದ ಪಾದೋದಕದಲ್ಲಿ ಮಜ್ಜನಂಗೆಯ್ದು,
ಪ್ರಸಾದದಿಂದ ಸಮರ್ಪಣವ ಮಾಡಿ,
ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ
ಲಿಂಗ ಪ್ರಾಣ ಜಂಗಮವೆಂದು ಮಾಡಿ,
ಮತ್ತಾ ಜಂಗಮ ಮನೆಗೆ ಬಂದಡೆ ಸಂದೇಹವ ಮಾಡಲೇಕೆ?
ತನ್ನ ಪ್ರಾಣ ಲಿಂಗವೆಂದರಿದು,
ಲಿಂಗದ ಪ್ರಾಣ ಜಂಗಮವೆಂದರಿದು,
ಉಭಯಪ್ರಾಣ ತತ್ಪ್ರಾಣವಾದ ಮತ್ತೆ,
ಭಕ್ತಿಗೆ ಅವಿಶ್ವಾಸವಾಗಲೇಕೆ ?
ಆ ಜಂಗಮ ಹೆಣ್ಣ ಬೇಡಿದಡೆ ಆರಕನೆಂದು,
ಮಣ್ಣ ಬೇಡಿದಡೆ ಬದ್ಧನೆಂದು,
ಹೊನ್ನ ಬೇಡಿದಡೆ ಸಂಸಾರಿಯೆಂದು ಇಷ್ಟನೆಂದ ಮತ್ತೆ,
ಭಕ್ತಿಯ ಹಾಸಿಗೆ ಹೋರಲೇಕೆ ?
ಎಷ್ಟು ಕಾಲ ಮಾಡಿದ ವ್ರತ, ಸವೆದಡೆ, ಭಕ್ತಿಗೆ ಸಲ್ಲ. ಮುಕ್ತಿ ಇಲ್ಲ.
ವಿಶ್ವಾಸಹೀನಂಗೆ ಸತ್ಯಭಕ್ತಿ ಹುಸಿಯೆಂದೆ.
ನಿಃಕಳಂಕ ಮಲ್ಲಿಕಾರ್ಜುನಾ. || ೨೧೬ ||

**೨೧೩೫**

ವ್ರತವ ಮಾಡಿಕೊಂಡೆವೆಂದು ಗನ್ನಘಾತಕತನದಲ್ಲಿ ನಡೆವಧಿಕರ ನೋಡಾ.
ತನುವಿಂಗೆ ವ್ರತವೋ, ಮನಕ್ಕೆ ವ್ರತವೋ ?
ಮಡಕೆಗೆ ವ್ರತವೆಂದು ಸಡಗರಿಸುತ್ತಿರ್ಪ ಗತಿಹೀನರ ಕಂಡು ನಾಚಿತ್ತೆನ್ನ ಮನ.
ದಿಟದ ವ್ರತವ ಹೇಳಿಹೆ ಕೇಳಿರಣ್ಣಾ.
ಹುಸಿ ಕಳವು ಪಾರದ್ವಾರ ಕೊಲೆ ಅತಿಚಾಂಡಾಲಮಂ ಬಿಟ್ಟು,
ಪರದ್ರವ್ಯಕ್ಕೆ ಕೈಯಾನದೆ, ಪರರ ಬಾಗಿಲಲ್ಲಿ ನಿಂದು, ನೆರೆ ಹೊಲಬುಗೆಟ್ಟು,
ಅರಿವುಳ್ಳವರು ನಾವೆಂದು ಬರಿದೆ ಹಲಬುತ್ತಿರ್ಪರ ಮಾತಿಗೆ ಒಡಲಪ್ಪುದೆ ಶೀಲ ?
ತನ್ನ ಸುಬುದ್ಧಿಯಿಂದ, ಸುಕಾಯಕದಿಂದ,
ಗುರುಲಿಂಗಜಂಗಮಕ್ಕೆ ತನುಮನಧನವಂ ಸವೆಸಿ,
ಚಿತ್ತಶುದ್ಧನಾಗಿ ಅಚ್ಚೊತ್ತಿದಂತಿದ್ದುದೆ ಶೀಲವ್ರತ.
ಹಾಂಗಲ್ಲದೆ ಜಾತಿಗಾರನ ಕೈಯ ದೀಹದಂತೆ,
ಬಾಲೆಯರ ಮನದ ಸೋಲುವೆಯಂತೆ,
ಇಂತಿವರಾಳವಾಡಿ ಸಿಕ್ಕಿಸುವ, ಸೋಲುಗಾರರಿಗೆಲ್ಲಿಯದೊ ಸತ್ಯ,
ನಿಃಕಳಂಕ ಮಲ್ಲಿಕಾರ್ಜುನಾ ? || ೭೧೭ ||

**೨೧೩೬**

ಶತಭಿನ್ನಪತ್ರದಲ್ಲಿ ತೋರುವ ಪ್ರಕಾಶ,
ಒಂದೋ, ಹಲವೋ ಉಂಟೆಂಬುದ ತಿಳಿ.
ಜಲಘಟದಲ್ಲಿ ತೋರುವ ಪ್ರತಿಬಿಂಬ,
ಒಂದೋ, ಹಲವೋ ಉಂಟೆಂಬುದ ತಿಳಿ.
ಮುಕುರದಲ್ಲಿ ಹಲವು ನೋಡಿದಡೆ,
ನುಂಗಿದ ಮುಕುರ ಒಂದೋ, ಹಲವೋ ಉಂಟೆಂಬುದ ತಿಳಿ.
ಅದರಂದವ ಬಲ್ಲಡೆ ಲಿಂಗದ ಸಂದ ಬಲ್ಲರೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. || ೭೧೮ ||

**೨೧೩೭**

ಶಬ್ದ ಸ್ಪರ್ಶ ರೂಪು ರಸ ಗಂಧಂಗಳೆಂಬ ಪಂಚೇಂದ್ರಿಯಂಗಳಲ್ಲಿ
ಲಿಂಗಾರ್ಪಿತವ ಮಾಡಬೇಕೆಂಬ ಭಂಗಿತರ ನೋಡಾ.
ಅಂಗುಷ್ಠದಲ್ಲಿ ಸರ್ಪದಷ್ಟವಾದಡೆ,
ಸರ್ವಾಂಗಲಿಂಗಿಗೆ ಬೇರೆ ಐದುಸ್ಥಾನದಲ್ಲಿ ಅರ್ಪಿತವ ಮಾಡಬೇಕೆಂಬ
ಜಡಸಂಕಲ್ಪವಿಲ್ಲ.
ಇಷ್ಟಕ್ಕೂ ಭಾವಕ್ಕೂ ಪ್ರಾಣಕ್ಕೂ ಕಟ್ಟಿದ ಈಡ ನೋಡಯ್ಯಾ.

ಪರುಷದ ರಸ ಕೈಯಲ್ಲಿರ್ದು ಹೇಮವನರಸಿ ತಿರುಗುವವನಂತೆ,
ಖೇಚರತ್ವದಲ್ಲಿ ಹೋಹ ಸಾಮರ್ಥ್ಯವಿರ್ದು,
ಅಂಬಿಗನ ಹಂಗನರಸುವ ಅವಿಚಾರಿಯಂತೆ,
ನಿತ್ಯತೃಪ್ತನಾಗಿರ್ದು ಅಂಬಲಿಯ ಬಯಸುವ ಕಾಳ್ವಿಚಾರಿಯಂತೆ,
ಸ್ವಯಂಜ್ಯೋತಿ ಪ್ರಕಾಶದೊಳಗಿರ್ದು,
ಜ್ಯೋತಿಯ ಹಂಗಿನಲ್ಲಿ ಕಂಡೆಹೆನೆಂಬ ಭ್ರಾಂತನಂತೆ,
ವಾಯುಗಮನಪುಳ್ಳಾತ ತೇಜಿಯನರಸುವಂತೆ,
ಅಮೃತ ಸೇವನೆಯ ಮಾಡುವಾತ ಆಕಳನರಸಿ ಬಳಲುವಂತೆ,
ತಾ ಬೈಚಿಟ್ಟ ನಿಕ್ಷೇಪವ ಹೊಲಬುದಪ್ಪಿ ಅರಸುವನಂತೆ ಆಗಬೇಡ.
ಇದು ಕಾರಣ, ವೇದಗುಣದಲ್ಲಿ ಅರ್ಪಿತವೆಂಬ,
ಮೂರರ ಗುಣದಲ್ಲಿ ತೃಪ್ತಿಯೆಂಬ, ಆರರ ಗುಣದಲ್ಲಿ ಆಧಾರವೆಂಬ,
ಎಂಟರ ಗುಣದಲ್ಲಿ ಸಂತೋಷವೆಂಬ ಭ್ರಾಂತು ಹರಿದು,
ಬೆಳಗಿನೊಳಗಿಪ್ಪ ಜ್ವಲಿತವಂ ಕಡಿದು, ತಾನು ತಾನಾಗಬಲ್ಲಡೆ,
ಆತನೆ ನಿರ್ಮುಕ್ತ, ನಿಃಕಳಂಕ ಮಲ್ಲಿಕಾರ್ಜುನಾ. || ೨೧೯ ||

೨೧೩೮

ಶರೀರದ ನೆಲೆಮನೆಯಲ್ಲಿರ್ದು, ನೆರೆವ ವಸ್ತುವನರಿವುದಕ್ಕೆ ಕುರುಹಾವುದು?
ಸಂಚಾರದ ಪ್ರಕೃತಿಯ ನಿಳಯದಲ್ಲಿರ್ದು,
ನೆರೆ ಸುಳುಹಿಗೆ ಒಳಗಲ್ಲದವನನರಿವನರಿವ ಪರಿಯಿನ್ನೆಂತೊ ?
ಅರಿದೆನೆಂಬುದು ಅದು ತಾ ಅರಿವೋ, ಮರವೆಯ ತೆರನೋ ?
ಇದು ಎನಗರಿಯಬಾರದು.
ಅರಿವೆಡೆಗೆ ಕುರುಹ ಹೇಳಾ,
ಎನ್ನೊಡೆಯ ನಿಃಕಳಂಕ ಮಲ್ಲಿಕಾರ್ಜುನಾ. || ೨೨೦ ||

೨೧೩೯

ಶರೀರದಲ್ಲಿ ಷಡಾಧಾರಚಕ್ರವುಂಟೆಂಬ
ಜಡೆಗಡಗಿದಲೆಯ, ಬಿಡುಗುರುಳ ಅಣ್ಣಗಳು ನೀವು ಕೇಳಿರೊ.
ಬ್ರಹ್ಮಚಕ್ರದಲ್ಲಿ ಹುಟ್ಟಿ, ವಿಷ್ಣುಚಕ್ರದಲ್ಲಿ ಬೆಳೆದು,
ರುದ್ರಚಕ್ರದಲ್ಲಿ ಸಾವುದನರಿಯದೆ, ಬಣ್ಣಬಚ್ಚನೆಯ ಮಾತ ಕಲಿತು,
ಹೊನ್ನು ಹೆಣ್ಣು ಮಣ್ಣಿಗಾಗಿ ಅನ್ನವನಿಕ್ಕುವರ
ಪ್ರಸನ್ನವ ಹಡೆಯಬಂದ ಗನ್ನಗಾರರಿಗೇಕೆ ಅರಿವಿನ ಸುದ್ದಿ ?
ಅನಂತಶಕ್ತಿದೂರ, ಸ್ವಾನುಭಾವಾತ್ಮಕನೆ ಜಾಣನಾದೆಯಲ್ಲಾ,
ನಿಃಕಳಂಕ ಮಲ್ಲಿಕಾರ್ಜುನಾ. || ೨೨೧ ||

೨೧೪೦

ಶಿಶುವಿಂಗೆ ಗುಮ್ಮನಲ್ಲದೆ ದೆಶೆಯ ಬಲ್ಲರಿಗುಂಟೆ, ಭೀತಿ ?
ನಿನ್ನ ಎಸಕದೊಲುಮೆ ನಟಿಸಿದವಂಗೆ ಉಂಟೆ ?
ಹುಸಿ, ಕಳವು, ಪಾರದ್ವಾರ ಇಂತೀ ಪಿಸಿತವ ಹರಿಯಾ,
ನಿಃಕಳಂಕ ಮಲ್ಲಿಕಾರ್ಜುನಾ. || ೭೨೨ ||

೨೧೪೧

ಶಿಶುವಿನ ಬಸುರಿನಲ್ಲಿ ತಾಯಿ ಹುಟ್ಟಿ,
ತಾಯಿ ಅಳಿದು, ಶಿಶು ಉಳಿಯಿತ್ತು.
ಉಳಿದುಳುಮೆಯ ತಿಳಿಯಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನೊಡಗೂಡ ಬಲ್ಲವ. || ೭೨೩ ||

೨೧೪೨

ಶೀಲ ಶೀಲವೆಂತೆಂಬಿರಯ್ಯಾ, ಶೀಲದ ನೆಲೆಯ ಬಲ್ಲರೆ ಹೇಳಿರೊ,
ಅರಿಯದಿರ್ದಡೆ ಕೇಳಿರೊ.
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,
ಮದ ಐದನೆಯ ಭವಿ, ಮತ್ಸರ ಆರನೆಯ ಭವಿ, ಆಮಿಷ ಏಳನೆಯ ಭವಿ.
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು,
ಲಿಂಗವಿಲ್ಲದವರ ಭವಿ ಭವಿ ಎಂಬರು.
ತಮ್ಮಂತರಂಗದಲ್ಲಿರ್ದ ಲಿಂಗಾಂಗದ ಸುದ್ದಿಯನರಿದೆ,
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಗಳೆಂದು
ಜಲಕ್ಕೆ ಕನ್ನವನಿಕ್ಕಿ, ಉದಕವ ತಂದು,
ಲಿಂಗಕ್ಕೆ ಮಜ್ಜನಕ್ಕೆರೆವ ಪಗಲುಗಳ್ಳರಿಗೆ ಮೆಚ್ಚುವನೇ,
ನಿಃಕಳಂಕ ಮಲ್ಲಿಕಾರ್ಜುನ ? || ೭೨೪ ||

೨೧೪೩

ಶುಕ್ತಿಕರಂಡದಲ್ಲಿ ಬಿದ್ದ ಅಪ್ಪು, ಶುಕ್ತಿಯ ಭೇದವೋ?
ಕರಂಡದ ಭೇದವೋ? ಅಪ್ಪುವಿನ ಭೇದವೋ?
ಕಾಯದಲ್ಲಿದ್ದ ಭಾವ, ಭಾವದಲ್ಲಿದ್ದ ಜೀವ,
ಜೀವದಿಂದ ಭಾವವಾಯಿತ್ತೋ, ಭಾವದಿಂದ ಕಾಯವಾಯಿತ್ತೋ?
ಪಾಷಾಣವ ಕೂಡಿದ್ದ ರತಿ, ರತಿಯ ಕೂಡಿದ್ದ ಬೆಳಗು,
ಬೆಳಗು ರತಿಯಿಂದಲಾಯಿತ್ತೋ, ರತಿ ಶಿಲೆಯಿಂದಲಾಯಿತ್ತೋ?

ಇಂತೀ ಅಂಗ ತ್ರಿವಿಧ, ಇಂತೀ ಭಾವ ತ್ರಿವಿಧ, ಇಂತಿ ಜೀವ ತ್ರಿವಿಧ.
ಇಂತೀ ತ್ರಿವಿಧ ಸ್ಥೂಲಂಗಳಲ್ಲಿ ಇಂತೀ ತ್ರಿವಿಧ ಸೂಕ್ಷ್ಮಂಗಳಲ್ಲಿ,
ಇಂತೀ ತ್ರಿವಿಧ ಕಾರಣಂಗಳಲ್ಲಿ, ಅಳಿವ ಉಳಿವ ಉಭಯವನರಿತು ನೆನೆವುದು,
ನೆನೆಯಿಸಿಕೊಂಬ ಉಭಯವನರಿತು, ಉಭಯ ಒಂದಾದಲ್ಲಿ ಪ್ರಾಣಲಿಂಗ.
ಉಭಯಸಂಬಂಧ ಉಭಯ ಲೇಪವಾದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೭೨೫ ||

೨೧೪೪

ಜ್ಞಾನಜ್ಞಾನಿಗಳೆಲ್ಲ ಸಮ್ಯಕ್‌ಜ್ಞಾನವ ಬಲ್ಲರೆ ?
ಲೌಕಿಕದ ಧ್ಯಾನಮೌನಿಗಳೆಲ್ಲ ಸ್ವಾನುಭಾವಿಗಳಹರೆ ?
ಇದರ ಭಾವವನರಿಯದೆ,
ಭ್ರಮೆಯೊಳಗೀ ವಸ್ತುವಿನ ಠಾವನರಿಯದೆ ವಾಯವಾಗಿ,
ಇಂತೀ ಗಾವಿಲರಿಗೆಲ್ಲಿಯದೊ ಸಮ್ಯಕ್‌ಜ್ಞಾನದ ಹೊಲಬು ?
ಇಂತಿವ ನೀನೆ ಬಲ್ಲೆ, ನಾನರಿಯೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೨೬ ||

೨೧೪೫

ಸಂಚಿತ ಆಗಾಮಿ ಪ್ರಾರಬ್ಧವೆಂಬ ಕರ್ಮಕಲ್ಪಿತಕ್ಕೆ
ಹೊರಗಾಗಿಯಲ್ಲದೆ ಲಿಂಗವನರಿಯಬಾರದು.
ಆ ಲಿಂಗ ಸಾಕಾರವ ತಾಳಿ, ಜಗದ್ಧಿತಾರ್ಥವಾಗಿ ಬಂದಿರ್ದಲ್ಲಿ
ನಿರಾಕಾರದಿಂದ ಕಾಬ ಕಾಣಿಕೆ ಇನ್ನಾವುದೊ ? ಇನ್ನಾರಿಗೆ ಹೇಳುವೆ ?
ಕಣೆತಿಯ ಕೈಯ ಕೊಟ್ಟ, ಕಲ್ಲಿನಂತೆ ನಿಃಕಳಂಕ ಮಲ್ಲಿಕಾರ್ಜುನಾ. || ೭೨೭ ||

೨೧೪೬

ಸಂಚಿತ ಪ್ರಾರಬ್ಧ ಆಗಾಮಿಗಳೆಂಬ ತ್ರಿಸಂಚವನರಿತು,
ಸ್ಥೂಲಸೂಕ್ಷ್ಮ ಕಾರಣವೆಂಬ ತನುತ್ರಯವನರಿತು,
ಭಕ್ತಿಜ್ಞಾನವೈರಾಗ್ಯವೆಂಬ ಭಿತ್ತಿಯ ಕಂಡು,
ಮನ ಬುದ್ಧಿ ಚಿತ್ತ ಅಹಂಕಾರವೆಂಬ ಚತುಷ್ಟಯವ ಕಂಡು,
ರಂಸ ಗಂಧ ಶಬ್ದ ಸ್ಪರ್ಶಂಗಳಲ್ಲಿ, ದಶವಾಯು ಅಷ್ಟಮದ ನವದ್ವಾರಂಗಳಲ್ಲಿ,
ಶೋಕ ಮೋಹ ರಾಗ ವಿರಾಗಂಗಳಲ್ಲಿ,
ಇಂತಿವರಲ್ಲಿ ಆತ್ಮನ ನಾನಾ ಗುಣಭೇದಂಗಳಲ್ಲಿ,
ಹಿಡಿವುದ ಹಿಡಿದು, ಬಿಡುವುದ ಬಿಟ್ಟು,
ಒಡಗೂಡುವುದ ಒಡಗೂಡಿ, ಮಹಾಬೀಜ ಸಾಧ್ಯವಾದಲ್ಲಿ,
ಕಾಯದ ಅಳಿವು, ಜೀವದ ಭವ ವಿರವಳಿವನ್ನಕ್ಕ,
ಅಂಗಕ್ಕೆ ಆಚಾರ, ಮನಕ್ಕೆ ಅರಿವು, ಅರಿವಿಂಗೆ ಒಂದು ಕುರುಹು.

ಆ ಕುರುಹು ನಿಃಪತಿಯಹನ್ನಕ್ಕ, ಶೂಲದ ಮೇಲಣ ಘಟ ಚೇತನ ಹೋಹನ್ನಕ್ಕ,
ಅಭಿಲಾಷೆಯಿಂದ ಕೆಲವರ ಬೋಧಿಸಬೇಡ.
ಇಂತೀ ಬಿಡುಮುಡಿಗಳಲ್ಲಿ ಕಳೆದುಳಿದ ಮಹಾತ್ಮಂಗೆ
ಹಿಂದುಮುಂದಿಲ್ಲ, ಸಂದುಸಂಶಯವಿಲ್ಲ.
ಪನ್ನಗಂಗೆ ತಲೆ ಬಾಲವಲ್ಲದೆ, ತನ್ನಲ್ಲಿ ಉದಿಸಿದ ಕಾಳಕೂಟಕ್ಕುಂಟೆ,
ತಲೆ ಬಾಲವೆಂಬ ಭೇದ? ಅರಿವನ್ನಕ್ಕ ಸ್ಥಲ, ಅರಿವು ಕರಿಗೊಂಡಲ್ಲಿ ಪರಿಪೂರ್ಣ.
ಉಭಯದೊಡಲಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೭೨೮ ||

### ೨೧೪೭

ಸಂಜೀವನವ ಕೈಯಲ್ಲಿ ಹಿಡಿದಿರ್ದು, ಸಾವ ಹುಟ್ಟುವ ಜೀವವ ನಾ ಕಂಡೆ.
ಕಂಗಳ ಮುಂದೆ ಕಡವರ ತುಂಬಿರ್ದು, ದಾರಿದ್ರ್ಯದಲ್ಲಿ ನೊಂದವರ ನಾ ಕಂಡೆ.
ತನ್ನಂಗದಲ್ಲಿ ಅಲಗ ಹೊಣೆಯಾಗಿ ಹೊತ್ತಿರ್ದು,
ಕೋಲಿನ ಹೊರೆಯ ಮೊನೆಯಲ್ಲಿ, ಇರಿಯಿಸಿಕೊಂಡು ಸತ್ತವರ ನಾ ಕಂಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವನರಿಯದೆ ಹೋದವರ. || ೭೨೯ ||

### ೨೧೪೮

ಸಕಲ ರೂಪೆಂದು, ನಿಃಕಲ ನಿರವಯವೆಂದು ಲಕ್ಷಿಸಿ ನುಡಿವಾಗ,
ಸಕಲವನರಿವುದು ನಿಃಕಲವೋ, ಸಕಲವೋ?
ಸಕಲವೆ ರೂಪಿಗೊಳಗಾದ ವಸ್ತು, ನಿಃಕಲವೆ ಒಡಲುಗೊಂಡ ವಸ್ತು.
ಅದು ಸೂತ್ರದ ನೂಲಿನಂತೆ ಕಡೆಗಾಣಿಸಿ ನಿಂದಲ್ಲಿ, ಬೊಂಬೆಗೆ ಹಾಹೆ ಉಂಟೆ?
ಅಂಗಕ್ಕೆ ಕರ್ಮವಿಲ್ಲ, ಆತ್ಮಂಗಲ್ಲದೆ.
ಈ ದ್ವಂದ್ವದ ಸುಸಂಗದಲ್ಲಿ ನಿಂದು ನೋಡಲಾಗಿ,
ಅಂಗ ನಿರಂಗವೆಂಬುದು ಅಲ್ಲಿಯೆ ಅಡಗಿತ್ತು.
ಅದೇ ಐಕ್ಯಾನುಭಾವ, ನಿಃಕಳಂಕ ಮಲ್ಲಿಕಾರ್ಜುನಾ. || ೭೩೦ ||

### ೨೧೪೯

ಸಕಲ ಸುಖಭೋಗಂಗಳಲ್ಲಿದ್ದೂ ಇಲ್ಲದಾತನ ಆತ್ಮನ ಇರವು ಎಂತುಟೆಂದಡೆ,
ನೀರೆಣ್ಣೆಯಂತೆ, ಜಲವಾಳುಕದಂತೆ, ಉದಕ ಕಲ್ಲಿನಂತೆ,
ಅಂಬುಜಪತ್ರದ ಬಿಂದುವಿನಂತೆ,
ಸಕಲವಿಷಯದಲ್ಲಿ ತನು ನೋಯದೆ, ಮನವಳಿಯದೆ,
ಆತ್ಮಬಂಧವಿಲ್ಲದೆ ಅಲೇಪನಾಗಿರಬಲ್ಲಡೆ,
ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ.
ಇಷ್ಟನರಿಯದೆ ಅಭಿಲಾಷೆಗೆ ಬಂದು ದೀಪದ ಬೆಳಗಿಂಗೆ

ಲೇಸೆಂದು ಬೀಳುವ ಕೀಟಕನಂತಾಗದೆ,
ಕಾಯಸುಖವ ಮೆಚ್ಚಿ, ಕರ್ಮಕ್ಕೊಳಗಾಗದೆ,
ಜೀವ ಸರ್ವೇಂದ್ರಿಯಂಗಳಲ್ಲಿ ಲೋಲಿತನಾಗದೆ,
ಬಂಧಮೋಕ್ಷಕರ್ಮಂಗಳ, ಅವು ಬಂದಬಂದ ಠಾವಿನಲ್ಲಿ ಇಂಬಿಟ್ಟು,
ಉಭಯದ ಸಂದಳಿಯ ಬಿಟ್ಟು, ಬೇರೊಂದು ಉಭಯ ಬೇರಾಗದೆ
ಅದು ಬಿಡುಮುಡಿಯ ಭೇದ.
ಒಳಗಡಗಿದಾತನನರಿ, ದೃಷ್ಟದ ಬೇರ ಮುಟ್ಟಬೇಡ.
ಮತ್ತರಿತು ಉಭಯವ ಮುಟ್ಟದಿದ್ದಡೆ ಪ್ರಾಣಲಿಂಗಸಂಬಂಧಿ.
ಆ ಸಂಬಂಧ ಸಮಯಕ್ಕೆ ಹೊರಗಾದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೭೩೧ ||

೨೧೫೦

ಸಡಗರಿಸುವಲ್ಲಿ ಲಿಂಗವ ನೆನೆದು, ಕಡುದುಃಖ ಬಂದಲ್ಲಿ ಲಿಂಗವ ಮರೆದು,
ಇಂತೀ ಅಂಗಲಿಂಗಸಂಗವ ಮಾಡುವ ಪರಿಯಿನ್ನೆಂತೊ?
ಕೂರ್ತಡೆ ಭಕ್ತ, ತಾಪತ್ರಯಕ್ಕೆ ಪಾಪಿಯೆ?
ಇಂತೀ ಸುಖದುಃಖವೆಂಬ ಉಭಯವ ಭೇದಿಸಿ ನಿಂದವಂಗೆ,
ಸುಖನಿಶ್ಚಯದಿಂದ ನಮೋ ನಮೋ ಎಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. || ೭೩೨ ||

೨೧೫೧

ಸತ್ತ ಹೆಣಕ್ಕೆ ಎಳವಿಗೆ ಬಂದವರ ಕಂಡೆ.
ದೃಷ್ಟಿ ತೆಗೆಯಿತ್ತು ಹೆಣ.
ದೃಷ್ಟಿ ತೆಗೆಯಲಾಗಿ, ಬಾಯಿಗಿಕ್ಕಿದ ಅಕ್ಕಿ ಒಕ್ಕವು,
ಮಂದಲಿಗೆಯಲ್ಲಿ ಮಂದಲಿಗೆಯಾಸಲಾರದೆ ಹಿಂಗಿ ಒಕ್ಕವು ನೆಲಕ್ಕೆ.
ನೆಲದೊಳಗೆ ಅಟ್ಟ ಹೆಣದ ಬಾಯಕ್ಕಿ, ಓಗರವಿಲ್ಲದೆ ಉಂಡು,
ಸಲೆ ಜೀರ್ಣಿಸಿದ ಮತ್ತೆ,
ಕಾಯದ ಜೀವದ ಹೊಲಿಗೆಯನರಿದವಂಗಲ್ಲದೆ ಲಿಂಗೈಕ್ಯವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೭೩೩ ||

೨೧೫೨

ಸತ್ಯನ ಇರವು ಪಯದೊಳಗಣ ನವನೀತದಂತೆ.
ಕೂರ್ಮೆಯ ಆಚರಣೆಯಂತೆ, ಪಳುಕಿನ ಘಟದಂತೆ.
ಹೆಸರಿಡಬಾರದ ಅತೀತನ ಅಸಮಾಕ್ಷನ ಶರಣರು ನೀವೆ ಬಲ್ಲಿರಿ.
ಇದ ಹೆಸರಿಡಲಂಜುವೆ. ನಿಃಕಳಂಕ ಮಲ್ಲಿಕಾರ್ಜುನಾ. || ೭೩೪ ||

೨೧೫೩

ಸತ್ವಕ್ಕೆ ತಕ್ಕ ಹೊರೆಯಲ್ಲದೆ, ಮತ್ತುಳಿದ ಮಾತಂಗವ ಹೊರಬಹುದೆ ?
ಸತ್ವಕ್ಕೆ ತಕ್ಕ ನುಡಿಯಲ್ಲದಿರ್ದಡೆ, ಆತನ ಒಚ್ಚತಗೊಂಬರೆ ಹರಶರಣರು?
ನಡೆ ನುಡಿ ಸಿದ್ಧಾಂತವಲ್ಲದೆ, ಹುಡಿಗರ ಮಾತ ಸುಡು.
ಎನ್ನೊಡೆಯ ಕರೆಯಾ, ನಿಃಕಳಂಕ ಮಲ್ಲಿಕಾರ್ಜುನಾ. || ೨೩೫ ||

೨೧೫೪

ಸತ್ವಗೆಟ್ಟಲ್ಲಿ ಕಾಷ್ಠವನೂರಿ ನಡೆಯಬೇಕು.
ಮತ್ತತ್ವವಿದ್ದಲ್ಲಿ ನಿಶ್ಚಯವ ಹೇಳಲಾಗಿ, ಮಹಾಪ್ರಸಾದವೆಂದು ಕೈಕೊಳಬೇಕು.
ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ, ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ,
ಎನ್ನ ಸುಖದುಃಖ ನಿನ್ನ ಸುಖದುಃಖ, ಅನ್ಯವಿಲ್ಲ.
ಇದಕ್ಕೆ ಭಿನ್ನಭೇದವೇನು ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ ? || ೨೩೬ ||

೨೧೫೫

ಸತಿ ತಪ್ಪಿ ಪಾರದ್ವಾರವ ಮಾಡಿದಲ್ಲಿ,
ಒಳಗಿಟ್ಟುಕೊಂಡು ಸಂದುಸಂಶಯವಿಲ್ಲದಿದ್ದಡೆ,
ಗುರುಲಿಂಗಜಂಗಮಕ್ಕೆ ಉದಾಸೀನವ ಮಾಡಿದಡೆ, ತಪ್ಪನೊಪ್ಪಬಹುದು.
ಅಲ್ಲಿಗೆ ದ್ವೇಷ, ಇಲ್ಲಿಗೆ ಶಾಂತಿಯೇ? ಇದು ಭಕ್ತಿಯ ಬಲ್ಲವರ ಮತವಲ್ಲ.
ಸತಿಸುತ ಬಂಧುಗಳು ತಪ್ಪಿದಲ್ಲಿ,
ಭಕ್ತಿಗೆ ಅನುಸರಣೆಯ ಮಾಡಿದಡೆ, ಲಿಂಗಕ್ಕೆ ಮಜ್ಜನಕ್ಕೆರೆದಡೆ,
ಜಂಗಮ ಪ್ರಸಾದವ ಕೊಂಡಡೆ, ಆ ಅಂಗ ಧರೆಯಲ್ಲಿ ನಿಂದಿತ್ತಾದಡೆ,
ನಾ ನಿಂದ ಕಾಯಕಕ್ಕೆ ಭಂಗ.
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ನಿಃಕಳಂಕ ಮಲ್ಲಿಕಾರ್ಜುನಾ. || ೨೩೭ ||

೨೧೫೬

ಸತಿ ಪುರುಷರಿಬ್ಬರಿಂದೊದಗಿದ ಸುಖ ಸತಿಗೋ, ಪುರುಷಂಗೋ?
ಇದ ನಾ ವಿವರಿಸಲಂಜುವೆ. ಇನ್ನಾರಿಗೆ ಸುಖ ದುಃಖವೆಂಬೆ?
ಕೂಟಸ್ಥದಿಂದ ಹುಟ್ಟಿದ ಶಿಶು, ಬೆಳೆಯಿತ್ತು ಹೆಂಗೂಸಿನ ಕೈಯಲ್ಲಿ.
ಆ ಮಗು ಅವನಿಗೋ, ಅವಳಿಗೋ? ಬದುಕಿದಡೂ ಸುಖವಿಬ್ಬರಿಗೂ ಸರಿ.
ಸತ್ತಡೂ ದುಃಖವಿಬ್ಬರಿಗೂ ಸರಿ, ಆ ಪುತ್ರನ ಇರವು.
ಇದನಿನ್ನಾರಿಗೆ ಹೇಳುವೆ, ನಿಃಕಳಂಕ ಮಲ್ಲಿಕಾರ್ಜುನಾ? || ೨೩೮ ||

೨೧೫೭

ಸತ್ಕ್ರೀವಂತಂಗೆ ಭಕ್ತಸ್ಥಲವಿಲ್ಲ, ನಿರ್ಮಲಚಿತ್ತಂಗೆ ಮಾಹೇಶ್ವರಸ್ಥಲವಿಲ್ಲ.
ಪರಿಪೂರ್ಣಭಾವಿಗೆ ಪ್ರಸಾದಿಸ್ಥಲವಿಲ್ಲ,

ಉಭಯವನಳಿದವಂಗೆ ಪ್ರಾಣಲಿಂಗಿಸ್ಥಲವಿಲ್ಲ.
ಶ್ರುತದೃಷ್ಟ ಅನುಮಾನಕ್ಕೆ ಒಳಗಾಗನಾಗಿ ಶರಣಸ್ಥಲವಿಲ್ಲ.
ಕೂಡಿಹೆನೆಂಬ ಭಾವವಿಲ್ಲವಾಗಿ ಐಕ್ಯಸ್ಥಲವಿಲ್ಲ.
ಇಂತೀ ಸ್ಥಲದಿಂದ ಸ್ಥಲವನೆಯ್ದಿ, ಸ್ಥಲಲೇಪವಾದ ಮತ್ತೆ
ಮೀರಿದ ತೆರನ ನೀವೆ ಬಲ್ಲಿರಿ, ನಿಃಕಳಂಕ ಮಲ್ಲಿಕಾರ್ಜುನಾ. || ೭೩೯ ||

೨೧೫೮

ಸದ್ಭಕ್ತಿಯಿ ದೈವವೆಂದು ಅರ್ಚಿಸುವ ಠಾವಿನಲ್ಲಿ
ಮತ್ತತ್ವ. ದುಶ್ಚರಿತ್ರ, ಪಗುಡಿ, ಪರಿಹಾಸಕತನ,
ಚೆಲ್ಲಾಟ, ಗೆಲ್ಲ ಸೋಲತನ ಇವೆಲ್ಲವ ಬಿಡಬೇಕು.
ಇದೇ ಸದ್ಭಕ್ತಿ, ಸದಾತ್ಮಯುಕ್ತಿ, ನಿಃಕಳಂಕ ಮಲ್ಲಿಕಾರ್ಜುನಾ. || ೭೪೦ ||

೨೧೫೯

ಸದ್ಗುರುಚರ ಶ್ಮಶಾನದೀಕ್ಷೆಯ ಮಾಡಲಾಗದು.
ಪ್ರೇತಾಂಗಕ್ಕೆ ವಿಭೂತಿ ರುದ್ರಾಕ್ಷಿಯ ಪಟ್ಟವ ಕಟ್ಟಬಹುದೆ,
ಶಿವಲಿಂಗ ಹೊರತೆಯಾಗಿ?
ಬೀಜ ಹೊರತೆಯಾದ ವೃಕ್ಷವುಂಟೆ? ಕಾಂತಿ ಹೊರಗಾದ ಬೆಳಗುಂಟೆ?
ಭೂತಕಾಯಕ್ಕೆ ಶಿವಾಧಿಕ್ಯವೆಂಬ ಪಟ್ಟವುಂಟೆ?
ತಾ ಪಂಚಾಚಾರಭರಿತನಾಗಿದ್ದು,
ಇಷ್ಟಲಿಂಗವಿಲ್ಲದವನ ಮನೆಯ ಹೊಕ್ಕು ಶಿಷ್ಯನೆಂದಡೆ,
ಆತ ಘಟ್ಟುವ ಭಂಡನೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೪೧ ||

೨೧೬೦

ಸಮಯಾಚಾರವೆಂದು ನೇಮಕ್ಕೆ ಹೊತ್ತು ಮಾಡುತಿರ್ಪ ಸದ್ಭಕ್ತರು,
ಎನಗೆ ಹೇಳಿರಯ್ಯಾ, ಅರ್ಥಕೋ, ಪ್ರಾಣಕ್ಕೋ, ಅಪಮಾನಕ್ಕೋ?
ಅಂತಲ್ಲದೆ, ಉಂಬ ಓಗರಕ್ಕೋ, ಸಂತತ ಸಮಯೋಚಿತವನರಿವುದಕ್ಕೋ?
ಈ ಸಂಚಿತನವರಿಯದೆ ಮುಂಚಿತ್ತಾಗಿ ಉಂಬ,
ಅಶನಕ್ಕೆ ಕೈಯ ನೀಡಿ, ತಾ ಹಿಂಚಾಗಿ ಉಂಬ ಪ್ರಸಾದಿಯ ನೋಡಾ.
ಆಯತವೆಂದರಿಯದೆ, ಸ್ವಾಯತವೆಂದರಿಯದೆ,
ಸನ್ನಹಿತಪ್ರಸಾದವೆಂದರಿಯದೆ, ಹಮ್ಮುಬಿಮ್ಮಿಗೆ ಹೋರುವ ಉನ್ಮತ್ತರನೇನೆಂಬೆ,
ನಿಃಕಳಂಕ ಮಲ್ಲಿಕಾರ್ಜುನಾ. || ೭೪೨ ||

೨೧೬೧

ಸಮಾಲಕ್ಷದಲ್ಲಿ ಹುಟ್ಟಿ, ಸಕಲಕ್ರಮುಗಳಿಂದ ಭೋಗಿಸಿ.
ಪುಣ್ಯಪಾಪಂಗಳೆಂಬುವದನರಿಯದೆ, ಶ್ರುತಿಸ್ಮೃತಿತತ್ವಂಗಳ ತಿಳಿಯದೆ.

ಅಗಮ್ಯ ಅಗೋಚರಲಿಂಗವನರಿಯದೆ, ವೃಥಾ ವೈಭವಕ್ಕೆ ಕೆಡುತ್ತಿದ್ದೀಯಲ್ಲಾ.
ಅಂದು ಬಂದ ಕಥನ, ಬಸವೇಶ್ವರನಿಂದ ಬಂದ ಮಥನ,
ಶುಷ್ಕಕಾಯಕದ ಯತನ, ಎನ್ನ ಸತಿಭಾವದ ಜತನ,
ಭಕ್ತಿವರ್ತನದ ಸೌಖ್ಯಸಂಬಂಧ, ನಿಷ್ಠೆ ದೃಷ್ಟ ಭಕ್ತಿಜ್ಞಾನವೈರಾಗ್ಯ,
ಇಂತಿವ ಹೊತ್ತಾಡಿದೆಯಲ್ಲಾ.
ಇಂತೀ ಘಟ ಬಸವಣ್ಣನ ತಪ್ಪಲಲ್ಲಿ ನಿಶ್ಚಯವಾಗಿ ನಿಂದಲ್ಲದೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಕಾಣಬಾರದು. || ೭೪೩ ||

೨೧೬೨

ಸರ್ಪನ ಸಲಹಿದಲ್ಲಿ, ಬೇರೆ ವಿಷವ ಸಲಹಲುಂಟೆ ?
ಸಸಿವೃಕ್ಷಂಗಳ ಸಲಹುವಲ್ಲಿ ಬೇರೆ ಫಲವ ಸಲಹಲುಂಟೆ ?
ಕ್ರೀ ನಿರ್ಧಾರವಾದಲ್ಲಿ, ಆಚಾರಕ್ಕೆ ಅಂಕುರ,
ಆಚಾರ ಅಂಕುರವಾದಲ್ಲಿ, ದಿವ್ಯಜ್ಞಾನ ಪಲ್ಲವಿಸಿತ್ತು.
ಆ ಪಲ್ಲವದ ಮರೆಯಲ್ಲಿ, ಪರತತ್ವ ವಸ್ತು ಫಲವಾಗಿ,
ಉಭಯದ ತೊಟ್ಟು ಹರಿದು ಬಿದ್ದ ಹಣ್ಣು, ಅಭೇದ್ಯ ಲಿಂಗಕ್ಕೆ ತೃಪ್ತಿಯಾಯಿತ್ತು.
ಇಂತೀ ಭಾವದ ಭ್ರಮೆಯ ಕಳೆದು, ಜೀವವಿಕಾರ ಹಿಂಗಿ,
ನಾ ನೀನೆಂಬ ಉಭಯದ ದೃಷ್ಟ ಏನೂ ಇಲ್ಲದೆ ನಿಂದುದು, ಪ್ರಾಣಲಿಂಗಸಬಂಧ.
ಆ ಸಂಬಂಧವ ಸ್ವೀಕರಿಸಿ ನಿಂದುದು ಪ್ರಾಣಲಿಂಗಿಯ ತೃಪ್ತಿ.
ಇಂತೀ ನಿಜದಲ್ಲಿ ತಾನು ತಾನಾಗಬಲ್ಲಡೆ, ಆತನೇ ಐಕ್ಯಾನುಭಾವಿ,
ನಿಃಕಳಂಕ ಮಲ್ಲಿಕಾರ್ಜುನಾ. || ೭೪೪ ||

೨೧೬೩

ಸರ್ಪನ ಹಿಡಿವಲ್ಲಿ ಅಧಮತ್ವವ ಮಾಡುವ ಮಂತ್ರವಿರಬೇಕು.
ಶಸ್ತ್ರವ ಹಿಡಿವಲ್ಲಿ ರಣಕ್ಕೆ ನಿಶ್ಚಯನಾಗಿರಬೇಕು.
ಭಕ್ತಿಯ ಹಿಡಿವಲ್ಲಿ ತ್ರಿವಿಧಕ್ಕೆ ಮುಚ್ಚಳವನಿಕ್ಕದಿರಬೇಕು.
ಇಂತೀ ಗುಣ, ನಿಶ್ಚಟರಿಗಲ್ಲದೆ, ಮಿಕ್ಕಿನ ಪುಕ್ಕಟನಾಥರಿಗೆಲ್ಲಿಯದೊ,
ನಿಃಕಳಂಕ ಮಲ್ಲಿಕಾರ್ಜುನಾ ? || ೭೪೫ ||

೨೧೬೪

ಸರ್ವತ್ರ ಸುಲಭನಾದಲ್ಲಿ ನೀನು ನಾನು ಎನ್ನದಿರ್ಪುದೆ ಜ್ಞಾನ.
ಆ ಜ್ಞಾನವಿಂಬಾದಲ್ಲಿ ಭಾವದ ಭ್ರಮೆಗೆ, ಆತ್ಮತೇಜಕ್ಕೆ,
ತರ್ಕದ ಗೆಲ್ಲ ಸೋಲಕ್ಕೆ, ಇಕ್ಕೆ ಹಕ್ಕೆಗೆ ಹಿಕ್ಕುಗೊಡದಿಪ್ಪುದೆ ಅರಿವು.
ಆ ಅರಿವು ಕರಿಗೊಂಡಲ್ಲಿ, ಇದಿರೆಡೆಯಿಲ್ಲವಾಗಿ,

ದೃಢವೇ ತದ್ರೂಪವಾದಲ್ಲಿ ತನಗೆ ಇದಿರಿಲ್ಲ, ಇದಿರು ತನಗಿಲ್ಲ,
ದರ್ಪಣದ ಒಪ್ಪದಂತೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೪೬ ||

೨೧೬೫

ಸರ್ವ ನಿರ್ವಾಣದಲ್ಲಿ ಗುರುಸ್ಥಲ, ಲಯ ನಿರ್ವಾಣದಲ್ಲಿ ಲಿಂಗಸ್ಥಲ.
ಇಷ್ಟ, ಕಾಮ್ಯ, ಮೋಕ್ಷಂಗಳು,
ಉತ್ಪತ್ತ್ಯಸ್ಥಿತಿಲಯ ಆಣವ ಮಾಯಾ ಕಾರ್ಮಿಕ ನವಗುಣಂಗಳು ನಿಂದು,
ಶಬ್ದಮುಗ್ಧವಾದುದು ಜಂಗಮಸ್ಥಲ.
ಇಂತೀ ಕುಳ ವಿವರವ ವೇದಿಸಿ
ಸರ್ವಜ್ಞಾನ ಪರಿಪೂರ್ಣವಾಗಿಪ್ಪ ತ್ರಿವಿಧಮೂರ್ತಿಯೆ
ನಿಃಕಳಂಕ ಮಲ್ಲಿಕಾರ್ಜುನ ತಾನು ತಾನೆ. || ೭೪೭ ||

೨೧೬೬

ಸರ್ವವನಾಧರಿಸಿಕೊಂಡಿಪ್ಪ ಮಹಾಶರಣನ ಇರವು ಎಂತುಟೆಂದಡೆ,
ಮಹಾಪಲ್ಲವಿಸಿ ಬೆಳೆದ ವೃಕ್ಷದ ಶಾಖೆಗಳಂತೆ.
ಮರ್ಕಟ ವಿಹಂಗ ನಾನಾ ಕೀಟಕ ಜಾತಿ ಕುಲಕ್ಕೆ ಸಂಭ್ರಮಿಸಿ ನೆರೆದು,
ತಮ್ಮ ತಮ್ಮ ಅಂಗದವೊಲು ಜಾತಿ ಉತ್ತರಗಳಿಂದ ಆಡುತ್ತಿರಲಾಗಿ,
ಬೇಡಾ ಎಂಬುದಕ್ಕೆ ಈಡಾಯಿತ್ತೆ ?
ಆ ತೆರನನರಿತು, ಬಂದಿತು ಬಾರದೆಂಬ ಸಂದೇಹ ನಿಂದಲ್ಲಿ, ಶರಣಸ್ಥಲ.
ಇಂತೀ ಅಪ್ರಮಾಣ ಕುರುಹಳಿದು ನಿಂದಲ್ಲಿ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೭೪೮ ||

೨೧೬೭

ಸರ್ವಾವಧಾನಿಯ ಇರವು, ಅನಲ ಅನಿಲನ ತೆರದಂತೆ,
ಅಂಕುರ ಅಪ್ಪುವಿನ ತೆರದಂತೆ, ಸಾರ ಸವಿಯ ತೆರದಂತೆ,
ಅಲಿ ನೂಲಿನ ತೆರದಂತೆ, ಭಾವ ಲಿಂಗೈಕ್ಯವು,
ಸ್ವಾನುಭಾವಾತ್ಮಕ, ನಿಃಕಳಂಕ ಮಲ್ಲಿಕಾರ್ಜುನಾ. || ೭೪೯ ||

೨೧೬೮

ಸರ್ವೇಂದ್ರಿಯಂಗಳ ಲಿಂಗಮುಖ ಮಾಡಿ, ಲಿಂಗಕ್ಕೆ ಕೊಡಬೇಕೆಂಬುದು,
ತನ್ನಯ ಸಂದೇಹವೋ, ಲಿಂಗದ ಬಂಧವೋ ಎಂಬುದನರಿತು ಕೊಡುವಲ್ಲಿ,
ಇಂದ್ರಿಯಂಗಳ ನೆನಹಿನಲ್ಲಿ ಲಿಂಗ ಬರಬೇಕೊ ?
ಲಿಂಗದ ನೆನಹಿನಲ್ಲಿ ಇಂದ್ರಿಯಂಗಳು ಎಯ್ದಬೇಕೊ ?
ಇಂತೀ ಉಭಯದ ಪ್ರಮಾಣು, ಸಂದೇಹದ ಅಪ್ರಮಾಣು.

ಈ ಅರ್ಪಿತದಂಗ ಸಂಗವಾದಲ್ಲಿ,
ತಿಲ ಎಣ್ಣೆಯಂತೆ, ಗಂಧ ಕುಸುಮದಂತೆ,
ಲಿಂಗ ಇಂದ್ರಿಯಂಗಳ ಸಂದು ಒಂದೊಂದು ಕೂಡುವಲ್ಲಿ,
ಎನ್ನಂಗದ ಮನದ ಕೊನೆಯ ಮೊನೆಯ ಮೇಲೆ
ನೀ ಬಂದು ನಿಂದಡೆ, ಬಿಡುಗು ಸಂದೇಹ,
ನಿಃಕಳಂಕ ಮಲ್ಲಿಕಾರ್ಜುನಾ. || ೭೫೦ ||

೨೧೬೯

ಸಸಿ ಸ್ಥಾವರ ಮೂಲಂಗಳಿಗೆಲ್ಲಕ್ಕೂ ಪೃಥ್ವಿಯೆ ಆದಿ.
ಅಪ್ಪುವಿನ ಸಾರದಿಂದ ಪಲ್ಲವಿಸಿ, ದೃಕ್ಕಿಂಗೆ ದೃಷ್ಟವಾದ ತೆರನಂತೆ
ಇಷ್ಟದ ಪೂಜೆ ದೃಷ್ಟವಾಗಿ, ಆ ದೃಷ್ಟ ನಿಶ್ಚಯವಾದಲ್ಲಿ,
ಪ್ರಾಣಲಿಂಗಸಂಬಂಧಿ, ನಿಃಕಳಂಕ ಮಲ್ಲಿಕಾರ್ಜುನಾ. || ೭೫೧ ||

೨೧೭೦

ಸಾರವ ಕೂಡಿದಲ್ಲಿ ಹಣ್ಣು, ನಿಸ್ಸಾರವಾದಲ್ಲಿ ಕಾಯಿ.
ಕಾಯಿ ಹಣ್ಣಹುದು, ಉಭಯದೊಡಲೊಂದೆ.
ಅರಿದು ಮರೆವುದ ಹೆರೆಹಿಂಗಿದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನ, ತಾನು ತಾನೆ. || ೭೫೨ ||

೨೧೭೧

ಸಾವಿರದಲ್ಲಿ ಒಂದು ರಜ್ಜು ಹರಿದಡೆ,
ಅದ ಸಾಗಿಸಿ ಕಡೆಹಾಸಬೇಕಲ್ಲದೆ,
ಗೈದು ಬಿಟ್ಟಡೆ, ಒಂದರ ಹಿಂದೊಂದಳಿಯಿತ್ತು ಆ ಅಚ್ಚು.
ಬಂದುದನರಿದು ಮಾಡುವ ಭಕ್ತನ ದ್ವಂದ್ವದೊಳಗೊಂದು ತಪ್ಪಿದಡೆ,
ಅವ ಹಿಂದುಳಿದನೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೫೩ ||

೨೧೭೨

ಸಾಸಿರ ನೋಂಪಿಯ ನೋ[ಂ]ತು,
ನೂಲೆಳೆಯ ಹರಿದಂತಾಯಿತ್ತೆನ್ನ ಭಕ್ತಿ.
ಭಾವದಲ್ಲಿ ಬಲಿಕೆಯಿಲ್ಲ, ಜ್ಞಾನದಲ್ಲಿ ಶುದ್ಧವಿಲ್ಲ.
ಮಾಟದಲ್ಲಿ ಕೂಟವಿಲ್ಲ, ಈ ವ್ಯವಹಾರ ಸಾಕು.
ಖ್ಯಾತಿಯ ಬಿಡಿಸಾ. ನಿಃಕಳಂಕ ಮಲ್ಲಿಕಾರ್ಜುನಾ. || ೭೫೪ ||

೨೧೭೩

ಸಾಸಿವೆಯ ಮೊನೆಯೊಳಗಡಗಿದ ಗುಂಗುರು,
ಈ ದೀಪದ ವೇಷಧಾರಿಗಳೆಲ್ಲರ ನುಂಗಿ.

ಮತ್ತೆ ಆಸೆ ಹಿಂಗದೆ, ಮೂರು ವೇಷವ ನುಂಗಿತ್ತು.
ಈ ಪಾಶವ ಬಿಡಿಸಾ, ಈ ಷಣತ್ರಯದೂರ
ನಿಃಕಳಂಕ ಮಲ್ಲಿಕಾರ್ಜುನಾ. || ೭೫೫ ||

೨೧೭೪

ಸಿದ್ಧರಸ ಲೇಸೆಂದಡೆ ತಾಸಿದ್ದ ಕುಡಿಕೆ ಹೇಮವಾದುದಿಲ್ಲ,
ಲೋಹಕ್ಕಲ್ಲದೆ ವೇಧಿಸೂದಿಲ್ಲ.
ವಸ್ತು ಸರ್ವದಲ್ಲಿ ಸಂಪೂರ್ಣವಾಗಿರ್ದಡೇನು,
ತನ್ನನರುವರ ಹೃದಯದಲಲ್ಲದೆ ಇರದು.
ಸದಾಶಿವಮೂರ್ತಿಲಿಂಗದ ಇರವು,
ಇಂದ್ರಿಯವ ಕಟ್ಟಿ ವಸ್ತುವನರಿದಿಹೆನೆಂದಡೆ ಕರೆವ ಹಸುವಲ್ಲ.
ಇಂದ್ರಿಯವ ಬಿಟ್ಟು, ವಸ್ತುವ ಹಿಡಿದಿಹೆನೆಂದಡೆ ಬಿಡಾಡಿಯಲ್ಲ.
ವಸ್ತುವನರಿವುದಕ್ಕೆ ಎರಡಳಿದು ಒಂದುಳಿಯಬೇಕು.
ಆ ಸಂದಿನ ಬೆಸುಗೆಯಲ್ಲಿ ಸಂದಿರುತಿಪ್ಪವರ ಅಂದವ ನೋಡಾ,
ನಿಃಕಳಂಕ ಮಲ್ಲಿಕಾರ್ಜುನಾ. || ೭೫೬ ||

೨೧೭೫

ಸೀರೆಯ ನೆಯ್ವನ ಕೈಯ, ಲಾಳಿ ನುಂಗಿತ್ತ ಕಂಡೆ,
ಜಾಲಗಾರನ ಬಲೆಯ, ತೃಷಾಳಿ ನುಂಗಿತ್ತ ಕಂಡೆ.
ಛಾಳಾಂಬಕನ ತಲೆಯ, ಚೇಳು ನುಂಗಿತ್ತ ಕಂಡೆ.
[ಇ]ವರನಳವಡಿಸುವಾತನ [ಕೈಯ] ಒಂದೆ ಬಾಳೆಯ ಸುಳಿ ನುಂಗಿತ್ತ ಕಂಡೆ.
ಬಾಳೆಯ ಸುಳಿ ತಿರುಗುವನ್ನಕ್ಕ ಇರ್ದು ನೋಡಿ ಕೊಯ್ದು,
ಆ ಎಲೆಯ ಹಾಸಿ, ಆದಿಯ ಶರಣರೆಲ್ಲರು ಓಗರವನುಂಡರು.
ಭೇದಿಸಲರಿಯದೆ ನಾದಬಿಂದುಕಳಾಭಾವ ನೆಲೆಗೊಳ್ಳದಾದರು.
ತ್ರಿಸಂಧ್ಯಾಕಾಲದ ಭಜನೆವಂತರಿವರು.
ಪುರಾಣದ ಪುಣ್ಯವಂತರು, ಶಾಸ್ತ್ರದ ಸನ್ನಹಿತರು,
ವಚನದ ರಚನೆವಂತರು, ಮುಕ್ತಿಯ ಬಟ್ಟೆಯ ಸತ್ಯವಂತರು.
ಇವರೆಲ್ಲರು ಸತ್ತ ಸಾವ ಕಂಡು, ನನಗಿನ್ನೆತ್ತಣ ಮುಕ್ತಿಯೋ,
ನಿಃಕಳಂಕ ಮಲ್ಲಿಕಾರ್ಜುನಾ? || ೭೫೭ ||

೨೧೭೬

ನುಡಿಮುಳಿಗಳನರಿವುದು, ಕಾಯ ಜೀವ ಒಂದಾದಲ್ಲಿ.
ಅಹುದು ಅಲ್ಲ ಎಂಬುದನರಿವುದು, ಜೀವ ಪರಮ ಒಂದಾದಲ್ಲಿ.
ಕಂಡೆ ಕಾಣೆನೆಂಬುದು, ದೃಕ್ಕು ದೃಶ್ಯ ಒಂದಾದಲ್ಲಿ.

ಇಂತೀ ಪೂರ್ವ ಉತ್ತರ ಮಧ್ಯದಲ್ಲಿ ನಿಶ್ಚಯವದೇಕೋ,
ನಿಃಕಳಂಕ ಮಲ್ಲಿಕಾರ್ಜುನಾ ? ॥ ೭೫೮ ॥

೨೧೭೭

ಸುಖವ ಮೆಚ್ಚಿದ ದೇಹ, ಸಕಲದೊಳಗೆ ಸಿಕ್ಕಿದುದಕ್ಕೆ ದೃಷ್ಟ.
ಅಖಿಳರ ಬೋಧೆಗೆ ಸಿಕ್ಕಿ ಸುಖವನರಿದ ಮತ್ತೆ,
ಅಕಳಂಕತನವಿಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. ॥ ೭೫೯ ॥

೨೧೭೮

ಸುಗಂಧ ಕೊಡುವ ಮೃಗವೆಂದಡೆ,
ನೋಯಿಸಿ ಬಂಧಿಸಿದಡೆ ಗಂಧ ಬಂದುದುಂಟೆ ದುರ್ಗಂಧವಲ್ಲದೆ?
ಇಂತೀ ಅರಿವಿನ ತೆರದಲ್ಲಿ ನುಡಿವ, ಮಾತಿನ ಬ್ರಹ್ಮವ ಬಲ್ಲೆವೆಂದು,
ಒತ್ತಿ ನುಡಿಯಬಹುದೆ, ಸಾತ್ವಿಕ ಸದಾತ್ಮರ?
ಅವರಿಚ್ಛೆಯೊಳಿರ್ದು ಸುಚಿತ್ತವನರಿವುದು.
ಭೃತ್ಯತ್ವದಿಂದ ತನಗೆ ಸಿಕ್ಕಿಚ್ಛೆಯ ಕಾಣಿಸಿಕೊಳಬೇಕಲ್ಲದೆ,
ತಾ ಕಷ್ಟನಾಗಿ ಆ ಮಹಾತ್ಮರ ದೃಷ್ಟವ ನೋಡಿಹೆನೆಂದಡೆ,
ಸ್ವಪ್ನದಲ್ಲಿಯೂ ತಲೆದೋರನಾಗಿ.
ಇಂತೀ ನಿಶ್ಚಯದ ವಸ್ತುವನರಿತು,
ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ ಬೆಚ್ಚಂತಿರಬೇಕು. ॥ ೭೬೦ ॥

೨೧೭೯

ಸುಗಂಧ ದುರ್ಗಂಧವೆಂಬುಭಯವ ನಾಸಿಕವರಿದು,
ಹೆರೆಹಿಂಗುವ ಪರಿಯಿನ್ನೆಂತೊ ?
ಸುಳಿವ ವಾಸನೆಗೆ ಮೊದಲೆ, ಅಲ್ಲ ಅಹುದೆಂಬುದನರಿತು,
ಅರ್ಪಿತವ ಮಾಡಬಲ್ಲಡೆ ಬಲ್ಲರೆಂಬೆ.
ಇಂತಿವರಲ್ಲಿ ಪ್ರಾಣಲಿಂಗಾರ್ಪಿತವುಳಿಯಿತ್ತು.
ನಿಃಕಳಂಕ ಮಲ್ಲಿಕಾರ್ಜುನಾ. ॥ ೭೬೧ ॥

೨೧೮೦

ಸುಡುವ ಬೆಂಕಿಯ ತುದಿಮೊನೆಯಲ್ಲಿ, ಒಂದು ಅರಗಿನ ಮಣಿಮಾಡದ
ಮನೆಯಲ್ಲಿ ಬೂರದ ಹಾಸುಹಾಕಿ,
ನೀರಿನ ಮಂಚದ ಮೇಲೆ ನಾರಿಯರೆಲ್ಲರೂ
ತಮ್ಮ ಕ್ರೀಡಾಭಾವಂಗಳಿಂದ ಮಲಗಿರಲಾಗಿ,
ಅರಗಿನ ಮಾಡ ಎದ್ದುರಿದು, ನೀರ ಮಂಚವ ಸುಟ್ಟು,

ಬೂರದ ಹಾಸು ಹೊತ್ತಿ, ನಾರಿಯರುರಿದು ಹೋಗಿ,
ಉರಿವ ನಾಲಗೆ ಹರಿವ ನೀರ ಕೆಡಿಸಿತ್ತು.
ಆ ಹರವರಿಯಲ್ಲಿ ಪರಿಹರಿಸಬಲ್ಲಡೆ, ಐಕ್ಯಾನುಭಾವ,
ನಿಃಕಳಂಕ ಮಲ್ಲಿಕಾರ್ಜುನಾ. || ೭೬೨ ||

೨೧೮೧

ಸುಧೆಯಿದ್ದಂತೆ ಸುರೆಗೆ ಆಸೆ ಮಾಡುವನಂತೆ,
ರತಿಯಂತಿಪ್ಪ ಸತಿಯಿರ್ದ ಪತಿ, ತೊತ್ತಿಂಗೆ ಮನವಿಟ್ಟು ಗತಿಗೆಡುವಂತೆ,
ಘೃತವಿದ್ದಂತೆ ಉನ್ಮತ್ತದ ರಸಕ್ಕೆ ಬಾಯ ಬಿಡುವಂತೆ,
ರಸವಿದ್ದಂತೆ [ಬಳು]ಕುವ ಕಾ[ಂಸ್ಯ]ವ ಗಳಿಸುನಂತೆ,
ಇಂತೀ ರಸಿಕವನಾರು ಬಲ್ಲರು ?
ಎಸಕದ ಒಲುಮೆ ನಾನೋ, ನೀನೋ,
ನಿಃಕಳಂಕ ಮಲ್ಲಿಕಾರ್ಜುನಾ ? || ೭೬೩ ||

೨೧೮೨

ಸುರೆಯ ಮಡಕೆಯ ಮೇಲೆ ವಿಭೂತಿಯ ಪೂಸಿ
ಕುಸುಮದಲ್ಲಿ ಪೂಜಿಸಿ, ದೇವರೆಂದು ಅರ್ಚಿಸಿ,
ಪೂಜಿಸಿ ಕುಡಿಯುತ್ತಿರ್ಪ ನರರಂತಾದಿರಯ್ಯಾ.
ಈದ ಎಮ್ಮೆಯ ಕೊರಳಿನಲ್ಲಿ ಬೀಜವ ಕಟ್ಟಿದಾತ ಗುರುವೆ ?
ಕಟ್ಟಿಸಿಕೊಂಡ ಪಶುವಿಗೆತ್ತಣ ಮುಕ್ತಿಯೋ ?
ಬಟ್ಟೆಯನರಿಯದ ಗುರು, ಸೃಷ್ಟಿಯನರಿಯದ ಶಿಷ್ಯ,
ವ್ಯರ್ಥವಾಯಿತ್ತಲ್ಲಾ ಕಟ್ಟಿದ ಲಿಂಗ.
ನೆಟ್ಟನೆ ಗುರುವಾದಡೆ ಮತ್ತೆ ಬಟ್ಟೆಯ ಮೆಟ್ಟಲೇಕೊ ?
ತೊಟ್ಟು, ಬಿಟ್ಟ, ಹಣ್ಣಿಂಗೆ ಕಟ್ಟಿಗೆಯ ಹಂಗೇಕೊ ?
ದ್ರವ್ಯವನರಿವುದಕ್ಕೆ ಆಯಸ್ಕಾಂತದ ಶಿಲೆಯ ತೆರದಂತೆ,
ಲೋಹದ ವಿನಯದಂತೆ, ಅನಲನ ತೃಣಸಂಗದಂತೆ,
ಅನಿಲ ಗಂಧ ಕೂಟದಂತೆ,
ನಿಃಕಳಂಕ ಮಲ್ಲಿಕಾರ್ಜುನನ ಕೂಟದ ಕುಟಿಲ. || ೭೬೪ ||

೨೧೮೩

ಸೂತ್ರವನಾಡಿಸುವುದೇತರ ಸತ್ವ?
ನೀತಿಯ ಗುಣವೊ? ಅದರೊಳಗಿರ್ಪ ಧಾತುವಿನ ಗುಣವೊ?
ಆಡಿಸುವಾತನ ಗುಣವೊ? ಓತು ನಿಂದ ಕಂಬದಾಶ್ರಯದ ಗುಣವೊ?

ಅದನೇತರಿಂದರಿವೆ.
ಒಂದನಹುದು, ಒಂದನಲ್ಲಾ ಎನಬಾರದು.
ಇದರ ಸಂದು ಸಂಶಯವ ಬಿಡಿಸಾ,
ದ್ವಂದ್ವರಹಿತ ನಿಃಕಳಂಕ ಮಲ್ಲಿಕಾರ್ಜುನಾ. || ೭೬೫ ||

೨೧೮೪

ಸೆರೆಯ ಮದ್ದ ಕಡುಗಳ್ಳನ ಬುದ್ಧಿ,
ಸೆರೆಯ ಮೀರಬೇಕೆಂಬನಲ್ಲದೆ,
ಅದರೊಳಗಡಗಿಹೆನೆಂಬುದಿಲ್ಲ.
ಆ ವಿಧಿಯಂತೆ ಶರೀರವನೊಡಗೂಡಿದಾತ್ಮ.
ಇದರ ವಿಗಡವನರಿದಲ್ಲದೆ, ಗಜಬಜೆಗೆ ಸಿಕ್ಕ ನಿಜತತ್ವಜ್ಞಾನ,
ನಿಃಕಳಂಕ ಮಲ್ಲಿಕಾರ್ಜುನಾ. || ೭೬೬ ||

೨೧೮೫

ಸ್ಥಲವ ಕಂಡಡೇನು ಸ್ಥಲವನರಿಯಬೇಕು.
ಸ್ಥಲವನರಿತಡೇನು ಸ್ಥಲವ ವೇಧಿಸಬೇಕು.
ಸ್ಥಲವ ವೇಧಿಸಿದಲ್ಲಿ ತಥ್ಯಮಿಥ್ಯಂಗಳು ಸತ್ತು,
ರಾಗದ್ವೇಷ ಪುಣ್ಯಪಾಪಂಗಳ ಎತ್ತಲೆಂದರಿಯದೆ,
ನಿಃಕಳಂಕ ಮಲ್ಲಿಕಾರ್ಜುನ ಸತ್ತನೆಂದು,
ಹೃದಯ ನಿಶ್ಚಯಿಸಿಕೊಂಡಿರಬೇಕು. || ೭೬೭ ||

೨೧೮೬

ಸ್ಥಲವೆಂಬುದು ಘಟ, ಕುಳವೆಂಬುದು ಆತ್ಮ.
ಇಂತೀ ಸ್ಥಲಕುಳವನರಿವುದು ಮಹಾಜ್ಞಾನ.
ಇಂತೀ ಸ್ಥಲವನರಿತು, ಕುಳವ ಕಂಡು,
ಇಂತೀ ಮೂರರ ಹೊಲಬ ಬಿಡಬೇಕು.
ಬಿಡುವಲ್ಲಿ ಜಗವನರಿಯದೆ, ಅರಿವಲ್ಲಿ ಭವಕ್ಕೆ ಒಡಲಲ್ಲದೆ,
ಈಚೆಯಡಿಯ ಬಿಟ್ಟು, ಆಚೆಯಡಿಯ ಮೆಟ್ಟದೆ,
ನಿಹಿತದಡಿಯ ಮಡ ಮುಟ್ಟದೆ, ಉಂಗುಷ್ಟ ಊರದೆ.
ದಾಟಬೇಕು ಆತನಡಿಗೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೬೮ ||

೨೧೮೭

ಸ್ವಕ್ಷೇತ್ರದಲ್ಲಿ ಒಂದು ಕ್ಷೇತ್ರಗೇರಿ ಹುಟ್ಟಿತ್ತು.
ಅದು ಮೊದಲಲ್ಲಿ ಸುರಾಪಾನದ ಮನೆ.

ಕಡೆಯಲ್ಲಿ ಮಾಂಸ ಕಟಕರ ವಾಸ.
ನಡುಮಧ್ಯದಲ್ಲಿ ಶೀಲವಂತರ ಅಲಯುವ ಕಂಡೆ.
ಅದಾವ ಶೀಲವೆಂದು ತಾನರಿದಡೆ ಭಾವಭ್ರಮೆಯಿಲ್ಲ.
ನಿಃಕಳಂಕ ಮಲ್ಲಿಕಾರ್ಜುನಲಿಂಗ ತಾನು ತಾನೆ. ‖ ೭೬೯ ‖

೨೧೮೮

ಸ್ವಪ್ನದ ಸತಿಗೆ ನಿಶ್ಚಯವೆಂದದ ಮುಚ್ಚಿ,
ಮತ್ತತನವಾಗಿ. ಮಿಕ್ಕವರೊಡನೆ ಇಂದೆನ್ನ ಮದುವೆಯೆಂದು
ಕಾಮದ ಕಳವಳ ಹಿಡಿದು, ತಪ್ಪಿ ನುಡಿವನಂತೆ
ಅದರ ತಥ್ಯಮಿಥ್ಯ ನಿಮಗಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. ‖ ೭೭೦ ‖

೨೧೮೯

ಸ್ತ್ರೀಯರು ಹಲವಾದಡೇನು ಕೂಡುವನೊಬ್ಬನೆ.
ಯೋಗಿ ಭಿನ್ನವಲ್ಲದೆ ಸ್ಥಾಣು ಭಿನ್ನವಲ್ಲ.
ಅರಿವ ಅರಿವು ಹಲವಲ್ಲದೆ, ಅರುಹಿಸಿಕೊಂಬವ ನೀನೊಬ್ಬನೆ.
ನಿನ್ನನರಿವ ಪರಿಯ ಹೇಳಾ, ನಿಃಕಳಂಕ ಮಲ್ಲಿಕಾರ್ಜುನಾ. ‖ ೭೭೧ ‖

೨೧೯೦

ಸ್ಥೂಲತನು, ಸೂಕ್ಷ್ಮತನು, ಕಾರಣತನು.
ಇಂತೀ ತನುತ್ರಯದ ಭೇದವನರಿಯಬೇಕಣ್ಣಾ.
ಸ್ಥೂಲತನು ಗುರುವಿಂಗೆ ಭಿನ್ನ, ಸೂಕ್ಷ್ಮತನು ಲಿಂಗಕ್ಕೆ ಭಿನ್ನ.
ಕಾರಣತನು ಜಂಗಮಕ್ಕೆ ಭಿನ್ನ.
ನಾದ ಗುರುವಿನಲ್ಲಿ ಅಡಗಿತ್ತು, ಬಿಂದು ಲಿಂಗದಲ್ಲಿ ಅಡಗಿತ್ತು,
ಕಳೆ ಜಂಗಮದಲ್ಲಿ ಅಡಗಿತ್ತು.
ಮಹಾಘನ ವಸ್ತುವಿನಲ್ಲಿ ಲೀಯವಾಯಿತ್ತು. ಅದ ಬಳಿಕ.
ಗುರುವಿಂಗೆ ತನುವೆಂಬುದಿಲ್ಲ, ಲಿಂಗಕ್ಕೆ ಮನವೆಂಬುದಿಲ್ಲ,
ಜಂಗಮಕ್ಕೆ ಘನವೆಂಬುದಿಲ್ಲ, ಪ್ರಸಾದಕ್ಕೆ ಜಿಹ್ವೆಯೆಂಬುದಿಲ್ಲ.
ಅನುವರಿದು ಘನದಲ್ಲಿ ನಿಂದು,
ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಅರುಹಿಕೊಳ್ಳಿರಣ್ಣಾ. ‖ ೭೭೨ ‖

೨೧೯೧

ಸ್ಥೂಲದಲ್ಲಿ ಕಾಬ ತನುವಿಂಗೆ ಅವುದು ದೃಷ್ಟ?
ಸೂಕ್ಷ್ಮದಲ್ಲಿ ಕಾಬ ತನುವಿಂಗೆ ಅವುದು ದೃಷ್ಟ?
ಕಾರಣದಲ್ಲಿ ಕಾಬ ತನುವಿಂಗೆ ಅವುದು ದೃಷ್ಟ?

ದೃಷ್ಟಕ್ಕೆ ದೃಷ್ಟವ ಕಂಡಲ್ಲದೆ ಮನ ನಿಶ್ಚಯಿಸದು.
ಶ್ರುತದಲ್ಲಿ ಕೇಳಿ, ದೃಷ್ಟದಲ್ಲಿ ಕಂಡು, ಅನುಮಾನದಲ್ಲಿ ಅರಿದು,
ಭಾವ ನಿರ್ಭಾವವಾಗಿಯಲ್ಲದೆ ನಿಶ್ಚಯವಿಲ್ಲ.
ನಿಶ್ಚಯಕ್ಕೆ ಒಳಗಾಹನ್ನಬರ ಅಂಗಕ್ಕೆ ಆಚಾರ, ಮನಕ್ಕೆ ಅರಿವು.
ಅರಿವಿಂಗೆ ನಿರಾಳವಹನ್ನಕ್ಕ,
ಸ್ಥೂಲದಲ್ಲಿ ಮುಟ್ಟಿ, ಸೂಕ್ಷ್ಮದಲ್ಲಿ ಅರಿದು, ಕಾರಣದಲ್ಲಿ ಕೂಡಿ,
ಕೂಟ ಏಕಸ್ಥವಾದಲ್ಲಿ, ತ್ರಿವಿಧಲಿಂಗ ತ್ರಿವಿಧ ಲಿಂಗಾರ್ಪಣವಾಯಿತ್ತು.
ಆದಲ್ಲಿ ಭಾವವಿಲ್ಲದಿಪ್ಪುದು ಪ್ರಾಣಲಿಂಗಸಂಬಂಧ,
ನಿಃಕಳಂಕ ಮಲ್ಲಿಕಾರ್ಜುನಾ. || ೭೭೩ ||

೨೧೯೨

ಸ್ಥೂಲ ಬ್ರಹ್ಮನ ಮಗ, ಸೂಕ್ಷ್ಮ ವಿಷ್ಣುವಿನ ಮಗ,
ಕಾರಣ ರುದ್ರನ ಮಗ.
ಘನಮಹಿಮ ನಿಮ್ಮನರಿವುದಕ್ಕೆ ಎನಗಿನ್ನಾವುದು ಮನ,
ನಿಃಕಳಂಕ ಮಲ್ಲಿಕಾರ್ಜುನಾ ? || ೭೭೪ ||

೨೧೯೩

ಸ್ಥೂಲವಡಕೆಯಾದಂತೆ, ಸೂಕ್ಷ್ಮ ಪರ್ಣವಾದಂತೆ,
ಕಾರಣ ಚೂರ್ಣವಾದಂತೆ,
ಮೂರು ಕೂಡಿದ ಬಣ್ಣವಾಯಿತ್ತು.
ಇದರ ಭೇದವನರಿವವರನಾರನು ಕಾಣೆ.
ಅದರ ಸ್ವಾದವ ಸವಿವ ಭೇದಕಂಗಲ್ಲದೆ
ಅನಾದಿಸಂಸಿದ್ಧಿಯಿಲ್ಲ, ನಿಃಕಳಂಕ ಮಲ್ಲಿಕಾರ್ಜುನಾ. || ೭೭೫ ||

೨೧೯೪

ಹಣ್ಣು ಮರನ ನುಂಗಿ ಏರುವುದಕ್ಕೆ ಠಾವಿಲ್ಲದೆ.
ಹಣ್ಣನೊಡೆದು ಮರನ ಕಂಡು, ಆ ಮರದ ಹಣ್ಣ ಪರೀಕ್ಷಿಸಬಲ್ಲಡೆ,
ಆತನೇ ಪರಮಸುಖಿ, ನಿಃಕಳಂಕ ಮಲ್ಲಿಕಾರ್ಜುನಾ. || ೭೭೬ ||

೨೧೯೫

ಹದ್ದು ಹಾವು ನುಂಗುವಾಗ ಸಿದ್ಧರೆಲ್ಲರು ನೋಡುತ್ತಿದ್ದರು.
ಪ್ರಸಿದ್ಧರಲ್ಲದ ಕಾರಣ ಸಿದ್ಧರು ಸಿದ್ಧಿಯಲ್ಲಿಯೆ ಮುಳುಗಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಹೊದ್ದಿದುದಿಲ್ಲ. || ೭೭೭ ||

೨೧೯೬

ಹರಿಗೆಯ ಹಿಡಿದವ ಇದಿರ ಗೆದ್ದಿಹೆನೆಂದು
ಅದನೆದೆಗಿಕ್ಕಿಕೊಂಡು, ಉರವಣೆಸಿಕೊಂಡು,
ಬಾಹ ಸಮರವ ತರಹರಿಸಿಹೆನೆಂದು
ಇದಿರಿಗೆ ಈಡಹ ತೆರನಂತೆ ಅದಕ್ಕೇ ಹಾನಿ.
ಅಂಗದ ಕುರುಹಿನ ನೆಮ್ಮುಗೆಯಪ್ಪ ಲಿಂಗವು,
ಕಲಸಿದ ಮಣ್ಣು ರೂಹಿಂಗೆ ಈಡಾಗದೆಂದರಿದಡೆ,
ಆ ಲಿಂಗ ಭವಪಾಶವ ಗೆಲ್ಲುವುದು.
ಹಾಕಿದ ಮುಂಡಿಗೆಯ, ಭಾಷೆಯ ತಪ್ಪಿ,
ನಿಃಕಳಂಕ ಮಲ್ಲಿಕಾರ್ಜುನಾ. || ೭೭೮ ||

೨೧೯೭

ಹರುಗೋಲನೇರಿದಡೆ ಅದ ಹಿಡಿವ ತೆರನನರಿಯಬೇಕು.
ತಡಿ ಮಡು, ಅದರಡಿಯನರಿದು ಒಡಗೂಡಬೇಕು.
ಬಿಡುಮುಡಿಯನರಿಯದಿರ್ದಡೆ ತನಗೆ ಸಡಗರವೇಕೆ ?
ಕೊಲುವ ಹಗೆ ಬೇರಿಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೭೯ ||

೨೧೯೮

ಹಲವು ಬಹುರೂಪ ಬರೆದ ಕರದ ಕಡ್ಡಿಯ ಭೇದದಂತೆ,
ಮನವರಿದು, ಕಣ್ಣು ನೋಡಿ, ಕೈ ಕಡ್ಡಿಯ ಹಿಡಿದು ಲಕ್ಷಿಸುವಂತೆ,
ಸ್ಥಲದಲ್ಲಿ ನಿಂದು, ಅರಿವಿನಲ್ಲಿ ಆಶ್ರಯಿಸಿ,
ಇಷ್ಟ ವಿಶ್ವಾಸ ಭಕ್ತಿಯೊಳಗಡಗಿ, ಭಕ್ತಿ ವಸ್ತುವಿನಲ್ಲಿ ಲೇಪವಾದಲ್ಲಿ,
ನಿಃಕಳಂಕ ಮಲ್ಲಿಕಾರ್ಜುನಲಿಂಗ ನಿರ್ಲೇಪವಾಯಿತ್ತು. || ೭೮೦ ||

೨೧೯೯

ಹಸಿದ ಡುಂಡುಕಂಗೆ, ಬಕಂಗೆ ಎಸಕದ ಧ್ಯಾನವುಂಟೆ ?
ಅವು ತಮ್ಮ ಹಸಿವಡಗುವನ್ನಕ್ಕ, ತೃಷೆಗಳು ಬಂದು ಸೇರುವನ್ನಕ್ಕ,
ಹುಸಿಧ್ಯಾನದಿಂದ ಜೀವದ ಅಸುಗಳ ಕೊಂಬವು.
ಇಂತಿವರಂತೆ ಹುಸಿಕರ ಭಕ್ತಿ, ಕಿಸುಕುಳರ ವಿರಕ್ತಿ.
ಇವು ಹುಸಿಯೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೮೧ ||

೨೨೦೦

ಹಸಿದ ಹಕ್ಕಿ ಹಣ್ಣಿಂಗೆ ಹೋದಡೆ, ಹಣ್ಣು ಹಕ್ಕಿಯ ನುಂಗಿತ್ತು.
ಹಣ್ಣಿನ ರಸ ಹಕ್ಕಿಯೊಳಡಗಿತ್ತು.

ಹಣ್ಣು ಹಾರಿತ್ತು, ಹಕ್ಕಿ ಕೊಂಬಿನ ಮೇಲಿದ್ದಿತ್ತು.
ಆ ಮರನ ಹತ್ತಲಾಗಿ, ಮರದ ಕವಲು ಹಿಸಿಯಿತ್ತು.
ಹಕ್ಕಿಯಿದ್ದ ಕೊಂಬು ಹಿಡಿಯಲಾಗಿ, ಕೊಂಬು ಮುರಿಯಿತ್ತು.
ಹಕ್ಕಿ ಆಕಾಶದಲಡಗಿತ್ತು.
ಅಡಗಿದ ಹಕ್ಕಿಯ ತಾನುಡುಗಿಯಲ್ಲದೆ ಕಾಣಬಾರದು.
ತಾನುಡುಗುವುದಕ್ಕೆ ಮುನ್ನವೆ,
ಮಡದಿಯರ ನಡುವೆ ಸಿಕ್ಕಿತ್ತಯ್ಯಾ, ಆ ಮುಡುಬು.
[ಆ] ಮುಡುಬನ ಬಾಯಲ್ಲಿ ಸಡಗರಿಸುತ್ತಿರ್ಪವರಾರೆಂದರಿದು ನೋಡಾ.
ನರಶರೀರವ ಹೊತ್ತ ಬರುವಾಯ ಭುಂಜಕರಿಗೆ ಕರಿಗೊಂಡವನ ಸುದ್ದಿಯೇಕೊ?
ಮೆಟ್ಟಿದ ಮರ[ವ]ನು, ಬಿಟ್ಟಿರ್ದ ಪಕ್ಷಿ[ಯನು] ತೊಟ್ಟಿನೊಳಗಣ ಹ[ಣ್ಣ]ನು,
ತಿರುಗುವ ರಟ್ಟೆ ನುಂಗಿದುದ ಕಂಡೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೮೨ ||

೨೨೦೧

ಹಸಿದು ಅಶನವ ಮುಸುಕಿಟ್ಟುಕೊಂಡಡೆ, ಹಸಿವು ಹರಿದುದುಂಟೆ ?
ನಿಹಿತದ ಸ್ಥಲವ ಎಷ್ಟ ನುಡಿದಡೇನು, ಆ ಸ್ಥಲ ಆತ್ಮನಲ್ಲಿ ನಿಹಿತವಾಗಬೇಕು.
ಆದು ಮೃತ್ತಿಕೆಯ ತಿಟ್ಟದ ಉಭಯದಲ್ಲಿ ನಿಂದ ಕರುವಿನಂತೆ.
ಆ ತ್ರಿವಿಧವ ನೇತಿಗಳೆದು ನಿಂದ ಲೋಹದಂಗದಂತೆ.
ಅದು ಭಕ್ತನ ಸತ್ಯದ ನಿಜ, ಅದು ಮಾಹೇಶ್ವರನ ಮಾಟಕೂಟ.
ಅದು ಪ್ರಸಾದಿಯ ಪ್ರಸನ್ನ, ಅದು ಪ್ರಾಣಲಿಂಗಿಯ ಪರಮಸುಖ.
ಅದು ಶರಣನ ಸನ್ನದ್ಧ, ಅದು ಐಕ್ಯನ ಅದೃಶ್ಯ.
ಇಂತೀ ಷಡುಸ್ಥಲಭರಿತನಾಗಿ, ಚಿತ್ರದ ಲೆಪ್ಪ ಒಡೆದಂತೆ ಮತ್ತೆ ಲಕ್ಷಣವುಂಟೆ?
ಲಕ್ಷಿಸಿ ಅಲಕ್ಷವಾದಲ್ಲಿ, ಪೂರ್ವದಲ್ಲಿ ಕಂಡು,
ಉತ್ತರದಲ್ಲಿ ತಿಳಿದು ನಿಶ್ಚಯವಾದಲ್ಲಿ,
ಉಭಯದ ಕಕ್ಷೆಯಿತ್ತ, ನಾನೆತ್ತ ಹೇಳಾ,
ನಿಃಕಳಂಕ ಮಲ್ಲಿಕಾರ್ಜುನಾ. || ೭೮೩ ||

೨೨೦೨

ಹಸಿವ ಕೊಂದಿಹೆವೆಂದು ತುಪ್ಪ ಹಾಲು ಸಕ್ಕರೆ ಹಣ್ಣು
ಮುಂತಾದ ಫಲಾಹಾರಮಂ ಕೊಂಡು,
ಫಲಕ್ಕೆ ಬಾರೆವೆಂದು ಬಲೋತ್ತರವ ನುಡಿದು,
ಬಲ್ಲವರಾದೆವೆಂಬ ಗೆಲ್ಲಗೂಳಿಗಳು ನೀವು ಕೇಳಿರೊ.
ಉರಿವ ಬೆಂಕಿಗೆ ತರಿಮುಪ್ಪ ತಿಲ ಮೊದಲಾದವರು ಹಾಕಿ.

ಅನಲನ ಕೆಡಿಸಿಹವೆಂಬ ಕಲಿಕೆಯ ಮಾತಿನ ನೆರೆ ಬಾಲಕರ ಕಂಡು,
ಇವರಿಗೆ ಅರಿಕೆಯಿಲ್ಲವೆಂದೆ.
ಗರಿಕೆಯನಗೆದು ಕೊರಡನಿರಿಸಿದಂತೆ, ಇದಾರಿಗೆಯೂ ಅಘಟಿತ ನೋಡಾ.
ಪ್ರಕಟದೂರ ಸಕೀಲಸಾರ ಮುಕುರಗುಣನಿಧಿಯೆ,
ನಿಃಕಳಂಕ ಮಲ್ಲಿಕಾರ್ಜುನಾ. || ೭೮೪ ||

೨೨೦೩

ಹಳುವಿನೊಳಗಣ ದಳ್ಳುರಿ, ಅದು ಸಲ್ಲಲಿತದಿಂದಲ್ಲದೆ ಅಲ್ಲಿಂದೇಳದು.
ಬಲ್ಲವರೊಳಗಣ ಸೊಲ್ಲಿಗತೀತ ಒಳ್ಳಿದವರನಲ್ಲದೊಲ್ಲ.
ಅಲ್ಲದ ನೆಲನ ಬೆಳೆವುದಕ್ಕೆ ಹುಲ್ಲಲ್ಲದೆ ಜಲ್ಲೆಯುಂಟೆ ?
ವಾಗ್ವಾದಕ್ಕೆ ಹೋರುವರಲ್ಲಿ ಬಲ್ಲವರಿರ್ಪರೆ,
ನಿಃಕಳಂಕ ಮಲ್ಲಿಕಾರ್ಜುನಾ. ||೭೮೫ ||

೨೨೦೪

ಹಾಳಾಹಳವೆಂಬ ಮಾಳಿಗೆಯ ಹೊಕ್ಕು, ಕೋಳಾಹಳ ತಾ ಕಾದಿ,
ಇಡಾ ಪಿಂಗಳ ಸುಷುಮ್ನ ನಾಡಿಗಳೆಂಬ ಅಂಬುಗಂಡಿಯ ಮುಚ್ಚಿ,
ಅಷ್ಟಮದವೆಂಬ ಕೋಟೆಯನೊಡೆದು, ಪಂಚೇಂದ್ರಿಯವೆಂಬ ಹೂಡೆಯವಂ ಕಿತ್ತು,
ಸಕಳೇಂದ್ರಿಯವೆಂಬ ನಿಗಳಂ ಮುರಿದು, ಅಹಂಕಾರವೆಂಬ ಅಗಳಂ ಹೂಣೆ,
ಉಂಟಿಲ್ಲವೆಂಬ ಚಾರುಗದವಂ ಕಿತ್ತು, ಸತ್ವರಜವೆಂಬ ನಿಲವಂ ಕಡಿದು,
ತಮವೆಂಬ ಅಗುಳಿಯುಂ ಮುರಿದು,
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯೆಂಬ
ನೆಲಗಟ್ಟಂ ಮೆಟ್ಟಿ, ಸ್ಥೂಲಸೂಕ್ಷ್ಮ ಕಾರಣವೆಂಬ ಮೇಲುಜಂತಿಯುಂ ಕಿತ್ತು,
ಪ್ರಪಂಚೆಂಬ ಮೇಲು ಮಣ್ಣಂ ತೆಗೆದುಹಾಕಿ,
ಹೋಯಿತ್ತು ಮಾಳಿಗೆ, ನಾವು ನಷ್ಟವಾಗಿ.
ಮಾಳಿಗೆಯನಾಳಿದವ ಬಾಳದೆ ಹೋದ,
ನಿಃಕಳಂಕ ಮಲ್ಲಿಕಾರ್ಜುನಾ. || ೭೮೬ ||

೨೨೦೫

ಬಂದೆ ನೀ ಬಂದೆ ನಾನಾ ಭವಂಗಳಲ್ಲಿ,
ನಾನಾ ವ್ಯಾಪಾರಕ್ಕೆ ನೀನೊಡೆಯನಾಗಿ.
ಮರ್ತ್ಯದ ಸುಖದುಃಖ ನಿನಗೆ ನಿಶ್ಚಿಂತವಾಗಿಪ್ಪುದು.
ಬಂದೆ ನಿನ್ನಂತೆ ನಾ ಬಂದು ನೊಂದುದಿಲ್ಲ.
ಬಂದೆ ನಾ ಬಸವಣ್ಣನ ಕಥನದಿಂದ, ನಾ ತಂದ ಪದಾರ್ಥವೆಲ್ಲದ ನಿಮಗಿತ್ತೆ.

ನಾನಿನ್ನಂಜುವೆ ಗುರುಲಿಂಗಜಂಗಮದಲ್ಲಿ ಪ್ರತ್ಯುತ್ತರಕ್ಕೆ.
ಎನಗೆ ಮರ್ತ್ಯದ ಮಣಿಹ, ಕೃತ್ಯವಿನ್ನೆಷ್ಟು ದಿನ ಹೇಳಾ.
ಅಂದು ನೀವು ಕೊಟ್ಟ ಒಪ್ಪದ ಚೀಟನೊಪ್ಪಿಸಿದೆ.
ಮತ್ತೆ ಇನ್ನು ಸಂದೇಹವೆ, ಹೇಳಾ ನಿಃಕಳಂಕ ಮಲ್ಲಿಕಾರ್ಜುನಾ. || ೭೮೭ ||

೨೨೦೬

ಹಿಡಿದ ಹೊಲಕ್ಕೆ ಒಡವೆಯ ಕೊಡೆನೆಂದಡೆ,
ಬಿಡುವರೆ ಪೊಡವಿಯೊಡೆಯರು ?
ನುಡಿದ ಮಾತಿಂಗೆ ನಡೆಯದಿದ್ದಡೆ,
ಕೆಡೆನುಡಿಯದೆ ಬಿಡುವರೆ, ಲಿಂಗವನೊಡಗೂಡಿದ ಶರಣರು?
ಇದಕ್ಕೆ ಪಡಿಪುಚ್ಚವಿಲ್ಲವೆಂದೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೮೮ ||

೨೨೦೭

ಹಿಡಿದು ಬಿಟ್ಟಡೆ ಮಹಾಪ್ರಮಥರಿಗೆ ದೂರ.
ಬಿಡದಿರ್ದಡೆ ಮಹಾಬೆಳಗಿಂಗೆ ದೂರ.
ಹಿಡಿಯಬಾರದು, ಬಿಡಬಾರದು.
ಇಂತೀ ಲಿಂಗೈಕ್ಯವನಿನ್ನಾರಿಗೆ ಉಸುರುವೆ,
ನಿಃಕಳಂಕ ಮಲ್ಲಿಕಾಜುನಾ ? || ೭೮೯ ||

೨೨೦೮

ಹಿರಿದಪ್ಪ ಮಹಾಮೇರುವೆಯ ತುದಿಯಲ್ಲಿ,
ಒಂದು ಅರಗಿನ ಗಿಳಿ ತತ್ತಿಯನಿಕ್ಕಿ,
ತತ್ತಿಯು ಆ ಗಿರಿ ನುಂಗಿತ್ತ ಕಂಡೆ.
ಗಿಳಿಯ ಕುರುಹಿಲ್ಲದೆ ಹಾರಿಹೋಯಿತ್ತು.
ನಿಃಕಳಂಕ ಮಲ್ಲಿಕಾರ್ಜುನಾ, ನೀವೇ ಬಲ್ಲಿರಿ. || ೭೯೦ ||

೨೨೦೯

ಹಿರಿದಪ್ಪುದೊಂದು ಭೇರಿಗೆ,
ಅಂಗುಲದೊಳಡಗಿದ ಕಾಷ್ಠದ ಕುರುಹಿನಿಂದ ಧ್ವನಿಯೊದಗುವಂತೆ.
ಇಂತೀ ಘಟನಾದದ ಭೇದದ ಎಸಕವ ಬಲ್ಲಡೆ,
ನಿಃಕಳಂಕ ಮಲ್ಲಿಕಾರ್ಜುನಲಿಂಗವ ಬಲ್ಲವನೆಂಬೆ. || ೭೯೧ ||

೨೨೧೦

ಹೀಗಿರು ಎಂದಡೆ, ಹಾಗಿರದಿದ್ದಡೆ ಅವಳು ಸತಿಯಲ್ಲ, ನಾ ಪತಿಯಲ್ಲ.
ಆವ ಠಾವಿನಲ್ಲಿ ಎನಗೆ ಸತಿ ಸಂಗ? ಆವ ಠಾವಿನಲ್ಲಿ ಲಜ್ಜೆ ನಾಚಿಕೆ?

ಕೇಣಸರ ಅಪಮಾನವಿಲ್ಲದಿರಬೇಕು. ಅದು ಎನ್ನ ಭಕ್ತಿ ಮುಕ್ತಿಯ ಬೆಳೆ.
ಸತಿಪತಿಯಿಬ್ಬರೂ ಏಕವಾದಲ್ಲಿ
ನಿಃಕಳಂಕ ಮಲ್ಲಿಕಾರ್ಜುನ ಹೆಡೆಗುಡಿಗೊಳಗಾದನು. || ೭೯೨ ||

೨೨೧೧

ಹುಟ್ಟಿದ ಮುನ್ನವೆ ಸತ್ತಿತ್ತು ಆ ಶಿಶು.
ಸಾವುದಕ್ಕೆ ಮುನ್ನವೆ ಹುಟ್ಟಿದ ಶಿಶುವ ನೋಡಾ, ಅಯ್ಯಾ.
ಉಭಯದ ಮಧ್ಯದಲ್ಲಿ ನಿಂದು,
ಸತ್ತು ಹುಟ್ಟಿದವರಾರೋ, ಹುಟ್ಟಿ ಸತ್ತವರಾರೋ?
ಉಭಯವೇನೆಂಬುದನರಿಯದೆ,
ಭಾವಭ್ರಮೆಯಿಂದ ನಾವು ಪ್ರಾಣಲಿಂಗಿಗಳೆಂದು ನುಡಿವುತ್ತಿಪ್ಪರ ಕಂಡು,
ನಾಚಿಕೆಯಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೭೯೩ ||

೨೨೧೨

ಹುಟ್ಟಿಸುವಾತ ಬ್ರಹ್ಮನಾದಡೆ ಅರ್ಚಿಸಲೇಕೋ ನಿಮ್ಮುವ?
ರಕ್ಷಿಸುವಾತ ವಿಷ್ಣುವಾದಡೆ ಅರ್ಪಿಸಲೇಕೋ ನಿಮಗೊಂದುವ?
ಹೊಂದಿಸುವಾತ ರುದ್ರನಾದಡೆ ಮಹದಂದವ ನುಡಿಯಲೇಕೋ ನಿಮ್ಮುವ?
ಇಂತೀ ಲೀಲೆಗೆ ಆರಾದಡೂ ಆಗಲಿ ನಾನೀ ಲೀಲೆಯವನಲ್ಲ.
ಇವರ ಹೊಳಹು ನೀನೆ, ನಿಃಕಳಂಕ ಮಲ್ಲಿಕಾರ್ಜುನಾ. || ೭೯೪ ||

೨೨೧೩

ಹುಟ್ಟುಗುರುಡ ಕತ್ತೆಯನೇರಿ ಬಪ್ಪಾಗ,
ಮರ್ತ್ಯದ ಮಹಾಗಣಂಗಳು ಕಂಡು,
ಕತ್ತೆಯನೇರಿ ಬಂದಡೆ, ಕತ್ತೆಯನೇರಿದ ಕುರುಡ ಹೊತ್ತುಕೊಂಡು,
ಕತ್ತೆಯ ಕಾಲೇ ಕುರುಡಂಗೆ, ಕುರುಡನ ಕಾಲೇ ಕತ್ತೆಗೆ.
ಈ ಗುಣ ಅಚ್ಚುಗವಾಯಿತ್ತು ಭಕ್ತರೆಲ್ಲರಿಗೆ.
ಕತ್ತೆಯ ಕಣ್ಣು ಕಿತ್ತು, ಕುರುಡನ ಕಾಲ ಮುರಿದು,
ಭಕ್ತಿ ಮುಕ್ತಿಯೆಂಬುದು ಸತ್ತಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೭೯೫ ||

೨೨೧೪

ಹುಟ್ಟುವುದಕ್ಕೆ ಹಂಗಿಗರಾದವರೆಲ್ಲರೂ ಬ್ರಹ್ಮನ ಲೆಂಕರು.
ಸುಖದ ಮೆಚ್ಚಿ ಭೋಗಿಸುವವರೆಲ್ಲರೂ ವಿಷ್ಣುವಿನ ಲೆಂಕರು.
ನಾನಾ ರುಚಿಗೊಳಗಾಗಿ ಏನೆಂದರಿಯದೆ, ಸಾವವರೆಲ್ಲರೂ ರುದ್ರನ ಲೆಂಕರು.
ರೂಪೆಂಬೆನೆ ಆಸೆಯ ಬಣ್ಣ, ನಿರೂಪೆಂಬೆನೆ ನಾನಾ ಯೋನಿಯ ಚಿಹ್ನ.

ಚಿದ್ರೂಪೆಂಬೆನೆ ರುದ್ರನ ವಂಶೀಭೂತ.
ಇಂತಿವನೇನೂ ಎನ್ನದಿಪ್ಪುದೆ ಲಿಂಗೈಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. || ೭೯೬ ||

೨೨೧೫

ಹುತ್ತದ ಬಾಯಲ್ಲಿ ಲೆಕ್ಕವಿಲ್ಲದ ಹುಳು ಹುಟ್ಟಿ,
ಹುತ್ತ ಕತ್ತಿತ್ತು ನೋಡಾ.
ಸರ್ಪನ ವಿಷದ ಹೊಗೆಯಿಂದ ಹುತ್ತವುರಿದು,
ಹುಳು ಸಾಯದು ನೋಡಾ.
ಇಂತೀ ಪುತ್ಥಳಿಯ ಹೊತ್ತು ನಷ್ಟವ ಕಾಣೆ,
ನಿಃಕಳಂಕ ಮಲ್ಲಿಕಾರ್ಜುನಾ. || ೭೯೭ ||

೨೨೧೬

ಹುತ್ತದಲ್ಲಿ ಕೈಯನಿಕ್ಕಿ ಸರ್ಪನ ತೆಗೆವಾಗ, ಸರ್ಪನ ಒಪ್ಪತಪ್ಪಿ,
ಮತ್ತೆ ವಸ್ತುವಿನ ನೇವಳ ಆಭರಣವಹಲ್ಲಿ, ಅದಾರ ದೃಷ್ಟ ?
ಮತ್ತೆ ನಿರ್ಧನಿಕ ವಿಶ್ವಾಸದಿಂದ ಬಸವಣ್ಣ ಮುಂತಾದ
ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ
ಕೃತ್ಯ ತಪ್ಪದೆ ಇಕ್ಕುವಾಗ ಅದಾರ ವಿಶ್ವಾಸ ಹೇಳಾ ?
ನಾ ಹೊತ್ತ ಕಟ್ಟಿಗೆಯ ಸರಬು ಮತ್ತೆ ಸುವರ್ಣದಂಡವಾದಾಗ
ಆದಾರ ನಿಶ್ಚಯದ ವಿಶ್ವಾಸ ?
ಅವು ತಮ್ಮ ಚಿತ್ತದ ದೃಢತೆಯಿಂದ ಗುರುವಿಂಗೆ ತನುವೆಂದಲ್ಲಿ,
ಕಂಡಲ್ಲಿಯೆ ಆತ್ಮತೇಜವಳಿದು ಹೊಡೆಗೆಡೆಯಬೇಕು.
ಲಿಂಗಕ್ಕೆ ಮನ ಮುಟ್ಟಿ ಪೂಜೆಯ ಮಾಡುವಲ್ಲಿ,
ರಾಜ ಚೋರ ಅನಲ ಅಹಿ ಮುಂತಾದ ಭಯಂಗಳಿಗೆ ತಲೆದೋರದಿರಬೇಕು.
ಜಂಗಮಾರ್ಚನೆಯ ಮಾಡುವಲ್ಲಿ,
ಅರ್ಥ ಪ್ರಾಣ ಅಪಮಾನಕ್ಕೆ ಕಟ್ಟುಮೆಟ್ಟದಿರಬೇಕು.
ಇಂತೀ ತ್ರಿವಿಧ ವಿಶ್ವಾಸ ಭಕ್ತಂಗೆ ಮೂರುಸ್ಥಲ ಮುಂತಾಗಿ,
ಆರುಸ್ಥಲವೊಳಗಾಗಿ ನೂರೊಂದುಸ್ಥಲ ವೇಧಿಸಿ ನಿಂದಲ್ಲಿ,
ಅದು ಒಂದೆ ವಿಶ್ವಾಸದ ಒಡಲು.
ಇದಕ್ಕೆ ಹಲವು ಮಾತನಾಡಿ, ನಾನಾಸ್ಥಲ ಉಂಟೆಂದು ಹಲಬುತ್ತಿರಲಿಲ್ಲ.
ಇದು ನೆಲೆ, ವಸ್ತುವಿನ ಏಕಸ್ಥಲ, ನಿಃಕಳಂಕ ಮಲ್ಲಿಕಾರ್ಜುನಾ. || ೭೯೮ ||

೨೨೧೭

ಹುಲಿಯ ಹುಲ್ಲೆ ನುಂಗಿತ್ತು,
ಹುಲ್ಲೆಯು ಹುಲಿಯ ಮೊಲ ನುಂಗಿತ್ತು.

ಆ ಮೊಲನ ಕೊಂದು ಮುಂದಣ ಖಂಡವ ಕೊಯ್ದು
ತಿಂದವ ಮುಕ್ತ, ನಿಃಕಳಂಕ ಮಲ್ಲಿಕಾರ್ಜುನಾ. || ೬೯೯ ||

೨೨೧೮

ಹುಲ್ಲಿನ ಸಾರವ, ಮೇವ ಪಶು ಬಲ್ಲುದಲ್ಲದೆ
ಒಳ್ಳಿತ್ತನುಂಬ ಮನುಜರು ಬಲ್ಲರೆ ಹುಲ್ಲಿನ ಸಾರವ ?
ಅಲ್ಲಿ ಇಲ್ಲಿ ಹೋರಿಹೆನೆಂಬ ಖುಲ್ಲರನೊಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ. || ೮೦೦ ||

೨೨೧೯

ಹುಳ್ಳಿಯ ಹಗುರದಿಂದ ಹಳ್ಳವ ಹಾಯಬೇಕು.
ಬಲ್ಲವರ ಸಂಗದಿಂದ, ನಿಂದ ಸಂಸಾರದ ತಳ್ಳಿಯ ಹರಿಯಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. || ೮೦೧ ||

೨೨೨೦

ಹೃದಯಕಮಲಮಧ್ಯದಲ್ಲಿ ಅಷ್ಟದಳ ಕಮಲವ ಮೆಟ್ಟಿಪ್ಪ
ಹಂಸನ ಕಟ್ಟಬೇಕೆಂಬರು.
ಈ ಹೊಟ್ಟೆಯ ಕೂಳ ಅಣ್ಣಾಗಳೆಲ್ಲರೂ ಕಟ್ಟಬಲ್ಲರೆ ನಿಜಹಂಸನ ?
ಬೆಟ್ಟಬೆಟ್ಟವನೇರಿದ ಭೃಗು ದಧೀಚಿ ಅಗಸ್ತ್ಯ
ಕಶ್ಯಪ ರೋಮಜ ಕೌಂಡಿಲ್ಯ ಚಿಪ್ಪಜ ಮುಂತಾದ
ಸಪ್ತ ಋಷಿಗಳೆಲ್ಲರೊಳಗಾದ ಋಷಿಜನಂಗಳು, ಬೆಟ್ಟವನೇರಿ ಕಟ್ಟಿದುದಿಲ್ಲ.
ಮತ್ತೆಯೂ ಬಟ್ಟೆಗೆ ಬಂದು ಮತ್ತರಾದರಲ್ಲದೆ, ಸುಚಿತ್ತವನರಿದುದಿಲ್ಲ.
ವಿಷರುಹಕುಸುಮಜನ ಕಪಾಲವ ಹಿಡಿದಾತನ ಕೈಯಲ್ಲಿ ಗಸಣೆಗೊಳಗಾದರು.
ಆತ್ಮನ ರಸಿಕವನರಿಯದೆ, ಈ ಹುಸಿಗರ ನೋಡಿ ದೆಸೆಯ ಹೊದ್ದೆನೆಂದೆ,
ಪಶುಪತಿದೂರ, ನಿಃಕಳಂಕ ಮಲ್ಲಿಕಾರ್ಜುನಾ. || ೮೦೨ ||

೨೨೨೧

ಹೆಡೆಯಿಲ್ಲದ ಸರ್ಪ, ಫಲವಿಲ್ಲದ ವೃಕ್ಷ, ದಯವಿಲ್ಲದ ಮಾಟ,
ಇಷ್ಟದ ದೃಷ್ಟವ ಕಾಣದ ಚಿತ್ತ, ಆತ್ಮನಲ್ಲಿ ಕಟ್ಟುವಡೆಯಬಲ್ಲುದೆ ?
ಕ್ರೀಯಲ್ಲಿ ಆಚರಣೆ, ಆಚರಣೆಯಲ್ಲಿ ಅರಿವು ಶುದ್ಧವಾಗಿ ನಿಂದುದು,
ಪ್ರಾಣಲಿಂಗಸಂಬಂಧ, ನಿಃಕಳಂಕ ಮಲ್ಲಿಕಾರ್ಜುನಾ. || ೮೦೩ ||

೨೨೨೨

ಹೆಣದ ಚಪ್ಪರದ ಮಣೆಮಾಡದ ಮೇಲೆ. ಸುತ್ತಿದವಾರು ಸೀರೆ.
ಹೆಣಕ್ಕೆ ಹೊದ್ದಿಸಿದವು ಮೂರು ಸೀರೆ.

ಮಣಿಮಾಡದ ಕಂಬಕ್ಕೆ ಸುತ್ತಿದವೆಂಟು, ನಾನಾ ಚಿತ್ರದ ಬಣ್ಣದ ಸೀರೆ.
ಒಪ್ಪಿತ್ತು ತುದಿಯಲ್ಲಿ ಹೊಂಗಳಸ.
ಆ ಹೊಂಗಸಳದ ತುದಿಯ ಕೊನೆಯ ಮೊನೆಯ ಮೇಲೆ
ಬಿಳಿಯ ಗಿಳಿ ಬಂದು ಕುಳಿತಿತ್ತು.
ಕಳಶ ಮುರಿಯಿತ್ತು, ಕಂಬ ಮಾಡದ ಹಂಗ ಬಿಟ್ಟಿತ್ತು,
ಕಂಬದ ಸೀರೆ ಒಂದೂ ಇಲ್ಲ.
ಮಾಡಕ್ಕೆ ಹಾಕಿದ ಮಂಚದ ಕೀಲು ಬಿಟ್ಟವು.
ಮಾಡದ ಹೆಣ ಸಂಚರಿಸಿಕೊಂಡು ಮುಂಚಿತ್ತು.
ಹೆಣದಾತ್ಮ ಗಿಳಿಯ ಕೊಕ್ಕಿನ ತುದಿಗಂಗವಾಗಿ,
ಇದು ಅಗಣಿತವಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೮೦೩ ||

**೨೨೨೩**

ಹೆಣ್ಣು ಬೇಡುವಂಗೆ ಹೆಣ್ಣೇ ಪ್ರಾಣ,
ಹೊನ್ನ ಬೇಡುವಂಗೆ ಹೊನ್ನೇ ಪ್ರಾಣ.
ಮಣ್ಣ ಬೇಡುವಂಗೆ ಮಣ್ಣೇ ಪ್ರಾಣ.
ಮನದ ಕುರುಹನರಿದವರನಾರನೂ ಕಾಣೆ.
ಕುರಿತು ಬಂದಲ್ಲಿ ಕುರುಹಿಂಗೆ ಮಾಡುವುದೇ ಶಾಂತಿಗುಣ.
ಅರಿಕೆವಿದರು ಬಂದಲ್ಲಿ, ತನು ಮನ ಧನ ತೆರಹಿಲ್ಲದೆ ಲೇಪವಾಗಿರ್ಪುದೆ,
ಅರಿದ ಸದ್ಭಕ್ತನ ಇರವು.
ಲಾಂಛನಕ್ಕೆ ನಮಿಸಿ, ಆಪ್ಯಾಯನಕ್ಕೆ ನೀಡಿ,
ತಾ ತಪ್ಪಿಪ್ಪ ಭಕ್ತನ ಒಪ್ಪಕ್ಕೆ ನಮೋ ನಮೋ,
ನಿಃಕಳಂಕ ಮಲ್ಲಿಕಾರ್ಜುನಾ. || ೮೦೪ ||

**೨೨೨೪**

ಹೆಣ್ಣು ಹೊರಗಣದೆಂದು, ಹೊನ್ನು ಹೊರಗಣದೆಂದು,
ಮಣ್ಣು ಹೊರಗಣದೆಂದು ಸುಬೋಧೆಯ ಇದಿರಿಗೆ ಹೇಳಿ,
ದುರ್ಬೋಧೆಯಲ್ಲಿ ತಾವು ನಡೆವುತ್ತಿಹ ದುರ್ಗುಣಗಳ ಕಂಡು,
ನಾಚಿಕೆಯಾಯಿತ್ತು, ನಿಃಕಳಂಕ ಮಲ್ಲಿಕಾರ್ಜುನಾ. || ೮೦೫ ||

**೨೨೨೫**

ಹೇಗೆಂದಡೆ ಹಾಗಿರದಿದ್ದಡೆ
ಅವಳು ಸತಿಯಲ್ಲ, ನಾ ಪತಿಯಲ್ಲ.
ಆವ ಠಾವಿನಲ್ಲಿ ಎನಗೆ ಸತಿಸಂಗ?
ಆವ ಠಾವಿನಲ್ಲಿ ಲಜ್ಜೆ ನಾಚಿಕೆ?

ಕೇಣಸರ ಅಪಮಾನವಿಲ್ಲದಿರಬೇಕು.
ಅದು ಎನ್ನ ಭಕ್ತಿಯ ಮುಕ್ತಿಯ ಬೆಳೆ.
ಸತಿಪತಿ ಇಬ್ಬರೂ ಏಕವಾದಲ್ಲಿ
ನಿಃಕಳಂಕ ಮಲ್ಲಿಕಾರ್ಜುನ ಹೆಡಗುರಡಿಗೊಳಗಾಹನು. || ೪೦೬ ||

೨೨೨೬

ಹೇಮದ ಬಣ್ಣ ರಸವು ಅಗ್ನಿಯ ಸಂಗದಿಂದ
ರಸವೊಸರಿ ಸಂಗ ಪರಿಪೂರ್ಣವಾದಲ್ಲಿ,
ರಸವೋ? ಬಣ್ಣವೋ? ಘಟವೋ?
ಎರಕವಿಲ್ಲದೆ ಘಟ್ಟಿಯಾದಂತೆ ಅಂಗವು, ಲಕ್ಷಿಸಿಪ್ಪ ಲಿಂಗವು,
ಲಕ್ಷಿಸುತಿಪ್ಪ ಚಿತ್ತವು, ಹೆಪ್ಪುಗೊಂಡಂತೆ
ಈ ಗುಣ ಲಿಂಗಾಂಗಿಯ ಶುಭಸೂಚನೆ,
ನಿಃಕಳಂಕ ಮಲ್ಲಿಕಾರ್ಜುನ ಲಿಂಗವನೊಡಗೂಡಿದವನಂಗ. || ೪೦೭ ||

೨೨೨೭

ಹೇಮ ಹಲವಂಗದಲ್ಲಿ ಹುಟ್ಟಿ ಬೆಳೆಯಿತ್ತೆ?
ಮಾಟದಿಂದ ಹಲವು ರೂಪಾಯಿತ್ತು.
ಅದು ನಟಿಸಿದ ಮತ್ತೆ ಏಕ ರೂಪೆಂದೆ.
ಅವರಂಗದ ತೆರ ಆತ್ಮ, ನಿಃಕಳಂಕ ಮಲ್ಲಿಕಾರ್ಜುನಾ. || ೪೦೮ ||

೨೨೨೮

ಹೇರಂಡದ ಬಿತ್ತ ತುಳಿದು, ವಾರಿಯ ಕಲಸಿ ಬೇಯಿಸಿದಲ್ಲಿ,
ವಾರಿ ಬೇರೆ, ತಾ ಬೇರಾದ ಭೇದವ ಬಲ್ಲಡೆ, ಇಷ್ಟಲಿಂಗಸಂಬಂಧಿ.
ಹುಡಿಯ ಕೂಡಿದ ನೀರು ಕದಡಿ ಏಕವಾದಲ್ಲಿ,
ಹುಡಿಯುನಡಗಿಸಿ, ನೀರ ನಿರ್ಮಲವ ಮಾಡಬಲ್ಲಡೆ, ಭಾವಲಿಂಗಸಂಬಂಧಿ.
ರುಚಿ ನೀರಿನಲ್ಲಿ ಕರಗಿ ತನ್ನಯ ಅಂಗ ಕುರುಹಳಿದಲ್ಲಿ,
ಆ ತೆರನನರಿದಲ್ಲಿ ಪ್ರಾಣಲಿಂಗಸಂಬಂಧಿ.
ಆ ಸಂಬಂಧವ ಸಂಬಂಧಿಸಿದಲ್ಲಿ ಉಭಯದ ಸೆರಗು
ಕಲೆದೋರದೆ ನಿಂದುದು. ಐಕ್ಯಾನುಭಾವ.
ಅದು ಮಹಾಶರಣನ ಐಕ್ಯ, ನಿಃಕಳಂಕ ಮಲ್ಲಿಕಾರ್ಜುನಾ. || ೪೦೯ ||

೨೨೨೯

ಹೇಳುವಡೆ ನಾನಾಗಿ, ಕೇಳುವಡೆ ನೀನಾಗಿ.
ಈ ಉಭಯದ ಸಾಲುಮೂಲೆಯಲ್ಲಿ ಬಿದ್ದು,

ಜೋಳವಾಳಿಗೆ ಒಲ್ಲೆಸಿದ ಕಾಳುಬಂಟನಂತಾದೆ,
ನಿಃಕಳಂಕ ಮಲ್ಲಿಕಾರ್ಜುನಾ. || ೮೧೦ ||

೨೨೩೦

ಹೊಟ್ಟೆಯ ಕಕ್ಕುಲತೆಗಾಗಿ,
ಭಕ್ತರ ಮನೆಯ ಹೊಕ್ಕು ಸೇವೆಯ ಮಾಡುವ
ಮಿಟ್ಟೆಯಭಂಡರಿಗೆಲ್ಲಿಯದೊ ನೆಟ್ಟನೆ ದೇವತ್ವ?
ಈ ಕಷ್ಟ ಜೀವನ ನೆಟ್ಟನೆ ಕಂಡಡೆ, ಬಟ್ಟೆಯ ಬಿಡಬೇಕು,
ನಿಃಕಳಂಕ ಮಲ್ಲಿಕಾರ್ಜುನಾ. || ೮೧೧ ||

೨೨೩೧

ಹೊಯ್ದ ಭೇರಿಯ ನಾದ ಸಾಗಿತ್ತು ಎಲ್ಲಿಗೆ?
ಅದನಾರು ಬಲ್ಲರು ವೇಧಿಸಿದ ಠಾವ?
ಗುಡುಗಿನೊಳಗಣ ಗುಲುಗಡಗಿದ ಭೇದವ?
ಅದು ಪೊಡವಿಯೊಳಗೋ, ಅಂಬರದಂಗವೋ? ಅದರ ಸಂಗವನಾರು ಬಲ್ಲರು?
ಹೊಯ್ದ ಭೇರಿಯ ಕಾಣಬಹುದಲ್ಲದೆ,
ನಾದವಡಗಿದ ಠಾವ ಭೇದಿಸಬಹುದೆ ಅಯ್ಯಾ?
ಆ ಶರಣರಿರವು ನಾದಭೇದದಂತೆ, ಗುಡುಗು ಗರ್ಜನೆಯಲ್ಲಿ ಅಡಗಿದಂತೆ,
ಇದನೊಡಗೂಡಬಲ್ಲಡೆ ಲಿಂಗೈಕ್ಯವು, ನಿಃಕಳಂಕ ಮಲ್ಲಿಕಾರ್ಜುನಾ. || ೮೧೨||

೨೨೩೨

ಹೊರಗಣ ಮಾತ ಹೇಳಿ, ಒಳಗು ಶುದ್ಧವನರಿಯದೆ,
ಕೂಷ್ಮಾಂಡ ಕೊಳೆತಂತೆ ಬಯಲ ಬಹಿರೂಪವಂ ತೊಟ್ಟು,
ಹಿರಿಯರು, ವಿರಕ್ತರೆಂದು ಹೆಣ್ಣು ಹೊನ್ನು ಮಣ್ಣಿಗಾಗಿ
ಜಗದ ಹುದುವಿನ ಒಡವೆಗೆ ಹೊಡೆದಾಡಲೇಕೆ,
ನಿಃಕಳಂಕ ಮಲ್ಲಿಕಾರ್ಜುನಾ ? || ೮೧೩ ||

೨೨೩೩

ಹೊಲಕ್ಕೆ ಹೋಗುತಿರ್ಪವನ ಕಂಡು, ಊರೆಲ್ಲರು ನೆರೆದು,
ಬೇಡ ಬದುಕೆಂದಡೆ ಆರೆನೆಂದ.
ಅದೇತಕ್ಕೆ ಆಕೆಯ ದೂರೆಂದಡೆ ಅವ ಬಾತಿಗೇಡಿ.
ಅವಳ ತಾಯ ಕೊಟ್ಟಡೆ ಇರ್ಪೆನೆಂದು ಕೂಡಿಕೊಂಡ.
ಅಜಾತರೊಂದಿಗೆ ಹೇಳೆ, ನೀತಿ ಲೇಸಾಯಿತ್ತು ಅತ್ತೆ ಅಳಿಯಂಗೆ.
ಅತ್ತೆ ಅಳಿಯನ ಒಲ್ಲೆನೆಂದು ಹೊತ್ತುಹೋರುತ್ತಿರಲಾಗಿ,

ಅಳಿಯ ಅತ್ತೆಯ ಹಿಡಿದು ಅಳಿದನುಟ್ಟ ಸೀರೆಯ.
ಮೊತ್ತದ ಭಗವ ಕಂಡು ಒತ್ತಿಹಿಡಿಯಲಾಗಿ,
ಸತ್ತಳು ಅತ್ತೆ ಅಳಿಯನ ಕೈಯಲ್ಲಿ.
ಅತ್ತೆಯ ಕಾಲುದೆಸೆಯಲ್ಲಿ ಕುಳಿತು, ಎತ್ತಿ ನೋಡಲಾಗಿ,
ನಿಶ್ಚಯವಾಯಿತ್ತು ಅತ್ತೆಯ ಭಗ.
ಹುಟ್ಟಿದರು ಮೂವರಲ್ಲಿ, ಕೆಲದಲ್ಲಿ ಇಬ್ಬರು, ನಡುವೆ ಒಬ್ಬನಾಗಿ.
ಇಬ್ಬರ ಬಿಟ್ಟು, ಒಬ್ಬನ ಹಿಡಿದು ಅಬ್ಬರಿಸಲಾಗಿ,
ಅವನೆದ್ದು ಬೊಬ್ಬೆಯ ಹೊಯ್ದು.
ಹೊಯ್ದು ಹೊಯ್ಲಗಳಿನಲ್ಲಿ ಅತ್ತೆಯ ತಂದ ಅಳಿಯ, ನಾಮನಷ್ಟವಾದ.
ಇಂತಿದನೆತ್ತಲೆಂದರಿಯೆ, ನಿಃಕಳಂಕ ಮಲ್ಲಿಕಾರ್ಜುನಾ. || ೮೧೪ ||

೨೨೩೪

ಹೊಲದವರೆಯ ನಡೆದು ಸೊಡಗೆಯ ಸುಲಿದಲ್ಲಿ,
ತಳಿಲು ಬಲಿದು ಒಡೆದುದಿಲ್ಲ.
ಬಿತ್ತವಟ್ಟಕ್ಕೆ ಮೊದಲೆ ಕೂಳೆಹೋಯಿತ್ತು.
ಹೊಲದವನಿಗೆ ಒಮ್ಮನವಾದುದಿಲ್ಲ.
ಇಮ್ಮನ ಸೊಡಗೆಯ ಮೆದ್ದು,
ಕರ್ಮಕ್ಕೀಡಾದವರ ನುಡಿಯೆಂದಡೆ,
ಎನ್ನ ಹಮ್ಮಿಗನೆಂಬರು.
ಅವರಿಗೆ ಹಾಕಿದ ಗಾಣ ಸಾಕು, ನಿಲ್ಲು,
ನಿಃಕಳಂಕ ಮಲ್ಲಿಕಾರ್ಜುನಾ. || ೮೧೫ ||

೨೨೩೫

ಹೊಲನ ಗೆಯ್ದು ಮನೆಗೆ ಬರಲಾಗಿ,
ನಿಲಿಕಿ ನೋಡಿ ಕಂಡೆನು. ಮನೆಯೊಡತಿಯ.
ಎನ್ನ ಕಂಡು ಹಿಡಿದಿರ್ದೊನಕೆಯ ಮಡಗಿ,
ಅಡಬೇಕೆಂದು ಹೋಗಿ, ಅಡುವ ಗಡಿಗೆಯ ಕಾಣದೆ,
ತಡವಡಿಸಿ ನೋಡುತ್ತಿರ್ದಳಯ್ಯಾ, ಎನ್ನ ಕಂಡು ಕಡುಗಲಿಗಂಜಿ.
ಒರಳೊಳಗೆ ಅಕ್ಕಿಯಿಲ್ಲ, ಮಾಡುವುದಕ್ಕೆ ಮೊರನಿಲ್ಲ, ತೊಳೆವುದಕ್ಕೆ ನೀರಿಲ್ಲ.
ಇಂತಿವಳ ಮನೆವಾರ್ತೆಯ ಕಂಡು. ಒಗೆತನಗೆಟ್ಟು, ಬದುಕ ಬೇಡಾ ಎಂದೆ.
ನಿಃಕಳಂಕ ಮಲ್ಲಿಕಾರ್ಜುನಾ. || ೮೧೬ ||

೨೨೩೬

ಹೊಲ ಬೆಳೆದಲ್ಲಿ ಹುಲ್ಲೆಗಳು ಇರಗುಡವು.
ಹುಲ್ಲೆಯ ಹೊಡೆಯಬಾರದು, ಹೊಲನ ಮೇಯಬಾರದು.
ಬಿಟ್ಟಡೆ ವರ್ತನಕ್ಕೆ ಭಂಗ, ಹಿಡಿದಡೆ ಜ್ಞಾನಕ್ಕೆ ಭಂಗ.
ಇಂತೀ ಸಮಯವ ಜ್ಞಾನದಲ್ಲಿ ತಿಳಿಯಬೇಕಯ್ಯಾ.
ಹಾವು ಸಾಯದೆ, ಕೋಲು ಮುರಿಯದೆ,
ಹಾವು ಹೋಹ ಪರಿ ಇನ್ನೆಂತಯ್ಯಾ!
ಅದು ಗಾರುಡಂಗಲ್ಲದೆ ಗಾವಿಲ[ಗಂಜದು].
ಆ ತೆರ ಸ್ವಯಾನುಭಾವಿಗಲ್ಲದೆ ಶ್ವಾನಜ್ಞಾನಿಗುಂಟೆ?
ಮುಚ್ಚಿದಲ್ಲಿ ಅರಿದು, ತೆರೆದಲ್ಲಿ ಮರೆದು,
ಇಂತೀ ಉಭಯದಲ್ಲಿ ಕುಕ್ಕುಳಗುದಿವವರಿಗುಂಟೆ,
ನಿಃಕಳಂಕ ಮಲ್ಲಿಕಾರ್ಜುನನ ಸುಚಿತ್ತದ ಸುಖ? || ೮೧೭ ||

೨೨೩೭

ಹೊಲೆಯ ಕುಲಜನಾದುದ ಕಂಡೆ,
ಗುರು ಶಿಷ್ಯಂಗೆ ಶಿಷ್ಯನಾದುದ ಕಂಡೆ.
ಪೂಜಿಸುವ ತಮ್ಮಡಿ ಲಿಂಗವಾದುದ ಕಂಡೆ.
ಅರಸು ಬಂಟನ ಕೆಳಗೆ ಹರಿದಾಡುವುದ ಕಂಡೆ.
ಗಂಡನ ಮುಂದೆ ಹೆಂಡತಿ ಮತ್ತೊಬ್ಬನ ಸಂಗ ಮಾಡುವುದ ಕಂಡೆ.
ಇಂತಿವೆಲ್ಲವನೂ ನಿಂದು ನೋಡುತ್ತಿರಲಾಗಿ,
ನೀರು ಬೆಂಕಿಯ ಸುಟ್ಟು, ಮರದೊಳಗಡಗಿತ್ತು.
ಆ ಮರದ ತೆಪ್ಪದಲ್ಲಿ ಈ ಧರೆಯರು ಹೋಗಿ,
ಆಚೆಯ ಧರೆಯ ಬೆವಹಾರವ ತಂದು,
ಮತ್ತೆ ಈಚೆಯಲ್ಲಿ ಕಡನ ಕೊಡಲಾಗಿ,
ಕೊಂಡವ ಸತ್ತ, ಕೊಟ್ಟವ ಕೆಟ್ಟ.
ಆ ಭಂಡ ಎಲ್ಲಿ ಹೋಯಿತ್ತೆಂದರಿಯೆ.
ಆ ಬೆಂಬಳಿಯ ಬಲ್ಲಡೆ, ಐಕ್ಯಾನುಭಾವಿ,
ನಿಃಕಳಂಕ ಮಲ್ಲಿಕಾರ್ಜುನಾ. || ೮೧೮ ||

೨೨೩೮

ಹೊಳೆಯ ಸುಳಿಯಲ್ಲಿ ಸಿಕ್ಕಿದ ಹುಲ್ಲು,
ಬಳಸುವದಲ್ಲದೆ ಅಳಿವುದಿಲ್ಲ, ಮುಳುಗುವುದಿಲ್ಲ.
ಭವಸಾಗರದಲ್ಲಿ ಸಿಕ್ಕಿದ ಚಿತ್ತು, ತೆರಪಿಂಗೊಡಲಿಲ್ಲ.

ಜಲ ಪಾಷಾಣದಂತೆ, ನೆಲೆ ಬಿಂಬದಂತೆ,
ಈ ಸುಲಲಿತ ಬಲುಗೈಯರಿಲ್ಲದ ಲಿಂಗೈಕ್ಯವು,
ನಿಃಕಳಂಕ ಮಲ್ಲಿಕಾರ್ಜುನಾ. ॥ ೮೧೯ ॥

**೨೨೩೯**

ಹೋಟಾರದಲ್ಲಿ ಒಂದು ವೇತಾಳ ಹುಟ್ಟಿತ್ತು.
ವೇತಾಳನ ಚಿತ್ತದಲ್ಲಿ ಶಿಶು ಬೆಸಲಾಗಿ, ಮಾಣಿಕ್ಯವ ಕಂಡಿತ್ತು.
ಆ ಮಾಣಿಕ್ಯದ ಬೆಳಗಿನಲ್ಲಿ ಹೋಟಾರದ ಕತ್ತಲೆ ಕೆಟ್ಟು,
ವೇತಾಳನ ಚಿತ್ತದ ಕತ್ತಲೆ ಹರಿದು,
ಶಿಶುವಿನ ಕೈಯ ರತ್ನ ಮೂರುದೆಸೆಯ ನುಂಗಿತ್ತು,
ನಿಃಕಳಂಕ ಮಲ್ಲಿಕಾರ್ಜುನನ ಸಂಗ ಸುಖದಿಂದ. ॥ ೮೨೦ ॥

■ ■

# ಅನುಬಂಧ

# ಕಠಿಣಪದಕೋಶ

ಅ

ಅಂಕ-ಯುದ್ಧ, ಕುರುಹು

ಅಂಗ-ದೇಹ

ಅಂಗಜ-ಕಾಮ

ಅಂಗುಷ್ಠ-ಹೆಬ್ಬೆರಳು

ಅಂತುಕ-ಸಂದೇಹ

ಅಂಡ-ಬ್ರಹ್ಮಾಂಡ

ಅಂಡಿಸು-ದಂಡಿಸು

ಅಂದಳ-ಪಲ್ಲಕ್ಕಿ

ಅಂಧಕ-ಕುರುಡ

ಅಂಬರ-ಆಕಾಶ

ಅಂಬಸಿ-ನೀರು ?

ಅಂಬು-ಬಾಣ, ನೀರು

ಅಂಬುಗಂಡಿ-ಬಂದೂಕು, ಬಾಣಗಳಿಂದ ಹೊಡೆಯುವುದಕ್ಕಾಗಿ ಕೋಟೆಯ ಗೋಡೆಯಲ್ಲಿ ಮಾಡಿದ ತೂತು

ಅಂಬುಜ-ಕಮಲ

ಅಗ್ಘಣಿ-ಲಿಂಗೋದಕ, ಪವಿತ್ರವಾದ ನೀರು

ಅಗಡುತನ-ತುಂಟತನ, ಕ್ರೂರತನ

ಅಗಮ್ಯ-ನಿಲುಕದ

ಅಗ್ರ-ತುದಿ, ಹಿರಿಯ

ಅಗಳು-ಕೋಟೆಯ ಸುತ್ತಲಿನ ಕಂದಕ

ಅಗ್ನಿಸ್ತಂಭನ-ಬೆಂಕಿ ಸುಡದಂತೆ ಮಾಡುವ ವಿದ್ಯೆ

ಅಗುಸೆ-ಊರ ಹೆಬ್ಬಾಗಿಲು

ಅಘ-ಪಾಪ

ಅಚ್ಚುಗ-ಸ್ನೇಹ, ಆಶ್ಚರ್ಯ, ಕಳವಳ

ಅಚ್ಚಿ-ಕಣ್ಣು

ಅಚ್ಚಿಗ-ದುಃಖ, ಸಂಕಟ

ಅಜ-ಹೋತು, ಆಡು

ಅಟಮಟ-ಮೋಸ, ಕಪಟ

ಅಟ್ಟಾಟಿಕೆ-ಬಡಿವಾರ, ಜಂಭ

ಅಟ್ಟೆ-ಮುಂಡ, ದೇಹ

ಅಡಗು-ಮಾಂಸ

ಅಡಹು-ಸಾಲಕ್ಕೆ ಬದಲು ಒತ್ತೆಯಾಗಿಟ್ಟ ಒಡವೆ

ಅಡಿಗ-ಸೇವಕ, ಕೀಳುಮನುಷ್ಯ

ಅಡಿಗರಟ-ತೆಂಗಿನ ಸಣ್ಣಚಿಪ್ಪು ?

ಅಡಿವಚ್ಚೆ-ಹೆಜ್ಜೆಯ ಗುರುತು

ಅಣಲು-ದವಡೆ

ಅಣೋರಣೀಯಾನ್- ಅಣುವಿಗಿಂತ ಅಣುವಾದವನು

ಅತ್ಯತಿಷ್ಠದ್ದಶಾಂಗುಲ-ಜಗತ್ತನ್ನು ತುಂಬಿ ಹತ್ತು ಅಂಗುಲ ಮೇಲಿದ್ದವ

ಅತಃಪರ-ಆಮೇಲೆ, ತರುವಾಯ

ಅತಿಗಳೆ-ತ್ಯಜಿಸು, ಬಿಡು

ಅದ್ದಲಿಸು-ಬೆದರಿಸು, ಅಲ್ಲಾಡು

ಅದ್ರಿ-ಬೆಟ್ಟ

ಅಧರ-ತುಟಿ

ಅಧೋಮುಖ-ಕೆಳಮುಖ

ಅನವರತ-ಯಾವಾಗಲೂ, ಸತತ

ಅನಾಗತ-ತಿಳಿಯದ, ಬಾರದ

ಅನಿರ್ವಾಚ್ಯ-ಮಾತಿಗೆ ಮೀರಿದ

ಅನುಶ್ರುತ-ಸಂಪ್ರದಾಯದಿಂದ ಬಂದ ಆಚರಣೆ

ಅನೃತ-ಹುಸಿ,.ಸುಳ್ಳು

ಅಪರ-ಅನಂತರ ಹುಟ್ಟಿದ ಸೃಷ್ಟಿ, ಪಶ್ಚಿಮ ದಿಕ್ಕು, ಅತ್ಯುತ್ತಮ

ಅಪ್ಪು-ನೀರು

ಅಪೇಯ-ಅಹಿತಕರ, ಕುಡಿಯಲಾರದ

ಅಭಂಗ-ಸೋಲಿಲ್ಲದ, ಮುರಿಯದ

ಅಭಿಸಂಧಿ-ಸೇರಿಕೆ, ಮೇಳ
ಅಮಳಕ-ನೆಲ್ಲಿಕಾಯಿ
ಅಮಳೋಕ್ಯ-ಬಾಯಿ, ಕೊರಳು, ಗಂಟಲು
ಅಮ್ಮಿಕಲ್ಲು-ಅಣಿಕಲ್ಲು
ಅಮ್ಮು-ಸಮರ್ಥವಾಗು
ಅಮೇಧ್ಯ-ಹೊಲಸು, ಮಲ
ಅಯಃಕಾಂತ-ಸೂಜಿಗಲ್ಲು
ಅರ್ಕ-ಸೂರ್ಯ, ಎಕ್ಕೆಯಗಿಡ
ಅರ್ಘ್ಯಪಾದ್ಯ-ಅತಿಥಿಗಳ ಪಾದ ತೊಳೆದು ಸತ್ಕರಿಸುವುದು
ಅರ್ಣವ-ಸಮುದ್ರ
ಅರತ-ಇಲ್ಲದಾದ, ಒಣಗಿದ
ಅರ್ತಿ-ಪ್ರೀತಿ
ಅರ್ತಿಕಾರ-ಬೇಡುವವ
ಅರಳೆಲೆ-ಅರಳೆಲೆ ಆಕಾರದ (ಚಿಕ್ಕಮಕ್ಕಳ) ಒಡವೆ
ಅರಿ-ಕತ್ತರಿಸು
ಅರಿಗುರಿ-ಅಜ್ಞಾನಿ
ಅರಿಬಿರುದು-ದೊಡ್ಡಬಿರುದು
ಅರು-ಹಿಂಗು, ಅಡಗು
ಅರುಣ-ಸೂರ್ಯ
ಅರೆಯ ಆಲಯ-ಕಲ್ಲುಗುಡಿ
ಅರೋಚಕ-ಓಕರಿಕೆ, ರುಚಿಯಿಲ್ಲದಿರುವಿಕೆ
ಅಲಗು-ಖಡ್ಗ, ಕತ್ತಿ
ಅಲಸಿಕೆ-ದಣಿವು, ಆಲಸ್ಯ
ಅಲೀಯ-ಲೀನವಾಗದ
ಅಲೇಖ-ಬರೆಯದ ಓಲೆಯಗರಿ
ಅವಗವಿಸು-ಹೊಂದು, ತಿಳಿ, ಉಂಟಾಗು
ಅವಗ್ರಹಿಸು-ಹಿಡಿದುಕೊಳ್ಳು, ಮುತ್ತು
ಅವಧರಿಸು-ಮನಸ್ಸಿಟ್ಟು ಕೇಳು
ಅವಧಾನ-ಎಚ್ಚರ
ಅಶನ-ಆಹಾರ, ಅನ್ನ
ಅಶ್ವ-ಕುದುರೆ
ಅಶ್ರು-ಕಣ್ಣೀರು
ಅಷ್ಟಾಶೀತಿ-ಎಂಬತ್ತೆಂಟು
ಅಷ್ಟಾಷಷ್ಠಿ-ಅರುವತ್ತೆಂಟು
ಅಸಮಾಕ್ಷ-ಶಿವ
ಅಸಿ-ಖಡ್ಗ
ಅಸಿಘಾತಕ-ದ್ರೋಹಿ, ವಂಚಕ
ಅಸ್ಥಿ-ಎಲುಬು
ಅಹಿ-ಹಾವು
ಅಹೆನ್-ಇದ್ದೇನೆ
ಅಳಕ-ಮುಂಗುರುಳು
ಅಳರು-ಭಯ, ಸಂಕಟ, ಚದುರು
ಅಳಲು-ದುಃಖ
ಅಳುವು-ಸಾಮರ್ಥ್ಯ
ಅಳಿ-ಭ್ರಮರ
ಅಳುಪು-ಆಸೆಪಡು

ಆ

ಆಗುಚೇಗೆ-ಲಾಭ ನಷ್ಟ, ಸುಖ ದುಃಖ
ಆಚಮನ-ಅಂಗೈಯಲ್ಲಿ ನೀರನ್ನು ಹಾಕಿಕೊಂಡು ಮಂತ್ರಪೂರ್ವಕ ಕುಡಿಯುವುದು
ಆಜ್ಯ-ತುಪ್ಪ
ಆಪಾದ ಮಸ್ತಕ-ಕಾಲಿನಿಂದ ತಲೆಯ ವರೆಗೆ
ಆಪ್ಯಾಯನ-ತೃಪ್ತಿ, ಆನಂದ
ಆಪೋಶನ-ಕೈಯಿಂದ ನೀರನ್ನು ಮುಕ್ಕಳಿಸುವುದು
ಆಯತ-ಉಳ್ಳ
ಆರಜ-ಸಂಕೋಚ
ಆರಡಿ-ಭ್ರಮರ
ಆರಡಿಗೊಳ್ಳು-ತೊಂದರೆಪಡು

ಆರಂಬ-ಒಕ್ಕಲುತನ, ವ್ಯವಸಾಯ
ಆರವೆ-ತೋಟ, ಉದ್ಯಾನ
ಆರೂಢ-ಸಿದ್ಧಿ ಹೊಂದಿದವ, ಜ್ಞಾನಿ
ಆರೋಗಿಸು-ಊಟಮಾಡು
ಆಲಿಕಲ್ಲು-ಆಣೆಕಲ್ಲು
ಆಲಿ-ಕಣ್ಣಿನ ಗುಡ್ಡೆ
ಆಲೆಯ ಮನೆ-ಕಬ್ಬಿನ ಗಾಣದ ಮನೆ
ಆವರ್ಜಿಸು-ಪಡೆ, ಗಳಿಸು
ಆವು-ಆಕಳು
ಆಶೆಕ-ಆಸೆಬುರುಕ
ಆಳ್ವರಿ-ಕೋಟೆಯ ಗೋಡೆ
ಆಳಾಪ-ಮಾತು
ಆಳಿಗೊಳ್ಳು-ಹಿಂಸೆಗೆ ಗುರಿಯಾಗು

ಇ

ಇಂಬು-ಸ್ಥಳ
ಇಕ್ಷುದಂಡ-ಕಬ್ಬು
ಇಕ್ಕೆ-ವಾಸಸ್ಥಳ
ಇಕ್ಕೆಲ-ಎರಡೂ ಬದಿ
ಇಟ್ಟಿ-ಈಟಿ
ಇಹ-ಇರುವ

ಈ

ಈರಿಲು-ಕೂಸಿಗೆ ತಗುಲುವ ರೋಗ
ಈರೈದು-ಹತ್ತು
ಈರೇಳು-ಹದಿನಾಲ್ಕು
ಈಷಣ-ಆಸೆ, ಮೋಹ, ಬಯಕೆ

ಉ

ಉಂಗುಷ್ಠ-ಉಂಗುಟ
ಉಂಡಿಗೆ-ಊಟ
ಉಚ್ಛಿಷ್ಟ-ಎಂಜಲು
ಉಡುಪ-ಚಂದ್ರ

ಉತ್ತಮಾಂಗ-ತಲೆ
ಉದಕ-ನೀರು
ಉದ್ಯಾಪನ-ವ್ರತ ಸಮಾಪ್ತಿ, ಧಾರ್ಮಿಕ ಸಮಾರಂಭದ ಕೊನೆ
ಉಪಚರಿಯ-ಉಪಚಾರ
ಉಪಮಿಸು-ಹೋಲಿಸು
ಉಪಾಧಿಕ-ಮೋಸಗಾರ
ಉಮ್ಮಳ-ಕಳವಳ
ಉಮ್ಮಳ ದುಮ್ಮಳ-ವ್ಯಥೆ, ಚಿಂತೆ
ಉರಗ-ಹಾವು
ಉರವಣೆ-ಆರ್ಭಟ, ಆತುರ
ಉರ್ವಿ-ಭೂಮಿ
ಉರಸ್ಥಲ-ಎದೆಯಸ್ಥಾನ

ಊ

ಊಡು-ಉಣಿಸು, ತಿನಿಸು
ಊಣೆಯ-ಕುಂದು, ದೋಷ
ಊರ್ಧ್ವಮುಖ-ಮೇಲ್ಮುಖ
ಊಳಿಗ-ಸೇವೆ, ಕೆಲಸ

ಎ

ಎಕ್ಕ-ಒಂಟಿ, ಒಂದು
ಎಕ್ಕಟಿಗ-ರಾಜನ ಗುಪ್ತದಳದವ
ಎಕ್ಕಸಕ್ಕ-ಅಸಂಬದ್ಧವಾದ ಮಾತು, ಅವ್ಯವಸ್ಥೆ
ಎಗ್ಗ-ದಡ್ಡ, ಒರಟ
ಎಚ್ಚು-ಬಾಣ ಪ್ರಯೋಗ ಮಾಡು
ಎಡೆದೆರಪು-ತೆರಪು, ಅವಕಾಶ
ಎಡೆಯಾಟ-ತಿರುಗಾಟ
ಎರಳೆ-ಜಿಂಕೆ
ಎಲವ-ಬೂರಲಗಿಡ
ಎಸಕ-ರೀತಿ
ಎಳತಟೆ-ಬಲತ್ಕಾರದಿಂದ ಸೆಳೆ
ಎಳಸು-ಬಯಸು, ಆಸೆಪಡು

ಏ

ಏಗೆಯ್-ಸಾಧ್ಯವಾಗಿಸಿಕೊಳ್ಳು

ಒ

ಒಕ್ಕುಡಿತೆ-ಒಂದು ಬೊಗಸೆ
ಒಗು-ಸುರಿ, ಚೆಲ್ಲು
ಒಚ್ಚತ-ಸಮರಸ
ಒಚ್ಚತ್ತ-ಒಂದುಸಲ
ಒಚ್ಚಿ-ಸ್ವಲ್ಪ, ತುಸು
ಒಣಗಿಲ-ಒಣಗಿದ ಆಹಾರ
ಒದವು-ಒದಗು, ಪ್ರಾಪ್ತವಾಗು
ಒಬ್ಬಳಿ-ಸಮೂಹ
ಒಬ್ಬುಳಿತೆ-ಗುಂಪುಗೂಡು
ಒಱಗು-ಮಲಗು
ಒರಲು-ಹಲಬು
ಒರೆ-ಖಡ್ಗದ ಹೊದಿಕೆ
ಒಲವರ-ಸಂತೋಷ, ಪ್ರೀತಿ
ಒಸರು-ಸುರಿ, ಜಿನುಗು
ಒಳಲೆ-ಮಕ್ಕಳಿಗೆ ಹಾಲು ಹಾಕುವ ಶಂಖ

ಓ

ಓಗರ-ಅನ್ನ, ಆಹಾರ
ಓಡು-ಹುರಿಯುವ ಹಂಚು
ಓವರಿ-ಮನೆಯ ಒಳಭಾಗ
ಓವು-ಉಪಚರಿಸು, ಪ್ರೀತಿಸು
ಓಸರಿಸು-ದೂರಸರಿ
ಓಹರಿ-ಮನೆಯ ಒಳಭಾಗ

ಔ

ಔದುಂಬರ-ಅತ್ತಿಯ ಮರ

ಕ

ಕಂಜನಾಭ-ವಿಷ್ಣು
ಕಂಥೆ-ಜೋಳಿಗೆ, ಕಪನಿ
ಕಂದುವೆಳ್ಳ-ಕಳ್ಳನಾಣ್ಯ
ಕಕ್ಷೆ-ಬಗಲು
ಕಟಕ-ಕಡಗ, ಕೋಟೆ
ಕಟ್ಟಣ-ನಿಯಮ, ಆಜ್ಞೆ
ಕಟ್ಟರಸು-ಚಕ್ರಾಧಿಪತಿ
ಕಟಿ-ಸೊಂಟ
ಕಟ್ಟುಗುತ್ತಗೆ-ಒಟ್ಟಾಗಿ ತೆಗೆದುಕೊಳ್ಳುವುದು
ಕಡ-ತಿರುಗಿಕೊಡುವುದಾಗಿ ಪಡೆದ ವಸ್ತು
ಕಡಲು-ಸಮುದ್ರ
ಕಡವರ-ಬಂಗಾರ, ಸಂಪತ್ತು
ಕಡಹು-ಹೊಳೆದಾಟುವ ಸ್ಥಳ
ಕಣಿತಿ-ಕಣಿ(ಭವಿಷ್ಯ)ಹೇಳುವವಳು
ಕಣೆ-ಬಾಣ
ಕತ್ತು-ಉರಿಹತ್ತು, ಸುಡು
ಕದಡು-ಕಲಕು, ಕಳವಳ
ಕದಪು-ಗಲ್ಲ, ಕೆನ್ನೆ
ಕದಂಬ-ಸಮೂಹ
ಕನ್ನ-ಕಳ್ಳರು ಗೋಡೆಯಲ್ಲಿ ಕೊರೆಯುವ ಕಿಂಡಿ
ಕನ್ನಗತ್ತಿ-ಗೋಡೆಯಲ್ಲಿ ಕಿಂಡಿ ಕೊರೆಯುವ ಆಯುಧ
ಕಪ್ಪಡ-ಅರಿವೆ
ಕಪಾಲ-ಶಿವನ ಭಿಕ್ಷಾಪಾತ್ರೆ(ತಲೆ ಬುರುಡೆ)
ಕಪಿಲೆ-ಆಕಳು
ಕಪೋತ-ಕಂದುಬಣ್ಣ
ಕಮಠ-ಆಮೆ
ಕರ-ಹೆಚ್ಚಾಗಿ, ಶ್ರೇಷ್ಠ
ಕರಂಡ-ಸಣ್ಣಪೆಟ್ಟಿಗೆ
ಕರಟ-ಕಾಗೆ
ಕರ್ಣ-ಕಿವಿ
ಕರತಳ-ಅಂಗೈ
ಕರ್ದಮ-ಕೆಸರು

ಕರಿ-ಆನೆ
ಕರಿಗೊಳ್ಳು-ಸಮರಸವಾಗು, ಗಟ್ಟಿಗೊಳ್ಳು
ಕರೆ-ಹಿಂಡು
ಕರೋಟಿ-ತಲೆಬುರುಡೆ, ಪಾತ್ರೆ
ಕಲ್ಲಿ-ಹಗ್ಗದಿಂದ ಮಾಡಿದ ಚೀಲ
ಕವಳೀಕರಿಸು-ಕಬಳಿಸು
ಕವೆ-ಕವಲು
ಕಳ-ರಣರಂಗ
ಕಳ್ಳವಣ-ಕಳ್ಳನಾಣ್ಯ
ಕಳಾಸ-ಬೆಸುಗೆ, ಕೀಲ
ಕಾಂಸ್ಯ-ಕಂಚು
ಕಾಕು-ಕೆಟ್ಟ, ಹೀನ
ಕಾಕೂಳು-ಕೆಟ್ಟಅನ್ನ
ಕಾಣಿ-ನಾಣ್ಯವಿಶೇಷ
ಕಾಬು-ಕಾಣು
ಕಾಯ-ದೇಹ
ಕಾರಣಿಕ-ಮಹಾಪುರುಷ
ಕಾರ್ಪಾಸ-ಹತ್ತಿ
ಕಾರಮೇಘ-ಕಪ್ಪುಮೋಡ
ಕಾರುಕ-ಶಿಲ್ಪಿ
ಕಾಷ್ಠ-ಕಟ್ಟಿಗೆ
ಕಾಷಾಂಬರ-ಕಾವಿಬಟ್ಟೆ
ಕಾಸು-ದುಡ್ಡು, ಹಣ
ಕಾಳಕೂಟ-ವಿಷ
ಕಾಳರಾತ್ರಿ-ಕಗ್ಗತ್ತಲೆ, ಮಧ್ಯರಾತ್ರಿ
ಕಾಳಾಡು-ಕುರಿ, ಆಡು
ಕಾಳಿಕೆ-ಕತ್ತಲೆ, ದೋಷ
ಕಾಳುಗುಡಿಹಿ-ದುರಾಚಾರಿ, ದುಷ್ಟ
ಕಾಳುದೈವ-ಕೀಳುದೇವರು
ಕಾಳುಬಂಟ-ಸೋತು ಹೋದವ
ಕಾಳು ಮೂಳ ದುಷ್ಟ, ನೀಚ
ಕಿಂಕರ ದಾಸ, ಸೇವಕ
ಕಿಗ್ಗೊಂಬು-ಸಣ್ಣಕೊಂಗೆ
ಕಿಸಲಯ-ಚಿಗುರು, ಕುಡಿ
ಕಿಸುಕುಳರು-ಕ್ಷುಲ್ಲಕರು
ಕೀರ-ಗಿಳಿ
ಕ್ಷೀರ-ಹಾಲು
ಕುಂಜರ -ಆನೆ
ಕುಂದಣ-ರತ್ನವನ್ನು ಚಿನ್ನದಲ್ಲಿ ಕೂಡಿಸುವಿಕೆ
ಕುಂಭ-ಕೊಡ
ಕುಂಭಿನಿ-ಭೂಮಿ
ಕುಕ್ಕುಟ-ಕೋಳಿ
ಕುಕ್ಕುರ-ನಾಯಿ
ಕುಕ್ಕುಳಗುರಿ-ಸಂಕಟಪಡು, ತಳಮಳಿಸು
ಕುಕ್ಕೆ-ಬುಟ್ಟಿ
ಕುಟಿಲ-ವಂಚನೆ, ಮೋಸ
ಕುಠಾರ-ಕೊಡಲಿ
ಕುತ್ತ-ಬೇನೆ, ರೋಗ
ಕುತ್ತು-ತಿವಿ, ಗುದ್ದು
ಕುಪ್ಪಟ್ಟಿಗೆ-ಅಗ್ಗಿಷ್ಟಿಕೆ
ಕುಪ್ಪಿಗೆ-ಕುಡಿಕೆ, ಬಟ್ಟಲು
ಕುಲಿಶ-ಸಿಡಿಲು
ಕುರುಳು-ಕೂದಲು
ಕುಹರ-ಗವಿ, ತೂತು
ಕ್ಷುತ್ತು-ಹಸಿವೆ
ಕೂನಿ-ಮಣ್ಣಿನ ಪಾತ್ರೆ
ಕೂಜನ-ಪಕ್ಷಿಗಳ ಕೂಗು
ಕೂಪ-ಪ್ರೀತಿಯವ
ಕೂರ್ತು-ಪ್ರೀತಿಯಿಂದ
ಕೂರ್ಮ-ಆಮೆ
ಕೂರ್ಮೆ-ಪ್ರೇಮ, ವಾತ್ಸಲ್ಯ
ಕೂಷ್ಮಾಂಡ-ಕುಂಬಳಕಾಯಿ
ಕೆಡೆನುಡಿ-ಕೆಟ್ಟಮಾತನಾಡು, ನಿಂದಿಸು
ಕೆಯ್-ಹೊಲ

ಕೇಣಸರ-ಮಾತ್ಸರ್ಯ, ಹೊಟ್ಟೆಕಿಚ್ಚು
ಕೈಗುಡಿತೆ-ಬೊಗಸೆ
ಕೈದು-ಖಡ್ಗ
ಕೈಯಾನು-ಕೈಯೊಡ್ಡು
ಕೈವಾರಿಸು-ಹೊಗಳು, ಸ್ತುತಿಸು
ಕೊಂಗ-ತುಳಿಸಿದ ಕಾಳು
ಕೊಠಾರ-ಉಗ್ರಾಣ, ಕಣಜ
ಕೊಡಗೂಸು-ಕನ್ಯೆ
ಕೊನರು-ಚಿಗಿ
ಕೊಲ್ಲಟಿಗ-ಡೊಂಬ
ಕೊಳಗ-ಧಾನ್ಯ ಅಳೆಯುವ ಸಾಧನ
ಕೋಟಲೆ-ತೊಂದರೆ, ದುಃಖ
ಕೋಚಿಯಾಗು-ಅಪಹಾಸ್ಯಕ್ಕೆ ಗುರಿಯಾಗು
ಕೋರೂಟ-ಹಂಚಿಕೊಂಡು ಉಣ್ಣುವ ಊಟ
ಕೋವೆ-ಲೋಹಗಳನ್ನು ಕರಗಿಸುವ ಪಾತ್ರೆ
ಕೋಳ-ಬಂಧನ, ಕೈಸೆರೆ
ಕೌಪು-ಕೌಪೀನ, ಲಂಗೋಟಿ
ಕ್ಷುತ್ತು-ಹಸಿವು

ಖ

ಖಂಡ-ಭಿನ್ನ, ಅಪೂರ್ಣ
ಖದ್ಯೋತ-ಮಿಂಚುಹುಳು
ಖರ್ಪರ-ಭಿಕ್ಷಾಪಾತ್ರೆ
ಖಲ-ಕಣ
ಖುಲ್ಲ-ನೀಚ, ದುಷ್ಟ
ಖೇಚರ-ದೇವತೆ

ಗ

ಗಂಟಿಕೆ-ಗುಂಪು
ಗಂಪಧಾರಿ-ಕೂಲಿಕಾರ
ಗಜಬಜೆ-ಗದ್ದಲ, ಗಲಿಬಲಿ
ಗಡಣ-ಸಮೂಹ
ಗಣ್ಣು-ಕಬ್ಬಿನ ಗಣಿಕೆಯ ಮೇಲಿರುವ ಗಂಟು
ಗಣೆ-ಗಳ, ಕೋಲು
ಗನ್ನ-ಮೋಸ
ಗನ್ನಘಾತಕ-ಮೋಸಗಾರ
ಗಸಣೆ-ತೊಂದರೆ, ಚಿಂತೆ
ಗಹ್ವರ-ಗವಿ
ಗಾರಾಗು-ಗಾಬರಿಯಾಗು, ನಷ್ಟವಾಗು
ಗಾರುಪಟ್ಟೆ-ತೊಂದರೆ, ಕಾಟ
ಗಾವಿಲ-ಮೂಢ, ಗ್ರಾಮೀಣ
ಗಾವುದ-ದೂರವನ್ನು ಅಳೆಯುವ ಅಳತೆ ಪ್ರಮಾಣ
ಗುಂಗುರ-ನೊರಜು
ಗುಂಭ-ಗರ್ಭ
ಗುಟಿಕೆ-ಗುಳಿಗೆ
ಗುಪ್ಪೆ-ಗುಂಪು, ರಾಶಿ
ಗುಮ್ಮ-ದೆವ್ವ
ಗುಳಿ-ತಗ್ಗು
ಗೃಹಗಾಹಿ-ನಾಯಿ
ಗೆಲ್ಲಗೂಳಿ-ವಿಜಯಿ, ಗೆದ್ದವ
ಗೊಂದಳ-ಗುಂಪು, ಹಿಂಡು
ಗೊಟ್ಟಿ-ಗೋಷ್ಠಿ, ಸಭೆ
ಗೊತ್ತು-ಗಮ್ಯಸ್ಥಾನ, ಮೂಲ, ನೆಲೆ
ಗೋಳಕ-ದುಂಡಗಾದ
ಗ್ರಾಸ-ಆಹಾರ, ತುತ್ತು

ಘ

ಘಟ-ದೇಹ
ಘಟ್ಟಿವ-ಘಟ್ಟಿಸುವ ?
ಘುಟಿಕೆ-ಗುಳಿಗೆ
ಘೃತ-ತುಪ್ಪ
ಘ್ರಾಣ-ಮೂಗು, ಮೂಸುವಿಕೆ

ಚ

ಚಂಡಕರ-ಸೂರ್ಯ
ಚಂದನ-ಶ್ರೀಗಂಧ
ಚಕ್ಷು-ಕಣ್ಣು
ಚತುಃಪಾದಿ-ಪ್ರಾಣಿ
ಚಪ್ಪರಿ-(ಬಾಯಿ)ಚಪ್ಪರಿಸು
ಚಿಕ್ಕೆರ-ಕೇರೆಯ ಹಾವು
ಚಿತ್ತಜ-ಕಾಮ
ಚಿಮ್ಮುರಿ-ತಲೆಯ ಉಡಿಗೆ ?
ಚೀರ-ಬಟ್ಟೆ
ಚೂರ್ಣ-ಪುಡಿ, ಸುಣ್ಣ
ಚೇಣ-ಉಳಿ, ಚಾಣ
ಚೊಕ್ಕೆಹ-ಚಾತುರ್ಯ, ಯುಕ್ತಿ
ಚೊಲ್ಲೆಹ-ತುರುಬು
ಚೋದ್ಯ-ಆಶ್ಚರ್ಯ
ಚೋಹ-ವೇಷ
ಚೌಘಟ-ಚತುರಂಗ ಸೇನೆಯ ಘಟ
ಚೌರಾಸಿ-ಎಂಬತ್ತುನಾಲ್ಕು
ಚೌಪಟ-ಚೌಕ

ಛ

ಛತ್ತೀಸ-ಮೂವತ್ತಾರು

ಜ

ಜಂಘೆ-ಮೊಳಕಾಲು
ಜಂಝಾಮಾರುತ-ಬಿರುಗಾಳಿ
ಜಂಬುಕ-ನರಿ
ಜಜ್ಜರಿ-ಸಡಿಲವಾಗು, ಬಿರುಕು
ಜತನ-ಜೋಪಾನ
ಜರೆ-ಮುಪ್ಪು
ಜವ-ಯಮ
ಜವನಿಕೆ-ಪರದೆ, ತೆರೆ
ಜಾಗ್ರ-ಎಚ್ಚರ
ಜಾನು-ಕಾಲಮಂಡಿ
ಜಾರ-ವ್ಯಭಿಚಾರಿ
ಜಾಡೆ-ನಿದ್ರೆ
ಜಾಳಿಸು-ಕೊಡಹು, ಬಿಡಿಸು
ಜಿಹ್ವೆ-ನಾಲಗೆ
ಜೋಳವಾಳಿ-ಒಡೆಯನ ಋಣವನ್ನು ತೀರಿಸುವವ, ವೀರಯೋಧ

ಝ

ಝಂಕಿಸು-ಗದರಿಸು, ಬೆದರಿಸು

ಟ

ಟೆಂಟಣಿಸು-ಸಿಟ್ಟಿಗೇಳು, ಎದ್ದುನಿಲ್ಲು
ಟೊಪ್ಪರ-ಟೊಪ್ಪಿಗೆ

ಠ

ಠಕ್ಕುಠವಾಳ-ಮೋಸ
ಠಕ್ಕುರ-ಮೋಸಗಾರ
ಠಾವು-ಸ್ಥಳ

ಡ

ಡಂಭಕ-ಮೋಸಗಾರ
ಡಾಗಿನ-ಕೀಳು ?
ಡಿಂಗರಿಗ-ಭಕ್ತ, ಸೇವಕ
ಡುಂಡುಕ-ಡುಂಡುಭಿ? ನೀರಹಾವು

ಢ

ಢಾಳಕ-ಧೂರ್ತ, ಢಾಂಬಿಕ

ತ

ತಂಡುಲ-ಅಕ್ಕಿ
ತಗಹು-ತೊಂದರೆ
ತಟಾಕ-ಕೆರೆ
ತಟ್ಟುಮುಟ್ಟು-ಸುಖದುಃಖಾನುಭವ
ತಡಿ-ದಂಡೆ, ತೀರ

ತತ್ತುಗೊತ್ತು-ನಿಜದ ತಿಳುವಳಿಕೆ
ತಪ್ಪಡಿ-ತಪ್ಪುಹೆಜ್ಜೆ
ತಪ್ಪಲು-ಬಯಲು
ತಮ-ಕತ್ತಲೆ
ತಮ್ಮಡಿ-ಯತಿ
ತರಗು-ಒಣಎಲೆ
ತರಣಿ-ಸೂರ್ಯ
ತರಹರಿಸು-ಸಹಿಸು, ಗೆಲ್ಲು
ತರಿ-ಕಡಿ, ಕತ್ತರಿಸು, ಸವರು
ತರು-ಗಿಡ
ತಲ್ಲಣ-ಕಳವಳ
ತಲಹು-ತಲುಪು, ಸೇರು
ತಲ್ಲೀಯವಾಗು-ಅಲ್ಲಿಯೇ ಅಡಗು
ತವರಾಜ-ಒಂದು ಬಗೆಯ ಸಕ್ಕರೆ
ತಳಿಗೆ-ಪಾತ್ರೆ
ತಳಿತ-ಚಿಗುರಿದ
ತಳ್ಳಿ-ಸ್ನೇಹ, ತಳಕು
ತಳುವು-ತಡಮಾಡು
ತಾಗು ನಿರೋಧ-ಅಡ್ಡಿ
ತಾರ-ನಾಣ್ಯವಿಶೇಷ
ತಾರಕ-ತೆಪ್ಪ
ತಾರಣ-ದೋಣಿ, ದಾಟಿಸುವಿಕೆ
ತಾರುಗದ-ಇಬ್ಬಾಗಿಲು
ತಿಂಥಿಣಿ-ಸಮೂಹ
ತಿಗುಡ-ಸಿಪ್ಪೆ, ತೊಗಟೆ
ತಿಟ್ಟ-ಜಗುಲಿ
ತಿತ್ತಿ-ತೊಗಲಿನ ಚೀಲ
ತಿಲ-ಎಳ್ಳು
ತುಡುಕು-ದುಡುಕು, ಮೈಮೇಲೆ ಬೀಳು
ತುಡುಗುಣಿ-ಮೋಸಗಾರ, ಕಳ್ಳತನದಿಂದ ತಿನ್ನುವವ
ತುರೀಯ-ತೂರ್ಯ, ಐಕ್ಯಸ್ಥಿತಿ
ತುಷ-ಹೊಟ್ಟು, ತೌಡು
ತುಷಾರ-ತುಂತುರ ಹನಿ
ತೂತಜ್ಞಾನಿ-ಅಲ್ಪಜ್ಞಾನಿ
ತೂರ್ಯ-ಪರಮಾನಂದ
ತೂಳದಬೀರ-ಯುದ್ಧವೀರ
ತೃಣ-ಹುಲ್ಲು
ತೃಷೆ-ನೀರಡಿಕೆ
ತೃಷ್ಣೆ-ಇಚ್ಛೆ, ಬಯಕೆ
ತೆತ್ತಿಗ-ಒಡೆಯ
ತ್ರ್ಯತ್ರಿಂಶತಿ-ಮೂವತ್ತುಮೂರು
ತೊಂಡಿಲ-ದಂಡೆ, ಹೂಗೊಂಚಲು
ತೊಂಡು-ತುಡುಗ, ಕಳ್ಳ
ತೊಡಪು-ಲೇಪನ
ತೊಡರು-ಸೇರು, ಕೂಡು
ತೊಡಿಗೆ-ಆಭರಣ
ತೊತ್ತು-ದಾಸಿ, ಸೇವಕ
ತೊಪ್ಪೆ-ಸಗಣಿಯ ಮುದ್ದೆ
ತೊರೆ-ನದಿ, ಹೊಳೆ
ತೋಟಿ-ಕಾಳಗ
ತೋಯ-ನೀರು
ತೋರ-ದಪ್ಪ
ತೋಹಿನ-ಮೋಸದ, ವಂಚನೆಯ
ತ್ವಕ್-ಚರ್ಮ, ತೊಗಲು
ತ್ರಿಪುಂಡ್ರ-ಹಣೆಯ ಮೇಲಿನ ವಿಭೂತಿಯ ಮೂರು ಗೆರೆಗಳು

ದ

ದಂದುಗ-ತೊಂದರೆ, ಕಷ್ಟ
ದಗ್ಧ-ಸುಟ್ಟ
ದಗ್ಧಪಟ-ಸುಟ್ಟ ಅರಿವೆ
ದಡಿ-ಕೋಲು, ಬಡಿಗೆ

ದಧಿ-ಮೊಸರು

ದಮೆ-ಸಂಯಮ

ದಷ್ಟ-ಕಚ್ಚಲ್ಪಟ್ಟ, ಕಡಿದ

ದಸಿ-ಬೆಣೆ, ಗೂಟ

ದಾತ-ದಾನಿ

ದಾಯಗಾರಿಕೆ-ಪಾಲುಗಾರಿಕೆ

ದಾಯಾದಿ-ರಕ್ತಸಂಬಂಧಿ

ದಾರವಟ್ಟ-ಬಾಗಿಲು

ದಾವಾನಲ-ಅಡವಿಯಲ್ಲಿ ಹುಟ್ಟಿದ ಬೆಂಕಿ

ದಿಂಡೆ-ಅಜ್ಞಾನಿ, ಮೂಢ

ದಿಟ-ಸತ್ಯ, ನಿಜ

ದಿಟಕರಿಸು-ನಿಜವಾಗಿಸು

ದಿನನಾಯಕ-ಸೂರ್ಯ

ದಿವ-ಹಗಲು

ದೀಪ್ತಿ-ಬೆಳಕು, ಪ್ರಕಾಶ

ದೀಹ-ಬೇಟೆಯ ಆಮಿಷಕ್ಕಾಗಿ ಬಳಸುವ ಪ್ರಾಣಿ

ದುಗ್ಧ-ಹಾಲು

ದುತ್ತೂರ -ಮದ್ದುಗುಣಿಕೆ

ದುಮ್ಮಳ-ದುಃಖ

ದುರಿತ-ಪಾಪ

ದೂಷಣೆ-ನಿಂದನೆ, ಬೈಗಳು

ದೃಷ್ಟ-ಪ್ರತ್ಯಕ್ಷ

ದೇವಾಂಗ-ರೇಷ್ಮೆಬಟ್ಟೆ, ಮಡಿ

ದೇಹಾರ-ಸ್ತೋತ್ರ, ಪೂಜೆ

ದೈತೆ-ರಾಕ್ಷಸಿ

ದೈನ್ಯ-ನಮ್ರಭಾವ

ಧ

ಧವಳ-ಬಿಳಿದಾದ, ಶುಭ್ರವಾದ

ಧವಳಾರ - ಬಿಳಿಯ ಬಣ್ಣದ ಮನೆ

ಧಾವತಿ - ಆಯಾಸ, ಶ್ರಮ

ಧೂಮ - ಹೊಗೆ

ನ

ನಷ್ಟ - ಸತ್ತ

ನಭ - ಆಕಾಶ

ನಯನ - ಕಣ್ಣು

ನರಗುರಿ - ದಡ್ಡ, ಮೂರ್ಖ

ನವನೀತ - ಬೆಣ್ಣೆ

ನಳಿನ - ಕಮಲ

ನಾಟಿರು - ನಟಿರು

ನಾಣುಗೆಡು - ನಾಚಿಕೆಗೆಡು

ನಾಭಿ - ಹೊಕ್ಕುಳು

ನಾರಿವಾಳ - ತೆಂಗಿನಕಾಯಿ

ನಾಸ್ತಿ - ಅಳಿ, ಇಲ್ಲವಾಗು

ನಿಕ್ಷೇಪ - ಇಟ್ಟ

ನಿಟಿಲಲೋಚನ -(ಹಣೆಗಣ್ಣು ಉಳ್ಳವ)ಶಿವ

ನಿಧಾನ - ಹೂಳಿಟ್ಟ ಸಂಪತ್ತು

ನಿರವಯ - ಬಯಲು

ನಿರ್ವಾಣ - ಮೋಕ್ಷ, ಶೂನ್ಯ

ನಿರ್ವಾಹ - ಐಕ್ಯ, ಇಲ್ಲದಾಗು

ನಿರಾಭಾರಿ - ಸಹಜ

ನಿರಾಲಂಬ - ಇನ್ನೊಬ್ಬರನ್ನು ಅವಲಂಬಿಸದ

ನಿರಾಳ - ಅವ್ಯಕ್ತ, ನಿರಾಕಾರ

ನಿರಿಗುರುಳು - ಉದ್ದವಾದ ಕೂದಲು

ನಿರಿಗೆ - ತೋರಿಕೆ

ನಿರ್ಯಾಣ - ನಿರ್ವಾಣ, ಮೋಕ್ಷ

ನಿರುತ - ನಿಜ

ನಿರ್ವ್ಯಾಜ - ಕಪಟವಿಲ್ಲದ, ನಿಜದ

ನಿಶಿತ - ಹರಿತವಾದ

ನಿಮಿತ - ಉಚಿತವಾದ, ಯೋಗ್ಯವಾದ

ನೀಕರಿಸು - ನಿರಾಕರಿಸು, ಧಿಕ್ಕರಿಸು

ನುಗ್ಗು - ಕ್ಷುಲ್ಲಕ ಮಾನವ

ನೇಕೆ - ಅರಿವೆಯ ತೊಟ್ಟಿಲು
ನೆಮ್ಮು - ಆಶ್ರಯಿಸು, ನಂಬು
ನೆಮ್ಮುಗೆ - ನಂಬಿಕೆ, ಆಧಾರ
ನೆರಕೆ - ತಟ್ಟಿ, ಮರೆ
ನೆಲವಟ್ಟ - ನೆಲಗಟ್ಟು
ನೇಣು - ಹಗ್ಗ
ನೇತ್ರ - ಕಣ್ಣು
ನೇತಿಗಳೆ - ಅಲ್ಲಗಳೆ, ತಿರಸ್ಕರಿಸು
ನೇಹ - ಗೆಳೆತನ, ಪ್ರೀತಿ
ನೋಂಪಿ - ವ್ರತ

ಪ

ಪಂಕ - ಕೆಸರು
ಪಂಗುಳ - ಕುಂಟ
ಪಂಚವಿಂಶತಿ - ಇಪ್ಪತ್ತೈದು
ಪಗುಡಿ - ಅಪಹಾಸ್ಯ
ಪಚ್ಚೆ- ಹಸಿರು
ಪಟ್ಟಾವಳಿ - ರೇಶಿಮೆ
ಪಟುತರ - ತೀವ್ರತರ
ಪಟುಭಟ - ಪರಾಕ್ರಮಿ, ಶೂರ
ಪಡಗ - ಉಗುಳುವ ಪಾತ್ರೆ
ಪಡಿ - ಪ್ರತಿ, ಮತ್ತೊಂದು
ಪಡಿಪುಚ್ಚ - ಪ್ರತಿಪ್ರಶ್ನೆ, ಪ್ರಶ್ನಾರ್ಹ
ಪತಿಕರಿಸು- ಸಹಾಯಮಾಡು, ದಯೆತೋರು
ಪತಿತ - ದೀನ
ಪಥ - ದಾರಿ
ಪನ್ನಗ - ಹಾವು
ಪನ್ನಗಧರ - ಶಿವ
ಪಯ - ಹಾಲು
ಪರ - ಕೈವಲ್ಯ, ಶ್ರೇಷ್ಠ, ಬ್ರಹ್ಮ
ಪರ್ಣ - ಎಲೆ
ಪರದಾರ - ಪರಸ್ತ್ರೀ
ಪರ್ವ - ಹಬ್ಬ
ಪರಸಮಯಿ - ಬೇರೆ ಧರ್ಮದವ
ಪರಾಂಗನೆ - ಮೋಕ್ಷ ಕನ್ಯೆ, ಪರಸ್ತ್ರೀ
ಪರಾತ್ಪರ - ಅತ್ಯಂತ ಶ್ರೇಷ್ಠ
ಪರಿತೋಷ - ಅತ್ಯಂತ ಆನಂದ
ಪರಿಭ್ರಮಣೆ - ಭ್ರಮೆ, ಹುಚ್ಚು
ಪರಿಭವ -ಅವಮಾನ, ತಿರಸ್ಕಾರ
ಪರಿಯಾಣ - ಅಗಲವಾದ ಮಣ್ಣಿನ ಪಾತ್ರೆ
ಪರಿಯಾಯ - ಸರದಿ, ಮತ್ತೊಂದು
ಪರಿವೇಷ್ಟಿಸು - ಸುತ್ತು
ಪರುಷರಸ- ಮುಟ್ಟಿದುದನ್ನು ಬಂಗಾರ ವನ್ನಾಗಿಸುವ ರಸ
ಪಸರ - ಅಂಗಡಿ
ಪಸಲೆ - ಹಸಿರು ಪಲ್ಯ
ಪವಣಿಸು - ಪೋಣಿಸು
ಪವನ - ಗಾಳಿ
ಪಳುಕ - ಸ್ಫಟಿಕ
ಪಾಂಸೆ - ಧೂಳ, ಪಾಪ, ಕಳಂಕ
ಪಾಕ - ಅಡಿಗೆ
ಪಾಕುಳ - ವ್ಯಾಕುಲ ?
ಪಾಣಿವಟ್ಟ - ಲಿಂಗದಪೀಠ
ಪಾತೆ - (ತೋಟದ) ಮಡಿ
ಪಾದರಿ - ಪಾಟಲವೃಕ್ಷ
ಪಾರದ್ವಾರ - ಹಾದರ, ವ್ಯಭಿಚಾರ
ಪಾವಕ - ಬೆಂಕಿ
ಪಾಶ - ಹಗ್ಗ
ಪಾಷಂಡಿ - ನಾಸ್ತಿಕ, ಶ್ರದ್ಧೆಯಿಲ್ಲದವ
ಪಾಷಾಣ - ಕಲ್ಲು
ಪಾಳಿಸು - ತೋಡು, ಕೆದರು
ಪಿಪೀಲಿಕ - ಇರುವೆ
ಪಿಸುಣ -ಚಾಡಿ

ಪಿಶಿತ -ಮಾಂಸ, ಹುಚ್ಚು
ಪುಂಗವ - ಶ್ರೇಷ್ಠ
ಪುತ್ಥಳಿ - ಗೊಂಬೆ
ಪೂಷನ್ - ಸೂರ್ಯ
ಪೂಸರ - ಹೂವಿನಮಾಲೆ
ಪೃಥಕ್ - ಬೇರೆ
ಪ್ರಭಾಕರ - ಸೂರ್ಯ
ಪ್ರವರ್ತನ - ತೊಡಗುವಿಕೆ
ಪ್ರಸೂತ - ಹುಟ್ಟಿದ

ಫ

ಫಣಿ - ಹಾವು

ಬ

ಬಕಧ್ಯಾನ - ಸೋಗಿನಧ್ಯಾನ
ಬಗದಳ - ಹುಣ್ಣು
ಬಚ್ಚಣೆ - ಮುಖವಾಡ
ಬಚ್ಚಿಗುತ್ತ - ಗುಪ್ತ ಪಾಪಾಚರಣೆ,
ಬಟ್ಟೆ - ದಾರಿ
ಬಡಿಹೋರಿ - ಉನ್ಮತ್ತ ?
ಬಣಬೆ - ಗುಂಪು, ರಾಶಿ
ಬತ್ತೀಸ - ಮೂವತ್ತೆರಡು
ಬದ್ಧಕತನ - ಬಂಧನ
ಬದರಿ - ಬಾರಿಯಗಿಡ
ಬಧಿರ - ಕಿವುಡ
ಬರಡು - ಬಂಜೆ
ಬರಿಕೆಯ್ಯು - ಖಾಲಿಮಾಡು
ಬರಿದಾಯ - ಪ್ರಯೋಜನವಿಲ್ಲದ
ಬರುಕಟೆ - ವ್ಯರ್ಥ
ಬರುದೊರೆ - ಬತ್ತಿದ ಹೊಳೆಯಂತೆ ವ್ಯರ್ಥವಾದ
ಬರುಬು - ಹೆಸರು, ಬ್ರಾಹ್ಮಣನ್ನ

ಬರುಸೂರೆ - ವ್ಯರ್ಥ
ಬರುಹಿ - ನವಿಲು
ಬಲ್ಲಂದಟ್ಟು - ದೊಡ್ಡಪೆಟ್ಟು
ಬಸವಳಿ - ಶಕ್ತಿಗುಂದು
ಬಸುರು - ಹೊಟ್ಟೆ
ಬಾತೆ - ವ್ಯರ್ಥವಾದ ಮಾತು
ಬಾದಳ - ಸಣ್ಣಕಿಂಡಿ
ಬಾಯಿಧಾರೆ - ಮೊನೆ
ಬಾರಿಕ - ತಳವಾರ
ಬಾಲರಾಳಿ - ಬಾಲಕರ ಆಟ
ಬಾವನ್ನ - ಶ್ರೀಗಂಧ
ಬಿಂಗ - ಮಿಂಚುವ ವಸ್ತು
ಬಿಂಜಣ - ಬಿಜ್ಜಲ, ದೊಡ್ಡಬಾಣ
ಬಿಜಯಂಗೆಯ್ಯು - ಆಗಮಿಸು, ಹೋಗು
ಬಿಡು - ಕೆದರಿದ, ಹರಡಿದ
ಬಿತ್ತವಟ್ಟ - ಬಿತ್ತಿದ ಭೂಮಿ
ಬಿತ್ತು - ಬೀಜ.
ಬಿನ್ನಾಣ - ಸರಿಯಾದ ವಿಧಾನ
ಬಿನುಗು - ಕೀಳು, ಕನಿಷ್ಠ
ಬಿರುಬು - ಬಲವಂತಿಕೆ
ಬಿಲ - ತೂತು
ಬೀಯಗ - ಬೀಗ, ಕನಿಷ್ಠ
ಬೀಸರ - ಕೇಡು, ನಾಶ
ಬುದ್ದಲಿ - ಚರ್ಮದ ಚೀಲ
ಬೆಂಬಳಿ - ಅನುಸರಿಸುವಿಕೆ
ಬೆಂಬೆಯ ಹಂಬು - ಉಡಿದಾರ ?
ಬೆಗಡು - ಆಶ್ಚರ್ಯ
ಬೆಚ್ಚಂತೆ - ಬೆಸೆದಂತೆ
ಬೆಚ್ಚು - ಬೆದರು
ಬೆರಣೆ - ಕುಳ್ಳು
ಬೆಸನ - ಆಜ್ಞೆ, ಕಳವಳ

ಬೆಳ್ಳ - ಮೂರ್ಖ, ಅಂಜುಬುರುಕ
ಬೇಗೆ - ಬಿಸಿ
ಬೇಟ - ಶೃಂಗಾರ, ಮೋಹ
ಬೇವ - ಸುಡುವ
ಬೊಬ್ಬುಳಿಕೆ - ನೀರಗುಳ್ಳೆ
ಬೊಮ್ಮ - ಬ್ರಹ್ಮ
ಬೋನ - ಅನ್ನ
ಬೋವ - ಪಲ್ಲಕ್ಕಿ ಹೊರುವವ, ಸಾರಥಿ
ಬೋಸರಿಗತನ- ಹಾದರ
ಬ್ರಹ್ಮಿ - ಬ್ರಹ್ಮಜ್ಞಾನವನ್ನು ಪಡೆದವನು

ಭ

ಭಂಗಿತ - ಕೆಟ್ಟ, ನಾಶವಾದ
ಭಂಡ - ಮಾರಾಟದ ಸರಕು
ಭಗ - ಯೋನಿ
ಭಟ - ವೀರ
ಭದ್ರಗಜ - ಪಟ್ಟದಾನೆ
ಭವಪಾಶ - ಸಂಸಾರ ಬಂಧನ
ಭಾಜನ - ಪಾತ್ರೆ
ಭಾನು - ಸೂರ್ಯ
ಭಾಳ - ಹಣೆ
ಭಾಳಲೋಚನ - ಶಿವ
ಭಾಳಾಂಬಕ - ಶಿವ
ಭಾಳೇಕ್ಷಣ - ಶಿವ
ಭಿತ್ತಿ - ಗೋಡೆ
ಭೀಷ್ಮಿಸು - ಗರ್ವಿಸು, ಹೆದರಿಸು
ಭೀಷ್ಮೆ - ಪರಾಕ್ರಮ
ಭುಜಂಗ - ಹಾವು
ಭುವನ - ಭೂಮಿ
ಭೂಚರ - ಮನುಷ್ಯ
ಭೂಸುರ - ಬ್ರಾಹ್ಮಣ
ಭೃತ್ಯ - ಸೇವಕ
ಭೇಕ - ಕಪ್ಪೆ
ಭೇರಿ - ವಾದ್ಯವಿಶೇಷ

ಮ

ಮಂಜರಿ - ಚೆಕ್ಕು
ಮಂಟೆ - ದೇಹ
ಮಂಡೆ - ತಲೆ
ಮಂತ - ಕಡಗೋಲು
ಮಂದಲಿಗೆ - ಹುಲ್ಲಿನ ಚಾಪೆ
ಮಕರಧ್ವಜವೈರಿ - ಶಿವ
ಮಕ್ಷಿಕ - ನೊಣ
ಮಗಿಲ - ಮನೆ ?
ಮಚ್ಚ - ಮತ್ಸ್ಯ, ಮೀನ
ಮಚ್ಚು - ಮೆಚ್ಚು, ಮೋಹ
ಮಜ್ಜನ - ಜಳಕ, ಅಭಿಷೇಕ
ಮಜ್ಜೆ - ಕೊಬ್ಬು
ಮಡಗು - ಬಚ್ಚಿಡು, ಅಡಗಿಸಿಡು
ಮಣಿಮಾಡ - ಮಣಿಖಚಿತವಾದ ಮನೆ
ಮಣಿಹ - ಕರ್ತವ್ಯ
ಮತ್ಸ್ಯ- ಮೀನ
ಮದನ - ಕಾಮ
ಮದ್ದು - ಔಷಧ
ಮನಸಿಜ - ಕಾಮ
ಮಯೂರ - ನವಿಲು
ಮರ್ಕಟ - ಮಂಗ
ಮರ್ತ್ಯ - ಭೂಲೋಕ
ಮರಾಳ - ಹಂಸ
ಮರೀಚಿಕೆ - ಕಣ್ಣಿಗೆ ಕಾಣದ, ಬಿಸಿಲುಕುದುರೆ
ಮರುಜವಣಿ - ಸಂಜೀವಿನಿ
ಮರುತ - ಗಾಳಿ

ಮಲೆ - ಬೆಟ್ಟ

ಮಹತ್ - ಜ್ಞಾನವುಳ್ಳ, ಶ್ರೇಷ್ಠ

ಮಹಿ - ಭೂಮಿ

ಮಹಿಷ - ಕೋಣ

ಮಳಲು - ಉಸುಕು

ಮಾಂಜಿಷ್ಠ - ಕೆಂಪುಬಣ್ಣ

ಮಾಟ- ಮೋಸ, ಕಾರ್ಯ

ಮಾಣಿಸು - ಬಿಡಿಸು

ಮಾತಂಗ - ಆನೆ

ಮಾರ್ಜಾಲ - ಬೆಕ್ಕು

ಮಾರಾರಿ - ಶಿವ

ಮಾರುತ - ಗಾಳಿ

ಮಾರೂಟ -ಪ್ರತಿಊಟ

ಮಾಸ್ತಿ - ಮಹಾಸತಿ

ಮಾಳ - ಬಯಲುಸ್ಥಳ

ಮಿಟ್ಟೆ - ಬ್ರಾಹ್ಮಣರು ಧರಿಸುವ ಪವಿತ್ರ ಮಣಿ

ಮಿಸುನಿ - ಬಂಗಾರ

ಮುಂಡಿಗೆ - ಒಡೆಯಲಾರದ ಒಗಟು

ಮುಕುರ - ಕನ್ನಡಿ

ಮುಗ್ಗು - ಎಡವು

ಮುಡಿ - ತುರುಬ

ಮುಸುಕರ್ಮಿ - ಗುಮ್ಮನಗುಸುಕ

ಮುಹುರಿ - ವಾದ್ಯವಿಶೇಷ

ಮೂಕೊರೆಯ - ಮೂಗು ಇಲ್ಲದವ

ಮೂದಲಿಸು - ಹೀಯಾಳಿಸು

ಮೂಷಕ - ಇಲಿ

ಮೃಡ - ಶಿವ

ಮೃತ್ತಿಕೆ - ಮಣ್ಣು

ಮೆಳೆ - ದಟ್ಟವಾಗಿ ಬೆಳೆದ ಗಿಡಗಳ ಗುಂಪು

ಮೇಘ - ಮೋಡ

ಮೇದಿನಿ - ಭೂಮಿ

ಮೇಳಾಪ - ಸಂದಣಿ, ಸಮೂಹ

ಮೈಣ - ಮೇಣ ?

ಮೊಗೆ - ಕುಡಿ

ಮೊನೆ - ತುದಿ

ಮೊರೆಹೊಗು - ಶರಣಾಗತನಾಗು

ಮೋಟ- ಮೊಂಡವಾದ, ಅಂಗಹೀನ

ಮೌಕ್ತಿಕ - ಮುತ್ತು

ಯ

ಯಾಚಕ - ಬೇಡುವವ, ಭಿಕ್ಷುಕ

ರ

ರಂಡೆಗೂಳು - ವಿಧವಾ ಊಟ

ರಜ್ಜು - ಹಗ್ಗ, ದಾರ

ರಥಪಾಯಕ - ರಥಸೈನಿಕ

ರವಿ - ಸೂರ್ಯ

ರಾಟಾಳ - (ಸಂಸಾರ)ಚಕ್ರ

ರಾಣುವೆ - ಸೈನಿಕ

ರಾವುತ - ಕುದುರೆಯ ಸವಾರ

ರುಧಿರ - ರಕ್ತ

ರೇತ - ಪುರುಷನ ವೀರ್ಯ

ರೊಚ್ಚೆ - ಕೆಸರು, ಹೊಲಸು, ಪಾಪ

ರೋಡಿಗ - ನಿಂದಕ, ಹಾಸ್ಯಗಾರ

ರೋಹಿತ- ರಕ್ತ

ಲ

ಲಂಘಿಸು - ಜಿಗಿ

ಲಂಡ- ನೀಚ

ಲಂದಣಗಿತ್ತಿ - ಅಡಿಗೆಯವಳು

ಲಲಾಟ - ಹಣೆ

ಲಳಿಗೆ - ಬಿದಿರಿನ ಕೊಳವೆ

ಲಾಗು - ಚಾಪಲ್ಯ

ಲೀಯವಾಗು - ಐಕ್ಯವಾಗು
ಲುಬ್ಧ - ಲೋಭಿ, ಆಸೆಬುರುಕ
ಲೆಂಕ - ವೀರ
ಲೆಂಗಿ - ದಾಸ, ಸೇವಕ
ಲೆಕ್ಕವಟ್ಟೆ - ಲೆಕ್ಕದ ರೀತಿ
ಲೆತ್ತ - ಪಗಡೆಯಾಟ
ಲೆಪ್ಪ - ಎರಕ
ಲೋಗರು - ಸಾಮಾನ್ಯಜನರು
ಲೋಚನ - ಕಣ್ಣು
ಲೋಚು - ಕೂದಲು

ವ

ವಡಬಾನಲ - ನೀರಿನಲ್ಲಿ ಹುಟ್ಟಿದ ಬೆಂಕಿ
ವತ್ಸರ - ವರ್ಷ, ಸಂವತ್ಸರ
ವದನ -ಮುಖ
ವಧು - ಹೆಣ್ಣು
ವನಚರ - ಬೇಡ
ವರ್ಮ - ಗುಟ್ಟು, ರಹಸ್ಯ
ವರ್ಷಾ - ಮಳೆ
ವರಾಹ - ಹಂದಿ
ವಸುಧೆ - ಭೂಮಿ
ವಹ್ನಿ - ಬೆಂಕಿ
ವಳಿ - ಸಾಲು, ರೀತಿ
ವಾಗೆ - ಲಗಾಮು
ವಾಯ - ವ್ಯರ್ಥ, ಮೋಸ
ವಾರಣ - ಆನೆ
ವಾರಿ - ನೀರು
ವಾರಿಸು - ವಿರೋಧಿಸು, ತಡೆದು ನಿಲ್ಲಿಸು
ವಾರುವ - ಕುದುರೆ
ವಾಸಿವಟ್ಟ - ಕೀರ್ತಿ, ಲಾಭ
ವಾಳುಕ - ಉಸುಕು
ವಿಕಳತೆ - ಕೊರತೆ
ವಿಗಡ - ದುಷ್ಟ
ವಿತರಣ - ಹಂಚುವಿಕೆ, ದಾನ
ವಿದ್ರುಮ - ಹವಳ
ವಿಧಾಂತ - ವಿಧಾವಂತ ? ಸಂಬಳದ ಸೈನಿಕ
ವಿಪ್ರ - ಬ್ರಾಹ್ಮಣ
ವಿಪಿನ - ಅಡವಿ
ವಿಷರುಹ - ಕಮಲ
ವಿಹಂಗ - ಪಕ್ಷಿ
ವೃಶ್ಚಿಕ - ಚೇಳು
ವೆಗ್ಗಳ - ಶ್ರೇಷ್ಠ, ಅತಿಶಯ
ವೆಜ್ಜ - ತೂತು, ರಂಧ್ರ
ವೇಣು - ಬಿದಿರು, ಕೊಳಲು
ವೇದ್ಯ - ತಿಳಿದ
ವೇಧಿಸು - ಅಪ್ಪಳಿಸು, ಸ್ಪರ್ಶಿಸು
ವೈಕಲ್ಯ - ಕೊರತೆ, ದೋಷ
ವ್ಯವಧಾನ - ಸಮಾಧಾನ, ಬಿಡುವು
ವ್ಯಾಕುಳ - ಚಿಂತೆ, ಕಳವಳ
ವ್ಯಾಧ - ಬೇಡ, ಬೇಟೆಗಾರ
ವ್ಯಾಧಿ - ರೋಗ
ವ್ಯೋಮ - ಆಕಾಶ

ಶ

ಶಂಕೆ - ಸಂಶಯ
ಶಂಬರವೈರಿ - ಶಿವ
ಶಕಟ - ಬಂಡಿ
ಶತಏಕ - ನೂರೊಂದು
ಶತಭಿನ್ನಪತ್ರ - ನೂರು ಬಗೆಯ ಎಲೆಗಳು
ಶಬರ - ಬೇಡ
ಶಯನ - ಹಾಸಿಗೆ
ಶರ - ಬಾಣ
ಶರಧಿ - ಸಮುದ್ರ
ಶರ್ವ - ಶಿವ

ಶಶಕ - ಮೊಲ

ಶಶಿ - ಚಂದ್ರ

ಶಿಖಿ - ಬೆಂಕಿಯ ಜ್ವಾಲೆ

ಶುಕ - ಗಿಳಿ

ಶುಕ್ಲ- ಬಿಳಿದಾದ

ಶುಕ್ತಿ - ಮುತ್ತಿನ ಚಿಪ್ಪು

ಶುನಿ - ನಾಯಿ

ಶೂಲಪಾಣಿ - ಶಿವ

ಶೃಂಗಿ - ಸಾರಂಗ

ಶೈತ್ಯ - ತಂಪು

ಶ್ರವ - ಶವ, ಹೆಣ

ಶ್ವಾನಜ್ಞಾನಿ - ಅಜ್ಞಾನಿ

ಶ್ಲೇಷ್ಮ -ಕಫ

ಶ್ವೇತ - ಬಿಳಿದಾದ

ಶೋಣಿತ - ರಕ್ತ

ಶ್ರೋತ್ರ - ಕಿವಿ

ಷ

ಷೋಡಶ - ಹದಿನಾರು

ಸ

ಸಂಚಲ - ಚಂಚಲ, ಚಾಪಲ್ಯ

ಸಂಚಿತ - ಕೂಡಿ ಹಾಕಿದ, ಸೇರಿಸಿದ

ಸಂಚು - ಸಮೂಹ, ರಹಸ್ಯ

ಸಂತತ - ಯಾವಾಗಲೂ

ಸಂದಣಿ - ಸಮೂಹ, ಗುಂಪು

ಸಂಪ್ರೋಕ್ಷಣ - ನೀರು ಚಿಮುಕಿಸುವುದು

ಸಂಭಾವಿ - ಕೂಡುಪಿಕೆ

ಸಗ್ಗಳೆ - ಚರ್ಮದ ಚೀಲ

ಸಟ್ಟುಗ - ಸೌಟು

ಸಟೆ - ಸುಳ್ಳು, ಮೋಸ

ಸತ್ತಿಗೆ - ಕೊಡೆ

ಸನ್ನದ್ಧ - ಸಿದ್ಧವಾದ, ಬಿಗಿದುಕಟ್ಟಿ

ಸನ್ಮತ - ಒಪ್ಪಿಗೆ, ಸಮ್ಮತಿ

ಸನ್ನಿಹಿತ - ಒಂದಾದವ, ಸಮೀಪದಲ್ಲಿದ್ದವ

ಸನ್ನೆಗಟ್ಟಿಗೆ - ಸ್ವಲ್ಪ ಶಕ್ತಿಯಿಂದ ಹೆಚ್ಚು ಭಾರ ಎತ್ತುವ ಸಾಧನ

ಸಮನಿಸು - ಪ್ರಾಪ್ತವಾಗು

ಸಮ್ಮಾರ್ಜನೆ - ಸಾರಣೆ

ಸಯ - ಸ್ವಯ, ಸಾಮರಸ್ಯ

ಸರಡ - ಊಸರವಳ್ಳಿಯಂಥವ

ಸರಬು - ಹುಲ್ಲಿನ ಹಗ್ಗ

ಸರಪಿ - ಹುಲಿನ ಹಗ್ಗ

ಸರಸಂಚ - ಸ್ವರದ ರಹಸ್ಯ

ಸರಿಸ - ಸಮಾನ, ನೆಟ್ಟಗೆ, ನೇರ

ಸಲ್ಲಲಿತ - ಯೋಗ್ಯವಾದ, ಮನೋಹರವಾದ

ಸಲಿಲ - ನೀರು

ಸಾಯಸ - ಆಯಾಸ, ತೊಂದರೆ

ಸಾರಾಯ - ನಿಜತತ್ವ, ಮರ್ಮ

ಸಾವಂತ-ಸಾಮಂತ ದೊರೆ

ಸಾವಯ-ಸಾಕಾರ

ಸಾಹಿತ್ಯ-ಸಹಿತ, ಸಂಬಂಧ

ಸಿಂಧು-ಸಮುದ್ರ

ಸಿಕ್ಕ-ತೊಡಕು

ಸಿಬ್ಬುದ್ಧಿ-ಸಣ್ಣಬುದ್ಧಿ (?)

ಸುಂಡಾಳ-ಆನೆ

ಸುಗಡಿ-ಮೈನೆರೆಯದವಳು

ಸುಧೆ-ಅಮೃತ

ಸುಮ್ಮಾನಿ-ಜ್ಞಾನಿ, ಅನುಭಾವಿ

ಸುರಚಾಪ-ಕಾಮನಬಿಲ್ಲು

ಸುರತರು-ಕಲ್ಪವೃಕ್ಷ

ಸುರಧನು-ಕಾಮನಬಿಲ್ಲು

ಸುರಪ-ಇಂದ್ರ

ಸುರಭಿ-ಕಾಮಧೇನು
ಸುವರ್ಣ-ಬಂಗಾರ
ಸುಷುಪ್ತಿ-ಗಾಢನಿದ್ರೆ
ಸೂಕರ-ಹಂದಿ
ಸೂತಕ-ದೋಷ, ಮೈಲಿಗೆ
ಸೂತೆ-ಮೊಲೆ ?
ಸೂನಿಗೆ-ಕತ್ತಿ, ಚೂರಿ
ಸೂನೆಗಾರ-ಮೋಸಗಾರ, ಕೊಲೆಗಡಕ
ಸೂಸು-ಚೆಲ್ಲು
ಸೆಜ್ಜೆ-ಲಿಂಗದ ಕರಡಿಗೆ, ಸ್ಥಳ
ಸೆಡೆ-ಹೆದರು, ನಡುಗು
ಸೆಲದಿ-ಜೇಡಹುಳ
ಸೈವೆರಗಾಗು-ಆಶ್ಚರ್ಯಪಡು
ಸೊಡಗೆ-ಕಾಳು ?
ಸೊಡರು-ದೀಪ
ಸೊಪ್ಪಡಗು-ನಾಶನಾಗುವುದು
ಸೊಮ್ಮು-ಸೊತ್ತು, ಆಸ್ತಿ
ಸೊಲ್ಲು-ಮಾತು, ನುಡಿ
ಸೋಪಾನ-ಮೆಟ್ಟಿಲು, ಪಾವಟಿಗೆ
ಸೋಹೆ-ಅಟ್ಟುವಿಕೆ, ಹುಡುಕುವಿಕೆ
ಸ್ವಯ-ಸ್ವಂತ
ಸ್ಥಾಣು-ಕಂಬ
ಸ್ವಾಯತ-ಆಧೀನ
ಸ್ತೋಮ-ಸಮೋಹ, ಗುಂಪು

ಹ

ಹಂಜರಿಸು-ವ್ಯಾಪಿಸು, ಹರಡು
ಹಂದೆ-ಹೇಡಿ
ಹಕ್ಕೆ-ಸ್ಥಳ, ಆಶ್ರಯ
ಹಗೆ-ವೈರಿ
ಹಡಿಕೆ-ಹೊಲಸು, ಹೇಸಿಕೆ
ಹಡೆ-ಪಡೆ, ಹೊಂದು
ಹತ-ನಾಶವಾದ
ಹಮ್ಮು ಬಿಮ್ಮು-ಅಹಂಕಾರ, ಗರ್ವ
ಹರದ-ವ್ಯಾಪಾರಿ, ವರ್ತಕ
ಹರವರಿ-ವಿಕಾಸ
ಹರಿ-ಸಿಂಹ
ಹರಿಗೆ-ಡಾಲು
ಹರೀತ-ಹಸಿರುಬಣ್ಣ
ಹರೆ-ಹಲಗೆ, ವಾದ್ಯ
ಹಲಬು-ದುಃಖಪಡು
ಹಲ್ಲಣ-ಕುದುರೆಯ ಮೇಲೆ ಹಾಕುವ ತಡಿ
ಹಸುಬೆ-ಚೀಲ
ಹಳಚು-ಹೊಡೆ, ತಾಗು
ಹಾಗ-ನಾಣ್ಯವಿಶೇಷ
ಹಾರು-ಬಯಸು, ಅಪೇಕ್ಷಿಸು
ಹಾಲಾಹಲ-ವಿಷ
ಹಾಹೆ-ಗೊಂಬೆ
ಹಿಟ್ಟುಗುಟ್ಟು-ನಾಶಮಾಡು
ಹಿಡಿತೆ-ಹಿಡಿಕೆ
ಹಿನ್ನಿ-ಬಾಣದ ಹಿಂಭಾಗ
ಹಿಸಿ-ಕುಸಿದು ಬೀಳು
ಹಿಳಿ-ಹಿಂಡು
ಹಿಳುಕು-ಬಾಣದ ಹಂಭಾಗ
ಹುಗಿಲ್-ಸೀಳು
ಹುದುಗು-ಸಮಪಾಲು
ಹುಯ್ಯಲು-ಚೀರಾಟ, ಯುದ್ಧ
ಹುಲುದೈವ-ಕೀಳು ದೇವತೆ
ಹುಲ್ಲೆ-ಜಿಗರೆ
ಹುಳಿತ-ಹುಳು ಹತ್ತಿದ
ಹುಳ್ಳಿ-ಕಟ್ಟಿಗೆ
ಹೆಕ್ಕಳ-ಗರ್ವ, ಅಹಂಕಾರ
ಹೆಡೆಗುಡಿ-ಕೈಗಳನ್ನು ಬೆನ್ನ ಹಿಂದೆ ಕಟ್ಟುವುದು

ಹೆರೆಸಾರು-ದೂರಹೋಗು

ಹೆರೆಹಿಂಗು-ಕಾಣದಾಗು, ನಾಶವಾಗು

ಹೇಮ-ಬಂಗಾರ

ಹೇರಂಡ-ಔಡಲ

ಹೇರು-ಭಾರ

ಹೇವರಿಸು-ಅಸಹ್ಯಪಡು

ಹೇಳಿಗೆ-(ಹಾವಿನ) ಬುಟ್ಟಿ

ಹೊಂಪುಳಿ-ಅತಿಯಾದ ಆನಂದ

ಹೊಡೆವಡು-ನಮಸ್ಕರಿಸು

ಹೊದ್ದಿಗೆ-ಹೊಂದಿಕೆ

ಹೊನ್ನ-ನಾಣ್ಯವಿಶೇಷ, ಬಂಗಾರ

ಹೊರತೆ-ಬೇರೆಯಾದ, ಹೊರಗು

ಹೊರವಡು-ಹೊರಡು, ಹೊರಬೀಳು

ಹೊರಳೆ-ಒಳ್ಳೆ, ನೀರಹಾವು

ಹೊರೆ-ಭಾರವಾದ

ಹೊಲಬು-ರೀತಿ, ಕ್ರಮ

ಹೊಲ್ಲೆಹ-ಕೆಟ್ಟಕೆಲಸ, ನೀಚತನ

ಹೊಸೆದುಹಾಕು-ತಿಕ್ಕಿಹಾಕು

ಹೊಳ್ಳ-ಜೊಳ್ಳ, ಮಾತಿನಂತೆ ನಡೆಯದವ

ಹೊಳ್ಳುಗ-ಹೇಡಿ, ಅಂಜುಬುರುಕ

ಹೊಳಹು-ಹೊಳಪು, ಸುಳಿವು

ಹೋಟಾರ-ಗಿಡದ ಹೊದರು

ಹೋರಟೆ-ಕಾದಾಟ, ಹೋರಾಟ

■ ■

# ವಚನಗಳ ಅಕಾರಾದಿ

(ಅಂಕಿಗಳು ಸಂಪುಟದ ವಚನಸಂಖ್ಯೆಯನ್ನು ಸೂಚಿಸುತ್ತವೆ)

## ಬಿಬ್ಬಿಬಾಚಯ್ಯ


ಅಂಗಕ್ಕೆ ಲಿಂಗ, ಮನಕ್ಕೆ ೩೮೫

ಅಂಗಕ್ಕೆ ಲಿಂಗ ಸಂಬಂಧ ೨೯೫

ಅಂಗ ಲಿಂಗ ಸಂಬಂಧವಾದರೆ ೩೩೨

ಅಗ್ನಿ ಲೋಹದಂತೆ ಫಲ ೩೩೩

ಅರ್ಚನೆಯ ಮಾಡಿದಲ್ಲಿ ೩೮೭

ಅರಿದು ಅರುಹಿಸಿಕೊಂಬು ೩೫೪

ಆಕಾಶದುರಿ ನೆಲದ ಮಡಕೆ ೩೨೪

ಆತ್ಮ ಘಟದಲ್ಲಿ ನಿಂದಿಹ ೩೭೨

ಆರೂ ಇಲ್ಲದ ಅಡವಿ ೩೨೩

ಇಕ್ಷುದಂಡಕ್ಕೆ ಹಣ್ಣುಂಟೆ ೩೪೭

ಇಷ್ಟ ಆತ್ಮನೆಂದು ಮುಟ್ಟಿ ೩೮೬

ಇಷ್ಟಲಿಂಗಕ್ಕೆ ದೃಷ್ಟಾರ್ಪಿತ ೨೯೮

ಇಷ್ಟಲಿಂಗ ಪ್ರಾಣಲಿಂಗ ೩೪೬

ಉದಕಹಲವು ತೆರದಲ್ಲಿ ೩೫೬

ಉರಿ ಕುಡಿದ ಎಣ್ಣೆಯಂತೆ ೩೮೧

ಉರಿದು ಬೇವದು ಉರಿಯೋ ೩೯೨

ಉರಿಯ ಮಡಕೆಯಲ್ಲಿ ೩೬೯

ಉರಿಯ ಮೊನೆಯ ಮೇಲೆ ೩೧೫

ಎಲೆಯಿಲ್ಲದ ವೃಕ್ಷದಲ್ಲಿ ೩೨೬

ಏರಿಯಿಲ್ಲದ ಕೆರೆಯಲ್ಲಿ ೩೨೭

ಒಂದು ಎರಡ ನುಂಗಿ ೩೧೯

ಓಂಕಾರ ಪ್ರಥಮದಲ್ಲಿ ೨೯೨

ಕಂಬವಿಲ್ಲದ ಮನೆಯಲ್ಲಿ ೩೩೧

ಕಣ್ಣಿನೊಳಗಣ ಕವಲು ೩೨೧

ಕರ್ದಮ ಕಮಲದಂತೆ ೩೩೯

ಕಲ್ಲಿನ ಕಂಬದಲ್ಲಿ ಹುಲ್ಲಿನ ೩೩೦

ಕಲೆದೋರದ ಗಾಯ ೩೫೧

ಕಾಣೆ ಕಡವರವ ೩೯೦

ಕಾಯಕ್ಕೆ ಸಾಕ್ಷಿ ಜೀವಕ್ಕೆ ೩೭೧

ಕಾಯಕ್ಕೆ ಸೋಂಕು ಸುಖ ೨೯೯

ಕಾಯದ ಮರೆಯ ಜೀವ ೩೦೬

ಕಾಯಿ ಒಂದರಲ್ಲಿ ಶಾಖೆ ೩೫೮

ಕುರುಡ ಕನ್ನಡಿಯ ೩೭೮

ಕುರುಹಿನ ಕುರುಹಿನಲ್ಲಿ ೩೫೨

ಕೈದುವ ಹಿಡಿದಾಡುವ ೩೭೯

ಕೈ ಬಾಯಾಡುವಲ್ಲಿ ೨೯೭

ಕ್ಷೀರ ಎಡೆಗೊಟ್ಟು ನಿಂದಲ್ಲಿ ೩೦೮

ಗಂಧ ಪುಷ್ಪದಂತೆ ಚಂದನ ೩೪೧

ಗಮನ ನಿರ್ಗಮನವಾದಲ್ಲಿ ೩೦೨

ಗುಳ್ಳಂಕ ಮೃತ್ತಿಕೆಯ ೩೩೫

ಗುಳಿ ನುಂಗಿದ ಸ್ಥಾಣು ೩೩೭

ಘಟ ಪೃಥ್ವಿಯಲ್ಲಿ ಸಿಕ್ಕಿ ೩೭೩

ಘಟ ಬಯಲಂತೆ ಪಟ ೩೩೮

ಚಿತ್ತು ಕುಚಿತ್ತವ ಹೊತ್ತು ೩೦೭

ಚಿತ್ತ ವಸ್ತುವಿನಲ್ಲಿ ೨೯೪

ಜಾಗ್ರದಲ್ಲಿ ಕಂಡಿರವ ೩೪೨

ಜ್ಞಾತೃವಿನಲ್ಲಿ ಇಷ್ಟಲಿಂಗ ೩೪೩

ತನ್ನ ಮರೆದಲ್ಲಿ ಲಿಂಗವ ೩೦೦

ತನುವಿನ ಇಷ್ಟವ ಬಿಟ್ಟಾಗ ೩೪೫

ತನುವಿನಲ್ಲಿ ಹಿಡಿದು ೩೪೪

ತಾನರಿದಲ್ಲಿ ಸಕಲವೆಲ್ಲ ೩೯೧

ತಾರಕ ನುಂಗಿದ ಜಲವ ೩೧೪

ತಿಲದ ಮರೆಯ ತೈಲವ ೩೪೮

ಧರೆ ಆಕಾಶದ ಮಧ್ಯ ೩೦೫

ನಾದಭೇದ ಹೊರಹೊಮ್ಮಿ ೩೧೨

ನಾನಾ ರಸಂಗಳಲ್ಲಿ ೩೬೦

ನಾನಾ ವೇಷವ ತೊಟ್ಟು ೩೮೩
ನಾಲಗೆಯ ಹಿಡಿದು ೩೭೬
ನಿರ್ಮಲಜಲ ಪಂಕವ ೩೦೩
ನೊಣ ಲೋಕವ ನುಂಗಿ ೩೧೭
ಪಟುಭಟಂಗೆ ಪ್ರಳಯ ೩೫೭
ಪೃಥ್ವಿಯೆಂಬ ಅಂಗದ ೨೯೩
ಫಲ ತರುವಿನಲ್ಲಿ ತಿಲ ೩೪೦
ಬಲುಗಜಕ್ಕೆ ಬಾದಳ ೩೬೮
ಬಸವಣ್ಣನ ಪ್ರಸಾದವ ೩೯೩
ಬಾರದವನುಂಡು ಬಂದವ ೩೨೫
ಬಿಲದೊಳಗಣ ಇಲಿ ೩೬೪
ಬೀಜವಿಲ್ಲದೆ ಬಿತ್ತು ೩೪೯
ಬೆಣ್ಣೆ ಕೆಚ್ಚಲ ನುಂಗಿ ೩೮೯
ಬೆಳಗಿನ ಘಟವ ತಮ ೩೧೮
ಭಕ್ತನ ಭಕ್ತಿಭಾವ ೩೫೩
ಭ್ರಾಂತಳಿದು ನಿಂದಲ್ಲಿ ೩೭೫
ಮಂಜಿನ ಮನೆಯಲ್ಲಿ ೩೬೩
ಮತ್ಸ್ಯದ ಕಣ್ಣು ಸರ್ಪನ ೩೬೭
ಮನಕ್ಕೆ ಸಾಹಿತ್ಯವಾದಲ್ಲದೆ ೩೮೪
ಮರನ ಹೂ ನುಂಗಿ ೩೨೨
ಮರನಿಲ್ಲದ ಮನೆಯ ೩೬೫
ಮುಕುರದ ಬಿಂಬದಲ್ಲಿ ೩೧೧
ಮುಕುರ ಬಿಂಬದಂತೆ ೩೩೪
ಮೌನವಾದ ಮತ್ತೆ ೩೬೧
ಯೋನಿಯಿಲ್ಲದ ಆಕಳಿನಲ್ಲಿ ೩೨೮
ರವಿಯ ಶಶಿ ನುಂಗಿ ೩೧೬
ಲತೆ ಹಲವು ಶಾಖೆಯಲ್ಲಿ ೩೫೫
ಲಿಂಗವೆಂದು ಹಿಂಗಿ ೩೮೨
ಲೆಪ್ಪದ ಬೊಂಬೆ ಒಂದಾ ೩೫೯
ಲೋಹಂಗಳ ರೂಪು ಒಡೆ ೩೧೦
ವಾಯು ಬಯಲೆಂದಡೆ ೩೦೪
ಶಾಖೆಯ ಸುತ್ತಿದ ಲತೆ ೩೩೬
ಶುಕ್ತಿಯಲ್ಲಿ ವೇಧಿಸಿದ ೩೫೦
ಸತ್ತ ಶ್ರಮಕ್ಕೆ ತಟ್ಟುಮುಟ್ಟು ೨೯೬
ಸ್ವಪ್ನದಲ್ಲಿ ಸಕಲಭೋಗ ೩೧೩
ಸ್ವಾದವಿಲ್ಲದ ಹಣ್ಣು ಸೌರಭ ೩೭೭
ಹಲವು ಬಲೆಯೊಳಗಾದ ೩೨೦
ಹಸಿವು ತೃಷೆ ಚೇತನ ೩೭೪
ಹಿಂಡಿನೊಳಗಣ ಕುರುಬನ ೩೭೦
ಹುತ್ತದೊಳಗಣ ಉಡು ೩೬೨
ಹುತ್ತದೊಳಗಣ ಹಾವ ೩೨೮
ಹುತ್ತದೊಳಗಣ ಹಾವ ಮಡು ೩೬೬
ಹುಳಿ ಬೆಳೆದು ಸಿಹಿಯಹ ೩೦೯
ಹೊಂದಿ ಕಾಬ ಸುಖವಿಲ್ಲ ೩೦೧
ಹೊಲಬು ಹೊಲಬನೆ ೩೮೮
ಹೊಳೆಯನೀಸುವನಂತೆ ೩೮೦

## ಮನುಮುನಿ ಗುಮ್ಮಟದೇವ

ಅಂಬುಧಿಯಲ್ಲಿ ಅಂಬಿಗ ೧೦೪೯
ಅಮೃತದ ಗುಟಿಕೆಯ ೧೦೪೪
ಅಮ್ಮಿಕಲ್ಲಿನಲ್ಲಿ ಅಮಲವ ೧೦೩೬
ಅರಿದವನ ವಿಶ್ವಾಸ ೧೦೮೭
ಅರಿದು ಬಲ್ಲವನಾದಡೆ ೧೦೫೩
ಅರಿದು ಮರೆಯಲಿಲ್ಲ ೧೦೯೫
ಅರಿದೆಹೆನೆಂದು ಭಾವಿಸು ೧೦೭೫
ಅರುಹಿರಿಯರೆಂಬವರೆಲ್ಲರು ೧೦೧೩
ಅಷ್ಟಭೂಮಿಯ ಮಧ್ಯ ೧೦೫೨
ಆಡು ಹಲ್ಲ ತಿಂಬಲ್ಲಿ ೧೦೦೮
ಆತುರ ಹಿಂಗಿದವಂಗೆ ೧೦೯೩
ಆರೂ ಇಲ್ಲದ ಮನೆಯಲ್ಲಿ ೧೦೨೮

ಆಲೆಯ ಮನೆಯಲ್ಲಿ ೧೦೬೯
ಇಕ್ಷುದಂಡದ ತುದಿಯ ೧೦೪೬
ಇಚ್ಛಾಶಕ್ತಿಯೆಂಬೆನೆ ೧೦೨೧
ಇದಿರು ನೋಡುವುದಕ್ಕೆ ೧೦೬೬
ಉತ್ಪತ್ಯ ಗುರುವಿನಲ್ಲಿ ೧೦೫೪
ಎನಗೆ ಕರಿ ಕಂಡ ೧೦೦೦
ಎನ್ನ ಮನದ ಮರವೆ ೧೦೧೭
ಒಂದು ಉಪ್ಪರಿಗೆಯ ೧೦೮೪
ಒಂದು ಚಿಪ್ಪಿನಲ್ಲಿ ಮೂರು ೧೦೮೨
ಕಂಗಳ ಸೂತಕ ಹಿಂಗಿ ೧೦೩೮
ಕಣ್ಣಿನಲ್ಲಿ ಕಂಡೆಹೆನೆಂದಡೆ ೧೦೯೧
ಕಣ್ಣಿನಲ್ಲಿ ನೋಡುವಡೆ ೧೦೨೨
ಕಣ್ಣಿನೊಳಗಣ ಕಸ ೧೦೩೨
ಕಣ್ಣು ಮೂರು, ತಲೆ ೧೦೨೦
ಕಣ್ಣೆಂಬ ಹರುಗೋಲದಲ್ಲಿ ೧೦೬೦
ಕರಣಂಗಳ ಕಳೆದು ೧೦೯೦
ಕಲ್ಲು ಕವಣೆಯ ನುಂಗಿ ೧೦೦೭
ಕಲ್ಲು ಹೆಂಟೆ ಹೋರಿ ೧೦೧೨
ಕಾಡುಗುರಿ [ತಾ]ನೆಯಾಗಿ ೧೦೮೩
ಕಾಯದ ಕೈಯಲ್ಲಿಪ್ಪುದು ೧೦೩೦
ಕಾಯವಿಡಿದು ಸೋಂಕಿದುದೆಲ್ಲ ೧೦೯೬
ಕಾಯಸೂತಕವಳಿದು ಜೀವ ೧೦೪೫
ಕಾಲನ ಗೆದ್ದೆಹೆನೆಂದು ೧೦೮೮
ಕಾಲೆರಡರಲ್ಲಿ ನಿನ್ನಾಟವೆ ೧೦೫೦
ಕುಲಜಾತಿ ವರ್ಗದ ೧೦೪೨
ಕೂಟದಿಂದ ಕೂಸು ಹುಟ್ಟು ೧೦೧೫
ಕೈ ಗರ್ಭವಾಗಿ ನವಮಾಸ ೧೦೨೯
ಕೊಲುವಂಗೆ ಜೀವದ ೧೦೫೮
ಗಿರಿಯ ಗುಹೆಯಲ್ಲಿ ಒಂದು ೧೦೨೬
ಗುಂಡಿಯ ಹಳ್ಳವು ತುಳುಕ ೧೦೧೦
ಗುಡಿಯೊಡೆಯಂಗೆ ಕಂಬ ೧೦೫೬
ಗುಹೆಯೆಂದಡೂ ಅಂಗ ೧೦೫೧
ಘಟದಲ್ಲಿ ಆತ್ಮ ದಿಟಕರಿಸು ೧೦೭೩
ತಟಾಕ ಒಡೆದಡೆ ಪ್ರತಿ ೧೦೭೧
ತಟ್ಟು ಕುಂಚ ಕಮಂಡಲ ೧೦೦೩
ತತ್ ತ್ವಂ ಅಸಿಯೆಂಬ ೧೦೫೫
ತನುವಿನೊಳಗಣ ತನು ೧೦೮೧
ತರ್ಕವ ನುಡಿವುದಕ್ಕೆ ೧೦೦೪
ತೃಷೆ ಹಿಂಗಿದ ಲಿಂಗಾಂಗಿ ೧೦೮೫
ತೊಗಲೊಳಗಣ ನಾದ ೧೦೪೧
ಧರೆಯ ಉದಕ ಮಾರುತನ ೧೦೩೩
ನಾನೆಂಬುದೆ ಸಕಲ ೧೦೩೯
ನಾನೊಂದ ಗಿಳಿಯ ಕಂಡೆ ೧೦೪೮
ನೋಡುವ ನಯನ ತೆರ ೧೦೫೭
ನೋಡುವ ಮುಕುರ ೧೦೯೭
ನೋಡುವಲ್ಲಿ ನೆರೆ ಶೃಂಗಾರ ೧೦೬೮
ಪಂಚಭೂತಿಕದೊಳಗಾದ ೧೦೯೮
ಪದವನರಿಯದ ವಾಚಕ ೧೦೭೨
ಪೃಥ್ವಿಯಿಂದಾದ ರೂಪು ೧೦೯೪
ಪ್ರಾಣ ತುಡುಕಿಗೆ ಬಂದಲ್ಲಿ ೧೦೬೭
ಫಣಿಯ ಹೆಡೆಯ ಮೇಲೆ ೧೦೧೧
ಬಂದವನಿವನಾರು ಕಂಬಳಿ ೧೦೬೧
ಬಯಲ ಬ್ರಹ್ಮಾಂಡಂಗಳಿಲ್ಲ ೧೦೨೭
ಬಲ್ಲವನ ಭಾವ ಶರೀರ ೧೦೬೪
ಬಾಯಲ್ಲಿ ಬಸುರ ಹುಟ್ಟಿ ೧೦೨೩
ಬಿಗಿ[ದಾ]ಜಿನ ಘಟಕ್ಕೆ ೧೧೦೪
ಬೀಜವ ಮೀರಿದ ವೃಕ್ಷ ೧೦೭೮
ಬುದ್ಧಿಯಿಂದ ಬದುಕಿಹೆ ೧೧೦೬
ಬೆಕ್ಕಿನ ತಲೆಯ ಗಿಳಿ ೧೦೦೬
ಬ್ರಹ್ಮಂಗೆ ಇಚ್ಛಾಶಕ್ತಿ ೧೦೮೦
ಭಕ್ತನಾದಲ್ಲಿ ಭಕ್ತಸ್ಥಲ ೧೦೭೯
ಭಕ್ತಿವಿಶ್ವಾಸ ವಿರಕ್ತಿ ೧೦೪೩

| | |
|---|---|
| ಭೂತ ಭವಿಷ್ಯದ್ವರ್ತಮಾನ | ೧೦೦೧ |
| ಮದನನ ಚಾಪ, ಮನ್ಮಥನ | ೧೦೭೦ |
| ಮರ್ಕಟಂಗೆ ಲಂಘನೆ | ೧೦೬೨ |
| ಮಾಣಿಕದ ಮಣಿ, ಉರಿಯ | ೧೦೯೨ |
| ಮಾತಿನ ಗೂಢವ ನುಡಿ | ೧೦೬೩ |
| ಮಾಯೆಯ ಗೆದ್ದೆ[ಹೆ]ನೆಂದು | ೧೦೨೪ |
| ರಸ ಉಂಬಲ್ಲಿ, ಗಂಧ | ೧೦೮೯ |
| ರೂಪ ಕಂಡಲ್ಲಿ ಇಷ್ಟಕ್ಕೆ | ೧೦೭೭ |
| ವಟವೃಕ್ಷದ ಘಟದ | ೧೦೪೭ |
| ವಾಯು ಹಸಿದು ಆಪೋಶನ | ೧೦೨೫ |
| ವಾರಿಯ ಶಿಲೆ ಕರಗು | ೧೦೩೪ |
| ವೇದಂಗಳ ನಾಲ್ಕು ಭೇದಿಸ | ೧೦೦೨ |
| ಶಿಲೆಯೊಳಗಣ ಭೇದ | ೧೦೬೫ |
| ಶೈವಂಗೆ ಹರವರಿ, ಸೇಮ | ೧೦೪೦ |
| ಸಂಸಾರದಲ್ಲಿ ತೋರುವ | ೧೦೭೬ |
| ಸುಜ್ಞಾನ ಅಜ್ಞಾನವೆಂಬ | ೧೦೩೧ |
| ಸ್ವಪ್ನವ ಕಂಡು ಎಚ್ಚರಿ | ೧೦೩೫ |
| ಹಾದಿಯ ತೋರಿದವರೆಲ್ಲರು | ೧೦೩೭ |
| ಹಾರುವ ಹಕ್ಕಿಯ ಹಿಡಿದೆ | ೧೦೪೯ |
| ಹಾವಿನ ಹಲ್ಲಿನ ವಿಷದ | ೧೦೦೯ |
| ಹಾವು ಹಲ್ಲಿ ಮಾರ್ಜಾಲ | ೧೦೮೬ |
| ಹಿಮಾಚಲ ತಳದಲ್ಲಿ | ೧೦೧೮ |
| ಹುಟ್ಟಿದಳೊಬ್ಬ ಮೂದೇವಿ | ೧೦೧೯ |
| ಹುಲ್ಲೆಯ ಕಣ್ಣನಲ್ಲಿ ಹುಲಿ | ೧೦೦೫ |
| ಹೇಮದ ಬಣ್ಣ, ನಾನಾ ಬಗೆ | ೧೦೭೪ |

# ಆಕರ ಗ್ರಂಥಗಳು

ಅದ್ವೈತಾನಂದದ ವಚನಗಳು
ಸಂ. ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೩

ಅನುಭಾವ ಜ್ಞಾನಸಾರಾಮೃತ ಸಂಪಾದನಾಸ್ತೋತ್ರ
-ಸಂಪಾದನೆಯ ಪರ್ವತೇಶ್ವರ
ಸಂ : ಬಿ. ಆರ್. ಹೂಗಾರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೯

ಆಚರಣೆಯ ಸಂಬಂಧದ ವಚನಗಳು
-ಷಟ್ಸ್ಥಲಚಕ್ರವರ್ತಿ ಸಂಪಾದನೆಯ ಸಿದ್ಧವೀರೇಶ್ವರದೇವರು
ಸಂ : ಪಿ. ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭, ಸಂತೇಪೇಟೆ, ಮೈಸೂರು ೧೯೮೦

ಆಚರಣೆಯ ಸಂಬಂಧದ ವಚನಗಳು
-ಷಟ್ಸ್ಥಲಚಕ್ರವರ್ತಿ ಸಂಪಾದನೆಯ ಹರತಾಳ ಚನ್ನಂಜೇದೇವರು
ಸಂ : ಪಿ. ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭, ಸಂತೇಪೇಟೆ, ಮೈಸೂರು ೧೯೮೨

ಎಲ್ಲ ಪುರಾತರ ಸ್ತೋತ್ರದ ವಚನಗಳು
ಸಂ : ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೮

ಎಳಮಲೆಯ ಗುರುಶಾಂತದೇವರ ವಚನಸಂಕಲನಗಳು
ಸಂ : ವೀರಣ್ಣ ರಾಜೂರ

ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೩

ಏಕೋತ್ತರ ಶತಸ್ಥಲ -ಮಹಾಲಿಂಗದೇವ
ಸಂ : ಸಂ. ಶಿ. ಭೂಸನೂರಮಠ
ಶ್ರೀ ಮ. ನಿ. ಪ್ರ. ಶಿವಬಸವ ಮಹಾಸ್ವಾಮಿಗಳು
ರುದ್ರಾಕ್ಷಿಮಠ, ನಾಗನೂರ ೧೯೭೪

ಏಕೋತ್ತರ ಶತಸ್ಥಲ ಸಾರಾಮೃತ
(ಅಪ್ರಕಟಿತ)
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಗಣಭಾಷಿತ ರತ್ನಮಾಲೆ - ಗುಬ್ಬಿಯ ಮಲ್ಲಣ್ಣ
ಸಂ : ಶ್ರೀ ಪ್ರಭುಸ್ವಾಮಿಗಳು
ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ
ಶ್ರೀಮುರುಘಾಮಠ, ಧಾರವಾಡ ೧೯೪೮

ಚಿದೈಶ್ವರ್ಯ ಚಿದಾಭರಣ - ಗುರುಸಿದ್ಧದೇವರು
ಸಂ : ಪಿ. ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭, ಸಂತೇಪೇಟೆ, ಮೈಸೂರು ೧೯೮೫

ಜಿಗುನಿ ಮರುಳದೇವರ ಕೃತಿಗಳು
ಸಂ : ಎಸ್. ವಿದ್ಯಾಶಂಕರ
ವೀರಶೈವ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೩

ನಿಷ್ಕಲಲಿಂಗ ಚಿದಾನಂದಲೀಲೆ (ಅಪ್ರಕಟಿತ)
ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು

ಪರಮಮೂಲಜ್ಞಾನ ಷಟ್ಸ್ಥಲ -ಚಿಕ್ಕವೀರಣ್ಣೊಡೆಯ
ಸಂ : ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೭

ಪ್ರಸಾದಿಸ್ಥಲದ ವಚನಗಳು
ಸಂ : ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೭

ಬಸವಸ್ತೋತ್ರದ ವಚನಗಳು
-ಚೆನ್ನಂಜೇದೇವ ಹಾಗೂ ಬೋಳಬಸವೇಶ್ವರ
ಸಂ : ಎಮ್. ಎಮ್. ಕಲಬುರ್ಗಿ
ಬಸವೇಶ್ವರ ಪೀಠ, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೬

ಬಾಚಿಕಾಯಕದ ಬಸವರಾಜದೇವರ ವಚನಗಳು
ಸಂ : ಪಿ. ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ) .
೪೪೭, ಸಂತೇಪೇಟೆ, ಮೈಸೂರು ೧೯೮೫

ಬ್ರಹ್ಮಾದ್ವೈತ ಸಿದ್ಧಾಂತ ಷಟ್‌ಸ್ಥಲಾಭರಣ
-ಕರಸ್ಥಲದ ಮಲ್ಲಿಕಾರ್ಜುನ ಒಡೆಯ
ಸಂ : ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೩

ಭಕ್ತಾನಂದ ಸುಧಾರ್ಣವ
ಸಂ : ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೫

ಮಡಿವಾಳಯ್ಯನ ವಚನಗಳು
ಸಂ : ಎಸ್. ಉಮಾಪತಿ
ಎಸ್. ಉಮಾಪತಿ, ಡಿ. ಆರ್. ಎಂ. ಕಾಲೇಜು
ದಾವಣಗೆರೆ ೧೯೭೩

ಮಿಶ್ರಸ್ತೋತ್ರದ ವಚನಗಳು
-ಷಟ್ಸ್ಥಲಚಕ್ರವರ್ತಿ ಸಂಪಾದನೆಯ ಶ್ರೀಚೆನ್ನಂಜೇದೇವರು
ಸಂ : ಪ್ರಭುಸ್ವಾಮಿಗಳು, ಹೊಸಹಳ್ಳಿ
ಹೊಸಹಳ್ಳಿಯ ಸಂಸ್ಥಾನಮಠ ೧೯೫೨

ಮೋಳಿಗೆ ಮಾರಯ್ಯ ಮತ್ತು
ರಾಣಿ ಮಹಾದೇವಿಯವರ ವಚನಗಳು
ಸಂ : ಚೆನ್ನಪ್ಪನವರು ಉತ್ತಂಗಿ, ಸಂ. ಶಿ. ಭೂಸನೂರಮಠ
ವೀರಭದ್ರಪ್ಪ ಹಾಲಬಾವಿ. ಧಾರವಾಡ ೧೯೫೦

ಮೋಕ್ಷದರ್ಶನ ಸಂಗ್ರಹ ( ಅಪ್ರಕಟಿತ )
-ಪ್ರಭುದೇಶಿಕ
ಕನ್ನಡ ಅಧ್ಯಯನಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು

-ಲಿಂಗಚಿದಮೃತಭೋಧೆ ಶಾಂತ ಬಸವೇಶ್ವರ
ಸಂ : ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೫

ಲಿಂಗಲೀಲಾವಿಲಾಸಚಾರಿತ್ರ - ಕಲ್ಲುಮಠದ ಪ್ರಭುದೇವ
ಸಂ : ಸಂ. ಶಿ. ಭೂಸನೂರಮಠ
ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ,
ಶ್ರೀಮುರುಘಾಮಠ, ಧಾರವಾಡ ೧೯೫೭

ಲಿಂಗಸ್ತೋತ್ರದ ವಚನಗಳು
-ಸಂಪಾದನೆಯ ಶಿವ ಹಿರಣ್ಣದೇವರು

ಸಂ : ವೀರಭದ್ರಪ್ಪ ಕೊಪ್ಪಳ
ಶ್ರೀಗುರು ಬಸವಮಂಟಪ ಟ್ರಸ್ಟ್, ಕಮತಗಿ, ಹುಬ್ಬಳ್ಳಿ ೧೯೭೪

ವಚನಶಾಸ್ತ್ರಸಾರ ( ಭಾಗ : ೧ ಪೂರ್ವಾರ್ಧ ಹಾಗೂ ಉತ್ತರಾರ್ಧ )
ಸಂ : ಫ. ಗು. ಹಳಕಟ್ಟಿ
ಪರಿ: ಎಂ. ಎಂ. ಕಲಬುರ್ಗಿ, ವೀರಣ್ಣ ರಾಜೂರ
ವೀರಶೈವ ಅಧ್ಯಯನಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೩

ವಚನ ಸಂಕಲನ ಸಂಪುಟ (ಸಂಪುಟ : ಒಂದು)
ಸಂ : ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೯೦

ವಚನ ಸಂಕಲನ ಸಂಪುಟ (ಸಂಪುಟ:ಎರಡು)
ಸಂ : ಡಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನಸಂಸ್ಥೆ.
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೯೦

ವಚನಸಾರ
ಸಂ : ವೀರಣ್ಣ ರಾಜೂರ
ವೀರಶೈವ ಅಧ್ಯಯನಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ವಚನೈಕೋತ್ತರ ಶತಸ್ಥಲ - ಚೆನ್ನಬಸವಣ್ಣ
ಸಂ : ಡಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ವಿರಕ್ತಾಬರಗೆಯ ಶರಣಸಂಬಂಧದ ವಚನಗಳು
-ಶಂಕರದೇವರ

ವೀರಶೈವ ಅಧ್ಯಯನ ಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ಶೀಲಸಂಪಾದನೆ
ಸಂ : ವೀರಣ್ಣ ರಾಜೂರ
ವೀರಶೈವ ಅಧ್ಯಯನಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೪

ಶೂನ್ಯಸಂಪಾದನೆ -ಶಿವಗಣಪ್ರಸಾದಿ ಮಹಾದೇವಯ್ಯ
ಸಂ : ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೧

ಶೂನ್ಯ ಸಂಪಾದನೆ -ಗುಮ್ಮಳಾಪುರ ಸಿದ್ಧಲಿಂಗದೇವ
ಸಂ : ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೨

ಶೂನ್ಯಸಂಪಾದನೆ - ಗೂಳೂರು ಸಿದ್ಧವೀರಣ್ಣೊಡೆಯ
ಸಂ : ಸಂ. ಶಿ. ಭೂಸನೂರಮಠ
ರಾವೂರ ಶ್ರೀಸಿದ್ಧಲಿಂಗೇಶ್ವರಮಠ ಮತ್ತು
ಆದವಾನಿಯ ಕಲ್ಲುಮಠದ ಅಧಿಪತಿಗಳು, ರಾವೂರು ೧೯೫೮

ಶೂನ್ಯಸಂಪಾದನೆ -ಹಲಗೆದೇವ
(ಅಪ್ರಕಟಿತ)
ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು

ಷಟ್ಪ್ರಕಾರ ಸಂಗ್ರಹ -ಶಾಂತದೇವರು
ಸಂ : ಜಿ. ಎ. ಶಿವಲಿಂಗಯ್ಯ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ಷಟ್‌ಸ್ಥಲ ಬ್ರಹ್ಮಾನಂದ ವಿರಕ್ತಚಾರಿತ್ರಸಂಪಾದನೆಯ ವಚನಗಳು
-ಸಂಪಾದನೆಯ ಬೋಳಬಸವರಾಜದೇವ
ಸಂ : ಎಸ್. ಉಮಾಪತಿ
ವೀರಶೈವ ಅಧ್ಯಯನಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೪

ಸಂಪಾದನೆಯ ಸಾರಾಮೃತ -ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿ
ಸಂ : ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ. ಗದಗ ೧೯೮೮

ಸಂಬಂಧಾಚರಣೆಯ ವಚನಗಳು
ಸಂ : ಪಿ. ಎಂ. ಗಿರಿರಾಜು
ಗೌ. ಸಂ. 'ಶರಣ ಸಂತಾನ' (ತ್ರೈಮಾಸಿಕ)
೪೪೭, ಸಂತೇಪೇಟೆ, ಮೈಸೂರು ೧೯೮೬

ಸಕಲ ಪುರಾತನರ ಬೆಡಗಿನ ವಚನಗಳು
-ಸಿಂಗಳದ ಸಿದ್ಧಬಸವರಾಜದೇವ
ಸಂ. ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೮

ಸಕಲ ಪುರಾತನರ ವಚನಗಳು (ಸಂಪುಟ : ೧)
ಸಂ : ಡಾ. ಆರ್. ಸಿ. ಹಿರೇಮಠ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ೧೯೭೨

ಸಕಲಪುರಾತನರ ವಚನಗಳು (ಸಂಪುಟ : ೨)
ಸಂ : ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ.
ಕರ್ನಾಟಕ ವಿಶ್ವವಿದ್ಯಾಲಯ. ಧಾರವಾಡ ೧೯೭೭

ಸಕಲ ಪುರಾತನರ ವಚನಗಳು (ಸಂಪುಟ : ೩)
ಸಂ : ಎಂ. ಎಸ್. ಸುಂಕಾಪುರ
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೮

ಸುಖಸಂಪಾದನೆಯ ವಚನಗಳು
ಸಂ : ಬಿ. ಆರ್. ಹಿರೇಮಠ
ವೀರಶೈವ ಅಧ್ಯಯನಸಂಸ್ಥೆ,
ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ಸೂಕ್ಷ್ಮಮಿಶ್ರ ಷಟ್ಸ್ಥಲ -ಮಹಾಲಿಂಗದೇವ
ಸಂ : ವೀರಣ್ಣ ರಾಜೂರ
ವೀರಶೈವ ಅಧ್ಯಯನ ಸಂಸ್ಥೆ,
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ ೧೯೮೭

ಹಸ್ತಪ್ರತಿ ಭಾಂಡಾರ
(ನಂ. ೩೫, ೩೭, ೫೧, ೫೨, ೮೨, ೧೫೦, ೧೫೧, ೩೦೦, ೬೧೯)
ಕನ್ನಡ ಅಧ್ಯಯನಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬಿ ೧೪೮೧ (ಹಾಳೆ ೨೩)
ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ

ಪತ್ರಿಕೆಗಳು
ಸಾಧನೆ : ೫-೨, ೫-೩
ಬಸವಪಥ : ೧-೬, ೭-೬, ೧೪-೧೧
ಹೇಮಕೂಟ : ೫-೩
ಶರಣ : ೧೨-೨, ೧೨-೪, ೧೩-೧.

■ ■

## ಸಮಗ್ರ ವಚನಸಾಹಿತ್ಯ ಪ್ರಕಟನ ಯೋಜನೆ

'ಸಮಗ್ರ ವಚನಸಾಹಿತ್ಯದ ಪ್ರಕಟನ ಯೋಜನೆ' ಕರ್ನಾಟಕ ಸರ್ಕಾರದ ಈವರೆಗಿನ ಸಾಹಿತ್ಯಕ ಸಾಧನೆಗಳಲ್ಲಿ ಒಂದು ಮಹತ್ವದ ದಾಖಲೆಯಾಗಿದೆ. ಇದು ಒಂದು ಸಾಹಿತ್ಯಕೃತಿಯ ಪ್ರಕಟನೆಯಲ್ಲ, ಒಂದು ಸಾಹಿತ್ಯ ಪ್ರಕಾರದ ಪ್ರಕಟನೆ.

ತತ್ವಕ್ಕೆ ತತ್ವ, ಸಾಹಿತ್ಯಕ್ಕೆ ಸಾಹಿತ್ಯವಾಗಿರುವ 'ವಚನ ವಾಙ್ಮಯ' ಏಕಕಾಲಕ್ಕೆ ಆತ್ಮಕಲ್ಯಾಣವನ್ನೂ ಸಮಾಜ ಕಲ್ಯಾಣವನ್ನೂ ಪ್ರತಿಪಾದಿಸುವ ಮೂಲಕ ಜಾಗತಿಕ ಮಹತ್ವ ಗಳಿಸಿದೆ. ಈ ಮೌಲಿಕ ಸಾಹಿತ್ಯವನ್ನು ಸುಲಭ ಬೆಲೆಯಲ್ಲಿ ಜನತೆಗೆ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ.

ಇವತ್ತಿನ ಮಿತಿಗೆ ಸಿಗುವ ಬಸವಯುಗ ಮತ್ತು ಬಸವೋತ್ತರ ಯುಗಗಳ ಎಲ್ಲ ಶರಣರ ಎಲ್ಲ ವಚನಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಪ್ರಕಟಿಸಿದ ಪ್ರಯತ್ನವಿದು. ಈ ಮೂಲಕ ಬಸವಯುಗದ ಹಲವು ಹೊಸ ವಚನಗಳು ಬೆಳಕಿಗೆ ಬರುವುದರೊಂದಿಗೆ, ಬಸವೋತ್ತರ ಯುಗದ ಸಮಗ್ರ ವಚನ ಸಂಪತ್ತು ಪ್ರಥಮಸಲ ಹೊರ ಬರುತ್ತಿರುವುದು ಈ ಯೋಜನೆಯ ವಿಶೇಷ ಸಾಧನೆಯಾಗಿದೆ.

೮೦೦ ವರ್ಷಗಳುದ್ದಕ್ಕೂ ಬೆಳೆದುಬಂದ ಈ ಸಾಹಿತ್ಯದ ವ್ಯಾಪ್ತಿಯನ್ನು ಪ್ರಥಮಬಾರಿ ಗುರುತಿಸಿಕೊಡುತ್ತಿರುವ ಈ ಸಾಹಸದ ಫಲವಾಗಿ, ೨೦ಸಾವಿರ ವಚನಗಳು ಸುಮಾರು ೧೦ಸಾವಿರ ಪುಟ ವ್ಯಾಪ್ತಿಯ ೧೫ ಸಂಪುಟಗಳಲ್ಲಿ (ವಚನ ಪರಿಭಾಷಾಕೋಶ ಸೇರಿ) ಬೆಳಕು ಕಾಣುತ್ತಿವೆ.

ISBN : 81-7713-098-6